ಕನ್ನಡ ಜಾನಪದ ನಿಘಂಟು

ಪ್ರಧಾನ ಸಂಪಾದಕರು
ಪ್ರೊ. ಅಂಬಳಿಕೆ ಹಿರಿಯಣ್ಣ

ಸಂಪಾದಕರು
ಡಾ. ಕೆ.ಆರ್. ಸಂಧ್ಯಾರೆಡ್ಡಿ

ಆರ್ಥಿಕ ನೆರವು
ಕನ್ನಡ ಅಭಿವೃದ್ಧಿ ಪ್ರಾಧಿಕಾರ
ಕರ್ನಾಟಕ ಸರ್ಕಾರ, ಬೆಂಗಳೂರು

ಗೌರವ ಪ್ರತಿ

ಕನ್ನಡ ಜಾನಪದ ನಿಘಂಟು

ಪ್ರಧಾನ ಸಂಪಾದಕರು

ಪ್ರೊ. ಅಂಬಳಿಕೆ ಹಿರಿಯಣ್ಣ

ಸಂಪಾದಕರು

ಡಾ. ಕೆ.ಆರ್. ಸಂಧ್ಯಾರೆಡ್ಡಿ

ವಿಸ್ತರಣೆ ಹಾಗೂ ಸಲಹಾ ಕೇಂದ್ರ

ಕರ್ನಾಟಕ ಜಾನಪದ ವಿಶ್ವವಿದ್ಯಾಲಯ

ಗೊಟಗೋಡಿ - ೫೮೧ ೧೯೭, ಶಿಗ್ಗಾವಿ ತಾಲೂಕು, ಹಾವೇರಿ ಜಿಲ್ಲೆ

KANNADA JAANAPADA NIGHANTU
(KANNADA FOLKLORE DICTIONARY)

Chief Editor
Prof. Ambalike Hiriyanna
Vice Chancellor
Karnataka Jaanapada Vishwavidyalaya, Gotagodi

Editor
ಡಾ. ಕೆ.ಆರ್. ಸಂಧ್ಯಾರೆಡ್ಡಿ
'ಸಮಯ' ನಂ. ೧೦೪೪,
೪ನೇ ಮುಖ್ಯರಸ್ತೆ, ೮ನೇ ಅಡ್ಡರಸ್ತೆ,
ಶ್ರೀನಿವಾಸನಗರ, ಬೆಂಗಳೂರು – ೫೬೦ ೦೫೦.

Published By
Prof. S.C. Ramesh
Director
Center for Extension & Consultancy
Karnataka Janapada University, Gotagodi

Pages: xxxviii + 286 = 324 **Price:** 450/-
www.janapadauni.in
First Impression : 2014
ISBN: 978-93-83149-26-1

© **ಕರ್ನಾಟಕ ಜಾನಪದ ವಿಶ್ವವಿದ್ಯಾಲಯ**
ಬೆಲೆ : ೪೫೦/–
ಮುಖಪುಟ : **ಶ್ರೀಮತಿ ಎನ್. ಶುಭ**
ಬೆರಳಚ್ಚು ಮತ್ತು ಪುಟವಿನ್ಯಾಸ
ಸುಕನ್ಯ ಡಿ.ಎಸ್.
ಭವ್ಯ ಪಿ.ಎಂ.
ಭಾರತಿ ರವೀಂದ್ರ
ಪದ್ಮಶ್ರೀ ಮೂರ್ತಿ

ಪುಸ್ತಕ ದೊರೆಯುವ ಸ್ಥಳ
ಕರ್ನಾಟಕ ಜಾನಪದ ವಿಶ್ವವಿದ್ಯಾಲಯ
ಗೊಟಗೋಡಿ ೫೮೧ ೧೯೭,
ಶಿಗ್ಗಾವಿ ತಾಲೂಕು, ಹಾವೇರಿ ಜಿಲ್ಲೆ

ಮುದ್ರಣ
ರಾಜಾ ಪ್ರಿಂಟರ್ಸ್
ನಂ. ೫೯, ೪ನೇ ಕ್ರಾಸ್, ಲಾಲ್‌ಬಾಗ್ ರಸ್ತೆ
ಬೆಂಗಳೂರು–೨೭, ಫೋನ್: ೨೨೨೩೪೦೬೬

ಸಂಪಾದಕ ಮಂಡಳಿ

ಪ್ರಧಾನ ಸಂಪಾದಕರು
ಪ್ರೊ. ಅಂಬಳಿಕೆ ಹಿರಿಯಣ್ಣ

ಕಾರ್ಯನಿರ್ವಾಹಕ ಸಂಪಾದಕರು
ಡಾ. ಕೆ.ಆರ್. ಸಂಧ್ಯಾರೆಡ್ಡಿ

ಸಂಯೋಜಕ ಸಂಪಾದಕರು
ಡಾ. ಮೀರಾಸಾಬಿಹಳ್ಳಿ ಶಿವಣ್ಣ

ಸಹಾಯಕ ಸಂಪಾದಕರು
ಶ್ರೀಮತಿ ಸರ್ವಮಂಗಳ

ಹಿರಿಯ ಸಂಶೋಧನಾಧಿಕಾರಿ
ಡಾ. ಕೆ. ಪ್ರೇಮಕುಮಾರ

ತಾಂತ್ರಿಕ ಸಲಹೆಗಾರರು
ಶ್ರೀ ಎಸ್.ಎ. ಕೃಷ್ಣಯ್ಯ
ಡಾ. ಬಿ.ಪಿ. ಹೇಮಾನಂದ

ಹಿರಿಯ ಯೋಜನಾ ಸಹಾಯಕರು
ಶ್ರೀ ಬಿ. ರಾಜಣ್ಣ

ಯೋಜನಾ ಸಹಾಯಕರು
ಶ್ರೀ ಬಂಡ್ಲಹಳ್ಳಿ ವಿಜಯಕುಮಾರ್
ಶ್ರೀಮತಿ ಲೀಲಾವತಿ

ಕ್ಷೇತ್ರ ಸಂಪಾದಕರು ಹಾಗೂ ಕ್ಷೇತ್ರತಜ್ಞರ ವಿವರ

ಬೆಂಗಳೂರು ನಗರ

ಕ್ಷೇತ್ರ ಸಂಪಾದಕರು
ಡಾ. ಕೆ.ಆರ್. ಸಂಧ್ಯಾರೆಡ್ಡಿ
ಡಾ. ಮೀರಾಸಾಬಿಹಳ್ಳಿ ಶಿವಣ್ಣ

ಕ್ಷೇತ್ರ ತಜ್ಞರು
ಡಾ. ಎಸ್. ರಮಾಮಣಿ
ಶ್ರೀಮತಿ ಗುಡಿಬಂಡೆ ಪೂರ್ಣಿಮಾ
ಶಿಲ್ಪಾ. ಕೆ.
ಶ್ರೀಮತಿ ಜಿ.ವಿ. ನಿರ್ಮಲ
ಪ್ರೊ. ಸವಿತಾ ರವಿಶಂಕರ್

ಬೆಂಗಳೂರು ಗ್ರಾಮಾಂತರ

ಕ್ಷೇತ್ರ ಸಂಪಾದಕರು
ಶ್ರೀಮತಿ ಎಂ. ಸರಸ್ವತಿ ಗೌಡ

ಕ್ಷೇತ್ರ ತಜ್ಞರು
ಶ್ರೀಮತಿ ಹಾ.ವೀ. ಮಂಜುಳಾ ಶಿವಾನಂದ
ಶ್ರೀ ಟಿ. ವೆಂಕಟೇಶ್

ಮೈಸೂರು ಮತ್ತು ಚಾಮರಾಜನಗರ

ಕ್ಷೇತ್ರ ಸಂಪಾದಕರು
ಪ್ರೊ. ಹೆಚ್.ಜಿ. ಕೃಷ್ಣಪ್ಪ

ಕ್ಷೇತ್ರ ತಜ್ಞರು
ಶ್ರೀ ಕೆ.ಆರ್. ಗೋಪಾಲ್
ಶ್ರೀ ಹನೂರು ಚನ್ನಪ್ಪ
ಡಾ. ಮಹದೇವ ಶಂಕನಪುರ

ಉತ್ತರ ಕನ್ನಡ ಜಿಲ್ಲೆ

ಕ್ಷೇತ್ರ ಸಂಪಾದಕರು
ಡಾ. ಪ್ರಕಾಶ ಬೊಮ್ಮಣ್ಣ ನಾಯಕ

ಕ್ಷೇತ್ರ ತಜ್ಞರು
ಶ್ರೀ ರಮಾಕಾಂತ ಜಿ. ಭಟ್
ಶ್ರೀ ಬೀರಣ್ಣ ನಾಯಕ ಮೊಗಟಾ
ಶ್ರೀ ಶಂಕರ ಜಿ. ಗೌಡ
ಶ್ರೀ ವಿಠಲ ಪೇರುಮನೆ

ಕೋಲಾರ ಮತ್ತು ಚಿಕ್ಕಬಳ್ಳಾಪುರ

ಕ್ಷೇತ್ರ ಸಂಪಾದಕರು
ಶ್ರೀ ಸ. ರಘುನಾಥ್

ಕ್ಷೇತ್ರ ತಜ್ಞರು
ಡಾ. ಕೆ.ವಿ. ನೇತ್ರಾವತಿ
ಶ್ರೀ ವಿ.ಬಿ. ಶಿವಣ್ಣ

ಉಡುಪಿ

ಕ್ಷೇತ್ರ ಸಂಪಾದಕರು

ಶ್ರೀ ಎಸ್.ಎ. ಕೃಷ್ಣಯ್ಯ

ಕ್ಷೇತ್ರ ತಜ್ಞರು

ಡಾ. ಕನರಾಡಿ ವಾದಿರಾಜ ಭಟ್

ಡಾ. ಭಾರತಿ ಮರವಂತೆ

ಮಂಗಳೂರು

ಕ್ಷೇತ್ರ ಸಂಪಾದಕರು

ಡಾ. ಅಶೋಕ್ ಆಳ್ವ

ಕ್ಷೇತ್ರ ತಜ್ಞರು

ಶ್ರೀಮತಿ ಸಾಯಿಗೀತಾ

ಕೊಡಗು

ಕ್ಷೇತ್ರ ತಜ್ಞರು

ಶ್ರೀಮತಿ ಸಹನಾ ಕಾಂತಬೈಲು

ಶಿವಮೊಗ್ಗ

ಕ್ಷೇತ್ರ ಸಂಪಾದಕರು

ಶ್ರೀ ಯು.ಎಸ್. ರಾಮಣ್ಣ

ಚಿತ್ರದುರ್ಗ

ಕ್ಷೇತ್ರ ಸಂಪಾದಕರು

ಡಾ. ಸಿ. ಶಿವಲಿಂಗಪ್ಪ

ಕ್ಷೇತ್ರ ತಜ್ಞರು

ಶ್ರೀ ಎಂ.ಜಿ. ರಂಗಸ್ವಾಮಿ

ಪ್ರೊ. ಈ. ಮಹಾಲಿಂಗಪ್ಪ

ದಾವಣಗೆರೆ

ಕ್ಷೇತ್ರ ಸಂಪಾದಕರು

ಡಾ. ಎಂ.ಜಿ. ಈಶ್ವರಪ್ಪ

ಕ್ಷೇತ್ರ ತಜ್ಞರು

ಡಾ. ಬಸವರಾಜ್. ಎ.ಡಿ.

ಧಾರವಾಡ

ಕ್ಷೇತ್ರ ಸಂಪಾದಕರು

ಡಾ. ಶಾಂತ ಇಮ್ರಾಪುರ

ಕ್ಷೇತ್ರ ತಜ್ಞರು

ಡಾ. ಮಂದಾಕಿನಿ ಪುರೋಹಿತ

ಡಾ. ಸವಿತಾ ಕೊಟಬಾಗಿ

ಗದಗ ಮತ್ತು ಹಾವೇರಿ

ಕ್ಷೇತ್ರ ಸಂಪಾದಕರು
ಡಾ. ರಾಮು ಮೂಲಗಿ

ಕ್ಷೇತ್ರ ತಜ್ಞರು
ಶ್ರೀಮತಿ ಸಂಕಮ್ಮ ಜಿ. ಸಂಕಣ್ಣನವರ
ಶ್ರೀ ರವಿ ಎಂ. ಅರಗೋಳ

ಬಳ್ಳಾರಿ

ಕ್ಷೇತ್ರ ತಜ್ಞರು
ಡಾ. ಕೆ. ಶೇಖರಾಚಾರಿ

ಚಿಕ್ಕಮಗಳೂರು

ಕ್ಷೇತ್ರ ಸಂಪಾದಕರು
ಡಾ. ವೈ.ಸಿ. ಭಾನುಮತಿ

ಕ್ಷೇತ್ರ ತಜ್ಞರು
ಶ್ರೀ ಹೆಚ್.ಕೆ. ಪುಟ್ಟರಾಜು
ಶ್ರೀ ಎಂ.ಎಸ್. ಲಕ್ಷ್ಮಣಗೌಡ
ಶ್ರೀಮತಿ ಶೋಭಾ ಅನಂತಯ್ಯ

ಬೆಳಗಾವಿ

ಕ್ಷೇತ್ರ ಸಂಪಾದಕರು
ಡಾ. ಸಿ.ಕೆ. ನಾವಲಗಿ

ಕ್ಷೇತ್ರ ತಜ್ಞರು
ಶ್ರೀ ಈರಯ್ಯ ನಿಂ. ಕಿಲ್ಲೇದಾರ
ಶ್ರೀಮತಿ ಶಕುಂತಲ ನಾವಲಗಿ
ಶ್ರೀಮತಿ ದೀಪಾ ಎ. ಕೌಜಲಗಿ
ಶ್ರೀ ಈಶ್ವರಚಂದ್ರ ಎಸ್. ಬೆಟಗೇರಿ

ಬಿಜಾಪುರ ಮತ್ತು ಬಾಗಲಕೋಟೆ

ಕ್ಷೇತ್ರ ಸಂಪಾದಕರು
ಪ್ರೊ. ಬಿ.ಬಿ. ಪಾಟೀಲ್

ಕ್ಷೇತ್ರ ತಜ್ಞರು
ಪ್ರೊ. ಆರ್.ಎಸ್. ವಾಡೇದ

ಮಂಡ್ಯ ಮತ್ತು ರಾಮನಗರ

ಕ್ಷೇತ್ರ ಸಂಪಾದಕರು
ಡಾ. ವ.ನಂ. ಶಿವರಾಮು

ಕ್ಷೇತ್ರ ತಜ್ಞರು
ಶ್ರೀ ಎಸ್. ದೇವರಾಜು
ಶ್ರೀಮತಿ ಎಂ. ಮಮತ
ಶ್ರೀ ಡಿ. ರಾಮಚಂದ್ರಯ್ಯ

ಡಾ. ಬೋರೇಗೌಡ ಚಿಕ್ಕಮರಳ್ಳಿ

ಹಾಸನ

ಕ್ಷೇತ್ರ ಸಂಪಾದಕರು
ಡಾ. ಚಂದ್ರು ಕಾಳೇನಹಳ್ಳಿ

ಕ್ಷೇತ್ರ ತಜ್ಞರು
ಶ್ರೀ ಪಾರ್ಥ ಕೆ.ಎನ್.

ಶ್ರೀ ಬಿ.ಎನ್. ಶಿವರಾಮು

ಗುಲ್ಬರ್ಗ

ಕ್ಷೇತ್ರ ತಜ್ಞರು
ಶ್ರೀಮತಿ ಕಾವ್ಯಶ್ರೀ ಎಸ್. ಮಹಾಗಾಂವಕರ್

ಬೀದರ್

ಕ್ಷೇತ್ರ ಸಂಪಾದಕರು
ಶ್ರೀ ದೇಶಾಂಶ ಹುಡಗಿ

ಕ್ಷೇತ್ರ ತಜ್ಞರು
ಡಾ. ರಘುಶಂಖ ಭಾತಂಬ್ರಾ

ತುಮಕೂರು

ಕ್ಷೇತ್ರ ಸಂಪಾದಕರು
ಡಾ. ಜಿ.ವಿ. ಆನಂದಮೂರ್ತಿ

ಯಾದಗಿರಿ, ಸೊಲ್ಲಾಪುರ

ಕ್ಷೇತ್ರ ತಜ್ಞರು
ಶ್ರೀ ಬಸವರಾಜ ಮಸೂತಿ

ದೇಶ ಸುತ್ತು ಕೋಶ ಓದು

ಕನ್ನಡನಾಡು ಅಮೂಲ್ಯ ಹಾಗೂ ಸಮೃದ್ಧ ಜಾನಪದ ಸಂಪತ್ತಿನ ಆಗರವಾಗಿದೆ. ಅಪಾರವಾದ ಜ್ಞಾನದ ಅನನ್ಯತೆಯನ್ನು ಶೋಧಿಸುವ, ಸಂರಕ್ಷಿಸುವ ಹಾಗೂ ಸಂವರ್ಧಿಸುವ ಕಾರ್ಯಗಳು ಯಾವ ಕಾಲಕ್ಕೂ ಆಗಬೇಕಾದ ಕಾರ್ಯವೇ ಆಗಿದೆ. ಈ ಮಹತ್ವದ ಉದ್ದೇಶಗಳ ಈಡೇರಿಕೆಗಾಗಿ ಜಾನಪದ ವಿಶ್ವವಿದ್ಯಾಲಯದ ಸ್ಥಾಪನೆಯ ಅಗತ್ಯವಿತ್ತು. ನೆಲದ ಸಂಸ್ಕೃತಿಯನ್ನು ಉಸಿರಾಗಿಸಿಕೊಂಡು ಬದುಕುತ್ತಿರುವ ನಾಡಿನ ಸಮಸ್ತರ ಒಲವು ಮತ್ತು ನಿರೀಕ್ಷೆಗಳು ನಿಜವಾಗಬೇಕೆಂಬ ಮಹದಾಸೆಯೊಂದಿಗೆ ಜಗತ್ತಿನ ಪ್ರಪ್ರಥಮ ಕರ್ನಾಟಕ ಜಾನಪದ ವಿಶ್ವವಿದ್ಯಾಲಯ ಸ್ಥಾಪನೆಯಾಗಿದೆ. ಇದು ಕನ್ನಡದ ಮಟ್ಟಿಗೆ ಅಷ್ಟೇ ಅಲ್ಲ ದೇಶೀ ಸಂಸ್ಕೃತಿಯ ಮೂಲವನ್ನು ಶೋಧಿಸುವ ಮತ್ತು ಅದರ ಹರವು ವಿಸ್ತಾರಗೊಳ್ಳುವಂತೆ ಮಾಡಬೇಕಾದ ಮಹತ್ವದ ಜವಾಬ್ದಾರಿಯನ್ನು ಹೊತ್ತಿರುವುದರಿಂದ ವಿಶ್ವವಿದ್ಯಾಲಯದ ಸ್ಥಾಪನೆ ಚಾರಿತ್ರಿಕವಾಗಿ ಮಹತ್ವದ್ದೆನಿಸಿದೆ.

ಸಮಾಜದ ಎಲ್ಲ ಸಮುದಾಯಗಳ ಜ್ಞಾನ ಸಂಗ್ರಹಣೆ, ಸಂಪಾದನೆ, ಕಲಿಕೆ, ಪ್ರದರ್ಶನ ಕಾರ್ಯಗಳನ್ನು ಇನ್ನೂ ತೀವ್ರಗತಿಯಲ್ಲಿ ಅತ್ಯಂತ ಪರಿಣಾಮಕಾರಿಯಾಗಿ ಹಾಗೂ ಪ್ರಮಾಣಬದ್ಧವಾಗಿ ಮತ್ತು ವೈಜ್ಞಾನಿಕವಾಗಿ ನಡೆಸುವ ಉದ್ದೇಶವೇ ವಿಶ್ವವಿದ್ಯಾಲಯದ ಮೂಲ ಧ್ಯೇಯವಾಗಿದೆ. ಬಹುಭಾಷಿಕ ಹಾಗೂ ಬಹುಸಂಸ್ಕೃತಿಗಳು ಇರುವ ನಾಡಿನಲ್ಲಿ ಇನ್ನೂ ಅನಾವರಣಗೊಳ್ಳಬೇಕಾದ ಜ್ಞಾನ ಸಂಪತ್ತು ಅಗಾಧ ಪ್ರಮಾಣದಲ್ಲಿದೆ. ಈವರೆಗೆ ಆದ ಜಾನಪದ ಕ್ಷೇತ್ರ ಸಂಬಂಧೀ ಕಾರ್ಯಗಳ ಬಗೆಗೆ ನಾವು ಅಷ್ಟೇನೂ ಬೀಗುವಂತಿಲ್ಲ. ಇನ್ನೂ ಆಗಬೇಕಾದ ಕೆಲಸ–ಕಾರ್ಯಗಳು ಬೇಕಾದಷ್ಟು ಇವೆ ಎಂಬ ವಿನಯದಿಂದಲೇ ಜಾನಪದ ವಿಶ್ವವಿದ್ಯಾಲಯ ಕಾರ್ಯಪ್ರವೃತ್ತವಾಗಿದೆ. ಜನಪದರ ಲೋಕದೃಷ್ಟಿ, ಅವರ ವಿವೇಕ ಹಾಗೂ ಜಾಗತೀಕರಣದಿಂದಾಗಿ ತೀವ್ರಗತಿಯಲ್ಲಿ ಬದಲಾಗುತ್ತಿರುವ ಪ್ರಪಂಚಕ್ಕೆ ಪರ್ಯಾಯ ದೇಶೀ ಜ್ಞಾನ ಆಕರವಾಗಿದೆ. ಅದರ ಪ್ರಸ್ತುತತೆಗೆ ವಿಶ್ವವಿದ್ಯಾಲಯ ವಿಶೇಷವಾಗಿ ಗಮನಹರಿಸಿದೆ. ಶಿಷ್ಟ ಭಾಷೆಯ ಯಾಜಮಾನ್ಯಕ್ಕೆ ಭಿನ್ನವಾಗಿ ಮೌಖಿಕತೆಯಲ್ಲಿನ ಸಾಂಸ್ಕೃತಿಕ ಅಭಿವ್ಯಕ್ತಿ ಹಾಗೂ ಮೌಖಿಕ ಸಂಕಥನಕ್ಕೆ ಹೆಚ್ಚು ಒತ್ತು ಕೊಡುವ ಜರೂರತ್ತು ನಮ್ಮ ಮುಂದಿದೆ.

ಜಾನಪದ ಎಂದರೆ ಆಧುನಿಕ ಜ್ಞಾನ ಮತ್ತು ತಂತ್ರಜ್ಞಾನಕ್ಕೆ ವಿರುದ್ಧವಾದುದು ಎಂಬ ತಿಳಿವಳಿಕೆ ಬಲವಾಗಿ ಬೇರೂರಿದೆ. ಅಷ್ಟೇ ಅಲ್ಲ ಹಳೆಯದನ್ನು ಸಂಗ್ರಹಿಸುವುದು, ಮುಂದಿನ ವರ್ಗಕ್ಕೆ ಕೂಡಿಟ್ಟು ಕೊಡುವುದು ಎಂಬ ಸ್ಥಾಪಿತ ತಿಳಿವಳಿಕೆಯ ಚೌಕಟ್ಟಿನಾಚೆಗೂ, ಜಾನಪದವನ್ನು ವಿಶಾಲ ಮನೋಭೂಮಿಕೆಯಲ್ಲಿ ಅರ್ಥೈಸಿಕೊಳ್ಳಬೇಕಾದುದು ಇಂದಿನ ಅಗತ್ಯ ವಾಗಿದೆ. ಜಾನಪದವು ಭೂಮಿತೂಕದ್ದು, ಆಕಾಶದಷ್ಟು ವಿಸ್ತಾರವಾದುದು, ನೀರಿನಷ್ಟು ಚಲನಶೀಲವಾದುದು, ಗಾಳಿಯಂತೆ ನಮ್ಮ ಉಸಿರು ಎಂಬುದು ನಮ್ಮ ಅರಿವಿಗೆ ಬರಬೇಕಾಗಿದೆ. ಒಟ್ಟಿನಲ್ಲಿ ಜಾನಪದ ಎಂದರೆ ಎಲ್ಲವನ್ನೂ ಅಖಂಡವಾಗಿ ಅನುಸರಿಸಿದ ಒಂದು ಜೀವನ ವಿಧಾನ; ಜ್ಞಾನವನ್ನು ವಿಶೇಷ ರೀತಿಯಲ್ಲಿ ಹಂಚಿಕೊಂಡಿರುವ ಒಂದು ತವನಿಧಿಯಾಗಿದೆ. ಹಾಗಾಗಿ 'ಹೊನ್ನ ಬಿತ್ತೇವು ಹೊಲಕೆಲ್ಲ' ಎಂಬ ಧ್ಯೇಯ ವಾಕ್ಯವನ್ನು ತನ್ನ ಮೂಲಮಂತ್ರವಾಗಿಸಿಕೊಂಡು ವಿಶ್ವವಿದ್ಯಾಲಯ ಕಾರ್ಯೋನ್ಮುಖವಾಗಿದೆ. ಈವರೆಗೆ ಗುಪ್ತನಿಧಿಯಾಗಿದ್ದ ತವನಿಧಿ ಹೊನ್ನು ಈಗ ಜಗತ್ಪ್ರಕಟವಾಗಬೇಕಿದೆ. ವಿದ್ಯೆಯನ್ನು ಬೋಧಿಸುವುದು, ಸಂರಕ್ಷಿಸುವುದು ಅಷ್ಟೇ ಅಲ್ಲ ಹಂಚುವುದು–ಪ್ರಸರಣ ಮಾಡುವುದು ಜ್ಞಾನ ಕೇಂದ್ರವಾದ ವಿಶ್ವವಿದ್ಯಾಲಯದ ಮೂಲ ಗುರಿಯಾಗಿರಬೇಕು. ಈ ನಾಡು ಮೊದಲ ಬಾರಿಗೆ ವಿಶ್ವವಿದ್ಯಾಲಯದ ಮೂಲಕ ದೇಸೀ ಜ್ಞಾನಸಂಪತ್ತನ್ನು ಜಾಗತಿಕ ಪರಿಸರದಲ್ಲಿ ಬಿತ್ತುವ ಕಾರ್ಯಕ್ಕೆ ಕಂಕಣಬದ್ಧವಾಗಿದೆ. ಬಿತ್ತುವ, ಬೆಳೆಯುವ ಪ್ರಕ್ರಿಯೆ ಹೊಸಹುಟ್ಟಿಗೆ ನಾಂದಿ ಹಾಡುವುದಲ್ಲದೆ ಜ್ಞಾನಪರಂಪರೆಯ ಸತತ ಮುಂದುವರಿಕೆ, ಸಂರಕ್ಷಣೆ, ಅಭಿವೃದ್ಧಿಯ ರೂಪವೂ ಆಗಿದೆ.

ಪಾರಂಪರಿಕ ಜ್ಞಾನ/ಸಮುದಾಯ ಜ್ಞಾನ ಮತ್ತು ಆಚರಣೆಯ ಮೂಲ ನೆಲೆಯಿಂದಲೇ ಈ ಹೊತ್ತಿನ ಜ್ಞಾನಪದ್ಧತಿ ಬೆಳೆದು ಬಂದಿದೆ. ಸಮುದಾಯ ಜ್ಞಾನದಿಂದ ತಂತ್ರಜ್ಞಾನ ಕೌಶಲಗಳ ಬಳಕೆಯನ್ವಯ ನಮ್ಮ ಗ್ರಾಮ ವ್ಯವಸ್ಥೆಯನ್ನು ಹೆಚ್ಚು

ಉತ್ಪಾದಕವಾಗಿಯೂ, ಪ್ರಾಯೋಜಕವಾಗಿಯೂ, ದೃಢವಾಗಿಯೂ ರೂಢಿಸಬೇಕಾಗಿದೆ. ಆದರೆ ಇವೊತ್ತಿನ ಜಾಗತೀಕರಣ, ಉದಾರೀಕರಣ, ಖಾಸಗೀಕರಣಗಳ ಪ್ರಭಾವದಿಂದಾಗಿ ಜಾನಪದದಲ್ಲಿ ತೀವ್ರ ಸ್ವರೂಪದ ಬದಲಾವಣೆಗಳು ಆಗಿವೆ. ಅದರಲ್ಲೂ ಉದ್ಯಮಪತಿತ್ವ ತನಗೆ ಬೇಕಾದ ಜ್ಞಾನವನ್ನು ಮಾತ್ರ ಸೆಳೆದುಕೊಂಡು ಲಾಭದಾಯಕವಲ್ಲದ್ದನ್ನು ಹಿಂದಕ್ಕೆ ತಳ್ಳುತ್ತಲೇ ಬರುತ್ತಿದೆ. ಪಾರಂಪರಿಕ ಜ್ಞಾನ – ವಿಜ್ಞಾನ ಕುರಿತು ಅತ್ಯಂತ ವೈಜ್ಞಾನಿಕ ತಳಹದಿಯ ಮೇಲೆ ಹಾಗೂ ವರ್ತಮಾನಕ್ಕೆ ಹೊಂದಿಕೆಯಾಗುವ ಅಧ್ಯಯನ ಮಾದರಿಗಳನ್ನು ರೂಪಿಸಿಕೊಳ್ಳುವುದು ಆವಶ್ಯಕವಾಗಿದೆ. ಬದಲಾದ ಸನ್ನಿವೇಶದಲ್ಲಿ ಜಾನಪದ ಎನ್ನುವುದು ನಿತ್ಯದ ಬದುಕಿನ ಒಡಲಾಳದಿಂದಲೇ ರೂಪಾಂತರವನ್ನು ಹೊಂದುತ್ತಿರುವುದರಿಂದ ಜಾನಪದದಲ್ಲಿಯೇ ಅದಕ್ಕೆ ಪರ್ಯಾಯವಾಗಿ, ಪ್ರತಿರೋಧ ಒಡ್ಡುವ ಶಕ್ತಿ ಇರುವುದನ್ನು ಗುರುತಿಸಬೇಕಾಗಿದೆ. ಈ ನಿಟ್ಟಿನಲ್ಲಿ ನಮ್ಮದೇ ಜ್ಞಾನ, ಸಂಸ್ಕೃತಿಯನ್ನು ಆಧುನಿಕ ಸಂದರ್ಭಕ್ಕೆ ಅನ್ವಯಿಸಿಕೊಂಡು ನೋಡಲು ಯತ್ನಿಸಬೇಕಾಗಿದೆ. ಜನಪದರ ನಾಣ್ಣುಡಿಯಂತೆ, ಜ್ಞಾನ ಸಂಪಾದನೆಗೆ ಸಾಮಾನ್ಯವಾಗಿ ಅನುಸರಿಸುವ ಮಾರ್ಗಗಳು ಎರಡು; ಅವುಗಳಲ್ಲಿ ಒಂದು ದೇಶ ಸುತ್ತುವುದು, ಮತ್ತೊಂದು ಕೋಶ ಓದುವುದು. ಮನುಷ್ಯ ತನ್ನ ಜ್ಞಾನದಾಹವನ್ನು ನೀಗಿಸಿಕೊಳ್ಳಲು ಎರಡೂ ಮಾರ್ಗಗಳನ್ನು ಅನುಸರಿಸುವುದು ಅಗತ್ಯ. ಆದರೆ ಜ್ಞಾನ ಸಂಪಾದನೆಗೆ ಅವೆರಡರಲ್ಲಿ ಒಂದನ್ನಾದರೂ ಮಾಡಲೇಬೇಕು. ವಿಶ್ವವಿದ್ಯಾಲಯವು ಮೌಲಿಕವಾದ ಕೋಶಗಳನ್ನು ಪ್ರಕಟಿಸಿ ಓದುವಂತೆ ಪ್ರೇರೇಪಿಸುವ ಮೂಲಕ ಮಹತ್ವದ ಪ್ರಯತ್ನವನ್ನು ಮಾಡುತ್ತಿದೆ. ವಿಶ್ವವಿದ್ಯಾಲಯ ನೆಲಮೂಲವಾದ ಜನಪದ ಕಲೆ, ಸಾಹಿತ್ಯ, ಸಂಸ್ಕೃತಿ ಪರಂಪರೆಗಳ ಕುರಿತು ವಿಶೇಷ ಅಧ್ಯಯನ, ಅಧ್ಯಾಪನ, ಸಂಶೋಧನೆ ಸೇರಿದಂತೆ ಹತ್ತು ಹಲವು ಕಾರ್ಯಯೋಜನೆಗಳನ್ನು ರೂಪಿಸಿಕೊಂಡು ತನ್ನ ಕಾರ್ಯಕ್ಷೇತ್ರವನ್ನು ವಿಸ್ತರಿಸಿಕೊಳ್ಳುತ್ತಲಿದೆ. ದೇಶೀ ಎನ್ನಬಹುದಾದ ಎಲ್ಲ ಜ್ಞಾನವನ್ನು ಸಂಗ್ರಹಿಸುವ, ನಿರಂತರವಾಗಿ ಚಲನಶೀಲಗೊಳ್ಳುವ ಜಾನಪದವನ್ನು ಅದೇ ನೆಲೆಯಿಂದಲೇ ಗ್ರಹಿಸಿ, ಹೊಸ ಹೊಸ ಜ್ಞಾನ ಶೋಧದೊಂದಿಗೆ ಜಾನಪದವನ್ನು ಇಟ್ಟು ನೋಡುವ ಮತ್ತೆ ಹೊಸದಾಗಿ ಕಟ್ಟಿಕೊಳ್ಳುವ ಕಾರ್ಯವನ್ನು ನೋಂಪಿಯಂತೆ ಮುನ್ನಡೆಸಿಕೊಂಡು ಹೋಗುವುದೇ ಜಾನಪದ ವಿಶ್ವವಿದ್ಯಾಲಯದ ಮೂಲ ಆಶಯವಾಗಿದೆ. ಅದರ ಭಾಗವಾಗಿ ವಿಶ್ವವಿದ್ಯಾಲಯವು ವಿಸ್ತರಣೆ ಹಾಗೂ ಸಲಹಾ ಕೇಂದ್ರದ ಮೂಲಕ ಜ್ಞಾನ ಪ್ರಸರಣಕ್ಕೆ ಟೊಂಕಕಟ್ಟಿ ನಿಂತಿದ್ದು, ಪುಸ್ತಕ ಪ್ರಕಟಣೆಗೆ ಮುಂದಾಗಿದೆ. ಈ ಮೂಲಕ ಅಂತರ್‌ಶಿಸ್ತೀಯ ಜ್ಞಾನಶೋಧದ ವಿನೂತನ ಮಾರ್ಗಗಳು ತೆರೆದುಕೊಳ್ಳಲು ವಿಶ್ವವಿದ್ಯಾಲಯ ನಾಂದಿ ಹಾಡಿದೆ.

ಸಮಾಜದ ಎಲ್ಲ ಸಮುದಾಯಗಳ ಸಮಸ್ತ ಜ್ಞಾನದ ಸಂಗ್ರಹ, ಸಂರಕ್ಷಣೆ ಹಾಗೂ ಸಂವರ್ಧನೆಯ ಉದ್ದೇಶದಿಂದ ಕರ್ನಾಟಕ ಜಾನಪದ ವಿಶ್ವವಿದ್ಯಾಲಯವು ಸ್ಥಾಪನೆಯಾಗಿದೆ. ನೆಲಮೂಲ ಜ್ಞಾನ, ಸಂಸ್ಕೃತಿ, ಪರಂಪರೆಯನ್ನು ಉಳಿಸಿ–ಬೆಳೆಸಿಕೊಳ್ಳುವ ಜರೂರತ್ತಿನ ಮಾತುಗಳು ಈಗ ಎಲ್ಲೆಡೆ ಕೇಳಿಬರುತ್ತಿವೆ. ಇಂದು ಜಾಗತೀಕರಣದಿಂದ ಎದುರಾಗಿರುವ ಬಹುತೇಕ ಸಮಸ್ಯೆಗಳಿಗೆ, ಸಂದಿಗ್ಧತೆಗೆ, ಗೊಂದಲಗಳಿಗೆ ಜಾನಪದವೇ ಪರ್ಯಾಯ ಎನ್ನುವುದು ದೃಢವಾಗುತ್ತಿರುವ ಈ ಕಾಲಘಟ್ಟದಲ್ಲಿ ವಿಶ್ವವಿದ್ಯಾಲಯದ ಸ್ಥಾಪನೆ ಚಾರಿತ್ರಿಕವಾಗಿ ಅತ್ಯಂತ ಮಹತ್ವದ ಮತ್ತು ಗಮನಾರ್ಹವಾದ ಸಂಗತಿಯಾಗಿದೆ.

ಜಾನಪದವು ಒಂದು ಬಹುಶಿಸ್ತೀಯ ಜ್ಞಾನಕ್ಷೇತ್ರ. ಜನಪದರ ಬದುಕಿನ ಎಲ್ಲ ಸಂಗತಿಗಳನ್ನು ಕುರಿತು ಶೋಧಿಸುವ, ಅಧ್ಯಯನದ ಸಾಧ್ಯತೆಗಳನ್ನು ಕಂಡುಕೊಳ್ಳುವ ಅಗತ್ಯತೆಯನ್ನು ಪೂರೈಸಿಕೊಳ್ಳಬೇಕಾದ ಒತ್ತಡದಲ್ಲಿ ಇಂದು ನಾವಿದ್ದೇವೆ. ನೆಲಮೂಲಜ್ಞಾನ, ಪರಂಪರೆಯನ್ನು ಮರುಶೋಧಿಸುವ ಮತ್ತು ಪುನರ್‌ನಿರ್ವಚಿಸುವ ಕಾರ್ಯವನ್ನು ನಿರ್ವಹಿಸಬೇಕಿರುವುದು ಕೂಡ ಈ ಒತ್ತಡದ ಭಾಗವಾಗಿಯೇ ಎಂಬುದನ್ನು ಅರಿಯಬೇಕಾಗುತ್ತದೆ.

ಮಾನವಶಾಸ್ತ್ರ, ಸಮಾಜಶಾಸ್ತ್ರ, ಭಾಷಾ ವಿಜ್ಞಾನದ ನೆಲೆಯಿಂದ ಜಾನಪದ ಅಧ್ಯಯನಗಳು ನಡೆಯುತ್ತಿವೆ. ಅದರಲ್ಲೂ ಮೊದಲಿಗೆ ಭಾಷಿಕ ನೆಲೆಯಿಂದ ಪ್ರಾರಂಭವಾದ ಅಧ್ಯಯನಕ್ಕೆ ಬುಡಕಟ್ಟು ಸಮುದಾಯಗಳು, ಗ್ರಾಮೀಣ ಪರಿಸರದಲ್ಲಿ ಬದುಕುವ ಜನಸಮುದಾಯಗಳೇ ಮೂಲ ಆಧಾರವಾಗಿವೆ. ವಿವಿಧ ಜನಸಮುದಾಯಗಳು ಮಾತನಾಡುವ ಭಾಷೆ ವೈವಿಧ್ಯಮಯವಾಗಿದ್ದು, ಆಯಾಯ ಜನಸಮುದಾಯದ ಒಟ್ಟು ಸಾಂಸ್ಕೃತಿಕ ಅಂಶಗಳನ್ನು ಅದು ದರ್ಶಿಸಿಕೊಡುತ್ತದೆ.

ಬದುಕಿನ ಸಂವೇದನೆಗಳನ್ನು, ಭಾವನೆಗಳನ್ನು ವಿನಿಮಯ ಮಾಡಿಕೊಳ್ಳುವ, ಪರಸ್ಪರ ಸಂಬಂಧವನ್ನು ಏರ್ಪಡಿಸುವ ಅತ್ಯುಪಯುಕ್ತ ಮಾಧ್ಯಮ ಭಾಷೆ.

ಮಾತು ಮತ್ತು ಬರಹ ಎಂಬ ಎರಡು ವಿಧಾನಗಳು ಭಾಷೆಯ ಅಭಿವ್ಯಕ್ತಿ ಸಾಧ್ಯತೆಗಳಾಗಿವೆ. ಬರಹದ ಭಾಷೆಗೆ ಚರಿತ್ರೆ ಇದೆ. ಆದರೆ ಮೌಖಿಕತೆಗೆ ಅಥವಾ ಮಾತಿಗೆ ಲಿಖಿತ ಚರಿತ್ರೆ ಇಲ್ಲ. ಈವರೆಗೂ ನಡೆದಿರುವ ಭಾಷೆಯ ಬಗೆಗಿನ ಅಧ್ಯಯನಗಳು ಗ್ರಾಂಥಿಕ ಭಾಷೆಯನ್ನು ಆಧರಿಸಿ ನಡೆದಿರುವುದನ್ನು ಭಾಷಾಚರಿತ್ರೆಯಿಂದ ಗುರುತಿಸಬಹುದು. ನಿಘಂಟು, ಶಬ್ದಕೋಶ, ನುಡಿಕೋಶಗಳು ಅಕ್ಷರರೂಪದ ಭಾಷೆಯನ್ನು ಒಳಗೊಂಡೇ ರಚನೆಯಾಗಿವೆ ಎಂದು ಬೇರೆ ಹೇಳಬೇಕಿಲ್ಲ. ನಿಘಂಟು ರಚನಾ ಕಾರ್ಯದ ಇತಿಹಾಸವು ಹಲ್ಮಿಡಿ ಶಾಸನದಿಂದ ಹಿಡಿದು ಎಪ್ಪತ್ತರ ದಶಕದವರೆಗೂ ಹರಡಿಕೊಂಡಿದೆ. ನಿರ್ಲಕ್ಷ್ಯಕ್ಕೆ ಒಳಗಾದ ಜನಪದರ ಮಾತಿನ ರೂಪವು ಅಧ್ಯಯನಯೋಗ್ಯವಾಗಿರುವುದನ್ನು ಕಂಡುಕೊಂಡ ಭಾಷಾವಿಜ್ಞಾನಿಗಳು ವಿಶೇಷವಾಗಿ ಮಾತಿನ ರೂಪವನ್ನು ಕುರಿತು ಅಧ್ಯಯನಕ್ಕೆ ತೊಡಗಿದರು. ವ್ಯಾಕರಣ ಸೇರಿದಂತೆ ಶಿಷ್ಟ ನೆಲೆಯಲ್ಲಿ ಶಬ್ದಕೋಶಗಳ ರಚನಾ ಕಾರ್ಯ ನಡೆಯಿತು. ವಿವಿಧ ಪ್ರಾದೇಶಿಕ ಭಾಷಾ ಪ್ರಬೇಧಗಳನ್ನು ಕೂಲಂಕಷವಾಗಿ ಪರಿಶೀಲಿಸುವ, ಪದಕೋಶಗಳನ್ನು ರೂಪಿಸುವ ಕೆಲಸಗಳು ಹಿಂದಕ್ಕೆ ಸರಿದವು. ಒಟ್ಟು ಭಾಷಾ ಶ್ರೀಮಂತಿಕೆಯನ್ನು ಕಂಡುಕೊಳ್ಳುವ ಸಮಗ್ರ ಪ್ರಯತ್ನಗಳ ಕೊರತೆಯಿಂದಾಗಿ ದೇಶೀ ಭಾಷಾಕೋಶಗಳು ರಚನೆಗೊಳ್ಳಲಿಲ್ಲ. ಇದರಿಂದ ದೇಸೀ ಪದಗಳು ಗ್ರಂಥಸ್ಥಗೊಳ್ಳದೆ ಬಾಯಿ ಮಾತಿನಲ್ಲೇ ಉಳಿಯುವಂತಾಯಿತು. ಇದು ಇಡೀ ಕನ್ನಡ ಭಾಷಾ ಪ್ರಪಂಚದ ವಿಸ್ತಾರಕ್ಕೆ ತೊಡಕಾಯಿತು. ಇಂದು ಬಹುಭಾಷಾ ಪ್ರಭಾವ ನಮ್ಮ ಬದುಕಿನ ಮೇಲೆ ತೀವ್ರ ಪರಿಣಾಮ ಉಂಟುಮಾಡಿದೆ. ಇದು ಭಾಷೆಯ ಮಟ್ಟಿಗೂ ಸತ್ಯವಾದುದು. ಜನಸಾಮಾನ್ಯರು ಆಡುವ ನುಡಿಗಳು ಕಳೆದು ಹೋಗುವ ಭೀತಿ ಎದುರಾಗಿದೆ. ಅಂತೆಯೇ ಅವುಗಳನ್ನು ಉಳಿಸಿಕೊಳ್ಳುವ ಮೂಲಕ ಸಾಂಸ್ಕೃತಿಕ ಅನನ್ಯತೆಯನ್ನು ಕಾಯ್ದುಕೊಳ್ಳುವ ಎಚ್ಚರವೂ ಉಂಟಾಗಿದೆ. ಪರಿಣಾಮ ದೇಶೀ ನುಡಿಕೋಶ, ಆಡುನುಡಿ ಕೋಶ, ನಿಘಂಟು, ಶಬ್ದಕೋಶಗಳನ್ನು ರಚಿಸುವ ಪ್ರಯತ್ನಗಳು ತೀವ್ರತೆ ಪಡೆದುಕೊಳ್ಳುತ್ತಿವೆ.

ಕರ್ನಾಟಕದಲ್ಲಿ ಪರ್ಯಾಯ ಸಂಸ್ಕೃತಿ ಅಧ್ಯಯನದ ಪರಿಕಲ್ಪನೆಗಳು ಹುಟ್ಟಿಕೊಂಡಿರುವುದರ ಭಾಗವಾಗಿ ದೇಸೀ ಭಾಷಾಕೋಶಗಳ ರಚನೆಯು ಮುಖ್ಯವೆನಿಸುತ್ತದೆ. ಈ ಬಗೆಯ ಕೊರತೆಯನ್ನು ನೀಗಿಸುವ ಪ್ರಯತ್ನಗಳು ಸಣ್ಣ ಪ್ರಮಾಣದಲ್ಲಿ ಶುರುವಾದವು. ನಂತರದಲ್ಲಿ ಜನಪದರು ಆಡುವ ಮಾತು ಭಾಷಾ ಅಧ್ಯಯನದ ಸಾಧ್ಯತೆಗಳನ್ನು ಒಳಗೊಂಡಿರುವುದನ್ನು ಗುರುತಿಸಿದ ತಜ್ಞರು, ಆಡುನುಡಿಕೋಶಗಳನ್ನು ರೂಪಿಸುವ ಕಡೆಗೆ ಒಲವು ತೋರಿರುವುದು ಕಂಡುಬರುತ್ತದೆ. ಕನ್ನಡದ ಮೇಲೆ ಅನ್ಯ ಭಾಷಾ ಸಂಸ್ಕೃತಿಯ ಹಾವಳಿ ಯಾವ ಕಾಲಕ್ಕೂ ಇದ್ದೇ ಇದೆ. ಈ ಎಲ್ಲ ಸವಾಲುಗಳನ್ನು ಎದುರಿಸಿಯೇ ಕನ್ನಡ ತನ್ನ ಅನನ್ಯತೆಯನ್ನು ಉಳಿಸಿಕೊಂಡಿದೆ ಎಂಬುದನ್ನು ಇಲ್ಲಿಯೇ ನೆನೆಯಬೇಕು. ಪ್ರಸ್ತುತ ಇಂಗ್ಲಿಷ್ ಭಾಷೆಯ ಪ್ರಭಾವದಿಂದಾಗಿ ದೇಸೀ ನುಡಿಗಳು, ಪ್ರಾದೇಶಿಕ ಭಾಷೆಗಳ ಮಹತ್ವ ಕಡಿಮೆಯಾಗುತ್ತಿದೆ. ಹಾಗೊಂದು ವೇಳೆ ಅವು ಅಸ್ತಿತ್ವದಲ್ಲಿದ್ದರೂ ಅದು, ಕೇವಲ ಮನೆಯಲ್ಲಿನ ವ್ಯವಹಾರಕ್ಕೆ ಮಾತ್ರ ಬಳಕೆಯಾಗುತ್ತಿರುವುದನ್ನು ಗಮನಿಸಬಹುದು. ಪರಿಣಾಮ ದೇಶೀ ನುಡಿಗಳ ಬಳಕೆ ಪ್ರಮಾಣ ತುಂಬ ಕ್ಷೀಣಿಸುತ್ತಿದೆ. ಕನ್ನಡದ ದೇಸೀ ಸೊಗಡು ವಿಸ್ಮೃತಿಗೆ ಒಳಗಾಗುತ್ತಿರುವ ಈ ಹೊತ್ತಿನ ಸಂದರ್ಭದಲ್ಲಿ ಕನ್ನಡದ ದೇಸೀ ಸೊಗಡು, ಸೊಬಗು, ಅದರ ಮಹತ್ವವನ್ನು ಸಂರಕ್ಷಿಸಿಕೊಳ್ಳುವುದು ಅತ್ಯಂತ ಅಗತ್ಯವಾಗಿದೆ.

ಈ ಹಿನ್ನೆಲೆಯಲ್ಲಿ ಕನ್ನಡದ ಆಡುಮಾತು ಹಾಗೂ ದೇಸೀಜ್ಞಾನ ಪರಂಪರೆಗಳ ಸಮಗ್ರ ಮಾಹಿತಿಗಳನ್ನು ಒಳಗೊಂಡ ಸಂಸ್ಕೃತಿ ಕೋಶವನ್ನು ಸಿದ್ಧಪಡಿಸಿಕೊಳ್ಳುವುದು ಅಧ್ಯಯನ ದೃಷ್ಟಿಯಿಂದ ಮೇಲಾಗಿ ಕನ್ನಡ ಭಾಷೆ ಮತ್ತು ಸಾಂಸ್ಕೃತಿಕ ಅಸ್ಮಿತೆಯ ದೃಷ್ಟಿಯಿಂದಲೂ ಮುಖ್ಯವಾದುದಾಗಿದೆ. ಕರ್ನಾಟಕದ ವಿವಿಧ ಪ್ರದೇಶಗಳಲ್ಲಿ ನೆಲೆಸಿರುವ ಸಾಮಾಜಿಕ ವರ್ಗದವರ ನಿತ್ಯ ಜೀವನದಲ್ಲಿ ಬಳಕೆಯಲ್ಲಿರುವ ಆಧಾರಭೂತ ಶಬ್ದಾವಳಿಯ ಮಾತುಗಳೊಂದಿಗೆ ಬೇಸಾಯ, ಬೇಟೆ, ಮೀನುಗಾರಿಕೆ, ಕರಕುಶಲ ಕಲೆಗಳು, ವೃತ್ತಿ ಕಸುಬುಗಳ ಸನ್ನಿವೇಶದಲ್ಲಿ ಬಳಕೆಯಾಗುವ ತಾಂತ್ರಿಕ ಪದಗಳನ್ನೂ, ಉಪಕರಣಗಳನ್ನೂ, ಸಾಮಾಜಿಕ–ಧಾರ್ಮಿಕ ಆಚರಣೆಗಳಲ್ಲಿ ಬಳಕೆಗೊಳ್ಳುವ ವಿಶಿಷ್ಟ ಪದಸಂಪತ್ತನ್ನೂ ಸಂಗ್ರಹಿಸಿ, ಸಂರಕ್ಷಿಸಿಕೊಳ್ಳಬೇಕಾಗುತ್ತದೆ.

ವ್ಯಾಪಕ ಕ್ಷೇತ್ರಕಾರ್ಯ ನಡೆಸಿ ಪ್ರತಿಯೊಂದು ಪದಕ್ಕೂ ಬೇರೆ ಬೇರೆ ಪ್ರದೇಶದಲ್ಲಿ ಇರುವ ಜನಸಮುದಾಯಗಳ ಭಾಷೆಯಲ್ಲಿರುವ ರೂಪಭೇದ, ಧ್ವನಿಭೇದಗಳನ್ನು ಗುರುತಿಸುವುದು ಆಗಬೇಕಾದ ಕೆಲಸವೇ ಆಗಿದೆ. ಈಗಾಗಲೇ ಕರ್ನಾಟಕದಲ್ಲಿ ಸಂಗ್ರಹವಾಗಿರುವ ಅಪಾರ ಪ್ರಮಾಣದ ಜನಪದ ಸಾಹಿತ್ಯದಿಂದ ಪದಸಂಚಯ ನಡೆಸಿ ವಿಶಿಷ್ಟ ಕುಲನಾಮ, ಸ್ಥಳನಾಮ ಮತ್ತು ವ್ಯಕ್ತಿನಾಮಗಳನ್ನು ಸಂಗ್ರಹಿಸುವುದನ್ನು ಲಕ್ಷಿಸಲೇಬೇಕು. ವಾಗ್ರೂಢಿ, ನುಡಿಗಟ್ಟುಗಳು, ಮಾತಿನಲ್ಲಾಗುವ ರೂಪವಿಕಾರಗಳನ್ನು ಹಾಗೂ ಸಾಧಿತಪದ, ಸಮಾಸಪದ, ಗಾದೆ, ಒಗಟಿನ ಮಾತುಗಳನ್ನು ಸಂಗ್ರಹಿಸಿ ಅವುಗಳ ವಿಕಲ್ಪರೂಪ, ಅರ್ಥ, ಪ್ರಯೋಗ, ನಿಷ್ಪತ್ತಿಗಳನ್ನು, ಬಳಕೆಗೊಳ್ಳುವ ಪ್ರದೇಶಗಳ ವಿವರವನ್ನು ಒಳಗೊಂಡು ಸರ್ವಸಮಗ್ರ ನಿಘಂಟನ್ನು ರೂಪಿಸಬೇಕಾದ ಕಾರ್ಯ ನಮ್ಮ ಮುಂದಿರುವ ತುರ್ತು ಅಗತ್ಯ.

ಈ ನಿಟ್ಟಿನಲ್ಲಿ ಕರ್ನಾಟಕ ಜಾನಪದ ಅಕಾಡೆಮಿಯು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ನೆರವಿನಿಂದ 'ಕನ್ನಡ ಜಾನಪದ ನಿಘಂಟು' ಎಂಬ ಬೃಹತ್ ಯೋಜನೆಯನ್ನು ರೂಪಿಸಿ ಅನುಷ್ಠಾನಗೊಳಿಸಲು ಕಾರ್ಯತತ್ಪರವಾಗಿತ್ತು. ಸನ್ಮಾನ್ಯ ಶ್ರೀ ಗೊ.ರು.ಚ. ಅವರ ಪ್ರಧಾನ ಸಂಪಾದಕತ್ವದಲ್ಲಿ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಸನ್ಮಾನ್ಯ ಶ್ರೀ ಮುಖ್ಯಮಂತ್ರಿ ಚಂದ್ರು ಅವರ ನೆರವಿನೊಂದಿಗೆ ಮೊದಲ ಮೂರು ಸಂಪುಟಗಳು ಈಗಾಗಲೇ ಪ್ರಕಟಗೊಂಡಿವೆ. ಆದಾಗ್ಯೂ ಇನ್ನಷ್ಟು ವಿಸ್ತೃತವಾದ, ಆಳವಾದ ಹಾಗೂ ವಿಶದವಾದ ಅಧ್ಯಯನ ನಡೆಸುವ ಉದ್ದೇಶದಿಂದ ಈ ಯೋಜನೆಯನ್ನು ಕರ್ನಾಟಕ ಜಾನಪದ ವಿಶ್ವವಿದ್ಯಾಲಯಕ್ಕೆ ಹಸ್ತಾಂತರಿಸುವುದು ಸೂಕ್ತ ಎಂದು ಭಾವಿಸಿ, ಸದರಿ ಜವಾಬ್ದಾರಿಯನ್ನು ಶ್ರೀಯುತರು ವಿಶ್ವವಿದ್ಯಾಲಯದ ಹೆಗಲಿಗೇರಿಸಿ ಕೆಲವು ಅಮೂಲ್ಯ ಸಲಹೆಗಳನ್ನೂ ನೀಡಿದ್ದಾರೆ.

ಕನ್ನಡ ಜಾನಪದ ನಿಘಂಟು ಯೋಜನೆ ನಾಲ್ಕು ವರ್ಷಗಳ ಬೃಹತ್ ಯೋಜನೆ ಆಗಿದ್ದು, ಹತ್ತು ಸಂಪುಟಗಳಲ್ಲಿ ಪ್ರಕಟಗೊಳ್ಳುವ ಗುರಿಯನ್ನು ಇರಿಸಿಕೊಳ್ಳಲಾಗಿದೆ. ನಿಘಂಟು ರಚನೆ, ಅದರ ಪರಿಷ್ಕರಣೆ ಹಾಗೂ ಮುದ್ರಣ ಕಾರ್ಯವನ್ನು ಘನ ಸರ್ಕಾರದ ಅನುದಾನದಿಂದ ಮುಂದುವರೆಸುವುದು ಯುಕ್ತವೆಂದು ತೀರ್ಮಾನಿಸಿ ಪ್ರಸ್ತುತ ಯೋಜನೆಯನ್ನು ವಿಶ್ವವಿದ್ಯಾಲಯಕ್ಕೆ ಹಸ್ತಾಂತರಿಸಲಾಗಿದೆ. ಯೋಜನೆಯ ಸಂಬಂಧವಾಗಿ ತಜ್ಞ ವಿದ್ವಾಂಸರ ಸಲಹೆ ಸೂಚನೆ ಹಾಗೂ ಮಾರ್ಗದರ್ಶನದಲ್ಲಿ ಅನೇಕ ಸಭೆಗಳನ್ನು ಕಾಲಕಾಲಕ್ಕೆ ಆಯೋಜಿಸಿ, ಸಮಾಲೋಚಿಸಲಾಗಿದೆ. ಯೋಜನೆಯ ಸ್ವರೂಪ, ಒಳಗೊಳ್ಳಬೇಕಾದ ವಿಷಯ ವೈವಿಧ್ಯ ಮತ್ತಿತರ ಉದ್ದೇಶಗಳ ಕುರಿತು ಕೂಲಂಕಷ ಪರಿಶೀಲನೆ ಕೈಗೊಂಡು ಸೂಕ್ತ ಮತ್ತು ಸಮಂಜಸವಾದ ಕ್ರಿಯಾಯೋಜನೆಯನ್ನು ಸಿದ್ಧಪಡಿಸಿ ಸರ್ಕಾರದ ಗಮನಕ್ಕೆ ತರಲಾಗಿದೆ. ಅಲ್ಲದೆ, ಉದ್ದೇಶಿತ ಕ್ರಿಯಾಯೋಜನೆಯ ಸ್ವರೂಪಕ್ಕೆ ಅನುಗುಣವಾಗಿ ಸಂಪಾದನ ಸಮಿತಿಯನ್ನು ರಚಿಸಿ, ಕ್ಷೇತ್ರತಜ್ಞರನ್ನು ನಿಯೋಜಿಸಿಕೊಂಡು ಪದಸಂಗ್ರಹ ಕಾರ್ಯವನ್ನು ವಿವರಣೆ, ಸಂದರ್ಭ ಮತ್ತು ಪ್ರಯೋಗಗಳೊಂದಿಗೆ ನಡೆಸಲಾಗುತ್ತಿದೆ. ಇಂತಹ ಮಹತ್ವದ ಯೋಜನೆಗೆ ಸಂಬಂಧಿಸಿದ ಈವರೆಗಿನ ಕಾರ್ಯಚಟುವಟಿಕೆಗಳಿಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಆರ್ಥಿಕ ನೆರವು ನೀಡುತ್ತ ಬಂದಿದೆ. ಆದರೆ ಯೋಜನೆಯನ್ನು ಸುಸೂತ್ರವಾಗಿ ಮುಂದುವರೆಸಲು ಕಾಲದಿಂದ ಕಾಲಕ್ಕೆ ಆರ್ಥಿಕ ನೆರವು ದೊರಕುವುದು ಆವಶ್ಯಕ. ಈ ಹಿನ್ನೆಲೆಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಯಾವತ್ತೂ ಸೂಕ್ತ ರೀತಿಯಲ್ಲಿ ಸ್ಪಂದಿಸುತ್ತದೆ ಎಂಬುದು ನಮ್ಮ ದೃಢನಂಬಿಕೆ. ಅತ್ಯಂತ ವಿಶಿಷ್ಟ ಹಾಗೂ ವಿಸ್ತೃತವಾದ ಪ್ರಸಕ್ತ ಯೋಜನೆಯನ್ನು ಯಶಸ್ವಿಯಾಗಿ ಆಗುಮಾಡಲು ತಜ್ಞರ ಸಲಹೆ–ಸೂಚನೆ, ನಿರ್ದೇಶನಗಳನ್ನು ಸ್ವೀಕರಿಸಿ ಕನ್ನಡದ ಆಡುಮಾತಿನ ರೂಪ ವೈವಿಧ್ಯಗಳನ್ನು ದಾಖಲಿಸುವ, ದೇಸೀ ನುಡಿಸೊಗಡನ್ನು ಅನಾವರಣಗೊಳಿಸುವ ಕಾರ್ಯವನ್ನು ವೈಜ್ಞಾನಿಕ ನೆಲೆಯಲ್ಲಿ ಕೈಗೊಳ್ಳಲು ವಿಶ್ವವಿದ್ಯಾಲಯವು ಪ್ರಾಮಾಣಿಕವಾಗಿ ಶ್ರಮಿಸುತ್ತದೆ. ಬಳಕೆ ಪ್ರಮಾಣ ಕಡಿಮೆಯಾಗುತ್ತಿರುವ ಸಾವಿರ ಸಾವಿರ ಜನಪದ ಶಬ್ದರೂಪಗಳನ್ನು ಸಂಗ್ರಹಿಸುವ ಮತ್ತು ಅವನ್ನು ವಿಶೇಷವಾಗಿ ದಾಖಲಿಸುವ ಪ್ರಕೃತ ಈ ಯೋಜನೆಯು ಕನ್ನಡ ಭಾಷಾಕೋಶ ಚರಿತ್ರೆಯಲ್ಲಿಯೇ ದಾಖಲಾರ್ಹ ಕಾರ್ಯವಾಗಲಿದೆ. ವಿಶ್ವವಿದ್ಯಾಲಯವು ಕೈಗೊಳ್ಳುವ ಪ್ರತಿಯೊಂದು ಯೋಜನೆಯೂ ವಿಶಿಷ್ಟ ಹಾಗೂ ಅತ್ಯುಪಯುಕ್ತವಾಗಿರಬೇಕು ಎಂಬ ಆಶಯ ಮತ್ತು ಉದ್ದೇಶದಿಂದ ಈ ಯೋಜನೆಯನ್ನೂ ಸಹ ಕೈಗೆತ್ತಿಕೊಳ್ಳಲಾಗಿದೆ. ಔಚಿತ್ಯಪೂರ್ಣವಾದ ಈ ಯೋಜನೆಯನ್ನು ಸಾರ್ಥಕಗೊಳಿಸುವುದು ಅತ್ಯವಶ್ಯವಾಗಿದೆ. ಈ ನಿಟ್ಟಿನಲ್ಲಿ ವಿಶ್ವವಿದ್ಯಾಲಯದ ಮಹತ್ವಾಕಾಂಕ್ಷೆಯ ಯೋಜನೆಯು

ಯಶಸ್ವಿಯಾಗಿ ಗುರಿಮುಟ್ಟುವುದು ನಾಡಿನ ಎಲ್ಲ ಜನಪದರ, ವಿದ್ವಾಂಸರ, ತಜ್ಞರ ಸಹಕಾರವನ್ನು ಅವಲಂಬಿಸಿರುತ್ತದೆ ಎಂಬ ಅಂಶವನ್ನು ತಮ್ಮಲ್ಲಿ ವಿಜ್ಞಾಪಿಸಿಕೊಳ್ಳುತ್ತೇನೆ.

ಕರ್ನಾಟಕ ಜಾನಪದ ವಿಶ್ವವಿದ್ಯಾಲಯದ ಮಹತ್ವಾಕಾಂಕ್ಷೆಯ ಯೋಜನೆಗಳಲ್ಲೊಂದಾದ "ಕನ್ನಡ ಜಾನಪದ ನಿಘಂಟು" ಸಂಪುಟಗಳ ಪ್ರಕಟಣಾ ಕಾರ್ಯ ಸವಾಲಿನದು. ಅದನ್ನು ವೈಜ್ಞಾನಿಕ ವಿಧಾನದಲ್ಲಿ ರೂಪಿಸಿ, ಹೊರತರುವ ಪ್ರಯತ್ನ ವಿಶ್ವವಿದ್ಯಾಲಯದ್ದು. ಧ್ವನಿವ್ಯತ್ಯಾಸ, ಅಕ್ಷರ ಪಲ್ಲಟ, ಪದಪ್ರಯೋಗಳ ಸ್ವರೂಪಭಿನ್ನತೆ, ಉಪಯೋಗಿಸುವ ಪದಗಳಿಗೆ ಇರುವ ಪ್ರಾದೇಶಿಕ ಅರ್ಥವಿಸ್ತಾರ ಇತ್ಯಾದಿ ಅಂಶಗಳ ಕುರಿತು ಮಾಹಿತಿ ಒದಗಿಸುವ ಪ್ರಾಮಾಣಿಕ ಪ್ರಯತ್ನ ಇಲ್ಲಿಯದು.

ಸ್ವರಾಕ್ಷರ, ವರ್ಗೀಯ ವ್ಯಂಜನಗಳು ಹಾಗೂ ಅವರ್ಗೀಯ ವ್ಯಂಜನಗಳು ಎಂಬ ವಿಂಗಡಣೆಗೆ ಅನುಗುಣವಾಗಿ ಈಗಾಗಲೇ ಮೂರು ಸಂಪುಟಗಳು ಕರ್ನಾಟಕ ಜಾನಪದ ಅಕಾಡೆಮಿ ವತಿಯಿಂದ ಪ್ರಕಟವಾಗಿವೆ. ಇನ್ನೂ ವಿಸ್ತೃತ ನೆಲೆಯಲ್ಲಿ ಈ ಜಾನಪದ ನಿಘಂಟನ್ನು ರಚಿಸುವ ಉದ್ದೇಶದಿಂದ ವಿಶ್ವವಿದ್ಯಾಲಯವು ಡಾ. ಸಂಧ್ಯಾರೆಡ್ಡಿ ಅವರ ನೇತೃತ್ವದಲ್ಲಿ ಈ ಯೋಜನೆಯನ್ನು ಕೈಗೆತ್ತಿಕೊಂಡಿತ್ತು. ನೆಲಮೂಲ ಜ್ಞಾನ ಪರಂಪರೆಗಳ ಹಾಗೂ ಭಾಷಾಶಾಸ್ತ್ರೀಯ ನೆಲೆಯ ಅಧ್ಯಯನಗಳಿಗೆ ಪ್ರಕೃತ ನಿಘಂಟು ಅತ್ಯುತ್ತಮ ಆಕರ ಆಗಲಿದೆ. ಇಂತಹದೊಂದು ಮಹತ್ವಪೂರ್ಣವಾದ ಯೋಜನೆಯೊಂದು ರೂಪುಗೊಂಡು ಯಶಸ್ವಿಯಾಗಿ ಹೊರಬರಲು ಅನೇಕ ಜನ ವಿದ್ವಾಂಸರ ಶ್ರಮ, ಶ್ರದ್ಧೆ ವಿನಿಯೋಗವಾಗಿದೆ. ಈ ಕಾರ್ಯದಲ್ಲಿ ತಮ್ಮನ್ನು ತಾವು ಪೂರ್ಣಪ್ರಮಾಣದಲ್ಲಿ ತೊಡಗಿಸಿಕೊಂಡು ಈ ಪ್ರಮಾಣದಲ್ಲಿ ಪ್ರಸ್ತುತ ಸಂಪುಟ ಬೆಳಕು ಕಾಣಲು ಕಾರಣರಾದ ನಿಘಂಟು ಯೋಜನೆಯ ಕಾರ್ಯನಿರ್ವಾಹಕ ಸಂಪಾದಕರಾದ ಡಾ. ಕೆ. ಆರ್. ಸಂಧ್ಯಾರೆಡ್ಡಿ, ವಿಶ್ವವಿದ್ಯಾಲಯದ ಪರವಾಗಿ ಯೋಜನೆಯ ಸಂಪೂರ್ಣ ಜವಾಬ್ದಾರಿಯನ್ನು ಹೊತ್ತು ಯಶಸ್ವಿಯಾಗಿ ನಿರ್ವಹಿಸಿದ ಡಾ.ಕೆ. ಪ್ರೇಮಕುಮಾರ ಹಾಗೂ ಸಂಪಾದಕ ಮಂಡಳಿಯ ಎಲ್ಲ ಗೌರವಾನ್ವಿತ ಸದಸ್ಯರಿಗೂ, ಕ್ಷೇತ್ರತಜ್ಞರಿಗೂ ಹಾಗೂ ಯೋಜನೆಯ ಯಶಸ್ಸಿಗೆ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ದುಡಿದ ಸರ್ವರಿಗೂ ವಿಶ್ವವಿದ್ಯಾಲಯದ ಕೃತಜ್ಞತೆಗಳು ಸಲ್ಲುತ್ತವೆ.

ನಿಘಂಟನ್ನು ಅಚ್ಚುಕಟ್ಟಾಗಿ ಹೊರತರುವಲ್ಲಿ ತುಂಬ ಮುತುವರ್ಜಿ ವಹಿಸಿದ ವಿಶ್ವವಿದ್ಯಾಲಯದ ವಿಸ್ತರಣೆ ಹಾಗೂ ಸಲಹಾ ಕೇಂದ್ರದ ನಿರ್ದೇಶಕರೂ, ಮೌಲ್ಯಮಾಪನ ಕುಲಸಚಿವರೂ ಆದ ಪ್ರೊ. ಸ.ಚಿ. ರಮೇಶ ಹಾಗೂ ಸಿಬ್ಬಂದಿ ವರ್ಗಕ್ಕೆ ಅಭಿನಂದನೆಗಳು

ಪ್ರೊ. ಅಂಬಳಿಕೆ ಹಿರಿಯಣ್ಣ
ಕುಲಪತಿ

ನಿರ್ದೇಶಕರ ಮಾತು

ಕರ್ನಾಟಕ ಜಾನಪದ ವಿಶ್ವವಿದ್ಯಾಲಯವು ಸಮಾಜದ ಸಮಸ್ತ ಸಮುದಾಯಗಳ ಜ್ಞಾನ ಸಂಗ್ರಹಣೆ, ಅಧ್ಯಯನ, ಅಧ್ಯಾಪನ, ಸಂಶೋಧನೆಯಂತ ಶೈಕ್ಷಣಿಕ ಕಾರ್ಯಚಟುವಟಿಕೆಗಳನ್ನು ರೂಪಿಸಿಕೊಂಡು ಕಾರ್ಯ ಪ್ರವೃತ್ತವಾಗಿದೆ. ವಿಶ್ವವಿದ್ಯಾಲಯವು ಇನ್ನೊಂದು ಹೆಜ್ಜೆ ಮುಂದೆ ಹೋಗಿ ತನ್ನ ಕಾರ್ಯಕ್ಷೇತ್ರಗಳನ್ನು ವಿಸ್ತರಿಸಿಕೊಳ್ಳುವ ಭಾಗವಾಗಿ 'ವಿಸ್ತರಣೆ ಹಾಗೂ ಸಲಹಾ ಕೇಂದ್ರ' ವನ್ನು ಆರಂಭಿಸಿದೆ. ವಿಶ್ವವಿದ್ಯಾಲಯಗಳು ನಿಜವಾದ ಅರ್ಥದಲ್ಲಿ ಜ್ಞಾನದ ಮನರುತ್ಪಾದನೆಯಲ್ಲಿ ತೊಡಗಿಕೊಳ್ಳಬೇಕು. ಸ್ಥಾಪಿತ ಸಿದ್ಧ ಜ್ಞಾನದ ಸಂಗ್ರಹದ ಜೊತೆಗೆ ನಿತ್ಯನೂತನವಾದ ಜನಪದ ಸಂಸ್ಕೃತಿಯನ್ನು ಪುನರ್‌ನಿರ್ವಚಿಸುವ, ಹೊಸ ರೀತಿಯಲ್ಲಿ ಸ್ಥಾಪಿತಗೊಳಿಸುವ ಕೈಂಕರ್ಯಕ್ಕೆ ಕೈ ಹಾಕಬೇಕು. ಋತುಮಾನಗಳು ಬದಲಾದಂತೆ ಮನುಷ್ಯನ ಬದುಕು ಬದಲಾಗುತ್ತಲೇ ಸಂವೇದನಾಶೀಲಗೊಳ್ಳುತ್ತ ಹೋಗುತ್ತದೆ. ನಮ್ಮ ಜನಪದ ಕಲೆ, ಸಾಹಿತ್ಯ, ಸಂಸ್ಕೃತಿಗಳು ತನ್ನತನದ ಛಾಯೆಯನ್ನು ಕಳೆದುಕೊಳ್ಳುತ್ತ ನಡೆದ ಇವೊತ್ತಿನ ಸಂದಿಗ್ಧತೆಯಲ್ಲಿ ನಾವು ಮಾಡುವ ವಿನೂತನ ಜ್ಞಾನಶೋಧಗಳು, ಪ್ರಯೋಗಗಳು ಕಳೆಗುಂದುತ್ತಿರುವ ಜನಪದ ಸಂಸ್ಕೃತಿಯನ್ನು ಕಳೆಗಟ್ಟುವಂತೆ ಮಾಡದೇ ಹೋದರೆ ನಮ್ಮ ಪ್ರಯತ್ನಗಳು ನಿರರ್ಥಕ. ಆ ಎಚ್ಚರಿಕೆಯನ್ನು ಇಟ್ಟುಕೊಂಡೇ ಜಾನಪದ ವಿಶ್ವವಿದ್ಯಾಲಯವು ವಿಸ್ತರಣೆ ಹಾಗೂ ಸಲಹಾ ಕೇಂದ್ರದ ಮೂಲಕ ಅತ್ಯುಪಯುಕ್ತ ಕಾರ್ಯಯೋಜನೆಗಳನ್ನು ರೂಪಿಸಿದೆ.

ಅಂತರ್‌ಶಿಸ್ತೀಯ ಜ್ಞಾನ ಶಾಖೆಗಳಲ್ಲಿ ಜಾನಪದವೂ ಒಂದು. ನೆಲಮೂಲ ಜೀವನ, ಕಲೆ, ಸಾಹಿತ್ಯ, ಸಂಸ್ಕೃತಿಗೆ ಸಂಬಂಧಿಸಿದ ಹೊಸ ಹೊಸ ಜ್ಞಾನವನ್ನು ಶೋಧಿಸಿ, ಜಗತ್ತಿನ ಮೂಲೆ ಮೂಲೆಗೆ ತಲುಪಿಸುವ ಗುರುತರ ಜವಾಬ್ದಾರಿ ವಿಶ್ವವಿದ್ಯಾಲಯದ ಮೇಲಿದೆ. ಅದನ್ನು ಸಾಧ್ಯವಾಗಿಸುವ ಉದ್ದೇಶ ಇಟ್ಟುಕೊಂಡೇ ಆರಂಭವಾದ ವಿಶ್ವವಿದ್ಯಾಲಯದ ವಿಸ್ತರಣೆ ಹಾಗೂ ಸಲಹಾ ಕೇಂದ್ರವು ಜಾನಪದ ಕ್ಷೇತ್ರದ ಬಾಹುಳ್ಯತೆ, ವಿಶ್ವವ್ಯಾಪಕತೆ, ಅದರ ಮೂಲ–ಚೂಲಗಳನ್ನು ಕಂಡರಿಸುವ ಪ್ರಯತ್ನ ಮಾಡುವ ಮಹದಾಸೆ ಹೊಂದಿದೆ. ಜೊತೆಗೆ ಹೊಸ ಅಧ್ಯಯನಗಳು, ನೂತನ ಮಾದರಿಯ ಸಂಶೋಧನೆಗಳು, ನಾಡಿನ ಶ್ರೇಷ್ಠ ವಿದ್ವಾಂಸರ ಕೃತಿಗಳನ್ನು ಪ್ರಕಟಿಸುವ ಮೂಲಕ ಜ್ಞಾನ ಪ್ರಸಾರದ ಉದ್ದೇಶಕ್ಕೆ ಒತ್ತಾಸೆಯಾಗಿ ನಿಲ್ಲಲಿದೆ. ಕೇಂದ್ರವು ಜ್ಞಾನ ಪ್ರಸರಣಕ್ಕೆ ಟೊಂಕಕಟ್ಟಿ ನಿಂತಿದ್ದು, ಮೌಲಿಕವಾದ ಮಸ್ತಕಗಳ ಪ್ರಕಟಣೆಗೆ ಮುಂದಾಗಿದೆ. ನಾವು ಪ್ರಕಟಮಾಡುವ ವೈವಿಧ್ಯಪೂರ್ಣವಾದ ಮೌಲಿಕ ಕೃತಿಗಳು ನಾಡಿನ ಓದುಗರಿಗೆ ತಲುಪಿ, ಅವು ಸದುಪಯೋಗವಾದರೆ ಮಾತ್ರ ನಮ್ಮ ಶ್ರಮ ಸಾರ್ಥಕ ಎಂದು ಭಾವಿಸುತ್ತೇನೆ.

ಕನ್ನಡ ನಾಡು ವೈವಿಧ್ಯಮಯವಾದ ಜನಸಂಸ್ಕೃತಿಯನ್ನು ಹೊಂದಿದೆ. ಅಂತೆಯೇ ಕರ್ನಾಟಕದಲ್ಲಿ ಬಹುಭಾಷಾ ಸಂಸ್ಕೃತಿಯನ್ನು ಕಾಣಬಹುದಾಗಿದೆ. ಭಾಷೆಯು ಮನುಷ್ಯನ ಅಭಿವ್ಯಕ್ತಿ ಸಾಧ್ಯತೆಗಳ ಮುಖ್ಯ ಮಾಧ್ಯಮ ಎಂಬುದು ನಿಸ್ಸಂದೇಹ. ಅಭಿವ್ಯಕ್ತಿಯ ಎಲ್ಲ ಆಯಾಮಗಳನ್ನು ಒಳಗೊಳ್ಳುವ ಮತ್ತು ಅದನ್ನು ವಿಸ್ತರಿಸುವ ಬಹುದೊಡ್ಡ ಶಕ್ತಿ ಭಾಷೆಗೆ ಇದೆ. ಪ್ರಪಂಚದ ಎಲ್ಲ ಭಾಷೆಗಳೂ ಶ್ರೇಷ್ಠವೇ. ಅದರಲ್ಲೂ ಭಾಷೆ ಉಳಿಯುವುದು ಆಯಾಯ ಜನಸಮುದಾಯಗಳ ಉಳಿವಿಕೆ ಮತ್ತು ಅದರ ಬಳಕೆಯ ಪ್ರಮಾಣವನ್ನು ಹೆಚ್ಚಿಸಿಕೊಂಡಾಗಲೇ ಎಂಬುದು ವಾಸ್ತವ. ಸ್ಥಳೀಯ ಇಲ್ಲವೇ ಪ್ರಾದೇಶಿಕ ಭಾಷೆಗಳು ಜಾಗತಿಕ ಪೈಪೋಟಿಯನ್ನು ಎದುರಿಸಲಾಗದೆ ಇಂದು ತೀವ್ರ ಹಿನ್ನಡೆ ಅನುಭವಿಸುತ್ತಿವೆ. ಇದು ತೀವ್ರ ಕಳವಳಕಾರಿ ಸಂಗತಿ. ಈ ನಡುವೆ ದೇಸೀ ಭಾಷೆ, ಸಂಸ್ಕೃತಿಗಳನ್ನು ಸಂರಕ್ಷಿಸುವ ಪ್ರಯತ್ನಗಳು ನಡೆಯುತ್ತಿರುವುದೂ ಅತ್ಯಂತ ಆಶಾದಾಯಕ ಬೆಳವಣಿಗೆ. ಇದರ ಭಾಗವಾಗಿ ಪ್ರಾದೇಶಿಕ ಭಾಷಾ ಸಂಸ್ಕೃತಿ, ಸಮೃದ್ಧತೆಯನ್ನು ಮರುಶೋಧಿಸಿ, ಸಂರಕ್ಷಿಸಿ, ಸಂವರ್ಧಿಸುವ ಕೆಲಸಗಳು ಚಾಲನೆ ಪಡೆದುಕೊಂಡಿವೆ. ಈ ಮೂಲಕ ನಾಡಿನ ಜಾನಪದ ಬದುಕು, ಸಂಸ್ಕೃತಿ, ಹಾಗೂ ಜಾನಪದೀಯ ಅಂಶಗಳನ್ನು ಶಬ್ದರೂಪದಲ್ಲಿ ದಾಖಲಿಸುವ ಮಹತ್ವದ ಚಾರಿತ್ರಿಕ ಕೆಲಸಗಳು ಆಗಬೇಕಾದವೇ

ಆಗಿವೆ. ಇಂತಹ ಮಹತ್ವಾಕಾಂಕ್ಷೆಯ ಕಾರ್ಯಗಳಿಂದಾಗಿಯಾದರೂ, ದೇಶೀ ಸಂಸ್ಕೃತಿಯ ಪುನರುಜ್ಜೀವನ ಸಾಧ್ಯವಾಗುತ್ತಲಿದೆ. ಈ ಹಿನ್ನೆಲೆಯಲ್ಲಿ ವಿಶ್ವವಿದ್ಯಾಲಯದ 'ಕನ್ನಡ ಜಾನಪದ ನಿಘಂಟು' ಅತ್ಯಂತ ಗಮನಾರ್ಹವಾದುದಾಗಿದೆ. ಜನಪದರು ಬಳಸುವ ಒಂದು ಪದಕ್ಕೆ ಅನೇಕ ಅರ್ಥ ಸಾಧ್ಯತೆಗಳು ಇರುತ್ತವೆ. ನಾಲಿಗೆಯ ಉಚ್ಚಾರ, ಅಕ್ಷರ ಪಲ್ಲಟಗಳು, ಧ್ವನಿವ್ಯತ್ಯಾಸಗಳು, ಅರ್ಥವ್ಯತ್ಯಾಸಗಳು ಜನಪದರಲ್ಲಿ ಹಲವು ಬಗೆಯಲ್ಲಿರುವುದರಿಂದ ಅವುಗಳ ಸ್ಪಷ್ಟ ನಮೂದು ಅಗತ್ಯವಾಗಿರುತ್ತದೆ. ಇದು ತೀರ ಕಷ್ಟದ ಕೆಲಸ, ಜೊತೆಗೆ ಕ್ಷೇತ್ರಕಾರ್ಯಾಧಾರಿತವಾಗಿರುವುದಲ್ಲದೇ, ಅತ್ಯಂತ ಶ್ರದ್ಧೆ, ಶ್ರಮ, ತಾಳ್ಮೆಯನ್ನು ಬಯಸುವ ಕೆಲಸವಾಗಿರುತ್ತದೆ. ನಾಡಿನ ಬಹುಭಾಗಗಳಲ್ಲಿನ ಜನಪದರ ಬದುಕಿನ ವೈವಿಧ್ಯವನ್ನು ಜೊತೆಗೆ ಭಾಷಾ ವೈವಿಧ್ಯವನ್ನು ಗುರುತಿಸುವ ಗಮನಾರ್ಹ ಕಾರ್ಯ ಇಲ್ಲಿ ಸಾಧ್ಯವಾಗಿದೆ. ಸಸ್ಯಪ್ರಪಂಚ, ಹುಲ್ಲು, ಬಳ್ಳಿ, ಆಹಾರದ ಬೆಳೆಗಳು, ವೃಕ್ಷಗಳು, ವಿವಿಧ ವೃತ್ತಿಗಳು, ಬಹುಬಗೆಯ ಆಚರಣೆಗಳು, ಪ್ರಾಣಿಪ್ರಪಂಚ ಸೇರಿದಂತೆ ನಾಡಿನ ಸಾಮಾಜಿಕ, ಸಾಂಸ್ಕೃತಿಕ, ಭೌಗೋಳಿಕ, ಐತಿಹಾಸಿಕ, ವಾಸ್ತುಶಿಲ್ಪ, ತಂತ್ರಜ್ಞಾನ, ಲೋಹವಿಜ್ಞಾನ, ಆಹಾರ ಪದ್ಧತಿ ಹೀಗೆ ಬಹುಶಿಸ್ತೀಯ ನೆಲೆಯ ಅಧ್ಯಯನಕ್ಕೆ ಪೂರಕವಾಗಿ 'ಜಾನಪದ ನಿಘಂಟು' ರೂಪುಗೊಂಡಿದೆ. ಇಂತಹ ಅಮೂಲ್ಯ ನಿಘಂಟನ್ನು ಸಿದ್ಧಪಡಿಸಿಕೊಟ್ಟ ಕಾರ್ಯನಿರ್ವಾಹಕ ಸಂಪಾದಕರಾದ ಡಾ. ಕೆ. ಆರ್. ಸಂಧ್ಯಾರೆಡ್ಡಿ, ಸಂಯೋಜಕ ಸಂಪಾದಕರಾದ ಡಾ. ಮೀರಾಸಾಬಿಹಳ್ಳಿ ಶಿವಣ್ಣ, ಸಹಾಯಕ ಸಂಪಾದಕರಾದ ಶ್ರೀಮತಿ ಸರ್ವಮಂಗಳ ಅವರುಗಳಿಗೆ, ಸಂಪಾದಕ ಮಂಡಳಿಯ ಸದಸ್ಯರಾದ ಡಾ. ಕೆ. ಪ್ರೇಮಕುಮಾರ, ತಾಂತ್ರಿಕ ಸಲಹೆಗಾರರಾದ ಶ್ರೀ ಎಸ್.ಎ. ಕೃಷ್ಣಯ್ಯ, ಡಾ. ಬಿ.ಪಿ. ಹೇಮಾನಂದ ಹಾಗೂ ಯೋಜನೆಯ ಸಂಪಾದಕ ಮಂಡಳಿಯ ಸರ್ವಸದಸ್ಯರಿಗೂ, ಜಿಲ್ಲಾ ಕ್ಷೇತ್ರಸಂಪಾದಕರಿಗೂ, ಕ್ಷೇತ್ರತಜ್ಞರಿಗೂ ವಿಶ್ವವಿದ್ಯಾಲಯದ ಕೃತಜ್ಞತೆಗಳು ಸಲ್ಲುತ್ತವೆ.

ಈ ಯೋಜನೆಯು ಯಶಸ್ವಿಗೊಳ್ಳಲು ಬಹುಮುಖ್ಯವಾಗಿ ಬೇಕಾದ ಆರ್ಥಿಕ ನೆರವನ್ನು ಸಕಾಲಕ್ಕೆ ಒದಗಿಸಿದ ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಮೊದಲಿಗೆ ಕೃತಜ್ಞತೆಗಳು ಸಲ್ಲುತ್ತವೆ. ಹಾಗೆಯೇ ಯೋಜನೆ ಸಂಪೂರ್ಣಗೊಂಡು ನಾಡಿಗೆ ಲೋಕಾರ್ಪಣೆಗೊಳ್ಳಲು ಸಾಧ್ಯವಾಗಲು ಸರ್ವ ರೀತಿಯಲ್ಲೂ ಸಹಕಾರ ನೀಡಿದ ವಿಶ್ವವಿದ್ಯಾಲಯದ ಮಾನ್ಯ ಕುಲಪತಿಯವರಾದ ಪ್ರೊ. ಅಂಬಳಿಕೆ ಹಿರಿಯಣ್ಣ ಅವರಿಗೆ, ಕುಲಸಚಿವರಾದ ಪ್ರೊ. ಡಿ.ಬಿ. ನಾಯಕ, ನಿರ್ದೇಶಕ ಹಾಗೂ ಪ್ರಾಧ್ಯಾಪಕ ಡಾ. ಕೆ. ಪ್ರೇಮಕುಮಾರ, ಅನ್ವಯಿಕ ಜಾನಪದ ನಿಕಾಯದ ಡೀನ್ ಪ್ರೊ. ಎಂ. ಚಂದ್ರ ಪೂಜಾರಿ, ತಾಂತ್ರಿಕ ಪುಟಗಳ ಸಿದ್ಧತೆ ಹಾಗೂ ಮುದ್ರಣಪೂರ್ವ ಕೆಲಸದಲ್ಲಿ ಸಹಕರಿಸಿದ ಶ್ರೀ ಸಂಗಮೇಶ ಎಸ್. ಗಣಿ, ಶ್ರೀ ವಿಶ್ವ ಗುಜ್ಜರ್, ಶ್ರೀ ಸಂದೀಪ. ಬಿ.ಆರ್, ಅಂದವಾದ ಮುಖಪುಟ ವಿನ್ಯಾಸ ಮಾಡಿಕೊಟ್ಟ ಶ್ರೀಮತಿ ಎನ್. ಶುಭ, ಕಚೇರಿ ಸಹಾಯಕ ಶ್ರೀ ಕೆ.ಎಲ್. ಲಕ್ಷ್ಮಣ ಹಾಗೂ ಗ್ರಂಥವು ಪ್ರಕಟಗೊಳ್ಳುವಲ್ಲಿ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಶ್ರಮಿಸಿದ ಎಲ್ಲರಿಗೂ ಕೃತಜ್ಞತೆಗಳು.

ಪ್ರೊ. ಸ.ಚಿ. ರಮೇಶ
ನಿರ್ದೇಶಕ
ವಿಸ್ತರಣೆ ಹಾಗೂ ಸಲಹಾ ಕೇಂದ್ರ

ಪರಿವಿಡಿ

	ಪುಟ ಸಂಖ್ಯೆ
ಸಂಪಾದಕ ಮಂಡಳಿ	iii
ಕ್ಷೇತ್ರ ಸಂಪಾದಕರು ಹಾಗೂ ಕ್ಷೇತ್ರತಜ್ಞರ ವಿವರ	iv
ದೇಶ ಸುತ್ತು ಕೋಶ ಓದು	ix
ನಿರ್ದೇಶಕರ ಮಾತು	xv
ಪ್ರಸ್ತಾವನೆ	xix
ಕೃತಜ್ಞತೆಗಳು	xxxviii
ಶಬ್ದಾರ್ಥ	೧
ಅನುಬಂಧಗಳು	೨೫೯
ಸಂಕ್ಷೇಪಾಕ್ಷರಗಳು	೨೫೯
ಚಿತ್ರಗಳ ಪಟ್ಟಿ	೨೬೦
ವರ್ಣಚಿತ್ರಗಳು	೨೬೩
ಆಕರ ಗ್ರಂಥಗಳು	೨೭೧
ನಮ್ಮ ಪ್ರಕಟಣೆಗಳು	೨೮೫

ಪ್ರಸ್ತಾವನೆ

ಕನ್ನಡದಲ್ಲಿ ಅನೇಕ ಬಗೆಯ ನಿಘಂಟುಗಳು ಬಂದಿವೆ. ಹಳಗನ್ನಡ ಸಾಹಿತ್ಯ ಸಂದರ್ಭದಲ್ಲಿ ನಿಘಂಟು ರಚನೆಯೇ ಪ್ರಿಯವಾದ ಹವ್ಯಾಸವಾಗಿದ್ದ ಅನೇಕ ಪಂಡಿತರೂ ಆಸಕ್ತರೂ ಇದ್ದರು. ಹೀಗಾಗಿ ಸಾಮಾನ್ಯ ನಿಘಂಟುಗಳಿಗಿಂತ ಹೆಚ್ಚಾಗಿ ವಿಷಯನಿಷ್ಠ ನಿಘಂಟುಗಳ ಒಂದು ದೊಡ್ಡ ಪರಂಪರೆಯೇ ಇರುವುದನ್ನು ಕಾಣುತ್ತೇವೆ. ಶಿಷ್ಟ ನಿಘಂಟುಗಳಲ್ಲಿಯೇ ಇಷ್ಟು ಬೆರಗುಗೊಳಿಸುವ ವೈವಿಧ್ಯತೆ ಇರುವಾಗ ಪ್ರಾದೇಶಿಕ, ಸಾಂಸ್ಕೃತಿಕ, ಭೌಗೋಳಿಕ, ಸಾಮಾಜಿಕ ಹಾಗೂ ಭಾಷಿಕ ಭೇದಗಳ ಕಾರಣದಿಂದ ಅಪಾರವಾದ ವೈವಿಧ್ಯತೆ ಪಡೆದಿರುವ ಜಾನಪದ ನಿಘಂಟುಗಳ ಸ್ವರೂಪ ಹಾಗೂ ವ್ಯಾಪ್ತಿ ಎಷ್ಟು ಅಗಾಧವಾಗಿರಬಹುದೆಂಬುದನ್ನು ಊಹಿಸಲೂ ಸಾಧ್ಯವಿಲ್ಲ. ಉದಾಹರಣೆಗೆ: ಕೇವಲ ಸಸ್ಯ ಪ್ರಪಂಚಕ್ಕೆ ಸಂಬಂಧಿಸಿದಂತೆಯೇ ಹತ್ತಾರು ಬೃಹತ್ ನಿಘಂಟುಗಳನ್ನು ರಚಿಸುವಷ್ಟು ಸಾಮಗ್ರಿ ದೊರೆಯುತ್ತದೆ. ಹುಲ್ಲುಗಳು, ಬಳ್ಳಿಗಳು, ವೃಕ್ಷಗಳು, ಆಹಾರದ ಬೆಳೆಗಳು, ಪುಷ್ಪಗಳು, ರೋಗ ಚಿಕಿತ್ಸೆಗಳು ಹೀಗೆ ಇಲ್ಲಿಯ ಒಂದೊಂದು ವಿಷಯದ ಬಗ್ಗೆ ಇಡೀ ಕರ್ನಾಟಕದ ವ್ಯಾಪ್ತಿಯನ್ನಿಟ್ಟುಕೊಂಡರೆ ಒಂದೊಂದೂ ಒಬ್ಬೊಬ್ಬರು ಜೀವನವಿಡೀ ಮಾಡಿದರೂ ಮುಗಿಯದಷ್ಟು ಕೆಲಸವಿರುತ್ತದೆ. ಮೇಲೆ ಹೇಳಿದ ಎಲ್ಲ ವಿಷಯಗಳನ್ನೂ ಇಟ್ಟುಕೊಂಡು, ಸ್ಥೂಲವಾಗಿ ಉತ್ತರ ಕರ್ನಾಟಕ, ದಕ್ಷಿಣ ಕರ್ನಾಟಕ, ಉತ್ತರ ಕನ್ನಡ ಜಿಲ್ಲೆ, ದಕ್ಷಿಣ ಕನ್ನಡ ಜಿಲ್ಲೆ ಹೀಗೆ ವಿಂಗಡಣೆ ಮಾಡಿಕೊಂಡು ಪ್ರಾದೇಶಿಕ ನಿಘಂಟುಗಳನ್ನು ರಚಿಸುವುದೂ ಸಹ ಸುಲಭವಾದ ಕೆಲಸವೇನಲ್ಲ. ಜಾನಪದದ ಒಂದೊಂದು ವಿಷಯ ಕುರಿತೇ ಇಷ್ಟೆಲ್ಲ ಕೆಲಸ ಮಾಡಬೇಕಾದ ಸಾಧ್ಯತೆ ಇರುವಾಗ ಇಡೀ ಕರ್ನಾಟಕ ಜಾನಪದದ ಎಲ್ಲ ಪದಗಳನ್ನು ಸಂಗ್ರಹಿಸುವುದು ಊಹೆಗೂ ನಿಲುಕದ ಮಾತು. ಜಾನಪದ ನಿಘಂಟಿಗೆ ಆಧಾರವಾಗಿರವ ಆಡುಭಾಷೆಯ ಪದಗಳು ಹಾಗೂ ಪ್ರಾದೇಶಿಕ ಭಿನ್ನತೆಗಳ ಕಾರಣದಿಂದಾಗಿ ಮತ್ತು ಈ ಪರಿಕಲ್ಪನೆಯು ಒಳಗೊಳ್ಳುವ ವಿಷಯಗಳ ಅಗಾಧ ವ್ಯಾಪಕತೆಯಿಂದಾಗಿ ಈ ಕೆಲಸಕ್ಕೆ ಮುಕ್ತಾಯವೆಂಬುದೇ ಇಲ್ಲ. ಮಾಹಿತಿ ಸಿಕ್ಕಂತೆಲ್ಲ ಇದಕ್ಕೆ ಸೇರ್ಪಡೆಗಳು ಆಗುತ್ತಿರಬೇಕಾಗುತ್ತದೆ. ಈ ಎಲ್ಲ ಮಿತಿಗಳನ್ನಿಟ್ಟುಕೊಂಡೇ ಜಾನಪದ ನಿಘಂಟನ್ನು ಗಮನಿಸಬೇಕಾಗುತ್ತದೆ. ಮೇಲೆ ಹೇಳಿದ ಅಂಶಗಳಲ್ಲದೆ ಜಾನಪದ ನಿಘಂಟಿನ ಸಂದರ್ಭದಲ್ಲಿ ಮಾತ್ರವೇ ಸ್ಪಷ್ಟಪಡಿಸಿಕೊಳ್ಳಬೇಕಾದ ಇನ್ನೂ ಅನೇಕ ಅಂಶಗಳಿವೆ:

ನಿಘಂಟು ಪದದ ಬಳಕೆ

ನಿಘಂಟು ಎಂಬ ಪದವು ಅದರ ಮೂಲ ಅರ್ಥದಲ್ಲಿ ಜಾನಪದ ನಿಘಂಟಿಗೆ ಅನ್ವಯಿಸುವುದಿಲ್ಲ. ಮೂಲತಃ ವೇದಗಳಲ್ಲಿರುವ ಶಬ್ದಗಳಿಗೆ ಅರ್ಥ ಹೇಳುವುದು ನಿಘಂಟು ಎಂದೂ ಇತರೆ ಶಬ್ದಗಳಿಗೆ ಅರ್ಥ ಹೇಳುವುದನ್ನು ಕೋಶ ಎಂದೂ ವಿವರಿಸಲಾಗುತ್ತದೆ. ಆದರೂ ಸಾಮಾನ್ಯವಾಗಿ ಈ ಎರಡೂ ಪದಗಳನ್ನು ಅರ್ಥ ಬೇದವಿಲ್ಲದೆ ಬಳಸಲಾಗುತ್ತದೆ. ಇಲ್ಲಿ ಒಂದು ಪದಕ್ಕೆ ಸಂವಾದಿಯಾದ ಇನ್ನೊಂದು ಅಥವಾ ಎರಡು ಮೂರು ಪದಗಳನ್ನು ಕೊಟ್ಟು ಅಕಾರಾದಿಯಾಗಿ ಪದಗಳ ಪಟ್ಟಿಯನ್ನು ಸಿದ್ಧಪಡಿಸಲಾಗಿರುತ್ತದೆ. ಆದರೆ ಜಾನಪದ ನಿಘಂಟಿನ ಸ್ವರೂಪ ನಮ್ಮ ಪ್ರಚಲಿತ ಅರ್ಥದ ನಿಘಂಟುಗಳಿಗಿಂತ ಬಹಳ ಭಿನ್ನವಾಗಿರುತ್ತದೆ. ಇದು ಕೇವಲ ಪದಗಳ ಹಾಗೂ ಅರ್ಥಗಳ ಒಂದು ಪಟ್ಟಿಯಾಗಿರದೆ ವಿವರಣಾತ್ಮಕವಾಗಿಯೇ ಇರಬೇಕಾಗುತ್ತದೆ. ಯಾಕೆಂದರೆ ಜಾನಪದ ನಿಘಂಟಿನ ಮುಖ್ಯವಾದ ಹಾಗೂ ಮೂಲಭೂತವಾದ ಉದ್ದೇಶವೇ ಅಳಿದು ಹೋಗುತ್ತಿರುವ ಜಾನಪದ ಬದುಕು ಸಂಸ್ಕೃತಿ ಹಾಗೂ ಜಾನಪದೀಯ ಜ್ಞಾನಪರಂಪರೆಯನ್ನು ಶಬ್ದಗಳ ಮೂಲಕ ದಾಖಲಿಸುವುದು. ಇಲ್ಲಿ ಜಾನಪದೀಯವಾದ ಪದಗಳ ಜೊತೆಗೆ ಅವುಗಳ ಅರ್ಥಪರಂಪರೆ ಎಲ್ಲವನ್ನೂ ಸಂಗ್ರಹಿಸಿದಾಗ ಮಾತ್ರ ಪದದ ಅರ್ಥವನ್ನು ಸರಿಯಾಗಿ ಗ್ರಹಿಸಿದಂತೆ. ಇಲ್ಲಿ ನಮೂದಾಗಿ ಕೊಡುವ ಪದಕ್ಕೆ ಬೇರೆ ಬೇರೆ ಸಂದರ್ಭಗಳಲ್ಲಿ, ಬೇರೆ ಬೇರೆ ಪ್ರದೇಶಗಳಲ್ಲಿ ವಿವಿಧ ಅರ್ಥಗಳಿರುತ್ತವೆ. ಈ ಎಲ್ಲ ಅರ್ಥಗಳನ್ನು ಕ್ಷೇತ್ರ ಕಾರ್ಯದ ಮೂಲಕ ಸಂಗ್ರಹಿಸಿ, ಅಲ್ಲಿನ ಮುಖ್ಯಾಂಶಗಳನ್ನೆಲ್ಲ ಕ್ರೋಢೀಕರಿಸಿ ಯಾವುದೇ ವಿವರ ಬಿಟ್ಟು ಹೋಗದಂತೆ ಅಡಕಗೊಳಿಸುವ ವಾಕ್ಯಗಳಲ್ಲಿ ಅರ್ಥವನ್ನು ನಿರೂಪಿಸಬೇಕಾಗುತ್ತದೆ. ಶಬ್ದಗಳಿಗೆ ಕೇವಲ ಅರ್ಥ ಹೇಳುವುದಲ್ಲ ಅವುಗಳನ್ನು ಪರಿಚಯಿಸಬೇಕಾಗುತ್ತದೆ. ಅಂದರೆ ಇಲ್ಲಿನ ಅರ್ಥ ವಿವರಣಾತ್ಮಕವಾಗಿರುತ್ತದೆ. ನಿಘಂಟು ಎಂಬ ಶೀರ್ಷಿಕೆ ಕೊಟ್ಟರೂ ಇದು ವಾಸ್ತವವಾಗಿ ಪದವಿವರಣಕೋಶ (Glossary) ವಾಗಿರುತ್ತದೆ ಎಂಬುದನ್ನು ಗಮನಿಸಬೇಕು.

ಈ ಅರ್ಥ ವಿವರಣೆಯ ಗಾತ್ರ ಎಷ್ಟಿರಬೇಕು ಎಂಬುದನ್ನು ನಿರ್ಣಯಿಸುವುದು ಅಷ್ಟು ಸುಲಭವಲ್ಲ. ಉದಾಹರಣೆಗೆ ಬಿಲ್ವವೃಕ್ಷ ಕುರಿತಂತೆ: ಶಿವಭಕ್ತರಿಗೆ ಇದು ಅತ್ಯಂತ ಪವಿತ್ರ ವೃಕ್ಷ. ಬಿಲ್ವ ಪತ್ರೆ ಶಿವನ ಪೂಜೆಗೆ ಶ್ರೇಷ್ಠ ಸಾಮಗ್ರಿ, ಇದರ ತ್ರಿದಳದಲ್ಲಿ ಬ್ರಹ್ಮ ವಿಷ್ಣು ರುದ್ರರು ನೆಲೆಸಿರುತ್ತಾರಂತೆ. ಈ ಮರವನ್ನು ಶಿವರಾತ್ರಿಯಂದು ಪೂಜಿಸಿ ಪತ್ರಿ ತಂದು ಶಿವಪೂಜೆ ಮಾಡುತ್ತಾರೆ. ಈ ಮರವನ್ನು ಮಸಣದಲ್ಲಿ ಮಠದಲ್ಲಿ ಮಾತ್ರ ಬೆಳಸುತ್ತಾರೆ, ಮನೆಗೆ ಈ ಮರ ದೂರ. ಇದರ ಎಲೆ, ಕಾಯಿ ಆಯುರ್ವೇದ ಔಷಧಿಯಲ್ಲಿ ಪರಮ ಪ್ರಯೋಜನಕಾರಿ. ಇದರ ಕಟ್ಟಿಗೆಯನ್ನು ಶೈವರು ಯಾವುದಕ್ಕೂ ಬಳಸುವುದಿಲ್ಲ. ಯಾವ ಭಾಗವನ್ನೂ ತುಳಿಯುವುದಿಲ್ಲ. ಇದರ ವಾಸನೆಗೆ ಹಾವುಗಳು ದೂರ ಇರುತ್ತವೆಂದು ಪ್ರತೀತಿ (ಸಸ್ಯ ಜಾನಪದ – ಡಾ ಮ. ಗು. ಬಿರಾದಾರ). ಇಷ್ಟೆಲ್ಲ ಅರ್ಥ ಪರಂಪರೆಗಳು ಇರುವ ಬಿಲ್ವ ಎಂಬ ನಮೂದನ್ನು ಜಾನಪದ ನಿಘಂಟಿನಲ್ಲಿ ಕೊಡುವಾಗ ಮೇಲ್ಕಂಡ ವಿವರಗಳನ್ನು ಮೂರು ನಾಲ್ಕು ಸಾಲುಗಳಲ್ಲಿ ಅಡಕಗೊಳಿಸಿ ಹೇಳಬಹುದೇ ಹೊರತು ಇಲ್ಲಿನ ಯಾವೊಂದು ವಿವರವನ್ನೂ ಅಮುಖ್ಯವೆಂದು ಕೈ ಬಿಡುವಂತಿಲ್ಲ. ಇಲ್ಲಿನ ಪ್ರತಿಯೊಂದು ವಿವರವೂ ಬೇರೆ ಬೇರೆ ರೀತಿಯ ಅಧ್ಯಯನಗಳಿಗೆ ಸಾಮಗ್ರಿಯಾಗಿರುವಂಥದ್ದು, ಶಿವನ ಬಗ್ಗೆ, ಶೈವಧರ್ಮದ ಬಗ್ಗೆ, ಔಷಧೀಯ ಗುಣಗಳ ಬಗ್ಗೆ, ನಂಬಿಕೆಗಳಲ್ಲಿ ಸೇರಿ ಹೋಗಿರುವ ಅದರ ಗುಣಗಳ ಬಗ್ಗೆ (ಹಾವುಗಳನ್ನು ದೂರವಿಡುತ್ತದೆ, ಮನೆಯ ಆವರಣದಲ್ಲಿ ಬೆಳಸಬಾರದು), ಆಚರಣೆಗಳ ಬಗ್ಗೆ ಈ ಮಾಹಿತಿ ಬೆಳಕು ಚೆಲ್ಲುತ್ತದೆ. ತುಳಸಿ, ಬೇವು, ಅಲ, ಅರಳಿ, ಎಕ್ಕ, ಉತ್ತರಾಣಿ ಇಂತಹ ಚಿರಪರಿಚಿತವಾದ ಸಸ್ಯಗಳಲ್ಲದೆ ಇಷ್ಟೇ ವ್ಯಾಪಕವಾದ ವಿವರಗಳನ್ನೊಳಗೊಂಡಿರುವ ನೂರಾರು ಸಾವಿರಾರು ಸಸ್ಯಗಳು ಜನಪದರಿಗಷ್ಟೇ ಪರಿಚಿತ.

ಜಾನಪದ ನಿಘಂಟಿಗೂ ಇತರ ನಿಘಂಟುಗಳಿಗೂ ಒಂದು ಮುಖ್ಯವಾದ ಹಾಗೂ ಮೂಲಭೂತವಾದ ವ್ಯತ್ಯಾಸವೇನೆಂದರೆ ಜಾನಪದ ನಿಘಂಟಿನ ನಮೂದುಗಳು ಆಡುಭಾಷೆಯಲ್ಲಿರುತ್ತವೆ. ಶಿಷ್ಟ ನಿಘಂಟುಗಳ ನಮೂದುಗಳು ಗ್ರಂಥಸ್ಥಪದಗಳಾಗಿರುತ್ತವೆ. ಗ್ರಂಥಸ್ಥವಾದ ಕಾರಣದಿಂದಲೇ ಆ ಪದಗಳಿಗೆ ಒಂದು ಸ್ಥಿರವಾದ ರೂಪ ಹಾಗೂ ಅಸ್ತಿತ್ವವಿರುತ್ತದೆ. ಆದರೆ ಜಾನಪದ ನಿಘಂಟಿನ ಸಂದರ್ಭದಲ್ಲಿ ಒಂದೇ ಪದ ನಾಲಿಗೆಯ ಉಚ್ಚಾರ, ಪ್ರಾದೇಶಿಕ ವ್ಯತ್ಯಾಸಗಳಿಂದಾಗಿ ಅನೇಕ ರೂಪಗಳನ್ನು ಪಡೆದಿರುತ್ತದೆ. ಶಿಷ್ಟಭಾಷೆಯಲ್ಲಿ ಧ್ವನಿವ್ಯತ್ಯಾಸಗಳು, ಅಕ್ಷರಪಲ್ಲಟಗಳು ಎಣಿಕೆಗೆ ಸಿಗುವಷ್ಟು ವಿರಳವಾಗಿದ್ದರೆ, ಜಾನಪದದಲ್ಲಿ ಇದು ಅತಿ ಸಹಜ ಪ್ರಕ್ರಿಯೆಯಾಗಿದೆ. ಹೀಗಾಗಿ ಶಿಷ್ಟ ನಿಘಂಟಿನಲ್ಲಿ ಒಂದು ಪದಕ್ಕೆ ಒಂದು ನಮೂದು ಸಾಕಾದರೆ ಜಾನಪದ ನಿಘಂಟಿನಲ್ಲಿ ಹತ್ತಾರು ನಮೂದುಗಳು ಅಗತ್ಯವಾಗಬಹುದು.

ಅಂಟುವಾಳ ಕಾಯಿ ಎಷ್ಟೆಲ್ಲ ರೂಪಗಳಲ್ಲಿ ಕಾಣಿಸಿಕೊಳ್ಳುತ್ತದೆ:

ಅಂಟುವಾಳ, ಅಂಟ್ವಾಳ, ಅಣ್ವಾಳ, ಅರಟಾಳ, ಅರಿಟಾಳ, ಅರಟ್ವಾಳ, ಅಟ್ಲಕಾಯಿ, ಅಟ್ಳ, ನೊರೆಕಾಯಿ ಇತ್ಯಾದಿ. ಇದೇ ರೀತಿ ಒಗ್ಗರಣೆ ಎಂಬ ಪದ ಇಗ್ಗರಣೆ, ವಗ್ಗರಣೆ, ಒಗ್ಗರಣೆ, ಅಗ್ಗಣೆ, ಅಗ್ಗರಣೆ, ಅಗ್ರಾಣಿ, ಅಗ್ರುಸು ಇತ್ಯಾದಿ ರೂಪಗಳಲ್ಲಿ ಕಾಣಬಹುದು.

ಅಟ್ಟಣಿಗೆ ಎಂಬ ಪದ ; ಅಟ್ಟಣ್ಗೆ, ಅಟ್ಟಣಿ, ಅಟ್ಟಿಗೆ, ಅಡ್ಡ, ಅಟ್ಲಗಿ, ಅಡ್ಡಣ್ಗೆ, ಇತ್ಯಾದಿ

ಅಳ್‌ಗುಳಿ ಮಣೆ, ಹಳ್ಳಗುಳಿ ಮನೆ ಆಟ; ಅಟಗುಳಿ ಮಣೆ, ಅಳಗುಳಿಮಣೆ, ಹಾಳ್ ಗುಳಿಮಣೆ, ಚನ್ನೆಮಣೆ, ಪಂತಾಮಣೆ, ಪತ್ತಾಮಣೆ ಇತ್ಯಾದಿ.

ಆರಣಿ ಎಂಬ ಪದವು ಐರಣಿ, ಐರಾಣೆ, ಐರಾಣಿ, ಐರ್ನಗಡಿಗೆ, ಆರಣಿ, ಅರಣಿ, ಅರ್ನೆ, ಅರನೆ. ಇತ್ಯಾದಿಯಾಗಿ; ಹೊನಗೊನೆ ಸೊಪ್ಪು ಎಂಬ ಪದವು ಅನ್ನಗನೆ, ವನ್ನನೆ, ವೊನ್ನೊಗನೆ, ಒನ್ನಗನೆ, ಹೊನ್ನೊಗನೆ ಇತ್ಯಾದಿಯಾಗಿ,

ಒರಳು ಕಲ್ಲು ಎಂಬ ಪದವು ಒಳ್ಕಲ್ಲು, ಒರಳ್ಕಲ್ಲು, ವಳ್ಕಲ್ಲು, ಒರ್ಳು, ಒರಳು ಇತ್ಯಾದಿಯಾಗಿ, ಹಚ್ಚೆ ಎಂಬ ಪದವು ಅಂಚಿಬಟ್ಟು, ಅಣಚಿಬಟ್ಟು, ಹಚ್ಚೆ, ಹಸ್ರು, ಅಸ್ರು, ಅಚ್ಚೆ ಇತ್ಯಾದಿಯಾಗಿ ಕಾಣಿಸಿಕೊಳ್ಳುತ್ತವೆ.

ಧ್ವನಿವ್ಯತ್ಯಾಸಗಳು ಹಾಗೂ ಅಕ್ಷರ ಪಲ್ಲಟಗಳಿಂದಾಗುವ ಬದಲಾವಣೆಗಳಿಗೆ ಕೆಲವೊಂದು ಉದಾಹರಣೆಗಳನ್ನು ನೋಡಬಹುದು:

ಹಸು – ಅಸ, ಹಸ್ರು – ಅಸ್ರು, ಹಸ್ಲೆ – ಅಸ್ಲೆ, ಹಸ್ತ – ಅತ್ತೆ.

ಹುರಮಂಜು – ಉರ್ಮಂಜು

ಈಜಾಡು – ಈಸಾಡು, ಈಚಲು – ಈಸಲು, ಈಚ್ಲುಳ – ಈಸ್ಲುಳ, ಅಡ್ಡಕ್ಯಾದಿಗೆ – ಅಡ್ಡಕ್ಯಾಜಿಗೆ, ದಿನ – ಜಿನ, ಗಿರಿ – ಜಿರಿ, ಚೂಜಿ – ಸೂಜಿ, ಚೇಳು – ಸೇಳು, ರುಚಿ – ರುಸಿ, ರಕ್ತ – ರಗ್ತ, ಲೊಟಗೆ – ನಟಿಕೆ, ಹೊಳ್ಳೆ (ಮೂಗಿನ ಹೊಳ್ಳೆ) – ಸೊಳ್ಳೆ.

ಅಡಿಮರ – ಅಡೆಮರ, ಅಡಿಹಾಕು – ಅಡೆಹಾಕು.

ಇಣಿಲು – ಇಳಿಲು, ಕೊಳ – ಕೊಣ, ತಿರುಳು – ತಿಳುಲು, ಕಣಿಲೆ – ಕಳಿಲೆ, ನೆರಳು – ನೆಳಲು, ಮರಳು – ಮಳಲು, ಮಾರ್ಲವಮಿ – ಮಾರ್ನವಮಿ. ಇತ್ಯಾದಿ

ಮೊದಲ ವ್ಯಂಜನಾಕ್ಷರಗಳು ಲೋಪವಾದಾಗ ಉಂಟಾಗುವ ರೂಪಗಳು :

ನೀರುಳ್ಳಿ – ಈರುಳ್ಳಿ, ನೀವಳ್ಸು – ಈವಾಳ್ಸು, ವೀಳ್ಯದೆಲೆ – ಈಳ್ಯದೆಲೆ, ವಿಷಮುಳ್ಳು – ಇಸಮುಳ್ಳು

ಉಕಾರಕ್ಕೆ ಬದಲಾಗಿ ಒಕಾರ ಬರುವುದು 'ವೀ' ಗೆ ಬದಲಾಗಿ 'ಈ' ಕಾರಬರುವುದೂ ತೀರಾ ಸಾಮಾನ್ಯ

ವೀರಗಾಸೆ – ಈರಗಾಸೆ, ವೀರಮಂಡಿ – ಈರಮಂಡಿ, ವೀರೋಬಿ – ಈರೋಬಿ, ವೀಳ್ಳೇವು – ಈಳ್ಳೇವು, ವಿಷಘಾತ್ಕ – ಇಸಘಾತ್ಕ. ಇತ್ಯಾದಿ

ಅಕಾರ ಮತ್ತು ಔಕಾರಗಳು ಅದಲು ಬದಲಾಗುವುದು ಸಾಮಾನ್ಯ

ಅವ್ಲಕ್ಕಿ – ಔಲಕ್ಕಿ, ಅವ್ಲು – ಔಲು, ಅವಡ್ಲು – ಔಡ್ಲು ಇತ್ಯಾದಿ

ಕನ್ನಡದಲ್ಲಿ ಮಹಾಪ್ರಾಣಾಕ್ಷರಗಳಿಲ್ಲ. ಇಲ್ಲಿ ಬಳಕೆಯಲ್ಲಿರುವ ಮಹಾಪ್ರಾಣಾಕ್ಷರದ ಶಬ್ದಗಳೆಲ್ಲವು ಸಂಸ್ಕೃತದವು ಅಥವಾ ಸಂಸ್ಕೃತದ ಪ್ರಭಾವದಿಂದ ರೂಪುಗೊಂಡಂಥವು ಎಂಬುದು ಸಾಮಾನ್ಯವಾಗಿ ಎಲ್ಲರೂ ಒಪ್ಪಿರುವ ಮಾತು. ಆದರೆ ಬೀದರ್ ಜಿಲ್ಲೆಯ ಪದಗಳು ಈ ಅಭಿಪ್ರಾಯವನ್ನೆ ಬದಲಾಯಿಸಿಬಿಡುತ್ತವೆ. ಕನ್ನಡದ ಅಲ್ಪ ಪ್ರಾಣಾಕ್ಷರದ ಪದಗಳೆಲ್ಲವೂ ಇಲ್ಲಿ ಮಹಾಪ್ರಾಣಾಕ್ಷರಗಳ ಪದಗಳಾಗಿವೆ. ಹೀಗಾಗಿ ನಿಘಂಟಿನಲ್ಲಿ ಅದೇ ಪದಗಳನ್ನು ಎರಡೆರಡು ಸಲ ಕೊಡಬೇಕಾಗುತ್ತದೆ. ಕರ್ಮ – ಖರ್ಮ, ದ್ಯಾಸ – ಧ್ಯಾಸ, ಗೊಂಗಡಿ – ಘೊಂಗಡಿ, ಗೊಂಡೆ – ಘೊಂಡೆ, ಚಳೇವು – ಛಳೇವು, ಕಜ್ಜಿ – ಖಜ್ಜಿ, ಸಜ್ಜೆ – ಛಜ್ಜಿ, ಗಾರಿಗೆ – ಘಾರ್ಗಿ, ತಂಬಿಗೆ – ಥಮಗಿ, ಜಂಗು – ಝುಂಗು, ಕಂತೆ – ಖಂತೆ, ಇತ್ಯಾದಿ. ಇದೇ ರೀತಿ ದಕ್ಷಿಣ ಕನ್ನಡದ ಪದಗಳು ವ್ಯಂಜನಾಂತವಾಗಿರುವುದರಿಂದ ನಿಘಂಟಿನಲ್ಲಿ ಅವುಗಳನ್ನೂ ಪ್ರತ್ಯೇಕವಾಗಿಯೇ ಕೊಡುವುದು ಅಗತ್ಯವಾಗುತ್ತದೆ. ಮಾಯಿನ ಕಾಯ್, ಕಣ್ ಮೋಳುದ್, ಕುಂಜ್ ಗಿರೂದ್, ಗೊಂಯ್ಟ್, ಒಂಟ್, ಕೋಗಿಲ್, ಒಪ್ಪತ್, ಅಣ್‌ಬಾಸಿತೀರ್ಲೂದ್ ಇತ್ಯಾದಿ. ಅಕಾರದಿಂದ ಆರಂಭವಾಗುವ ಪದಗಳು ಎ ಕಾರ ಪಡೆಯುವುದರಿಂದಲೂ ನಿಘಂಟಿನಲ್ಲಿ ಅವು ಮತ್ತೊಮ್ಮೆ ನಮೂದುಗೊಳ್ಳ ಬೇಕಾಗುತ್ತದೆ. ಉದಾ: ಹಲಸಿನ ಮೇಣ, ಹೆಲ್ಸಿನ್ ಮೇಣ, ತಿಳಿ – ತೆಳಿ.

ಜಾನಪದ ನಿಘಂಟಿನ ರಚನೆಯಲ್ಲಿ ಅರ್ಥಸ್ಪಷ್ಟತೆಗಾಗಿ ಕೆಲವೊಂದು ವಿಶಿಷ್ಟ ವಿಧಾನಗಳು ಅನಿವಾರ್ಯವಾಗುತ್ತವೆ. ಉದಾಹರಣೆಗೆ ಸಸ್ಯಗಳು: ಪ್ರಾದೇಶಿಕವಾಗಿ ಒಂದೇ ಸಸ್ಯ ಬೇರೆ ಬೇರೆ ಹೆಸರುಗಳನ್ನು ಪಡೆಯುವುದರಿಂದ ಆ ಸಸ್ಯದ ಎಲ್ಲಾ ಹೆಸರುಗಳು ಪ್ರತ್ಯೇಕ ನಮೂದುಗಳಾಗಿಯೂ ಬರಬೇಕಾಗುತ್ತದೆ. ಜೊತೆಗೆ ಈ ಪ್ರತಿಯೊಂದು ನಮೂದಿನಲ್ಲಿ ಇತರರೂಪಗಳು ಎಂಬ ಉಪಶೀರ್ಷಿಕೆಯ ಅಡಿಯಲ್ಲಿ ಪ್ರತಿಯೊಂದು ಭಿನ್ನರೂಪವನ್ನು ಕೊಡಬೇಕಾಗುತ್ತದೆ. ಇಷ್ಟಾಗಿಯೂ ಈ ಸಸ್ಯಗಳಿಗೆ ಇರಬಹುದಾದ ಬೇರೆ ಬೇರೆ ಪ್ರಾದೇಶಿಕ ಹೆಸರುಗಳನ್ನೆಲ್ಲಾ ಸಂಗ್ರಹಿಸಲಾಗಿದೆ ಎಂಬ ಖಾತರಿ ಇರುವುದಿಲ್ಲ. ಇಂಥ ಕಡೆ ಆ ಸಸ್ಯ ಅಥವಾ ಹೂವಿನ ಚಿತ್ರ (ಅದು ಬಣ್ಣದ ಛಾಯಾಚಿತ್ರವಾಗಿರುವುದೇ ಅತ್ಯಂತ ಸೂಕ್ತ) ಕೊಟ್ಟರೆ ಅದನ್ನು ನೋಡಿದ ಪ್ರತಿಯೊಬ್ಬರೂ ತಮ್ಮ ತಮ್ಮ ಪ್ರದೇಶದಲ್ಲಿ ಅದಕ್ಕೆ ಸಂವಾದಿಯಾಗಿರುವ ಪದ ಇರುವುದನ್ನು ನೆನಪಿಸಿಕೊಳ್ಳಬಹುದು. ಜೊತೆಗೆ ನಿಘಂಟಿನ ಪರಿಷ್ಕರಣೆಯ ಸಂದರ್ಭದಲ್ಲಿ ಇದಕ್ಕೆ ಇರಬಹುದಾದ ಇತರ ಶಬ್ದರೂಪಗಳನ್ನು ಆಸಕ್ತರು ಕಳುಹಿಸಿದರೆ ಅವೆಲ್ಲವುಗಳ ಸೇರ್ಪಡೆಗೂ ಅನುಕೂಲವಾಗುತ್ತದೆ. ಇದೇ ರೀತಿ ಆ ಸಸ್ಯದ ಸಸ್ಯಶಾಸ್ತ್ರೀಯ ಹೆಸರನ್ನು ಕೊಡುವುದಕ್ಕೆ ಮತ್ತು ಅದರ ಸಂಬಂಧವಾಗಿ ಜಾನಪದೀಯ ಮಾಹಿತಿಯನ್ನು ತಿಳಿದುಕೊಂಡು ಅಧ್ಯಯನ ಸಂಶೋಧನೆಗಳನ್ನು ನಡೆಸುವುದಕ್ಕೆ ಸಸ್ಯಶಾಸ್ತ್ರಜ್ಞರಿಗೆ ನೆರವಾಗುತ್ತದೆ.. ಉದಾಹರಣೆ: ಅಡ್ಡಿಕೆ ಸೊಪ್ಪು, ನಡುಮುರುಕಲಸೊಪ್ಪು, ಇಲಾತಿಸೊಪ್ಪು, ಜ್ವಾಮಾಲಿಸೊಪ್ಪು,

ನೊಟಗನಹಳ ಇತ್ಯಾದಿ ರೂಪದಲ್ಲಿ ಕಾಣಿಸುತ್ತದೆ. ಈ ಗಿಡದ ಒಂದು ಚಿತ್ರ ಈ ಸಸ್ಯ ಯಾವುದು ಎಂಬುದನ್ನು ತಿಳಿಸಿ ಬಿಡಬಹುದು.

ಹಕ್ಕಿಗಳ ವಿಷಯದಲ್ಲಿಯೂ ಈ ವಿಧಾನ ಅನುಸರಿಸುವುದು ಸೂಕ್ತ. ದಿನಬಳಕೆಯ ವಸ್ತುಗಳಾದ ಕೃಷಿ ಉಪಕರಣಗಳು, ಆಭರಣ ವಿಶೇಷಗಳು, ಪಾರಂಪರಿಕ ವೃತ್ತಿಗಳಿಗೆ ಸಂಬಂಧಿಸಿದ ಉಪಕರಣಗಳು ಹಾಗೂ ತಯಾರಿಕೆಯಾದ ಉತ್ಪನ್ನಗಳು ಇವೆಲ್ಲವುಗಳಿಗೂ ಸೂಕ್ತ ರೇಖಾಚಿತ್ರಗಳನ್ನು ಹಾಗೂ ಛಾಯಾಚಿತ್ರಗಳನ್ನು ಕೊಡುವುದು ಅತ್ಯಗತ್ಯ. ಹತ್ತಾರು ವಾಕ್ಯಗಳಲ್ಲಿ ಹೇಳಲು ಸಾಧ್ಯವಾಗದ ಮಾಹಿತಿಯನ್ನು ಈ ಚಿತ್ರಗಳು ಕೊಡುತ್ತವೆ. ನಿಘಂಟಿನಲ್ಲಿ ಆದಷ್ಟು ಸಂಕ್ಷೇಪವಾಗಿ ಅರ್ಥ ನಿರೂಪಣೆ ಮಾಡಲು ಇದು ನೆರವಾಗುತ್ತದೆ.

ವಿವಿಧ ವೇಷಭೂಷಣಗಳು, ರಂಗೋಲಿ, ಕಸೂತಿ ಮುಂತಾದ ಚಿತ್ತಾರಗಳು, ಕಲಾವಿದರ ವೇಷ ಭೂಷಣಗಳು, ಜಾತ್ರೆ ರಥೋತ್ಸವಗಳು, ಕಲೆಗಳು, ಕುಣಿತಗಳು, ನೃತ್ಯಪ್ರಕಾರಗಳು, ಸಂಗೀತ ವಾದ್ಯಗಳು, ಮೂರ್ತಿ ಶಿಲ್ಪಗಳು........ ಹೀಗೆ ಪ್ರತಿಯೊಂದಕ್ಕೂ ರೇಖಾಚಿತ್ರ ಹಾಗೂ ವರ್ಣ ಛಾಯಾಚಿತ್ರಗಳನ್ನು ಕೊಡುವ ವಿಧಾನವನ್ನು ಹೆಚ್ಚು ಹೆಚ್ಚಾಗಿ ಅಳವಡಿಸಿಕೊಳ್ಳುತ್ತಾ ಹೋಗುವುದು ಈ ಸಂದರ್ಭದಲ್ಲಿ ಅನಿವಾರ್ಯ.

ಅರ್ಥ ಸ್ಪಷ್ಟತೆಗಾಗಿ ಪ್ರಯೋಗಗಳನ್ನು ಕೊಡುವುದೂ ಸಹ ಜಾನಪದ ನಿಘಂಟಿನಲ್ಲಿ ಬಹುಮುಖ್ಯ. ಕೆಲವೊಂದು ಪದಗಳಿಗೆ ಎಷ್ಟೇ ದೀರ್ಘವಿವರಣೆ ನೀಡಿದರೂ ಅರ್ಥ ಸ್ಪಷ್ಟವಾಗುವುದಿಲ್ಲ. ಆದರೆ ಸೂಕ್ತ ಪ್ರಯೋಗ ನೀಡುವುದರ ಮೂಲಕ ಈ ಸಮಸ್ಯೆಯನ್ನು ನಿವಾರಿಸಬಹುದು. ಒಂದೇ ಪದಕ್ಕೆ ಹಲವಾರು ಅರ್ಥಗಳಿದ್ದಾಗ ಈ ಅರ್ಥ ಭೇದಗಳನ್ನು ಸ್ಪಷ್ಟಪಡಿಸುವುದಕ್ಕೆ ಪ್ರಯೋಗಗಳು ನೆರವಾಗುತ್ತವೆ. ಉದಾ: ಅಚ್ಚಕಡಿನಿ ಎಂಬ ಪದ – ನೀನು ಹೀನ, ನೀನು ಕೀಳು, ನೀನು ಕನಿಷ್ಠ ಎಂಬ ಅರ್ಥದಲ್ಲಿ ಬಳಕೆಯಾಗುತ್ತದೆ. ಆದರೆ ಇದರ ಪ್ರಯೋಗದಿಂದ ಮಾತ್ರ ಇದರ ಅರ್ಥ ಸ್ಪಷ್ಟವಾಗುತ್ತದೆ. ಗೊಂದಲಿಗರ ಕಥೆಯಲ್ಲಿ ತಂದೆಯೊಬ್ಬ ತನ್ನ ಮಗನು ತಪ್ಪು ಕೆಲಸ ಮಾಡಿದಾಗ ಬೈಯುತ್ತಾ ಹೀಗೆ ಹೇಳುತ್ತಾನೆ– "ನೀನು ನನ್ನ ಹೊಟ್ಟೆಯಲ್ಲಿ ಹುಟ್ಟಿಯೂ ಹುಟ್ಟಿಲ್ಲದ ಹಾಗೆ, ಒಂದು ಗಿಡದ ಹೊಟ್ಟೆಯಲ್ಲಿ ಹುಟ್ಟಿದ್ದೆ ಎಂದರೆ ಗಿಡ ಕಡಿದು ಚಂದ್ರಶಾಲೆ ಕಟ್ಟಿಸುತ್ತಿದ್ದೆ. ಎಷ್ಟೋ ಮಂದಿ ಬಂದು ಇಳಿಯುತ್ತಿದ್ದರು. ನನಗೆ ಆಶೀರ್ವಾದ ಮಾಡುತ್ತಿದ್ದರು. ಆ ಗಿಡಕ್ಕಿಂತ ಅಚ್ಚಕಡಿನಿ". ಆದೆ ನೀನು. ಒಂದುಕಲ್ಲಾಗಿ ಹುಟ್ಟಿದ್ದರೆ ಕಟ್ಟೆ ಕಟ್ಟುತ್ತಿದ್ದೆ, ಕಟ್ಟೆಮೇಲೆ ಮಂದಿ ಕುಳಿತುಕೊಳ್ಳುತ್ತಿದ್ದರು, ಅರಸಿಗೆ ಆಶೀರ್ವಾದ ಕೊಡುತ್ತಿದ್ದರು. ನೀನು ಆ ಕಲ್ಲಿಗಿಂತ ಅಚ್ಚಕಡಿನಿ ಇಂಥ ಒಂದು ಪ್ರಯೋಗ ಕೊಟ್ಟಾಗಲೇ ಈ ಬೈಗುಳದ ಅರ್ಥ ಸ್ಪಷ್ಟವಾಗುವುದು.

ಜಾನಪದ ನಮೂದುಗಳೆಲ್ಲ ಆಡುಭಾಷೆಯ ಪದಗಳೇ ಆಗಿರುವುದರಿಂದ ಕೆಲವೊಮ್ಮೆ ಸಾಮಾನ್ಯ ಆಡುಪದಗಳು ನಿಘಂಟಿನಲ್ಲಿ ನಮೂದುಗಳಾಗಿ ಸೇರ್ಪಡೆಯಾಗುವುದುಂಟು. ಇಂಥ ಕಡೆ ಜಾನಪದೀಯತೆಯ ಅಂಶವನ್ನುಳ್ಳ ಪದಗಳಿಗೂ ಆಡುಮಾತಿನ ಪದಗಳಿಗೂ ಇರುವ ವ್ಯತ್ಯಾಸವನ್ನು ಸೂಕ್ಷ್ಮವಾಗಿ ಗಮನಿಸಬೇಕಾಗುತ್ತದೆ. ನಿಘಂಟಿನ ನಮೂದುಗಳೆಲ್ಲ ಬಹುತೇಕ ಆಡುಭಾಷಾ ರೂಪದಲ್ಲಿರುತ್ತವಾದರೂ ಆಡುಭಾಷೆಯ ಪದಗಳೆಲ್ಲಾ ಜಾನಪದೀಯ ಪದಗಳಲ್ಲ ಎಂಬುದನ್ನು ಗುರುತಿಸಿಕೊಳ್ಳಬೇಕು.

ಜನಪದ ಸಾಹಿತ್ಯದಿಂದ ಪದಗಳ ಆಯ್ಕೆ ಮಾಡಿಕೊಳ್ಳುವಾಗಲೂ ಕೆಲವು ಸೂಕ್ಷ್ಮತೆಗಳು ಅಗತ್ಯ. ಹಾಡುಗಳಲ್ಲಿ, ಕಾವ್ಯಗಳಲ್ಲಿ ಬಳಕೆಯಾಗುವಾಗ ಕೆಲವೊಂದು ಶಬ್ದಗಳು ಹಾಡಿನ ಲಯ ಧಾಟಿಗೆ ತಕ್ಕಂತೆ ಬೇರೆ ರೂಪ ಪಡೆದಿರುತ್ತವೆ. ವಾಸ್ತವವಾಗಿ ದಿನನಿತ್ಯದಲ್ಲಿ ಅವು ಈ ರೀತಿ ಬಳಕೆಯಾಗುವುದಿಲ್ಲ. ಅಂಥವನ್ನು ಕೈ ಬಿಡಬೇಕಾಗುತ್ತದೆ.

ಜಾತ್ರೆಗಳು, ಆಚರಣೆಗಳಂಥವುಗಳ ವಿವರಣೆ ನೀಡುವಾಗ ಅದು ತುಂಬಾ ವಿಸ್ತಾರವಾಗುವ ಸಾಧ್ಯತೆ ಇರುತ್ತದೆ. ಅಂಥ ಕಡೆ ಮುಖ್ಯವಾದ ವಿವರಗಳನ್ನು ನೀಡುವತ್ತ ಗಮನ ಹರಿಸಬೇಕು. ಅದು ಯಾವ ಪ್ರದೇಶದಲ್ಲಿ ಯಾವ ಕಾಲಮಾನದಲ್ಲಿ ನಡೆಯುತ್ತದೆ, ಜಾತ್ರೆಯ ವೈಶಿಷ್ಟ್ಯವೇನು, ನಿರ್ದಿಷ್ಟ ಜನ ಜಾತಿ, ಧರ್ಮದವರಿಗೆ ಸಂಬಂಧಿಸಿದ್ದೇ ಎಂಬುದರ ವಿವರಗಳು ಬೇರೆ ಬೇರೆ ರೀತಿಯ ಅಧ್ಯಯನಗಳಿಗೆ ಬೇಕಾಗುತ್ತವೆ. ಕೆಲವು ಪದಗಳಿಗೆ ಶುದ್ಧರೂಪಕೊಡುವುದು ಅಗತ್ಯ. ಕೆಲವೊಂದು ಪದಗಳು ಮೂಲ ರೂಪದಿಂದ ಎಷ್ಟು ದೂರ ಹೋಗಿರುತ್ತವೆಂದರೆ ಅವುಗಳ ಶುದ್ಧರೂಪ ನೀಡದಿದ್ದರೆ ಅವು ಹೇಗೆ ಈ ರೂಪ ಪಡೆದುಕೊಂಡವು ಎಂಬುದನ್ನು ಗುರುತಿಸುವುದೇ ಅಸಾಧ್ಯವಾಗುತ್ತದೆ. ಶುದ್ಧರೂಪವನ್ನು ನೀಡಿದಾಗ

ಅದು ಪಡೆದುಕೊಂಡಿರುವ ವ್ಯತ್ಯಾಸಗಳ ಜಾಡನ್ನು ಗುರುತಿಸಲು ಸಾಧ್ಯವಾಗುತ್ತದೆ. ಇಲ್ಲದಿದ್ದರೆ ಈಗಿರುವ ರೂಪದಲ್ಲಿಯೆ ಅದು ಇರುವುದು ಎಂಬ ಭಾವನೆ ಉಂಟಾಗುತ್ತದೆ.

ಉದಾ: ಅಲಂಕಾರಕ್ಕಾಗಿ ಎತ್ತಿನ ಹಣೆಯ ಮೇಲೆ ಧರಿಸುವ ಗೆಜ್ಜೆಸರವನ್ನು ಅಣಗೆಜ್ಜೆ ಎನ್ನುತ್ತಾರೆ. ಹಣೆಗೆಜ್ಜೆಯೇ ಇಲ್ಲಿ ಅಣಗೆಜ್ಜೆ ಆಗಿದೆ. ಅಚ್ಚಹಸುವಿನಹಾಲು = ಅಚ್ಚಸೀನಾಲು, ವಂಶ ನಿರ್ವಂಶವಾಗಲಿ ಎಂಬ ಬೈಗುಳ ಓಸನಿರೋಸಾಗಲಿ ಎಂಬ ರೂಪ ತಳದಿದೆ. ಅತ್ತೆಮಳೆ (ಹಸ್ತನಕ್ಷತ್ರದ ಮಳೆ), ಅಸ್ಲೆಮಳೆ(ಆಶ್ಲೇಷಾ ನಕ್ಷತ್ರದ ಮಳೆ), ಆದ್ರಿಮಳೆ (ಆರಿದ್ರಾ ನಕ್ಷತ್ರದ ಮಳೆ), ಅಸ್ವಂತ್ನಳ್ಳಿಮರ = ಅಶ್ವತ್ಥ + ಅರಳಿಮರ, ಅನುರಾಗಿ/ಅನುರಾಜ (ಅನುರಾಧ ನಕ್ಷತ್ರದ ಮಳೆ) ಕರ್ಬನ್ ಸಾಲು ಎಂಬುದರ ಮೂಲರೂಪ ಕರಿಬಾನಗಳ ಸಾಲು.

ಪ್ರಾದೇಶಿಕ ವಿವರದ ಅಗತ್ಯತೆ

ಕೆಲವೊಂದು ಪದಗಳಿಗೆ ಸಂಬಂಧಿಸಿದಂತೆ ಪ್ರದೇಶದ ವಿವರ ಬಹಳ ಮುಖ್ಯವಾಗುತ್ತದೆ. ಮುಖ್ಯವಾಗಿ ಒಂದೇ ಪದ ಬೇರೆ ಬೇರೆ ಪ್ರದೇಶಗಳಲ್ಲಿ ಬೇರೆ ಬೇರೆ ಅರ್ಥ ಪಡೆದಿರುವಾಗ ಈ ವಿವರ ಬೇಕೇಬೇಕಾಗುತ್ತದೆ. ಹೀಗೆ ಮಾಡದಿದ್ದರೆ ಅನೇಕ ರೀತಿಯ ತಪ್ಪು ತಿಳುವಳಿಕೆಗಳಾಗುವ ಸಾಧ್ಯತೆ ಇದೆ. ಇದಕ್ಕೆ ಸಂಬಂಧಿಸಿದಂತೆ ನಡೆದ ಒಂದು ಚರ್ಚೆ ಇಲ್ಲಿ ಉಲ್ಲೇಖನೀಯ. ಪ್ರಥಮ ಪಿಯುಸಿ ಕನ್ನಡ ಪಠ್ಯ ಪುಸ್ತಕ "ಸಾಹಿತ್ಯ ಸಮಕ್ಷಮ"ದಲ್ಲಿ **ಮಕ್ಕಳ ಮಾರ್‍ಯಾರ ಮಳಿರಾಜ** ಎಂಬ ಜನಪದ ಗೀತೆಯಲ್ಲಿನ ಕೆಲವು ಪದಗಳಿಗೆ ಬೇರೆಯೇ ಅರ್ಥಗಳನ್ನು ಕೊಟ್ಟಿರುವುದು ವಿವಾದಕ್ಕೆ ಕಾರಣವಾಯಿತು. ಸೊಲಗಿ, ಬಣ್ಣದ ಗುಬ್ಯಾರು, ಅನ್ಯದದಿನಗಳು ಎಂಬ ಪದಗಳಿಗೆ ಕೊಟ್ಟ ಅರ್ಥಗಳ ಬಗ್ಗೆ ಉತ್ತರ ಕರ್ನಾಟಕದ ಬೇರೆ ಬೇರೆ ವಿಭಾಗಗಳವರು ತಮ್ಮಲ್ಲಿ ಯಾವ ಅರ್ಥಗಳು ಪ್ರಚಲಿತವಿವೆ ಎಂಬುದನ್ನು ತಿಳಿಸಿ, ಯಾವುದೇ ಪದಗಳಿಗೆ ಅರ್ಥಗಳನ್ನು ಕೊಡುವಾಗ ಪ್ರದೇಶವನ್ನು ಗಮನದಲ್ಲಿಟ್ಟುಕೊಳ್ಳುವುದು ಬಹಳ ಮುಖ್ಯ ಎಂದು ಪ್ರತಿಪಾದಿಸಿದರು. ಚರ್ಚೆಗೆ ಕಾರಣವಾಗುವಂತೆ ಮೊದಲು ಪ್ರತಿಕ್ರಿಯಿಸಿ ವಿವಿಧ ಭಾಗಗಳ ವಿದ್ವಾಂಸರ ಅಭಿಪ್ರಾಯಗಳನ್ನು ಕ್ರೋಢೀಕರಿಸಿದ ಬಸವರಾಜ ಆಕಳವಾಡಿಯವರ "ಜನಪದ ಶಬ್ದಗಳಿಗೆ ಅಪಚಾರ ಸಲ್ಲದು" ಎಂಬ ಲೇಖನ ಈ ವಿಷಯದ ಬಗ್ಗೆ ಬೆಳಕು ಚೆಲ್ಲುತ್ತದೆ.

ಸೊಲಗಿ ಎಂಬ ಪದಕ್ಕೆ ಪಠ್ಯ ಪುಸ್ತಕದಲ್ಲಿ ಬಳ್ಳದ ೧/೪ ಭಾಗ. ಬಳ್ಳ ಅಂದರೆ ೪ ಸೇರು. ಗಿದ್ದ ಅಂದರೆ ಎರಡು ಸೊಲಗಿ ಎಂಬ ಅರ್ಥಕೊಡಲಾಗಿತ್ತು. ಬಸವರಾಜ ಆಕಳವಾಡಿಯವರ ಚರ್ಚೆಯಲ್ಲಿ ಪಾಲುಗೊಂಡ ಉಮೇಶ ಕಲಗೊಂಡ, ಚಂದ್ರಶೇಖರವಸ್ತ್ರದ ಹಾಗೂ ಗುಲ್ಬರ್ಗ ವಿಶ್ವವಿದ್ಯಾಲಯದ ಮುಖ್ಯಸ್ಥರಾಗಿದ್ದ ಡಾ. ಮಗು ಬಿರಾದಾರ ಅವರು ತಮ್ಮ ತಮ್ಮ ಪ್ರದೇಶಗಳಲ್ಲಿ ಪ್ರಚಲಿತವಿದ್ದ ಅಳತೆಗಳಿಗೆ ಕೊಟ್ಟ ವಿವರಗಳನ್ನು ಆಧರಿಸಿ ಈ ಅಳತೆಗಳು ಪ್ರಾದೇಶಿಕವಾಗಿ ಹೇಗೆ ಭಿನ್ನತೆ ಪಡೆದಿವೆ ಎಂಬುದನ್ನು ಕೆಳಕಂಡಂತೆ ಸಂಕ್ಷೇಪಿಸಿ ಹೇಳಬಹುದು. ಉಮೇಶ ಕಲಗೊಂಡ ಹಾಗೂ ಚಂದ್ರಶೇಖರ ವಸ್ತ್ರದ ಅವರ ಪ್ರಕಾರ

ಸೊಲಗಿ = ೨ ಸೇರು

ಗಿದ್ದನ ಪದಕ್ಕೆ ಸಂಬಂಧಿಸಿದಂತೆ ಚರ್ಚೆಗೆ ಉತ್ತರಿಸಿದ ಡಾ ಚಿದಾನಂದಮೂರ್ತಿ ಯವರ ಪ್ರಕಾರ

ಗಿದ್ದನ = ಎರಡು ಸೊಲಿಗೆ (ಅಂದರೆ ೪ ಸೇರು)

ಉತ್ತರ ಕನ್ನಡ ಜಿಲ್ಲೆಯಲ್ಲಿ ಗಿದ್ದನ = ೮ ಸೇರು

ಮಧ್ಯ ಕರ್ನಾಟಕದ ಕೆಲವೆಡೆ ಗಿದ್ದನ = ೩ ಸೇರು

ಕಸಾಪ ನಿಘಂಟಿನ ಪ್ರಕಾರ ಗಿದ್ದನ = ೮ ಸೇರು (೪ ಸೊಲಿಗೆ)

ಉಮೇಶ ಕಲಗೊಂಡರ ಪ್ರಕಾರ :

ವಿಜಾಪುರ, ಬಾದಾಮಿ ತಾಲೂಕಿನಲ್ಲಿ ಗಿದ್ದನ = ೮ ಸೇರು

ವಿಜಾಪುರ ಜಿಲ್ಲೆಯ ಉತ್ತರ ಭಾಗದಲ್ಲಿ ಗಿದ್ದನ = ೧/೨ ಸೇರು

ಚಂದ್ರಶೇಖರ ವಸ್ತ್ರದ ಅವರೂ ಸಮರ್ಥಿಸುವಂತೆ

ಗಿದ್ದನ = ೧/೨ ಸೇರು

ಡಾ ಮ. ಗು. ಬಿರಾದಾರ ಅವರ ಪ್ರಕಾರ ವಿಜಾಪುರ ಭಾಗದಲ್ಲಿಯೇ ಗಿದ್ದನ = ಸೊಲಗಿಯ ಕಾಲುಭಾಗ. ನಿಳವಿ, ಕೊಳವಿ, ಗಿದ್ದನ, ಅದ್ದನ, ಸೊಲಗಿ (ಅನುಕ್ರಮವಾಗಿ ಒಂದರ ಎರಡು ಪಟ್ಟು) ಇವು ಇಂದೂ ವಿಜಾಪುರದಲ್ಲಿ ರೂಢಿಯಲ್ಲಿರುವ ಪದಗಳು ಎಂದು ವಿವರಣೆ ನೀಡುತ್ತಾ ಮಳಿರಾಜನ ಹಾಡಿನ ಸಂದರ್ಭದಲ್ಲಿ ಗಿದ್ದನ ಪದಕ್ಕೆ ೧/೨ ಸೇರು ಎಂಬ ಅರ್ಥವೇ ಯಾಕೆ ಪ್ರಸ್ತುತವಾಗುತ್ತದೆ ಎಂಬುದನ್ನು ಹೀಗೆ ವಿವರಿಸಿದ್ದಾರೆ:

ಗಿದ್ದನ ಅಕ್ಯಾಗ ಮಳಿರಾಜ ಅವರು

ಅಪುವನ್ನು ಕೂಡಿಸ್ಯಾರ ಮಳಿರಾಜ

ಸಣ್ಣ ಕೂಸಿಗೆ ಮನ್ನಿಸಿ ಉಣಿಸ್ಯಾರ

ಕಣ್ಣನ್ನೇ ಮುಚ್ಚ್ಯಾವ ಮಳಿರಾಜ

ಇಲ್ಲಿ ಗಿದ್ದನ ಪದಕ್ಕೆ ನಾಲ್ಕು ಸೇರು, ಮೂರು ಸೇರು, ಎಂಟು ಸೇರು ಎಂದು ಅರ್ಥಮಾಡುವುದು ಸರಿಯಾಗಲಾರದು. ಪದ್ಯದ ಈ ಅಂಶಗಳು ಮತ್ತು ವಿಜಾಪುರ ಜಿಲ್ಲೆಯ ಉತ್ತರ ಭಾಗದಲ್ಲಿ ಪ್ರಚಲಿತವಿರುವ ಗಿದ್ದನ ಪದಕ್ಕೆ ಅರ್ಧ ಸೇರು ಎಂಬ ಅರ್ಥ ಉಚಿತವಾಗಿದೆ. ಏಕೆಂದರೆ ಬರಗಾಲದ ಚಿತ್ರಣದ ಹಿನ್ನೆಲೆಯಲ್ಲಿ ಗಿದ್ದನ ಎಂಬ ಪದ ಕಡಿಮೆ ಅಳತೆಯನ್ನು ಸೂಚಿಸುತ್ತಿರುವುದೇ ಸರಿ ಎಂಬ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಅಳತೆಗಳಿಗೆ ಸಂಬಂಧಿಸಿದಂತೆ ಕರ್ನಾಟಕದ ಎಲ್ಲಾ ಭಾಗಗಳಲ್ಲಿಯೂ ಈ ರೀತಿ ಅರ್ಥ ವ್ಯತ್ಯಾಸಗಳಾಗುವುದನ್ನು ಗುರುತಿಸಬಹುದಾಗಿದೆ. "ಹಳ್ಳಿಗರ ಲೆಕ್ಕಾಚಾರ ಒಂದು ವಿಶಿಷ್ಟ ಪ್ರಪಂಚ" ಎಂಬ ಲೇಖನದಲ್ಲಿ ಡಾ. ಶ್ರೀಕಂಠ ಕೂಡಿಗೆಯವರು ಅಳತೆಗಳಿಗೆ ಸಂಬಂಧಿಸಿದಂತೆ ಹಲವಾರು ಮಾಹಿತಿಗಳನ್ನು ಕ್ರೋಢೀಕರಿಸಿ ಕೊಟ್ಟಿರುವುದನ್ನು ಇಲ್ಲಿ ಉಲ್ಲೇಖಿಸಬಹುದು:

೧ ಕಳಸಿಗೆ = ೧೪ ಸೇರು

೧ ಮುಡಿ = ೪೨ ಸೇರು

೧ ಕೊಳಗ = ೪ ಸೇರು

೪ ಪಾವು = ೧ ಸೇರು

೨ ಅಚ್ಚೇರು (ಅರ್ಧ ಸೇರು) = ೧ ಸೇರು

೨೦ ಕೊಳಗ = ೧ ಖಂಡುಗ

೧ ಖಂಡುಗ = ೫೦ ಸೇರು

೧೦೦ ಸೇರು ಅಥವಾ ೨ ಖಂಡುಗ = ೧ ಪಲ್ಲ

ಮಂಡ್ಯ, ಮೈಸೂರು ಬೆಂಗಳೂರು ಜಿಲ್ಲೆಗಳಲ್ಲಿ

೧ ಖಂಡುಗ = ೪ ಪಂಚಕ

೧ ಪಂಚಕ = ೫ ಕೊಳಗ

೧ ಕೊಳಗ = ೪ ಬಳ್ಳ

೧ ಬಳ್ಳ = ೪ ಮಾನ

೧ ಮಾನ = ೪ ಸೊಲ್ಲಿಗೆ

೧ ಸೊಲ್ಲಿಗೆ = ೧ ಗಿದ್ದಿಗೆ

ಹೀಗೆ ಜನಪದರಲ್ಲಿ ಪ್ರಚಲಿತವಿರುವ ಕೊಳಗ, ಇಬ್ಬಳಿಗೆ, ಕುಡಿತೆ, ಧಡಿಯ, ಪಂಚೇರು ಇತ್ಯಾದಿ ಪದಗಳ ಅರ್ಥ ಪ್ರದೇಶದಿಂದ ಪ್ರದೇಶಕ್ಕೆ ವ್ಯತ್ಯಾಸವಾಗಬಹುದಾಗಿದೆ. ಇವುಗಳಿಗೆ ಅರ್ಥ ಕೊಡುವಾಗ ಯಾವ ಪ್ರದೇಶದಲ್ಲಿ ಅವು ಯಾವ ಅರ್ಥದಲ್ಲಿ ರೂಢಿಯಲ್ಲಿವೆ ಎಂಬುದನ್ನು ಸೂಚಿಸಲೇಬೇಕಾಗುತ್ತದೆ. ಒಂದು ವೇಳೆ ಎಲ್ಲ ಪ್ರದೇಶಗಳಿಂದಲೂ ಪದವೊಂದಕ್ಕೆ

ಅರ್ಥ ಸಂಗ್ರಹಿಸಲು ಸಾಧ್ಯವಾಗದಿದ್ದಾಗ ಕೊಟ್ಟಿರುವ ಅರ್ಥಗಳೇ ಯಾವ ಪ್ರದೇಶದಲ್ಲಿ ಪ್ರಚಲಿತ ಎಂಬುದನ್ನು ಸೂಚಿಸುವುದು ಒಳ್ಳೆಯದು.

ಜಾನಪದದಲ್ಲಿ ಇನ್ನೂ ಹೀಗೆ ಎಷ್ಟೋ ಪದಗಳಿಗೆ ಅರ್ಥಗಳನ್ನು ಕಂಡುಕೊಳ್ಳುವುದು ಕಷ್ಟಕರವಾದ ವಿಷಯವೇ ಆಗಿದೆ. ಈ ಹಿನ್ನೆಲೆಯಲ್ಲಿ ಬಸವರಾಜ ಆಕಳವಾಡಿಯವರು ಹೇಳುವಂತೆ ಜಾನಪದ ವಿಷಯಕ್ಕೆ ಸಂಬಂಧಿಸಿದ ಹಾಗೆ ಪದಗಳಿಗೆ ಅರ್ಥಗಳನ್ನು ಕನ್ನಡ ಕೋಶಗಳಲ್ಲಿ ಹುಡುಕುವುದು ಸರಿಯಾದ ಕ್ರಮವಾಗಲಾರದು. ಏಕೆಂದರೆ ಜಾನಪದ ಶಬ್ದಗಳಿಗೆ ಅರ್ಥಗಳನ್ನು ಹುಡುಕುವ ಶಬ್ದಕೋಶಗಳು ಇದುವರೆಗೆ ಪ್ರಕಟವಾಗಿಲ್ಲ. ಯಾವ ಪ್ರದೇಶದಲ್ಲಿ ಪದ್ಯ ಅಥವಾ ಗದ್ಯ ಸಾಹಿತ್ಯ ಸಂಗ್ರಹವಾಗಿದೆಯೋ ಆ ಪ್ರದೇಶದಲ್ಲಿ ಬಳಕೆಯಲ್ಲಿರುವ ಪದಗಳ ಅರ್ಥಗಳನ್ನೇ ಮೊದಲು ನೀಡುವುದು ಉಚಿತ. ನಂತರ ಪ್ರಾದೇಶಿಕ ವೈವಿಧ್ಯತೆಯನ್ನು ಗುರುತಿಸಬಹುದು. (ಹೊನ್ನ ಬಿತ್ತಾರ ಹೊಳಿ ಸಾಲ)

ಜಾನಪದ ನಿಘಂಟಿಗೆ ಪದಗಳನ್ನು ಹಾಗೂ ಅರ್ಥಗಳನ್ನು ಸಂಗ್ರಹಿಸುವಾಗ ಯಾವ ರೀತಿ ಪ್ರಾದೇಶಿಕ ವಿಂಗಡಣೆಗಳನ್ನು ಮಾಡಿಕೊಳ್ಳಬೇಕು ಎಂಬುದನ್ನೂ ಸಹ ಸೂಕ್ಷ್ಮವಾಗಿ ನಿರ್ಧರಿಸಬೇಕಾಗುತ್ತದೆ. ಜಾನಪದದ ಯಾವುದೇ ಅಧ್ಯಯನದ ಮಾಹಿತಿಗಾಗಿ ಕ್ಷೇತ್ರಕಾರ್ಯ ಬಹಳ ಅಗತ್ಯವಾದ್ದರಿಂದ ಹಿಂದಿನಿಂದಲೂ ಒಂದಲ್ಲ ಒಂದು ರೀತಿಯ ಪ್ರಾದೇಶಿಕ ವಿಂಗಡಣೆಗಳನ್ನು ಮಾಡಿಕೊಂಡು ಬರಲಾಗಿದೆ. ಸಾಮಾನ್ಯವಾಗಿ ಜಾನಪದದ ಕ್ಷೇತ್ರಕಾರ್ಯಕ್ಕಾಗಿ ಕರ್ನಾಟಕವನ್ನು ಉತ್ತರ ಕರ್ನಾಟಕ, ದಕ್ಷಿಣ ಕರ್ನಾಟಕ, ಉತ್ತರ ಕನ್ನಡ ಜಿಲ್ಲೆ, ದಕ್ಷಿಣ ಕನ್ನಡ ಜಿಲ್ಲೆ, ಕೊಡಗು ಮತ್ತು ಆದಿವಾಸಿ ಜನಾಂಗಗಳು ಎಂಬ ಸ್ಥೂಲ ವಿಂಗಡಣೆ ಮಾಡಿಕೊಳ್ಳಲಾಗುತ್ತಿತ್ತು. ಭೌಗೋಳಿಕ, ರಾಜಕೀಯ, ಸಾಂಸ್ಕೃತಿಕ ದೃಷ್ಟಿಗಳಿಂದ ಈ ಪ್ರದೇಶಗಳ ನಡುವೆ ಸ್ಪಷ್ಟ ವ್ಯತ್ಯಾಸ, ವೈಶಿಷ್ಟ್ಯಗಳನ್ನು ಗುರುತಿಸಬಹುದಾಗಿತ್ತು. ಆದರೆ ಜಾನಪದದ ವ್ಯಾಪ್ತಿ ಎಷ್ಟು ದೊಡ್ಡದೆಂದರೆ ಈ ಯಾವುದೇ ಒಂದು ಘಟಕವೂ ಸಹ ಅಧ್ಯಯನಕಾರರ ಹಿಡಿತಕ್ಕೆ ಸಿಗದಷ್ಟು ವ್ಯಾಪಕವೂ ವೈವಿಧ್ಯಮಯವೂ ಆಗಿರುತ್ತದೆ. ಆನಂತರದ ದಿನಗಳಲ್ಲಿ ಒಂದೊಂದು ಜಿಲ್ಲೆಯನ್ನೇ ಒಂದೊಂದು ಘಟಕವಾಗಿಟ್ಟುಕೊಂಡು ಕ್ಷೇತ್ರಕಾರ್ಯ ನಡೆಸುವ ಕ್ರಮ ಜಾರಿಗೆ ಬಂತು. ೨೦೧೧ ರಲ್ಲಿ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಪ್ರಾಯೋಜಕತ್ವದಲ್ಲಿ ಜಾನಪದ ಆಕಾಡಮಿ ಕೈಗೊಂಡ ಜಾನಪದ ನಿಘಂಟು ಯೋಜನೆಯಲ್ಲಿ ಶಬ್ದಗಳ ಸಂಗ್ರಹಕ್ಕಾಗಿ ಪ್ರತಿ ಜಿಲ್ಲೆಗೊಬ್ಬರಂತೆ ಮತ್ತು ಹೆಚ್ಚು ತಾಲೂಕುಗಳಿರುವ ಕಡೆ ಇಬ್ಬರಂತೆ ಕ್ಷೇತ್ರ ಸಹಾಯಕರನ್ನು ನೇಮಿಸಿಕೊಳ್ಳಲಾಯಿತು. ಆದರೆ ಈ ಕ್ರಮದ ಸಂಗ್ರಹಕಾರ್ಯದಲ್ಲಿ ಪುನರಾವರ್ತನೆಗಳ ಸಮಸ್ಯೆ ಎದುರಾಯಿತು. ವಾಸ್ತವವಾಗಿ ಹೀಗಾಗುವುದಕ್ಕೆ ಕಾರಣವೇನೆಂದರೆ ಆಡಳಿತಾತ್ಮಕ ಕಾರಣಗಳಿಗಾಗಿ ಮಾಡಿಕೊಂಡ ಜಿಲ್ಲಾ ವಿಭಾಗಗಳು ಸಾಂಸ್ಕೃತಿಕವಾಗಿ ಸಂಪೂರ್ಣ ಬೇರೆಯಾಗಿರುವುದಿಲ್ಲ. ಚಿತ್ರದುರ್ಗ ಜಿಲ್ಲೆಯಲ್ಲಿ ಸೇರಿಹೋಗಿದ್ದ ದಾವಣಗೆರೆ ಜಿಲ್ಲೆಯನ್ನು ಆಡಳಿತಾತ್ಮಕ ಕಾರಣಗಳಿಗಾಗಿ ಪ್ರತ್ಯೇಕ ಜಿಲ್ಲೆಯಾಗಿ ಮಾಡಲಾಯಿತು. ಹೊಸದಾಗಿ ರೂಪುಗೊಂಡ ರಾಮನಗರ, ಗದಗ, ಕೊಪ್ಪಳ ಮೊದಲಾದವುಗಳಿಗೂ ಇದೇ ಮಾತು ಅನ್ವಯಿಸುತ್ತದೆ. ಈ ಜಿಲ್ಲೆಗಳ ಭಾಷೆ, ಸಂಸ್ಕೃತಿ ಜಾನಪದಗಳನ್ನು ಗೆರೆ ಎಳೆದಂತೆ ಪ್ರತ್ಯೇಕಿಸಲು ಬರುವುದಿಲ್ಲ. ಆದ್ದರಿಂದ ಕ್ಷೇತ್ರಕಾರ್ಯ ಮಾಡುವವರಿಗೆ ನಿರ್ದಿಷ್ಟ ವಿಷಯಗಳನ್ನು ವಹಿಸಿಕೊಟ್ಟಾಗ ಪುನರಾವರ್ತನೆಗಳನ್ನು ತಪ್ಪಿಸಬಹುದು ಎಂಬುದು ಈಗ ಅನುಭವಕ್ಕೆ ಬಂದಿರುವ ಸಂಗತಿ. ಪ್ರಸ್ತುತ ನಿಘಂಟಿನ ಸಂದರ್ಭದಲ್ಲಿ ಜಿಲ್ಲೆಗನುಗುಣವಾಗಿ ಕ್ಷೇತ್ರಕಾರ್ಯತಜ್ಞರನ್ನು ನೇಮಿಸಿಕೊಳ್ಳಲಾಗಿದೆಯಾದರೂ ಪ್ರತಿಯೊಬ್ಬರಿಗೂ ನಿರ್ದಿಷ್ಟ ವಿಷಯಗಳನ್ನು ವಹಿಸಿಕೊಟ್ಟು ಪುನರಾವರ್ತನೆಗಳನ್ನು ತಪ್ಪಿಸುವ ಹಾಗೂ ಎಲ್ಲಿ ಕ್ಷೇತ್ರಕಾರ್ಯ ನಡೆದಿಲ್ಲವೋ ಅಂಥ ಕಡೆ ಹೆಚ್ಚು ಗಮನವಹಿಸುವಂತೆ ಪ್ರಯತ್ನ ಮಾಡಲಾಗಿದೆ. ಇಷ್ಟಾದರೂ ಸಹ ಎಷ್ಟೋ ಪ್ರದೇಶಗಳು ಹಾಗೂ ವಿಷಯಗಳು ಕ್ಷೇತ್ರಕಾರ್ಯದ ವ್ಯಾಪ್ತಿಯಿಂದ ಹೊರಗೇ ಉಳಿದು ಆ ಮಟ್ಟಿಗೆ ನಿಘಂಟಿನ ಕೆಲಸಕ್ಕೆ ಕೊರತೆಯಾಗಿದೆಯೆಂದೇ ಹೇಳಬೇಕು. ಪ್ರಾದೇಶಿಕ ವಿಂಗಡಣೆಗಳಿಗೆ ಸಂಬಂಧಿಸಿದ ಹಾಗೆ ಬಹಳಷ್ಟು ಜನ ತಿಳಿದುಕೊಂಡಂತೆ ಉತ್ತರ ಕರ್ನಾಟಕದ ಭಾಷೆ ಉತ್ತರ ಕರ್ನಾಟಕದ ಜಿಲ್ಲೆಗಳಲ್ಲೆಲ್ಲ ಒಂದೇ ಆಗಿಲ್ಲ, ಅಲ್ಲೂ ಪ್ರಾದೇಶಿಕ ಭೇದಗಳುಂಟು. 'ಗಿದ್ದನ' ಪದ ಇದಕ್ಕೆ ಉದಾಹರಣೆ ಎನ್ನುತ್ತಾ ಚಂದ್ರಶೇಖರ ವಸ್ತ್ರದ ಅವರು ಸಿಂದಗಿ ಮತ್ತು ಈ ತಾಲೂಕಿನ ಸುತ್ತಮುತ್ತ ಗಿದ್ದನ ಎಂದರೆ ಕಾಲು ಸೊಲಗಿ ಎಂದೂ ಸೊಲಗಿಯ ಅರ್ಧಕ್ಕೆ ಅದ್ದನ ಎನ್ನುತ್ತಾರೆ. ಈ ಸಂದರ್ಭದಲ್ಲಿಯೇ ಭಾಷಾ ಪಂಡಿತರು ಉತ್ತರ ಕರ್ನಾಟಕ ಭಾಷೆಯನ್ನು 'ಉತ್ತರೋತ್ತರ ಕರ್ನಾಟಕ' 'ಮಧ್ಯ ಉತ್ತರ ಕರ್ನಾಟಕ' 'ದಕ್ಷಿಣೋತ್ತರ ಕರ್ನಾಟಕ' ಎಂದು ವಿಂಗಡಿಸಿಕೊಂಡು ಅಧ್ಯಯನ ಮಾಡುವುದು ಸರಿ ಎಂದು ಸೂಚಿಸಬಯಸುವೆ" ಎಂದು ಹೇಳುತ್ತಾರೆ. ಚಂದ್ರಶೇಖರ ವಸ್ತ್ರದ ಅವರ ಈ ಮಾತು ಬಹಳ ಗಮನಾರ್ಹ. (ಹೊನ್ನ ಬಿತ್ತಾರ ಹೊಳಿಸಾಲ ಕೃತಿಯಲ್ಲಿ ಉಲ್ಲೇಖಿಸಲಾಗಿರುವ ವಾಚಕರವಾಣಿ ಪತ್ರ), ಜಾನಪದ ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಇದು ಗಮನಿಸಲೇ ಬೇಕಾದ ಮಹತ್ವದ ವಿಷಯ.

ಕರ್ನಾಟಕದ ಬೇರೆ ಬೇರೆ ಪ್ರದೇಶಗಳ ವಿಷಯದಲ್ಲಿಯೂ ಈ ರೀತಿಯ ಭಿನ್ನತೆಗಳನ್ನು ಕಾಣಬಹುದಾಗಿದೆ. ಬಯಲುಸೀಮೆಯ ಎಲ್ಲ ಜಿಲ್ಲೆಗಳೂ ಸಾಂಸ್ಕೃತಿಕವಾಗಿ ಒಂದೇ ಅಲ್ಲ ಅಥವಾ ಸಂಪೂರ್ಣ ಭಿನ್ನವೂ ಅಲ್ಲ, ಆಯಾ ಪ್ರದೇಶಕ್ಕೇ ವಿಶಿಷ್ಟವಾದ ಅಂಶಗಳಿರುವಂತೆ ಇತರ ಪ್ರದೇಶಗಳೊಂದಿಗೆ ಸಮಾನವಾದ ಕೆಲವು ಅಂಶಗಳು ಇರುತ್ತವೆ. ಈ ಎರಡೂ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಕ್ಷೇತ್ರಕಾರ್ಯದ ಗೊತ್ತು ಗುರಿಗಳನ್ನು ನಿರ್ಧರಿಸಿಕೊಳ್ಳುವುದು ಅಗತ್ಯ.

ಜಾನಪದ ನಿಘಂಟಿನ ಪರಂಪರೆ

ಜಾನಪದ ವಿಷಯಗಳನ್ನು ಕುರಿತಂತೆಯೇ ನಿಘಂಟುಗಳನ್ನು ರಚಿಸುವ ಪ್ರಯತ್ನಗಳು ಆರಂಭವಾಗಿದ್ದು ಇತ್ತೀಚೆಗೆ. ಸಾಮಾನ್ಯವಾಗಿ ಜಾನಪದದ ಬೇರೆ ಬೇರೆ ಪ್ರಕಾರಗಳ ಸಂಗ್ರಹ ಅಧ್ಯಯನಗಳಿಗೆ ಸಂಬಂಧಿಸಿದಂತೆ ಗ್ರಂಥಗಳನ್ನು ಪ್ರಕಟಿಸಿರುವವರು ತಮ್ಮ ಕೃತಿಗಳ ಕೊನೆಯಲ್ಲಿ ಅರ್ಥಸೂಚಿ, ಪದಕೋಶಗಳನ್ನು ಕೊಟ್ಟಿರುತ್ತಿದ್ದರು. ಇವು ಆಯಾ ಕೃತಿಯಲ್ಲಿನ ಪಾರಿಭಾಷಿಕ ಪದಗಳನ್ನು ಆಡುಮಾತಿನ ಬಳಕೆಗಳನ್ನು ಅರ್ಥಮಾಡಿಕೊಳ್ಳುವಷ್ಟಕ್ಕೆ ನೆರವಾಗುತ್ತಿದ್ದವು. ಆನಂತರದ ದಿನಗಳಲ್ಲಿ ಪ್ರಾದೇಶಿಕವಾದ ಹಾಗೂ ನಿರ್ದಿಷ್ಟ ವಿಷಯ ಸಂಬಂಧಿಯಾದ ನಿಘಂಟು, ಪದಕೋಶ ರಚನೆಯತ್ತ ಆಸಕ್ತರು ಕೈ ಹಾಕಿದರು. ಈ ನಿಟ್ಟಿನಲ್ಲಿ ಹೆಸರಿಸಬಹುದಾದವು ಹೆಚ್. ಎಲ್. ನಾಗೇಗೌಡರ ಕನ್ನಡ ಜಾನಪದ ಕೋಶ, ಮುದೇನೂರು ಸಂಗಣ್ಣನವರ ಚಿಗಟೇರಿ ಪದಕೋಶ, ಕ್ಯಾತನಹಳ್ಳಿ ರಾಮಣ್ಣ ನವರ ಜನಪದ ನಿಘಂಟು, ಕೊಳಂಬೆ ಪುಟ್ಟಣ್ಣ ಗೌಡರ ಅಚ್ಚಕನ್ನಡ ನುಡಿಕೋಶ, ಬಸವರಾಜ ಕುಂಚೂರರ ಕುಂಬಾರಿಕೆ ವೃತ್ತಿ ಪದಕೋಶ, ಸುಧಾಕರ ಅವರ ಜಾನಪದ ನುಡಿಗಟ್ಟುಗಳ ಕೋಶ, ಸಾಂಬಮೂರ್ತಿ ಅವರ ನೇಕಾರ ವೃತ್ತಿಪದಕೋಶ, ಡಿ. ಪಾಂಡುರಂಗಬಾಬು ಅವರ ಪಾಂಚಾಳ ವೃತ್ತಿ ಪದಕೋಶ, ಅಶೋಕ್ ಕುಮಾರ್ ರಂಜೇರೆ ಅವರ ವಿವಿಧ ವೃತ್ತಿಪದಕೋಶ, ಎಸ್. ಎಸ್. ಅಂಗಡಿ ಅವರ ಸಂಕೀರ್ಣ ವೃತ್ತಿ ಪದಕೋಶ, ವೆಂಕಟೇಶ್ ಇಂದ್ವಾಡಿ ಅವರ ನೀಲಗಾರರು: ಸಾಂಸ್ಕೃತಿಕ ಪದಕೋಶ, ಹೆಚ್. ಎಸ್. ಅಚ್ಚಪ್ಪ ಅವರ ಶಬ್ದಕೋಶ, ಪಂಡಿತ ಹೆಚ್ ನಂಜೇಗೌಡ ಅವರ ಜಾನಪದಕೋಶ ಮತ್ತು ಕನ್ನಡ ವಿಶ್ವವಿದ್ಯಾಲಯದ ಕೃಷಿ ಪದಕೋಶ (ಈ ಪಟ್ಟಿ ಕರ್ನಾಟಕ ಜಾನಪದ ನಿಘಂಟಿನ ಬಿನ್ನಹದಲ್ಲಿ ಗೊ.ರು. ಚನ್ನಬಸಪ್ಪ ಅವರು ಕೊಟ್ಟಿರುವುದು) ಇವುಗಳಲ್ಲದೆ ನಾಡ ವೈದ್ಯಸಿರಿ (ಎಸ್. ಎ. ಕೃಷ್ಣಯ್ಯ ಹಾಗೂ ಪಿ. ಸತ್ಯ ನಾರಾಯಣಭಟ್) ಪರಮಾರ್ಥಪದಕೋಶ (ಅ. ರಾ. ಸೀ) ಇತ್ಯಾದಿಗಳೂ ಈ ಪಟ್ಟಿಗೆ ಸೇರುತ್ತವೆ. ಇತ್ತೀಚಿನ ದಿನಗಳಲ್ಲಿ, ಕಣ್ಮರೆಯಾಗುತ್ತಿರುವ ಪಾರಂಪರಿಕ ವಿಷಯಗಳು ಹಾಗೂ ಪದಗಳ ಬಗ್ಗೆ ಇತರ ಪ್ರಕಾರಗಳ ಚಿಂತಕರೂ ಲೇಖಕರೂ ಗಮನಹರಿಸುತ್ತಿರುವುದು ಉಲ್ಲೇಖನೀಯ. ಇಂಥ ಪ್ರಯತ್ನಗಳಲ್ಲಿ ಹೆಸರಿಸಬಹುದಾದ ಅತ್ಯುತ್ತಮ ಕೃತಿಯೆಂದರೆ ಕಲ್ಕುಳಿ ವಿಠ್ಠಲ ಹೆಗಡೆಯವರ "ಮಂಗನ ಬ್ಯಾಟೆ" ಎಂಬ ಕೃತಿ. ಮಲೆನಾಡಿನ ಪರಿಸರವನ್ನು ಗಮನದಲ್ಲಿಟ್ಟುಕೊಂಡು ಬರೆದಿರುವ ಇಲ್ಲಿನ ಲೇಖನಗಳಲ್ಲಿ ಪ್ರಾಸಂಗಿಕವಾಗಿಯೋ ಅಥವಾ ಉದ್ದೇಶಪೂರ್ವಕವಾಗಿಯೇ ಬಂದಂತಹ ಪ್ರತಿಯೊಂದು ವಿವರವನ್ನು ಸ್ಪಷ್ಟವಾಗಿ ಪರಿಚಯಿಸುವ, ಅರ್ಥ ಕೊಡುವ ಕೆಲಸವನ್ನು ಮಾಡಿದ್ದಾರೆ. ಇಷ್ಟು ಪೂರ್ಣ ಪ್ರಮಾಣದಲ್ಲಿ ಅಲ್ಲದಿದ್ದರೂ ಈ ರೀತಿ ನಿಘಂಟಿನ ಆಕರಗಳಾಗಿ ಬಳಸಿಕೊಳ್ಳಬಹುದಾದ ಇನ್ನೂ ಅನೇಕ ಪ್ರಯತ್ನಗಳು ಈಚಿನ ದಿನಗಳಲ್ಲಿ ನಡೆಯುತ್ತಿರುವುದು ಗಮನ ಸೆಳೆಯುವಂತಿದೆ.

ಹೀಗೆ ಪ್ರಾದೇಶಿಕ ಸತ್ವವಿರುವ ಸಾಹಿತ್ಯ ಕೃತಿಗಳು ಅದೆಷ್ಟೋ ಇವೆ. ಅತ್ಯಂತ ವೇಗವಾಗಿ ಬದಲಾಗುತ್ತಿರುವ ಸಾಮಾಜಿಕ ಸಾಂಸ್ಕೃತಿಕ ಪರಿಸ್ಥಿತಿಯಲ್ಲಿ ಬಹುತೇಕ ಪದಗಳನ್ನು ಸ್ವತಃ ಜನಪದರೇ ಮರೆತುಬಿಟ್ಟಿದ್ದಾರೆ. ದಿನ ನಿತ್ಯದ ಬಳಕೆಯ ವಸ್ತುಗಳು, ಪಾರಂಪರಿಕ ವೃತ್ತಿಗಳು, ಕೃಷಿ ಮೊದಲಾದ ಎಲ್ಲ ಕ್ಷೇತ್ರಗಳಲ್ಲೂ ಮೂಲ ಕನ್ನಡ ಪದಗಳ ಸ್ಥಾನವನ್ನು ಇಂಗ್ಲೀಷ್ ಪದಗಳು ಆಕ್ರಮಿಸಿವೆ. ಹೀಗಾಗಿ ಗ್ರಾಮಾಂತರ ಪ್ರದೇಶಗಳಿಗೆ ಹೋದರೆ ಸಾಕು ನಮಗೆ ಬೇಕಾದ ಮಾಹಿತಿ ಸಿಕ್ಕಿಬಿಡುತ್ತದೆ ಎಂಬ ಅಭಿಪ್ರಾಯವನ್ನೇ ಬದಲಾಯಿಸಿಕೊಳ್ಳಬೇಕಾಗಿದೆ. ಇಂಥ ಸಂದರ್ಭದಲ್ಲಿ ಪ್ರಾದೇಶಿಕ ಸತ್ವವಿರುವ ಸಾಹಿತ್ಯ ಕೃತಿಗಳು ಹಾಗೂ ಆಗಾಗ್ಗೆ ಪತ್ರಿಕೆ, ನಿಯತಕಾಲಿಕೆಗಳಲ್ಲಿ ಬರುವ ಜಾನಪದ ಸಂಬಂಧವಾದ ಲೇಖನಗಳು ಛಾಯಾಚಿತ್ರಗಳಿಂದ ಮಾಹಿತಿಗಳನ್ನು ಗಮನಿಸಿ ಸಂಗ್ರಹಿಸುವ ಕೆಲಸ ಅಗತ್ಯ. ದಿನಪತ್ರಿಕೆಗಳಲ್ಲಿ ಸಹ ಯಾವುದೋ ಸುದ್ದಿಗಳ ಮೂಲಕವಾಗಿ ದಿನಕ್ಕೆ ಕನಿಷ್ಟ ಐದಾರು ಅಚ್ಚ ಜಾನಪದೀಯ ಶಬ್ದಗಳನ್ನು ಗುರುತಿಸಬಹುದಾಗಿದೆ.

ಪ್ರಸ್ತುತ ನಿಘಂಟು ಕಾರ್ಯ ಆರಂಭವಾದಾಗಿನಿಂದ ಅತಿ ಹೆಚ್ಚಿನ ಹಾಗೂ ಹಿಂದಿನ ನಿಘಂಟುಗಳಲ್ಲಿ ಸಿಗದಂಥ ಮಾಹಿತಿಯನ್ನು ಮೇಲೆ ಹೇಳಿದ ಆಕರಗಳಿಂದಲೇ ಸಂಗ್ರಹಿಸಲಾಗಿದೆ. ಖ್ಯಾತನಾಮರಲ್ಲದ ಎಷ್ಟೋ ಲೇಖಕರು, ಆಸಕ್ತರು ನೀಡುತ್ತಿರುವ ಇಂಥ ಕೊಡುಗೆಗಾಗಿ ಅವರೆಲ್ಲರಿಗೆ ಧನ್ಯವಾದಗಳು ಸಲ್ಲುತ್ತವೆ.

ಪ್ರಸ್ತುತ ನಿಘಂಟಿನ ಮಾಹಿತಿಯ ಆಕರಗಳು

ಈ ನಿಘಂಟಿಗೆ ಕರ್ನಾಟಕ ಜಾನಪದ ಅಕಾಡೆಮಿಯು ೨೦೧೧ರಲ್ಲಿ ಬಿಡುಗಡೆ ಮಾಡಿದ ಕನ್ನಡ ಜಾನಪದ ನಿಘಂಟಿನ ಮೂರು ಸಂಪುಟಗಳು ಮುಖ್ಯ ಆಕರಗಳಾಗಿವೆ. ಪ್ರಸ್ತುತ ನಿಘಂಟಿನ ಸಂದರ್ಭದಲ್ಲಿ ವಿಷಯಗಳ ಮಾದರಿ ಪಟ್ಟಿಯನ್ನು ಸಿದ್ಧಪಡಿಸಿ ವಿಷಯಗಳನ್ನು ಆಯಾ ಕ್ಷೇತ್ರಕಾರ್ಯತಜ್ಞರ ಸಾಮರ್ಥ್ಯ ಹಾಗೂ ತಜ್ಞತೆಗಳಿಗನುಗುಣವಾಗಿ ವಿಂಗಡಿಸಿಕೊಡಲಾಯಿತು. ಇದರಿಂದಾಗಿ ಇದುವರೆಗೆ ಗಮನಹರಿಸದಿದ್ದಂತಹ ಕ್ಷೇತ್ರಗಳಿಂದಲೂ ಪದಗಳ ಆಯ್ಕೆ ನಡೆಸುವಂತಾಯಿತು. ಇನ್ನೊಂದು ಅಂಶವೆಂದರೆ ಅಕಾಡೆಮಿಯ ನಿಘಂಟಿನ ರಚನೆಯಲ್ಲಿ ದೊರೆತ ಅನುಭವದಿಂದಾಗಿ ಅಲ್ಲಿನ ಕೆಲವೊಂದು ಲೋಪದೋಷಗಳನ್ನು ನಿವಾರಿಸಿಕೊಳ್ಳುವ ಪ್ರಯತ್ನ ಇಲ್ಲಿ ನಡೆದಿದೆ. ಮುಖ್ಯವಾಗಿ ದಿನನಿತ್ಯದ ಆಡುಮಾತಿನ ಪದಗಳಿಗೂ ನಿಘಂಟಿನ ನಮೂದುಗಳಾಗಿ ಸೇರ್ಪಡೆಯಾಗಬೇಕಾದ ಪದಗಳಿಗೂ ಇರುವ ವ್ಯತ್ಯಾಸವನ್ನು ಸ್ಪಷ್ಟಪಡಿಸಿಕೊಂಡು ನಿಘಂಟಿನ ನಮೂದುಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಇದಲ್ಲದೆ ಎಚ್. ಎಲ್. ನಾಗೇಗೌಡರ ಕನ್ನಡ ಜಾನಪದ ಕೋಶವೂ ಕೂಡ ಮುಖ್ಯ ಆಕರವಾಗಿದೆ. ಇನ್ನಿತರ ಜಾನಪದ ಪದಕೋಶಗಳು, ಜಾನಪದದ ವಿವಿಧ ವಿಷಯ ಕುರಿತ ಅಧ್ಯಯನ ಕೃತಿಗಳು ಪ್ರಾದೇಶಿಕ ಸತ್ವವಿರುವ ಸಾಹಿತ್ಯ ಕೃತಿಗಳು, ವಿವಿಧ ನಿಯತಕಾಲಿಕೆಗಳಲ್ಲಿನ ಲೇಖನಗಳು, ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿದ್ದ ಜಾನಪದ ಸಂಬಂಧವಾದ ಮಾಹಿತಿಗಳನ್ನು ಇಲ್ಲಿ ಬಳಸಿಕೊಳ್ಳಲಾಗಿದೆ. ಈ ರೀತಿ ಪ್ರಕಟಿತ ಮೂಲಗಳನ್ನು ಮಾಹಿತಿಯ ಆಕರವಾಗಿ ಪರಿಶೀಲಿಸುವುದು ಬಹಳ ಮುಖ್ಯ ಎಂಬುದು ಈ ಅವಧಿಯಲ್ಲಿ ಗಮನಕ್ಕೆ ಬಂದ ಸಂಗತಿ. ಸಂಬಂಧಪಟ್ಟ ವಿಷಯ ಕುರಿತಂತೆ ನಿಖರವಾದ ಮಾಹಿತಿ ಈ ಕೃತಿಗಳಿಂದ ದೊರೆಯುತ್ತದೆ. ಕ್ಷೇತ್ರಕಾರ್ಯವೆನ್ನುವುದು ಪ್ರಕಟಿತ ಮೂಲಗಳನ್ನು ಒಳಗೊಳ್ಳಬೇಕಾಗುತ್ತದೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತ ರಿಚರ್ಡ್ ಎಂ ಡಾರ್ಸನ್ ಅವರು ಜಾನಪದ ತಜ್ಞನಿಗೆ ದತ್ತಾಂಶವನ್ನು ಒದಗಿಸುವ ಮೂರು ಮುಖ್ಯ ಮೂಲಗಳೆಂದರೆ ಕ್ಷೇತ್ರಕಾರ್ಯ, ಪತ್ರಾಗಾರ ಹಾಗೂ ಮುದ್ರಿತ ಮೂಲಗಳು ಎಂದು ಹೇಳಿರುವುದನ್ನು ಇಲ್ಲಿ ಉಲ್ಲೇಖಿಸಬಹುದು. ಮುಂದಿನ ದಿನಗಳಲ್ಲಿ ಜಾನಪದ ಅಧ್ಯಯನಕಾರರು ಹಾಗೂ ವಿದ್ವಾಂಸರು ಸಂಗ್ರಹಿಸಿರುವ ಮಾಹಿತಿಯ ಕಡೆಗೆ ಹಾಗೂ ಪ್ರಾದೇಶಿಕ ಸತ್ವವಿರುವ ಕೃತಿಗಳ ಕಡೆಗೆ ಇನ್ನೂ ಹೆಚ್ಚು ಗಮನ ಹರಿಸುವುದು ಅತ್ಯಗತ್ಯ.

ಈ ನಿಘಂಟು ರಚನೆಗೆ ಅನುಸರಿಸಿದ ಕ್ರಮಗಳು

೧. ನಮೂದುಗಳ ನೀಡಿಕೆ – ಜನಸಾಮಾನ್ಯರಲ್ಲಿ ಶಬ್ದವೊಂದು ಯಾವ ರೂಪದಲ್ಲಿ ರೂಢಿಯಲ್ಲಿದೆಯೋ ಅದನ್ನೇ ಮುಖ್ಯ ನಮೂದನ್ನಾಗಿ ತೆಗೆದುಕೊಳ್ಳಲು ಪ್ರಯತ್ನಿಸಲಾಗಿದೆ. ಮೂಲ ರೂಪದ ಸ್ಪಷ್ಟತೆಗಾಗಿ ಅಗತ್ಯವಾದೆಡೆಗಳಲ್ಲಿ ಅದರ ಶುದ್ಧರೂಪ ಅಥವಾ ಶಿಷ್ಟ ರೂಪವನ್ನು ಕೊಡಲಾಗಿದೆ.

೨. ಅರ್ಥಗಳನ್ನು ನೀಡುವಾಗ ತುಂಬ ಪ್ರಚಲಿತವಾದ ಅರ್ಥವನ್ನು ಮೊದಲು ಕೊಟ್ಟು ಉಳಿದ ಅರ್ಥಗಳನ್ನು ಅವುಗಳ ಪ್ರಚಲಿತತೆಗೆ ಅನುಗುಣವಾಗಿ ಅನಂತರದಲ್ಲಿ ನೀಡಲಾಗಿದೆ. ತೀರಾ ಅಪರೂಪದ ಹಾಗೂ ಅಲಂಕಾರಿಕವಾದ ಅರ್ಥಗಳನ್ನು ಕೊನೆಯಲ್ಲಿ ಕೊಡಲಾಗಿದೆ.

೩. ಅಲ್ಪಸ್ವಲ್ಪ ವ್ಯತ್ಯಾಸವಿರುವ, ಪರಸ್ಪರ ಗುರುತಿಸಬಹುದಾದಷ್ಟು ಸಾಮ್ಯತೆ ಹೊಂದಿರುವಂಥ ಪದಗಳನ್ನು ಒಂದೇ ನಮೂದಾಗಿ ಕೊಟ್ಟು, ಸ್ಪಷ್ಟಭಿನ್ನತೆ ಹೊಂದಿರುವ ಅದೇ ಶಬ್ದದ ಇನ್ನೊಂದು ರೂಪವನ್ನು ಪ್ರತ್ಯೇಕ ನಮೂದಾಗಿ ನೀಡಲಾಗಿದೆ. ಪೂರ್ತಿ ಬೇರೆಯೇ ರೂಪ ತಳೆದಿರುವ ಅದೇ ಅರ್ಥ ಕೊಡುವ ಪದಗಳನ್ನು ಇತರ ರೂಪಗಳು ಎಂಬ ಉಪಶೀರ್ಷಿಕೆ ಕೊಟ್ಟು ನಮೂದಿಸಲಾಗಿದೆ ಮತ್ತು ಅವುಗಳನ್ನು ಅಕಾರಾದಿಗನುಗುಣವಾಗಿ ಪ್ರತ್ಯೇಕ ನಮೂದುಗಳಾಗಿಯೂ ನೀಡಲಾಗಿದೆ.

೪. ಶಬ್ದವೊಂದಕ್ಕೆ ಬೇರೆ ಬೇರೆ ಅರ್ಥಗಳಿದ್ದಾಗ ಆಯಾ ಅರ್ಥದ ಜೊತೆಗೇ ಅದಕ್ಕೆ ಸಂಬಂಧಿಸಿದ ಪ್ರಯೋಗವನ್ನು ನೀಡಲಾಗಿದೆ.

೫. ಶಬ್ದಗಳಿಗೆ ಅಲಂಕಾರಿಕ ಅಥವಾ ಧ್ವನ್ಯಾರ್ಥಗಳಿದ್ದಾಗ ಜಾನಪದದಲ್ಲಿ ರೂಢಿಯಲ್ಲಿರುವ ಅಲಂಕಾರಿಕ ಅರ್ಥಗಳನ್ನು ಉಳಿಸಿಕೊಳ್ಳಲಾಗಿದ್ದು, ಶಿಷ್ಟರಲ್ಲಿ ರೂಢಿಯಲ್ಲಿರುವಂಥ ಅಲಂಕಾರಿಕ ಅಥವಾ ಧ್ವನ್ಯಾರ್ಥಗಳನ್ನು ಕೈ ಬಿಡಲಾಗಿದೆ.

೬ ಜನಪದ ಕಾವ್ಯ ಕೃತಿಗಳಲ್ಲಿ, ಹಾಡುಗಳಲ್ಲಿ ಬಳಕೆಯಾಗುವಂಥ ಶಬ್ದಗಳು ಹಾಡಿನ ಧಾಟಿಗೆ ತಕ್ಕಂತೆ ವಿವಿಧ ರೂಪತಳೆಯುತ್ತದೆ. ಅಂಥವು ಅಲ್ಲಿ ಮಾತ್ರ ಅಸ್ತಿತ್ವ ಪಡೆದಿದ್ದು ದಿನ ನಿತ್ಯದ ಬಳಕೆಯಲ್ಲಿರುವುದಿಲ್ಲ. ಅಂತವುಗಳನ್ನು ಇಲ್ಲಿ ನಮೂದುಗಳಾಗಿ ತೆಗೆದುಕೊಂಡಿಲ್ಲ.

೭ ಅರ್ಥ ವಿವರಣೆ ಕೊಡುವಾಗ ನೇರವಾದ ಅರ್ಥಗಳನ್ನು ಕೊಡಲಾಗಿದೆಯೇ ಹೊರತು ವ್ಯಂಗ್ಯಾರ್ಥಗಳನ್ನು ಕೊಡಲಾಗಿಲ್ಲ. ಉದಾ: ತೀರಿಕೊಳ್ಳುವುದು, ಮರಣಹೊಂದು ಎಂಬುದಕ್ಕೆ ಗೊಟಕ್ ಅನ್ನು, ನೆಗೆದು ಬೀಳು, ಇಂಥವನ್ನು ಕೊಡಲಾಗಿಲ್ಲ ಮತ್ತು ಈ ರೀತಿಯ ಪದಗಳನ್ನು ಸ್ವೀಕರಿಸಿಲ್ಲ.

೮. ಇದೇ ರೀತಿ ಅಶ್ಲೀಲಾರ್ಥದ ಬಳಕೆಗಳನ್ನು ಸಾಧ್ಯವಾದಷ್ಟು ಕೈಬಿಡಲಾಗಿದೆ.

೯. ಯಾವುದೇ ನಮೂದಿನ ಅರ್ಥವಿವರಣೆಯನ್ನು ಶಿಷ್ಟ ಭಾಷೆಯಲ್ಲಿ ಕೊಡಲಾಗಿದೆ.

೧೦. ಪ್ರಯೋಗಗಳನ್ನು ರೂಢಿ ಮಾತಿನಿಂದ, ಜನಪದ ಸಾಹಿತ್ಯ ಹಾಗೂ ಜಾನಪದದ ಇತರ ಪ್ರಕಾರಗಳಿಂದ, ಪ್ರಾದೇಶಿಕ ಸತ್ವವಿರುವ ಸಾಹಿತ್ಯ ಕೃತಿಗಳಿಂದ ಆಯ್ದುಕೊಳ್ಳಲಾಗಿದೆ. ಹೆಚ್ಚಿನ ಕಡೆ ಗಾದೆಗಳನ್ನು ಪ್ರಯೋಗ ಸೂಚಿಯಾಗಿ ಬಳಸಿಕೊಳ್ಳಲಾಗಿದೆ.

೧೧. ಅಂಕಿತನಾಮ, ಸ್ಥಳನಾಮಗಳನ್ನು ಉಳಿಸಿಕೊಂಡಿಲ್ಲ. ಆದರೆ ಜಾನಪದ ಪರಂಪರೆಯಲ್ಲಿ ಸ್ಥಾನ ಪಡೆದಿರುವಂಥವುಗಳನ್ನು ಉಳಿಸಿಕೊಳ್ಳಲಾಗಿದೆ. ಉದಾ: ರೇಣುಕಾಎಲ್ಲಮ್ಮ, ಮಾರಮ್ಮ, ಚೌಡಿ, ಚಾಮುಂಡಿ, ಜುಂಜಪ್ಪ, ವಿಕ್ರಮಾದಿತ್ಯ, ನಳಮಹಾರಾಜ, ಆದಿಚುಂಚನಗಿರಿ, ಉಜ್ಜಯಿನಿ, ಮೈಲಾರ, ಅಣ್ಣಮ್ಮ ದೇವತೆ, ಅಣ್ಣಪ್ಪ ದೈವ ಇಂಥವುಗಳನ್ನು ಉಳಿಸಿಕೊಳ್ಳಲಾಗಿದೆ.

೧೨. ಅನ್ಯದೇಶ್ಯಗಳನ್ನು ಹಾಗೂ ಉಪಭಾಷಾರೂಪಗಳನ್ನು ಕೈಬಿಡಲಾಗಿದೆ. ಆದರೆ ಜಾನಪದೀಯ ಸಂದರ್ಭದಲ್ಲಿ ಬಳಕೆಯಾಗುವಂಥ ಪದಗಳನ್ನು ಉಳಿಸಿಕೊಳ್ಳಲಾಗಿದೆ. ಉದಾ: ಅಗೆಲು, ಹುತ್ತರಿ, ಅಲಾವಿ ಕುಣಿತ, ಮೊಹರಂ ಹಬ್ಬ, ಸಂಸ್ಕೃತದ ಐರಾವತ, ಅಗ್ನಿ, ಋಷಿ ಇತ್ಯಾದಿ.

೧೩. ವ್ಯಾಕರಣಾಂಶಗಳ ನಮೂದಿನಲ್ಲಿ ಹೆಚ್ಚಿನ ವಿವರಗಳನ್ನು ಬಳಸಿಲ್ಲ. ಅರ್ಥಸ್ಪಷ್ಟತೆಗಾಗಿ ಅಗತ್ಯವಿರುವೆಡೆಯಲ್ಲಿ ನಾಮಪದ ಹಾಗೂ ಕ್ರಿಯಾಪದಗಳನ್ನು ಮಾತ್ರ ಸೂಚಿಸಲಾಗಿದೆ.

೧೪. ಭಾಷಾ ಶಾಸ್ತ್ರೀಯ ದೃಷ್ಟಿಯಿಂದ ಇಲ್ಲಿನ ನಮೂದುಗಳಿಗೆ ವಿವರಗಳನ್ನು ಕೊಡಬಹುದಾಗಿದ್ದರೂ, ಅಳಿದು ಹೋಗುತ್ತಿರುವ ಶಬ್ದರೂಪಗಳನ್ನು ಅವುಗಳ ಅರ್ಥದೊಂದಿಗೆ ದಾಖಲಿಸುವುದೇ ಇಲ್ಲಿನ ಪ್ರಮುಖ ಆದ್ಯತೆಯಾಗಿರುವುದರಿಂದ ಆ ಕೆಲಸಕ್ಕೆ ಕೈ ಹಾಕಿಲ್ಲ. ಸಮಯದ ಪರಿಮಿತಿಯೂ ಇನ್ನೊಂದು ಮುಖ್ಯ ಕಾರಣ. ಅಲ್ಲದೆ ದಾಖಲಾತಿಯಾದ ಈ ಸಾಮಗ್ರಿಯನ್ನಿಟ್ಟುಕೊಂಡು ಯಾವಾಗ ಬೇಕಾದರೂ ಅಂತಹ ಅಧ್ಯಯನಗಳನ್ನು ನಡೆಸಲು ಸಾಧ್ಯವಿದೆ.

೧೫. ನುಡಿಗಟ್ಟುಗಳು, ಬೈಗುಳಗಳು, ಇಂಥವನ್ನು ಅಲ್ಲೊಂದು ಇಲ್ಲೊಂದು ಬಿಟ್ಟರೆ ಮುಖ್ಯ ನಮೂದುಗಳಾಗಿ ಸ್ವೀಕರಿಸಿಲ್ಲ. ಇವುಗಳದೇ ಒಂದು ಪ್ರತ್ಯೇಕ ಯೋಜನೆಗಾಗುವಷ್ಟು ವ್ಯಾಪ್ತಿ ಇರುವುದು ಹಾಗೂ ಕಾಲಮಿತಿ ಇದಕ್ಕೆ ಮುಖ್ಯ ಕಾರಣ.

ಪ್ರಯೋಜನಗಳು

ನಮ್ಮ ಆಡುನುಡಿಯ ಸೊಗಸು, ಭಾಷಾ ಸಂಪತ್ತು, ಭಾಷಾ ವೈವಿಧ್ಯತೆ ಜನಪದರ ಪದಸೃಷ್ಟಿಯ ಸಾಮರ್ಥ್ಯ, ಕಲ್ಪನಾ ಪ್ರತಿಭೆ ಇವುಗಳನ್ನು ಮನಗಾಣಬೇಕಾದರೆ ಜಾನಪದ ನಿಘಂಟಿನಿಂದ ಮಾತ್ರವೇ ಸಾಧ್ಯ. ಇಲ್ಲಿನ ಪದಸಂಪತ್ತು ಭಾಷೆಯನ್ನು ಕುರಿತಾದ ನಮ್ಮ ಪರಿಕಲ್ಪನೆಯನ್ನೇ ಬದಲಾಯಿಸುತ್ತದೆ. ವಿಸ್ತಾರಗೊಳಿಸುತ್ತದೆ. ಕೇವಲ ಒಂದು ಶಬ್ದದ ಮೂಲಕ ಇಡೀ ಒಂದು ಸಂಸ್ಕೃತಿ ಹಾಗೂ ಸಾಮಾಜಿಕ ಇತಿಹಾಸದ ಪುಟಗಳನ್ನೇ ತೆರೆದಿಡುತ್ತದೆ. ಯಾವುದೇ ವಸ್ತು ವಿಷಯಕ್ಕೆ ಸಂಬಂಧಿಸಿದಂತೆ ಇಲ್ಲಿ ಪ್ರತ್ಯೇಕ ಪದ ಇದ್ದೇ ಇರುತ್ತದೆ. ಈ ಶಬ್ದ ಪ್ರಪಂಚವು ಸಸ್ಯ, ಪ್ರಾಣಿ, ಕೃಷಿ, ಬಡಿಗತನ, ಚಿನಿವಾರಿಕೆ, ನೇಕಾರಿಕೆ, ಪಶುಸಾಕಣೆ, ವಾಸ್ತುಶಿಲ್ಪ, ಗೃಹ ನಿರ್ಮಾಣ, ದೇಗುಲಗಳ ವಾಸ್ತು, ಮಳೆ ಗಾಳಿ ಬಿಸಿಲು ಸೂರ್ಯ ಚಂದ್ರ, ನಕ್ಷತ್ರ ಮೊದಲಾದ ಆಕಾಶಕಾಯಗಳ ವಿದ್ಯಮಾನ; ನೀರು ಮಣ್ಣು ಖನಿಜ ಲೋಹ ಅರಣ್ಯ ಭೂಮಿ ಮೊದಲಾದ

ಪರಿಸರದ ಅಂಶಗಳು; ಆಹಾರ ಪದ್ಧತಿ, ಉಡುಗೆ ತೊಡುಗೆ, ಹುಟ್ಟುಸಾವು ವಿವಾಹ ಮೊದಲಾದ ವ್ಯಕ್ತಿ ಜೀವನದ ಸಂಸ್ಕಾರಗಳು; ಹಬ್ಬ ಜಾತ್ರೆ ಮುಂತಾದ ಸಾಮೂಹಿಕ ಆಚರಣೆಗಳು; ವಿವಿಧ ಬಗೆಯ ಜನಪದ ಸಾಹಿತ್ಯ ಪ್ರಕಾರಗಳು; ಹಾಡು ಕುಣಿತಗಳು; ಹಸ್ತ ಕಲೆಗಳು; ವಿವಿಧ ಬಗೆಯ ಔಷಧಿಗಳು ಮದ್ದುಗಳು; ಚಿಕಿತ್ಸಾ ವಿಧಾನಗಳು; ನಾನಾ ರೋಗಗಳ ಹೆಸರುಗಳು (ಇದರಲ್ಲಿ ಜನವೈದ್ಯ, ಪಶುವೈದ್ಯ, ಸಸ್ಯವೈದ್ಯ ಎಲ್ಲ ಸೇರಿವೆ) ಇತ್ಯಾದಿಯನ್ನು ಒಳಗೊಂಡಿದೆ. ಹೀಗೆ ಈ ಪಟ್ಟಿಯೇ ಒಂದು ಗ್ರಂಥವಾಗಿ ಬಿಡಬಹುದು.

ಮಂಡ್ಯ ಪ್ರದೇಶದಲ್ಲಿ ಬೆರಕೆ ಸೊಪ್ಪಿನ ಸಾರು ಮಾಡಲು ಸುಮಾರು ೩೫ ಕ್ಕೂ ಹೆಚ್ಚು ಬಗೆಯ ಸೊಪ್ಪುಗಳು ಬಳಕೆಯಾಗುತ್ತವೆ. ಕನ್ನೆ ಸೊಪ್ಪು, ಅಣ್ಣೆಸೊಪ್ಪು, ಹೊನ್ನೆಸೊಪ್ಪು, ಹೊನಗೊನೆಸೊಪ್ಪು, ಹಕ್ಕಿಮರಿಸೊಪ್ಪು, ಅಡಚಿಟ್ಟುಸೊಪ್ಪು, ಯಾಗೀರೆ ಸೊಪ್ಪು, ತುಪ್ಪಗೀರೆಸೊಪ್ಪು, ಮುಳ್‌ಗೀರೆಸೊಪ್ಪು, ಕಿರ್ ಕೀರೆಸೊಪ್ಪು, ಕೋಳಿಕಾಲುಸೊಪ್ಪು, ಸೀದುಂಬೆ ಸೊಪ್ಪು, ಕೃಷ್ಣಕಾಂತಿ ಸೊಪ್ಪು, ತೊಗರಿಬೇಳೆ ಸೊಪ್ಪು, ದೊಡ್ಡಗೋಣಿ ಸೊಪ್ಪು, ಕಿರುಗೋಣಿ ಸೊಪ್ಪು, ಕರಿ ಗಣಿಕೆ ಸೊಪ್ಪು, ಕೆಂಪುಗಣಕೆ ಸೊಪ್ಪು, ನಾರಿಬೇಳೆ ಸೊಪ್ಪು, ದಾಗಡಿ ಸೊಪ್ಪು, ಬಾಯಿಬಸಳೆ ಸೊಪ್ಪು, ಕಾರೆಕುಡಿ, ತರಣಿಕುಡಿ, ಮರಣ್ಣೆ ಕುಡಿ, ಮೆಣಸಿನ ಕುಡಿ, ಕುಂಬಳ ಕುಡಿ, ನಗ್ಗಲ್ ಕುಡಿ, ನುಗ್ಗೆ ಕುಡಿ, ಗಿಡಗಡಲೆ ಕುಡಿ, ಮಣ್ಣೆ ಕುಡಿ, ಕಡಲೆಕುಡಿ ಇತ್ಯಾದಿ (ವೈದ್ಯ ಜಾನಪದ ಲೇಖನದಲ್ಲಿ ಡಾ. ವ. ನಂ. ಶಿವರಾಮು ಹೆಸರಿಸಿರುವ ಸೊಪ್ಪುಗಳು)

ತುಮಕೂರು ಜಿಲ್ಲೆಯ ಸಿದ್ಧರಬೆಟ್ಟದಲ್ಲಿ ಬೆಟ್ಟದ ಬುಡದಿಂದ ಮೇಲಿನ ದೇವಸ್ಥಾನದವರೆಗೆ ಇರುವ ಮೆಟ್ಟಿಲುಗಳ ಎರಡೂ ಪಕ್ಕದಲ್ಲಿ ಸ್ವಾಭಾವಿಕವಾಗಿ ಬೆಳೆದಿರುವ ಎಲ್ಲಾ ಜಾತಿಯ ಔಷಧಿ ಸಸ್ಯಗಳ ಒಂದೊಂದು ಕುಡಿಯನ್ನು ಔಷಧಿ ಸೊಪ್ಪಾಗಿ ಸಂಗ್ರಹಿಸುವ ಒಂದು ಪದ್ಧತಿ ಇದೆಯಂತೆ. ಪ್ರತಿಯೊಬ್ಬರೂ ತಮ್ಮ ಬೊಗಸೆಯಲ್ಲಿ ಹಿಡಿಯುವಷ್ಟು ಸೊಪ್ಪನ್ನು ಮಾತ್ರ ಕಿತ್ತುಕೊಂಡು ಹೋಗಬೇಕು ಎಂಬ ನಂಬಿಕೆ ಕೂಡ ಇದೆಯಂತೆ. ಅಂತದೊಂದು ಬೊಗಸೆ ಸೊಪ್ಪನ್ನು ಪರಿಶೀಲಿಸಿದಾಗ ಕಂಡು ಬಂದ ಔಷಧಿ ಸಸ್ಯ, ಪತ್ರೆ, ಚಿಗುರುಗಳ ಹೆಸರುಗಳು ಹೀಗಿವೆ ಎಂದು ಬಿ. ಎಸ್. ಸೋಮಶೇಖರ್ ಎಂಬ ಸಸ್ಯ ವಿಜ್ಞಾನಿ ಹೇಳುತ್ತಾರೆ (ಧರಣಿ ಮಂಡಲ ಸಂಚಿಕೆ ೫– ೨೦೧೨): ಅಪ್ಲೆಣಬು, ಅಮೃತಬಳ್ಳಿ, ಉತ್ತರಾಣಿ, ಗೋಣಿ ಸೊಪ್ಪು, ಚುಜ್ಜಲು, ಕಾಡು ಕರಿಬೇವು, ಆಡು ಮುಟ್ಟದ ಬಳ್ಳಿ, ಒಂದೆಲಗ, ನೆಲನೆಲ್ಲಿ, ನೆಲ್ಲಿ, ಕಾಡು ತೊಗರಿ, ಈಶ್ವರಿ ಬಳ್ಳಿ, ಕಾಡು ಪುದೀನ, ನೆಲಬೇವು, ನೇರಳೆ, ಕಾಡು ಮೆಣಸು, ಕಾಡು ತೊಂಡೆ, ಕಾಡುಮುಳ್ಳಂಪುರ್ಚಿ, ಪಾಷಾಣ ಭೇದ, ಬೇಲ, ಜಾವದಾರಿ, ಗುಲಗಂಜಿ, ಕಪ್ಪೆಸೊಪ್ಪು, ಬುಡ್ಡೆಸೊಪ್ಪು, ಬಿಲ್ವಪತ್ರೆ, ತಂಗಡಿ, ದಾಗಡಿ ಬಳ್ಳಿ, ಕೊಗ್ಗಿಸೊಪ್ಪು, ಮುಳ್ಳುಹರಿವೆ, ಬೇವು, ಲಕ್ಕಿ, ಬೆಕ್ಕಿನಬುಡ್ಡೆ ಬಳ್ಳಿ, ಗರಿಕೆ, ವಿಷ್ಣುಕಾಂತಿ, ಭರಣಿ, ಶಿವನಕಡಲೆ, ಮಂಗರ ಬಳ್ಳಿ, ಗರುಗ, ಹಣ್ಣೆಸೊಪ್ಪು, ಶ್ರೀಗಂಧ, ಸೀಗೆ, ಮಧುನಾಶಿನಿ, ಗಣಿಕೆ, ಹೊನಗೊನೆ, ಹುಣಸೆ.

ಶಿಪ್ಪರು, ಹುಲ್ಲು ಎಂದು ಒಂದೇ ಪದದಲ್ಲಿ ಹೇಳಿ ಬಿಡುವ ಸಸ್ಯ ವರ್ಗವು ಎಷ್ಟು ವಿಧಗಳನ್ನು ಒಳಗೊಂಡಿದೆ ಎಂಬುದಕ್ಕೆ ಈ ವಿವರ ನೋಡಿ:

ಊಬಿನ ಹುಲ್ಲು (ಬಿಳಿವುನುಗದ ಹುಲ್ಲು), ತ್ರಿಶೂಲ ಊಬಿನಹುಲ್ಲು, ದೊಡ್ಡಹಂಚಿಹುಲ್ಲು, ನಾಯಿಹಂಚಿಹುಲ್ಲು, ನೆಲಬಿದಿರು ಹುಲ್ಲು, ಬಾಗೆಹುಲ್ಲು, ತುರಿಕಡ್ಡಿಹುಲ್ಲು, ಆನೆಕಟ್ಟು ಹುಲ್ಲು, ಬೆಣ್ಣೆಹಕ್ಕಿಹುಲ್ಲು, ಗರಿಕೆ ಹುಲ್ಲು, ಕಾಚಿ ಹುಲ್ಲು, ಶುಂಠಿ ಹುಲ್ಲು, ನರಿಬಾಲದ ಗಂಡು ಹುಲ್ಲು, ಕಿರು ಬಿದಿರು, ದರ್ಬೆ, ಅಕ್ಕಬು ಹುಲ್ಲು, ಸಣ್ಣಕ್ಕಿ ಹುಲ್ಲು, ದೊಡ್ಡಕ್ಕಿ ಹುಲ್ಲು, ತಪರಿ ಹುಲ್ಲು, ಹಕ್ಕಿ ಕಾಲಿನ ಹುಲ್ಲು, ಜಡಿ ಹುಲ್ಲು, ನಂಜು ಹುಲ್ಲು, ನೊಸೆಹುಲ್ಲು, ಅಂಟುಪುರಲೆ ಇತ್ಯಾದಿ. (ಮನೋಹರ ಪಟೇಲ್ ಆರ್, 'ಧರಣಿ ಮಂಡಲ' ಸಂಚಿಕೆ ೩– ೨೦೧೨)

ವೃಕ್ಷ ಪ್ರಭೇದಗಳು;– ಒಣತೇಗದ ಕಾಡುಗಳಲ್ಲಿ ಕಂಡು ಬರುವ ಕೆಲವು ವೃಕ್ಷಗಳ ಹೆಸರು: ಕಕ್ಕೆ, ಮುರಸಲು, ಬೀಟೆ, ಸೋಮಿ, ಜಾಲಿ, ಬಾಗೆ, ಕಂಚುವಾಳ, ನೆಲ್ಲಿ, ಶಿವಾನೆ ಇತ್ಯಾದಿ. ಕುರುಚಲು ಪೊದೆಗಳ ಪ್ರದೇಶದಲ್ಲಿ ಕಂಡು ಬರುವ ಚಿಕ್ಕ ಮರಗಳು: ಕರಿ ಜಾಲಿ, ಬಾಗೆ, ಕಂಚುವಾಳ, ಮುತ್ತುಗ, ಗೊರವಿ, ಕಾಡು ಬೇರು, ಹಾಲೆ, ಮಸಿವಾಳ ಇತ್ಯಾದಿ. (ಬಿ. ಎಸ್. ಸೋಮಶೇಖರ್, ಧರಣಿ ಮಂಡಲ ಸಂಚಿಕೆ ೩ – ೨೦೧೨)

ಕೆಲವು ಬಳ್ಳಿಗಳ ಹೆಸರುಗಳು– ಐದೆಲೆ ಗೆಣಸು, ತಲೆಜಾದರಿ, ಮಧುನಾಶಿನಿ, ಕಾಡುದ್ರಾಕ್ಷಿ ಬಳ್ಳಿ, ತಲೆ ನೋವಿನ ಬಳ್ಳಿ, ಮಂಜಿಷ್ಟ, ಸೊಗದೆಬೇರು, ಶತಾವರಿ, ಅಂತುಂಡೆ, ಮಂಗರವಳ್ಳಿ, ಸೋಮಲತೆ, ನಸುಗುನ್ನಿ, ನೊರೆಗೆಣಸು, ಹಂದಿಗಡ್ಡೆ, ಉಗಣಿ ಬಳ್ಳಿ, ಕುಕ್ಕೆ ಬಳ್ಳಿ, ಹಾವುಮೆಕ್ಕೆಕಾಯಿ, ಕರಿಬಂಟನ ಬಳ್ಳಿ, ಕಾಡುಮೊಲ್ಲೆ, ಆಕಾಶ ಗರುಡ, ಹೊಟ್ಟೆನೋವಿನ ಬಳ್ಳಿ,

ಕುಂಟಿಗನ ಬಳ್ಳಿ, ನೀಲಿಗುಲಗಂಜಿ, ಕಾಡುಮಲ್ಲಿಗೆ, ಕಾಮನ ಬಿಲ್ಲು ಬಳ್ಳಿ, (ಬಿ. ಎಸ್. ಸೋಮಶೇಖರ್, ಧರಣಿಮಂಡಲ: ಸಂಪುಟ – ೩, ಜೂನ್ ೨೦೧೨).

ಉಡುಪಿ ಜಿಲ್ಲೆಯ ಭತ್ತದ ತಳಿಗಳು ಹೆಸರು

ಕುತ್ತುಂಬ್ರಿ, ದೊಡ್ಡರಾಯ, ಕಾಪುಕಜೆ, ಕನ್ನೆಜೀರ‍್ಸಾಲಿ, ಜೀರ‍್ಸಾಲಿ, ದಬ್ಬಣಸಾಲೆ, ಗನ್ಸಾಲೆ, ಗುಡ್ಡಿನೆಲ್, ಗೌರಿ (ಪ್ರಾಚೀನ ತಳಿಯ ರುಚಿಕರವಾದ ಅಕ್ಕಿ), ಜೆಡ್‌ಕುಂಕುಮ, ಕರಿದಡಿ, ನೀರ್‌ದಡಿ, ಕುಟ್ಟಿ, ನೀರಬಂಡಿ, ಕಣ್ವ, ಹಳ್ಗ, ಹುಂಡಾಬಟ್ಟ್, ಇತ್ಯಾದಿ.

ತುಮಕೂರು ಜಿಲ್ಲೆಯಲ್ಲಿ ಸುಮಾರು ನೂರಿಪ್ಪತ್ತಕ್ಕೂ ಹೆಚ್ಚಿನ ಭತ್ತದ ತಳಿಗಳನ್ನು ಗುರುತಿಸಲಾಗಿದೆ: ದೇವಮಲ್ಲಿಗೆ, ಜೀರಿಗೆಸಣ್ಣ, ದೊಡ್ಡಬೈರನೆಲ್ಲು, ಬಿಳಿನೆಲ್ಲು, ಕೆಂಪದೊಡ್ಡಿ, ಮಾಲ್ಗೂಡಿ ಸಣ್ಣ, ಕರಿಗೆ ಜವಲ್ಲಿ, ಕರಿಕಳವೆ, ಕರಿಜಡ್ಡು, ಹುಣಿಹೂವಿನ ಭತ್ತ, ಪರಿಮಳಸಣ್ಣ, ಕಾಗಿಸಾಲಿ (ಬಾಣಂತಿಭತ್ತ), ಘಂಸಾಲೆ, ಬಂಗಾರ ಸಣ್ಣ, ಕಿಚಡಿಸಾಂಬ, ನಾಗಭತ್ತ, ರಾಜಬೋಗ, ರಾಜಮುಡಿ, ನಾರಿಕೇಳ, ಮುಕ್ಕಣ್ಣ ಸಣ್ಣ, ಶಂಕರ, ಮೈಸೂರು ಮಲ್ಲಿಗೆ, ಜೇನುಗೂಡು, ರತ್ನಚೂಡಿ, ನೆಟ್ಟಿಭತ್ತ, ಮುರದದೊಡ್ಡಿಗ್ಯಾ, ಹಳಗ, ಜೋಳಗ, ಪತ್ತೇರ, ಕದೆಗ್ಗ, ಸುಕುವ, ಮಟಳಗ, ಸಿದ್ಧಸಣ್ಣ, ಮೀಸೆಭತ್ತ, ಮರಭತ್ತ, ನವರ ಇತ್ಯಾದಿ.

ಬೀದರ ಜಿಲ್ಲೆಯ ಜೋಳದ ವಿಧಗಳು

ಹಜ್ವಾಳ (ಹಳದಿ ಬಣ್ಣದ ಜೋಳ), ಕೆಂಜ್ವಾಳ, ಕಾಮಿಜ್ವಾಳ, ಸಕ್ರಿಜ್ವಾಳ, ಹೋಳ್ಗಿ ಜೋಳ, ಬೋಡ್ಮುರ್ಶಿ ಜೋಳ, ಡುಕ್ರಿ ಜೋಳ, ಕಣ್ಮುಚ್ಚಿ ಜೋಳ, ಕಾಡಿಗಿ ಜ್ವಾಳ, ಮೆಕ್ಕಿಜೋಳ.

ಕರಾವಳಿ ಭಾಗದಲ್ಲಿ ಮೀನುಗಾರಿಕೆ ಬಹಳ ಮುಖ್ಯ ಉದ್ಯೋಗ. ಅವರ ಆಹಾರ ಪದ್ಧತಿಯಲ್ಲಿ ಮೀನಿನ ಬಳಕೆ ಬಹು ಮುಖ್ಯ ಅಂಶ. ಹೀಗಾಗಿ ಇತರ ಪ್ರದೇಶದಲ್ಲಿ ಕಾಣಸಿಗದಷ್ಟು ಅಸಂಖ್ಯಾತವಾದ ವೈವಿಧ್ಯಮಯ ಮೀನುಗಳು ಹಾಗೂ ಪ್ರತಿಯೊಂದು ವೈವಿಧ್ಯಕ್ಕೂ ಒಂದು ಪ್ರತ್ಯೇಕ ಹೆಸರು ಇಲ್ಲಿ ಸಿಗುತ್ತದೆ. ಮೀನಿನ ಶರೀರದ ಬೇರೆ ಬೇರೆ ಭಾಗಗಳಿಗೆ, ಮೀನು ಹಿಡಿಯುವ ಬಲೆ ದೋಣಿ, ಮೀನಿನ ಸಂಸ್ಕರಣೆ .... ಇತ್ಯಾದಿಗೆ ಸಂಬಂಧಿಸಿದಂತೆ ಇಲ್ಲಿ ಸಿಗುವ ಪದಸಂಪತ್ತು ಪ್ರತ್ಯೇಕ ಅಧ್ಯಯನಕ್ಕೆ ಯೋಗ್ಯವಾದಂಥದ್ದು. ಉಡುಪಿ ಜಿಲ್ಲೆ ಪರಿಸರದಲ್ಲಿಯೇ ಸುಮಾರು ನೂರ ಇಪ್ಪತ್ತೈದಕ್ಕೂ ಹೆಚ್ಚಿನ ಮೀನುಗಳ ಹೆಸರುಗಳು ಸಂಗ್ರಹವಾಗಿವೆ. ಸಸ್ಯಗಳಿಗೆ ಅವುಗಳ ಬಾಹ್ಯ ಲಕ್ಷಣ ಗುಣಗಳನ್ನು ಆಧರಿಸಿ ಹೆಸರು ನೀಡಿದಂತೆಯೇ ಇಲ್ಲಿಯೂ ಹೆಸರುಗಳು ಆಯಾ ಮೀನಿನ ಲಕ್ಷಣ ರೂಪ, ರುಚಿ ಇತ್ಯಾದಿಯನ್ನು ಆಧರಿಸಿರುತ್ತವೆ. ಉದಾ: ಗುರ್ಕ ಎಂದರೆ ವೃತ್ತಾಕಾರದ ತುಂಬಾ ಮುಳ್ಳುಗಳಿರುವ ಮೀನು. ಬೆಣ್ಣೆಗುರ್ಕ ಎಂಬುದು ಕಡಿಮೆ ಮುಳ್ಳುಗಳಿರುವ ರುಚಿಕರವಾದ ಮೀನು, ಹಾಲ್ ಗುರ್ಕ ಎಂಬುದು ಕಡಿಮೆ ಮುಳ್ಳುಗಳಿರುವ ಹಾಗೂ ಮಕ್ಕಳಿಗೆ ಹೆಚ್ಚಾಗಿ ಕೊಡುವಂಥ ಮೀನು. ಗೆಂಟ್ಗುರ್ಕ್ ಎಂಬುದು ಮುಳ್ಳು ಹೆಚ್ಚಾಗಿರುವ ಮೀನು. ಉಚ್ಮೀನು ಎಂಬುದು ಪದೇ ಪದೇ ಮೂತ್ರ ಮಾಡಿಕೊಳ್ಳುವ ಮೀನು. ಮಕ್ಕಳಿಗೆ ಇದನ್ನು ಸುಟ್ಟು ಕೊಟ್ಟರೆ ಮಕ್ಕಳ ಮೂತ್ರ ಸಂಬಂಧಿ ರೋಗ ಖಾಯಿಲೆಗಳು ಗುಣವಾಗುತ್ತವಂತೆ.

ದಕ್ಷಿಣ ಕನ್ನಡ ಜಿಲ್ಲೆಯ ಕೆಲವು ಮೀನುಗಳು

ಅಡುಮಿನ್, ಕುಡುತಲಿ, ನೊಕ ಬಂಗ್ಡಿ, ಅಂಬರ್ಕಿ, ಹಾಂಗ್ಟಿ, ಮುರಿಯ, ಕಲ್ ಮುರಿಯ, ಕೆಂಬೇರಿ, ಮೊಳ್ಳಿ, ಮುಳ್ ಬಾಳಿ, ಗ್ಯಾದರಿ, ಮಂಗ್ಯಾ, ಉಳಿಯ್ಯಾ, ಹಕ ತೊರ್ಕೆ, ಬ್ಯಾಡನ್ ತೊರ್ಕೆ, ಚೆಟ್ಟೆಸಡಿ, ಕೊಳೆಸಡಿ, ದುರ್ಗನೆಸಡಿ, ಚೆಟ್ಲಿ, ಹಾರ್ ಚೆಟ್ಲಿ, ಮಂಡಿ ಚೆಟ್ಲಿ, ನುಜುಲು, ಅಂಜವ, ಕೋಲ್ ಕಾಂತಿ, ಚೇಳ್ ಕಾಂಡಿ, ಮುತ್ತಲಿ ಜಬ್, ಕುಂಬಾರ್ ಜಬ್, ಮಣ್ಣುಳಿಯ, ಬರ್ಗಿ, ಹಾಯ್ ಮೀನ್, ಮೇಲುವಮೀನ್, ಗೋಲಿಮೀನ್, ಹಕ್ ಮೀನ್, ಹೊಳಿಬಯ್ಲಿ, ಕಲ್ ಜಾರಿ, ಹೆಣ್ ಜಾರಿ..... ಇತ್ಯಾದಿ ೧೨೫ ಕ್ಕೂ ಹೆಚ್ಚಿನ ವಿವಿಧ ಮೀನುಗಳಿವೆ.

ಕೆಲವು ಬಲೆಗಳ ಹೆಸರುಗಳು

ಬೀಸ್ ಬಲೆ, ಹಾರ್ ಬಲೆ, ಬೀಡಿನ ಬಲೆ, ಗೋರ್ ಬಲೆ, ಮರಣ್ ಬಲೆ, ಕುಟ್ಲಿ ಬಲೆ, ಕಂಡ್ಲಿ ಬಲೆ, ಗಾಬಿಬಲೆ, ಜಾರಿಬಲೆ, ಪಟ್ಟಿ ಬಲೆ, ಕಪ್ಪಳ್ಕನ ಬಲೆ, ಬಯ್ಗಿ ಬಲೆ, ಮಾಟ್ ಬಲೆ, ಇತ್ಯಾದಿ.

ಮಂಡ್ಯ ಮೈಸೂರು ಪ್ರದೇಶದ ಕೆಲವು ರೋಗ ರುಜಿನಗಳ ಹೆಸರು

ಜ್ವರ್ಗಂಡೆ ಸಂಬಾವು, ಹಲ್ ಏರಿ, ನಂಜಾಗು, ಗೆಂಡೆ ಹೊಟ್ಟೆನೊವು, ಬೆವರ್ ಸಾಲಿ, ತುರಿಕಜ್ಜಿ, ಗಜಹುಣ್ಣು, ಮಿಜರ್ ಗಣ್ಣು, ಕೋಳಿಕಣ್ಣು, ಮಡ್ ಬೀಳದ್, ಗೊರ್ಸಾಲಿ, ಒಡ್ಲ್‌ಗೆಡ್ಡೆ, ನೀರ್ಗೋಟ್ಳೆ, ಎಸಡ್ ಬಾವು, ಅಸನಬಾವು, ಕಪಾಲುಗುರು, ಸರ್ಪಸುತ್ತು ಇತ್ಯಾದಿ.

ಕೆಲವು ಸಸ್ಯಗಳ ಹೆಸರುಗಳು ಹತ್ತಾರು ಸಂಶೋಧನೆಗಳನ್ನು ನಡೆಸುವುದಕ್ಕೆ ಸಾಮಗ್ರಿಯಾಗುತ್ತವೆ. ಉದಾ: ಗೌರಿಹೂ, ಗೌರಿಪುಷ್ಪ, ಅಗ್ನಿಶಿಖೆ ಎಂದು ಕರೆಯಲ್ಪಡುವ ಒಂದು ಪೊದೆ ಸಸ್ಯ. ಇದರ ಸಸ್ಯಶಾಸ್ತ್ರೀಯ ಹೆಸರು gloriosa superba. ತುಂಬ ವರ್ಷ ಬದುಕುವ ಔಷಧೀಯ ಗುಣವುಳ್ಳ ಈ ಸಸ್ಯ ಬಂಜೆತನ, ಗಾಯಗಳು, ಹಾವುಕಡಿತ, ಮೂತ್ರಪಿಂಡ ರೋಗ, ಗುಹ್ಯ ರೋಗಗಳು, ಸಿಡುಬು ಮುಂತಾದವುಗಳಿಗೆ ಔಷಧಿಯಾಗಿದ್ದರೆ ಅಡಿಯಿಂದ ಮುಡಿಯವರೆಗೂ ಇದು ವಿಷಯುಕ್ತವೂ ಹೌದು. ಇದರ ಯಾವುದೇ ಭಾಗವನ್ನು ಸೇವಿಸಿದರೂ ವಾಂತಿ, ಅಧಿಕರಕ್ತಸ್ರಾವ, ಕೂದಲು ಉದುರುವಿಕೆ, ಗರ್ಭಪಾತ ಮೊದಲಾದ ತೊಂದರೆಗಳಾಗುತ್ತವೆ. ಬೆಕ್ಕು , ಹಸು ಮೊದಲಾದ ಪ್ರಾಣಿಗಳಿಗೂ ಇದು ಮಾರಣಾಂತಿಕ. ಈ ಹೂವಿನ ಐದು ಎಸಳುಗಳು ಕೈ ಬೆರಳುಗಳನ್ನು ಹೋಲುವಂತಿದ್ದು ಅವು ಮುರುಟಿಕೊಂಡಿರುವ ರೀತಿ ಇವೆ. ತಾಯಿಯನ್ನು ಹೊಡೆದವನ ಕೈ ಈ ರೀತಿಯಾಗುವುದೆಂದು ಕರಾವಳಿಯ ಗ್ರಾಮೀಣ ಜನ ಹೇಳುತ್ತಾರೆ. ಆದ್ದರಿಂದಲೇ ಈ ಹೂವಿಗೆ ಅವರಿತ್ತ ಹೆಸರು: ಅಬ್ಬೆಗೆ ಬಡಿದವನ ಕೈ.

ಜನಪದರ ಪದಸೃಷ್ಟಿಯ ಕೆಲವೊಂದು ವಿದ್ಯಾಮಾನಗಳೂ ಸಹ ಅಧ್ಯಯನ ಯೋಗ್ಯವಾಗಿವೆ.

ಸಸ್ಯಗಳಿಗೆ ಹೆಸರಿಡುವಲ್ಲಿ ಜನಪದರು ಅನುಸರಿಸುವ ಕ್ರಮಗಳು ನೂರಾರು. ಬಾಹ್ಯ ಲಕ್ಷಣಗಳನ್ನು ಆಧರಿಸಿದ ಹೆಸರುಗಳು ಹೀಗಿವೆ: ಕೆಲವು ಕಳೆಗಿಡಗಳ ಹೆಸರು: ಎತ್ತಿನ ನಾಲ್ಗೆ ಕಸ, ಬೆಕ್ಕಿನ ತಡ್ಡಿನಕಸ, ಮುಟ್ಟಿದರೆಮುನಿ, ಒಳಮುಚಕ, ಹೊರಮುಚಕ, ಜಗಳಗಂಟಿಮರ, (ಕಾಂಡದ ಮೇಲೆಲ್ಲಾ ಗಂಟುಗಳಿರುವ ಮರ) ಮುಂತಾದವು.

ಗಿಡದ ಪ್ರಯೋಜನವನ್ನಾಧರಿಸಿ ತೊಟ್ಟಿಲಬಳ್ಳಿ (ಇದರ ಕಾಯಿಯನ್ನು ತರಕಾರಿಯಂತೆ ಬಳಸಿ ತಿಂದರೆ ಮಕ್ಕಳಾಗುತ್ತವೆ ಎಂಬ ನಂಬಿಕೆ), ಕದ್ದಬಸರಿಗಿಡ (ಬುಗರಿಮರ, ಇದರ ರಸಕ್ಕೆ ಗರ್ಭಪಾತ ಮಾಡಿಸುವ ಶಕ್ತಿ ಇದೆ ಎಂಬ ನಂಬಿಕೆ). ಪ್ರಯೋಜನಕ್ಕೆ ಬಾರದ ಹಸುಕರುಗಳು ಮೇಯಲಾಗದ ಒಂದು ಜಾತಿಯ ಹುಲ್ಲು ಸಸ್ಯದ ಹೆಸರು ಊರುಹಾಳುಗಿಡ (ಎಪಿಟೋರಿಯಂ).

ಅರಸು ಎಂಬ ಪದವನ್ನು ದೊರೆ ಎಂಬ ಅರ್ಥದಲ್ಲಿ ಬಳಸುತ್ತೇವೆ. ಗೌರವಯುತವಾದ ಅರ್ಥಕ್ಕಷ್ಟೇ ಈ ಪದಗಳು ಸೀಮಿತ. ಆದರೆ ಜನಪದರಲ್ಲಿ ಈ ಪದ ತುಂಬಾ ದೊಡ್ಡದಾದ, ಭಾರೀಗಾತ್ರದ ಅಥವಾ ತೀವ್ರಸ್ವರೂಪದ ಎಂಬ ಅರ್ಥದಲ್ಲಿ ಬಳಕೆಯಾಗುತ್ತದೆ. ಉದಾ: ಅರಸು ಚೇಳು = ದೊಡ್ಡಚೇಳು, ಅರಸು ಹುಣ್ಣು = ಬೆನ್ನುಫಣಿ ಅಥವಾ ಸರ್ಪಸುತ್ತು, ಅರಸು ಕುರಿ (ಕುರ) = ರಾಜ ಹುಣ್ಣು, ಅರಸು ಕುತ್ತ = ಒಂದು ರೀತಿಯ ಜಲೋದರ ರೋಗ.

ಒಂದೇ ಜಾತಿಯ ಸಸ್ಯಗಳಲ್ಲಿ ಎರಡನೇ ದರ್ಜೆಯ ಸಸ್ಯಗಳನ್ನು ಗುರುತಿಸಲು ನಾವು ನಿಕೃಷ್ಟವಾಗಿ ಬಳಸುವ ನಾಯಿ ಎಂಬ ಪದ ಸೇರ್ಪಡೆಯಾಗುವುದು ಗಮನಾರ್ಹ. ಉದಾ: ನಾಯಿ ತುಳಸಿ, ನಾಯಿ ಹಕ್ಕರಕಿ, ನಾಯಿ ನೀಲ, ನಾಯಿ ಹಂಚಿ ಹುಲ್ಲು ಇತ್ಯಾದಿ. ಇದೇ ರೀತಿ ಕೃಷಿ ಮಾಡಿರದ ತಾನೇ ತಾನಾಗಿ ಬೆಳೆದು, ಕೃಷಿ ಮಾಡಿರುವ ಸಸ್ಯಗಳೊಂದಿಗೆ ಹೋಲಿಕೆ ಪಡೆದಂಥ ಗಿಡಗಳಿಗೆ ಅಥವಾ ಪ್ರಾಣಿ ಪಕ್ಷಿಗಳಿಗೆ ಕಾಡು ಅಥವ ಅಡವಿ (wild ಎಂಬ ಅರ್ಥದಲ್ಲಿ) ಎಂಬ ಪೂರ್ವಪದ ಸೇರಿಕೊಂಡಿರುವುದು ಗಮನಿಸತಕ್ಕದ್ದಾಗಿದೆ. ಉದಾ: ಕಾಡು ದ್ರಾಕ್ಷಿಬಳ್ಳಿ, ಕಾಡುಗೇರು, ಕಾಡುಮೊಲ್ಲೆ, ಕಾಡುಕರಿಬೇವು, ಕಾಡುತೊಗರಿ, ಕಾಡುಪುದೀನ, ಕಾಡುಮೆಣಸು, ಕಾಡುತೊಂಡೆ. ಅಡವಿಉದ್ದು, ಅಡವಿಉಳ್ಳಾಗಡ್ಡಿ, ಅಡವಿಗೋರಂಟಿ, ಅಡವಿ ತಗಟೆ, ಅಡವಿ ಬೆಂಡೆ, ಅಡವಿ ಸೊಗಸಿ, ಅಡವಿ ಗುರೆಳ್ಳು, ಅಡವಿ ಕೀಚಗ, ಅಡವಿ ಗದ್ದೆಗೊರವ, ಅಡವಿನತ್ತಿಂಗ, ಅಡವಿಉಲ್ಲಂಕಿ, ಇತ್ಯಾದಿ.

ಹಲವಾರು ಹಕ್ಕಿಗಳ ಹೆಸರಿನ ಹಿಂದೆ ಯಾವುದೋ ಒಂದು ಕಥೆ ಇರುತ್ತದೆ. ಮುತ್ತಿನಶೆಟ್ಟಿ ಹಕ್ಕಿ ಇದಕ್ಕೆ ಉದಾಹರಣೆ. ಮುತ್ತಿನ ವ್ಯಾಪಾರಿಯೊಬ್ಬ ಆಯಾಸದಿಂದ ಮರದ ಕೆಳಗೆ ಮಲಗಿದ್ದನಂತೆ. ನೆರೆ ಉಕ್ಕಿಬಂದಾಗ ಈ ಹಕ್ಕಿ ಕೂಗಿ ಅವನನ್ನು ಎಚ್ಚರಿಸಿತಂತೆ. ಅವನು ಕೃತಜ್ಞತೆಯಿಂದ ಅದಕ್ಕೆ ಮುತ್ತಿನ ಹಾರ ತೊಡಿಸಿದನಂತೆ. ಈ ಹಕ್ಕಿಯ ಕುತ್ತಿಗೆಯ ಸುತ್ತ ಮುತ್ತಿನ

ಸರದಂಥ ಗುರುತು ಇದೆ. ಈ ಹಿನ್ನೆಲೆಯಲ್ಲಿ ಅದಕ್ಕೆ ಮುತ್ತಿನಶೆಟ್ಟಿ ಹಕ್ಕಿ ಎಂಬ ಹೆಸರು ಬಂತು ಎಂದು ಜನಪದರು ಹೇಳುತ್ತಾರೆ. ಕೆಲವು ಪದಗಳಿಗೂ ಅವುಗಳು ಸೂಚಿಸುವ ಅರ್ಥಕ್ಕೂ ಸಂಬಂಧವೇ ಹೊಳೆಯುವುದಿಲ್ಲ. ಕಂಗೆಡಿಸುವ ಇಂಥ ಪದಗಳೂ ಸಾಕಷ್ಟು ಇವೆ. ಅಣಿಮರ ಎಂಬ ಶಬ್ದ ಕೇಳಿದೊಡನೆ ಇದು ಯಾವುದೋ ಮರದ ಹೆಸರಿರಬೇಕು ಅನಿಸುತ್ತದೆ. ಆದರೆ ಇದು ರಾಗಿ ಮೆದೆಹಾಕಲು ಕಲ್ಲಿನ ಮೇಲಿಡುವ ಕೊರಡು ಅಥವಾ ಮರದ ತುಂಡು. ಉಪ್ಪಿನ ಬಸವ ಎಂಬುದು ಹೊಟ್ಟೆನೋವು ಬಂದಾಗ ಮಾಡುವ ಔಷಧಿಯ ಹೆಸರು. ಉರುಡು ಮರ ಎಂದರೆ ಕಂಬಳಿ ನೆಯ್ಗೆಯಲ್ಲಿ ನೆಲದ ಮೇಲೆ ಹಾಕಿಕೊಂಡಿರುವ ಮರದ ಪಟ್ಟಿ. ಉರಿಗೆಜ್ಜೆ ಎಂದರೆ ಆಲೆಮನೆಯಲ್ಲಿ ಬೆಲ್ಲದ ಪಾಕ ಹದಕ್ಕೆ ಬಂದಾಗ ಸಣ್ಣ ಸಣ್ಣ ಗೆಜ್ಜೆಗಳಂತೆ ಕಾಣಿಸುವ ಗುಳ್ಳೆಗಳು. ದಕ್ಷಿಣ ಕನ್ನಡದಲ್ಲಿ ಹಾಲುನುಂಗದ್ ಎಂದರೆ ಭತ್ತದ ಕಾಳು ಗಟ್ಟಿಯಾಗುವ ಮುಂಚಿನ ಸ್ಥಿತಿ. ಮದುಮಗ್ಳಅರಿ ಎಂದರೆ ಭತ್ತವನ್ನು ಕಟಾವು ಮಾಡಿ ಒಣಗಿಸಿದ ನಂತರ ಹೊರೆಯಾಗಿ ಕಟ್ಟುವ ಮೊದಲ ಕಟ್ಟು. ಒರ್ಲ್ ಕೊಟಿಗಿ (ಒರಳುಗಳ ಕೊಟ್ಟಿಗೆ) ಎಂದರೆ ಭತ್ತ ಕುಟ್ಟುವ ಒರಳುಗಳಿರುವ ಸ್ಥಳ. ಗಡ್ಡಹಣ್ಣಾಪುದು ಎಂದರೆ ಪ್ರಾಯಕ್ಕೆ ಬರುವುದು. ಹೆಣ್ಣಾಗುವುದು ಎಂದರೆ ಹೆಣ್ತನ ಪ್ರಾಪ್ತಿಯಾಗುವುದು ಅಜ್ಜಿ ಮೂಗು ಎಂದರೆ ಮೂಗಿನ ಹೊಳ್ಳೆಗಳನ್ನು ವಿಭಾಗಿಸುವ ತೆಳುವಾದ ಅಸ್ಥಿಪಟಲ. ಬೀದರ್ ಪರಿಸರದಲ್ಲಿ ಎದ್ಯಾಗ ಮೀಸಿ ಅವ ಎಂದರೆ ಹೆಣ್ಣೊಬ್ಬಳು ಹೆಣ್ಣಾದರೂ ನಾನು ಧೈರ್ಯವಂತೆ ಎಂದು ಹೇಳಿಕೊಳ್ಳುವ ರೀತಿ. ನಾಯಿನಾಲ್ಗಿ ಎಂದರೆ ಎರೆಹುಳ. ಅಂಬಾಬಾಯಿ ಕುದ್ರಿ ಎಂದರೆ ದೇವಿ ಅಂಬಾಭವಾನಿಯು ಆವಾಹನೆಯಾಗುವ ವ್ಯಕ್ತಿ. ದಕ್ಷಿಣ ಕರ್ನಾಟಕದಲ್ಲಿ ಎಕ್ಕದ ಬೀಜಕ್ಕೆ ಅಜ್ಜಿ ಕೂದಲು ಎಂಬ ಹೆಸರಿದೆ. ಬೂರುಗದ ಹತ್ತಿಗೆ ಅಜ್ಜನ ಮೀಸೆ ಎಂಬ ಹೆಸರು.

ಕೆಲವೊಂದು ವಿಷಯಗಳನ್ನು ನೇರವಾದ ಶಬ್ದಗಳಲ್ಲಿ ಹೇಳಬಾರದು ಎಂಬುದು ಜನಪದರ ನಂಬಿಕೆ. ಅಂಥ ಪದಗಳಿಗೆ ಪರ್ಯಾಯವಾಗಿ ಬಳಸುವ ಪದಗಳು ಜಾನಪದ ನಿಘಂಟಿನಲ್ಲಿ ಕಂಡುಬರುತ್ತವೆ. ಹೀಗೆ ಗಿಡ ಮೂಲಿಕೆಗಳ ವಿಷಯದಲ್ಲಿ ಬೇವಿನ ಸೊಪ್ಪು ಎಂಬುದಕ್ಕೆ ದೊಡ್ಡಪತ್ರೆ; ಕರಿಗಣಿಕೆ, ಕೆಂಪುಗಣಲೆಗಳಿಗೆ ಹೆಬ್ಬುಲಿ, ಕಿರುಬಲಿ ಎಂಬ ಹೆಸರುಗಳು; ಹೆಂಡ ಅಥವಾ ಸೇಂದಿಗೆ ದೊಡ್ಡಮರದ ಹಾಲು ಎಂಬ ಪದ; ಒಳ್ಳೇದು ಎಂಬುದು ಮಲೆನಾಡಿನಲ್ಲಿ ನಾಗರಹಾವಿಗೆ ಪರ್ಯಾಯವಾಗಿ ಬಳಸುವ ಪದ.

ಹೊತ್ತುಗಳನ್ನು ತಿಳಿಸುವುದಕ್ಕಾಗಿ ಬಳಸುವ ಪದಗಳೂ ಸಹ ತುಂಬ ವಿಶಿಷ್ಟ. ಒಂದು ಜಾವ ಎರಡು ಜಾವ, ಘಳಿಗೆ, ಚಣ, ಎವೆ, ತುಸುಹೊತ್ತು, ಮೊದಲ ಕೋಳಿಕೂಗೋ ಹೊತ್ತು, ಮೂಡ್ಲು ಕೆಂಪಾಗುವ ಹೊತ್ತು, ನಸುಕು ಕರಗುವ ಹೊತ್ತು, ಒಂದಾಳುದ್ದ ಹೊತ್ತು, ಎರಡಾಳುದ್ದ ಹೊತ್ತು, ಏರ್ಹೊತ್ತು, ನೆತ್ತಿಹೊತ್ತು, ಇಳಿಹೊತ್ತು ಎಂಬುವು ಸೂರ್ಯನ ಚಲನೆಯನ್ನು ಆಧರಿಸಿ ಹೇಳುವ ಹೊತ್ತುಗಳು; ಬೆಳ್ಳಿಮುಳುಗೋ ಹೊತ್ತು, ಕೂರಿಗೆದಾಳು ಹುಟ್ಟೋ ಹುತ್ತು, ಕೋಳಿಮರಿ ಹುಟ್ಟೋ ಹುತ್ತು, ಅಜ್ಜಿ ಮಂಚ ಮುಳುಗೋ ಹೊತ್ತು ಎಂದು ಆಕಾಶದನಕ್ಷತ್ರ ಮಂಡಲದ ಆಗು ಹೋಗುಗಳನ್ನನುಸರಿಸಿ ಕಾಲ ನಿರ್ದೇಶನ ಮಾಡುತ್ತಾರೆ; ಹೀಗೆಯೇ ಸೂರ್ಯಮುಳುಗುವ ಮೊದಲ ಅವಧಿಯನ್ನು ಚುಕ್ಕೆ ಮುಳುಗೋ ಹೊತ್ತು, ನಂತರ ಕುರಿ ಮೇಕೆ ಬಿಡೊ ಹೊತ್ತು, ಹಿಟ್ಟಿನೊತ್ತು, ಆರು ಬಿಡೋ ಹೊತ್ತು, ಎಡಾಗಲು ಹಟ್ಟಿಗೆ ಬರೋ ಹೊತ್ತು, ದನ ಬರೋ ಹೊತ್ತು, ದೀಪ ಹಚ್ಚೋ ಹೊತ್ತು, ಉಣ್ಣೋ ಹೊತ್ತು, ದೀಪ ತುಂಬೋ ಹೊತ್ತು; ಅರ್ಧ ರಾತ್ರಿಗೆ ಸರ್ಹೊತ್ತು, ನಂತರದ ಅವಧಿಗೆ ಕಲ್ಲು ನೀರು ಕರಗೋ ಹೊತ್ತು, ದೆವ್ವ ತಿನ್ನೋ ಹೊತ್ತು....... ಇತ್ಯಾದಿ ("ಹಳ್ಳಿಗರ ಲೆಕ್ಕಚಾರ ಒಂದು ವಿಶಿಷ್ಟ ಪ್ರಪಂಚ" ಶ್ರೀಕಂಠಕೂಡಿಗೆ).

ಮಲೆನಾಡಿನಲ್ಲಿ ವಿವಿಧ ಪ್ರಮಾಣದ ಮಳೆಯನ್ನು ಸೂಚಿಸುವ ಪದಗಳು : ಧೂಳಡಗೋಮಳೆ, ಹನಿಮಳೆ, ಹದಮಳೆ, ಜಡಿಮಳೆ, ಸೋನೆಮಳೆ, ಬಟ್ಟೆಹದ, ಕಂಬಳಿಹದ, ದೋಣಿಹದ, ಉಕ್ಕೆಹದ, ಬಿತ್ತನೆಹದ, ಮಾರಿಮಳೆ, ದೆವ್ವಮಳೆ,...........ಇತ್ಯಾದಿ. ಈ ಪದಗಳು ಪ್ರದೇಶದಿಂದ ಪ್ರದೇಶಕ್ಕೆ ಭಿನ್ನ.

ಸಾಸಿವೆ ಗಾತ್ರದಿಂದ ಹಿಡಿದು ಆನೆಗಾತ್ರದವರೆಗೂ ಸೂಚಿಸುವ ಬೇರೆ ಬೇರೆಯೇ ಪದಗಳಿವೆ. ದಪ್ಪವನ್ನು ಹೇಳಲು ಕಿರು ಬೆರಳುಗಾತ್ರ, ಹೆಬ್ಬೆಟ್ಟುಗಾತ್ರ, ರಟ್ಟೆಗಾತ್ರ ಇತ್ಯಾದಿ; ಉದ್ದವನ್ನು ಹೇಳಲು ಮೊಳದುದ್ದ, ಮಾರುದ್ದ, ಚೋಟುದ್ದ; ಅಗಲವನ್ನು ಹೇಳಲು ಬೆಟ್ಟಗಲ ಎರಡು ಬೆಟ್ಟಗಲ...... ದೂರವನ್ನು ಹೇಳಲು ಹತ್ತೆಜ್ಜೆ, ಕೂಗಳತೆ, ಕಣ್ಣಳತೆ ಇತ್ಯಾದಿ.

ದೇವ ದೇವತೆಗಳಿಗೆ ಇಡುವ ಹೆಸರುಗಳು ಗಮನ ಸೆಳೆಯುವಂಥವು. ದಕ್ಷಿಣ ಕನ್ನಡದಲ್ಲಿ ಮೂಡ್ಲಾಯ ದೇವ್ರು ಎಂದರೆ ತಿರುಪತಿವೆಂಕಟರಮಣ, ತೆಂಕ್ಲಾಯದೇವ್ರು ಎಂದರೆ ಧರ್ಮಸ್ಥಳದ ಮಂಜುನಾಥ ಸ್ವಾಮಿ, ಸೂಲಿಯಮ್ಮ ಎಂದರೆ

ತ್ರಿಶೂಲ ಹಿಡಿದ ಕಾಳಿಕಾದೇವಿ. ಉತ್ತರ ಕನ್ನಡ ಜಿಲ್ಲೆಯ ಕೆಲವು ವಿಶಿಷ್ಟ ಭೂತ, ದೈವಗಳ ಹೆಸರು ಒಮ್ಮೊಲತಿ, ಇಮ್ಮೊಲತಿ, ಮುಮ್ಮೊಲತಿ; ಅಂದರೆ ಅನುಕ್ರಮವಾಗಿ ಒಂದು ಮೊಲೆಯವಳು, ಎರಡು ಮೊಲೆಯವಳು, ಮೂರು ಮೊಲೆಯವಳು. ದುರಂತ ಸಾವನ್ನಪ್ಪಿದ ಸ್ತ್ರೀಯರು ಈ ಹೆಸರಿನ ದೈವಗಳಾಗಿದ್ದು ಇವು ಕೇಡು ಮಾಡಿದವರನ್ನು ಮೊಲೆಯಿಂದಲೇ ಬಡಿದು ಕೊಲ್ಲುತ್ತಾರಂತೆ (ಗೌರೀಶ ಕಾಯ್ಕಿಣಿ, ಜನಪದ ಸಾಹಿತ್ಯದರ್ಶನ ಸಂ – ೪, ೧೯೮೦).

ದಕ್ಷಿಣ ಕನ್ನಡದಲ್ಲಿ ಕೆಳ ವರ್ಗಗಳವರು, ಮಕ್ಕಳಿಗೆ ಅವರು ಹುಟ್ಟಿದ ವಾರವನ್ನು ಆಧರಿಸಿ ಆಯಾ ವಾರದ ಹೆಸರಿಡುವ ವಿಶಿಷ್ಟ ಪದ್ಧತಿಯು ಅಧ್ಯಯನ ಯೋಗ್ಯವಾಗಿದೆ. ವಾರದ ಏಳು ದಿನಗಳ ಹೆಸರಿಗೆ ಅನುಗುಣವಾಗಿ ಚೋಮ (ಸೋಮ), ಅಂಗ್ರ (ಮಂಗಳ), ಬೂದ (ಬುಧವಾರ), ಗುರುವ (ಗುರುವಾರ), ತುಕ್ರ (ಶುಕ್ರವಾರ), ತನಿಯ (ಶನಿವಾರ), ಐತ (ಆದಿತ್ಯವಾರ) ಎಂಬ ಹೆಸರುಗಳನ್ನಿಡುತ್ತಾರೆ. ಇನ್ನಿತರ ಪ್ರದೇಶಗಳಲ್ಲಿ ಸಾಕಮ್ಮ, ಸಾಕಪ್ಪ ಇಂಥ ಕೆಲವು ಹೆಸರುಗಳು ಗಮನಿಸತಕ್ಕವು. ಹೆಚ್ಚು ಮಕ್ಕಳಾದರೆ ಇನ್ನು ಸಾಕು ಎಂಬ ಅರ್ಥದಲ್ಲಿ ಸಾಕಮ್ಮ, ಸಾಕಪ್ಪ ಎಂಬ ಹೆಸರಿಡುವ ಪದ್ಧತಿ ಚಿತ್ರದುರ್ಗ ಜಿಲ್ಲೆಯಲ್ಲಿದೆ. ಹೀಗೆ ಜಾನಪದೀಯ ಹಿನ್ನೆಲೆಯಿರುವ ಅಂಕಿತನಾಮಗಳು ಈ ನಿಘಂಟಿಗೆ ಸೇರ್ಪಡೆಯಾಗುತ್ತವೆ ಮತ್ತು ಹೆಚ್ಚಿನ ಅಧ್ಯಯನಗಳಿಗೆ ಸಾಮಗ್ರಿಯಾಗುತ್ತವೆ.

ಉತ್ತರ ಕರ್ನಾಟಕದಲ್ಲಿ ಪ್ರತಿಯೊಂದು ಅಮಾವಾಸ್ಯೆ ಹಾಗೂ ಪ್ರತಿಯೊಂದು ಹುಣ್ಣಿಮೆಗೂ ಪ್ರತ್ಯೇಕ ಹೆಸರಿದೆ. ಉಗಾದಿ ಅಮಾಸೆ, ಅಗತಾದಿ ಅಮಾಸಿ, ಬಾದಾಮಿ ಅಮಾಸಿ, ಮಣ್ಣೆತ್ತಿನ ಅಮಾಸಿ, ನಾಗರಮಾಸಿ, ಚೌತಿಅಮಾಸಿ, ದಸರಿ ಅಮಾಸಿ, ದೀವಳಿಗಿ ಅಮಾಸಿ, ಚಟ್ಟಿ ಅಮಾಸಿ, ಎಳ್ಳಮಾಸಿ, ಶಿವರಾತ್ರಿ ಅಮಾಸಿ. ಹೀಗೆಯೇ ವಿವಿಧ ಹುಣ್ಣಿಮೆಗಳು: ಶೀಗಿ ಹುಣ್ಣಿಮೆ, ಭರತ ಹುಣ್ಣಿಮೆ, ಗೌರಿ ಹುಣ್ಣಿಮೆ, ಜೋಕುಮಾರನ ಹುಣ್ಣಿಮೆ, ಕಾಮನ ಹುಣ್ಣಿಮೆ, ಹೋಳಿ ಹುಣ್ಣಿಮೆ, ಬನದ ಹುಣ್ಣಿಮೆ, ದವನದ ಹುಣ್ಣಿಮೆ, ಕೊಟ್ಲಿ ಹುಣ್ಣಿಮೆ (ಆಷಾಡಹುಣ್ಣಿಮೆ) ಇತ್ಯಾದಿ.

ವಿವಿಧ ಬಗೆಯ ಸಸ್ಯಗಳ ಗುಣಲಕ್ಷಣಗಳು ಪ್ರಯೋಜನಗಳು ಪ್ರಭೇದಗಳು ಪ್ರಾದೇಶಿಕ ಪ್ರಸರಣ ಮುಂತಾದ ಮಾಹಿತಿಗೆ ಈ ನಿಘಂಟು ಆಕರವಾಗುತ್ತವೆ.

ಆಧುನಿಕತೆಯ ಕಾರಣದಿಂದಾಗಿ ಸಸ್ಯ ಪ್ರಪಂಚದ ಮೇಲೆ ಆಗಿರುವ ವಿನಾಶಕಾರಿ ಪರಿಣಾಮಕ್ಕೂ ಈ ನಿಘಂಟು ಕನ್ನಡಿ ಹಿಡಿಯುತ್ತದೆ. ನಮ್ಮಲ್ಲಿ ಎಷ್ಟೆಲ್ಲ ಸಸ್ಯ ಪ್ರಭೇಧಗಳಿದ್ದವು, ಆಹಾರ ಧಾನ್ಯಗಳ ತಳಿಗಳಿದ್ದವು, ಅವುಗಳ ವೈಶಿಷ್ಟ್ಯವೆಂಥದ್ದು, ವಿವಿಧ ವರ್ಗದ ಸಸ್ಯಗಳು ಮನುಷ್ಯರ ಬದುಕಿನಲ್ಲಿ ಬಳಕೆಯಾಗುತ್ತಿದ್ದ ರೀತಿ, ಮರೆತೇ ಹೋಗಿರುವ ಮತ್ತು ಭೂಮಿಯಿಂದಲೇ ಕಣ್ಮರೆಯಾಗಿರುವ ಅಪೂರ್ವ ಸಸ್ಯಗಳ ಮಾಹಿತಿಯನ್ನು ಈ ನಿಘಂಟಿನ ಮೂಲಕ ಪಡೆದುಕೊಳ್ಳಬಹುದಾಗಿದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲ ಅತಿಕಾರೆ ಎಂಬ ಭತ್ತದ ತಳಿ ಇದೆ. ಸುಗ್ಗಿಯಲ್ಲಿ ಮಾತ್ರ ಬೆಳೆಯುವ ಈ ಭತ್ತದ ಬಗ್ಗೆ ಅದು ಸೃಷ್ಟಿಯ ಉಗಮದೊಂದಿಗೆ ಬಂದ ಸತ್ಯದ ಬೆಳೆ ಎಂಬ ನಂಬಿಕೆ ಇದೆ. ಪ್ರಳಯವಾದರೂ ಈ ಬೆಳೆ ಅಳಿಯದೆ ಉಳಿಯಬೇಕೆಂದು ದೇವಸ್ಥಾನದ ಗರುಡಗಂಭದ ತುದಿಯಲ್ಲಿ ಇದನ್ನು ರಕ್ಷಿಸಿಡುವ ಪದ್ಧತಿ ಇತ್ತಂತೆ.

ಭಾಷಾ ಶಾಸ್ತ್ರೀಯ ಅಧ್ಯಯನಗಳಿಗೆ ಇದು ಅಪೂರ್ವವಾದ ಮಾಹಿತಿಯ ಆಗರ. ಧ್ವನಿ ವ್ಯತ್ಯಾಸ, ಅಕ್ಷರ ಪಲ್ಲಟಗಳು, ಪ್ರಾದೇಶಿಕವಾಗಿ ಆಗುವ ವ್ಯತ್ಯಾಸಗಳು, ಆಡು ಭಾಷೆಯ ಕಾರಣದಿಂದಾಗಿ ರೂಪುಗೊಳ್ಳುವ ಭಿನ್ನರೂಪಗಳು, ಶಬ್ದವೊಂದು ಕಾಲಾಂತರದಲ್ಲಿ ಪಡೆದುಕೊಳ್ಳುವ ರೂಪಗಳು, ಆ ಮೂಲಕ ಶಬ್ದದ ಇತಿಹಾಸ, ಪದಗಳು ಹುಟ್ಟಿಕೊಳ್ಳುವ ರೀತಿ ಮೊದಲಾದ ಅನೇಕ ಅಂಶಗಳ ಕಡೆ ಈ ಮಾಹಿತಿಯ ಆಧಾರದಿಂದ ಬೆಳಕು ಚೆಲ್ಲಬಹುದಾಗಿದೆ. ನಮ್ಮ ಜನರು ತಲೆಮಾರುಗಳಿಂದ ಬಳಸಿಕೊಂಡು ಬರುತ್ತಿದ್ದ ಎಷ್ಟೋ ಅಚ್ಚಗನ್ನಡ ಶಬ್ದಗಳು ಇಲ್ಲಿ ದೊರೆಯುತ್ತವೆ. ಇದು ನಮ್ಮ ಶಬ್ದಭಂಡಾರಕ್ಕೆ ಬಹು ದೊಡ್ಡ ಕೊಡುಗೆ.

ಅನೇಕ ಮೂಲ ದ್ರಾವಿಡ ಪದಗಳು ಜನಪದರ ಮಾತಿನಲ್ಲಿ ಉಳಿದುಕೊಂಡಿರುವುದು ಗಮನ ಸೆಳೆಯುವ ಸಂಗತಿ. ವಿಶೇಷವಾಗಿ ತುಳುನಾಡಿನ ಪರಿಸರ, ಹವ್ಯಕ ಹಾಗೂ ಕುಂದಾಪುರ ಕನ್ನಡ, ಉತ್ತರ ಕನ್ನಡ ಜಿಲ್ಲೆಗಳಲ್ಲಿ ಇವು ಹೆಚ್ಚು ಕಾಣಸಿಗುತ್ತವೆ. ಇದೇ ರೀತಿ ಉತ್ತರ ಕರ್ನಾಟಕದ ಭಾಷೆಯಲ್ಲಿ ಶಾಸನ ಹಾಗೂ ಸಾಹಿತ್ಯ ಕೃತಿಗಳಲ್ಲಿ ಮಾತ್ರ ಕಾಣಸಿಗುತ್ತಿದ್ದ ಪದಗಳು ಉಳಿದಿವೆ. ವಿಶೇಷವಾಗಿ ಗಿದ್ದನ, ಅದ್ನ ಮೊದಲಾದ ಅಳತೆಯ ಮಾನಗಳು ಅಲ್ಲಿ ಜೀವಂತವಾಗಿವೆ. ತುಳು, ತೆಲುಗು, ಕನ್ನಡ, ತಮಿಳು ಮೊದಲಾದ ಸೋದರ ಭಾಷೆಗಳ ನಡುವಿನ ಸಂಬಂಧವನ್ನು ನೆನಪಿಸುವಂಥ ಅನೇಕ ಶಬ್ದಗಳು ಜಾನಪದ ಭಾಷೆಯಲ್ಲಿ ಉಳಿದುಕೊಂಡಿವೆ.

ಜನಪದದ ಕೆಲವೊಂದು ನಂಬಿಕೆ ಆಚರಣೆಗಳಲ್ಲಿರುವ ಜ್ಞಾನ ಅರಿವಿನ ಅಂಶಗಳು ಬೆರಗುಗೊಳಿಸುವಂಥವು. ಉದಾಹರಣೆಗೆ: ಹಿಂದೂ ಪಂಚಾಂಗದ ಕರ್ಕಾಟಕ ರಾಶಿಯ ತಿಂಗಳನ್ನು ಕೊಡವರು ಕಕ್ಕಡ ತಿಂಗಳು ಎನ್ನುತ್ತಾರೆ. ಈ ತಿಂಗಳಲ್ಲಿ ಕಕ್ಕಡ (ವ್ಯಾನಾಡೆನ್ಸಿಸ್ ಹೈನೆ) ಎಂಬ ಪೊದೆ ಸಸ್ಯದ ಸೊಪ್ಪಿನ ರಸವನ್ನು ಪಾಯಸ ಇಲ್ಲವೆ ಲೇಹ್ಯ ಮಾಡಿ ಊಟದೊಂದಿಗೆ ಸೇವಿಸುವ ಪದ್ಧತಿ ಇದೆ. ಕಕ್ಕಡ ಸೊಪ್ಪಿಗೆ ಇತರ ಭಾಗಗಳಲ್ಲಿ ಆಟಿಸೊಪ್ಪು ಎಂಬ ಹೆಸರಿದೆ. ಆಟಿ ತಿಂಗಳಲ್ಲಿ ಈ ಸೊಪ್ಪಿನ ರಸವನ್ನು ಈ ಭಾಗಗಳವರು ವಿಧ್ಯುಕ್ತವಾಗಿ ಸೇವಿಸುತ್ತಾರೆ. ಕೊಡವರ ನಂಬಿಕೆಯಂತೆ ಕಕ್ಕಡ ತಿಂಗಳಿನಲ್ಲಿ ಈ ಸೊಪ್ಪಿಗೆ ನಿತ್ಯ ಒಂದೊಂದು ವಿಧದ ಔಷಧೀಯ ಸತ್ವಗಳು ಸೇರುತ್ತವೆಯಂತೆ, ಹೀಗಾಗಿ ಕಕ್ಕಡ ತಿಂಗಳ ೧೮ನೇ ದಿನದಂದು ಈ ಸೊಪ್ಪಿನ ರಸವನ್ನು ವಿಧ್ಯುಕ್ತವಾಗಿ ಸೇವಿಸುವ ಆಚರಣೆ ಅವರಲ್ಲಿದೆ. ಇದು ನಿಜಕ್ಕೂ ಸಸ್ಯ ಶಾಸ್ತ್ರ ಹಾಗೂ ವೈದ್ಯಕೀಯ ಸಂಶೋಧನೆಗಳಿಗೆ ಅಪೂರ್ವವಾದ ಮಾಹಿತಿ. ಕರಾವಳಿಯ ತುಳು ಸಂಸ್ಕೃತಿಯಲ್ಲಿ ಆಷಾಢದಂದು ಸಾಮೂಹಿಕವಾಗಿ ಆಟಿಮದ್ದನ್ನು ಅಂದರೆ ಹಾಲೆ ಮರದ ಹಾಲನ್ನು ಕುಡಿಯುತ್ತಾರೆ. ಅಮಾವಾಸ್ಯೆಯ ರಾತ್ರಿ ಬೆಳಕು ಮೂಡುವ ಮೊದಲೇ ಬೆತ್ತಲೆಯಾಗಿ ಹಾಲೆ ಮರದ ಬಳಿ ಬಂದು ಮರಕ್ಕೆ ಮೂರು ಸುತ್ತುಹಾಕಿ ಹಾಲೆ ಮರದ ತೊಗಟೆಯನ್ನು ಕಲ್ಲಿನಿಂದ ಕೆತ್ತಿ ತೆಗೆಯುತ್ತಾರೆ. ಈ ತೊಗಟೆಯನ್ನು ಜಜ್ಜಿ ರಸತೆಗೆದು ಬೆಳ್ಳುಳ್ಳಿ ಮೆಣಸು ಬೆರೆಸಿ, ಬೆಣಚು ಕಲ್ಲನ್ನು ಒಲೆಗೆ ಹಾಕಿ ಚೆನ್ನಾಗಿ ಕಾಯಿಸಿ ಈ ರಸಕ್ಕೆ ಅದನ್ನು ಹಾಕುತ್ತಾರೆ. ನಂತರ ಖಾಲಿ ಹೊಟ್ಟೆಗೆ ಎಲ್ಲರೂ ಕುಡಿಯುತ್ತಾರೆ. ಈ ಮದ್ದು ರೋಗನಿರೋಧಕ ಶಕ್ತಿ ಹೆಚ್ಚಿಸುತ್ತದೆ. ಚರ್ಮವ್ಯಾಧಿ, ಬಾಣಂತಿಸಮಸ್ಯೆ, ಜ್ವರ, ಕೆಮ್ಮು ದಮ್ಮು ಬಾಯಿಹುಣ್ಣಿಗೆ ಒಳ್ಳೆಯದು.

ನಮ್ಮ ಪರಿಸರದ ವಸ್ತುಗಳನ್ನೇ ಜನಪದರು ತಮ್ಮ ಆಚರಣೆಗಳಲ್ಲಿ, ನಂಬಿಕೆಗಳಲ್ಲಿ, ನಿತ್ಯ ಬದುಕಿನಲ್ಲಿ ಅಳವಡಿಸಿಕೊಂಡು ಪರಂಪರಾಗತ ಜ್ಞಾನವನ್ನು ಉಳಿಸಿಕೊಂಡು ಬಂದಿದ್ದಾರೆ. ನಿಘಂಟಿನಲ್ಲಿ ದಾಖಲಾಗುವ ಮಾಹಿತಿ ಇಂಥ ವಿಷಯಗಳ ಹೆಚ್ಚಿನ ಸಂಶೋಧನೆಗಳಿಗೆ ಎಡೆಮಾಡಿಕೊಡಬಲ್ಲದು. ಉದಾಹರಣೆಗೆ ಜೆಮಿ ಎಂದರೆ ದಕ್ಷಿಣ ಕನ್ನಡದಲ್ಲಿ ಹಂದಿಯ ರೋಮ. ಆದರೆ ಇದಿಷ್ಟೇ ಅಲ್ಲ ಹಿಂದಿನ ಕಾಲದಲ್ಲಿ ಚಿನ್ನವನ್ನು ತೊಳೆಯಲು ಈ ರೋಮವು ಬಳಕೆಯಾಗುತ್ತಿತ್ತು ಎಂಬ ವಿವರ ಸಂಶೊಧನೆಯ ಬಾಗಿಲನ್ನೇ ತೆರೆಯುತ್ತದೆ.

ಮನುಷ್ಯರ ಬದುಕಿನ ಕಾಲಮಾನದಲ್ಲಿ ಆಗಿಹೋದ ಎಷ್ಟೋ ಘಟನೆಗಳತ್ತ ಇಲ್ಲಿನ ಪದಗಳು ಬೆಳಕು ಚೆಲ್ಲುತ್ತವೆ. ಇದಕ್ಕೆ ಉತ್ತರ ಕರ್ನಾಟಕದಲ್ಲಿ ಆಗಿಹೋದ ಭೀಕರ ಬರಗಾಲಗಳ ಹೆಸರುಗಳನ್ನು ನೋಡಬಹುದು: ಡೋಗಿಬರ, ಹಸಿಡೋಗಿಬರ, ಸಜ್ಜೆಬರ, ಜೋಳದಬರ ಇತ್ಯಾದಿ.

ಒಟ್ಟಿನಲ್ಲಿ ಕಾಲಕ್ರಮೇಣ ಅಳಿದುಹೋಗುತ್ತಿರುವ ಒಂದು ವಿಶಿಷ್ಟ ತಿಳಿವಿನ ಭಂಡಾರವನ್ನು ಕಾಪಾಡಿಕೊಂಡು ಬರುವಲ್ಲಿ ಇಂಥ ನಿಘಂಟುಗಳ ಕೊಡುಗೆ ಎಷ್ಟೆಂದು ವಿವರಿಸಬೇಕಿಲ್ಲ.

ಜಾನಪದಾಸಕ್ತರಿಗೆ ಮಾತ್ರ ಈ ನಿಘಂಟು ಸೀಮಿತವಲ್ಲ. ಜಾನಪದ ಎಂದರೆ ಏನು ಎಂಬುದನ್ನು ತಿಳಿದಿರುವ ಪ್ರತಿಯೊಬ್ಬರೂ ಕೂಡ ಇದೊಂದು ಅಂತರ್ ಶಿಸ್ತೀಯ ಅಧ್ಯಯನದ ವಿಷಯ ಎಂಬುದನ್ನು ಒಪ್ಪುತ್ತಾರೆ. ಅಂತಹ ಅಧ್ಯಯನಗಳಿಗೆ ಈ ನಿಘಂಟು ಮಾಹಿತಿಯ ಆಕರವಾಗುತ್ತದೆ. ಕೃಷಿ ವಿಜ್ಞಾನ, ವೈದ್ಯಕೀಯ, ವಾಸ್ತುಶಿಲ್ಪ, ಭೌಗೋಳಿಕ ವಿದ್ಯಮಾನ, ಭೂಪರಿಸರ, ಸಸ್ಯ ಹಾಗೂ ಪ್ರಾಣಿ ಜಗತ್ತು, ಸಾಮಾಜಿಕ ಸಾಂಸ್ಕೃತಿಕ ಹಾಗೂ ಭೌಗೋಳಿಕ ಇತಿಹಾಸ, ತಂತ್ರಜ್ಞಾನ, ಲೋಹ ವಿಜ್ಞಾನ, ಆಹಾರ ಪದ್ಧತಿ, ಪಾಕಶಾಸ್ತ್ರ, ನಂಬಿಕೆ, ಆಚಾರ ವಿಚಾರಗಳು, ಭಾಷಾಶಾಸ್ತ್ರ, ಸಾಹಿತ್ಯ, ಕಲೆ ಮೊದಲಾದ ಅನೇಕ ವಿಷಯಗಳ ಅಧ್ಯಯನಕ್ಕೆ ಬೇಕಾದ ಅಪೂರ್ವ ದಾಖಲೆಗಳು ಇಲ್ಲಿ ಲಭ್ಯವಾಗುತ್ತವೆ. ಜಾನಪದ ಏನೆಲ್ಲ ವಿಷಯಗಳನ್ನು ಒಳಗೊಂಡಿರುತ್ತದೆ, ಅದರ ವ್ಯಾಪಕತೆ ಎಷ್ಟು ಅಗಾಧ, ಅದರ ಸತ್ವ ಶ್ರೀಮಂತಿಕೆಗಳು ಎಂಥವು ಎಂಬುದನ್ನು ಹೊಸ ಪೀಳಿಗೆಯವರೂ ಸಹ ಗಮನಿಸಿ ಜಾನಪದದತ್ತ ಆಸಕ್ತಿ ತಳೆಯಲು ಇದು ನೆರವಾಗುತ್ತದೆ.

ಇಂಥ ಎಲ್ಲ ಪ್ರಯೋಜನಗಳು ನಿಘಂಟಿನಿಂದ ದೊರೆಯಬೇಕು ಎಂಬ ಆಶಯದೊಂದಿಗೆ ಇದನ್ನು ರೂಪಿಸಲಾಗಿದೆ. ಆದರೆ ಈ ಆಶಯ ಸಂಪೂರ್ಣವಾಗಿ ಸಾಕ್ಷಾತ್ಕಾರವಾಗಬೇಕಾದರೆ ನಮ್ಮ ಕ್ಷೇತ್ರಕಾರ್ಯದ ವಿಧಾನ ಹಾಗೂ ಪರಿಕಲ್ಪನೆಗಳನ್ನು ಬದಲಾಯಿಸಿಕೊಳ್ಳಬೇಕಾದ ಅಗತ್ಯವಿದೆ. ಮಾಹಿತಿ ಸಂಗ್ರಹ ವಿಧಾನದ ಬಗ್ಗೆ ಕ್ಷೇತ್ರಕಾರ್ಯಕರ್ತರಿಗೆ ಪೂರ್ಣ ಪ್ರಮಾಣದ ತರಬೇತಿ ನೀಡಬೇಕು. ಕ್ಷೇತ್ರಕಾರ್ಯವೆಂದರೆ ಯಾರು ಬೇಕಾದರೂ ಮಾಡಬಹುದಾದ ಕೆಲಸ, ಕೈಗೆ ಸಿಕ್ಕಷ್ಟು ಪದಗಳನ್ನು ಪಟ್ಟಿ ಮಾಡುವುದಷ್ಟೇ ಕ್ಷೇತ್ರಕಾರ್ಯ ಎಂದು ಬಹಳಷ್ಟು ಮಂದಿ ಭಾವಿಸಿದ್ದಾರೆ. ಎಲ್ಲರಿಗೂ ಅವಕಾಶ, ಸಾಮಾಜಿಕ ನ್ಯಾಯ

ಮೊದಲಾದ ಕಾರಣಗಳಿಂದಾಗಿ ವಿಶ್ವವಿದ್ಯಾಲಯವೂ ಸಹ ಕೆಲವೊಂದು ನಿಯಮಗಳನ್ನು ಪಾಲಿಸಬೇಕಾಗುತ್ತದೆ. ಆದರೆ ಈ ನಿಯಮಗಳನ್ನು ಪಾಲಿಸಿಯೂ ಕ್ಷೇತ್ರಕಾರ್ಯದ ಕೆಲಸ ವೈಜ್ಞಾನಿಕವಾಗಿ ಅರ್ಥಪೂರ್ಣವಾಗಿ ನಡೆಯುವಂತೆ ಮಾಡಲು ಸಾಧ್ಯವಿದೆ. ಕ್ಷೇತ್ರಕಾರ್ಯ ಮಾಡುವವರೂ ಸಹ ತಜ್ಞರೇ ಆಗಿರಬೇಕು. ಜಾನಪದದ ಬಗ್ಗೆ ಮೂಲಭೂತ ತಿಳುವಳಿಕೆ ಹೊಂದಿರಬೇಕು. ವಿಷಯಗಳನ್ನು ಅಚ್ಚುಕಟ್ಟಾಗಿ ನಿರೂಪಿಸುವ ಸಾಮರ್ಥ್ಯ ಪಡೆದಿರಬೇಕು. ಮುಖ್ಯವಾಗಿ ಜಾನಪದವನ್ನು ಕುರಿತಂತೆ ನೈಜವಾದ ಆಸಕ್ತಿ ಹಾಗೂ ಕಾಳಜಿಯನ್ನು ಹೊಂದಿದವರಾಗಿರಾಗಿರಬೇಕು. ಅಂತಹವರನ್ನು ಗುರುತಿಸಿ ಸೂಕ್ತ ತರಬೇತಿ ನೀಡಿ ಕ್ಷೇತ್ರಕಾರ್ಯವನ್ನು ನಡೆಸುವಂಥವರ ಒಂದು ಪಡೆಯೇ ಸಿದ್ಧವಾಗಬೇಕು. ಇದು ಮುಂದಿನ ದಿನಗಳಲ್ಲಿ ವಿಶ್ವವಿದ್ಯಾಲಯವು ಹಾಕಿಕೊಳ್ಳುವ ಜಾನಪದ ಸಂಬಂಧವಾದ ಯೋಜನೆಗಳಿಗೆ ನೆರವಾಗುತ್ತದೆ.

ಮುಂದಿನ ಸಂಶೋಧನೆಗಳಿಗೆ ಅಧ್ಯಯನಗಳಿಗೆ ಹಾಗೂ ದಾಖಲಾತಿಗಳಿಗೆ ಇದು ಒಂದು ಚಿಕ್ಕ ಮಾರ್ಗದರ್ಶನ ಮಾತ್ರ. ಯಾವುದೇ ಅರ್ಥದಲ್ಲಿ ಇದು ಮುಗಿದ ಕೆಲಸವಲ್ಲ, ಮುಗಿಯುವಂಥದ್ದೂ ಅಲ್ಲ. ಇದನ್ನು ಒಂದು ಮೊದಲ ಮೆಟ್ಟಿಲು ಎಂದಷ್ಟೇ ಪರಿಗಣಿಸಬಹುದು. ಈ ಕಾರಣಕ್ಕಾಗಿಯೇ ಜಾನಪದ ವಿಷಯಗಳನ್ನು ಕುರಿತು ಪಿಎಚ್.ಡಿ, ಎಂ. ಫಿಲ್ ಮಾಡುವಂಥವರು ಇಂಥ ವಿಷಯಗಳನ್ನು ಆರಿಸಿಕೊಂಡರೆ ಅದು ನಮ್ಮ ಬದುಕಿಗೇ ಬಹು ದೊಡ್ಡ ಕೊಡುಗೆಯಾದೀತು.

ಮಾಡಬೇಕಿರುವ ಕೆಲಸಗಳು

೧. ಕರ್ನಾಟಕದಲ್ಲಿ ವಿವಿಧ ಜಾತಿ ಜನಾಂಗಗಳು, ಬುಡಕಟ್ಟುಗಳು, ಉಪಪಂಗಡಗಳು ಸಾವಿರಾರು ಇವೆ. ಅವುಗಳಲ್ಲಿ ಪ್ರತಿಯೊಂದಕ್ಕೂ ತಮ್ಮದೇ ಆದ ಕೆಲವು ವಿಶಿಷ್ಟ ಆಚಾರ ವಿಚಾರಗಳಿರುತ್ತವೆ. ನಿರ್ದಿಷ್ಟ ಪ್ರದೇಶದಲ್ಲಿ ವಾಸಿಸುತ್ತಿರುತ್ತಾರೆ. ನಿರ್ದಿಷ್ಟ ವೃತ್ತಿಗಳನ್ನು ಮಾಡುತ್ತಿರುತ್ತಾರೆ. ಅವರು ನಂಬಿಕೊಂಡ ಕುಲದೈವವೋ ಮನೆದೇವರೋ ಇರುತ್ತದೆ. ಈ ಅಂಶವನ್ನು ಕುರಿತೇ ಸಂಪೂರ್ಣ ತೊಡಗಿಕೊಂಡು ನಿಘಂಟಿನ ದೃಷ್ಟಿಯಿಂದ ಮಾಹಿತಿ ಸಂಗ್ರಹಿಸಬೇಕಾದ ಕೆಲಸ ನಡೆಯಬೇಕಾಗಿದೆ. ಇದರಿಂದ ಇನ್ನೂ ಸಾವಿರಾರು ಪದಗಳು ನಿಘಂಟಿಗೆ ಸೇರ್ಪಡೆಯಾಗುತ್ತವೆ. Tribes and Castes ನಂಥ ಕೃತಿಯೊಂದೇ ಅಪಾರವಾದ ಮಾಹಿತಿ ಒದಗಿಸಬಲ್ಲದು. ಅಲ್ಲದೆ ಬೇರೆ ಬೇರೆ ವಿದ್ವಾಂಸರು ಆಸಕ್ತರು ಈ ವಿಷಯ ಕುರಿತು ಕೃತಿಗಳನ್ನು ರಚಿಸಿದ್ದಾರೆ. ಇವುಗಳನ್ನೆಲ್ಲ ಆಧಾರವಾಗಿಟ್ಟುಕೊಂಡು ಶಬ್ದಗಳನ್ನು ಸಂಗ್ರಹಿಸುವ ಕೆಲಸ ನಡೆಯಬೇಕಿದೆ.

೨. ಜನಪದ ಕಲೆಗಳು, ಕುಣಿತಗಳು, ಜನಪದ ಆಚರಣೆಗಳು ಊರೂರಿನಲ್ಲಿಯೂ ನಡೆಯುವ ವಿಶಿಷ್ಟ ಜಾತ್ರೆಗಳಿಗೆ ಸಂಬಂಧಿಸಿದಂತೆಯೂ ಸಂಪೂರ್ಣ ತೊಡಗಿಕೊಂಡು ಕರ್ನಾಟಕದಾದ್ಯಂತ ಮಾಹಿತಿಯನ್ನು ಸಂಗ್ರಹಿಸುವ ಕೆಲಸ ಬಾಕಿ ಉಳಿದಿದೆ.

೩. ಜನಪದಕಲೆಗಳಿಗೆ ಸಂಬಂಧಿಸಿದಂತೆ ಎಷ್ಟೋ ಪಾರಿಭಾಷಿಕ ಪದಗಳಿಗೆ ಅರ್ಥ ಸಂಗ್ರಹಿಸಬೇಕಾದ ಕೆಲಸ ಆಗಿಲ್ಲ. ಉದಾಹರಣೆಗೆ ಕೋಲಾಟದಲ್ಲಿ ಬಗೆಬಗೆಯ ಕೋಲಾಟಗಳಿವೆ, ಬಗೆಬಗೆಯ ಗತ್ತುಗಳಿವೆ. ಇದು ಒಂದು ಬಗೆಯ ಕೋಲು, ಇದು ಕೋಲಾಟದ ಒಂದು ಗತ್ತು ಎಂದು ಹೇಳಿದರೆ ಸಾಕಾಗದು. ಪ್ರತಿಯೊಂದು ಗತ್ತಿನ ಸ್ವರೂಪವೇನು? ಕುಣಿತ ಮಾಡುವವರು ಆಗ ಯಾವ ಭಂಗಿಯನ್ನು, ನಡೆಯನ್ನು ಅನುಸರಿಸುತ್ತಾರೆ ಎಂಬ ವಿವರ ಕೊಡಬೇಕು. ತಾಳವಾದ್ಯಗಳಲ್ಲಿ ಬೇರೆ ಬೇರೆ ಪೆಟ್ಟುಗಳಿಗೆ ಬೇರೆ ಬೇರೆ ಹೆಸರುಗಳಿರುತ್ತವೆ. ವಾದ್ಯಗಳಲ್ಲಿ ವಾದ್ಯದ ಬೇರೆ ಬೇರೆ ಭಾಗಗಳಿರುತ್ತವೆ. ಹಾಡುಗಳಲ್ಲಿ ಕಾವ್ಯಗಳಲ್ಲಿ ಬೇರೆ ಬೇರೆ ಪ್ರಕಾರಗಳಿರುತ್ತವೆ. ಹಾಡಿನ ಧಾಟಿಗಳಿಗೆ ಬೇರೆ ಬೇರೆ ಶಬ್ದಗಳಿರುತ್ತವೆ. ಇದೆಲ್ಲವನ್ನು ಅಮೂಲಾಗ್ರವಾಗಿ ಸಂಗ್ರಹಿಸುವ ಕೆಲಸ ಆಗಬೇಕಿದೆ.

ಸಸ್ಯಗಳು ಹಕ್ಕಿಗಳು ಮೊದಲಾದವುಗಳಿಗೆ ಸಂಬಂಧಿಸಿದಂತೆ ಸಮಯ ಪರಿಮಿತಿಯಿಂದಾಗಿ ಪೂರ್ಣ ಮಾಹಿತಿ ಸಂಗ್ರಹಿಸಲಾಗಿಲ್ಲ. ಇವುಗಳ ಬಗ್ಗೆಯೂ ಸಹ ಪ್ರಾದೇಶಿಕ ವಿಂಗಡಣೆಗಳನ್ನು ಮಾಡಿಕೊಂಡು ಸಂಪೂರ್ಣ ಅದರತ್ತ ಗಮನ ಕೇಂದ್ರೀಕರಿಸಿ ಪದ ಸಂಗ್ರಹ ಮಾಡಬೇಕಿದೆ.

ಪ್ರತಿಯೊಂದು ಹಕ್ಕಿಯನ್ನೂ ಜನದಪರು ಬೇರೆ ಬೇರೆ ಹೆಸರುಗಳಿಂದ ಗುರುತಿಸುತ್ತಾರೆ. ಸಸ್ಯಗಳ ವಿಷಯದಲ್ಲಿದ್ದಂತೆಯೇ ಇಲ್ಲಿಯೂ ಒಂದೇ ಹಕ್ಕಿಗೆ ಪ್ರಾದೇಶಿಕವಾಗಿ ಬೇರೆ ಬೇರೆ ಹೆಸರುಗಳಿರುತ್ತವೆ. ಅಂಥವನ್ನು ಸಂಗ್ರಹಿಸಬೇಕಿದೆ. ಅಕಾಡಮಿಯ ನಿಘಂಟಿನಲ್ಲಿ ಸಾಕಷ್ಟು ಹಕ್ಕಿಗಳನ್ನು ನಮೂದಿಸಲಾಗಿದೆ. ಆದರೆ ಹೆಚ್ಚಿನ ಹೆಸರುಗಳು ಇಂಗ್ಲೀಷಿನ ಭಾಷಾಂತರಗಳು. ಪಕ್ಷಿತಜ್ಞರು ಪಕ್ಷಿವಿಜ್ಞಾನಿಗಳು ಸಾಮಾನ್ಯವಾಗಿ ಆಯಾ ಹಕ್ಕಿಗಳ ಹೊರಗಿನ ಲಕ್ಷಣದಿಂದ

ಹಕ್ಕಿಗಳ ಭೇದವನ್ನು ಗುರುತಿಸುತ್ತಾರೆ. ಈಚಿನ ದಿನಗಳಲ್ಲಿ ಇದೇ ಬಳಕೆಗೆ ಬಂದು ಕನ್ನಡದ ಹೆಸರುಗಳನ್ನು ಕೈಬಿಟ್ಟು ಭಾಷಾಂತರ ರೂಪಗಳನ್ನೇ ಕೊಡಲಾಗುತ್ತಿದೆ. ಉದಾ: ಉದ್ದಕೊಕ್ಕಿನ ನೀರು ಕಾಗೆ, ಉದ್ದಬಾಲದ ಗಿಡುಗ, ಅದುರುಬಾಲದ ಹಕ್ಕಿ, ಕಡುಗಂದು ಬೆನ್ನಿನ ಕಳಿಂಗ, ಕಪ್ಪುಬಾಲದ ಕೋಗಿಲೆ, ಕಪ್ಪು ಹಿಂಗತ್ತಿನ ರಾಜಹಕ್ಕಿ, ಕರಿಎದೆಯ ನೆಲಗುಬ್ಬಿ, ಕಪ್ಪು ಬಿಳಿ ರಾಟವಾಳ, ಕರಿತಲೆ ಹರಟೆಮಲ್ಲ, ಕಂದು ಎದೆಯ ನೊಣಹಿಡುಕ, ಕಿತ್ತಳೆ ಎದೆಯ ಪಾರಿವಾಳ, ಕೆಮ್ಮೀಸೆ ಪಿಕಳಾರ, ನೀಳ ಕೊಕ್ಕಿನ ರಣಹದ್ದು ಇತ್ಯಾದಿ. ಇಂಥಕಡೆ ಆಯಾ ಹಕ್ಕಿಗಳ ಮೂಲ ಹೆಸರುಗಳನ್ನು ಜನಪದರಿಂದಲೇ ಕೇಳಿ ತಿಳಿದು ದಾಖಲಿಸುವ ಕೆಲಸ ನಡೆಯಬೇಕಿದೆ.

೪. ಮಾಹಿತಿಗಾಗಿ ಪರಿಶೀಲಿಸಬೇಕೆಂದು ಪಟ್ಟಿಮಾಡಿಕೊಂಡಿದ್ದ ಎಲ್ಲ ಕೃತಿಗಳನ್ನು ಬಳಸಿಕೊಳ್ಳಲಾಗಿಲ್ಲ. ಅಲ್ಲದೆ ಪಟ್ಟಿಯಲ್ಲಿಲ್ಲದ ಇನ್ನೂ ಎಷ್ಟೋ ಕೃತಿಗಳಿವೆ. ಅವೆಲ್ಲವನ್ನು ಸೇರಿಸಿಕೊಂಡು ಅಮೂಲಾಗ್ರವಾಗಿ ಪರಿಶೀಲಿಸಿ ಪದಗಳನ್ನು ಸಂಗ್ರಹಿಸುವ ಕೆಲಸ ನಡೆಯಬೇಕಿದೆ.

೫. ವಿಷಯನಿಷ್ಠ ನಿಘಂಟುಗಳ ರಚನೆಯಾಗಬೇಕಿದೆ. ಎಷ್ಟೇ ಪ್ರಯತ್ನಿಸಿದರೂ ಜಾನಪದ ನಿಘಂಟು ಜಾನಪದೀಯ ಶಬ್ದಗಳ ಒಂದು ನಿದರ್ಶನ ರೂಪವಾಗಿರಬಹುದೇ ಹೊರತು ಎಲ್ಲ ಶಬ್ದಗಳನ್ನು ತನ್ನ ತೆಕ್ಕೆಗೆ ಒಳಪಡಿಸಿಕೊಳ್ಳಲು ಸಾಧ್ಯವಿಲ್ಲ. ಆದ್ದರಿಂದ ವಿಷಯನಿಷ್ಠ ನಿಘಂಟುಗಳ ರಚನೆ ಈ ನಿಟ್ಟಿನಲ್ಲಿ ಹೆಚ್ಚು ಉಪಯುಕ್ತ.

ಕೊನೆಯದಾಗಿ

ಕನ್ನಡದ ಆಡುಮಾತು ಸಂಸ್ಕೃತಿ ಹಾಗೂ ಜಾನಪದದ ಸಮಗ್ರ ಮಾಹಿತಿಗಳನ್ನೊಳಗೊಂಡ ಸಂಸ್ಕೃತಿ ಕೋಶವನ್ನು ರಚಿಸುವ ಹಿನ್ನೆಲೆಯಲ್ಲಿ ಕರ್ನಾಟಕ ಜಾನಪದ ವಿಶ್ವವಿದ್ಯಾಲಯವು ಹಮ್ಮಿಕೊಂಡ ಕನ್ನಡ ಜಾನಪದ ನಿಘಂಟು ಯೋಜನೆಯ ಅಡಿಯಲ್ಲಿ ಈ ನಿಘಂಟು ರಚನೆಯನ್ನು ಮಾಡಲಾಗಿದೆ. ಕರ್ನಾಟಕದ ವಿವಿಧ ಸಾಮಾಜಿಕ ವರ್ಗದವರ ನಿತ್ಯ ಜೀವನದಲ್ಲಿ ಬಳಕೆಯಲ್ಲಿರುವ ಆಧಾರಭೂತ ಶಬ್ದಾವಳಿಯ ಮಾತುಗಳೊಂದಿಗೆ ಬೇಸಾಯ, ಮೀನುಗಾರಿಕೆ, ಬೇಟೆ, ಕರಕುಶಲ ಕಲೆಗಳು ಮತ್ತು ಕಸುಬುಗಳ ಸನ್ನಿವೇಶದಲ್ಲಿ ಬಳಕೆಯಾಗುವ ತಾಂತ್ರಿಕ ಪದಗಳನ್ನು, ಉಪಕರಣಗಳನ್ನು, ಸಾಮಾಜಿಕ ಧಾರ್ಮಿಕ ಕೌಟುಂಬಿಕ ಆಚರಣೆಗಳಲ್ಲಿ ಬಳಕೆಯಾಗುವ ವಿಶಿಷ್ಟ ಪದಸಂಪತ್ತನ್ನು, ಆಯಾ ಪರಿಸರದಲ್ಲೆ ಕ್ಷೇತ್ರಾಧ್ಯಯನ ನಡೆಸಿ ಸಂಗ್ರಹಿಸುವುದು ಮತ್ತು ಪ್ರತಿಯೊಂದು ಪದಕ್ಕೆ ಬೇರೆ ಬೇರೆ ಪ್ರದೇಶ, ಬೇರೆ ಬೇರೆ ವರ್ಗ ಜಾತಿಗಳಲ್ಲಿ ಬಳಕೆಯಲ್ಲಿರುವ ರೂಪಭೇದ ಧ್ವನಿಭೇದಗಳನ್ನು ಗುರುತಿಸುವುದು, ಈಗಾಗಲೇ ಕರ್ನಾಟಕದಾದ್ಯಂತ ಸಂಗ್ರಹವಾಗಿರುವ ಅಪಾರ ಪ್ರಮಾಣದ ಪ್ರಕಟಿತ ಜಾನಪದ ಸಾಹಿತ್ಯದಿಂದ, ಜಾನಪದವನ್ನು ಕುರಿತ ಅಧ್ಯಯನ ಕೃತಿಗಳಿಂದ, ವಿವಿಧ ನಿಘಂಟುಗಳಿಂದ ಹಾಗೂ ಪ್ರಾದೇಶಿಕ ಸತ್ವವಿರುವ ಸಾಹಿತ್ಯ ಕೃತಿಗಳಿಂದ ಮತ್ತು ಕ್ಷೇತ್ರಕಾರ್ಯದಿಂದ ಪದ ಸಂಗ್ರಹಮಾಡಿ ಅರ್ಥ ವಿವರಣೆ ಕೊಡುವುದು ಇಲ್ಲಿನ ಮುಖ್ಯ ಉದ್ದೇಶವಾಗಿದೆ.

ಕರ್ನಾಟಕದ ವಿಶಿಷ್ಟ ಕುಲನಾಮಗಳು, ಗ್ರಾಮದೇವತೆಗಳು, ಗಾದೆ ಒಗಟು ನುಡಿಗಟ್ಟುಗಳಲ್ಲಿರುವ ದೇಸೀ ಪದಗಳನ್ನು ಗುರುತಿಸುವುದು, ಪ್ರತಿಯೊಂದು ಪದದ ಅರ್ಥ ಬಳಕೆ ಪ್ರಯೋಗಗಳು ಶುದ್ಧರೂಪಗಳನ್ನು ಇತರ ರೂಪಗಳನ್ನು, ಪ್ರಾದೇಶಿಕ ವಿವರವನ್ನು ನಮೂದಿಸುವುದೂ ಸಹ ಇಲ್ಲಿನ ಉದ್ದೇಶವಾಗಿದೆ. ಜಾನಪದದ ವ್ಯಾಪ್ತಿ, ವೈವಿಧ್ಯತೆ, ಪಾರಂಪರಿಕತೆ, ಸಮೃದ್ಧತೆ ಹಾಗೂ ಭಾಷಾ ಸೊಬಗು ಸಿರಿಗಳನ್ನು ಮತ್ತು ಪಾರಂಪರಿಕ ಜ್ಞಾನ ಸಂಪನ್ನತೆಯನ್ನು ಈ ನಿಘಂಟು ಎಲ್ಲ ವರ್ಗದ ಜನರಿಗೂ ಮನವರಿಕೆ ಮಾಡಿಕೊಂಡುವಂತಾಗಬೇಕು. ಅಂತರ್ ಶಿಸ್ತೀಯ ಅಧ್ಯಯನಗಳಿಗೆ ಮಾಹಿತಿಯ ಆಗರವಾಗಬೇಕು. ಜಾನಪದ ಪರಂಪರೆಯನ್ನು ಉಳಿಸಿಕೊಂಡು ಬರುವತ್ತ ಎಲ್ಲರಿಗೂ ಇದು ಪ್ರೇರಣೆ ಒದಗಿಸುವಂತಿರಬೇಕು ಎಂಬ ಆಶಯವೂ ಸಹ ಇಲ್ಲಿದೆ.

ಕರ್ನಾಟಕ ಜಾನಪದ ಅಕಾಡಮಿಯು ೨೦೧೧ರಲ್ಲಿ ಸ್ವರಾಕ್ಷರಗಳು, ವರ್ಗೀಯ ವ್ಯಂಜನಗಳು ಹಾಗೂ ಅವರ್ಗೀಯ ವ್ಯಂಜನಗಳು ಎಂಬ ವಿಂಗಡಣೆಗೆ ಅನುಗುಣವಾಗಿ ಮೂರು ಸಂಪುಟಗಳನ್ನು ಪ್ರಕಟಿಸಿದೆ. ಕಾಲಮಿತಿ, ಮಾನವಸಂಪನ್ಮೂಲಗಳ ಕೊರತೆ ಇತ್ಯಾದಿ ಕಾರಣಗಳಿಂದಾಗಿ ಇದನ್ನು ಹೆಚ್ಚು ವಿಸ್ತೃತವಾಗಿ ತರಲಾಗಿಲ್ಲ. ಅಕಾಡೆಮಿಯ ಪ್ರಯತ್ನ ಮತ್ತು ಆಶಯಗಳ ಮುಂದುವರಿಕೆಯಾಗಿ ಕರ್ನಾಟಕ ಜಾನಪದ ವಿಶ್ವವಿದ್ಯಾಲಯವು ಈ ಯೋಜನೆಯನ್ನು ವಹಿಸಿಕೊಂಡಿದ್ದು, ಅದರಂತೆ ಈ ಯೋಜನೆಯನ್ನು ಕಾರ್ಯರೂಪಕ್ಕೆ ತರಲಾಗಿದೆ. ಆದರೆ ಇಲ್ಲಿಯೂ ಆರ್ಥಿಕತೆ ಹಾಗೂ ಕಾಲದ ಪರಿಮಿತಿ ಇದೆ. ಹೀಗಾಗಿ ೨೦೧೨ರ ಅಕ್ಟೋಬರ್ ತಿಂಗಳಿನಿಂದ ಪ್ರಾರಂಭವಾದ ಈ ಯೋಜನೆಯ ಫಲಶೃತಿಯಾಗಿ ೨೦೧೪ ರ ಡಿಸೆಂಬರ್

ಅವಧಿಯೊಳಗೆ ಸ್ವರಾಕ್ಷರಗಳ ಸಂಪುಟವನ್ನು ಸಿದ್ಧಪಡಿಸಲಾಗಿದೆ. ಈ ಹದಿನಾಲ್ಕು ತಿಂಗಳು ಅವಧಿಯಲ್ಲಿ ಪೂರ್ವಸಿದ್ಧತೆ, ಕ್ಷೇತ್ರಕಾರ್ಯ ತಜ್ಞರಿಗಾಗಿ ತರಬೇತಿ ಕಮ್ಮಟ, ಅಕಾಡೆಮಿಯಿಂದ ವಹಿಸಿಕೊಳ್ಳಲಾದ ಕಾರ್ಡುಗಳ ಪರಿಶೀಲನೆ, ಕ್ಷೇತ್ರಕಾರ್ಯ ಮಾಡಬೇಕಾದ ವಿಷಯಗಳ ಆಯ್ಕೆ ಹಾಗೂ ಆಯಾ ಕ್ಷೇತ್ರಕಾರ್ಯತಜ್ಞರಿಗೆ ಅವುಗಳನ್ನು ವಹಿಸಿ ಆ ಬಗ್ಗೆ ಕಾಲಕಾಲಕ್ಕೆ ಮಾಹಿತಿ ನೀಡುವುದು, ಪದ ಸಂಗ್ರಹಣೆಗೆ ಬಳಸಿಕೊಳ್ಳಬೇಕಾದ ಆಕರ ಗ್ರಂಥಗಳನ್ನು ಗುರುತಿಸಿ ಪದಗಳ ಪಟ್ಟಿ ಸಿದ್ಧಪಡಿಸುವುದು, ಕ್ಷೇತ್ರಕಾರ್ಯತಜ್ಞರಿಂದ ಬಂದ ಎಲ್ಲ ಮಾಹಿತಿಯ ಪರಿಷ್ಕರಣ ಮತ್ತು ಎಲ್ಲ ಅಕ್ಷರಗಳ ಡಿಟಿಪಿ ಮುದ್ರಣದ ಕೆಲಸಗಳು ನಡೆದಿವೆ. ಆನಂತರದ ಎರಡು ತಿಂಗಳ ಅವಧಿಯಲ್ಲಿ ಸ್ವರಾಕ್ಷರಗಳ ಸಂಪುಟ ಸಿದ್ಧತೆಗೆ ಗಮನ ಕೇಂದ್ರೀಕರಿಸಿ ಈ ಮೊದಲ ಸಂಪುಟವನ್ನು ಹೊರತರಲಾಗಿದೆ. ಇಷ್ಟು ಅಲ್ಪಕಾಲಾವಧಿಯಲ್ಲಿ ನಡೆದಿರುವ ಕೆಲಸಕಾರ್ಯಗಳ ಹೊರೆ ಒತ್ತಡಗಳೇನೇ ಇರಲಿ ಈ ಶ್ರಮದ ಫಲಶ್ರುತಿಯನ್ನು ಮೊದಲ ಸಂಪುಟವು ಪ್ರತಿಬಿಂಬಿಸುವಂತಾದರೆ ಪಟ್ಟ ಶ್ರಮ ಸಾರ್ಥಕ ಎಂಬ ಭಾವನೆ ನಮ್ಮದು.

ಡಾ. ಕೆ. ಆರ್. ಸಂಧ್ಯಾರೆಡ್ಡಿ
ಕಾರ್ಯ ನಿರ್ವಾಹಕ ಸಂಪಾದಕರು

ಕೃತಜ್ಞತೆಗಳು

ಕನ್ನಡ ಜಾನಪದ ನಿಘಂಟಿನ ಯೋಜನೆಯನ್ನು ಕೈಗೊಂಡು, ಈ ಕಾರ್ಯಭಾರವನ್ನು ವಹಿಸಿಕೊಡುವ ಮೂಲಕ ಜಾನಪದ ಕ್ಷೇತ್ರಕ್ಕೆ ಒಂದು ವಿಶಿಷ್ಟ ಕೊಡುಗೆ ಸಲ್ಲಿಸುವುದಕ್ಕೆ ಅವಕಾಶ ಒದಗಿಸಿಕೊಟ್ಟ ಕರ್ನಾಟಕ ಜಾನಪದ ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರೊ. ಅಂಬಳಿಕೆ ಹಿರಿಯಣ್ಣನವರಿಗೆ, ಕರ್ನಾಟಕ ಜಾನಪದ ವಿಶ್ವವಿದ್ಯಾಲಯದ ಕುಲಸಚಿವರುಗಳಿಗೆ, ಹಿರಿಯ ಸಂಶೋಧನಾಧಿಕಾರಿಯಾಗಿ ಕಾಲಕಾಲಕ್ಕೆ ಅಗತ್ಯ ಸಹಕಾರ ನೀಡಿದ ಡಾ. ಕೆ. ಪ್ರೇಮಕುಮಾರ ಅವರಿಗೆ, ಜಿಲ್ಲಾ ಸಂಪಾದಕರುಗಳಿಗೆ, ಕ್ಷೇತ್ರಕಾರ್ಯತಜ್ಞರಿಗೆ, ಕೇಂದ್ರ ಕಛೇರಿಯ ಸಿಬ್ಬಂದಿವರ್ಗದವರಿಗೆ ಅನಂತ ಧನ್ಯವಾದಗಳು.

ಡಾ. ಕೆ.ಆರ್ ಸಂಧ್ಯಾರೆಡ್ಡಿ

ಅ

ಅಂಕ: ೧. ಕೋಳಿ, ಟಗರು, ಗೂಳಿ ಮೊದಲಾದವುಗಳ ನಡುವೆ ಸ್ಪರ್ಧೆಗಾಗಿ ನಡೆಸುವ ಕಾಳಗ. **ಪ್ರ**: ಬೇಸಾಯದ ಕೆಲಸ ಇಲ್ಲದ ದಿನಗಳಲ್ಲಿ ಶಿಕಾರಿ, ಕೋಳಿಅಂಕ ಇತ್ಯಾದಿಗಳ ಗಲಾಟೆ ಇರ್ತಾ ಇತ್ತು ೨. ಯುದ್ಧ. **ಪ್ರ**: ಅಂಕದ ವೀರನಲ್ಲ ಸುಂಕದ ದಾಸನಲ್ಲ (ಗಾದೆ) ೩. ಹೆಸರುವಾಸಿ; ಪ್ರಸಿದ್ಧಿ. **ಪ್ರ**: ಅಂಕದ ಆಲದ ಮರ ಬಿಂಕದ ಗೋಣಿ ಮರ

ಅಂಕಣ/ಅಂಕಳ/ಅಂಕ್ಲ: ೧. ಮನೆಯ ಎರಡು ಕಂಬ ಅಥವಾ ತೊಲೆಗಳ ನಡುವಿನ ಸ್ಥಳಾವಕಾಶ (ದಕ) ೨. ತೇರನ್ನು ನಿರ್ಮಿಸುವಾಗ ಮಾಡಿಕೊಳ್ಳುವ ವಿಭಾಗ. **ಪ್ರ**: ಒಂದನೇ ಅಂಕಣ, ಎರಡನೇ ಅಂಕಣ (ಬಳ್ಳಾ.ಜಿ) ೩. ಎಂಟರಿಂದ ಹತ್ತು ಅಡಿ ಉದ್ದಗಲದ ಜಾಗ. **ಪ್ರ**: ಒಂದೇ ಅಂಕ್ಲಗ್ಲ ಒಂದೇ ಅಂಕ್ಲ ಉದ್ದ ಇರೋವಂತಾ, ಒಂದೊಂದಕ್ಕೂ ಒಂದೊಂದ್ಬಾಕ್ಲು ಇರಂಗೆ ಒಂದ್ಮನೆ ಬೇಕು ೪. ಮನೆಯ ಮುಂಬಾಗಿಲಿನ ಸ್ಥಳ, ಮೈದಾನ ಮೊದಲಾದವು. **ಪ್ರ**: ಹೊರಗಿನ ಅಂಕಣದಲ್ಲಿ ದನಕರು ಕಟ್ತಾ ಇದ್ದರು.

ಅಂಕದ ಕಳ: ಕೋಳಿಗಳ ಕಾದಾಟದ ಸ್ಪರ್ಧೆಗಾಗಿ ನಿಗದಿತವಾದ ಜಾಗ (ದಕ.ಜಿ)

ಅಂಕದ ಬಯಲು: **ನೋಡಿ–** ಅಂಕದ ಕಳ

ಅಂಕದೊಂಕ: ೧. (ನಾ) ಅಂಕುಡೊಂಕು; ವಕ್ರ ೨. (ಗು) ನೇರವಿಲ್ಲದ; ನೆಟ್ಟಗಿಲ್ಲದ

ಅಂಕದೋರು: ಹೆಸರುವಾಸಿಯಾದವರು (ಹಾಸ.ಜಿ)

ಅಂಕಪರದೆ: ಆಟ ಪ್ರಾರಂಭವಾಗುವುದಕ್ಕಿಂತ ಮೊದಲು, ನಾಟಕದ ಅಂಕ ಮುಗಿದಾಗ, ಅಟ್ಟದ ಅಂಕಣವನ್ನು ಮರೆ ಮಾಡುವ ದೊಡ್ಡ ತೆರೆ; –ಮುಸುಕು ಬಟ್ಟೆ

ಅಂಕಪರದೆ ಬೀಳು: ಅಂತ್ಯಗೊಳ್ಳು; ಮುಕ್ತಾಯವಾಗು

ಅಂಕಬಿಂಕ ಹೊಡೆ (ಕ್ರಿ) : ಬೆಡಗಿನ ಮಾತಾಡು; ಜಂಬದ ಮಾತಾಡು (ಶಿವ.ಜಿ)

ಅಂಕರ್ಕಾದ್ಗೆ: ೧. ಕಿರಿದಾದ ಕಾಲುವೆ; ಮಳೆಗಾಲದಲ್ಲಿ ಅಡಿಕೆ ಸಸಿ ಕುಣಿಯಲ್ಲಿ ನಿಂತ ನೀರು ಹರಿದು ಹೋಗಲೆಂದು ಸಸಿ ಕುಣಿಯಿಂದ ಕಾದ್ಗೆಗೆ ಮಾಡಿದ ಕಿರಿದಾದ ಕಾಲುವೆ (ಉಕ.ಜಿ) ೨. ಬಸಿಗಾಲುವೆ (ಮೈಸೂ.ಜಿ) **ನೋಡಿ–** ಕಾದ್ಗೆ

ಅಂಕರ್ಕಿ: ಅಂಕರಿಕೆ ೧. ಬಾವಿಯೊಳಗೆ ಇಳಿಯಲು ಅನುಕೂಲ ವಾಗುವಂತೆ ನಿರ್ದಿಷ್ಟ ಅಂತರದಲ್ಲಿರುವ ಮೆಟ್ಟಿಲುಗಳು ೨. ಉರುಟು ಬಾವಿಯ ವೃತ್ತಾಕಾರದ ಮೆಟ್ಟಿಲು ಅಥವಾ ಅಂಕಣ (ದಕ.ಜಿ)

ಅಂಕಲು: ರಾಗಿ, ಜೋಳದ ಬೆಳೆಯನ್ನು ತೆನೆಸಹಿತ ಕೊಯ್ದು ಒಯ್ದ ನಂತರ ಹೊಲದಲ್ಲಿ ಅಲ್ಲಲ್ಲಿ ಉದುರಿ ಬಿದ್ದಿರುವ ತೆನೆಗಳು. **ಪ್ರ**: ಅಂಕಲು ಆರಿಸೋಕ್ಕೆ ಹೊಲಕ್ಕೆ ಹೋಗಿದಾರೆ

ಅಂಕವೋಲಿ: **ನೋಡಿ–** ಅಂಕೋಲೆ

ಅಂಕಸಂಕ: ಅಂಕೆಶಂಕೆ; ಹತೋಟಿ. **ಪ್ರ**: ಅಂಕಸಂಕ ಇಲ್ದೆ ಕುಣೀತಾವೆ ಬೊಡ್ಡೆತ್ತೋವು

ಅಂಕಳ: **ನೋಡಿ–** ಅಂಕಣ

ಅಂಕಾಯನ: ಕೋಳಿಅಂಕ ಮುಂತಾದ ಮನರಂಜನಾ ಕಾರ್ಯಕ್ರಮಗಳನ್ನು ಒಳಗೊಂಡ ದೇವರುಗಳ ಜಾತ್ರೆ (ದಕ.ಜಿ)

ಅಂಕಾಲೆ: **ನೋಡಿ–** ಅಂಕೋಲೆ

ಅಂಕಾಳಮ್ಮ: ಒಕ್ಕಲಿಗರ ಒಂದು ಸಮೂಹದ ಮನೆದೇವರು

ಅಂಕಿ: ೧. ಅಳಿದುಳಿದ ಕಾಳಿರುವ ತೆನೆ (ಕೋಲಾ.ಜಿ). **ಇರೂ**: *ಕಂಕಿ* ೨. *ಸಂಖ್ಯೆ*. **ಪ್ರ**: ಒಂದಂಕಿ, ಎರಡಂಕಿ

ಅಂಕಿಅಟಾಪು: ೧. ಕಣ್ಣರಿಕೆ ೨. ಹತೋಟಿ (ಬಳ್ಳಾ.ಜಿ)

ಅಂಕಿಹಾಕುವುದು: **ನೋಡಿ–** ಅಂಕೆ ಹಾಕುವುದು (ಬಳ್ಳಾ.ಜಿ)

ಅಂಕು: ತಿನ್ನಲು ಆಸೆ ಪಡು

ಅಂಕುರಾರ್ಪಣ: ಉತ್ಸವಗಳ ಅಂಗವಾಗಿ ಮೊತ್ತಮೊದಲು ಧಾನ್ಯಗಳನ್ನು ಬೆಳೆಯಲು ಹಾಕುವ ಶುಭಾಚರಣೆಗಳಲ್ಲಿ ಒಂದು; ಅಗೆ ಹಾಕುವುದು (ಬೆಂಗ್ರಾ.ಜಿ)

ಅಂಕುರಿಸು: ಮೂಡು; ಮೊಳಕೆ ಒಡೆ

ಅಂಕುಶ: ೧. ಆನೆಯನ್ನು ಪಳಗಿಸುವ ಸಾಧನ ೨. ಹಿಡಿತ

ಅಂಕೃತ್ಯ: ದುಷ್ಕೃತ್ಯ; ಅಕೃತ್ಯ. **ಪ್ರ**: ಪರಸ್ತ್ರೀಯನ್ನು ಮಾತನಾಡಿಸುವುದು ಅಂಕೃತ್ಯವೆಂದು ಭಾವಿಸುತ್ತಾರೆ

ಅಂಕೆ: ೧. ಅಂಕಿ; ಸಂಖ್ಯೆ ೨. ಹತೋಟಿ; ಹಿಡಿತ. **ಪ್ರ**: ಅಂಕೇಲಿದ್ದ ಹೆಣ್ಣು ಕೆಡೋಲ್ಲ ಮಜ್ಜಿಗೇಲಿದ್ದ ಬೆಣ್ಣೆ ಕೆಡೋಲ್ಲ ೩. ಸನ್ನೆಕೋಲು; ಅಡೆಕೋಲು (ಮೈಸೂ.ಜಿ/ಚಾಮ.ಜಿ).

ಅಂಕೆಹಾಕುವುದು/ಅಂಕೆಗೆ ಹಾಕುವುದು: ೧. ಶಿರಸಿಯ ಮಾರಿಕಾಂಬ ದೇವಸ್ಥಾನದ ಜಾತ್ರೆಗೆ ಸಂಬಂಧಿಸಿದ ಒಂದು ಆಚರಣೆ. ಜಾತ್ರೆಗೆ ಮುಂಚೆ ದೇವಿಯ ಮದುವೆ ನಿಶ್ಚಿತಾರ್ಥದ ಶಾಸ್ತ್ರ ಮಾಡಿ, ಅಣಿಮಾಡಿದ ವೇದಿಕೆಯ ಬಳಿ ಸಣ್ಣ ಸಣ್ಣ ಗಡಿಗೆಗಳನ್ನು ಜೋಡಿಸಿಟ್ಟು, ಮಧ್ಯದಲ್ಲಿ ದೀಪ ಹಚ್ಚುತ್ತಾರೆ. ನಂತರ ಪಟ್ಟದ ಕೋಣದ (ನೋಡಿ– ಪಟ್ಟದ ಕೋಣ) ಕುಂಭಕ್ಕೂ ಉತ್ಸವದ ಪ್ರಮುಖರಿಗೂ ಕಂಕಣ ಕಟ್ಟುತ್ತಾರೆ ೨. ಗ್ರಾಮದೇವತೆಗಳ ಜಾತ್ರೆಯಲ್ಲಿ ಕಂಡುಬರುವ ಒಂದು ಆಚರಣೆ ೩. ನಂಬುಗೆ ಸ್ವೀಕರಿಸುವುದು ೪. ಮದುವೆಯ ಕೂಸು ನಿಶ್ಚಯಿಸಿ ಕಂಕಣಕಟ್ಟಿ ವ್ರತಬದ್ಧರಾಗುವುದು ೩. ಬಲಿಕೊಡಲು ಕಟ್ಟಿಹಾಕಿದ ಕೋಣನಿಗೆ ಐದು ಅಥವಾ ಒಂಬತ್ತು ದಿನ ಸುಣ್ಣದ ನೀರನ್ನು ಸ್ವಲ್ಪ ಪ್ರಮಾಣದಲ್ಲಿ ಕುಡಿಸುವುದು (ಚಿತ್ರ.ಜಿ)

ಅಂಕೊಂಡಿ: ಕೂರಿಗೆಯ ದಿಂಡಿಗೆ ಕಟ್ಟಲು ಬಳಸುವ ಚರ್ಮದ ಪಟ್ಟಿಗೆ ಜೋಡಿಸಿರುವ ಚಿಕ್ಕ ಮೊಳೆ (ರಾಯ.ಜಿ)

ಅಂಕೊಜಿ: ನೋಡಿ– ಅಂಕೊಣಿ

ಅಂಕೊಡಿ: ನೋಡಿ– ಅಂಕೊಣಿ

ಅಂಕೊಣಿ/ಅಂಕೊಜಿ/ಅಂಕೊಡಿ: ೧. ಕತ್ತಿ ತೂಗುಹಾಕುವ ಮರದ ಅಥವಾ ಬಿದಿರಿನ ರಚನೆ ೨. ಸೊಂಟಪಟ್ಟಿ ಅಥವಾ ಕೊಕ್ಕೆ (ದಕ.ಜಿ)

ಅಂಕೋಲಧಾರೆ: ಶೇರುಗಾರ ಜನಾಂಗದವರಲ್ಲಿ ವಿಧುರತ್ವ ಪ್ರಾಪ್ತವಾಗದಿರಲೆಂದು ಮಾಡುವ ಅನಿಷ್ಟ ನಿವಾರಣೆಯ ಆಚರಣೆ (ಉಕ.ಜಿ)

ಅಂಕೋಲೆ/ಅಂಕಾಲೆ: *ಆಲ್ಯಾಂಜಿಯಮ್ ಲಮಾರ್ಕಿಐ:* ಉದ್ದವಾದ ಮುಳ್ಳಿರುವ ಒಂದು ಬಗೆಯ ಮರ. ಸಂಕ್ರಾಂತಿ ಹಬ್ಬದ ಹಿಂದಿನ ದಿವಸ ಇದರ ಕಡ್ಡಿಯನ್ನು ಮನೆಗಳಲ್ಲಿ, ಹುಲ್ಲಿನ ಮೆದೆಗಳಲ್ಲಿ ಸಿಕ್ಕಿಸುತ್ತಾರೆ. ಮಾಟಮಂತ್ರ, ಭೂತಪಿಶಾಚಿಗಳ ಕಾಟವನ್ನು ನಿವಾರಿಸುತ್ತದೆಂಬ ನಂಬಿಕೆಯಿಂದ ಮಕ್ಕಳ ತೊಟ್ಟಿಲಿಗೆ ಕಟ್ಟುತ್ತಾರೆ. ಮೈನೆರೆದ ಹೆಣ್ಣುಮಕ್ಕಳ ಕೋಣೆಯಲ್ಲಿ ಇಡುತ್ತಾರೆ. ಈ ಮರದಿಂದ ವಾಸ್ತುಪುರುಷನನ್ನು ಮಾಡಿ ಗೃಹಪ್ರವೇಶ ಸಂದರ್ಭದಲ್ಲಿ ಮನೆಯ ಈಶಾನ್ಯ ದಿಕ್ಕಿನಲ್ಲಿ ನವರತ್ನಗಳೊಂದಿಗೆ ಹೂಳುವ ಸಂಪ್ರದಾಯವಿದೆ. ***ಇರೂ:** ಹೊಡ್ಗೆಗಿಡ (ತುಮ.ಜಿ), ಊಡುಗಮರ (ಕೋಲಾ.ಜಿ)* (ಚಿತ್ರ ನೋಡಿ)

ಅಂಕ್‌ಪಂಕ್ಲರೋಗ: ಸಣ್ಣಪುಟ್ಟ ಕಾಯಿಲೆ; ಇಂತಹುದೇ ಎಂದು ಹೆಸರಿಸಲಾಗದ ಒಂದು ಸಣ್ಣ ಅನಾರೋಗ್ಯ ಸ್ಥಿತಿ ಇರೂ: *ಕಸಗಲು (ಮಂಡ್ಯ.ಜಿ/ಬೆಂಗ್ರಾ.ಜಿ)*

ಅಂಕ್ಲ: ನೋಡಿ– ಅಂಕಣ

ಅಂಕ್ಲು: ಮಳೆ ಆಶ್ರಯದ ಜಮೀನು (ಶಿವ.ಜಿ). ***ಇರೂ:** ಬೆದ್ದು*

ಅಂಗ: ೧. ದೇಹದ ಒಂದು ಭಾಗ ೨. ಹಂಗ; ಶುಭ ಅಶುಭಗಳನ್ನು ಸೂಚಿಸುವುದೆಂದು ನಂಬಲಾದ ನೀಲಿಬಣ್ಣದ ಪಕ್ಷಿ; ಶಕುನದಹಕ್ಕಿ (ಬಳ್ಳಾ.ಜಿ) ೩. ದೋಣಿ ನಡೆಸುವ ಜನಾಂಗ; ಅಂಬಿಗ (ಉಕ.ಜಿ)

ಅಂಗಅಡಕ/ಅಂಗಅಡ್ಕ: ಓರಣ; ಲಕ್ಷಣ; ಅಚ್ಚುಕಟ್ಟು (ಮೈಸೂ.ಜಿ). **ಪ್ರ**: ೧. ಮಾಡೋ ಕೆಲಸ್ದಾಗೆ ಒಂದು ಅಂಗ ಅಡ್ಕ ಇರ್ಬೇಕು. **ಪ್ರ**: ೨. ಏನೇ ಮಾತಾಡಿದ್ರೂವೇ ಅದ್ರಲ್ಲಿ ಒಂದು ಅಂಗ ಅಡ್ಕ ಇರ್ಬೇಕು

ಅಂಗಚಿತ್ತ: ಉಡುಗೊರೆ (ಚಿಮ.ಜಿ)

ಅಂಗಡ/ಅಂಗ್‌ಡಾ: ಜಾನುವಾರುಗಳ ಕೊರಳಿಗೆ ಕಟ್ಟುವ ದಪ್ಪನೆಯ ಹಗ್ಗದ ಸಲಕರಣೆ. ಇದು ಸುಮಾರು ಒಂದೂವರೆಯಿಂದ ಎರಡಂಗಲ ದಪ್ಪವಿದ್ದು, ಇದನ್ನು ಚರ್ಮ, ರಕ್ಕಸಬಳ್ಳಿಯ ನಾರು, ಮಂಡೆನಾರು ಮೊದಲಾದುವುಗಳಿಂದ ಹೆಣೆದು, ಎತ್ತುಗಳ ಕೊರಳ ಕೆಳಭಾಗಕ್ಕೆ ಸರಿಹೊಂದುವಂತೆ ಹೆಗ್ಗೆಜ್ಜೆಯೊಂದನ್ನು ಕಟ್ಟಿರುತ್ತಾರೆ

ಅಂಗಡಿ/ಅಂಗಾಡಿ/ಅಂಗ್ಡಿ: ೧. ವಸ್ತುಗಳನ್ನು ಮಾರುವ ಸ್ಥಳ; ವ್ಯಾಪಾರದ ಮಳಿಗೆ. **ಪ್ರ**: ಅಂಗ್ಡಿಲಿ ವ್ಯಾಪಾರ ಮಾಡ್ಕಂಡಿದ್ರು ಹಿರಿಯರಿಬ್ರು ೨. ದೂಪೆಯ ನಾಲ್ಕು ಮೂಲೆಗಳಲ್ಲಿ ಕಂಬ ಹಾಕಿ ಮಾಡುವ ಅಲಂಕಾರಿಕ ರಚನೆ (ದಕ.ಜಿ)

ಅಂಗಡಿಕೋಲು: ಕೋಲಾಟದ ಒಂದು ಗತ್ತು. ಎಂಟೆಂಟು ಮಂದಿ ಎರಡು ಗುಂಪಾಗಿ ನಿಂತುಕೊಂಡು ಪ್ರತ್ಯೇಕವಾಗಿ ಸುತ್ತುತ್ತಾರೆ. ಮೊದಲನೇ ಗುಂಪಿನ ಕೊನೆಯ ವ್ಯಕ್ತಿ ಎರಡನೇ ಗುಂಪಿನ ಕೊನೆಯವನಿಗೆ ಕೋಲು ಕೊಡುತ್ತಿರುತ್ತಾನೆ. ಗುಂಪು ಸುತ್ತುತ್ತಿರುವುದರಿಂದ ಎರಡು ಕೊನೆಗಳಲ್ಲಿ ಪ್ರತಿಯೊಬ್ಬರೂ ಸಂಧಿಸುತ್ತಿದ್ದು ಯಾರು ಎಲ್ಲೆಲ್ಲಿ ಸರಿಯುತ್ತಾರೆ ಎಂಬುದನ್ನು ಪತ್ತೆ ಹಚ್ಚುವುದು ಕಷ್ಟವಾಗುತ್ತದೆ

ಅಂಗಡಿಮುಂಗಟ್ಟು: ಅಂಗಡಿ ಮತ್ತು ಸಾಮಾನು. **ಪ್ರ**: ಅಂಗಡಿ ಮುಂಗಟ್ಟುಗಳೆಲ್ಲ ಮುಚ್ಚಿದಾರೆ.

ಅಂಗಡಿಹಕ್ಕಿ: ಗುಬ್ಬಚ್ಚಿ (ಮಂಗ.ಜಿ)

ಅಂಗಣ: ೧. ಮನೆಯ ಮುಂದಿನ ಬಯಲು; ಅಂಗಳ ೨. ದೇವಸ್ಥಾನದ ಸುತ್ತಲಿನ ಪ್ರಾಂಗಣ

ಅಂಗಣಬಲಿ: ೧. ಭೂತದ ಅಂಗಳದಲ್ಲಿನ ಪ್ರದಕ್ಷಿಣೆ ಕುಣಿತ (ದಕ.ಜಿ) ೨. ಮಾರಿಹಬ್ಬದಲ್ಲಿ ದೇವಸ್ಥಾನದ ಅಂಗಳದಲ್ಲಿ ನಡೆಯುವ ಸಮೂಹ ಕುಣಿತ

ಅಂಗಣೆದಾರ: **ನೋಡಿ–** ಅಂಗದಾರ. **ಪ್ರ:** ಅತ್ತಿರೆಂಬೆಗೆ ಅಂಗಣೆದಾರ ಕಟ್ಟಿ ಅರಿಸಿನ ಕುಂಕುಮ ಇಕ್ಕುತ್ತಾರೆ

ಅಂಗಣ್ಣು: ವಕ್ರನೋಟ ಬೀರುವ ಕಣ್ಣು; ಮಾಲುಗಣ್ಣು; ಮೆಳ್ಳಗಣ್ಣು

ಅಂಗತಾಪ: ಆಯಾಸ (ದಕ.ಜಿ)

ಅಂಗತ್ತು (ಕ್ರಿ): ಅಂಗಾತ; ಮುಖ ಮೇಲೆ ಮಾಡಿ ಮಲಗುವ ಭಂಗಿ (ಬಿಜಾ.ಜಿ)

ಅಂಗದನ ಸುಳಿ: ಯಕ್ಷಗಾನದಲ್ಲಿ. ಅಂಗದನ ಪಾತ್ರದ ಮುಖವರ್ಣಿಕೆಯಲ್ಲಿ ಬರುವ ಸುಳಿಯಂಥ ವಿನ್ಯಾಸ (ದಕ.ಜಿ)

ಅಂಗದಾರ/ಅಂಗುದಾರ: ಅರಿಸಿಣ ಹಚ್ಚಿದ ನೂಲು; ಹಂಗುನೂಲು; ಪೂಜೆ ಸಂದರ್ಭದಲ್ಲಿ ಬಳಸುವ ಐದು ಅಥವಾ ಒಂಬತ್ತು ಎಳೆಗಳ ಅರಿಶಿಣದ ದಾರ (ದಾವ.ಜಿ). **ಇರೂ:** *ಅಂಗಣೆದಾರ, ಅಂಗನೂಲು, ಹೊಂಗದಾರ (ಮೈಸೂ.ಜಿ)*

ಅಂಗನಮಣಿ: ಜುಂಜಪ್ಪನ ಹಸುವಿನ ಹೆಸರು

ಅಂಗನೂಲು: **ನೋಡಿ–** ಅಂಗದಾರ. **ಇರೂ:** *ವಂಗನೂಲು, ಹೊಂಗನೂಲು*

ಅಂಗಮಂಗೇಕಾಯಿ: ಚಪ್ಪರದವರೆ ಕಾಯನ್ನು ಹೋಲುವ ಒಂದು ಬಗೆಯ ಕಾಯಿ (ಮಂಡ್ಯ.ಜಿ)

ಅಂಗಮಕಡೆ: ಬೋರಲಾಗಿ; ಮುಖ ಅಡಿಯಾಗಿ

ಅಂಗಮಾ: ಪೂಜೆಗೆ ಬಳಸುವ ಕೋಣಮಾವಿನ ಸೊಪ್ಪು

ಅಂಗರ/ಅಂಗ್ರು/ಹಂಗರ: ಔಷಧಿಗುಣವುಳ್ಳ ಕಾಡುಜಾತಿಯ ಪೊದೆಸಸ್ಯ; ಎಲೆಗಳ ಸಮೇತವಾಗಿ ಇದರ ಕಡ್ಡಿಯನ್ನು ಪೊರಕೆಯಾಗಿಯೂ, ಗುಡಿಸಲಿಗೆ ಗೋಡೆಗಳ ಬದಲು ತಡಿಕೆಯಂತೆಯೂ ಬಳಸುತ್ತಾರೆ. ಇದರ ಸೊಪ್ಪನ್ನು ಅರೆದು ಕುರಕ್ಕೆ ಹಚ್ಚುತ್ತಾರೆ. **ಪ್ರ:** ಅಂಗರಿಗೆ ಹಸಿ ಇಲ್ಲ ಸೊಸೆಗೆ ಬಿಸಿ ಇಲ್ಲ

ಅಂಗರಿಕೆ: **ನೋಡಿ–** ಅಂಗರ

ಅಂಗರೀಕ: ೧. ಉಡುಗೆ ೨. ದೇಹಕ್ಕೆ ಲೇಪಿಸುವ ಸುಗಂಧದ್ರವ್ಯ ೩. ಅಂಗರಕ್ಷ; ರಕ್ಷಾಕವಚ

ಅಂಗರೇಕು: **ನೋಡಿ–** ಅಂಗರೇಕೆ

ಅಂಗರೇಕೆ: ಅಂಗರೇಖೆ ೧. ಅಂಗೈಯಲ್ಲಿರುವ ಗೆರೆಗಳು. ಇವು ವ್ಯಕ್ತಿಯ ಸ್ವಭಾವ ಲಕ್ಷಣ ಹಾಗೂ ಭವಿಷ್ಯವನ್ನು ತಿಳಿಸುತ್ತವೆ ಎಂಬ ನಂಬಿಕೆ. **ಪ್ರ:** ಕುಲಗೋತ್ರದಲ್ಲಿ ಕಣ್ಣು ಕೈಕಾಲ್ನಲ್ಲಿ ಅಂಗರೇಕೆನಲ್ಲಿ ರವಷ್ಟೂ ಮಿಸ್ಟೇಕು ಇಲ್ದೆ ಇರತಕ್ಕಂತ ಒಬ್ಬು ರಾಜಕುಮಾರಿನ ನೋಡ್ಕಂಡು ಬಾ ೨. ದೇಹಲಕ್ಷಣ. **ಇರೂ:** *ಅಂಗರೇಕು*

ಅಂಗರೇಚಿ: **ನೋಡಿ–** ಅಂಗರೇಕೆ

ಅಂಗಲ: ೧. ವಿರಳ ೨. ದೂರ ದೂರ ೩. ಕಡಿಮೆ ೪. ಅಂಗುಲ

ಅಂಗಲಾಗು: ಕೊಯ್ಲಿಗೆ ಬರು

ಅಂಗವಟ್ಟ: ಚೆಲುವು; ಶರೀರಸೌಷ್ಠವ (ಮೈಸೂ.ಜಿ)

ಅಂಗವಣೆ: ಕೌಶಲ್ಯ; ಚಾತುರ್ಯ

ಅಂಗವಲ್ಲಿ: ಶಲ್ಯ; ಮೈಮೇಲೆ ಹೊದ್ದುಕೊಳ್ಳುವ ವಸ್ತ್ರ

ಅಂಗವಾಡ: ಕರವಸ್ತ್ರ (ಧಾರ.ಜಿ)

ಅಂಗಸ: ೧. ಅಂಕುಶ ೨. ಅಕ್ಕಸಾಲಿಗರು, ಕಮ್ಮಾರರು ಬಳಸುವ ಒಂದು ಬಗೆಯ ಇಕ್ಕಳ (ಬಳ್ಳಾ.ಜಿ)

ಅಂಗಸು: ಹಂಗಿಸು; ಅಣಕಿಸು; ಗೇಲಿಮಾಡು; ಹಾಸ್ಯಮಾಡು

ಅಂಗಳ: ೧. ಮನೆಯ ಮುಂದಿನ ಬಯಲು. **ಪ್ರ:** ಅಂಗಳ ಕಸ ಗುಡಿಸುತ್ತಿದ್ದಳು ೨. ಮನೆಗೆ ಸೇರಿರುವ ಆವರಣದ ಬಯಲು. **ಪ್ರ:** ಅಂಗಳದಲ್ಲಿರೋ ಕರುಗೋಳ ಯಾರೂ ಗ್ಯಾಪಿಸಿಕೊಳ್ಳಲಿಲ್ಲ ೩. ತೊಟ್ಟಿಮನೆಯ ಮಧ್ಯೆ ಗಾಳಿ ಬೆಳಕು ಬರಲು ಬಿಟ್ಟಿರುವ ತೆರೆದ ಜಾಗ

ಅಂಗಳಗಪ್ಪೆ: **ನೋಡಿ–** ಅಂಗಳುಗುಪ್ಪಿ

ಅಂಗಳಬತ್ತಿ: ನಡುನಡುವೆ ಗೆಜ್ಜೆಯ ಆಕಾರವಿರುವ ಹತ್ತಿಯ ಹಾರ (ಉಕ.ಜಿ). **ಇರೂ:** *ಗೆಜ್ಜೊಸ್ತ್ರ*

ಅಂಗಳು: ಕಿರುನಾಲಗೆ; ಗಂಟಲಿನ ಮೇಲ್ಭಾಗದಲ್ಲಿ ಇರುವ ನಾಲಗೆಯಂಥ ಅಂಗ; ತಾಲು (ದಕ.ಜಿ)

ಅಂಗಳುಗುಪ್ಪಿ/ಅಂಗಳಗಪ್ಪೆ: ದನಗಳಿಗೆ ಬರುವ ಗಂಟಲುಬಾವು ರೋಗ; ಮೇವು ತಿನ್ನಲು ಸಾಧ್ಯವಾಗದಂತೆ ದನಗಳ ನಾಲಗೆಯ ಸಂದಿಯಲ್ಲಿ ಏಳುವ ಹುಣ್ಣು. ರಾಕ್ಷಸಮುಳ್ಳಿನಿಂದ ಅಂಗಳುಗುಪ್ಪಿಯನ್ನು ಬಗೆದು ತೆಗೆಯುತ್ತಾರೆ (ಮಂಡ್ಯ.ಜಿ/ಚಿಮ.ಜಿ)

ಅಂಗಾಟಮಂಗಾಟ: ೧. ರತಿಚೇಷ್ಟೆ ೨. ಹುಸಿ ನಿರಾಕರಣೆ

ಅಂಗಾತ: ಬೆನ್ನು ಅಡಿಯಾಗಿ

ಅಂಗಾತಮಲಗು: ಎದೆ ಹೊಟ್ಟೆ ಮೇಲೆ ಮಾಡಿ ಮಲಗುವುದು. **ಪ್ರ**: ಅಂಗಾತ ಮಲಕ್ಕೊಂಡು ಆಕಾಶ ನೋಡ್ತಿದ್ದ (ಶಿವ.ಜಿ)

ಅಂಗಾತಮಾಡು: ಕುಸ್ತಿ ಮುಂತಾದವುಗಳಲ್ಲಿ, ಸೋಲಿಸು; ಚಿತ್ ಮಾಡು (ಯಾದ.ಜಿ)

ಅಂಗಾರ: ೧. ಕೆಂಡ ೨. ಬೆಂಕಿ. **ಪ್ರ**: ಬಂಗಾರಕ್ಕೆ ಅಂಗಾರವೇ ಸಾಕ್ಷಿ ಬೆಳ್ಳಿಗೆ ಕೊಳ್ಳಿಯೇ ಸಾಕ್ಷಿ ೩. ಪ್ರಸಾದ ರೂಪದ ಭಸ್ಮ; ಬೂದಿ ೪. ದೇವರ ಮುಂದೆ ಕರ್ಪೂರ ಗುಗ್ಗಳಗಳನ್ನು ಸುಟ್ಟ ಬೂದಿ (ಧಾರ.ಜಿ). **ಪ್ರ**: ಅಂಗನೆ ಒಲಿಯೋದು ಬಂಗಾರಕ್ಕೆ ಸಂಗಯ್ಯ ಒಲಿಯೋದು ಅಂಗಾರಕ್ಕೆ

ಅಂಗಾರೆಗಿಡಿ: ಯಕ್ಷಗಾನ ಬಯಲಾಟಗಳಲ್ಲಿ ಬರುವ ಕೋಡಂಗಿಯ ಗಂಡು ವೇಷಭೂಷಣಗಳಲ್ಲಿ ಒಂದು

ಅಂಗಾಲಖಳಿ: ಪಾದದ ತಳದ ಕಳೆ (ಧಾರ.ಜಿ)

ಅಂಗಾಲಜಡೆ: ನೀಳವಾದ ಜಡೆ; ನೆಲ ಸೋಕುವಷ್ಟು ಉದ್ದದ ಕೂದಲು

ಅಂಗಾಲಲ್ಲಿ ಚಕ್ರ: ಅಂಗಾಲಿನಲ್ಲಿ ಚಕ್ರಾಕಾರದಲ್ಲಿರುವ ರೇಖೆಗಳು. ಹೀಗಿದ್ದವರು ಒಂದೆಡೆ ನೆಲೆಸದೆ ಸದಾ ಅಲೆಮಾರಿಯಂತೆ ಊರೂರು ಸುತ್ತುತ್ತಿರುತ್ತಾರೆ ಎಂದು ಪ್ರತೀತಿ (ಬೆಂಗ್ರಾ.ಜಿ)

ಅಂಗಾಲಿಗೆ ನರೆ ಬರೋವರೆಗೂ: ಹಣ್ಣು ಹಣ್ಣು ಮುದುಕ ಆಗುವವರೆಗೂ; ದೀರ್ಘ ಕಾಲದವರೆಗೂ (ರಾಮ.ಜಿ)

ಅಂಗಾಲು: ಪಾದಗಳ ಕೆಳಗಿನ ಭಾಗ (ಬೆಂಗ.ಜಿ)

ಅಂಗಾಲುಪಣಿ: ಅಂಗಾಲಿನಲ್ಲಿ ಏಳುವ ಒಂದು ಹುಣ್ಣು (ಮಂಡ್ಯ.ಜಿ)

ಅಂಗಾಸಿ: ಕೌಪೀನ; ಚಡ್ಡಿ

ಅಂಗಾಳೆಬಿಂಗಾಳೇ: ಮಕ್ಕಳು ತಮ್ಮ ಸುತ್ತ ತಿರುಗುತ್ತ ಆಡುವ ಆಟ (ಉಕ.ಜಿ)

ಅಂಗಿ: ಸೊಂಟದಿಂದ ಮೇಲ್ಭಾಗದಲ್ಲಿ ಧರಿಸುವ ಪುರುಷರ ಉಡುಪು. ಇದರಲ್ಲಿ ತುಂಡಂಗಿ, ಬಗಲಂಗಿ, ನಿಲುವಂಗಿ, ಕಸೆಅಂಗಿ, ಬಿಗಿಅಂಗಿ ಇತ್ಯಾದಿ ವಿಧಗಳಿವೆ

ಅಂಗಿಕಸೆಕಾಯಿ: ಹಲಸಂದೆ ಕಾಯಿ (ತುಮ.ಜಿ)

ಅಂಗು: ಅವುಗು; ೧. ಕಂಠದ ಸುತ್ತ ರಂಧ್ರವಿರುವ ವಿಶಿಷ್ಟ ಮಡಕೆ ೨. ಅಕ್ಕಿಹಿಟ್ಟು, ಬೆಲ್ಲದಿಂದ ಮಾಡಿದ ಸಿಹಿ ತಿಂಡಿ

ಅಂಗುದಾರ: **ನೋಡಿ–** ಅಂಗದಾರ

ಅಂಗುದೋಸೆ: ಅಕ್ಕಿಹಿಟ್ಟು ಮತ್ತು ಬೆಲ್ಲದ ಪಾಕವನ್ನು ಬೆರೆಸಿ, ಒಲೆಯ ಮೇಲೆ ಕವುಚಿ ಹಾಕಿದ ಅಂಗು ಎಂಬ ವಿಶಿಷ್ಟ ಮಡಕೆಯ ಮೇಲೆ ಬಟ್ಟೆಯಲ್ಲಿ ಅದ್ದಿ ಎಳೆದಾಗ ಶಾಖಕ್ಕೆ ತೆಳುವಾದ ಪದರಗಳು ಏಳುತ್ತವೆ. ಅವನ್ನು ಬಿಸಿಹಾಲಿನಲ್ಲಿ ಅದ್ದಿ ತಿನ್ನುತ್ತಾರೆ

ಅಂಗುಲ: ಬೆರಳಿನ ಒಂದು ಗೆಣ್ಣಿನ ಅಳತೆ. ಎರಡು ಬೆರಳುಗಳ ಅಡ್ಡಗಲದ ಅಳತೆ

ಅಂಗುಸ್ಥಾನ: ಕೈಹೊಲಿಗೆ ಹಾಕುವಾಗ ಬೆರಳಿಗೆ ಸೂಜಿ ಚುಚ್ಚದಂತೆ ಹಾಕಿಕೊಳ್ಳುವ ಸಣ್ಣ ಟೊಪ್ಪಿಗೆ (ಬೆಳ.ಜಿ)

ಅಂಗೈ: ಹಸ್ತದ ಒಳಭಾಗ. **ಪ್ರ**: ಅಂಗೈ ಹುಣ್ಣಿಗೆ ಕನ್ನಡಿ ಬೇಕೆ?

ಅಂಗೈಪಣಿ: ಅಂಗೈಯಲ್ಲಿ ಏಳುವ ಹುಣ್ಣು (ಮಂಡ್ಯ.ಜಿ)

ಅಂಗೈ ಮುಂಗೈ ಮಾಡು: ಸುಳ್ಳನ್ನು ನಿಜ ಮಾಡು; ಯಾಮಾರಿಸು; ಮೋಡಿ ಮಾಡು (ಬೆಂಗ್ರಾ.ಜಿ)

ಅಂಗೈಯಟು: ಅಂಗೈನಷ್ಟು; ಚಿಕ್ಕ ಪ್ರಮಾಣದ; ಸಣ್ಣ ಗಾತ್ರದ (ಬಿಜಾ.ಜಿ)

ಅಂಗೈಯಾಗಾರುತಿ ಬೆಳಗು: ಶಸ್ತ್ರವೊಂದಕ್ಕೆ ಕಕ್ಕಡವನ್ನು ಸುತ್ತಿ, ಅದನ್ನು ಮುಂಗೈ ಮಣಿಕಟ್ಟು ಅಥವಾ ಅಂಗೈಯಲ್ಲಿ ಆರುಪಾರಾಗುವಂತೆ ಚುಚ್ಚಿಕೊಂಡು ಕಕ್ಕಡ ಹೊತ್ತಿಸಿ, ಅದರಿಂದ ದೇವರಿಗೆ ಕಕ್ಕಡಾರತಿ ಬೆಳಗುವುದು (ಬಳ್ಳಾ.ಜಿ) **ನೋಡಿ–** ಕಕ್ಕಡ

ಅಂಗೈರೇಖ: ಅಂಗೈಯಲ್ಲಿರುವ ಗೆರೆ. ಈ ಗೆರೆಗಳ ವಿನ್ಯಾಸವನ್ನು ಆಧರಿಸಿ ವ್ಯಕ್ತಿಯ ಭವಿಷ್ಯವನ್ನು ಹೇಳಲಾಗುತ್ತದೆ **ನೋಡಿ–** ಅಂಗರೇಕೆ

ಅಂಗೈಹಾಂಗ: ಸಮತಟ್ಟಾದ (ಧಾರ.ಜಿ)

ಅಂಗೊಸ್ತ್ರ: ಅಂಗವಸ್ತ್ರ ೧. ವಲ್ಲಿ; ಉತ್ತರೀಯ ೨. ಚಿಕ್ಕಪಂಚೆ; ಪಾಣಿಪಂಚೆ

ಅಂಗ್‌ತಾರ್ಲ: ಆಕಾಶದ ಕಡೆಗೆ ಮುಖಮಾಡಿ ಮಲಗಿದ ಭಂಗಿ; ಅಂಗಾತ (ಮೈಸೂ.ಜಿ)

ಅಂಗ್ಲೂಲು: ನೋಡಿ– ಅಂಗದಾರ

ಅಂಗ್‌ಮಂಗಿ: ಬೆಡಗಿ; ತಿಳಿದೂ ತಿಳಿಯದವಳಂತೆ ನಟಿಸುವವಳು

ಅಂಗ್ಯಾಳ: ಅಣ್ಣೆಕಲ್ಲು ಆಟಕ್ಕೆ ಬಳಸುವ ಹರಳು

ಅಂಗ್ರಕಡ್ಡಿ: ಹಂಗರುಕಡ್ಡಿ; ಹಂಗರುಸೌದೆ; ಗ್ರಾಮೀಣ ಪ್ರದೇಶದಲ್ಲಿ ಉರುವಲಾಗಿ ಬಳಸುವ ಒಂದು ಜಾತಿಯ ಹಸಿಗಿಡ. ಇದರಲ್ಲಿ ಎಣ್ಣೆಯ ಅಂಶ ಇರುವುದರಿಂದ ಹಸಿಗಿಡಕ್ಕೇ ಬೆಂಕಿ ಹಾಕಿದರೂ ಉರಿಯುತ್ತದೆ (ಹಾಸ.ಜಿ)

ಅಂಗ್ರು: ನೋಡಿ– ಅಂಗರ. **ಇರೂ:** *ಹಂಗ್ರುಗುತ್ತಿ (ಮೈಸೂ.ಜಿ)*

ಅಂಗ್ಲಾಪು: ಅಂಗಲಾಚು; ಹಂಬಲಿಸು

ಅಂಗ್ಳಗುಳ್ಳಿ: ಅಂಗಳ ಗುಳ್ಳಿ; ನಾಲಿಗೆ ಕೆಳಗಿನ ಗುಳ್ಳಿ

ಅಂಗ್ಳಶುದ್ಧಿ: ಅಂಗುಳ ಶುದ್ಧಿ; ಗೊರವರಲ್ಲಿ, ಹುಟ್ಟಿದ ಮೂರನೆ ದಿನದಂದು ಮಗುವಿಗೆ ಮಾಡುವ ನಾಲಿಗೆಶುದ್ಧಿಯ ಆಚರಣೆ (ಬೆಂಗ.ಜಿ)

ಅಂಚ: ೧. ಹೂವು ೨. ತುದಿ ೩. ಹಂಚು

ಅಂಚಡಿ: ಚಿಂದಿಬಟ್ಟೆ

ಅಂಚನಾಕಟ್ಟು: ಅಂದಾಜು ಬೆಲೆ ನಿರ್ಧರಿಸು (ಧಾರ.ಜಿ)

ಅಂಚಿ: ೧. ಹಂಚಿ; ಬಯಲಿನಲ್ಲಿ ಬೆಳೆಯುವ ಒಂದು ಜಾತಿಯ ಹುಲ್ಲು. ಪೊರಕೆ ಮಾಡಲು ಬಳಸುವ ತೆನೆಯುಳ್ಳ ಹುಲ್ಲಿನ ಗಿಡ ೨. ನದಿಯ ಪಾತ್ರಕ್ಕೆ ಹೊಂದಿಕೊಂಡಿರುವ ನೆಲ. **ಇರೂ:** *ಬಳಬಂಚಿ*

ಅಂಚಿಕ: ಅಕ್ಕಸಾಲೆಯ ಸಂಚಿ (ಶಿವ.ಜಿ)

ಅಂಚಿಕಡ್ಡಿಶಾಸ್ತ್ರ: ಮದುವೆ ನಿರ್ಣಯಿಸುವ ಮುಂಚೆ ಮನೆಯ ಹಿರಿಯರು ಮನೆದೇವರನ್ನು ಸ್ಮರಿಸಿಕೊಂಡು ಒಂದು ಹಿಡಿ ಹಂಚಿಕಡ್ಡಿಯನ್ನು ಜೋಡಿ ಬರುವ ಹಾಗೆ ಎತ್ತಿಡುತ್ತಾ ಬರುವುದು. ಕೊನೆಯಲ್ಲಿ ಜೋಡಿ ಬಂದರೆ ಈ ಸಂಬಂಧ ಮುಂದುವರೆಸಬಹುದು, ಒಂದೇ ಬಂದರೆ ಸಂಬಂಧ ಕುದುರುವುದಿಲ್ಲ ಎಂಬ ನಂಬಿಕೆ (ಬೆಂಗ್ರಾ.ಜಿ)

ಅಂಚಿಕಡ್ಡಿ ಸುಡುವುದು: ಮಕ್ಕಳಿಗೆ ಆದ ದೃಷ್ಟಿ ನಿವಾರಣೆಗಾಗಿ ಹಂಚಿಕಡ್ಡಿಯನ್ನು ಬೆಸಸಂಖ್ಯೆಯಲ್ಲಿ ತೆಗೆದುಕೊಂಡು, ಅದಕ್ಕೆ ಬೆಂಕಿ ಹಚ್ಚಿ, ಮಕ್ಕಳ ಮುಖದ ಮುಂದೆ ನಿವಾಳಿಸಿ ತೆಗೆದು ಸುಡುತ್ತಾರೆ. ಅದರ ಬೂದಿಯನ್ನು ಹಣೆಗೆ ಹಚ್ಚುತ್ತಾರೆ (ಮಂಡ್ಯ.ಜಿ)

ಅಂಚಿಕಾಸಿಹುಲ್ಲು: *ಸಿಂಬೊಪೋಗಾನ್ ಸೀಸಿಯಸ್:* ಕಾಸಿಹುಲ್ಲಿನ ಒಂದು ಪ್ರಭೇದ. **ಇರೂ:** *ಕಾಮಂಚ*

ಅಂಚಿಗುಳ್ತಾಳಿ: ಕುಸುರಿ ಕೆಲಸ ಮಾಡಿರುವ ತಾಳಿ

ಅಂಚಿಗೆ: ತಟ್ಟೆಯ ಆಕಾರದ ಹೆಂಚಿನ ಬಕ್ಕರೆ. **ಇರೂ:** *ಓಡು, ಬವೋಡು*

ಅಂಚಿನ ದಟ್ಟಿ: ೧. ಅಂಚಿನಿಂದ ಕೂಡಿದ ನಡುಪಟ್ಟಿ ೨. ಸೊಂಟಕ್ಕೆ ಸುತ್ತುವ ಅಂಚಿನ ಪಂಚೆ

ಅಂಚಿಬಿಲಿ: ಕುಂಟೋಬಿಲ್ಲೆ. **ಇರೂ:** *ಅಂಟಿಬಿಲ್ಲಿ*

ಅಂಚಿಶಾಣೆ: ಹಂಚಿಶಾಣೆ; ಧಾನ್ಯ ತೂರುವಾಗ ರಾಶಿಯನ್ನು ಹಸನು ಮಾಡಲು ಬಳಸುವ ಪೊರಕೆ

ಅಂಚು: ೧. ಕೊನೆ; ತುದಿ ೨. ಸೀರೆ ಅಥವಾ ಪಂಚೆಯ ತುದಿ. **ಪ್ರ:** ಮೂಗುತಿ ಮುಂಭಾರ ಎಡಗಂಟು ಹಿಂಭಾರ ಸಣ್ಣಂಚಿನ ಸೀರೆ ನಡುಭಾರ ೩. ಹೊಲದ ಬದುವು

ಅಂಚುಕಟ್ಟುವುದು: ೧. ಸೀರೆ, ಪಂಚೆ ಮೊದಲಾದವುಗಳ ಎಳೆಗಳು ಕಳಚಿಕೊಳ್ಳದಂತೆ ತುದಿಯನ್ನು ಮಡಿಸಿ ಹೊಲಿದು ಅಥವಾ ಹೆಣೆದು ಕಟ್ಟುವುದು ೨. ಹೆಂಚಿನ ಹೊದಿಕೆ ಮಾಡುವ ಪೂರ್ವದಲ್ಲಿ ಮನೆಯ ಮಾಡಿನ ಅಂಚಿಗೆ ಹಳೆಯ ಸೋಗೆಗಳನ್ನು ಹೊದಿಸುವುದು. ಮಳೆಗಾಲದಲ್ಲಿ ನೀರು ಸರಿಯಾಗಿ ಕೆಳಗೆ ಬೀಳುವಂತೆ ಮಾಡಲು ಈ ಅಂಚು ಅವಶ್ಯಕ (ಉಕ.ಜಿ) ೨. ಕೌದಿ, ಕಂಬಳಿ, ಜಮಖಾನೆಗಳಿಗೆ ಗೋಟುಕಟ್ಟುವುದು (ಉಕ.ಜಿ). **ಇರೂ:** *ಕರಿಕಟ್ಟು*

ಅಂಚು ಮುರೀದಂಗೆ: ೧. ಮುಕ್ಕಾಗದ ಹಾಗೆ; ಹಾಳಾಗದ ಹಾಗೆ (ಮೈಸೂ.ಜಿ) ೨. ಸೀರೆ, ಪಂಚೆ ಮೊದಲಾದವುಗಳ ಮಡಿಕೆ ಬಿಚ್ಚದೆ. **ಪ್ರ:** ಸ್ಯಾಲೆ ತಕೊಂಡು ಎರಡು ವರ್ಸಾದ್ರು ಇನ್ನೂ ಅಂಚು ಮುರಿದಂಗೆ ಮಡಗವ್ನೆ

ಅಂಚ್‌ತಗ್ರೀಸೊಪ್ಪು: *ರಿನ್ ಕೋಸಿಯ ಮಿನಿಮ:* ತೊಗರಿ ಗಿಡದ ರೀತಿ ಇರುವ ಗಿಡ. ದನ ಕುರಿ ಮೊದಲಾದ ಪ್ರಾಣಿಗಳ ಕಾಲು ಮುರಿದಾಗ ಕೋಳಿಮೊಟ್ಟೆ ರಸದೊಂದಿಗೆ ಈ ಗಿಡದ ಅಂಟುರಸ ಬೆರೆಸಿ ಕಟ್ಟಿದರೆ ಕಾಲು ಕೂಡಿಕೊಳ್ಳುತ್ತದೆ (ಹಾಸ.ಜಿ). **ಇರೂ:** *ಅಂಟ್ ತಗ್ರಿ*

ಅಂಜಕ್ಕಿ: ಅರೆಬೆಂದ ಅನ್ನ (ಬಳ್ಳಾ.ಜಿ)

ಅಂಜಣೆ: ನೋಡಿ– ಅಂಜನ (ಮೈಸೂ.ಜಿ)

ಅಂಜನ: ನಿಧಿಯನ್ನು ಕಂಡುಹಿಡಿಯುವವರು ಅಥವಾ ಅದೃಶ್ಯವಿದ್ಯೆ ಬಲ್ಲವರು ಹಚ್ಚಿಕೊಳ್ಳುವ ಮಾಂತ್ರಿಕ ಶಕ್ತಿಯುಳ್ಳ ಕಾಡಿಗೆ. **ಪ್ರ:** ಯಾಕಯ್ಯ ಇಷ್ಟು ಕಷ್ಟ ಜೀವನ. ನಾನು

ಅಂಜನ ಹಾಕ್ತೀನಿ, ಬೇಕಾದಂಥ ನಿಧಿ ನಿಕ್ಷೇಪ ಕಣ್ಣಿಗೆ ಕಾಣ್ತವೆ ಅಂದ...

ಅಂಜನಕಪ್ಪು: ನೋಡಿ– ಅಂಜನ

ಅಂಜನವಿದ್ಯೆ: ನೋಡಿ– ಅಂಜನಹಾಕುವುದು

ಅಂಜನಹಾಕುವುದು: ಎಲೆ ಅಥವಾ ಅಂಗೈಗೆ ಮಾಂತ್ರಿಕ ಶಕ್ತಿಯುಳ್ಳ ಕಪ್ಪು ಲೇಪಿಸಿ ಅಗೋಚರವಾಗಿರುವುದನ್ನು ತೋರಿಸುವುದು. ವ್ಯಕ್ತಿಗಳು ಅಥವಾ ವಸ್ತುಗಳು ಕಾಣೆಯಾದಾಗ ಈ ರೀತಿ ಅಂಜನ ಹಾಕಿಕೊಂಡು ನೋಡುವವರನ್ನು ಕರೆಸಿ ಪತ್ತೆ ಮಾಡಿಸುವ ರೂಢಿ ಇದ್ದಿತು

ಅಂಜನಾದೇವಿ: ಹನುಮಂತನ ತಾಯಿ

ಅಂಜರ: ನೋಡಿ– ಅಂಜೂರ (ಧಾರ.ಜಿ)

ಅಂಜಲ್: ಒಂದು ಜಾತಿಯ ಮೀನು. ರುಚಿಕರವಾದ ದುಬಾರಿ ಮೀನು (ಉಡು.ಜಿ)

ಅಂಜಲ್‌ಬಲೆ: ಆಳವಾದ ಸಮುದ್ರದಲ್ಲಿ ಬಳಸುವ, ಐದರಿಂದ ಆರು ಇಂಚು ಅಗಲದ ಕಣ್ಣು ಹೊಂದಿರುವ ಬಲೆ (ಉಡು.ಜಿ). **ಇರೂ:** *ಬೀಡಿನ ಬಲೆ*

ಅಂಜಾಡು: ಈಜಾಡು

ಅಂಜಾಡೆ: ಒಂದು ಬಗೆಯ ಸಸ್ಯ. ದೀವರು ಭೂಮಣ್ಣಿ ಹಬ್ಬದಲ್ಲಿ ದನಗಳನ್ನು ಅಲಂಕರಿಸಲು ಇದರ ಎಲೆಯನ್ನು ಚೆಂಡುಹೂಗಳ ದಂಡೆಗೆ ಸೇರಿಸುತ್ತಾರೆ

ಅಂಜಿ: ೧. ಕಂಬಳಿ ನೇಯ್ಗೆಯಲ್ಲಿ ಹತ್ತಿಯಂತೆ ಮೃದುಗೊಂಡ ಉಣ್ಣೆ ೨. ನೂಲು ತೆಗೆಯಲು ಬಳಸುವ ಅರಳೆಯ ಸುರುಳಿ. **ಇರೂ:** *ಹಂಜಿ*

ಅಂಜಿಬುಟ್ಟಿ: ಹಿಂಜಿದ ಹತ್ತಿಯಂತೆ ಕಾಣುವ ನರೆಗೂದಲಿನ ತಲೆ

ಅಂಜಿಹುಲ್ಲು: ಸೋಕಿದರೆ ಅಂಟಿಕೊಳ್ಳುವ ಒಂದು ಜಾತಿಯ ಹುಲ್ಲು (ಮೈಸೂ.ಜಿ)

ಅಂಜಿಹೊಡೆಯುವುದು: ಹತ್ತಿ, ಉಣ್ಣೆ ಮೊದಲಾದವನ್ನು ಬಿಡಿಸಿ ಹಂಜಿ ಮಾಡುವುದು; ತುಪ್ಪಟ ಹಿಂಜುವುದು

ಅಂಜು (ನಾ): ಬತ್ತದ ಹುಲ್ಲು (ಮಂಡ್ಯ.ಜಿ)

ಅಂಜೂರ: ೧. ಫೈಕಸ್ *ಅನಾರ್ಟಿಯಾನ:* ಅತ್ತಿ ಹಣ್ಣಿನ ಜಾತಿಗೆ ಸೇರಿದ ಒಂದು ಬಗೆಯ ಹಣ್ಣು (ಬಿಜಾ.ಜಿ) ೨. ಕೇಸರಿ ಮತ್ತು ನೇರಳೆ ಮಿಶ್ರಿತ ಬಣ್ಣ (ಬಾಗ.ಜಿ)

ಅಂಜ್ರ: ಹಂಜರ ೧. ತಡಿಕೆ ೨. ಮನೆಯ ಮೇಲಿನ ಹುಲ್ಲಿನ ಛಾವಣಿ; ಸೂರು

ಅಂಜ್ರಬಿಗಿಯದು: ಮನೆ ಕಟ್ಟುವಾಗ, ಬಿದಿರನ್ನು ನಾಲ್ಕಾರು ಭಾಗಗಳಾಗಿ ಸೀಳಿ ಒಂದೊಂದೆ ಸೀಳುಗಳನ್ನು ಕೂರಿಸಲು ಆಧಾರವಾಗುವಂತೆ ತೀರುಗಳ ಮೇಲೆ ಅಡ್ಡಡ್ಡಲಾಗಿ ಕತ್ತಾಳೆ, ಸೆಣಬು, ಉಗುಣಿ ಅಂಬು, ಆಲದ ಬಿಳಲು ಮೊದಲಾದವುಗಳಿಂದ ಹಂಜರ ಬಿಗಿದು ಕಟ್ಟುವ ಕ್ರಿಯೆ (ಹಾಸ.ಜಿ)

ಅಂಟಕುಂಟ: ೧. ಅಸಂಬದ್ಧ ೨. ಉದ್ದೇಶಿತ ಕೆಲಸಕ್ಕಾಗುವ ಅಡೆತಡೆ ೩. ಹಾದಿತಪ್ಪಿದವ ೪. ಆಯತವೇಳೆಯಲ್ಲಿ ಕೈಕೊಡುವ ಸ್ವಭಾವದವ (ಬಳ್ಳಾ.ಜಿ)

ಅಂಟನಾಲಿಗಿ: ನಾಲಿಗಿ ದಪ್ಪ ಆಗಿ, ಮುಳ್ಳು ಎದ್ದಿರುವಂತೆ ಭಾಸವಾಗುವ ನಾಲಿಗೆ

ಅಂಟರಳೆ: ನೋಡಿ– ಅಂಟುವಾಳ

ಅಂಟರಿಕೆ: ಆಕೇಷಿಯ *ಸೀಸಿಯ:* ಬಟ್ಟೆಗೆ ಸೋಕಿದರೆ ಅಂಟಿಕೊಳ್ಳುವ ಒಂದು ಬಗೆಯ ಹುಲ್ಲಿನ ತೆನೆ. **ಪ್ರ:** ಹೊಲದ ತುಂಬ ಬರಿ ಅಂಟರಿಕೆ ಬೆಳಕೊಂಡಿದೆ. **ಇರೂ:** *ಪುಟ್ಟಂಪುರ್ಲೆ (ಚಾಮ.ಜಿ), ಹುಲ್ಲಕ್ಕಿ (ದಕ.ಜಿ), ಬೆಂಡೆಮುಳ್ಳುಗಿಡ*

ಅಂಟಲ: ಅಟ್ಟ

ಅಂಟಸುಂಟಿ: ನೋಡಿ– ಅಂಟಿಗೆ ಪಂಟಿಗೆ

ಅಂಟಾಗು: ಮೈಲಿಗೆಯಾಗು; ಮುಟ್ಟಾಗು

ಅಂಟಾಳ: ನೋಡಿ– ಅಂಟುವಾಳ

ಅಂಟಿಕೆಪಂಟಿಕೆ ಔಂತ್ಲ: ಅಂಟಿಕೆ ಪಂಟಿಕೆ ಮೇಳದಿಂದ ಸಂಗ್ರಹಿಸಿದ ದವಸ ಧಾನ್ಯ ಹಾಗೂ ಹಣದಿಂದ ಸುತ್ತಮುತ್ತಲಿನ ಊರಿನವರನ್ನು ಆಹ್ವಾನಿಸಿ ಏರ್ಪಡಿಸುವ ಸಾಮೂಹಿಕ ಔತಣಕೂಟ (ಮಲೆ) **ನೋಡಿ–** ಅಂಟಿಗೆ ಪಂಟಿಗೆ

ಅಂಟಿಗೆಪಂಟಿಗೆ: ಇದು ಮಲೆನಾಡಿನ ದೀಪಾವಳಿ ಸಂಪ್ರದಾಯಗಳಲ್ಲಿ ಒಂದು. ಬಲೀಂದ್ರ ಪೂಜೆಯ ದಿನ ರಾತ್ರಿ ಊರಿನ ತರುಣರು ಸೇರಿ ದೇವಸ್ಥಾನದ ನಂದಾದೀಪದಿಂದ ಜ್ಯೋತಿ ಹಚ್ಚಿಕೊಂಡು, ಅಂಟಿಗೆ ಪಂಟಿಗೆ ಹಾಡು ಹೇಳುತ್ತ, ಮೇಳ ಕಟ್ಟಿಕೊಂಡು ಮನೆ ಮನೆಗೆ ತೆರಳಿ ಅವರ ಮನೆಯ ತುಳಸಿಕಟ್ಟೆಯ ಮೇಲೆ ಜ್ಯೋತಿ ಇಟ್ಟು ಬಾಗಿಲು ತೆಗೆಸುತ್ತಾರೆ. ಮನೆಯವರು ಇವರನ್ನು

ಮೇಲ್ಜಗಲಿಗೆ ಬರಮಾಡಿಕೊಂಡು ಜ್ಯೋತಿಗೆ ಎಣ್ಣೆ ಹಾಕಿ, ತಮ್ಮ ಮನೆಯ ದೀಪವನ್ನು ಅದರಿಂದ ಹಚ್ಚಿಸಿಕೊಂಡು ಹಣ, ಅಕ್ಕಿ, ತಿಂಡಿ ಕೊಟ್ಟು ಕಳಿಸುವರು (ಮಲೆ). **ಇರೂ:** *ಹಬ್ಬ ಹಾಡುವುದು, ದೀಪ ನೀಡುವುದು*

ಅಂಟಿನ ಉಂಡೆ: ೧. ಹುರಿಗಡಲೆ, ಮಂಡಕ್ಕಿ, ಕಡ್ಲೆಕಾಯಿಬೀಜ ಮೊದಲಾದವನ್ನು ಬೆಲ್ಲದ ಪಾಕದಲ್ಲಿ ಸೇರಿಸಿ ಕಟ್ಟಿದ ಸಿಹಿ ಉಂಡೆ (ದಾವ.ಜಿ). **ಇರೂ:** *ಪುರಿಉಂಡೆ (ಮೈಸೂ.ಜಿ)* ೨. ಒಣಹಣ್ಣು, ಕೊಬ್ಬರಿ, ಗಸಗಸೆಗಳಿಗೆ ಅಂಟು ಬೆರೆಸಿ ತಯಾರಿಸಿದ ಸಿಹಿ ಉಂಡೆ (ಉಕ.ಜಿ)

ಅಂಟಿನಬಾರು: ನೊಗಕ್ಕೆ ತಳಕು ಹಾಕುವ ಹಗ್ಗ

ಅಂಟಿನ್‌ಕಯ್ಡಿ: ೧. ಅಂಟಿನ ಕರಡಿಗೆ ೨. ಕುಂಕುಮ ಹಚ್ಚಿಕೊಳ್ಳಲು ಬಳಸುವ ಅಂಟು

ಅಂಟಿಬಿಲ್ಲಿ: ನೋಡಿ– ಅಂಚಿಬಿಲಿ

ಅಂಟಿಸು: ನಾಟಿ ಮಾಡು. **ಪ್ರ:** ರಾಗಿ ಸಸಿ ಅಂಟಿಸು

ಅಂಟು: ೧. ಕೆಲವು ಸಸ್ಯಗಳಿಂದ ಜಿನುಗುವ, ಜಿಗುಟಾದ ಹಾಲಿನಂತಹ ರಸ; ಗೋಂದು; ಮೆತ್ತಿಕೊಳ್ಳುವ ಸ್ವಭಾವವುಳ್ಳ ವಸ್ತು. **ಪ್ರ:** ಅದನ್ನು ಮುಟ್ಟಿದ್ರೆ ಕೈಯೆಲ್ಲಾ ಅಂಟಾಗುತ್ತೆ ೨. ತಾಕು. **ಪ್ರ:** ಅವ್ರು ಯಾವಾಗ್ಲೂ ಒಬ್ರಿಗೊಬ್ರು ಅಂಟ್ಕೊಂಡೇ ಕೂತಿರ್‍ತಾರೆ ೩. ಮುಟ್ಟು; ಸಾವಿನ ಸಂಬಂಧವಾದ ಮೈಲಿಗೆ ೪. ಸಂಬಂಧ ೫. ಕಸಿ ಮಾಡಲು ಅಥವಾ ನೆಡಲು ಬಳಸುವ ಹಂಬು ಅಥವಾ ಗಿಡದ ತುಂಡು. ಅದನ್ನು ನೆಟ್ಟರೆ ಚಿಗುರಿ ಗಿಡವಾಗುತ್ತದೆ. **ಪ್ರ:** ಮಲ್ಲಿಗೇದೋ, ಗುಲಾಬಿದೋ ಒಂದೆರಡು ಅಂಟು ತಂದು ಹಾಕು

ಅಂಟುಗಣ್ಣಿ/ಅಂಟ್ಗಣ್ಣಿ: ಗೀಜು ತುಂಬಿರುವ ಕಣ್ಣಿನವಳು

ಅಂಟುಗಣ್ಣು: ಕಣ್ಣಿಗೆ ಅಂಟುಜಾಡ್ಯ ಆದಾಗ ಕಣ್ಣು ಕಟ್ಟಿಕೊಳ್ಳುವಿಕೆ

ಅಂಟುಗುಗ್ಗುಲ: ಕಾಮಿಫೋರ ವೈಟಿಲ್*:* ಧೂಪದ ಮರ. ಈ ಮರದ ತೊಗಟೆಯನ್ನು ಕಚ್ಚು ಮಾಡಿ, ಅದರಿಂದ ಜಿನುಗುವ ಸುವಾಸಿತ ರಾಳವನ್ನು ಒಣಗಿಸಿ ಧೂಪ ಹಾಕಲು ಬಳಸುತ್ತಾರೆ (ದಕ.ಜಿ)

ಅಂಟುಗೋಡೆ: ಒತ್ತುಗೋಡೆ. **ಪ್ರ:** ಅವರ ಮನೆ ಮತ್ತು ನಮ್ಮನೇದು ಅಂಟುಗೋಡೆ

ಅಂಟುಗ್ವಾಟೆ: ಯುದ್ಧದ ಸಂದರ್ಭದಲ್ಲಿ ರಣರಂಗದಿಂದ ಹಿಂದಿರುಗಿ ಬರುವ ಸೈನ್ಯ ತಂಗಲು, ಆಯುಧಗಳನ್ನೆಲ್ಲ ರಕ್ಷಿಸಲು, ಊಟ ಉಪಚಾರ ರಂಜನೆಗಳಿಗಾಗಿ ಮೀಸಲಾದ ಮುಖ್ಯಕೋಟೆಯ ಬಳಿ ಇರುವ ನೆಲೆ. **ಇರೂ:** *ಬಿಡದಿ*

ಅಂಟುಜಲಬೇಟೆ: ಹಕ್ಕಿ ಬೇಟೆಯ ಒಂದು ವಿಧಾನ

ಅಂಟುನಾಲಿಗಿ: ನಾಲಿಗೆ ದಪ್ಪ ಆಗಿ ಅದರ ಮೇಲೆ ಮುಳ್ಳು ಎದ್ದಂತೆ ಭಾಸವಾಗುವ ಕಾಯಿಲೆ (ಶಿವ.ಜಿ)

ಅಂಟುಪುರಲೆ: ನೋಡಿ– ಅಂಟುಪುರಳೆ

ಅಂಟುಪುರಳೆ/ಅಂಟುಪುರಲೆ/ ಅಂಟುಪುರ್ಲೆ: ೧. *ಪ್ಯೂಪಲಿಯ ಅಟ್ರೋ ಪರ್ಪ್ಯೂರಿಯ:* ದನದ ಬಾಲಕ್ಕೆ ಅಥವ ಬಟ್ಟೆಗೆ ಅಂಟಿಕೊಳ್ಳುವ ಸಣ್ಣ ಮುಳ್ಳುತೆನೆ ಹೊಂದಿರುವ ಒಂದು ಬಗೆಯ ಸಸ್ಯ ೨. *ಸೆಟಾರಿಯ ಪಲ್ಲಿದೆಫೆಂಟಾ:* ಸೋಕಿದರೆ ಅಂಟಿಕೊಳ್ಳುವ ಗುಣವುಳ್ಳ ಹುಲ್ಲಿನ ಗಿಡ. **ಇರೂ:** *ಬಿಳಿಕೊರ್ಲೆ*

ಅಂಟುಪುರ್ಲೆ: ನೋಡಿ– ಅಂಟುಪುರಳೆ

ಅಂಟುಬಟ್ಟೆ: ಮೈಲಿಗೆಬಟ್ಟೆ (ಕೋಲಾ.ಜಿ). **ಇರೂ:** *ಮುಸುರೆಬಟ್ಟೆ*

ಅಂಟುಬೆಲ್ಲ: ಆಗಷ್ಟೇ ತಯಾರಾದ ಬೆಲ್ಲದಿಂದ ತಯಾರಿಸಿದ ಮೃದುವಾದ ಮಿಠಾಯಿ (ಉಕ.ಜಿ)

ಅಂಟುಮಂಟು: ಸೂತಕ

ಅಂಟುಮಲ್ಗೆ: ಒಂದು ಜಾತಿಯ ಮಲ್ಲಿಗೆ (ಮಂಡ್ಯ.ಜಿ)

ಅಂಟುಮಳೆ: ನಿರಂತರವಾಗಿ ಸುರಿಯುವ ಜಿಟಿಜಿಟಿ ಮಳೆ; ಸೋನೆಮಳೆ

ಅಂಟುಮುರಾವು: ಕಿವಿಯ ಆಭರಣ; ಮುರಾವಿನ ಒಂದು ಬಗೆ (ಮೈಸೂ.ಜಿ)

ಅಂಟುಮುರಿಯುವುದು: ಬಳಸುವ ಬೆಲ್ಲ ತೀರಾ ಅಂಟಾಗಿ ಉಳಿಯದಂತೆ ಗ್ವಾರೆ ಹುಟ್ಟಿನಿಂದ ತಿಕ್ಕಿ ಹದಗೊಳಿಸುವ ಕ್ರಿಯೆ (ಉಕ.ಜಿ)

ಅಂಟುವಾಳ/ಅಂಟವಾಳ/ಅಂಟಾಳ/ಅಣ್ಟವಾಳ: *ಸ್ಯಾಪಿಂಡಸ್ ಇಮಾರ್ಜಿನೇಟಸ್:* ಒಂದು ಚಿಕ್ಕ ಮರ. ಇದರ ಒಣಗಿದ ಕಾಯಿಗಳನ್ನು ಜಜ್ಜಿ ನೀರಲ್ಲಿ ನೆನೆಸಿ ಹಿಂಡಿದರೆ ಸೋಪಿನಂತೆ ವಿಶಿಷ್ಟವಾದ ನೊರೆ ಬರುತ್ತದೆ. ಬಟ್ಟೆ ಒಡವೆ ಮೊದಲಾದವನ್ನು ತೊಳೆಯಲು ಬಳಸುತ್ತಾರೆ. ಕಾಯಿಯಲ್ಲಿ ಕಫನಿವಾರಕ ಗುಣವಿದೆ. ತಲೆಸ್ನಾನಕ್ಕೆ ಸೀಗೆಪುಡಿಗೆ ಬದಲಾಗಿ ಬಳಸುತ್ತಾರೆ. ರೇಷ್ಮೆ ವಸ್ತ್ರಗಳನ್ನು

ಇದರಲ್ಲಿ ಒಗೆದರೆ ಹೆಚ್ಚು ಹೊಳಪು ಬರುತ್ತದೆ. **ಪ್ರ:** ಅಂಟವಾಳದ ಕಾಯಿಗೆ ಬಂಟವಾಳಕ್ಕೆ ಹೋಗಬೇಕೆ? **ಇರೂ:** *ಅರಟಾಳಿ, ಅರಡಾಳ, ಅಂಟ್ವಾಳ, ಅರಿಟಾಳ, ಅರುಟೌಳ, ನೊರೆಕಾಯಿ (ದಕ.ಜಿ), ಬುರುಗಿನ ಗಿಡ (ಬಿಜಾ.ಜಿ)* (ಚಿತ್ರ ನೋಡಿ)

ಅಂಟುಶುಂಠಿ ಲೇಹ್ಯ: ಹಸಿ ಶುಂಠಿ, ದ್ರಾಕ್ಷಿ, ಕಲ್ಲುಸಕ್ಕರೆ, ಜೀರಿಗೆ, ಬಾದಾಮಿ, ಉತ್ತುತ್ತೆ, ಗೋಡಂಬಿ, ಗಸಗಸೆ, ಬೆಲ್ಲ, ದಿಂಡಿನ ಅಂಟು ಹಾಕಿ ಕುಟ್ಟಿ ಪಾಕ ಬರಿಸಿ ಬಾಣಂತಿಯರಿಗೆ ನೀಡುವ ಸಾಂಪ್ರದಾಯಿಕ ಲೇಹ್ಯ (ಮಲೆ)

ಅಂಟುಸಾಲು: ಹೊಲದಲ್ಲಿ ಬೀಜ ಬಿತ್ತುವಾಗ ಇಲ್ಲವೆ ಸಸಿ ನಾಟಿ ಮಾಡಲು ಸಾಲು ಮಾಡುವಾಗ ಸಮಾನಾಂತರವಾಗಿರದ ಕಡಿಮೆ ಅಗಲದ ಸಾಲುಗಳು

ಅಂಟುಹಾಕು: ೧. ಸಸಿ ನೆಡು. **ಪ್ರ:** ಒಂದು ಏಳುಸುತ್ತಿನ ಮಲ್ಲಿಗೆ ಅಂಟು ಹಾಕಬೇಕು ೨. ಜಗಳ ತಂದಿಡು

ಅಂಟುಹೊಡಿ: ೧. ನೇಯ್ದ ಸೀರೆಗಳಿಗೆ ಮರದ ಅಂಟಿನ ನೀರನ್ನು ಸಿಂಪಡಿಸು ೨. ನೇಯ್ಗೆಯ ಒಂದು ಹಂತ

ಅಂಟೆ: ೧. ರೇಷ್ಮೆ ನೂಲನ್ನು ಸುತ್ತಲು ಬಳಸುವ ಉಪಕರಣ ೨. ಅಮಟೆ; ಒಂದು ಜಾತಿಯ ಮರ. ಇದರ ಕಾಯಿಯನ್ನು ಹುಳಿ ಪದಾರ್ಥಕ್ಕೆ ಮತ್ತು ಉಪ್ಪಿನಕಾಯಿಗೆ ಬಳಸುತ್ತಾರೆ

ಅಂಟೆಗೊದ್ದ: ನೋಡಿ– ಓತಿಕ್ಯಾತ

ಅಂಟೆಯ: ಒಂದು ಆಭರಣ (ಬಳ್ಳಾ.ಜಿ)

ಅಂಟ್ಗಣ್ಣಿ: ನೋಡಿ– ಅಂಟುಗಣ್ಣಿ (ಮೈಸೂ.ಜಿ)

ಅಂಟ್‌ತಗ್ರಿಗಿಡ: ನೋಡಿ– ಅಂಚ್‌ತಗ್ರೀಸೊಪ್ಪು

ಅಂಟ್ರಾಗಾಲು: ಕೊರಳಿಗೆ ಜೋತುಬಿದ್ದು ತನ್ನ ಕಾಲುಗಳಿಂದ ಇನ್ನೊಬ್ಬನನ್ನು ತೆಕ್ಕೆ ಹಾಕಿ ಹಿಡಿಯುವುದು. **ಇರೂ:** *ಅಂಟ್ರಿಕಿ*

ಅಂಟ್ರಿಕಿ: ನೋಡಿ– ಅಂಟ್ರಾಗಾಲು

ಅಂಟ್ರಿಸು: ಅಂಟು; ಕೈಗೆ ಹತ್ತಿಕೊಳ್ಳು

ಅಂಟ್ಸು (ಕ್ರಿ): ೧. ಅಂಟಿಸು; ಹತ್ತಿಸು; ಹಚ್ಚು. **ಪ್ರ:** ದೀಪ ಅಂಟ್ಸು ೨. ಉರಿಸು. **ಪ್ರ:** ಒಲೆ ಅಂಟ್ಸು ೩. ಮೆತ್ತಿಸು. **ಪ್ರ:** ಅವೆರಡನ್ನು ಒಂದಕ್ಕೊಂದು ಅಂಟ್ಸು. **ಇರೂ:** *ಅತ್ಸು, ಕಸ್ಸು, ಅಂಟ್ರಿಸು*

ಅಂಡ: ೧. ಆಟದ ಹೆಸರು ೨. ಹಠದ ಸ್ವಭಾವ ೩. ಅಂಟಿಕೊಂಡು; ತಾಗಿಸಿಕೊಂಡು (ಬೆಳ.ಜಿ) ೪. ಆಸರೆ; ಬೆಂಬಲ (ಕೋಲಾ.ಜಿ)

ಅಂಡಆಲಿಮೊಗ್ಗು: ಒಂದು ಗ್ರಾಮೀಣ ಆಟ

ಅಂಡಗುರಿ: ಹಂಡಬಣ್ಣದ ಕುರಿ. **ಪ್ರ:** ಅಂಡಗುರಿ ಬಂಡಗುರಿ (ತುಮ.ಜಿ)

ಅಂಡಪುರುಲ್ಕಿ: ನೋಡಿ– ಅಂಡಾಪುರಕಿ

ಅಂಡಬಂಡ: ೧. ಹಂಡಬಂಡ; ಮಿಶ್ರ ಬಣ್ಣ ೨. ಮೋಸಗಾರ; ಭಂಡ

ಅಂಡಮಟಾ: ಪೂರ್ಣ; ತಳಮಟ್ಟದವರೆಗೂ

ಅಂಡರಿಯದ: ಅಂಡು ಹರಿಯದ; ಬಿಡುವಿಲ್ಲದ

ಅಂಡಲುಬೆ: ಉಳುಮೆಯ ಮಣ್ಣನ್ನು ಪುಡಿಗಟ್ಟಿಸಿ ಸಮತಟ್ಟಾಗಿಸುವ ಮರದ ಸಾಧನ (ಮಂಡ್ಯ.ಜಿ)

ಅಂಡಲೆ: ಕಾರಣವಿಲ್ಲದೆ ಅಲೆದಾಡು; ತಿರುಗಾಡು; ಬೀದಿಸುತ್ತು

ಅಂಡಳ್ಳಾಟ: ನೋಡಿ– ಆಣಿಕಲ್ಲಾಟ (ಶಿವ.ಜಿ)

ಅಂಡಳ್ಳೊಗದಂಗ: ಯಾವಾಗಲಾದರೂ ಒಂದೊಂದು ದಪ್ಪ ದಪ್ಪ ಹನಿ ಮಳೆ ಆಗುವುದು (ಶಿವ.ಜಿ)

ಅಂಡಾಡ್ಡಮನೆ: ಹೆಣ್ಣುಮಕ್ಕಳು ಹೆಚ್ಚಾಗಿರುವ ಮನೆ (ಮಂಡ್ಯ.ಜಿ)

ಅಂಡಾಡ್ಸು (ಕ್ರಿ): ೧. ಅಂಡನ್ನು ಆಡಿಸು; ತಳವನ್ನು ತಿರುಗಿಸು ೨. ಸಾರಿನ ಪಾತ್ರೆಯ ತಳ ಸೀಯದಂತೆ ಸೌಟಿನಿಂದ ತಿರುವು

ಅಂಡಾಪುರಕಿ: ೧. ಒಬ್ಬೊಬ್ಬರ ಹತ್ತಿರ ಒಂದೊಂದು ರೀತಿ ಮಾತನಾಡುವವನು; ಅವಕಾಶವಾದಿ; ಇಬ್ಬಂದಿ; ಸಮಯ ಸಾಧಕ ೨. ಬುದ್ಧಿ ಇಲ್ಲದವ; ಒಂದು ಬೈಗುಳ. **ಇರೂ:** *ಅಂಡಪುರುಲ್ಕಿ, ಅಂಡಾಳ*

ಅಂಡಾಳ: ನೋಡಿ– ಅಂಡಾಪುರಕಿ

ಅಂಡಿ: ಬೆಳವಣಿಗೆಯಿಲ್ಲದುದು (ಮಂಗ.ಜಿ)

ಅಂಡಿಇಡು: ತತ್ತಿ ಹಾಕು. **ಪ್ರ:** ಮನ್ಯಾಗ್ಯುಂತೇನು ಅಂಡಿ ಇಡ್ತೇನು (ಉಕ.ಜಿ). **ಇರೂ:** *ಮೊಟ್ಟೆ ಇಕ್ಕು (ಮೈಸೂ.ಜಿ)*

ಅಂಡಿಕುಂಡಿ: ತಲೆಬುಡ (ದಕ.ಜಿ)

ಅಂಡಿಗೆ/ಅಂಡ್ಗಿ: ಹತ್ತಿ ಮೊದಲಾದವುಗಳ ದೊಡ್ಡ ಮೂಟೆ; ಅರಳೆಮೂಟೆ (ಉಕ.ಜಿ)

ಅಂಡಿಚೀಲ: ಸರಕು ಸಾಗಿಸುವ ನೂಲಿನ ಚೀಲ

ಅಂಡಿಡು: ಅಡ್ಡಿಪಡಿಸು; ಜಗಳ ಹಚ್ಚು; ಭೇದ ಹುಟ್ಟಿಸು (ಉಕ.ಜಿ)

ಅಂಡಿತಿಮ್ಮ: ಮೈ ಬೆಳೆಸಿಕೊಂಡವ; ಸೋಮಾರಿ

ಅಂಡಿಬಿಡ: ಒಂದು ಜಾತಿಯ ಮರ

ಅಂಡೀಲು: ಲೀಯ ಇಂಡಿಕ: ಈ ಸಸ್ಯಗಳು ಪೊದೆಗಳಂತೆ ಬೆಳೆಯುತ್ತವೆ. ಹೂಗಳ ಬಣ್ಣ ಹಸಿರುಮಿಶ್ರಿತ ಬಿಳಿ. ಇದರ ಹಣ್ಣು ರಸಭರಿತವಾಗಿದ್ದು ನೇರಳೆ ಬಣ್ಣ ಹೊಂದಿರುತ್ತದೆ. ಡಿಸೆಂಬರ್, ಜುಲೈ ಸಮಯದಲ್ಲಿ ಬೆಳೆಯುವುದು. **ಇರೂ:** *ದೀಪಾವಳಿ ಕೋಲು, ನೆಡಿಲ್ ಸೊಪ್ಪು (ಚಿಮ.ಜಿ)*

ಅಂಡು: ೧. ತಳಭಾಗ; ಬುಡ **ಪ್ರ:** ಮುದ್ಕಂಗೂ ಮುದ್ಕೀಗೂ ಎಲ್ಲಿ ಏಕಾಂತ ಅಂದ್ರೆ ಮುತ್ತುಗದ ಮರದ ಅಂಡಲ್ಲಿ ಅಂತ (ಗಾದೆ) ೨. ನಿತಂಬ; ಮುಕಳಿ ೩. ಬೇಟೆಯ ಗಾತ್ರ, ಎತ್ತರ ನಿರ್ಧರಿಸುವುದು ೪. ಮುಳ್ಳುಹೊರೆ; ಕಡಿದ ಮುಳ್ಳಿನ ಟೊಂಗೆ (ಉಕ.ಜಿ)

ಅಂಡುಕಟ್ಟು: ಯಕ್ಷಗಾನ ವೇಷಗಾರಿಕೆಯಲ್ಲಿ ಕೃತಕ ನಿತಂಬ ಕಟ್ಟಿಕೊಳ್ಳುವಿಕೆ (ದಕ.ಜಿ). **ಇರೂ:** *ಅಂಡಿನವಸ್ತ್ರ*

ಅಂಡುಕುಟ್ಟಿ: ಪೂರ್ವರಂಗದ ಕಟ್ಟು ಹಾಸ್ಯಗಳಲ್ಲಿ ಒಂದು ಬಗೆ (ದಕ.ಜಿ)

ಅಂಡುಗಾಲು: ಹಿಮ್ಮಡಿ ದಪ್ಪವಾಗಿರುವ ಕಾಲು (ಹಾಸ.ಜಿ)

ಅಂಡುಗೋಡೆ: ಮುಖ್ಯವಾದ ಗೋಡೆಯನ್ನು ಭದ್ರಪಡಿಸುವುದಕ್ಕಾಗಿ ಅದರ ಒತ್ತಿನಲ್ಲಿ ಆಸರೆಯಾಗಿ ಕಟ್ಟುವ ಗೋಡೆ; ಈಡುಗೋಡೆ

ಅಂಡುಬಡುಕೋ: ಅಸೂಯೆಪಡು

ಅಂಡುಬೆಳಗು: ಚೆನ್ನಾಗಿ ಹೊಡೆತ ಹಾಕು. **ಇರೂ:** *ಅಂಡು ಮುರಿ*

ಅಂಡುಮಲ್ಗೆ: ಒಂದು ಜಾತಿಯ ಮಲ್ಲಿಗೆ

ಅಂಡುಮುರಿ: **ನೋಡಿ–** ಅಂಡು ಬೆಳಗು

ಅಂಡುರ್ಗಪ್ಪಿ: ದೊಡ್ಡ ಕಪ್ಪೆ (ಧಾರ.ಜಿ)

ಅಂಡುಸುಟ್ಟಂಕುಳಿ: ಸೌತೆಕಾಯಿಯ ಒಂದು ವ್ಯಂಜನ. ತೆಂಗಿನತುರಿ ಮತ್ತು ಒಣಮೆಣಸು ರುಬ್ಬಿಕೊಂಡು, ಹುರಿದ ಸೌತೆಕಾಯಿ ಹೋಳುಗಳನ್ನು ಅದರೊಟ್ಟಿಗೆ ಹಾಕಿ ಕುದಿಸಿದ್ದು (ಚಿಮ.ಜಿ)

ಅಂಡುಹಿಡಿಯೋದು: ೧. ಶಾಖ ಹೆಚ್ಚಾಗಿ, ಪಾತ್ರೆಯ ತಳದಲ್ಲಿರುವ ಅಡುಗೆ ಸೀಯುವುದು; ತಳ ಹಿಡಿಯುವುದು (ಮಂಡ್ಯ.ಜಿ) ೨. ನಿರುದ್ಯೋಗ ೩. ಸದಾ ಮನೆಯಲ್ಲೇ ಕುಳಿತುಕೊಳ್ಳುವುದು; ಸೋಮಾರಿತನ

ಅಂಡುಹೇರು: ಮುಳ್ಳುಟೊಂಗೆಗಳನ್ನು ಒಂದರ ಮೇಲೊಂದಿಡು; ಅಡ್ಡಿಒಡ್ಡು (ಉಕ.ಜಿ)

ಅಂಡೂರು: ಅನಪೇಕ್ಷಿತವಾಗಿ ಅನ್ಯರಲ್ಲಿ ಬಂದು ತಳ ಊರು (ದಕ.ಜಿ)

ಅಂಡೆ: ೧. ಹಂಡೆ; ಸ್ನಾನಕ್ಕೆ ನೀರು ಕಾಯಿಸಲು ಬಳಸುವ ಮಣ್ಣು ಅಥವಾ ತಾಮ್ರದ ದೊಡ್ಡ ಪಾತ್ರೆ; ಕಳಸಿಗೆ ೨. ಟೊಳ್ಳು ಬಿದಿರಿನ ಗೆಣ್ಣಿನ ಕೆಳಭಾಗವನ್ನು ಉಳಿಸಿ ಇನ್ನೊಂದು ಕಡೆ ಗೆಣ್ಣು ತೆಗೆದುಹಾಕಿ ಬಾಯಿ ಮಾಡಿರುವ ಕೊಳವೆ. ಇದನ್ನು ಉಪ್ಪು, ಔಷಧಿ, ಕೀಲೆಣ್ಣೆ ಕಾಗದಪತ್ರಗಳು ಮೊದಲಾದುವನ್ನು ಹಾಕಿಡಲು ಬಳಸುತ್ತಾರೆ ೩. ಮೊಸರು ಕಡೆಯಲು ಬಳಸುವ ಬಿದಿರಿನ ಸಾಧನ (ದಕ.ಜಿ) ೪. ಮಧ್ಯದ ಬೆರಳನ್ನು ಹೆಬ್ಬೆಟ್ಟಿಗೆ ಆನಿಸಿದಂತೆ ಮಿಡಿದು ಒಬ್ಬರ ಹಣೆಗೆ ಪೆಟ್ಟುಕೊಡುವುದು.

ಅಂಡೆಕಾಲು: ಡೊಂಕು ಕಾಲು (ದಕ.ಜಿ)

ಅಂಡೆಕುರುಬ: ಬಿದಿರಿನ ಹಂಡೆಯನ್ನು ಕುರಿಗಳ ಹಾಲು ಕರೆಯಲು ಮತ್ತಿತರ ಉದ್ದೇಶಕ್ಕೆ ವಿಶೇಷವಾಗಿ ಬಳಸುತ್ತಿದ್ದ ಕುರುಬರ ಒಂದು ಪಂಗಡ (ಮಂಡ್ಯ.ಜಿ)

ಅಂಡೆಜೋಳ: ಜೋಳದ ಒಂದು ಪ್ರಬೇಧ (ಮೈಸೂ.ಜಿ)

ಅಂಡೆತ್ತು: ೧. ನಶ್ಯ ಬಣ್ಣದ ಎತ್ತು ೨. ಬಿಳಿ ಕಪ್ಪು ಮಿಶ್ರಿತ ಬಣ್ಣದ ಎತ್ತು; ಹಂಡಬಣ್ಣದ ಎತ್ತು

ಅಂಡೆದುರ್ಸು: ೧. ಒಂದು ಬಗೆಯ ದುರುಸು ಬಾಣ. ೨. ಹೆಡ್ಡ; ಅರೆಹುಚ್ಚ (ದಕ.ಜಿ)

ಅಂಡೆಪಾಜೋವು: *ಫೈಕಸ್ ಆಸ್ಪೇರಿಮಾ:* ಹೊಳೆ ಬದಿ ಇತ್ಯಾದಿ ತೇವ ಇರುವಲ್ಲಿ ಬೆಳೆಯುವ ಒಂದು ಪೊದರು ಸಸ್ಯ. ಜಾನುವಾರುಗಳು ಕರು ಹಾಕಿದ ನಂತರ ಮಾಸು ಬೀಳಿಸಲು ಇದರ ಒರಟು ಎಲೆಗಳನ್ನು ತಿನ್ನಿಸುತ್ತಾರೆ. **ಇರೂ:** *ಕಾಡುಅಂಜೂರ*

ಅಂಡೆಪಿರ್ಕಿ: ಅರೆಹುಚ್ಚ (ದಕ.ಜಿ)

ಅಂಡೆಬಿದಿರು: ಬಿದಿರಿನಲ್ಲಿ ಒಂದು ವಿಧ (ದಕ.ಜಿ)

ಅಂಡೆಬೀಗ: ಅಂಡೆಯಾಕಾರಾದ ಬೀಗ (ದಕ.ಜಿ)

ಅಂಡೆಮೂಗು: ದುಂಡಗಿರುವ ದೊಡ್ಡ ಮೂಗು (ದಕ.ಜಿ)

ಅಂಡೆಯವರು: ಕೊರಗರ ಒಂದು ಪಂಗಡ. ಅವರು ತಮ್ಮ ಕೊರಳಿಗೆ ಒಂದು ಮರದ ಪಾತ್ರೆಯನ್ನು ತೂಗು ಹಾಕಿಕೊಂಡು, ಅದರಲ್ಲೇ ಉಗುಳಬೇಕೇ ಹೊರತು ಬೀದಿಯ ಮೇಲೆ ಉಗುಳಬಾರದು ಎಂಬ ಪದ್ಧತಿ ಇತ್ತು (ಧಾರ.ಜಿ)

ಅಂಡೊಡಕ: ಅಡಕೆ ಮುಂತಾದ ಬೆಳೆಗೆ ಬರುವ ಒಂದು ವಿಚಿತ್ರವಾದ ರೋಗ (ಬಳ್ಳಾ.ಜಿ)

ಅಂಡೊಡಕು ಅಡಿಕೆ: ಅಡಿಕೆಯ ತಳ, ಮುಕಳಿ ಅಥವಾ ಕುಂಡಿ ಒಡೆಯುವುದು. ಪೋಷಕಾಂಶದ ಕೊರತೆ ಇದಕ್ಕೆ ಕಾರಣ (ಉಕ.ಜಿ). **ಇರೂ:** *ಮುಕಳಿಒಡಕ*

ಅಂಡ್‌ಕೊಕ್ಕೆ: ಅಂಡುಕೊಕ್ಕೆ; ತೆಂಗು, ಅಡಕೆ ಮರ ಹತ್ತುವಾಗ ಕತ್ತಿ, ಕುಡುಗೋಲು ಮೊದಲಾದುವನ್ನು ಸಿಕ್ಕಿಸಿಕೊಂಡು ಮರ ಹತ್ತಲು ಅನುಕೂಲ ವಾಗುವಂತೆ ಸೊಂಟಕ್ಕೆ ಕಟ್ಟಿಕೊಳ್ಳುವ ಮರದ ಅಥವಾ ಕಬ್ಬಿಣದ ಕೊಕ್ಕೆ

ಅಂಡ್ಕೋ: ೧. ಹರಡಿಕೋ (ದಕ) ೨. ಅವಿತುಕೋ; ಕಾಣದಂತೆ ಕುಳಿತುಕೋ

ಅಂಡ್ಗ: ಕೂಳೆ (ತುಮ.ಜಿ)

ಅಂಡ್ಗಿ: **ನೋಡಿ–** ಅಂಡಿಗೆ

ಅಂಡ್ಯಾಳ: ಹರಳುಗಳನ್ನು ಬಳಸಿ ಆಡುವ ಗ್ರಾಮೀಣ ಆಟ. ಈ ಆಟ ಆಡಿದರೆ ಮಳೆ ಬರುವುದಿಲ್ಲವೆಂಬ ನಂಬಿಕೆ ಇದ್ದು, ತುಂಬಾ ಮಳೆ ಬಿದ್ದಾಗ ಮಾತ್ರ ಈ ಆಟ ಅಡುತ್ತಾರೆ

ಅಂಡ್ರುಸು: ಅಂಡರಿಸು; ಒಂದು ಕಡೆ ರಾಶಿಹಾಕು (ಚಿಮ.ಜಿ)

ಅಂಡ್ಲಿ: ಇಣಚಿ; ಅಳಿಲು (ಉಕ.ಜಿ)

ಅಂಡ್ಹತ್ತು: **ನೋಡಿ–** ಅಂಡು ಹಿಡಿಯೋದು

ಅಂಡ್ಹರಕಿ: ಗಯ್ಯಾಳಿ (ಬಿಜಾ.ಜಿ)

ಅಂತ: ಹಂತ; ಮೆಟ್ಟಿಲು

ಅಂತಕಾಲ: ಕೊನೆಗಾಲ; ಸಾವು (ಧಾರ.ಜಿ)

ಅಂತಮೂಲ: *ಟೈಲೋಫೋರ ಆಸ್ತ್ಯಾಟಿಕ್ ಇಂಡಿಕ:* ಒಂದು ಔಷಧಿ ಸಸ್ಯ; ಆಡುಮುಟ್ಟದ ಗಿಡ. **ಇರೂ:** *ಕಿರುಮಂಚಿ, ನಾಯಿಹಾಲೆ*

ಅಂತರ: ೧. ಬೀಸುವ ಕಲ್ಲಿನ ಅಡಿಗಲ್ಲಿನ ಮಧ್ಯದ ಮೊಳೆಗೆ ಸಿಗಿಸಿದ ತಗಡಿನ ಬಿಲ್ಲೆ. ಇದರಿಂದ ಬೀಸುವ ಕಲ್ಲಿನ ಮೇಲು ಮತ್ತು ಕೆಳಗಿನ ಕಲ್ಲುಗಳ ನಡುವೆ ಸ್ವಲ್ಪ ಅಂತರವೇರ್ಪಟ್ಟು ಎಳೆಯಲು ಹಗುರಾಗುತ್ತದೆ (ಧಾರ.ಜಿ) ೨. ಮನೆಯ ಛಾವಣಿಯನ್ನು ಮುಂದಕ್ಕೆ ವಿಸ್ತರಿಸಿ ರಚಿಸಿದ ಕೊಠಡಿಯ ಹಜಾರ ಅಥವಾ ಜಗಲಿ (ದಕ.ಜಿ) ೩. ಆಕಾಶ; ಅಂತರಿಕ್ಷ. **ಪ್ರ:** ಶಿವ ಪಾರ್ವತಿ ಅಂತರ ಮಾರ್ಗದಲ್ಲಿ ಹೋಗ್ತಾ ಇದ್ದರು

ಅಂತರಗಂಗೆ/ಅಂತ್ರಗಂಗೆ: *ಪಿಸ್ಟಿಯ ಸ್ಟ್ರ್ಯಾಟಿಯೋಟ್ಸ್:* ೧. ನೀರಿನಲ್ಲಿ ಬೆಳೆಯುವ ಒಂದು ಪರೋಪಜೀವಿ ಸಸ್ಯ (ಚಿತ್ರ ನೋಡಿ) ೨. ಬಾವಿಯೊಳಗೆ ಬಿದ್ದ ಕೊಡಪಾನಗಳನ್ನು ಹೊರತೆಗೆಯಲು ಬಳಸುವ ಸಾಧನ (ಬಳ್ಳಾ.ಜಿ). **ಇರೂ:** *ಪಾತಾಳಗರಡಿ (ಮೈಸೂ.ಜಿ)*

ಅಂತರಗಟ್ಟಮ್ಮ: ೧. ಅನೇಕ ಪಶ್ಚಿಮ ಜಿಲ್ಲೆಗಳಲ್ಲಿ ಕಂಡುಬರುವ ದೈವ ೨. ದುರ್ಗದ ಹೆಸರಾಂತ ರಕ್ಷಕ ದೇವತೆಗಳಲ್ಲಿ ಒಬ್ಬಳು

ಅಂತರಗಾಯಿ/ಅಂತ್ರಗಾಯಿ: ೧. ಮಂತ್ರಿಸಿದ ತೆಂಗಿನಕಾಯಿ; ಅನಿಷ್ಟ ನಿವಾರಣೆಗಾಗಿ ಮನೆಗೆ ದಿಗ್ಬಂಧನ ಮಾಡಲು ತಲೆಬಾಗಿಲ ಒಳಭಾಗದಲ್ಲಿ ವಿಧಿಪೂರ್ವಕವಾಗಿ ಕಟ್ಟುವ ಸಿಪ್ಪೆಸುಲಿಯದ ತೆಂಗಿನಕಾಯಿ. ಹೊಸಮನೆ ಪ್ರವೇಶಿಸುವ ಮುಂಚೆ ಇದನ್ನು ಕಟ್ಟುತ್ತಾರೆ ೨. ಕೃಷಿಗೆ ಸಂಬಂಧಿಸಿದ ತೊಂದರೆಗಳ ಪರಿಹಾರಕ್ಕಾಗಿ ಮಂತ್ರಿಸಿದ ತೆಂಗಿನಕಾಯನ್ನು ಊರ ಬಾಗಿಲೆದುರಿನ ಕಂಬಕ್ಕೆ ಅಥವಾ ಊರ ಬಾಗಿಲಿಗೆ ಕಟ್ಟುವುದರ ಮೂಲಕ ಸಲ್ಲಿಸುವ ಹರಕೆ (ಉಕ.ಜಿ)

ಅಂತರಟಿಗೆಬಳ್ಳಿ/ಅಂತ್ರಾಟ್ಗಿ: *ಟೆನೋಸ್ಪೋರ ಕಾರ್ಡಿಫೋಲಿಯ:* ಒಂದು ಔಷಧಿ ಸಸ್ಯ; ಅಮೃತ ಬಳ್ಳಿ. ದೊಡ್ಡ ಮರ, ಮನೆಯ ಛಾವಣಿ ಇತ್ಯಾದಿಗಳ ಮೇಲೆ ಹಬ್ಬಿ ದಾರದಂತಹ ಬೇರುಗಳನ್ನು ನೆಲಕ್ಕೆ ಇಳಿಬಿಟ್ಟು ಬೆಳೆಯುತ್ತದೆ. ಜ್ವರನಿವಾರಕ ಗುಣವಿದ್ದು, ದೆವ್ವ ಭೂತಗಳನ್ನು ದೂರವಿಡುತ್ತದೆಂಬ ನಂಬಿಕೆಯೂ ಇದೆ. **ಇರೂ:** ಅಂತ್ರಾಗ್ಗೆ, ತಿಪ್ಪತಿಗೆ, ದೆವ್ವಕಡಿಯುವಬಳ್ಳಿ

ಅಂತರಣ: ಗುಡಾಣಕ್ಕೆ ನೊದೆಹುಲ್ಲಿನ ಸಿಂಬೆ ಸುತ್ತಿದ ನಂತರ ಬೋರಲು ಹಾಕುವ ವಿಧಾನ (ತುಮ.ಜಿ)

ಅಂತರತೆರೆ: ಕೆಲವು ವೇಷಗಳ ಪ್ರವೇಶ ದೃಶ್ಯಕ್ಕೆ ಚಪ್ಪರದಂತೆ ಹಿಡಿಯುವ ಜಾಲರಿ ಇರುವ ವಸ್ತ್ರ

ಅಂತರತೆರೆ ಪೊರಪ್ಪಾಡು: ಯಕ್ಷಗಾನದಲ್ಲಿ ಅಂತರ ತೆರೆಯೊಂದಿಗೆ ಮಾಡುವ ಪ್ರವೇಶನೃತ್ಯದ ದೃಶ್ಯ (ದಕ.ಜಿ)

ಅಂತರದ ಕಲುಕಟ್ಟೆ: ಮೆಟ್ಟಿಲುಗಳಿರುವ ಕಲ್ಲಿನಕಟ್ಟೆ

ಅಂತರನೀರು: ಬಾವಿಯಿಂದ ನೀರನ್ನು ಸೇದಿ ಒಬ್ಬರ ಕೈಯಿಂದ ಮತ್ತೊಬ್ಬರ ಕೈಗೆ ಸಾಗಿಸುವುದು

ಅಂತರಪಟ: ೧. ಸುಮುಹೂರ್ತಕ್ಕೆ ಮೊದಲು ವಧೂವರರು ಪರಸ್ಪರ ಮುಖದರ್ಶನ ಮಾಡಬಾರದೆಂದು ನಡುವೆ ಹಿಡಿಯುವ ತೆರೆ; –ಪರದೆ; ಮಾಂಗಲ್ಯಧಾರಣೆಗೆ ಮೊದಲು ವಧೂವರರ ಮಧ್ಯೆ ಅಡ್ಡಲಾಗಿ ಹಿಡಿಯುವ ಬಟ್ಟೆ ೨. ಜವನಿಕೆ

ಅಂತರಪಿಶಾಚಿ: ಎಲ್ಲಿಯೂ ನೆಲೆ ಇಲ್ಲದಿರುವವನು. **ಪ್ರ:** ಅವನೊಬ್ಬ ಅಂತರಪಿಶಾಚಿ

ಅಂತರಬರುವ: ತಲೆಕೆಳಗೆಮಾಡು (ಚಾಮ.ಜಿ)

ಅಂತರಬೆಂತರ: ಪಿಶಾಚಿ; ಭೂತ

ಅಂತರಭುಗಲಿಪಟ: ಒಂದು ಬಗೆಯ ಗಾಳಿಪಟ

ಅಂತರಮಾಡು (ನಾ): ಮಾಳಿಗೆ ಮನೆಗಳ ಕೆಳಭಾವಣಿ (ದಕ.ಜಿ)

ಅಂತರಾಟ: ೧. ಅಂತರಾಳ ೨. ಆಕಾಶ ೩. ತ್ರಿಶಂಕುಸ್ಥಿತಿ. **ಪ್ರ:** ಎಂತೆಂತಾ ದೇವರಿಗೋ ಅಂತರಾಟವಾದರೆ ಕುಂಡು ಬೋರೆದೇವರು ಕೊಂಡೆ ಬಂಡಿ ಅಂತ ಗೊಣಗ್ತಿತ್ತಂತೆ ೪. ಯಾವ ಆಸರೆಯೂ ಇಲ್ಲದೆ ನೇತಾಡುತ್ತಿರುವ ಸ್ಥಿತಿ ೫. ಎತ್ತರವಾದ ಪ್ರದೇಶ

ಅಂತರಾಟದ ಕೊಳವೆ (ಕ್ರಿ): ಆಕಾಶಕ್ಕೆ ಹಾರಿಸಿ ಬೆಳಕನ್ನು ಚಿಮ್ಮುವ ಮದ್ದಿನ ಕೊಳವೆ (ಮಂಡ್ಯ.ಜಿ)

ಅಂತರಾಯ: ತಡೆ; ಅಡ್ಡಿ

ಅಂತರಿಸು: ಮೇಲಕ್ಕೆ ತಲೆ ಎತ್ತಿ ನೋಡು. **ಪ್ರ:** ಅಂತ್ರಂತ್ರಿಸ್ ನೋಡೋರ್ಗೆ ಎಂಥಾ ಕುಣಿಗಲ್ ಕೆರೆ ಸಂತೆ ಹಾದಿಲಿ ಕಲ್ಲುಕಟ್ಟೆ

ಅಂತರುಕ್ನಾಗಿ: ಮೇಲ್ಮುಖವಾಗಿರುವುದು; ಆಕಾಶದ ಕಡೆಗೆ ಮುಖಮಾಡಿ ಮಲಗಿದ ಭಂಗಿ; ಅಂಗಾತ (ಮಂಡ್ಯ.ಜಿ). **ಇರೂ:** *ಅಂಗ್‌ತಾರ್ಣ*

ಅಂತರೊ: ಮನೆಯ ಛಾವಣಿಯನ್ನು ಮುಂದಕ್ಕೆ ವಿಸ್ತರಿಸಿ ರಚಿಸಿದ ಕೊಠಡಿ

ಅಂತರ್ಕಿಲೆ: ೧. ಅಂತರಿಕ್ಷದಿಂದ; ಆಕಾಶಮಾರ್ಗವಾಗಿ ೨. ಅಂತಸ್ತು ೩. ಮಟ್ಟ (ಬಳ್ಳಾ.ಜಿ)

ಅಂತರ್‌ಪಟ: **ನೋಡಿ–** ಅಂತರಪಟ

ಅಂತರ್ಲಾಗ: ೧. ಒಳಮುಖವಾಗಿ ಹಾಕುವ ಲಾಗ ೨. ವ್ಯರ್ಥ ಪ್ರಯತ್ನ. **ಪ್ರ:** ಏನೇ ಅಂತರ್ಲಾಗ ಹಾಕಿದರೂ ಹಣ ಕೈಸೇರಲಿಲ್ಲ

ಅಂತರ್ರಿ: ೧. ಅಂತರಿಸಿ; ಅನುಸರಿಸಿ ೨. ಒಬ್ಬರ ಹಿಂದೆ ಒಬ್ಬರು ನಿಂತು; ಸಾಲಾಗಿ

ಅಂತಸ್ತು: ೧. ಮಹಡಿ. **ಪ್ರ:** ಮೂರು ಅಂತಸ್ತಿನ ಮನೆ ಕಟ್ಟಿಸಿದ್ರು ೨. ಮಟ್ಟ. **ಪ್ರ:** ಯಾರ ಮನೆಯಲ್ಲಿ ಹೆಣ್ಣಿದೆ, ಇದ್ರೆ ಅವರ ಜಾತಿ ಕುಲ ಯಾವುದು, ಅವರ ಅಂತಸ್ತು ಏನು

ಅಂತಿಕಣ್ಣಿ: ಮೇಟಿ ಗೂಟಕ್ಕೆ ಎತ್ತುಗಳನ್ನು ಕಟ್ಟಿ ಹುಲ್ಲನ್ನು ತುಳಿಸಲು ಬಳಸುವ ಸಾಧನ

ಅಂತಿಬಲೆಹುಲ್ಲು: ಒಂದು ಬಗೆಯ ಹುಲ್ಲು

ಅಂತುಂಡಿ/ಅಂತುಂಡೆ: *ಕ್ಯಪಾರಿಸ್ ಅಫಿಲ ಹಾರಿಡ:* ಒಂದು ಔಷಧಿ ಸಸ್ಯ. **ಇರೂ:** *ಗೋವಿಂದಫಲ ಗಿಡ* (ಚಿತ್ರ ನೋಡಿ)

ಅಂತುಮಾಡು: ೧. ಮೇರೆ ನಿರ್ಧರಿಸು ೨. ಹದ್ದುಗೊಳಿಸು

ಅಂತುರುಲೋಕ: ಆಕಾಶ

ಅಂತ್ಯಗಂಗೆ: **ನೋಡಿ–** ಅಂತರಗಂಗೆ ಗಿಡ

ಅಂತೆಕಂತೆ: ಸುಳ್ಳು; ಊಹಾಪೋಹ (ಧಾರ.ಜಿ)

ಅಂತೆಗೊದ್ದ: ಓತಿಕ್ಯಾತ (ಮಂಡ್ಯ.ಜಿ)

ಅಂತ್ರ: ೧. ಕರುಳು; ಬೀವು. ಇದನ್ನು ಚೌಡಿಕೆ ವಾದ್ಯಕ್ಕೆ ತಂತಿಯ ಹಾಗೆ ಬಳಸುತ್ತಾರೆ ೨. ಬೀಸುಕಲ್ಲು ಹಗುರ ಬರಲು ಅಣಸಿಗೆ ಹಾಕುವ ತಗಡಿನ ವೃತ್ತಾಕಾರದ ಬಿಲ್ಲೆ. **ನೋಡಿ–** ಅಂತರ ೩. ಮಂತ್ರಾಕ್ಷರಗಳನ್ನು ಬರೆದ ತಾಮ್ರದ ತೆಳುಹಾಳೆ; ಯಂತ್ರ; ತಾಯತ (ದಕ). **ಇರೂ:** *ಅಂತ್ರಕಯ್ಯಿಗ್ಗ್ಲಿ*

ಅಂತ್ರಂಗದ ಚಾಪೆ: ನೊಸೆಯೆಂಬ ಸಣ್ಣ ಗಾತ್ರದ ಹುಲ್ಲಿನಿಂದ ಹೆಣೆದು ಬಣ್ಣ ತುಂಬಿದ ಮಂದಲಿಗೆ

ಅಂತ್ರಕಟ್ಟು: ತಾಯತ ಕಟ್ಟು; ಚೀಟುಕಟ್ಟು. **ಪ್ರ:** ಕಣಿ ಹೇಳುವುದು ಅಂತ್ರಕಟ್ಟುವುದು ಮಾಡುತ್ತಿದ್ದರು

ಅಂತ್ರಕತೆ: ಗುಟ್ಟಿನ ಸುದ್ದಿ (ಉಕ.ಜಿ)

ಅಂತ್ರಕಾಟಿ: ಅಂತ್ರಾಟ; ತ್ರಿಶಂಕು ಸ್ಥಿತಿ (ಉಕ.ಜಿ)

ಅಂತ್ರಗಾಯಿ: ನೋಡಿ– ಅಂತರಗಾಯಿ

ಅಂತ್ರಟ್ಟಿಗೆ: ೧. ಅಂತರಾಳಿ; ನೆಲದಿಂದ ಎತ್ತರಕ್ಕೆ ಇರುವ ಅಟ್ಟಣಿಗೆ. ೨. ಎತ್ತರದ ಜಾಗದಲ್ಲಿ ನಿಲ್ಲಲೂ ಆಗದ ಸ್ಥಳ (ಉಕ.ಜಿ)

ಅಂತ್ರದ ನೀರು ಕುಡಿಸುವುದು: ಮಂತ್ರಿಸಿದ ನೀರು. ಬಸುರಿ ಹೆಂಗಸರಿಗೆ ಸಕಾಲಕ್ಕೆ ಹೆರಿಗೆಯಾಗದಿದ್ದರೆ ಅಂತ್ರದ್ ನೀರು ಕುಡಿಸಬೇಕು ಎಂಬ ನಂಬಿಕೆ ಇದೆ

ಅಂತ್ರಮ್ಯಾಲೆ: ಯಾವುದೇ ಆಸರೆ ಇಲ್ಲದ

ಅಂತ್ರಾಟ್ಗೆ: ೧. ಅಂತರಾಳ ೨. ಅಂತರಟಿಗೆ ಬಳ್ಳಿ

ಅಂತ್ರಾಟ: ೧. ಮರದ ಮೇಲೆ ಕೂತು ಆಡುವ ಕ್ರೀಡೆ; ಮರಕೋತಿ ಆಟ; ಹಾರಾಟದ ಒಂದು ಕ್ರೀಡೆ ೨. ನೆಲದಿಂದ ಎತ್ತರದಲ್ಲಿ ತೋರುವ ಕಸರತ್ತು

ಅಂತ್ರಾಟ್ಗೆ: ನೋಡಿ– ಅಂತರಟಿಗೆ ಬಳ್ಳಿ

ಅಂತ್ರಾಸ: ೧. ಅತಿರಸ ೨. ಒಂದು ಬಗೆಯ ಸಿಹಿತಿಂಡಿ

ಅಂತ್ರು: ಆಕಾಶ

ಅಂದ: ಚೆಲುವು; ರೂಪ. **ಪ್ರ:** ಅವಳ ಅಂದ ನೋಡಿ ಬೆರಗಾಗಿಬುಟ್ಟೆ.

ಅಂದಗೆಟ್ಟು ಹೋಗು: ಹಾಳಾಗು

ಅಂದಗೇಡಿ: ಚೆಲುವಿಕೆಯನ್ನು ಅರಿಯದವ

ಅಂದಣ: ೧. ಪಲ್ಲಕ್ಕಿ; ಮೇನೆ ೨. ಸುಂದರ ೩. ಶ್ರೀಮಂತ ೪. ಕುದುರೆ. **ಇರೂ:** *ಅಂದಲುಗೆ, ಅಂದಾಲ*

ಅಂದರ: ೧. ಹಂದರ; ೨. ಚಪ್ಪರ ೩. ಕೋಣೆ

ಅಂದರಬಡವ: ಅಶಕ್ತ; ಬಡಪಾಯಿ; ಮುಗ್ಧ; ನಿರುಪದ್ರವಿ (ಉಕ.ಜಿ)

ಅಂದರು: ೧. ಒಂದು ಔಷಧೀಯ ಸಸ್ಯ (ಚಿತ್ರನೋಡಿ) ೨. ಧೂಳಿನ ಬಲೆ

ಅಂದಲಕಂಬ: ಹಂದರದ ಕಂಭ; ಧಾರಾ ಮುಹೂರ್ತ ನಡೆಯುವ ಚಪ್ಪರದ ಕಂಬ. ಧಾರೆಮಂಟಪದಲ್ಲಿ ದೇವದಿಕ್ಕಾದ ಈಶಾನ್ಯದಲ್ಲಿ ಸ್ಥಾಪಿಸುವ ಧಾರೆಕಂಭ; ಹಸೆ ಕಂಭ. ಅತ್ತಿಕೊಂಬೆ ಅಥವಾ ಕಳ್ಳಿಕೊಂಬೆಯನ್ನು ಈ ರೀತಿ ಸ್ಥಾಪಿಸುತ್ತಾರೆ

ಅಂದಲದಟ್ಟಿ: ಹಂದರದ ಹಟ್ಟಿ; ಚಪ್ಪರದ ಹಟ್ಟಿ (ಮೈಸೂ.ಜಿ)

ಅಂದಳ: ಅಂದಣ; ಪಲ್ಲಕ್ಕಿ (ಶಿವ.ಜಿ)

ಅಂದಳಪೂಜೆ: ಮೇನೆ ಪೂಜೆ. ವಧೂವರರನ್ನು ಮೆರವಣಿಗೆಯಲ್ಲಿ ಒಯ್ಯುವ ಮೇನೆಗೆ ಮಾಡುವ ಪೂಜೆ. ಇದನ್ನು ಹೊರುವವರು ಊರಿನ ಬೆಸ್ತ ಜನಾಂಗದವರು (ಬೆಂಗ್ರಾ.ಜಿ)

ಅಂದಾಜು: ೧. ಊಹೆ; ಲೆಕ್ಕ ೨. ನಿಗದಿಮಾಡುವ; ಬೆಲೆ ನಿರ್ಧರಿಸುವ (ಮಂಡ್ಯ.ಜಿ). **ಇರೂ:** ಅಜಮಾಸು

ಅಂದಾಡಿಕೊಳ್ಳು: ಅಪ್ರತ್ಯಕ್ಷವಾಗಿ ಟೀಕಿಸು

ಅಂದಾದುಂದಿ: ೧. ವಿಪರೀತ ಖರ್ಚು; ಸ್ವೇಚ್ಛೆಯಿಂದ ವ್ಯಯ ಮಾಡುವುದು; ದುಂದು ವೆಚ್ಚ ೨. ವಿಪರೀತ ಗದ್ದಲ

ಅಂದಾನಿ: ೧. ಅನ್ನದಾನ ಮಾಡುವವ (ಮಂಡ್ಯ.ಜಿ) ೨. ಭೈರವನ ಬಿರುದುಗಳಲ್ಲೊಂದು

ಅಂದಿ: ಧಾನ್ಯಗಳನ್ನು ಹಾಳುಮಾಡುವ ಒಂದು ಹುಳು

ಅಂದಿಗೆ ಕಾಲು: ಗೆಜ್ಜೆ ಧರಿಸಿದ ಕಾಲು (ಬೆಂಗ.ಜಿ)

ಅಂದಿಬಾಡು: ಹಂದಿಮಾಂಸ (ಕೋಲಾ.ಜಿ)

ಅಂದುಗೆ: ಕಾಲಕಡಗ; ಹೆಣ್ಣುಮಕ್ಕಳು ಕಾಲಿಗೆ ತೊಡುವ ಬೆಳ್ಳಿಯ ಆಭರಣ. ಪಾದದ ಮಣಿಕಟ್ಟನ್ನು ಸುತ್ತುವರಿದು ಪಾದದ ಮುಂಭಾಗದುದ್ದಕ್ಕು ಬೆರಳಿನವರೆಗೆ ಹರಡಿಕೊಂಡಿರುವ, ಕಲಾತ್ಮಕವಾದ ಕಾಲಿನಾಭರಣ.

ಅಂದುಳ್ಳ: ಚೆನ್ನಾದ; ಒಳ್ಳೆಯ; ಲಕ್ಷಣವಾದ (ಮೈಸೂ.ಜಿ)

ಅಂದೂಳಿಕ: ತೂಗುಮಂಚ (ಮಲೆ)

ಅಂದೋಜಿಸಾಮಾನು: ಪ್ರಸ್ಥದ ಸಮಯದಲ್ಲಿ ಗಂಡಿನ ಮನೆಯವರು ವಧುವಿನ ಮನೆಗೆ ತೆಗೆದುಕೊಂಡು ಹೋಗುವ ಅಲಂಕಾರದ ವಸ್ತುಗಳು ಹಾಗೂ ಸಿಹಿತಿನಿಸುಗಳು (ಮೈಸೂ.ಜಿ)

ಅಂದ್ಲ: ೧. ಅಂದಳ; ಪಲ್ಲಕ್ಕಿ; ಮೇನೆ (ಮಲೆ) ೨. ಮದುವೆ ಮಂಟಪ (ಮೈಸೂ. ಜಿ.)

ಅಂಪು: ಪಾದ

ಅಂಪೇರುಗಡ್ಡೆ: ಒಂದು ವಿಧದ ರೋಗ. ದನದ ಕಿವಿಯ ಹತ್ತಿರ ಗಡ್ಡೆಗಳಾಗುತ್ತವೆ (ಬಳ್ಳಾ.ಜಿ)

ಅಂಬಕಳ: ಅಂಬಲಿ

ಅಂಬಕ್ಕಿ: ಒಂದು ಬಗೆಯ ಹಕ್ಕಿ

ಅಂಬಟೆಮಾವು: ಉಪ್ಪಿನಕಾಯಿಗೆ ಬಳಸುವ ಒಂದು ಬಗೆಯ ಹುಳಿಮಾವಿನ ಕಾಯಿ

ಅಂಬಟೆಸೂಡಿ: ೧. ಅಮಟೇಕಾಯಿಯನ್ನು ಹೋಲುವ ಕೂದಲಿನ ಮುಡಿ (ದಕ.ಜಿ) ೨. ಸ್ತ್ರೀವೇಷದ ಸರಳ ಕೇಶಾಲಂಕಾರ; ತುರುಬು. **ಇರೂ:** *ಅಂಬಡೆಸೂಡಿ*

ಅಂಬಡಿಗಂಟ್: ಕೂದಲನ್ನು ಮುಡಿ ಕಟ್ಟುವ ರೀತಿ (ದಕ.ಜಿ)

ಅಂಬಡಿಗಚ್ಚು: ಅವಡುಗಚ್ಚು; ಕೋಪ ಆಕ್ರೋಶಗಳನ್ನು ತೋರಿಸು

ಅಂಬರ/ಅಂಬಾರ: ೧. ಹುಲ್ಲಿನ ಬಣವೆ; ಮೆದೆ **ಪ್ರ:** ಯಾರೋ ಅಂಬಾರಕ್ಕೆ ಬೆಂಕಿ ಹಾಕಿಬಿಟ್ಟವರೆ ೨. ಧಾನ್ಯದ ರಾಶಿ ೩. ಆಕಾಶ ೪. ಬಟ್ಟೆ (ಬೆಂಗ.ಜಿ) ೫. ಮೊಳೆ ಕೀಳಲು ಬಳಸುವ ಉಪಕರಣ

ಅಂಬರದಗ್ಗಣಿ: ಮಳೆ (ಮಂಡ್ಯ.ಜಿ)

ಅಂಬರಪ್ಪಿನವನು: ಅವಸರದ ವ್ಯಕ್ತಿ (ದಕ.ಜಿ)

ಅಂಬರಪ್ಪು: ೧. ತಬ್ಬಿಬ್ಬು ೨. ಅವಸರ (ಮಂಗ.ಜಿ)

ಅಂಬರಮರ್ಲೆ: ಒಂದು ಬಗೆಯ ಹಕ್ಕಿ

ಅಂಬರೆಗಿಡ: ಹೊನ್ನಾವರಿಕೆಯ ಗಿಡ (ಬಳ್ಳಾ.ಜಿ)

ಅಂಬರ್ಕಾನಿ: ಭತ್ತವನ್ನು ಸಂಗ್ರಹಿಸುವ ಹುಲ್ಲಿನ ಕಣಜ. **ಇರೂ:** *ಕಡಿಕ್ಕೆ, ಕದಿಕೆ, ತಿರಿ (ದಕ.ಜಿ)*

ಅಂಬರ್ಕಿ: ತೆಳ್ಳಗೆ ಸಣ್ಣಗೆ ಇರುವ ಮೀನು (ಉಡು.ಜಿ)

ಅಂಬಲ್: ಜೋಳದ ನುಚ್ಚು. ಎಳ್ಳಮವಾಸೆ ಹಬ್ಬದಂದು, ಬಿತ್ತಿದ ಮೇಲೆ ಉಳಿದ ಜೋಳದ ಕಾಳುಗಳಿಂದ ಮಾಡಿದ ನುಚ್ಚು

ಅಂಬಲಿ/ಅಂಬ್ಲಿ: ೧. ಜೋಳ, ರಾಗಿ ಮುಂತಾದ ಧಾನ್ಯಗಳ ಹಿಟ್ಟಿನಿಂದ ಬೇಯಿಸಿದ ತೆಳು ಪಾಕದಂತಹ ಗಂಜಿ. **ಪ್ರ:** ಅಂಬ್ಲಿ ಕುಡಿಯೋನ್ಗೆ ಮೀಸೆ ಹಿಡಿಯೋನೊಬ್ಬ. **ಇರೂ:** *ನುಚ್ಚು, ಸೊಂಕ್ಟ* ೨. ಕಂಬಳಿಯ ನೇಯ್ಗೆಯಲ್ಲಿ, ಹುಣಿಸೆಬೀಜ ಕುಟ್ಟಿ, ಬೇಯಿಸಿ ತಯಾರಿಸುವ ಗೋಂದಿನಂತಹ ಅಂಟುಪದಾರ್ಥ (ತುಮ.ಜಿ) ೩. ಹೆಣ್ಣು ಮಕ್ಕಳು ತಲೆಗೆ ಸ್ನಾನ ಮಾಡಿದ ಮೇಲೆ ಕೂದಲು ಹಾರಾಡದಂತೆ ಹಚ್ಚಿಕೊಳ್ಳುತ್ತಿದ್ದ ರಾಗಿಯ ಅಂಟುಪದಾರ್ಥ (ಚಾಮ.ಜಿ).

ಅಂಬಲಿಹಲಸು/ಅಂಬಹಲಸು: ಹಲಸಿನ ಒಂದು ಪ್ರಭೇದ. ಕೈಯಿಂದಲೇ ಬಗೆದು ಸುಲಿಯಬಹುದಾದಷ್ಟು ಮೃದುವಾದ ಹಲಸು; ಬಿಳವಿನ ಹಲಸು

ಅಂಬಲಿಹಾಕುವುದು: ಸಿದ್ಧವಾದ ಕಂಬಳಿಗೆ ಹುಣಸೆ ಬೀಜದಿಂದ ಮಾಡಿದ ಸರಿ ಹಾಕಿ ತೀಡುವುದು

ಅಂಬಹಲಸು: **ನೋಡಿ–** ಅಂಬಲಿಹಲಸು

ಅಂಬಹಳದಿ: *ಕರ್ಕ್ಯೂಮಾ ಅಮಾಡಾ:* ಮಾವಿನಕಾಯಿ ಪರಿಮಳ ಹೊಂದಿರುವ ಶುಂಠಿಯ ಒಂದು ಪ್ರಭೇದ. ಉಪ್ಪಿನಕಾಯಿಗೆ ಮತ್ತು ಚಟ್ನಿ ಮಾಡಲು ಬಳಕೆಯಾಗುತ್ತದೆ. **ಇರೂ:** *ಕುಕ್ಕುಸುಂಟಿ* (ಚಿತ್ರ ನೋಡಿ)

ಅಂಬಳಿಕೆ: ಅಂಬೆಗಾಲು (ಶಿವ.ಜಿ)

ಅಂಬಳಿಹಿಡಿ (ಕ್ರಿ): ಬೇಲಿ ಜಿಗಿ (ದಕ.ಜಿ)

ಅಂಬಳ್ಳಿ: ಹುಲ್ಲು, ಸೊಪ್ಪುಸೆದೆ ಮುಂತಾದುವನ್ನು ಕಟ್ಟಲು ಬಳಸುವ ಒಂದು ಜಾತಿಯ ಬಳ್ಳಿ; ಉಗುನಿ ಹಂಬು

ಅಂಬಾಡಿಎಲೆ: ವೀಳೆಯದೆಲೆಯ ಒಂದು ಪ್ರಾದೇಶಿಕ ಭೇದ. ಅಂಬಾಡಿ ಎಂಬ ಊರಿನಲ್ಲಿ ಹೆಚ್ಚಾಗಿ ಬೆಳೆಯುವ ಉದ್ದತೊಟ್ಟಿನ ಗಿಳಿ ಹಸಿರು ಬಣ್ಣದ ತೆಳುವಾದ ಎಲೆ. ಕಾರ ಕಡಿಮೆ ಇರುತ್ತದೆ

ಅಂಬಾಡಿಗ: ಮಾವಟಿಗ

ಅಂಬಾಡೆ/ಅಮಟೆಕಾಯಿ: ಹುಳಿಕಾಯಿ ಬಿಡುವ ಗಿಡ. ಕಾಯಿಯನ್ನು ಉಪ್ಪಿನಕಾಯಿಗೂ, ಮೃದುವಾದ ದಾರುವನ್ನು ಬೆಂಕಿಕಡ್ಡಿಗಳ ತಯಾರಿಕೆಯಲ್ಲೂ ಬಳಸುತ್ತಾರೆ

ಅಂಬಾಬಾಯಿ: ಅಂಬಾಭವಾನಿ ಎಂಬ ಶಕ್ತಿದೇವತೆ

ಅಂಬಾಬಾಯಿ ಕುದ್ರಿ: ಅಂಬಾ ಭವಾನಿಯು ಆವಾಹನೆಯಾಗುವ ವ್ಯಕ್ತಿ (ಉಕ.ಜಿ)

ಅಂಬಾಯು: ದಸರಾ ಆಚರಣೆಯಲ್ಲಿ ಒಂದು ಕ್ರಿಯೆ. ಬನ್ನಿ ಪತ್ರೆಯನ್ನು ಸಿಕ್ಕಿಸಿ ನೆಟ್ಟ ಬಾಳೆಕಂಬವನ್ನು ಪೂಜಿಸಿ ದೇವರ ಪರವಾಗಿ ಗೊತ್ತುಪಡಿಸಿದ ಒಬ್ಬ ವ್ಯಕ್ತಿಯು ಬಾಣ ಹೊಡೆದು ನಂತರ ಕತ್ತಿಯಿಂದ ಅದನ್ನು ಕಡಿಯುವುದು

ಅಂಬಾರ: ೧. ಹುಲ್ಲಿನ ಬಣವೆ; ಮೆದೆ ೨. ಆಕಾಶ (ಮಂಡ್ಯ.ಜಿ)

ಅಂಬಾರದಂಡಿಗೆ: ಗೂಟಗಳನ್ನು ಸೇರಿಸುವ ಕಣ್ಣಿಯ ಮೇಲ್ಭಾಗಕ್ಕಿರುವ ಮರದ ಪಟ್ಟಿ

ಅಂಬಾರಬುಡ: ಕಂಬಳಿಯ ನೇಯ್ಗೆಯಲ್ಲಿ ಊಡೆತ್ತಿಗೆ ಅಡ್ಡಲಾಗಿ ಹಾಕುವ ಉದ್ದನೆಯ ಕೋಲು (ತುಮ.ಜಿ)

ಅಂಬಾರಿ: ೧. ಆನೆಯ ಮೇಲೆ ಕುಳಿತುಕೊಳ್ಳಲು ಆಸನ ಇರುವ ಮಂಟಪ. ಹಿಂದೆ ರಾಜರು ಮೆರವಣಿಗೆ

ಹೋಗುವಾಗ ಇದನ್ನು ಬಳಸುತ್ತಿದ್ದರು ೨. ಜೋಳ ಹಾಕುವ ಅಗೆ (ಮೈಸೂ.ಜಿ)

ಅಂಬಾರುಣ್ಣೆ: ಅಂಬಾರ ಉಣ್ಣೆ; ದನಗಳ ಚರ್ಮಕ್ಕೆ ಅಂಟಿಕೊಂಡು ರಕ್ತ ಹೀರುವ ಕ್ರಿಮಿ; ಉಣ್ಣೆ.

ಅಂಬಾರೆ: ಕಟ್ಟಿಗೆ ತಿನ್ನುವ ಕ್ರಿಮಿ; ಕುಟ್ಟೆ ಹುಳು

ಅಂಬಾಲಿ: ಖಡ್ಗ; ಹತಾರ

ಅಂಬಾಲು: ಆಟದ ನಡುವೆ ಸಿಕ್ಕಿಹಾಕಿಕೊಳ್ಳುವ ಸಂದರ್ಭ ಬಂದಾಗ ಕೂಡಲೆ ವಿಶ್ರಾಂತಿ ಕೇಳುವ ಶಬ್ದ (ಬಳ್ಳಾ.ಜಿ)

ಅಂಬಾಳಸ: ಹೆಂಗಸರ ಕಿಬ್ಬೊಟ್ಟೆ

ಅಂಬಿ: ೧. ಸೆಗಣಿ ೨. ಹಕ್ಕಿ ಹೊಡೆಯಲು ಹಾಕಿದ ಗುಡಿಸಿಲು (ಬೀದ.ಜಿ/ಗುಲ್ಬ.ಜಿ)

ಅಂಬಿಗ: ೧. ದೋಣಿ ನಡೆಸುವವನು ೨. ಬೆಸ್ತ; ಮೀನುಗಾರ

ಅಂಬಿಗೇರ: ದೋಣಿ ನಡೆಸುವ ಜನಾಂಗ; ಅಂಬಿಗ (ಉಕ.ಜಿ)

ಅಂಬಿಟ್ಟು ಅರಸು (ಕ್ರಿ): ಹಂಬಲಿಸುತ್ತಾ ರೋದಿಸು; ಕೂಗು

ಅಂಬಿನಬಿಲ್ಲು: ಮೈಲಾರಲಿಂಗನ ಜಾತ್ರೆಯಲ್ಲಿ ಬಿಲ್ಲನ್ನು ಏರಿ ಭವಿಷ್ಯ ಸಾರುವುದು (ಬಳ್ಳಾ.ಜಿ). **ಇರೂ:** *ಕಾರ್ಣಿಕ*

ಅಂಬಿನೋತ್ಸವ: ಚಿತ್ರದುರ್ಗದ ಹೊಸದುರ್ಗ ತಾಲೂಕಿನ ಕಂಚೀಪುರದ ಕಂಚೀ ವರದ ದೇವಸ್ಥಾನದಲ್ಲಿ ನಡೆಯುವ ಬಿಲ್ಲುಬಾಣಗಳ ಉತ್ಸವ

ಅಂಬಿಲ: ಕುಚ್ಚಲಕ್ಕಿಯ ತಂಗಳನ್ನದ ಗಂಜಿ ನೀರು (ದಕ.ಜಿ)

ಅಂಬು: ೧. ಹಂಬು ೨. ಬಾಣ ೩. ನಾಮಧಾರಿ ಜನಾಂಗದವರ ವಿವಾಹ ಸಂದರ್ಭದಲ್ಲಿ, ವೀಳ್ಯದೆಲೆ ಹಾಗೂ ಮಾವಿನೆಲೆ ಸುತ್ತಿ ಒಂದು ಕೋಲಿನ ತುದಿಗೆ ಕಟ್ಟಿ, ಮೇಲ್ಗಟ್ಟಿನ ಮೇಲೆ ಇಡುವ ಕಬ್ಬಿಣದ ಚೂಪಾದ ಪುಟ್ಟ ಆಯುಧ. (ಉಕ.ಜಿ); ಮದುವೆ ಕಟಾರಿ (ಮೈಸೂ.ಜಿ) ೪. ಬಿದಿರು ಕತ್ತರಿಸಲು ಬಳಸುವ ಹರಿತವಾದ ಚಾಕು (ಚಿಮ.ಜಿ)

ಅಂಬುಇಳಿಸುವುದು: ನಾಮಧಾರಿ ಜನಾಂಗದವರ ಮದುವೆಯ ಅಂಬು ಏರಿಸುವಾಗಿನ ವಿರುದ್ಧದ ಕ್ರಮ. ಈ ವಿಧಿಯು ಮದುವೆಯ ನಂತರ ನಡೆಯುತ್ತದೆ (ಉಕ.ಜಿ) **ನೋಡಿ**–ಅಂಬು ಏರಿಸುವುದು

ಅಂಬುಏರಿಸುವುದು: ನಾಮಧಾರಿ ಜನಾಂಗದವರ ವಿವಾಹದಲ್ಲಿ ವಧು ವರರನ್ನು ಮೇಲ್ಗಟ್ಟಿನ ಕೆಳಗೆ ಅಕ್ಷತೆಯ ರಂಗೋಲಿಯ ಮೇಲೆ ಹಾಕಿದ ಕಂಬಳಿಯ ಮೇಲೆ ಕುಳ್ಳಿರಿಸಿ, ಕ್ರಮವಾಗಿ ಐದು ಜನ ಸುಮಂಗಲೆಯರು ಎಣ್ಣೆ ಅರಿಶಿಣ ಹಚ್ಚಿ, ಅಂಬನ್ನು ನೆಲಕ್ಕೆ ಹಾಗೂ ಗಂಡು ಹೆಣ್ಣಿನ ಕಾಲು, ಭುಜ ಹಾಗೂ ತಲೆಗೆ ಮುಟ್ಟಿಸಿ ಮೇಲ್ಗಟ್ಟಿಗೆ ತಾಗಿಸುವುದು(ಉಕ.ಜಿ) (**ನೋಡಿ–** ಅಂಬು)

ಅಂಬುಕಾಯಿ ಆಟ: ಜಾತ್ರೆಯ ಸಂದರ್ಭದ ಒಂದು ಆಟ; ಮೇಲೆ ಎಸೆದ ತೆಂಗಿನ ಕಾಯಿಯನ್ನು ಸ್ಪರ್ಧಿಸಿ ಹಿಡಿದು ನೆಲಕ್ಕೆ ಅಪ್ಪಳಿಸಿ ಅದರ ನೀರು ಚೆಲ್ಲಬೇಕು (ದಕ.ಜಿ)

ಅಂಬುಗತ್ತಿ: ಒಂದು ಬಗೆಯ ಕತ್ತಿ. ಉತ್ತರ ಕರ್ನಾಟಕದ ಹೂವಿನ ಮಕ್ಕಳ ಕುಣಿತದಲ್ಲಿ ಇದು ಬಳಕೆಯಾಗುತ್ತದೆ

ಅಂಬುಗಾರ: ಮೀನು ಹಿಡಿಯುವವರು (ಮಲೆ)

ಅಂಬುಗುಡಿ: ಬಾಣ ಬಂದೂಕುಗಳನ್ನು ಪ್ರಯೋಗಿಸಲು ಕೋಟೆ ಗೋಡೆಯಲ್ಲಿ ರಚಿಸಲಾದ ರಂಧ್ರ (ಬಳ್ಳಾ.ಜಿ)

ಅಂಬುಗೋಲ: ಅಂಬಿನಂತಿರುವ ಮುಳ್ಳುತೆನೆ ಬಿಡುವ ಒಂದು ಮೇವಿನ ಸಸ್ಯ. ಈ ಮುಳ್ಳುಗಳು ದನಗಳ, ಮನುಷ್ಯರ ಶರೀರಕ್ಕೆ ಅಂಟಿಕೊಳ್ಳುತ್ತವೆ. ಎಳೆಯದಿರುವಾಗ ಮೇವಿಗೂ ಬಲಿತ ಮೇಲೆ ಮನೆ ಮಾಳಿಗೆಗೆ ಹೊದಿಸಲೂ ಬಳಸುತ್ತಾರೆ (ಉಕ.ಜಿ)

ಅಂಬುಚುಂಡೆಬೇರು: ನೆಗಡಿಗೆ ಮದ್ದಾಗಿ ಬಳಸುವ ಒಂದು ಔಷಧಿ ಸಸ್ಯ (ಚಾಮ.ಜಿ)

ಅಂಬುತ್ತಕೆ: ಕಂಬಳಿಯ ನೇಯ್ಗೆಯಲ್ಲಿ ಅಣಿ ಬರಲು ಬಳಸುವ ಚೌಕಟ್ಟಿನ ಮರದ ಸಾಧನ (ತುಮ.ಜಿ)

ಅಂಬುತ್ತು: ಭತ್ತವನ್ನು ಕಲ್ಲಿನಿಂದ ಬೇರ್ಪಡಿಸಲು ಬಟ್ಟೆಯಿಂದ ಮಾಡಿದ ಒಂದು ಸಾಧನ (ಉಕ.ಜಿ)

ಅಂಬುವಾಹಿನಿ: ನೀರನ್ನು ಎತ್ತಿ ಹಾಕುವ ಪಾತ್ರೆ. **ಇರೂ:** *ಈಂದ್, ಮರಂಬಿ (ದಕ.ಜಿ)*

ಅಂಬುಹಾಕುವುದು: ನವರಾತ್ರಿ ಸಂದರ್ಭದಲ್ಲಿ ಊರಿನ ಪ್ರಮುಖ ದೇವರುಗಳ ಮೆರವಣಿಗೆ ಮಾಡಿ, ಊರ ಹೊರಗಿನ ಬನ್ನಿ ಮರದ ಕೆಳಗೆ ಪ್ರತಿಷ್ಠಾಪಿಸಿದ ನಂತರ ಮಹಾಭಾರತದ ಕಥೆಯನ್ನು ಪಾರಾಯಣ ಮಾಡಿ ಪೂಜೆ ಸಲ್ಲಿಸಿ, ಬನ್ನಿ ಮರಕ್ಕೆ ಬಾಣ ಬಿಡುವ ಆಚರಣೆ.

ಅಂಬುಹುಳ: ಮೈಮೇಲೆ ಜೇನುನೊಣದಂತೆ ಚುಚ್ಚುವ, ನೊಣದ ಜಾತಿಯ ಕೀಟ (ಉಕ.ಜಿ)

ಅಂಬುಹೊಡೆಯುವುದು: ೧. ಮೈಲಾರಲಿಂಗದ ಗುಡ್ಡದಲ್ಲಿ ನಡೆಯುವ ಒಂದು ಆಚರಣೆ. ಗೊರವ ಒಡೆಯರು

ಕುರುಬತಿಯ ಸ್ಥಾನದಲ್ಲಿ ಮಂಗಳಾರತಿಯ ನಂತರ ಹೊಡೆಯುವ ಮೂರು ಬಾಣಗಳು ೨. **ನೋಡಿ–** ಅಂಬುಹಾಕುವುದು (ದಕ)

ಅಂಬೂತ: ದತ್ತೂರಿ; ಉಮ್ಮತ್ತ (ಉಕ.ಜಿ)

ಅಂಬೂರ: ಚಮ್ಮಾರಿಕೆಯವರು ಮೊಳೆ ಕೀಳಲು ಬಳಸುವ ಉಪಕರಣ (ಬಳ್ಳಾ.ಜಿ). **ಇರೂ:** *ಅಂಬೂರು (ಉಕ.ಜಿ)*

ಅಂಬೆಕೊಂಬಿನ ಗೊಜ್ಜು: ನೋಡಿ– ಅಂಬಹಳದಿ. **ಪ್ರ.** ಅಂಬೆಕೊಂಬು ಕಾಯಿಸುಳಿ ಒಣಮೆಣಸು ಕೂಡಿಸಿ ಗಟ್ಟಿಸಾರು ಮಾಡಿದೆ (ಉಕ.ಜಿ)

ಅಂಬೆಗಾಲು: ಅಂಗೈ ಮತ್ತು ಮೊಣಕಾಲುಗಳನ್ನು ಊರಿಕೊಂಡು ಎಳೆಯ ಮಕ್ಕಳು ನಡೆಯುವ ರೀತಿ. **ಪ್ರ:** ಅಂಬೆಗಾಲು ಹಾಕಿದರೆ ರಂಬೆ ಸಿಕ್ಕಾಳೆ?

ಅಂಬೆಮೋರಿ: ಭತ್ತದ ಒಂದು ತಳಿಯ ಹೆಸರು (ಉಕ.ಜಿ)

ಅಂಬೆಲ: ದೇವಾಲಯದ ಸುತ್ತ ಅಥವಾ ಎದುರುಗಡೆ ಇರುವ ಚಾವಡಿ; ಜಗಲಿ ಅಥವಾ ಪಡಸಾಲೆ (ದಕ.ಜಿ)

ಅಂಬೋಡಿ: ಅಣಕು ಕಾಳಗ

ಅಂಬೋತಿ ಬೇರು: ಒಂದು ಸಸ್ಯ ವಿಶೇಷ

ಅಂಬ್ರ: ೧. ಸಾರು; ಮೇಲೋಗರ. **ಇರೂ:** ಆಮ್ರ (ಶಿವ.ಜಿ)

ಅಂಬ್ರಕಣ್ಣು: ಅರೆಗಣ್ಣು

ಅಂಬ್ರಿಕೊ: ಅಮರಿಕೊ; ಮೇಲೆ ಬಿದ್ದು ಮಿಸುಕದಂತೆ ಹಿಡಿದುಕೊ; ಪಟ್ಟುಹಿಡಿ (ಮಂಡ್ಯ.ಜಿ)

ಅಂಬ್ರೆಕಾಳು: ಅವರೆಕಾಳು (ಗುಲ್ಬ.ಜಿ)

ಅಂಬ್ರೆಬೀಜ: ಬಿಳಿ ಮತ್ತು ಕಪ್ಪು ಬಣ್ಣದ ಒಂದು ದ್ವಿದಳ ಧಾನ್ಯ

ಅಂಬ್ಲ: ಗಂಡಸರು ಕಿವಿಯ ಮೇಲ್ತುದಿಗೆ ಧರಿಸುವ ಚಂದ್ರಾಕಾರದ ಆಭರಣ (ದಕ.ಜಿ)

ಅಂಬ್ಲಕಾರ: ವಾಲಗ ಊದುವವನು (ದಕ.ಜಿ)

ಅಂಬ್ಲಿಬಂಡಿ: ಮೈಲಾರಲಿಂಗ ದೇವರಿಗೆ ಸಂಬಂಧಿಸಿದ ಒಂದು ಆಚರಣೆ (ಬಳ್ಳಾ.ಜಿ)

ಅಂವಟಿಬೆಟ್ಟು: ಹೆಮ್ಬೆ ಬೆಟ್ಟು ; ಹೆಬ್ಬೆರಳು (ಉಕ.ಜಿ)

ಅಂವುಟಿಗ: ಸಂತೆಯಲ್ಲಿ ಕಾಳು ಅಳೆಯಲು ನೇಮಕಗೊಂಡ ಗುತ್ತೆದಾರ (ಬಿಜಾ.ಜಿ)

ಅಂವುತ್ಲ: ಔತಣ (ಚಿಮ.ಜಿ)

ಅಂಸು: ಅಂಶ; ವಂಶ; ರಕ್ತಗುಣ; ಆನುವಂಶೀಯತೆ (ಉಕ.ಜಿ)

ಅಂಸುಕ: ವಂಶಕ್ಕೆ ಹುಟ್ಟಿದವನು (ಉಕ.ಜಿ)

ಅಕಂಜಿಕೊಟ್ಟ: ಜಾನುವಾರುಗಳಿಗೆ ಅಕ್ಕಚ್ಚು ತಯಾರಿಸುವ ಕೊಟ್ಟಿಗೆ (ದಕ.ಜಿ) **ನೋಡಿ–** ಅಕ್ಕಚ್ಚು

ಅಕಡಾ: ೧. ಅಖಾಡ; ಗರಡಿಮನೆ; ಕುಸ್ತಿ ೨. ಕಚ್ಚಾಲೆಕ್ಕ (ಧಾರ.ಜಿ) ೩. ಅಂಕಿ; ಸಂಖ್ಯೆ. **ಇರೂ:** ಅಕ್ಕಡ

ಅಕಡಾಪಟ್ಟಿ: ಸರಕು ಮಾರಿದ ಅಂದಾಜು ಲೆಕ್ಕದ ಪಟ್ಟಿ (ಧಾರ.ಜಿ)

ಅಕಡಾಸು: (ನಾ) ೧. ಧಿಮಾಕು ತೋರಿಸುವವ (ಗುಲ್ಬ.ಜಿ) (ಕ್ರಿ) ೨. ಹೀರಿಕೊ ೩. ಮುರುಡು; ಮುದ್ದೆಯಾಗು ೪. ಸೆಟೆ; ನಿಗುರು (ಉಕ.ಜಿ)

ಅಕಡಿ: ೧. ಒಂದು ಅಳತೆ; ಒಂದು ಅಕಡಿ=ಎರಡು ಅಡಿ ೨. ಇಕ್ಕಟ್ಟು (ಮಂಡ್ಯ.ಜಿ) **ನೋಡಿ–** ಅಕ್ಕಡಿ

ಅಕತಾರ: ಸರಿ ಇಲ್ಲದವ (ದಕ.ಜಿ)

ಅಕಮಕ: ಅತ್ತ ಇತ್ತ (ಬಿಜಾ.ಜಿ)

ಅಕರತಿ: ೧. ಪ್ರೀತಿ; ವಾತ್ಸಲ್ಯ (ರಾಯ.ಜಿ). **ಇರೂ:** ಅಕ್ಕರತಿ, ಅಕ್ಕರುತಿ, ಅಕ್ಕರಸಿ, ಅಕ್ಕರಿಕೆ, ಅಕ್ಕುರ್ತಿ ೨. ಅತ್ಯಾನಂದ

ಅಕರಾಮಕರಾ: ಯದ್ವಾತದ್ವಾ (ಬಳ್ಳಾ.ಜಿ)

ಅಕರಾಳವಿಕರಾಳ: ಅಂಜಿಕೆ ಬರುವಂತಹ ಘೋರ ರೂಪ; ವಿಕಾರ ರೂಪ (ಬಿಜಾ.ಜಿ)

ಅಕರ್ಜಗಿಡ: ಹೊಲದಲ್ಲಿ ಬೆಳೆಯುವ ಒಂದು ಆಹಾರಯೋಗ್ಯ ಕಳೆಸಸ್ಯ. **ಇರೂ:** ಅಕೋರ್ಜಿ

ಅಕಲಾಯ: ೧. ಪುಗಸಟ್ಟೆ; ಬಿಟ್ಟಿ ೨. ಪ್ರತ್ಯೇಕ ೩. ನಿರಾಯಾಸ (ಮಂಡ್ಯ.ಜಿ)

ಅಕಲ್ದ ಹಲ್ಲು: ಬುದ್ಧಿ ಬಂದುದರ ಸಂಕೇತವಾದ ಹಲ್ಲು (ಬೆಳ.ಜಿ)

ಅಕಸ್ತ: ಅಕ್ಷತೆ; ಶುಭಕಾರ್ಯಗಳಲ್ಲಿ ಬಳಕೆಯಾಗುವ ಅರಿಶಿಣದ ಅಕ್ಕಿ (ಶಿವ.ಜಿ). **ಇರೂ:** ಅಕ್ಕಸ್ತಿ, ಅಕ್ಕುಸ್ತಿ, ಅಕ್ಕುಸ್ತೆ

ಅಕಸ್ತಕ್ಕಿ: ಅಕ್ಷತೆಯ ಅಕ್ಕಿ; ಅಕ್ಷತೆ

ಅಕಾಡುಎದಿ: ಮಹಾಧೈರ್ಯ. **ಇರೂ:** ಅಕ್ಕಂಡುಎದಿ

ಅಕಾಮಟ್ಟ: ಮೆದೆಹಾಕುವಾಗ ತಳದಲ್ಲಿ ನಿರ್ಮಿಸುವ ಅಟ್ಟ

ಅಕಾರಿಹೊಡೆ (ಕ್ರಿ): ೧. ಕೂಗುಹಾಕು; ಕೂಗಿ ಕರೆ ೨. ಘೋರಾಪರಾಧ ಎಂಬುದಕ್ಕೆ ಬುಡ್ಗ ಜಂಗಮರಲ್ಲಿ ಬಳಕೆಯಲ್ಲಿರುವ ಪದ

ಅಕಾಲಮಳೆ: ಕಾಲಕ್ಕೆ ಸಂಬಂಧವಿಲ್ಲದ ಮಳೆ; ಬೇಡವಾದಾಗ ಸುರಿಯುವ ಕೇಡುಮಳೆ (ಬಳ್ಳಾ.ಜಿ)

ಅಕಿಲು: ಸುಗಂಧ; ಪರಿಮಳ. **ಇರೂ:** *ಅಗಿಲು*

ಅಕುಳಕ್ಕು: ನೋಡಿ– ಅಕ್ಕಳಕ

ಅಕೋಟ: ಒಂದು ಸುಗಂಧ ಸಸ್ಯ (ಕೋಲಾ.ಜಿ); ಕಂದಾಳೆ ಸಗಡೆ

ಅಕ್ಕಗಾರು: ಯುಗಾದಿ ಹಬ್ಬದ ನಂತರದ ಶುಕ್ರವಾರದಂದು ನಡೆಸುವ ದೆವ್ವ ಬಿಡಿಸುವ ಆಚರಣೆ (ಕೋಲಾ.ಜಿ). **ಇರೂ:** *ಅಗ್ಗರ್ಲು, ಅಗ್ಗಾರು, ಅಗ್ಗಾರ್ಲು*

ಅಕ್ಕಚ್ಚ್ ಬಾಯ್ರ್: ದನಗಳಿಗೆ ಬೇಯಿಸಿದ ಅಕ್ಕಚ್ಚು ನೀರು (ದಕ.ಜಿ)

ಅಕ್ಕಚ್ಚ್ ಬಾಯ್ರ್ ಚರ್ಗಿ: ಅಕ್ಕಚ್ಚು ನೀರಿಗಾಗಿ ಕಾಳು ಬೇಯಿಸುವ ಪಾತ್ರೆ (ದಕ.ಜಿ)

ಅಕ್ಕಚ್ಚು: ೧. ಅಕ್ಕಿ ತೊಳೆದ ನೀರು; ಕಲಗಚ್ಚು; ಮುಸುರೆ; ಗಂಜಿ ೨. ದನಗಳಿಗೆ ಕುಡಿಸಲು ಹಿಂಡಿಯನ್ನು ನೀರಿನಲ್ಲಿ ಕದಡಿ ಸಿದ್ಧಮಾಡಿದ ಆಹಾರ ೩. ಕೆಂಪಕ್ಕಿಯನ್ನು ತೊಳೆದ ನೀರಿಗೆ ಬೆಲ್ಲ ಏಲಕ್ಕಿ ಹಾಕಿ ಮಾಡುವ ಒಂದು ಪಾನೀಯ (ಶಿವ.ಜಿ)

ಅಕ್ಕಚ್ಚು ತೋರುವುದು: ದನಕರುಗಳಿಗೆ ಕುಡಿಯಲು ಅಕ್ಕಚ್ಚನ್ನು ಕೊಡುವುದು (ಉಕ.ಜಿ)

ಅಕ್ಕಡ: ತುರುಬಿನ ಪಿನ್ನು. **ಇರೂ:** *ಅಕ್ಡ*

ಅಕ್ಕಡಕು: ಹತ್ಕಡಕು; ಮಧ್ಯದಲ್ಲಿ ಒಂದೇ ಒಂದು ಹರಳು ಅಥವಾ ಮುತ್ತು ಇರುವ, ಗಂಡಸರ ಕಿವಿಯ ಆಭರಣ; ಒಂಟಿ (ಮೈಸೂ.ಜಿ)

ಅಕ್ಕಡಿ: ೧. ಏಕದಳ ಧಾನ್ಯದ ಸಾಲುಗಳ ಮುಖ್ಯ ಬೆಳೆಯ ನಡುವೆ ಬಿತ್ತುವ ದ್ವಿದಳ ಧಾನ್ಯದ ಬೆಳೆಯ ಸಾಲು ೨. ಹೊಲದ ಅಳತೆಯನ್ನು ಗುರುತಿಸಲು ಬಳಸುವ ಒಂದು ಮಾಪನ ೩. ಇಕ್ಕಟ್ಟು ೪. ಒಂದು ಬೈಗುಳ ಪದ (ಮಂಡ್ಯ.ಜಿ)

ಅಕ್ಕಡಿಕಾಳು: ಅಲಸಂದೆ, ತೊಗರಿ, ಅವರೆ, ಹುರುಳಿ, ಹೆಸರು ಮುಂತಾದ ದ್ವಿದಳ ಧಾನ್ಯಗಳು (ಬಿಜಾ.ಜಿ)

ಅಕ್ಕಡಿಕೋಲು: ಅಕ್ಕಡಿ ಬೀಜ ಬಿತ್ತುವ ಒಂದು ಕೊಳವೆಯಂಥ ಕೋಲು; ಸಡ್ಡೆ (ಬಿಜಾ.ಜಿ)

ಅಕ್ಕಡಿಸಾಲು: ಮೂರು ನಾಲ್ಕು ಅಥವಾ ಐದು ಸಾಲುಗಳಿಗೆ ಒಂದು ಸಾಲಿನಂತೆ ದ್ವಿದಳ ಧಾನ್ಯವನ್ನು ಬಿತ್ತುವುದು (ತುಮ.ಜಿ)



ಅಕ್ಕಡಿಹಾಕು: ೧. ಒಂದೇ ಸಾರಿ ಹಲವು ಕಾಳುಗಳನ್ನು ಬಿತ್ತು ೨. ಭಯಪಡು (ಬಳ್ಳಾ.ಜಿ). **ಪ್ರ:** ಅವನು ಪೋಲಿಸರ್ನ ಕಂಡ್ರೆ ಅಕ್ಕಡಿಹಾಕ್ತಾನೆ

ಅಕ್ಕಣಿ: ೧. ಕಾಳು ತೆಗೆದ ಬೆಳೆಯ ತೆನೆ (ಚಿಮ.ಜಿ) ೨. ನೇಯ್ಗೆಯ ಅಡ್ಡ ಎಳೆ ಅಂಟಿಕೊಳ್ಳುವ ರೀತಿ (ದಕ.ಜಿ)

ಅಕ್ಕತಂಗಿ ಬಳ್ಳಿ: ಒಂದು ಔಷಧಿಬಳ್ಳಿ (ಕೋಲಾ.ಜಿ). **ಇರೂ:** *ಕರಡಿಕಣ್ಣಿನಗೆಡ್ಡೆ, ಕೋಲಿಕುಟುಮನ ಗೆಡ್ಡೆ, ಜೋಕುಮಾರನ ಬಳ್ಳಿ, ನಾಗಲೀಕನಗೆಡ್ಡೆ, ಶಿವರಕ್ತಬಳ್ಳಿ, ಹುಲಿಯುಗುರುಬಳ್ಳಿ*

ಅಕ್ಕತಂಗಿಯರ ಭೇಟಿ ಉತ್ಸವ: ಚಿತ್ರದುರ್ಗದ ರಕ್ಷಕದೇವತೆಗಳಾದ ಬರಗೇರಮ್ಮ ಮತ್ತು ತಿಪ್ಪಿನಘಟ್ಟಮ್ಮರು ಅಕ್ಕ–ತಂಗಿ ದೇವತೆಗಳು. ಯಾವುದೋ ಕಾರಣದಿಂದ ಮುನಿಸಿಕೊಂಡು ದೂರವಾಗಿದ್ದರೂ ಉಳಿದ ದೇವತೆಗಳ ಸಂಧಾನದಿಂದ ವರ್ಷಕ್ಕೊಮ್ಮೆ ಭೇಟಿಯಗುತ್ತಾರೆಂಬ ನಂಬಿಕೆಯಲ್ಲಿ ನಡೆಯುವ ಅಕ್ಕ ತಂಗಿಯರ ಭೇಟಿ ಎಂಬ ಜಾತ್ರೆ

ಅಕ್ಕತಂಗೆರ ಅಮಾಸಿ: ಅಕ್ಷಯತದಿಗೆ ಅಮಾವಾಸ್ಯೆ (ರಾಯ.ಜಿ)

ಅಕ್ಕತಂಗೇರಣ್ಣು: ಪರಂಗಿ ಹಣ್ಣು (ಶಿವ.ಜಿ)

ಅಕ್ಕದಾಮ: ಜಪದ ಸಮಯದಲ್ಲಿ ಉಪಯೋಗಿಸುವ ಮಾಲೆಯ ಹೆಸರು (ಚಿಮ.ಜಿ)

ಅಕ್ಕನ ತದಿಗೆ: ದೀಪಾವಳಿ ತದಿಗೆ. ಅಂದು ಯಮನ ಮನೆಗೆ ಅವನ ತಂಗಿ ಯಮಿಯು ಬಂದು ಅಣ್ಣನ ಆತಿಥ್ಯ ಹಾಗೂ ಉಡುಗೊರೆ ಸ್ವೀಕರಿಸಿದ್ದ ಕುರುಹಾಗಿ ಅಣ್ಣತಮ್ಮಂದಿರು ಅಕ್ಕತಂಗಿಯರಿಗೆ ಉಡುಗೊರೆ ಕೊಟ್ಟು ಸನ್ಮಾನಿಸುವ ಆಚರಣೆ (ಧಾರ.ಜಿ)

ಅಕ್ಕಪುರಲೆ: ನೋಡಿ– ಅಕ್ಕಿಪುರಲೆ

ಅಕ್ಕಮಕ್ಕ ಚೆಂಡು: ಮಕ್ಕಳು ಆಡುವ ಒಂದು ಜನಪದ ಆಟ. ಆಟದ ಸಂದರ್ಭದಲ್ಲಿ ಮಕ್ಕಳು ಹೇಳಿಕೊಳ್ಳುವ ಶಿಶುಪ್ರಾಸ. ಇಬ್ಬರು ಎದುರುಬದುರಾಗಿ ನಿಂತು ಪರಸ್ಪರ ತಮ್ಮ ಕೈ ಬೆರಳುಗಳನ್ನು ಸೇರಿಸಿ ಹಿಡಿದುಕೊಂಡು ತಿರುವು

ಮುರುವಾಗಿ ಕೈಗಳು ಕುತ್ತಿಗೆಯ ಹಿಂಭಾಗಕ್ಕೆ ಬರುವಂತೆ ಹೆಣೆದುಕೊಂಡು ಸುತ್ತುತ್ತಾರೆ. ಇಬ್ಬರ ಮುಖಗಳೂ ವಿರುದ್ಧ ದಿಕ್ಕಿನಲ್ಲಿರುವುದರಿಂದ ಸುತ್ತುವಾಗ ಒಬ್ಬರು ಇನ್ನೊಬ್ಬರನ್ನು ಹಿಂಬಾಲಿಸಿದಂತೆ ತೋರುತ್ತದೆ. **ಪ್ರ:** ಅಕ್ಕಮಕ್ಕಚೆಂಡು ಏರಿಮ್ಯಾಲೆ ದಂಡು ಕಲ್ಲುನಾತಪುರಕೋಗಿ ಕೊಂಬಿನ ಜ್ವಾಳ ತಂದು... (ಮಂಡ್ಯ.ಜಿ)

ಅಕ್ಕಯಿಮುಕ್ಕಯಿ: ಚಿಕ್ಕ ವಸ್ತುವೊಂದನ್ನು ಮುಷ್ಟಿಯೊಳಗಿರಿಸಿ, ಎರಡೂ ಮುಷ್ಟಿಗಳನ್ನು ಮುಂದೊಡ್ಡಿ ಯಾವ ಕೈಯಲ್ಲಿದೆ ಎಂದು ಕೇಳುವ ಮಕ್ಕಳ ಆಟ (ದಕ.ಜಿ)

ಅಕ್ಕರ: ೧. ಅಕ್ಷರ ೨. ಪ್ರೀತಿ ೩. ಮನುಷ್ಯರ ಹಾಗೂ ದನಗಳ ನಾಲಗೆಯ ಕೆಳಗಿನ ನರ ನೀಲಿಗಟ್ಟುವ ಒಂದು ಖಾಯಿಲೆ ೪. ನಾಲಗೆಯ ಮೇಲೆ ಬಿಳಿಯಾಗಿರುವ ಪದರ (ಗುಲ್ಬ.ಜಿ/ಬಾಗ.ಜಿ). **ಇರೂ:** *ಅಗ್ರ*

ಅಕ್ಕರಕಿ: **ನೋಡಿ–** ಅಕ್ಕರಿಕೆ (ಧಾರ.ಜಿ)

ಅಕ್ಕರಗುಳ್ಳಿ: ನಿಯಮ ಮೀರಿ ವರ್ತಿಸುವುದು (ಬಳ್ಳಾ.ಜಿ)

ಅಕ್ಕರದೇವರು: ವಿದ್ಯಾದೇವತೆ

ಅಕ್ಕರಪಕ್ಕ: ದಾರಿಯ ಅಕ್ಕಪಕ್ಕದ ಗಿಡಮರ

ಅಕ್ಕರಿಕೆ/ಅಕ್ಕರಕಿ: ಹಕ್ಕರಿಕೆ; ಹಸಿಯಾಗಿಯೇ ತಿನ್ನಬಹುದಾದ ಒಂದು ಬಗೆಯ ಸೊಪ್ಪು (ಚಿತ್ರ ನೋಡಿ)

ಅಕ್ಕರೆಂಬೆ ಸಿಕ್ಕರೆಂಬೆ: ಗೊಲ್ಲರ ದೈವ; ಜುಂಜಪ್ಪನ ಗೋವುಗಳ ಹೆಸರು (ತುಮ.ಜಿ)

ಅಕ್ಕಲ/ಅಕ್ಲು: ಪೈರು ತೆಗೆದ ಖಾಲಿ ಹೊಲ (ತುಮ.ಜಿ)

ಅಕ್ಕಲಕಾರ/ಅಕ್ಕಲಕರ: *ಅನಸ್ಸೈಕ್ಲಸ್ ಪೈರಿತ್ರಮ್:* ಒಂದು ಗಿಡಮೂಲಿಕಾ ಸಸ್ಯ (ತುಮ.ಜಿ) (ಚಿತ್ರ ನೋಡಿ)

ಅಕ್ಕಲಾಗು: ಗತಿ ಇಲ್ಲದವಳಾಗು (ದಕ.ಜಿ)

ಅಕ್ಕಲಿಗೇ ಜೋಗ: ೧. ಚೌಡಿಕೆ ಹಾಡಿನ ಒಂದು ಬಗೆ ೨. ಎಲ್ಲಮ್ಮನ ಮುಖ ಇರುವ ಕೊಡ ಹೊತ್ತುಕೊಂಡು ಹಾಡಿ ಕುಣಿವ ಗಂಡು ಜೋಗತಿಯರಿಗೆ ಅಕ್ಕಲಿಗೇ ಜೋಗ ಎನ್ನುತ್ತಾರೆ (ಬೆಂಗ.ಜಿ)

ಅಕ್ಕಲಿಸು: ೧. ಆಕಳಿಸು ೨. ಭೋಗಿಸು ೩. ತುಂಬಿತುಳುಕು (ಬಳ್ಳಾ.ಜಿ)

ಅಕ್ಕಲುಕಡ್ಡಿ: ಕವಲೊಡೆಯದ ಒಂಟಿ ಪೈರು **ನೋಡಿ–** ಮೊಂಟೆ

ಅಕ್ಕಲೆಣೆ ಪಕ್ಷಿ: ಒಂದು ಜಾತಿಯ ಪಕ್ಷಿ. ಮಗುವಿಗೆ ಅಕ್ಕಲೆಣೆ ರೋಗ ಬಂದರೆ ಈ ಹಕ್ಕಿಯನ್ನು ತಂದು ಕಾಯಿಸಿದ ಹರಳೆಣ್ಣೆಯಲ್ಲಿ ಅದ್ದಿ, ಚಿಟಿಪಿಟಿ ಸಿಡಿಸಿ ಆರಿದ ನಂತರ ಮಗುವಿಗೆ ಸ್ವಲ್ಪ ಕುಡಿಸುತ್ತಾರೆ. ಉಳಿದ ಎಣ್ಣೆಯನ್ನು ಮಗುವಿನ ಮೈಗೆ ಉಜ್ಜುತ್ತಾರೆ (ಕೋಲಾ.ಜಿ)

ಅಕ್ಕಲ್ಬಿಟ್ಟು: ಬಿಟ್ಟಿ ಅನ್ನ; ಪುಕ್ಕಟ್ಟೆ ಹಿಟ್ಟು (ಬೆಂಗ್ರಾ.ಜಿ)

ಅಕ್ಕಸತನ: ರಾಕ್ಷಸತನ

ಅಕ್ಕಸಾಲೆವಾಳು: ಅಕ್ಕಸಾಲಿಗೆ ಬಿಟ್ಟ ಭೂಮಿ (ಬಳ್ಳಾ.ಜಿ)

ಅಕ್ಕಸ್ತಿಬಟ್ಟಲು: ಅರಿಶಿಣ, ಕುಂಕುಮ, ಗಂಧ, ಅಕ್ಷತೆಗಳನ್ನು ತುಂಬಿಡುವ ಬಟ್ಟಲು (ಮೈಸೂ.ಜಿ/ಚಾಮ.ಜಿ)

ಅಕ್ಕಸ್ತಿಹೊನ್ನೂಲು: ಅರಿಶಿಣದ ಅಕ್ಕಿ ಮತ್ತು ಅರಿಶಿಣದ ನೂಲು (ಬೀದ.ಜಿ)

ಅಕ್ಕಸ್ತೆ: ಅಕ್ಷತೆ; ಮುತ್ತೈದೆಯರ ಹಣೆಗಿಡುವ ಅರಿಶಿಣ ಬೆರೆಸಿದ ಅಕ್ಕಿ; ವಧೂವರರನ್ನು ಹರಸಲು ಧಾರೆಯಾದ ಮೇಲೆ ಹಾಕುವ ಅರಿಶಿನ ಬೆರೆಸಿದ ಅಕ್ಕಿ (ಬೆಂಗ್ರಾ.ಜಿ)

ಅಕ್ಕಳಕ: ಇದು ಎಳೆಮಕ್ಕಳಿಗೆ ಬರುವ ಒಂದು ಖಾಯಿಲೆ. ಇದರಿಂದ ಮಕ್ಕಳು ತೀರ ಸೊರಗಿ ಮೂಳೆ ಚಕ್ಕಳವಾಗುತ್ತಾರೆ. ಆಗ ಬಾವುಲಿ ಹಕ್ಕಿಯನ್ನು ಹರಳೆಣ್ಣೆಯಲ್ಲಿ ಕುದಿಸಿ, ಬಂದ ಎಣ್ಣೆಯನ್ನು ಮಗುವಿನ ಮೈಗೆಲ್ಲ ಲೇಪಿಸಿ ಒಂದು ತೊಟ್ಟು ಬಾಯಿಗೂ ಹಾಕುವುದರಿಂದ ಅಕ್ಕಳಕ ವಾಸಿಯಗುತ್ತದೆ (ಶಿವ.ಜಿ) ಹಕ್ಕಡಕ (ಮೈಸೂ.ಜಿ). **ಇರೂ:** ಅಕುಳಕ್ಕ, ಅಕ್ಸಳಕ, ಅಕ್ಸಳಕು

ಅಕ್ಕಳಿ: ಗುಬ್ಬಚ್ಚಿ (ಶಿವ.ಜಿ) (ಚಿತ್ರ ನೋಡಿ)

ಅಕ್ಕಳಿಕೆ ಕೋಲು: ದೊಡ್ಡ ಪಾತ್ರೆಗಳಲ್ಲಿನ ಅನ್ನ ಬಸಿಯಲು ಅನುಕೂಲವಾಗುವಂತೆ ಸಮಾನಾಂತರವಾಗಿ ಕಟ್ಟಿದ ಎರಡು ಉದ್ದನೆಯ ಕೋಲು; ಕವೆಗೋಲು (ಮೈಸೂ.ಜಿ)

ಅಕ್ಕಳೆ: ೧. ಜಿರಳೆ. **ಪ್ರ:** ಮನೇಲೆಲ್ಲಾ ಅಕ್ಕಳೆ ತುಂಬಿಕೊಂಡಿದೆ (ದಕ.ಜಿ) ೨. ಬೇಲಿಯಲ್ಲಿ ಮಾಡಿದ ಸಣ್ಣ ಪ್ರವೇಶ; ತಡಮೆ

ಅಕ್ಕಳ್ಳಕ್ಕಿ: ಒಂದು ಬಗೆಯ ಕಾಡುಹಕ್ಕಿ (ರಾಮ.ಜಿ)

ಅಕ್ಕಳ್ಳಿ: ಹಕ್ಕಳ್ಳಿಚಕ್ಕಳ್ಳಿ; ಚಕ್ಕಳಗುಳಿ

ಅಕ್ಕಾದಾಟ: ಚಿಕ್ಕ ಮಕ್ಕಳು ಆಡುವ ಆಟ

ಅಕ್ಕಿ: ೧. ಹಕ್ಕಿ ೨. ಹೊಟ್ಟು ತೆಗೆದ ಬತ್ತದ ಕಾಳು

ಅಕ್ಕಿಅಣಬೆ: ಅಣಬೆಯ ಒಂದು ಬಗೆ (ಶಿವ.ಜಿ)

ಅಕ್ಕಿ ಅರಿನೀರು ಬಿಡು: ೧. ಕೋಳಿಅಂಕದಲ್ಲಿ ಪೆಟ್ಟಾದ ಕೋಳಿಗೆ ಬಾಯಾರಿಕೆ ತಣಿಸಲು ಅದರ ಬಾಯಿಗೆ ಬಟ್ಟೆ ಚೂರಿನಿಂದ ಅಕ್ಕಿ ಮತ್ತು ನೀರನ್ನು ಬಿಡುವುದು (ದಕ.ಜಿ) ೨. ಹೆಣದ ಬಾಯಿಗೆ ಅಕ್ಕಿ ಮತ್ತು ನೀರು ಬಿಡುವುದು (ದಕ.ಜಿ)

ಅಕ್ಕಿಉಂಗುರ: ಅಕ್ಕಿಕಾಳಿನಂತಿರುವ ಸಣ್ಣ ಮುತ್ತುಗಳಿಂದ ಮಾಡಿದ ಉಂಗುರ

ಅಕ್ಕಿಉಂಡಿ: ಅಕ್ಕಿ, ಸಕ್ಕರೆ, ಏಲಕ್ಕಿ, ತುಪ್ಪವನ್ನು ಹಾಕಿ ಮಾಡಿದ ಒಂದು ಬಗೆಯ ಸಿಹಿ ತಿಂಡಿ

ಅಕ್ಕಿಎರಚುವ ಶಾಸ್ತ್ರ: ಕೊರವ ಸಮುದಾಯದ ಒಂದು ಮದುವೆಯ ಶಾಸ್ತ್ರ. ಮದುವೆಯ ಚಪ್ಪರದಲ್ಲಿ ಬರೆದ ಹಸೆಯ ಮೇಲೆ ಕುಳಿತುಕೊಂಡು ವಧುವರರು ಪರಸ್ಪರ ಅಕ್ಕಿ ಎರಚುತ್ತಾರೆ (ಬಳ್ಳಾ.ಜಿ)

ಅಕ್ಕಿಎಸರು: ಅನ್ನಬೇಯಿಸಲು ಹಾಕಿದ ನೀರು

ಅಕ್ಕಿಕಟ್ಟಿನಾಂಬ್ರ: ಅಕ್ಕಿತೊಳೆದ ನೀರಲ್ಲಿ ಮಾಡಿದ ಸಾರು

ಅಕ್ಕಿಕಡಿ: ಅಕ್ಕಿಯ ನುಚ್ಚು (ಉಕ.ಜಿ/ದಕ.ಜಿ); ಕಡಕ್ಕಿ (ದಕ)

ಅಕ್ಕಿಕಾಲು: ೧. ಸುಡುಗಾಡುಸಿದ್ಧರ ಜೋಳಿಗೆಯಲ್ಲಿರುವ ಹಕ್ಕಿಕಾಲು ೨. ಒಂದು ಬಗೆಯ ಚಿಕ್ಕ ಮೊಳೆ (ಗುಲ್ಬ.ಜಿ)

ಅಕ್ಕಿಕಾಳು: ಅರಿಶಿನ ಲೇಪಿತ ಅಕ್ಷತೆಕಾಳು. ಮದುಮಕ್ಕಳ ತಲೆಯ ಮೇಲೆ ಹಾಕುವ ಅಕ್ಷತೆ. **ಪ್ರ**: ಮುತ್ತೈದೇರು ಒಬ್ಬೊಬ್ಬರಾಗಿ ಬಂದು ಸಾಸ್ವಿ ಇಟ್ಟು, ಅಕ್ಕಿಕಾಳು (ಅಕ್ಷತಿ) ಹಾಕಿ ಆರತಿ ಬೆಳಗಿದ್ರು (ದಾವ.ಜಿ/ಶಿವ.ಜಿ)

ಅಕ್ಕಿಕಾಳು ಒದಗಿ ಬರು: ಕಂಕಣ ಬಲ ಕೂಡಿಬರು

ಅಕ್ಕಿಕಾಳು ದಿವಸ: ಲಿಂಗಾಯತರ ಮದುವೆಗಳಲ್ಲಿ ಅಂದು ಬೀಗರಿಗೆ ಹಾಗೂ ಊರ ದೈವಕ್ಕೆ ಗೋಧಿ ಹುಗ್ಗಿಯ ಊಟವಿರುತ್ತದೆ

ಅಕ್ಕಿಕಾಳು ಬೀಳು: ವಿವಾಹ ಸಂಪನ್ನವಾಗು; ಮದುವೆ ಮುಗಿ. ಮಾಂಗಲ್ಯಧಾರಣೆ ಮಂತ್ರ ಹೇಳಿದ ಕೂಡಲೇ ಎಲ್ಲರೂ ಆಶೀರ್ವಾದಪೂರ್ವಕವಾಗಿ ಮದುಮಕ್ಕಳತ್ತ ಅಕ್ಕಿಕಾಳನ್ನು ತೂರುವ ಸಂಪ್ರದಾಯ. **ಪ್ರ**: ಏನ್ರೀ ಅಕ್ಕಿಕಾಳ ಬಿದ್ದ ಮ್ಯಾಲ ಬಂದಿರೆಲ್ಲ (ಶಿವ.ಜಿ)

ಅಕ್ಕಿಕಾಳುಹಾಕು: ೧. ಮದುಮಕ್ಕಳ ಮೇಲೆ ಅಕ್ಷತೆಯನ್ನು ಎರಚು; ಸೇಸೆ ಹಾಕು (ಧಾರ.ಜಿ)೨. ದೇವತಾಮೂರ್ತಿಗೆ ಅಕ್ಷತೆ ಅರ್ಪಿಸು ೩. ನೀನು ಸಾಯಬೇಕು ಎಂಬ ಅರ್ಥ ಕೊಡುವ ಒಂದು ಬೈಗುಳ. **ಪ್ರ**: ನಿನ್ನ ಬಾಯ್ಗೆ ಯಾವಾಗ ಅಕ್ಕಿಕಾಳು ಹಾಕದು

ಅಕ್ಕಿಕಾಳ್ ಸೀರಿ: ಮದುವೆ ಮುಹೂರ್ತದಲ್ಲಿ ಅಕ್ಷತೆ ಹಾಕುವ ಸಂದರ್ಭದಲ್ಲಿ ಮದುಮಗಳು ಉಡುವ ಸೀರೆ (ಬಿಜಾ.ಜಿ)

ಅಕ್ಕಿಕುತ್ತಾಟ: ಅಕ್ಕಿ ಕೂಡಿಹಾಕುವ ಸ್ಥಳ

ಅಕ್ಕಿಕೇಲ್: ಅಕ್ಕಿ ತುಂಬಿಡುವ ಮಣ್ಣಿನ ದೊಡ್ಡ ಹಂಡೆ (ದಕ.ಜಿ)

ಅಕ್ಕಿಕೇಸು: ಅಕ್ಕಿಯ ಮೇಲಿನ ತೆಳುಪೊರೆ; ಅಕ್ಕಿ ಕ್ಯಾಸರೆ (ಮೈಸೂ.ಜಿ/ಬಳ್ಳಾ.ಜಿ)

ಅಕ್ಕಿಗಂಜಿ ಕಡಬು: ಮಲೆನಾಡಿನ ಒಂದು ಬಗೆಯ ಕಡುಬು. ಅಕ್ಕಿ ನುಚ್ಚನ್ನು ಗಂಜಿಯಂತೆ ಬೇಯಿಸಿ, ಅದಕ್ಕೆ ಅಕ್ಕಿ ತರಿ ಹಾಕಿ, ಕೈಯಾಡಿ ಬಾಳೆ ಎಲೆಯ ಕೊಟ್ಟೆ ಒಳಗೆ ಇಟ್ಟು, ದಾರದಲ್ಲಿ ಕಟ್ಟಿ ಕಡುಬಿನ ಪಾತ್ರೆಯಲ್ಲಿಟ್ಟು, ಆವಿಯಲ್ಲಿ ಬೇಯಿಸಿ ಸಿದ್ಧಗೊಳಿಸುವುದು. ಮಾಂಸದ ಸಾರಿನೊಂದಿಗೆ ಇದನ್ನು ಸೇವಿಸುವರು

ಅಕ್ಕಿಗಂಟು: ವಿವಾಹಕ್ಕೆ ಮೊದಲು ಗಂಡಿನ ಮನೆಯಲ್ಲಿ ಸಿದ್ಧಪಡಿಸುವ ಗಂಟು. ಬಿಳಿಯ ಹೊಸ ಬಟ್ಟೆಯಲ್ಲಿ ಅಕ್ಕಿ, ವಾಲೆಜೋಡು, ಬಟ್ಟಲಡಿಕೆ, ವೀಳ್ಯೆದೆಲೆ, ಉತ್ತತ್ತಿ, ಕೊಬ್ಬರಿ ಗಿಟಕು, ಅರಿಷಿಣಕೊಂಬು, ಹವಳ, ಮುತ್ತು ಹಾಗೂ ಲಗ್ನಪತ್ರಿಕೆ ಇವುಗಳನ್ನೆಲ್ಲ ಹಾಕಿ ಕಟ್ಟಿದ ಗಂಟು. ಇದನ್ನು ಪೂಜಿಸಿದ ನಂತರ ವಧುವಿನ ಮನೆಗೆ ತೆಗೆದುಕೊಂಡು ಹೋಗುತ್ತಾರೆ. ಲಗ್ನದ ಅಕ್ಕಿಗಂಟು ಒಯ್ಯವುದು ವಧು ಹಾಗೂ ವಧುವಿನ ಮನೆಯವರನ್ನು ಮದುವೆಗೆ ಆಮಂತ್ರಿಸುವುದರ ಸಂಕೇತ (ಉಕ)

ಅಕ್ಕಿಗಚ್ಚು: ಅಕ್ಕಿ ತೊಳೆದ ನೀರು. ಕಲಗಚ್ಚು (ಕೋಲಾ.ಜಿ). ***ಇರೂ**: ಅಕ್ಕಚ್ಚು (ಉಕ.ಜಿ)*

ಅಕ್ಕಿಗೂಡು: ಅಕ್ಕಿ ತುಂಬಿಡಲು ಬಿದಿರು ಅಥವ ಬೆತ್ತದಿಂದ ಮಾಡಿದ ಗೂಡು (ಉಕ.ಜಿ). ***ಇರೂ**: ಅಕ್ಕಿಗೂಡೆ*

ಅಕ್ಕಿಗೆಣಸು: ಗೆಣಸಿನ ಒಂದು ಪ್ರಭೇದ (ಉಕ.ಜಿ)

ಅಕ್ಕಿಗೇರುವ ಬಿದಿರು: ಅಕ್ಕಿಯಲ್ಲಿನ ಕಸ, ಧೂಳು, ಹುಳ, ಹುಪ್ಪಡಿಯನ್ನು ಬೇರ್ಪಡಿಸುವ ಬಿದಿರಿನ ಮೊರ (ಧಾರ.ಜಿ)

ಅಕ್ಕಿಘನ ಮಾಡುವುದು: ಅಕ್ಕಿಯಲ್ಲಿರುವ ಕಲ್ಲು ಮಣ್ಣು ತೆಗೆದು ಹಸನು ಮಾಡುವುದು (ಮೈಸೂ.ಜಿ)

ಅಕ್ಕಿಚಿಟ್ಟೆ: ಧಾನ್ಯಗಳಿಗೆ ಬೀಳುವ ಸಣ್ಣ ಚಿಟ್ಟೆಯಾಕಾರದ ಕೀಟ

ಅಕ್ಕಿಚೆಂಡು ಹೂವು: ಅಕ್ಕಿಕಾಳನ್ನು ಹೋಲುವ ಚಿಕ್ಕ ಎಸಳುಗಳಿರುವ ಚೆಂಡುಹೂವಿನ ಒಂದು ವಿಧ

ಅಕ್ಕಿಚ್ಚು: ನೋಡಿ– ಅಕ್ಕಿಗಚ್ಚು

ಅಕ್ಕಿಟ್ಟು ಗಿಣ್ಣು: ಸಿಹಿತಿನಿಸು

ಅಕ್ಕಿತಂಬಿಟ್ಟು: ಅಕ್ಕಿ ಹಿಟ್ಟಿಗೆ ಬೆಲ್ಲದ ಪಾಕ ಸೇರಿಸಿ ಕಟ್ಟಿದ ಉಂಡೆ (ಮೈಸೂ.ಜಿ/ಮಂಡ್ಯ.ಜಿ)

ಅಕ್ಕಿತೆಗೆಯುವುದು: ಶುಭಕಾರ್ಯಗಳನ್ನು ನೆರವೇರಿಸಲು ದೈವಾನುಗ್ರಹ ಇದೆಯೇ ಎಂದು ತಿಳಿಯಲು ದೇವರ ಇದಿರಿನಲ್ಲಿ ಮಂತ್ರಾಕ್ಷತೆ ತೆಗೆದು ಎಣಿಸಿ ನೋಡುವ ಆಚರಣೆ (ದಕ.ಜಿ)

ಅಕ್ಕಿದಣಿ: ಅಕ್ಕಿಯಿಂದ ತಯಾರಿಸಿದ ಪಾನೀಯ

ಅಕ್ಕಿದೋಣಿ: ಅಕ್ಕಿಯನ್ನು ದಾಸ್ತಾನು ಮಾಡುವ ಮರದ ಪೆಟ್ಟಿಗೆ. **ಇರೂ**: *ಪತ್ತಾಸು*

ಅಕ್ಕಿಧಾರೆ: ಲಗ್ನದ ಕಲಾಪಗಳಲ್ಲಿ ಒಂದು. ಇದರಲ್ಲಿ ಹೆಣ್ಣು ಮತ್ತು ಗಂಡು ಮಂತ್ರೋಕ್ತವಾದ ಅಕ್ಕಿಯನ್ನು ಬೊಗಸೆಯಲ್ಲಿ ತೆಗೆದುಕೊಂಡು ಒಬ್ಬರ ತಲೆಯ ಮೇಲೆ ಮತ್ತೊಬ್ಬರು ಸುರಿಯುತ್ತಾರೆ. ಕೆಲವೊಮ್ಮೆ ಈ ಅಕ್ಕಿಗೆ ಅರಿಶಿನ, ಕುಂಕುಮಗಳನ್ನು ಬೆರೆಸಿ ಬಣ್ಣವಾಗಿ ಕಾಣುವಂತೆ ಮಾಡುವುದೂ ಉಂಟು

ಅಕ್ಕಿನೀರು ಬಿಡುವುದು: ಮಲೆನಾಡಿನ ಬ್ರಾಹ್ಮಣರ ಶವಸಂಸ್ಕಾರ ಸಂದರ್ಭದಲ್ಲಿ ಶವದ ಬಾಯಿಗೆ ಕೊನೆಯಲ್ಲಿ ಅಕ್ಕಿ ಮತ್ತು ನೀರನ್ನು ಹಾಕುವ ಸಂಪ್ರದಾಯ (ಚಿಮ.ಜಿ)

ಅಕ್ಕಿಪಟ್ಟಾ: ಗೊರವರ ಒಂದು ಸಂಪ್ರದಾಯ. ಕರಿಯ ಕಂಬಳಿಯ ಗದ್ದಿಗೆಯ ನಾಲ್ಕೂ ಮೂಲೆ ಬಿಟ್ಟು, ಅರಿಶಿಣ ಕುಂಕುಮ ಹುಯ್ದು, ಮಧ್ಯದಲ್ಲಿ ಅಕ್ಕಿಯಿಂದ ತ್ರಿಶೂಲ ಡಮರುಗ ಸರ್ಪ ಸೂರ್ಯ ಚಂದ್ರ ನಾಗಬೆತ್ತ ಮುಳ್ಳಾವುಗೆ, ಪುಟ್ಟಪಾದ ಚಿತ್ರಿಸುವುದಕ್ಕೆ ಪಟ್ಟಾ ಎನ್ನುತ್ತಾರೆ (ಬೆಂಗ.ಜಿ)

ಅಕ್ಕಿಪತಂಗ: ಅಕ್ಕಿ, ಅಡಕೆ ಇತ್ಯಾದಿಗಳಲ್ಲಿದ್ದು ಧಾನ್ಯ ಹಾಳು ಮಾಡುವ ಕೀಟ (ಬಳ್ಳಾ.ಜಿ)

ಅಕ್ಕಿಪತಾಸು: ಅಕ್ಕಿ ತುಂಬಿ ಇಡುವ ಮರದ ಪೆಟ್ಟಿಗೆ (ಮಲೆ)

ಅಕ್ಕಿಪಿಳ್ಳೆ: ಗುಬ್ಬಿ; ಒಂದು ಜಾತಿಯ ಚಿಕ್ಕ ಪಕ್ಷಿ

ಅಕ್ಕಿಪುಕುರಿ: ಹಸಿ ಅಕ್ಕಿ ತಿಂದು ಕಾಮಾಲೆ ರೋಗ ಹಿಡಿದವಳು (ದಕ.ಜಿ)

ಅಕ್ಕಿಪುಗ್ಗಿ: ಅಕ್ಕಿಯನ್ನು ಚೆನ್ನಾಗಿ ಬೇಯಿಸಿ ಅದಕ್ಕೆ ಬೆಲ್ಲ, ಲವಂಗ, ಏಲಕ್ಕಿ, ಶುಂಠಿ ಹಾಕಿ ಮಾಡಿದ ತಿನಿಸು (ಬಳ್ಳಾ.ಜಿ)

ಅಕ್ಕಿಪುರಲೆ/ಅಕ್ಕ್‌ಪುರ್ಲೆ: *ಸಿರ್ಟೊಕಾಕಮ್ ರ್‍ಯಾಡಿಕ್ಯಾನ್ಸ್*: ದನಗಳ ಮೇವಿಗೆ ಬಳಸುವ ಒಂದು ಕಳೆಸಸ್ಯ (ರಾಮ.ಜಿ)

ಅಕ್ಕಿಪೂಜೆ: ದೇವರಿಗೆ ಅಕ್ಕಿಯಿಂದ ಮಾಡುವ ಅಲಂಕಾರ ವಿಶೇಷ (ಬೆಂಗ್ರಾ.ಜಿ)

ಅಕ್ಕಿಬಳಗ: ನಿಕಟ ಸಂಬಂಧಿಗಳು (ಬಳ್ಳಾ.ಜಿ)

ಅಕ್ಕಿಬಾನ: ನೆಲ್ಲಕ್ಕಿ ಅನ್ನ (ಬಳ್ಳಾ.ಜಿ)

ಅಕ್ಕಿಬಿಕ್ಕುವುದು: ಸಾವಿನ ಆಚರಣೆಯ ಒಂದು ಕ್ರಮ (ದಕ.ಜಿ)

ಅಕ್ಕಿಬೀಜ: ೧. ಬತ್ತ, ರಾಗಿ, ಅಕ್ಕಿ, ಸೌತೆ ಬೀಜ, ಹುರುಳಿಕಾಳು, ತೊಗರಿಕಾಳು, ಕುಂಬಳಕಾಯಿಬೀಜ, ಗೋಧಿ ಇವುಗಳ ಮಿಶ್ರಣ ೨. ಮದುವೆಯ ಮುಹೂರ್ತದ ಸಂದರ್ಭದಲ್ಲಿ ಮಂಟಪದ ಕಂಬಕ್ಕೆ ಕಟ್ಟುವ ಐದು ಬಗೆಯ ಧಾನ್ಯ (ಹಾಸ.ಜಿ). **ಇರೂ**: *ಐದಾನ್ಯ*

ಅಕ್ಕಿಬೀಜ ಎತ್ತುವುದು: ದವಸಧಾನ್ಯ ಸಂಗ್ರಹಿಸುವುದು. ಇದು ಸುಗ್ಗಿ ಹಬ್ಬದಲ್ಲಿ ನಡೆಸುವ ಆಚರಣೆ (ಚಿಮ.ಜಿ)

ಅಕ್ಕಿಬೋಜ: ೧. ಮಲೆನಾಡಿನಲ್ಲಿ ಬತ್ತ, ಅಕ್ಕಿ ಮತ್ತು ಬೈನೆ ಮರದ ತೊಗಟೆಯನ್ನು ನೆನೆಸಿ ಮಾಡುವ ಹೆಂಡ (ಶಿವ.ಜಿ) **ಪ್ರ**: ನಂಜ ಚೆನ್ನಾಗಿ ಅಕ್ಕಿಬೋಜ ಕುಡಿದು ಮತ್ತೇರಿ ಕೆಸರುಗದ್ದೆಯ ಅಂಚಿನಲ್ಲಿ ತೂರಾಡುತ್ತಾ ಬರುತ್ತಿದ್ದನು ೨. ಒಂದು ಮಾದಕ ಪೇಯ ೩. ಬೈನೆ ಮರದಿಂದ ತೆಗೆದ ಕಳ್ಳು (ಶಿವ.ಜಿ)

ಅಕ್ಕಿಬ್ಯಾಳಿಗೆಂಟ್: ಮದುವೆಯ ಕಾಶೀಯಾತ್ರೆ ಆಚರಣೆಯಲ್ಲಿ ಯಾತ್ರೆ ಹೋಗುವಾಗ ಹಿಡಿದುಕೊಳ್ಳುವ ಅಕ್ಕಿ ಬೇಳೆಯ ಗಂಟು (ದಕ.ಜಿ)

ಅಕ್ಕಿಮಡೆ: ೧. ವಿಶಿಷ್ಟ ರೀತಿಯಲ್ಲಿ ಮೂರು ಹೊಸ ಮಡಕೆಗಳಲ್ಲಿ ಧಾನ್ಯ ಸಂಗ್ರಹಿಸಿ, ಸಮರ್ಪಿಸಿ, ಅದರಿಂದ ನೈವೇದ್ಯ ಮಾಡಿ, ಸಂತರ್ಪಣೆ ಮಾಡುವುದು (ಬೆಂಗ.ಜಿ) ೨. ಹೊಸ ಅಕ್ಕಿಯನ್ನು ತುಂಬಿಸಿಟ್ಟ ಮಡಕೆ (ಶಿವ.ಜಿ)

ಅಕ್ಕಿಮಡ್ಲೆ: ಇದರ ಕಷಾಯ ಕಾಮಾಲೆಗೆ ಉತ್ತಮ (ಮಲೆ)

ಅಕ್ಕಿಮರಿ/ಅಕ್ಮರಿ: ೧. ಒಂದು ಬಗೆಯ ಆಹಾರಯೋಗ್ಯ ಕಳೆಗಿಡ ೨. ಕುರಿಗಳಿಗೆ ಪ್ರಿಯವಾದ ಒಂದು ಮೇವಿನ ಸಸ್ಯ. **ಪ್ರ**: ಅಕ್ಕಿಮರಿ ಹುಲ್ಲು ತಿಂದು ಬಾಯಾರಿದ ಕುರಿಗಳು

೩. ಮಕ್ಕಳಿಗೆ ಬರುವ ಒಂದು ರೋಗ; ಅಕ್ಕಳಕ. **ಇರೂ:** *ಅಡಕಚೆಟ್ಟಿ*

ಅಕ್ಕಿಮರಿಗೆ: ಅಕ್ಕಿ ತುಂಬುವ ಮರದ ಪೆಟ್ಟಿಗೆ (ಉಕ.ಜಿ)

ಅಕ್ಕಿಮಾನಗಿ: ಹದಿನೈದು ಕೊಳಗ ಅಕ್ಕಿಯನ್ನು ಕಟ್ಟಿದ ಹುಲ್ಲಿನ ಅಥವ ಬೆತ್ತ ಮೂಟೆ ಮುಡಿ ಅಥವಾ ಮೂಡೆ (ಉಕ.ಜಿ)

ಅಕ್ಕಿಮುಡಿ: ೧. ಅಕ್ಕಿಯನ್ನು ತುಂಬಿಡುವ ಹುಲ್ಲಿನ ಮೂಡೆ ೨. ಕುಳ; ಗುಳ (ಉಕ.ಜಿ) ೩. ಒಣ ಬೈಹುಲ್ಲು, ಮುಳಿಹುಲ್ಲು ಬಳಸಿ ಮುಡಿ ತಯಾರಿಸಿ, ಅದರೊಳಗೆ ಅಕ್ಕಿ ತುಂಬಿ, ಬಾಳೆನಾರಿನಿಂದ ಮುಡಿ ಕಟ್ಟಿ ಶೇಖರಿಸಿಡುತ್ತಾರೆ. ಇದಕ್ಕೆ ಅಕ್ಕಿಮುಡಿ ಎನ್ನುತ್ತಾರೆ ೪. ಮುಡಿಯ ವಿನ್ಯಾಸದ ರಂಗೋಲಿ. ಧಾನ್ಯಲಕ್ಷ್ಮಿಯನ್ನು ಪೂಜಿಸಿ ಅಕ್ಕಿಯನ್ನು ತುಂಬಿ ಇಡುವ ಅಕ್ಕಿಮುಡಿಯನ್ನು ಜನಸಾಮಾನ್ಯರು ರಂಗೋಲಿ ಮೂಲಕ ಬಿಡಿಸುವರು

ಅಕ್ಕಿಮೂತಿ ಹುಳು: ಜೋಳ, ಗೋಧಿ ಮುಂತಾದ ತೆನೆಗಳನ್ನು ಹಾಳು ಮಾಡುವ ಕೀಟ

ಅಕ್ಕಿರಡ್ಡಿಗಿಡ: ಒಂದು ಸಸ್ಯವಿಶೇಷ (ಮಂಗ.ಜಿ)

ಅಕ್ಕಿರಾಶಿಚೊಗ್ಸ್: ಮದುಮಗಳು ಅಕ್ಕಿ ರಾಶಿಯನ್ನು ಚೆಲ್ಲಿ ಗೃಹ ಪ್ರವೇಶಿಸುವ ಆಚರಣೆ (ದಕ.ಜಿ)

ಅಕ್ಕಿವರ್ಣಸೊಪ್ಪು: ಒಂದು ವಿಧದ ಸೊಪ್ಪು (ಕೋಲಾ.ಜಿ)

ಅಕ್ಕಿಶಡ್ಡೆ: ಹೊಲಕ್ಕೆ ಕಾಳನ್ನು ಬಿತ್ತುವ ಸಾಧನ; ಅಕ್ಕಡಿ ಸೆಡ್ಡೆ (ತುಮ.ಜಿ)

ಅಕ್ಕಿಸರಿ: ಅಕ್ಕಿಗಂಜಿ. ಅಕ್ಕಿಯನ್ನು ಹದವಾಗಿ ಹುರಿದು ಹಿಟ್ಟು ಮಾಡಿ ಉಪ್ಪು ಅಥವಾ ಸಕ್ಕರೆ ಹಾಕಿ ಚೆನ್ನಾಗಿ ಕುದಿಸಿ ಮಾಡಿದ ಗಂಜಿ (ಕೋಲಾ.ಜಿ)

ಅಕ್ಕಿಸಾದು: ಅಕ್ಕಿಯನ್ನು ಸೀದು ಹೋಗುವಂತೆ ಹುರಿದು ತಯಾರಿಸಲಾದ ಹಣೆಗಿಡುವ ಕಪ್ಪು (ಬೆಂಗ್ರಾ.ಜಿ)

ಅಕ್ಕಿಸಾಸೆ ಇಡುವುದು: ಸೇಸೆ ಇಡುವುದು; ಅಕ್ಷತೆ ಇಡುವುದು. ಗಂಡುಹೆಣ್ಣಿಗೆ ಮದುವೆ ಸಂದರ್ಭದಲ್ಲಿ ಅಕ್ಕಿ ಹಾಕುವುದು. ಕಳಸದ ಅಕ್ಕಿಯನ್ನು ಎರಡೂ ಕೈಯಲ್ಲಿ ತೆಗೆದುಕೊಂಡು ಕುಳಿತಿರುವವರ ಮೊಣಕಾಲು ಭುಜಕ್ಕೆ ತಾಗಿಸುತ್ತಾ ತಲೆ ಮೇಲೆ ಹಾಕುವುದು

ಅಕ್ಕಿಸೊಪ್ಪು: ಆಹಾರದಲ್ಲಿ ಬಳಸುವ ಒಂದು ಬಗೆಯ ಸೊಪ್ಪು (ತುಮ.ಜಿ)

ಅಕ್ಕಿಹಪ್ಪಳ: ಅಕ್ಕಿಯಿಂದ ಮಾಡಿದ ಹಪ್ಪಳ (ಮೈಸೂ.ಜಿ)

ಅಕ್ಕಿಹಿಟ್ಟಿನ ರಂಗೋಲಿ: ರಂಗ್ ಹೊಯ್ಯುವುದು; ಬೆಳ್ತಿಗೆ ಅಕ್ಕಿಯನ್ನು ಮೂರು ದಿನ ನೀರಿನಲ್ಲಿ ನೆನೆಯಿಸಿ, ಬಳಿಕ ನುಣ್ಣಗೆ ರುಬ್ಬಿದ ಅಕ್ಕಿ ಹಿಟ್ಟಿನಿಂದ ಅರಿವೆ ಬತ್ತಿಯ ಮೂಲಕ ಹಾಕುವ ರಂಗೋಲಿ. ಇದು ಬಹುಕಾಲ ಇರುತ್ತದೆ

ಅಕ್ಕಿಹುಗ್ಗಿ: ನೋಡಿ– ಅಕ್ಕಿಪುಗ್ಗಿ

ಅಕ್ಕಿಹುಲ್ಲು: ನೋಡಿ– ಅಕ್ಕಿಪುರಲೆ

ಅಕ್ಕಿಹೂಜಿ: ಉಗ್ರಾಣಕ್ಕೆ ಬೀಳುವ ಚಿಟ್ಟೆ ಜಾತಿಯ ಕೀಟ; ಉಗ್ರಾಣಕೀಟ;. **ಇರೂ:** *ಅಕ್ಕಿಚಿಟ್ಟೆ*

ಅಕ್ಕಿಹೊಂಬಾಳೆ: ಅಡಕೆಯ ಹೂವು; ಹಿಂಗಾರ; ಸಿಂಗಾರ (ಮಂಡ್ಯ.ಜಿ)

ಅಕ್ಕಿಹೊಡೆ (ನಾ): ಗದ್ದೆಯಲ್ಲಿ ಹುಲುಸಾಗಿ ಬೆಳೆಯುವ ಒಂದು ಬಗೆಯ ಹುಲ್ಲು

ಅಕ್ಕೀರೆ ಸೊಪ್ಪು: ಹಕ್ಕರಿಕೆ ಪಲ್ಲೆ; ರೊಟ್ಟಿಯ ಜೊತೆ ತಿನ್ನುವ ಒಂದು ಹಸಿ ಸೊಪ್ಪು. **ಇರೂ:** ಅಕ್ಕರಕಿ ಸೊಪ್ಪು

ಅಕ್ಕು: ಅರಗು; ಕರಗು; ಜೀರ್ಣವಾಗು (ಉಕ.ಜಿ)

ಅಕ್ಕುಪಡಿ: ನೋಡಿ– ಅಕ್ಪಡಿ

ಅಕ್ಕುರಕಿ: ೧. ಅಕ್ಕರತಿ ೨. ಪ್ರೀತಿ (ಶಿವ.ಜಿ)

ಅಕ್ಕುಲ್ಲು: ಒಂದು ಬಗೆಯ ಮೇವಿನ ಸಸ್ಯ. **ನೋಡಿ–** ಅಕ್ಕಿಪುರಲೆ

ಅಕ್ಕುಳಿ: ಗುಬ್ಬಚ್ಚಿ ಇರೂ: ಅಕ್ಕಿ

ಅಕ್ಕೆ: ೧. ಹಕ್ಕೆ; ಎತ್ತು ದನಕರುಗಳನ್ನು ಕೂಡುವ ಸ್ಥಳ ೨. ಉಜ್ಜು ಕಂಬಳಿ ಸರಿಪಡಿಸುವ ಸಾಧನ (ಬೆಂಗ.ಜಿ)

ಅಕ್ಕೆಗಾಯ: ಇದು ರಾಸುಗಳಲ್ಲಿ ಕಂಡುಬರುವ ಚರ್ಮ ಸಂಬಂಧಿ ರೋಗ. ಸಾಮಾನ್ಯವಾಗಿ ಎತ್ತಿನ ಹಿಂಬದಿ, ತೊಡೆ ಭಾಗದಲ್ಲಿ (ಹೊಟ್ಟೆಗೆ ಸಮಾನಾಂತರವಾಗಿ) ಕಂಡು ಬರುವ ಗಾಯ (ಚಿತ್ರ.ಜಿ)

ಅಕ್ಕೆಣ್ಣೆ ಕೊಡುವುದು: ಹೆಣ್ಣು ಚೊಚ್ಚಲು ಬಾಣಂತನಕ್ಕೆಂದು ಹೋಗಿ ತವರಿನಲ್ಲಿದ್ದಾಗ ಅವರ ಗಂಡನ ಮನೆಯವರು ಸಂಪ್ರದಾಯದಂತೆ ಕುಸುಬಲು ಅಕ್ಕಿ, ಮೆಣಸಿನಕಾಯಿ, ಕೈ ಎಣ್ಣೆ, ತೆಂಗಿನಕಾಯಿ ಇತ್ಯಾದಿ ವಸ್ತುಗಳನ್ನು ನಿಗದಿಯಾದ ಪ್ರಮಾಣದಲ್ಲಿ ಕೊಡುವ ಸಂಪ್ರದಾಯ

ಅಕ್ಕೆಮನೆ: ಪ್ರಾಣಿ ಪಕ್ಷಿ ಕಾಯುವ ಜಾಗ

ಅಕ್ಕೇರಸಿ: ಅಕೇಶಿಯ ಗಿಡ; ಒಂದು ಸಸ್ಯವಿಶೇಷ

ಅಕ್ಕೋಗು: ಇಂಗುವುದು (ಉಕ.ಜಿ)

ಅಕ್ಕ್‌ತಂಗೀರ ಕೊಳ: ಅಕ್ಕ ತಂಗಿಯರು ಮಾತ್ರ ಸ್ನಾನ ಮಾಡುವ ಕೊಳದಂತಿರುವ ವಿನ್ಯಾಸ. ಇದು ಅಂಗಳದಲ್ಲಿ ಹಾಕುವ ಎಳೆರಂಗೋಲಿಯ ಪ್ರಕಾರ (ಉಡು.ಜಿ)

ಅಕ್ಕ್‌ಪುರ್ಲೆ: ನೋಡಿ– ಅಕ್ಕಿಪುರಲೆ

ಅಕ್ಕ್ಯಳಕು/ಅಕ್ಕಳಕ: ನೋಡಿ– ಅಕ್ಕಳಕ

ಅಕ್ಗುಂಬಿ: ಭೂಮಿಯನ್ನು ಹಸನು ಮಾಡಲು ಬಳಸುವ ಸಾಧನ. **ಇರೂ:** *ಅತ್‌ಗುಂಟೆ*

ಅಕ್‌ಜ್ವಾಳ: ಜೋಳದ ಒಂದು ತಳಿ

ಅಕ್ಡ: ತುರುಬು ಕಟ್ಟುವಾಗ ಕೂದಲು ಬಿಚ್ಚಿಕೊಳ್ಳದಂತೆ ಸಿಕ್ಕಿಸುವ ಮುಳ್ಳಿನಾಕಾರದ ಬೆಳ್ಳಿಯ ಆಭರಣ

ಅಕ್ಡಸಿ: ತಗ್ಗಿನಲ್ಲಿರುವ ಭೂಮಿ

ಅಕ್ಣ: ಅಂಕಣ. ಮನೆಯ ಎರಡು ತೊಲೆ(ದೂಲ)ಗಳ ನಡುವಿನ ಭಾಗ. **ಪ್ರ:** ಎಲ್ಡು ಅಕ್ಣದ ಮನೆ ಕಟ್ಟವರೆ

ಅಕ್ನರಿ: ಒಂದು ಜಾತಿಯ ನರಿ; ಗುಳ್ಳೆನರಿ (ತುಮ.ಜಿ)

ಅಕ್ಪಡಿ: ೧. ಅಕ್ಕಿಪಡಿ; ಅಡುಗೆಗೆ ಅಗತ್ಯವಾದ ಪರಿಕರಗಳು. ವಿಶೇಷ ಸಂದರ್ಭಗಳಲ್ಲಿ ಅಡಿಗೆ ಮಾಡಿಕೊಳ್ಳಲು ಬೇಕಾದ ಎಲ್ಲಾ ವಸ್ತುಗಳನ್ನು ನೀಡುವಿಕೆ. ೨. ಹಬ್ಬದ ಸಂದರ್ಭದಲ್ಲಿ ನಿರ್ದಿಷ್ಟ ಸೇವೆ ಸಲ್ಲಿಸಿದ್ದಕ್ಕಾಗಿ ಗ್ರಾಮದವರಿಂದ ಅಡಿಗೆಗೆ ಬೇಕಾಗುವ ಪದಾರ್ಥಗಳನ್ನು ಸಂಭಾವನೆಯಾಗಿ ಪಡೆಯುವುದು (ಮಂಡ್ಯ.ಜಿ) ೩. ಅಕ್ಕಿಯನ್ನು ಅಳತೆ ಮಾಡುವ ಸಾಧನ ೪. ನೈವೇದ್ಯಕ್ಕಾಗಿ ಕೊಡುವ ಅಕ್ಕಿ ೫. ಲವಾಜಮೆ ೬. ಭಿಕ್ಷೆ (ರಾಮ.ಜಿ). **ಇರೂ:** *ಅನ್‌ಪಡಿ, ಅನ್ನಪಡಿ, ರಾತೀಪು, ಅನ್ರಾತೀಪು ಒಣಪಡಿ; ಸೀದಾ (ಬಿಜಾ.ಜಿ)*

ಅಕ್ಬಳ್ಳಿ: *ಪೊತೊಸ್ ಸ್ಕಾಂಡೆನ್ಸ್:* ಕರಾವಳಿ ಮಲೆನಾಡುಗಳಲ್ಲಿ ಕಂಡುಬರುವ ಒಂದು ಮೇವಿನ ಬಳ್ಳಿ

ಅಕ್ರ: ೧. ಅಗ್ರ ೨. ಹನ್ನೊಂದು (ಗುಲ್ಬ.ಜಿ) ೩. ಅಕ್ಕರೆ; ಪ್ರೀತ್ಯಾದರ (ಮಂಡ್ಯ.ಜಿ) ೪. ನೆಗಡಿ; ಶೀತ (ಚಿಮ.ಜಿ) ೫. ದನಗಳ ನಾಲಗೆಗೆ ಬರುವ ಒಂದು ರೋಗ; ಆಕ್ರ (ಮೈಸೂ.ಜಿ) ೬. ನಾಲಗೆಯ ಮೇಲೆ ಬರುವ ಬಿಳಿಪದರ (ಚಿಮ.ಜಿ).

ಅಕ್ರಮಾಸಿ: ಅಕ್ರಮ ಸಂತಾನ

ಅಕ್ರಾಗಿ ಹಾಕು (ಕ್ರಿ): ಗೊಬ್ಬರ ಮತ್ತು ರಾಗಿ ಮಿಶ್ರಣವನ್ನು ಸಾಲುಗಳ ಮಧ್ಯೆ ಚೆಲ್ಲುವುದು

ಅಕ್ರೀಕಿ ಪಲ್ಲೆ: ಹಸಿರು ಕಾಯಿಪಲ್ಲೆ (ಗುಲ್ಬ.ಜಿ). **ಇರೂ:** *ಅಕ್ಕರಿಕೆ*

ಅಕ್ರೂಟ್: ಮಕ್ಕಳಿಗೆ ಶೀತವಾದಾಗ ಕೊಡುವ ಮೆಣಸು ಮತ್ತು ಬೆಲ್ಲವನ್ನು ಕುಟ್ಟಿದ ಮಿಶ್ರಣ (ಉಕ.ಜಿ). **ಇರೂ:** *ಕಂಬಾರ್‌ಕಟ್ಟು, ಕಮ್ಮರ್‌ಕಟ್ಟು*

ಅಕ್ಲಿ: ನೋಡಿ ಅಕ್ಕುಳಿ (ಬೆಂಗ್ರಾ.ಜಿ)

ಅಕ್ಲಿಕಪ್ಪ: ಬಾವುಲಿ. ವಾಮಾಚಾರದ ವಿವಿಧ ಕ್ರಿಯೆಗಳಿಗೆ, ಅಂಜನವನ್ನು ಸಿದ್ಧಪಡಿಸಲು ಇದನ್ನು ಬಳಸುವರೆಂದು ಪ್ರತೀತಿ (ಬೆಂಗ್ರಾ.ಜಿ). **ಇರೂ:** *ಕಣ್‌ಕಪ್ಪಟ, ಕಣ್‌ಕಪಡಿ*

ಅಕ್ಲು: ೧. ಹೆಕ್ಕಲು; ಹೆಕ್ಕುವುದು; ಆರಿಸುವುದು. ಹೊಲ ಗದ್ದೆಗಳಲ್ಲಿ ಕೊಯ್ದು ಪೈರನ್ನು ಸಾಗಿಸಿದಾಗ ಉಳಿಯುವ ಬಿಡಿ ತೆನೆಗಳನ್ನು ಆರಿಸುವುದು ಇಲ್ಲವೇ ಹೆಕ್ಕುವುದು ೨. ಬತ್ತದ ಒಕ್ಕಣೆಯ ಸಂದರ್ಭದಲ್ಲಿ ಕುಯ್ದು ಹಾಕಿದ ಅರಿಗಳನ್ನು ಎತ್ತಿಕೊಂಡು ಹೋಗುವಾಗ ಅಲ್ಲೊಂದು ಇಲ್ಲೊಂದು ಉಳಿಯುವ ತೆನೆ; ಹಕ್ಕಲು (ಮಂಡ್ಯ.ಜಿ). **ಇರೂ:** *ಹಂಕಲು, ಹನಿಕುಹುಲ್ಲು*

ಅಕ್ಲು ಎತ್ತು: ಕೊಯ್ಲಾಗಿ ಕಂತೆ ಕಟ್ಟಿದ ಮೇಲೆ ನೆಲದಲ್ಲಿ ಬಿದ್ದಿರುವ ತೆನೆಗಳನ್ನು ಸಂಗ್ರಹಿಸು

ಅಕ್ಷತೆಬಳ್ಳಿ: ಒಂದು ಜಾತಿಯ ಔಷಧೀಯ ಸಸ್ಯ. ಇದರ ತೊಗಟೆಯಿಂದ ಕಷಾಯ, ತಂಬುಳಿ, ಹಣ್ಣಿನಿಂದ ಪಾನಕ ಮಾಡುತ್ತಾರೆ. ಲೋಳೆ ಮತ್ತು ಚೊಗರು ರುಚಿಯ ಎಲೆಯನ್ನು ನಾಟಿವೈದ್ಯದಲ್ಲಿ ಬಳಸುತ್ತಾರೆ (ಬೆಂಗ.ಜಿ).

ಅಕ್ಷದ: ಅಕ್ಷತೆ; ಗಂಡಸರು ಹಣೆಯ ಮೇಲೆ ಇಟ್ಟುಕೊಳ್ಳುವ ಉರುಟಾದ ಕೆಂಪು ಬೊಟ್ಟು; ಕೆಂಪು ಗಂಧ. ಇದನ್ನು ಒಂದು ವಿಧದ ಮರದ ತೊಗಟೆ ಹಾಗೂ ಅರಿಶಿನದ ಬೇರು ಅಥವಾ ಬಾಳೆ ಮೋತೆಯ ಎಲೆ ಇವುಗಳನ್ನು ಗಂಧದ ಸಾಣೆಕಲ್ಲಿನ ಮೇಲೆ ತೇಯ್ದು ತಯಾರಿಸಲಾಗುತ್ತದೆ (ದಕ.ಜಿ)

ಅಕ್ಷಮಿ: ಉಡುಗೊರೆ (ಶಿವ.ಜಿ)

ಅಕ್ಷಯತದಿಗೆ: ವೈಶಾಖಮಾಸದ ಶುಕ್ಲಪಕ್ಷದ ಮೂರನೆದಿನ. ಅಂದು ಮಂಗಳಕರವಾದ ದಿನ. ಆ ದಿನದಂದು ಏನೇ ಮಾಡಿದರೂ ಅಕ್ಷಯವಾಗುತ್ತದೆ. ಬಸವಣ್ಣ ಜನಿಸಿದ ದಿನ, ಶೇಯಾಂಸ, ಜೈನ ತೀರ್ಥಂಕರ ವೃಷಭನಾಥನಿಗೆ ಕಬ್ಬಿನ

ಹಾಲಿನ ಆಹಾರದಾನ ಮಾಡಿದ ಪುಣ್ಯದಿನ ಎಂಬ ನಂಬಿಕೆಗಳಿವೆ.

ಅಕ್ಷಿಪಾತ್ರೆ: ಅಕ್ಷಯಪಾತ್ರೆ (ಮೈಸೂ.ಜಿ)

ಅಕ್ಸ: (ಕ್ರಿ) ೧. ಕೆಳಕ್ಕೆ ದಬ್ಬು ೨. ಒಳಸೇರಿಸು ೩. ಜೀರ್ಣಿಸಿಕೊ ೪. ಮೋಸಮಾಡು (ನಾ) ೫. ಪ್ರೀತಿ (ಉಕ.ಜಿ)

ಅಕ್ಸೆ: ೧. ಅಗಸೆ; ಊರದ್ವಾರ ೨. ಅಗಸೆ ಮರ ಮತ್ತು ಅದರ ಕಾಯಿ. **ಇರೂ:** *ಅಗಚೆ, ಅಗ್ಚೆ*

ಅಕ್ಕಾಯುದು: ಹಂಕಲಾಯುವುದು. **ನೋಡಿ–** ಅಕ್ಲು ಎತ್ತು (ಮಂಡ್ಯ.ಜಿ). **ಪ್ರ:** ಒಬ್ಬರು ಕಂತೆಕಟ್ಟಿ ಇನ್ನೊಬ್ರು ಅಕ್ಕಾಯ್ಕಳರು

ಅಕ್ಳು: ಹೈಕಳು; ಮಕ್ಕಳು

ಅಕ್ಳುಸ್ತ: ೧. ಅಗ್ಗ ೨. ಹಗುರ

ಅಖಾಡ: ೧. ಕುಸ್ತಿಯ ಕಣ; ಕುಸ್ತಿ ಮಾಡುವ ಕೆಮ್ಮಣ್ಣಿನ ಮಟ್ಟಿ (ಮೈಸೂ.ಜಿ) ೨. ಲೆಕ್ಕ; ಎಣಿಕೆ. **ಇರೂ:** *ಅಖಡಾ*

ಅಗ: ಕರ್ನಾಟಕದ ದಕ್ಷಿಣ ಭಾಗದಲ್ಲಿ ಅಳಗೆಯಾಕಾರದಲ್ಲಿಯೂ, ಉತ್ತರಭಾಗದಲ್ಲಿ ಬಾವಿಯಾಕಾರದಲ್ಲಿಯೂ, ನೆಲದಲ್ಲಿ ತಗ್ಗು ತೋಡಿ ಧಾನ್ಯ ಸಂಗ್ರಹಿಸುವ ಗುಳಿ; ದವಸ ಧಾನ್ಯಗಳನ್ನೂ ಒಡವೆಗಳನ್ನೂ ಭೂಮಿಯಲ್ಲಿ ಸಂಗ್ರಹಿಸಿಡುತ್ತಿದ್ದ ಗುಂಡಿ; ಹಗೇವು (ಮಂಡ್ಯ.ಜಿ). **ಇರೂ:** *ಕುಳಿ*

ಅಗಚಿ ಮಗಚಿ: ಮತ್ತೆ ಮತ್ತೆ; ಪದೇ ಪದೇ; ಅದೇ (ಮೈಸೂ.ಜಿ). **ಪ್ರ:** ಇರೋದೊಂದು ಸ್ಯಾಲೇನೆ ಅಗಚಿ ಮಗಚಿ ಉಟ್ಟು ಹರಿದಳು

ಅಗಚು: (ಕ್ರಿ) ೧. ಪ್ರತ್ಯೇಕಿಸು; ಅಗಲಿಸು; ಬೇರೆಮಾಡು. ಹಾಲುಕುಡಿಯುವ ಮರಿಗಳು ತಾಯಿಯಿಂದ ಬೇರೆಯಾಗುವುದು; ಹಾಲುಬಿಡಿಸುವುದು (ಬೆಳ.ಜಿ). ತಮ್ಮ ತಮ್ಮ ಕುರಿಗಳನ್ನು ಬೇರೆ ಮಾಡಿಕೊಳ್ಳುವುದು (ಶಿವ.ಜಿ). ೨. ನೀರಿನಲ್ಲಿ ಮುಳುಗಿಸು (ಚಿಮ.ಜಿ.) ೩. ದೂರವಾಗು; ತಿರುಗು; ಬೇರೆಯಾಗು; ತಿರುಗಿಕೊಳ್ಳಬೇಕಾದ ದಾರಿ (ಮಲೆ). **ಪ್ರ:** ಕೋಣೂರಿಗೆ ಅಗಚುವ ಕಾಲುದಾರಿಯಿಂದ ಮುಂದೆ ನಡೆದು ಬಿಟ್ಟಿದ್ದಾನೆ

ಅಗಚುಹಾಕು: ಪ್ರತ್ಯೇಕಿಸು; ಬೇರೆಮಾಡು. **ಪ್ರ:** ಬಲಿತ ಮರಿಗಳನ್ನು ತಾಯಿ ಕೋಳಿಯಿಂದ ಅಗಚು ಹಾಕಬೇಕು

ಅಗಚೆಗಿಡ: ಒಂದು ಔಷಧೀಯ ಗಿಡ (ಚಿತ್ರ ನೋಡಿ)

ಅಗಟಿ: ಮರಗಿಡಗಳ ಬುಡದಲ್ಲಿ ನೀರು ನಿಲ್ಲುವಂತೆ ಮಾಡುವ ಪಾತಿ. **ಪ್ರ:** ಮರಗಳಿಗೆ ಅಗಟಿ ಮಾಡಿ ಗೊಬ್ಬರ ಹಾಕಬೇಕು

ಅಗಟು: ೧. ಕಮಟುವಾಸನೆ; ಸೀದುಹೋಗಿರುವ ವಾಸನೆ ೨. ಎತ್ತಿನ ಗಾಡಿಯ ಮೂಕಿಯ ಆಸರೆಕೋಲು (ತುಮ.ಜಿ) ೩. ತಿಗಡಿಯನ್ನು ನೊಗಕ್ಕೆ ಸಿಕ್ಕಿಸಲು ಬಳಸುವ ಕಟ್ಟಿಗೆ ಕೋಲು; ಕಡೆಗೂಟ (ಮೈಸೂ.ಜಿ)

ಅಗಟೆ: ೧. ಸತ್ವವಿಲ್ಲದ್ದು; ಜೊಳ್ಳು ೨. ಎಳಸು ತೊಗರಿ (ರಾಮ.ಜಿ)

ಅಗಡ: ೧. ಹಿಡಿತಕ್ಕೆ ಸಿಕ್ಕದ ೨. ದನಗಳ ಕೊರಳಿಗೆ ತೊಡಿಸುವ ಹಗ್ಗ; ಕಣ್ಣಿ (ಬಳ್ಳಾ.ಜಿ) ೩. ಜಾಣ; ತುಂಟ; ಶೂರ

ಅಗಡದತ್ತ ಹೆಣ್ಣು: ಉದ್ಧಟ ಹೆಂಗಸು, ದಪ್ಪ ಮೈಯ ಮಹಿಳೆ (ಧಾರ.ಜಿ)

ಅಗಡಬಂಬ: ೧. ದೊಡ್ಡಸುಳ್ಳು ೨. ಮಹಾಸುಳ್ಳುಗಾರ

ಅಗಡರಾವುತ: ಒರಟ; ನಯನಾಜೂಕಿಲ್ಲದ ವ್ಯಕ್ತಿ (ಬಳ್ಳಾ.ಜಿ)

ಅಗಡಹಾಕು (ಕ್ರಿ): ಹಗ್ಗ ಹೆಣೆಯುವಾಗ ಹಗ್ಗದ ಎರಡು ತುದಿಗಳನ್ನು ಹಿಡಿದು ಗಂಟಾಗದಂತೆ ತಿರುಗಿಸುವುದು (ಮೈಸೂ.ಜಿ)

ಅಗಡಿದಿಗಡಿ: ೧. ಅರ್ಥವಿಲ್ಲದೆ ಮಾತಾಡುವುದು ೨. ಸಂಬಂಧ ಇಲ್ಲದ (ಬೆಳ.ಜಿ)

ಅಗಡು: ೧. ಬಂಡಿಯ ನೊಗದ ತುದಿಯ ರಂಧ್ರ ಮತ್ತು ಎತ್ತುಗಳ ಕೊರಳಿಗೆ ಕಟ್ಟುವ ದಪ್ಪನೆಯ ಹಗ್ಗ. **ಪ್ರ:** ಅಗಡು ಸರಿ ೨. ಬಂಡಿಯ ನೊಗದ ಎರಡು ತುದಿಯಲ್ಲಿ ಎತ್ತುಗಳನ್ನು ಬಂಧಿಸಲು ಹಾಕುವಂತಹ ಕಟ್ಟಿಗೆ ೩. ಒರಟು ೪. ಹಿಡಿತಕ್ಕೆ ಸಿಕ್ಕದ; ತುಂಟ ೫. ಹೀನ; ತುಚ್ಛ; ಕೆಟ್ಟ ೬. ಅಸಾಧ್ಯ ಕ್ರೂರ ೭. ಕಾಡು (ಗುಲ್ಬ.ಜಿ). **ಇರೂ:** *ಅಗುಡು, ಅಗ್ಡು*

ಅಗಡುದನ: ಪೋಲಿದನ; ಬೆದೆಕಡಸು; ಕೊಬ್ಬಿದದನ (ರಾಮ.ಜಿ)

ಅಗಡುಬೀಳು: ಗಾಬರಿಯಾಗು; ದಿಗಿಲುಗೊಳ್ಳು (ಉಕ.ಜಿ)

ಅಗಡುಮಾಡು: ಕೆಡಿಸು; ಅಡ್ಡಹಾದಿಗೆ ಹಚ್ಚು (ಬೆಳ.ಜಿ)

ಅಗಡುಹಚ್ಚು: ನಿರಾಕರಿಸು; ಹಠಹಿಡಿ

ಅಗಣ: ಹಗರಣ; ಪ್ರಕರಣ.

ಅಗಣಿ: ೧. ಹಿಂದಿನ ಕಾಲದಲ್ಲಿ ಬಾಗಿಲನ್ನು ಹಿಂದಿನಿಂದ ಮುಚ್ಚಲು ಬಳಸುತ್ತಿದ್ದ ಕಬ್ಬಿಣ ಅಥವಾ ಮರದ ಅಡ್ಡಪಟ್ಟಿ (ತುಮ.ಜಿ) ೨. ಕದ ತೆಗೆಯದಂತೆ ತಡೆಯುವ ಅಡ್ಡಮರ; ಚಿಲಕ ೩. ನಾಟಕ ಮಾಡುವವಳು; ಹಗರಣಗಾರ್ತಿ; ಬಡಿವಾರದ ಹೆಂಗಸು (ರಾಮ.ಜಿ) ೪. ಅಗ್ನಿ; ಬೆಂಕಿ

ಅಗಣಿಕುಲ: ಪರಿಶಿಷ್ಟ ಸಮುದಾಯದ ಒಳಪಂಗಡ (ಚಾಮ.ಜಿ). **ಇರೂ:** *ಅಗ್ನಿಕುಲ*

ಅಗಣಿದೊಣ್ಣೆ: ಮೊನಚಾದ ತುದಿಯಿರುವ ಗಟ್ಟಿಮರದ ದೊಣ್ಣೆ (ಮಂಡ್ಯ.ಜಿ)

ಅಗಣಿಬೀಗ: ಬಾಗಿಲಿನ ಅಗುಳಿಗೆ ಹಾಕುವ, ಬಿದಿರಿನ ಬೆಣೆಯನ್ನು ಹೊಂದಿರುವ ಬೀಗ; ಬೀಗದ ಒಂದು ಪ್ರಾಚೀನ ಮಾದರಿ; ಸಿಬರಿನ ಬೀಗ; ಅದುಮಿ ಹಾಕುವ ಬೀಗ

ಅಗತ: ವ್ಯಾಪಿಸುವ

ಅಗತಾದಿ ಅಮಾಸ: ಚೈತ್ರ ಕೃಷ್ಣ ಪಕ್ಷದ ಅಮಾವಾಸ್ಯೆ (ಬೀದ.ಜಿ)

ಅಗತುಕೊಳ್ಳು (ಕ್ರಿ): ಒಬ್ಬರ ಮೇಲೆ ಕವುಚಿ ಬೀಳುವುದು

ಅಗತೆ: ಬೇಸಾಯದ ಒಂದು ಹಂತ. ಪೈರಿನ ಬುಡಕ್ಕೆ ಮಣ್ಣನ್ನು ಅಗೆದು ಪೇರಿಸುವುದು (ಮಂಡ್ಯ.ಜಿ). **ಇರೂ:** *ಅಗರ್ತೆಮಾಡು*

ಅಗತೆ ಕಡಿಯೋದು: ನಿತ್‌ಗಟ್ಟಿನ ಜಾಗವನ್ನು ಬಿಟ್ಟು ಅಡಿಕೆ ಮರದ ಸುತ್ತ ಕಾಲುವೆವರೆಗಿನ ನೆಲವನ್ನು ಕೊಚ್ಚಿ ಮಣ್ಣನ್ನು ಮಗುಚುವುದು (ಉಕ.ಜಿ)

ಅಗತೆಹೊಲ: ಅಗೆದು ಹಸನು ಮಾಡಿದ ಹೊಲ

ಅಗದಿ: ೧. ಬಹಳ; ತುಂಬ. **ಪ್ರ:** ಅವ್ರು ಅಗದಿ ಉತ್ತಮ ಮಂದಿ ಅದಾರ್ರಿ ೨. ನಿಜ; ಖಂಡಿತವಾಗಿ; ಖರೇ; ಸತ್ಯ (ಬೆಂಗ.ಜಿ) ೩. ತುರ್ತು; ತಕ್ಷಣ

ಅಗದೆ: ಹರೆಯದವಳು; ಹೆಣ್ಣು

ಅಗನಗತ್ತಿ: ಹಗನಗಿತ್ತಿ; ಜಗಳಗಂಟಿ (ಬಳ್ಳಾ.ಜಿ)

ಅಗನಿ ದೊಣ್ಣೆ ಹುಯ್ಯಿ (ಕ್ರಿ): ರಾಗಿ ಬಿತ್ತನೆ ಮಾಡಿರುವ ಹೊಲದಲ್ಲಿ ಖಾಲಿ ಬಿದ್ದಿರುವ ಜಾಗದಲ್ಲಿ ಮತ್ತೆ ಬಿತ್ತನೆ ಮಾಡಲು ಅಗನಿ ದೊಣ್ಣೆಯಿಂದ ಸಣ್ಣ ಗುಳಿಗಳನ್ನು ಮಾಡುವುದು

ಅಗಪೆ: ತೆಂಗಿನ ಚಿಪ್ಪಿನ ಸೌಟು. **ಪ್ರ:** ವುದ್ವೆ ವುನೆಗೆ ಹತ್ತು ಅಗಪೆ ವಾಡ್ಕೊಂಬಾರೋ ಸಾರು ಪಾಯಸ ಬಡಿಸಾಕೆ (ಮೈಸೂ.ಜಿ). **ಇರೂ:** *ಒಣ್ಕ, ಸಟ್ಟುಗ, ಸೊಟಗ (ದಕ.ಜಿ)*

ಅಗಬರ: ದರಿದ್ರ

ಅಗಬೆ: ಬಿಚ್ಚು, ಬಿಡಿಸು; (ಬೀದ.ಜಿ)

ಅಗಭೇದಿ: ಮರವನ್ನು ಕತ್ತರಿಸುವ ಸಾಧನ; ಕೊಡಲಿ

ಅಗಮ: ತಿಗಡಿಯನ್ನು ನೊಗಕ್ಕೆ ಸಿಕ್ಕಿಸಲು ಬಳಸುವ ಕಟ್ಟಿಗೆ ಕೋಲು (ತುಮ.ಜಿ)

ಅಗರ: ೧. ನೀರು ತುಂಬಿದ ತಗ್ಗು ಪ್ರದೇಶ (ಶಿವ.ಜಿ/ದಕ.ಜಿ) ೨. ಅಕಾಲದ ೩. ಸರಿಯಾದ; ಅಪ್ಪಟ; ಸ್ಪಷ್ಟ

ಅಗರಿ: ೧. ಕುಂಬಾರರು ಗಡಿಗೆ ಮಾಡಲು ಬಳಸುವ ಗಾಲಿ ಆಕಾರದ ಚಕ್ರ (ಧಾರ.ಜಿ); ತಿಗರಿ (ಮೈಸೂ.ಜಿ) ೨. ಕಾಡಿನ ಪ್ರಾಣಿಗಳ ಮೇವಿನ ಹುಲ್ಲು ೩. ಬಿಲ (ಯಾದ.ಜಿ)

ಅಗರು: *ದಾಲ್‌ಬರ್ಜಿಯಾ ಸಿಸೊ:* ೧. ಒಂದು ಬಗೆಯ ಸುಗಂಧದ ಮರ ಮತ್ತು ಮರದ ಸುವಾಸನಾಯುಕ್ತ ಅಂಟು; ಮಡ್ಡಿ ಮರ ೨. ತಲೆಹೊಟ್ಟು ೩. ಕೊಬ್ಬರಿ ಒಡೆದಾಗ ಚಿಪ್ಪಿಗೆ ಅಂಟಿಕೊಂಡಿರುವ ಕೊಬ್ಬರಿ ಉಂಡೆ ೪. ಕಬ್ಬಿಣ ಕಾಯಿಸಿ ಬಡಿದಾಗ ಹಾರುವ ಕೆಂಡದಂಥ ಕೆಂಪು ಕಿಡಿಗಳು

ಅಗರೆ: ಒಂದು ಸಸ್ಯ ವಿಶೇಷ

ಅಗರ್ಣ: ಹಗರಣ ೧. ಅಪವಾದ ೨. ಪ್ರಕರಣ; ೩. ತರಲೆ ೪. ಸೋಜಿಗ (ಚಿತ್ರ.ಜಿ)

ಅಗರ್ತೆ ಮಾಡು: **ನೋಡಿ–** ಅಗತೆ

ಅಗರ್ಸಿ: ಅಗಲವಾದ; ವಿಸ್ತಾರವಾದ

ಅಗಲಗಳಿಗಿ: ಸೀರೆಯ ಕೊನೆಯ ಮಡಿಕೆಯನ್ನು ಮೂರು ಭಾಗ ಮಾಡಿ ಮಡಿಸುವುದು

ಅಗಲಚಾಣ: ಚಾಣದ ಒಂದು ಬಗೆ; ಕಬ್ಬಿಣ ಕತ್ತರಿಸುವ ಸಾಧನ

ಅಗಲದನಿ: ಏರುಧ್ವನಿ

ಅಗಲವೇರಿ/ಅಗಳವೇರಿ: ಅಗಳಿನ ಏರಿ; ಕೋಟೆಯ ಕಂದಕದ ಏರಿ (ಮೈಸೂ.ಜಿ)

ಅಗಲಾನಿ: ವಿಸ್ತಾರವಾದ; ಅಗಲವಾದ

ಅಗಲಾಳು: ೧. ಹೆಚ್ಚಿನ ಆಳು (ಮೈಸೂ.ಜಿ) ೨. ಕಡಿಮೆ ಎತ್ತರದ ದಪ್ಪ ದೇಹದ ಮನುಷ್ಯ; ಟೊಣಪ (ಮೈಸೂ.ಜಿ)

ಅಗಲು: ೧. ಊಟ ಬಡಿಸಿದ ತಟ್ಟೆ ಅಥವಾ ಎಲೆ (ತುಮ.ಜಿ) ೨. ಊಟ ಮಾಡುವ ಅಥವಾ ಮಾಡಿದ ಜಾಗ (ಮೈಸೂ.ಜಿ) **ಪ್ರ:** ಅಗಲನ್ನು ದಾಟಬಾರದು ೩. ಏಡಿಯ ಕೊಂಬು ೪. ಕುರುಚಲು ೫. ಎಡೆ ತಟ್ಟೆ; ನೈವೇದ್ಯದ ತಟ್ಟೆ

ಅಗಲುಣ್ಣು: ಒಂದೇ ತಟ್ಟೆಯಲ್ಲಿ ಊಟಮಾಡು

ಅಗಲುಶುಂಠಿ: ಒಂದು ಔಷಧಿ ಸಸ್ಯ. ಬೇರನ್ನು ಹೊಟ್ಟೆ ನೋವಿಗೆ ಮದ್ದಾಗಿ ಬಳಸುತ್ತಾರೆ. ಜಂತುಹುಳುನಾಶಕ ಗುಣವಿದೆ (ಚಾಮ.ಜಿ)

ಅಗಲೂಟ: ಹಗಲು ಊಟ ೧. ಮಧ್ಯಾಹ್ನದ ಊಟ ೨. ಎಡೆಯ ಊಟ ೩. ಪರಿಮಳಯುಕ್ತವಾದ ಊಟ (ತುಮ.ಜಿ/ಚಿತ್ರ.ಜಿ). **ಇರೂ:** *ಅಗಲೂಂಟೊ (ಉಕ.ಜಿ)*

ಅಗಲೆ: ಅಗಳು; ಹಳ್ಳ

ಅಗಲ್ಬಾಯಿ ಉಳಿ: ಮರದ ವಸ್ತುಗಳನ್ನು ಕೆತ್ತಲು ಬಳಸುವ ಒಂದು ಸಾಧನ; ಅಗಲಬಾಯಿಯ ಉಳಿ

ಅಗವಡು: ಸಿಕ್ಕಿಬೀಳು; ಸೆರೆಸಿಕ್ಕು (ದಕ.ಜಿ)

ಅಗವಾಳಿ: ತುಂಟಿ

ಅಗವಿ: ಅಂಗುಲ (ಬೆಂಗ್ರಾ.ಜಿ)

ಅಗಸಗಲ್ಲು: ನುಣುಪಾದ ಕಲ್ಲು

ಅಗಸಗೇಡಿ: ಹಾದಿ ಇಲ್ಲದವ; ಹಾದಿತಪ್ಪಿ ನಡೆಯುವವ (ರಾಯ.ಜಿ)

ಅಗಸರ ನಾಯಿ: ಚಂಚಲ ಸ್ವಭಾವದ್ದು; ಎಲ್ಲಿಯೂ ಜೊತೆ ಇಲ್ಲದ್ದು; ಪರದೇಶಿ (ಧಾರ.ಜಿ)

ಅಗಸರ ಪಡೆ: ಅಗಸರು ಬಟ್ಟೆ ಒಗೆಯಲು ಉಪಯೋಗಿಸುವ ದೊಡ್ಡಕಲ್ಲು (ಬೆಂಗ್ರಾ.ಜಿ)

ಅಗಸಾಲೆ: ಅಕ್ಕಸಾಲಿಗ. **ಇರೂ:** *ಅಗಸಾಲ್ಯಾ; ಅಗ್ಸಾಲೆ*

ಅಗಸಿ/ಅಗಸೆ: ೧. *ಸೆಸ್ಬಾನಿಯ ಗ್ರಾಂಡಿಫ್ಲೋರಾ:* ಅಗಲವಾದ ಬಿಳಿ ಅಥವಾ ಕೆಂಪು ಹೂ ಬಿಡುವ ಒಂದು ಮರ. ಹೂವು, ಚಿಗುರೆಲೆ, ಕಾಯಿಗಳನ್ನು ತರಕಾರಿಯಂತೆ ಬಳಸುತ್ತಾರೆ. **ಇರೂ:** *ಜೊಗಚೆಮರ, ಶ್ಯಾಡೆ, ಸೆಡೆ* (ಚಿತ್ರ ನೋಡಿ) ೨. *ಲೀನಂ ಅಸಿಟೇಟಿಸಿಮಮ್:* ನೀಲಿ ಬಣ್ಣದ ಹೂ ಬಿಡುವ ಒಂದು ಚಿಕ್ಕ ಸಸ್ಯ; ಅತಸಿಗಿಡ; ಎಳ್ಳಗಸೆ. ಇದರ ಬೀಜದಿಂದ ಎಣ್ಣೆ, ಚಟ್ನಿ ಇತ್ಯಾದಿ ತಯಾರಿಸುತ್ತಾರೆ (ಚಿತ್ರ ನೋಡಿ) ೩. ಊರ ಮುಖ್ಯ ಸ್ಥಳ (ಶಿವ.ಜಿ) ೪. ಊರಿನ ಹೆಬ್ಬಾಗಿಲು; ಮುಖ್ಯದ್ವಾರ (ಬೀದ.ಜಿ) ೫. ಊರ ಹೊರಗೆ (ಧಾರ.ಜಿ).

ಅಗಸಿಕಡ್ಡಿ: ಸ್ತ್ರೀಯರ ಕಿವಿಯ ಆಭರಣ. ಕಿವಿಯ ಹೊರ ಮೇಲ್ತುದಿಯಲ್ಲಿ ಧರಿಸುವರು. **ಇರೂ:** *ಅಗಸಿಕಡ್ಡಿ, ಲವಂಗದ ಕಡ್ಡಿ (ಬೆಂಗ್ರಾ.ಜಿ)*

ಅಗಸಿಗುಂಡಿ: ಕೊರಳಿನ ಆಭರಣ

ಅಗಸಿಧಾಟುಸ್ಲಿ: ಹೆಣವಾಗಿ ಅಗಸೆಬಾಗಿಲ ಆಚೆಗೆ ಹೋಗುವಂತಾಗಲಿ (ಬೈಗುಳ) (ಧಾರ.ಜಿ)

ಅಗಸಿಪುಡಿ: ಅಗಸಿಕಾಳಿನಿಂದ ಮಾಡಿದ ಚಟ್ನಿ. ಅಗಸಿ ಹಿಂಡಿ (ಬೀದ.ಜಿ)

ಅಗಸಿಹಂಜರ: ನೋಡಿ– ಅಗಸೀಂದ್ರ

ಅಗಸೀಂದ್ರ: ಅಗಸೆಯನ್ನು ಬಡಿದು ಕಾಳನ್ನು ಬೇರ್ಪಡಿಸಿದ ಮೇಲೆ ಉಳಿಯುವ ಸಣ್ಣ ಕಡ್ಡಿ

ಅಗಸುದ್ದೆ/ಅಗಸುದ್ಯಾ: ಔಷಧ (ಗುಲ್ಬ.ಜಿ)

ಅಗಸೆಗೂಟ: ದನದ ಕೊಟ್ಟಿಗೆಯ ಅಡ್ಡಗೂಟ

ಅಗಸೆನುಗ್ಗಿಮರ: ಅಗಸ್ತ್ಯ ಮರ. ಇದರ ಕಾಯಿ ನುಗ್ಗೇಕಾಯಿಯನ್ನು ಹೋಲುತ್ತದೆ (ಬೆಂಗ.ಜಿ)

ಅಗಸೆಬಾಗಿಲು: ಊರ ಮುಖ್ಯ ಬಾಗಿಲು. ಈ ಬಾಗಿಲನ್ನು ಮುಚ್ಚಿದರೆ ಒಳಗಿನವರು ಊರ ಹೊರಗೆ ಹೋಗಲು, ಹೊರಗಿನವರು ಊರ ಒಳಗೆ ಬರಲಾಗುತ್ತಿರಲಿಲ್ಲ. **ಪ್ರ:** ಊರು ಸೂರೆಹೋದ ಮೇಲೆ ಅಗಸೆಬಾಗಿಲು ಹಾಕಿದ್ರಂತೆ (ಶಿವ.ಜಿ)

ಅಗಸೆಳ್ಳು: ಅಗಸೆ ಗಿಡದ ಒಂದು ಜಾತಿ. **ಇರೂ:** *ಎಳ್ಳಗಸೆ*

ಅಗಸ್ತಿ: ೧. ಅಗಸಗಿತ್ತಿ ೨. ದ್ವೇಷ (ರಾಮ.ಜಿ)

ಅಗಸ್ಯಾ: ೧. ಅಗಸೆ ಕಾಯುವವನು; ತಳವಾರ ೨. ಹಿಂದಿನ ಕಾಲದಲ್ಲಿ ಮನೆ ಮನೆಗೆ ಚುಟ್ಟದ ಎಲೆ ಪೂರೈಸುತ್ತಿದ್ದ ವ್ಯಕ್ತಿ (ಉಕ.ಜಿ)

ಅಗಸ್ಯಾಗ ಬೆಳಕಾಗು: ಕಳ್ಳತನ ವಿಫಲವಾಗು. **ಪ್ರ:** ಕದಿಯಾಕೆ ಆ ಮನಿ ಈ ಮನಿ ಅಂತ ನೋಡ್ಕಂಡು ಅಗಸ್ಯಾಗ ಬೆಳಕಾತು (ಶಿವ.ಜಿ)

ಅಗಳ: **ನೋಡಿ–** ಅಗಳು (ಶಿವ.ಜಿ)

ಅಗಳಂತಿ: ಏಣಿಯ ಮೆಟ್ಟಿಲು; ಏಣಿಯ ಮೆಟ್ಟಿಲ ಕಾಲುಗಳು (ಹಾಸ.ಜಿ)

ಅಗಳತ: ಕೋಟೆಯ ಸುತ್ತಲ ಕಂದಕ

ಅಗಳವೇರಿ: ನೋಡಿ– ಅಗಲವೇರಿ

ಅಗಳಾಪಗಳಾ: ಸಡಿಲು; ಅಗಳ್‌ಪಗಳು (ಉಕ.ಜಿ)

ಅಗಳಿ: ನೋಡಿ– ಅಗಣಿ



ಅಗಳು: ೧. ಕೋಟೆಯ ಹೊರಸುತ್ತಿನ ಕಾಲುವೆ; ಕೋಟೆಯ ಸುತ್ತಲೂ ಗುಂಡಿ ತೋಡಿ ನೀರನ್ನು ನಿಲ್ಲಿಸಿದ್ದು ೨. ಊರ ಸುತ್ತ ಇರುವ ಕಂದಕ ಮತ್ತು ಬೇಲಿ (ಮಂಡ್ಯ.ಜಿ/ಮೈಸೂ.ಜಿ) ೩. ಕುದಿಸಿದ ಕಾಳು ೪. ಗದ್ದೆ ಬದಿಯ ಕಾಲುವೆ ೫. ಅಗುಳು; ಬೆಂದ ಅಕ್ಕಿ; ಅನ್ನದ ಒಂದು ಕಾಳು. **ಪ್ರ**: ಒಂದಗಳು ಚಲ್ದಂಗೆ ಊಟ ಮಾಡ್ಬೇಕು

ಅಗಳುಗಟ್ಟು: ತೆನೆಯಲ್ಲಿ ಕಾಳುಗಳು ಮೂಡತೊಡಗುವುದು; ಕಾಳುಗಳಲ್ಲಿ ಹಾಲುದುಂಬುವುದು (ಮಂಡ್ಯ.ಜಿ). **ಇರೂ:** ಅಗಳುದುಂಬು

ಅಗಳೆ: ಹಾಲು ತುಪ್ಪ ಕಾಯಿಸಲು ಹಾಗೂ ಹಾಲಿಗೆ ಹೆಪ್ಪು ಹಾಕಲು ಬಳಸುವ ಒಂದು ಬಗೆಯ ಮಡಕೆ (ಉಕ.ಜಿ)

ಅಗಳೆತ್ತು ಶಾಸ್ತ್ರ: ಅನ್ನ ನಿವಾಳಿಸುವ ಕ್ರಿಯೆ; ಮಕ್ಕಳು ಸರಿಯಾಗಿ ಊಟಮಾಡದಿದ್ದರೆ ಅನ್ನವನ್ನು ಮುಖದಿಂದ ಇಳೆತೆಗೆದು ನಾಯಿಗೆ ಹಾಕುವುದು

ಅಗಾಡಿ: ೧. ಬೀಜ ಬಿತ್ತುವ ಗದ್ದೆ (ಚಿಮ.ಜಿ) ೨. ಮನೆಯ ಮುಂಭಾಗದ ಜಗಲಿ (ಚಿಮ.ಜಿ)

ಅಗಾಡೆಪಿಚಾಡೆ: ೧. ಹಿಂದೆಮುಂದೆ; ಅಕ್ಕಪಕ್ಕ; ಎಡಬಲ ೨. ತುಂಬಾ ಒರಟು ೩. ಹೆಡೆಮುರಿ ಕಟ್ಟುವಿಕೆ (ಬೀದ.ಜಿ). **ಇರೂ:** ಅಚಾಡಪಿಚಾಡ

ಅಗಾದ: ವಿಚಿತ್ರ; ಆಶ್ಚರ್ಯ; ಕಠಿಣ. **ಇರೂ:** ಅಗಾಡ

ಅಗಾವ: ೧. ಮುಂದಿನದನ್ನು ಹೇಳುವ ೨. ಮುಂಗೋಪಿ ೩. ದೋಷಯುಕ್ತ ಕಾರ್ಯ; ೪. ಕೈಗಡ ಅಥವ ಮುಂಗಡ (ಬಾಗ.ಜಿ)

ಅಗಿ (ಕ್ರಿ): ೧. ಭೂಮಿಯನ್ನು ಯಾವುದಾದರೊಂದು ಉಪಕರಣ ಬಳಸಿ ಸಡಿಲಗೊಳಿಸು; ತೋಡು; ಕುಣಿ ತೆಗೆ ೨. ತಿನ್ನು; ಜಗಿ ೩. ಏದುಸಿರುಬಿಡು (ಉಕ.ಜಿ) (ನಾ) ೪. ಭತ್ತದ ಸಸಿ (ದಕ.ಜಿ) ೫. ಸಣ್ಣ ಗಿಡ ೬. ನಾಟಿ ಪೈರಿನ ಒಟ್ಲು

ಅಗಿಊರು (ಕ್ರಿ): ಅಗೆ ನೆಡು; ಸಸಿಯೂರು (ಉಕ.ಜಿ)

ಅಗಿಚೆಲ್ಲು (ಕ್ರಿ): ಸಸಿ ಬೆಳೆಸಲಿಕ್ಕಾಗಿ ಪಾತಿಯಲ್ಲಿ ಬೀಜ ಬಿತ್ತು; ಸಸಿಮಡಿ ಮಾಡು (ಬಳ್ಳಾ.ಜಿ)

ಅಗಿನಿ: ಅಗ್ನಿ; ಬೆಂಕಿ. **ಇರೂ:** ಅಗುನಿ

ಅಗಿಲು: ೧. ಗುಗ್ಗುಳ ಮರ ೨: ಕಾಡುಗಂಧದ ಮರ (ಕೊಡ.ಜಿ)

ಅಗಿಸಾಮು: ಕೆಂಪು; ಕೇಸರಿ

ಅಗಿಹುಣ್ಣಿಮೆ: ಬುದ್ಧಪೂರ್ಣಿಮೆ: ಹಿರೇ ಮೈಲಾರಲಿಂಗ ದೇವರ ಮದುವೆಯ ಆಚರಣೆ ನಡೆವ ದಿನ. ಈ ಹುಣ್ಣಿಮೆಯ ನಂತರ ಗೊರವರು ಲಗ್ನದ ಮುಹೂರ್ತ ಇಡುವುದಿಲ್ಲ (ಬೆಂಗ.ಜಿ)

ಅಗೀನ: ಅಗ್ನಿದಾಟುವಿಕೆ

ಅಗುಂಬು: ೧. ಒಟ್ಟು; ರಾಶಿ ಮಾಡು ೨. ಕಣದಲ್ಲಿ ಧಾನ್ಯವನ್ನು ರಾಶಿ ಹಾಕು (ಬೆಂಗ್ರಾ.ಜಿ)

ಅಗುಚಿ (ಕ್ರಿ): ಒತ್ತಿಹಿಡಿದು

ಅಗುಟಗಿ: ಒಲೆಯ ಮೇಲಿಡುವ ಪಾತ್ರೆಗಳು ಕಪ್ಪಾಗದಿರಲು ಬಳಸುವ ಕಬ್ಬಿಣದ ಸಲಕರಣೆ

ಅಗುಡು: ಅಗಡು; ಹಿಡಿತಕ್ಕೆ ಸಿಕ್ಕದ; ತುಂಟ (ಬೆಳ.ಜಿ)

ಅಗುಡೆ: ಅಗ್ಗಿಷ್ಟಿಕೆ; ಒಲೆ (ದಕ.ಜಿ)

ಅಗುಣಿ: ೧. ಚಿಲಕ ೨. ಅಗಳಿ (ಮೈಸೂ.ಜಿ) ೩. ಬಂಡಿಯ ಬಿಡಿಭಾಗ

ಅಗುತಲಕಾಯಿ: ಹಾಗಲಕಾಯಿ

ಅಗುತ್ಕ (ಕ್ರಿ) : ೧. ಮತ್ತೊಬ್ಬನ ಮೇಲೆ ಬೀಳು; ಎರಗು (ನಾ) ೨. ಕೋಟೆಯ ಹೊರಸುತ್ತಿನ ಕಾಲುವೆ; ಅಗಳು (ಮೈಸೂ.ಜಿ/ಮಂಡ್ಯ.ಜಿ)

ಅಗುರತೆ: ಹಗುರತೆ; ಆಯಾಸ ಪರಿಹಾರ; ಭಾರ ಇಳಿದ ಅನುಭವ

ಅಗುಲು: ಏಡಿಯ ಕೊಂಬು, ಕರುಳನ್ನು ತೆಗೆದು ಉಳಿದ ಶರೀರದ ಭಾಗ

ಅಗುವಾಣ: ಹರಿವಾಣ; ಊಟದ ತಟ್ಟೆ

ಅಗುಳಾಕು: **ನೋಡಿ–** ಅಗುಳ್ಸು. **ಪ್ರ**: ಬೂತಾಳೆ ಪಟ್ಟೆಯ ಸೆಣಬಿಗಾಗಿ ಹೊಂಡದಲ್ಲಿ ಅಗುಳಾಕವರೆ

ಅಗುಳೇರಿ: ನೋಡಿ– ಅಗಲವೇರಿ

ಅಗುಳ್‌ಗ್ವಾಟೆ: ಅಗಳುಕೋಟೆ; ನೀರುತುಂಬಿದ ಕಂದಕಗಳಿಂದ ಸುತ್ತುವರಿದ ಕೋಟೆ

ಅಗುಳ್ಸು/ಅಗುಳಿಸು: ಮುಳುಗಿಸು; ಅದ್ದು (ಮೈಸೂ.ಜಿ). **ಪ್ರ**: ಸೆಣಬಿಗಾಗಿ ಹಸಿ ಭೂತಾಳೆ ಪಟ್ಟೆಯನ್ನು ಗುಂಡಿನೀರಲ್ಲಿ ಅಗುಳಿಸುತ್ತಾರೆ

ಅಗೆ: **ನೋಡಿ–** ಅಗಿ

ಅಗೆಎತ್ತು: ಮೊಳಕೆಯನ್ನು ಕೀಳು

ಅಗೆಕಟ್ಟು (ನಾ): ನಾಟಿಗಾಗಿ ಕಿತ್ತ ಎಳೆಯ ಭತ್ತದ ಸಸಿಗಳ ಸಣ್ಣ ಸಣ್ಣ ಕಟ್ಟು (ಉಕ.ಜಿ)

ಅಗೆಗದ್ದೆ: ಭತ್ತದ ಸಸಿ ಬೆಳೆಸಿದ ಗದ್ದೆ (ಉಕ.ಜಿ)

ಅಗೆ ತೆಗೆಯುವುದು: ಗದ್ದೆಯ ನಾಟಿ ವೇಳೆಯಲ್ಲಿ ಕೊಡಗಿನ ಗೌಡರು ಮಾಡುವ ಒಂದು ಕೃಷಿಸಂಬಂಧಿ ಆಚರಣೆ. ನಾಟಿ ಮಾಡಲು ಅಗೆಯನ್ನು ಕೀಳುವುದಕ್ಕೆ ಮುಂಚೆ ಮನೆಯ ಯಜಮಾನಿ ಬೆಳಗ್ಗೆ ಹಾಲು, ಅಕ್ಕಿ, ಬೆಲ್ಲವನ್ನು ಎಕ್ಕಿಗೆ ತೆಗೆದುಕೊಂಡು ಹೋಗಿ ಭತ್ತದ ಅಗೆಗೆ ಹಾಲನ್ನು ಎರೆದು ಫಲಿಯೆ ಎಂದು ಹೇಳುವಳು. ಆನಂತರ ಅಗೆಯನ್ನು ಕೀಳುವ ಕೆಲಸ ಪ್ರಾರಂಭವಾಗುತ್ತದೆ

ಅಗೆಪೂಜೆ: ನಾಟಿ ಮಾಡುವ ಮುನ್ನ ಒಟ್ಲುಪಾತಿಯಲ್ಲಿ ಬೆಳೆದಿರುವ ಪೈರಿಗೆ ಸಲ್ಲಿಸುವ ಪೂಜೆ (ಉಕ.ಜಿ)

ಅಗೆಭತ್ತ: ೧. ಬೀಜದ ಭತ್ತ ೨. ನಾಟಿ ಮಾಡಲು ಬೆಳೆಸಿದ ಭತ್ತದ ಎಳೆಯ ಸಸಿ (ಉಕ.ಜಿ)

ಅಗೆಮುರ್ತ: ಅಗೆಮುಹೂರ್ತ; ನಾಟಿ ಸಂದರ್ಭದಲ್ಲಿ ಸಸಿಗಳಿಗೆ ಮಾಡುವ ಪೂಜೆ

ಅಗೆಯಂಡು: ಪೈರಿನ ಸಸಿಗಳನ್ನು ಬೆಳಸಬೇಕಾದ ಜಾಗ. **ಪ್ರ**: ಅಗೆಯಂಡಿನ ಜಾಗವ ಎರಡು ಮೂರು ಸತಿ ಉಳು. **ಇರೂ:** *ಅಗೇಡಿ*

ಅಗೆಲ್: ಅಗೆಲು. ಅಲೌಕಿಕ ಶಕ್ತಿಗಳಿಗೆ ಮತ್ತು ಪಿತೃಗಳಿಗೆ ಬೇರೆ ಬೇರೆ ಸಂದರ್ಭಗಳಲ್ಲಿ ವಿಧಿವತ್ತಾಗಿ ಅರ್ಪಿಸುವ ಮಾಂಸಾಹಾರ ಅಥವಾ ಸಸ್ಯಾಹಾರ ನೈವೇದ್ಯ (ದಕ.ಜಿ)

ಅಗೆಲ ಸ್ವಾಡಿ: *ತ್ರಿಸ್ಸಾ ಮಲಬಾರಿಕಾ:* ಬಣ್ಣಬಣ್ಣವಾಗಿರುವ ಒಂದು ಕಡಲ ಮೀನು (ದಕ.ಜಿ)

ಅಗೆಲು ಹಾಕುವುದು: ಭೂತಕ್ಕೆ ಬಡಿಸುವ ಮಾಂಸದಡುಗೆಯ ಎಡೆ (ದಕ.ಜಿ/ಉಕ.ಜಿ). **ಇರೂ:** *ಅಗೆಲು*

ಅಗೆಹಾಕು: **ನೋಡಿ–** ಅಗಿಚೆಲ್ಲು

ಅಗೇಡಿ: ೧. ಬತ್ತದ ಸಸಿಗಳನ್ನು ಬೆಳೆಸುವ ಗದ್ದೆ; ಒಟ್ಟುಗದ್ದೆ; ಸಸಿಮಡಿ ೨. ಪಾತಿ (**ನೋಡಿ–** ಅಗಿಚೆಲ್ಲು) ೩. ಹಗೇವು ೪. ನೆಲಮಾಳಿಗೆ

ಅಗೇನಿ ಬಳಿ: ಕುಂಟೆಗೆ ಹಾಕುವ ಕಬ್ಬಿಣದ ಬಳೆ

ಅಗೇವು: ಹಗೇವು; ೧. ದೀರ್ಘಕಾಲದವರೆಗೆ ಸಂರಕ್ಷಿಸಿಡಬೇಕಾದ, ಅಧಿಕ ಪ್ರಮಾಣದ ಧಾನ್ಯ ಸಂಗ್ರಹಕ್ಕಾಗಿ ನಿರ್ಮಿಸಿದ ಸುಮಾರು ಹತ್ತರಿಂದ ಹನ್ನೆರಡು ಅಡಿ ಆಳದ ಗುಂಡಿಯಂತಹ ರಚನೆ. ನೀರು ನಿಲ್ಲದ ಎತ್ತರದ ಸ್ಥಳದಲ್ಲಿ, ಊರಿಗೆ ಸಮೀಪದಲ್ಲಿ ಇದನ್ನು ನಿರ್ಮಿಸುತ್ತಾರೆ. ವೈಯಕ್ತಿಕವಾಗಿ ಅವರವರ ಮನೆಗಳ ಹಿಂದೆ ಅಥವಾ ಮುಂದೆಯೂ ನಿರ್ಮಿಸಿಕೊಳ್ಳುತ್ತಿದ್ದುದುಂಟು (ತುಮ.ಜಿ)

ಅಗೇರರು: ಒಂದು ಪರಿಶಿಷ್ಟ ಜನಾಂಗ; ಉತ್ತರ ಕನ್ನಡ ಜಿಲ್ಲೆಯ ಕುಮಟಾ ಹಾಗೂ ಅಂಕೋಲಾ ತಾಲೂಕುಗಳಲ್ಲಿ ವಾಸವಾಗಿರುವ ಇವರು ಉಪ್ಪಿನ ಆಗರದಲ್ಲಿ ಕೆಲಸ ಮಾಡುತ್ತಾರೆ. ದಕ್ಷಿಣ ಕನ್ನಡ ಜಿಲ್ಲೆಯ ಉಪ್ಪಾರರು ಹಾಗೂ ಕೂಸಾಳು ಎಂಬ ಜನಾಂಗವು ಉತ್ತರ ಕನ್ನಡ ಜಿಲ್ಲೆಗೆ ವಲಸೆ ಬಂದಾಗ ಅವರನ್ನು ಅಗೇರರು ಎಂದು ಕರೆಯಲಾಯಿತೆಂದು ಹೇಳುತ್ತಾರೆ (ಉಕ.ಜಿ)

ಅಗೋಡಿ: ಪೈರು ನೆಡಲು ಸಿದ್ಧಪಡಿಸುವ ಗದ್ದೆ (ಮಲೆ). **ಪ್ರ**: ಪಕ್ಕದಲ್ಲಿದ್ದ ಅಗೋಡಿಯಲ್ಲಿ ಆರುಕಟ್ಟಿ ಉಳುತ್ತಿದ್ದ

ಅಗೋಳಿ: ದೊಡ್ಡಹಂಡೆ; ಮಣ್ಣಿನ ದೊಡ್ಡಪಾತ್ರೆ; ಅನ್ನ ಬೇಯಿಸಲು ಬಳಸುವ ಅಗಲ ಬಾಯಿಯ ಗಡಿಗೆ (ದಕ.ಜಿ)

ಅಗ್ಗ: ೧. ಹೀನ; ಕನಿಷ್ಠ ೨. ಕಡಿಮೆ ಬೆಲೆಯದು; ದುಬಾರಿಯಲ್ಲದ್ದು. **ಪ್ರ**: ಈ ಸಲ ತೊಗರಿಬೇಳೆ ತುಂಬಾ ಅಗ್ಗವಾಗಿದೆ. **ಪ್ರ**: ಅಗ್ಗದಲ್ಲಿ ಸಿಕ್ಕಿದವು ಅಂತ ಮುಗ್ಗಿ ಜ್ವಾಳ ತಂದಂಗೆ

ಅಗ್ಗಣದೇವಿ: ಅಗ್ನಿದೇವಿ

ಅಗ್ಗದಸೂಳಿ: ಬೈಗುಳಪದ. **ಇರೂ:** *ಅಗ್ಗದಹಾಟ್ಯಾ*

ಅಗ್ಗದ್‌ಕಾಸು: ಹಗ್ಗದಕಾಸು; ದನಗಳ ವ್ಯಾಪಾರ ಆದ ಮೇಲೆ ನಿಗದಿತ ಮೌಲ್ಯದೊಂದಿಗೆ ಪ್ರತ್ಯೇಕವಾಗಿ ಹಗ್ಗಕ್ಕೆಂದೇ ಕೊಡುವ ಹಣ; ಒಂದು ಬಗೆಯ ಮುಂಗಡ (ಮೈಸೂ.ಜಿ/ ಮಂಡ್ಯ.ಜಿ)

ಅಗ್ಗಮಾಡು: ಬೆಲೆ ಇಳಿಸು; ಅವಹೇಳನಮಾಡು; ಹೆಸರುಕೆಡಿಸು

ಅಗ್ಗಮಾಸು (ಕ್ರಿ): ೧. ಹದ್ದುಮೀರು ೨. ಅಂಕೆ ತಪ್ಪಿ ನಡೆ

ಅಗ್ಗರ: ಬಲು ತಣ್ಣಗಾದ (ಗುಲ್ಬ.ಜಿ)

ಅಗ್ಗರಣಿ: ೧. ಕೈಕಾಲು ತೊಳೆಯಲು ಕೊಡುವ ನೀರು; ಶುದ್ಧೋದಕ ೨. ಆಜ್ಞೆ (ಶಿವ.ಜಿ). **ಇರೂ:** *ಅಗಣೆ, ಅಗ್ಗಣಿ, ಅಗಿಣಿ*

ಅಗ್ಗರಣೆ: ಒಗ್ಗರಣೆ; ಸ್ವಲ್ಪ ಅಡಿಗೆ ಎಣ್ಣೆಯನ್ನು ಕಾಯಿಸಿ ಅದರಲ್ಲಿ ಸಾಸುವೆ, ಜೀರಿಗೆ, ಕರಿಬೇವುಗಳನ್ನು ಹಾಕಿ ಚಟಪಟ ಸಿಡಿಸಿದ ನಂತರ ಸಾರಿಗೆ ಹಾಕುವುದು. ಇದರಿಂದ ಸಾರಿನ ರುಚಿ ಹೆಚ್ಚುತ್ತದೆ (ಬೆಂಗ್ರಾ.ಜಿ) **ಇರೂ:** *ಅಗ್ರಾಣೆ, ವಗ್ಗರಣೆ*

ಅಗ್ಗಳಿಸು: ೧. ಹೆಚ್ಚಾಗು ೨. ಉಬ್ಬು (ಶಿವ.ಜಿ)

ಅಗಿ: ೧. ಅಗೆ; ಸಸಿ; ಮೊಳಕೆ (ಉಕ.ಜಿ) ೨. ಒಂದು ಬಗೆಯ ಮರ. **ಇರೂ:** *ಅಗ್ಜಿ*

ಅಗ್ಗಿ ತುಳಿಯುವುದು: ಅಗ್ನಿ ತುಳಿಯುವುದು; ಬೆಂಕಿ ಕೊಂಡ ಹಾಯುವುದು. ಹರಕೆ ಹೊತ್ತವರು ದೇವರ ಜಾತ್ರೆಗಳಲ್ಲಿ ಕೆಂಡದ ಮೇಲೆ ನಡೆದುಕೊಂಡು ಹೋಗುವ ಒಂದು ಆಚರಣೆ (ಗುಲ್ಬ.ಜಿ). **ಇರೂ:** *ಅಗ್ಗಿಸೇವೆ*

ಅಗ್ಗಿಟಿಗಿ: ೧. ಗಡಿಗೆಯ ಕೆಳಅರ್ಧಭಾಗದಲ್ಲಿ ಇದ್ದಿಲು ತುಂಬಿ ಬೆಂಕಿ ಮಾಡುವ ಸಾಧನ ೨. ಅಕ್ಕಸಾಲಿಗರು ಬಳಸುವ ವಿಶಿಷ್ಟವಾದ ಒಲೆ ೩. ತಲೆಗೆ ಸ್ನಾನ ಮಾಡಿದ ಮೇಲೆ ಬಾಣಂತಿಯರು ಕೂದಲನ್ನು ಒಣಗಿಸಿಕೊಳ್ಳಲು ಬಳಸುವ ಕೆಂಡದ ಒಲೆ. **ಇರೂ:** *ಇದ್ಲಿಒಲಿ, ಅಗ್ಗಿಷ್ಟಿಕೆ, ಕುಪ್ಪಳಿಗಿ (ಬೆಳ.ಜಿ)*

ಅಗ್ಗಿನ ಮುಳ್ಳು: ನೆಗ್ಗಲ ಗಿಡದ ಮುಳ್ಳು. ಇದರ ಕಷಾಯವನ್ನು ಮಕ್ಕಳಿಗೆ ವಾಂತಿಭೇದಿ ನಿವಾರಣೆಗೆ ಕುಡಿಸುವರು. ವಾತ ಸಂಬಂಧಿ ಖಾಯಿಲೆಗೂ ಇದು ಔಷಧ (ಧಾರ.ಜಿ). **ಇರೂ:** ನೆಗ್ಗಿನ ಮುಳ್ಳು

ಅಗ್ಗಿರಿ (ಕ್ರಿ): ಕಷ್ಟದಿಂದ ಉಸಿರಾಡು (ಉಕ.ಜಿ)

ಅಗುಡೀಗುಡ್ಡೊ: ದೇವರಿರುವ ಗುಡಿಯ ಬೆಟ್ಟ (ಉಕ.ಜಿ)

ಅಗ್ಗು: ೧. ತಗ್ಗು; ಹಳ್ಳ (ದಕ.ಜಿ) ೨. ಹೆಚ್ಚಳವಾಗು; ಹೆಚ್ಚಿದಂತೆ ಕಾಣು **ಪ್ರ:** ೧. ಹುಳ್ಳಿ ಬೇಯಿಸಿದ ಮೇಲೆ ಅಗ್ಗದಂಗೆ ಕಾಣ್ತವೆ (ಮೈಸೂ.ಜಿ), ೨. ಎರಡೇ ಎರಡು ಆಡಿದ್ದೋವು ಈಗ ಏಟೊಂದು ಅಗ್‌ಬುಟ್ಟವೆ!

ಅಗ್ಗು ಸೆಟ್ಕ: ಅಗ್ಗಿಷ್ಟಿಕೆ

ಅಗ್ಗುಣಿ: ಅಗ್ಘವಣಿ; ಮಡಿನೀರು (ಶಿವ.ಜಿ)

ಅಗ್ಗುರದ: ೧. ಅಗ್ರದ; ಚಿಗುರಿದ ೨. ಎತ್ತರದ

ಅಗ್ಗುರ್ಸು: ಒಗ್ಗರಿಸು; ಒಗ್ಗರಣೆ ಹಾಕು (ಕೋಲಾ.ಜಿ)

ಅಗ್ಚಪ್ಪು: ಒಂದು ಬಗೆಯ ಸಸ್ಯ. ಇದರ ಎಲೆಯ ಕಷಾಯದಿಂದ ಆಮಶಂಕೆ ಉಪಶಮನವಾಗುತ್ತದೆ. (ಮಲೆ)

ಅಗ್ಚು (ಕ್ರಿ): **ನೋಡಿ–** ಅಗಚು

ಅಗ್ಚೆ: **ನೋಡಿ–** ಅಕ್ಸೆ

ಅಗ್ಜಿ: ಒಂದು ಬಗೆಯ ಮರ; ಆಗಿಮರ. **ಪ್ರ:** ಸರಸೋತಿ ಕುಂತವಳೆ ಅಗ್ಜಿಯ ಬುಡದಲ್ಲಿ

ಅಗ್ಡು: ನೋಡಿ– ಅಗಡು

ಅಗ್ಣಿ: **ನೋಡಿ–** ಅಗಣಿ

ಅಗ್ಣಿಗೂಟ: ಮನೆಯ ಒಳಗಿನಿಂದ ಬಾಗಿಲನ್ನು ಭದ್ರಪಡಿಸುವಾಗ ಅಗುಳಿಯ ರಂಧ್ರದಲ್ಲಿ ತೂರಿಸುವ ಮರದ ಎರಡು ಅಡಿಯ ತುಂಡು (ಹಾಸ.ಜಿ)

ಅಗ್ದಿ: ೧. ಜಲ್ದಿ ೨. ಬೇಗ ೩. ದಿಢೀರನೆ ೪. ಬಹಳ (ಉಕ.ಜಿ)

ಅಗ್ನಿ: ೧. ಬೆಂಕಿ ೨. ಬೆಂಕಿಯ ವಿನ್ಯಾಸದ ರಂಗೋಲಿ. ದೇವರ ಎದುರು ಈ ವಿನ್ಯಾಸ ಬರೆಯುವರು

ಅಗ್ನಿಕೂಡಿಸುವುದು: ೧. ಅಂಟಿಕೆ ಪಂಟಿಕೆ ಹಬ್ಬದಲ್ಲಿ ಹಬ್ಬ ಹಾಡುವವರು ತಂದ ದೀಪದಿಂದ ಮನೆಯವರು ಜ್ಯೋತಿ ಬೆಳಗಿಸಿಕೊಳ್ಳುವುದು ಮತ್ತು ಆಚರಣೆ ಮುಗಿದ ನಂತರ ಮತ್ತೆ ದೇವಸ್ಥಾನದಲ್ಲಿರುವ ಮೂಲಸ್ಥಳಕ್ಕೆ ತಮ್ಮ ಹಣತೆಗಳಲ್ಲಿರುವ ಜ್ಯೋತಿಯನ್ನು ಸೇರಿಸುವುದು ೨. ಒಕ್ಕಲಿಗ ಸಮುದಾಯದಲ್ಲಿರುವ ಒಂದು ಪದ್ಧತಿ. ತಳಿಗೆ ದೀಪಕ್ಕೆ ಹಚ್ಚಿದ ಬತ್ತಿ ಬೆಳಗಿನ ತನಕ ಆರದಂತೆ ನೋಡಿಕೊಂಡು ಅಡುಗೆ ಒಲೆಯ ಬೆಂಕಿಗೆ ಹಾಕುವ ಕ್ರಿಯೆ (ಚಿಮ.ಜಿ) ೩. ಮಲೆನಾಡಿನ ಭಾಗದ ಒಂದು ಆಚರಣೆ. ಮನೆಯಲ್ಲಿ ತುಳಸಿಗೆ ಕಳಸ ಇಟ್ಟು ಪೂಜೆ ಮಾಡಿದಾಗ ಅಗ್ನಿಗೆ ಅರ್ಪಿಸುವ ಎಡೆ. ಬಾಳೆಎಲೆಯಲ್ಲಿ ಹಬ್ಬದಡಿಗೆಯನ್ನೆಲ್ಲ ಸ್ವಲ್ಪ ಸ್ವಲ್ಪ ಹಾಕಿಕೊಂಡು ಅಗ್ನಿಗೆ ಆಹುತಿ ನೀಡುವುದು

ಅಗ್ನಿಪಾತ್ರೆ: ಜಟಾಧಾರಿ ಭೂತನರ್ತಕ ತನ್ನ ಕೈಯಲ್ಲಿರಿಸಿಕೊಳ್ಳುವ ಪಾತ್ರೆ

ಅಗ್ನಿಪುಟ: ತಿಂದ ಆಹಾರವನ್ನು ಜೀರ್ಣ ಮಾಡುವ ಶಕ್ತಿ (ಹಾಸ.ಜಿ). **ಪ್ರ:** ಇವರಿಗೆ ಇಷ್ಟು ಬೇಗ ಹೇಗೆ ಹಸಿವಾಯಿತು ಕೆಲವರಿಗೆ ಅಗ್ನಿಪುಟ ತುಂಬ ಇರುತ್ತಂತೆ

ಅಗ್ನಿಮೂಲೆ: ಆಗ್ನೇಯ ದಿಕ್ಕು

ಅಗ್ನಿಸರ್ಪ: ಸರ್ಪಸುತ್ತು; ಒಂದು ಚರ್ಮರೋಗ (ದಕ.ಜಿ)

ಅಗ್ನಿಸೀರೆ: ರಾಮಕ್ಷತ್ರಿಯ ಜನಾಂಗದವರಲ್ಲಿ ಭಾವೀ ಅತ್ತೆಗೆ ಅಳಿಯನು ತಂದುಕೊಡುವ ಸೀರೆ (ಉಕ.ಜಿ)

ಅಗ್ನಿಹಾಯುವ ಹರಕೆ: ಕೊಂಡ ಹಾಯುವ ಹರಕೆ. ತಮ್ಮ ಇಷ್ಟಾರ್ಥ ಈಡೇರಿಕೆಗಾಗಿ ಮೊಹರಂ, ವೀರಭದ್ರ ದೇವರ ಗುಗ್ಗಳ, ದೇವತೆಗಳ ಉತ್ಸವ ಮೊದಲಾದ ಸಂದರ್ಭಗಳಲ್ಲಿ ನಿಗಿ ನಿಗಿ ಬೆಂಕಿ ಕೆಂಡ ಮಾಡಿ ಬರಿಗಾಲಿನಿಂದ ಅದರ ಮೇಲೆ ನಡೆಯುವ ಹರಕೆ

ಅಗ್ರ: ೧. ಮೊನೆ; ತುದಿ; ಸುಳಿ. ೨. ಉಷ್ಣತೆಯಿಂದ ನಾಲಿಗೆ ಮೇಲೇಳುವ ಗುಳ್ಳೆ (ಉಕ.ಜಿ) ೩. ದಾನ ಕೊಡುವಾಗ ನೀಡುವ ಆಹಾರದ ಒಂದು ಅಳತೆ ೪. ಒಂದು ಪಲ್ಲದ ತೂಕ ೫. ನಾಲಗೆಯ ಮೇಲೆ ಉಂಟಾಗುವ ಬಿಳಿಯ ಪದರ (ದಕ.ಜಿ) ೬. ಜ್ವರ ಬಂದಾಗ ತುಟಿಯ ಮೇಲೆ ಏಳುವ ಗುಳ್ಳೆ; ಬಾಯಿಹುಣ್ಣು

ಅಗ್ರದ ಬಾಳೆಯೆಲೆ: ತುದಿಯನ್ನು ಹೊಂದಿರುವ ಬಾಳೆಎಲೆ; ಕುಡಿ ಬಾಳೆಯೆಲೆ; ಮೊನೆಬಾಳೆ

ಅಗ್ರಸಾಲೆ: ದೇವಸ್ಥಾನದ ಅಡುಗೆಮನೆ

ಅಗ್ರಸು: ನೋಡಿ– ಅಗ್ಗುರ್ಸು

ಅಗ್ರಾಣ: ಹಿಂಸೆ; ಕಿರುಕುಳ

ಅಗ್ರಾಣೆ: **ನೋಡಿ–** ಒಗ್ಗರಣೆ

ಅಗ್ರಾಣೆಕಲ್ಲು: ಒಗ್ಗರಣೆ ಕಲ್ಲು; ವಗ್ಗರಣೆ ಕಲ್ಲು. ಸಾರುಗಳ ಒಗ್ಗರಣೆಗೆ ಬಳಸುವ ಕಲ್ಲು. ನೈಸರ್ಗಿಕವಾಗಿ ನುಣುಪಾದ ಹಿಡಿಗಾತ್ರದ ಬೆಣಚು ಕಲ್ಲನ್ನು ಒಲೆಯಲ್ಲಿ ಹಾಕಿ ಅದು ಚೆನ್ನಾಗಿ ಕಾಯ್ದಮೇಲೆ ಅದನ್ನು ಕುದಿಯುವ ಸಾರಿನಲ್ಲಿ ಅದ್ದಿ ತೆಗೆಯುತ್ತಾರೆ (ಮಂಡ್ಯ.ಜಿ) **ನೋಡಿ–** ಕಲ್ಲೊಗ್ಗರಣೆ

ಅಗ್ರಾರ: ಅಗ್ರಹಾರ; ಬ್ರಾಹ್ಮಣರಿಗೆ ದಾನ ಕೊಟ್ಟ ಭೂಮಿ

ಅಗ್ರು: **ನೋಡಿ–** ಅಗರು

ಅಗ್ರೋದ: ಅಗ್ರೋದಕ

ಅಗ್ಲಉಳಿ: **ನೋಡಿ–** ಅಗಲ್ಬಾಯಿ ಉಳಿ (ದಕ.ಜಿ)

ಅಗ್ಸಿಕಟ್ಟೆ: ಅಗಸೆಕಟ್ಟೆ; ಜನ ಸೇರುವ ಕಟ್ಟೆ

ಅಗ್ಳುಗಾಯಿ: ಅಗುಳುಕಾಯಿ. ಪೂರ್ಣವಾಗಿ ಬಲಿಯದಿರುವ, ಎಳಸೂ ಅಲ್ಲದ ಅವರೆ, ತೊಗರಿ ಮುಂತಾದ ಕಾಯಿಗಳು (ತುಮ.ಜಿ)

ಅಘೋರಿ: ಶಿವನ ಉಗ್ರ ಆರಾಧಕರ ಒಂದು ಪಂಥಕ್ಕೆ ಸೇರಿದವನು

ಅಚಗಾಸು (ಕ್ರಿ): ಅಡ್ಡಿಯನ್ನುಂಟು ಮಾಡು

ಅಚಡ: ೧. ಹಚ್ಚಡ; ಹೊದಿಕೆ ೨. ವಲ್ಲಿ; ಉತ್ತರೀಯ ೩. ಧೋತರ (ಚಿಮ.ಜಿ/ಬೆಳ.ಜಿ). **ಇರೂ:** *ಅಚ್ಚಡ*

ಅಚಣಿ: ಬೆಳತಿಗೆ ಅಕ್ಕಿಯ ಅನ್ನ; ದೇವರಿಗಾಗಿ ಅರ್ಪಿಸಲು ಬಳಸುವ ನೈವೇದ್ಯ. ಇರೂ: *ಚರು (ಉಕ.ಜಿ)*

ಅಚುಗ: ಚಾಡಿ ಹೇಳುವವ (ಗುಲ್ಬ.ಜಿ)

ಅಚುಣೆ: ೧. ಅರ್ಚನೆ ೨. ಆಚರಣೆ (ದಾವ.ಜಿ)

ಅಚುಬಾಳೆ: ಅಚ್ಚಬಾಳೆ; ಶ್ರೇಷ್ಠವಾದ ಒಂದು ಜಾತಿಯ ಬಾಳೆ

ಅಚೆಂದಿ: ಧಾನ್ಯ ರೂಪದ ಕೂಲಿ. **ಇರೂ:** *ಅಡದಿ; ಅಡಿದೆ*

ಅಚೆಡಿಂಬದ ಬೇರು: ಕ್ರೋಟಾನ್ ರಾಕ್ಸ್ ಬರ್ಗಿ: ಒಂದು ಸಸ್ಯವಿಶೇಷ; ಸೋಮಾರ ಬೇರು

ಅಚೋರಿ: ಆ ಕಡೆ; ಆಚೆಕಡೆ; ಇನ್ನೊಂದು ಮಗ್ಗುಲಲ್ಲಿ. **ಇರೂ:** *ಅಚ್ಚಾರ, ಅಚ್ಚೀಕ*

ಅಚ್ಕಟ್ಟು: ಅಚ್ಚುಕಟ್ಟು ೧. ಕೆರೆ ಕಾಲುವೆಯ ಆಸರೆಯಲ್ಲಿರುವ ಫಲವತ್ತಾದ ಭೂಮಿ; ಬೇಸಾಯದ ನೆಲ ೨. ಶಿಸ್ತು; ಸ್ವಚ್ಛತೆ; ಒಪ್ಪ; ಓರಣ

ಅಚ್ಕಡ್ಲೆ: ಅಚ್ಚಗಡಲೆ; ಹುರಿಗಡಲೆ; ಪುಟಾಣಿ (ಬಳ್ಳಾ.ಜಿ)

ಅಚ್ಚ: ೧. ಶುದ್ಧ; ಅಪ್ಪಟ. ಪ್ರ: ಅಚ್ಚಬಿಳಿ ೨. ಹೊಸ (ಬೆಳ.ಜಿ). ಪ್ರ: ಅಚ್ಚಮಲ್ಲಿಗೆ

ಅಚ್ಚಂಡಿ: ಮಲೆನಾಡಿನ ಒಕ್ಕಲಿಗರ ನಾಲ್ಕನೆಯ ದಿನದ ಚಪ್ಪರ ಶಾಸ್ತ್ರ (ಚಿಮ.ಜಿ)

ಅಚ್ಚಂದ: ೧. ಬಡಿಗನಿಗೆ ಕೊಡುವ ಧಾನ್ಯ ರೂಪದ ಕಾಣಿಕೆ ೨. ಗ್ರಾಮದೇವತೆ ಹಬ್ಬಕ್ಕೆ ಮನೆ ಮನೆಯಿಂದ ದವಸ ಧಾನ್ಯ ವಸೂಲು ಮಾಡುವುದು ೩. ಬೆಲ್ಲ, ಅಕ್ಕಿ, ರಾಗಿ, ಬಾಳೆಹಣ್ಣು, ಎಲೆ ಅಡಕೆಗಳನ್ನಿರಿಸಿದ ಶಾಸ್ತ್ರದ ತಟ್ಟೆ. ಇರುಳಿಗರಲ್ಲಿ ಹೆಣ್ಣುಮಗಳು ಗಂಡನ ಮನೆಯ ಹೊಸ್ತಿಲು ತುಳಿವ ಮುನ್ನ ಇದನ್ನು ಕಾಲಿನಿಂದ ದೂಡಿ ಒಳ ಪ್ರವೇಶಿಸಬೇಕು. ಇದರಿಂದ ಮೆಟ್ಟಿದ ಮನೆಗೆ ಕೀರ್ತಿ ಬರುತ್ತದೆಂದು ನಂಬಿಕೆ ೪. ಶುಭಾಶುಭ ಸಂದರ್ಭದಲ್ಲಿ, ಊಟ ಮಾಡದ ಇತರೆ ಜನಾಂಗದವರಿಗೆ ಪ್ರತ್ಯೇಕವಾಗಿ ಅಡುಗೆ ಮಾಡಿಕೊಳ್ಳಲು ನೀಡುವ ಅಕ್ಕಿಹಿಟ್ಟು, ಬೇಳೆ, ಬೆಲ್ಲ,

ಖಾರದಪುಡಿ, ಉಪ್ಪು ಮೊದಲಾದವುಗಳ ಪಡಿ ೫. ಬಾಸಿಂಗ ತರಲು ಕುಂಬಾರರ ಮನೆಗೆ ಹೋಗುವಾಗ ಅಕ್ಕಿ, ತೆಂಗಿನಕಾಯಿ, ತೊಗರಿಬೇಳೆ, ತಂಬಿಟ್ಟು, ಚಿಗಳಿಯನ್ನು ಹೊಸ ಬಿದಿರಿನ ಕುಕ್ಕೆಯಲ್ಲಿ ತುಂಬಿಕೊಂಡು ನೀಡುವುದು (ಚಿಮ.ಜಿ)

ಅಚ್ಚಂದ ಕುಟ್ಟುವುದು: **ನೋಡಿ**– ಅಚ್ಚಂದ ಹುಯ್ಯುವುದು

ಅಚ್ಚಂದ ಹುಯ್ಯುವುದು: ೧. ಬಯಲುಸೀಮೆಯ ಮದುವೆಯ ಶಾಸ್ತ್ರಗಳಲ್ಲೊಂದು. ಮುತ್ತೈದೆಯರು ಶಾಸ್ತ್ರಕ್ಕೆ ಬತ್ತ ಕುಟ್ಟುವುದು ೨. ದೇವತೆಗೆ ಹರಕೆಹೊತ್ತ ಮುತ್ತೈದೆಯರು ದೇವಸ್ಥಾನದಲ್ಲಿ ಬತ್ತ ಕುಟ್ಟುವುದು ಮತ್ತು ಆ ಬತ್ತವನ್ನು ದಾನ ಕೊಡುವುದು (ಮಂಡ್ಯ.ಜಿ).

ಅಚ್ಚಂಬಲಿ: ಭೂಮಿಹುಣ್ಣಿಮೆಯಲ್ಲಿ ವಿಶೇಷವಾಗಿ ಒಕ್ಕಲಿಗ ಜನಾಂಗದವರು ಮಾಡುವ ಅಡುಗೆ. ಅಕ್ಕಿಯನ್ನು ಚೆನ್ನಾಗಿ ಬೇಯಿಸಿ, ಅದಕ್ಕೆ ಸ್ವಲ್ಪ ನೆನೆಸಿದ ಅಕ್ಕಿ ಹಾಗೂ ಅರಿಶಿನವನ್ನು ಹಾಕಿ ರುಬ್ಬಿ, ಕೊನೆಗೆ ಗಟ್ಟಿಯಾದ ಕೆನೆಸಹಿತ ಮೊಸರು ಜೀರಿಗೆಪುಡಿ ಹಾಕಿ ತಿರುಗಿಸುವರು. ಇದಕ್ಕೆ ಹಾಲು, ಬೆಲ್ಲ, ತುಪ್ಪ ಹಾಕಿಕೊಂಡೂ ತಿನ್ನುತ್ತಾರೆ (ಚಿಮ.ಜಿ)

ಅಚ್ಚಕಡ್ಲಿಉಂಡಿ: ಹುರಿಗಡಲೆಯನ್ನು ಪುಡಿಮಾಡಿ ಅದರೊಂದಿಗೆ ಬೆಲ್ಲ, ಗಸಗಸೆ, ಒಣಶುಂಠಿ ಇತ್ಯಾದಿಗಳನ್ನು ಹಾಕಿ ಕಟ್ಟಿದ ಉಂಡೆ (ಬಳ್ಳಾ.ಜಿ)

ಅಚ್ಚಕನ್ಯೆ/ಅಚ್ಚಗನ್ನೆ : ೧. ಜಲದೇವತೆ; ದೇವಕನ್ಯೆ. ಸಿದ್ಧಿಯರ ನಂಬಿಕೆಯ ಪ್ರಕಾರ ಇವರು ಬೆಳೆಗಳನ್ನು ನೆರೆಹಾವಳಿಯಿಂದ ರಕ್ಷಿಸುತ್ತಾರೆ. ಈ ದೇವರಿಗೆ ವರ್ಷಕ್ಕೊಮ್ಮೆ ಪೂಜೆ ಸಲ್ಲಿಸುವ ಪದ್ಧತಿ ಇದೆ ೨. ಸುಗ್ಗಿ ಹಬ್ಬದಲ್ಲಿ ಪೂಜಿಸುವ ಕನ್ಯಾದೇವತೆ (ಉಕ.ಜಿ)

ಅಚ್ಚಕ್ಕಿ: ೧. ಒಳ್ಳೆ ಜಾತಿಯ ಅಕ್ಕಿ ೨. ತೊಳೆದ ಅಕ್ಕಿ; ಹಸನು ಮಾಡಿದ ಅಕ್ಕಿ

ಅಚ್ಚಗಣುಗ್ಲು: ಅಚ್ಚಗಣಿಗಲು; ಬಿಳಿಯ ಬಣ್ಣದ ಕಣಿಗಲೆ ಹೂವು. ಇದು ಐದು ದಳಗಳನ್ನು ಹೊಂದಿದ್ದು ಮದುವೆ ಸಂದರ್ಭದಲ್ಲಿ ಸಂಬಂಧಮಾಲೆ ಕಟ್ಟಲು ಮತ್ತು ದೇವರ ಪೂಜೆಗೆ ಬಳಸುತ್ತಾರೆ (ಮಂಡ್ಯ.ಜಿ)

ಅಚ್ಚಗನ್ನೆ: ನೋಡಿ–ಅಚ್ಚಕನ್ಯೆ

ಅಚ್ಚಗಾವಲು: ನೋಡಿ– ಅಜ್ಜಗಾವಲು

ಅಚ್ಚಚ್ಚೆಮಾಡು: ಬಹಳ ಪ್ರೀತಿ ಮಾಡು; ಮುದ್ದು ಮಾಡು (ಧಾರ.ಜಿ)

ಅಚ್ಚಚ್ಚೋ ಬೆಲ್ಲದಚ್ಚೋ: ಮಕ್ಕಳು 'ಅಚ್ಚಚ್ಚೋ ಬೆಲ್ಲದಚ್ಚೋ ಅಲ್ಲಿ ನೋಡು ಇಲ್ಲಿ ನೋಡು ಸಂಪಂಗಿ ಮರದಲ್ಲಿ ಗುಂಪು ನೋಡು' ಎಂದು ಹಾಡು ಹೇಳುತ್ತಾ ಆಡುವ ಆಟ (ಮಂಡ್ಯ.ಜಿ)

ಅಚ್ಚಚ್ಚೋ ಹುಯ್ಯುವುದು: ಬಯಲುಸೀಮೆಯ ಮದುವೆ ಸಂದರ್ಭದ ಒಂದು ಶಾಸ್ತ್ರ; ಗಂಗೆಸ್ಥಾನದಿಂದ ತರುವ ಶಾಸ್ತ್ರದ ನೀರಿನ ಗಡಿಗೆ ಹೊತ್ತವರು ಭತ್ತ ಅಥವಾ ರಾಗಿಯನ್ನು ಚೆಲ್ಲಿದ ನಡೆಮಡಿಯ ಮೇಲೆ ನಡೆದು ಬಂದು ಬಲಗಾಲಿಟ್ಟು ಮನೆ ಪ್ರವೇಶಿಸುತ್ತಾರೆ. ನಂತರ ಇತರರು ಅವರನ್ನು ಹಿಂಬಾಲಿಸುತ್ತಾರೆ (ಧಾರ.ಜಿ)

ಅಚ್ಚಟ್ಟಿಗುಳ್ಳಿ: ಕಚಗುಳಿ; ಚಕ್ಕಳಗುಳಿ; ಚಕುಗುಳಿ (ಚಿತ್ರ.ಜಿ)

ಅಚ್ಚಟ್ಟೆ: ೧. ಗದ್ದೆಯ ಸುತ್ತಮುತ್ತ ಇರುವ ಜಾಗ ೨. ನೀರಾವರಿ ಭೂಮಿ (ಮೈಸೂ.ಜಿ)

ಅಚ್ಚಡಿಸು (ಕ್ರಿ): ೧. ನೆಲವನ್ನು ಒತ್ತಿ ಒರೆಸು ೨. ಸಂಪೂರ್ಣ ನಾಶವಾಗು (ದಕ). **ಇರೂ**: *ಅಚ್ಚಡಿಸಿತ್*

ಅಚ್ಚಣೆ: ೧. ಬೆಳೆಯುವುದು ೨. ದೇವರಿಗೆ ಬೇಯಿಸುವ ಚರು; ನೈವೇದ್ಯದ ಅನ್ನ (ತುಮ.ಜಿ). **ಇರೂ**: *ಅಚ್ಚಣಿ*

ಅಚ್ಚತ: ತೂಕ

ಅಚ್ಚನ್ಕಾಯಿ: ಅಚ್ಚನಗಲ್ಲು ಆಟದ ಸಾಧನಗಳು

ಅಚ್ಚಪಡಿ: ಪಡಿಯಚ್ಚು; ಒಂದೇ ರೀತಿಯದು (ಗುಲ್ಬ.ಜಿ)

ಅಚ್ಚಬೆಟ್ಟ: ಎತ್ತರದ ಬೆಟ್ಟ

ಅಚ್ಚಮಣೆ: ಮದುವೆಯಲ್ಲಿ ಮೆಟ್ಟಕ್ಕಿ ಹಾಕುವಾಗ ಹೆಣ್ಣು ಗಂಡು ನಿಲ್ಲುವ ಮಣೆ

ಅಚ್ಚಲು: ಬಡಗಿ

ಅಚ್ಚವ: ಬಡಗಿ (ದಕ.ಜಿ)

ಅಚ್ಚಸೀನಾಲು: ಅಚ್ಚ ಹಸುವಿನ ಹಾಲು; ಶ್ರೇಷ್ಠವಾದ ಹಾಲು (ರಾಮ.ಜಿ)

ಅಚ್ಚಸ್ರು: ಹಚ್ಚ ಹಸಿರು (ಚಾಮ.ಜಿ)



ಅಚ್ಚಳ್ಳಿ ಪಿಚ್ಚಳ್ಳಿ: ಹುಲಿವೇಷಧಾರಿ; ಮೊಹರಂ ಹಬ್ಬದ ಸಂದರ್ಭದಲ್ಲಿ ಪ್ರದರ್ಶಿಸುವ ಕಲೆ

ಅಚ್ಚಾಣಿ ಕೊಚ್ಚಾಣಿ: ದೇವರ ನೈವೇದ್ಯ (ಉಕ.ಜಿ)

ಅಚ್ಚಾಳು: ಗಟ್ಟಿಮುಟ್ಟಾದ ಆಳು (ದಕ.ಜಿ)

ಅಚ್ಚಿ: ಜೋಳದ ರೊಟ್ಟಿ (ಬಳ್ಳಾ.ಜಿ/ದಕ.ಜಿ)

ಅಚ್ಚಿಕೋಲು: ಕೋವಿಗೆ ಮದ್ದು ತುಂಬಿಸುವ ಕೋಲು (ದಕ.ಜಿ)

ಅಚ್ಚಿಗ: ೧. ಕಷ್ಟ; ಸಂಕಟ; ತಾಪತ್ರಯ ೨. ಪ್ರೀತಿ; ಮೋಹ

ಅಚ್ಚಿಗುಚ್ಚಿ: ನೋಡಿ– ಆಣಿಕಲ್ಲು (ಮೈಸೂ.ಜಿ)

ಅಚ್ಚಿಟ್ಟು: ತಂಬಿಟ್ಟು. **ಇರೂ:** *ತಂಬ್ಟ; ತಮ್ಟ*

ಅಚ್ಚಿಟ್ಟುಬಚ್ಚಿಟ್ಟು: ಮುದ್ದಿನಿಂದ; ಮುಚ್ಚಟೆ ಮಾಡಿ (ಮೈಸೂ.ಜಿ). **ಪ್ರ:** ಇರೋನೊಬ್ಬ ಮಗನ್ನ ಅಚ್ಚಿಟ್ಟು ಬಚ್ಚಿಟ್ಟು ಸಾಕಿದರು

ಅಚ್ಚಿತ: ಅಕ್ಷತೆ

ಅಚ್ಚಿನ ತಪ್ಲೆ: ಇಡ್ಲಿ ಮಾಡಲು ಬಳಸುವ ಪಾತ್ರೆ (ಉಕ.ಜಿ)

ಅಚ್ಚಿನ್ಮಣೆ/ಅಚ್ಚಿನಮಣೆ: ೧. ಕಬ್ಬಿನ ಹಾಲಿನ ಪಾಕ ಹೊಯ್ದು ಬೆಲ್ಲದಚ್ಚು ತಯಾರಿಸುವ ಮರದ ಸಾಧನ ೨. ಸಂಕ್ರಾಂತಿ ಹಬ್ಬದಲ್ಲಿ ಸಕ್ಕರೆ ಪಾಕದಿಂದ ವಿವಿಧ ಆಕೃತಿ ಮಾಡುವ ಮರದ ಸಾಧನ. ೩. ಎತ್ತಿನ ಬಂಡಿಯಲ್ಲಿ ತೊಟ್ಟಿಲಾಕಾರದಲ್ಲಿ ಇರುವಂಥ ರಚನೆ (ಉಕ.ಜಿ)

ಅಚ್ಚಿನ್ಮರ: ಗಾಡಿಯು ಅಚ್ಚಿನ ಮೇಲೆ  ಜೋಡಿಸಿರುವ ದಪ್ಪನೆಯ ಮರ (ಶಿವ.ಜಿ)

ಅಚ್ಚಿಸು (ಕ್ರಿ): ಹಚ್ಚಿಸು; ಮುತ್ತುಗ, ಆಲದ ಎಲೆಗಳಿಗೆ ಹಂಚಿಕಡ್ಡಿ ಚುಚ್ಚಿ ಊಟದ ಎಲೆ ಮಾಡುವುದು. **ಇರೂ:** ಎಲೆ ಹಚ್ಚೋದು

ಅಚ್ಚು: ೧. ಬಂಡಿಯ ಅಥವಾ ಗಾಡಿಯ ಬಹು ಮುಖ್ಯವಾದ ಭಾಗವಾದ ಓಟಿಮರ ಅಥವಾ ಇರಚಿಯ ಒಳಗೆ ಇರುವ ದಪ್ಪನಾದ ಕಬ್ಬಿಣದ ಸಲಾಕೆ (ದಾವ.ಜಿ) ೨. ನೇಕಾರಿಕೆಯಲ್ಲಿ ಅಚ್ಚನ್ನು ಮೇಲೆ ಕೆಳಗೆ ಆಡಿಸಲು ಸಹಾಯ ಮಾಡುವ ಮರದ ದುಂಡನೆಯ ದಪ್ಪ ಕೋಲು. ಇದನ್ನು ಮಗ್ಗದ ಕಂಬದ ಮೇಲೆ ಅಡ್ಡ ಕಟ್ಟಿರಲಾಗುತ್ತದೆ (ಚಿತ್ರ.ಜಿ) ೩. ಚಕ್ರದ ಗುಂಭಗಳ ನಡುಪಟ್ಟಿ; ಗಾಲಿ ಕುಳಿತುಕೊಳ್ಳುವ ಜಾಗ ೪. ತದ್ರೂಪ ೫. ಎಂಬತ್ತು ಗುಲಗಂಜಿಯ ತೂಕ ೬. ಕಪ್ಲಿಗಾಲಿಯ ಮಧ್ಯೆ ಇರುವ ಕಬ್ಬಿಣದ ಸಲಾಕೆ (ತುಮ.ಜಿ) ೭. ರೋಲ್ಗುಂಡು ತಿರುಗಾಡಲು ಸುಲಭವಾಗುವಂತೆ ನಡುಮಧ್ಯೆ ಇರುವ ಕಬ್ಬಿಣದ ಸಲಾಕೆ (ತುಮ.ಜಿ) ೮. ಚಕ್ಕಡಿಯ ಭಾರ ಹೊತ್ತುಕೊಳ್ಳುವ ಕಬ್ಬಿಣದ ಸಾಧನ ೯. ಹರಳಿನಾಟದಲ್ಲಿ ಕಲ್ಲನ್ನು ಮೇಲೆಸೆದು ಹಿಡಿಯುವ ಆಟದ ಕಾಯಿ ೧೦. ಕುಂಟಾಟದಲ್ಲಿ ಎಸೆದ ಬಚ್ಚ, ಗೆರೆಗೆ ಸೋಕದೆ ಬರೆದ ಮನೆಯೊಳಗೆ ಸರಿಯಾಗಿ ಕೂರುವುದು (ಬೆಂಗ್ರಾ.ಜಿ)

ಅಚ್ಚುಗಾಲಿ: ನೇಕಾರಿಕೆಯಲ್ಲಿ ಅಚ್ಚನ್ನು ಮೇಲೆ ಕೆಳಗೆ ಮಾಡಲು ಅಚ್ಚಿನ ದುಂಡುಗೋಲು ಮತ್ತು ಅಚ್ಚಿಗೆ ಕಟ್ಟಿರುವ ಮಧ್ಯದ ಗಾಲಿ (ಚಿತ್ರ.ಜಿ)

ಅಚ್ಚುಗೋಲು: ಧಾನ್ಯದ ರಾಶಿಯನ್ನು ಯಾರಾದರೂ ಕದಲಿಸಿದರೆ ತಿಳಿಯಲು ಅನುಕೂಲವಾಗುವಂತೆ ಅದಕ್ಕೆ ಮುದ್ರೆ ಒತ್ತಲು ಉಪಯೋಗಿಸುವ ಚಿತ್ರಗಳಿರುವ ಕೋಲು

ಅಚ್ಚುಬೆಲ್ಲ: ಹದಕ್ಕೆ ಕಾದಿರುವ ಕಬ್ಬಿನ ಹಾಲನ್ನು ತೂತುಗಳಿರುವ ಚೌಕಾಕಾರದ ಮರದ ಮಣೆಯಲ್ಲಿ ಹಾಕಿದರೆ ಸಿದ್ಧವಾಗುವ ಬೆಲ್ಲ (ಚಿಮ.ಜಿ)

ಅಚ್ಚುಮಣೆ: ಹಸೆಮಣೆ. ಧಾರೆಗೆ ಮದುಮಕ್ಕಳನ್ನು ಕೂರಿಸುವ ಚಿತ್ತಾರದ ಮಣೆ. ಇದನ್ನು ಅತ್ತಿ ಇಲ್ಲವೆ ಹಲಸಿನ ಮರದಿಂದ ಮಾಡುತ್ತಾರೆ (ಬೆಂಗ್ರಾ.ಜಿ)

ಅಚ್ಚುಮರ: ರಥದ ಗಾಲಿ ಕೂರಿಸುವ ಅಡ್ಡ ಮರ (ದಕ.ಜಿ)

ಅಚ್ಚುರ್ತಿ: ನೋಡಿ– ಅಜ್ಜುರ್ತಿ

ಅಚ್ಚೆ: ೧. ಒಂದು ಬಗೆಯ ಮೀನು ೨. ಸನ್ನಡತೆ; ಸಲುಗೆ ೩. ಅಳಿಸಲಾಗದ ಗುರುತು; ಕಲೆ ೪. ಸೀಳಿದ ಬಿದಿರಿನ ಪಟ್ಟಿ ೫. ಪಾವಿತ್ರ್ಯ ೬. ಹಚ್ಚೆ. ೭. ಅತಿ ಪ್ರೀತಿ; ಮುದ್ದು. **ಪ್ರ:** ಮೊಮ್ಮಗ ಅಂದ್ರೆ ಬಾಳಾ ಅಚ್ಚೆ ಅವಂಗೆ.

ಅಚ್ಚೆಕಲ್ಲು: ಒಂದು ಮಕ್ಕಳ ಆಟ

ಅಚ್ಚೆಗಿಡ: *ಆರ್ಜೀರಿಯ ಕ್ಯೂನಿಯೇಟ:* ಔಷಧಿಗುಣವುಳ್ಳ ಒಂದು ಕಳೆಸಸ್ಯ **ಇರೂ:** *ಭೇದಿಸೊಪ್ಪು*, ಕಳ್ಳನಮೆಳೆ

ಅಚ್ಚೆಪದ್ಮ: ತಾವರೆ ಹೂವಿನ ಚಿತ್ರವುಳ್ಳ ಹಚ್ಚೆ

ಅಚ್ಚೆಮಾಡು (ಕ್ರಿ): ೧. ಸಣ್ಣಸಣ್ಣ ದಬ್ಬೆಯಾಗಿ ಬಿದಿರು ಬೊಂಬನ್ನು ಸೀಳು ೨. ಅತಿಯಾಗಿ ಪ್ರೀತಿ ಮಾಡು; ಮುದ್ದು ಮಾಡು; ಅಚ್ಚೆ ಮಾಡಿ ಮಗಾ ಕೆಡಿಸಿಬಿಟ್ಟಿ ನೀ (ಗುಲ್ಬ.ಜಿ)

ಅಚ್ಚೆಸಿಬ್ಲು: ಬಿದಿರಿನ ಅಚ್ಚೆಯಿಂದ ಹೆಣೆದ ಚಿಬ್ಬಲು; ಬಿದುರಿನ ಬುಟ್ಟಿ

ಅಚ್ಚೆಸೊಪ್ಪು: *ಯುಫೋರ್ಬಿಯಾ ಹಿರ್ಟಾ:* ಬಾಯಿಹುಣ್ಣಿಗೆ ಔಷಧಿಯಾಗಿ ಬಳಸುವ ಒಂದು ಸಸ್ಯ. **ಇರೂ:** *ಕೆಂಪುನೆನೆಯಕ್ಕಿಗಿಡ, ಬಾಯಿಒಡಕಿನ ಗಿಡ (ಉಕ.ಜಿ), ಹಾಲ್ಕುಡಿ (ಮೈಸೂ.ಜಿ), ಜಂತಿಕಸ, ಬರಸಿಗಿಡ*

ಅಚ್ಚೆಳ್ಳು: ಶುದ್ಧವಾದ ಕಪ್ಪು ಎಳ್ಳು

ಅಚ್ಚೆಳ್ಳೆಣ್ಣೆ: ಶುದ್ಧವಾದ ಎಳ್ಳಿನ ಎಣ್ಣೆ. **ಪ್ರ**: ಏಳು ಕೊಳಗ ಅಚ್ಚೆಳ್ಳೆಣ್ಣೆ ದಾನವಾಗಿ ಕೊಡುತೀನಪ್ಪ

ಅಚ್ಚೇರಿಸು: ಗಾಡಿಯ ಎರಡು ಚಕ್ರಗಳನ್ನು ಕೂರಿಸುವ ಜಾಗದ ಕಬ್ಬಿಣ ಸವೆದಾಗ ಅದಕ್ಕೆ ಹೊಸ ಕಬ್ಬಿಣದ ತುಂಡನ್ನು ಬೆಸೆ (ತುಮ.ಜಿ).

ಅಚ್ಚೇರು: ಅರ್ಧ ಸೇರು; ಧಾನ್ಯ, ಎಣ್ಣೆ ತುಪ್ಪಗಳನ್ನು ಅಳೆಯುವ ಅರ್ಧಸೇರು ಪ್ರಮಾಣದ ಅಳತೆಯ ಸಾಧನ

ಅಚ್ಚೊತ್ತು: ಮುದ್ರೆಯೊತ್ತು

ಅಚ್ಛಂಡಿ: ಮಲೆನಾಡಿನ ಶೈವ ಒಕ್ಕಲಿಗರ ಮದುವೆಗೆ ಮೊದಲಿನ ಶಾಸ್ತ್ರಗಳಲ್ಲಿ ನಾಲ್ಕನೇ ದಿನ ಮಾಡುವ ಚಪ್ಪರ ಶಾಸ್ತ್ರ

ಅಚ್ಮಣಿ: ಮದುವೆಯ ಮುಹೂರ್ತದ ವೇಳೆ ವಧೂವರರ ಕಾಲುಗಳ ಕೆಳಗೆ ಇಡುವ ಮಣೆ. **ನೋಡಿ**– ಅಚ್ಚುಮಣೆ

ಅಜಂಡ: ಅಜಾಂಡ; ದೊಡ್ಡ (ಚಿತ್ರ.ಜಿ)

ಅಜಕಳ (ಕ್ರಿ): ೧. ಹಸನು ಮಾಡುವುದು ೨. ಬೇಟೆಯಲ್ಲಿ ದೊರೆತ ಪ್ರಾಣಿಗಳನ್ನು ಪಾಲು ಮಾಡುವ ಸ್ಥಳ (ಹಾಸ.ಜಿ)

ಅಜಕಾಡು (ಕ್ರಿ): ಸರಿ; ಚಲಿಸು

ಅಜಕಾಯಿ: ದೇವರಿಗಿಟ್ಟ ಕಾಯಿ (ದಕ.ಜಿ)

ಅಜಕಾಯಿ ದರ್ಪುನು: ಶಕ್ತಿಸ್ಥಳಗಳಲ್ಲಿ ತೆಂಗಿನ ಕಾಯಿಯನ್ನು ಸಾಮೂಹಿಕವಾಗಿ ಭಕ್ತರು ಕಲ್ಲಿಗೆ ಬಡಿದು ಒಡೆಯುವುದು (ದಕ.ಜಿ)

ಅಜಕೋಲು: ಒಣಹಾಕಿದ ಮಡಿ ಬಟ್ಟೆಗಳನ್ನು ತೆಗೆದಿರಿಸಲು ಬಳಸುವ ಕೋಲು; ಮಡಿಕೋಲು (ದಕ.ಜಿ)

ಅಜಗರಬಂಧ: ಕುಸ್ತಿಯಲ್ಲಿ, ಎದುರಾಳಿಯನ್ನು ನಿರ್ಣಾಯಕವಾಗಿ ಮುಖ ಮೇಲಾಗುವಂತೆ ಮಾಡುವ ಒಂದು ಪಟ್ಟು; ಎದುರಾಳಿ ನೆಲಕಚ್ಚಿ ಕುಳಿತಾಗ ಮಾಡುವಂಥದ್ದು

ಅಜನಿಕಾಯಿ: ೧. ಬೇವಿನಕಾಯಿ ೨. ಶುಭಕಾರ್ಯದಲ್ಲಿ ಉಪಯೋಗಿಸುವ ಒಂದು ವಸ್ತು (ಬಾಗ.ಜಿ)

ಅಜನಿಗಿಡ: ಒಂದು ಬಗೆಯ ಕಳೆಹುಲ್ಲು

ಅಜಪ್ಪಾಗು: ೧. ಕಾಣದಾಗು; ಮರೆಯಾಗು (ಬಳ್ಳಾ.ಜಿ) ೨. ತಟಸ್ಥನಾಗು

ಅಜಬೆಣ್ಣೆ: ಎದೆಹಾಲು ಹರಳೆಣ್ಣೆಗಳನ್ನು ಅಂಗೈಯಲ್ಲಿ ಮಸೆದು ಶಿಶುಗಳಿಗೆ ನೀಡುವ ಲೇಹ್ಯ (ಮಂಡ್ಯ.ಜಿ); ಒಂದು ಬಗೆಯ ಮನೆಮದ್ದು (ಮೈಸೂ.ಜಿ); ಮುಯ್ಯೆಣ್ಣೆ (ಬೆಂಗ್ರಾ.ಜಿ). **ಇರೂ**: *ಬಜಬೆಣ್ಣೆ*

ಅಜಮಾನ: ೧. ಅಳತೆ ೨. ಪರೀಕ್ಷೆ (ದಕ.ಜಿ)

ಅಜಮಾಸ: ೧. ಅಂದಾಜು; ಖಚಿತವಾಗಿ ಹೇಳಲಾಗದ್ದು ೨. ಪರೀಕ್ಷೆ; ತಪಾಸಣೆ ೩. ಪರಿವೀಕ್ಷಣೆ; ಮೇಲ್ವಿಚಾರಣೆ; ಸ್ಥಳಪರಿಶೀಲನೆ (ಗುಲ್ಬ.ಜಿ). **ಇರೂ**: ಅಜಮಾಸಿ, ಅಜಮಾಯಿ

ಅಜರಿ/ಅಜ್ರಿ: ಬಂಟರ ಮತ್ತು ಜೈನರ ಕುಲನಾಮಗಳಲ್ಲೊಂದು (ದಕ.ಜಿ). **ಪ್ರ**: ಜಿನರಾಜ ಅಜ್ರಿ

ಅಜಲ್: ೧. ಹಕ್ಕು; ಹಕ್ಕಿನ ಪ್ರದೇಶ. ಮೀಸಲು ಪ್ರದೇಶ ೨. ತುಂಡು ಭಾಗ ೩. ಧಾರ್ಮಿಕ ಸಾಮಾಜಿಕ ಆಚರಣೆಗಳಲ್ಲಿ ವಿಶಿಷ್ಟ ಕರ್ತವ್ಯಗಳನ್ನು ಮಾಡುವ, ವಂಶಪಾರಂಪರ್ಯದಿಂದ ಬಂದ ಅಧಿಕಾರ ವಲಯ ೪. ನಾಲ್ಕು ಕಳಸೆ (ಐವತ್ತಾರು ಸೇರು)ಯ ಮಾನ ೫. ಹಕ್ಕುಬಾಧ್ಯತೆ (ದಕ.ಜಿ)

ಅಜಲ: ೧. ಒಂದು ನಿರ್ದಿಷ್ಟ ಕ್ಷೇತ್ರ ಪರಿಮಿತಿಯಲ್ಲಿ ಭೂತ ಅಧಿಕಾರ ಉಳ್ಳವನು ೨. ಭೂತ ಕಟ್ಟುವ ನಲ್ಕೆ ಜನವರ್ಗಕ್ಕೆ ಸೇರಿದವನು (ದಕ.ಜಿ)

ಅಜಲರು: ದಕ್ಷಿಣಕನ್ನಡದ ಹರಿಜನರ ಒಂದು ಒಳಪಂಗಡ. ಇವರಿಗೆ ಮೂಲರು ಎಂದೂ ಹೆಸರುಂಟು. ವಿಜಯನಗರದ ಅರಸರಿಗೆ ಏಲಕ್ಕಿ, ಅಕ್ಕಿ, ಬೆಲ್ಲ ಮೊದಲಾದವನ್ನು ಸರಬರಾಜು ಮಾಡುತ್ತಿದ್ದ ಇವರನ್ನು ಅಕ್ಕಿ ಅಜಲರು, ಬೆಲ್ಲದ ಅಜಲರು ಎಂದೂ ಕರೆಯುತ್ತಿದ್ದರು (ದಕ.ಜಿ)

ಅಜಲಾಯ: **ನೋಡಿ**– ಅಜಲ

ಅಜಲ್ತಿ: ಭೂತಕಟ್ಟುವ ನಲಿಕೆ ಜನಾಂಗದ ಹೆಂಗಸು (ದಕ.ಜಿ)

ಅಜವಾನ/ಅಜ್ವಾನ : ೧. ಒಂದು ಸಂಬಾರ ಪದಾರ್ಥ; ಓಮು; ವಾದಕ್ಕಿ. ಇರೂ: ಅಜಮೋದ ೨. ಕಹಿಬೇವು, ಓಮದ ಕಾಳು, ಜೀರಿಗೆಗಳನ್ನು ಸೇರಿಸಿ ರುಬ್ಬಿ ಮಾಡಿದ ಕಷಾಯ. ಅಗೇರ ಜನಾಂಗದವರು ಇದನ್ನು ದೀಪಾವಳಿ ದಿನ ಕಹಿಮದ್ದಾಗಿ ಕುಡಿಯುತ್ತಾರೆ (ಉಕ.ಜಿ)

ಅಜಾರ: ಹಜಾರ; ಒಳ ಅಂಗಳ; ವಿಶಾಲವಾದ ಮನೆಯ ಒಳಭಾಗ (ಮಂಡ್ಯ.ಜಿ)

ಅಜಾರಿ: ಅನಾರೋಗ್ಯ; ಅಸ್ವಸ್ಥತೆ (ಬಾಗ.ಜಿ)

ಅಜಿಗಿಜಿ: ಅರೆದು ಪುಡಿಪುಡಿ ಮಾಡಿದ್ದು (ರಾಮ.ಜಿ)

ಅಜಿರ್: ಒಂದು ಚಿಪ್ಪಿನ ಪ್ರಾಣಿ; ನೀರಿನ ಒಳಗೆ ಕಲ್ಲುಗಳಿಗೆ ಅಂಟಿಕೊಂಡಿರುತ್ತದೆ. **ಪ್ರ**: ಅಜಿರ್ ಚಿಪ್ಪಿನ ಮಾಂಸ ತುಂಬಾ ರುಚಿಕರ (ದಕ.ಜಿ)

ಅಜಿರ್‌ಬಂಟ್ರ್/ಅಜ್ರಿಬಂಟ: ಧರ್ಮಸ್ಥಳ ಕ್ಷೇತ್ರದಲ್ಲಿರುವ ನಾಲ್ಕು ಅಧಿಕಾರದ ಮನೆಗಳಲ್ಲಿ ಇರುವ ಒಂದು ಮನೆಯ ಅಧಿಕಾರದ ಹೆಸರು ಅಥವಾ ಉಪನಾಮ (ದಕ.ಜಿ)

ಅಜಿಲ: ಬಂಟ ಮತ್ತು ಜೈನ ಸಮಾಜದವರ ಕುಲನಾಮಗಳಲ್ಲಿ ಒಂದು (ದಕ.ಜಿ)

ಅಜೆ: ಗಳ; ಬಟ್ಟೆ ನೇತು ಹಾಕಲು ಕಟ್ಟಿದ ಹಗ್ಗ ಅಥವಾ ಕೋಲು (ದಕ.ಜಿ)

ಅಜೆಕುರ್ವೆ: ಬೀಜದ ಬತ್ತವನ್ನು ಹಾಕುವ ಕುಕ್ಕೆ (ದಕ)

ಅಜ್ಜಕಡ್ಡಿ: ಒಂದು ಚೌಕಟ್ಟು

ಅಜ್ಜ/ಅಜ್ಜಿಗ: ಕಗ್ಗದ ಪ್ರಭೇದಕ್ಕೆ ಸೇರಿದ ಭತ್ತದ ತಳಿ; ಹಳ್ಳಕೊಳ್ಳಗಳಲ್ಲಿ ಒಣಬಿತ್ತನೆ ಮೂಲಕ ಬೆಳೆಯಬಹುದಾದ ಭತ್ತ (ಉಕ.ಜಿ)

ಅಜ್ಜ: ೧. ವೃದ್ಧ; ವಯಸ್ಸಾದ ಪುರುಷ ೨. ತಾಯಿಯ ತಂದೆ ಅಥವಾ ತಂದೆಯ ತಂದೆ. ಬಂಧುತ್ವ ಸೂಚಕ ಪದ

ಅಜ್ಜಗಾವಲು: ಕಟ್ಟುನಿಟ್ಟಿನಿಂದ ಕಾವಲು ಕಾಯುವುದು (ಬೆಳ.ಜಿ)

ಅಜ್ಜತನ: ಹಿರಿತನ

ಅಜ್ಜದೇವರು: ಒಂದು ದೈವದ ಹೆಸರು (ದಕ.ಜಿ)

ಅಜ್ಜನಪಟ್ಟೆ: *ಅತಿಯಾರಿಸ್ ಟಾಕ್ಸಿಕೇರಿಯ*: ಒಂದು ವಿಷವೃಕ್ಷ. **ಇರೂ**: *ಅರಂಜಿ (ಕೊಡ.ಜಿ); ಜಾಗುರಿ ಮರ (ಚಿತ್ರ ನೋಡಿ)*

ಅಜ್ಜಮೀಸೆ: ಬೂರುಗದ ಹತ್ತಿ ಮರ

ಅಜ್ಜರಬಳಿ/ ಅಜ್ರಬಳಿ: ಗೊಂಡರ ಒಂದು ಬೆಡಗಿನ ಹೆಸರು ಗೊಂಡ ಜನಾಂಗದಲ್ಲಿ ಇದು ಶ್ರೇಷ್ಠವಾದ ಬಳಿ ಎಂಬ ಪ್ರತೀತಿ. ಬಳಿಗಳು ಪರಮಾತ್ಮನಿಂದ ಬಂದವುಗಳು. ಅವುಗಳಿಗೆ ಯಾರೂ ದ್ರೋಹ ಮಾಡರು ಎಂಬ ನಂಬಿಕೆ ಇದೆ (ಉಕ.ಜಿ)

(ಉಕ.ಜಿ)

ಅಜ್ಜರೆ: ಬಂಧನ (ತುಮ.ಜಿ)

ಅಜ್ಜಿ: ೧. ತಾಯಿಯ ಅಥವಾ ತಂದೆಯ ತಾಯಿ ೨. ಕಣ್ಣಾ ಮುಚ್ಚೆ ಆಟದಲ್ಲಿ ಬೇರೆಯವರನ್ನು ಹುಡುಕಬೇಕಾದವಳ ಕಣ್ಣು ಮುಚ್ಚುವವಳು ೩. ಗ್ರಾಮೀಣ ಪ್ರದೇಶಗಳಲ್ಲಿ ಶ್ರಾವಣ ಮಾಸದಲ್ಲಿ ಆಚರಿಸುವ ಒಂದು ವಿಶೇಷ ಆಚರಣೆ. ಹೊಸ್ತಿಲಜ್ಜಿ ಎಂದೂ ಕರೆಯುತ್ತಾರೆ ೪. ಚೆನ್ನೆಮಣೆ ಆಟದ ಒಂದು ವಿಧ; ಆಟದ ಅಜ್ಜಿ ಈ ಆಟದಲ್ಲಿ ಒಂದು ಬದಿಯ ಎರಡು ತುದಿಗಳ ಕೋಣೆಗಳು ೫. ಹರಿಯುವ ನೀರು; ಜಲಸಂಚಯ (ದಕ.ಜಿ)

ಅಜ್ಜಿಕತೆ: ಅಜ್ಜಿ ಹೇಳುವ ಕತೆ; ಜನಪದ ಕತೆ

ಅಜ್ಜಿಕಳಿಸುವುದು: ವ್ಯವಸಾಯಕ್ಕೆ ಸಂಬಂಧಿಸಿದ ಒಂದು ಆಚರಣೆ. ಗದ್ದೆಯಲ್ಲಿ ಭತ್ತದ ತೆನೆಗಳು ಒಡೆಯಲು ಆರಂಭವಾದಾಗ ಭತ್ತ ಜಳ್ಳಾಗ ಬಾರದೆಂದು ಈ ಆಚರಣೆ ಮಾಡುವರು. (ಶಿವ.ಜಿ/ಧಾರ.ಜಿ) ಹಳೆಗಡಿಗೆಗೆ ಅಕ್ಕಿ ಜಳ್ಳು, ಬತ್ತ ತುಂಬಿ ಹಳೆ ಪೊರಕೆಗಳನ್ನು ಹಿಡಿದುಕೊಂಡು ಗದ್ದೆಗೆ ತರುವರು. ಏಳನೆಯ ದಿನ ಎಡಿ ಹಿಡಿದುಕೊಂಡು ಬಂದು ಗದ್ದೆಯಲ್ಲೆ ಅಡಿಗೆ ಮಾಡಿ ಗಡಿಗೆಗೂ ಎಡೆ ಇಟ್ಟು ಊಟ ಮಾಡಿದ ನಂತರ ಆ ಗಡಿಗೆಯನ್ನು ದೂರ ಎಸೆಯುತ್ತಾರೆ. **ಇರೂ**: *ಕಟ್ಟಜ್ಜಿ ಕಳಿಸುವುದು*

ಅಜ್ಜಿಕೂದಲು: ಎಕ್ಕದ ಬೀಜ. (ಚಿತ್ರ.ಜಿ) ಈ ಬೀಜದ ಸುತ್ತ ಬಿಳಿಯ ನವಿರಾದ ರೇಷಿಮೆಯಂತಹ ಎಳೆಗಳು ಕಿರಣಗಳಂತೆ ಹರಡಿಕೊಂಡಿರುತ್ತವೆ

ಅಜ್ಜಿಕೂಳಿ: ಅಜ್ಜಿ ಹಲ್ಲು; ನೂರು ವರ್ಷ ದಾಟಿದ ನಂತರ ಮೊಳೆಯುವ ಚಿಕ್ಕ ಹಲ್ಲು (ದಕ.ಜಿ)

ಅಜ್ಜಿಗುಜ್ಜಿ: ಕಲ್ಲು ಸೊಣೆಯುವ ಆಟ; ಉಗುರು ಬೆರಳುಗಳ ಮೇಲೆ ಸಣ್ಣ ಗಾತ್ರದ ಕಲ್ಲುಗಳನ್ನು ಕೂರಿಸಿ ಮೇಲಕ್ಕೆಸೆದು ಕೆಳಕ್ಕೆ ಬೀಳದಂತೆ ಕೈಯಲ್ಲಿ ಹಿಡಿಯುವುದು (ಚಾಮ.ಜಿ)

ಅಜ್ಜಿಗೆ: *ಜ್ಯಾಸ್ಮಿನಮ್ ಗ್ರ್ಯಾಂಡಿಫ್ಲೋರಮ್*: ಜಾಜಿಮಲ್ಲಿಗೆ ಗಿಡ

ಅಜ್ಜಿಗೆಡ್ಡೆ: ೧. ಒಂದು ಜಾತಿಯ ಗಿಡ (ತುಮ.ಜಿ) ಮುಟ್ಟು, ಋತುಬಂಧ ಮುಂತಾದ ಸ್ತ್ರೀರೋಗಗಳಿಗೆ ಇದರ ಬೇರನ್ನು ಮದ್ದಾಗಿ ಬಳಸುತ್ತಾರೆ ೨. ಶತಾವರಿ ಎಂಬ ಬೇರು (ಕೋಲಾ.ಜಿ/ಉಕ.ಜಿ). (ಚಿತ್ರ ನೋಡಿ) **ಇರೂ**: *ಅಜ್ಜಿಬೂರನಗೆಂಡೆ, ಹಲವು ಮಕ್ಕಳ ಬಳ್ಳಿ*

ಅಜ್ಜಿಗೊಲ್ಲರು: ಗೊಲ್ಲರ ಒಂದು ಪಂಗಡ (ತುಮ.ಜಿ)

ಅಜ್ಜಿನ ಕೋಣೆ: ಜುಬಿಲಿ ಆಟದಲ್ಲಿ ಒಂದು ಕೋಣೆಯ ಹೆಸರು (ದಕ.ಜಿ)

ಅಜ್ಜಿನೇರ: ದುರುಗಮುರುಗಿ ಸಂಪ್ರದಾಯದವರಿಗೆ ಸಂಬಂಧಿಸಿದ ಒಂದು ಪಂಗಡ

ಅಜ್ಜಿಪುಟ್ಟೆ: ಒಂದು ಬಗೆಯ ಕಾಡುಹಣ್ಣು

ಅಜ್ಜಿಪೂಜೆ: ಮಲೆನಾಡಿನ ಕೃಷಿ ಸಂಬಂಧಿ ಆಚರಣೆ

ಅಜ್ಜಿಪೊದಿಕೆ: ಒಂದು ಬಗೆಯ ಔಷಧಿ ಗಿಡ

ಅಜ್ಜಿಮಂಚ: ಸಪ್ತರ್ಷಿಮಂಡಲ; ನಕ್ಷತ್ರ ಪುಂಜ

ಅಜ್ಜಿಮದ್ದು: ಹರಿಕಾಂತ ಜನಾಂಗದವರಲ್ಲಿ ದೀಪಾವಳಿಯ ದಿನ ಸೇವಿಸುವ ಕಹಿಬೇವಿನ ಸೊಪ್ಪಿನ ಕಷಾಯ (ಉಕ.ಜಿ)

ಅಜ್ಜಿಮೂಗು: ಮೂಗಿನ ಹೊಳ್ಳೆಗಳನ್ನು ವಿಭಾಗಿಸುವ ತೆಳುವಾದ ಅಸ್ಥಿಪಟಲ (ದಕ.ಜಿ)

ಅಜ್ಜಿಸೂಂಟಿ: ಬೈಗುಳ ಪದ (ದಕ.ಜಿ)

ಅಜ್ಜಿಸೂಜಿ: ಉತ್ತರ ಕನ್ನಡ ಜಿಲ್ಲೆಯ ಒಂದು ಜನಪದ ಆಟ. ಈ ಆಟದಲ್ಲಿ ಅಜ್ಜಿಯಾದವಳು ಕೆಳಗೆ ಬಿದ್ದಿರುವ ಸೂಜಿಯನ್ನು ಹುಡುಕುವಂತೆ ನಟಿಸುತ್ತಾಳೆ. ಉಳಿದ ಆಟಗಾರರು ಅಜ್ಜಿ ಅಜ್ಜಿ ಎಂತ ಮಾಡ್ತೆ ಎಂದು ಪ್ರಶ್ನಿಸಿ ಉತ್ತರ ಪಡೆಯುತ್ತಾರೆ. ಹಾಡಿನ ಕೊನೆಯಲ್ಲಿ ಅಜ್ಜಿ ಸೊಂಟ ನೆಟ್ಟಗೆ ಮಾಡಿ ಅವರನ್ನು ಹಿಡಿಯಲು ಯತ್ನಿಸುತ್ತಾಳೆ

ಅಜ್ಜಿಸೊಪ್ಪು: ಸಬ್ಬಸಿಗೆಯನ್ನು ಹೋಲುವ ಒಂದು ಆಹಾರಯೋಗ್ಯ ಕಳೆಸಸ್ಯ (ದಕ.ಜಿ)

ಅಜ್ಜಿ ಹಬ್ಬ: ಸುಗ್ಗಿಯ ಕಾಲದಲ್ಲಿ ಕೃಷಿಕರು ಆಚರಿಸುವ ಹಬ್ಬ (**ನೋಡಿ–** ಕಟ್ಟಜ್ಜಿ)

ಅಜ್ಜಿಹರಿವಾಣ: ಗದ್ದುಗೆ ಮೇಲೆ ಸ್ಥಾಪಿಸಿದ ಗಣಪತಿ ಪೂಜೆಯ ನಂತರ ಗಂಡಿನವರು ಹೆಣ್ಣಿನ ಕಡೆಯವರಿಗೆ ನೀಡುವ ಹರಿವಾಣ. ಇದರಲ್ಲಿ ತೆಂಗಿನಕಾಯಿ ಎಲೆ ಅಡಿಕೆ ಹೂವು ಇರುತ್ತದೆ (ಬೆಂಗ್ರಾ.ಜಿ)

ಅಜ್ಜಿಹುಳ: ಮಿಡತೆ (ತುಮ.ಜಿ)

ಅಜ್ಜುಗ: ಇರವಂತಿಗೆ ಹೂವು (ಬೆಂಗ್ರಾ.ಜಿ)

ಅಜ್ಜುಗಾವಲು: ಅಂಗರಕ್ಷಣೆ

ಅಜ್ಜುಡಿಕೆ ಸೀರೆ/ಅಜ್ಜಿಉಡಿಕೆ ಸೀರೆ: ವಧುವಿನ ಅಜ್ಜಿಗೆ ವರನ ಕಡೆಯವರು ವಿವಾಹ ಸಂದರ್ಭದಲ್ಲಿ ಉಡುಗೊರೆಯಾಗಿ ನೀಡುವ ಸೀರೆ (ಬೆಂಗ್ರಾ.ಜಿ)

ಅಜ್ಜುರ್ತಿ: ಅಚ್ಚುರ್ತಿ; ಭೇದಿ; ಹೊಟ್ಟೆಕಳೆತ

ಅಜ್ಜೆಗೆಡ್ಡೆ: ತಾಯಿಗೆಡ್ಡೆ, ಮುಂದಿನ ವರ್ಷ ಬೀಜಕ್ಕಾಗಿ ಬಳಕೆಯಾಗುವುದು (ಚಿಮ.ಜಿ)

ಅಜ್ಜೇರ್: ಅಜ್ಜನವರು (ದಕ.ಜಿ)

ಅಜ್ಜೇರಿ: ರೋಗದಿಂದ ಬಳಲು

ಅಜ್ಪಾಲು: ಅಜ್ಜಪಾಲು. ಅಣ್ಣ ತಮ್ಮಂದಿರು ಆಸ್ತಿ ಭಾಗ ಮಾಡಿಕೊಂಡಾಗ ತಂದೆ ತಾಯಿಗೆ ಬಿಟ್ಟ ಪಾಲು (ಮಂಡ್ಯ.ಜಿ)

ಅಜ್ರಬಳಿ: **ನೋಡಿ–** ಅಜ್ಜರಬಳಿ

ಅಜ್ರಿಬಂಟ: **ನೋಡಿ–** ಅಜಿರ್ ಬಂಟ್ರ

ಅಜ್ವಾನ: **ನೋಡಿ–** ಅಜವಾನ

ಅಟಕಾ: ಬಾಗಲಕೋಟೆ ಜಿಲ್ಲೆಯ ಗುಳೇದಗುಡ್ಡದ ಜಗನ್ನಾಥಸ್ವಾಮಿ ದೇವಸ್ಥಾನದಲ್ಲಿ ದೇವರಿಗೆ ಅರ್ಪಿಸುವ ವಿಶೇಷ ನೈವೇದ್ಯ ಸೇವೆ. ಅಕ್ಕಿ, ಹಾಲು, ಸಕ್ಕರೆಗಳಿಂದ ಹೊಸ ಮಡಿಕೆಯಲ್ಲಿ ನೈವೇದ್ಯವನ್ನು ತಯಾರಿಸಿ ಅದರಲ್ಲಿಯೇ ದೇವರಿಗೆ ಅರ್ಪಿಸುತ್ತಾರೆ. ದೇವರ ಎದುರಿನಲ್ಲಿ ಮಡಕೆ ನಾಲ್ಕು ಚೂರು ಮಾಡಿ ಅದರಲ್ಲಿರುವ ಪ್ರಸಾದವನ್ನು ಎಲ್ಲರೂ ಸ್ವೀಕರಿಸುತ್ತಾರೆ

ಅಟಕಾಸು: ಅಡ್ಡಿಪಡಿಸು; ಅಡ್ಡಗಟ್ಟು; ಅಡ್ಡನಿಲ್ಲು

ಅಟಕಾಳಿ: ನಡತೆಗೆಟ್ಟವಳು; ಬೈಗುಳ ಪದ (ಗುಲ್ಬ.ಜಿ)

ಅಟಕಿ ಎಲೆ: ಎಲೆಪೆಂಡಿ; ಹತ್ತು ಸಾವಿರ ಎಲೆಯ ಕಟ್ಟು (ಧಾರ.ಜಿ)

ಅಟಕು: ಅವಲಕ್ಕಿ

ಅಟಕ್ಬಾಯಿ ಉಳಿ: ಉಳಿಯ ಒಂದು ಬಗೆ. **ಇರೂ:** ಕಿರುಳಿ **ನೋಡಿ–** ಅಗಲ್ಬಾಯಿಉಳಿ

ಅಟಗಾಳಿ: **ನೋಡಿ–** ಅಟ್ಕಳಿ

ಅಟಗುಳಿ: ಸಂಕ್ರಾಂತಿ ಹಬ್ಬದ ಆಚರಣೆಯ ಭಾಗ. ಕೃಷಿಕರು ರಾಸುಗಳನ್ನು ತೊಳೆದು ಸಿಂಗರಿಸಿ ಪೂಜಿಸುತ್ತಾರೆ. ಅವುಗಳ ಮೈಮೇಲಿರುವ ನಾಲ್ಕು ಉಣ್ಣೆಯನ್ನು ತೆಗೆದು ರೊಟ್ಟಿ/ಕಿಚಡಿಗೆ ಸೇರಿಸಿ ಎಲ್ಲಾ ರಾಸುಗಳ ಮೇಲೆ ಎರಚಿ, ರಾಸುಗಳಿಗೆ ರೊಟ್ಟಿ/ಕಿಚಡಿ ತಿನ್ನಿಸುತ್ತಾರೆ. ನೈವೇದ್ಯ ಮಾಡಿದ ಉಣ್ಣೆಯ ರೊಟ್ಟಿಯನ್ನು ಊರಿನ ಹುಡುಗರು ಊರ ಗಡಿಯ ಬಳಿ ಸುಟ್ಟು, 'ನೆರೆಯ ಊರಿನ ಗೌಡರ ಮಗ ಸತ್ತುಹೋದ' ಎಂದು ಕೂಗುತ್ತಾ ಊರಿಗೆ ಓಡಿ ಬರುತ್ತಾರೆ. ಈ ಪದ್ಧತಿಗೆ ಅಟಗುಳಿ ಎಂದು ಕರೆಯುತ್ತಾರೆ

ಅಟಗೋಲು: ೧. ಎತ್ತಿನ ಮೇಲೆ ಹೊರೆಯನ್ನು ಹೇರಲು ಉಪಯೋಗಿಸುವ ಗಳ (ದಕ.ಜಿ) ೨. ದನಗಾಹಿಗಳು ಬಳಸುವ ಬಡಿಗೆ

ಅಟಚಿ: ತಾಯಿಯ ತಂಗಿ; ಚಿಕ್ಕಮ್ಮ

ಅಟತಾಳ: ಅಷ್ಟತಾಳ; ಎಂಟು ಮಾತ್ರಾಕಾಲದ ತಾಳ

ಅಟಮಟ: ೧. ಮೋಸ; ವಂಚನೆ; ೨. ಠಕ್ಕು; ಸುಳ್ಳು ೩. ಚಡಪಡಿಕೆ

ಅಟಮಿಧಿನ: ಅಷ್ಟಮಿದಿನ. ಭಾದ್ರಪದ ಶುಕ್ಲ ಅಷ್ಟಮಿ ಜೋಕುಮಾರ ಹುಟ್ಟಿದ ದಿನ ಎಂಬ ಪ್ರತೀತಿ (ಧಾರ.ಜಿ)

ಅಟವಾಳಿಗೆ: ಮನೆಯ ಹೆಬ್ಬಾಗಿಲಿಗೆ ಹೊಂದಿಕೊಂಡಿರುವ ಹೊರಭಾಗ (ಬಳ್ಳಾ.ಜಿ). **ಇರೂ:** *ಅಟವಾಳಿಗೆ ಬಂಕ*

ಅಟವಿ: ೧. ಅಡವಿ; ಕಾಡು ೨. ಅರ್ಧಸೇರಿನ ಅಳತೆ (ಬೆಂಗ್ರಾ.ಜಿ)

ಅಟಾಟಿಹತ್ತು: ೧. ಆತುರವುಂಟಾಗು ೨. ಸಾವಿನ ಕ್ಷಣ ಸಮೀಪಿಸು (ಧಾರ.ಜಿ)

ಅಟಾಪ: ಹಿಡಿತ (ಬೆಳ.ಜಿ)

ಅಟಾಪು: ತೊಗಲುಗೊಂಬೆಯವರಲ್ಲಿ ಒಂದು ಪಂಗಡ

ಅಟಾಮಟಾ: ಹುಡುಗ ಹುಡುಗಿಯರು ಆಡುವ ಆಟ (ಗುಲ್ಬ.ಜಿ)

ಅಟಾಳಿ: ಫಣಿಯರ ಪೂಜಾರಿ. **ಇರೂ:** *ಅಟ್ಟಾಳಿ*

ಅಟಿ: ೧. ತಾಗು; ಮುಚ್ಚು ೨. ಷರತ್ತು. **ಇರೂ:** *ಅಟಿತಾಗು*

ಅಟು: ೧. ಅಟ್ಟಲು; ಏಣಿಕಾಲು; ಅಟ್ಟಹತ್ತುವ ಮೆಟ್ಟಿಲು (ತುಮ.ಜಿ) ೨. ಗದ್ದೆ; ಕೆಸರು ಗದ್ದೆ (ಹಾಸ.ಜಿ)

ಅಟುಚ್ಲೆ ಹಣ್ಣು: ಪಪ್ಪಾಯ (ಹಾಸ.ಜಿ)

ಅಟುವ: ೧. ಅಟ್ಟ ೨. ಮನೆಯೊಳಗೆ ಎತ್ತರದ ಸ್ಥಳ

ಅಟುಳ್ಳಿ: ೧. ಅಟಗುಳಿ; ಹುಡುಗಾಟ ೨. ಉಪದ್ರವ; ಹಿಂಸೆ ೩. ಅಟ್ಟಿಸಿಕೊಂಡುಹೋಗು ೪. ಅಡ್ಡಡ್ಡಲಾಗಿ ತುಂಡರಿಸು (ಚಾಮ.ಜಿ)

ಅಟೆ: ದನಕರುಗಳ ಪಾದ (ಉಕ.ಜಿ)

ಅಟೇಟ: ಮುಂಡ

ಅಟ್ಕಳಿ: ೧. ಬಾಳ್ವೆ ಮಾಡುವುದು (ಉಕ.ಜಿ) ೨. ಶೀಗಿಕಾಯಿ ಮತ್ತು ಹುಣಿಸೇಹಣ್ಣನ್ನು ನೀರು ಹಾಕಿ ಕುದಿಸಿ, ಅದರಲ್ಲಿ ಗೋದಿಹಿಟ್ಟು ಕಲಸಿ ಸಿದ್ಧಪಡಿಸುವ ಗಂಜಿ. ಇದನ್ನು ತಲೆಗೂದಲು ಸ್ವಚ್ಛಗೊಳಿಸಲು ಬಳಸಲಾಗುತ್ತದೆ (ಧಾರ.ಜಿ). **ಇರೂ:** *ಅಟಗಾಳಿ*

ಅಟ್ಗುಳಿ: ೧. ಒಂದು ಆಚರಣೆ; ಅಟ್ಗುಳಿ ಹಬ್ಬ; ಹೊಲದಲ್ಲೆ ಅಡುಗೆ ಮಾಡಿ ಊಟ ಮಾಡುವ (ಚಾಮ.ಜಿ/) ೨. ಮಳೆಗಾಗಿ ಮಾಡುವ ಪೂಜೆ (ಮೈಸೂ.ಜಿ) ೩. ದನಗಾಹಿ ಹುಡುಗರು ಹೊಲದಲ್ಲಿ ಮಾಡಿ ತಿನ್ನುವ ತಿಂಡಿಗಳಲ್ಲೊಂದು. ಚೆನ್ನಾಗಿ ಬಲಿತ ಸಿಹಿಗುಂಬಳ ಕಾಯಿಯ ತೊಟ್ಟಿನ ಹತ್ತಿರ ರಂಧ್ರ ಮಾಡಿ ಬೀಜ, ತಿರುಳು ತೆಗೆದು ಚಕ್ಕೆ, ಲವಂಗ, ಕೊಬ್ಬರಿ, ಗಸಗಸೆ ಈರುಳ್ಳಿ, ಕೊತ್ತಂಬರಿಸೊಪ್ಪು ಮತ್ತು ಮಸಾಲೆಪುಡಿ ಸೇರಿಸಿ ಕಾಯಿಯ ಹೊರಭಾಗಕ್ಕೆ ಸಗಣಿ ಅಥವಾ ಕೆಮ್ಮಣ್ಣು ಬಳಿದು ಬೆಂಕಿ ಹಚ್ಚುತ್ತಾರೆ. ಚೆನ್ನಾಗಿ ಬೆಂದ ನಂತರ ಹೋಳುಮಾಡಿ ತಿನ್ನುತ್ತಾರೆ. **ಇರೂ:** *ಸಿಡಿಗುಂಬಳಕಾಯಿ* (ಮಂಡ್ಯ.ಜಿ)

ಅಟ್ಗೋಲು: ಕೋಲನ್ನು ಅಡ್ಡ ಹಿಡಿದು ಇಬ್ಬರು ಆಡುವ ಒಂದು ಆಟ

ಅಟ್ಟ: ೧. ಮನೆಯ ವಸ್ತುಗಳು, ದವಸ ಧಾನ್ಯಗಳು, ತೆಂಗಿನ ಕಾಯಿ ಇತ್ಯಾದಿಗಳನ್ನು ಇಡುವುದಕ್ಕಾಗಿ ಮರದ ಹಲಗೆಗಳಿಂದ ಮಾಡಿದ ಎತ್ತರದಲ್ಲಿರುವ ವ್ಯವಸ್ಥೆ (ದಕ.ಜಿ) ೨. ಸಾಮಾನುಗಳನ್ನು ಹಾಕಲು ಮನೆಯೊಳಗೆ ಮಾಡಿಕೊಂಡಿರುವ ಬಿದಿರಿನ ಛಾವಣಿಯಂತಹ ಹರಹು (ಚಿತ್ರ.ಜಿ) ೩. ಮನೆಯ ತೊಲೆಗಳ ಮೇಲಿನ ಹಲಗೆ; ಅಡಿಕೆಮರದ ದಬ್ಬೆಗಳನ್ನು ಹರಡಿ ಮಾಡಿದ ಮನೆ. ಇದರಲ್ಲಿ ತೆಂಗಿನಕಾಯಿ, ಈರುಳ್ಳಿ, ಬೆಳ್ಳುಳ್ಳಿ ಇಂತಹ ಪದಾರ್ಥಗಳನ್ನು ಇಡುತ್ತಾರೆ (ಮಂಡ್ಯ.ಜಿ). **ಪ್ರ:** ಅಟ್ಟದ ಮ್ಯಾಗಳ ಪುಟ್ಟಗುಂಬಳಕಾಯಿ, ಮಾಡ್ಯಾರ ಉಣ್ಣೆ ಸೊಸೆಬಾಲೆ... ೪. ಮನೆಯ ಕೋಣೆಗಳ ಮುಚ್ಚಿಗೆಯ ಮೇಲಿನ ಭಾಗ (ದಕ.ಜಿ) ೫. ನೆಲದಿಂದ ಮೂರು ನಾಲ್ಕು ಅಡಿ ಎತ್ತರಕ್ಕೆ ಹಲಗೆ ಮತ್ತು ಹಗ್ಗಗಳಿಂದ ಬಿಗಿದು ತಳಿರು ತೋರಣಗಳಿಂದ ಅಲಂಕೃತವಾದ ಮಂಟಪ

ಅಟ್ಟಂಬಾರಣ್ಯ: ದಟ್ಟವಾದ ಅಡವಿ; ದುರ್ಗಮವಾದ ಕಾಡು (ಬಳ್ಳಾ.ಜಿ). **ಇರೂ:** *ಅಟ್ಟಂಬೋ ಅಡವಿ, ಅರಂದಡವಿ*

ಅಟ್ಟಕೆಂಗಲು: ಅತಿ ಗಡುಸಾದ ಕೆಂಪು ಮಣ್ಣಿನ ಭೂಮಿ (ಚಿತ್ರ.ಜಿ)

ಅಟ್ಟಕ್ಕೇರಿಸು: ಹೊಗಳಿ ಉಬ್ಬಿಸು; ವಿಪರೀತ ಸಲಿಗೆಕೊಡು; ಅತಿಯಾಗಿ ಹೊಗಳು (ಮೈಸೂ.ಜಿ/ಚಾಮ.ಜಿ). **ಪ್ರ:** ಹೊಗಳಿ ಹೊಗಳೀ ಅಟ್ಟಕ್ಕೇರಿಸಿದ್ದಾರೆ

ಅಟ್ಟಗೋಲು: ಏಣಿ; ನಿಚ್ಚಣಿಗೆ

ಅಟ್ಟಡಗೆ: ಅಟ್ಟಅಡುಗೆ; ಸಿದ್ಧಪಡಿಸಿದ ಭೋಜನ (ಮಂಡ್ಯ.ಜಿ)

ಅಟ್ಟಣಿ/ಅಟ್ಟುಣಿ: ದಿನದಿನದ ಲೆಕ್ಕ; ದೈನಂದಿನ ಲೆಕ್ಕ (ಮೈಸೂ.ಜಿ)

ಅಟ್ಟಣೆಕಲ್ಲು: ಬಣವೆಯ ತಳಭಾಗಕ್ಕೆ ಹಾಕುವ ಕಲ್ಲು

ಅಟ್ಟದ ತಳ್ಳು: ಕೊಬ್ಬರಿ **ನೋಡಿ–** ತಳ್ಳು

ಅಟ್ಟದಮೂಡೆ: ಅಟ್ಟದ ಮೇಲೆ ಧಾನ್ಯಗಳನ್ನು ಸಂರಕ್ಷಿಸಿಡುವ ಸ್ಥಳ (ತುಮ.ಜಿ). **ಇರೂ:** *ಅಟ್ಟದಮೋಡೆ*

ಅಟ್ಟದಾಟ: ಬಯಲಾಟ. ಹಳ್ಳಿಯ ಬಯಲು ಸ್ಥಳದಲ್ಲಿ ನಾಲ್ಕೂ ಬದಿಯಲ್ಲಿ ಗಾಡಿ ಚಕ್ರಗಳನ್ನು ಹೂಳಿ ಅವುಗಳಿಗೆ ಅಡ್ಡೆಗಳನ್ನು ಹಾಕಿ ಅವುಗಳ ಮೇಲೆ ಹಲಗೆಗಳನ್ನು ಹಾಸಿ ಅಟ್ಟವನ್ನು ಕಟ್ಟಿ ಅಟ್ಟದ ಮೇಲೆ ಯಕ್ಷಗಾನ ದೊಡ್ಡಾಟ ಮತ್ತು ಸಣ್ಣಾಟಗಳನ್ನು ಆಡುತ್ತಿದ್ದುದರಿಂದ ಈ ಹೆಸರು

ಅಟ್ಟನೆ: ಪೂರ್ವಸಿದ್ಧತೆ (ಮಂಗ.ಜಿ)

ಅಟ್ಟನ್ನ: ಬೇಯಿಸಿದ ಆಹಾರ ಪದಾರ್ಥ (ಮೈಸೂ.ಜಿ)

ಅಟ್ಟಪುಟ್ಟಕ ಸೊಪ್ಪು: ಒಂದು ಆಹಾರಯೋಗ್ಯ ಹಾಗೂ ಔಷಧೀಯ ಗುಣವುಳ್ಳ ಕಳೆಸಸ್ಯ (ರಾಮ.ಜಿ)

ಅಟ್ಟಮುಟ್ಟು: ೧. ಒಂದು ಜನಪದ ಆಟ. **ನೋಡಿ–** ಅಟ್ಟೆಮುಟ್ಟೆ ೨. ಬೆನ್ನಟ್ಟು; ಹಿಂಬಾಲಿಸು

ಅಟ್ಟಮೆಣಸಿನ ಕಾಯಿ: ಬ್ಯಾಡಗಿ ಬಳ್ಳಿಗಾಯಿ ಹಿರಿದು ಮಸಾಲೆ ಹಾಕಿದ ಪಲ್ಯ

ಅಟ್ಟ ಮ್ಯಾಟ: ಭತ್ತ, ರಾಗಿ, ಜೋಳ ಮುಂತಾದವುಗಳ ಒಕ್ಕಣೆ ಮಾಡುವ ಸಂದರ್ಭದಲ್ಲಿ ಧಾನ್ಯಗಳನ್ನು ತೂರಲು ಬಳಸುವ ಸಾಧನ

ಅಟ್ಟಲಿಗೆ: ಕೈಗೆ ಎಟುಕದ ವಸ್ತುಗಳನ್ನು ಎಟುಕಿಸಿಕೊಳ್ಳಲು ಬಳಸುವ ಕಾಲುಮಣೆ

ಅಟ್ಟಲೀಶ: ಮನ್ಮಥ (ಶಿವ.ಜಿ)

ಅಟ್ಟಲು: **ನೋಡಿ–** ಅಟ್ಲು

ಅಟ್ಟಳಿಗಿ: ೧. ಅಟ್ಟ; ಅಟ್ಲು; ಎತ್ತರದ ವೇದಿಕೆ ೨. ಜಂಗುಳಿ; ಸಮೂಹ ೩. ಪೀಡೆ (ಚಿಮ.ಜಿ/ಮಂಡ್ಯ.ಜಿ) **ನೋಡಿ–** ಅಟ್ಟಣೆ

ಅಟ್ಟಳೆ: ೧. ಕೋಟೆಯ ಅಟ್ಟ ೨. ಬುರುಜು (ಶಿವ.ಜಿ)

ಅಟ್ಟಳೆನಾಡು: ಬೀದರ ಜಿಲ್ಲೆಯ ಎತ್ತರವಾದ ಭೂಮಿ; ಧರಿನಾಡು; ಧರಿ ಪ್ರಾಂತ್ಯ; ರಂಜೇರುವಿನ ಸಿಂಧರ ಆಳ್ವಿಕೆಯ ಭೂಭಾಗ (ಧಾರ.ಜಿ)

ಅಟ್ಟಾಕು: (ಕ್ರಿ): ಶಾಖ ತಗುಲಲು ಉರವಲನ್ನು ಬಳಸು

ಅಟ್ಟಾಡಿ: ೧. ಬಜಾರಿ; ಗಂಡನನ್ನು ಬೆದರಿಸುವವಳು ೨. ಅಟ್ಟಿಸಿಕೊಂಡುಹೋಗಿ ೩. ಬೆನ್ನಟ್ಟಿ (ಶಿವ.ಜಿ).

ಅಟ್ಟಾಡು (ಕ್ರಿ): ೧. ಸಂಭೋಗ ಮಾಡು ೨. ಅಟ್ಟಿಸಿಕೊಂಡು ಹೋಗು

ಅಟ್ಟಾಲು: ಕಾಯಿಸಿದ ಹಾಲು (ಕೋಲಾ.ಜಿ)

ಅಟ್ಟಾಸ್: ಅಟ್ಟಹಾಸ. ಜಂಬ; ಗತ್ತು (ದಕ.ಜಿ). **ಪ್ರ:** ಅವ್ಳ್ ಅಟ್ಟಾಸ್‌ಗೇನ್ ಕಮ್ಮಿ ಇಲ್ಲೆ

ಅಟ್ಟಾಸು: ಅಟ್ಟಹಾಸ. ೧. ಯಕ್ಷಗಾನ ಬಯಲಾಟಗಳಲ್ಲಿ ಪ್ರಧಾನ ಪಾತ್ರಗಳು ನಗುವ ಶೈಲಿ; ಜೋರು ನಗು ೨. ಬಣ್ಣದ ವೇಷಗಳು ಹೊಡೆಯುವ ಬೊಬ್ಬೆ; ಆರ್ಭಟ (ದಕ.ಜಿ). **ಇರೂ:** *ಅಟ್ಟಹಾಕು*

ಅಟ್ಟಿ: ೧. ದೊಡ್ಡ ದೊಡ್ಡ ಸೌದೆ ತುಂಡುಗಳನ್ನು ಒಟ್ಟಿರುವ ರಾಶಿ (ಚಿಮ.ಜಿ) ೨. ಒಂದರ ನಂತರ ಇನ್ನೊಂದರಂತೆ ಪೇರಿಸಿದ್ದು (ದಕ.ಜಿ) ೩. ಬಲಿತು ಬಿಸಿಲಿಗೆ ಒಡೆದ ಹತ್ತಿಕಾಯಿಯ ಮೇಲಿನ ತೊಗಟೆ. **ಪ್ರ:** ಹೊಲದ ತುಂಬ ಬರೇ ಹತ್ತಿ ಅಟ್ಟಿ ಉಳದ್ದಾವು ಅದರಾಗೇನೈತಿ ಎಲ್ಲಾ ಹಾಳಾಗೇತಿ ೪. ಗಾಡಿಯ ಕಮಾನಿನ ಬಿದಿರಿನ ತಡಿಕೆ (ದಕ.ಜಿ) ೫. ಹಟ್ಟಿ; ಮನೆ ಕೊಟ್ಟಿಗೆ

ಅಟ್ಟಿಕಲ್: ತಲೆಯಲ್ಲಿ ಹೊತ್ತ ಹೊರೆಯನ್ನು ಇಳಿಸಲಿಕ್ಕಾಗಿ ದಾರಿಯ ಬದಿಯಲ್ಲಿ ನೆಟ್ಟ ಎತ್ತರವಾದ ಕಲ್ಲಿನ ತೊಲೆ

ಅಟ್ಟಿಕಾಲು: ಡೊಂಕುಕಾಲು; ಒಳಬಾಗಿದ ಕಾಲು (ದಕ.ಜಿ). **ಇರೂ:** *ಅಟ್ಟೆಗಾಲು; ಕೂಡ್ಮಂಡಿ (ಮಂಡ್ಯ.ಜಿ)*

ಅಟ್ಟಿಕೊ: ಮೈಮೇಲೆ ನೀರು ಸುರಿದುಕೊ; ಸ್ನಾನಮಾಡು

ಅಟ್ಟಿಕ್ಕು: ೧. ಅಡುಗೆ ಮಾಡಿ ಬಡಿಸು. ಮದುಮಕ್ಕಳಿಗೆ ಅವರ ಬಳಗದವರಿಗೆ ಔತಣದ ಅಡುಗೆ ಮಾಡಿ ಬಡಿಸುವುದು ೨. ಹುಡುಗಿ ಮೈ ನೆರೆದಾಗ, ಬಸುರಿಯಾದಾಗ ಹತ್ತಿರದ ನೆಂಟರು ವಿಶೇಷವಾದ ಅಡಿಗೆ ಮಾಡಿ ಸತ್ಕರಿಸುವುದು. (ಮೈಸೂ.ಜಿ). **ಪ್ರ:** ನಮ್ಮತ್ತೆ ಮಗಳಿಗೆ ಅಟ್ಟಿಕ್ಕಕ್ಕೆ ಅವರೂರಿಗೆ ಹೋಗವರೆ

ಅಟ್ಟಿಗೆಗಿಡ: ಒಂದು ಬಗೆಯ ಔಷಧಿ ಸಸ್ಯ (ರಾಮ.ಜಿ)

ಅಟ್ಟಿಗೆಜಡೆ: ಅಟ್ಟಿಗೆ ಹೂವಿನ ಜಡೆ (ರಾಮ.ಜಿ)

ಅಟ್ಟಿನಕಟಗಿ: ಗಾಡಿಯ ಒಳಗಿನ ಕಟ್ಟಿಗೆ

ಅಟ್ಟಿನಳಗೆ: ಇಡ್ಲಿ ಬೇಯಿಸುವ ಹಬೆಯ ಪಾತ್ರೆ

ಅಟ್ಟಿಸು: ೧. ಕಳಿಸಿಕೊಡು ೨. ಬೆನ್ನತ್ತಿ ಓಡಿಸು ೩. ಕುದಿಸಿ ಇಂಗಿಸು **ಪ್ರ:** ಅನ್ನದಲ್ಲಿ ನೀರು ಹೆಚ್ಚಾಗಿದ್ದರೂ ಬಸಿಯದೆ ಅದರಲ್ಲೇ ಅಟ್ಟಿಸುವುದು ಅವರ ರೂಢಿ (ಶಿವ.ಜಿ) ೪. ಸ್ವಾಧೀನಕ್ಕೆ ತೆಗೆದುಕೊ (ಬೆಳ.ಜಿ) ೫. ಕಡಿಮೆ ಮಾಡು

ಅಟ್ಟು (ನಾ): ೧. ಪ್ರಾಣಿಗಳು ಓಡಾಡುವ ಜಾಗದಲ್ಲಿ ಕಾಯುತ್ತಾ ಕೂರುವುದಕ್ಕೆಂದು ಮರದ ಮೇಲೆ ನಿರ್ಮಿಸಿದ ಅಟ್ಟಳಿಗೆ ೨. ರೋಣುಗಲ್ಲಿಗೆ ಜೋಡಿಸಿರುವ ಚೌಕಾಕಾರದ ಮರದ ಹಲಗೆಗಳು ೩. ದನಗಳಿಗೆ ಮೇಯಲು ಬೇಕಾಗುವ ವಸ್ತುಗಳನ್ನು ಇಡುವ ಜಾಗ; ಹುಲ್ಲಿನ ಬಣವೆ ೪. ಮಣ್ಣು. ೫. ಧಾನ್ಯದ ಹೊಟ್ಟನ್ನು ಬಿಡಿಸುವ ಸಲಕರಣೆ. ೬. ಬೇಯಿಸಿದ ಅಡುಗೆ (ಕ್ರಿ) ೭. ಸುರಿ; ಹಾಕು; ಹುಯ್ಯಿ ೮. ಹೊರಗೆ ಹಾಕು; ಓಡಿಸು ೯. ಬೆನ್ನು ಹತ್ತಿ ಹೋಗು; ಹಿಂಬಾಲಿಸು. **ಪ್ರ:** ದನಗಳ್ನ ಅಟ್ಕೊಂಡು ಬರೋಷ್ಟರಲ್ಲಿ ಸಾಕಾಯ್ತು ೧೦. ಅಡಿಗೆ ಮಾಡು (ಧಾರ.ಜಿ). **ಪ್ರ:** ಅಟ್ಟರೆ ಉಣಬೇಕು ಸತ್ತರೆ ಹೊರಬೇಕು, ಅಟ್ಟು ಉಂಡೇನೆಂದು ಚಟ್ಟಿ ಕುಡಿಕೆ ತಂದೆ ಹಟ್ಟೀಲೆ ಇದ್ಯಲ್ಲೊ ಜವರಾಯ

ಅಟ್ಟುಂಬವ: ೧. ತನ್ನ ಅಡಿಗೆಯನ್ನು ತಾನೇ ಮಾಡಿಕೊಂಡು ಉಣ್ಣುವವ ೨. ಅನಾಥ ೩. ಶಾಪದ ಶಬ್ದ

ಅಟ್ಟುಗುಣಿ: ೧. ಫಲ್ಗುಣ ಪುಷ್ಯ ಪೌರ್ಣಿಮೆ ದಿನದಂದು ಶಿವಾಚಾರ ನಗರ್ತ ಜನಾಂಗದ ಚಿಕ್ಕ ಹೆಣ್ಣು ಮಕ್ಕಳು ಆಚರಿಸುವ ಸಂಪ್ರದಾಯ. ಮಣ್ಣಿನಿಂದ ಮಾಡಿದ ಮಾಳಮ್ಮ ಗೌರಿಗೆ ಮನೆಯಲ್ಲಿ ಪೂಜೆ ಸಲ್ಲಿಸಿ ನಂತರ ದೇವಾಲಯಕ್ಕೆ ತಂದು ಹುಗ್ಗಿ ಅನ್ನ ಪಾಯಸದ ನೈವೇದ್ಯ ಮಾಡಿ ಪೂಜಿಸುತ್ತಾರೆ. ಆರತಿ ತಟ್ಟೆಯೊಂದಿಗೆ ಗಾಣ ಹಾಗೂ ಊರ ಬಾಗಿಲುಗಳಲ್ಲಿ ಪೂಜೆ ಸಲ್ಲಿಸಿ ದೇವಾಲಯಕ್ಕೆ ಬರುತ್ತಾರೆ ೨. ಮಾಂಸದ ಆಹಾರಕ್ಕೆ ಹೇಳುವ ಹೆಸರು (ಚಿಮ.ಜಿ). **ಇರೂ:** ಅಡಬಳ ೩. **ನೋಡಿ–** ಚೆನ್ನೆಮಣೆ ಆಟ

ಅಟ್ಟುಗುಳಿ ಮಣೆ: ನೋಡಿ– ಅಳ್ಗುಳಿ ಮಣೆ

ಅಟ್ಟುಗೆ: ಮನೆಯ ಒಳಭಾಗದ ಮುಚ್ಚಗೆ; ನಡುಮನೆ (ಮಂಡ್ಯ.ಜಿ)

ಅಟ್ಟುಗೋಲು: ಮುದ್ದೆಮಾಡುವ ಸಂದರ್ಭದಲ್ಲಿ ಹಿಟ್ಟು ತಿರುವಲು ಬಳಸುವ ಚಪ್ಪಟೆ ಕೋಲು

ಅಟ್ಟುಗೌಡಿ: ಅಡಿಗೆ ಮಾಡುವ ಹೆಣ್ಣಾಳು. ವಿಶೇಷವಾಗಿ ಜೀತಪದ್ಧತಿಯಲ್ಲಿ, ಜೀತಕ್ಕಿರುವ ಮನೆಯಲ್ಲಿ ಅಡುಗೆ ಕೆಲಸ ಮಾಡುವ ಮಹಿಳೆ

ಅಟ್ಟುಡಿಕೆ ಸೀರೆ: ಗಂಡಿನ ಕಡೆಯವರು ಹೆಣ್ಣಿನ ಅಜ್ಜಿಗೆ ತರುವ ಸೀರೆ (ಚಿಮ.ಜಿ). **ಇರೂ:** ತಾಯುಡಿಗೆ ಸೀರೆ (ಮೈಸೂ.ಜಿ)

ಅಟ್ಟುಣ್ಣು: ತಾನೇ ಅಡುಗೆ ಮಾಡಿ ಉಣ್ಣು (ಶಿವ.ಜಿ). **ಪ್ರ:** ಅಟ್ಟುಣ್ಣೋನ ಹೆಂಡತಿ ಆಗಬಾರದು

ಅಟ್ಟುನಾಯಿ: ೧. ಹೆದರಿ ಓಡುವ ನಾಯಿ ೨. ಸದರವನ್ನು ಕಂಡು ಬೆನ್ನಟ್ಟಿ ಬರುವ ನಾಯಿ

ಅಟ್ಟುಬೆಣ್ಣೆ: ತುಪ್ಪ (ಮಂಡ್ಯ.ಜಿ)

ಅಟ್ಟುಸು/ಅಟ್ಸು: ಕುದಿಸಿ ನೀರಿನ ಅಂಶ ಕಡಿಮೆಗೊಳಿಸು; ಇಂಗಿಸು (ಧಾರ.ಜಿ)

ಅಟ್ಟುಳಿ: ಕಾಯಿಸಿ ಒಣಗಿಸಿದ ಹುಳಿ

ಅಟ್ಟುಳಿಯಾಳು: ಬೇಟೆಮೃಗವನ್ನು ಬೆನ್ನಟ್ಟಿ ಬೇಟೆಯಾಡುವ ಬೇಟೆಗಾರ (ಹಾಸ.ಜಿ)

ಅಟ್ಟೆ: ೧. ಕಡುಬಿನ ತಪ್ಪಲೆಯ ಒಳಗೆ ನಡುಭಾಗದಲ್ಲಿ ಇಡುವ ತೂತುಗಳಿರುವ ತಟ್ಟೆ (ಚಿಮ.ಜಿ) ೨. ಏತದ ತೊಲೆ ಮತ್ತು ಬಿದಿರಿನ ಗಳವನ್ನು ಜೋಡಿಸುವ ಬೆತ್ತದ ಅಂಡಾಕಾರದ ಸಲಕರಣೆ (ದಕ.ಜಿ) ೩. ಒಂದು ಜಲಚರ ೪. ಜಿಗಣೆ ೫. ಅಸ್ಥಿಪಂಜರ ೬. ಮೂಲ ಆಕಾರ ೭. ಮನೆ ೮. ಚಪ್ಪಲಿಯ ತಳಭಾಗ ೯. ಲಾಳಿ ೧೦. ಬಿದಿರಿನ ಕೋಲುಗಳಿಂದ ಮಾಡಿದ ಚೌಕಟ್ಟು; ತೆಂಗಿನ ಎಳೆಗರಿಗಳಿಂದ ಅಣಿ ಎಂಬ ಪ್ರಭಾವಳಿಯ ರಚನೆ ಮಾಡಿ ಭೂತ ನರ್ತಕನ ಬೆನ್ನಿಗೆ ಕಟ್ಟುವಂಥದ್ದು (ದಕ.ಜಿ) ೧೧. ರುಂಡವಿಲ್ಲದ ದೇಹ; ಮುಂಡ

ಅಟ್ಟೆಒಕ್ಕಲಿಗರು: ಒಕ್ಕಲಿಗ ಸಮುದಾಯದ ಒಂದು ಉಪ ಪಂಗಡ. ಇವರು ಉತ್ತರ ಕನ್ನಡ ಹಾಗೂ ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಕಂಡುಬರುತ್ತಾರೆ

ಅಟ್ಟೆಕುಪ್ಪಸ: ಬಲಿಮೂರ್ತಿಯ ಹಿಂದಿನ ವಸ್ತ್ರಸಹಿತ ಪ್ರಭಾವಳಿ (ದಕ.ಜಿ)

ಅಟ್ಟೆಣ್ಣೆ: ಕೈ ಎಣ್ಣೆ; ಹರಳೆಣ್ಣೆ; ಔಡಲಎಣ್ಣೆ (ಮೈಸೂ.ಜಿ)

ಅಟ್ಟೆತರು: ಒಂದು ಜಾತಿಯ ಮೀನು (ದಕ.ಜಿ)

ಅಟ್ಟೆಬಿಲ: ೧. ಭೂತ ನರ್ತಕ ಕುಳಿತುಕೊಳ್ಳುವ ದೈವಸ್ಥಾನದಲ್ಲಿನ ಮುಖ್ಯ ಸ್ಥಳ (ದಕ.ಜಿ) ೨. ಅಟ್ಟೆಪಿಲ; ಗುಡಿಯ ಮುಂದಿನ ಭೂತ (ದಕ.ಜಿ)

ಅಟ್ಟೆಮರ: ವಲ್ಲುರಾ ಟ್ರಿಪೋಲಿಯ: ಕೊಡಗಿನಲ್ಲಿ ಕಂಡು ಬರುವ ಒಂದು ಔಷಧಿಸಸ್ಯ

ಅಟ್ಟೆಮುಟ್ಟೆ: ಒಂದು ಒಳಾಂಗಣ ಆಟ. ಪ್ರಾಸಗಳನ್ನು ಹೇಳುತ್ತ ವೃತ್ತಾಕಾರದಲ್ಲಿ ಕುಳಿತಿರುವ ಮಕ್ಕಳ ಮೊಣಗಂಟುಗಳನ್ನು ಮುಟ್ಟುತ್ತಾ ಹೋಗುವುದು. ಕೊನೆಯ ಶಬ್ದ ಬರುವಾಗ ಯಾವ ಮಂಡಿಯನ್ನು ಮುಟ್ಟುತ್ತಾರೋ ಆ ಕಾಲನ್ನು ಚಾಚುವುದು (ದಕ.ಜಿ)

ಅಟ್ಟೆಳ್ಳೆಣ್ಣೆ: ಮನೆಯಲ್ಲಿ ಹರಳನ್ನು ಹುರಿದು ಅಥವಾ ಬೇಯಿಸಿ ನರುಕಿ ಅದರಿಂದ ತೆಗೆದ ಎಣ್ಣೆ. ಇದಕ್ಕೆ ತಂಪು ಎನ್ನುವ ಕಾರಣಕ್ಕೆ ಹೊನಗೊನೆಸೊಪ್ಪು ಮೊದಲಾದವನ್ನು ಸೇರಿಸುತ್ತಾರೆ.

ಅಟ್ಟೇಗುಡ್ಡ: ಮಂಚಿಗಿ. **ನೋಡಿ–** ಅಟ್ಟಣೆ

ಅಟ್ಟೇಣಿ: ಅಟ್ಟದ ಏಣಿ (ಶಿವ.ಜಿ)

ಅಟ್ಟೇಲಿ: ಓಣಿ (ಬಳ್ಳಾ.ಜಿ)

ಅಟ್ಣೆ: ೧. ಅಟ್ಟಣೆ; ಬೆಳೆಯನ್ನು ಕಾಪಾಡಲು ಬೆಳೆಯ ಮಧ್ಯೆ ಹಾಕುವ ಮಂಚಿಗೆ ೨. ಮೆದೆಗಳನ್ನು ಹಾಕುವಾಗ ಗೆದ್ದಲು ಹತ್ತದಂತೆ ಕಲ್ಲುಗಳನ್ನಿಟ್ಟು ಅದರ ಮೇಲೆ ಗಳುಗಳನ್ನು ಹಾಕಿ ನಿರ್ಮಿಸಿದ ನೆಲಮಟ್ಟದ ಅಟ್ಟ (ಮಂಡ್ಯ.ಜಿ). **ಇರೂ:** *ಅಂಟಾ, ಅಟ್ಣಗಿ; ಅಟ್ಣೆ, ಅಟ್ಣು (ತುಮ.ಜಿ) ಅಟ್ನೆ; ಅಟ್ಣೇಗುಡ್ಡ*

ಅಟ್‌ಮುಟಕನ್‌ಸೊಪ್ಪು: ಒಂದು ಬಗೆಯ ಆಹಾರಯೋಗ್ಯ ಕಳೆಸಸ್ಯ

ಅಟ್ಯಪಟ್ಯ: ಒಂದು ಆಟ

ಅಟ್ಲ: ೧. ಅಟ್ಟಣಿಗೆ; ಮರದ ಕೊಂಬೆಗಳ ಮೇಲೆ ನಿರ್ಮಿಸಿದ ಚಪ್ಪರ ೨. ಪಳತದ ಬುಡದ ಭಾಗ (ಉಕ.ಜಿ) ೩. ಅಂಟುವಾಳದ ಕಾಯಿ

ಅಟ್ಲಕಾಯಿ: ಅಂಟುವಾಳದ ಕಾಯಿ (ದಕ.ಜಿ).

ಅಟ್ಲು: ೧. ಮಳೆ ಅಥವಾ ಹೆಚ್ಚು ನೀರು ತುಂಬಿ ಒದ್ದೆಯಾದ ಮಣ್ಣು ಹಾಗೂ ಗದ್ದೆಯ ಕೆಸರು (ತುಮ.ಜಿ) ೨. ಒಂದು ತಿನಿಸು ೩. ಏಣಿಕಾಲು; ಅಟ್ಟ ಹತ್ತುವ ಮೆಟ್ಟಿಲು (ತುಮ.ಜಿ) ೪. ಅಟ್ಟ. ೫. ಬಣವೆಗೆ ಗೆದ್ದಲು ಹತ್ತದಂತೆ ಮಾಡುವ ವ್ಯವಸ್ಥೆ ೬. ಅಡ್ಲು.

ಅಟ್ಲುಕಟ್ಟು: ಸೌದೆ, ಹುಲ್ಲು ಮುಂತಾದ ವಸ್ತುಗಳಿಗೆ ಗೆದ್ದಲು ಹಿಡಿಯಬಾರದೆಂದು ನೆಲದ ಮೇಲೆ ಚೌಕಾಕಾರಕ್ಕೆ ಸುಮಾರು ಒಂದು ಅಡಿ ಎತ್ತರದ ಕಲ್ಲುಗಳನ್ನಿಟ್ಟು ಕಲ್ಲುಗಳ ಮೇಲೆ ಭಾರವನ್ನು ಹೊರಬಲ್ಲಂತಹ ದಪ್ಪನಾದ ಬಡಿಗೆ ಅಥವಾ ಗಳುಗಳನ್ನು ಅಡ್ಡ ಉದ್ದ ಇಟ್ಟು ಅದರ ಮೇಲೆ ಹುಲ್ಲನ್ನು ಒಟ್ಟುವುದು (ದಾವ.ಜಿ)

ಅಟ್ಲುಗೊರೆ: ಕೆಸರು (ಮೈಸೂ.ಜಿ). **ಪ್ರ:** ಮಳೆ ಹೊಡ್ತುಕ್ಕೆ ನಾಟಿ ಗದ್ದೆಲ್ಲ ಅಟ್ಲುಗೊರೆಯಾಗೋಗವೆ

ಅಟ್ಲು ಬಣವೆ: ಗೆದ್ದಲು ಹತ್ತಬಾರದೆಂದು ಅಟ್ಟಣೆಯ ಮೇಲೆ ಹಾಕಿದ ಬಣವೆ (ದಾವ.ಜಿ)

ಅಟ್ಲುಭೂಮಿ: ಜೌಗುನೆಲ

ಅಟ್ಸು: **ನೋಡಿ–** ಅಟ್ಟುಸು

ಅಟ್ಟತುಪ್ಪ: ಅಂಟುವಾಳ ಕಾಯಿಯ ಮರದ ಹೂವಿನ ಮಕರಂದದಿಂದ ಜೇನು ಹುಳುಗಳು ತಯಾರಿಸಿದ ತುಪ್ಪ. ವಿವಿಧ ರೋಗಗಳ ನಿವಾರಣೆಗೆ ಬಳಕೆ

ಅಟ್ಟವೆ: ದನಗಳಿಗೆ ಹಾಕುವ ಒಣ ಹುಲ್ಲನ್ನು ಸಂಗ್ರಹಿಸಿಡಲು ಬಳಸುವ ಅಟ್ಟ (ಚಿಮ.ಜಿ)

ಅಟ್ಟ ಹೂವು: ಅಂಟುವಾಳದ ಹೂವು. ಮರದಲ್ಲಿ ಬಿಡುವ ಈ ಹೂವಿನ ಮಕರಂದದಿಂದ ಜೇನುಹುಳುಗಳು ಜೇನು ತುಪ್ಪ ತಯಾರಿಸುತ್ತವೆ (ಉಕ.ಜಿ)

ಅಠವಣಿ: ವಿಜಯನಗರ ಕಾಲದಲ್ಲಿದ್ದ ಭೂ ತೆರಿಗೆ

ಅಠ್ರಾಪಗಡಿ: ಯಕ್ಷಗಾನದಲ್ಲಿ ಬಳಕೆಯಾಗುವ ಹದಿನೆಂಟು ಸುತ್ತಿನ ರುಮಾಲು; ಒಂದು ಸುತ್ತಿಗೆ ಒಂದು ಬಗೆಯಂತೆ ಹದಿನೆಂಟು ಬಗೆಯ ರುಮಾಲು ಬಳಸುವ ಕ್ರಮವೂ ಇದೆ. ಈ ಉದ್ದೇಶಕ್ಕಾಗಿಯೇ ತಯಾರಿಸಲ್ಪಡುವ ರುಮಾಲೂ ಇರುತ್ತದೆ (ಬಿಜಾ.ಜಿ). **ಇರೂ:** *ಪಟಗ*

ಅಡ್‌ಂಗಣಿ: ಇಕ್ಕಟ್ಟು (ದಕ.ಜಿ)

ಅಡಂಕೆ: ಚೆಂಡನ್ನು ಎಸೆಯುವ ಒಂದು ಆಟ (ದಕ.ಜಿ)

ಅಡಂಗಲ್: ಆಸ್ತಿಗೆ ಸಂಬಂಧಿಸಿದ ನಕ್ಷೆ ಹಾಗೂ ವಿವರಗಳ ನ್ನೊಳಗೊಂಡ ದಾಖಲೆ (ದಕ.ಜಿ)

ಅಡಂಗಾಯಿ: ಬೇಯಿಸಿ ಮಾಡಿದ ಉಪ್ಪಿನಕಾಯಿ

ಅಡಂಬಳ್ಳಿ: ಐಪಮೀಯ ಆಲ್ಬ: ಸಾರಿಗೆ ಬಳಕೆಯಾಗುವ ಸೊಪ್ಪು. ಇರೂ: *ಆಡುಬಳ್ಳಿ, ಕೆಂಪುಬಂಗಡ ಬಳ್ಳಿ*

ಅಡಇಡು: ೧. ಚಿನ್ನ, ಜಮೀನು ಮುಂತಾದ ಬೆಲೆಬಾಳುವ ವಸ್ತುಗಳನ್ನು ಒತ್ತೆ ಇಟ್ಟು ಹಣವನ್ನು ಸಾಲವಾಗಿ ಪಡೆಯುವುದು ೨. ಕೂಲಿ ಕೆಲಸದವರನ್ನು ಕರೆಯಲು ಬಳಸುವ ಪದ. **ಇರೂ:** *ಅಡಾವು, (ರಾಯ.ಜಿ) ಅಡುವ, (ದಕ.ಜಿ) ಅಡವಿಡು*

ಅಡಊತ: ವೃಷಣದಲ್ಲಿ ನೀರುತುಂಬಿ ಆಗುವ ಊತ;

ವೃಷಣ ಊದಿಕೊಳ್ಳುವ ರೋಗ. ಅಡೆಯಲ್ಲಿ ನೀರು ತುಂಬುವುದು **ಇರೂ:** *ಗೋದರ್ಡು*

ಅಡಕ: ನಪುಂಸಕ (ರಾಯ.ಜಿ)

ಅಡಕಚಿಟ್ಟ: ಸಾಂಬಾರಿಗೆ ಬಳಸುವ ಸೊಪ್ಪು **ಇರೂ:** *ಅಡ್ ಚಿಟ್ಟಿನ ಸೊಪ್ಪು* (ಚಿತ್ರ ನೋಡಿ)

ಅಡಕಟ್ಟಿ: ಬಡಗಿ ಕೆಲಸದ ಕಾರ್ಯಾಗಾರ (ಬೀದ.ಜಿ)

ಅಡಕತ್ತಿ: ಅಡಕೆಯನ್ನು ಚೂರುಚೂರಾಗಿ ಕತ್ತರಿಸುವ ಸಾಧನ. **ಇರೂ:** *ಅಡಕತ್, ಅಡಕತ್ತು, ಅಡಕೊತ್ತು, ಅಡಗತ್ತಿ, ಅಡಗತ್ರಿ*

ಅಡಕಪುಟ್ಟಿ: ಒಂದು ಸಸ್ಯ ವಿಶೇಷ (ಕೋಲಾ.ಜಿ)

ಅಡಕಲಕೋಣೆ: ಅಡಕಲ ಗಡಿಗೆಗಳನ್ನು ಜೋಡಿಸಿಟ್ಟ ಕೋಣೆ **ನೋಡಿ–** ಅಡಕಲ ಗಡಿಗೆ

ಅಡಕಲಗಡಗಿ: ೧. ಗಾತ್ರಕ್ಕನುಗುಣವಾಗಿ ಒಂದರ ಮೇಲೊಂದು ಏರಿಸಿಟ್ಟ ಗಡಿಗೆಗಳು. ದೊಡ್ಡ ಗಡಿಗೆಯಲ್ಲಿ ಐವತ್ತರಿಂದ ಅರವತ್ತು ಸೇರು ಹಿಡಿಸುತ್ತದೆ ೨. ಮಣ್ಣಿನ ದೊಡ್ಡ ಮಡಕೆ. ವರ್ಷಕ್ಕಾಗುವಷ್ಟು ಅಲಸಂದಿ, ಕುಸುಬಿ, ಎಳ್ಳು, ಗುರೆಳ್ಳು ಇತ್ಯಾದಿ ಧಾನ್ಯಗಳನ್ನು ಇದರಲ್ಲಿ ರಕ್ಷಿಸಿಡುತ್ತಾರೆ ೩. ಸ್ನಾನದ ನೀರು ತುಂಬುವ ಮಣ್ಣಿನ ದೊಡ್ಡ ಪಾತ್ರೆ. **ಇರೂ:** *ಕರ್ಬನ್ನು ಸಾಲು (ಬೀದ.ಜಿ), ಬಾನದ ಸಾಲು* (ಚಾಮ.ಜಿ)



ಅಡಕಲಸುಳಿ: ದನಗಳ ಹಣೆಯ ಮೇಲೆ ಒಂದರ ಮೇಲೊಂದಿರುವ ಮೂರು ಸುಳಿ. ಇದು ಅಶುಭ ಎಂಬ ನಂಬಿಕೆ ಇದೆ

ಅಡಕಲು: ೧. ಒಂದರ ಮೇಲೊಂದು ಪೇರಿಸಿ ಇಟ್ಟಿರುವುದು ೨. ರಾಶಿ; ಬಟ್ಟಲು; ಅತ್ತೆ ಒಡೆದ ಮಡಕೆ ಅಡಕಲಾಗೆ ಸೊಸೆ ಒಡೆದ ಮಡಕೆ ಅಂಗಳದಾಗೆ. ೩. ಎಮ್ಮೆಗಳಲ್ಲಿ ಕಾಣಿಸಿಕೊಳ್ಳುವ ಒಂದು ರೋಗ. ಸರಿಯಾಗಿ ಕಾಲು ಎತ್ತಿ ಹೆಜ್ಜೆ ಹಾಕುವುದಿಲ್ಲ. ಹಾಲು ಕರೆಯುವುದು ಕಡಿಮೆಯಾಗುತ್ತದೆ. ಹುಲ್ಲನ್ನು ಸರಿಯಾಗಿ ತಿನ್ನುವುದಿಲ್ಲ (ಮಂಡ್ಯ.ಜಿ)

ಅಡಕಲುಸಂದಿ: ಅಡಕಲು ಗಡಿಗೆಗಳನ್ನು ಒಟ್ಟಿದ ಇಕ್ಕಟ್ಟಾದ ಸ್ಥಳ (ಮಂಡ್ಯ.ಜಿ)

ಅಡಕಳ: ಭೂತನರ್ತಕ ಕುಣಿಯುವ ಅಲಂಕೃತವಾದ ಚಪ್ಪರದ ವೇದಿಕೆ (ದಕ.ಜಿ)

ಅಡಕಾತಿ: ಗೆಳತಿ; ಗೆಣೆಕಾತಿ

ಅಡಕಾವಲಿ: ಅಡ್ಡಗಾವಲಿ; ಪ್ರಮುಖವಾದ ಕಾಲುವೆಯಿಂದ ನೀರನ್ನು ಪಡೆಯುವ ಉಪಕಾಲುವೆ

ಅಡಕಿ: ೧. ಅಡಕೆ ೨. ಕೆರೆಯ ಪಕ್ಕದ ಗೋಮಾಳ

ಅಡಕಿ ಉಂಗುರ ಹುಡುಕೂದು: ವಧೂವರರು ಆಡುವ ಮದುವೆಯ ಸಡಗರದಾಟ. ಒಂದು ತಟ್ಟೆಯಲ್ಲಿ ಅಕ್ಕಿ ತುಂಬಿ ಅದರಲ್ಲಿ ಅಡಿಕೆ ಹೋಳು ಇಲ್ಲವೆ ಬಂಗಾರದ ಉಂಗುರ ಮುಚ್ಚಿಡುವರು. ವಧೂವರರಲ್ಲಿ ಯಾರು ಮೊದಲು ಹುಡುಕುವರೋ ಅವರು ಸಂಸಾರದಲ್ಲಿ ಮೇಲುಗೈ ಸಾಧಿಸುತ್ತಾರೆಂದು ಹೇಳುವ ರೂಢಿ (ಶಿವ.ಜಿ)

ಅಡಕಿಚೀಪುವುದು: ಜಿಪುಣತನ (ಧಾರ.ಜಿ)

ಅಡಕಿನ ಹಳ್ಳು: ಆಣೆಕಲ್ಲು (ಉಕ.ಜಿ)

ಅಡಕಿಲ: ನೋಡಿ– ಅಡಕಲು

ಅಡಕು (ಕ್ರಿ): ಒಂದರ ಮೇಲೊಂದು ಪೇರಿಸು; ಒಗ್ಗೂಡಿಸು. **ಪ್ರ:** ತೆನೆ ಅಡಕು, ಮೆದೆ ಅಡಕು. **ಇರೂ:** *ಅಡುಕು* **ನೋಡಿ–** ಅಡಕಲ ಗಡಗಿ

ಅಡಕುನಾತ: ಹೊಲಸು ವಾಸನೆ; ಕೆಟ್ಟವಾಸನೆ; ಗಬ್ಬುವಾಸನೆ. **ಪ್ರ:** ಹತ್ತಿರದಲ್ಲಿದ್ರೆ ಅಡಕುನಾತ ದೂರದಲ್ಲಿದ್ರೆ ಧೂಪದ ಗಮಲು (ಗಾದೆ). **ಇರೂ:** *ಅಡನಾತ*

ಅಡಕುಪುಟ್ಟನ ಗಿಡ: ಬ್ಯುರ್ಹೇವಿಯ ಡಿಫ್ಯೂಸ: ಒಂದು ಬಗೆಯ ಆಹಾರಯೋಗ್ಯ ಕಳೆಸಸ್ಯ **ಇರೂ:** *ಪುನರ್ನವ, ಸನಾದಿಕ*

ಅಡಕೆಎಲೆಯವರು: ಚಲವಾದಿಗಳಲ್ಲಿ ಒಂದು ಬೆಡಗು

ಅಡಕೆಕುಟ್ಟಾಣಿ: ಲೋಹ ಅಥವಾ ಮರದಲ್ಲಿ ಮಾಡಿರುವ ಎಲೆ ಅಡಿಕೆ ಕುಟ್ಟುವ ಸಾಧನ. ವಯಸ್ಸಾಗಿ ಹಲ್ಲು ಬಿದ್ದವರು ಇದನ್ನು ಬಳಸುತ್ತಾರೆ



ಅಡಕೆಕೊಟ್ಟೆ: ೧. ಅಡಕೆ ಪಟ್ಟೆಯ ಚೀಲ (ಉಕ.ಜಿ) ೨. ಅಡಕೆ ಮರದ ಹಾಳೆಗಳಿಂದ ಮಾಡಿದ ದೊನ್ನೆ (ಶಿವ.ಜಿ)

ಅಡಕೆಕೊಳೆ ರೋಗ: ಅಡಕೆ ಮರಕ್ಕೆ ಬರುವ ಒಂದು ರೋಗ

ಅಡಕೆಗೊಳಿಮರ: ಒಂದು ಜಾತಿಯ ಮರ

ಅಡಕೆತೊಟ್ಟು: ಅಡಕೆ ಹಿಂಗಾರದ ಹೊರಗಿನ ಕೊಟ್ಟೆ (ಶಿವ.ಜಿ). **ಇರೂ:** *ಅಡಕೆಪಟ್ಟೆ*

ಅಡಕೆದಸಿ: ಆಗ ತಾನೆ ಮೂಡುತ್ತಿರುವ ಅಡಕೆ ಹೊಂಬಾಳೆ

ಅಡಕೆದುಂಬಿ: ಅಡಕೆ ಬೆಳೆ ನಾಶಮಾಡುವ ಕೀಟ

ಅಡಕೆನ್ಯಾಯ: ಗೊಂದಲಿಗರ ನ್ಯಾಯನಿರ್ಣಯದ ಒಂದು ಬಗೆ

ಅಡಕೆಪಟ್ಟೆ: ಉದ್ದಕ್ಕೆ ಎಲೆಯಾಕಾರವಾಗಿರುವ ಅಡಕೆ ಗರಿಯ ಹಿಂಭಾಗ; ಅಡಕೆ ಹೊಂಬಾಳೆಯನ್ನು ಮುಚ್ಚಿರುವ ಬಿಳಿಯ ಪಟ್ಟೆ ಹಾಳೆ

ಅಡಕೆಯಾಟ: ಮದುವೆಯ ಸಮಯದಲ್ಲಿ ವಧೂವರರಿಗೆ ಆಡಿಸುವ ಆಟ (ಕೊಡ.ಜಿ) ನೋಡಿ– ಅಡಕಿ ಉಂಗುರ ಹುಡುಕೂದು

ಅಡಕೆಲೆ: ತಾಂಬೂಲ (ಬೆಂಗ್ರಾ.ಜಿ)

ಅಡಕೆಲೆಹಾಕ್ಕೊ: ಜನಪದಕಥೆಗಳಲ್ಲಿ ಸಂಭೋಗವನ್ನು ಸೂಚಿಸುವ ಅಲಂಕಾರಿಕ ಪದ

ಅಡಕೆಸೊಪ್ಪು: **ನೋಡಿ–** ಅಡ್ಡಿಕೆ ಗಿಡ

ಅಡಕೆಹೊಂಬಾಳೆ: ಇನ್ನೂ ಬಿರಿಯದ ಎಳೆಯ ಅಡಕೆ ಹೂಗೊಂಚಲು; ಇದನ್ನು ಮದುವೆ ಇತ್ಯಾದಿ ಶುಭ ಕಾರ್ಯಗಳಲ್ಲಿ ಕಳಸ ಮೊದಲಾದವುಗಳಿಗೆ ಇಡಲು ಬಳಸುತ್ತಾರೆ

ಅಡಕೊತ್ತು: ಕತ್ತರಿಯಂತೆ ಇರುವ ಅಡಿಕೆ ಕತ್ತರಿಸುವ ಸಾಧನ (ಗುಲ್ಬ.ಜಿ). **ಪ್ರ**: ಅಡಕೊತ್ತಾಗ ಅಡಕಿ ಸಿಕ್ಕಾಂಗ (ಗಾದೆ)

ಅಡಕೋಟಲೆ: ಸಂಕಷ್ಟ

ಅಡಕೋಳಿ: ಅತ್ತಿ ಕುಟುಂಬಕ್ಕೆ ಸೇರಿದ ಹಣ್ಣುಬಿಡುವ ಮರ (ಉಕ.ಜಿ)

ಅಡಕ್ಲು: ಅಡುಕಲು; ಮಣ್ಣಿನಿಂದ ಮಾಡಿದ ದೊಡ್ಡ ಪಾತ್ರೆ (ಉಕ.ಜಿ) **ಇರೂ:** *ಅಳಗೆ*

ಅಡಗಚ್ಚು ಕಡಿ: ಗದ್ದೆಯ ಅಂಚು ಕತ್ತರಿಸು, ಬದು ಸರಿ ಮಾಡು

ಅಡಗಟಗಿ/ಅಡ್ಡಕಟ್ಟಿಗೆ: ಎತ್ತಿನ ಗಾಡಿ ಹೊಡೆಯುವವನು ಕೂಡುವ ಸ್ಥಳದಲ್ಲಿ ಎಡಕ್ಕೂ ಬಲಕ್ಕೂ ಇರುವ ಕಟ್ಟಿಗೆ (ಗುಲ್ಬ.ಜಿ)

ಅಡಗತೆ: ೧. ಪುರಾಣ, ಕೀರ್ತನೆಗಳಂಥ ಮುಖ್ಯ ಕಥಾನಕಗಳ ನಡುವೆ ಬರುವ ಚಿಕ್ಕ ಚಿಕ್ಕ ಉಪಕಥೆಗಳು (ಬೆಂಗ.ಜಿ) ೨. ಪ್ರಸಂಗಾನುಸಾರ ಹೇಳುವ ಕಥೆ; ಕಿರುಗಥೆ; ಉಪಕಥೆ (ಬೆಳ.ಜಿ) ೩. ಒಡಗತೆ ಹೇಳಿದಾಗ ಉತ್ತರ ಹೇಳಲು ಬರದಿದ್ದರೆ ಅದಕ್ಕೊಂದು ಕತೆ ಹೇಳಿ ಉತ್ತರ ಪಡೆಯುವುದು. ಇದು ಹಾಸ್ಯಪ್ರಧಾನವಾಗಿರುತ್ತದೆ (ಬಿಜಾ.ಜಿ)

ಅಡಗಪ್ಪುಮಾಡು (ಕ್ರಿ): ೧. ಅಡಗಿಸು ೨. ಮುಚ್ಚಿಸು

ಅಡಗಲುದಮ್ಮ: ವರನ ಜೊತೆಯಲ್ಲಿರುವ ಸ್ನೇಹಿತ. **ಇರೂ:** *ಮ್ಯಾಟ್ಲೆಗಂಡು (ಮೈಸೂ.ಜಿ)*

ಅಡಗಲುದಿಮ್ಮಿ: ವಧು ತನ್ನ ಗಂಡನ ಮನೆಗೆ ಹೋಗುವಾಗ ಜೊತೆಯಲ್ಲಿ ಹೋಗುವ ಹೆಣ್ಣು

ಅಡಗಲ್‌ಮರ: ಅಡಿಗಲ್ಲಿನ ಕೆಳಗಿರುವ ಮರ. **ಇರೂ:** *ಅಡಗೊಂಟು*

ಅಡಗಾರ: ಅನ್ನ ಬಸಿಯುವ ಪಾತ್ರೆ (ಚಿಮ.ಜಿ)

ಅಡಗಾಲ ಬಡಿಯುವುದು: ತೊಡರುಗಾಲು ಹಾಕುವುದು; ಒಬ್ಬ ನಡೆಯುವಾಗ ಇನ್ನೊಬ್ಬ ತನ್ನ ಕಾಲನ್ನು ಅವನ ಕಾಲಿಗೆ ಅಡ್ಡಕೊಟ್ಟು ಬೀಳಿಸುವುದು (ಶಿವ.ಜಿ). **ಇರೂ:** *ಅಡ್ಡಗಾಲು (ಮೈಸೂ.ಜಿ)*

ಅಡಗಾಳು: ಅಕ್ಕಡಿ ಕಾಳು; ದ್ವಿದಳ ಧಾನ್ಯ

ಅಡಗು (ಕ್ರಿ): ೧. ಮರೆಯಾಗು; ಬಚ್ಚಿಟ್ಟುಕೊ; ಅಡಗಿಕೊ (ಧಾರ.ಜಿ) ೨. ನಾಶವಾಗು. **ಪ್ರ**: ನಿನ್‌ಸೊಲ್ಲಡಗ (ಬೈಗುಳ) (ನಾ) ೩. ಮಾಂಸ (ಬೆಂಗ್ರಾ.ಜಿ)

ಅಡಗೂಲಜ್ಜಿ/ಅಡಗೋಲಜ್ಜಿ: ಅಡಿಗೆ ಮಾಡುವ ಮುದುಕಿ; ಜನಪದ ಕತೆಗಳಲ್ಲಿ ಬರುವ ಒಂದು ಪಾತ್ರ, ಮುಖ್ಯ ಪಾತ್ರಕ್ಕೆ ಈಕೆ ಸಹಾಯಕಳಾಗಿರುತ್ತಾಳೆ (ಮಂಡ್ಯ.ಜಿ/ಮೈಸೂ.ಜಿ). **ಇರೂ:** *ಅಡೂಗೂಳಜ್ಜಿ*

ಅಡಗೂಳಿ: ೧. ಮದುವೆಯಾಗಿ ಗಂಡನ ಮನೆಗೆ ಹೋಗುವ ಮಗಳಿಗೆ ತವರುಮನೆಯವರು ನೀಡುವ ರಾಸುಗಳ ಬಳುವಳಿ (ಮಲೆ) ೨. ಜೀತ

ಅಡಗೆಡೆ: ಅಡ್ಡಬೀಳು

ಅಡಗೊಡ್ಡಿ: ನಾಟಕದ ಹಾಸ್ಯಪಾತ್ರ; ದೂತಿ; ದಡ್ಡತನದಿಂದ ಹೊಮ್ಮುವ ಹಾಸ್ಯ (ಬಾಗ.ಜಿ). **ಇರೂ:** *ಅಡಗೊಟ್ಟಿ*

ಅಡಗೋಲಜ್ಜಿ ಕಥೆ: ಕಟ್ಟುಕಥೆ; ನಂಬಲು ಸಾಧ್ಯವಿಲ್ಲದ ಕಾಲ್ಪನಿಕ ಕಥೆ **ಪ್ರ**: ನಿನ್ನ ಅಡುಗೋಲಜ್ಜಿ ಕಥೇನೆಲ್ಲ ನನ್ನ ಹತ್ರ ಹೇಳ್ಬೇಡ

ಅಡಗೋಲಜ್ಜಿ ಪುರಾಣ: **ನೋಡಿ–** ಅಡಗೋಲಜ್ಜಿ ಕಥೆ

ಅಡಗ್ಲು: **ನೋಡಿ–** ಅಡಿಗಲ್ಲು

ಅಡಗ್ವಾಡಿ: ಬಂಜೆ (ಗುಲ್ಬ.ಜಿ)

ಅಡಚರೆ: ಪೊದೆ ಜಾತಿಯ ಸಸ್ಯ; ಕಸಪೊರಕೆಗಳನ್ನು ಮಾಡಲು ಇದು ಬಳಕೆಯಾಗುತ್ತದೆ (ಉಕ.ಜಿ)

ಅಡಚಿ: ಬಡಗಿಗಳು ಬಳಸುವ ಸಲಕರಣೆ (ಧಾರ.ಜಿ) ಇರೂ: *ಕೊಡತಿ (ಮೈಸೂ.ಜಿ)*

ಅಡಚೀಣ: ೧. ಹಗೇವಿನ ಒಳಭಾಗಕ್ಕೆ ಕಣಿಕೆಯಿಂದ ಕಟ್ಟುವುದು ೨. ಅಡಚಣೆ; ತೊಂದರೆ; ಒತ್ತಡ (ಕೋಲಾ.ಜಿ/ಬೀದ.ಜಿ). **ಇರೂ:** *ಅಡಚುಣ*

ಅಡಚು: ೧. ಹೊಡೆ; ಏಟು ಕೊಡು ೨. ಮರ ಹತ್ತು (ದಕ.ಜಿ). **ಇರೂ:** *ಅಡಸು*

ಅಡಣ: ಗುರಾಣಿ; ಆಯುಧ (ಕೋಲಾ.ಜಿ). **ಇರೂ:** *ಅಡ್ಡಣೊ, ಅಡ್ಡನೊ, ಅಡ್ಡಣಿ, ಅಡ್ಡಣೆ*

ಅಡತಾರ: ತೊಂದರೆ; ಅಡ್ಡಿ (ಬಳ್ಳಾ.ಜಿ). **ಪ್ರ:** ಬೆಂಗಳೂರಿಗೆ ಹೋಗುವುದು ಅಡತರ ಆಗಿ ಹೋಯಿತು

ಅಡತಿ: ೧. ಧಾನ್ಯವ್ಯಾಪಾರದ ಸಗಟು ಅಂಗಡಿ; ಮಂಡಿ; ದಲ್ಲಾಳಿಯ ಅಂಗಡಿ ೨. ಲಾಭ

ಅಡತಿಸಾಲ: ವ್ಯಾಪಾರಿಗಳಿಂದ ಪಡೆಯುವ ಮುಂಗಡ ಹಣ

ಅಡದಕ್ಕ: ಹೆಣ ಹೊರುವ ಸಾಧನ; ಚಟ್ಟ; ಸಿದಿಗೆ (ಬೀದ.ಜಿ)

ಅಡದಬ್ಬೆ: ನೊಗದಷ್ಟು ಉದ್ದವಾಗಿರುವ ಬಿದಿರು ಅಥವ ಕಟ್ಟಿಗೆಯ ತುಂಡು

ಅಡದಾರ: ಅಡ್ಡದಾರ

ಅಡದಿ: ಬಿಟ್ಟಿ ಬಿದ್ದಿರುವ (ಚಿತ್ರ.ಜಿ). **ಇರೂ:** *ಹಡಬಿಟ್ಟಿ (ಮೈಸೂ.ಜಿ)*

ಅಡದು: ಚರ್ಮರೋಗ

ಅಡದೆ: ಆಯ; ವರ್ಷವಿಡೀ ಮಾಡಿದ ಕೆಲಸಕ್ಕೆ ತಳವಾರ, ಅಗಸ, ಕ್ಷೌರಿಕರಿಗೆ ಸುಗ್ಗಿಯ ಸಮಯದಲ್ಲಿ ನೀಡುವ ಧಾನ್ಯರೂಪದ ಪ್ರತಿಫಲ

ಅಡದೊಂಡ್ಗ್ಯ: ಹಿತಮಿತ ಆಕಾರವಿಲ್ಲದ; ಮಿತಿಯಿಲ್ಲದ ಗಾತ್ರ (ಬೆಳ.ಜಿ). **ಪ್ರ:** ಕುಂಬಕರ್ಣ ದೊಡ್ಡ ಅಡದೊಂಡ್ಗ್ಯ ಮನುಷ್ಯ

ಅಡನಲ್ಕೆ: ಭೂತನರ್ತಕ ಅಡ್ಡ ಹೆಜ್ಜೆ ಹಾಕುತ್ತಾ ಕುಣಿಯುವ ಕ್ರಮ (ದಕ.ಜಿ)

ಅಡನಾಡಿ: ಅನಕ್ಷರಸ್ಥ; ತಿಳಿವಳಿಕೆ ಇಲ್ಲದವನು (ಗುಲ್ಬ.ಜಿ)

ಅಡನಾತ: **ನೋಡಿ–** ಅಡಕುನಾತ

ಅಡಪ/ಹಡಪ: ೧. ಅಡಕೆ ಎಲೆಯ ಚೀಲ; ಎಲೆ ಸಂಚಿ ೨. ಕ್ಷೌರಿಕರ ಪರಿಕರಗಳನ್ನು ಇಡುವ ಚೀಲ ಅಥವಾ ಪೆಟ್ಟಿಗೆ; ೩. ರಾಜನಿಗೆ ಎಲೆ ಅಡಿಕೆ ಪೂರೈಸುವ ವೃತ್ತಿಯವನು ೪. ನವೆ; ತುರಿಕೆ; ಕಡಿತ ೫. ಕಜ್ಜಿ; ಒಂದು ಬಗೆಯ ಬೊಕ್ಕೆ ೬. ಪ್ರಾಣಿಗಳಿಗೆ ಬರುವ ಚರ್ಮರೋಗ (ಬೆಳ.ಜಿ) ೭. ಬಂಟರ ಕುಲನಾಮ (ದಕ.ಜಿ)

ಅಡಪಟ್ಟಿ: ೧. ಪೀಠ; ದೇವತಾಮೂರ್ತಿಯ ತಳಭಾಗ ೨. ನಡುಪಟ್ಟಿ; ಡಾಬು

ಅಡಪ ಮುಚ್ಚುವುದು: ಬಿಗಿಯಾಗಿ ಮುಚ್ಚುವುದು; ಎಡೆಯಿಲ್ಲದಂತೆ ಮುಚ್ಚುವುದು (ದಕ.ಜಿ)

ಅಡಪವಳ: ರಾಜನಿಗೆ ಎಲೆ ಅಡಿಕೆ ಪೂರೈಸುವ ವೃತ್ತಿಯವರು ಮತ್ತು ಕ್ಷೌರಿಕ ವೃತ್ತಿಯವರು

ಅಡಪು: ನಾಯಿಗೆ ಹತ್ತುವ ಒಂದು ರೀತಿಯ ಚರ್ಮರೋಗ (ಧಾರ.ಜಿ)

ಅಡಪುಟಿನ ಸೊಪ್ಪು: ಬೆರಕೆಸೊಪ್ಪಿನಲ್ಲಿ ಬಳಸುವ ಒಂದು ಆಹಾರಯೋಗ್ಯ ಕಳೆಸಸ್ಯ

ಅಡಪೊಳಿ: ಮಾತಿನ ಮಲ್ಲ (ದಕ.ಜಿ)

ಅಡಪ್ಪ: ಒಂದು ಜಾತಿಯ ಮೀನು (ದಕ.ಜಿ)

ಅಡಪ್ಪು: ಉಳುಮೆ

ಅಡಬಡಿಸು: ಆತುರಪಡು. **ಪ್ರ:** ಗಾಬರಿಪಟ್ಟು ಹುಡುಗ ಅಡಬಡಿಸಿ ಎದ್ದ (ಶಿವ.ಜಿ)

ಅಡಬಡೆ: ಪೋಲಿ; ಅಗಡು; ಬುದ್ಧಿಹೀನ

ಅಡಬದ್ದಿ: ಎತ್ತಿನ ಬಂಡಿಯ ಒಂದು ಬಿಡಿಭಾಗ. **ಇರೂ:** *ಅಡಲ್ಲು*

ಅಡಬಳ: ಮಾಂಸದ ಅಡುಗೆ ಮಾಡುವವ

ಅಡಬಿ: ಅಡವಿ; ಕಾಡು

ಅಡಬೆ: ಹಡಬೆ; ಒಂದು ಬೈಗುಳಪದ (ದಕ.ಜಿ) **ಪ್ರ:** ೧. ಅಡಬೆ ನನ್ಮಗನೆ ೨. ಇದೆಲ್ಲೊ ಅಡಬೆ ಜಾತೀದು

ಅಡಭೋಗ್ಯ: ಹಣ ಪಡೆದು ಭೂಮಿಯ ಸಾಗುವಳಿ ಹಕ್ಕನ್ನು ನೀಡುವುದು

ಅಡಮಾನ: ಸಾಲಕ್ಕಾಗಿ ವಸ್ತುವನ್ನು ಒತ್ತೆ ಇಡುವುದು.

ಅಡಮಾಳ: ನಿರ್ಜನ ಪ್ರದೇಶ; ಬಯಲು; ಮೈದಾನ; ಭಯಾನಕ ಅರಣ್ಯ. **ಇರೂ:** *ಅಡ್ಮಾಳ (ಉಕ.ಜಿ)*

ಅಡಮುಟಗಾರ: ಸುಳ್ಳುಗಾರ (ಕೊಡ.ಜಿ)

ಅಡಮುಟ್ಟ: ೧. ಹಟಮಾರಿ; ಒರಟ; ಮೊಂಡ ೨. ಎಡವಟ್ಟ

ಅಡಮುಟ್ಟ ಶಿಷ್ಯ: ಗುರುವನ್ನು ಮೀರಿಸುವ ಶಿಷ್ಯ (ಬಿಜಾ.ಜಿ)

ಅಡಮುರಿ: ಗರಗಸ

ಅಡಮೋಟ: ತಿದ್ದುವವರಿಲ್ಲದೆ ಬೆಳೆದವನು; ಅನಾಗರಿಕ

ಅಡಯಾಳ: ಗುರುತು; ಕುರುಹು

ಅಡರಗಚ್ಚು: ಜಗಳ ಹೊಡೆದಾಟಗಳಿಗೆ ತೊಡಗು

ಅಡರಸು (ಕ್ರಿ): ಆರೋಪಿಸು; ಹೀಯಾಳಿಸು (ಗುಲ್ಬ.ಜಿ)

ಅಡರಾಡ: ೧. ಅಲೆದಾಡು ೨. ಸಿಕ್ಕಸಿಕ್ಕವರಲ್ಲಿ ಯಾಚಿಸು (ಬಳ್ಳಾ.ಜಿ)

ಅಡರು (ಕ್ರಿ): ೧. ಹತ್ತು; ಏರು ೨. ಅಪ್ಪಿಕೊಳ್ಳು ೩. ಆಕ್ರಮಿಸು; ಹೆಗಲೇರು. **ಪ್ರ:** ಸಿಕ್ರೆ ಸಾಕು ಅಡ್ರುಕೊಂಡ್ ಬಿಡ್ತಾನೆ ೪. ಹರಡು (ಮಂಡ್ಯ.ಜಿ). **ಇರೂ:** *ಅಡಚು, ಅಡಸು, ಅಡರೇರು (ನಾ)* ೫. ಗಿಡದ ಸಣ್ಣ ಗೆಲ್ಲು (ದಕ.ಜಿ)

ಅಡರುಗಟ್ಟು: ಪಂಚೆ ಮೇಲಕ್ಕೆ ಕಟ್ಟು

ಅಡರುಗಡಿ: ಏರುಹಾದಿ

ಅಡರುಗಾಲಹಾಕು: ಅಡೆತಡೆಯೊಡ್ಡು; ತೊಂದರೆ ಮಾಡು (ಧಾರ.ಜಿ)

ಅಡರುಯ್ದು: ಸೇರಿಸಿದ; ಒಟ್ಟುಗೂಡಿಸಿದ; ಗುಡ್ಡೆಮಾಡಿದ; ರಾಶಿಹಾಕಿದ (ಚಿತ್ರ.ಜಿ)

ಅಡಲ್: ಒಂದು ಬಗೆಯ ಮೀನು (ದಕ.ಜಿ)

ಅಡಲಿಕ್ಕು: ಸಗಣಿ ಹಾಕು (ಶಿವ.ಜಿ)

ಅಡಲು/ಅಡ್ಲು: ಹಂದರ; ಚಪ್ಪರ. **ಪ್ರ:** ಬಳ್ಳಿಗೆ ಒಂದು ಅಡಲು ಹಾಕಬೇಕಾಗಿತ್ತು

ಅಡಲುಕಾಯಿ: ಪಡುವಲಕಾಯಿ (ಮಂಡ್ಯ.ಜಿ)

ಅಡಲುದಂಗಿ: ನೋಡಿ– ಅಡ್ಲುದಂಗಿ

ಅಡಲುದಮ್ಮ: ನೋಡಿ– ಅಡ್ಲುದಮ್ಮ

ಅಡಲೆ: ದಲ್ಲಾಳಿ; ಮಧ್ಯವರ್ತಿ

ಅಡವಾರಿ: ಕುಂಟೆಯಿಂದ ಹರಗಿ ಎಬ್ಬಿಸಿದ ಮಣ್ಣಿನ ದಿಂಡು (ಬಳ್ಳಾ.ಜಿ)

ಅಡವಿಅಂಗಡಿ: ದಲಾಲಿ ಅಂಗಡಿ

ಅಡವಿಅಂಟರಿಕೆ: ಒಂದು ಬಗೆಯ ಅಂಟುಪುರಲೆ ಹುಲ್ಲು. ಕಾಡಿನಲ್ಲಿ ಹೇರಳವಾಗಿ ಬೆಳೆಯುತ್ತದೆ. ಇದು ಪ್ರಾಣಿಗಳ ಮೇವು

ಅಡವಿಉದ್ದು: ಒಂದು ಬಗೆಯ ಕಳೆಸಸ್ಯ

ಅಡವಿಉಲ್ಲಂಕ್ಕಿ: ಒಂದು ಬಗೆಯ ಹಕ್ಕಿ (ಚಿತ್ರ ನೋಡಿ)

ಅಡವಿಉಳ್ಳಗಡ್ಡಿ: ಈರುಳ್ಳಿಯನ್ನು ಹೋಲುವ ಒಂದು ಜಾತಿಯ ಹುಲ್ಲು

ಅಡವಿಕೀಚುಗ: ಒಂದು ಬಗೆಯ ಹಕ್ಕಿ (ಚಿತ್ರ ನೋಡಿ)

ಅಡವಿಕುರುಬರು: ಕುರಿಗಳ ಜೊತೆ ದನಗಳನ್ನೂ ಕಾಯುವ ಪಂಗಡ. ಇವರಲ್ಲಿ ಶಾಸ್ತ್ರ ಹೇಳುವವರು, ಕವಲೆತ್ತಿನವರು, ಬಾಳಸಂತರು, ದುರಗಮುರಗಿಯವರು ಮುಂತಾದ ಒಳಪಂಗಡಗಳಿವೆ (ಬೆಂಗ.ಜಿ)

ಅಡವಿಗದ್ದೆಗೊರವ: ಒಂದು ಬಗೆಯ ಹಕ್ಕಿ (ಚಿತ್ರ ನೋಡಿ)

ಅಡವಿಗಿ ಹಾಕು: ಅಡೆ ಹಾಕು. ಬಲಿತು ಪಕ್ವವಾದ ಸೀತಾಫಲ, ಸಪೋಟ, ಮಾವಿನ ಕಾಯಿಗಳನ್ನು ಒಣಗಿಸಿದ ಭತ್ತದ ಹುಲ್ಲಿನಲ್ಲಿ ಕೆಲವು ದಿನಗಳ ಕಾಲ ಮುಚ್ಚಿಡುತ್ತಾರೆ. ಇದರಿಂದ ಕಾಯಿ ಬೇಗನೆ ಹಣ್ಣಾಗುತ್ತದೆ (ಶಿವ.ಜಿ)

ಅಡವಿಗುರೆಳ್ಳು: ಒಂದು ಜಾತಿಯ ಹುಲ್ಲು; ಕಾಡು ಹುಚ್ಚೆಳ್ಳು; ಬೆಳೆಗಳ ನಡುವೆ ಬೆಳೆಯುವ ಹುಲ್ಲು; ದನಗಳ ಮೇವು

ಅಡವಿಗೋರಂಟಿ: ಒಂದು ಬಗೆಯ ಪೊದೆಸಸ್ಯ (ಕೋಲಾ.ಜಿ)

ಅಡವಿಚಂಚ: ಒಂದು ಬುಡಕಟ್ಟು ಸಮುದಾಯ; ಕಾಡು ಚೊಂಚ ಇರೂ: *ಅಡುಚೆಂಚ (ಧಾರ.ಜಿ)*

ಅಡವಿಡು: ಸಾಲ ಪಡೆಯಲು ಬೆಲೆ ಬಾಳುವ ವಸ್ತುವನ್ನು ಒತ್ತೆಯಾಗಿಡು

ಅಡವಿತಗಟೆ: ಒಂದು ಬಗೆಯ ಕಾಡಿನ ಗಿಡ. ಪ್ರಾಣಿಗಳ ಮೇವು

ಅಡವಿತೆಂಗಿನಕಾಯಿ: ೧. ಸುಡುಗಾಡು ಸಿದ್ಧರ ಜೋಳಿಗೆಯಲ್ಲಿರುವ ಒಂದು ವಿಶೇಷ ವಸ್ತು ೨. ತೆಂಗಿನಕಾಯಿಯನ್ನು ಹೋಲುವ ಕಡಳೆಕಾಳು ಗಾತ್ರದ ಕಾಯಿ ಬಿಡುವ ಒಂದು ಕಾಡುಹುಲ್ಲು (ಕೊಪ್ಪ.ಜಿ)

ಅಡವಿನತ್ತಿಂಗ: ಒಂದು ಬಗೆಯ ಹಕ್ಕಿ (ಚಿತ್ರ ನೋಡಿ)

ಅಡವಿಬಡ್ಡಿಪೂಜೆ: ಅಡವಿ ಬೊಡ್ಡೆಪೂಜೆ. ವ್ಯವಸಾಯಕ್ಕೆ ಸಂಬಂಧಿಸಿದ ಒಂದು ಆಚರಣೆ. ಬೇಸಾಯಕ್ಕೆ ಬಳಸುವ ಕೂರಿಗೆ ಹಾಗೂ ಕೂರಿಗೆಯನ್ನು ತಯಾರಿಸುವ ಸಲಕರಣೆಗಳಿಗೆ ಬಡಗಿಯು ಸಲ್ಲಿಸುವ ಮೊದಲ ಪೂಜೆ

ಅಡವಿಬಿಡುವುದು: ಬೇಸಿಗೆ ಕಾಲದಲ್ಲಿ ದನಗಳನ್ನು ಕಾವಲು ಕಾಯದೆ ಹಾಗೇ ಮೇಯಲು ಕಾಡಿಗೆ ಬಿಡುವುದು (ಚಿಮ.ಜಿ)

ಅಡವಿಬೆಂಡೆ: ಒಂದು ಬಗೆಯ ಕಾಡುಗಿಡ (ಕೋಲಾ.ಜಿ)

ಅಡವಿಲವಂಗಪಟ್ಟೆ: *ಸಿನಮೋಮಮ್ ಕ್ಯಾಂಫರ ಇನರ್ಸ್*: ಎಲಗದ ಮರ

ಅಡವಿ ಸಿಪಿಲೆ: ಒಂದು ಬಗೆಯ ಹಕ್ಕಿ (ಚಿತ್ರ ನೋಡಿ)

ಅಡವಿಸೊಗಸಿ: ಸಬ್ಬಸಿಸಗೆಯನ್ನು ಹೋಲುವ ಒಂದು ಬಗೆಯ ಹುಲ್ಲು

ಅಡವಿಹಲಸಂದಿ: ಹಲಸಂದೆಯನ್ನು ಹೋಲುವ ಆದರೆ ಆಹಾರಯೋಗ್ಯವಲ್ಲದ ಒಂದು ಕಾಡುಗಿಡ

ಅಡವು: ೧. ಸಾಕಷ್ಟು; ಸಮೃದ್ಧ; ಈಡು. **ಪ್ರ**: ೧. ಅವರಲ್ಲಿ ಅಡವಾದ ಸಂಪತ್ತಿದೆ ೨. ತಡವಾದರೂ ಒಳ್ಳೆ ಅಡವಾಗಿ ಇಕ್ಕಿದರು ೨. ನ್ಯಾಸ. **ಪ್ರ**: ಒಡವೆ ಅಡವಿಟ್ಟು ಸಾಲ ತರುತ್ತಾರೆ ೩. ಆನಿಕೆ. **ಪ್ರ**: ಬಡಿಗ ಮರಕ್ಕೆ ಉಜ್ಜುವಾಗ ಮರದ ಕೆಳಗೆ ಅಡವು ಕೊಡುತ್ತಾನೆ ೪. ಒತ್ತೊತ್ತಾಗಿ ಬೆಳೆದ ಫಸಲು (ಧಾರ.ಜಿ)

ಅಡಸರ: ಗುಡ್ಡದ ಓರೆ; ವಾರಿ (ಉಕ.ಜಿ)

ಅಡಸರಣೆ: ಕಸ; ಅನಗತ್ಯ ಸಲಕರಣೆ (ದಕ.ಜಿ)

ಅಡಸಲ: ೧. ನೇಗಿಲನ್ನು ಬಿಗಿಗೊಳಿಸಲು ಹೊಡೆವ ಮರದ ಚಕ್ಕೆ; ಬದಿಚಕ್ಕೆ. ೨. ಒಂದು ಜಾತಿಯ ತೊಪ್ಪಲು ಗಿಡ (ಬೆಂಗ್ರಾ.ಜಿ) ೩. ಹಾಲು ಹಿಂಡುವಾಗ ಒದೆಯುವ ದನದ ಕಾಲಿಗೆ ಕಟ್ಟುವ ಸಾಧನ ೪. ಕಟ್ಟಿಗೆಯ ತುಂಡು (ಬಳ್ಳಾ.ಜಿ) **ಇರೂ**: *ಅಡ್ಸಲನ ಬೆಣೆ* ೫. ಅವಸರವಸರವಾಗಿ; ಗಡಬಡಿಸಿ

ಅಡಸಲಬಡಸಲ: ೧. ಸರಿಯಾಗಿ ನುರಿಸದೆ; ಆತುರದ ತಿನ್ನುವಿಕೆ. **ಪ್ರ**: ಕೆಲವರು ಅಡಸಲು ಬಡಸಲು ತಿನ್ನುತ್ತಾರೆ ೨. ಸಂದಿಗೊಂದಿ (ಗುಲ್ಬ.ಜಿ)

ಅಡಸಲು: ಇಲಿಬೋನು. **ಇರೂ**: *ಅಡಸಲಿಗೆ*



ಅಡಸಾಲಿ: ಕಳ್ಳಿ; ಕಳ್ಳಿಯ ಬೇಲಿ (ಬಿಜಾ.ಜಿ)

ಅಡಸಾಳ: ಅಸಡ್ಡೆಯ ಮಾತು; ಬದಲಿ ಮಾತು; ದಾರಿತಪ್ಪಿಸುವ ಮಾತು

ಅಡಸು (ಕ್ರಿ): ೧. ಹೊಡೆ ೨. ಅಂಟಿಕೊಳ್ಳು; ಸೇರಿಸು ೩. ಮೇಲೆಬೀಳು ೪. ಒತ್ತಿಹಿಡಿ; ಬಿಗಿಯಾಗಿ ಒತ್ತು ೫. ತುರುಕು (ಕೊಡ.ಜಿ) (ನಾ) ೬. ಕೆಸರು ತುಂಬಿದ ಜಾಗ (ಚಿಮ.ಜಿ). **ಇರೂ**: *ಅಡಚು*

ಅಡಸೂನಗಿ: ದಪ್ಪ ಕಡಿಮೆ ಇರುವ ಒಣಗಿದ ಜೋಳದ ದಂಟುಗಳ ಸಣ್ಣ ಸಿವುಡು ಕಟ್ಟಿ ಈ ಸಿವುಡುಗಳನ್ನು ಹಗೇವಿನ ಗೋಡೆಗೆ ಸುತ್ತಲೂ ವರ್ತುಲಾಕಾರದಲ್ಲಿ ಇಡುವ ವಿಧಾನ (ಶಿವ.ಜಿ)

ಅಡಸೋಗೆ/ಅಡ್ಡೆಸೋಗೆ/ಆಡುಸೋಗೆ: ಅಡತೋಡ ವಾಸಿಕ; ಬೇಲಿಯ ಮೇಲೆ ಬೆಳೆಯುವ ಸೊಪ್ಪು. ಕೀಲು ನೋವು ಸಂಧಿವಾತಕ್ಕೆ, ಕಫ ದಮ್ಮು ನಿವಾರಣೆಗೆ ಮದ್ದಾಗಿ ಬಳಸುತ್ತಾರೆ. ಇದರ ರಸ ಮೂಗುಬಾಯಿಯಿಂದ ರಕ್ತ ಬಸರುವುದನ್ನು ತಡೆಯುತ್ತದೆ. (ಉಕ.ಜಿ) (ಚಿತ್ರ ನೋಡಿ). **ಇರೂ**: *ಅಡ್ಡಸರದ ಗಿಡ*

ಅಡಸ್ಲು ಕಟ್ಟುವುದು: ಮಲೆನಾಡಿನ ಬುಡಕಟ್ಟು ಜನಾಂಗಗಳಲ್ಲಿ ಮರದ ಕೋಲನ್ನು ಕತ್ತರಿ ಆಕಾರದಲ್ಲಿ ಕಟ್ಟಿ ಶಿಕಾರಿ ಮಾಡುವ ಕ್ರಮ. (ಚಿಮ.ಜಿ)

ಅಡಹಾಳು: ದ್ವಿದಳಧಾನ್ಯ (ಮೈಸೂ.ಜಿ/ಚಾಮ.ಜಿ)

ಅಡಹು: ಆಸರೆ

ಅಡಾಣಿ: ೧. ತೀರಾ ಉಪಯೋಗವಿಲ್ಲದ್ದು; ಒರಟು; ಮೊಂಡು ೨. ಗಂಡುಬೀರಿ; ಒಂದು ಬೈಗುಳ (ಮಂಡ್ಯ.ಜಿ)

ಅಡಾಣಿಗೆ: ಹೆರಿಗೆ (ಚಿತ್ರ.ಜಿ). **ಪ್ರ**: ಸೂಲಗಿತ್ತಿರು ಬಂದು ಅಡಾಣಿಗೆ ಮಾಡಿದ್ರು

ಅಡಾಣಿಬೊಳ್ಳ: ದೊಡ್ಡ ಪ್ರವಾಹ (ದಕ.ಜಿ)

ಅಡಾಬಾಯಿ: ಅಲ್ಲದ್ದನ್ನು ಆಡುವ; ಇತರರ ಮಾತಿನ ನಡುವೆ ಮಾತನಾಡು; ಅಪಶಕುನದ ಮಾತಾಡು (ಬಿಜಾ.ಜಿ)

ಅಡಾಮಡಾ: ಅವಸರ; ಅಸ್ತವ್ಯಸ್ತ; ಬೇಕಾಬಿಟ್ಟಿ; ಏನನ್ನಾದರೂ ಹುಡುಕುವಾಗ ಸಾಮಾನುಗಳನ್ನು ಕಿತ್ತು ಬೇಕಾಬಿಟ್ಟಿ ಚೆಲ್ಲಾಡುತ್ತಾ ಇರುವುದು. **ಪ್ರ**: ಏನ ಅಡಾಮಡಾ ಹುಡಕಾಕ ಹತ್ತೀದಿಲಾ (ಶಿವ.ಜಿ)

ಅಡಾವಣೆ: ಮುಯ್ಯಿಗೆ ಮುಯ್ಯಿ; ಎದುರೇಟು (ಬಳ್ಳಾ.ಜಿ)

ಅಡಾವು: ವಾರ್ಷಿಕ ಜಮಾಖರ್ಚಿನ ವಿವರ (ಬಳ್ಳಾ.ಜಿ). **ಇರೂ**: *ಅಢಾವೆ*

ಅಡಾವುಡಿ: ೧. ಹಾವಳಿ; ದಾಂಧಲೆ. ಗಲಾಟೆ; ಗಲಭೆ. **ಪ್ರ**: ಅವನ ಅಡಾವುಡಿ ಸಾಕಾಗಿ ಹೋಗದೆ ೨. ಗಾಂಭೀರ್ಯವಿಲ್ಲದ ೩. ಬೇಜವಾಬ್ದಾರಿ ಮನುಷ್ಯ ೪. ಆತುರ ೫. ಹದ್ದು ಮೀರಿದ ವ್ಯಕ್ತಿ ೬. ಒರಟುತನ (ಮೈಸೂ.ಜಿ)

ಅಡಾಸನ: ೧. ಕುಳಿತುಕೊಳ್ಳುವ ಮಣೆ ೨. ಸಮೃದ್ಧ ಊಟದ ವ್ಯವಸ್ಥೆ (ಬಳ್ಳಾ.ಜಿ)

ಅಡಾಸು: ೧. ಅವಶ್ಯಕತೆ ಉಂಟಾಗು; ಅಗತ್ಯಬೀಳು ೨. ಉಪಯೋಗಿಸಲು ಯೋಗ್ಯವಲ್ಲದಷ್ಟು ಹಾಳಾದದ್ದು (ಬಿಜಾ.ಜಿ)

ಅಡಿ: ೧. ಜೀತ ೨. ಬಿದಿರಿನ ಬಾಗಿಲು; ತಟ್ಟಿ ೩. ಅಳೆಯುವ ಮಾನದಂಡ ೪. ಕೆಳಗೆ ೫. ಅಗೆ; ನೆಡುವ ಭತ್ತದ ಸಸಿಯನ್ನು ಕಿತ್ತು ತೆಗೆದ ಸ್ಥಳ ೬. ಬಾಳೆ ಮಾವು ಇತ್ಯಾದಿ ಹುಲ್ಲಿನಲ್ಲಿಟ್ಟು ಮಾಗಿಸಿ ಹಣ್ಣು ಮಾಡುವ ಮನೆ ೭. ತಂಬಾಕು ಹದಗೊಳಿಸುವ ತಗ್ಗು (ಉಕ.ಜಿ)

ಅಡಿಅಕ್ಕಿ: ಗೊಂಡರ ಮದುವೆಗಳಲ್ಲಿ ಮದುಮಗ ಕುಳಿತಿರುವ ಹಡಿಮಂಚದ ಕೆಳಗೆ ಸೇಡಿಯಿಂದ ಚಿತ್ರ ಬರೆದು ಅದರ ಮೇಲೆ ಬಾಳೆಎಲೆಯಲ್ಲಿ ಇಟ್ಟಿರುವ ಅಕ್ಕಿ ಹಾಗೂ ತೆಂಗಿನಕಾಯಿ (ಉಕ.ಜಿ)

ಅಡಿಎಳ್ಳು: ಅಡವಿಎಳ್ಳು; ಎಳ್ಳು ಬೆಳೆಯಂತಿರುವ ಕಳೆ

ಅಡಿಒತ್ತು: ಕೆಳಗಿಳಿಯುತ್ತಾ ಹೋಗು (ದಕ.ಜಿ)

ಅಡಿಕಟ್ಟು/ಅಡ್ಕಟ್ಟು (ಕ್ರಿ): ೧. ನೇಯ್ಗೆಯಲ್ಲಿ ಎಳೆಗಳು ಮೇಲೆ ಕೆಳಗೆ ಆಗಲು ಸಾಧ್ಯವಾಗುವಂತೆ ಬೇಲಡಿಯ ದಾರವನ್ನು ಹಾಸಿನ ಎಳೆಯೊಂದಿಗೆ ಸೇರಿಸಿ ಕಟ್ಟು, (ನಾ) ೨. ಎತ್ತಿನ ಗಾಡಿಯ ಪಾರಿಗಳ ಮಧ್ಯದ ಮರದ ತುಂಡು (ಮಂಡ್ಯ.ಜಿ) **ನೋಡಿ**– ಪಾರಿ

ಅಡಿಕಡೆ: ಅಡವಿಕಡೆ. ಒಂದು ಬಗೆಯ ಕಳೆಹುಲ್ಲು (ಶಿವ.ಜಿ/ಬೀದ.ಜಿ)

ಅಡಿಕಡ್ಡಿ: ಅಳತೆಯ ಉಪಕರಣ. ಅಳೆಯಲು ಬಳಸುವ ಕೋಲು (ಮಂಗ.ಜಿ)

ಅಡಿಕಾಸು: ಅಡಿಕೆಯೋಸು; ಸಿಪ್ಪೆ ಸುಲಿದ ಅಡಿಕೆಯಷ್ಟು (ಕೋಲಾ.ಜಿ)

ಅಡಿಕುದ್ರಿ: ಎತ್ತಿನ ಗಾಡಿಯ ಮೂಕಿಯ ಬಾಗಿದ ಮುಂಭಾಗ

ಅಡಿಕುಸುಬಿ: ಅಡವಿಕುಸುಬೆ. ಕುಸುಬೆ ಬೆಳೆಯಂತಿರುವ ಒಂದು ಜಾತಿಯ ಕಳೆ

ಅಡಿಕೆ: ೧. ವೀಳ್ಯದೊಂದಿಗೆ ಜಗಿಯುವ ಪದಾರ್ಥ. ಮಂಗಳಕಾರ್ಯಗಳಲ್ಲಿ ಮುತ್ತೈದೆಯರಿಗೆ, ಅತಿಥಿಗಳಿಗೆ ವೀಳ್ಯ ಕೊಡುವಾಗ ವೀಳೆಯದೆಲೆಯೊಂದಿಗೆ ಇರಲೇಬೇಕಾದ ಮಂಗಲಕರ ವಸ್ತು. ಜೀರ್ಣಕಾರಿ ಔಷಧಿಗುಣಗಳೂ ಇವೆ. **ಪ್ರ**: ತಾಂಬೂಲದ ತಟ್ಟೇಲಿ ಎಲೆ ಅಡಿಕೆ ಜೋಡಿಸಬೇಕು ೨. ಭತ್ತದ ಗದ್ದೆಯಲ್ಲಿ ಕಾಣಿಸಿಕೊಳ್ಳುವ ಒಂದು ಕಳೆಸಸ್ಯದ ಹೂವು

ಅಡಿಕೆಅಟ್ಟ: ಅಡಿಕೆ ಒಣಗಿಸಲು ಹಾಕಿದ ಅಡಿಕೆ ದಬ್ಬೆಯ ಅಟ್ಟಣಿಗೆ (ಉಕ.ಜಿ)

ಅಡಿಕೆಅದ್ದೆ: ಮನೆಯ ಮಾಡಿನ ಮೇಲೆ ಬಿದ್ದ ಮಳೆಯ ನೀರು ಹರಿದು ಹೋಗಲು ಬಳಸುವ ಅಡಿಕೆ ಮರದ ದೋಣಿಯಾಕಾರದ ರಚನೆ (ಉಕ.ಜಿ); ಹರಣಿ (ಉಕ.ಜಿ)

ಅಡಿಕೆಅರಗು (ಕ್ರಿ): ಬೇಯಿಸಿದ ಅಡಿಕೆಯನ್ನು ಒಣಗಲು ಚಪ್ಪರದ ಮೇಲೆ ಹರಡುವುದು (ಚಿತ್ರ.ಜಿ)

ಅಡಿಕೆಆಡುವುದು: ಮದುವೆ ಸಂದರ್ಭದಲ್ಲಿ ಗಂಡು ಹೆಣ್ಣುಗಳಿಂದ ಬಟ್ಟಲಡಿಕೆ ಬಳಸಿ ಆಡಿಸುವ ಆಟ (ಬೆಂಗ.ಜಿ)

ಅಡಿಕೆಒಬ್ಬಳಿಸೋದು: ಅಡಿಕೆ ರಾಶಿ ಮಾಡುವುದು. ಒಣಗಲು ಹಾಕಿದ ಅಡಕೆಯನ್ನು ಇಬ್ಬನಿಯಿಂದ ರಕ್ಷಿಸಲು ಸಂಜೆಯಾಗುತ್ತಲೇ ಕೊರಟಿನ ಸಹಾಯದಿಂದ ಒಟ್ಟು ಮಾಡಿ ಓಳಿಯಾಕಾರದಲ್ಲಿ ರಾಶಿ ಹಾಕುವುದು (ಉಕ.ಜಿ)

ಅಡಿಕೆಒಲೆ: ತುಡಿಕೆ ಮನೆಯಲ್ಲಿ ಅಡಿಕೆ ಬೇಯಿಸಲು ನಿರ್ಮಿಸಿದ ದೊಡ್ಡದಾದ ಒಲೆ (ಚಿಮ.ಜಿ)

ಅಡಿಕೆಕಣ: ಅಡಿಕೆಯನ್ನು ಒಣಗಿಸಲು ಇರುವ ವಿಶಾಲವಾದ ಅಂಗಳ (ಉಕ.ಜಿ)

ಅಡಿಕೆಕತ್ತಿ: ಅಡಿಕೆ ಕಾಯಿಯನ್ನು ಕತ್ತರಿಸಲು ಬಳಸುವ ಹರಿತವಾದ ನೇರವಾದ ಕತ್ತಿ ಅಳವಡಿಸಿರುವ ಮಣೆ (ಚಿಮ.ಜಿ)

ಅಡಿಕೆಕೊನೆ ಪೂಜೆ: ಅಡಿಕೆ ಗೊನೆ ಇಳಿಸುವಾಗ ಅಡಿಕೆ ಮರದ ಬುಡಕ್ಕೆ ರಂಗವಲ್ಲಿ ಹಾಗೂ ಗೆಜ್ಜೆ ವಸ್ತ್ರ ಹಾಕಿ ಪೂಜೆ ಮಾಡಿ ಬ್ರಾಹ್ಮಣ ಜನಾಂಗದವರು ಮಾಡುವ ಪೂಜೆ. ಗೊನೆ ಇಳಿಸಿದ ಮೇಲೆ ಮನೆಯಲ್ಲಿಯೂ ಪೂಜೆ ಸಲ್ಲಿಸುತ್ತಾರೆ (ಮಲೆ)

ಅಡಿಕೆಗುಂಡಿ: ಅಡಿಕೆ ಸಸಿ ನೆಡಲು ತೆಗೆದಿರುವ ಆಳದ ಗುಂಡಿ (ಚಿಮ.ಜಿ)

ಅಡಿಕೆಗುಡಿ: ಅಡಿಕೆ ಮುಂಡಿಯನ್ನು ಹೋಳಾಗಿ ಸಿಗಿದಾಗ

ಬರುವ ಒಂದು ಹೋಳು. ಇದು ಕೃಷಿ ಸಲಕರಣೆ ಮಾಡಲು, ಅಡಿಕೆ ಅಟ್ಟಕ್ಕೆ ಚಪ್ಪರ ಹಾಕಲು, ಮನೆ ಕಟ್ಟಲು ಬಳಕೆಯಾಗುತ್ತದೆ (ಉಕ.ಜಿ)

ಅಡಿಕೆಗೆ ಬಣ್ಣ ಹಾಕೋದು: ಕೆಂಪಡಿಕೆಗೆ ತೊಗರಿನ ಲೇಪನ ಮಾಡುವುದು (ಉಕ.ಜಿ)

ಅಡಿಕೆಗೋಳಿಮರ: ಒಂದು ಜಾತಿಯ ಮರ. ದೀವರು ಭೂಮಿ ಹುಣ್ಣಿಮೆಯ ದಿನ ಮಾಡುವ ಬೆರಕೆಸೊಪ್ಪಿನ ಪಲ್ಯಕ್ಕೆ ಈ ಮರದ ಎಲೆ ಬಳಸುತ್ತಾರೆ

ಅಡಿಕೆಚಪ್ಪರದಡಿ: ಅಡಿಕೆಯ ಮರದ ದಬ್ಬೆಯಿಂದ ಮಾಡಿದ ಚಪ್ಪರ. ಅಡಿಕೆ ತೋಟ ಇರುವ ಮನೆಗಳಲ್ಲಿ ಅಂಗಳದಲ್ಲಿ ಅಡಿಕೆಯ ಕಂಬ ಅಡಿಕೆಯ ದಬ್ಬೆಗಳನ್ನು ಬಳಸಿ ನಾಲ್ಕು ಕಂಬ ಹುಗಿದು ಚಪ್ಪರ ಹಾಕಿರುವರು. ಈ ಚಪ್ಪರದ ಮೇಲೆ ಹಣ್ಣಾದ ಅಡಿಕೆ ಒಣಗಿಸುವರು (ಧಾರ.ಜಿ)

ಅಡಿಕೆಚೊಗರು: ಅಡಿಕೆ ಬೇಯಿಸಿದ ನಂತರ ಕೆಳಭಾಗದಲ್ಲಿ ಉಳಿದಿರುವ ಕಂದು ಬಣ್ಣದ ನೀರು

ಅಡಿಕೆಜಪ್ಲೆ: ಸ್ಕಾಲಪಿಯ *ಕ್ರನೇಟ:* ಮಲೆನಾಡಿನಲ್ಲಿ ಕಾಫಿ ಗಿಡಗಳಿಗೆ ನೆರಳು ನೀಡುವಂತೆ ಬೆಳೆಸುವ ಮರಗಳ ಗುಂಪು. **ಇರೂ:** *ದೊಡ್ಡಜಾಪಾಲ, ಕೊಕ್ಕರೆಕೊಡಲಿ ಮರ*

ಅಡಿಕೆದೋಟಿ: ಅಡಕೆ ಕೀಳುವ ಸಾಧನ

ಅಡಿಕೆಪಟ್ಟೆ: ಅಡಿಕೆ ಮರದಲ್ಲಿ ಹೊಂಬಾಳೆಯ ಕೆಳಭಾಗದಲ್ಲಿ ಬರುವ ದಪ್ಪ ಎಲೆಯಂತಹ ಭಾಗ (ಚಿತ್ರ.ಜಿ)

ಅಡಿಕೆಬುಟ್ಟಿ: ನಿತ್ಯದ ಬಳಕೆಗಾಗಿ ಅಡಕೆಯನ್ನು ಸಂಗ್ರಹಿಸಿಟ್ಟುಕೊಳ್ಳಲು ಬಳಸುವ ಬುಟ್ಟಿ. ಸುಮಾರು ಹತ್ತು ಅಂಗುಲ ಎತ್ತರವಾಗಿದ್ದು ನಾಲ್ಕು ಅಂಗುಲ ವ್ಯಾಸ ಹೊಂದಿರುವ ಇದನ್ನು ಬೆತ್ತದ ಸಣ್ಣ ಸಣ್ಣ ಸೀಳುಗಳಿಂದ ಹೆಣೆದಿರುತ್ತಾರೆ.

ಅಡಿಕೆಬೆಟ್ಟೆ: ಬಟ್ಟಲಡಿಕೆ. ಇಡೀ ಅಡಿಕೆಯನ್ನು ಮಧ್ಯಕ್ಕೆ ಕತ್ತರಿಸಿ ಎರಡು ಹೋಳು ಮಾಡುವುದು

ಅಡಿಕೆಮಂಡಿ: ಅಡಿಕೆ ಮಾರಾಟ ಸ್ಥಳ

ಅಡಿಕೆಮಡಿ: ಅಡಿಕೆ ಸಸಿ ಬೆಳೆಸುವ ಜಾಗ. ಅಡಿಕೆ ಮೊಳಕೆಯನ್ನು ತಂದು ಈ ಜಾಗದಲ್ಲಿ ಎರಡು ವರ್ಷದವರೆಗೆ ಬೆಳೆಸಲಾಗುತ್ತದೆ (ಉಕ.ಜಿ)

ಅಡಿಕೆಮಣೆ: ಅಡಕೆ ಸುಲಿಯುವ ಸಾಧನ;



ಅಡಿಕೆಮುಂಡಿ/ಅಡ್ಕಿಮುಂಡಿ: 1. ತುದಿಮುರುಟಿರುವ ಅಡಕೆ ಗಿಡ (ಶಿವ.ಜಿ) 2. ಫಲ ಬರಲು ತಯಾರಾಗಿರುವ ಅಡಕೆ ಮರ. **ಇರೂ:** ಅಡ್ಕಿ ಮುಗ್ಳು 3. ಹಸಿ ಅಥವಾ ಒಣಗಿದ ಅಡಿಕೆ ಮರದ ತುಂಡು (ಉಕ.ಜಿ)

ಅಡಿಕೆಸಿಪ್ಪೆ: ಹಸಿ ಅಡಿಕೆಯನ್ನು ಸುಲಿದ ನಂತರ ಬೇರ್ಪಟ್ಟ ಹೊರ ಕವಚ; –ಹೊದಿಕೆ

ಅಡಿಕೆಹಂಡೆ: ಅಡಿಕೆ ಬೇಯಿಸಲು ಬಳಸುವ ದೊಡ್ಡ ತಾಮ್ರದ ಹಂಡೆ (ಚಿಮ.ಜಿ)

ಅಡಿಕೆಹಾಲು: ಅಡಿಕೆಗೆ ಬಣ್ಣ ಕಟ್ಟಲು ನೇರಳೆ ತೊಪ್ಪೆ ಹಾಗೂ ಗಂಧದ ತೊಪ್ಪೆಯನ್ನು ಕಲ್ಲಲ್ಲಿ ಜಜ್ಜಿ ನೀರಲ್ಲಿ ನೆನೆಹಾಕಿ ನಂತರ ಬೇಯಿಸಿದ್ದರಿಂದ ಬರುವ ರಸ (ಚಿಮ.ಜಿ)

ಅಡಿಕೆಹುಟ್ಟು: ಅಡಿಕೆ ಬೇಯಿಸುವಾಗ ಬಳಸುವ ಉದ್ದನೆಯ ತಾಮ್ರ ಅಥವಾ ಮರದ ಸಾಧನ; –ಸೌಟು.

ಅಡಿಕೊಡಿ: ಮನೆಸಂತಾನ (ದಕ.ಜಿ)

ಅಡಿಕ್ವಾಣ: ಅಡವಿಕೋಣ; ಕಾಡುಕೋಣ (ಉಕ.ಜಿ)

ಅಡಿಗಡಿತ: ಗುದ್ದಲಿಯಿಂದ ಅಡಿಕೆ ತೋಟವನ್ನು ಒಂದು ಅಡಿ ಆಳದಷ್ಟು ಅಗೆದು ಮಣ್ಣು ಮಗುಚಿ ಹಾಕುವುದು (ಚಿಮ.ಜಿ)

ಅಡಿಗರ: ಅನ್ನ ಬಸಿಯುವ ಪಾತ್ರೆ (ದಕ.ಜಿ)

ಅಡಿಗಲ್ಲು: ದಪ್ಪನೆಯ ಕಬ್ಬಿಣದ ತುಂಡು. ಇದನ್ನು ನೆಲಕ್ಕೆ ಅಥವಾ ಮರದ ತುಂಡಿಗೆ ಅಳವಡಿಸಿರುತ್ತಾರೆ. ಕಬ್ಬಿಣದ ವಸ್ತುಗಳನ್ನು ತಯಾರಿಸುವಾಗ ಅವುಗಳನ್ನು ಬಡಿಯಲು ಇದರ ಮೇಲೆ ಇಟ್ಟುಕೊಳ್ಳುತ್ತಾರೆ (ಚಿಮ.ಜಿ). **ಇರೂ:** *ಅಡಗೋಲು*

ಅಡಿಗಳು: ದೇವಾಲಯದ ಅರ್ಚಕರು (ದಕ.ಜಿ)

ಅಡಿಗಾಯಿ: ಅಡೆಗೆ ಹಾಕಿ ಹಣ್ಣುಗೊಳಿಸಿದ ಕಾಯಿ; ಹಣ್ಣುಗಾಯಿ (ಉಕ.ಜಿ)

ಅಡಿಗಾರ: 1. ಗ್ರಾಮದ ಪಟೇಲ 2. ಸೇವಕ (ದಕ.ಜಿ) 3. ಅನ್ನ ಬೇಯಿಸುವ ಗಡಿಗೆ 4. ಅನ್ನ ಬಸಿಯಲು ಉಪಯೋಗಿಸುತ್ತಿದ್ದ ಮರದಿಂದ ತಯಾರಿಸಿದ ಮರಿಗೆ (ಚಿಮ.ಜಿ)

ಅಡಿಗಾರು: ಹಿಂಗಾರಿನಿಂದ ಮುಂಗಾರಿನವರೆಗೆ ಬೇಸಾಯ ಮಾಡುವುದು; ಮಾಗಿ ಉಳುಮೆ. **ಇರೂ:** *ಅಡಿಗಾರುಕ್ಕೆ (ಹಾಸ.ಜಿ)*

ಅಡಿಗಾರುಕ್ಕೆ: ಮಾಗಿ ಉಳುಮೆ. ಬೇಸಿಗೆಯಲ್ಲಿ ನೆಲದ ಹಸಿ ಆರದ ಹಾಗೆ ಮಾಡುವ ಉಳುಮೆ (ಮೈಸೂ.ಜಿ)

ಅಡಿಗೆ ಆಟ: ಚಿಕ್ಕಮಕ್ಕಳು ಕೈ ಬೆರಳುಗಳ ಸಹಾಯದಿಂದ ಆಡುವ ಅಣಕು ಆಟ. ಅಂಗೈ ಅಡಿಯಾಗಿ ಇರಿಸಿ ಬೆರಳುಗಳನ್ನು ಬಿಡಿಸಿ ಕಸ ಗುಡಿಸುವ, ಬೂದಿ ತೆಗೆವ, ಸಾರಿಸುವ, ಸೌದೆ ಇಡುವ, ಬೆಂಕಿ ಹಚ್ಚುವ, ಕಾವಲಿ ಇಡುವ ಮನರಂಜನೆಯ ಆಟ (ಬೆಂಗ.ಜಿ)

ಅಡಿಗೆಕಾಯಿ: 1. ಅಡುಗೆಗೆ ಬಳಸುವ ಎಳೆಯ ಬಾಳೆ, ಹಲಸು ಮೊದಲಾದವು. 2. ಮಂಗಲಕಾರ್ಯದ ಅಡುಗೆ ಮಾಡಿದ ನಂತರ ಒಲೆಗೆ ಒಡೆಯುವ ತೆಂಗಿನಕಾಯಿ (ಬೆಳ.ಜಿ)

ಅಡಿಚರಕ್: ಹಡಗು ಚಲಿಸದಂತೆ ಅದರ ತಳಭಾಗಕ್ಕೆ ಹಾಕುವ ಭಾರವಾದ ವಸ್ತು (ದಕ.ಜಿ)

ಅಡಿಚೊಂಚ: **ನೋಡಿ–** ಅಡವಿಚಂಚ

ಅಡಿತಟ್ಟೆ: ದೋಣಿ ಅಥವಾ ಹಡಗಿನ ಕೆಳಭಾಗದಲ್ಲಿ ಆಧಾರಕ್ಕಾಗಿ ಇಟ್ಟ ಮರದ ದಿಮ್ಮಿ (ದಕ.ಜಿ)

ಅಡಿದಂಡಿಗೆ: ದಂಡಿಗೆ ಮರ

ಅಡಿದಂದೆ: ಅಡವಿ ಧಂದೆ; ಹೊಲದ ಕೆಲಸ (ಬಿಜಾ.ಜಿ)

ಅಡಿದಾರ: ದಂಡಿಗೆದಾರ

ಅಡಿದೆ: **ನೋಡಿ–** ಅಡದೆ

ಅಡಿನಾಯಿ: ಒಂದು ಜಾತಿಯ ಕಳೆ

ಅಡಿಪಟ್ಟಿ: ಕಬ್ಬಿನ ಗಾಣದ ತಳವನ್ನು ಸಮತಟ್ಟಾಗಿ ಹಾಗೂ ಭದ್ರವಾಗಿ ಇಡುವ ಕಬ್ಬಿಣದ ಪಟ್ಟಿ (ಉಕ.ಜಿ)

ಅಡಿಪಡಿ: 1. ಅಳತೆ ಮಾಡಿದ ಬಳಿಕ ಉಳಿಯುವ ಸ್ವಲ್ಪ ಬತ್ತ 2. ಅಳತೆಗೆ ಸಿಗದೆ ಉಳಿದ ಧಾನ್ಯ (ದಕ.ಜಿ)

ಅಡಿಪಾಯ: 1. ತಳಹದಿ; ಬುನಾದಿ; ನೆಲಗಟ್ಟು. **ಪ್ರ:** ಅಡಿಪಾಯ ಭದ್ರವಾಗಿದ್ರೆ ಎಂಥಾ ಮನೆ ಬೇಕಾದ್ರೂ ಕಟ್ಟಬೋದು 2. ಆದಾಯ

ಅಡಿಪಾಲಾಗು: ಹಾಳುಬೀಳು; ಚಲ್ಲಾಪಿಲ್ಲಿಯಾಗು; ಹರಿಹಂಚು (ಉಕ.ಜಿ)

ಅಡಿಪಾವು: ಹಡಗಿನಲ್ಲಿ ಕೆಳಗಿನ ಅಟ್ಟ: **ಪ್ರ:** ಪ್ರಯಾಣಿಕರು ಅಡಿಪಾವಿನಲ್ಲಿ ಮಲಗುತ್ತಾರೆ

ಅಡಿಪಿರ್ಕಿ: ಬುದ್ಧಿ ಕಡಿಮೆಯುವವನು; ಹುಚ್ಚಾಟ ಮಾಡುವವನು. ***ಇರೂ:*** *ಅಡ್ಡಪಿರ್ಕಿ (ದಕ.ಜಿ)*

ಅಡಿಪೂಜೆ: 1. ಉತ್ತರ ಕರ್ನಾಟಕದಲ್ಲಿ ಬಿತ್ತುವುದಕ್ಕೆ ಭೂಮಿಯನ್ನು ಅಣಿಗೊಳಿಸುವುದಕ್ಕೆ ಮುನ್ನ ಊರಿನ ಬಡಗಿ, ಕಮ್ಮಾರ ಮತ್ತು ರೈತಾಪಿ ಜನರು ಒಟ್ಟುಗೂಡಿ ಮಾಡುವ ಪೂಜೆ. ಕಮ್ಮಾರರು ಕಾಳಿಯ ಸ್ವರೂಪವೆಂದು ತಿಳಿದ ಅಡಿಗಲ್ಲಿನ ಮುಂದೆ ಬಿತ್ತುವ ಬೀಜ ಹಾಗೂ ಬಡಗಿಗಳ ಮತ್ತು ರೈತರ ಸಲಕರಣೆಗಳನ್ನು ಇಟ್ಟು ಪೂಜಿಸಿದ ನಂತರ ಬಡಗಿ ಬೇಸಾಯಕ್ಕೆ ಬೇಕಾದ ಸಾಮಾನುಗಳನ್ನು ತಯಾರಿಸಿ ಕೊಡುತ್ತಾನೆ. ಕೂರಿಗೆಯನ್ನು ಮನೆಗೆ ತಂದು ಅದಕ್ಕೆ ಸೀರೆ ಕುಪ್ಪಸ ತೊಡಿಸಿ ಅಲಂಕರಿಸಿ ಮನೆಯ ಮುತ್ತೈದೆಯರು ಪೂಜಿಸುತ್ತಾರೆ. ಅದನ್ನು ಗ್ರಾಮದೇವತೆಯ ಗುಡಿಗೆ ಕೊಂಡೊಯ್ದು ಪೂಜಿಸಿದ ನಂತರ ಹೊಲಕ್ಕೆ ಕೊಂಡೊಯ್ದು ಪೂಜಿಸಿ ಲಕ್ಷ್ಮಿಪೂಜೆ ಮಾಡಿ ಬಿತ್ತನೆ ಪ್ರಾರಂಭಿಸುತ್ತಾರೆ

ಅಡಿಬಚ್ಚಲು: ಕೆರೆ ತೂಬಿನ ಕೆಳಭಾಗ

ಅಡಿಬಡ್ಡ: ಅಡಿಗಲ್ಲಿನ ಕೆಳಗಿರುವ ಮರದ ತುಂಡು. ***ಇರೂ:*** *ಅಡಿಕೊಡ್ಡ.* **ನೋಡಿ–** ಅಡಗಲ್‌ಮರ

ಅಡಿಬರೆಯುವುದು: ಮುಟ್ಟಾದಾಕೆ ಮಲಗಿದ್ದ ಸ್ಥಳವನ್ನು ಶುದ್ಧೀಕರಿಸಿ ರಂಗವಲ್ಲಿ ಹಾಕುವುದು (ದಕ.ಜಿ)

ಅಡಿಬಾಡಿಗೆ: ಸ್ಥಳ ಬಾಡಿಗೆ (ದಕ.ಜಿ)

ಅಡಿಬಾಸಿಂಗ: ನಾಮಧಾರಿ ಜನಾಂಗದಲ್ಲಿ ಉಪನಯನದ ಬಾಸಿಂಗ (ಉಕ.ಜಿ)

ಅಡಿಬಿಡು: (ಕ್ರಿ): ಒಕ್ಕಲೇಳು; ವಲಸೆಹೋಗು (ದಕ.ಜಿ)

ಅಡಿಬೆಂಕಿ: ಒಂದು ಬಗೆಯ ಕಳೆ

ಅಡಿಬೆಸಗೆ: ಲೋಹದ ಪಾತ್ರೆಗಳಿಗೆ ತಳದಲ್ಲಿ ಹಾಕುವ ಸತುವಿನ ಲೇಪನ; ಕಲಾಯಿ (ಶಿವ.ಜಿ)

ಅಡಿಮಣಿ: ಗುರಾಣಿ; ಅಡ್ಡಣದ ಕೆಳಭಾಗದ ಜಾಲರ (ದಕ.ಜಿ)

ಅಡಿಮರ: 1. ಚಿತೆಗೆ ಸೌದೆ ಹೇರಲು ಅಡ್ಡವಾಗಿಟ್ಟ ಮರದ ದಿಮ್ಮಿ; ಅಡೆ (ಮೈಸೂ.ಜಿ/ದಕ.ಜಿ) 2. ದೈವ ಅಥವಾ ಭೂತ ಪಾತ್ರಧಾರಿ ಕುಳಿತುಕೊಳ್ಳಲು ಉಪಯೋಗಿಸುವ ಮೂರುಕಾಲಿನ ಪೀಠ (ದಕ.ಜಿ)

ಅಡಿಮಿಕ: ಕಾಡುಹಂದಿ; ಅಡವಿಯ ಪ್ರಾಣಿ; ಒಂದು ಬೈಗುಳ

ಅಡಿಮೆ: ದಾಸ್ಯ (ದಕ.ಜಿ)

ಅಡಿಯ: ದೇವರ ಮೇಲೆ ತುಂಬಾ ಭಕ್ತಿ ಇರುವ ಭಕ್ತ (ಚಿಮ.ಜಿ)

ಅಡಿಯಕ್ಕಿ: ಗೊಂಡ ಜನಾಂಗದವರು ಮಂಡಲಪೂಜೆ

ಸಂದರ್ಭದಲ್ಲಿ ಅಕ್ಕಿ ತೆಂಗಿನಕಾಯಿ ಹೂ ಹಣ್ಣು ಇತ್ಯಾದಿಗಳನ್ನು ಒಂದು ಬುಟ್ಟಿಯಲ್ಲಿಟ್ಟುಕೊಂಡು ತುಲಸಿಕಟ್ಟೆಯ ಹತ್ತಿರ ತೆಗೆದುಕೊಂಡು ಹೋಗಿ ಪೂಜಿಸುವುದು

ಅಡಿಯಾರು ಚಾಟು: ಮನೆಯ ಪಕ್ಕದಲ್ಲಿ ಕಲ್ಲಿನ ಕಂಬ ನಿಲ್ಲಿಸಿ ಇಳಿಜಾರು ಛಾವಣಿ ನಿರ್ಮಿಸು (ಚಿಮ.ಜಿ). **ಇರೂ:** *ಒಪ್ಪಾರು* (ಚಾಮ.ಜಿ/ಮೈಸೂ.ಜಿ)

ಅಡಿಯೊತ್ತು: ಆಧಾರ (ದಕ.ಜಿ)

ಅಡಿಲಕ್ಕಿ: ಅಡುವ ಅಕ್ಕಿ. ತುಲಸಿ ಪೂಜೆಯ ಸಂದರ್ಭದಲ್ಲಿ ವಿಭಕ್ತ ಕುಟುಂಬದ ಗೊಂಡರು ತುಲಸಿಯ ಮುಂದೆ ಪೂಜಿಸುವ ಅಕ್ಕಿ

ಅಡಿವಾಳ: 1. ಕಾಲಿಗೆ ಧರಿಸುವ ಒಡವೆ 2. ಪೆಂಡೇವು

ಅಡಿವಿಹರಿವಿ: ಹರಿವೆ ಸೊಪ್ಪಿನ ಜಾತಿಯ ಒಂದು ಸಸ್ಯ. ದನಗಳ ಮೇವಿಗೆ ಬಳಕೆ (ಶಿವ.ಜಿ)

ಅಡಿಶಿಲೆ: ಅಳೆಯುವ ಸಾಧನ

ಅಡಿಸರ: ಬಾಳೆ ಎಲೆಯ ತುಂಡು (ದಕ.ಜಿ)

ಅಡಿಸಿಮಗ: ಅನ್ಯರಿಗೆ ಹುಟ್ಟಿದವನು; ಸೂಳೆಮಗ; ಒಂದು ಬೈಗುಳ (ಚಿಮ.ಜಿ)

ಅಡಿಸೇರು: (ನಾ) 1. ಎರಡೂವರೆ ಸೇರು 2. ಅರವತ್ತು ತೊಲ 3. ಎರಡು ಸೊಲಿಗಿ (ಬಾಗ.ಜಿ) (ಕ್ರಿ) 4. ಸತ್ತುಹೋಗು 5. ಅರಣ್ಯದ ಪಾಲಾಗು(ಉಕ.ಜಿ). **ಇರೂ:** *ಅಡಿಚ ಸೇರು*

ಅಡಿಹಾಕು: 1. ತೂಗಿ ಹಾಕುವುದು 2. ಹಣ್ಣಾಗಲು ದೋರುಗಾಯಿಗಳನ್ನು ಹುಲ್ಲಿನಲ್ಲಿ ಮುಚ್ಚಿಡು. **ಇರೂ:** *ಅಡೆಹಾಕು*

ಅಡಿಹಾಗಲ: ಕಾಡುಹಾಗಲ; ಕಹಿ ಇರದ ಹಾಗಲ (ಬಿಜಾ.ಜಿ)

ಅಡಿಹಿಡಿ: ತಳಹಿಡಿಯುವುದು (ದಕ.ಜಿ); ಪದಾರ್ಥಗಳನ್ನು ಅಗತ್ಯಕ್ಕಿಂತ ಹೆಚ್ಚು ಬೇಯಿಸಿದಾಗ ಸೀದು ಪಾತ್ರೆಯ ತಳಕ್ಕೆ ಅಂಟಿಕೊಳ್ಳುವುದು; ಸುಟ್ಟಂತಾಗುವಿಕೆ. **ಇರೂ:** *ಅಡಹತ್ತು*

ಅಡೀಚಿಕೆ: ಗ್ರಾಮದೇವತೆಗೆ ಜಾತ್ರೆಯ ದಿನ ಊರಿನ ಹುಡುಗಿಯರು ಅರ್ಪಿಸುವ ಸೇವೆ. ಅಕ್ಕಿ, ತೆಂಗಿನಕಾಯಿ, ವೀಳ್ಯೆದೆಲೆ, ಎಣ್ಣೆಗಳನ್ನು ಚಿಕ್ಕ ಬುಟ್ಟಿಯಲ್ಲಿಟ್ಟುಕೊಂಡು ದೇವಿಗೆ 'ಅಡೀಚಿಕೆ' ಅರ್ಪಿಸುತ್ತಾರೆ. ಮದುವೆಯಾದ ಹೆಣ್ಣುಮಕ್ಕಳು ವರ್ಷದೊಳಗೆ ಈ ಸಂಪ್ರದಾಯ ಪಾಲಿಸಲೇಬೇಕೆನ್ನುವ ನಿಯಮವಿದೆ (ಉಕ.ಜಿ)

ಅಡೀರ್‌ಗುಡಿಗುಡಿ: ಕಬಡ್ಡಿ ಆಟ (ಮಂಡ್ಯ.ಜಿ)

ಅಡು: (ನಾ) 1. ಅಡವಿ; ದನಗಳು ಮುಕ್ತವಾಗಿ ಮೇಯಲು ಬಿಡುವ ಬಯಲು; ಗೋಮಾಳ (ಚಾಮ.ಜಿ) 2. ಬೆಲೆಬಾಳುವ ಆಸ್ತಿ; ಬಂಗಾರ (ಶಿವ.ಜಿ). **ಇರೂ:** *ಅಡವು* 3. ಮಾಂಸ (ಉಡು.ಜಿ) (ಕ್ರಿ) 4. ಸಂಭೋಗಿಸು 5. ಬೇಯಿಸು; ಅಡುಗೆಮಾಡು

ಅಡುಂಬು: ಇಫೋಮಿಯಾ *ಬಿಲೋಬಾ ಫೋರ್ಸ್ಕ್*: ಒಂದು ಔಷಧಿ ಬಳ್ಳಿ. **ಇರೂ:** *ಬಂಗಡ ಬಳ್ಳಿ (ಮಂಗ.ಜಿ)*

ಅಡುಕು: (ನಾ) 1. ಆಸರೆಗಾಗಿ ಕೊಡುವ ಕಲ್ಲಿನ ಕಿರುತುಂಡುಗಳು (ಬಳ್ಳಾ.ಜಿ) (ಕ್ರಿ) 2. ಗುಡ್ಡೆ ಮಾಡು; ರಾಶಿಮಾಡು; ಪೇರಿಸು (ಮಂಡ್ಯ.ಜಿ)

ಅಡುಕೊಕ್ಕೆ: ಅಡಕೆ ಕೊಯ್ಯುವಾಗ, ಹೆಂಡದ ಗಡಿಗೆ ಇಳಿಸುವಾಗ ಬೇಕಾಗುವ ಸಾಧನಗಳನ್ನು ಇಟ್ಟುಕೊಳ್ಳಲು, ಸೊಂಟಕ್ಕೆ ಕಟ್ಟಿಕೊಳ್ಳುವ ಸಾಧನ (ರಾಮ.ಜಿ) ಇರೂ: *ಒಡ್ಯಾಣಕೊಕ್ಕೆ*

ಅಡುಗಟ್ಟು: ಸೌದೆ (ಚಿಮ.ಜಿ)

ಅಡುಗಬಡಿ: ಹಾಳಾಗಿ ಹೋಗು; ಒಂದು ಬೈಗುಳ ಪದ (ಬಳ್ಳಾ.ಜಿ)

ಅಡುಗಬ್ಬು: ೧. ಸೌದೆ; ಕಟ್ಟಿಗೆ; ಇಂಧನ ೨. ಕೆಟ್ಟವಾಸನೆ

ಅಡುಗಾಡಿ: ಅಡುಗೆ ಕೆಲಸದವಳು

ಅಡುಗಾಯಿ: ಬೇಯಿಸಿದ ಉಪ್ಪಿನಕಾಯಿ (ಉಕ.ಜಿ)

ಅಡುಗಿ: ಎತ್ತರವಾದ ಸ್ಥಳ (ಮಂಡ್ಯ.ಜಿ)

ಅಡುಗುಳಿ: ೧. ತವರು ಮನೆಯಿಂದ ಮಗಳಿಗೆ ಬಳುವಳಿಯಾಗಿ ಕೊಡುವ ಹಸು **ಇರೂ:** *ಅಡುಲ್ಲಿಹಸ* ೨. ಅಡುಗೆ ಸಾಮಾನು

ಅಡುಗೂಲಿ: ೧. ಅಡುಗೆ ಮಾಡಿ ಹಣ ಪಡೆಯುವವಳು ೨. ಅಡುಗೆಯ ಕೂಲಿ

ಅಡುಗೆ: ೧. ಹದಕ್ಕೆ ಬಂದ ಬೆಲ್ಲದ ಪಾಕ ೨. ಸಿದ್ಧವಾದ ಆಹಾರ (ಮಂಡ್ಯ.ಜಿ/ಮೈಸೂ.ಜಿ)

ಅಡುಗೆಎಸರು: ಕಬ್ಬಿನ ಬೆಳೆಯನ್ನು ಅಳೆಯುವ ಮಾನ; ಅಳತೆ (ಉಕ.ಜಿ)

ಅಡುಗೋಲು: ಮೇದರು ಬಳಸುವ ಆಯುಧ (ಬೆಂಗ್ರಾ.ಜಿ)

ಅಡುಟ್ಟ/ಅಡ್ಡುಟ್ಟ/ಅಡ್ಡಹುಟ್ಟ: ಅಸಂಸ್ಕೃತ; ತಿಳುವಳಿಕೆ ಇಲ್ಲದವನು; ಕೀಳು ಹುಟ್ಟಿನವನು (ಬೆಂಗ್ರಾ.ಜಿ). **ಪ್ರ:** ಅಡುಟ್ಟನಿಗೆ ಪಾರಪತ್ಯ ಕೊಟ್ಟಂಗೆ (ಮಂಡ್ಯ.ಜಿ)

ಅಡುದೊಡ್ಡಿ: ಪ್ರಾಯಕ್ಕೆ ಬಂದ ಹೆಣ್ಣು

ಅಡುಪ: ೧. ಜೋಳಿಗೆ ೨. ಚರ್ಮರೋಗ; ನಾಯಿಕಜ್ಜಿ ೩. ಕಡಿವಾಣ (ಬೆಂಗ್ರಾ.ಜಿ)

ಅಡುಪಚ್ಚೆ: ಅಡಿಪಚ್ಚೆ; ತಳಭಾಗವೆಲ್ಲ ಪಚ್ಚೆಯಿಂದ ಕೂಡಿದ್ದು (ಮೈಸೂ.ಜಿ)

ಅಡುಬಾಡು: ೧. ಒಲೆಯ ಮೇಲೆ ಬೇಯುತ್ತಿರುವ ಮಾಂಸ ೨. ಆಡುಮುಟ್ಟದ ಸೊಪ್ಪು; ಒಂದು ಔಷಧೀ ಸಸ್ಯ

ಅಡುಮೀನ್: ಮುಳ್ಳು ಕಡಿಮೆಯಿರುವ ಸಣ್ಣ ಗಾತ್ರದ ವಿಶಿಷ್ಟ ರುಚಿಯ ಮೀನು (ಉಡು.ಜಿ)

ಅಡುಮುಟ್ಟ: ಹುಂಬ; ದಡ್ಡ (ಗುಲ್ಬ.ಜಿ/ಬೆಂಗ.ಜಿ)

ಅಡುಲ್ಲಿಹಸ: ಬಾಣಂತನ ಮುಗಿಸಿ ಕೊಂಡು ಗಂಡನ ಮನೆಗೆ ಹೋಗುವ ಮಗಳಿಗೆ ಆಕೆಯ ಜೊತೆಯಲ್ಲಿ ಕಳಿಸುವ ಹಾಲು ಕರೆಯುವ ಹಸು (ಮೈಸೂ.ಜಿ). **ಇರೂ:** *ಅಡುಗುಳಿ*

ಅಡುಸು: ಜೇಡಿ ಮಣ್ಣು

ಅಡುಸ್ಲು: ಅಶುಚಿತ್ವ; ಸ್ವಚ್ಛತೆ ಇಲ್ಲದಿರುವುದು

ಅಡುಹಾಕು (ಕ್ರಿ): ಎಣ್ಣೆಯ ಬೀಜವನ್ನು ಹುರಿದು ಅರೆದು ನೀರಿನಲ್ಲಿ ಕುದಿಸಿ ಎಣ್ಣೆ ತೆಗೆಯುವುದು

ಅಡುಳಿ: ಮಲೆನಾಡಿನ ಜೋಣಿಗೆ ಮರದಲ್ಲಿ ಚಳಿಗಾಲಕ್ಕೆ ಬಿಡುವ ಹಣ್ಣುಗಳಿಂದ ತಯಾರಿಸಿದ ಹುಳಿ. ಇದನ್ನು ಸೀಸೆಗಳಲ್ಲಿ ತುಂಬಿಟ್ಟುಕೊಂಡು ಮೀನುಸಾರು ಮೊದಲಾದವನ್ನು ಮಾಡುವಾಗ ಬಳಸುತ್ತಾರೆ

ಅಡುಳ್ಳಿ: ವಧು ಅಥವಾ ವರನ ಜೊತೆಗೆ ಮದುವೆಯ ಸಂಭ್ರಮ ಮುಗಿಯುವವರೆಗೂ ಇರುವ ಜೊತೆಗಾರರು (ಚಿಮ.ಜಿ). **ಇರೂ:** *ಅಡುಗಲದಮ್ಮ, ಅಡುಗಲದಂಗೆ (ಮೈಸೂ.ಜಿ)* **ನೋಡಿ–** ಅಡುಗುಳಿ

ಅಡೂಲಿ: ಮದುವೆ ಗಂಡಿನ ಜೊತೆಗೆ ಹೋಗುವವನು (ಮಂಡ್ಯ.ಜಿ)

ಅಡೂಳಿ: ಬಳುವಳಿ (ಧಾರ.ಜಿ)

ಅಡೆ: ೧. ತಡೆ ೨. ಬಿರುಕು ಅಥವಾ ತೂತು ಮುಚ್ಚಲು ಉಪಯೋಗಿಸುವ ಮರದ ತುಂಡು ೩. ಕೆಲವು ಭೂತಗಳಿಗೆ ನಿವೇದಿಸುವ ಅಕ್ಕಿಯಿಂದ ಮಾಡಿದ ಉಪ್ಪು ಹಾಕದ ಭಕ್ಷ್ಯ (ದಕ.ಜಿ) ೪. ಬಳಿ; ಸಮೀಪ; ಹತ್ತಿರ. **ಪ್ರ:** ಅವ್ನ ನನ್ನ ಅಡೆಗೇ ತಕೊಳ್ನಿಲ್ಲ ೫. ಕತ್ತರಿಸಲು ಆಧಾರವಾಗಿ ಕೆಳಗಿಟ್ಟುಕೊಳ್ಳುವ ಮರದ ತುಂಡು. **ಪ್ರ:** ಕೋಳಿಬಾಡ ಕತ್ರುಸಬೇಕು ಒಂದು ಅಡೆಕೊಡು ೬. ದೋರೆಗಾಯಿಗೆ ಕೊಡುವ ಕಾವು. **ಪ್ರ:** ಮಾವಿನಕಾಯಿ ಅಡೆ ಹಾಕು ೭. ಅಡಿ; ತಳ ೮. ಪುರುಷರ ಗುಪ್ತಾಂಗ ೯. ಆಶ್ರಯ; ಆಧಾರ ೧೦. ಉದ್ಭವ ೧೧. ಒಂದು ಬಗೆಯ ಕಡುಬು ೧೨. ತಗಡು ೧೩. ಕೀಲು ೧೪. ಗದ್ದೆಯ ಅಂಚು; ಬದು; ತೆವರಿ ೧೫. ಎಲೆ ೧೬. ಸೀರೆ ಕಂಬಳಿ ಮೊದಲಾದವುಗಳ ಅಂಚು. **ಪ್ರ:** ಸೀರೆಗೆ ಅಡೆ ಕಟ್ಟಿಸಬೇಕು

ಅಡೆಂಕಣಿ: ದಾರಂದದ ತೂತಿನ ಮೂಲಕ ಒಳಹೊಗಿಸಿ ಬಾಗಿಲನ್ನು ಭದ್ರಪಡಿಸುವ ಕೀಲು (ದಕ.ಜಿ)

ಅಡೆಂಕಿಣಿ: **ನೋಡಿ–** ಅಂಡೆಂಕಣಿ

ಅಡೆಂಚಿಲ್/ಅಡೆಂಕಿಲ್: ೧. ಕಾಡುಪ್ರಾಣಿಗಳನ್ನು ಹಿಡಿಯುವ ಬೋನು ೨. ಜಾನುವಾರುಗಳನ್ನು ಅತ್ತಿತ್ತ ತಿರುಗದಂತೆ ಬಂಧಿಸಲು ಮಾಡಿದ ಮರದ ಗೂಟಗಳ ರಚನೆ ೩. ಇಕ್ಕಟ್ಟಾದ ಜಾಗ (ದಕ.ಜಿ). **ಇರೂ:** *ಅಡಿಸಲು*

ಅಡೆಕಟ್ಟಿಸು: ಅಂಚು ಕಟ್ಟಿಸು

ಅಡೆಕಡಿ (ಕ್ರಿ): ಗದ್ದೆ ನಾಟಿಗೆ ಮೊದಲು ಗದ್ದೆ ಬದುವನ್ನು ಸೋಸುವುದು (ಚಿಮ.ಜಿ)

ಅಡೆತೆಗೆಯುವುದು: ನೇಗಿಲು ಹೋಗದ ಜಾಗದಲ್ಲಿ ಮಣ್ಣನ್ನು ಕೊಚ್ಚಿ ಕೊರಡು ಹೊಡೆದಾಗ ಉಳಿದೆಡೆಯ ಕೆಸರು ಅಲ್ಲಿ ಬಂದು ಕುಳಿತು ನಾಟಿಗೆ ಅನುಕೂಲವಾಗುವಂತೆ ಮಾಡುವುದು (ಉಕ.ಜಿ). **ಇರೂ:** *ತೆವಡೆ ಹಾಕುವುದು (ಮೈಸೂ.ಜಿ)*

ಅಡೆದಿರ: ಬದುವಿನ ಪಕ್ಕದಲ್ಲಿರುವ ನಾಲ್ಕು ಅಥವಾ ಎಂಟುಸಾಲು ಬತ್ತ. **ಇರೂ:** *ಅಡೆಸಾಲು*

ಅಡೆಬಡೆ: ಬಡಕಲು

ಅಡೆಬ್ಬಿಸು: ಒಕ್ಕಲೆಬ್ಬಿಸು (ಬಳ್ಳಾ.ಜಿ)

ಅಡೆಮೆಂತೆ: ಮೆಂತೆ ಸೊಪ್ಪಿನಂತಿರುವ ಕಳೆ ಹುಲ್ಲು

ಅಡೆಯಾಳೊ: ೧. ಗುರುತು; ಲಕ್ಷಣ ೨. ಲಾಂಛನ; ಚಿಹ್ನೆ ೩. ವಿಷ್ಣುಮೂರ್ತಿ ಮೊದಲಾದ ದೈವಗಳ ಪ್ರಸಾದ (ದಕ.ಜಿ)

ಅಡೆಸಲು: **ನೋಡಿ–** ಅಡೆಂಚಿಲ್

ಅಡೆಹಬ್ಬ: ಮೀನ ಸಂಕ್ರಮಣದಲ್ಲಿಯ ಹಬ್ಬ

ಅಡೆಳೆ: ಅಡ್ಡ ವೇಳೆ. ಬೆಳಿಗ್ಗೆ ಮಧ್ಯಾಹ್ನ ಮತ್ತು ಸಂಜೆ ಈ ವೇಳೆ ಬಿಟ್ಟು ಉಳಿದ ವೇಳೆ. **ಪ್ರ**: ಅಡೆಳೆದಾಗ ಸತ್ತ (ಶಿವ.ಜಿ). **ಇರೂ**: *ಎಡಹೊತ್ತು (ಮೈಸೂ.ಜಿ)*

ಅಡೇಲಿ: ತಳಭಾಗ; ಅಡಿಭಾಗ (ಬಳ್ಳಾಜಿ/ಶಿವ.ಜಿ). **ಇರೂ**: ಅಡೇಲ

ಅಡೇಸಿ: ದರಿದ್ರ

ಅಡೊಟ್ಟೆ: ಅಡಿಹೊಟ್ಟೆ, ಪ್ರಾಣಿಗಳ ಹೊಟ್ಟೆಯ ಕೆಳಭಾಗ (ಬೆಂಗ್ರಾ.ಜಿ); ಕಿಬ್ಬೊಟ್ಟೆ. **ಪ್ರ**: ಅಡೊಟ್ಟೆ ತೆವಡೆ ತಿವ್ದು ಸರ್ರಾಗಿ ಉಳುರ್ಲ

ಅಡ್ಕ: ೧. ಅಡಕು; ಒಂದರ ಮೇಲೆ ಒಂದು ವಸ್ತುಗಳನ್ನು ಕ್ರಮವಿಲ್ಲದಂತೆ ಹಾಕು (ಮಂಡ್ಯ.ಜಿ) ೨. ವಿಶಾಲ ಸಮತಟ್ಟು ಪ್ರದೇಶ (ದಕ.ಜಿ)

ಅಡ್ಕಟ್ಟು: ನೋಡಿ– ಅಡಿಕಟ್ಟು

ಅಡ್ಕಟ್ಟುವುದು: ಅಡ್ಡಕಟ್ಟುವುದು. ಒಂದು ಪಾತಿಯಿಂದ ಇನ್ನೊಂದು ಪಾತಿಗೆ ನೀರನ್ನು ಹಾಯಿಸುವಾಗ ಮಧ್ಯೆ ಅಡ್ಡಲಾಗಿ, ಮಣ್ಣು ಕಳೆಸಸ್ಯ ಮುಂತಾದುವನ್ನು ಹಾಕಿ ತಡೆಯೊಡ್ಡುವುದು (ಮಂಡ್ಯ.ಜಿ)

ಅಡ್ಕಡ್ಡಿ: ಬಂಡಿಯ ಚಕ್ರಕ್ಕೆ ಅಡ್ಡವಾಗಿ ಜೋಡಿಸಿರುವ ಕಟ್ಟಿಗೆಯ ಸಾಧನ. ಅಡೆಪಟ್ಟಿ; ಅಡ್ಗಟ್ಟು (ಬೆಂಗ.ಜಿ), ಅಡ್ಡ್‌ಕಳಿ, ಅಡ್ಡಜಿಡ್ಕಿ (ದಕ.ಜಿ), ಅಡ್ಡಲ್ಲ, ಅಡ್ಡಹಲ್ಲ, ಅಡ್ಪಟ್ಟಿ (ತುಮ.ಜಿ/ಬೆಂಗ.ಜಿ), ಅಡ್ಪಟ್ಕೆ (ಬೆಂಗ.ಜಿ)

ಅಡ್ಕಬಾರೆ: ಒಂದು ಮುಳ್ಳು ಜಾತಿಯ ಗಿಡ

ಅಡ್ಕಬಾವ: ಅಡಕೆಬಾವು; ಅಡಕೆಯಾಕಾರದಲ್ಲಿ ಏಳುವ ಕುರು (ಉಕ.ಜಿ)

ಅಡ್ಕರ: ಅಡುಗೆ ಮಾಡುವ ಮಣ್ಣಿನ ಪಾತ್ರೆ

ಅಡ್ಕರೆ: ಒಂದು ಜಾತಿಯ ಬಿಳಿ ಹೂ

ಅಡ್ಕಲ್ಲು: ದವಸ ಧಾನ್ಯಗಳಲ್ಲಿರುವ ಸಣ್ಣ ಸಣ್ಣ ಕಲ್ಲು; – ಹರಳು (ಮಂಡ್ಯ.ಜಿ)

ಅಡ್ಕಳ: ಅಡಿಗೆ ಮನೆ; ಸಮಾರಂಭದ ಅಡಿಗೆಗಳನ್ನು ಮಾಡುವ ಸ್ಥಳ (ದಕ.ಜಿ)

ಅಡ್ಕಳಪೂಜೆ: ಮದುವೆಯ ಪಾಕಶಾಲೆಯಲ್ಲಿ ಅಡಿಗೆ ಆರಂಭಿಸುವ ಮೊದಲು ಸುತ್ಯೆ ಇಟ್ಟು ಮಾಡುವ ದೈವ ಪ್ರಾರ್ಥನೆ (ದಕ.ಜಿ)

ಅಡ್ಕಿ: ಅಡ್ಡಿಕೆ ೧. ಕುತ್ತಿಗೆಗೆ ಹೊಂದಿಕೊಂಡಂತೆ ಧರಿಸುವ ಅರ್ಧಚಂದ್ರಾಕಾರದ ಚಿನ್ನದ ಆಭರಣ (ಬೆಂಗ್ರಾ.ಜಿ) ೨. ಕೊರಳಿಗೆ ಧರಿಸುವ ಸುತ್ತಲೂ ಗೆಜ್ಜೆಯುಳ್ಳ ಕೊರಳಪಟ್ಟಿ (ಮಂಡ್ಯ.ಜಿ). **ಇರೂ**: ಅಡ್ಡಿಕೆಸರ

ಅಡ್ಕಿಉಳ್ಳಿ: ಅಡಕೆಯಾಗುವ ಹೂವು.

ಅಡ್ಕಿಮಿಳ್ಳಿ: ನೋಡಿ– ಅಡ್ಕಿಉಳ್ಳಿ (ಉಕ.ಜಿ)

ಅಡ್ಕಿಮುಂಡಿ: ನೋಡಿ– ಅಡಿಕೆಮುಂಡಿ

ಅಡ್ಕಿಮುಗ್ಗು: ಬೆಳೆಯದೇ ಇರುವ ಅಡಿಕೆಯ ಮೂಲ ರೂಪ (ಉಕ.ಜಿ)

ಅಡ್ಕಿಹಾಳಿ: ೧. ಅಡಕೆಪಟ್ಟೆ ೨. ಕಾಶೀಯಾತ್ರೆಗೆ ಹೋಗುವ ಮದುಮಗನಿಗೆ ಕೊಡುವ ಅಡಕೆ ಮರದ ಹಾಳೆಯ ಚಪ್ಪಲಿ (ದಕ.ಜಿ)

ಅಡ್ಕು: ನೋಡಿ– ಅಡುಕು

ಅಡ್ಕೆಕರೆ: ಸುಲಿದ ಅಡಿಕೆಗೆ ಅಂಟಿರುವ ಸಿಪ್ಪೆ (ಉಕ.ಜಿ)

ಅಡ್ಕೆಕೊನೆ: ಅಡಿಕೆ ಗೊನೆ (ದಕ.ಜಿ)

ಅಡ್ಕೆಗೂಡೆ: ಅಡಕೆ ತುಂಬಲು ಬಳಸುವ ಬುಟ್ಟಿ

ಅಡ್ಕೆತಿಳ್ಳು: ಅಡಿಕೆಯ ತಿರುಳು (ಉಕ.ಜಿ)

ಅಡ್ಕೆದಬ್ಬೆಬಳೆ: ರಥದ ಗುಜ್ಜಿಯ ತುದಿಯಲ್ಲಿ ಸುತ್ತಿರುವ ಅಡಿಕೆ ಮರದ ಪಟ್ಟಿ; ಪತಾಕೆಯ ಕೋಲನ್ನು ಇಡಲು ಅನುಕೂಲವಾಗುವ ರಚನೆ (ದಕ.ಜಿ)

ಅಡ್ಕೆದೊನ್ನೆ: ೧. ಅಡಕೆ ಪಟ್ಟೆಯಿಂದ ಮಾಡುವ ಬಟ್ಟಲಿನಂತಹ ರಚನೆ ೨. ತೋಟದಲ್ಲಿ ಕೆಲಸ ಮಾಡುವ ಕಾರ್ಮಿಕರು ಬಳಸುವ ಅಡಿಕೆ ಹಾಳೆಯ ಟೋಪಿ (ಹಾವೇ.ಜಿ)

ಅಡ್ಕೆಪತ್ರ: ಅಡಕೆಹಾಳೆ; ಅಡಕೆಪಟ್ಟೆ (ಮಂಗ.ಜಿ)

ಅಡ್ಕೆಬೀಳು (ನಾ) : *ಪೋತಾಸ್ ಸ್ಕ್ಯಾಂಡೆನ್ಸ್*: ಒಂದು ಬಗೆಯ ಬಳ್ಳಿ (ಚಿತ್ರ ನೋಡಿ)

ಅಡ್ಕೆಮರದ ಚಂಡೆ: ಅಡಿಕೆಯ ಮರದ ತುದಿಯ ಭಾಗ (ಉಕ.ಜಿ)

ಅಡ್ಕೆಮುಗ್ದ: ತೀರ ಎಳೆಯ ಅಡಿಕೆ (ಉಕ.ಜಿ)

ಅಡ್ಕೆಮೊಂಗೆ: ಅಡಕೆಯ ಮೊಳಕೆ (ದಕ.ಜಿ)

ಅಡ್ಕೆಮೊಳಿ: ಅಡಿಕೆಯ ಮೊಳಕೆ (ಉಕ.ಜಿ)

ಅಡ್ಕೆಸರ: ನೋಡಿ– ಅಡ್ಕಿ

ಅಡ್ಕೆಸಸಿ ಕಣ: ಅಡಿಕೆ ಸಸಿ ತಯಾರಿಸುವ ಜಾಗ (ಉಕ.ಜಿ)

ಅಡ್ಕೆಹಾಲು: ೧. ಅಡಿಕೆ ಬೇಯಿಸಿದಾಗ ಬರುವ ಪಾಕ ೨. ಒಂದು ಬಗೆಯ ಕಳೆಹುಲ್ಲು (ಬೆಂಗ.ಜಿ)

ಅಡ್ಕೆಹುಶಿ: ಅಡಿಕೆ ಗೊನೆಯ ಬಿಡಿ ಬಿಡಿಯಾದ ಭಾಗ (ಉಕ.ಜಿ)

ಅಡ್ಗಟ್ಟು: ೧. ಅಡ್ಡಗಟ್ಟು, ಪಾರೆ ಮೇಲೆ ಕೂರಿಸುವ ಮೂರು ಮಣೆಗಳು (ಮಂಡ್ಯ.ಜಿ) ೨. ಗುಂಡುಕಲ್ಲಿನಲ್ಲಿ ಜೋಡಿಸಿರುವ ಒಂದು ಸಾಧನ (ಶಿವ.ಜಿ)

ಅಡ್ಗಡ್ಲೆ: ನೋಡಿ– ಆಡುಗಳ್ಳೆ

ಅಡ್ಗಮ್ಮ: ಬಾಗಿಲಿನ ಮೇಲ್ಭಾಗದ ಅಡ್ಡಪಟ್ಟಿ

ಅಡ್ಗರ: ಗಂಜಿ ತಿಳಿ ಸಂಗ್ರಹಿಸುವ ಸಾಧನ (ದಕ.ಜಿ)

ಅಡ್ಗಾಲ್ಹಾಕು: ಅಡ್ಡಗಾಲು ಹಾಕು. ಆಗುವ ಕೆಲಸಕ್ಕೆ ಅಡ್ಡಿಯುಂಟುಮಾಡು (ಗುಲ್ಬ.ಜಿ)

ಅಡ್ಗು: ಸಾಮಾನ್ಯವಾಗಿ ಎರಡು ಅಡಿಯಷ್ಟು ಉದ್ದವಿರುವ ರುಚಿಕರವಾದ ಮೀನು (ಉಡು.ಜಿ)

ಅಡ್ಗೆಲ್ಲ: ೧. ಮಕ್ಕಳಾಟ ೨. ಕೆಲಸ ಕೆಡಿಸುವ ಪ್ರಯತ್ನ

ಅಡ್ಗೈಬ್ಯಾನಿ: ಹೊಟ್ಟೆಯಲ್ಲಿ ಉಂಟಾಗುವ ನೋವು. ಮಲಗಿಕೊಂಡು ಉಂಡರೆ ಈ ರೋಗ ಬರುವುದೆಂಬ ನಂಬುಗೆ (ಧಾರ.ಜಿ)

ಅಡ್ಚ್: ೧. ಒತ್ತರಿಸು ೨. ಒತ್ತೊತ್ತಾಗಿರು (ಉಡು.ಜಿ)

ಅಡ್ಜಾಪು: ೧. ರೋಣುಕಲ್ಲಿಗೆ ಜೋಡಿಸುವ ಮರದ ಪಟ್ಟಿಗಳು ೨. ಚಪ್ಪರಕ್ಕೆ ಹಾಕುವ ಅಡ್ಡಮರ (ತುಮ.ಜಿ)

ಅಡ್‌ಚಿಟ್ಟಿನ ಸೊಪ್ಪು: ಬೇಲಿಯಲ್ಲಿ ಸಿಗುವ ಸಾರಿನ ಸೊಪ್ಪು. ಇದರಲ್ಲಿ ಮೂರು ನಾಲ್ಕು ವಿಧಗಳಿವೆ (ಬೆಂಗ್ರಾ.ಜಿ)

ಅಡ್‌ಜಬ್ರ: ಅನ್ಯ ಕೆಲಸದ ಕಡೆ ಗಮನ; ಅನ್ಯಮನಸ್ಕತೆ ***ಇರೂ:*** *ಅಡ್‌ಜಂಬ್ರ*

ಅಡ್ಡ: ೧. ಅಡ್ಡ ಪರದೆ ೨. ಒಂದು ಅಳತೆಯ ಮಾನ ೩. ಎರಡುಕಾಸು; ಎಂಟಾಣೆ ೪. ತಡೆ; ಪ್ರತಿಬಂಧಕ ೫. ಅರ್ಧ (ಕೊಡ.ಜಿ) ೬. ಹೆಣ ಹೊರುವ ಸಾಧನ; ಚಟ್ಟ ೭. ವಿಶಾಲವಾದ ಸಮತಲ ಪ್ರದೇಶ

ಅಡ್ಡಂಗಿ: ಹಟ; ರಂಪ; ಚಂಡಿ (ಉಕ.ಜಿ)

ಅಡ್ಡಂಚು: ಪಂಚೆ ಅಥವಾ ಸೀರೆಗಳ ಅಂಚಿನ ಜರತಾರಿ ಪಟ್ಟೆ

ಅಡ್ಡಂತರಿ: ಮದುಮಗಳನ್ನು ಮದುವೆಂಯ ಮಂಟಪಕ್ಕೊಯ್ಯುವಾಗ ಹಿಡಿದುಕೊಳ್ಳುವ ಅಕ್ಕಿ ತುಂಬಿದ ತಟ್ಟೆ (ದಕ.ಜಿ)

ಅಡ್ಡ ಒಯ್ಯಾದು: ಮದುವೆ ಆಗದೆ ಸತ್ತರೆ ಅಂಥವರನ್ನು ಸಿದಿಗೆಯಲ್ಲಿ ಕೂಡಿಸಿ ಒಯ್ಯದೆ ಉದ್ದಕ್ಕೆ ಮಾಡಿದ ಚಟ್ಟದ ಮೇಲೆ ಸ್ಮಶಾನಕ್ಕೆ ಒಯ್ಯುವ ರೂಢಿ (ಶಿವ.ಜಿ)

ಅಡ್ಡಕಂಡಿ: ಕಳ್ಳದಾರಿ; ಅಡ್ಡದಾರಿ

ಅಡ್ಡಕತ್ತಿ ಮುತ್ತಿಗಂಧ: ೧. ಹೆಂಗಸರ ತಲೆಯ ಆಭರಣ ೨. ಭೂತನರ್ತಕನ ತಲೆಯ ಆಭರಣ (ದಕ.ಜಿ)

ಅಡ್ಡಕಲ್ಲು: ದೇವಸ್ಥಾನದ ಪ್ರವೇಶದ್ವಾರದ ನಡೆಯ ನಡುವೆ ಇರುವ ಕಲ್ಲು (ದಕ.ಜಿ)

ಅಡ್ಡಕಳ: ಭೂತದ ಗುಡಿಯ ಪಕ್ಕಕ್ಕಿರುವ ಭೂತನರ್ತನ ಹಾಗೂ ಇತರ ವಿಧಿ ವಿಧಾನಗಳನ್ನು ನಡೆಸುವ ಸ್ಥಳ (ದಕ.ಜಿ)

ಅಡ್ಡಕುಂಟು: ಸೊಂಟಕ್ಕೆ ಸುತ್ತಿಕೊಳ್ಳುವ ಬೈರಾಸು **ನೋಡಿ–** ಬೈರಾಸು

ಅಡ್ಡಕುಂಟೆ: ಮಗ್ಗದ ಅಡ್ಡತೊಲೆ (ದಕ.ಜಿ)

ಅಡ್ಡಕೇದಗೆ: ಸ್ತ್ರೀವೇಷದ ಒಂದು ಆಭರಣ; ಜಡೆಯ ಆಭರಣ (ದಕ.ಜಿ)

ಅಡ್ಡಕೊಳ್ಳು: ಒಳಸಿಡಿತ; ಒಳನೋವು

ಅಡ್ಡಕೋಲ್: ೧. ತಿದಿಯನ್ನು ಒತ್ತಲು ಮೇಲೆ ಕೆಳಗೆ ಎಳೆಯುವ ಕೋಲು. ಕೋಲಿನ ತುದಿಯ ಹಗ್ಗವನ್ನು ತಿದಿಯ ಚರ್ಮಕ್ಕೆ ಕಟ್ಟಿರುತ್ತಾರೆ (ದಕ.ಜಿ) ೨. ಏತದ ತೊಲೆಯ ಚಲನೆಗೆ ನೆರವಾಗುವ ವಸ್ತು (ದಕ.ಜಿ)

ಅಡ್ಡಗಂಡಿ: ಅಡ್ಡಗಲ್ಲು (ಕೋಲಾ.ಜಿ)

ಅಡ್ಡಗಟ್ಟು (ನಾ): ೧. ಕೂರಿಗೆ ತೋಳಿಗೆ ಅಡ್ಡವಾಗಿ ಜೋಡಿಸಿದ ಮರದ ಉದ್ದನೆಯ ತುಂಡು (ಶಿವ.ಜಿ) ೨. ನೀರಿಗೆ ಅಡ್ಡಹಾಕಿರುವ ಕಟ್ಟೆ

ಅಡ್ಡಗಟ್ಟೆ: ಮರದ ಗಾಡಿಗಳಿಗೆ ಹಲಗೆ ಹಾಕಲು ತಳಭಾಗದಲ್ಲಿ ಹಾಕುವ ಮರದ ಅಡ್ಡ ಪಟ್ಟಿಗಳು (ತುಮ.ಜಿ)

ಅಡ್ಡಗಡ್ಡಿ: ೧. ಇಡಿಚಲಿನಲ್ಲಿ ಭಾರ ತಡೆದುಕೊಂಡು ನಿಲ್ಲಲು ಉಪಯೋಗಿಸುವ ಸಣ್ಣ ಕಡ್ಡಿ (ಚಿಮ.ಜಿ) ೨. ಆಸರೆಕಡ್ಡಿ;

ಉರುಳಿನ ಸಿಡಿಗಡ್ಡಿಯನ್ನು ತಡೆದು ನಿಲ್ಲಿಸಲು ಅಡ್ಡಲಾಗಿ ಇಡುವ ಬೇರೊಂದು ಕಡ್ಡಿ ೩. ಬೆಳೆಯ ಕೊಯ್ಲಿನ ಅನಂತರ ಹೊಲದಲ್ಲಿ ಉಳಿಯುವ ಕಸಕಡ್ಡಿ (ಶಿವ.ಜಿ)

ಅಡ್ಡಗಲ: ಅಡ್ಡ ಅಗಲ ಎರಡೂ ಕಡೆಯಲ್ಲೂ ಸಮನಾಗಿರುವ ಅಳತೆ

ಅಡ್ಡಗಾಯ: ೧. ಅನಿರೀಕ್ಷಿತ ಹೊಡೆತ ೨. ಅಪಘಾತ (ದಕ.ಜಿ)

ಅಡ್ಡಗಾಳಿ: ಪಕ್ಕದಿಂದ ಬೀಸುವ ಗಾಳಿ (ಬಳ್ಳಾ.ಜಿ)

ಅಡ್ಡಗುಡ್ಡೆ: ೧. ರಾಗಿ ಹುಲ್ಲನ್ನು ಅಡ್ಡಡ್ಡ ಗುಡ್ಡೆಹಾಕುವುದು (ಬಳ್ಳಾ.ಜಿ) ೨. ಒಂದು ಕಾಡಿನ ಹೆಸರು; ಸ್ಥಳನಾಮ

ಅಡ್ಡಗುಣಿ: ಅಡ್ಡಡ್ಡಲಾಗಿ ತೆಗೆದ ಕುಳಿ; ಮದುವೆಯಾಗದವರು ಸತ್ತಾಗ ಅಡ್ಡವಾಗಿ ತೋಡಿದ ಗುಣಿಯಲ್ಲಿ ಹೂಳುತ್ತಾರೆ. **ಪ್ರ**: ಅಡ್ಡಗುಣೀಲಿ ಹಾಕಿ ದೊಡ್ಡ ಗುಣೀಲಿ ಎಳೆಯ (ಬೈಗುಳ)

ಅಡ್ಡಗೆಲಸ: ಮುಖ್ಯವಲ್ಲದ ಚಿಕ್ಕ ಪುಟ್ಟ ಕೆಲಸ

ಅಡ್ಡಗೋಡೆ: ಎರಡು ಆವರಣಗಳ ನಡುವೆ ಇರುವ ಅರ್ಧ ಎತ್ತರದ ಗೋಡೆ. ಅಡುಗೆ ಕೋಣೆಗೂ ಊಟದ ಕೋಣೆಗೂ ನಡುವೆ ಇರುವ ಸುಮಾರು ಎದೆಮಟ್ಟದ ಗೋಡೆ (ಮೈಸೂ.ಜಿ/ಚಾಮ.ಜಿ)

ಅಡ್ಡಗೋಡೆ ಮ್ಯಾಲ ದೀಪ: ೧. ಖಚಿತ ನಿರ್ಧಾರ ಹೇಳದೆ ಎರಡೂ ಕಡೆಗೆ ಹೊಯ್ದಾಡುವುದು (ಧಾರ.ಜಿ) ೨. ಎರಡೂ ಕಡೆ ಸಲ್ಲುವ ಹಾಗೆ ನುಣುಚಿಕೊಳ್ಳುವ ಮಾತು

ಅಡ್ಡಗ್ಯಾಜಿಗೆ: ಜಡೆಗೆ ಅಡ್ಡಲಾಗಿ ಹಾಕಿಕೊಳ್ಳುವ ಒಂದು ಆಭರಣ **ಇರೂ:** *ಅಡ್ಡಕೇದಗೆ*

ಅಡ್ಡಗ್ಯಾದಿಗೆ: **ನೋಡಿ–** ಅಡ್ಡಗ್ಯಾಜಿಗೆ

ಅಡ್ಡಗ್ವಾಡಿ: **ನೋಡಿ–** ಅಡ್ಡಗೋಡೆ

ಅಡ್ಡಚೌಕ: ಶಿವಲಿಂಗವನ್ನಿಡುವ ಪೆಟ್ಟಿಗೆ (ದಕ.ಜಿ)

ಅಡ್ಡಚೌಕಿ: ಚೌಕಿಯಲ್ಲಿ ಹಾಸ್ಯಗಾರನು ಕುಳಿತುಕೊಳ್ಳುವ ಸ್ಥಳ (ದಕ.ಜಿ)

ಅಡ್ಡಚ್ಚ: ಎತ್ತುಗಳನ್ನು ಕಟ್ಟುವ ನೊಗದ ಸೀಳು ಮೊಳೆಗಳು

ಅಡ್ಡಜಗ್ಗು: ೧. ನೇರ ಮಾರ್ಗದಲ್ಲಿ ನಡೆಯದಂತೆ ಮಾಡು ೨. ಅಸಹಕಾರ ತೋರು. **ಇರೂ:** *ಅಡ್ಡತಾಕು (ದಕ.ಜಿ)*

ಅಡ್ಡಣ: ಒಂದು ಆಯುಧ (ದಕ.ಜಿ)

ಅಡ್ಡಣ ಹಾರಿಸುವುದು: ದಕ್ಷಿಣ ಕನ್ನಡ ಜಿಲ್ಲೆಯ ವಿಟ್ಲ ಅರಸರ ಗೌರವಾರ್ಥ ನಡೆಸುತ್ತಿದ್ದ ಯುದ್ಧ ವಿದ್ಯೆಯ ಅಣಕು ಪ್ರದರ್ಶನ. ಇಂದು ಇದು ಸಾಂಕೇತಿಕವಾಗಿ ಆಯುಧವನ್ನು ಎತ್ತಿ ಇಡುವಲ್ಲಿಗೆ ಮುಕ್ತಾಯವಾಗುತ್ತದೆ (ದಕ.ಜಿ)

ಅಡ್ಡಣಗಿ: **ನೋಡಿ–** ಅಡ್ಡಣಿಗೆ

ಅಡ್ಡಣಿ (ನಾ): ಅಡ್ಡವಾಗಿ ಧಾರಣೆ ಮಾಡಿಕೊಂಡ ನೂಲು; ಜನಿವಾರ (ದಕ.ಜಿ)

ಅಡ್ಡಣಿಕೆ: ದೈವದ ಪಲ್ಲಕ್ಕಿಯ ಒಂದು ರೂಪ

ಅಡ್ಡಣಿಗೆ: ಊಟಮಾಡುವಾಗ, ಆರತಿ ಮಾಡುವಾಗ ಹಾಗೂ ಮದುವೆಯ ಸಂದರ್ಭದಲ್ಲಿ ಬಳಸುವ ಮೂರು ಕಾಲುಳ್ಳ ಮರದ ಅಥವಾ ಲೋಹದ ಮಣೆ. **ಇರೂ:** *ಅಡ್ಡಣಗಿ, ಅಡ್ಡೋಣಗಿ, ತೇವಟಿಗೆ, ಮುಕ್ಕಾಲಿ*

ಅಡ್ಡತಾಕು (ನಾ): ೧. ದೊಡ್ಡ ಜಮೀನಿನಲ್ಲಿ ಹಾದುಹೋಗಿರುವ ಬೇರೆಯವರ ಒಡೆತನದ ಸಣ್ಣ ಜಮೀನಿನ ಭಾಗ; –ತುಂಡು (ಕ್ರಿ) **೨. ನೋಡಿ– ಅಡ್ಡಜಗ್ಗು**

ಅಡ್ಡತಿಡ್ಡ: ಅಸ್ತವ್ಯಸ್ತ (ಗುಲ್ಬ.ಜಿ)

ಅಡ್ಡತೆರಿಕೆ: ಅಡ್ಡತೆರೆ

ಅಡ್ಡತ್ತಕಾಣಿಕೆ: ಕೋಲ ನೇಮಗಳಲ್ಲಿ ಭಕ್ತರು ಒಪ್ಪಿಸುವ ಕಾಣಿಕೆ (ದಕ.ಜಿ)

ಅಡ್ಡದಂಡಿಗೆ: ಪಲ್ಲಕ್ಕಿ (ಚಿಮ.ಜಿ)

ಅಡ್ಡದನಿ: ಭಿನ್ನಾಭಿಪ್ರಾಯದ ಮಾತು. **ಇರೂ:** ಅಡ್ಡಮಾತು

ಅಡ್ಡದಾರಿ: ೧. ಹತ್ತಿರದ ದಾರಿ ೨. ಕೆಟ್ಟನಡತೆ (ಮಂಡ್ಯ.ಜಿ)

ಅಡ್ಡದೂತಿ: ಬಯಲಾಟದ ಹಾಸ್ಯಪಾತ್ರ; ಪ್ರಸಂಗಗಳ ಮಧ್ಯೆ ಬಂದು ಪಾತ್ರಧಾರಿಗಳನ್ನು ಛೇಡಿಸಿ ಅವರಿಂದ ತಾನೂ ಅಪಹಾಸ್ಯಕ್ಕೀಡಾಗಿ ಪ್ರೇಕ್ಷಕರಿಗೆ ಮನೋರಂಜನೆ ನೀಡುವ ಪಾತ್ರ (ಬೆಳ.ಜಿ)

ಅಡ್ಡಧ್ಯಾನ/ಅಡ್ಡಗ್ಯಾನ: ಅನ್ಯಮನಸ್ಕತೆ; ಬೇರೆ ಕಡೆ ಗಮನ ಇರುವಿಕೆ. **ಪ್ರ**: ಅಡ್ಡಗ್ಯಾನದಲ್ಲಿ ಏನೋ ಹೇಳಿಬಿಟ್ಟರು

ಅಡ್ಡನಮಸ್ಕಾರ: ದೀರ್ಘದಂಡ ನಮಸ್ಕಾರ (ಚಾಮ.ಜಿ)

ಅಡ್ಡನಲಿಕೆ: ಅಡ್ಡ ಕುಣಿತ; ಅಡ್ಡಡ್ಡವಾಗಿ ಕುಣಿಯುವ ಭೂತ ನೃತ್ಯದ ಒಂದು ವಿಧಾನ (ದಕ.ಜಿ)

ಅಡ್ಡನಾಟಿ: ಅಡ್ಡಡ್ಡಲಾಗಿ ನಟ್ಟಿರುವ ಸಸಿ

ಅಡ್ಡನಾಡಿ: ಕೆಲಸಗೇಡಿ; ಅಡ್ಡಹಾದಿ ಹಿಡಿದವ್ಯಕ್ತಿ; ಬೆರಕೆ ತಳಿ (ಬಳ್ಳಾ.ಜಿ)

ಅಡ್ಡನಾಮ: ಗೊರವರಲ್ಲಿ ಶೈವ ಪಂಥದವರು ಹಣೆಯಲ್ಲಿ ಧರಿಸುವ ಚಿಹ್ನೆ (ಬೆಂಗ.ಜಿ)

ಅಡ್ಡನಾಲಿಗೆ: ೧. ಉಗ್ಗು ಇರುವ ನಾಲಗೆ ೨. ತೊದಲು ನಾಲಗೆ (ದಕ.ಜಿ)

ಅಡ್ಡಪಂಕ್ತಿ (ಕ್ರಿ): ಶೇರುಗಾರ ಜನಾಂಗದಲ್ಲಿರುವ ಕೆಳವರ್ಗದ ಜಾತಿ (ಉಕ.ಜಿ)

ಅಡ್ಡಪಕ್ಕಾಸು: ದೊಡ್ಡ ಛಾವಣಿಯಲ್ಲಿ ಎರಡು ಪಕ್ಕಾಸುಗಳ ಮೇಲೆ ಅಡ್ಡಲಾಗಿ ಹಾಕಿದ ಪಕ್ಕಾಸು (ದಕ.ಜಿ)

ಅಡ್ಡಪಟ್ಟಿ: ೧. ಭತ್ತದ ಪೈರನ್ನು ಬಡಿಯುವ ಮಂಚದ ಉದ್ದನೆಯ ತುಂಡು **ಇರೂ:** *ದಾನ್ ನೀಟಪಟ್ಟ, ಪಡಿ (ದಕ.ಜಿ), ಸೆಳೆಮಂಚ (ಉಕ.ಜಿ), ಹಡಿಮಂಚ* ೨. ಬಾಗಿಲಿಗೆ ಅಡ್ಡಲಾಗಿ ಹಾಕಿರುವ ಪಟ್ಟಿ

ಅಡ್ಡಪಲಾಯಿ: ಕೋಣಗಳಿಗೆ ಉಳುಮೆ ಸಮಯದಲ್ಲಿ ಹಾಗೂ ಕಂಬಳದ ಸಮಯದಲ್ಲಿ ಕಟ್ಟುವ ಹಲಗೆ (ದಕ.ಜಿ)

ಅಡ್ಡಪಲ್ಲಕ್ಕಿ/ಅಡ್ಡಪಾಲಕಿ: ದೇವರು, ಸ್ವಾಮಿಗಳು ಮೊದಲಾದವರನ್ನು ಕೂರಿಸಿ ಅಡ್ಡಡ್ಡಲಾಗಿ ಹೊರುವ ಪಲ್ಲಕ್ಕಿ. **ಪ್ರ:** ಅಡ್ಡಪಲ್ಲಕ್ಕಿಯಲ್ಲಿ ಮುಳ್ಳಯ್ಯನನ್ನು ಹೊತ್ತು ಮೆರವಣಿಗೆ ಮಾಡಿದರು

ಅಡ್ಡಬಣವೆ: ಹುಲ್ಲಿನ ಪ್ರಮಾಣ ಹೆಚ್ಚಿದ್ದಾಗ ಅಡ್ಡವಾಗಿ ಅಥವಾ ಉದ್ದವಾಗಿ ಹಾಕಿದ ಬಣವೆ (ದಾವ.ಜಿ)

ಅಡ್ಡಬತ್ತಿ: ಅಡ್ಡವಿಭೂತಿ ೧. ಹಣೆಯ ಮೇಲಿರುವ ಮೂರು ಬೆರಳಿನ ವಿಭೂತಿ ಲಾಂಛನ ೨. ಆರತಿಯಲ್ಲಿ ಬಳಸುವ ಹತ್ತಿಬತ್ತಿಯ ಒಂದು ಬಗೆ

ಅಡ್ಡಬದು: ಗದ್ದೆಯನ್ನು ಅಡ್ಡಡ್ಡಲಾಗಿ ವಿಭಾಗಿಸುವ ಸಣ್ಣ ಬದು; –ಏರಿ

ಅಡ್ಡಬದ್ದಿ: ಬಂಡಿಯ ತೊಟ್ಟಿಲಲ್ಲಿ ಅಡ್ಡವಾಗಿ ಹಾಕಿರುವ ಹಲಗೆ. ಅಡ್ಡೆಪಟ್ಟಿ (ಬೀದ.ಜಿ)

ಅಡ್ಡಬರು: ಬೆದೆ ಹತ್ತು (ಮೈಸೂ.ಜಿ). **ಪ್ರ:** ಎಮ್ಮೆ ಅಡ್ಬಂದದೆ

ಅಡ್ಡಬಲಿಪ: ಪಟ್ಟೆಹುಲಿ (ದಕ.ಜಿ)

ಅಡ್ಡಬಾಣಂತಿ: ಬಸುರಿ ಅಥವಾ ಬಾಣಂತಿ ಇದ್ದಾಗ ಸತ್ತವಳ ಪ್ರೇತ (ಉಕ.ಜಿ)

ಅಡ್ಡಬಿಗಿ: ತೊಲೆ ಮೇಲೆ ಹಾಕುವ ಅಡ್ಡಪಟ್ಟಿ (ಮೈಸೂ.ಜಿ)

ಅಡ್ಡಬಿರಿ: ತೇರಿನ ರಚನೆಯಲ್ಲಿ ಪ್ರತಿಯೊಂದು ಅಂಕಣದಲ್ಲಿ ಕೀಲು ಕೀಲುಗಳ ನಡುವೆ ಹೊಡೆದಿರುವ ಮರದ ಪಟ್ಟಿ (ಬಳ್ಳಾ.ಜಿ)

ಅಡ್ಡಬೀಳು (ಕ್ರಿ): ೧. ದೀರ್ಘದಂಡ ನಮಸ್ಕಾರ ಮಾಡು; ನಮಸ್ಕರಿಸು. ೨. ಸೆರಗು ಹಾಸು; ಹಾದರಕ್ಕಿಳಿ (ಧಾರ.ಜಿ)

ಅಡ್ಡಮಕಹಾಕು: ಅಸಮಾಧಾನ ವ್ಯಕ್ತಪಡಿಸು (ಮೈಸೂ.ಜಿ). **ಪ್ರ:** ಬುದ್ದಿ ಮಾತು ಹೇಳಕ್ಕೆ ಹೋದ್ರೆ ಅವ್ನು ಅಡ್ಡ ಮಕಹಾಕ್ದ

ಅಡ್ಡಮಣೆ: ೧. ರಾಟೆಯ ಚಕ್ರದ ಕೆಳಭಾಗದ ಮರ; ಮೂಕಿನ ಕೆಳಗೆ ಜೋಡಿಸಿದ ಮಣೆ (ಶಿವ.ಜಿ) ೨. ಸಮಗಾರರು ಚರ್ಮ ತುಂಡು ಮಾಡಲು ಇಟ್ಟುಕೊಳ್ಳುವ ಮರದ ತುಂಡು (ದಕ.ಜಿ)

ಅಡ್ಡಮಣೇವು: ದೇವರ ಎದುರು ಕರಿಯ ಕಂಬಳಿ ಹಾಸಿ ಅದರಲ್ಲಿ ತಂಬಿಟ್ಟು, ಬಾಳೆಹಣ್ಣು, ಸಕ್ಕರೆಯನ್ನು ಮೂರು ಕಡೆ ಇಟ್ಟು ಕಂಬಳಿ ಸುತ್ತ ಮಣೇವು ಹಾಯುವ ದಾಸಪ್ಪಗಳು ವಾಲಗದ ಗತ್ತಿಗೆ ತಕ್ಕಂತೆ ಕುಣಿದು ಕೈ ಬಳಸದೇ ನೇರವಾಗಿ ಬಾಯಿಹಾಕಿ ತಿನ್ನುವುದು. (ಬಳ್ಳಾ.ಜಿ/ತುಮ.ಜಿ) **ನೋಡಿ–** ಮಣೆಸೇವೆ

ಅಡ್ಡಮರ: ೧. ಅಡ್ಡಲಾಗಿ ಹಾಕಿದ ಮರ; ಹಾಯಿಯನ್ನು ಚಾಚುವುದಕ್ಕಾಗಿ ಉಪಯೋಗಿಸುವ ಹಾಯಿಯ ತಳಕ್ಕೆ ಸೇರಿಕೊಂಡಿರುವ ಮರದ ದಿಮ್ಮಿ ೨. ದೋಣಿಯನ್ನು ಎಳೆಯುವ ಗೂಟವನ್ನು ತಿರುಗಿಸುವ ಮರದ ಬಡಿಗೆ (ದಕ.ಜಿ) ೩. ಕಂಬಳದ ಕೋಣಗಳ ಕೊಂಬಿನ ಹಿಂಬದಿಗೆ ಕಟ್ಟಿದ ಹಲಗೆ (ದಕ.ಜಿ) ೪. ಬೀಜ ಬಿತ್ತಿ ಸಾಲು ಮುಚ್ಚುವುದಕ್ಕೆ ಬಳಸುವ ಉಪಕರಣ. ೫. ತುಲಾಭಾರದ ಸಂದರ್ಭದಲ್ಲಿ ಅಡ್ಡವಾಗಿ ಹಾಕಿದ ಹಲಗೆ. ೬. ನೇಕಾರ ನಿಂತುಕೊಳ್ಳಲು ಅಡ್ಡಲಾಗಿ ಹಾಕಿಕೊಂಡಿರುವ ಕೊರಡಿನಂಥ ದಪ್ಪಹಲಗೆ (ಶಿವ.ಜಿ)

ಅಡ್ಡಮಳೆ/ಅಡ್ಮಳೆ: ಜೋರಾಗಿ ಸುರಿಯುವ ಅಕಾಲಿಕ ಮಳೆ; ಗಾಳಿಗೆ ವಿರುದ್ಧ ದಿಕ್ಕಿನಲ್ಲಿ ಸುರಿವ ಮಳೆ (ಮಂಡ್ಯ.ಜಿ). **ಪ್ರ:** ಇಸಾನಿ ಮೂಲೆ ಅಡ್ಮಳೆ ಸರ್‍ಯಾಗಿ ಇಕ್ಕುಡುಸ್ತು

ಅಡ್ಡಮಾತು: ೧. ಅಸಂಬದ್ಧವಾಗಿ ಆಡುವ ಮಾತು; ಹಾದಿಬಿಟ್ಟ ಮಾತು; ವಿಷಯಾಂತರ; ಅಧಿಕ ಪ್ರಸಂಗದ ಮಾತು; **ಪ್ರ:** ಅಡ್ಡಮಾತು ತೆಗೆ (ಚಾಮ.ಜಿ). ಮಾತಾಡುವಾಗ ನೇರವಾಗಿ ವಿಷಯಕ್ಕೆ ಸಂಬಂಧಪಟ್ಟ ಹಾಗೆ ಮಾತಾಡದೆ ಗಮನವನ್ನು ಬೇರೆಕಡೆ ಸೆಳೆಯುವುದು (ಶಿವ.ಜಿ) ೨. ತಡೆಯೊಡ್ಡು; ವಿರುದ್ಧ ಕೆಲಸಮಾಡು; **ಇರೂ:** ಅಡ್ಡಬಾಯಿ

ಅಡ್ಡಮಾರೆ ಮಾಡು (ಕ್ರಿ): ಬೇರೆ ಕಡೆ ಮುಖ ತಿರುಗಿಸು; ಅಸಮಾಧಾನ ತೋರಿಸಲು ಸೊಟ್ಟಮೋರೆ ಮಾಡು

ಅಡ್ಡಮುಂಡು: ಗಂಡಸರು ಕಚ್ಚೆ ಹಾಕದೆ ಉಟ್ಟುಕೊಳ್ಳುವ ನಾಲ್ಕು ಮೊಳದ ವಸ್ತ್ರ (ದಕ.ಜಿ)

ಅಡ್ಡಮುರಿ: ೧. ಗರಗಸದಿಂದ ಅಡ್ಡಡ್ಡಲಾಗಿ ಕೊಯ್ಯುವಿಕೆ ೨. ದೊಡ್ಡಗಾತ್ರದ ಗರಗಸ; ದೊಡ್ಡಮರ ಕತ್ತರಿಸಲು ಬಳಕೆ (ದಕ.ಜಿ)

ಅಡ್ಡಮೆಡ್ಡೆ: ಕಾಟಾಚಾರದ; ಕೆಲಸಕ್ಕೆ ಬಾರದ

ಅಡ್ಡಯಾಸ: ಅಡ್ಡವೇಷ. ಬಯಲಾಟ ಪ್ರದರ್ಶನದಲ್ಲಿನ ಹಾಸ್ಯ ಪಾತ್ರ. **ಇರೂ:** *ಅಡ್ಡಸೋಗು (ದಕ.ಜಿ/ಬಳ್ಳಾ.ಜಿ)*

ಅಡ್ಡರಾಟೆ: ಲಡಿ ಬಿಚ್ಚುವ ರಾಟೆ

ಅಡ್ಡರ್ಬಿ: ಅಡ್ಡೆ ಮೇಲೆ ಹೊತ್ತುಕೊಂಡು ಬರುವಂಥ ಹರವಿ

ಅಡ್ಡಲಡ: ದಪ್ಪ ತಲೆಯವನು

ಅಡ್ಡವು: ದೋಣಿಯಲ್ಲಿ ಜನರು ಕುಳಿತುಕೊಳ್ಳುವ ಮರದ ಹಲಗೆ (ದಕ.ಜಿ)

ಅಡ್ಡಸಗಿ: ನೋಡಿ– ಅಡ್ಡಣಿಗೆ

ಅಡ್ಡಸರದ ಗಿಡ: ನೋಡಿ– ಅಡಸೋಗೆ

ಅಡ್ಡಸಾಲು: ಅಡ್ಡಡ್ಡವಾಗಿ ಸಾಲು ಮಾಡಿ ಬಿತ್ತಿದ್ದು

ಅಡ್ಡಸುಂಕ (ನಾ): ಕುರಿಮಾರಾಟದ ನಂತರ ಪಡೆಯುವ ತೆರಿಗೆ (ದಕ.ಜಿ)

ಅಡ್ಡಸುಳಿ (ಕ್ರಿ): ೧. ಆಗಾಗ ಎದುರಿಗೆ ಸುಳಿದಾಡು; ಎಡತಾಕು (ಮೈಸೂ.ಜಿ) (ನಾ) ೨. ಎತ್ತಿನ ಮೈ ಮೇಲಿರುವ ಒಂದು ರೀತಿಯ ಸುಳಿ

ಅಡ್ಡಸೆರಗು: ಸೆರಗನ್ನು ತಲೆಯ ಮೇಲೆ ಹಾಕದೆ ಎದೆಯ ಮೇಲೆ ಹೊದೆಯುವುದು. ಮುತ್ತೈದೆಯರು ಅಡ್ಡಸೆರಗು ಹಾಕಬಾರದು ಎಂಬ ನಂಬಿಕೆ ಇದೆ

ಅಡ್ಡಸೋಗು: ೧. ಬಯಲಾಟ, ಸಣ್ಣಾಟಗಳಲ್ಲಿ ನಡುನಡುವೆ ಬೇಸರ ನಿವಾರಿಸಲು ಬರುವ ಹಾಸ್ಯ ಪಾತ್ರ ೨. ಆಟದ ಮಧ್ಯೆ ಕತೆ ನಿಲ್ಲಿಸಿ, ಆಡಿ ತೋರಿಸುವ ಹಾಸ್ಯ ಪ್ರಸಂಗ (ಬಳ್ಳಾ.ಜಿ). **ನೋಡಿ–** ಅಡ್ಡಯಾಸ

ಅಡ್ಡಹರಗು (ಕ್ರಿ): ಖಾಲಿ ಹೊಲದಲ್ಲಿ ಒಮ್ಮೆ ಉದ್ದಸಾಲಿನಲ್ಲಿ ಹರಗಿದ ನಂತರ ಅಡ್ಡಡ್ಡಾಗಿ ಹರಗುವುದು (ಬಳ್ಳಾ.ಜಿ)

ಅಡ್ಡಹಲಗೆ: ೧. ಕಂಬಳದಲ್ಲಿ ಕೋಣಗಳು ಎಳೆದುಕೊಂಡು ಓಡುವಂತೆ ಕಟ್ಟುವ ಮತ್ತು ಓಡಿಸುವಾತ ನಿಲಲ್ಲು ಅಡ್ಡಲಾಗಿ ಹಾಕಿರುವ ಹಲಗೆ ೨. ಕೋಣಗಳಿಗೆ ಹಲಗೆಯನ್ನು ಕಟ್ಟಿ ಓಡಿಸುವುದು (ದಕ.ಜಿ)

ಅಡ್ಡಹಲ್ಲು: ಸಾಲುಬಿಟ್ಟು ಅಡ್ಡಲಾಗಿ ಹುಟ್ಟಿರುವ ಹಲ್ಲು

ಅಡ್ಡಹಿಡಿ: ತಲೆಹಿಡುಕ ಕೆಲಸ ಮಾಡು; ಕುಂಟಲತನಮಾಡು (ಬೆಂಗ್ರಾ.ಜಿ). **ಇರೂ:** *ಅಡ್ಡಿಡಿ*

ಅಡ್ಡಹಿಡಿತ: ಅಸಂಗತ ಪಟ್ಟು; ಹಠ

ಅಡ್ಡಹುಟ್ಟಿದೋನು: ಅನೈತಿಕವಾಗಿ ಹುಟ್ಟಿದವನು; ಒಂದು ಬೈಗುಳ

ಅಡ್ಡಹೆಸರು/ಅಡ್ಡೆಸರು: ೧. ವ್ಯಕ್ತಿಗೆ ನಾಮಕರಣವಾದ ಹೆಸರಿಗೆ ಬದಲಾಗಿ ಅವನ ಸ್ವಭಾವ ರೂಪ, ಗುಣ ಇತ್ಯಾದಿಗಳಿಗೆ ಅನುಗುಣವಾಗಿ ಕರೆಯುವ ಮತ್ತೊಂದು ಹೆಸರು (ದಕ) ೨. ಗುರುತು ಹಚ್ಚಲು ಬಳಸುವ ಬದಲಿ ಹೆಸರು ೩. ಮನೆತನದ ಹೆಸರು (ಉಕ)

ಅಡ್ಡಹೊದಿಕೆ: ಉತ್ತರೀಯ ಅಥವಾ ಶಾಲನ್ನು ಎಡಗಡೆ ಹೆಗಲ ಮೇಲಿಂದ ತಂದು ಬಲಕಂಕುಳ ಕೆಳಗಿನಿಂದ ತೆಗೆದು ಮತ್ತೆ ಎಡ ಹೆಗಲ ಮೇಲೆ ಹಾಕಿ ಹೊದೆಯುವುದು

ಅಡ್ಡಾ: ಕಟ್ಟಿಗೆ ಮಾರುವ ಪ್ರದೇಶ

ಅಡ್ಡಾಉದ್ದಮಾತು: ಅಸಂಬದ್ಧ ಆಡುವ ಮಾತು

ಅಡ್ಡಾಕ (ಕ್ರಿ): ಪರಪುರುಷನೊಂದಿಗೆ ಸಂಬಂಧ ಹೊಂದುವಂತೆ ಸಹಕರಿಸು; ತಲೆಹಿಡುಕತನ ಮಾಡು. **ಇರೂ:** *ಅಡ್ಡಹಿಡಿ*

ಅಡ್ಡಾಗಲ ಮಾಡು: ಅಗಲಗೊಳಿಸು; ಅಗಲದ ಅಳತೆ ಹೆಚ್ಚಿಸು (ಧಾರ.ಜಿ)

ಅಡ್ಡಾಗು (ಕ್ರಿ): ಮಲಗು; ವಿಶ್ರಾಂತಿ ಪಡೆ (ಉಕ) **ಪ್ರ:** ಹಂಗೇ ಒಂದಷ್ಟು ಹೊತ್ತು ಅಡ್ಡಾಗ್ತೀನಿ (ಚಿತ್ರ.ಜಿ).

ಅಡ್ಡಾಡು: ತಿರುಗು; ತಿರುಗಾಡು **ಪ್ರ:** ಹಂಗೇ ಅಡ್ಡಾಡ್ಕಂಡು ಬರಾಣ ಅಂತ ಹೊಂಟಿದ್ದೆ (ಚಾಮ.ಜಿ).

ಅಡ್ಡಾಣಿ: ಹೊಕ್ಕು; ಮಗ್ಗದ ಹಾಸಿನೊಳಗೆ ಬರುವ ಅಡ್ಡೆಳೆ

ಅಡ್ಡಾದುಡ್ಡು: ೧. ಅಗ್ಗದ ಬೆಲೆ; ಕಡಿಮೆ ಬೆಲೆ (ಬೆಂಗ್ರಾ.ಜಿ) ೨. ಕೆಟ್ಟ ಮಾರ್ಗದಲ್ಲಿ ಗಳಿಸಿದ ಹಣ ೩. ಅರ್ಧ ದುಡ್ಡು; ಎರಡು ಕಾಸು (ಬೆಂಗ್ರಾ.ಜಿ)

ಅಡ್ಡಾಬಡ್ತಿಗೆ: ಮರದಲ್ಲಿರುವ ಹಣ್ಣು ಕಾಯಿ ಉದುರಿಸಲು ಎಸೆಯುವ ಗಿಡ್ಡನೆಯ ಕೋಲು (ಉಕ.ಜಿ)

ಅಡ್ಡಾಯು: ಅಡ್ಡಹಾಯು; ಅಡ್ಡಿಯಾಗು

ಅಡ್ಡಾರ: ಅಗಲ; ವಿಸ್ತಾರ (ಬಳ್ಳಾ.ಜಿ)

ಅಡ್ಡಾರಿ: ಕಣವನ್ನು ಸ್ವಚ್ಛ ಮಾಡಲು ಬಳಸುವ ಪೊರಕೆ (ಉಕ.ಜಿ). **ಇರೂ:** *ಸಾಣೆ (ಮಂಡ್ಯ.ಜಿ)*

ಅಡ್ಡಾಸಡ್ಡಿ: ಬೇಕಾಬಿಟ್ಟಿ; ಅಡೆತಡೆಯಿಲ್ಲದ; ಅಡ್ಡಾದಿಡ್ಡಿ. **ಇರೂ:** ಅಡ್ಡಿಸಡ್ಡಿ

ಅಡ್ಡಾಳ: ಅಗಲವಾದ

ಅಡ್ಡಿ: ೧. ಗೃಹನಿರ್ಮಾಣದಲ್ಲಿ ಕಂಬದ ಮೇಲಿರುವ ಬೋದುಗಳು ಅಲುಗಾಡದೆ ಇರುವ ಹಾಗೆ ಬೋದು ಮತ್ತು ಇನ್ನೊಂದು ಬೋದಿನ ನಡುವೆ ಜೋಡಣೆ ಮಾಡಿರುವ ಕಟ್ಟಿಗೆ (ಬಳ್ಳಾ.ಜಿ) ೨. ಬಡಿಗರು ಕಟ್ಟಿಗೆ ಕೆತ್ತಲು ಬಳಸುವ ದಪ್ಪನೆಯ ತುಂಡು ೩. ಕೊಡತಿ ೪. ಧಾನ್ಯಗಳನ್ನು ಅಳೆಯುವ ಮಾಪನ ೫. ಸುಮಾರು ನಾಲ್ಕು ಕೆಜಿಯಷ್ಟು ತೂಕದ ಅಳತೆ. ಹದಿನಾರು ಸೇರುಗಳ ಒಂದು ಅಳತೆ; ಮಾಪನ (ಬೀದ.ಜಿ) ೬. ತಡೆ; ವಿಘ್ನ; ತೊಂದರೆ, ೭. ದೊಡ್ಡಕಲ್ಲನ್ನು ಸೀಳಲು ಬಳಸುವ ಉಳಿ ೮. ಅಡವಿ ೯. ತೋಳಿನ ಆಭರಣ ೧೧. ಬೇಲಿನುಗ್ಗಿ ಬೆಳೆಯನ್ನು ತಿನ್ನುವ ಪೋಲಿದನ ೧೨. ತೋಟಗಳ ಬೇಲಿ

ಅಡ್ಡಿಕರ್ಚಿಕಾಯಿ: ಬಳ್ಳಿಯಲ್ಲಿ ಬೆಳೆದ ಒಂದು ಬಗೆಯ ಕಾಯಿ (ಕೊಪ್ಪ.ಜಿ)

ಅಡ್ಡಿಕೆ: ೧. ಕೊರಳಲ್ಲಿ ಧರಿಸುವ ಅರ್ಧಚಂದ್ರಾಕಾರದ ಒಂದು ಒಡವೆ ೨. ಹೊಟ್ಟೆಯಲ್ಲಿ ಬೆಳೆದ ಗಡ್ಡೆ (ಮೈಸೂ.ಜಿ) ೩. ತಡೆ ಒಡ್ಡುವ ಅಡ್ಡ ಕಟ್ಟಿಗೆ (ಗುಲ್ಬ.ಜಿ). **ಇರೂ:** *ಅಡ್ಡಿಗೆ*

ಅಡ್ಡಿಕೆಓಲೆ: ಕಿವಿಯ ಆಭರಣ

ಅಡ್ಡಿಕೆಗಿಡ/ಅಡ್ಡಿಕೆಸೊಪ್ಪು: ಉದ್ದವಾದ ನಾಳವಿರುವ ಹಳದಿ ಬಣ್ಣದ ಚಿಕ್ಕ ಹೂವನ್ನುಳ್ಳ ಒಂದು ಔಷಧೀಯಸಸ್ಯ. ಗಾಯ ಮಾಯಲು, ರಕ್ತ ಹೆಪ್ಪುಗಟ್ಟಲು ಇದರ ರಸ ಬಳಸುತ್ತಾರೆ. (ಮಂಡ್ಯ.ಜಿ) ಮಕ್ಕಳು ಈ ಹೂಗಳಿಂದ ಅಡ್ಡಿಕೆಯ ರೂಪದ ಸರವನ್ನು ಹೆಣೆಯುತ್ತಾರೆ. **ಇರೂ:** *ಅಡಕೆ ಸೊಪ್ಪು, ಇಲಾತಿಸೊಪ್ಪು (ಬೀದ.ಜಿ) ಗೊಂಡೆಸೊಪ್ಪು, ಜ್ವಾಮಾಲಿ ಸೊಪ್ಪು, ನಡುಮುರುಕಲ ಸೊಪ್ಪು, ನೊಟ್ಟನಹಳ,* (ಚಿತ್ರ ನೋಡಿ)

ಅಡ್ಡಿಗ: ೧. ಎರಡೂ ಕೋಡುಗಳು ಹೊರಭಾಗಕ್ಕೆ ಚಾಚಿದ ಎತ್ತು ೨. ಹತ್ತಿರ (ಬಳ್ಳಾ.ಜಿ)

ಅಡ್ಡಿಗೈ: ಹೊಟ್ಟೆಯಲ್ಲಿ ಬೆಳೆದ ಗಡ್ಡೆ (ಬಳ್ಳಾ.ಜಿ)

ಅಡ್ಡಿಚಾರಿಕೆ: ಪಾಟೀಸವಾಲು; ಎದುರು ಪ್ರಶ್ನೆ ಹಾಕುವಿಕೆ

ಅಡ್ಡಿಥುಂಬು: ೧. ಸಾವು ಸಮೀಪಿಸು; ಆಯುಷ್ಯ ಮುಗಿಸು ೨. ಮಾಪಿನಲ್ಲಿ ಕಾಳು, ಹಾಲು, ಮೊಸರು ಇತ್ಯಾದಿ ತುಂಬು (ಧಾರ.ಜಿ)

ಅಡ್ಡಿಭರ್ತಿ: ಮರಣ. ಒಂದು ಬೈಗುಳ ಪದ

ಅಡ್ಡಿಸಡ್ಡಿ: ಅಡೆತಡೆ (ಮೈಸೂ.ಜಿ). **ಪ್ರ:** ಅವು ಅಡ್ಡಿಸಡ್ಡಿ ಇಲ್ದೋವು, ನಾನೇನು ಅಡ್ಡಿಸಡ್ಡಿಲ್ದೆ ಬೆಳೆದೋಳಲ್ಲ

ಅಡ್ಡಿಹಂದಿ: ಬೆಳೆ ನಾಶ ಮಾಡುವ ಹಂದಿ; ಕಾಡುಹಂದಿ

ಅಡ್ಡಿಹೊಡೆ: ಬೆಳೆ ತೆಗೆದ ಜಮೀನಿನಲ್ಲಿ ಮೇಯಲು ದನಕರುಗಳನ್ನು ಬಿಡುವುದು

ಅಡ್ಡು: ಮಲೆನಾಡು ಶೈವಒಕ್ಕಲಿಗರಲ್ಲಿ ಮದುಮಗನ ಜೊತೆಯಲ್ಲಿರುವ ಸುಮಾರು ಆತನದೇ ವಯಸ್ಸಿನ ಯುವಕ. **ನೋಡಿ–** ಅಡುಗಲದಮ್ಮ

ಅಡ್ಡುಗುಲು: ಮರಮುಟ್ಟುಗಳಲ್ಲಿ ತೋಡಿದ ನೇರವಲ್ಲದ ರಂಧ್ರ (ಬಳ್ಳಾ.ಜಿ). **ಇರೂ:** *ವಟ್ಟೆ*

ಅಡ್ಡುಣ್ಗಿ: ಅಡ್ಡಣಿಗೆ; ಮೂರು ಕಾಲಿನ, ಊಟದ ತಟ್ಟೆಯಿಡುವ ಪೀಠ (ಗುಲ್ಬ.ಜಿ)

ಅಡ್ಡುಮ್ಮೆಡಿ: ಹೆಗ್ಗುಂಟೆ ಮತ್ತು ಇತರೆ ಹಸನುಗೊಳಿಸುವ ಸಾಧನಗಳಲ್ಲಿ ಬಳಸುವ ನಿಯಂತ್ರಕ ಸಾಧನ. **ಇರೂ:** *ಅಡ್ಮೇಣಿ (ಬೆಂಗ.ಜಿ), ಅಡ್ಡುಮ್ಮೇಣಿ (ತುಮ.ಜಿ), ಮೇಣಿಗೋಲು*

ಅಡ್ಡುಳಿ: ಮದುವೆಯಲ್ಲಿ ವರ/ವಧುವಿನ ಜೊತೆಯಲ್ಲಿರುವ ಸಮವಯಸ್ಕರು (ಚಿಮ.ಜಿ)

ಅಡ್ಡೆ: ೧. ಬಿದಿರು ಕೋಲಿನ ಎರಡು ತುದಿಗೆ ಜೋತು ಬೀಳುವಂತೆ ನೀರಿನ ಕೊಡಗಳನ್ನು ಕಟ್ಟಿಕೊಂಡು ಹೆಗಲಲ್ಲಿ ಹೊರುವ ಸಾಧನ ೨. ಗಟ್ಟಿ ಬಿದುರಿನ ನೀಳ ಬಡಿಗೆ ಅಥವಾ ಬಂಬು (ಉಕ.ಜಿ) ೩. ಬೆಲ್ಲದ ಕೊಪ್ಪರಿಗೆಯನ್ನು ಆಲೆ ಒಲೆಗೆ ಏರಿಸಲು ಹಾಗೂ ಇಳಿಸಲು ಬಳಸುವ ಉದ್ದನೆಯ ಗಟ್ಟಿಯಾದ ಮರದ ಬಡಿಗೆ ೪. ಅಡ್ಡಿ; ಕಾವಡಿ; ವುಳಗಿ; ದೈವವನ್ನು ಹೊರಲು ಉಪಯೋಗಿಸುವ ಬೊಂಬಿನ ಸಾಧನ ೫. ಅಕ್ಕಿಯನ್ನು ಬೇಯಿಸಿ ತಯಾರಿಸಿದ ತಿಂಡಿ ೬. ಅಟ್ಟ ೭. ನಾಟಕದ ವೇದಿಕೆ ೮. ಕಟ್ಟಿಗೆ ಕೂಡಿಡುವ ಜಾಗ (ದಕ.ಜಿ) ೯. ಅಡ್ಡೆಬಿದಿರು ೧೦. ಜೂಜುಕಟ್ಟೆ; ಅಕ್ರಮ ಚಟುವಟಿಕೆಗಳ ತಾಣ (ಗುಲ್ಬ.ಜಿ) ೧೧. ಪಲ್ಲಕ್ಕಿ (ದಕ.ಜಿ)

ಅಡ್ಡೆದೇವರು: ಹಡ್ಡೆದೇವರು; ಅಡ್ಡೆಯ ಮೇಲೆ ಕೂರಿಸಿ ಹೆಗಲ ಮೇಲೆ ಹೊತ್ತು ಮೆರವಣಿಗೆಯಲ್ಲಿ ಕೊಂಡೊಯ್ಯುವ ಉತ್ಸವಮೂರ್ತಿ

ಅಡ್ಡೆನ್ಸೆಲ: ನೆಲ್ಲಿಕಾಯಿ (ದಕ.ಜಿ)

ಅಡ್ಡೆಮೇಲಿನ ಪದ್ಮ: ರಥದ ಅಡ್ಡಮರದ ಮೇಲಿನ ಪದ್ಮಗಳ ಸಾಲು (ದಕ.ಜಿ)

ಅಡ್ಡೆಸೋಗೆ: ನೋಡಿ– ಅಡಸೋಗೆ

ಅಡ್ಡೇಟು: ಗುರಿ ಇಲ್ಲದೆ ಹೊಡೆದ ಪೆಟ್ಟು, ಆದ್ರೆ ಆಗಲಿ ಹೋದರೆ ಹೋಗಲಿ ಎಂಬ ಭಾವನೆಯಿಂದ ಆಡುವ ಮಾತು ಪ್ರ: ೧. ಅಡ್ಡೇಟ್ ಮೇಲೊಂದು ಗುಡ್ಡೇಟು ೨. ಅಡ್ಡೇಟು ತಗುಲಿದರೆ ಒಡ್ಡನಾದರು ಗೆದ್ದಾನು

ಅಡ್ಡೇಣು: ಬೆಟ್ಟದ ಬುಡದ ಅಂಚು; ಕಾಲುವೆಯ ಅಂಚು (ಬೆಂಗ್ರಾ.ಜಿ)

ಅಡ್ಡೊಕ್ಕಲು: ಊರಿಗೆ ಹೊಸದಾಗಿ ಬಂದು ಒಕ್ಕಲುತನ ಆರಂಭಿಸಿದವ (ಶಿವ.ಜಿ)

ಅಡ್ಡೊಡ್ಡು: ೧. ಅಡ್ಡ ಒಡ್ಡು; ಗದ್ದೆ ಹೊಲಗಳ ಬದು; – ಅಂಚು ೨. ಮಳೆಯ ನೀರು

ಅಡ್ಡೊರ್ಲು: ಮುತ್ತೈದೆತನದ ಕುರುಹಾಗಿ ಹೊದೆಯುವ ಶಾಲು. ಶುಭ ಶೋಭನಕಾರ್ಯ ಮಾಡುವಾಗ ಆಕೆ ಅದನ್ನು ಹೊದೆಯುವುದು ಕಡ್ಡಾಯ. ಹಾಗೆ ಒಂದು ವೇಳೆ ಶಾಸ್ತ್ರ ಮಾಡುವ ಮಹಿಳೆಯ ಬಳಿ ಇಲ್ಲದಿದ್ದರೆ ಬೇರೆಯವರಿಂದ ಪಡೆದಾದರೂ ಧರಿಸಬೇಕು

ಅಡ್ಡೋಳಿ: ಒಣ ಹುಲ್ಲನ್ನು ಕತ್ತರಿಸುವ ಕತ್ತಿ (ದಕ.ಜಿ)

ಅಡ್ಬಡ್ಡಿ: ೧. ತಾಟಿಪೋಟಿ ಮಾಡುವವಳು ೨. ತುಂಬಾ ಪ್ರಯಾಸಪಡುವವಳು

ಅಡ್ವ್ಯಾಪಾರ: ಅಡ್ಡವ್ಯಾಪಾರ; ದಲ್ಲಾಳಿಗಳ ಮಧ್ಯಸ್ಥಿಕೆಯಿಂದ ಮಾಡುವ ವ್ಯಾಪಾರ

ಅಡ್ತಿ: ದಲ್ಲಾಳಿ

ಅಡ್ದಾರ: ಅಡಿದಾರ. ಎತ್ತಿನ ಹೊಟ್ಟೆಗೆ ಕಟ್ಟುವ ದಾರ

ಅಡ್ದೀಠ: ಕಪಿಲೆಯಲ್ಲಿ ಬಳಸುವ ಸಾಧನ

ಅಡ್ನಾಡಿ: ಕೆಟ್ಟ ಚಾಳಿಯವ; ಅನಾಗರಿಕರಂತೆ ವರ್ತಿಸುವವ (ಚಿತ್ರ.ಜಿ)

ಅಡ್ನೆ: ಗುಲಗಂಜಿಯಿಂದ ಮಾಡಿದ ಅಂಟು. ಅಕ್ಕಸಾಲಿಗರು ಚಿಕ್ಕ ಚಿಕ್ಕ ಆಭರಣದ ಹರಳುಗಳನ್ನು ಕೂರಿಸಲು ಇದನ್ನು ಬಳಸುತ್ತಾರೆ (ಚಿಮ.ಜಿ)

ಅಡ್ನೇ: ಪಾದರಕ್ಷೆಗೆ ಬಳಸುವ ಚರ್ಮ

ಅಡ್ಪಟ್ಟಿ: ನೋಡಿ– ಅಡ್ಡಪಟ್ಟಿ

ಅಡ್ಪಾದ ಕೊಡು: ಉತ್ತರಕ್ರಿಯೆ ನಡೆಸಿಕೊಡುವುದು (ದಕ.ಜಿ)

ಅಡ್ಪಿಲ್: ಅಡಿಗೆ ಮನೆ (ದಕ.ಜಿ)

ಅಡ್ಬಳ್ಸು/ಅಡ್ಡಬಳಸು (ಕ್ರಿ): ೧. ಅಡ್ಡಕಟ್ಟು; ಅಡ್ಡದಾರಿ ೨. ಎದುರಿಗೆ ಬರು (ಮಂಡ್ಯ.ಜಿ)

ಅಡ್ಬಿಟ್ಟಿ: ಹಡಬಿಟ್ಟಿ; ಅಲೆಮಾರಿ; ಕೆಟ್ಟವ; ಒಂದು ಬೈಗುಳ

ಅಡ್‌ಬೆಚ್ಚುದ್: ಅಡ್ಡ ಇಡುವುದು. ಸತ್ತ ಆತ್ಮಗಳಿಗೆ, ಪ್ರೇತಾತ್ಮಗಳಿಗೆ ಮಡಿಯಿಂದ ಅಡ್ಡ ಎಲೆಯಲ್ಲಿ ಊಟ ಬಡಿಸುವುದು (ದಕ.ಜಿ)

ಅಡ್ಮಣ್‌ಹಚ್ಚು (ಕ್ರಿ): ತೂತುಬಿದ್ದ ಬದುವಿಗೆ ಮಣ್ಣು ಮೆತ್ತು

ಅಡ್ಮಳೆ: ನೋಡಿ– ಅಡ್ಡಮಳೆ

ಅಡ್ಮಳ್ಗಾಲ: ಮುಂಗಾರಿನ ಮಳೆಗಾಲ

ಅಡ್ಮಾಳ: ೧. ನಿರ್ಜನ ಪ್ರದೇಶ; ಬಯಲು; ಮೈದಾನ ೨. ಭಯಾನಕ ಅರಣ್ಯ (ಉಕ.ಜಿ)

ಅಡ್ಯಂತಾಯ: ಬಂಟರ ಕುಲನಾಮ (ದಕ.ಜಿ)

ಅಡ್ಯರ: ತಳಭಾಗವು ನೆಲ ಮುಟ್ಟದಂತೆ ಅಡಿಯಲ್ಲಿ ಬಳೆಯಂತಹ ಪೀಠವಿರುವ ಪಾತ್ರೆ (ದಕ.ಜಿ)

ಅಡ್ಯೆ: ಅಕ್ಕಿಯಿಂದ ಮಾಡಿದ ತಿನಿಸು

ಅಡ್ರಗ್: ಗರ್ಜನೆ; ಹೆದರಿಸುವ ಕೋಪದ ಧ್ವನಿ

ಅಡ್ರಗಳ್ಳಿ: ೧. ಬಾಯಿಮಾಡಿ ಬೆದರಿಸುವವ ೨. ಬಾಯಿಬಡುಕ (ಬಳ್ಳಾ.ಜಿ)

ಅಡ್ರಾಕು: ೧. ರಾಶಿ ಮಾಡುವಾಗ ಎತ್ತರಕ್ಕೆ ಹಾಕು ಎಂದು ಹೇಳುವಾಗ ಬಳಸುವ ಪದ (ಚಿಮ.ಜಿ) ೨. ಮುತ್ತಿಗೆ ಹಾಕು (ತುಮ.ಜಿ)

ಅಡ್ರಾಶಿ: ಅಡ್ಡರಾಶಿ. ಉದ್ದನೆಯ ಚೌಕಾಕಾರದಲ್ಲಿ ರಾಶಿ ಹಾಕುವುದು (ಮಂಡ್ಯ.ಜಿ)

ಅಡ್ರಾಸಿ: ಅಗಲವಾದ ಅಂಕಣಗಳುಳ್ಳ ಕುಕ್ಕೆ

ಅಡ್ರಾಸು: ಅಡ್ಡರಾಸು; ಮಿಶ್ರತಳಿ ದನ

ಅಡ್ಡುಗಡಿ: ಕಡಿದಾದ ಪ್ರದೇಶ; ಏರುದಿಣ್ಣೆ; ಎತ್ತರವಾದ ಪ್ರದೇಶ

ಅಡ್ಡುಗಾಲು: ಅಡ್ಡರುಕಾಲು; ನಡೆಯುವಾಗ ಕಾಲನ್ನು ಆ ಕಡೆ ಈ ಕಡೆ ಎತ್ತಿಡುತ್ತಾ ನಡೆಯುವುದು. ಸಾಮಾನ್ಯ ನಡಿಗೆಗಿಂತ ವಿಭಿನ್ನವಾದ ನಡಿಗೆ (ಮಂಡ್ಯ.ಜಿ). **ಪ್ರ:** ಅಡ್ಡುಗಾಲ ಹಾಕಂಡು ಬಂದ

ಅಡ್ಲದಮ್ಮ: **ನೋಡಿ–** ಅಡ್ಲುದಮ್ಮ

ಅಡ್ಲಾಯ: ಸಡಿಲ; ಸಲಿಗೆ (ಬಳ್ಳಾ.ಜಿ)

ಅಡ್ಲಿಗಿ: ೧. ಬಿದಿರಿನ ಬುಟ್ಟಿ; ಪೂಜೆಯ ಸಾಮಗ್ರಿ ಇಡುವ ಬುಟ್ಟಿ. **ಇರೂ:** *ಹಡ್ಲಗಿ,* ೨. ಪಡ್ಲಗಿ. ಸಮೃದ್ಧವಾದ ಫಲವತ್ತಾದ ನೀರಾವರಿ ಜಮೀನಿನ ಪ್ರದೇಶ (ಚಿತ್ರ.ಜಿ)

೩. ಕಣದಲ್ಲಿ ಒಕ್ಕಲು ಮಾಡಿದ ಧಾನ್ಯ ಮತ್ತು ಹುಲ್ಲಿನ ಮಿಶ್ರಣ ೪. ಹೊಲ ಗದ್ದೆಗಳ ಬಳಿ ಇರುವ ಹಸಲೆ ಜಾಗ; ಗದ್ದೆ ೫. ಅಡ್ಲು; ಹುಲ್ಲನ್ನು ಶೇಖರಿಸುವ ಸ್ಥಳ; ಹಿತ್ತಿಲು; ಹುಲ್ಲಿತ್ಲು (ಬೆಂಗ್ರಾ.ಜಿ) ೬. ಜೊಂಡು ಬೆಳೆಯುವ ತೇವದ ನೆಲ ೭. ಮುಳ್ಳಿನ ಗಿಡಗಳ ಗುಂಪು; ಮೆಳೆ

ಅಡ್ಲುಕಟ್‌ಭೂಮಿ: ಉಸುಕು ಮಿಶ್ರಿತ ಭೂಮಿ (ಬಳ್ಳಾ.ಜಿ)

ಅಡ್ಲುತೆಗೆ: ಮೊದಲಸಲ ಕೆಸರು ಗದ್ದೆಯನ್ನು ತುಳಿಯುವ ಕ್ರಮ

ಅಡ್ಲುದಂಗಿ/ಅಡಲುದಂಗಿ: ಮದುವೆ ಹೆಣ್ಣಿನ ಜತೆ ಇರುವ ಆತ್ಮೀಯ ಗೆಳತಿ ಅಥವಾ ತೀರಾ ಹತ್ತಿರದ ಸೋದರ ಸಂಬಂಧಿ ಹೆಣ್ಣು. **ಪ್ರ:** ಪಾರ್ವತಿಗೆ ಸಕೂನೆ ಅಡಲುದಂಗಿ

ಅಡ್ಲುದಮ್ಮ/ಅಡಲುದಮ್ಮ: ಮದುವೆ ಗಂಡಿನ ಜೊತೆ ಹೋಗುವ ಆಪ್ತಸ್ನೇಹಿತ. **ಪ್ರ:** ಈಶ್ವರನಿಗೆ ಕೃಷ್ಣನೇ ಅಡಲುದಮ್ಮ

ಅಡ್ಸಂದಿ: ೧. ಇಕ್ಕಟ್ಟಾದ ಜಾಗ (ಉಕ.ಜಿ) ೨. ಸಾಮಾನುಗಳನ್ನು ಕೆಟ್ಟದಾಗಿ ಜೋಡಿಸಿಡುವುದು ಅಸ್ತವ್ಯಸ್ತವಾಗಿಡುವುದು (ಉಕ.ಜಿ)

ಅಡ್ಸಲನಬೆಣೆ: ನೇಗಿಲನ್ನು ಬಿಗಿಗೊಳಿಸಲು ಹೊಡೆಯುವ ಮರದ ಚಕ್ಕೆ; –ತುಂಡು; ಅಡಸಲ

ಅಡ್ಸಲಾ: ನೇಗಿಲನ್ನು ಹೂಡುವಾಗ ಒತ್ತಿ ಹಿಡಿಯಲು ಬಳಸುವ ಸಾಧನ; ಮೇಣಿ; ಮೇಳಿ. **ಇರೂ:** *ಅಡ್ಸಾಲ್*

ಅಡ್ಹರತೆ/ಅಡ್ಡರತೆ/ಅಡ್ಡಹರತೆ: ಕುಂಟೆಯಿಂದ ಅಡ್ಡಡ್ಡಲಾಗಿ ಹೊಡೆಯುವ ಹರತೆ

ಅಡ್ಹಲ್ಲ: ಅಡ್ಡಪಟ್ಟಿ; ಅಡ್ಡಹಲಗೆ; ಗಾಡಿಯ ತೊಟ್ಟಿಲಲ್ಲಿ ಹಾಕಿರುವ ಹಲಗೆ ಮಣೆಗಳು (ಗುಲ್ಬ.ಜಿ)

ಅಡ್ಹುಟ್ಟು: ಅಡ್ಡಹುಟ್ಟು; ಅಕ್ರಮ ಸಂತಾನ (ಮೈಸೂ.ಜಿ). **ಪ್ರ:** ಆಸ್ತಿ ಹ್ಯಂಗೆ ಕೊಡಾಕಾಯ್ತದೆ. ಅವನ್ದು ಅಡ್ಹುಟ್ಟು

ಅಡ್ಹುಳಿ: ದಿರ್ಕನ ಹುಳಿ: ಮಲೆನಾಡಿನ ದಿರ್ಕ ಮರದ ಹಣ್ಣಿನ ಸಿಪ್ಪೆಯನ್ನು ಅಥವಾ ಬೆಳೆದ ಕಾಯಿಗಳನ್ನು ತೆಳುವಾಗಿ ಹೆಚ್ಚಿ ಬಿಸಿಲಿನಲ್ಲಿ ಒಣಗಿಸಿ ನಂತರ ಮೂರುದಿನ ನೆನೆಸಿಟ್ಟು ನೀರುಬಸಿದು ಮಣ್ಣಿನ ಪಾತ್ರೆಗಳಲ್ಲಿ ಮೂರು ರಾತ್ರಿ ಹಗಲು ಸಣ್ಣ ಬೆಂಕಿಯಲ್ಲಿ ಬೇಯಿಸಿದರೆ ತೇಲಿ ಬರುವ ಕಪ್ಪುಹುಳಿ

ಅಡ್ಹೆಸರು: **ನೋಡಿ–** ಅಡ್ಡಹೆಸರು

ಅಡ್ಳ: ೧. ತೇಗು ೨. ಸುಗ್ಗಿಯ ವೇಳೆಯಲ್ಲಿ ತುಳಿಸಿದ ಹುಲ್ಲನ್ನು ತೆಗೆದಾಗ ಸಿಗುವ ಕಾಳು. **ಇರೂ:** *ಅಡ್ಳಸ*

ಅಡ್ಳಸ: **ನೋಡಿ–** ಅಡ್ಳ

ಅಡ್ಳು: ಹಂದರ; ಚಪ್ಪರ. **ಪ್ರ:** ೧. ಬಳ್ಳಿಗೆ ಒಂದು ಅಡ್ಳು ಹಾಕಬೇಕಾಗಿತ್ತು ೨. ಚಪ್ಪರ ಬದನೆಗೆ ಅಡ್ಳು ಕಟ್ಟುತ್ತಿದ್ದಾರೆ

ಅಣ್: ಅಂಟು; ಸೋಂಕು.

ಅಣ: ೧. ನಪುಂಸಕ ೨. ಚಿಕ್ಕ ಕಾಸು ೩. ಹಣ; ಹಿಂದಿನ ಕಾಲದ ಒಂದು ನಾಣ್ಯ ೪. ಬೆಲ್ಲದ ಪಾಕ (ರಾಮ.ಜಿ) ೫. ಕಂಬಳಿಯ ನೇಯ್ಗೆಯಲ್ಲಿ ಕಂಬಳಿ ದಾರ ಮೇಲೊಂದು ಕೆಳಗೊಂದು ಬರುವುದು (ತುಮ.ಜಿ)

ಅಣಂಗ: ದೊಡ್ಡದಾದ ತಾಳ (ಚಿಮ.ಜಿ)

ಅಣಕ: ಬರಿದಾದ; ಆಳವಾದ

ಅಣಕಲ್ಲುಯ್ಯು: ಮೊರದಲ್ಲಿ ಹಾಕಿಕೊಂಡು ಧಾನ್ಯದಲ್ಲಿರುವ ಕಲ್ಲನ್ನು ಬೇರೆ ಮಾಡು

ಅಣಕಾಲು: ಅಂಗಾಲು

ಅಣಕು ಮದುವೆ: ಬೆಂದ್ರುಂಡೆ ಕುಣಿತಕ್ಕೆ ಸಂಬಂಧಿಸಿದ ಒಂದು ಪ್ರಮುಖ ಆಚರಣೆ. ಎರಡು ಗುಂಪುಗಳು ಹೆಣ್ಣಿನ ಪಕ್ಷ ಗಂಡಿನ ಪಕ್ಷವಹಿಸಿ ಹೆಣ್ಣು ಕೇಳುವುದು, ವಧೂವರರ ವರ್ಣನೆ ಮುಂತಾದವುಗಳನ್ನು ಹಾಡುತ್ತಾ ಕುಣಿಯುತ್ತಾರೆ

ಅಣಕೋಲು: ಮೋಜು ಮಾಡುವುದು

ಅಣಗಜ್ಜಿ: ಆನೆಕಜ್ಜಿ (ಮಂಡ್ಯ.ಜಿ)

ಅಣಗಿ: ಹಣಿಗೆ; ಬಾಚಣಿಗೆ (ಕೊಡ.ಜಿ)

ಅಣಗು: ೧. ಉಪಶಮನವಾಗು. **ಪ್ರ:** ಗಾಯ ಈಗ ಸ್ವಲ್ಪ ಅಣಗೈತೆ ೨. ಅವಿತುಕೊಳ್ಳು

ಅಣಗುತ್ತಿಗೆ: ವರ್ಷದ ಲೆಕ್ಕದಲ್ಲಿ ಹೊಲವನ್ನು ಗುತ್ತಿಗೆ ಕೊಡುವುದು

ಅಣಗೆಜ್ಜಿ: ಹಣೆಗೆಜ್ಜೆ; ಎತ್ತಿನ ಹಣೆಯ ಮೇಲೆ ಕಟ್ಟುವ ಗೆಜ್ಜೆ

ಅಣಗ್ಸು/ಅಣಕ್ಸು/ಅಣಗಸು: ಅಣಕಿಸು; ಹಂಗಿಸು; ವ್ಯಂಗ್ಯಮಾಡು (ಶಿವ.ಜಿ)

ಅಣಚಿ: ೧. ನಾಯಿಕೊಡೆ ೨. ಮಾಂಗಲ್ಯ; ತಾಳಿ

ಅಣಚಿಬಟ್ಟು: ಹಚ್ಚೆ

ಅಣಜ: ೧. ಅಜ್ಜನ ತಂದೆ (ಉಕ.ಜಿ) ೨. ಚಿಪ್ಪಿನ ಹಂದಿ

ಅಣಜಿ: ಜೀರಿಗೆ (ಬಳ್ಳಾ.ಜಿ)

ಅಣಜಿಗೆವ್ವ: ಜೋಕುಮಾರನ ತಾಯಿ

ಅಣಜಿಗೆವ್ವನ ಆಚರಣೆ: ಅಣಜಿಗೆವ್ವನು ಬಸುರಿ ಎಂದು ಭಾವಿಸಿ ಅಕೆಗೆ ಕುಪ್ಪುಸ ಮಾಡುವ ಆಚರಣೆ. ದೊಡ್ಡ ಮಣ್ಣಿನ ಕೊಡವನ್ನು ತುಂಬಿ ಅಲಂಕರಿಸಿ ಬಸರಿಯ ಬಯಕೆ ತೀರಿಸುವ ವಿವಿಧ ರೀತಿಯ ಅಡುಗೆಗಳನ್ನು ಮಾಡಿ ಜನರನ್ನೆಲ್ಲಾ ಕರೆದು ಊಟ ಹಾಕುವ ಸಂಪ್ರದಾಯ (ಉಕ)

ಅಣತಲೆ: ಎತ್ತಿನಬಂಡಿಯ ಮೂಕಿನ ಭಾಗ (ಕೋಲಾ.ಜಿ)

ಅಣತೆ: ಹಣತೆ; ಮಣ್ಣಿನಿಂದ ಮಾಡಿದ ದೀಪ (ಚಿತ್ರ.ಜಿ)

ಅಣಬು: ಬಾಯಿಯ ಒಳಭಾಗ; ಅಣಲು (ಮಂಡ್ಯ.ಜಿ).

ಅಣಬೆ: ಕೊಡೆಯ ಆಕಾರದಲ್ಲಿ ಬೆಳೆಯುವ ಬೂಷ್ಟು ಜಾತಿಯ ಸಸ್ಯ. ಪುಷ್ಟಿಕರ ಆಹಾರವಾದ ಇದರಲ್ಲಿ ಬೇರಣಬೆ, ಮಟ್ಟಣಬೆ, ಚಿಟ್ಟಣಬೆ, ಉಪ್ಪಣಬೆ, ಮರಣಬೆ, ಹುಲ್ಲಣಬೆ, ಹುಚ್ಚಣಬೆ, ಕುಳ್ಳಣಬೆ, ಹುತ್ತದ ಹೂ ಮುಂತಾದ ಪ್ರಭೇದಗಳಿವೆ. ಇದರಲ್ಲಿ ಸಾರು, ಪಲ್ಯ ಇತ್ಯಾದಿಗಳನ್ನು ಮಾಡುತ್ತಾರೆ. ತಿನ್ನುವುದಕ್ಕೆ ಬಳಸದ ಅಣಬೆಯನ್ನು ನಾಯಿ ಕೊಡೆ ಎಂದು ಕರೆಯುತ್ತಾರೆ. **ಇರೂ:** *ಆಳಂಬೆ, ಆಳಿಂಬೆ, ಅರಿಂಬೆ*

ಅಣಬೆರೋಗ: ಅಡಕೆ ತೋಟದಲ್ಲಿ ಹೆಚ್ಚು ನೀರು ನಿಂತಾಗ ಅಡಿಕೆ ಮರದ ಬೇರಿಗೆ ಬೀಳುವ ಹುಳದ ರೋಗ **ಇರೂ:** *ಕಲ್ಲುಳಿ ರೋಗ (ದಾವ.ಜಿ)*

ಅಣಲು: ೧. ಹಿಂಸೆ ೨. ದವಡೆ (ಬಳ್ಳಾ.ಜಿ) ೩. ಇಣಚಿ; ಅಳಿಲು (ಚಿಮ.ಜಿ)

ಅಣವು: ಬೀಜ ಬಿತ್ತಿದ ನಂತರ ಮಳೆ ಬಿದ್ದು ಭೂಮಿ ಹೆಪ್ಪಾಗುವುದು

ಅಣಸ್: ನಾಗಸ್ವರ ಮೌರಿ ಮೊದಲಾದ ವಾಲಗಗಳ ಕೊಳವೆಯ ಮುಂತುದಿ (ದಕ.ಜಿ)

ಅಣಸ: ಹರಿತ; ಚೂಪು (ರಾಯ.ಜಿ)

ಅಣಸಿ: ೧. ತೊಳಸು ೨. ಮೊನೆ ಮಾಡಿಸು

ಅಣಸು: ೧. ಕಬ್ಬಿಣದ ಬಳೆ; ಒನಕೆ, ಕಲ್ಲು ಗೂಟ, ಊರುಗೋಲು ಮೊದಲಾದವುಗಳ ತುದಿ ಸೀಳದಂತೆ ಹಾಕುವ ಕಬ್ಬಿಣದ ಬಳೆ (ಉಕ.ಜಿ) ೨. ಹಣಸು; ಕುಡುಗೋಲಿನ ಮರದ ಹಿಡಿಕೆಯನ್ನು ಬಿಗಿಮಾಡಲು ಬಳಸುವ ಕಬ್ಬಿಣದ ಬಳೆ (ದಾವ.ಜಿ) ೩. ದನಗಳ ಕೋಡಿಗೆ ಅಳವಡಿಸುವ ಲೋಹದ ಕೊಳವೆ; ಕೋಡುಗಳ ಅಲಂಕಾರ ಸಾಮಗ್ರಿ ೪. ಲಾಳಿಯ ತುದಿ; ಲಾಳಿ ಗುಬ್ಬಿ. **ಇರೂ:** *ಅಣ್ಸು; ಅನುಸ*

ಅಣಸುಕ್ಕೆ ಹೂವು: ದನಗಳ ಬಾಲದ ತುದಿಯ ಕುಚ್ಚಿನಂತಿರುವ ಒಂದು ಬಗೆಯ ಹೂವು (ಬಳ್ಳಾ.ಜಿ)

ಅಣಾಲು: ಕಂದುಬಣ್ಣದ ದೊಡ್ಡ ಅಳಿಲು. ಇದು ಹಣ್ಣು ಮತ್ತು ಸೊಪ್ಪಿನ ಕುಡಿ ತಿಂದು ಬದುಕುತ್ತದೆ

ಅಣೆ: ೧. ಹದವಾದ; ರುಚಿಯಾದ. **ಪ್ರ:** ಊಟ ಅಣೆಯಾಗಿತ್ತು ಅಂತ ಸರಿಯಾಗಿ ಕತ್ತರಿಸಿದ ಕವಳಾವ ೨. ಪ್ರಾರಂಭ; ಮುಂದೊಡಗು (ಮೈಸೂ.ಜಿ) ೩. ಅಲಂಕಾರ; ಸೌಂದರ್ಯ (ದಕ.ಜಿ) ೪. ಕಂಬಳಿಯ ನೇಯ್ಗೆಯಲ್ಲಿ ಕಂಬಳಿ ದಾರ ಮೇಲೊಂದು ಕೆಳಗೊಂದು ಬರುವುದು (ತು.ಜಿ) ೫. ಕತ್ತರಿಯಂತೆ ಸೇರಿಸಿರುವ ಬಿದಿರು ದೊಣ್ಣೆಗಳು (ತುಮ.ಜಿ) ೬. ತೆಂಗಿನ ಸಿರಿ, ಒಲಿ ಮತ್ತು ಕಂಗಿನ ಹಾಳೆಯಿಂದ ಸಿದ್ಧಪಡಿಸುವ ಹಾವಿನ ಹೆಡೆಯನ್ನು ಹೋಲುವ ಬೃಹತ್ತಾದ ಪ್ರಭಾವಳಿ. ದೈವ ನರ್ತನಕಾರರು ಇದನ್ನು ಧರಿಸಿ ನರ್ತನ ಮಾಡುತ್ತಾರೆ (ದಕ.ಜಿ) ೭. ಸಿದ್ಧತೆ ೮. ಕಂಬಳಿಯ ಮಧ್ಯಭಾಗ ೯. ಕುಂಬಾರನ ತಿಗರಿಯ ಮೇಲೆ ಮಧ್ಯದಲ್ಲಿರುವ ದುಂಡನೆಯ ಹಲಗೆ ೧೦. ಗುಡ್ಡ ೧೧. ಜಮೀನಿನ ಒಂದು ಪ್ರಕಾರ

ಅಣೆಕಟ್ಟು (ಕ್ರಿ): ೧. ನೇಕಾರಿಕೆಯಲ್ಲಿ, ನೇಯ್ಗೆಯಾದ ನಂತರ ಕಡಗೋಲು ಮತ್ತು ಹಾಸು ಎರಡೂ ಸೇರುವಂತೆ ಒಂದು ದಪ್ಪ ದಾರದಿಂದ ಅಲ್ಲಲ್ಲಿ ಕಟ್ಟುತ್ತಾ ಹೋಗುವುದು ೨. ಭೂತ ವೇಷಧಾರಿ ತನ್ನ ಬೆನ್ನ ಹಿಂದೆ ಪ್ರಭಾವಳಿಯನ್ನು ಕಟ್ಟಿಕೊಳ್ಳುವುದು

ಅಣಿಕೋಲು: ಮಗ್ಗದ ಸಲಕರಣೆ; ಹಾಸು ಹೊಕ್ಕುಗಳ ಜೋಡಣೆ

ಅಣಿಗುಡ್ಡಿ: ಆನೆಗುಡ್ಡೆ ಗಣಪತಿಯ ಗುಡಿ ಇರುವ ಸ್ಥಳ (ದಕ.ಜಿ)

ಅಣಿಗೆ: ನೇಯ್ಗೆಯವರ ಮಗ್ಗದ ಅಚ್ಚು (ಚಿತ್ರ.ಜಿ)

ಅಣಿಗೆಹತ್ತು: ವ್ಯವಸ್ಥೆಯಾಗು

ಅಣಿತಎಚ್ಚಿ: ಅಣಿ ಧರಿಸಿದ ಮೇಲೆ ಭೂತನರ್ತಕ ಆವೇಶಭರಿತನಾಗಿ ಮಾಡುವ ಕುಣಿತ (ದಕ.ಜಿ)

ಅಣಿತೆ: ಬಿದಿರು ಪುಟ್ಟಿ ಹೆಣೆಯುವ ಮೊದಲು ಕಟ್ಟಿಕೊಳ್ಳುವ ಹಂದರ; – ಹೆಣಿಕೆ (ತುಮ.ಜಿ)

ಅಣಿದಾರ: ಮಗ್ಗದ ಸಲಕರಣೆ (ಬೆಂಗ್ರಾ.ಜಿ)

ಅಣಿನೆಲ: ಗಟ್ಟಿನೆಲ (ಬಿಜಾ.ಜಿ)

ಅಣಿಪಾಡು: ಹಣೆಪಾಡು; ಹಣೆಬರಹ (ಬಳ್ಳಾ.ಜಿ)

ಅಣಿಪೀಣಿ: ದೀಪಾವಳಿ ಸಂದರ್ಭದಲ್ಲಿ ದನಕಾಯುವ ಹುಡುಗರು ಆಪು ಹುಲ್ಲಿನಿಂದ ಐದು ಅಥವಾ ಏಳು ಹೆಡೆಯ ಹಾವಿನಂತೆ ಹೆಣೆದು, ಅದರ ಮುಂದೆ ಸಿಂಬಿಯಂತೆ ಮಾಡಿ ಹಣತೆ ಇಟ್ಟು, ತೆನೆ ಹೊಂದಿದ ಹುಲ್ಲನ್ನು ನವಿಲುಗರಿಯಂತೆ ಬಾಗಿಸಿ ರೂಪಿಸುವ ಆಕೃತಿ. **ನೋಡಿ–** ಆಣಿಪೀಣಿ

ಅಣಿಬಾಳು: ೧. ಕೋಳಿ ಅಂಕದಲ್ಲಿ ಕೋಳಿಯ ಕಾಲಿಗೆ ಕಟ್ಟುವ ಚೂರಿ; ಪುಟ್ಟಕತ್ತಿ (ದಕ.ಜಿ) ೨. ನೇಯ್ಗೆಯ ಸಂದರ್ಭದಲ್ಲಿ ಒಂದು ಭಾಗದ ಎಳೆಗಳನ್ನು ಕೆಳಗೆ ಬಿಡುವುದು

ಅಣಿಬಿಲ್ಲಿ: ಗೃಹನಿರ್ಮಾಣದಲ್ಲಿ, ಕಂಬದ ಮೇಲಿರುವ ರಚನೆ. ಇದರ ಆಧಾರದ ಮೇಲೆಯೇ ಬೋದನ್ನು ಕೂರಿಸುತ್ತಾರೆ (ಬಳ್ಳಾ.ಜಿ)

ಅಣಿಮರ: ಭೂತಕೋಲದಲ್ಲಿ ದೈವ ಕಲಾವಿದರು ಮಿಂದು ಮಲಗುವ, ಶುದ್ಧೀಕರಿಸಿದ ಸ್ಥಳ (ದಕ.ಜಿ)

ಅಣಿಮುತ್ತು: ಶ್ರೇಷ್ಠವಾದ ಮುತ್ತು. **ಪ್ರ**: ಅವರ ಒಂದೊಂದು ಮಾತೂ ಅಣಿಮುತ್ತಿನಂತೆ

ಅಣಿಲೆ: ಒಂದು ಮರ; ಹರದೆ; ಹರ್ಡೇಕಾಯಿ (ದಕ.ಜಿ). **ಇರೂ**: *ಹರೀತಕಿ*

ಅಣಿಸನ್ನಾಯ: ಅಣಿಕಟ್ಟಲು ಮಾಡುವ ತಯಾರಿ (ದಕ.ಜಿ)

ಅಣಿಸಿ: ಹಳಸಲು (ಶಿವ.ಜಿ)

ಅಣಿಸು: ಹಣಿಸು; ಕುಡಗೋಲು, ಮಚ್ಚು ಮೊದಲಾದವನ್ನು ಮೊನಚುಮಾಡಿಸು. **ಪ್ರ**: ಕುಡ ಅಣಿಸು.

ಅಣಿಸೆರಗು: ಕುಸುರಿ ಕೆಲಸ ಮಾಡಿದ ಅಲಂಕಾರಿಕ ಸೆರಗು (ದಕ.ಜಿ)

ಅಣುಕು: (ನಾ) ೧. ಹಾಸ್ಯ; ನಿಂದೆ; ಕುಚೋದ್ಯ (ಕ್ರಿ) ೨. ಹಣಕು; ಇಣುಕಿನೋಡು (ಮೈಸೂ.ಜಿ)

ಅಣುಕೊಡುವುದು: ಭೂತಕೋಲದಲ್ಲಿ ದೈವ ಅಪ್ಪಣೆ ನೀಡುವುದು (ದಕ.ಜಿ)

ಅಣುಪ್ಲು: ಆಳವಾದ ಕೆಸರು (ಮೈಸೂ.ಜಿ). **ಪ್ರ**: ಅದು ಅಣುಪ್ಲು ಗದ್ದೆ. ಕಾಲು ಮಡಗಕ್ಕೆ ಆಗಾಕಿಲ್ಲ

ಅಣುವು: ಅಸಹಾಯಕ ಸ್ಥಿತಿಯನ್ನು ವ್ಯಕ್ತಪಡಿಸುವಿಕೆ; ದಣಿವು (ಬಳ್ಳಾ.ಜಿ)

ಅಣೆ: ೧. ಕೋಳಿ ಕಾಳಗದಲ್ಲಿ ಕೋಳಿಗಳ ಕಾಲುಗಳಿಗೆ ಕಟ್ಟುವ ಕತ್ತಿಯ ಹಿಡಿ (ದಕ.ಜಿ) ೨. ಕೆಂಪು ಕಲ್ಲು ಸಿಗುವ ಸ್ಥಳ (ದಕ.ಜಿ)

ಅಣೆಎತ್ತು: ಚಾಪೆ, ಕುಕ್ಕೆ ಇತ್ಯಾದಿ ಹೆಣೆಯುವಾಗ ಆರಂಭದಲ್ಲಿ ಹಂದರದ ಹೆಣಿಗೆ ಹಾಕು (ಮೈಸೂ.ಜಿ). **ಪ್ರ**: ಈಚಲ ಚಾಪೆ ಹೆಣೆಯಾಕೆ ಸಟಿಗೆ ಅಣಿ ಎತ್ತಿಕೊಡಕ್ಕ

ಅಣೆಕಲ್ಲು: ೧. ಕವಣೆಕಲ್ಲು; ಹಕ್ಕಿಗಳನ್ನು ಓಡಿಸುವ ಕವಣೆ ಹಗ್ಗಕ್ಕೆ ಇಡುವ ಕಲ್ಲು (ಚಾಮ.ಜಿ) ೨. ದೇವಾಲಯದ ಅಂಗಣದಲ್ಲಿ ರಕ್ಷಕ ದೈವಗಳಿಗಾಗಿ ಸ್ಥಾಪಿತವಾದ ವಿಶಿಷ್ಟ ರೀತಿಯ ಕಲ್ಲು (ದಕ.ಜಿ)

ಅಣೆತೆವರಿ: ತಮ್ಮ ವ್ಯಾಪ್ತಿಗೆ ಬರುವ ಗದ್ದೆಯ ಸುತ್ತಲೂ ಎತ್ತರವಾದ ತೆವರಿ ಕಟ್ಟುವುದು (ಮಂಡ್ಯ.ಜಿ)

ಅಣೆಪೊನ್: ಶ್ರೇಷ್ಠವಾದ ಚಿನ್ನ

ಅಣೆಬಟ್ಟು: ಹಣೆಬೊಟ್ಟು; ಹೆಣ್ಣುಮಕ್ಕಳು ಹಣೆಗೆ ಧರಿಸುವ ಕುಂಕುಮ; ತಿಲಕ

ಅಣೆಬಳ್ಳು: **ನೋಡಿ–** ಅಣೇಮರ (ಮೈಸೂ.ಜಿ)

ಅಣೆಮೀನು: ಒಂದು ಬಗೆಯ ಮೀನು

ಅಣೇದಬಂಗಾರ: ಒಂದಾಣೆ ತೂಕದ ಬಂಗಾರ

ಅಣೇಮರ: ರಾಗಿ, ಬತ್ತ ಮೊದಲಾದುವನ್ನು ಮೆದೆ ಹಾಕಲು ಸಿದ್ಧಪಡಿಸುವ ಅಟ್ಟಣೆಯ ಕಲ್ಲುಗಳ ಮೇಲೆ ಅಡ್ಡಡ್ಡಲಾಗಿ ಇಡುವ ಮರ. **ಇರೂ**: *ಅಣೆಕಟ್ಟು, ಅಣೆಬಳ್ಳು, ಹಣಾದ್ಗಳ (ಮೈಸೂ.ಜಿ)*

ಅಣ್ಣಲ್ಲು ಉಯ್ಯದು: ದವಸ ಧಾನ್ಯಗಳನ್ನು ಮೊರದಲ್ಲಿ ಹಾಕಿಕೊಂಡು ಧಾನ್ಯದಲ್ಲಿರುವ ಕಲ್ಲನ್ನು ಬೇರ್ಪಡಿಸುವುದು (ಮಂಡ್ಯ.ಜಿ)

ಅಣ್ಕಾ: ೧. ಅಣಕ ೨. ಅಣೆಮರ; ಕೊರಡು

ಅಣ್ಕೆಲ್: ೧. ಅಗಲ ಕಿರಿದಾದ ಬಾಗಿಲು ೨. ಕಾಡುಪ್ರಾಣಿಗಳನ್ನು ಹಿಡಿಯಲು ನಿರ್ಮಿಸಿದ ಪಂಜರ (ದಕ.ಜಿ)

ಅಣ್ಚು: ಅಣಚು; ಕುಡುಗೋಲಿನ ಹಿಡಿಯಲ್ಲಿ ಬಳಸಿರುವ ಕಬ್ಬಿಣದ ಸುತ್ತು (ಬೆಂಗ.ಜಿ)

ಅಣ್ಣಂದಿಕ್ಳು: ಅಣ್ಣಂದಿರು; ಸಹೋದರರು (ಉಕ.ಜಿ)

ಅಣ್ಣತಮ್ಮಂದಿರ ಬಳ್ಳಿ: ಸೋದರಿಕೆ ಸಂಬಂಧ

ಅಣ್ಣತಮ್ಮಿಕೆ/ಅಣ್‌ತಮ್ಕೆ: ದಾಯಾದಿ ಸಂಬಂಧ (ಹಾಸ.ಜಿ/ ಚಿಮ.ಜಿ). **ಪ್ರ**: ನಾವೆಲ್ಲ ಅಣ್‌ತಮ್ಕೆಯವರೆ

ಅಣ್ಣಪ್ಪ: ೧. ಕದ್ರಿ, ಧರ್ಮಸ್ಥಳ, ಕಾಂಚೋಡು ಮೊದಲಾದ ಸ್ಥಳಗಳಲ್ಲಿ ನೆಲೆನಿಂತ ತುಳುನಾಡಿನ ಪ್ರಸಿದ್ಧ ದೈವ; ಪಂಜುರ್ಲಿಯ ಇನ್ನೊಂದು ಹೆಸರು ೨. ಗಂಡು ಮಕ್ಕಳನ್ನು ಮುದ್ದಿನಿಂದ ಕರೆಯುವ ಪದ (ದಕ.ಜಿ)

ಅಣ್ಣಪ್ಪರಾಜ್ಯ: ಸರ್ಪಕೋಲದಲ್ಲಿ ಹೇಳಲಾಗುವ ನಾಗದೇವರ ಹುಟ್ಟಿನ ರಾಜ್ಯ (ದಕ.ಜಿ)

ಅಣ್ಣಮ್ಮ: ಒಂದು ಗ್ರಾಮದೇವತೆ. ಬೆಂಗಳೂರಿನ ಈ ದೇವತೆ ತುಂಬಾ ಪ್ರಸಿದ್ಧಿ

ಅಣ್ಣವಾಲ: **ನೋಡಿ–** ಅಂಟುವಾಳ

ಅಣ್ಣೆನೆಲ: ಸದಾ ತೇವಾಂಶವಿರುವ ನೆಲ (ಮೈಸೂ.ಜಿ)

ಅಣ್ಣೆಭೂಮಿ: ಕೆಸರು ಭೂಮಿ

ಅಣ್ಣು: ೧. ಕಳೆ ೨. ಕುಡುಗೋಲಿನ ಹಿಡಿಗೆ ಬಳಸುವ ಕಬ್ಬಿಣದ ಸುತ್ತು

ಅಣ್ಣೆಕಲ್ಲಾಟ: ಹೆಣ್ಣುಮಕ್ಕಳು ಗೋಲಿ ಗಾತ್ರದ ಕಲ್ಲುಗಳಿಂದ ಆಡುವ ಒಳಾಂಗಣ ಆಟ. ಇದರಲ್ಲಿ ಒಂದು ಕಲ್ಲಾಟ, ಎರಡು ಕಲ್ಲಾಟ, ಮೂರು ಕಲ್ಲಾಟ ಇತ್ಯಾದಿ ಬಗೆಗಳಿವೆ (ಮಂಡ್ಯ.ಜಿ)

ಅಣ್ಣೆದ: ಏರಂ; ದೋಣಿಯ ಮುಂಭಾಗದಲ್ಲಿ ಕುಳಿತುಕೊಳ್ಳಲು ಇರುವ ಹಲಗೆ (ದಕ.ಜಿ)

ಅಣ್ಣೆಬಸ್ವಿ: ಊರುಬಸವಿ (ತುಮ.ಜಿ)

ಅಣ್ಣೆಮಣ್ಣು: ಜೇಡಿಮಣ್ಣು

ಅಣ್ಣೆಮೊಣ್ಣೆ: ತುಂಬಾ ಕಷ್ಟಪಡು; ಭಂಗಬೀಳು (ಮಂಡ್ಯ.ಜಿ)

ಅಣ್ಣೆಯವನು: ದೋಣಿಯ ಮುಂಭಾಗದ ಹಲಗೆಯಲ್ಲಿ ಕುಳಿತುಕೊಳ್ಳುವವನು; ಮೀನುಗಾರರ ತಂಡದ ಮುಖಂಡ (ದಕ.ಜಿ)

ಅಣ್ಣೆಸೊಪ್ಪು: *ಸೆಲೋಜಿಯ ಅರ್ಜೆಂಟಿಯ*: ಹೊಲದಲ್ಲಿ ಸಿಗುವ ಸಾರಿನ ಸೊಪ್ಪು. ತೀರಾ ಬಡವರಿಗೂ ಲಭ್ಯವಾಗುವ ತುಂಬಾ ಸಾಮಾನ್ಯವಾದ ಸೊಪ್ಪು. ಅಣ್ಣೆಸೊಪ್ಪಿಗೂ ಗತಿಯಿಲ್ಲ ಎಂದರೆ ಕಡು ಬಡವರು ಎಂದರ್ಥ (ಬೆಂಗ್ರಾ.ಜಿ). **ಪ್ರ**: ಅಣ್ಣೇಸೊಪ್ಪು ತಿನ್ನೋಕೂ ಪುಣ್ಯಬೇಕು (ಮಂಡ್ಯ.ಜಿ) **ಇರೂ**: ಅಣ್ಣೆಕೊಕ್ಕ

ಅಣ್ತಮ್ಕೆ: **ನೋಡಿ–** ಅಣ್ಣತಮ್ಮಿಕೆ

ಅತಟ: ಆಳ; ಕದಡು (ಗುಲ್ಬ.ಜಿ)

ಅತರಂಬಿ: ಅತಿರಂಭೆ; ಸೌಮ್ಯಸ್ವಭಾವದ ಸುಂದರ ಹೆಣ್ಣುಮಗಳು

ಅತಸಿ: ಔಷಧೀಯ ಗುಣವುಳ್ಳ ಒಂದು ಸಸ್ಯ; ಎಳ್ಳಗಸೆ. **ನೋಡಿ–** ಅಗಸೆ

ಅತಿಕಾರಿ: ಬಂಟ ಹಾಗೂ ಜೈನ ಸಮುದಾಯದವರ ಕುಲನಾಮ (ದಕ.ಜಿ)

ಅತಿಕಾರೆ: ವಿಶಿಷ್ಟ ಭತ್ತದ ತಳಿ. ಸೃಷ್ಟಿಯ ಉಗಮದೊಂದಿಗೆ ಬಂದ ಸತ್ಯದ ಬೆಳೆ ಎಂಬ ನಂಬಿಕೆ ಇದೆ. ಸುಗ್ಗಿಯಲ್ಲಿ ಮಾತ್ರ ಬೆಳೆಯುತ್ತದೆ. ಪ್ರಳಯವಾದರೂ ಈ ಬೆಳೆ ಉಳಿಯಬೇಕೆಂದು ದೇವಸ್ಥಾನದ ಗರುಡಗಂಬದ ತುದಿಯಲ್ಲಿ ಬೀಜ ರಕ್ಷಿಸಿಡುವ ಪದ್ಧತಿ ಇತ್ತು (ದಕ.ಜಿ)

ಅತಿಗಾಲ: ಸಾವು (ಗುಲ್ಬ.ಜಿ)

ಅತಿಪುರುಷ: ಗಂಡ; ಪತಿಪುರುಷ (ಬಾಗ.ಜಿ)

ಅತಿಬಲ: ಒಂದು ಕಿರು ಸಸ್ಯ

ಅತಿರಸ: **ನೋಡಿ–** ಅತ್ರಾಸ

ಅತೇರೆ ಬತೇರೆ: ಮಕ್ಕಳನ್ನು ರಂಜಿಸಲು ಹೇಳುವ ಶಬ್ದ (ಬಳ್ಳಾ.ಜಿ)

ಅತ್ಕಟ್ಟು: ಕೊರಳ ಆಭರಣ (ತುಮ.ಜಿ)

ಅತ್ಕಲಗಾರ: ವ್ಯಂಗ್ಯಮಾತುಗಾರ

ಅತ್ಗಸ: ತೆಳ್ಳಗಿನ ಸಿಹಿ ರಸ; ಒಂದು ಖಾದ್ಯದ ಹೆಸರು

ಅತ್ಗುಂಟೆ: ಭೂಮಿಯನ್ನು ಹಸನು ಮಾಡಲು ಬಳಸುವ ಸಾಧನ. **ಇರೂ:** *ಅತ್‌ಗುಂಟಿ*

ಅತ್ತಂಡ: ಎರಡು ತಂಡ (ಬೆಂಗ್ರಾ.ಜಿ)

ಅತ್ತಂಡ ಇತ್ತಂಡ: ಅತ್ತಲದು ಅತ್ತ ಇತ್ತಲದು ಇತ್ತ (ಧಾರ.ಜಿ)

ಅತ್ತಗಡಿ: ತಿನ್ನುವ ಒಂದು ಪದಾರ್ಥ

ಅತ್ತದ ಮಳೆ: ಹಸ್ತ ನಕ್ಷತ್ರದ ಮಳೆ; ಯಾವ ಮಳೆ ಬಾರದೆ ಇದ್ದರೂ ಹಸ್ತದ ಮಳೆ ಬಂದೇಬರುತ್ತದೆ ಎಂಬುದು ರೈತರ ನಂಬಿಕೆ

ಅತ್ತರ್: ೧. ಭೂತಕೋಲದಲ್ಲಿ ಇಡುವ ಒಂದು ಬಗೆಯ ಸ್ವಸ್ತಿಕೆ (ದಕ.ಜಿ) ೨. ಸುಗಂಧದ್ರವ್ಯ

ಅತ್ತರ: ೧. ಬಂಟರ ಕುಲನಾಮ (ದಕ.ಜಿ) ೨. ತೆಳು ಬಿದಿರಿನ ಸೀಳುಗಳಿಂದ ಮಾಡಿದ ತಡಿಕೆ

ಅತ್ತರಣ: ಆನೆ ಬೆನ್ನಿನ ಮೇಲೆ ಹಾಕುವ ಗವಸಣಿಗೆ (ಮೈಸೂ.ಜಿ) **ನೋಡಿ–** ಗಲ್ಲೀಪ

ಅತ್ತರಣೆ: *ಅಕ್ಸೈರಾಂತೆಸ್ ಆಸ್ಪೆರಾ:* ಉತ್ತರಾಣಿ ಗಿಡ

ಅತ್ತರಣೊ: ದಂತದಿಂದ ನಿರ್ಮಿತವಾದ ಮುತ್ತು ಕೂಡಿಸಿದ ಮಂಚಗಳು; ಆಸನಗಳು (ದಕ.ಜಿ)

ಅತ್ತರ್ಮುಡಿ: ಭೂತನರ್ತಕ ತಲೆಯ ಮೇಲೆ ಧರಿಸುವ ಎತ್ತರವಾದ ಅಣಿ (ದಕ.ಜಿ)

ಅತ್ತಾರ್ರು: ಬೈದ್ಯರ ಗರಡಿ ಮುಂತಾದ ಭೂತಾಲಯಗಳಲ್ಲಿ ಪೂಜೆ ಮಾಡುವ ಹಾಗೂ ದರ್ಶನ ಸೇವೆ ಮಾಡುವ ವ್ಯಕ್ತಿ; –ಅರ್ಚಕ ಹಾಗೂ ಪಾತ್ರಿ (ದಕ.ಜಿ)

ಅತ್ತಿ/ಅರ್ತಿ: *ಫೈಕಸ್ ರಸೆಮೋಸಾ:* ಔಷಧೀಯ ಗುಣಗಳುಳ್ಳ ಒಂದು ಹಾಲುಮರ. ಈ ಮರದ ಹಣ್ಣು, ಕಾಂಡ, ಬೇರು, ತೊಗಟೆ, ತೊಗಟೆಯನ್ನು ಕೆತ್ತಿದಾಗ ಬರುವ ಹಾಲು, ಎಲೆ ಎಲ್ಲವೂ ಔಷಧ ರೂಪದಲ್ಲಿ ಬಳಕೆಯಾಗುತ್ತದೆ. ತೊಗಟೆಯ ಕಷಾಯವನ್ನು ಮಧುಮೇಹ, ಚರ್ಮರೋಗ ಮತ್ತು ಗರ್ಭಕೋಶದ ತೊಂದರೆಗಳಿಗೆ, ಬೇರಿನ ಕಷಾಯವನ್ನು ಮೂಲವ್ಯಾಧಿ, ಉರಿಮೂತ್ರಕ್ಕೂ, ಚಿಗುರೆಲೆಯ ಕಷಾಯವನ್ನು ಬಾಯಿಹುಣ್ಣು, ಬಾಯಿಯ ದುರ್ಗಂಧ ನಿವಾರಣೆಗೂ, ಹಾಲನ್ನು ಮಂಗಬಾವಿಗೆ ಮತ್ತು ಊತಕ್ಕೆ ಲೇಪನವಾಗಿಯೂ ಬಳಸುತ್ತಾರೆ. ಇದನ್ನು ಒಣಗಿಸಿ ಕಲ್ಲುಸಕ್ಕರೆ ಮತ್ತು ನೊರೆಹಾಲಿನೊಂದಿಗೆ ಒಂದು ತಿಂಗಳು ಸೇವಿಸಿದರೆ ವೀರ್ಯವೃದ್ಧಿಯಾಗುತ್ತದೆ (ಮೈಸೂ.ಜಿ), ಅತ್ತಿ ಇದ್ದ ಕಡೆ ನೀರಿರುತ್ತದೆ ಎಂಬ ನಂಬಿಕೆಗಳಿವೆ.

ಅತ್ತಿಒಡಲ್ಹಣ್ಣು: ಪಪ್ಪಾಯಿ ಹಣ್ಣು (ಚಿಮ.ಜಿ)

ಅತ್ತಿಕಟ್ಟಿಗೆ ಬತ್ತಿಕಟ್ಟಿಗೆ ಆಟ: ಹೆಣ್ಣು ಮತ್ತು ಗಂಡು ಮಕ್ಕಳಿಬ್ಬರೂ ಆಡುವ ಆಟ. ಎಲ್ಲರೂ ಎರಡು ಅಂಗೈಯನ್ನು ನೆಲದ ಮೇಲಿಟ್ಟು ಕುಳಿತುಕೊಳ್ಳಬೇಕು ಪರಸ್ಪರ ಸಂವಾದ ಮಾಡುತ್ತ ಆಟ ಮುಂದೆ ಸಾಗುತ್ತದೆ (ಉಕ.ಜಿ)

ಅತ್ತಿಕಾಯಿ: ಹಸಿ ಕಡ್ಲೆಹಿಟ್ಟಿಗೆ, ಹೆಚ್ಚಿದ ಈರುಳ್ಳಿ ಮೆಣಸಿನಕಾಯಿ ಹಾಕಿ ಕಲೆಸಿ ಉಂಡೆ ಮಾಡಿ ಎಣ್ಣೆಯಲ್ಲಿ ಕರಿದ ತಿನಿಸು; ಕಡಲೆ ಹಿಟ್ಟಿನ ಬೋಂಡಾ (ಬಳ್ಳಾ.ಜಿ)

ಅತ್ತಿಕುಲ: ಪರಿಶಿಷ್ಟ ಸಮುದಾಯದ ಒಂದು ಒಳಪಂಗಡದ ಹೆಸರು

ಅತ್ತಿಗುಡಲು: ಅತ್ತಿಕೊಂಬೆಯಿಂದ ಮಾಡಿದ ಗುಡಿಸಲು. ಋತುಮತಿಯಾದ ಹೆಣ್ಣಿಗೆ ಅವಳ ಸೋದರ ಮಾವನು ಅತ್ತಿಮರದ ಸೊಪ್ಪಿನಿಂದ ಕಟ್ಟಿಕೊಡುವ ಎಲೆಗುಡಿಸಲು

ಅತ್ತಿಮಣೆ: ಅತ್ತಿಯ ಮರದಿಂದ ಮಾಡಿದ ಪೀಠ. ಕೆಲವು ಜಾತಿಗಳ ಮದುವೆಗಳಲ್ಲಿ ವಧೂವರರು ನಿಲ್ಲುವ ಮಣೆ ಅತ್ತಿಮರದ್ದೇ ಆಗಿರಬೇಕೆಂಬ ಸಂಪ್ರದಾಯವಿದೆ

ಅತ್ತಿಮನಿಒಸ್ಗಿ: ಅತ್ತೆಮನೆ ಒಸಗೆ. ಮದುವೆಗೆ ಸಂಬಂಧಿಸಿದ ಒಂದು ಶಾಸ್ತ್ರ. ಮದುವೆಯ ಹಿಂದಿನ ದಿನ ಗಂಡಿನ ಕಡೆಯ ಇಬ್ಬರು ಮುತ್ತೈದೆಯರು ಹೆಣ್ಣಿನ ಮನೆಗೆ ಒಸಗೆಯ ಸಾಮಗ್ರಿಗಳನ್ನು ತಂದು ಹೆಣ್ಣನ್ನು ಕೂರಿಸಿ ಹೊಸ ಸೀರೆ ಉಡಿಸಿ ಒಸಗೆಯ ಸಾಮಾನನ್ನು ಆಕೆಯ ಮಡಿಲಿಗೆ ತುಂಬಿಸುವ ಅಥವಾ ಒಸಗೆಯ ತಟ್ಟೆಗಳನ್ನು ಆಕೆಗೆ ಅರ್ಪಿಸುವ ಶಾಸ್ತ್ರ (ಕೋಲಾ.ಜಿ)

ಅತ್ತಿಮಳೆ ವಂಗಲು: ನೋಡಿ– ಅತ್ತೆಮಳೆ ಹೊಂಗ್ಲು

ಅತ್ತಿ ಹಣ್ಣು: ಅತ್ತಿಮರದಲ್ಲಿ ಬಿಡುವ ಕೆಂಪು ಹಣ್ಣು. ಅಳಿಲುಗಳಿಗೆ, ಹಕ್ಕಿಗಳಿಗೆ ಪ್ರಿಯವಾದ ಆಹಾರ. ನೋಡಲು ಚೆನ್ನಾಗಿದ್ದರೂ ಒಳಗೆ ತುಂಬ ಹುಳುಗಳಿರುತ್ತವೆ. ಹೀಗಾಗಿ ಕೆಟ್ಟ ಬುದ್ಧಿಯ ವ್ಯಕ್ತಿಗಳನ್ನು ಈ ಹಣ್ಣಿಗೆ ಹೋಲಿಸುತ್ತಾರೆ. ಕಣ್ಣು ಬೇನೆಯನ್ನು ತಡೆಯುತ್ತದೆ, ಮನೆಯಲ್ಲಿ, ಈ ಹಣ್ಣನ್ನಿಟ್ಟರೆ ತಗಣೆ ಚಿಕ್ಕಾಡು ಆಗುವುದಿಲ್ಲ ಎಂಬುದು ಪ್ರತೀತಿ

ಅತ್ತೆ ಮಳೆ: ಹಸ್ತಾ ನಕ್ಷತ್ರದ ಮಳೆ (ದಾವ.ಜಿ)

ಅತ್ತೆ ಮಳೆ ಹೊಂಗ್ಲು: ಹಸ್ತೆ ಮಳೆನಕ್ಷತ್ರದಲ್ಲಿ, ರಾಶಿ ಮಾಡುವಾಗ ಆಚರಿಸುವ ಪೂಜೆ

ಅತ್ತೆಸಾಲು: ಅತ್ತೆಯ ನಡವಳಿಕೆ, ಶೀಲ, ಸ್ವಭಾವ ಸೋದರ ಸೊಸೆ, ಅಳಿಯನಲ್ಲೂ ಕಾಣಿಸಿಕೊಳ್ಳುವುದು (ಮೈಸೂ.ಜಿ)

ಅತ್ತೆಸೀರೆ: ಅತ್ತೆಯಂದಿರಿಗೆ ಕೊಡುವ ಸೀರೆ. ಉಡುಗೊರೆ ಶಾಸ್ತ್ರದ ಸಂದರ್ಭದಲ್ಲಿ ಹೆಣ್ಣಿನ ಕಡೆಯವರು ಗಂಡಿನ ಕಡೆಯವರಿಗೆ, ಗಂಡಿನ ಕಡೆಯವರು ಹೆಣ್ಣಿನ ಕಡೆಯ ತಾಯಿಗೆ ಕೊಡುವ ಸೀರೆ (ಉಕ.ಜಿ)

ಅತ್ತೊಂಟೆ: ಕಿವಿಯ ಆಭರಣ; ಒಂಟಿ ಇರೂ: ಹತ್ಕಡಕ (ಮೈಸೂ.ಜಿ)

ಅತ್ತಾಯಿ: ಉಳಿಕಟ್ಟಿಗೆ; ಸಣ್ಣ ರಂಧ್ರ ಕೊರೆಯುವ ಭೈರಿಗೆ

ಅತ್ರಸ/ಅತಿರಸ/ಅತ್ರಾಸ: ಮಲೆನಾಡಿನ ಒಂದು ಬಗೆಯ ಸಿಹಿ ತಿಂಡಿ. ಬೆಳ್ತಕ್ಕಿಯನ್ನು ಬಟ್ಟೆ ಮೇಲೆ ಒಣಗಿಸಿ ಮೆಣಸಿನ ಕಾಳಿನೊಂದಿಗೆ ರುಬ್ಬಿ ಬೆಲ್ಲದ ಪಾಕಕ್ಕೆ ಹಾಕಿ ಕಲಸಿ ಉಂಡೆ ಮಾಡಿ ತಟ್ಟಿ ಎಣ್ಣೆಯಲ್ಲಿ ಕರಿಯುವುದು (ಚಿಮ.ಜಿ)

ಅತ್ರಿ: ಹತ್ತರಿ; ಮರವನ್ನು ಸಮಗೊಳಿಸಲು, ನುಣುಪು ಮಾಡಲು ಬಳಸುವ ಸಾಧನ (ಮಂಡ್ಯ.ಜಿ)

ಅತ್ಲಮಾರಿ: ಆ ಕಡೆಯ ಮಾರಿ

ಅತ್ಲಾಸ್‌ಕೊಪ್ಪು: ಮುತ್ತಿನಾಕಾರದ ಗುಂಡುಗಳನ್ನು ಪೋಣಿಸಿರುವ ಒಂದು ಕಿವಿಯಾಭರಣ (ದಕ.ಜಿ)

ಅತ್ಸು: ಹತ್ತಿಸು; ಅಂಟಿಸು; ಕತ್ತಿಸು

ಅದಗೂಡು: ೧. ಹದಮಾಡು ೨. ನೀರನ್ನು ಹದವಾಗಿ ಕಾಯಿಸಿ ಹುಯ್ಯಿ

ಅದಬೋದ: ೧. ಬೋಧ ೨. ಎಚ್ಚರ (ದಕ.ಜಿ)

ಅದಭಾರ: ಅರೆವಸಂತ; ಅರೆ ವಯಸ್ಸಿನ (ಧಾರ.ಜಿ)

ಅದಮು: ಒತ್ತು; ಹಿಚುಕು. ಇರೂ: *ಅದಿಮು*, **ಅದುಮು**, **ಅಮಕು**, **ಅಮಚು**, **ಅಮುಕು**

ಅದರಂಟೆ: ಅತ್ತಲೂ ಅಲ್ಲದ ಇತ್ತಲೂ ಅಲ್ಲದ ಅತಂತ್ರ ಸ್ಥಿತಿ (ಉಕ.ಜಿ)

ಅದರಮುಕಳಿ: ಅಂಜುಬುರಕ (ಬಳ್ಳಾ.ಜಿ)

ಅದರುಪೆಟ್ಟು: ಹುಸಿ ಹೊಡೆತ; ಮರಣಾಂತಿಕವಲ್ಲದ ಪೆಟ್ಟು

ಅದವ: ಬುದ್ಧಿ ಇಲ್ಲದವನು (ಧಾರ.ಜಿ)

ಅದವಾನಿಸೀರೆ: ಆದವಾನಿಯಲ್ಲಿ ತಯಾರಾಗುವ ಹದಿನೆಂಟು ಮೊಳದ ಸೀರೆ (ರಾಯ.ಜಿ)

ಅದಾವತಿ: ಹಗೆತನ (ಮಂಡ್ಯ.ಜಿ)

ಅದಿ: ೧. ಬೆದೆ; ಹೋರಿಗೆ ಬರುವುದು; ಸಂಭೋಗೇಚ್ಛೆಯ ದನ (ಶಿವ.ಜಿ) ೨. ಹದಿ; ಪ್ರಾಯ (ಮೈಸೂ.ಜಿ)

ಅದಿಕೋ (ಕ್ರಿ): ಮೇಲೆಬೀಳು; ಭಾರಹಾಕು (ಮಂಡ್ಯ.ಜಿ)

ಅದಿಗುದಿ: ತಳಮಳ (ಮೈಸೂ.ಜಿ). **ಇರೂ:** ಎದೆಗುದಿ

ಅದಿತಿ: ೧. ದೇವತೆಗಳ ತಾಯಿ ೨. ಕುರುಬ ಜನಾಂಗದ ಅಧಿದೇವತೆ

ಅದಿತೋಡು: ೧. ವೀಳ್ಯೆದೆಲೆ ಕೃಷಿಯಲ್ಲಿ, ಹಂಬು ಹೂಳಲು ಹಳ್ಳ ತೆಗೆ (ಚಿತ್ರ.ಜಿ) ೨. ಮನೆ ಕಟ್ಟಲು ಅಡಿಪಾಯಕ್ಕಾಗಿ ಗುಂಡಿ ಅಗೆ

ಅದಿಮೆಟ್ಟುವುದು: ಗೃಹನಿರ್ಮಾಣಕ್ಕಾಗಿ ತೋಡಿದ ಪಾಯದ ಗುಂಡಿಯಲ್ಲಿ ಸಣ್ಣ ಸಣ್ಣ ಕಲ್ಲುಗಳನ್ನು ಹಾಕಿ ಮಣ್ಣು ಮತ್ತು ನೀರಿನಿಂದ ಕೆಸರು ಮಾಡಿ ಪಾಯದ ಕೆಳಭಾಗವನ್ನು ಗಟ್ಟಿಗೊಳಿಸಿ ನೆಲದ ಮಟ್ಟಕ್ಕೆ ಸಮಗೊಳಿಸುವುದು (ಹಾಸ.ಜಿ). **ಇರೂ:** ಪಾಯ ಮೆಟ್ಟುವುದು

ಅದಿರಿಹತ್ತು: ೧. ಬೆದೆಗೆ ಬಂದ ಹಸು ಅಥವಾ ಹೋರಿ ಇನ್ನೊಂದರ ಮೇಲೆ ಹತ್ತುವುದು (ಹಾಸ.ಜಿ) ೨. ಅಡ್ಡಬರು (ಮೈಸೂ.ಜಿ)

ಅದಿರು/ಅದರು/ಅದುರು (ಕ್ರಿ): ೧. ನಡುಗು; ಅಲ್ಲಾಡು ೨. ಹೆದರು (ನಾ) ೩. ಬೆದೆ. **ಪ್ರ:** ಹಸು ಅದಿರಿಗೆ ಬಂದಿದೆ ಹೋರಿ ಕೊಡಿಸಬೇಕು ೪. ಲೋಹಾಂಶವುಳ್ಳ ಖನಿಜ ದ್ರವ್ಯ

ಅದಿಸೋಸುವುದು: ಪಾಯ ತೆಗೆಯುವುದು. ಗೃಹನಿರ್ಮಾಣ ಪ್ರಾರಂಭಿಸುವಾಗ ಆಯದ ಅಳತೆಗನುಗುಣವಾಗಿ ದಾರ ಕಟ್ಟಿ ಹಾರೆ ಗುದ್ದಲಿ ಬಳಸಿ ಎರಡು ಅಥವಾ ಮೂರು ಅಡಿ ಆಳದ ಗುಂಡಿ ತೋಡುವುದು (ಹಾಸ.ಜಿ)

ಅದುಕು (ಕ್ರಿ): ೧. ಒತ್ತು; ಅಡಕವಾಗಿಸು ೨. ಒಂದರ ಮೇಲೊಂದು ಹೇರು; ಪೇರಿಸು

ಅದೆ: ೧. ಕಂಬಳ ಗದ್ದೆಯ ಪಕ್ಕದಲ್ಲಿದ್ದು ಕಂಬಳದ ಆಚರಣೆಯ ಭಾಗವಾಗುವ ಗದ್ದೆ (ದಕ.ಜಿ) ೨. ಕೋಣೆ

ಅದೇಮಕ್ಕೆ: ಅದೇ ದಿಕ್ಕಿಗೆ (ಮೈಸೂ.ಜಿ).

ಅದೊಲಿ: ಬೆಳ್ಳಿಯ ಅರ್ಧ ರೂಪಾಯಿ ನಾಣ್ಯ (ದಕ.ಜಿ)

ಅದ್ಮನ: ಅರ್ಧಸೇರು

ಅದ್ಗಚ್ಚ: ಅರೆಬೆಂದ; ಪೂರ್ಣ ಕುದಿಯದ (ಉಕ.ಜಿ)

ಅದ್ಗಣಿ: ಅಡಿಗಲ್ಲು; ಅಕ್ಕಸಾಲಿಗಳು ಚಿನ್ನ ಅಥವಾ ಬೆಳ್ಳಿ ಇತ್ಯಾದಿ ತುಂಡನ್ನು ಇಟ್ಟು ಬಡಿಯಲು ಬಳಸುವ ಲೋಹದ ಸಾಧನ (ತುಮ.ಜಿ/ಗುಲ್ಬ.ಜಿ)

ಅದ್ದ (ನಾ): ೧. ಕನ್ನಡಿ; ದರ್ಪಣ (ಕ್ರಿ) ೨. ಒದ್ದೆಮಾಡು; ಮುಳುಗಿಸು (ಹಾವೇ.ಜಿ)

ಅದ್ದನ/ಅದ್ನ: ೧. ನಿತ್ರಾಣ; ನಿಶ್ಶಕ್ತಿ ೨. ಅನಾರೋಗ್ಯ ೩. ಸಂಕಟ (ದಕ.ಜಿ) ೪. ಒಂದು ಸಣ್ಣ ಅಳತೆಯ ಮಾನ; ಅರ್ಧಸೊಲಿಗೆ

ಅದ್ದನಕ್ಕಿ: ಎರಡು ಸೇರು ಅಕ್ಕಿ

ಅದ್ದರ: ಅಸ್ಥಿರ; ಜೀರ್ಣ; ನಾದುರಸ್ತು

ಅದ್ದರದವ: ಬಡವ; ಗತಿಯಿಲ್ಲದವ; ನಿರ್ಗತಿಕ

ಅದ್ದರಿಸು: ಹೆದರಿಸು; ಅಬ್ಬರಿಸು (ಮಂಡ್ಯ.ಜಿ)

ಅದ್ದಾತಲಿ: ಒಪಾರಿ ಬೇನೆ; ಅರೆ ತಲೆಶೂಲೆ (ಧಾರ.ಜಿ)

ಅದ್ದಾನಗೇಡಿ: ಅವಿವೇಕಿ; ಕೆಲಸಕ್ಕೆ ಬಾರದವ

ಅದ್ದಾರಿ: ಹರದಾರಿ; ಮೂರು ಮೈಲಿ;

ಅದ್ದುಕ: ಐಶ್ವರ್ಯ; ಅನುಕೂಲ

ಅದ್ದೂಕೆ ಹಾಕು: ಮುಂದಕ್ಕೆ ಹಾಕು (ಮೈಸೂ.ಜಿ). **ಪ್ರ:** ಮಗಳ ಮದುವೇನ ಒಂದು ತಿಂಗಳು ಅದ್ದೂಕೆ ಹಾಕವ್ರಂತೆ

ಅದ್ದೂರಿ: ವೈಭವ; ಆಡಂಬರ. **ಪ್ರ:** ಶ್ರೀಮಂತರು ಅದ್ದೂರಿಯ ಬಾಳು ನಡೆಸುತ್ತಾರೆ

ಅದ್ದೇಣಿ: ಮರಡಿ ಎದುರಿಗಿರುವ ಕಡಿದಾದ ಪ್ರದೇಶ; ಸಣ್ಣಮಟ್ಟಿ

ಅದ್ದೇಲಿ: ೧. ಎಂಟನೇ ಒಂದು ಆಣೆ; ಚಿಕ್ಕಕಾಸು; ಚಿಲ್ಲರೆ ಹಣ; ಪೈಸೆಗಿಂತ ಸ್ವಲ್ಪ ಹೆಚ್ಚು (ಬಿಜಾ.ಜಿ); ೨. ಒಂದು ಆಣೆ (ಉಕ.ಜಿ) ೩. ಅರ್ಧ ಎಲೆ; ಅರ್ಧ ವೀಳ್ಯದೆಲೆ (ದಕ.ಜಿ). ***ಇರೂ:*** *ಅದ್ದೋಲಿ*

ಅದ್ನ: ನೋಡಿ– ಅದ್ದನ

ಅದ್ರೆ: ಚೆದುರೆ; ಬೆಡಗಿ; ಬುದ್ಧಿವಂತಿಕೆಯುಳ್ಳವಳು; ಚಾಲೂಕಾದವಳು (ಮಂಡ್ಯ.ಜಿ)

ಅದ್ಲುಸು: ಗದರಿಸು; ಹೆದರಿಸು. **ಪ್ರ:** ಬಂಡಿಯ ಎತ್ತುಗಳು ಜೋರಾಗಿ ಹೋಗುವಂತೆ ಎತ್ತುಗಳನ್ನು ಅದ್ಲುಸುದ್ರು. **ಪ್ರ:** ನಾಯಿ ಅದ್ಲುಸು ಅತ್ತಾಗೆ

ಅದ್ಲೆ: ೧. ಬಿದಿರು ಮುಂತಾದ ಮರಗಳನ್ನು ಸೀಳಿ ಅಗಲ ಮಾಡುವ ಸಾಧನ; ಬೆಣೆ (ಉಕ.ಜಿ) ೨. ಗಳುವನ್ನು ಸೀಳಿ ಮಾಡಿದ ದೆಬ್ಬೆ. **ಪ್ರ:** ಅದ್ಲೆ ಚೆನ್ನಾಗಿದ್ರೆ ಹಲಗೆ ಆದೀತೆ. **ನೋಡಿ–** ಅಡಿಕೆ ಅದ್ಲೆ

ಅದ್ಲೆಪಟ್ಟೆ: ಗಾಡಿ ಅಥವಾ ಬಂಡಿಯ ಪಕ್ಕದಲ್ಲಿ ದೆಬ್ಬೆಗಳಿಂದ ಕಟ್ಟಿದ ತಡಿಕೆ

ಅದ್ವಕ: ಋಷ್ಕಿ ಬೆಳೆ ಬೆಳೆಯಲು ಬಳಸುವ ಭೂಮಿಯ ಒಂದು ಬಗೆ

ಅಧಿಕಮಾಸ: ಸುಮಾರು ಮೂರು ವರ್ಷಕ್ಕೊಮ್ಮೆ ಚಾಂದ್ರಮಾನ ಸಂವತ್ಸರಕ್ಕೆ ಹೆಚ್ಚಾಗಿ ಸೇರಿಸಿದ ತಿಂಗಳು

ಅಧೋಮುಖಿ: ಒಂದು ಹೆಣ್ಣು ದೈವದ ಹೆಸರು (ದಕ.ಜಿ)

ಅನಂತಗೊಂಡೆ ಹುಲ್ಲು: ಕಿಲಿಂಗ ಟ್ರೈಸೆಪ್ಸ್; ಒಂದು ಬಗೆಯ ಹುಲ್ಲು (ತುಮ.ಜಿ)

ಅನಂತನ ಗಂಟು: ರಂಗೋಲಿಯ ಒಂದು ವಿನ್ಯಾಸ

ಅನಗಂಡ: ಭಯಂಕರ; ದೊಡ್ಡ

ಅನಗಡ್: ಬಹಳ; ಪ್ರತಿ ನಿಮಿಷಕ್ಕೂ ಬಳಸುವ ಪದ್ಧತಿ; ಸಾಕಷ್ಟು (ಬೀದ.ಜಿ). ***ಇರೂ:*** ಅನಗಾಡಿ

ಅನಗನ್ನೆ: ಹೊನಗೊನ್ನೆ; ಹೊಲದಲ್ಲಿ ಬೆಳೆಯುವ ತಿನ್ನಲು ಯೋಗ್ಯವಾದ ಔಷಧಿಗುಣವುಳ್ಳ ಸೊಪ್ಪು. ಕಣ್ಣಿಗೆ ತುಂಬ ಒಳ್ಳೆಯದು ಎಂದು ಪ್ರಸಿದ್ಧಿ (ಮೈಸೂ.ಜಿ/ಚಾಮ.ಜಿ). ಹೊನಗನ್ನೆ ಹೋದ ಕಣ್ಣು ಬರಿಸಿತು ಎಂಬ ಮಾತಿದೆ. ***ಇರೂ:*** ***ಹೊನ್ನಗೊನೆ, ವನ್ಗೊನೆ,***

ಅನಗಾರ: ಭಿಕ್ಷುಗಳಲ್ಲಿ ಅಥವಾ ಬ್ರಹ್ಮಚಾರಿಗಳಲ್ಲಿ ಇರುವ ಒಂದು ಭೇದ (ಚಿಮ.ಜಿ)

ಅನಪತ್ಯ: ೧. ಅನಿವಾರ್ಯ ಸಂದರ್ಭ ೨. ಅಗತ್ಯ ೩. ತೊಂದರೆ ೪. ಆಪತ್ತು (ದಕ.ಜಿ)

ಅನಭಾತ್ಯಾ: ಅನ್ನಬಾಕ; ಅತಿಯಾಗಿ ಕೂಳು ತಿನ್ನುವವ (ಉಕ.ಜಿ)

ಅನಮಿಲಿ: ನವಿಲು (ಕೋಲಾ.ಜಿ)

ಅನರು: ನೀರಿನ ತಳದಲ್ಲಿರುವ ಕಸ; ಕಲ್ಮಶ (ದಕ.ಜಿ)

ಅನಲೆಹೂವು: ಕಾಡಿನ ಹೂವು. ಔಷಧವಾಗಿ ಬಳಕೆಯಾಗುವ ಒಂದು ಹೂವು

ಅನವಾಲ: ದೊಡ್ಡ; ಮಹಾ (ಬೆಳ.ಜಿ). ***ಇರೂ:*** ಅಸವಾಲ

ಅನವಾಸ: ೧. ಉಪವಾಸ (ಶಿವ.ಜಿ) ೨. ವನವಾಸ

ಅನಶಾಂತಿ: ಅನ್ನದಾನಮಾಡಿ ಪಡೆವ ಶಾಂತಿ, ಸಮಾಧಾನ (ಧಾರ.ಜಿ)

ಅನಸ: ಒನಕೆಯ ತಳಭಾಗ ಸವೆಯದಂತೆ ಅದರ ತಳದ ಸುತ್ತಲೂ ಹಾಕಿರುವ ಕಬ್ಬಿಣ ಅಥವಾ ಹಿತ್ತಾಳೆಯ ಅಣಸು

ಅನಸು: ಜೋಳ, ರಾಗಿ ಮುಂತಾದ ಗಿಡಗಳನ್ನು ಕತ್ತರಿಸಿದ ಮೇಲೆ ಬುಡದಲ್ಲಿ ಒಡೆಯುವ ಚಿಗುರು; ಕೂಳೆಪೈರು

ಅನಸುಳುವು: ಸೂಕ್ತಕಾಲ; ತಕ್ಕಹೊತ್ತು

ಅನಾದಿ: ೧. ಅನಾದ್ರಿ; ಹಳೆಯದಾದ ೨. ಪುರಾತನ ಕಾಲ; ಹಳೆಯ ಕಾಲ ೩. ಅನಾಥ; ದಿಕ್ಕುದೆಸೆಯಿಲ್ಲದವ (ಬೆಂಗ್ರಾ.ಜಿ) ೪. ಬೆಪ್ಪ

ಅನಾನ್‌ಗೆಟ್ಟೋನು: ಅನ್ನಕಾಣದವನು; ನಿರ್ಗತಿಕ (ಮಂಡ್ಯ.ಜಿ)

ಅನಾಮತಿ: ತೇವಣಿ (ದಕ.ಜಿ)

ಅನಾರಸ: ಬಾಳೆಹಣ್ಣು ಅಕ್ಕಿಹಿಟ್ಟಿನಿಂದ ಮಾಡಿದ ಸಿಹಿತಿಂಡಿ **ನೋಡಿ–** ಅತ್ರಾಸ

ಅನಾರುಂಡ: ಅನಾರಹುಂಡ. ವ್ಯಭಿಚಾರ ಮಾಡಿದ್ದಕ್ಕೆ ಶಿಕ್ಷೆಯಾಗಿ ಮೊಲೆ ಮೂಗು ಕೊಯ್ಸಿಕೊಂಡು ಅರಣ್ಯದಲ್ಲಿ ಸಂಚರಿಸುವ ಹೆಣ್ಣು (ಬೆಳ.ಜಿ)

ಅನಿಕು: ೧. ಹಣಕು; ಬಗ್ಗಿ ನೋಡು ೨. ಹನಕು; ತೊಟ್ಟಿಕ್ಕು

ಅನಿಕೆಕುಲ: ಪರಿಶಿಷ್ಟ ಸಮುದಾಯದ ಒಳಪಂಗಡ (ಚಾಮ.ಜಿ)

ಅನಿವಾರ: ಹೆರಿಗೆ ಬೇನೆ

ಅನಿವಾಳಮರ: ಒಂದು ಜಾತಿಯ ಮರ (ತುಮ.ಜಿ)

ಅನಿಸೀರೆ: ವಾಗ್ದಾನದ ಸೀರೆ. ಹುಟ್ಟಿದ ಹೆಣ್ಣುಮಗುವನ್ನು ತನ್ನ ಮಗನಿಗೆ ಮದುವೆ ಮಾಡಿಸಿ ಸೊಸೆಯಾಗಿ ಸ್ವೀಕರಿಸುತ್ತೇನೆಂಬ ವಾಗ್ದಾನ ಮಾಡಿ ತೊಟ್ಟಿಲಿಗೆ ಹಾಕುವ ಸೀರೆ (ದಕ.ಜಿ)

ಅನುಕ: ೧. ಬಾಯಿರುಚಿಯುಳ್ಳವ; ಊಟದಲ್ಲಿ ಆಶೆಬುರುಕ ೨. ಜಿಪುಣ; ನಾಲಿಗೆಯಿಂದ ನೆಕ್ಕುವವ. **ಇರೂ:** ಅನುಕ್ಲ, ಅನಕೆ

ಅನುಗಾಲ: ಯಾವಾಗಲೂ; ಸದಾಕಾಲ. **ಪ್ರ:** ಬರ ಬಂದ್ರೆ ಮೂರು ದಿನ, ಮಾತು ಬಂದ್ರೆ ಅನುಗಾಲ

ಅನುನೇರು (ನಾ): ಹಣದ ಏರು; ಉಳುಮೆ ಮಾಡಲು ಹಣಕೊಟ್ಟು ಕರೆಯುವ ಹೇರು. ಹಿಂದೆ ಅಗತ್ಯವಿದ್ದಾಗ ಮುಯ್ಯಾಳಾಗಿ ಪರಸ್ಪರರ ಹೊಲಗಳಲ್ಲಿ ಕೃಷಿಗೆ ನೆರವಾಗುತ್ತಿದ್ದುದೇ ಹೆಚ್ಚು ಚಾಲ್ತಿಯಲ್ಲಿತ್ತು (ಚಾಮ.ಜಿ)

ಅನುಪು: ಒರತೆ; ತೇವ (ಉಕ.ಜಿ)

ಅನುಬಾನಿಗೆ: ಭೂಮಿಗೂ ಆಕಾಶಕ್ಕೂ

ಅನುಮನಸು: ಅನ್ಯಮನಸ್ಸು. ಹಿಂದೆ ಮುಂದೆ ನೋಡುವ ಮನಸ್ಸು; ಅನುಮಾನ **ಪ್ರವೃತ್ತಿ**

ಅನುರಾಗಿ: ಅನುರಾಧ ನಕ್ಷತ್ರ (ತುಮ.ಜಿ). **ಇರೂ:** ಅನುರಾಜ

ಅನುರಾಜಾ: ಅನುರಾಧ ನಕ್ಷತ್ರದ ಮಳೆ (ಉಕ.ಜಿ)

ಅನುರಾಧಿ/ಅನುರಾಧಿಗಿ: ಅನುರಾಧ ನಕ್ಷತ್ರದ ಮಳೆ. **ಪ್ರ:** ಅನೂರಾಧ ಬಂದರೆ ಮನಾರೋಗ ಹೋಯ್ತು (ದಾವ.ಜಿ)

ಅನುಲಿ: ಅಳಿಲು; ಇಣಚಿ (ಉಕ.ಜಿ/ಬೀದ.ಜಿ)

ಅನುಲಿಗುಂಬ್ಳ: ಅಳಿಲಿನ ತರಹದ ಹಂಡಬಂಡ ಕುಂಬಳ (ಬಿಜಾ.ಜಿ)

ಅನುವಾಗಿ: ಸರಿಯಾಗಿ; ಹೊಂದಿಕೆಯಾಗಿ

ಅನುವು: ಒಳ್ಳೆಯ; ಸೊಗಸಾದ; ಅನುಕೂಲಕರವಾದ (ಚಿತ್ರ.ಜಿ)

ಅನುವುಆಪತ್ತು: ಕಷ್ಟಸುಖ. **ಪ್ರ:** ಅನುವು ಆಪತ್ತುಗಳು ಬಂದಾಗ ಈಕೆಯ ಬಳಿಗೆ ಬಂದು ವಿಶೇಷ ಪೂಜೆ ಮಾಡಿ ವರವನ್ನು ಬೇಡುತ್ತಾರೆ

ಅನೆ: ಬೇಸಾಯದ ಸಾಮಗ್ರಿ

ಅನ್ದರ್‌ಸ್ತಿ: ದನಗಳ ಗುಂಡಿಗೆಯ ಭಾಗದಲ್ಲಿಂದ ಗದ್ದದವರೆಗೂ ಊದಿಕೊಂಡು ದೊಡ್ಡ ಗಂಟು ಮೂಡುವ ಪ್ರಾಣಾಂತಿಕ ರೋಗ. (ಮಂಡ್ಯ.ಜಿ/ಬೆಂಗ.ಜಿ)

ಅನ್ನ ಕಲಸಿಕ್ಕು ಶಾಸ್ತ್ರ: ಬಸುರಿಗೆ ಬಗೆ ಬಗೆಯ ಅನ್ನಗಳನ್ನು ಮಾಡಿಕೊಡುವ ಶಾಸ್ತ್ರ

ಅನ್ನಕಳವು: ಹಸಿವಿನ ಬಳಲಿಕೆಯಿಂದ ತಲೆಸುತ್ತಿ ಬೀಳುವುದು (ಬೆಂಗ್ರಾ.ಜಿ)

ಅನ್ನಕ್ಕೆ ದಾರಿ ಆಗು: ಜೀವನೋಪಾಯಕ್ಕೆ ಅವಕಾಶವಾಗು. **ಪ್ರ:** ನನಗೆ ಅನ್ನಕ್ಕೆ ದಾರಿ ಆಯಿತು ಮಾತಾಯಿ

ಅನ್ನಚತ್ರ: ಉಚಿತವಾಗಿ ಊಟಹಾಕುವ ಧರ್ಮಶಾಲೆ

ಅನ್ನತೆಗೆಸು (ಕ್ರಿ): ಮಕ್ಕಳಿಗೆ ಅಥವಾ ಮದುವೆಯ ಗಂಡು ಹೆಣ್ಣುಗಳಿಗೆ ದೃಷ್ಟಿ ಆಗುತ್ತದೆಯೆಂದು ಭಾವಿಸಿ ದೃಷ್ಟಿನಿವಾರಣೆಗಾಗಿ ಮಾಡುವ ಒಂದು ಆಚರಣೆ. ಬಣ್ಣದ ಅನ್ನವನ್ನು ಮೂರು ಮಿಡಿಚಿ ಮಾಡಿ ವೀಳೆಯದೆಲೆ ಮೆಣಸಿನಕಾಯಿ ಉಪ್ಪು ಇವನ್ನೆಲ್ಲ ಓಕುಳಿಯಿರುವ ತಟ್ಟೆಗೆ ಹಾಕಿ ನೀವಳಿಸಿ ಮೂರು ದಾರಿಗಳು ಕೂಡಿದ ಕಡೆ ಚೆಲ್ಲುವುದು

ಅನ್ನದ ಕೈ: ಅನ್ನ ಬಡಿಸುವ ಸಾಧನ; ಅನ್ನದ ಸೌಟು (ಮಂಡ್ಯ.ಜಿ)

ಅನ್ನದಚರು: ಭೂತಾದಿಗಳಿಗೆ ಅರ್ಪಿಸುವ, ರಕ್ತದಿಂದ ಕಲಸಿದ ಅನ್ನ (ದಕ.ಜಿ)

ಅನ್ನದ ಬರ: ಹೆಣ್ಣಿನ ಎಡ ಅಂಗೈಯ ಗೆರೆಗಳಲ್ಲಿ ಒಂದು. ಯಾರ ಗೆರೆ ತೋರುಬೆರಳಿನ ಕಡೆಗೆ ಹಾದು ಬೆರಳಿನ ಬುಡದ ಬಳಿ ಹೋಗಿರುತ್ತದೋ ಆ ವ್ಯಕ್ತಿಗೆ ಜೀವನದಲ್ಲಿ ಅನ್ನದ ಸಮಸ್ಯೆ (ಬಡತನ) ಇರುವುದಿಲ್ಲ ಎಂಬ ನಂಬಿಕೆ. ಹಾಗೆಯೇ ವಿದ್ಯಾರೇಖೆ, ಧನರೇಖೆ, ಅಯುಷ್ಯರೇಖೆ. ಇತ್ಯಾದಿಗಳನ್ನು ಸಹ ಗುರ್ತಿಸಲಾಗುತ್ತದೆ (ಮೈಸೂ.ಜಿ)

ಅನ್ನದ ಮರಿಗೆ: ಬಸಿದ ಅನ್ನವನ್ನು ಆರಲು ತುಂಬಿಡುವ ಮರದ ಸಾಧನ (ಮೈಸೂ.ಜಿ/ಚಾಮ.ಜಿ)



ಅನ್ನದ ಹೊದಿ: ಹುಲ್ಲಿನಮನೆ; ಗುಡಿಸಲು

ಅನ್ನದಾನ/ಅನ್ನುದಾನ: ಆಹಾರವನ್ನು ದಾನ ಮಾಡುವುದು; ಉಚಿತ ಆಹಾರ ಹಂಚಿಕೆ; ದಾಸೋಹ. **ಪ್ರ**: ಹತ್ತಿಪ್ಪತ್ತು ಪಲ್ಲ ದವಸ ಹಾಕಿ ಅನ್ನದಾನ ಮಾಡಿದೆ

ಅನ್ನನಿವಾಳಿಸು: ದೃಷ್ಟಿ ತೆಗೆಯುವ ವಿಧಾನಗಳಲ್ಲಿ ಒಂದು. ಅನ್ನಕ್ಕೆ ಓಕುಳಿ ನೀರು ಬೆರೆಸಿ ಮುದ್ದೆಯಂತೆ ಮಿದ್ದಿ ನೀವಾಳಿಸುವುದು. ಕಕ್ಕಡದ ಉಂಡೆ ಮಾಡಿ ನೀವಾಳಿಸುವುದು (ಚಿಮ.ಜಿ)

ಅನ್ನನೀರು ಇಡುವುದು: ಮಲೆನಾಡಿನ ಬ್ರಾಹ್ಮಣರ ಶವಸಂಸ್ಕಾರ ಸಂದರ್ಭದಲ್ಲಿ ಶವ ಮಲಗಿಸಿದ ಜಾಗದಲ್ಲಿ ದಾರ ಬಿಟ್ಟು, ಅದರ ಕೆಳಗೆ ೧೦ ದಿನಗಳ ತನಕ ಮಧ್ಯಾಹ್ನ ಸಂಜೆ ಅನ್ನ ನೀರು ಹಾಲುಗಳನ್ನು ಇಡುವ ಸಂಪ್ರದಾಯ (ಚಿಮ.ಜಿ)

ಅನ್ನಪಡಿ: ಅಕ್ಕಿಪಡಿ; ಜೀವನಾಂಶಕ್ಕೆ ಒದಗಿಸುವ ಭತ್ಯ **ನೋಡಿ–** ಅಕ್ಪಡಿ

ಅನ್ನಪ್ರಾಶನ: ಮಗುವಿಗೆ ಮೊದಲ ಬಾರಿಗೆ ಅನ್ನ ತಿನ್ನಿಸುವ ಶಾಸ್ತ್ರ. ಐದು ಅಥವಾ ಆರನೇ ತಿಂಗಳಲ್ಲಿ ಒಂದು ಶುಭದಿವಸ ಪಾತ್ರೆಯಲ್ಲಿ ಅನ್ನ, ಜೇನುತುಪ್ಪ, ಅರಳು ಹಾಲು ಹಾಕಿ ಕಲೆಸಿ ದೇವರ ಹೆಸರು ಹೇಳಿ ತಿನ್ನಿಸುತ್ತಾರೆ (ಶಿವ.ಜಿ)

ಅನ್ನಬೆಲ್ಲ: ಬಾಣಂತಿಯರಿಗೆ ಕೊಡುವ ಊಟ

ಅನ್ನಬೇದಿ: ಮೂರ್ತಿಗಳಿಗೆ ಕಪ್ಪು ಬಣ್ಣ ತಯಾರಿಸಲು ಬಳಸುವ ಒಂದು ವಸ್ತು (ಬಳ್ಳಾ.ಜಿ)

ಅನ್ನಮುಹೂರ್ತ: ಮಗುವಿಗೆ ತಾಯಿಯ ಹಾಲು ಬಿಡಿಸಿ ಒಳ್ಳೆಯ ಮುಹೂರ್ತದಂದು ದೇವರ ಮುಂದೆ ಕೂಡ್ರಿಸಿ ಅನ್ನ ತಿನ್ನಿಸುವ ಶಾಸ್ತ್ರ. ನೋಡಿ– ಅನ್ನಪ್ರಾಶನ

ಅನ್ನಸುರುಗು ಬುಟ್ಟಿ: ೧. ಅನ್ನಬಸಿಯಲು ಬಳಸುವ ಬಿದಿರಿನ ಬುಟ್ಟಿ ೨. ಬೆಂಗೂಡೆ (ಬೆಂಗ್ರಾ.ಜಿ)

ಅನ್ನಹೆಚ್ಚಿತು: ಅನ್ನ ಮುಗಿಯಿತು ಎಂದು ಹೇಳಬಾರದು ಎಂಬ ನಂಬಿಕೆಯಿಂದ ಬಳಸುವ ಸೌಮ್ಯೋಕ್ತಿ

ಅನ್ನೆಕಾರ: ಅನ್ಯಾಯಗಾರ; ದ್ರೋಹಿ (ಮೈಸೂ.ಜಿ). **ಪ್ರ**: ಹೋಗ್ಲ ಹೋಗ್ಲ ಅನ್ನೆಕಾರ್ನಂಗೆ ಮಾತಾಡಬ್ಯಾಡ

ಅನ್ನೆಕುಲ್ಲಿ: ೧. ಅಕ್ರಮ ವರ್ತನೆ ೨. ಅನ್ಯಾಯ ೩. ಕದ್ದು ಮಾತಾಡುವಿಕೆ

ಅನ್ಮಾನ್ಗೇಡಿ: ಸಂಶಯ ಸ್ವಭಾವದವನು (ಗುಲ್ಬ.ಜಿ)

ಅನ್ಯ: ದೋಣಿಯ ಮುಂಭಾಗ (ದಕ.ಜಿ)

ಅನ್ಸಂಕ್ಷ: ಅನ್ನಸಂಕಟ; ನೋವು, ಹಸಿವಿನ ಬಾಧೆ (ಚಾಮ.ಜಿ/ಮೈಸೂ.ಜಿ)

ಅನ್ಸಲೆ/ಅನ್ಸೆಲೆ: ದನಗಳ ರೋಗ. ಜೋರಾಗಿ ಮೊರೆಯುವಂತಹ ಉಸಿರಾಟ, ರಕ್ತ ಎಲ್ಲ ಬಿಳುಚಿಕೊಂಡು ಬಿದ್ದಲ್ಲೆ ಬಿದ್ದಿರುವ ರೋಗ (ಬೆಂಗ.ಜಿ/ಮಂಡ್ಯ.ಜಿ)

ಅನ್ಸೋಲೆ: ಬ್ರೇನಿಯಾ ವಿಟಿಸ್ ಐಡಿಯಾ ಹೂಲಿ. ಕಜ್ಜಿ ಕೋಟಲೆಗಳಿಗೆ ಮದ್ದಾಗಿ ಬಳಕೆಯಾಗುವ ಔಷಧೀಯ ಪೊದೆ ಸಸ್ಯ (ಮಂಡ್ಯ.ಜಿ)

ಅಪನೋರ: ೧. ಅಪ್ಪನವರು; ಅಯ್ಯನವರು ೨. ಸ್ವಾಮಿ (ಧಾರ.ಜಿ); ಸನ್ಯಾಸಿ (ಬೀದ.ಜಿ)

ಅಪಮೋಸ: ಆಕಸ್ಮಿಕ ಮೋಸ (ಉಕ.ಜಿ). **ಪ್ರ**: ಏನಾದ್ರೂ ಏರ್‌ಪೇರ್ ಆಗಿ ಇಂಥಾ ಅಪ್‌ಮೋಸ ಆಯ್ತೋ ಮತ್ತೆ

ಅಪರಾತಪರಾ: ೧. ಹಣ ವಂಚಿಸುವಿಕೆ; ಸಾರ್ವಜನಿಕ

ಸೊತ್ತು ಅಪಹರಿಸುವಿಕೆ ೨. ಎಲ್ಲೆಮೀರಿದ ೩. ಅಗಣಿತ ೪. ನಿರಂತರ (ಬಳ್ಳಾ.ಜಿ)

ಅಪರಾಶೆ: ಪಶ್ಚಿಮ ದಿಕ್ಕು

ಅಪಲೋಪ: ಲೋಪದೋಷ (ದಕ.ಜಿ)

ಅಪಸವ್ಯ: ಬಲಹೆಗಲಿನ ಜನಿವಾರವು ಎಡಭಾಗದಲ್ಲಿ ಇಳಿಬಿದ್ದಾಗ ಇದನ್ನು ಅಪಸವ್ಯ ಎನ್ನುವರು. ಪಿತೃಗಳ ಕರ್ಮ ಸಮಯದಲ್ಲಿ ಅವರನ್ನು ಆಹ್ವಾನ ಮಾಡುವಾಗ ಮತ್ತು ಅವರಿಗೆ ಎಳ್ಳಿನಿಂದ ತರ್ಪಣ ಕೊಡುವ ಸಂದರ್ಭದಲ್ಲಿ ಅಪಸವ್ಯದಲ್ಲಿ ಜನಿವಾರ ಹಾಕಬೇಕು. ಇದು ವೈದಿಕ ಪದ್ಧತಿ (ಚಿಮ.ಜಿ)

ಅಪಾತಗ: ಕೈಲಾಗದವ; ನಿಸ್ಸಹಾಯಕ; ದರಿದ್ರ; ಕೆಟ್ಟ ನಡತೆ ಹೊಂದಿರುವವನು; ಪೋಕರಿ; ದಾರಿತಪ್ಪಿದವನು; ಒಂದು ಬೈಗುಳ (ಬಳ್ಳಾ.ಜಿ). **ಇರೂ:** *ಅಪಪೋಲಿ, ಅಪಾಡಿ*

ಅಪೀಟು: ನೆಲದ ಮೇಲೆ ತಿರುಗುತ್ತಿರುವ ಬುಗುರಿಯನ್ನು ಚಾಟಿಯ ಮೂಲಕ ಮೇಲೆತ್ತಿ ಕೈಯಲ್ಲಿ ಹಿಡಿದುಕೊಳ್ಳುವುದು (ಬೆಂಗ್ರಾ.ಜಿ)

ಅಪು: ೧. ನೀರಿನ ಅಂಚಿನಲ್ಲಿ ಬೆಳೆಯುವ ಗಿಡ; ಜೊಂಡು; ಜೇಣಿ ೨. ಮತ್ತು ಬರಿಸುವ ವಸ್ತು; ಅಫೀಮು (ಬೆಳ.ಜಿ). **ಪ್ರ:** ಗಿದ್ದನ ಅಕ್ಯಾಗ ಮಳಿರಾಜ, ಅವರು ಅಪುವನ್ನೆ ಬೆರಸ್ಯಾರೆ ಮಳಿರಾಜ

ಅಪುಗೆ: ಕುಂಬಾರರು ಮಡಕೆಗಳನ್ನು ಬೇಯಿಸುವ ಒಲೆ. **ಇರೂ:** *ಆವುಗೆ, ಆವಿಗೆ*

ಅಪೂಟ: ೧. ಇಡಿಯಾಗಿ; ಪೂರ್ಣ (ಗುಲ್ಬ.ಜಿ). **ಪ್ರ:** ಅಪೂಟ ಹಣ್ಣನ್ನು ಅವನೊಬ್ನೆ ತಿಂದ ೨. ಶುದ್ಧ; ಬೆರಕೆಯಲ್ಲದ; ಮೂಲ (ಉಕ)

ಅಪೂಪ (ನಾ): ಅಕ್ಕಿ ಬಾಳೆಹಣ್ಣು ಬೆಲ್ಲ ಸೇರಿಸಿ ಮಾಡಿದ ಒಂದು ಸಿಹಿತಿನಿಸು. ಅಧಿಕ ಮಾಸದಲ್ಲಿ ಇದನ್ನು ದಾನ ಮಾಡಿದರೆ ಅಧಿಕ ಪುಣ್ಯ ಎಂಬ ನಂಬಿಕೆ (ಧಾರ.ಜಿ)

ಅಪೂಪದಾನ (ನಾ): ಅಧಿಕಮಾಸದ ಒಂದು ವ್ರತ. ಅಂದು ಮೂವತ್ಮೂರು ಅಪೂಪಗಳನ್ನು ದಾನ ಕೊಡುವ ಸಂಪ್ರದಾಯವಿದೆ (ಧಾರ.ಜಿ)

ಅಪೇಶಿ: ಕೈಲಾಗದವ (ಬೆಳ.ಜಿ)

ಅಪ್ಡೆ: ಗಾಣದೊಳಗಿನ ಒರಳನ್ನು ಬಿಗಿಗೊಳಿಸಲು ಒಂದು ಅಡಿಯಷ್ಟು ವೃತ್ತಾಕಾರವಾಗಿ ಮರದಿಂದ ಮಾಡಿಕೊಂಡ ಸಾಧನ (ಹಾಸ.ಜಿ)

ಅಪ್ಣಿ ಕೇಳೂದ: ದೇವರು ಮೈಮೇಲೆ ಬಂದಾಗ ಭಕ್ತರು ತಮ್ಮ ಸಮಸ್ಯೆಗೆ ಪರಿಹಾರ ಕೇಳಿಕೊಳ್ಳುವುದು (ಉಕ)

ಅಪ್ಪ: ೧. ಕಜ್ಜಾಯ; ಅಕ್ಕಿ, ಕಾಯಿ, ಬೆಲ್ಲ, ಅರಳು, ಎಳ್ಳು, ಬಾಳೆಹಣ್ಣು ಮೊದಲಾದವುಗಳನ್ನು ಹಾಕಿ ರುಬ್ಬಿ ಗುಳಿ ಇರುವ ಬಾಣಲೆಯಲ್ಲಿ ತುಪ್ಪದಲ್ಲಿ ಕರಿಯುವ ಸಿಹಿ ತಿಂಡಿ (ಉಡು.ಜಿ) ೨. ಒಂದು ಬಗೆಯ ದೋಸೆ. ಕುಳಿಗಳಿರುವ ಕಾವಲಿಯಲ್ಲಿ ಬೇಯಿಸುವ ದೋಸೆ ೩. ಅಕ್ಕಿ ಬೆಲ್ಲ ತೆಂಗಿನಕಾಯಿಗಳಿಂದ ತಯಾರಿಸಿದ ಸಿಹಿತಿಂಡಿ; ರೊಟ್ಟಿ; ಎರೆಯಪ್ಪ ೪. ಅಪ್ಪದಿಟ್ಟು (ಮೈಸೂ.ಜಿ)

ಅಪ್ಪಂತ: ೧. ಶ್ರೇಷ್ಠವೆನಿಸುವ; ೨. ನಂಬಿಗಸ್ಥ; ಸಜ್ಜನ; ಒಳ್ಳೆಯವ. **ಪ್ರ:** ಅಪ್ಪಂತವ, ಅಪ್ಪಂತೋರು, ಅಪ್ಪಂತೋಳು *(ಮಂಡ್ಯ.ಜಿ)* ೩. ಅತಿಶಯವಾದ; ಮೇಲಾದ. **ಪ್ರ:** ಅಪ್ಪಂತ ಹೆಣ್ಣು ತರ್ತೀನಿ ನೋಡ್ತಿರು

ಅಪ್ಪಂದ: ಥೇಟ್ ಅದರಂತೆಯೇ (ಮೈಸೂ.ಜಿ). **ಪ್ರ:** ಇವನು ಥೇಟ್ ಅವನ ಅಪ್ಪಂದ

ಅಪ್ಪಗೋಳು: **ನೋಡಿ–** ಅಪನೋರ

ಅಪ್ಪಚ್ಚಿಬಳ್ಳಿ: ಔಷಧಿಗುಣವುಳ್ಳ ಒಂದು ಬಳ್ಳಿ. ಕಾಡಿನಲ್ಲಿರುವ ದೊಡ್ಡದೊಡ್ಡ ಮರಗಳ ಕಾಂಡಕ್ಕೆ ಹಬ್ಬಿಕೊಂಡಿರುತ್ತದೆ. ಜಾನುವಾರುಗಳಿಗೆ ಬೆದೆ ಬರಲು ಈ ಬಳ್ಳಿಯನ್ನು ನೇರವಾಗಿ ಅಥವಾ ಹಿಂಡಿಯಲ್ಲಿ ಕಲಸಿ ತಿನ್ನಲು ಕೊಡುತ್ತಾರೆ. ಏಪ್ರಿಲ್ ತಿಂಗಳಿನಲ್ಲಿ ಅಪ್ಪಚ್ಚಿ ಬಳ್ಳಿಯನ್ನು ದನಗಳಿಗೆ ಕೊಡಬಾರದು ಎಂಬ ನಂಬಿಕೆಯಿದೆ

ಅಪ್ಪಚ್ಚಿಸೊಪ್ಪು: ಉತ್ತರ ಕನ್ನಡ ಜಿಲ್ಲೆಯಲ್ಲಿ ದನಕರುಗಳ ಮೇವಿಗೆ ಬಳಕೆಯಾಗುವ ಸಸ್ಯ. ಮೇವಿನಲ್ಲಿ ಈ ಸೊಪ್ಪನ್ನು ಕತ್ತರಿಸಿ ಮೇವಿನ ಜೊತೆಯಲ್ಲಿ ಬೆರೆಸಿ ಕೊಡುವುದರಿಂದ ಹಾಲಿನ ಇಳುವರಿ ಹೆಚ್ಚಾಗುತ್ತದೆ (ಉಕ.ಜಿ)

ಅಪ್ಪಣಿ: ಅಫೀಮು (ಶಿವ.ಜಿ)

ಅಪ್ಪಣೆ: ದೇವರ ಹೇಳಿಕೆ (ಉಕ.ಜಿ)

ಅಪ್ಪಣೆಕೇಳು: ದೇವರನ್ನು ಅನುಮತಿ ಕೇಳು; ವರ ಕೇಳು. ದೇವರು ಕೊಡುವ ಹೂವಿನ ಲೆಕ್ಕದಲ್ಲಿ ಇದನ್ನು ತೀರ್ಮಾನಿಸುತ್ತಾರೆ. **ಪ್ರ:** ನಮ್ಮ ದೇವರನ್ನು ಅಪ್ಪಣೆ ಕೇಳದೆ ಯಾವ ಕೆಲಸಕ್ಕೂ ಕೈಹಾಕಲ್ಲ

ಅಪ್ಪತ್ತು: ಅಶ್ವತ್ಥ; ಅರಳಿಮರ

ಅಪ್ಪದ ಬಳೆ: ಉರುಳು ಪಟ್ಟಿಯ ಬಳೆ (ದಕ.ಜಿ)

ಅಪ್ಪದಿಟ್ಟು: ಅಕ್ಕಿ, ಬೆಲ್ಲ, ಕಾಯಿರುಬ್ಬಿ ಬಳಪದ ಕಲ್ಲಿನ ಕುಳಿಗಳಿರುವ ಕಾವಲಿಯಲ್ಲಿ ಬೇಯಿಸಿ ತಯಾರಿಸುವ ಸಿಹಿ ತಿನಿಸು. ದಾಸ ಒಕ್ಕಲಿಗರು ಗಂಡು ಹೆಣ್ಣನ್ನು ಕೂರಿಸಿ ಇದನ್ನು ತಿನ್ನುವ ಪಂದ್ಯ ಏರ್ಪಡಿಸುತ್ತಾರೆ (ಹಾಸ.ಜಿ)

ಅಪ್ಪಾಲು: ಬೆಲ್ಲದ ದೋಸೆ

ಅಪ್ಪಾಳೆತಿಪ್ಪಾಳೆ: ಕೈ ಕೈ ಹಿಡಿದು ತಿರುಗುವ ಆಟ; ಗಿರಿಗಿಟ್ಲೆ (ಮಂಡ್ಯ.ಜಿ)

ಅಪ್ಪಾಳೆತಿಪ್ಪಾಳೆ ತಿರುವು: ತಲೆ ಮುಡಿ ಹಿಡಿದು ಗುಂಜಾಡು; ಜಗಳವಾಡು (ರಾಮ.ಜಿ)

ಅಪ್ಪಿ: ೧. ಮಾವಿನಲ್ಲಿ ಒಂದು ವಿಧ ೨. ಬೆಂದ ಮಾಂಸದ ತುಂಡು (ಮೈಸೂ.ಜಿ) ೩. ಮಕ್ಕಳನ್ನು ಪ್ರೀತಿಯಿಂದ ಸಂಬೋಧಿಸುವ ಮಾತು.

ಅಪ್ಪಿಗಿ: ೧. ಹೊಲಿಗೆ; ತ್ಯಾಪೆ ೨. ಬಣ್ಣ (ಬಳ್ಳಾ.ಜಿ)

ಅಪ್ಪಿಪಾಯಸ: ರವೆಯ ಚಿಕ್ಕ ಚಿಕ್ಕ ಪೂರಿಗಳನ್ನು ಪುಡಿ ಮಾಡಿ ಬೆಲ್ಲದೊಂದಿಗೆ ಹಾಕಿ ಸಿದ್ಧಪಡಿಸುವ ಪಾಯಸ

ಅಪ್ಪಿಬೀಳು (ನಾ): ಬೇಲಿಬದಿಯಲ್ಲಿ ಬೆಳೆಯುವ ಒಂದು ಜಾತಿಯ ಬಳ್ಳಿ. ಜಾನುವಾರುಗಳಿಗೆ ಮೇವಾಗಿ ಬಳಸುತ್ತಾರೆ (ಉಕ.ಜಿ)

ಅಪ್ಪಿಮಾಯಿನ್ಮರ: ಅಪ್ಪೆ ಮಾವಿನ ಮರ

ಅಪ್ಪಿಸೊಪ್ಪು: ದನ, ಎತ್ತುಗಳಿಗೆ ತಿನ್ನಲು ನೀಡುವ ಸೊಪ್ಪು (ಚಿಮ.ಜಿ)

ಅಪ್ಪು: ಗಾಳಿಪಟದ ಕಡ್ಡಿ ಹಾಗೂ ದಾರಗಳನ್ನು ಬೆಸೆದು ಗೋಂದು ಹಚ್ಚಿದ ಚಿಕ್ಕ ಚಿಕ್ಕ ಕಾಗದದ ಚೂರು (ಮೈಸೂ.ಜಿ)

ಅಪ್ಪುಕುಟ್ಟಿ: ಬಡಗುತಿಟ್ಟಿನ ಯಕ್ಷಗಾನದಲ್ಲಿ ಕಾಣಿಸಿಕೊಳ್ಳುವ ಕೋಡಂಗಿ ವೇಷ

ಅಪ್ಪುಕೈಯಿ: ಎರಡು ಕೈಗಳನ್ನು ಕಂಕುಳಿಗೆ ಅವುಚಿಕೊಳ್ಳುವುದು (ಬೆಂಗ್ರಾ.ಜಿ)

ಅಪ್ಪುಹಾಕು: ಆಲಂಗಿಸು (ಉಕ.ಜಿ)

ಅಪ್ಪೆ: ೧. ಒಂದು ಜಾತಿಯ ಮಾವಿನ ಮರ; ಇದರ ಮಿಡಿ ಉಪ್ಪಿನಕಾಯಿ ಪ್ರಸಿದ್ಧಿ (ಉಕ.ಜಿ) ೨. ಬೊಬ್ಬೆ; ಹೊಪ್ಪಳೆ (ತುಮ.ಜಿ)

ಅಪ್ಪೆಕಟ್ಟ್: ಅಳಿಯಕಟ್ಟು (ದಕ.ಜಿ)

ಅಪ್ಪೆಗೆಡ್ಡೆ: ಮಿಡಿಮಾವಿನ ಕಾಯಿಯ ಗೆಡ್ಡೆ (ಬೆಂಗ.ಜಿ)

ಅಪ್ಪೆಬಂಡಿ: ೧. ಕುಳಿಗಳನ್ನುಳ್ಳ ಬಳಪದ ಕಲ್ಲಿನ ಕಾವಲಿ. ಇದರಲ್ಲಿ ಅಕ್ಕಿಹಿಟ್ಟಿನ ತಿನಿಸು (ಗುಂಡುಪೊಂಗ್ಲು) ಮಾಡುತ್ತಾರೆ ೨. ಉಪ್ಪಿನಕಾಯಿ ಮರಿಗೆ (ಉಕ.ಜಿ)

ಅಪ್ಪೆಸಮ್ಮನ: ಮದುವೆಯ ಬಳಿಕ ತವರುಮನೆಯಲ್ಲಾಗುವ ಸಮ್ಮಾನ (ದಕ.ಜಿ)

ಅಪ್ಪೇಸಿ: ಬೈಗುಳ ಪದ (ಬೀದ.ಜಿ)

ಅಪ್ಪೇಹುಳಿ: ಅಪ್ಪೆ ಮಾವಿನಕಾಯಿಂದ ಮಾಡುವ ತೆಳ್ಳನೆಯ ನೀರಿನಂತಹ ಹುಳಿ ರುಚಿಯ ವ್ಯಂಜನ. ಜೀರ್ಣಕಾರಿ ಹಾಗೂ ಒಳ್ಳೆ ನಿದ್ರೆ ತರಿಸುವ ಗುಣಹೊಂದಿದ್ದು ವಿಶೇಷ ಅಡುಗೆ ಮಾಡಿದ ದಿನಗಳಲ್ಲಿ ತಪ್ಪದೆ ಇದನ್ನು ಊಟದ ಕೊನೆಯಲ್ಲಿ ಬಡಿಸುತ್ತಾರೆ (ಉಕ.ಜಿ)

ಅಪ್ಪೊಂತಾಲಿ: ಗಿರಗಿರ ಸುತ್ತುವ ಒಂದು ಹೊರಾಂಗಣ ಆಟ (ದಕ.ಜಿ)

ಅಪ್ಪೋರು: ಅಪ್ಪ ಅವರು; ಹಿರಿಯರನ್ನು ಗೌರವ ಪೂರ್ವಕವಾಗಿ ಸಂಬೋಧಿಸುವ ಪದ **ಇರೂ:** ಅಪ್ಪಂತೋರು

ಅಪ್ರಾಣಿ: ೧. ಓತಿಕ್ಯಾತ ೨. ಹಾವರಾಣಿ (ರಾಮ.ಜಿ)

ಅಪ್ರಿ: ನೆಲೆ ಇಲ್ಲದೆ ತೊಂದರೆ ಕೊಡುವ ಪ್ರೇತ (ಉಡು.ಜಿ)

ಅಪ್ಲೀಲಿ: ಓಣಿ (ಬಳ್ಳಾ.ಜಿ)

ಅಪ್ಸಣ: **ನೋಡಿ–** ಅಪ್ಸಣಬು

ಅಪ್ಸಣಬು: ಕ್ರೋಟಲೇರಿಯ ಜನ್ಸಿಯ: ೧. ಒಂದು ವಿಧದ ಸಸ್ಯ; ೨. ಹಸಿರೆಲೆ ಗೊಬ್ಬರಕ್ಕಾಗಿ ಬೆಳೆಸುವ ಸಸ್ಯ. **ಇರೂ:** ಅಪ್ಸಣ; ಅಪ್ಸಣಬ್ಲು, ಕಾಡುಪ್ಸೆಣ್ಬು

ಅಪ್ಸ್‌ನೀಗು: ಸತ್ತೋಗು; ತೀರಿಹೋಗು (ತುಮ.ಜಿ)

ಅಬ: ತಾಯಿ (ದಕ.ಜಿ)

ಅಬಂಡ: ದಪ್ಪಗಾತ್ರದ್ದು; ತೂಕವಾದದ್ದು; ವಿಶೇಷ ಗಾತ್ರವುಳ್ಳದ್ದು (ಉಕ.ಜಿ)

ಅಬಕಾರ: ಹುಳ (ಬಾಗ.ಜಿ)

ಅಬಗೊತ್ತು (ಕ್ರಿ): ಅದ್ದು; ನೆನೆಸು; ಹಸಿಯಾಗಿಸು (ಉಕ.ಜಿ)

ಅಬಚಿ: ಚಿಕ್ಕಮ್ಮ (ಗುಲ್ಬ.ಜಿ)

ಅಬಡ್‌ಪುಡಿ: ಗೊರಸು ಹುಣ್ಣು (ದಕ.ಜಿ)

ಅಬತಾಗಿರಿ: ೧. ಒಂದು ಬಗೆಯ ಛತ್ರಿ ೨. ದೊರೆಗಳು ಬಳಸುವ ವೈಭವೋಪೇತ ಕೊಡೆ ೩. ದೇವರ ಉತ್ಸವದಲ್ಲಿ ಬಳಸುವ ಅಲಂಕೃತ ಕೊಡೆ. **ಇರೂ**: *ಆಪ್ತಗಿರಿ*

ಅಬರ: ಹಡಗಿನ ಅಥವಾ ದೋಣಿಯ ಹಿಂಭಾಗ (ದಕ.ಜಿ)

ಅಬರಂಗ: ೧. ಅಭ್ರಕ; ಕಾಗೆಬಂಗಾರ (ಮಂಗ.ಜಿ/ಬಿಜಾ.ಜಿ) **ಪ್ರ**: ಕೆಂಪಾನೆ ಚಲ್ಲೋಣಿ ಅಬರಂಗ ಸಂಗಡ ೨. ಮಿಂಚುವವನು (ಬೀದ.ಜಿ)

ಅಬರದವನು: ಹಿಂಭಾಗದ ಹಲಗೆಯಲ್ಲಿ ಕುಳಿತು ದೋಣಿ ನಡೆಸುವವನು; ಚುಕ್ಕಾಣಿಯವನು (ದಕ.ಜಿ)

ಅಬರು: ೧. ಎಚ್ಚರ; ಪ್ರಜ್ಞೆ; ಪರಿಜ್ಞಾನ ೨. ಮಾನ; ಮರ್ಯಾದೆ

ಅಬಸತ್ತಿ: **ನೋಡಿ–** ಅಬಸಾತ್

ಅಬಸಾತ್: ಒಡಂಬಡಿಕೆ; ಒಪ್ಪಂದ; ಹೊಂದಾಣಿಕೆ (ಬಾಗ.ಜಿ)

ಅಬಸುಬ: ೧. ಅಪಶಕುನ; ಅಶುಭ ೨. ಉಭಶುಭ; ತುಟಿಪಿಟಕ್ಕೆನ್ನದೆ (ರಾಮ.ಜಿ)

ಅಬಹಳಿಕಿ: ಅಬ್ಬರ

ಅಬಳು: ಬಳುಕು

ಅಬಿ: ಸಣ್ಣ ಕೆರೆಯಿಂದ ನೀರು ಪಡೆದು ವರ್ಷಕ್ಕೆ ಒಂದೇ ಬೆಳೆ ಬೆಳೆಯುವ ಭೂಮಿ

ಅಬುಗೋಳು: ಅಡವಿ ಗೊಲ್ಲರ ಒಂದು ಬೆಡಗಿನ ಹೆಸರು

ಅಬುಣ್ಣು: ಕೈ ಬೆರಳಗಳು ಕ್ರಮೇಣ ನಶಿಸಿ ಹೋಗುವಂತೆ ಮಾಡುವ ಹುಣ್ಣು; ಇದಕ್ಕೆ ಹಸಿರು ಔಷಧಿ ಮಾಡುತ್ತಾರೆ (ಮಂಡ್ಯ.ಜಿ)

ಅಬೆಹಿಡಿ: ತಿಂದು ತಿಂದು ಬೇಸರಬರು (ದಕ.ಜಿ)

ಅಬೇಟ: ತೊಗಲುಗೊಂಬೆಯವರ ಒಂದು ಪಂಗಡ

ಅಬ್ಗೇರೆ: ಹಬ್ಬ ಹರಿದಿನ ಮದುವೆ ಮುಂಜಿ ಇತ್ಯಾದಿ ವಿಶೇಷದ ದಿನಗಳಲ್ಲಿ ಮೊದಲು ಒಂದು ಚಮಚದಷ್ಟು ಬಡಿಸುವ ಪಾಯಸ, ತುಪ್ಪ, ಹಾಲು ಇತ್ಯಾದಿ **ಪ್ರ**: ಮಧ್ಯಾಹ್ನದ ಊಟಕ್ಕೆ ತುಪ್ಪವನ್ನೂ ಸಂಜೆಯ ಊಟಕ್ಕೆ ಹಾಲನ್ನೂ ಅಬ್ಗೇರೆಯಾಗಿ ಬಡಿಸುತ್ತಾರೆ (ಉಕ.ಜಿ)

ಅಬ್ಜ: ನೀರ ಝರಿ (ಉಕ.ಜಿ)

ಅಬ್ತಿ: ಅಬತಿ; ಹೊಲದ ತೆರಿಗೆ (ರಾಯ.ಜಿ)

ಅಬ್ಬುಡ್ಕು: ಹಬ್ಬದ ತೊಡಕು; ಹಬ್ಬದ ಮಾರನೇ ದಿನ; ವರ್ಷತೊಡಕು (ಮಂಡ್ಯ.ಜಿ)

ಅಬ್ಬಂಗಿ: ಅಬ್ಬಲಿಗೆ ಹೂ; ಕನಕಾಂಬರ

ಅಬ್ಬಗೆ ದಾರಗೆ: ಎರಡು ಸ್ತ್ರೀದೈವಗಳು; ತುಳುನಾಡಿನ ಸಾಂಸ್ಕೃತಿಕ ವನಿತೆ ಸಿರಿಯ ಮಗಳಾದ ಸೊನ್ನೆಯ ಮಕ್ಕಳು. ಸಿರಿ ಕಾವ್ಯಸಂಧಿಯಲ್ಲಿ ಬರುವ ಅವಳಿ ಸಹೋದರಿಯರು (ದಕ.ಜಿ)

ಅಬ್ಬಜಟ್ಗ: ಒಂದು ಗ್ರಾಮದೇವತೆ; ಇದಕ್ಕೆ ಕುರಿ ಕೋಳಿಗಳ ಬಲಿ ಕೊಡುತ್ತಾರೆ (ಉಕ.ಜಿ)

ಅಬ್ಬಜ್ಜಿ: ನೆಲದಲ್ಲಿ ನಿಧಾನವಾಗಿ ನಡೆಯುವ ಒಂದು ಕೀಟ (ಚಿತ್ರ.ಜಿ)

ಅಬ್ಬರ: ಮೂಡಲಪಾಯ ಯಕ್ಷಗಾನದಲ್ಲಿ ಆಟ ಆರಂಭವಾಗುವ ಮೊದಲು ಚಂಡೆ ಮದ್ದಲೆ ತಾಳಗಳನ್ನು ಮಾತ್ರ ಹಾಡುವಿಕೆಯಿಲ್ಲದೆ ಬಾರಿಸುವ ಕ್ರಮ (ದಕ.ಜಿ)

ಅಬ್ಬರ ಅಡಗು: ೧. ಆರ್ಭಟ ನಿಲ್ಲು. **ಪ್ರ**: ಅವನ ಅಬ್ಬರೆಂದಿಗೆ ಅಡಗ್ಯಾತೋ ಕಾಣೆ ೨. ಮರಣ ಹೊಂದು ೩. ಬೈಗುಳ; ಶಾಪದ ನುಡಿ

ಅಬ್ಬರಕುಣಿತ: ರಭಸದ ವೀರಾವೇಶದ ಕುಣಿತ

ಅಬ್ಬರಗಿ/ಅಬ್ಬರಿಗೆ: *ಕ್ರೊಸಾಂಡ್ರ ಇನ್ಫಂಡಿಬುಲಿಫೋರ್ಮಿಸ್*: ೧. ಕನಕಾಂಬರ ಹೂವು (ಮಂಗ.ಜಿ) ೨. ಹಬ್ಬಸಿಗೆ. **ಇರೂ**: *ಅಬ್ಬಲ್ಲಿ, ಅಬರೂಗಿ, ಅಬ್ಬಲಿ, ಅಬ್ಬಲಿಗೆ (ಉಕ.ಜಿ)*

ಅಬ್ಬರವಿಡ್ತಿಗೆ: ಆವೇಶ ಉಕ್ಕುವಂತೆ ಜೋರಾಗಿ ಬಡಿಯುವ ವಾದ್ಯಗೋಷ್ಠಿ (ದಕ.ಜಿ)

ಅಬ್ಬಲುಹಕ್ಕಿ: ಒಂದು ಜಾತಿಯ ಪಕ್ಷಿ

ಅಬ್ಬಳಿಕೆ: ವಾಂತಿ; ಹೇವರಿಕೆ; ವಾಕರಿಕೆ (ಮೈಸೂ.ಜಿ). **ಇರೂ**: *ಅಬ್ಳಿಕೆ (ಮಂಡ್ಯ.ಜಿ)*

ಅಬ್ಬಿ: ೧. ಇಳಿಗುರುತು; ಏರುತಗ್ಗುಗಳಿಂದ ಕೂಡಿದ ವಾರೆ (ಚಿಮ.ಜಿ) ೨. ಗುಡ್ಡದ ಓರೆಯಿಂದ ಇಳಿದು ಬರುವ ನೀರು; ಜಲಪಾತ (ಕೊಡ.ಜಿ) ೩. ಜಟ್ಗ (ಗೋಕರ್ಣ ಮಂಡಳಿ) ಇದು ನೀರು ಹರಿಯುವಲ್ಲಿ ಏಳು ನೀಳ್ಗಲ್ಲುಗಳ ಸಾಲು. ಅಲ್ಲಲ್ಲಿ ಏಳು ಗುತ್ತಗಳಿವೆ (ಉಕ.ಜಿ)

ಅಬ್ಬಿಕುಳಿ: ಬಚ್ಚಲು ಮನೆ ಒಲೆ. ಹವ್ಯಕರು ಬಳಸುವ ಪದ (ಉಕ.ಜಿ)

ಅಬ್ಬಿಮನಿ ಸಂತಾರಿತಿ: ತಾಯಿಮನೆ ಸಂತತಿ; ಹೆಣ್ಣು ಮಕ್ಕಳು ಮದುವೆಯಾದ ಬಳಿಕ ಗಂಡನ ಮನೆಗೆ ಹೋಗದಿರುವ ಪದ್ಧತಿ (ದಕ.ಜಿ)

ಅಬ್ಬು (ಕ್ರಿ): ೧. ಹಬ್ಬು. **ಪ್ರ:** ಮಲ್ಗೆ ಬಳ್ಳಿ ದೊಡ್ಡದಾಗಿ ಅಬ್ಬುಟೈತೆ ೨. ಮೊಗೆ ೩. ಸೇದು ೪. ಹೆಚ್ಚು; ಕತ್ತರಿಸು; ಹೋಳುಮಾಡು.

ಅಬ್ಬುರುತ: ೧. ನಟನೆ ೨. ಹುಡುಗಾಟಿಕೆ ೩. ಮುದ್ದು

ಅಬ್ಬುಳುಕ: *ಫ್ಲಕೂರ್ಷಿಯಾ ಇಂಡಿಕಾ:* ಹುಳಿ–ಸಿಹಿ ಮಿಶ್ರಿತ ರುಚಿ ಹೊಂದಿರುವ ನೆಲ್ಲಿಕಾಯಿ ಗಾತ್ರದ ಹಣ್ಣು ಬಿಡುವ ಕಾಡುಮರ. ಜೀರ್ಣಕಾರಿ, ಪಿತ್ತಹರ, ಕಾಮಾಲೆ ರೋಗ ನಿವಾರಕ ಗುಣವನ್ನು ಹೊಂದಿದೆ. ಎಳೆ ಎಲೆಗಳನ್ನು ಜಾನುವಾರುಗಳಿಗೆ ಮೇವಾಗಿಯೂ, ಕಾಂಡವನ್ನು ಕೃಷಿ ಉಪಕರಣ ತಯಾರಿಕೆಯಲ್ಲೂ ಬಳಸುತ್ತಾರೆ. **ಇರೂ:** *ಸಂಪಿಗೆ ಹಣ್ಣು (ಉಕ.ಜಿ), ಚಪ್ಪಕ, ಚಾಪಿ ಹಣ್ಣು (ದಕ.ಜಿ)*

ಅಬ್ಬೆ: ೧. ತಾಯಿ ೨. ಹಬ್ಬ ೩. ಜೇಡ

ಅಬ್ಬೇಪಾರಿ: ನಿರುದ್ಯೋಗಿ; ಕೆಲಸವಿಲ್ಲದೇ ತಿರುಗುವವನು (ಮೈಸೂ.ಜಿ/ಬೆಂಗ್ರಾ.ಜಿ)

ಅಬ್ರುಗೇಡಿ: ನಾಚಿಕೆಗೇಡಿ (ಗುಲ್ಬ.ಜಿ)

ಅಬ್ರೋನಿ: ಒಂದು ಜಾತಿಯ ಮೀನು (ದಕ.ಜಿ)

ಅಬ್ಲು: ಕೆಸರು ಮಣ್ಣು; ಗೊರೆ (ಮೈಸೂ.ಜಿ)

ಅಭಯ: ದೈವದ ಅಪ್ಪಣೆ

ಅಭಾಳ: ಮೋಡ (ಉಕ.ಜಿ)

ಅಭಿಷೇಕ: ಮಂಗಳಕರವಾದ ನೀರು, ಹಾಲು, ಮೊಸರು, ಸಕ್ಕರೆ, ಬಾಳೆಹಣ್ಣು, ತುಪ್ಪ ಮುಂತಾದವುಗಳನ್ನು ದೇವರ ವಿಗ್ರಹಕ್ಕೆ ಎರೆಯುವುದು

ಅಮಕಾಸು(ಕ್ರಿ): ತುಂಬಿ ತುಳುಕಾಡು (ಬಳ್ಳಾ.ಜಿ)

ಅಮಕೀರೆ: ಅಶ್ವಗಂಧ ಎಂಬ ಮರ; ಒಂದು ಬಗೆಯ ಗಿಡಮೂಲಿಕೆ

ಅಮಕೆ: ಎರಡು ಬೆರಳುಗಳು ಕವಲೊಡೆಯುವಲ್ಲಿನ ಮೆದು ಚರ್ಮ (ದಕ.ಜಿ)

ಅಮಗಂಡಿ: ಮನೆಯ ಮೇಲಿನ ಕಿಟಕಿ; ಗವಾಕ್ಷಿ

ಅಮಚೌಕ: ಚೌಕಾಕಾರ (ಬಳ್ಳಾ.ಜಿ)

ಅಮಟಿ ಸೊಪ್ಪು: ಒಂದು ಬಗೆಯ ಹುಳಿಸೊಪ್ಪಿನ ಸಸ್ಯ (ಮಂಡ್ಯ.ಜಿ)

ಅಮಟೆ: *ಸ್ಪಾಂಡಿಯಾಸ್ ಅಕ್ಯುಮಿನೇಟ ಮ್ಯಾಂಗಿಫೆರ:* ಗೊಜ್ಜು ಉಪ್ಪಿನಕಾಯಿ ಮುಂತಾದವಕ್ಕೆ ಬಳಸುವ ಒಂದು ಹುಳಿಕಾಯಿ. **ಇರೂ:** *ವಾಂಟೆಕಾಯಿ* (ಚಿತ್ರ ನೋಡಿ)

ಅಮಡ್/ಅಮ್ಡು: ಅವಳಿ ಮಕ್ಕಳು (ದಕ.ಜಿ)

ಅಮತ್ತು: ೧. ಅರಗೂಲಿ ೨. ಅಹಮಿಕೆ; ಸೊಕ್ಕು (ಬಳ್ಳಾ.ಜಿ)

ಅಮತ್ರ: ತಟ್ಟೆ

ಅಮರಗ್ರಂಥಿ ಗಿಡ: *ಲಿಮ್‌ನೋಫಿಲ ಗ್ರ್ಯಾಟಿಯೋಲಾಯ್ಡಿಸ್ ಇಂಡಿಕ:* ಒಂದು ಔಷಧೀಯ ಸಸ್ಯ. ಆನೆಕಾಲು ರೋಗಕ್ಕೆ ಔಷಧಿಯಾಗಿ ಮತ್ತು ನಂಜುನಿರೋಧಕವಾಗಿ ಬಳಸುತ್ತಾರೆ

ಅಮರೇಶ: ದೇವೇಂದ್ರ; ಅಮರರ ಒಡೆಯ

ಅಮರೇಶ ಮಿಂಚು: ಪೂರ್ವ ದಿಕ್ಕಿನಲ್ಲಿ ಕಾಣಿಸುವ ಮಿಂಚು. ಈ ದಿಕ್ಕಿನಲ್ಲಿ ಮಿಂಚಿದರೆ ಮಳೆ ಖಂಡಿತ ಬರುತ್ತದೆಂಬ ನಂಬಿಕೆ ಇದೆ. (ಬಳ್ಳಾ.ಜಿ)

ಅಮರೇಶನ ಗಾಳಿ: ಪೂರ್ವದಿಂದ ಬೀಸುವ ಗಾಳಿ. ಈ ಗಾಳಿ ಬೀಸಿದರೆ ಬೆಳೆ ಚೆನ್ನಾಗಿ ಬರುತ್ತದೆಂಬ ನಂಬಿಕೆ ಇದೆ. (ಬಳ್ಳಾ.ಜಿ).

ಅಮಲ: ೧. ಅಧಿಕಾರ; ದರ್ಪ ೨. ಮಬ್ಬು (ಮೈಸೂ.ಜಿ)

ಅಮಸೋಲ: ಸಾಂಬಾರಕ್ಕೆ ಬಳಸುವ ಹುಳಿವಸ್ತು

ಅಮಾಜವಾ: ಸಾಂಬಾರ ಪದಾರ್ಥಗಳು; ದಿನಸಿ ಪದಾರ್ಥಗಳು (ಮಂಡ್ಯ.ಜಿ). **ಇರೂ:** *ಲವಾಜಮೆ*

ಅಮಾದಿ: ಅಮೇಧ್ಯ; ಕಕ್ಕಸು; ಮಲ (ಮೈಸೂ.ಜಿ)

ಅಮಾನಿ: ೧. ಪುಕಸಟ್ಟೆ; ಉಚಿತ ೨. ದಿನಗೂಲಿ ೩. ಊರೊಟ್ಟಿಗೆ ಸೇರಿದ್ದು

ಅಮಾವಾಸ್ಯೆ: ಚಂದ್ರ ಕಾಣಿಸದ ದಿನ. ಚಾಂದ್ರಮಾನ ತಿಂಗಳ ಕಡೆಯ ದಿನ. ಉತ್ತರ ಕರ್ನಾಟಕದಲ್ಲಿ ಪ್ರತಿಯೊಂದು ಅಮಾವಾಸ್ಯೆಯನ್ನೂ ಬೇರೆ ಬೇರೆ ಹೆಸರಿನಿಂದ ಕರೆದು ಆಚರಿಸುವ ಸಂಪ್ರದಾಯವಿದೆ. ಉದಾ: ಎಳ್ಳಮವಾಸ್ಯೆ

ಅಮಾವಾಸ್ಯೆ ಹಬ್ಬ: ಮಲೆನಾಡಿನ ಗೌಡಲು ಜನಾಂಗದವರು ದೀಪಾವಳಿಯ ಎರಡನೇ ದಿನದ ಆಚರಿಸುವ ಹಬ್ಬ. ಅಂದು ಕಲಶಕ್ಕೆ ಬೆಳಿಗ್ಗೆ ಸಂಜೆ ಪೂಜೆ ಮಾಡುತ್ತಾರೆ (ಮಲೆ)

ಅಮಾಸಿ: ನೋಡಿ– ಅಮಾವಾಸ್ಯೆ. **ಪ್ರ:** ಅಕ್ಕ ಸತ್ರೆ ಅಮಾಸಿ ನಿಲ್ಲುದಿಲ್ಲ ತಂಗಿ ಸತ್ರ ಹುಣ್ಣಿಮಿ ನಿಲ್ಲುದಿಲ್ಲ

ಅಮಾಸುಬೂದಿ: ಅಮಾವಾಸ್ಯೆಯ ಮುನ್ನಾದಿನ; ಚತುರ್ದಶಿ; ಇದು ಮಂಗಳಕಾರ್ಯಗಳಿಗೆ ದೂರದ ಪ್ರಯಾಣಕ್ಕೆ ಪ್ರಶಸ್ತವಾದ ದಿನವಲ್ಲ ಎಂಬ ನಂಬಿಕೆ ಇದೆ

ಅಮಾಸೆ ಉಣ್ಣುವುದು: ಅಮಾವಾಸ್ಯೆಯಂದು ಕಾಗೆಗಳಿಗೆ ಅನ್ನವಿಟ್ಟು ಒಪ್ಪೊತ್ತು ಊಟಮಾಡುವುದು (ದಕ.ಜಿ)

ಅಮಾಸೆ ಕಳ್ಳಿ: ಅಮಾವಾಸ್ಯೆಯ ಕತ್ತಲಿನಲ್ಲಿ ಕದಿಯುವ ಕಳ್ಳಿ. ಇತರ ದಿನಗಳ ಕತ್ತಲಿನಲ್ಲಿ ಕದಿಯುವುದಕ್ಕಿಂತ ಹೆಚ್ಚು ಗುಟ್ಟಿನದು (ಮೈಸೂ.ಜಿ)

ಅಮಾಸೆ ಹುಣ್ಣಿಮೆ: ಅಪರೂಪಕ್ಕೆ; ವಿರಳವಾಗಿ (ಮೈಸೂ.ಜಿ)

ಅಮಾಸ್ಯಾ: ಕಪ್ಪು ವರ್ಣದವನು (ಧಾರ.ಜಿ)

ಅಮಿ: ೧. ಮೈಲಿಗೆ ೨. ಸೂತಕ (ಮೈಸೂ.ಜಿ/ಚಾಮ.ಜಿ) ೩. ಹೆಣ್ಣನ್ನು ಸಂಬೋಧಿಸುವ ಮಾತು

ಅಮಿಮಡ್ಕಿ: ಹೆರಿಗೆಯಾದ ನಂತರ ಬೀಳುವ ಮಾಸು, ಕಲ್ಮಷವನ್ನು ತುಂಬಿಡುವ ಚಿಕ್ಕ ಮಣ್ಣಿನ ಪಾತ್ರೆ (ದಕ.ಜಿ)

ಅಮಿರುಳಿ: ಹುಟ್ಟುವಾಗ ಇರುವ ರೋಮ; ಹುಟ್ಟುಗೂದಲು (ದಕ.ಜಿ)

ಅಮಿಹೊಂಡ: ಮಗುವನ್ನು ಹೆರುವಾಗ ಜೊತೆಯಲ್ಲಿ ಬೀಳುವ ಮಾಸನ್ನು ಹೂಳುವ ಹೊಂಡ. ಇದನ್ನು ಮಡಕೆಯಲ್ಲಿ ಇಟ್ಟು ಬಚ್ಚಲು ಮನೆಯ ಪಕ್ಕದಲ್ಲಿ ಅಥವಾ ಹಿತ್ತಲಲ್ಲಿ ಹೊಂಡ ತೆಗೆದು ಹೂಳುವರು. ಬಳಿಕ ಇದರ ಮೇಲೆ ಬಸಳೆ ಮುಂತಾದ ಗಿಡವನ್ನು ನೆಡುತ್ತಾರೆ (ಉಡು.ಜಿ)

ಅಮು: ಬೂದಿ; ಕುಂಬಾರ ಮಡಿಕೆ ಸುಟ್ಟ ನಂತರ ಆವಿಗೆಯಲ್ಲಿರುವ ಬೂದಿ (ಕೋಲಾ.ಜಿ)

ಅಮುದು: ೧. ರಾಗಿ ಅಂಬಲಿ. ಹೊಸಕೋಟೆಯ ಜಿನ್ನಾಗರ ಎಂಬಲ್ಲಿ ಬಸವಜಯಂತಿಯಂದು ಶಿವನ ಪೂಜೆಯಲ್ಲಿ ನಡೆಯುವ ರುದ್ರನಾಲಿಗೆ ಎಂಬ ಆಚರಣೆಯಲ್ಲಿ ಅಮುದು (ಅಮೃತ) ಬಹಳ ಪವಿತ್ರವಾದ ಪ್ರಸಾದ (ಬೆಂಗ್ರಾ.ಜಿ) ೨. ಹಾಲು ಮೊಸರು ಬೆಲ್ಲ ತುಪ್ಪದ ಮಿಶ್ರಣ; ದೇವರ ಹಬ್ಬ ಅಥವಾ ಬಂಡಿದೇವರ ಹಬ್ಬದಂದು ಇಡುವ ನೈವೇದ್ಯ (ಕೋಲಾ.ಜಿ) ೩. ಹೊಸದ್ಯಾವರ ಆಚರಿಸುವ ಕುಟುಂಬಗಳು ಪೂಜೆಗೆ ತಂದ ಭತ್ತವನ್ನು ಕುಟ್ಟಿ ತರಕಾರಿಯೊಂದಿಗೆ ಹೊಸ ಅಕ್ಕಿಯನ್ನು ಬೇಯಿಸಿ ತಯಾರಿಸಿದ ಅನ್ನ (ಬೆಂಗ್ರಾ.ಜಿ). **ಇರೂ:** ಅಮುದನ್ನ

ಅಮುರ್ತಸಿಲೆ: ಅಮೃತ ಶಿಲೆ

ಅಮುಸ್ತಿ: ಔಷಧಿ. **ಇರೂ:** *ಔಸ್ತಿ*

ಅಮೃತಬಳ್ಳಿ: *ಟೆನೋಸ್ಪೋರ ಕಾರ್ಡಿಫೋಲಿಯ:* ಅಂತರಟಿಗೆ ಬಳ್ಳಿ. ಪಿತ್ತ, ಕಫ, ಜ್ವರನಿವಾರಕ; ರಕ್ತಹೀನತೆಗೆ ಔಷಧಿ. ಎಲೆಗಳ ರಸ ಲೇಪನದಿಂದ ಕೀಲುಗಂಟು ನೋವು ನಿವಾರಣೆಯಾತ್ತದೆ. **ಇರೂ:** *ಜನಿವಾರದ ಬಳ್ಳಿ, ಗಿಳಿಮೂತಿ ಗೆಡ್ಡೆ (ಗುಲ್ಬ.ಜಿ)* (ಚಿತ್ರ ನೋಡಿ)

ಅಮೃತಮಹಲು: ಗೋವಿನ ಒಂದು ತಳಿ (ದಕ)

ಅಮೃತಯಿಂಡ ರೊಟ್ಟಿ: ೧. ನೆನೆದ ಹಿಟ್ಟಿಗೆ ಹೊಸಬೆಣ್ಣೆ, ಸಿಹಿಮೊಸರು, ಕೆನೆಹಾಲು, ಉಪ್ಪು ಹಾಕಿ ಕುಟ್ಟಿ ತಯಾರಿಸಿದ ರೊಟ್ಟಿ. ೨. ರೊಟ್ಟಿಗೆ ಸಕ್ಕರೆ ತುಪ್ಪ ಹಾಕಿರುವುದು (ಬಳ್ಳಾ.ಜಿ)

ಅಮೆ: ಸೂತಕ (ದಕ.ಜಿ); ಪುರುಡು (ದಕ.ಜಿ)

ಅಮೆಕಟ್ಟೆ: ಹೆರಿಗೆಯ ಸ್ಥಳ (ಬಳ್ಳಾ.ಜಿ)

ಅಮೆಕಳೆಯುವುದು: ಹೆರಿಗೆಯ ಅನಂತರ ನಿಶ್ಚಿತ ದಿನದಂದು ಮಡಿವಾಳತಿ ಅಥವಾ ಕ್ಷೌರಿಕಗಿತ್ತಿ ಬಂದು ಶುದ್ಧೀಕರಣ ಮಾಡುವುದು (ದಕ.ಜಿ) ಇರೂ: ಅಮೆಸುದ್ದ

ಅಮೆಕೊಟ್ಯ: ಹೆರಿಗೆಮನೆ; ಸೂತಿಕಾಗೃಹ (ದಕ.ಜಿ)

ಅಮೆಕ್ಕಾಲ್: ಪುರುಡಿನ ಅವಧಿಯಲ್ಲಿ ಬಾಣಂತಿಯನ್ನು ತೊಂದರೆಮಾಡುವ ದುಷ್ಟ ಶಕ್ತಿ (ದಕ.ಜಿ)

ಅಮೆಗುಂಡಿ: ನೋಡಿ– ಅಮಿಹೊಂಡ

ಅಮೆಗುದಿಗೆ: ಗುಳಿಗ ಎಂಬ ದೈವವು ಹಿಡಿಯುವ ಆಯುಧ (ದಕ.ಜಿ)

ಅಮೆಗುರಿ: ಬಾಣಂತಿ ಸ್ನಾನ ಮಾಡುವ ಸ್ಥಳ (ದಕ.ಜಿ)

ಅಮೆಗೂಡು: ೧. ಸೂತಿಕಾಗೃಹ ೨. ಮರಿಯಿಟ್ಟಿರುವ ಹಕ್ಕಿಯ ಗೂಡು (ದಕ.ಜಿ)

ಅಮೆಗೋರ: ಪುರುಡಿನ ಅವಧಿಯಲ್ಲಿ ಎಳೆಗೂಸಿನ ಮೈಮೇಲೆ ಏಳುವ ಸಣ್ಣ ಸಣ್ಣ ಗುಳ್ಳೆಗಳು (ದಕ.ಜಿ)

ಅಮೆನೀರು: ಗದ್ದೆಯಲ್ಲಿ ಬೀಜ ಬಿತ್ತುವಾಗ ಹಾಗೂ ಬೀಜ ಮೊಳೆತ ಮೇಲೆ ಬಿಡಬೇಕಾದ ನೀರು (ದಕ.ಜಿ)

ಅಮೆಬಲಿ: ಬಾಣಂತಿಯನ್ನು ಬಾಧಿಸುವ ದುಷ್ಟಶಕ್ತಿಯ ಪೀಡೆ ನಿವಾರಣೆಗಾಗಿ ಬಾಣಂತಿ ಸ್ನಾನ ಮಾಡುವ ಸ್ಥಳದ (ಅಮೆಗುರಿ) ಸಮೀಪ ಬಲಿಯ ರೂಪದಲ್ಲಿ ಬಡಿಸಿಟ್ಟ ಅನ್ನ (ದಕ.ಜಿ)

ಅಮೆಮರ: *ಸ್ಯಾಂಟೆಯಂ ಅಂಬೆಲಟಂ:* ಒಂದು ಬಗೆಯ ಔಷಧಿ ಸಸ್ಯ

ಅಮೆಮೂರಿ: ೧. ಹೆರಿಗೆಗೆ ಸಂಬಂಧಿಸಿದ ವಾಸನೆ. ೨. ಪುರುಡಿನ ಅವಧಿಯಲ್ಲಿ ಎಳೆಗೂಸಿನ ಕಂಕುಳಡಿಯಲ್ಲಿ ಮೂಡುವ ಕುರ (ದಕ.ಜಿ)

ಅಮೆರೋಮೆ: ಮೊದಲು ಬಂದ ಮೀಸೆಗೂದಲು (ದಕ.ಜಿ); ಚಿಗುರುಮೀಸೆ

ಅಮೆಸುದ್ದ: ನೋಡಿ– ಆಮೆಕಳೆಯುವುದು

ಅಮೆಹೊಂಡ: ಶಿಶುಗಳನ್ನು ಮೀಯಿಸುವ ತಗ್ಗಾದ ಸ್ಥಳ

ಅಮೋಜಿ: ಕೊತ್ತಂಬರಿ (ಬಳ್ಳಾ.ಜಿ). **ಇರೂ:** ಧನಿಯ

ಅಮ್ಜಿ: ಬೇಲಿಯ ನಡುವೆ ಮಾಡಿದ ದಾರಿಗೆ ಹಾಕುವ ಬಿದಿರಿನ ತಡಿಕೆ (ದಕ.ಜಿ), ಅಮ್ಜುಗಿ (ಉಕ.ಜಿ)

ಅಮ್ಡಿ: ಅಮಟೆಕಾಯಿ (ಉಡು.ಜಿ)

ಅಮ್ಡು: ದವಡೆ ಕೆಳಗಿನ ಭಾಗ. **ಇರೂ:** *ಅವಡು; ಔಡು*

ಅಮ್‌ದಂಬಲ: ಹೆಣದ ಬಾಯಿಗೆ ಹಾಕುವ ತಾಂಬೂಲ (ಬೆಂಗ್ರಾ.ಜಿ)

ಅಮ್‌ದಿಕ್ಕೆ: ವಿಧವೆ ಮುದುಕಿಯರು (ಉಕ.ಜಿ)

ಅಮ್ಮನ್ಮಾಡೋದು: ಅಮ್ಮನನ್ನು ಮಾಡುವುದು; ಒಂದು ಆಚರಣೆ. ಮಳೆ ಬರದೇ ಇದ್ದಾಗ ಹಾಗೂ ಸಾಂಕ್ರಾಮಿಕ ರೋಗಗಳನ್ನು ತಡೆಯುವ ಉದ್ದೇಶದಿಂದ ಊರ ಜನರೆಲ್ಲ ಆಲದ ಮರದ ಕಟ್ಟಿಗೆಯಿಂದ ಹೆಣ್ಣುಗೊಂಬೆ ಮಾಡಿ ನಾಲ್ಕು ಗಾಲಿಯ ರಥದಲ್ಲಿ ಕೂಡಿಸಿಕೊಂಡು ಮೆರವಣಿಗೆ ಮಾಡಿ ಕೊನೆಗೆ ಊರಿನ ಗಡಿಯಲ್ಲಿ ಇಡುತ್ತಾರೆ. ಅಲ್ಲಿಂದ ಇನ್ನೊಂದು ಊರವರು ಒಯ್ದು ಪೂಜಿಸಿ ಮತ್ತೊಂದೂರಿನ ಗಡಿದಾಟಿಸುತ್ತಾರೆ. ಊರಿಗೆ ಬಂದ ಮಾರಿ ತೊಲಗಿಹೋಗಲೆಂಬುದು ಈ ಆಚರಣೆಯ ಹಿನ್ನೆಲೆಯಲ್ಲಿರುವ ನಂಬಿಕೆ. **ಇರೂ:** *ಗಡಿಮಾರಿ*

ಅಮ್ಮು: ಚೀಲದ ಬಾಯಿ ಕಟ್ಟುವ ಸಾಧನ (ಮೈಸೂ.ಜಿ)

ಅಮ್ಮ: ೧. ತಾಯಿ; ಅಬ್ಬೆ ೨. ಸ್ತ್ರೀ ದೇವತೆ **ಪ್ರ:** ಅಮ್ಮನ ಹಟ್ಟಿ ವಳಗಿರುವ ಶುಕ್ರಾರದ ಲಕುಮಿ ದನಿತೋರೆ (ದಕ) ೩. ಸಿಡುಬು. **ಪ್ರ:** ಅಮ್ಮ ಹೊಕ್ಕ ಹೊಟ್ಟೆಗೆ ಎಲ್ಲೂ ಇಲ್ಲದ ಉರಿ ೪. ದೇವಿಯ ಹರಕೆ ಬಾಕಿ ಇದ್ದಾಗ ಬರುವ ಕಾಯಿಲೆ. ಈ ಕಾಯಿಲೆ ಬಂದಾಗ ಹರಕೆ ಹೇಳಿಕೊಳ್ಳುವರು (ದಕ.ಜಿ) ೫. ಹೆಣ್ಣು ಮಕ್ಕಳನ್ನು ಗೌರವದಿಂದ ಸಂಬೋಧಿಸುವ ರೀತಿ.

ಅಮ್ಮಣ್ಣಿ: ೧. ಅಜ್ಜಿ ೨. ಸ್ತ್ರೀಯರನ್ನು ಸಂಬೋಧಿಸುವ ರೀತಿ ೩. ಮೊಲೆತೊಟ್ಟು (ಮೈಸೂ.ಜಿ)

ಅಮ್ಮನಎಚ್ಚು: ಗಂಗೆ ಪೂಜೆ, ಗೌರಿಪೂಜೆ ಮೊದಲಾದ ಶುಭಕಾರ್ಯಗಳಲ್ಲಿ ಕೊಡುವ ಬಾಗಿನದ ವಸ್ತು. ಸಣ್ಣ ಕರಿಬಳೆಯೊಳಗೆ ತಾಳೆಗರಿಯ ಬಿಚ್ಚೋಲೆ ಸುರುಳಿಯನ್ನು ತೂರಿಸಿ ಅರಿಸಿನ ಕುಂಕುಮದ ಪೊಟ್ಟಣಗಳನ್ನು ಸೇರಿಸಿ ಕಟ್ಟಿದ್ದು. **ಇರೂ:** ಅಮ್ಮನೋರ ಸಾಮಾನು

ಅಮ್ಮನಕಟ್ಟೆ: ಅರಳಿ ಮತ್ತು ಬೇವು ಎರಡೂ ಮರಗಳನ್ನುಳ್ಳ ಊರಮುಂದಿನ ಕಟ್ಟೆ

ಅಮ್ಮನ ಕಲೆ: ಮೈಲಿಬೇನೆಯಿಂದ ಉಳಿದುಕೊಂಡ ಕಲೆ (ದಕ.ಜಿ)

ಅಮ್ಮನಗದ್ದಿಗೆ: ಅಮ್ಮನ ದೇವಸ್ಥಾನ (ಉಕ.ಜಿ)

ಅಮ್ಮನಗಳ್ಳಿ: ಗ್ರಾಮದೇವತೆಯ ಉತ್ಸವದ ದಿನ ದೇವಾಲಯಕ್ಕೆ ತೆಗೆದುಕೊಂಡು ಹೋಗುವ ಕಳ್ಳಿ ಗಿಡ

ಅಮ್ಮನಚೇಷ್ಟೆ: ಮಲೆನಾಡಿನಲ್ಲಿ ಸಿಡುಬು ಎಂಬುದಕ್ಕೆ ಬಳಸುವ ಪದ (ಚಿಮ.ಜಿ)

ಅಮ್ಮನನ್ನು ಕಳುಹಿಸುವುದು: ಶಕ್ತಿದೇವತೆಗಳು ಕೋಪಗೊಂಡಾಗ 'ಅಮ್ಮ' ಆಗುವುದೆಂಬ ನಂಬಿಕೆ. ಅಮ್ಮನ ಶಾಂತಿಗಾಗಿ ಮಾಡುವ ಆಚರಣೆಯೇ ಅಮ್ಮನನ್ನು ಕಳಿಸುವುದು (ಧಾರ.ಜಿ)

ಅಮ್ಮನನ್ನು ಸಾಗುಹಾಕುವುದು: ೧. ಮಾರಿ ದೇವತೆಯನ್ನು ಊರಿಂದ ಹೊರಗೆ ಕಳಿಸಿಕೊಡುವುದು ೨. ಊರಿಗೆ ಬಂದ ರೋಗರುಜಿನ ವಾಸಿಯಾದ ಮೇಲೆ ಗ್ರಾಮದೇವತೆಗೆ ಬಲಿ ಅರ್ಪಿಸಿ ಆಕೆಯನ್ನು ಊರ ಹೊರಗೆ ಕಳಿಸಿಕೊಡುವುದು (ಬೆಂಗ್ರಾ.ಜಿ)

ಅಮ್ಮನವರ ತಳಮನೆ: ಗೊಂಡರು ಪೂಜಿಸುವ ಹುತ್ತವಿರುವ ಸ್ಥಳ. ಅದೇ ಈಗ ದೇವಾಲಯ ರೂಪ ತಳೆದಿದೆ (ಉಕ.ಜಿ)

ಅಮ್ಮನವರ ಬನ: ಸುಗ್ಗಿ ಹಬ್ಬದ ಸ್ತ್ರೀದೇವತೆ ನೆಲೆಸಿರುವ ಸ್ಥಳ (ಚಿಮ.ಜಿ)

ಅಮ್ಮನವರ ಸಿಡಿ: ಗ್ರಾಮದೇವತೆ ಹಬ್ಬದಲ್ಲಿ ನಡೆಸುವ ಒಂದು ಆಚರಣೆ. ಬೇವನ್ನು ಉಟ್ಟು ಸಿಡಿಕಂಬ ಏರಿ ಸುತ್ತಿ ಹರಕೆ ಸಲ್ಲಿಸುವ ಪದ್ಧತಿ (ಮೈಸೂ.ಜಿ)

ಅಮ್ಮನವರು: ಸ್ತ್ರೀ ದೇವತೆಗಳನ್ನು ಮತ್ತು ಮೇಲ್ಜಾತಿಯ ಅಥವಾ ಮೇಲಂತಸ್ತಿನ ಹೆಂಗಸರನ್ನು ಗೌರವದಿಂದ

ಕರೆಯುವಾಗ ಬಳಸುವ ಮಾತು. **ಪ್ರ:** ಪದ್ಮಾವತಿ ಅಮ್ಮನವರು, ಅಮ್ಮನವರ ಕುಂಕುಮ ಪ್ರಸಾದ.

ಅಮ್ಮನಾಳು: ಕಾಲರಾ (ಬಳ್ಳಾ.ಜಿ)

ಅಮ್ಮನುವ ಸಾಕ್ ಕಳ್ಸೋದು: ಅಮ್ಮನನ್ನು ಸಾಗು ಹಾಕುವುದು. ಸಿಡುಬು ರೋಗ, ಅಮ್ಮ ಆದಾಗ ಅನುಸರಿಸುವ ಸಂಪ್ರದಾಯ. ರೋಗಿಯ ಹಾಸಿಗೆಯ ಮೇಲೆ ಬೇವಿನ ಸೊಪ್ಪು ಹಾಕುತ್ತಾರೆ. ಮನೆ ಬಾಗಿಲಿಗೆ ಬೇವಿನ ಸೊಪ್ಪನ್ನು ಕಟ್ಟುತ್ತಾರೆ. ಮನೆಯ ಒಳಗೆ ಬರುವವರು ಬಾಗಿಲಲ್ಲಿ ಇಟ್ಟಿರುವ ಹಸುವಿನ ಗಂಜಲವನ್ನು ಬೇವಿನಸೊಪ್ಪಿನಿಂದ ಎತ್ತಿಕೊಂಡು ತಮ್ಮ ಮೇಲೆ ಸಿಂಪಡಿಸಿಕೊಂಡು ಬರಬೇಕು. ಇದರಿಂದ ದುಷ್ಟಶಕ್ತಿಗಳು ಮನೆ ಒಳಗೆ ಬರಲಾಗದೇ ಅಮ್ಮ ಬೇಗ ಹೋಗುತ್ತಾಳೆ ಎಂಬ ನಂಬಿಕೆ ಇದೆ (ಕೋಲಾ.ಜಿ)

ಅಮ್ಮನೋರ ಗುಡ್ಡು: ಬ್ರಾಹ್ಮಣ ವಿಧವೆಯರ ಬಟ್ಟೆಯ ಗಂಟು

ಅಮ್ಮಲಿ: ಅಂಬಲಿ; ರಾಗಿ, ಅಕ್ಕಿ, ಜೋಳಗಳ ಗಂಜಿ. **ಇರೂ:** *ಅಮ್ಮಿಲಿ (ಕೋಲಾ.ಜಿ)*

ಅಮ್ಮಾಲೆ: ಚೆಂಡು ಅಥವಾ ಕಲ್ಲುಗಳನ್ನು ಮೇಲಕ್ಕೆ ಎಸೆದು ಕೈಯಲ್ಲಿ ಹಿಡಿಯುವ ಒಂದು ಬಗೆಯ ಆಟ; ಪುಟಚೆಂಡಾಟ

ಅಮ್ಮಿ: ೧. ಹೆಣ್ಣುಮಕ್ಕಳನ್ನು ಸಂಬೋಧಿಸುವ ಮಾತು ೨. ಮೊಲೆ. **ಇರೂ:** *ಅಮಿಗೆ.* **ಪ್ರ:** ಕೂಸಿಗೆ ಅಮ್ಮಿ ಕೊಡು

ಅಮ್ಮಿಕಲ್ಲು: ಮುದ್ದೆ ಕಟ್ಟಲು ಹಾಗೂ ಕಟ್ಟಿದ ಮುದ್ದೆಗಳನ್ನು ಸಾಲಾಗಿ ಇಡಲು ಬಳಸುವ ಕಲ್ಲು

ಅಮ್ರಣ್ಣು: ಅಪಕ್ವಫಲ (ಉಕ)

ಅಮ್ರಾವತಿ: ಅಮರಾವತಿ; ಇಂದ್ರನ ಪಟ್ಟಣ

ಅಮ್ಲು: ಅಮಲು; ಮಂಪರು

ಅಮ್ಸಾಣಿ: ಸೊಕ್ಕು (ಉಕ.ಜಿ)

ಅಯನ: ೧. ವರ್ಷದ ನಂತರ ಮರಳಿ ಬರುವ ಜಾತ್ರೆ, ಉತ್ಸವ ಇತ್ಯಾದಿ ಆಚರಣೆ (ದಕ.ಜಿ) ೨. ಹಯನ; ಹೈನು; ಹಾಲು, ಬೆಣ್ಣೆ ಮುಂತಾದವು (ಬೀದ.ಜಿ/ಬಾಗ.ಜಿ)

ಅಯಲು: ೧. ಏಡಿ, ಮೀನು, ಆಮೆಗಳನ್ನು ಬೇಟೆಯಾಡುವ ವಿಧಾನ ೨. ಕೆರೆ

ಅಯಾರ: ಆಯಗಾರ

ಅಯಾರಕೊಡು: ಆಹಾರ ಕೊಡು; ಪ್ರಾಣಿ ಬಲಿ ಕೊಡುವುದು (ಮಲೆ)

ಅಯಾಲು: ಸಿಂಹದ ಹಾಗೂ ಕುದುರೆಯ ಕುತ್ತಿಗೆಯ ಮೇಲೆ ಮಟ್ಟಸವಾಗಿ ಹರಡಿಕೊಂಡಂತಿರುವ ದಟ್ಟ ಕೂದಲು. **ಇರೂ:** ಆಯಾಲು

ಅಯಿತ್ತೊ: ಶೃಂಗಾರ; ಅಲಂಕಾರ (ದಕ.ಜಿ)

ಅಯಿಬುರ್ಲೆ: ದೊಡ್ಡ ಮೀನುಗಳನ್ನು ಹಿಡಿಯಲು ಉಪಯೋಗಿಸುವ ದೊಡ್ಡ ಕಣ್ಣುಗಳುಳ್ಳ ಬಲೆ (ದಕ.ಜಿ)

ಅಯುತ: ಹತ್ತು ಸಾವಿರ (ಬಳ್ಳಾ.ಜಿ)

ಅಯೋಮಲ: ಕಬ್ಬಿಣದ ಕಲ್ಮಶ; ಕಿಟ್ಟ

ಅಯ್ತನ: ಅಯ್ಯತನ; ಜಂಗಮ ದೀಕ್ಷೆ (ಉಕ.ಜಿ)

ಅಯ್ನೋರು: **ನೋಡಿ–** ಅಯ್ಯನವರು

ಅಯ್ಬಾಯಿ ಸಂಕೊ: ಪಾಂಚಜನ್ಯ; ಶಂಖ (ಮಂಡ್ಯ.ಜಿ)

ಅಯ್ಯ: ೧. ಒಡೆಯ; ಸ್ವಾಮಿ ೨. ಜಂಗಮ; ಐನೋರು (ಬೆಳ.ಜಿ) ೩. ಸಮುದ್ರದ ಹಿನ್ನೀರು (ದಕ.ಜಿ)

ಅಯ್ಯಂಗಾಯಿ: ೧. ಗಣಗಳ ಪ್ರೀತಿಗಾಗಿ ದೈವ ದೇವಸ್ಥಾನಗಳಲ್ಲಿ ಕಲ್ಲಿಗೆ ಬಡಿದು ಒಡೆಯುವ ತೆಂಗಿನಕಾಯಿ (ದಕ.ಜಿ) ೨. ದೈವಾರಾಧನೆಯಲ್ಲಿ ಶಕುನ ಪರೀಕ್ಷಿಸಲು ಬಳಸುವ ತೆಂಗಿನಕಾಯಿ (ಮಂಡ್ಯ.ಜಿ)

ಅಯ್ಯಕಂಜಿ: ಪೂರ್ತಿ ಬೆಳವಣಿಗೆಯಾಗುವ ಮೊದಲೇ ಹುಟ್ಟಿದ ಕರು (ದಕ.ಜಿ)

ಅಯ್ಯಕಾಯಿ/ಅಯ್ಯದಕಾಯಿ: ೧. ಒರಳುಕಲ್ಲಿಗೆ ಒಡೆಯುವ ತೆಂಗಿನಕಾಯಿ (ದಕ.ಜಿ) ೨. ಅಜಕಾಯಿ; ದೈವಸ್ಥಾನದ ನಿರ್ದಿಷ್ಟ ಕಲ್ಲಿಗೆ ಒಡೆಯಬೇಕಾದ ತೆಂಗಿನಕಾಯಿ (ದಕ.ಜಿ). **ಇರೂ:** *ಅಯ್ಯಾಂಗಾಯಿ*

ಅಯ್ಯತನ: ಸ್ವಾಮಿ ಅಥವಾ ಜಂಗಮ ದೀಕ್ಷೆ ನೀಡುವ ಸ್ವಾಮಿಗಳು ಭಕ್ತರ ಮನೆಗೆ ಬಿನ್ನಹಕ್ಕೆ ತೆರಳುವ ಸಂಪ್ರದಾಯ (ಬೆಳ.ಜಿ).

ಅಯ್ಯದ ಕಾಯಿ: **ನೋಡಿ–** ಅಯ್ಯಕಾಯಿ

ಅಯ್ಯನವರನ್ನು ಕರೆಸುವುದು: ಲಿಂಗಾಯತ ಜನರಲ್ಲಿರುವ ಒಂದು ಸಂಪ್ರದಾಯ. ಹೆರಿಗೆಯಾದ ಮೇಲೆ ಮನೆಯನ್ನು ಶುದ್ಧಗೊಳಿಸಿ, ಅಯ್ಯನವರ ಪಾದೋದಕ ಸಿಂಪಡಿಸಿ, ಸಂಜೆಗೆ ಅಯ್ಯನವರನ್ನು ಮನೆಗೆ ಬರಮಾಡಿಕೊಳ್ಳುವುದು. ಅಯ್ಯನವರ ಪಾದಪೂಜೆ ಮಾಡಿ ಕೂಸಿಗೆ ಲಿಂಗಧಾರಣೆಯನ್ನು ಮಾಡಿಸಿದರೆ ಸೂತಕ ಕಳೆಯುತ್ತದೆಂಬ ನಂಬಿಕೆ ಇದೆ

ಅಯ್ಯನವರು/ಅಯ್ಯನೋರು/ಐಗಳು: ೧. ಮೇಲ್ಜಾತಿಯ ಹಿರಿಯ ಗಂಡಸರನ್ನು ಗೌರವದಿಂದ ಕರೆಯುವಾಗ ಹೇಳುವ ರೀತಿ. ೨. ಲಿಂಗಾಯಿತ ಗುರುಗಳು ಅಥವಾ ಸ್ವಾಮಿಗಳು **ಪ್ರ**: ಐಗಳು ಬಂದಾರೆ ಎಡೆ ನೀಡಿ **ಇರೂ**: *ಐನೋರು*

ಅಯ್ಯಪ್ಪ/ಐಯ್ಯಪ್ಪ: ೧. ಶಬರಿಮಲೆಯಲ್ಲಿ ನೆಲೆಸಿರುವ ದೇವರು; ಹರಿ ಮತ್ತು ಹರನ ಸಂಯೋಗದಿಂದ ಹುಟ್ಟಿದನೆಂದು ಹೇಳಲಾಗುವ ಕಾರಣಿಕಶಿಶು. **ಪ್ರ**: ಅಯ್ಯಪ್ಪನ ಭಕ್ತರು ಸಂಕ್ರಾಂತಿ ಸಮಯದಲ್ಲಿ ಶಬರಿ ಮಲೆಗೆ ಹೋಗ್ತಾರೆ ೨. ಕುರುಬರ ದೇವತೆ. **ಪ್ರ**: ಕುರುಬರ ದೇವತೆ ಐಯ್ಯಪ್ಪ ಭದ್ರಕಾಳಿಯನ್ನು ಪ್ರೇಮಿಸಿ ಅವಳ ಬೆಂಬತ್ತಿ ಹೋಗುತ್ತಾನೆ

ಅಯ್ಯರ: ಆಹೇರಿ; ಉಡುಗೊರೆ. **ಇರೂ**: *ಮುಯ್ಯಿ*

ಅಯ್ಯಾಚಾರ: ವೀರಶೈವರ ಲಿಂಗದೀಕ್ಷೆ; ಲಿಂಗಧಾರಣೆ ಮಾಡುವ ಮೂಲಕ ಕೌಟುಂಬಿಕ ಸಂಸ್ಕಾರಗಳಲ್ಲಿ ಪಾಲ್ಗೊಳ್ಳುವ ಅಧಿಕಾರ ನೀಡುವಿಕೆ (ಉಕ.ಜಿ)

ಅಯ್ಯಾಚಾರಿ: ಜಂಗಮ ದೀಕ್ಷೆ ಕೊಡುವ ಸ್ವಾಮಿಗಳು; ಐಗೊಳು (ಗುಲ್ಬ.ಜಿ)

ಅಯ್ಲಿ: **ನೋಡಿ–** ಇಣಚಿ. **ಇರೂ**: *ಅಯ್ನೆ*

ಅಯ್ಲು: ೧. ವ್ಯಸನ; ಚಿಂತೆ ೨. ಆಸಕ್ತಿ; ತಿಕ್ಕಲು (ಬಳ್ಳಾ.ಜಿ). **ಇರೂ**: *ಐಲು*

ಅಯ್ವಳಿ: ಅಂದಗಾರ

ಅಯ್ಸೆ: ಆರ್ಯ; ಗುರುಹಿರಿಯರು

ಅರ: ೧. ಮೊಂಡಾಗಿರುವ ಹಾಗೂ ಹೊಸದಾಗಿ ತಯಾರಿಸಿರುವ ಆಯುಧಗಳನ್ನು ಹರಿತಗೊಳಿಸುವ ಕಬ್ಬಿಣದ ಸಲಕರಣೆ ೨. ಅಗಲ; ವಿಸ್ತಾರ. **ಪ್ರ**: ಆಟರದಲ್ಲೆ ಏಟೆಲ್ಲ ಬೆಳೆ ೩. ಉಳುವಾಗ ಎಡಗಡೆಯ


ಅರ

ಎತ್ತನ್ನು ಬೆದರಿಸುವ ಶಬ್ದ (ಮೈಸೂ.ಜಿ) ೪. ಸುಭಿಕ್ಷ; ಮಳೆಗಾಲ (ಮೈಸೂ.ಜಿ). **ಪ್ರ**: ಅರಕ್ಕೆ ಅಗ್ನಿಲ್ಲ ಬರಕ್ಕೆ ಬಗ್ನಿಲ್ಲ ೫. ಆಹಾರ; ಮೇವು

ಅರಂಜಿ: ಕೊಡಗಿನಲ್ಲಿ ಕಂಡುಬರುವ ಒಂದು ಬಗೆಯ ಮರ **ನೋಡಿ–** ಅಜ್ಜನಪಟ್ಟೆ (ಕೊಡ.ಜಿ)

ಅರಂತಡೆ: ಅರಮನೆ ಎಡೆ. ಅರಮನೆ ಇದ್ದ ಜಾಗ (ದಕ.ಜಿ)

ಅರಕ್: ಒಂದು ರೀತಿಯ ಮೇಣ; ಅರಗು (ದಕ.ಜಿ)

ಅರಕ: ಚಪ್ಪಲಿ (ದಕ.ಜಿ). **ಇರೂ**: *ಮೆಟ್ಟು; ಕೆರ; ಪಾಪಾಸು; ಯಕ್ಕಡ; ಜೋಡು*

ಅರಕಂಚಟ್ಟಿ: ಅರಕಿನಚೆಟ್ಟಿ ೧. ಅಗಲವಾದ ಬಾಯುಳ್ಳ ಅಕ್ಕಿ ಜಾಲಿಸುವ ಪಾತ್ರೆ (ಹಾಸ.ಜಿ) ೨. ದೊಡ್ಡತಟ್ಟೆ; ಪರಾತು; ಬೋಗುಣಿ. **ಪ್ರ**: ಅರಕಂಚಟ್ಟಿಯಲ್ಲಿ ಅನ್ನ ಆರಿ ಹಾಕಿದರು

ಅರಕಟ್ಟಿನ ಹಳಿ: ಎತ್ತಿನ ಗಾಡಿಯ ಮರದ ಚಕ್ರದ ಸುತ್ತ ಅಳವಡಿಸುವ ಕಬ್ಬಿಣದ ಪಟ್ಟಿ

ಅರಕಡ್ಡಿ: ಚಾವಟಿ; ಬಿದಿರಿನ ಸಣ್ಣಗಾತ್ರದ ಕೋಲು; ಕಡ್ಡಿ (ಮೈಸೂ.ಜಿ/ಚಾಮ.ಜಿ). **ಇರೂ**: *ಚಿಲುಪೆ (ಬೆಂಗ್ರಾ.ಜಿ)*

ಅರಕರಡಿ: ಗೊರವರು ತಲೆಗೆ ಧರಿಸುವ ಕರಡಿ ಚರ್ಮದ ಕುಲಾವಿ. **ಪ್ರ**: ಅರಕರಡಿ ಹೊತುಕೊಂಡು ವಾಲಾಡಿ ಬರಬೇಕು

ಅರಕಲು: ೧. ಹರಕಲು; ಹರಿದುಹೋದುದು ೨. ಜೀರ್ಣವಾದದ್ದು; ಶಿಥಿಲವಾದದ್ದು. **ಪ್ರ**: ಉಟ್ಟ ಬಟ್ಟೆ ಅರ್ಕೊಂಡು ತಲೆಕೆದರ್ಕೊಂಡು ಹುಚ್ಚನಂಗೆ ನಿಂತಿದ್ದ **ಇರೂ**: *ಜೂಲುಜೂಲು (ಮಂಡ್ಯ.ಜಿ)*

ಅರಕಳಿ: ಅಪೂರ್ಣತೆ

ಅರಕಾಲು: ಅಂಗಾಲು

ಅರಕಾಸು: ಅರ್ಧಕಾಸು; ಪುಡಿಕಾಸು; ಚಿಲ್ಲರೆ ನಾಣ್ಯ (ಮೈಸೂ.ಜಿ). **ಇರೂ**: *ಅರ್ಕಾಸು*

ಅರಕೈ: ೧. ಅಂಗೈ ೨. ಅಂದವಾದ ಕೈ (ಹಾಸ.ಜಿ)

ಅರಕೊಳ್ಳಿ: ಅರ್ಧ ಉರಿದ ಕಟ್ಟಿಗೆತುಂಡು (ಮೈಸೂ.ಜಿ/ಚಾಮ.ಜಿ). **ಇರೂ**: *ಕಡಕೊಳ್ಳಿ*

ಅರಕೋ (ಕ್ರಿ): ಹರಿದುಕೋ; ಕಿತ್ತುಕೋ **ಪ್ರ**: ಗಿಡದಿಂದ ಹಣ್ಣನ್ನು ಅರಕೊ, ಎಲ್ಲ ಥರದ ಸೊಪ್ಪು ಅರ್ಕಂಬಂದು ಸೊಪ್ಪಿನ್ ಸಾರು ಮಾಡಿದ್ದೆ

ಅರಕ್ಚೇಳು: ಲಕ್ಷ್ಮೀಚೇಳು (ದಕ.ಜಿ)

ಅರಕ್ಮಾರಿ: ಬೆಳೆಗೆ ಬರುವ ಒಂದು ರೋಗ (ಮೈಸೂ.ಜಿ)

ಅರಗಂಜಿ: ಅರ್ಧಬೆಂದ ಅಕ್ಕಿಯ ಗಂಜಿ

ಅರಗಂಡು: ನಪುಂಸಕ; ಷಂಡ. **ಇರೂ**: *ಗೊಜ್ಜ; ಆಣ*

ಅರಗಟ್ಟ: ಬಾವಿಯಿಂದ ನೀರೆತ್ತುವ ಸಾಧನ. **ಇರೂ**: *ಅರಘಟ ಅರಘಟ್ಟ, ರಾಟೆ*

ಅರಗಣೆ ಮಗ್ಗ: ಗುಣಿಮಗ್ಗ; ಮಗ್ಗದ ಒಂದು ಬಗೆ (ಬೆಂಗ್ರಾ.ಜಿ)

ಅರಗಣೆ: ಹರಗಣೆ; ಹರಗುವಿಕೆ; ತುಂಬಾ ಒತ್ತಾಗಿರುವ ಪೈರುಗಳನ್ನು ಮತ್ತು ಕಳೆಸಸ್ಯಗಳನ್ನು ನಿವಾರಿಸಲು ಮಾಡುವ ಹರತೆ.

ಅರಗತ್ತಿ: ಎತ್ತುಗಳ ಕೂದಲು ತೆಗೆಯಲು ಮತ್ತು ಮೈ ತಿಕ್ಕಲು ಬಳಸುವ ಸಾಧನ

ಅರಗಲು: ೧. ಅರೆಯುವ ಕಲ್ಲು (ಉಕ) ೨. ಒಂದು ಬಗೆಯ ಕಲ್ಲು

ಅರಗಳ್ಳು: ೧. ದುಡ್ಡಿಲ್ಲದೆ ಉಚಿತವಾಗಿ ಸಿಗುವ ಕಳ್ಳು; ಪುಕ್ಕಟೆ ಹೆಂಡ; ಧರ್ಮಕ್ಕೆ ನೀಡುವ ಕಳ್ಳು ೨. ಹೊಟ್ಟೆ ತುಂಬದ ಊಟ (ಚಾಮ.ಜಿ)

ಅರಗಾಲ: ಸುಭಿಕ್ಷವಲ್ಲದ, ಅರ್ಧಂಬರ್ಧ ಬೆಳೆ ಬಂದಿರುವ ಕಷ್ಟದ ಕಾಲ (ಶಿವ.ಜಿ)

ಅರಗಾವು: ಸ್ವಲ್ಪ ಕಾವು; ಬೆಚ್ಚಗೆ (ಚಿಮ.ಜಿ)

ಅರಗಿಣಿ/ಅರುಗಿಣಿ: ೧. ಗಿಣಿಗಳಲ್ಲಿ ಶ್ರೇಷ್ಠವಾದದ್ದು; ರಾಜಕೀರ. **ಪ್ರ**: ಅಂಗೈಲಿರೋ ಅರಗಿಣಿ ಬುಟುಬುಟ್ಟು ಹಾರಾಡೋ ಹದ್ದು ಹಿಡಿಯಾಕೋದ್ರಂತೆ. ೨. ಗಿಣಿಯ ಚಿತ್ತಾರದ ಹಚ್ಚೆ. **ಪ್ರ**: ಮುಂಗೈ ಮೇಲೆ ಅರಗಿಣಿಯನ್ನು ಹುಯ್ಯುವಂತೆ ಹೇಳಿದ

ಅರಗಿಸು (ಕ್ರಿ): ೧. ಮುಳುಗಿಸು ೨. ಜೀರ್ಣಿಸು (ಮಂಡ್ಯ.ಜಿ)

ಅರಗು: (ಕ್ರಿ): ೧. ಹರಗು; ನೆಲವನ್ನು ಬಿತ್ತನೆಗೆ ಹದಮಾಡು; ಕುಂಟೆಯಿಂದ ನೆಲವನ್ನು ಸಡಿಲ ಮಾಡು ೨. ತೆಳು ಮಾಡು ೩. ಆಜ್ಞೆಗೆ ಒಳಗಾಗು ೪. ಆಳಿನ ಬಗ್ಗೆ ಹೇಳುವ ಮಾತು (ಶಿವ.ಜಿ) ೫. ಜೀರ್ಣವಾಗು; ಪಚನವಾಗು ೬. ಬಗ್ಗು ೭. ಸವೆ (ಕೋಲಾ.ಜಿ) (ನಾ) ೮. ಅಂಚು; ಕೊನೆ ೧೦. ಮುದ್ರೆಗೆ ಹಾಗೂ ಬಂಗಾರದ ಒಡವೆಗಳ ಒಳಗೆ ತುಂಬುವ ಲಾಕ್ಷ; ಮೇಣ. **ಪ್ರ**: ಆರು ಸೇರಿನ ಸರಗಿ ಅರಗಿಲ್ಲದ ಕಟ್ವಾಣಿ ನತ್ತು ೧೧. ಮನೆಯ ಮುಂದಿನ ಮಣ್ಣಿನ ದಿಬ್ಬ

ಅರಗುಂಡ: ಕಾರ ಅರೆಯಲು ಬಳಸುವ ಕಲ್ಲುಗುಂಡು (ಚಿಮ.ಜಿ)

ಅರಗೂಲಿ: ಅರ್ಧದಿನದ ಕೂಲಿ (ಬಳ್ಳಾ.ಜಿ)

ಅರಗೆ: ಒಂದು ಔಷಧೀ ಸಸ್ಯ, ಕಿವಿ ಸೋರುವಿಕೆಯನ್ನು ತಡೆಯಲು ಇದರ ಬೇರಿನ ರಸ ಬಳಸುತ್ತಾರೆ (ಚಾಮ.ಜಿ)

ಅರಗೆಂಪು: ಸಂಪೂರ್ಣ ಕೆಂಪಲ್ಲದ; ತಿಳಿಗೆಂಪು ಬಣ್ಣ

ಅರಗೇಡಿ: ಬುದ್ಧಿಯಿಲ್ಲದವನು; ಬೈಗುಳದ ಪದ

ಅರಗೊಂತಿ: ಅರ್ಧ ಮುಗಿದ; ಅರ್ಧ ಕರಾವು ಆದ ಎಮ್ಮೆ, ಹಸು. **ಇರೂ**: *ಅರಗುಂತಲು (ಬೆಂಗ್ರಾ.ಜಿ), ಅರಗಂತಿ*

ಅರಚಾಟು: ಅರ್ಧಂಬರ್ಧ ನೆರಳಿರುವ ಮರ; ಪೊದೆಗಳ ಆಸರೆ

ಅರಚು: (ಕ್ರಿ): ಒದರು; ಕೂಗಿ ಕರೆ; ಜೋರಾಗಿ ಕೂಗಾಡು

ಅರಜಳ: ಬಿಸಿಲಿನ ತಾಪ; ಸೆಕೆ (ಬೆಳ.ಜಿ)

ಅರಜಾತಿ: ಅರ್ಧಜಾತಿ; ಅಶುದ್ಧ; ಜಾತಿಗೆಟ್ಟ; ನೀತಿಗೆಟ್ಟ;

ಅರಜಾಲಿ: ಜಾಲಿಮರದ ಒಂದು ಪ್ರಭೇದ; ಮುಳ್ಳಿನ ಒಂದು ಬಗೆ

ಅರಜೀವ ಮಾಡು: ಅರ್ಧಜೀವ ಮಾಡು; ಹಿಂಸಿಸು **ಪ್ರ**: ಹಾವನ್ನು ಅರಜೀವ ಮಾಡಿ ಬಿಡಬಾರದು *(ಮೈಸೂ.ಜಿ/ ಚಾಮ.ಜಿ)*

ಅರಟಿ: ೧. ಜೋಳದ ಹಿಟ್ಟು, ಸುಣ್ಣ, ಬೆಲ್ಲಗಳಿಂದ ತಯಾರಿಸಿದ ಜಿಗುಟು ಮಿಶ್ರಣ ೨. ಪೊಳ್ಳು ಬೆದರಿಕೆ ಹುಟ್ಟಿಸುವುದು (ಬಳ್ಳಾ.ಜಿ) ೩. ಒಂದು ಬಗೆಯ ಹಾವು

ಅರಟಿಕಂಡ: ಬೆಳೆಯ ಗದ್ದೆ

ಅರಟಿಕಾಯಿ: ಬಾಳೆಹಣ್ಣು (ಕೋಲಾ.ಜಿ)

ಅರಟಿಹಾವು: ಒಂದು ಬಗೆಯ ಹಾವು

ಅರಟು: ತೀವ್ರವಾದ ಹಸಿವು (ಕೋಲಾ.ಜಿ)

ಅರಟೆ: ರೇಷ್ಮೆನೂಲನ್ನು ಸುತ್ತುವ ಕೈಮಗ್ಗದ ಸಾಧನ



ಅರಣಿ: ೧. ಐರಾಣಿ; ಮದುವೆ ಮುಹೂರ್ತಕ್ಕೆ ಮೊದಲು ಅಂಗುದಾರ ಕಟ್ಟಿ ಪೂಜಿಸುವ ನೀರು ತುಂಬಿದ ಗಡಿಗೆಗಳು ೨. ಚಿಕ್ಕ ಮಡಕೆ ೩. ಎರಡು ಮರದ ತುಂಡುಗಳನ್ನು ಮಸೆದು ಬೆಂಕಿ ಉತ್ಪತ್ತಿ ಮಾಡುವುದು ೪. ಹೊಲದ ಬದಿಯ ಮಣ್ಣಿನ ಒಡ್ಡು (ಉಕ.ಜಿ) ೫. ಹೊಲದಲ್ಲಿ ನೀರನ್ನು ನಿಲ್ಲಿಸಲು ನೀರಿಗೆ ಅಡ್ಡಲಾಗಿ ಹಾಕುವ ಒಡ್ಡು (ತುಮ.ಜಿ) ೬. ಹಲ್ಲಿಜಾತಿಯ ಒಂದು ಪ್ರಾಣಿ; ಹಾವುರಾಣಿ; (ಬಳ್ಳಾ.ಜಿ). **ಇರೂ**: *ಅರನೆ, ಅರಣೆ*

ಅರಣೆ: ಹಾವುರಾಣಿ. **ಪ್ರ:** ಅರಣೆ ಕಡಿದರೆ ಭರಣಿ ಮದ್ದು ಸಾಲದು. **ಇರೂ:** *ಆವ್ರಾಣಿ (ಚಿತ್ರ.ಜಿ)*

ಅರಣೆ ಮೀನು: *ಸೌರಿಡಾ ತುಂಬಿಲ್:* ಹಲ್ಲಿಮೀನು. ಬೆನ್ನಿನ ಭಾಗವು ಕಂದು ಮಿಶ್ರಿತ ಬೂದು ಬಣ್ಣದಾಗಿದ್ದು ಬಹುತೇಕ ಬಿಳಿಯಾಗಿರುವ, ಹೊಳೆಯುತ್ತಿರುವಂತೆ ಕಾಣುವ ಒಂದು ಜಾತಿಯ ಉಪ್ಪುನೀರಿನ ಮೀನು (ದಕ.ಜಿ)

ಅರಣೆ ಸುಳಿ: ಜಾನುವಾರಗಳ ಬೆನ್ನಿನಲ್ಲಿರುವ ಒಂದು ಸುಳಿ, ಹೀಗಿರುವುದು ಶುಭವಲ್ಲ, ಅವಲಕ್ಷಣ ಎಂದು ನಂಬಿಕೆ (ದಕ.ಜಿ)

ಅರತ: ಅಂಗಾಂಗಗಳ ನೋವು (ಬೆಂಗ್ರಾ.ಜಿ)

ಅರತಮರತೀಳ್ಳೆವು: ಕೊನೆಯಲ್ಲಿ ಕೊಡುವ ವೀಳ್ಯದ ಒಂದು ವಿಧ

ಅರತಳ: *ಸಾಪಿಂಡಸ್ ಲಾರಿಫೋಲಿಯಾ:* ಒಂದು ಜಾತಿಯ ಮರ. **ಇರೂ:** *ಕುಂಟಿಗೆಕಾಯಿ (ಕೊಡ.ಜಿ)*

ಅರತಾ ಮುರಿ (ಕ್ರಿ): ಅರ್ಥ ಮುರಿ; ಗಾದೆ ಮಾತು ಹೇಳು; ಆಚಾರ ಹೇಳು

ಅರತಾಳ: ಶಿರಾಡಿ ಭೂತವೇಷದವನು ಧರಿಸುವ ಅಲಂಕಾರ

ಅರತುಕೋ: ಹಸು ಎಮ್ಮೆಗಳು ಹಠಾತ್ತಾಗಿ ಹಾಲು ಕರೆವುದನ್ನು ನಿಲ್ಲಿಸುವಿಕೆ (ಬಳ್ಳಾ.ಜಿ). **ಇರೂ:** *ಮಾನಿಸಿಕೋ (ಬೆಂಗ್ರಾ.ಜಿ)*

ಅರತೆ: ಬೆಳೆಗಳ ಮಧ್ಯದಲ್ಲಿ ಬೆಳೆದ ಕಳೆಯನ್ನು ತೆಗೆಯಲು ಎತ್ತುಗಳಿಗೆ ಕುಂಟೆ ಕಟ್ಟಿ ಕಳೆ ತೆಗೆಯುವ ವಿಧಾನ (ತುಮ.ಜಿ)

ಅರತೆಕುಂಟೆ: ಕುಡುಗುಂಟೆ; ನೇಗಿಲಿನಿಂದ ಉಳುಮೆ ಮಾಡಿದ ಭೂಮಿಯನ್ನು ಹರಗಲು ಬಳಸುವ ದೊಡ್ಡಕುಂಟೆ; ಹೆಗ್ಗುಂಟೆ

ಅರತೋಳಂಗಿ: ಅರ್ಧ ತೋಳಿನ ಅಂಗಿ (ಚಾಮ.ಜಿ)

ಅರದಂಪೂಲಾ: ೧. ಅರೆತಪ್ಪಲ ೨. ಮೇಲೂ ಅಲ್ಲ ಕೆಳಗೂ ಅಲ್ಲ; ನಡುವಂತರ (ಬೆಂಗ್ರಾ.ಜಿ)

ಅರದಚಗ: ಒಂದು ಔಷಧಿ ಸಸ್ಯ; ಗಿಡಮೂಲಿಕೆ

ಅರದಳ/ಅರದಾಳ: ಭೂತನರ್ತಕರು ಮುಖಾಲಂಕಾರಕ್ಕೆ ಬಳಸುವ ಅರಿಷಿಣ ಬಣ್ಣ.

ಅರದಿ: ೧. ಹರದಿ; ಪತಿವ್ರತೆ; ಮುತ್ತೈದೆ ೨. ಮಾರಮ್ಮನ ಅಡ್ಡ ಹೆಸರು ೩. ಎಲ್ಲಮ್ಮನಿಗೆ ಅರ್ಪಿಸಿಕೊಂಡ ಭಕ್ತೆ

ಅರದಿವಾಲೆ: ಅಪಾಯದ ಪತ್ರ

ಅರದ್ಧಿಂಡಿ: ಅರೆದ ಹಿಂಡಿ; ಮೆಣಸಿನ ಕಾಯಿ ಚಟ್ನಿ

ಅರನಾಲಿಗೆ: ಅರ್ಧ ನಾಲಗೆ; ಮಾತು ಪೂರ್ಣ ಮಾಡದ ವ್ಯಕ್ತಿ

ಅರನಾಳಿಗೆ: ಮಾಳಿಗೆ ಮನೆಗಳ ಮಾಡಿನ ಮಳೆ ನೀರು ಎಲ್ಲಾ ಕಡೆ ಕೆಳಗಿಳಿಯದೆ ನಿರ್ದಿಷ್ಟವಾದ ಸ್ಥಳದಲ್ಲಷ್ಟೇ ಕೆಳಬೀಳುವಂತೆ ಜೋಡಿಸುವ ನಳಿಗೆ. ಇದು ಸುಮಾರು ಎರಡು ಅಡಿಯಿಂದ ನಾಲ್ಕು ಅಡಿ ಉದ್ದ ಮತ್ತು ಐದು ಇಂಚು ಸುತ್ತಳತೆ ಇರುತ್ತದೆ. ಇದನ್ನು ಆವೆ ಮಣ್ಣಿನಿಂದ ನಿರ್ಮಿಸಿ ಸುಟ್ಟು ಬಳಸಿಕೊಳ್ಳುತ್ತಾರೆ. **ಇರೂ:** *ಹಲ್ಲಣಿಗೆ, ದೋಣಿ*

ಅರನಿದ್ದೆ: ಅರೆನಿದ್ರೆ; ಅರ್ಧ ನಿದ್ದೆ (ಮೈಸೂ.ಜಿ/ಮಂಡ್ಯ.ಜಿ)

ಅರನಿವಿ: *ಅರೆನೋಂಪಿ:* ಅರ್ಧವ್ರತ

ಅರಪಾವು/ಅರ್ಪಾವು: ಅರ್ಧ್ಪಾವು ಅಳತೆ; ಅರ್ಧಪಾವಿನಷ್ಟು ಧಾನ್ಯ ಹಿಟ್ಟು ಮೊದಲಾದವನ್ನು ಅಳೆಯುವುದಕ್ಕೆ ಬಳಸುವ, ಕಬ್ಬಿಣದಿಂದ ಮಾಡಿದ ಸಾಧನ

ಅರಪ್ಪು ಕಣ್ಣೆ ಗಿಡ: ವರ್ನೋನಿಯ ಇಂಡಿಕ: ಒಂದು ಔಷಧಿ ಸಸ್ಯ. **ಇರೂ:** *ಅರಪುಕನ್ನೆಗಿಡ, ಅರಪ್ಪಯ್ಕಣ್ಣೆ (ಕೊಡ.ಜಿ)*

ಅರಬಕ್ಷಿ: ಬುದ್ಧಿ ಬಲಿಯದ (ಧಾರ.ಜಿ)

ಅರಬರ: ಕ್ಷಾಮದ ಕಾಲ; ಬರ. **ಇರೂ:** *ಅರಬ*

ಅರಬರಕ್ಲು: ಅರ್ಧಂಬರ್ಧ (ಬೆಂಗ್ರಾ.ಜಿ). **ಪ್ರ:** ಅರ್‌ಬರಕ್ಲು ಕೆಲ್ಸ ಮಾಡ್ಬೇಡ

ಅರಬಳ್ಳಿ: ೧. ಒಂದು ಔಷಧಿಬಳ್ಳಿ; ಚರ್ಮರೋಗ ನಿವಾರಣೆಗೆ ಕೊಂದೆ ಬೇರಿನ ಜತೆ ಅರೆದು ಬಳಸುವರು. ಎಲೆಯ ಕಷಾಯವು ಮೂತ್ರ ಪಿಂಡದ ಕಲ್ಲನ್ನು ಕರಗಿಸುತ್ತದೆಂಬ ನಂಬಿಕೆ ಇದೆ (ಚಾಮ.ಜಿ) ೨. ಬೆಳೆ ಕಟಾವು ಮಾಡಲು ಬಳಸುವ ಉಪಕರಣ **ನೋಡಿ–** ಅರ್‌ವಲೆಕುಡ್ಲು

ಅರಬಾಯಿದನ: ತುಟಿ ಚಿಕ್ಕದಾದ ದನ

ಅರಬಿ: ೧. ಹರವಿ; ಮಣ್ಣಿನ ಕೊಡ; ನೀರು ತುಂಬಲು ಬಳಸುವ ಅಗಲ ಬಾಯಿಯ ಮಣ್ಣಿನ ಗಡಿಗೆ ೨. ಅರಿವೆ; ಬಟ್ಟೆ (ವಿಜಾ.ಜಿ/ಬಾಗ.ಜಿ). **ಇರೂ:** *ಅರಬೆ;* ಅರ್ಬಿ, ಅರವಿ

ಅರಬು: ಅನಾವೃಷ್ಟಿ (ಧಾರ.ಜಿ)

ಅರಬೂಟು: ನೇಯ್ಗೆಯಲ್ಲಿ ಬಳಕೆಯಾಗುವ ಒಂದು ವಸ್ತು; ಅರ್ಧ ಮಾತ್ರ ಎಳೆಯಿರುವ ಕಂಡಿಕೆ

ಅರಬೂರು: ಗಡಿ ತಿರುಗುವವರು; ಕಾವಲುಗಾರರು

ಅರಬೆಡಗು: ಅರ್ಧಬೆಡಗು; ಬಿನ್ನಾಣ (ಮೈಸೂ.ಜಿ)

ಅರಬೇವು: ಅರ್ಧಬೆಂದದ್ದು

ಅರಬೋಟಿಗೆ: ನೇಕಾರ ಸಮುದಾಯದ ವೃತ್ತಿಗೆ ಸಂಬಂಧಿಸಿದ ಹೇಳಿಕೆ

ಅರಭಾರ: ಕರ್ಮಭಾರ; ಜವಾಬ್ದಾರಿ

ಅರಭಾಷೆ ಗೌಡರು: ಕೊಡವ ಗೌಡರು; ಒಕ್ಕಲಿಗ ಸಮುದಾಯದ ಒಂದು ಉಪ ಪಂಗಡ. ಇವರು ಕೊಡಗು ಹಾಗೂ ದಕ್ಷಿಣಕನ್ನಡ ಜಿಲ್ಲೆಯ ಕೆಲವು ಭಾಗಗಳಲ್ಲಿ ಕಂಡು ಬರುತ್ತಾರೆ. ಅರವ ಎಂಬ ಕನ್ನಡದ ಉಪಭಾಷೆಯನ್ನು ಮಾತಾಡುತ್ತಾರೆ

ಅರಮ: ಅರ್ಧನಾರಿ; ದ್ವಿಲಿಂಗಿ (ದಕ.ಜಿ); ಮೆಕ್ಕೆಕಟ್ಟೆ ದೈವದ ಒಂದು ರೂಪ. **ಇರೂ:** *ಅರಮರಾಯ*

ಅರಮಣೆ: ಗಾಲಿಗಳ ನಡುವೆ ಇರುವ ದಪ್ಪ ತುಂಡು. **ಇರೂ:** *ಹಂದಿಮನಿ*

ಅರಮನಿಗದ್ಗಿ ಕಾರ್ಯ: ಪರಿಶಿಷ್ಟರು ಮದುವೆಯ ಮುಂಚೆ ನಡೆಸುವ ಶಾಸ್ತ್ರ (ಬಳ್ಳಾ.ಜಿ)

ಅರಮನಿಪ್ರಸ್ಥ: ಪರಿಶಿಷ್ಟರು ಮದುವೆಯ ಹಿಂದಿನ ದಿನ ಕನ್ಯೆಯ ಮನೆಯ ಮುಂದೆ ಮಾಡುವ ವೀಳ್ಯದ ಶಾಸ್ತ್ರ (ಬಳ್ಳಾ.ಜಿ)

ಅರಮನೆ: ರಾಜ ರಾಣಿಯರು ಇರುವ ಭವ್ಯವಾದ ಮನೆ (ಶಿವ.ಜಿ). **ಪ್ರ**: ಅರಮನೆಗೆ ಹೋಗಿ ಅಂಬ್ಲಿ ಬೇಡಿದ್ನಂತೆ

ಅರಮನೆಗೌರಿ: ಮಲೆನಾಡಿನ ದೀವರ ಹೆಣ್ಣುಮಕ್ಕಳು ಭಾದ್ರಪದ ಮಾಸದ ತದಿಗೆಯಲ್ಲಿ ಪೂಜಿಸುವ ಗೌರಿ. ಅರಮನೆಯಲ್ಲಿ ಗೌರಿಹಬ್ಬ ಮಾಡುವ ದಿನವೇ ತಮ್ಮ ಮನೆಯಲ್ಲಿ ಗೌರಿ ಇಟ್ಟರೆ ಅದನ್ನು ಅರಮನೆ ಗೌರಿ ಎಂದೂ, ಮರುದಿನ ಪ್ರತಿಷ್ಠಾಪಿಸಿದರೆ ಹಳ್ಳಿಗೌರಿ ಎಂದೂ ಕರೆಯುತ್ತಾರೆ. ಈ ಗೌರಿಗೆ ಇಂದ್ರನ ಹೂವು, ಗೌರಿ ಹೂಗಳು ಇಷ್ಟವೆಂದು ಪ್ರತೀತಿ. ಹೆಣ್ಣುಮಕ್ಕಳು ಕಡ್ಡಾಯವಾಗಿ ತವರಿಗೆ ಬಂದು ಗೌರಿ ಪೂಜಿಸಿ, ತವರು ಮನೆಯವರಿಂದ ಬಳೆ, ಸೀರೆ ಇತ್ಯಾದಿಗಳ ಉಡುಗೊರೆ ಪಡೆಯುತ್ತಾರೆ

ಅರಮನೆಜಟುಗ: ಜಟುಗ ದೈವದ ಒಂದು ವಿಧ. ಅರಮನೆ ಎಂದರೆ ಕುಟುಂಬ. ವರುಷಕ್ಕೊಮ್ಮೆ ಪೂಜೆ ಮತ್ತು ಕೋಳಿ, ಕುರಿ, ಹಂದಿಯ ಬಲಿ ಸಲ್ಲಿಸುತ್ತಾರೆ (ಮಲೆ)

ಅರಮನೆಮೇರ: ಭೂತ ಕಟ್ಟುವವರಲ್ಲಿ ಒಂದು ವರ್ಗ. ಮೇರ ಜನಾಂಗದವರಲ್ಲಿ ಒಂದು ಪಂಗಡ (ದಕ.ಜಿ)

ಅರಮರಲಕಾಯಿ: ಅರಮಾದಲಕಾಯಿ. ಮಲೆನಾಡಿನಲ್ಲಿ ಇದನ್ನು ಉಪ್ಪಿನಕಾಯಿಗೆ ಬಳಸುತ್ತಾರೆ. ಭೂಮಿಹುಣ್ಣಿಮೆಯ ದಿನ ಮಾಡುವ ಬೆರಕೆಸೊಪ್ಪಿನ ಪಲ್ಯಕ್ಕೆ ಇದರ ಎಲೆಗಳನ್ನು ಬಳಸುತ್ತಾರೆ (ಶಿವ.ಜಿ)

ಅರಮಲ್ಲಾಗ್ರು: ಅರ್ಧಮಲ್ಲಾಗರು; ಮಲೆನಾಗರು; ಮೂರ್ಛೆರೋಗ

ಅರಮಳಿ: ಸಂಪೂರ್ಣ ತಂಪು ನೀಡದ ಮಳೆ; ಬೆಳೆಗೆ ಸಾಕಾಗದಷ್ಟು ಮಳೆ

ಅರಲ್: ಮಳೆಯ ಹನಿ; ಮನೆಯೊಳಕ್ಕೆ ರಾಚುವ ಮಳೆಯ ಹನಿ (ದಕ). **ಇರೂ:** *ಇರಚಲು*

ಅರಲು: ೧. ಕೆಸರು (ಬೆಳ.ಜಿ) ೨. ಗಡಿಗೆ ಮಾಡಲು ಬಳಸುವ ಹದಮಾಡಿದ ಕೆಸರು ಮಣ್ಣು (ಧಾರ.ಜಿ) ೩. ಸಗಣಿಯ ಬಗ್ಗಡ ೪. ಕಣ್ಣೀರು ೫. ಬಾರೀ ಗಾತ್ರದ ಮೀನು. ಹಾವಿನಾಕಾರದ ಮೂತಿ ಇರುವ ಈ ಮೀನಿನ ಬೆನ್ನಿನ ಮತ್ತು ಹಿಂಬದಿಯ ರೆಕ್ಕೆ ತೆಳುವಾದ ಕಪ್ಪುಬಣ್ಣದ ಅಂಚನ್ನು ಹೊಂದಿರುತ್ತದೆ (ಚಿತ್ರ.ಜಿ)

ಅರಲೆಮ್ಮೆ: ಹೆಚ್ಚು ಹಾಲು ಕೊಡುವ ವಿಶಿಷ್ಟ ಜಾತಿಯ ಎಮ್ಮೆ (ದಕ.ಜಿ)

ಅರವ: ಕೊಡಗಿನಲ್ಲಿ ಕಂಡುಬರುವ ಒಂದು ಸಮುದಾಯ ಮತ್ತು ಒಂದು ಭಾಷೆ (ಕೊಡ.ಜಿ) **ನೋಡಿ–** ಅರಭಾಷೆಗೌಡರು

ಅರವಟಿಗಿ: ಪ್ರಯಾಣಿಕರಿಗೆ ಕುಡಿಯುವ ನೀರನ್ನು ಒದಗಿಸುವ ಸ್ಥಳ; ಅರವಟ್ಟಿಗೆ; ಧರ್ಮಶಾಲೆ (ಮೈಸೂ.ಜಿ). **ಇರೂ:** *ಅರ್ವಟ್ಗೆ (ಚಾಮ.ಜಿ) ಆರೋಟ್ಗೆ*

ಅರವಟ್ಗೆಸೊಪ್ಪು: ಒಂದು ಜಾತಿಯ ಸಸ್ಯ (ತುಮ.ಜಿ)

ಅರವಡ್ಲು: ಮಣ್ಣಿನ ದಿಣ್ಣೆಯನ್ನು ಕಡಿದ ಭಾಗ (ಬಳ್ಳಾ.ಜಿ). **ಇರೂ:** *ಅರವೆಡ್ಲು*

ಅರವಲೆತ್ತು (ಕ್ರಿ): ನೆನೆಹಾಕು. **ಪ್ರ**: ದೋಸೆಗೆ ಅಕ್ಕಿ ಅರವಲೆತ್ತಿದೀನಿ (ಚಿತ್ರ.ಜಿ)

ಅರವಳ್ಳಿ: ೧. ಕೊಯ್ಲಿಗೆ ಬಳಸುವ ಕುಡುಗೋಲು ೨. ತುಂಟ ೩. ದುಡುಕಿನ; ಸಿಡುಕಿನ (ಧಾರ.ಜಿ)

ಅರವಾಪು: ೧. ಮದ್ದಲೆಯ ಬಲದ ಬದಿಗೆ ಇರುವ ಕರ್ನ ಮತ್ತು ಇಂಡಿಗೆ ೨. ಒಂದು ಬಗೆಯ ಹಾವು

ಅರವೆತ್ತು: ೧. ಕಾಳುಗಳು ಕೆಡದಂತೆ ಸಂರಕ್ಷಿಸಲು ಬೀಜಗಳಿಗೆ ಮಣ್ಣು ಮತ್ತು ಸೆಗಣಿ ಲೇಪಿಸುವ ವಿಧಾನ ೨. ತೊಗರಿಯನ್ನು ಬೇಳೆ ಮಾಡುವಾಗ ನುಚ್ಚಾಗದಿರಲೆಂದು ಹಸಿ ಕೆಮ್ಮಣ್ಣನ್ನು ಮೆತ್ತುವುದು (ಬೆಂಗ್ರಾ.ಜಿ). **ಇರೂ:** *ಅರಲೆತ್ತು*

ಅರವೆಹರಿಯುವುದು: ಮಕ್ಕಳಿಗೆ ಭೇದಿಯಾದಾಗ ಕಂಕುಳ ಕೆಳಗೆ ಬೂದಿ ಹಚ್ಚಿ ತೋಳಿನ ನರ ಹಿಡಿದು ಲಟಕ್ ಎನ್ನುವವರೆಗೆ ಎಳೆಯುವುದು. ಹಳ್ಳಿಗಳಲ್ಲಿ ಹಿಂದೆ ಮಾಡುತ್ತಿದ್ದ ನಾಟಿಚಿಕಿತ್ಸೆ

ಅರವೇಲು: ಬ್ರಾಹ್ಮಣ ಒಳಪಂಗಡದ ಹೆಸರು. ಶೃಂಗೇರಿ ಮಠ ಇವರಿಗೆ ಗುರುಮಠ (ಮಲೆ)

ಅರಶ್ನ ಕುಂಕುಮ ಕೊಡೋದು: ನಿಶ್ಚಿತಾರ್ಥ. ಹೆಣ್ಣಿನ ಮನೆಗೆ ಗಂಡಿನ ಕಡೆಯವರು ಮಡಿಲು ತುಂಬುವ ಸಾಮಗ್ರಿಗಳನ್ನು ತಂದು ಹೆಣ್ಣನ್ನು ಅಲಂಕರಿಸಿ ಮುತ್ತೈದೆಯರೆಲ್ಲರೂ ಹೆಣ್ಣಿಗೆ ಅರಿಶಿನ ಕುಂಕುಮ ಇಟ್ಟು ಮಡಿಲು ತುಂಬುತ್ತಾರೆ (ಕೋಲ.ಜಿ)

ಅರಶ್ನಬಲಿ: ನಾಟಿಯ ನಂತರ ಮಾಡುವ ಒಂದು ಪೂಜಾವಿಧಿ (ಉಕ.ಜಿ)

ಅರಷಣ್ಗಲ್ಲು: ಚಕ್ಕೆಯಂತಿರುವ ಹಳದಿ ಬಣ್ಣದ ಸಣ್ಣ ಸಣ್ಣ ಕಲ್ಲುಗಳಿಂದ ಕೂಡಿರುವ ಕೃಷಿಭೂಮಿ (ಮಂಡ್ಯ.ಜಿ)

ಅರಷಣ್ಗುಂಬಿ ರೋಗ: ಕಬ್ಬಿನ ಬೆಳೆಗೆ ಬರುವ ರೋಗ (ಮಂಡ್ಯ.ಜಿ)

ಅರಸ/ಅರಸು: ೧. ರಾಜ; ದೊರೆ. **ಪ್ರ:** ಅರಸ ಬೇಡಿ ಕೆಟ್ಟ ತಿರುಕ ಬೇಡದೆ ಕೆಟ್ಟ ೨. ಚೆನ್ನೆಮಣೆಯ ಅರಸಾಟದಲ್ಲಿ ಮೊದಲ ಆಟಗಾರ (ದಕ.ಜಿ)

ಅರಸಲತಟ್ಟಿ: ಮಲೆನಾಡಿನ ಗೌಡಲು ಸಮುದಾಯದವರ ಗೃಹಬಳಕೆಯ ವಸ್ತು

ಅರಸಾಟ: ಚೆನ್ನೆಆಟದ ಒಂದು ವಿಧಾನ. ಚೆನ್ನೆಮಣೆಯ ಮಧ್ಯದ ಆರು ಗುಣಿಗಳು ಅರಸನಿಗೆ ಸೇರಿದ್ದೆಂದೂ ಎರಡೂ ಪಕ್ಕಗಳ ನಾಲ್ಕು ನಾಲ್ಕು ಕುಣಿಗಳು ಪ್ರಧಾನಿ ಮತ್ತು ಸೇವಕನಿಗೆ ಸೇರಿದ್ದೆಂದೂ ಕಲ್ಪಿಸಿಕೊಂಡು ಆಡುತ್ತಾರೆ (ದಕ.ಜಿ)

ಅರಸಿ: ೧. ರಾಜನ ಹೆಂಡತಿ; ರಾಣಿ ೨. ಕಾಮಾಲೆ ರೋಗ. **ಇರೂ:** *ಅರಿಶಿನ ಜಡ್ಡು*

ಅರಸಿನಕಂಬಿ ಸೀರೆ: ಹಳದಿ ಬಣ್ಣದ ಗೀರಂಚಿನ ಸೀರೆ (ಧಾರ.ಜಿ)

ಅರಸಿನಕುತ್ತ: ಅರಶಿನ ಕಾಮಾಲೆ ರೋಗ (ದಕ.ಜಿ)

ಅರಸಿನತಾಳ್ಳ: ಖಾರ ಕಡಿಮೆ ಇರುವ, ತರಕಾರಿ ಕಾಳುಗಳ ಪಲ್ಯ (ಉಕ.ಜಿ). **ಇರೂ:** *ತಾಳ್ದ, ತಾಳದ (ಮಂಡ್ಯ.ಜಿ/ ಚಿತ್ರ.ಜಿ)*

ಅರಸಿನಬಳಿ: ಮಲೆನಾಡ ನಾಮಧಾರಿ ಒಕ್ಕಲಿಗರ ಒಂದು ಕುಲದ ಹೆಸರು (ಶಿವ.ಜಿ)

ಅರಸಿನಬೂರುಗ: ಕಾಕ್ಲೋಸ್ಪರ್ಮಮ್ *ಗಾಸಿಪಿಯಮ್ ರಿಲಿಜಿಯೋಸಮ್:* ಹಳದಿ ಬಣ್ಣದ ಹೂ ಬಿಡುವ ಬೂರುಗದ ಮರ

ಅರಸಿನಮುಂಡಿಗೆ ರೋಗ: ೧. ಕಾಮಾಲೆ ರೋಗ ೨. ಬತ್ತಕ್ಕೆ ಬರುವ ರೋಗ (ಬಳ್ಳಾ.ಜಿ)

ಅರಸಿನೆಣ್ಣೆ: ೧. ಮದುಮಗ ಮದುಮಗಳು ಮಂಗಳಸ್ನಾನ ಮಾಡುವ ಮೊದಲು ಮಾಡುವ ಆಚರಣೆ (ದಕ.ಜಿ) ೨. ನಾಗೋಲಿ ಶಾಸ್ತ್ರದಲ್ಲಿ ಹೆಣ್ಣು ಗಂಡುಗಳು ಪರಸ್ಪರ ಎಣ್ಣೆ ಅರಿಶಿನ ಹಚ್ಚುವ ಶಾಸ್ತ್ರ

ಅರಸುಕಂಬಳ: ೧. ಅರಸು ಮನೆತನಗಳು ನಡೆಸುವ ಕಂಬಳ ೨. ಮೂಲ್ಕಿಯಲ್ಲಿ ನಡೆಯುವ ಸಾಮಾಜಿಕ ಚಾರಿತ್ರಿಕ ಮಹತ್ವವುಳ್ಳ ಕಂಬಳ

ಅರಸುಕಿ: ಅರಸೊತ್ತಿಗೆ

ಅರಸುಕುತ್ತ: ಒಂದು ರೀತಿಯ ಜಲೋದರ ರೋಗ (ದಕ.ಜಿ)

ಅರಸುಕುರಿ: ರಾಜಹುಣ್ಣು (ದಕ.ಜಿ)

ಅರಸುತೂಕ: ದೊಡ್ಡಗುಣ (ಗುಲ್ಬ.ಜಿ)

ಅರಸುಪಾದ: ೧. ಹರಸುಪಾದ ೨. ದೇವಿಯ ಪಾದದ ಗುರುತಿರುವ ಆಕಳ ಚರ್ಮದ ಚೂರು ೩. ಹೊಸಪೇಟೆ ಹುಲಗಿಯ ಹುಲಿಗಮ್ಮನ ಭಕ್ತರು ಆಕೆಯ ಪಾದದ ಗುರುತಿರುವ ಚರ್ಮದ ಚೂರನ್ನು ಕೊರಳಿಗೆ ಕಟ್ಟಿಕೊಳ್ಳುವರು ೪. ಅರಸ ಪಾರಿವಾಳ (ದಕ.ಜಿ)

ಅರಸುಬಾವು: ದೊಡ್ಡಗಾತ್ರದ ಬಾವು (ದಕ.ಜಿ)

ಅರಸುಸೇಳು: ಅರಸು ಚೇಳು; ದಪ್ಪ ಕೊಂಡಿ ಇರುವ ಚೇಳು (ಮಂಡ್ಯ.ಜಿ)

ಅರಸುಹುಣ್ಣು: ಬೆನ್ನುಫಣಿ; ಸರ್ಪಸುತ್ತು (ಚಿತ್ರ.ಜಿ)

ಅರಸ್‌ಕೊಡ್: ದೈವಗಳ ಅಲಂಕೃತ ಛತ್ರಿ; ಅಬತಾಗಿರಿ

ಅರಸ್ತಿ/ಅರುಸ್ತಿ: ೧. ದನಗಳ ಕೀಲುಗಳಲ್ಲಿ ಕಾಣಿಸಿಕೊಳ್ಳುವ ಗಂಟುಗಳ ರೋಗ. ಮೊಳಸಂದು, ಮೊಣಕಾಲು ಕೀಲಿನ ಬಳಿ ಹಿಂಭಾಗಕ್ಕಾದಂತೆ ಕಾಣಿಸುವ ಗಂಟನ್ನು ಕೀಲರುಸ್ತಿ ಎನ್ನುತ್ತಾರೆ (ಮಂಡ್ಯ.ಜಿ/ಬೆಂಗ.ಜಿ) ೨. ಕಾಲಿನ ಮೇಲೆ ಏಳುವ ಬಾವು. ನವೆಯಿಂದ ಕೂಡಿದ್ದು ಕೀವು ತುಂಬುತ್ತದೆ. ಕೆರೆದು ಕೆರೆದು ವ್ರಣವಾಗುತ್ತದೆ (ಮಂಡ್ಯ.ಜಿ) ೩. ದನಗಳ ಮೈಯ ಯಾವ ಭಾಗದಲ್ಲಿಯಾದರೂ ಕಾಣಿಸಿಕೊಳ್ಳುವ ಗಂಟುಗಳ ರೋಗ (ಮಂಡ್ಯ.ಜಿ)

ಅರಹಸಿ: ಮಳೆಯಿಂದ ಅರ್ಧದಷ್ಟು ಹಸಿಯಾದ ಭೂಮಿ. ಕೆಲವು ಬೆಳೆಗಳು ಅರಹಸಿಯಿಂದ ಚೆನ್ನಾಗಿ ಬೆಳೆಯುತ್ತವೆ (ಶಿವ.ಜಿ)

ಅರಹಾಕು: ಅರದಿಂದ ನಯಗೊಳಿಸು (ದಕ.ಜಿ)

ಅರಳ: ಒಳಲೆ; ಮಕ್ಕಳಿಗೆ ಔಷಧಿ, ಹಾಲು ಕುಡಿಸುವ ಸಾಧನ (ಬೆಂಗ.ಜಿ)

ಅರಳಡ್ಡಿಕೆ: ಹರಳಿನ ಅಡ್ಡಿಕೆ; ಹರಳು ಸೇರಿಸಿ ತಯಾರಿಸಿದ ಕೊರಳಿನ ಬಂಗಾರದ ಒಡವೆ

ಅರಳಿ: *ಫೈಕಸ್ ಅರ್ನಾಟಿಯಾನ ರಿಲಿಜಿಯೋಸ:* ಅಶ್ವತ್ಥ ಮರ; ಹಿಂದೂಗಳಿಗೆ ಪವಿತ್ರವಾದ ವೃಕ್ಷ. ಈ ಮರ ಹೆಚ್ಚಾಗಿ ದೇವಸ್ಥಾನಗಳ ಮುಂದಿರುತ್ತದೆ. ಈ ಮರಕ್ಕೆ ಬಂಜೆತನವನ್ನು ನಿವಾರಿಸುವ ಶಕ್ತಿ ಇದೆ ಎಂದು ನಂಬಿಕೆ (ಚಿತ್ರ ನೋಡಿ)

ಅರಳಿ ಕಟ್ಟುವುದು: ಬೀಡಿ, ಈರುಳ್ಳಿ ಸಂಗ್ರಹಿಸಿಡಲು ಬಳಸುವ ಗೂಡು

ಅರಳಿಕಟ್ಟೆ/ಅಳ್ಳಿಕಟ್ಟೆ: ಅರಳಿಮರದ ಸುತ್ತ ಚೌಕಾಕಾರವಾಗಿ ಅಥವಾ ಚಕ್ರಾಕಾರವಾಗಿ ಕಟ್ಟಿರುವ ಕಲ್ಲುಕಟ್ಟೆ. ಸಾಧಾರಣವಾಗಿ ಪ್ರತಿಯೊಂದು ಊರ ಮುಂದೆಯೂ ಅರಳಿಕಟ್ಟೆ ಇದ್ದು ಅದು ಊರ ಪಂಚಾಯಿತಿ ಕಟ್ಟೆಯೂ ಆಗಿರುತ್ತದೆ

ಅರಳು: ೧. ಬಿಳಿಜೋಳಕ್ಕೆ ಸ್ವಲ್ಪ ನೀರು ಉಪ್ಪು ಹಾಕಿ ಹೆಚ್ಚಿನ ಉರಿಯಲ್ಲಿ ಮಣ್ಣಿನ ಬಾಂಡ್ಲಿಯಲ್ಲಿ ಹುರಿದಾಗ ಹೂವಿನಂತೆ ಅರಳಿದ ಜೋಳದ ತಿನಿಸು (ಬಿಜಾ.ಜಿ) ೨. ಹೂ ೩. ಉದಯ ೪. ಹರಳು ೫. ಸಂಪಗೆ ಹಣ್ಣಿನ ಬೀಜಗಳು (ಚಿಮ.ಜಿ)

ಅರಳುಂಡೆ/ಅರಳಿನ ಉಂಡೆ: ೧. ಅರಳುಪುಡಿ ಬೆಲ್ಲದ ಪಾಕ ಹುರಿದ ಎಳ್ಳು ಇವುಗಳನ್ನು ಬೆರೆಸಿ ಮಾಡಿದ ಸಿಹಿತಿನಿಸು. ಬಹುದಿನಗಳವರೆಗೆ ಕೆಡದೆ ಇರುತ್ತದೆ ೨. ಅರಳು ಪುಡಿ ತೆಂಗಿನ ತುರಿ, ಬೆಲ್ಲದ ಪುಡಿ ಸೇರಿಸಿ ಮಾಡುವ ಉಂಡೆ. ಮಲೆನಾಡು ಒಕ್ಕಲಿಗರು ಗಣೇಶನ ಹಬ್ಬದಲ್ಲಿ ಇದನ್ನು ಮಾಡುತ್ತಾರೆ **ಇರೂ:** *ಅಳ್ಳಿಟ್ಟಿನ ಉಂಡೆ*

ಅರಳು ತುಪ್ಪ: ೧. ಭತ್ತದ ಅರಳಿಗೆ ಬೆಲ್ಲ ತುಪ್ಪ ಹಾಲು ಹಾಕಿ ಕಲೆಸಿ ತಿನ್ನುವಂಥ ತಿನಿಸು ೨. ಬಸುರಿಯರಿಗೆ ನಾಲ್ಕನೇ ತಿಂಗಳಲ್ಲಿ ಮಾಡುವ ಒಂದು ಶಾಸ್ತ್ರ (ಬೆಂಗ.ಜಿ)

ಅರಳು ಪುಡಿ: ಅರಳು ಪುಡಿ, ಎಳ್ಳು, ಬೆಲ್ಲ ಹಾಕಿ ಮಾಡುವ ಮಿಶ್ರಣ. ಸಕಲೇಶಪುರ ಭಾಗದಲ್ಲಿ ಗೌರಿಹಬ್ಬದ ವಿಶೇಷ ಸಿಹಿತಿನಿಸು ಇದು (ಚಿಮ.ಜಿ)

ಅರಳುಬಿತ್ನೆಕಣ್: ಮೂರು ಕಣ್ಣುಗಳಿಗೆ ಒಂದರಂತೆ ಬಿತ್ತನೆ ಕಬ್ಬಿನ ತುಂಡನ್ನು ಕತ್ತರಿಸಿ ನೆಟ್ಟಾಗ ಆ ತುಂಡಿನ ಕಣ್ಣಿನಲ್ಲಿ ಮೂಡುವ ಮೊಳಕೆ (ಮಂಡ್ಯ.ಜಿ)

ಅರಳುಹೋಮ: ರಾಮಕ್ಷತ್ರಿಯರು ಕನ್ಯಾದಾನ ಸಂದರ್ಭದಲ್ಲಿ ನಡೆಸುವ ಒಂದು ಆಚರಣೆ (ಉಕ.ಜಿ)

ಅರಳೆಣ್ಣೆ: ಹರಳೆಣ್ಣೆ; ಹರಳಿನ ಬೀಜದಿಂದ ತೆಗೆದ ಎಣ್ಣೆ; ಔಡಲದ ಎಣ್ಣೆ; ಕೈಯೆಣ್ಣೆ

ಅರಳೆಲೆ: ಹೆಣ್ಣುಮಕ್ಕಳು ಮುಂದಲೆಯಲ್ಲಿ ಧರಿಸುವ ಮತ್ತು ಚಿಕ್ಕಮಕ್ಕಳ ಸೊಂಟದಲ್ಲಿ ಕಟ್ಟುವ ಅರಳಿ ಎಲೆಯ ಆಕಾರದ ಬಂಗಾರ ಅಥವಾ ಬೆಳ್ಳಿಯ ಚಿಕ್ಕ ಪದಕದಂತಿರುವ ಆಭರಣ (ಧಾರ.ಜಿ)

ಅರಳೆಲೆ ಬಸವ: ಉತ್ತರ ಕರ್ನಾಟಕದ ಕಡೆ ಹೊಲಗದ್ದೆಗಳಲ್ಲಿ ಹಸಿರು ತುಂಬಿದಾಗ ಮಳೆಗಾಲದಲ್ಲಿ ಮಾಡುವ ಒಂದು ಆಚರಣೆ. ಹೆಣ್ಣು ಮಕ್ಕಳು ಜೇಷ್ಠ ಬಹುಳ ಅಮಾವಾಸ್ಯೆ ದಿನ ಅರಳೆಯ ಮಂಟಪವನ್ನು ನಿರ್ಮಿಸಿ ಅದರೊಳಗೆ ಮಣ್ಣಿನಿಂದ ಮಾಡಿದ ಬಸವಣ್ಣನನ್ನು ಇರಿಸಿ ಅಲಂಕಾರ ಮಾಡಿ ಕೆರೆ ಅಥವಾ ಜಲಾಶಯದಿಂದ ನೀರು ತಂದಿಟ್ಟು ಹಾಡುತ್ತಾ ಪೂಜೆ ಮಾಡುವರು (ಧಾರ.ಜಿ). **ಇರೂ:** *ಮೊದಲ ಮಣ್ಣಿನ ಪೂಜೆ, ಮಣ್ಣೆತ್ತಿನ ಅಮಾವಾಸ್ಯೆ*

ಅರಾಕುಲಾಯಿ: ಒಂದು ಜಾತಿಯ ಮೀನು (ದಕ.ಜಿ)

ಅರಾಪಗಡಿ: ೧. ಹದಿನೆಂಟು ಬಗೆಯ ರುಮಾಲು ೨. ಹದಿನೆಂಟು ಜಾತಿ **ನೋಡಿ–** ಅಠ್ರಾಪಗಡಿ

ಅರಾಯ್ಸು: ಅರೆ ಆಯುಷ್ಯ; ಅರ್ಧ ಆಯುಸ್ಸು

ಅರಾಲ್: ಸಮುದ್ರ ದಂಡೆ (ದಕ.ಜಿ)

ಅರಾಸ: ೧. ಎಚ್ಚರ; ಪ್ರಜ್ಞೆ; ನೆನಪು ೨. ವೈಭವ ೩. ನಾಚಿಕೆ (ಬಿಜಾ.ಜಿ) ೪. ಮರ್ಯಾದೆ; ರೂಢಿಯ ಕಟ್ಟಳೆ (ರಾಮ.ಜಿ)

ಅರಿ: ೧. ಸಣ್ಣಕಟ್ಟು ೨. ಚಿಕ್ಕ ಮೆದೆ ೩. ಕುಯ್ದು ಸಾಲಾಗಿಟ್ಟ ತೆನೆಹುಲ್ಲು; ಹೊಲ ಗದ್ದೆಗಳಲ್ಲಿ ಭತ್ತವನ್ನು ಸೆಳೆಯುವಾಗ ಹೊರೆಯನ್ನು ವಿಂಗಡಿಸಿ ಗೊಣಬೆಯಿಂದ ಕೈ ಮುಷ್ಠಿ ಹಿಡಿತಕ್ಕೆ ಸಿಗುವಷ್ಟು ಸಣ್ಣ ಸಣ್ಣ ಕಟ್ಟುಗಳನ್ನಾಗಿ ಮಾಡಿದ ಭತ್ತದ ಪೈರು (ಉಕ.ಜಿ) ೪. ಒಂದು ಬಗೆಯ ಕಣ್ಣಿನ ರೋಗ; ಕಣ್ಣಿನಲ್ಲಿ ದುರ್ಮಾಂಸ ಬೆಳೆಯುವುದು

ಅರಿಊರು (ಕ್ರಿ): ಸಸಿನೆಡು

ಅರಿಕಡಿಗಳು: ವಯಸ್ಸಾದ ಎತ್ತುಗಳ ಹಲ್ಲು. ಎಂಟು ಹಲ್ಲುಗಳು ಈ ಎತ್ತಿಗೆ ಇರುತ್ತವೆ

ಅರಿಕಲ್ಲು: ೧. ಅರೆಕಲ್ಲು; ಬಂಡೆಕಲ್ಲು; ೨. ಅರೆಯಲು ಬಳಸುವ ಕಲ್ಲು (ದಕ.ಜಿ)

ಅರಿಕಾಂಟ್ಯ: ಅಕ್ಕಿ ಇತ್ಯಾದಿಗಳನ್ನು ಹಾಕಿಡುವ ಬುಟ್ಟಿ (ದಕ.ಜಿ)

ಅರಿಕಾಳಿ: ಕಹಳೆ; ಹರಿಕಹಳೆ (ಚಿತ್ರ.ಜಿ)

ಅರಿಕುರ್ಕುನಿ: ಅಂತ್ಯಕ್ರಿಯೆಯ ಸಂದರ್ಭದಲ್ಲಿ ಮೃತನ ಪತ್ನಿಯು ಬುಟ್ಟಿಯಲ್ಲಿ ಅಕ್ಕಿ ತೊಳೆಯುವ ಆಚರಣೆ (ದಕ.ಜಿ)

ಅರಿಕೊಟ್ಲು: ದೇವಸ್ಥಾನದಲ್ಲಿ ನೈವೇದ್ಯ ಬೇಯಿಸುವ ಕೋಣೆ (ದಕ.ಜಿ)

ಅರಿಕೋಲು: ೧. ಹಾರೆಕೋಲು; ಒರಳಿನಲ್ಲಿ ಧಾನ್ಯ, ಅರಿಶಿನ ಇತ್ಯಾದಿ, ಕುಟ್ಟಿ ಪುಡಿಮಾಡಲು ಉಪಯೋಗಿಸುವ ಸುಮಾರು ಒಂದೂವರೆ ಅಡಿಯಷ್ಟು ಉದ್ದವಾಗಿರುವ ಕಬ್ಬಿಣದ ಸಾಧನ ೨. ಒಕ್ಕಣೆಗಾಗಿ ಹಾಕುವ ಧಾನ್ಯದ ಅರಿಗಳನ್ನು ಹದವಾಗಿ ಹರಡಲು ಬಳಸುವ ಕೊಕ್ಕೆಗೋಲು; ಮೆರೆಗೋಲು (ಬಳ್ಳಾ.ಜಿ). **ಇರೂ:** *ಹಾರೆ, ಹರೆಕೋಲು*

ಅರಿಗ/ಆರಿಗ: ಜೈನ ಹಾಗೂ ಬಂಟರ ಕುಲನಾಮ (ದಕ.ಜಿ)

ಅರಿಗಾಲೆ: ಗಾಡಿ ಓಡಿಸುವುದು (ಚಿಮ.ಜಿ)

ಅರಿಗೆಡು: ಸೊರಗು; ಸೊಣಕಲಾಗು (ಶಿವ.ಜಿ)

ಅರಿಗ್ಗಾಲು: ಅತಿವೇಗದಿಂದ ಓಡುವುದು; ಜಿಗಿದು ಹಾರಿ ಓಡುವುದು. **ಇರೂ:** *ಹಾರಿಗ್ಗಾಲು*

ಅರಿಣಿಗೂಡೆ ಶಾಸ್ತ್ರ: ಮದುವೆ ಸಂದರ್ಭದಲ್ಲಿನ ಒಂದು ಶಾಸ್ತ್ರ. ಮಣ್ಣಿನ ಸಣ್ಣ ಸಣ್ಣ ಗಡಿಗೆಗಳನ್ನು ಗೂಡೆಯಲ್ಲಿ ಹೊತ್ತು ತಂದು ಪೂಜಿಸುವ ಶಾಸ್ತ್ರ

ಅರಿಣ್ಣೆ ಪೂಜೆ: ಮದುವೆಯ ಸಂದರ್ಭದಲ್ಲಿ ಮಾಡುವ ಅರಣಿ ಪೂಜೆ; ಗಡಿಗೆಪೂಜೆ (ಕೋಲಾ.ಜಿ)

ಅರಿತಾರಾಯಿ: ಧಾರ್ಮಿಕ ಕ್ರಿಯೆಯಲ್ಲಿ ಬಳಸುವ ಅಕ್ಕಿ ಮತ್ತು ತೆಂಗಿನಕಾಯಿ (ದಕ.ಜಿ)

ಅರಿತಿರಿಚಾತ್ರ: ಎರವರ ಸಂಸ್ಕಾರಸಂಬಂಧವಾದ ಒಂದು ಆಚರಣೆ (ಕೊಡ.ಜಿ)

ಅರಿದೋಟಿ: ಕುಡುಗೋಲಿನಿಂದ ಕೂಡಿದ ದೋಟಿ (ದಕ.ಜಿ)

ಅರಿದ್ರಾ ಮಳೆ: **ನೋಡಿ–** ಆದ್ರಿಮಳೆ

ಅರಿನಡಿ: ನವ ವಿವಾಹಿತ ವಧು ಗಂಡನ ಮನೆಯಲ್ಲಿ ಸಂಸಾರ ಪ್ರಾರಂಭಿಸುವಿಕೆ (ಬಳ್ಳಾ.ಜಿ)

ಅರಿಪೂಜೆ: ಬಡಿಗರ ಅಡಿಗಡ್ಡೆ ಪೂಜೆ. **ಇರೂ:** *ಅಡಿಗಡ್ಡಿ ಪೂಜೆ (ರಾಯ.ಜಿ), ಅಡೇದ ಪೂಜೆ*

ಅರಿಪೆ: ಜರಡಿ (ದಕ.ಜಿ)

ಅರಿಪ್ಪೆ ಕುರಿ: ಮೂರು ನಾಲ್ಕು ತೂತುಗಳಿಂದ ಕೀವು ಸೋರುವ ದೊಡ್ಡ ಗಾತ್ರದ ಕುರ (ದಕ.ಜಿ)

ಅರಿಪ್ಯಾಲಿ: ಐಲು ವ್ಯಕ್ತಿ; ಅರೆ ಹುಚ್ಚ (ಬಳ್ಳಾ.ಜಿ)

ಅರಿಬಡಿ (ಕ್ರಿ): ಹುಲ್ಲಿನಿಂದ ಬತ್ತವನ್ನು ಬೇರೆ ಮಾಡಲು ಬತ್ತ ಬಡಿಯುವ ಕ್ರಿಯೆ

ಅರಿಬಾಳೆ: ಹರಿತವಾದ ಕತ್ತಿ

ಅರಿಬಿಂಡಿ: ಅರಿವೆಯ ಪಿಂಡಿ

ಅರಿಬಿ ಬಿಳಲು: ಹಳೆ ಬಟ್ಟೆಯ ಉದ್ದನೆಯ ತುಂಡು **ನೋಡಿ–** ಅರ್ಬೆಬಳ

ಅರಿಬೆಪ್ಪ: ಅರೆದಡ್ಡ; ಮೂರ್ಖ

ಅರಿಮರ: ಒಂದು ಜಾತಿಯ ಮರ (ದಕ.ಜಿ)

ಅರಿಮಾಡು (ಕ್ರಿ): ೧. ಸಾಲು ಮಾಡು ೨. ವ್ಯವಸ್ಥೆ ಮಾಡು; ರಾಗಿ ಬತ್ತ ಮುಂತಾದ ಪೈರನ್ನು ಕೊಯ್ದಿಟ್ಟು ಒಣಗಿದ ನಂತರ ಜೋಡಿಸುವಿಕೆ

ಅರಿಮೆದೆ: ಭತ್ತದ ಹುಲ್ಲನ್ನು ಒಂದೇ ಮುಖವಾಗಿ ಇಳಿಜಾರಾಗಿ ಜೋಡಿಸುವುದು (ಮಂಡ್ಯ.ಜಿ). **ಇರೂ:** *ಒಳಗುಡ್ಡೆ (ಮೈಸೂ.ಜಿ)*

ಅರಿಮೇರೇಗೌಡ: ಜುಂಜಪ್ಪನ ಕಥೆಗಳಲ್ಲಿ ಬರುವ ಕಾಡುಗೊಲ್ಲರ ಒಬ್ಬ ಮುಖಂಡ (ಧಾರ.ಜಿ)

ಅರಿಮ್ಮಣಿ: ವಧುವಿಗೆ ವರನು ಕೊಡುವ ಒಂದು ಕಂಠಾಭರಣ (ದಕ.ಜಿ)

ಅರಿಯ: ಮಣ್ಣಿನ ಚಿಕ್ಕ ಪಾತ್ರೆ

ಅರಿಯನೀರು: ಶವಸಂಸ್ಕಾರಕ್ಕೆ ಹೋಗುವಾಗ ಕುಡಿಕೆಯಲ್ಲಿ ತೆಗೆದುಕೊಂಡ ಹೋಗುವ ನೀರು (ದಕ.ಜಿ)

ಅರಿರುದ್ರ: ಕುಸ್ತಿಯ ಒಂದು ಸರಳ ಪಟ್ಟು. ನಿಂತು ಪ್ರಯೋಗಿಸುವಂಥದ್ದು. ಎದುರಾಳಿಯ ಎಡಗಾಲನ್ನು ಬಲಗಾಲಿನಿಂದ ಬಳಸಿ ಜೊತೆಗೆ ಅವನ ಬಲಗೈಯನ್ನು ಎಡಗೈಯ್ಯಿಂದ ಸುತ್ತಿ ಎಡಭಾಗಕ್ಕೆ ಎಳೆವುದು

ಅರಿವಾಣ: ಹರಿವಾಣ; ಹಿತ್ತಾಳೆ ಅಥವಾ ಕಂಚಿನ ಅಗಲವಾದ ತಟ್ಟೆ (ಮೈಸೂ.ಜಿ)

ಅರಿವಿ: ೧. ಹರವಿ; ಗಡಿಗೆ ೨. ಅರಿವೆ; ಬಟ್ಟೆ ೩. ಒಂದು ಸಿಹಿ ಪದಾರ್ಥ. ಗೋದಿಹಿಟ್ಟು ಬೆಲ್ಲವನ್ನು ನೀರಿನಲ್ಲಿ ನೆನೆಸಿಟ್ಟು ಔಂಗು ಗಡಿಗೆಯ ಮೇಲೆ ತಯಾರಿಸುವ ಸಿಹಿತಿಂಡಿ

ಅರಿವಿ ಪೂಜಿಸೋದು: ಹರವಿಪೂಜೆ. ಕೋಲಾರ ಜಿಲ್ಲೆಯಲ್ಲಿ ಸಾವಿಗೆ ಸಂಬಂಧಿಸಿದ ಕ್ರಿಯೆ. ಹನ್ನೊಂದನೇ ದಿನದಂದು ದಾಸಪ್ಪನು ದೊಡ್ಡ ಮಡಿಕೆಯನ್ನು ಹಸುವಿನ ಗೊಬ್ಬರ ಹಾಗೂ ಮರಳಿನ ಮೇಲಿಟ್ಟು ಅದರ ಮೇಲೆ ಸತ್ತವರಿಗೆ ತಂದಿರುವ ಹೊಸ ಬಟ್ಟೆಗಳನ್ನು ಇಡುತ್ತಾನೆ. ಮಡಿಕೆಯ ಪಕ್ಕದಲ್ಲಿ ಸತ್ತವರು ಬಳಸುತ್ತಿದ್ದ ಬಟ್ಟೆ ಹಣ ಒಡವೆಗಳನ್ನು ಇಡುತ್ತಾರೆ. ನಂತರ ದಾಸಯ್ಯನು ಗರಡುಗಂಭದೊಂದಿಗೆ ಎಲ್ಲವುಗಳನ್ನು ಪೂಜೆಮಾಡಿ ಕೋಳಿ ಕೊಯ್ದು ಅನ್ನ ಮಾಡಿ ಕೋಳಿ ಸಾರಿನ ಎಡೆ ಹಾಕಿ ಸೂತಕವಿರುವ ಸಂಬಂಧಿಗಳಿಗೆ ಕೆಂಪು ಬಿಳಿಯ ನಾಮಗಳನ್ನು ಹಾಕುತ್ತಾನೆ (ಕೋಲಾ.ಜಿ). **ಇರೂ:** *ಹಿರಿಯರನ್ನು ಮಾಡುವುದು*

ಅರಿವೆ: *ಗಾಂಗೆಟಿಕಸ್ ಇನಾಮೋನಸ್:* ಅಡುಗೆಗೆ ಬಳಕೆಯಾಗುವ ಸೊಪ್ಪು, **ಕೆಂಪುದಂಟು ಇರೂ:** *ಹರಿವೆ*

ಅರಿವೆಅಂಚಡಿ: ಬಟ್ಟೆಬರೆ; (ಬಿಜಾ.ಜಿ)

ಅರಿವೆ ಕಕ್ಕಡ: ತುಳಜಾಪುರದವರು ಕಮಟಾದ ನಿಲುವಂಗಿ ಹಾಕಿಕೊಂಡು ಅಂಬಾಬಾಯಿ ಜೋಗ ಎನ್ನುತ್ತ ಭಿಕ್ಷಾಟನೆ ಮಾಡುವಾಗ ಕೈಯಲ್ಲಿ ಹಿಡಿದಿರುವ ಬಟ್ಟೆಯ ದೊಂದಿ (ಬೆಂಗ.ಜಿ)

ಅರಿವೆಬಳ್ಳಿ: ಚೀಲಗಳ ಬಾಯಿ ಕಟ್ಟುವುದಕ್ಕೆ ಬಳಸುವ ಬಳ್ಳಿಯಂತೆ ಹರಿದ ಬಟ್ಟೆ (ತುಮ.ಜಿ)

ಅರಿವೇಣು ಪೂಜೆ: ಹರವಿ ಪೂಜೆ. ಫಲವಂತಿಕೆಯನ್ನು ಸಂಕೇತಿಸುವ ಅರವಿಯ ಪೂಜೆ (ಬೆಂಗ್ರಾ.ಜಿ)

ಅರಿಶಿಣ್ ಪತ್ಲ: ಅರಿಶಿನದ ಸೀರೆ; ಮದುವೆಯ ಹಿಂದಿನ ದಿನ ಅರಿಶಿನ ಹಚ್ಚುವ ಕಾರ್ಯಕ್ರಮಕ್ಕೆ ಮದುಮಗಳಿಗೆ ಉಡಿಸುವ ಅರಿಶಿನ ಹಚ್ಚಿ ಹಳದಿಯಾದ ಬಿಳಿಯ ಸೀರೆ (ಬಿಜಾ.ಜಿ)

ಅರಿಶಿಣಇಕ್ಕು (ಕ್ರಿ): ೧. ಅರಿಶಿಣ ಹಚ್ಚುವ ಶಾಸ್ತ್ರ ಮಾಡು ೨. ಮದುವೆ ಮಾಡು (ಬೆಂಗ್ರಾ.ಜಿ)

ಅರಿಶಿಣ ಎರಚುವುದು: ಮಲೆನಾಡಿನ ಗೌಡಲು ಜನಾಂಗದವರಲ್ಲಿ ನೀರಿಗೆ ಅರಿಶಿಣ ಹಾಕಿ ವಧು ವರರಿಗೆ ಎರಚುವ ಶಾಸ್ತ್ರ

ಅರಿಶಿಣಗಂಬ: ಅತ್ತಿಯ ಮರದ ಟೊಂಗೆ

ಅರಿಶಿಣದ ಶಾಸ್ತ್ರ: ಮದುವೆಯಲ್ಲಿ ಗಂಡು ಹೆಣ್ಣಿಗೆ ಅರಿಶಿಣ ಎಣ್ಣೆಯಿಂದ ಮಾಡಿಸುವ ಸ್ನಾನದ ಶಾಸ್ತ್ರ

ಅರಿಶಿಣಬಲ: ಮದುವೆಗೆ ಮೊದಲು, ಮದುವಣಿಗರ ಮೈಗೆ ಅರಿಶಿಣ ಹಚ್ಚಲು ಪಂಚಾಂಗ ಪ್ರಕಾರ ಅರ್ಹ ಸುಮಂಗಲೆಯನ್ನು ಆಯ್ಕೆ ಮಾಡುವ ಶಾಸ್ತ್ರ

ಅರಿಶಿಣಬಾನ: ಲಗ್ನದ ಊಟ. **ಇರೂ:** *ಅರಿಶಿಣಕೂಳು*

ಅರಿಶಿಣಮೈ: ಹೊಸದಾಗಿ ಮದುವೆಯಾದ ವಧುವರರನ್ನು ಕುರಿತು ಹೇಳುವ ಮಾತು. ಕೆಟ್ಟ ಕಣ್ಣು ತಗುಲೀತು ಎಂದು ಅವರು ಇನ್ನೂ ಕೆಲವು ದಿನ ಕಟ್ಟುಪಾಡುಗಳನ್ನು ಅನುಸರಿಸಬೇಕಾಗುತ್ತದೆ. **ಪ್ರ:** ಇನ್ನೂ ಅರಿಶಿನ ಮೈ ಆರಿಲ್ಲ ಎಲ್ಲೂ ಹೋಗಬ್ಯಾಡರಿ (ಶಿವ.ಜಿ)

ಅರಿಶಿನ ಕುಟ್ಟುವ ಶಾಸ್ತ್ರ: ೧. ಮದುವೆ, ಮುಂಜಿಗಳ ದೇವರ ಸಮಾರಾಧನೆಯ ದಿನ ಗೋಧಿ ಹಿಟ್ಟು, ಅರಿಶಿನ ಬೆರೆಸಿ ವರ/ವಧು ಅಥವಾ ವಟುವಿನ ಸಮ್ಮುಖದಲ್ಲಿ ಮುತ್ತೈದೆಯರು ಅರಿಶಿನ ಕುಟ್ಟುವ ಶಾಸ್ತ್ರ ೨. ವಿವಾಹದ ಮೊದಲು ಅಥವಾ ಆ ದಿನವೇ ಮಾಡುವ ಶಾಸ್ತ್ರ. ಐದು ಜನ ಮುತ್ತೈದೆಯರು ಅರಿಶಿನ ಕುಟ್ಟುವುದು. ಮದುವೆಗೆ ಬೇಕಾದ ಮಂಗಳಕರ ಅರಿಶಿಣವನ್ನು ಹೀಗೆ ತಯಾರು ಮಾಡಿಕೊಳ್ಳುವ ಮೂಲಕ ಮದುವೆಯ ಕೆಲಸಗಳು ಆರಂಭವಾಗುತ್ತವೆ

ಅರಿಶಿನಕೊಂಬು: ಅರಿಷಿಣದ ಬೇರಿನ ತುಂಡು. ಮಂಗಳಕರವಾದುದೆಂಬ ನಂಬಿಕೆ ಇದೆ (ಶಿವ.ಜಿ)

ಅರಿಶಿನತೇಗ: *ಅಡಿನ ಕಾರ್ಡಿಫೋಲಿಯ:* ಹೆತ್ತೇಗದ ಮರ. ತೇಗದ ಮರದ ಒಂದು ಪ್ರಭೇದ. ಪೀಠೋಪಕರಣಕ್ಕೆ, ಕೆತ್ತನೆಗೆ, ಚರ್ಮ ಹದಮಾಡುವುದಕ್ಕೆ ಉಪಯೋಗಿಸುವ ಒಂದು ಮರ

ಅರಿಶಿನದ ಹಾಲು: ಬಿಸಿ ಹಾಲಿಗೆ ಬೆಲ್ಲ ಅರಿಶಿನದ ಪುಡಿ ಹಾಕಿ ಕುದಿಸಿದ ಹಾಲು. ಇದು ಶೀತ ಕಫವನ್ನು ಕಡಿಮೆಮಾಡುತ್ತದೆ (ಮಂಡ್ಯ.ಜಿ)

ಅರಿಶಿನಬಳೆ: ಮದುವೆಗೆ ಸಂಬಂಧಿಸಿದ ಶಾಸ್ತ್ರ. ಮದುವೆಗೆ ಮೂರು ದಿನದ ಹಿಂದೆ ಅರಿಶಿನ ಇಡುವ ಮೊದಲು ಬಳೆಗಾರನನ್ನು ಕರೆಸಿ ಮದುಮಗಳಿಂದ ಬಳೆಗಳಿಗೆ ಪೂಜೆ ಮಾಡಿಸಿ ಹೊಸಬಳೆಗಳನ್ನು ತೊಡಿಸುವ ಸಂಪ್ರದಾಯ (ಕೋಲಾ.ಜಿ)

ಅರಿಶಿನಬಾಳೆಹಣ್ಣು: ಮದುವೆಗೆ ಮೊದಲು ಒಪ್ಪಂದಾರ್ಥವಾಗಿ ಗಂಡಿನ ಕಡೆಯವರು ಹೆಣ್ಣಿನವರಿಗೆ ಸೀರೆ ರವಿಕೆ ಫಲ ತಾಂಬೂಲ ಕೊಟ್ಟು ಒಪ್ಪಿಕೊಳ್ಳುವ ಒಂದು ಶಾಸ್ತ್ರ (ಮಂಡ್ಯ.ಜಿ)

ಅರಿಶಿನಹಚ್ಚುವುದು: ಮದುವೆಯಲ್ಲಿ ಸುರಗಿ ನೀರು ಹರಿಸುವ ಮೊದಲು ಅರಿಶಿನ ಹಾಗೂ ಕೊಬ್ಬರಿ ಎಣ್ಣೆಯನ್ನು ವಧುವರರು ಹಚ್ಚಿಕೊಳ್ಳುವುದು (ಶಿವ.ಜಿ)

ಅರಿಶಿನಿಪಟ್ಟಿಕೂಗ್ಳು: ತಲೆಗೆ ಮುಡಿಯುವ ಒಂದು ಹೂವು (ಕೋಲಾ.ಜಿ)

ಅರಿಷಿಣದಾಟ: ಮದುವೆಯಲ್ಲಿ ಮದುಮಕ್ಕಳೊಂದಿಗೆ ನೆಂಟರಿಷ್ಟರು ಪರಸ್ಪರ ಅರಿಷಿಣ ಹಚ್ಚುತ್ತ ಸಂತಸಪಡುವ ಮನೋರಂಜನೆಯ ಆಟ (ಬೆಳ.ಜಿ)

ಅರಿಷಿಣ ಸೀರಿ: ನೋಡಿ– ಅರಿಶಿಣ್ ಪತ್ಲ. **ಇರೂ:** *ಸುರಗೀಸೀರೆ (ಬಳ್ಳಾ.ಜಿ)*

ಅರಿಷಿಣೆಣ್ಣೆ: ಮದುವೆಯಲ್ಲಿ ಮಾಂಗಲ್ಯಧಾರಣೆಯ ಅನಂತರ ನವದಂಪತಿಗಳನ್ನು ಹಸೆಯ ಮೇಲೆ ಕೂಡಿಸಿ ಮಾಡುವ ಶಾಸ್ತ್ರಗಳು (ಕೋಲಾ.ಜಿ)

ಅರಿಷ್ಣಕುಂಕುಮಕ್ಕೆ ಕರೆಯೋದು: ಹಬ್ಬ ಹರಿದಿನ, ಆರತಿ ಮೊದಲಾದ ಶುಭಕಾರ್ಯಗಳಿಗೆ ಮುತ್ತೈದೆಯರನ್ನು ಆಮಂತ್ರಿಸುವುದು (ಚಿತ್ರ.ಜಿ)

ಅರಿಷ್ಣಪಂಚೆ: ಮದುವಣಿಗ ಉಡುವ ಅರಿಶಿಣ ಹಚ್ಚಿದ ಬಿಳಿಯ ಪಂಚೆ

ಅರಿಷ್ಣಬೆಚ್ಚಾರಿ: ಅರಿಶಿಣ ಕೊಂಬನ್ನು ಉರಿವ ದೀಪದಿಂದ ಸುಟ್ಟು ರೋಗಿಗೆ ಬಿಸಿತಾಕಿಸುವ ಚಿಕಿತ್ಸೆ. **ಇರೂ:** *ಸುಟ್ಟಿಕೆ; ಚಿಟಿಕೆಹಾಕು ; ಸೂಡು (ಬೆಂಗ್ರಾ.ಜಿ)*

ಅರಿಸಪ್ಪಿ: ಸೌಮ್ಯನಾದ ವ್ಯಕ್ತಿ; ದಿಟ್ಟನಲ್ಲದವ

ಅರಿಸಿಣಬೂರುಗ: *ಕೊಕ್ಲೋಸ್ಪರ್ಮಮ್ ಗಾಸಿಪಿಯಮ್:* ಅರಿಸಿನ ಬಣ್ಣದ ಹೂ ಬಿಡುವ ಒಂದು ಅಲಂಕಾರಿಕ ಸಸ್ಯ (ಬೆಂಗ.ಜಿ); ಕಾಡು ಬೂರುಗ

ಅರಿಸಿಣಮಾದಲಿ: ಕಡಲೆಬೇಳೆಯಿಂದ ಮಾಡಿದ ಸಿಹಿ ಪದಾರ್ಥ (ಧಾರ.ಜಿ)

ಅರಿಸಿನ/ಅರಿಶಿಣ: *ಕರ್‌ಕುಮಾ ಲಾಂಗಾ:* ಒಂದು ಬಗೆಯ ಹಳದಿ ಬಣ್ಣದ ಗೆಡ್ಡೆ ಮತ್ತು ಅದರ ಪುಡಿ. ಅರಿಸಿನವು ಸಂತೋಷ ಮತ್ತು ಶುಭದ ಸಂಕೇತ. ಮಂಗಳಕಾರ್ಯಗಳಲ್ಲಿ ಕುಂಕುಮದೊಂದಿಗೆ ಅರಿಸಿನ ಇದ್ದೇ ಇರುತ್ತದೆ. ರೋಗನಿರೋಧಕ ಔಷಧೀಯ ಗುಣವಿರುವ ಇದನ್ನು ನಾನಾ ರೀತಿಯ ರೋಗಗಳಿಗೆ ಮದ್ದಾಗಿ ಬಳಸುತ್ತಾರೆ. ಅಡುಗೆಗೂ, ಸೌಂದರ್ಯ ಸಾಧನವಾಗಿಯೂ, ಕುಂಕುಮ ತಯಾರಿಗೂ ಬಳಸಲ್ಪಡುತ್ತದೆ (ಚಿತ್ರ ನೋಡಿ)

ಅರಿಸಿನಕಂಬಿ: ಪಂಚೆ, ಸೀರೆ ಮೊದಲಾದವುಗಳಲ್ಲಿ ಇರುವ ಹಳದಿ ಬಣ್ಣದ ಅಂಚು

ಅರಿಸಿನಗೋಟಲೆಹಕ್ಕಿ: ಒಂದು ಬಗೆಯ ಪಕ್ಷಿ.

ಅರಿಸಿನದತ್ತೂರ: *ಅಗ್ರೆಮೋನ್ ಮೆಕ್ಸಿಕಾನಾ:* ಔಷಧೀಗುಣವುಳ್ಳ ವಿಷಸಸ್ಯ. ಹಳದಿ ಬಣ್ಣದ ಹೂ ಬಿಡುವ ದತ್ತೂರದ ಒಂದು ಪ್ರಭೇದ

ಅರಿಸೇವೆ: ಹರಿಸೇವೆ ಪೂಜೆ

ಅರಿ ಹಾಕುದು: ಕಟಾವು ಮಾಡಿದ ಭತ್ತದ ಹುಲ್ಲನ್ನು ಗದ್ದೆಯಲ್ಲಿಯೇ ಸಾಲಿನಲ್ಲಿ ಒಣಗಲು ಹಾಕುವುದು (ಮಂಡ್ಯ.ಜಿ)

ಅರಿಹುಲ್ಲು: ಕೊಯ್ಲು ಮಾಡಿ ಸಾಲಾಗಿ ಇಟ್ಟ ಭತ್ತ ಸಹಿತವಾದ ಹುಲ್ಲು (ತುಮ.ಜಿ)

ಅರುಂಧತಿ: ವಶಿಷ್ಟ ಮಹರ್ಷಿಯ ಪತ್ನಿ ಮತ್ತು ಆ ಹೆಸರಿನ ನಕ್ಷತ್ರ

ಅರುಂಧತಿದರ್ಶನ: ಲಗ್ನದ ನಂತರ ವಧೂವರರಿಗೆ ಆಕಾಶದಲ್ಲಿ ಅರುಂಧತಿ ನಕ್ಷತ್ರವನ್ನು ತೋರಿಸುವ ಶಾಸ್ತ್ರ. ಅಸ್ಪೃಶ್ಯ ಜಾತಿಗೆ ಸೇರಿದ್ದರೂ ಮಹಾಸಾಧ್ವಿಯಾದ್ದರಿಂದ ಆಕೆ ನಕ್ಷತ್ರವಾಗಿದ್ದಾಳೆಂಬ ನಂಬಿಕೆಯಿದೆ. ಅದೇ ಕಾರಣಕ್ಕೆ ವಧೂವರರಿಗೆ ಅರುಂಧತಿ ನಕ್ಷತ್ರವನ್ನು ತೋರಿಸುವ ಸಂಪ್ರದಾಯ ಎಲ್ಲ ಜಾತಿಗಳವರಲ್ಲೂ ಇದೆ

ಅರುಂಧತಿಪೂಜೆ: ಕಂಕಣಧಾರಣೆ ನಂತರ ಅರುಂಧತಿಗೆ ಸಲ್ಲಿಸುವ ಪೂಜೆ (ಚಿತ್ರ.ಜಿ)

ಅರುಎಳೆಯುವುದು: ಚಾಪೆ ಮೊದಲಾದವುಗಳ ಅಂಚನ್ನು ಹೆಣೆಯುವುದು (ದಕ.ಜಿ)

ಅರುಕಟ್ಟುವುದು: ತೆಂಗಿನ ಗರಿಯ ತಡಿಕೆಯ ಅಂಚನ್ನು ಕಟ್ಟುವುದು (ದಕ.ಜಿ)

ಅರುಕಡ್ಡಿ: ಸಣ್ಣ ಬಿದಿರಿನ ಕೋಲು

ಅರುಕತ್ತಿ: ತೆಂಗಿನ ಗೊನೆ ಕೊಯ್ಯುವ ಕತ್ತಿ (ದಕ.ಜಿ)

ಅರುಕಲ್ಲ್ ಗುಂಡ್: ಒರಳಿನಲ್ಲಿ ರುಬ್ಬುವುದಕ್ಕೆ ಬಳಸುವ ಕಲ್ಲು. **ಇರೂ:** *ರುಬ್ಬುಗುಂಡು (ದಕ.ಜಿ)*

ಅರುಕಾಣಿಕೆ: ನೇಗಿಲುಗಳ ಮೇಲೆ ಹಾಕುವ ತೆರಿಗೆ

ಅರುಕು: ನಾಚಿಕೆ (ಮಂಡ್ಯ.ಜಿ)

ಅರುಕೋಟಲೆ: ಅಧಿಕ ತಾಪತ್ರಯ; ಕಷ್ಟ

ಅರುಗಣಿ: ಏಳುಗೂಟಗಳ ಹಲಗೆಯಂಥ ಸಾಧನ (ಬೆಂಗ.ಜಿ)

ಅರುಗದ್ದೆ: ವಿಶಾಲವಾದ ಗದ್ದೆ; ಫಲವತ್ತಾದ ಗದ್ದೆ

ಅರುಗು: ೧. ನೆಲದ ಮೇಲೆ ಸುಮಾರು ಮೂರು ಅಡಿ ಎತ್ತರಕ್ಕೆ ಗೋಡೆಯಲ್ಲಿ ಮಾಡಿರುವ ಉದ್ದನೆಯ ಸಮಪಟ್ಟಿ (ಚಿಮ.ಜಿ) ೨. ಪಕ್ಕ, ಬದಿ. **ಪ್ರ:** ಒಂದು ಅರಗೀನಲ್ಲೇ ನಡ್ಕೊಂಡು ಹೋಗ್ತಾ ಇದ್ದೆ

ಅರುಗುಲಿ: ಧರ್ಮಘಾತಕ; ಕೊಲೆಗಾರ (ಮೈಸೂ.ಜಿ)

ಅರುಗುಸವರುವುದು (ಕ್ರಿ): ತೆವರು ಕಡಿಯುವುದು; ಗದ್ದೆಯ ಬದು ಸಮಮಾಡುವುದು

ಅರುಗೋಲು: ಮೆದೆಯನ್ನು ಸಮವಾಗಿ ತಟ್ಟಲು ಬಳಸುವ ಮಣೆ; ತಟ್ಟೋಮಣೆ (ಬೆಂಗ್ರಾ.ಜಿ/ಮೈಸೂ.ಜಿ)

ಅರುಗ್ನೆ : ನೋಡಿ– ಅರಗಣೆ

ಅರುಗ್ಲ: ದೋಣಿ

ಅರುಗ್ಹಚ್ಚು: (ಕ್ರಿ): ಹೊಲದ ಅಂಚಿನ ನೆಲವನ್ನು ರಂಟೆ ಕುಂಟೆ ಹೊಡೆದು ಸಡಿಲಗೊಳಿಸುವುದು

ಅರುಣೆಗಡಿಗೆ: ೧. ಕುಡಿಕೆಗಳಲ್ಲಿ ಗೊಬ್ಬರ ತುಂಬಿ ಬೀಜಗಳನ್ನಿರಿಸಿ ಮೊಳಕೆ ಬಂದಮೇಲೆ ಪೂಜಿಸುವ ಸಂಪ್ರದಾಯ; ದೇವರಗಡಿಗೆ ೨. ಬಿಳಿ ಸುಣ್ಣದಿಂದ ಚಿತ್ರ ಬಿಡಿಸಿದ ಮದುವೆ ಶಾಸ್ತ್ರದ ಗಡಿಗೆ ಅಥವಾ ಕುಡಿಕೆ (ಮಂಡ್ಯ.ಜಿ). **ಇರೂ:** *ಅರ್ಣೆ, ಅರಣಿ*

ಅರುದುಂಬಕಾಲ: ಅರೆ ಬಂಡೆ ಕರಗುವ ಕಾಲ; ಕಲ್ಲುನೀರು ಕರಗುವ ಹೊತ್ತು; ಮಧ್ಯರಾತ್ರಿ (ರಾಮ.ಜಿ)

ಅರುಪತ್ತು: ಚರ್ಮರೋಗ (ಚಾಮ.ಜಿ)

ಅರುಪ್ಪರ: ಅರೆಬಂಡೆಯ ಚಪ್ಪರ (ಉಕ.ಜಿ)

ಅರುಬಲಸುನಿ: ಕುಂಬಾರರ ತಿಗರಿಯಲ್ಲಿರುವ ಹಸಿ ಮಣ್ಣಿನ ಮಡಕೆಗೆ ಅಂಚು ಬರಿಸುವುದು; ಅಂಚು ಕಟ್ಟುವುದು (ದಕ.ಜಿ)

ಅರುಬಿ: ಹರವಿ; ಮಣ್ಣಿನ ಕೊಡ

ಅರುಮುರು: ಅರಳುಮರಳು

ಅರುವಳಿ/ಅರುವಳ್ಳಿ: ಬೆಳೆ ಕೊಯ್ಲಿಗೆ ಬಳಸುವ ಮರದ ಹಿಡಿಯುಳ್ಳ ಚಂದ್ರಾಕಾರದ ಕುಡುಗೋಲು (ಚಿಬ.ಜಿ)

ಅರುವೆ: ಅಳಿವೆ; ನದಿಯು ಸಮುದ್ರಕ್ಕೆ ಸೇರುವ ಸ್ಥಳ (ದಕ.ಜಿ)

ಅರುವೆ ಕಟ್ಟುವುದು: ನದಿಯ ನೀರು ಸಮುದ್ರವನ್ನು ಸೇರದಂತೆ ಅಳಿವೆಯಲ್ಲಿ ತಡೆಯುಂಟಾಗುವುದು (ದಕ.ಜಿ)

ಅರುವೇಡಿ: ಮೆದು ಶರೀರದ ಹುಲ್ಲೇಡಿ; ಒಂದು ಬಗೆಯ ಏಡಿ; ಹಾಲೇಡಿ (ಶಿವ.ಜಿ)

ಅರುಸುಣ: ಅರಿಶಿಣ

ಅರುಸ್ತಿ: ನೋಡಿ– ಅರಸ್ತಿ

ಅರುಸ್ನು ಮುಂಡಿಗೆ: ಅರಶಿನ ಮುಂಡಿಗೆ; ಕಾಮಾಲೆ ರೋಗ (ಮೈಸೂ.ಜಿ)

ಅರೂಕಲ್ಲ್/ಅರೆಯುವ ಕಲ್ಲು: ಕಡೆಯುವ ಕಲ್ಲು; ರುಬ್ಬುವ ಕಲ್ಲು (ದಕ.ಜಿ)

ಅರೆ: ೧. ಒಡವೆಗಳನ್ನು ಇಡುವ ಪೆಟ್ಟಿಗೆ ೨. ಬಂಡೆ ೩. ಹರೆ ಎಂಬ ವಾದ್ಯ; ಉರುಮೆ ವಾದ್ಯ ೪. ಕವಲು ಹೊರಟ ಮರದ ಒಂದು ಭಾಗ (ಚಿಮ.ಜಿ). **ಪ್ರ:** ಓಗಯ್ಯಾ ಮರದ ಬಡ್ಡೆ ಕಡದ್ರೆ ಸೊಪ್ಪೋಟು ಕೆಳಕ್ಕೆ ಬೀಳುತ್ತೆ ಮ್ಯಾಕೆ ಒಟ್ಟುಂಬಾ ಮೇಯ್ತವೆ. ಅರೆ ಕಡದ್ರೆ ಯಾಪಾಟಿ ಅಂದ ೫. ರುಬ್ಬು; ನುಣ್ಣಗೆ ಮಾಡು. **ಪ್ರ:** ಕೋಳಿ ಕೇಳಿ ಮೆಣಸು ಅರೆದಂಗೆ ೬. ಚಕ್ರದ ಮಧ್ಯೆ ಇರುವ ಹನ್ನೆರಡು ಕಟ್ಟಿಗೆಯ ತುಂಡುಗಳು. **ಇರೂ:** *ಅರೆಕೋಲು, ಆರೇಕಾಲು (ತುಮ.ಜಿ)*

ಅರೆಕಡಲು: ಸುಮಾರು ಆರೇಳು ದೊಡ್ಡ ತೆರೆಗಳು ದಡಕ್ಕೆ ಅಪ್ಪಳಿಸಿದ ಮೇಲೆ ಬರುವ ಸಣ್ಣ ತೆರೆ (ದಕ.ಜಿ)

ಅರೆಕಯಿ ಗೋಡೆ: ಅರ್ಧ ಕಟ್ಟಿದ ಗೋಡೆ (ದಕ.ಜಿ)

ಅರೆಕರ್ಪೂರ: ಕರ್ಪೂರದ ವಾಸನೆ ಇರುವ ಒಂದು ಔಷಧೀ ಸಸ್ಯ. ನೆಗಡಿ, ಕೆಮ್ಮಿಗೆ ಇದರ ಬೇರಿನ ರಸ ಒಳ್ಳೆಯದು (ಚಾಮ.ಜಿ)

ಅರೆಕಲ್ಲು: ೧. ಖಾರ ಅರೆಯುವ ಕಲ್ಲು; ಸಮತಟ್ಟಾದ ಕಲ್ಲು ೨. ದೊಡ್ಡದಾದ ಕಲ್ಲಿನ ಬಂಡೆ (ತುಮ.ಜಿ). **ಪ್ರ:** ಬಟ್ಟೆ ಒಗದುಬುಟ್ಟು ಅರೆಕಲ್ಲು ಮ್ಯಾಲೆ ಒಣಗಿಸಿಕೊಂಡು ಬಂದೆ ೩. ನೆಲವನ್ನು ನಯವಾಗಿಸಲು ಉಜ್ಜಲು ಬಳಸುವ ಕಲ್ಲು (ದಕ.ಜಿ)

ಅರೆಕಲ್ಲುಬೀಳು (ನಾ): ಒಂದು ಜಾತಿಯ ಘಾಟು ವಾಸನೆಯ ಬಳ್ಳಿ. ಇದನ್ನು ಕುಟ್ಟಿ ಹೊಂಡದ ನೀರಿಗೆ ಬೆರೆಸಿದರೆ ಮೀನುಗಳು ಸೊಕ್ಕಿ ತೇಲುತ್ತವೆ. ಆಗ ಅವುಗಳ ಶಿಕಾರಿ ಮಾಡುವರು

ಅರೆಕಾಣಿ: ಯಾವುದೇ ವಸ್ತುವಿನ ನೂರರ ಇಪ್ಪತ್ತೆಂಟನೇ ಭಾಗ (ದಕ.ಜಿ)

ಅರೆಕಾಲು: ೧. ಎತ್ತಿನ ಬಂಡಿಯ ಗುಂಬ ಮತ್ತು ಚಕ್ರಕ್ಕೆ ಆಧಾರವಾಗಿರುವ ಮರದ ಪಟ್ಟಿ (ಮೈಸೂ.ಜಿ) ೨. ಕಾಲು ಭಾಗದ ಅರ್ಧ; ಎಂಟನೇ ಒಂದು ಭಾಗ (ದಕ.ಜಿ).

ಅರೆಕಾಸು: ೧. ಅರ್ಧಕಾಸು. **ಪ್ರ:** ಆಗೆಲ್ಲಾ ಅರೆಕಾಸಿಗೆ ಒಂದು ಸೇರು ರಾಗಿ ಸಿಕ್ತಿತ್ತು ೨. ಕನಿಷ್ಟ; ನಿಕೃಷ್ಟ. **ಪ್ರ:** ಯಥೇಚ್ಛವಾಗಿ ಬೆಳೆಯುತ್ತಿದ್ದರೂ ಅದಕ್ಕೆ ಅರೆಕಾಸಿನ ಬೆಲೆಯೂ ಇಲ್ಲ

ಅರೆಕೆ: ಬೇಟೆಯ ವೇಳೆ ಉಪಯೋಗಿಸುವ ಒಂದು ಸಾಧನ

ಅರೆಕೊದ್ದೆಲ್: ೧. ಅಪಕ್ವ ೨. ಯಕ್ಷಗಾನದಲ್ಲಿ ಸ್ವಲ್ಪ ಹೊತ್ತು ಮಾತ್ರ ರಂಗದ ಮೇಲೆ ಬರುವ ಬಣ್ಣದ ವೇಷ (ದಕ.ಜಿ)

ಅರೆಕೋಲು: ಅಂದಾಜು ಒಂದು ಮೀಟರ್ ಉದ್ದದ ಅಳತೆಯ ಕೋಲು (ಬಳ್ಳಾ.ಜಿ)

ಅರೆಕ್ಕ ಉರ್ಯ: ೧. ನಸುಗೆಂಪು ಬಣ್ಣದ ಕೋಳಿ (ದಕ.ಜಿ) ೨. ಅಂಕದ ಕೋಳಿಯನ್ನು ಗುರುತಿಸುವ ಒಂದು ಶಬ್ದ (ದಕ.ಜಿ)

ಅರೆಗಂಕಿ: ಒಕ್ಕುವಾಗ ಪೂರ್ತಿ ಕಾಳು ಉದುರದ ಜೋಳದ ತೆನೆ (ಬಳ್ಳಾ.ಜಿ)

ಅರೆಗಂಟು: ೧. ಸಡಿಲವಾದ ಗಂಟು ೨. ಅರ್ಧ ಹೊರೆ; ಸಣ್ಣ ಹೊರೆ (ದಕ.ಜಿ)

ಅರೆಗಾಳು: ತೆನೆ ತುಂಬ ಕಾಳಿಲ್ಲದಿರುವಿಕೆ

ಅರೆಗೆಲಸಿ: ಕೆಲಸವನ್ನು ಪೂರ್ತಿಗೊಳಿಸದೆ ಅರ್ಧಕ್ಕೆ ಕೈ ಬಿಡುವವನು (ದಕ.ಜಿ)

ಅರೆಗೋಲೆ: ಮೃತ್ಯುಕಾರಕವಾದ (ಕೊಡ.ಜಿ)

ಅರೆಗ್ಗಾಲ: ಬೇಸಿಗೆ ಕಾಲ (ಶಿವ.ಜಿ)

ಅರೆಚುಕ್ಕಿ ಗಿಡ: ಒಂದು ಔಷಧೀಯ ಸಸ್ಯ (ದಕ.ಜಿ) ಇದರ ಎಲೆ ಮತ್ತು ಕೊಬ್ಬರಿ ಎಣ್ಣೆಯ ಮಿಶ್ರಣವನ್ನು ಸುಟ್ಟ ಗಾಯಕ್ಕೆ ಮದ್ದಾಗಿ ಬಳಸುತ್ತಾರೆ (ಚಾಮ.ಜಿ)

ಅರೆಛಾಪು: ಮದ್ದಳೆಯ ಒಂದು ರೀತಿಯ ಬಡಿತ

ಅರೆಜಬ್ಬಲು: ಶಕ್ತಿರಹಿತವಾದ

ಅರೆಣ: ಸೊಂಟ; ನಡು (ದಕ.ಜಿ)

ಅರೆತಲೆಬೇರು: ಒಂದು ಔಷಧೀಯ ಸಸ್ಯ (ದಕ)

ಅರೆತಿಬ್ಬೆ: ಬೆಟ್ಟದ ಕಿಬ್ಬಿ; ಬೆಟ್ಟದ ಕೆಳಗಿನ ಪ್ರದೇಶ; ಇರುಳಿಗರ ವಾಸಸ್ಥಳವು ಸಾಮಾನ್ಯವಾಗಿ ಕಾಡುಬೆಟ್ಟಗಳ ಪಕ್ಕದಲ್ಲಿ ಅಥವಾ ಇಳಿಜಾರಿನಲ್ಲಿಯೇ ಇರುತ್ತದೆ. ಬೇಟೆಗೆ ಹೋಗುವಾಗ ಅರೆತಿಬ್ಬೆ ಹೋಗಿ ಬರುತ್ತೇನೆಂದು ಹೇಳುವುದು ವಾಡಿಕೆ

ಅರೆತುಳುವ: ಅರ್ಧ ಮೆದು ಅರ್ಧ ಗಟ್ಟಿಯಾದ ತೊಳೆಗಳಿರುವ ಒಂದು ಜಾತಿಯ ಹಲಸು

ಅರೆತ್ರಾಣಿ: ನಿತ್ರಾಣಿ; ಕ್ಷೀಣಕಾಯನಾದ ವ್ಯಕ್ತಿ (ದಕ.ಜಿ)

ಅರೆದುಂಡಿ: ಪದಾರ್ಥಗಳನ್ನು ಅರೆಯಲು ಬಳಸುವ ದುಂಡನೆಯ ದೊಡ್ಡಕಲ್ಲು (ಚಿಮ.ಜಿ); ಗುಂಡ್ಕಲ್ಲು (ಬೆಂಗ್ರಾ.ಜಿ)

ಅರೆನೆಯಿ: ಅರ್ಧ ಕಾಸಿದ ತುಪ್ಪ (ದಕ.ಜಿ)

ಅರೆಪಚ್ಚಿ: ಮಾತಿನಲ್ಲಿ ತೂಕವಿಲ್ಲದ; ಹೊಲಸು ಮಾತಾಡುವ

ಅರೆಪಾವು: ಅರ್ಧಪಾವು; ಪಾವಿನ ಅರ್ಧಭಾಗ **ನೋಡಿ–** ಪಾವು

ಅರೆಪಿಸ್ಕಟೆ: ಒಲ್ಲದ ಮನಸ್ಸಿನಿಂದ ಕಾರ್ಯ ನಿರ್ವಹಿಸುವುದು (ಚಿಮ.ಜಿ)

ಅರೆಪುಟ್ಟನಗಿಡ: ಒಂದು ಔಷಧೀಯ ಸಸ್ಯ. ಕಜ್ಜಿಗೆ ಇದರ ರಸವನ್ನು ಔಷಧಿಯಾಗಿ ಬಳಸುತ್ತಾರೆ (ಚಾಮ.ಜಿ)

ಅರೆಪೆಟ್ಟು: ಪ್ರಾಣಾಂತಿಕವಲ್ಲದ ಹೊಡೆತ. **ಪ್ರ**: ಹಾವನ್ನು ಅರೆಪೆಟ್ಟು ಮಾಡಿ ಬಿಡಬಾರದು

ಅರೆಬಸ್ಕಿ: ಅರ್ಧಬಸ್ಕಿ; ಮೊಳಕಾಲಿನವರೆಗೆ ಶರೀರ ಇಳಿಸಿ ಮೇಲೇಳುವಿಕೆ

ಅರೆಬಳ್ಳಿ: ನೋಡಿ– ಅರಬಳ್ಳಿ (ಚಾಮ.ಜಿ)

ಅರೆಬೀಜ: ಕೊತ್ತಂಬರಿ ಬೀಜ

ಅರೆಬೆಳ್ತಿಗೆ: ಬತ್ತವನ್ನು ಅರ್ಧ ಬೇಯಿಸಿ ತಯಾರಿಸಿದ ಅಕ್ಕಿ (ದಕ.ಜಿ). **ಇರೂ**: ಕುಸುಬಲಕ್ಕಿ; ಕುಚಲಕ್ಕಿ

ಅರೆಮಣೆ: ಬೀಜಬಿತ್ತುವಾಗ ಸಾಲುಮಾಡಲು ಬಳಸುವ ಸಾಧನ. ಅದರಲ್ಲಿ ಮೂರು ಗೂಟಗಳಿರುತ್ತವೆ

ಅರೆಮಣ್ಣು: ಕಂಚಿನ ಎರಕಕ್ಕೆ ಅಚ್ಚು ತಯಾರಿಸಲು ಗುಂಡು ಕಲ್ಲಿನಿಂದ ಅರೆದು ಪಾಕ ಬರಿಸಿದ ಮಣ್ಣು (ದಕ.ಜಿ)

ಅರೆಮರ್ಲ್: ಅರೆ ಮರಳು (ದಕ.ಜಿ)

ಅರೆಮಾಪಲ: ನೋಡಿ– ಅರಮರಲಕಾಯಿ

ಅರೆಮೆಣಸಿನಖಾರ: ಮೆಣಸಿನಕಾಯಿ ಬೆಳ್ಳುಳ್ಳಿ ಕಾಳುಮೆಣಸು ಉಪ್ಪು ಹುಣಸೆಹಣ್ಣು ಹಾಕಿ ರುಬ್ಬಿದ ಚಟ್ನಿ (ಮೈಸೂ.ಜಿ/ಚಾಮ.ಜಿ)

ಅರೆಮೋಡೆ: ಸ್ವಲ್ಪ ಕೆಳಬಾಗಿದ ಕೋಡುಗಳಿರುವ ಜಾನುವಾರು (ದಕ.ಜಿ)

ಅರೆವಾಸಿ: ಅರ್ಧಭಾಗ (ಕೋಲಾ.ಜಿ)

ಅರೆವೊತ್ತು: ಬೆಳಗಿನ ಜಾವ; ಬೆಳಿಗ್ಗೆ

ಅರೆಹಿಡಿ: ಮಳೆ ಬಂದಾಗ ಸಂಪೂರ್ಣ ನೆನೆಯದ ನೆಲದಲ್ಲಿ ಎತ್ತಿನ ಬಂಡಿ ಹೋಗುವಾಗ ಚಕ್ರಗಳಿಗೆ ಅರೆಬರೆ ಮೆತ್ತಿಕೊಳ್ಳುವ ಕೆಸರು (ಬಳ್ಳಾ.ಜಿ)

ಅರೆಹೊಡೆ (ಕ್ರಿ): ಬೀಜ ಬಿತ್ತಲು ಸಾಲುಹೊಡೆ; ರಾಗಿ ಪೈರಿನ ಹೊಲದಲ್ಲಿ ಹರಗುವುದು; ಬಿತ್ತನೆಯ ದಿನ ಗದ್ದೆಯ ಒಂದು ಮೂಲೆಯಲ್ಲಿ ಧಾನ್ಯಗಳಿಂದ ಮೂರು ಎಳೆ ಎಳೆಯುವ ಒಂದು ಸಂಪ್ರದಾಯ. **ಪ್ರ**: ಅರೆಹೊಡೆವುದರಲ್ಲಿ ಕೂರಿಗೆ ಹೊಡೆವುದರಲ್ಲಿ ಅವನು ನಿಷ್ಣಾತ

ಅರೇನ: ದನಗಳಿಗೆ ಅಂಟಿಕೊಂಡ ಕ್ರಿಮಿ

ಅರೇನವರು: ಕಾಡುಗೊಲ್ಲರ ಒಂದು ಪಂಗಡ

ಅರ್ಕ: ೧. ಹಾರಕ ೨. ಚಪ್ಪಲಿ ೩. ಚಹಾ ಗಿಡದ ಎಲ್ಲ ಭಾಗಗಳನ್ನು ನೀರಲ್ಲಿ ಕುದಿಸಿ ಮಾಡಿದ ಕಷಾಯ. ಹಾಲು ಸಕ್ಕರೆ ಸೇರಿಸಿ ತಂಪು–ಬಿಸಿ ಪಾನೀಯವಾಗಿ ಬಳಸುತ್ತಾರೆ (ಉಕ.ಜಿ)

ಅರ್ಕಂಜಿಕೊಟ್ಯ: ಜಾನುವಾರುಗಳಿಗೆ ಅಕ್ಕಚ್ಚು ತಯಾರಿಸುವ ಕೊಟ್ಟಿಗೆ (ದಕ.ಜಿ)

ಅರ್ಕಂಜಿಗೆಂದೆ: ೧. ಅಕ್ಕಚ್ಚು ೨. ಕಲಗಚ್ಚು ೩. ಬಣ್ಣದ ಜಾನುವಾರು (ದಕ.ಜಿ)

ಅರ್ಕಂಜಿತಪ್ಪು: ಜಾನುವಾರುಗಳಿಗೆ ಮೇವಾಗಿ ಬಳಸುವ ಬೈಹುಲ್ಲಿನೊಂದಿಗೆ ಅಕ್ಕಚ್ಚಿನಲ್ಲಿ ಬೆರಸಿ ಉಪಯೋಗಿಸಲಾಗುವ ವಿವಿಧ ರೀತಿಯ ಸೊಪ್ಪುಗಳು

ಅರ್ಕಂಜಿಮರಾಯಿ: ಅಕ್ಕಚ್ಚು ಹಾಕಿಡುವ ಮಣ್ಣಿನ ದೊಡ್ಡ ಪಾತ್ರೆ; ಕಲಗಚ್ಚಿನ ಬಾನಿ (ದಕ.ಜಿ)

ಅರ್ಕಂಡು: ಹರ್ಕಂಡು; ಹರಿದುಕೊಂಡು; ಕಿತ್ತುಕೊಂಡು

ಅರ್ಕಡ್ಡಿ: ಬಿದಿರಿನ ಕೋಲು (ಬೆಂಗ್ರಾ.ಜಿ/ಚಾಮ.ಜಿ). **ಇರೂ**: ಮುಳ್ಳಡ್ಡಿ

ಅರ್ಕಬೆರಕೆಸೊಪ್ಪು: ಹೊಲದ ಬದುಗಳಲ್ಲಿ ಸಿಗುವ ಸೊಪ್ಪು. ಸಾರಿಗೆ ಬಳಕೆಯಾಗುತ್ತದೆ (ಬೆಂಗ್ರಾ.ಜಿ)

ಅರ್ಕಮೆ: ಅಜೀರ್ಣ. **ಪ್ರ**: ಅರ್ಕಮೆಗೆ ಆಕಳ ಬೆಣ್ಣೆ ತಿಂದು ಹೊಕ್ಕುಳಿಗೂ ಹಚ್ಚಿದರೆ ಉಪಶಮನ (ದಕ.ಜಿ)

ಅರ್ಕಲ್: ೧. ಕಲ್ಲು ಭೂಮಿ ೨. ಗದ್ದೆಯಲ್ಲಿ ಪ್ರಥಮವಾಗಿ ಮಾಡುವ ಒಂದು ಸಾಲಿನ ಉಳುಮೆ

ಅರ್ಕಲಿ: ತುಂಬಾ ರುಚಿಯುಳ್ಳ ದುಬಾರಿ ಮೀನು (ಉಡು.ಜಿ)

ಅರ್ಕಲ್ಲು: ಖಾರ ಅರೆಯುವ ಕಲ್ಲು (ಉಕ.ಜಿ)

ಅರ್ಕಾಲು: ಪಾವಿನ ಅರ್ಧಭಾಗ; ಅರ್ಧಪಾವು (ಧಾರ.ಜಿ)

ಅರ್ಕಿ: ಶಿಕಾರಿಗೆ ಹೋದವರು ಬೊಬ್ಬಿರಿದು ಕೂಗುತ್ತಾ ಕಾಡಿನ ಮೂಲೆಗಳಲ್ಲಿ ಅಡಗಿರುವ ಪ್ರಾಣಿಗಳನ್ನು ಎಲ್ಲಾ ದಿಕ್ಕುಗಳಿಂದ ಓಡಿಸುವುದು (ದಕ.ಜಿ)

ಅರ್ಕಿಬೆರ್ಕಿ: ಕಲಬೆರಕೆ. ವಿವಿಧ ಧಾನ್ಯಗಳ ಬೆರಕೆ (ಉಕ.ಜಿ)

ಅರ್ಕಿಲ್: ೧. ಎರಡು ತೋಳುಗಳಿಂದ ಬಾಚಿ ಎತ್ತಿಕೊಳ್ಳುವಷ್ಟು ಪ್ರಮಾಣ (ದಕ.ಜಿ) ೨. ಬೇಸಿಗೆ (ಕೊಡ.ಜಿ)

ಅರ್ಕುಮುರ್ಕು: ಹರಕು ಮುರುಕು; ಚಿಂದಿ; ಚೂರುಪಾರು (ಮಂಡ್ಯ.ಜಿ)

ಅರ್ಕುಳಿ: ಒಂದು ಜಾತಿಯ ಮೀನು (ದಕ.ಜಿ)

ಅರ್ಕೆ: ೧. ಹರಕೆ ೨. ಅರಿಕೆ; ಮದುವೆಗೆ ಬನ್ನಿ ಎಂದು ಕರೆಯುವುದು ೩. ಲಗ್ನಪತ್ರಿಕೆಯನ್ನು ತಮ್ಮ ಆಪ್ತ ಬಂಧುಬಳಗದವರಿಗೆ ಮದುವೆಗೆ ಮುಂಚಿತವಾಗಿಯೇ ಕೊಟ್ಟು ಮನೆ ಮನೆಗೂ ಹೋಗಿ ವರನ ಊರಿನ ಜನರನ್ನು ಅಕ್ಕಿಕಾಳಿಗೆ ಬರ್ರಿ ಎಂದು ಕರೆಯುವ ಪದ್ಧತಿ (ಶಿವ.ಜಿ) ೪. ಬೇಟೆಯ ವೇಳೆ ಉಪಯೋಗಿಸುವ ಒಂದು ಸಾಧನ (ಚಾಮ.ಜಿ)

ಅರ್ಕೆಬೀಳು (ನಾ): ಅಡಕೆ ಬಳ್ಳಿ; ಮರದಲ್ಲಿ ಮೇಲೆ ಹಬ್ಬಿಕೊಂಡು ಬೆಳೆಯುವ ಒಂದು ಪರಾವಲಂಬಿ ಬಳ್ಳಿ. ಜಾನುವಾರುಗಳಿಗೆ ಭೇದಿಯಾದಾಗ ಇದನ್ನು ಜಜ್ಜಿ ತಿನ್ನಿಸುತ್ತಾರೆ (ಉಡು.ಜಿ)

ಅರ್ಕೈ: ೧. ಅರಕಲು ೨. ಪ್ರಥಮಬಾರಿ ಉಳುವುದು (ದಕ.ಜಿ)

ಅರ್ಕ್ಲ್ ಹೂಂಟೆ: ಗದ್ದೆಯನ್ನು ಆರಂಭದಲ್ಲಿ ಉಳುಮೆ ಮಾಡಿ ಹದ ಮಾಡುವ ವಿಧಾನ. ಗದ್ದೆಯ ಮಣ್ಣು ಮತ್ತು ಈಗಾಗಲೇ ಹಾಕಿದ ಗೊಬ್ಬರದೊಂದಿಗೆ ಎರಡು ಸಾಲು ಉಳುಮೆ (ಹೂಡು) ಮಾಡುವುದು

ಅರ್ಕ್ಲಾಯಿ: ಒಂದು ಜಾತಿಯ ಮೀನು (ದಕ.ಜಿ)

ಅರ್ಗಂಬಿ: ಮಣ್ಣಿನ ಕೊಡದ ಮೇಲೆ ಬಿಡಿಸುತ್ತಿದ್ದ ವಿವಿಧ ಬಗೆಯ ಚಿತ್ತಾರ (ಹಾಸ.ಜಿ)

ಅರ್ಗಕುಂಟೆ: ಹರಗುವ ಕುಂಟೆ. ಬೆಳೆಯ ಸಾಲುಗಳ ಮಧ್ಯೆ ಮಣ್ಣನ್ನು ಸಡಿಲಗೊಳಿಸಲು ಬಳಸುವ ಸಾಧನ

ಅರ್ಗತ್ತಿ: ಹರಗುವ ಕತ್ತಿ; ಕಳೆ ತೆಗೆಯಲು ಬಳಸುವ ಉಪಕರಣ. **ಇರೂ:** *ಕಳೆಗತ್ತಿ, ಕಳೆಕುಡಿಲು, ಕಳಾರಿ (ದಕ)*

ಅರ್ಗಾಗು: ಅರುಗಾಗು; ದಾರಿ ಬಿಡು; ಸರಿದು ನಿಲ್ಲು. **ಪ್ರ:** ಅಯ್ಯಾವರು ಬರ್ತಾ ಇದ್ದಾರೆ ಅರ್ಗಾಗಿ (ಚಿಮ.ಜಿ)

ಅರ್ಗಾಡ: ಮಳೆ ಇಲ್ಲದೆ ಬೆಂದ ಭೂಮಿಯ ಸ್ಥಿತಿ (ಉಕ.ಜಿ)

ಅರ್ಗಾವು: ಅರೆಗಾವು; ಅರ್ಧಂಬರ್ಧ ಕಾಯ್ದು; ಪೂರ್ಣ ಕಾಯದ (ಉಕ.ಜಿ)

ಅರ್ಗಾಳು: ಅರೆಬರೆ ಕಾಳು ಕಟ್ಟುವುದು. ಭತ್ತದ ಬೆಳೆಗೆ ನೀರಿನ ಕೊರತೆಯುಂಟಾದಾಗ ಭತ್ತ ಸರಿಯಾಗಿ ಹಣ್ಣಾಗದೆ ಅರೆಗಾಳಾಗುವುದು (ಮಂಡ್ಯ.ಜಿ)

ಅರ್ಗಿಲ್ ಮುಡಿ: ಅಕ್ಕಿಯ ಮುಡಿಯಲ್ಲಿ ಒಂದು ವಿಧ (ದಕ.ಜಿ)

ಅರ್ಗು: ಪಕ್ಕ; ಅಂಚು; ಬದಿ; **ಪ್ರ:** ಗೋಡೆ ಅರ್ಗಿಲಿ ಹಾವು ಹೋಗ್ತಿತ್ತು

ಅರ್ಗೂಡು: ನೇಗಿಲಿನ ಜೊತೆಯಲ್ಲಿ ಬಳಸುವ ಸಾಧನ

ಅರ್ಗೆಂಟು: ಹಟ; ಚಂಡಿ

ಅರ್ಗೆಡ್ಸ: ಬೆಳೆಯನ್ನು ಕೆಡಿಸುವ, ಹಾಳು ಮಾಡುವ ಮಳೆ. ಹೊಲಗದ್ದೆಗಳಲ್ಲಿ ಬೆಳೆಯನ್ನು ಕೊಯ್ದು ಅರಿಗಳನ್ನು ಒಣಹಾಕಿರುವಾಗ ಬೀಳುವ ಮಳೆ (ಉಕ.ಜಿ)

ಅರ್ಗೇಡಿ: ಅರಿವುಗೇಡಿ; ಬುದ್ಧಿಇಲ್ಲದವನು; ಅರಿವಿಲ್ಲದವನು (ಗುಲ್ಬ.ಜಿ)

ಅರ್ಗೋಟು: ಪೂರ್ಣ ಬೆಳೆಯದ ಅಡಿಕೆ (ಉಕ.ಜಿ)

ಅರ್ಗೋಟ್ನ/ಅರ್ಗೋಟ್ನಕೊನೆ: ಅರ್ಧ ಹಣ್ಣಾದ ಅಡಿಕೆಯ ಗೊನೆ (ಉಕ.ಜಿ)

ಅರ್ಚಟ್ಲೆಬಳ್ಳಿ: ಔಷಧಿಗುಣವುಳ್ಳ ಒಂದು ಗಿಡ. ಆಹಾರ ಸಸ್ಯವಾಗಿಯೂ ಬಳಕೆ (ಬೆಂಗ್ರಾ.ಜಿ)

ಅರ್ಚನಕಟ್ಟ್: ತೆಂಗಿನ ಎಳೆಗರಿಯಲ್ಲಿ ಮಾಡಿದ ದೈವದ ಪ್ರತೀಕ (ದಕ.ಜಿ)

ಅರ್ಚಿ: ಕಣ್ಣುಬೇನೆ (ಬಳ್ಳಾ.ಜಿ)

ಅರ್ಜಮುಂಡಗೆ: ಮುಂಡಗೆಯ ಒಂದು ತಳಿ; ಮಲೆನಾಡಿನ ಕಾಡುಗಳಲ್ಲಿನ ವಿಷಪೂರಿತ ಗಿಡ. ಬದನೆ ಗಿಡದಂತಹ ಈ ಗಿಡದ ಮೇಲೆಲ್ಲ ಸೂಕ್ಷ್ಮ ಮುಳ್ಳುಗಳಿರುತ್ತವೆ. ಹತ್ತಿರ ಹೋದರೆ ಸಾಕು ಮುಟ್ಟದಿದ್ದರೂ ಅದರ ಚುಂಗನ್ನು ಉದುರಿಸುತ್ತವೆ. ಇದು ತಾಗಿದರೆ ಬೆಂಕಿ ತಾಗಿದಂತೆ ಮೈ ಉರಿ ಜ್ವರ ಬರುತ್ತದೆ. ಸಂಕಟ ವಿಪರೀತವಾಗಿ ವಾಂತಿಯಾಗುತ್ತದೆ

ಅರ್ಜಿಮೀನು: ಸುಮಾರು ನಾಲ್ಕು ಅಂಗುಲ ಉದ್ದವಿರುವ ಮೀನು. ಇದರ ಸಾರು ಬಹಳ ರುಚಿಯಾಗಿರುತ್ತದೆ (ಚಿಮ.ಜಿ)

ಅರ್ಜುನ: ಮತ್ತೀಮರ (ಕೊಡ.ಜಿ)

ಅರ್ಜುನ ಮೀನು: ಬಿಳಿಯ ಬಣ್ಣ ಹೊಂದಿರುವ ಚಿಕ್ಕಗಾತ್ರದ ಮೀನು (ಚಿಮ.ಜಿ)

ಅರ್ಜುನಜೋಗಿಗಳು: ಕಿನ್ನರಿ ಹಿಡಿದು ಹಾಡುವ ಕಲಾವಿದರು. ಪಾಂಡವರ ವಂಶದವರೆಂದು ಹೇಳಿಕೊಳ್ಳುವ ಈ ಜೋಗಿಗಳು ಮಹಾಭಾರತ ಅದರಲ್ಲೂ ವಿಶೇಷವಾಗಿ ಅರ್ಜುನನನ್ನು ಕುರಿತು ಹಾಡುತ್ತಾರೆ.

ಅರ್ಜುಮರಾತ್ರಿ: ಮಧ್ಯರಾತ್ರಿ (ತುಮ.ಜಿ)

ಅರ್‌ಜೆಡ್: ಅತಿಜೊಳ್ಳು; ಭತ್ತದ ಬೆಳೆಗೆ ನೀರಿನ ಪ್ರಮಾಣ ಕಡಿಮೆಯಾಗಿ ಜೊಳ್ಳಾದ ಭತ್ತ (ದಕ.ಜಿ)

ಅರ್ಣೆ: ಒಡ್ಡು

ಅರ್ತಿ: **ನೋಡಿ–** ಅತ್ತಿ

ಅರ್ತು: ಆಸೆ; ಬಯಕೆ (ದಕ.ಜಿ). **ಇರೂ:** *ಅರ್ತ್ಯ*

ಅರ್ತುಕ್ಡ್ಲು: ಹರಿತವಾದ ಕುಡುಗೋಲು (ಹಾಸ.ಜಿ)

ಅರ್ತೆ: ಹರ್ತೆ; ಚಿಕ್ಕ ಕುಂಟೆಗಳಲ್ಲಿ ಹರಗುವುದು

ಅರ್ತೆಗುಂಟೆ: ಅರತೆ ಹೊಡೆಯಲು ಬಳಸುವ ಕುಂಟೆ



ಅರ್ಧ ಮೂಲಗೇಣಿ: ಭೂಮಾಲೀಕನಿಗೆ ನಿಶ್ಚಿತ ಹಣವನ್ನು ಕೊಟ್ಟು ಆಸ್ತಿಯನ್ನು ಪಡೆದುಕೊಳ್ಳುವ ಶಾಶ್ವತ ಗೇಣಿ (ದಕ.ಜಿ)

ಅರ್ಧ ಹೇಳೋ ಮಾತು: ಒಗಟು ಎಂಬುದಕ್ಕೆ ಗೊಂಡರು ಬಳಸುವ ಪದ (ಉಕ.ಜಿ)

ಅರ್ಥಗಾರ: ತಾಳಮದ್ದಳೆಯ ಪಾತ್ರಧಾರಿ (ದಕ.ಜಿ)

ಅರ್ಥದಾರ: ಕಥೆಯ ಹಂದರವನ್ನು ಶ್ರೀಸಾಮಾನ್ಯರಿಗೆ ತಿಳಿಯುವಂತೆ ಬಿಡಿಸಿ ಹೇಳುವ ವ್ಯಕ್ತಿ (ಬೆಳ.ಜಿ)

ಅರ್ದಕೋಲು: ಚೌಕಾಕೃತಿಯ ವಿನ್ಯಾಸವಿರುವ ಸೀರೆ

ಅರ್ದಕ್ಕೆ ಕಟ್ಟು: ಕೋಳಿ ಅಂಕದಲ್ಲಿ ಹೋರಾಡಿ ಸಾಯುವ ಕೋಳಿಯನ್ನು ಸ್ಪರ್ಧಿಗಳಿಬ್ಬರೂ ಹಂಚಿಕೊಳ್ಳಬೇಕು ಎಂಬ ಷರತ್ತಿನ ಮೇಲೆ ಕೋಳಿಗಳನ್ನು ಕಣಕ್ಕಿಳಿಸುವುದು (ದಕ.ಜಿ)

ಅರ್ದನಾರೀಶ್ವರ: **ನೋಡಿ–** ಅರ್ಧನಾರಿ

ಅರ್ದಲ: **ನೋಡಿ–** ಅರದಳ

ಅರ್ದಹೂ: ಬಣ್ಣದ ದಡಿಯಲ್ಲಿ ಬರುವ ಹೂವಿನ ಅರ್ಧಭಾಗವಿರುವ ವಿನ್ಯಾಸ

ಅರ್ದುಡ್ಡೆ: ಮಾಂಸದ ಹಂಚಿಕೆಯ ಪ್ರಮಾಣ. ಮನೆಯ ಜನಸಂಖ್ಯೆಯನ್ನು ಆಧರಿಸಿ ನಿರ್ಧಾರವಾಗುವ ಗುಡ್ಡೆಗಳ ಸಂಖ್ಯೆ ಅಥವಾ ಪ್ರಮಾಣ (ಕೋಲಾ.ಜಿ)

ಅರ್ಧಂಗಿ ಬ್ಯಾನಿ: ಅರ್ಧಾಂಗವಾಯು; ಲಕ್ವ; ಪಕ್ಷವಾಯು (ಶಿವ.ಜಿ)

ಅರ್ಧಚಂದ್ರ: ಮೂಗಿಗೆ ಧರಿಸಿಕೊಳ್ಳುವ ಅರ್ಧ ಚಂದ್ರಾಕಾರದ ಒಂದು ಆಭರಣ (ದಕ.ಜಿ)

ಅರ್ಧನಾರಿ: ೧. ನಾಗಮಂಡಲದಲ್ಲಿ ದೇಹದ ಕೆಳಭಾಗದಲ್ಲಿ ನಾರಿಯ ವೇಷ, ಮೇಲ್ಭಾಗದಲ್ಲಿ ಪುರುಷನ ಉಡುಪು ಧರಿಸಿದ ನಾಗಕನ್ನಿಕೆ ಎನ್ನಿಸಿಕೊಳ್ಳುವ ಕಲಾವಿದ. ಮಂಡಲದ ಸುತ್ತ ನಾಗಪಾತ್ರಿಯ ಜೊತೆ ಈತ ನರ್ತಿಸುತ್ತಾನೆ ೨. ದಕ್ಷಿಣ ಕನ್ನಡದ ವೈದ್ಯರ ಮೇಳದಲ್ಲಿ ಅರ್ಧನಾರೀಶ್ವರ ವೇಷ ತೊಟ್ಟು ಡಮರು ಹಿಡಿದಿರುವ ವ್ಯಕ್ತಿ. ಈತ ಎಲ್ಲ ಗಣಗಳಿಗೆ ಒಡೆಯನಾದ ಈಶ್ವರನ ಪ್ರತಿರೂಪವೆಂದು ನಂಬಿಕೆ (ದಕ.ಜಿ)

ಅರ್ಧನಾರೀಶ್ವರ ವೇಷ: ಬುಡ್ಗ ಜಂಗಮರಲ್ಲಿ ಭಿಕ್ಷೆ ಬೇಡುವಾಗ ಹಾಕುವ ವೇಷ

ಅರ್ಧಪಾವು/ಅರ್ಪಾವು: ೧. ಅರ್ಧಪಾವು ೨. ಪಾವಿನಲ್ಲಿ ಅರ್ಧಭಾಗ; ಸೇರಿನ ಎಂಟನೇ ಒಂದುಭಾಗ ೩. ಧಾನ್ಯ, ಎಣ್ಣೆ, ತುಪ್ಪ ಮೊಸರನ್ನು ಅಳೆಯಲು ಬಳಸುವ ಸೇರಿನ ಎಂಟನೇ ಒಂದು ಅಳತೆಯ ಅಳೆಯುವ ಸಾಧನ (ಬೆಂಗ್ರಾ.ಜಿ)

ಅರ್ಧಮಂಡಲ: ನಾಗಮಂಡಲ ಆಚರಣೆಯಲ್ಲಿ ಎಂಟು ಗಂಟುಗಳಿರುವ ಏಳು ಹೆಡೆಯ ಸರ್ಪದ ಚಿತ್ರಣವಿರುವ ಮಂಡಲದ ರಚನೆ (ದಕ.ಜಿ)

ಅರ್ಧಮಾನ್ಯ: ೧. ಕಂದಾಯದಲ್ಲಿ ಅರ್ಧ ರಿಯಾಯಿತಿಯನ್ನು ಪಡೆದಿರುವ ಭೂಮಿ ೨. ಅಲ್ಪ ಗೇಣಿ ದರದಲ್ಲಿ ಕೊಡುವ ಭೂಮಿ

ಅರ್ಧಾ: ಒಂದು ಪಾವಿನಲ್ಲಿ ಸಮನಾದ ಎರಡು ಭಾಗ (ಶಿವ.ಜಿ)

ಅರ್ನಾಟ್ಗಿ: ಅಲ್ಪಾಯು; ಅರೆವಯಸ್ಸಿನವ (ಉಕ.ಜಿ)

ಅರ್ನಾರಿ: ಅರೆನಾರಿ; ಹೆಣ್ಣಿಗ (ದಕ.ಜಿ)

ಅರ್ಪಸ: ೧. ಬರ ೨. ಅಪರೂಪ (ಮಂಡ್ಯ.ಜಿ). **ಇರೂ:** *ಅರ್ಪಣ*

ಅರ್ಪಾರ್: ಯಾವುದೇ ಆಧಾರ ಇಲ್ಲದೆ ಮೂರ್ತಿಮಾಡಿ ನಿಲ್ಲಿಸುವುದು

ಅರ್ಪೆ: ಸೋಸುವ ಬಟ್ಟೆ (ದಕ.ಜಿ)

ಅರ್ಬಟಕ್ಯಾ: ಅರೆ ಕೆಟ್ಟವ; ಒಂದು ಬೈಗುಳ (ಉಕ.ಜಿ)

ಅರ್ಬಡಿಸು (ಕ್ರಿ): ೧. ಆರ್ಭಟಿಸು ೨. ತರಾತುರಿ ಮಾಡು; ಆತುರಪಡಿಸು

ಅರ್‌ಬಳ್ಳಿ: ೧. ಬೆಳೆಯನ್ನು ಕುಯ್ಯಲು ಉಪಯೋಗಿಸುವ ಸಾಧನ ೨. ಒಂದು ಕಾಡುಬಳ್ಳಿ

ಅರ್ಬಾಡು: ಕೆಲಸಮಾಡುವಂತೆ ಅವಸರಿಸುವ, ಎಲ್ಲರನ್ನು ಹುರಿದುಂಬಿಸುವ ವ್ಯಕ್ತಿಯ ನಡವಳಿಕೆಯನ್ನು ಈ ಮಾತಿನಿಂದ ಸೂಚಿಸುತ್ತಾರೆ (ಚಿಮ.ಜಿ)

ಅರ್ಬುಲ್ಲು: ತುಳಿಸದೆ ಇರುವ ಬತ್ತದ ಹುಲ್ಲು

ಅರ್ಬೆಬಳ/ಅರ್ಬೆಬಳ್ಳ: ಅರಿವೆದಳ; ಒಂದಂಗುಲ ಅಗಲದ ಒಂದಡಿ ಉದ್ದದ ಚಿಂದಿ ಬಟ್ಟೆ ತುಂಡು. **ಪ್ರ**: ೧. ಸೀಮೆ ಎಣ್ಣೆ ಬುಡ್ಡಿಗೆ ಅರ್ಬೆಬಳದ ಬತ್ತಿ ಹಾಕು ೨. ಒಂದು ಅರ್ಬೆಬಳ ತಕೊಬಾ ಗಾಯಕ್ಕೆ ಕಟ್ಬನ (ಮಂಡ್ಯ.ಜಿ/ಹಾಸ.ಜಿ)

ಅರ್ಮರ: ಕಾಕಿ ಹಣ್ಣಿನ ಮರ

ಅರ್‌ಮ್ಯಾಳೆ: ಅರ್ಧಕತ್ತು. ಪ್ರ : ಅರ್‌ಮ್ಯಾಳೆ ಕೂದು ಬಟ್ಟವ್ನೆ (ಬೆಂಗ.ಜಿ)

ಅರ್ಯ: ಚಿಕ್ಕ ಪಾತ್ರೆ

ಅರ್ಯಾಣ: ಅರಣ್ಯ; ಅಡವಿ.

ಅರ್ಲಹಾಳಿ: ಹಾಳಿಯನ್ನು ಒಂದೇ ಎತ್ತರದಲ್ಲಿ ಇಡಲು ಹಾಗೂ ಕಳೆಯ ನಿಯಂತ್ರಣ ಮಾಡುವುದಕ್ಕಾಗಿ ಹಾಳಿಯ ಮೇಲೆ ಜಡ್ಡಿಗೆ ಕೆಸರಿನ ಮಣ್ಣು ಹಾಕುವುದು (ಉಕ.ಜಿ)

ಅರ್ಲಾಯಿ: ಗಟಿಯಾದ ಚಿಪ್ಪೂ, ರುಚಿಯಾದ ಮಾಂಸವೂ ಇರುವ ಒಂದು ಪ್ರಾಣಿ (ದಕ.ಜಿ)

ಅರ್ಲಿನ ಉಂಡೆ: ಜೇಡಿ ಮಣ್ಣಿನ ಉಂಡೆ; ಮಣ್ಣಿನ ವಸ್ತುಗಳನ್ನು ತಯಾರಿಸಲು ಕುಂಬಾರರು ತುಳಿದು ಹದಗೊಳಿಸಿದ ಮಣ್ಣಿನ ಉಂಡೆ

ಅರ್ಲು: ರಾಡಿ ಮಣ್ಣು (ಉಕ.ಜಿ)

ಅರ್ಲುಗಷ್ಟ: ಮಣ್ಣಿನ ಕಟ್ಟಡ ನಿರ್ಮಿಸಲು ಮಣ್ಣನ್ನು ಕಲೆಸಿ ಹದಗೊಳಿಸುವುದು. **ಇರೂ**: *ಕಲ್ಸು ಮಣ್ಣು (ಮೈಸೂ.ಜಿ)*

ಅರ್ಲುಗೊಂಬೆ ಆಟ: ಮರಕೋತಿ ಆಟ

ಅರ್ವಯಿ: ಹುಂಜದ ಕಾಲಿನ ಹಿಂಬದಿಯ ಕೆಳಭಾಗದಲ್ಲಿರುವ ಮುಳ್ಳಿನಂತಹ ಅಂಗ (ದಕ.ಜಿ)

ಅರ್‌ವಳೆಕುಡ್ಲು: ಬೆಳೆ ಕಟಾವು ಮಾಡಲು ಬಳಸುವ ಕುಡುಗೋಲು. ಇರೂ: *ಅರಬಳ್ಳಿ, ಅರವಳ್ಳಿ (ಚಿತ್ರ.ಜಿ) ಅರಿವಾಳ್ (ತುಮ.ಜಿ)*

ಅರ್ವಾಣ: ಹರಿವಾಣ; ದೊಡ್ಡತಟ್ಟೆ (ಚಾಮ.ಜಿ)

ಅರ್ವಾಳ: ಮರದ ಹೊಳಪಿಗಾಗಿ ಬಳಸುವ ವಸ್ತು

ಅರ್‌ವೆಬತ್ತಿ: ನೇಕಾರರು ನೀಡಿದ ಹೊಸ ಬಟ್ಟೆಯನ್ನು (ಪಾಣಿಪಂಚೆ) ನಿರ್ದಿಷ್ಟ ಆಕಾರದಲ್ಲಿ ಕತ್ತರಿಸಿ ಹೊಸೆದು ಮಾಡಿದ ಬತ್ತಿ

ಅರ್ಶಿನ ಕಾಗ್ದಾಳಿ: ಹೆಚ್ಚಾಗಿ ಹಳದಿ ಬಣ್ಣವಿರುವ ಹುಡಿಮಣ್ಣು (ಉಕ.ಜಿ)

ಅರ್ಸಂಡೆ: ಹಾಲು ಕರೆಯುವ ಪಾತ್ರೆ (ಚಾಮ.ಜಿ). **ಇರೂ**: ಅರುಮಣ

ಅರ್ಸಿಣ ಹತ್ಯಾದ: ಶುಭಯೋಗವಿದೆ ಎಂಬ ಅರ್ಥ ಕೊಡುವ ಮಾತು (ಧಾರ.ಜಿ)

ಅರ್ಸಿನ್‌ಗ್ವಾಯ್ಬಿ: ಅರಿಶಿಣ ಬಣ್ಣದ ಹೂ ಬಿಡುವ ಗೊರಟೆ ಗಿಡ (ಉಕ.ಜಿ)

ಅರ್ಸೆಹುಟ್ಟು: ಕಾಫಿ ಇತ್ಯಾದಿ ಸೋಸಲು ಇರುವ ಚಿಕ್ಕ ಸೌಟಿನಾಕಾರದ ಜಾಲರಿ; –ಚಹ ಜಾಳಿಗೆ (ಉಕ.ಜಿ)

ಅಲಂಜಿ: ಸುಣ್ಣದಕಲ್ಲು; ಭೂಮಿಯ ಬಾವಿಯಲ್ಲಿನ ಬಿಳಿ ನೀರು

ಅಲಕ : ನೋಡಿ– ಅಳಕ

ಅಲಕಮಲಕಿನ: ೧. ತೊಡಕುತೊಡಕಾದ ೨. ಸುಂದರವಾದ

ಅಲಗು: ೧. ಆಯುಧದ ಹರಿತವಾದ ಅಂಚು. **ಪ್ರ**: ಶಿವನ ಕೈಯಲಗು ಹೊಳೆದಾಂಗ (ಶಿವ.ಜಿ) ೨. ಹುಚ್ಚುನಾಯಿ; ಕೆರಳಿದ ನಾಯಿ (ಬೆಂಗ್ರಾ.ಜಿ) ೩. ಬೊಗಳು. **ಪ್ರ**: ಎಷ್ಟು ಹೇಳಿದರೂ ಕೇಳದೆ ಒಂದೇ ಸಮ ಅಲಗು ಹಾಕ್ತಾ ಅವೆ ೪. ಕಬ್ಬಿಣದ ನೇಗಿಲಿನಲ್ಲಿ ಬಳಸುವ ಚೂಪಾದ ಗುಳದಂಥ ಸಾಧನ (ಬೆಂಗ.ಜಿ)

ಅಲಗುಸೇವೆ: ಬೆಂಗಳೂರು ಕರಗದ ಸಂದರ್ಭದಲ್ಲಿ ನಡೆಯುವ ಒಂದು ವಿಧಿ. ವೀರಕುಮಾರರು ದೇವಿಯೆದುರು ನಿಂತು ಬಲಗೈ ಕತ್ತಿಯಿಂದ ಎದೆ ಮತ್ತು ಭುಜದ ಬಲಭಾಗದ ಮೇಲೆ ಮೂರು ಬಾರಿ ಹಾಗೂ ಎಡಭಾಗದ ಮೇಲೆ ಮೂರು ಬಾರಿ ಹೊಡೆದುಕೊಳ್ಳುವ ವಿಧಿ.

ಅಲಗೇರುವುದು: ಮೈದುಂಬಿದಾಗ ದೇವರು ಹೊತ್ತ ವ್ಯಕ್ತಿ ಕತ್ತಿಯ ಮೇಲೆ ನಿಲ್ಲುವ ಒಂದು ಆಚರಣೆ

ಅಲಗ್ಸರ: ಅಟ್ಟ ನಿರ್ಮಿಸಲು ತೊಲೆಗಳ ಮೇಲೆ ಒಂದರ ಪಕ್ಕ ಒಂದರಂತೆ ಸಂದು ಬಿಡದಂತೆ ಹಾಸಿರುವ ಹಲಗೆಗಳ ಸಾಲು (ಹಾಸ.ಜಿ); ಹಲಗೆ ಸೇವೆ (ಮೈಸೂ.ಜಿ)

ಅಲಗ್ಞಾಯುವುದು: ಘಟಪ್ರಭಾದಲ್ಲಿ ಬೀರಸಿದ್ಧೇಶ್ವರ ಜಾತ್ರೆಯಲ್ಲಿ ನಡೆಯುವ ಸಂಪ್ರದಾಯ

ಅಲಪಿ: ಹಲಿಪಿ; ಕುಂಟೇಬಿಲ್ಲೆ; ತೆಳ್ಳನೆಯ ದುಂಡು ಚಕ್ಕೆಗಲ್ಲು (ಬಳ್ಳಾ.ಜಿ). **ಪ್ರ**: ಕುಂಟ್ಗಲಿಪಿ

ಅಲಬ: ಅಗಲವಾದ ಎಲೆಗಳುಳ್ಳ ಮೇವಿನ ಗಿಡ. ಇದರ ಎಲೆಗಳು ಬೀಜಗಳೂ ಮೈಕೈ ಹಾಗೂ ಬಟ್ಟೆಗೆ ಅಂಟಿಕೊಳ್ಳುತ್ತವೆ (ಶಿವ.ಜಿ)

ಅಲವ: ೧. ಹಲುಬೆ. ಉತ್ತಹೊಲ ಮಟ್ಟಸ ಮಾಡುವ ಉದ್ದವಾದ ಹಲ್ಲುಗಳ ಮರದ ಸಾಧನ (ಬೆಂಗ.ಜಿ) ೨. ಶ್ರೇಷ್ಠವಾದ; ಹೆಚ್ಚಿನ; ದೊಡ್ಡ

ಅಲವಂಗ: ೧. ಹಲವು ರೂಪ ಅಥವಾ ಬಣ್ಣ ೨. ಚಂಚಲ ೩. ಸುಂದರವಾದ (ಮಂಡ್ಯ.ಜಿ)

ಅಲವಣಿಕೋಲು: ಕೋಲಾಟದಲ್ಲಿ ಒಂದು ಬಗೆ

ಅಲವರಿ: (ಕ್ರಿ): ಜೋರಾಗಿ ಕೂಗು; ಅಬ್ಬರಿಸು. **ಪ್ರ**: ಅಲವರಿದು ಗಂಗೆ ಹರಿದಳು

ಅಲವಿನ ಚೆಂಡ್: ಗಡುಸಾದ ಚೆಂಡು; ಒರಟಾದ ಚೆಂಡು (ಕೊಡ.ಜಿ)

ಅಲವು: ಉಕ್ಕು (ದಕ.ಜಿ)

ಅಲವೆ/ಅಲ್ವೆ: ೧. ಕಬ್ಬಿನ ರಸ ತೆಗೆದ ಸಿಪ್ಪೆಯನ್ನು ಒಟ್ಟಿರುವ ಬಣವೆ. ಕಬ್ಬಿನ ಹಾಲನ್ನು ಕಾಯಿಸಲು ಈ ಸಿಪ್ಪೆಯನ್ನು ಬಳಸಲಾಗುವುದು (ಚಿಮ.ಜಿ) ೨. ಹಲುಬೆ

ಅಲಸಂದಿ: ಹಲಸಂದೆ; ಒಂದು ದ್ವಿದಳ ಧಾನ್ಯ; **ಇರೂ:** *ಅಸುಂಡೆಕಾಳು; ತಡಗುಣಿ; ಕಾರಾಮಣಿ*

ಅಲಾತೆ: ಪೊರಕೆ

ಅಲಾದಿ: ೧. ಒಂಟಿ; ಪ್ರತ್ಯೇಕ ೨. ಯಾವಾಗಲೂ; ನಿರಂತರ (ಚಾಮ.ಜಿ). **ಇರೂ:** *ಅಲಾಯದ*

ಅಲಾಬಿ: ನೋಡಿ– ಅಲಾಯಿ

ಅಲಾಬಿಕುಣಿತ: ನೋಡಿ– ಅಲಾಯಿ ಕುಣಿತ

ಅಲಾಬಿವೇಷ: ಮೊಹರಂ ಹಬ್ಬದ ಸಮಯದಲ್ಲಿ ಹಾಕುವ ವೇಷ (ದಕ.ಜಿ)

ಅಲಾಬಿ ಸ್ನಾನ: ಮೊಹರಂ ಹಬ್ಬದ ಮುಕ್ತಾಯಕ್ಕೆ ಮುಂಚೆ ಮಾಡುವ ಸ್ನಾನ (ದಕ.ಜಿ)

ಅಲಾಬೆಲ್ಲಾ: ಅನುಮತಿ ನೀಡುವುದು. ಮದುವೆಯ ಹಿಂದಿನ ದಿನ ಎದುರುಗೊಳ್ಳುವ ಕಾರ್ಯಕ್ರಮದಲ್ಲಿ ಬೀಗರ ಕಡೆಯ ಮಹಿಳೆಯರಿಗೆ ಪರಸ್ಪರ ಕುಂಕುಮ ಕೊಟ್ಟು ಅಪ್ಪಿಕೊಂಡು ವಧು ವರರಿಗೆ ಧಾರೆ ಎರೆಯಲು ನೀಡುವ ಅನುಮತಿ (ಧಾರ.ಜಿ)

ಅಲಾಯ: ಮೊಹರಂ ಹಬ್ಬದಲ್ಲಿ ಮಸೀದಿಯ ಎದುರು ತೋಡಿದ ತಗ್ಗು; ಕೊಂಡ. **ಇರೂ:** *ಅಲಾಬಿ*

ಅಲಾಯಿ/ಅಲಾವಿ: ೧. ಅಗ್ನಿಕೊಂಡ. ಮೊಹರಂ ಹಬ್ಬದ ಹತ್ತನೇ ದಿನದಂದು ಹಿಂದೂಗಳೂ ಮುಸ್ಲಿಮರು ಬೆಂಕಿ ಕೊಂಡವನ್ನು ಹಾಯುವ ಸಂಪ್ರದಾಯವಿದೆ

ಅಲಾಯಿಕುಣಿತ/ಅಲಾಬಿಕುಣಿತ/ಅಲಾವಿಕುಣಿತ: ಮೊಹರಂ ಹಬ್ಬದ ಹತ್ತನೆ ದಿನ ಕೆಂಡದ ಹೊಂಡ ಮಾಡಿ ಅದರ ಸುತ್ತ ಧರ್ಮಯುದ್ಧದಲ್ಲಿ ಮಡಿದ ಧಾರ್ಮಿಕ ನಾಯಕನ ಜೀವನ ಚರಿತ್ರೆಯನ್ನು ಹಾಡಿನ ಮೂಲಕ ಹೇಳುತ್ತ ತಮಟೆಯ ತಾಳಕ್ಕೆ ಕುಣಿಯತ್ತ ಮಾಡುವ ಕುಣಿತ. ಇದು ಉತ್ತರ ಕರ್ನಾಟಕದಲ್ಲಿ ಕಂಡು ಬರುವ ವಿಶಿಷ್ಟ ಕಲೆ

ಅಲಾಯಿಹಾಡು: ಮೊಹರಂ ಹಾಡು; ಅಲಾವಿ ಹಾಡು (ಬಿಜಾ.ಜಿ)

ಅಲಾಯಿಹೆಜ್ಜೆ: ನೋಡಿ– ಅಲಾಯಿ ಕುಣಿತ (ರಾಯ.ಜಿ)

ಅಲಾಯ್ದು ಇಡು: ಬೇರೆಯಾಗಿಡು; ಪ್ರತ್ಯೇಕವಾಗಿರಿಸು. ಭತ್ತ ಅಳೆಯುವಾಗ ಮೊದಲ ಕೊಳಗ ಭತ್ತವನ್ನು ದೇವರಿಗೆ ಮುಡುಪಾಗಿ ಎತ್ತಿಟ್ಟು ನಂತರ ದೇವಾಲಯಕ್ಕೆ ನೀಡುವ ಪದ್ಧತಿಯನ್ನೂ ಅಲಾಯ್ದು ಇಡುವುದು ಎನ್ನುತ್ತಾರೆ (ಮಂಡ್ಯ.ಜಿ)

ಅಲಾವಿ: ನೋಡಿ– ಅಲಾಯಿ

ಅಲಾವಿಕುಣಿತ: ನೋಡಿ– ಅಲಾಯಿ ಕುಣಿತ

ಅಲಾವೆ: ಮುಸಲ್ಮಾನ ದೇವರು; ಅಲ್ಲಾ

ಅಲಾಹಬ್ಬ: ಉತ್ತರ ಕರ್ನಾಟಕದ ಗ್ರಾಮೀಣ ಪ್ರದೇಶಗಳಲ್ಲಿ ಹಿಂದೂ ಮುಸ್ಲಿಂ ಬಾಂಧವರು ಕೂಡಿ ಆಚರಿಸುವ ಹಬ್ಬ; ಮೊಹರಂ ಹಬ್ಬ (ಗುಲ್ಬ.ಜಿ)

ಅಲಿ: ೧. ಹೂವಿನಂತೆ ಸಿಂಗಾರವಾಗಿ ಕಾಣು ೨. ನಿಮಿತ್ತ

ಅಲಿಂಬೆ: ಅಣಬೆ (ಕೋಲಾ.ಜಿ)

ಅಲಿಕುಡಿಬಳ್ಳಿ: ಔಷಧೀಯ ಬಳ್ಳಿ. ನೆಗಡಿ ಆದಾಗ ಈ ಬಳ್ಳಿಯನ್ನು ಮೂಗಿನ ಬಳಿ ಇಟ್ಟುಕೊಳ್ಳುತ್ತಾರೆ (ಬಳ್ಳಾ.ಜಿ)

ಅಲಿಗಿನ ಗಿಡ: ಒಂದು ಸಸ್ಯ

ಅಲಿಚಾಮುಂಡಿ: ಒಂದು ದೈವ (ದಕ.ಜಿ)

ಅಲಿಭೂತ/ಆಲಿಭೂತ: ಒಂದು ಭೂತದ ಹೆಸರು. ಇದು ಮುಸ್ಲಿಂ ವ್ಯಕ್ತಿ ಸತ್ತ ನಂತರ ಪಡೆದ ರೂಪವೆಂಬ ನಂಬಿಕೆ

ಅಲಿಮಾನಕತ್ತಿ: ಒಂದು ಬಗೆಯ ಕತ್ತಿ

ಅಲಿಯಂಬಲಿ: ಭೂಮಿಹುಣ್ಣಿಮೆಯಲ್ಲಿ ತಯಾರಿಸುವ ವಿಶಿಷ್ಟ ಬಗೆಯ ಅಂಬಲಿ. ಅಕ್ಕಿ ಬೇಯಿಸಿ ಅದಕ್ಕೆ ಹಾಲು ಜೀರಿಗೆ ಏಲಕ್ಕಿ ಪುಡಿ ಹಾಕಿ ಕುದಿಸಿದ್ದು (ಮಲೆ)

ಅಲಿವಿ: ಬೆಳೆಯಲ್ಲಿನ ಕಳೆ ತೆಗೆಯಲು ಹೊಲದಲ್ಲಿನ ಕಸ ಅಥವಾ ಬೆಳೆಯ ಭಾಗಗಳನ್ನು ಒಂದೆಡೆಗೆ ಸೇರಿಸಲು ಬಳಸುವ ಸಾಧನ. ಹೊಲದಲ್ಲಿ ಈ ಸಾಧನಕ್ಕೆ ಎತ್ತುಗಳನ್ನು ಕಟ್ಟಿ ಹೊಡೆಯುತ್ತಾರೆ (ಕೋಲಾ.ಜಿ)

ಅಲಿವೆ: ೧. ಹೊಟ್ಟು; ಕಂಕಿ ೨. ಜಗ್ಗಲು ಉಪಯೋಗಿಸುವ ಸಾಧನ (ಚಿತ್ರ.ಜಿ)

ಅಲಿವೇಷ: ಪೀರ್ ದೇವರ ಹಬ್ಬದಂದು ತೊಡುವ ವೇಷ (ದಕ.ಜಿ)

ಅಲುಂಬಟ್ಗೆ: ಒಂದು ಜಾತಿಯ ಕಳೆಹುಲ್ಲು

ಅಲುಗುಂಟೆ: ಅಡ್ಡ ಸಾಲು ಹೊಡೆಯುವ ಕುಂಟೆ

ಅಲುಗ್ಹಾಕು (ಕ್ರಿ): ಬೊಗಳು; ಗಳ್ಳುಹಾಕು (ಮೈಸೂ.ಜಿ)

ಅಲುಬು: (ನಾ) ೧. ಅಲಬ; ಮಳೆಗಾಲದಲ್ಲಿ ಬಯಲಿನಲ್ಲಿ ಬೆಳೆಯುವ ಹಸಿರು ಸೊಪ್ಪು ೨. ಹಲುಬು; ಜಾಲಿಸು

ಅಲುಬೆ/ಅಲ್ಬೆ: ೧. ನೇಕಾರಿಕೆಯಲ್ಲಿ ಕಂಬಳಿ ದಾರವು ಅನುಕ್ರಮವಾಗಿ ಕೂರುವಂತೆ ಜೋಡಿಸಲು ಬಳಸುವ ಮರದ ಸಾಧನ (ತುಮ.ಜಿ) ೨. ಹಲುಬೆ; ಹೊಲದಲ್ಲಿ ಬಿತ್ತಿದ ನಂತರ ಕಾಳುಗಳು ಮಣ್ಣಿನಲ್ಲಿ ಮುಚ್ಚುವಂತೆ ಮಣ್ಣೆಳೆಯುವ ಸಾಧನ (ತುಮ.ಜಿ); ಅಲ್ಕಿತಟ್ಟಿ

ಅಲುವು: ಕವುಡಿ; ಕವಡೆ (ಕೋಲಾ.ಜಿ)

ಅಲೆಬಳ್ಳಿ: ಒಂದು ಔಷಧಿ ಸಸ್ಯ

ಅಲೇಗದ್ದ: ಗಿಡುಗ (ತುಮ.ಜಿ/ಚಿತ್ರ.ಜಿ)

ಅಲೈಬಾವ: ಮೊಹರಂ ಹಬ್ಬದಲ್ಲಿ ಕುಣಿಯುವ ವ್ಯಕ್ತಿ (ತುಮ.ಜಿ/ಚಿತ್ರ.ಜಿ) **ಇರೂ:** *ಆಲಿಬಾಬಾ*

ಅಲ್ಕ: ಹೆಣೆದ ತೆಂಗಿನ ಗರಿ

ಅಲ್ಕಿತಟ್ಟಿ: ಹಲುಬೆ; ಮಣ್ಣನ್ನು ಸಮಮಾಡುವ ಸಾಧನ

ಅಲ್ಕಿನ್‌ಗೂಡು: ಅಲಕಿನಗೂಡು (ಹಾಸ.ಜಿ) **ನೋಡಿ–** ಅಲಕು

ಅಲ್ಕು: ೧. ಅಲಕು; ದೇವರ ದೀಪ ಇಡುವುದಕ್ಕಾಗಿ ಗೋಡೆಗೆ ಅಳವಡಿಸಿದ ಸಾಧನ. ಇದರ ಮೇಲೆ ಸಗಣಿ ಉಂಡೆ ತಟ್ಟಿ ಹಣತೆ ಹಚ್ಚುತ್ತಾರೆ (ಮೈಸೂ.ಜಿ). **ಪ್ರ:** ಗೋಡೆ ಅಲ್ಕಿಗೆ ಹಸೀನ ಸಗಣಿ ತಗಂಬಾ ೨. ಕಳೆ ತೆಗೆಯಲು ಹಾಗೂ ಕಸ ಗೋರಿ ಎಳೆಯಲು ಬಳಸುವ ಉಪಕರಣ ೩. ಬತ್ತದ ಕಣಜ ೪. ಚಲಿಸು ೫. ಅಲ್ಲಾಡು. **ಪ್ರ:** ಗಾಳಿಗೆ ಕೆರೆ ನೀರು ಅಲ್ಕತ್ತಿತ್ತು (ಶಿವ.ಜಿ) ೬. ಕೂರಿಗೆ ಅಥವಾ ಶಿಲುಬೆಗೆ ಜೋಡಿಸುವ ಚೂಪಾದ ಮರದ ದಸಿ ೭. ರಾಗಿಯ ತೆನೆ; ಇಲುಕು ೮. ಬಳ್ಳಿಗಳಿಗೆ ಆಸರೆಯಾಗಿ ನಿಲ್ಲಿಸು ಆನಿಕೆ (ಚಿಮ.ಜಿ).

ಅಲ್ಗಾಣಿ: ಆ ಕಡೆ ಸುತ್ತಿ ಬಳಸಿ ಬರುವ ದಾರಿ (ಮಂಡ್ಯ.ಜಿ)

ಅಲ್ಗುಂಟೆ: ನೆಲವನ್ನು ಹಸನು ಮಾಡಲು ಬಳಸುವ ಸಾಧನ **ನೋಡಿ–** ಅಲ್ಕಿತಟ್ಟಿ

ಅಲ್ಗೆ: ಹಲಗೆ; ಬಂಡಿ ಹೊಡೆಯುವವನು ಕುಳಿತುಕೊಳ್ಳಲೆಂದು ಎತ್ತಿನ ಗಾಡಿಯಲ್ಲಿ ಹಾಕುವ ಮರದ ಹಲಗೆ



ಅಲ್ಗೆಗಾಡಿ: ಹಲಗೆಬಂಡಿ; ಹಲಗೆಗಳನ್ನೇ ಹಾಸಿ ಅಗಲವಾದ ತಳ ಏರ್ಪಡುವಂತೆ ರೂಪಿಸಿರುವ ಸರಕುಸಾಗಣೆ ಬಂಡಿ. ಇದರ ಚಕ್ರಗಳು ಕೂಡ ಹಲಗೆಗಳಿಂದಲೇ ನಿರ್ಮಿಸಲ್ಪಟ್ಟಿರುತ್ತವೆ

ಅಲ್ಟಿ: ೧. ಜೋಳದ ಹಿಟ್ಟು ಸುಣ್ಣ ಬೆಲ್ಲಗಳಿಂದ ತಯಾರಿಸಿದ ಜಿಗುಟು ಮಿಶ್ರಣ ೨. ಗಡಿಗೆಗೆ ತೂತು ಬಿದ್ದಾಗ ಅದನ್ನು ಮುಚ್ಚಲು ಬಳಸುವ ಬೆಲ್ಲ ಹತ್ತಿಗಳ ಮಿಶ್ರಣ; ಅಂಟು (ಧಾರ.ಜಿ/ಬಳ್ಳಾ.ಜಿ). **ಇರೂ:** *ಅರಟಿ; ಅಲ್ಪಿಸುಣ್ಣ; ಅಲ್ಪೆ*

ಅಲ್ಟೀಚು: ಗೋಲಿಯಾಟದಲ್ಲಿ ಗೋಲಿ ಹೊಡೆಯುವಾಗ ಗುರಿಗೆ ಸರಿಯಾಗಿ ಎಟುಕದಿದ್ದ ಸಂದರ್ಭದಲ್ಲಿ ತುಸು ಸರಿದು ಗುರಿ ಹಿಡಿಯುವುದು (ಬೆಂಗ್ರಾ.ಜಿ)

ಅಲ್ಟೆ: ರಸ ಹಿಂಡಿದ ಕಬ್ಬಿನ ಸಿಪ್ಪೆ (ದಾವ.ಜಿ)

ಅಲ್ಡು: ೧. ಕಾಲಿನ ಹರಡು; ಪಾದದ ಕೆಳಭಾಗದ ಒಳ ಪ್ರದೇಶದಲ್ಲಿರುವ ಗಟ್ಟಿಯಾದ ಉಬ್ಬಿದ ಭಾಗ ೨. ಹಿಮ್ಮಡಿಯ ಮೇಲ್ಭಾಗದ ಬುಗಟು

ಅಲ್ದಿನರು: ಭಕ್ತರು

ಅಲ್ಪಭೇದಿ ಸೊಪ್ಪು: *ಕ್ರೋಟನ್ ಸ್ಪಾರ್ಸಿಫ್ಲೋರಸ್*: ವಿರೇಚಕ ಗುಣವುಳ್ಳ ಒಂದು ಸಸ್ಯ. **ಇರೂ:** *ಜಾಪಾಳ ಗಿಡ; ಭೂತಾಳೆ ಭೈರವ ಗಿಡ*

ಅಲ್ಪಿಸರ: ದೃಷ್ಟಿ ತಾಗದಿರಲೆಂದು ಎತ್ತಿನ ಕೊರಳಿಗೆ ಹಾಕುವ ಒಂದು ಸರ (ಬಳ್ಳಾ.ಜಿ)

ಅಲ್‌ಬಲೆ ಚೆನ್ನಿ: ಅವತಾರಗೆಟ್ಟವಳು; ಬರೀ ಮಾತಿನ ಬೆಡಗಿ; ಚಾಲಾಕಿ ಹೆಣ್ಣು (ರಾಮ.ಜಿ)

ಅಲ್ಬು: **ನೋಡಿ–** ಅಲುಬು

ಅಲ್ಬೆ: ಅಲುಬೆ; ಹಲುಬೆ

ಅಲ್ಲ: ಹಸಿಶುಂಠಿ (ಬೆಂಗ.ಜಿ/ಗುಲ್ಬ.ಜಿ); ಕಾರಗೆಣಸು (ಉಕ.ಜಿ)

ಅಲ್ಲಂಗಾಯಿ: ಒಂದು ಜಾತಿಯ ಮರದ ಕಾಯಿ

ಅಲ್ಲಕ್ಕಮಲ್ಲಕ್ಕ: ಜೋಡಿಯಾಗಿ ಬೈಯುವುದಕ್ಕೆ ಉಪಯೋಗಿಸುವ ಪದ; ಸದಾ ಅಲಂಕಾರ ಮಾಡಿಕೊಂಡು ಸೋಮಾರಿಗಳಾಗಿ ಓಡಾಡುವ ಹೆಣ್ಣು ಮಕ್ಕಳನ್ನು ಒಳ್ಳೆ ಅಲ್ಲಕ್ಕ ಮಲ್ಲಕ್ಕಂದಿರ ಥರಾ ಎನ್ನುತ್ತಾರೆ (ಬೆಂಗ.ಜಿ)

ಅಲ್ಲಗಾಡಿ: ವ್ಯವಸಾಯದಲ್ಲಿ ಬಳಸುವ ಬಂಡಿ

ಅಲ್ಲಣಿ: ಮೇಳ

ಅಲ್ಲಣಿಗೆ: ಮಾಳಿಗೆಯ ಮೇಲೆ ಬಿದ್ದ ಮಳೆಯ ನೀರು ಕೆಳಗೆ ಬೀಳಲು ಇಟ್ಟಿರುವ ಕೊಳವೆ (ಚಿತ್ರ.ಜಿ); ದೋಣಿ (ಬೆಂಗ್ರಾ.ಜಿ)

ಅಲ್ಲತ್ತೆರ್: ಒಂದು ಸ್ತ್ರೀದೈವದ ಹೆಸರು (ದಕ.ಜಿ)

ಅಲ್ಲದೋರು: ಆಗದಿರುವವರು; ಶತ್ರುಗಳು (ರಾಮ.ಜಿ)

ಅಲ್ಲಾಟ: ೧. ವೈಯ್ಯಾರ ೨. ಧಿಮಾಕು ೩. ಕಂಪನ (ಬಳ್ಳಾ.ಜಿ)

ಅಲ್ಲಾಣೆ ಇಲ್ಲಾಣೆ: ಆ ಕಡೆ ಈ ಕಡೆ (ಮೈಸೂ.ಜಿ)

ಅಲ್ಲಾದಡಿಗೆ: ಬಗೆಬಗೆಯ ಅಡಿಗೆ

ಅಲ್ಲಿಕಡಲು: ತುಳು ಪಾಡ್ದನಗಳಲ್ಲಿ ಬರುವ ಒಂದು ಕಾಲ್ಪನಿಕ ಕಡಲು (ದಕ.ಜಿ)

ಅಲ್ಲಿಕೇರಿ: ೧. ಕೆರೆ ಅಥವಾ ಹಳ್ಳದ ದಂಡೆಯ ಊಟ (ಬಾಗ.ಜಿ) ೨. ದೀಪಾವಳಿಯ ನಂತರ ಹೆಂಗಸರು ಬುತ್ತಿ ಕಟ್ಟಿಕೊಂಡು ಹೋಗಿ ಬಸವನನ್ನು ಪೂಜಿಸಿ ಹೊಳೆ ದಂಡೆಯಲ್ಲಿ ಮಾಡುವ ಊಟ (ಧಾರ.ಜಿ)

ಅಲ್ಲಿಕ್ಕಳ: ಹಲ್ಲು ಇಕ್ಕಳ; ಹಲ್ಲುಗಳಿರುವ ಇಕ್ಕಳ

ಅಲ್ಲಿನ್‌ಚಾಣ: ಹಲ್ಲುಗಳಿಂದ ಕೂಡಿದ ಚಾಣ (ಕೋಲಾ.ಜಿ)

ಅಲ್ಲಿಪಿಲ್ಲಿಗಿಂಡಿ/ಅಲ್ಲೆಪಿಲ್ಲೆಗಿಂಡಿ: ದೀಪಾವಳಿ ಕಳೆದು ಶುಕ್ಲಪಕ್ಷದ ಐದನೆಯ ದಿನ ಊರ ಹೆಣ್ಣುಮಕ್ಕಳು ಮಾಡುವ ಆಚರಣೆಗೆ ಬಳಸುವ ಒಂದು ಸಣ್ಣ ಗಿಂಡಿ. ಈ ಗಿಂಡಿಗಳನ್ನು ಹಿಡಿದುಕೊಂಡು ಅವಿವಾಹಿತ ಕನ್ಯೆಯರು ಊರಬಾವಿ, ನದಿಗೆ ಹೋಗಿ ನೀರನ್ನು ಗಿಂಡಿಯಲ್ಲಿ ತುಂಬಿ ಪೂಜಿಸಿ, ಅಲ್ಲೆಪಿಲ್ಲೆ ಹಾಡುಗಳನ್ನು ಹಾಡುತ್ತ, ಮರಳಿ ಮನೆಗೆ ಬಂದು ಗಿಂಡಿಯನ್ನು ಇಟ್ಟು, ಮುಂದಿನ ಐದುದಿನಗಳಲ್ಲೂ ಪೂಜಿಸುತ್ತಾರೆ

ಅಲ್ಲಿಬೀಜ: *ಲೆಪಿಡಿಯಮ್ ಸಟೈವಮ್*: ಇದರ ಎಣ್ಣೆಯನ್ನು ಔಷಧಿಯಾಗಿ, ಸೊಪ್ಪನ್ನು ತರಕಾರಿಯಾಗಿ ಬಳಸುತ್ತಾರೆ

ಅಲ್ಲಿವಾರ ಪಾಕ: ಶುಂಠಿಯ ರಸವನ್ನು ಸಕ್ಕರೆ ಪಾಕದಲ್ಲಿ ಹಾಕಿ ಕುದಿಸಿ ಮಾಡಿದ ಲೇಹ್ಯ. ಇದು ಗಂಟಲು ಕೆರೆತ, ನೆಗಡಿ, ಕೆಮ್ಮಿಗೆ ಔಷಧಿ

ಅಲ್ಲಿಹರಿದಕಾಯಿ: ನೆಲಗಡಲೆಯ ಎಳೆಯ ಹೀಚು (ಚಿತ್ರ.ಜಿ)

ಅಲ್ಲೆ: ಹಲ್ಲೆ; ಎತ್ತಿನ ಗೊರಸು ಸವೆಯದಂತೆ ಕಟ್ಟುವ ಕಬ್ಬಿಣದ ಲಾಳ (ಚಿಮ.ಜಿ)

ಅಲ್ಲೆಕಡ್ಡಿ: ರೊಟ್ಟಿ ಇತ್ಯಾದಿಗಳನ್ನು ಎತ್ತುವ, ಮಗುಚಿ ಹಾಕುವ ಮರ ಅಥವಾ ಕಬ್ಬಿಣದ ಸಾಧನ (ಮಂಡ್ಯ.ಜಿ); ಮಗುಚೋ ಕೈ (ಚಾಮ.ಜಿ)

ಅಲ್ಲೆಪತ್ತ್: ಒಂದು ಬಗೆಯ ಆಟ (ದಕ.ಜಿ)

ಅಲ್ವಾಣ: ಹಾಲವಾಣ ಎಂಬ ಮರ (ಮೈಸೂ.ಜಿ/ಚಾಮ.ಜಿ). **ಇರೂ:** *ಹಾರಿವಾಣ; ಪಾರ್ವಾಳದ ಮರ*

ಅಲ್ವೆ: ೧. ಕಣದಲ್ಲಿ ಹುಲ್ಲು ತೆನೆಯನ್ನು ಎಳೆದುಕೊಳ್ಳಲು ಬಳಸುವ ಸಾಧನ ೨. ಲಳಿಗಿ; ಮೆದುನೆಲದಲ್ಲಿ ಬಳಸುವ ಕೂರಿಗೆ

ಅಲ್ವೆ ಅಲ್ಲು: ಹಲುಬೆಯಲ್ಲಿನ ಕಬ್ಬಿಣ ಅಥವಾ ಮರದ ಹಲ್ಲು (ತುಮ.ಜಿ)

ಅಲ್ವೆದಿಂಡು: ಹಲುಬೆಗಾಗಿ ಬಳಸುವ ಮರ (ತುಮ.ಜಿ)

ಅಲ್ವೆಮರ: ಹಲುಬೆ ತಯಾರಿಸುವ ಮರ

ಅಲ್ವೆಮೇಣಿ: ಹಲುಬೆ ಹಿಡಿದುಕೊಳ್ಳಲು ಇರುವ ಸಾಧನ (ತುಮ.ಜಿ)

ಅವಂಟಿ: ಅಳತೆಗಾರ; ಅಳತೆ ಗುತ್ತಿಗೆದಾರ (ಉಕ.ಜಿ)

ಅವಂಟಿಗ್ಯೊ ಪವಂಟಿಗ್ಯೊ: ನೋಡಿ– ಅಂಟಿಗೆ ಪಂಟಿಗೆ

ಅವಕಂಸ: ಕಿವಿಯ ಆಭರಣ

ಅವಖಳಿಮಳಿ: ಮಳೆಗಾಲಕ್ಕಿಂತ ಮುಂಚೆ ಬರುವ ಅನಿರೀಕ್ಷಿತ ಬೇಸಗೆಯ ಮಳೆ (ಉಕ.ಜಿ). **ಇರೂ:** *ಅವಖಾಡಮಳಿ*

ಅವಚು (ನಾ): ೧. ನೀರಿನ ಮೇಲೆ ಬೆಳೆದು ನಿಂತಿರುವ ಹಸಿರು ಪಾಚಿ; ಹಾಸು (ಬೀದ.ಜಿ). **ಇರೂ:** *ಅವಸೆ, ಹಾವಸೆ* (ಕ್ರಿ) ೨. ತಬ್ಬು; **ಪ್ರ:** ಕೂಸನ್ನ ಎರಡೂ ಕೈಯಿಂದ ಅವಚಿಕೊಂಡಳು

ಅವಟು: ಕೊರಳಿನ ಹಿಂಭಾಗ; ಹೆಕ್ಕತ್ತು

ಅವಡ ಚವಡ: ಅಂಟಿಗೆ ಪಂಟಿಗೆ (ಶಿವ.ಜಿ)

ಅವಡಿಗ್ಯಾ: ೧. ಕಾಳು ಅಳೆಯುವ ಕಸಬುದಾರ ೨. ಪಾತ್ರೆ ಮಾಡುವವ. **ಇರೂ:** *ಅವಟಿಗ್ಯಾ; ಕಂಚುಗಾರ*

ಅವಡಿಸಾಲು: ಒಂದು ಬಗೆಯ ಕುಣಿತ. ತುಳಸಿಪೂಜೆಯ ಕುಣಿತದ ಭಂಗಿ; ಕಲಾವಿದರು ಹಾಡಿಗೆ ತಕ್ಕಂತೆ ನಿಧಾನ ಗತಿಯಲ್ಲಿ ಹೆಜ್ಜೆ ಹಾಕುವ ಒಂದು ಗತ್ತು

ಅವಣೆ: ಮರಗಳ ಬುಡದಲ್ಲಿ ಬೇರಿನಿಂದ ಕಾಂಡಕ್ಕೆ ತಾಗಿ ಮೇಲೆದ್ದ ಹೊದಿಕೆ; ಮರದ ತಿರುಳಿನ ಹೊರಮೈಯಲ್ಲಿ ಕಾಣಿಸುವ ಗಂಟು (ದಕ.ಜಿ)

ಅವತಾಟ: ೧. ಅವಿತುಕೊಳ್ಳುವ ಒಂದು ಮಕ್ಕಳ ಆಟ ೨. ಮೈಗಳ್ಳತನ; ಕೆಲಸ ಕದಿಯುವಿಕೆ

ಅವತಾರ: ಮನುಷ್ಯ ರೂಪದಲ್ಲಿ ಭೂಮಿಯ ಮೇಲೆ ಭಗವಂತನ ಹುಟ್ಟು. **ಪ್ರ:** ರಾಮಾವತಾರ, ಕೃಷ್ಣಾವತಾರ

ಅವರಾಣಿ ಸೊಪ್ಪು: ಆಹಾರಯೋಗ್ಯವಾದ ಒಂದು ಸೊಪ್ಪು

ಅವರೆ: ಒಂದು ದ್ವಿದಳ ಧಾನ್ಯ; ಬಯಲುಸೀಮೆಯಲ್ಲಿ ಚಳಿಗಾಲದ ಆರಂಭಕ್ಕೆ ದೊರೆಯುವ ಈ ಕಾಳುಗಳನ್ನು ಬಳಸಿ ವಿವಿಧ ರೀತಿಯ ಸಾರು ವ್ಯಂಜನಗಳನ್ನು ಮಾಡುತ್ತಾರೆ. ಅವರೆಯನ್ನು ಪಾಂಡವರು ಬಿತ್ತಿದ್ದಾರೆಂದೂ, ಅವರೆಕಾಯಿಯಲ್ಲಿ ಇರುವ ಐದು ಕಾಳುಗಳು ಪಂಚಪಾಂಡವರೆಂದೂ ಅದು ಅವರು ಜೀವಂತವಿದ್ದಾರೆ ಎಂಬುದರ ಸಂಕೇತವೆಂದೂ ಜನಪದರು ನಂಬುತ್ತಾರೆ. **ಪ್ರ:** ಸತ್ತುಳ್ಳೆ ಪಾಂಡವರು ಸತ್ತರೆನ್ನದಿರಿ.. ಧರ್ಮರು ಬಿತ್ತಿ ಹೋಗ್ಯವರೆ ಅವರೆಯ

ಅವರೆಕಾಯು ಬೆವರುಕಾಯಿ: ಮಡಕೆಯಲ್ಲಿ ಹಾಕಿ ಭೂಮಿಯಲ್ಲಿ ಹುದುಗಿಸಿ ನೀರುಹಾಕದೆ ಬೇಯಿಸಿದ ಅವರೆಕಾಯಿಯ ಖಾದ್ಯ (ಮೈಸೂ.ಜಿ)

ಅವರೆಕಾಯಿ ತಾಳದ: ಅವರೆಕಾಳು ಬೇಯಿಸಿ ಹುಚ್ಚೆಳ್ಳುಪುಡಿ ಸೇರಿಸಿ ಮಾಡಿದ ಪಲ್ಯ (ಮಂಡ್ಯ.ಜಿ) **ನೋಡಿ–** ತಾಳದ

ಅವರೆ ಕಿಚಕಾಳು: ಸಿಪ್ಪೆತೆಗೆದ ಅವರೆಕಾಳು; ಚಿತುಕಿಸಿದ ಅವರೆಕಾಳು. **ಇರೂ:** *ಚಿತ್ಕವರೆ (ಮಂಡ್ಯ.ಜಿ) ಹಿತ್ಕವರೆ (ಬೆಂಗ್ರಾ.ಜಿ)*

ಅವರೆಸ್ವಾಡಿಗೆ: ಒಣ ಅವರೆಕಾಳಿನ ಸಾರು (ಬೆಂಗ್ರಾ.ಜಿ)

ಅವರೆಹಾಳು: ಅವರೆ ಬೆಳೆಯುವ ಹೊಲ

ಅವರ್ಕೆ: ನೋಡಿ– ಆವರಿಕೆ

ಅವರ್ಬಿಟ್ಟು ಇವರ್ಬಿಟ್ಟು ಅವರ್ಯಾರು: ಮಕ್ಕಳ ಒಂದು ಆಟ. ಒಬ್ಬರ ಕಣ್ಣನ್ನು ಕೈಯಿಂದ ಮುಚ್ಚಿ ಅವರ ಕೈಯನ್ನು ಹಿಡಿದು ಎದುರಿಗಿರುವವರಿಗೆ ಅವರ್ಬಿಟ್ಟು ಅವರ್ಬಿಟ್ಟು ಅವರ್ಯಾರು ಎಂದು ಕೇಳುತ್ತಾರೆ. ಕಣ್ಣು ಮುಚ್ಚಿಸಿಕೊಂಡಿರುವವರು ಅಲ್ಲಿರುವ ಒಬ್ಬೊಬ್ಬರ ಹೆಸರನ್ನೂ ಹೇಳುತ್ತಾ ಹೋಗುತ್ತಾರೆ. ಸರಿ ಹೆಸರು ಹೇಳಿದರೆ ಅವರು ಕಣ್ಣು ಮುಚ್ಚಿಸಿಕೊಳ್ಳಬೇಕು ಉಳಿದವರು ಬಚ್ಚಿಟ್ಟುಕೊಳ್ಳುತ್ತಾರೆ. ನಂತರ ಅವರನ್ನು ಹುಡುಕಿ ಹಿಡಿಯಬೇಕು (ಮಂಡ್ಯ.ಜಿ)

ಅವಲಕ್ಕಿ: ಬತ್ತವನ್ನು ಅರೆ ಬೇಯಿಸಿ ಕುಟ್ಟಿ ಮಾಡಿದ ಚಪ್ಪಟೆಯಾದ ಅಕ್ಕಿ (ದಕ)

ಅವಲಕ್ಕಿ–ಪವಲಕ್ಕಿ: ಬಾಲಕಿಯರು ಆಡುವ ಆಟದ ಶಿಶುಪ್ರಾಸ (ಮೈಸೂ.ಜಿ) **ಪ್ರ:** ಅವಲಕ್ಕಿ ಪವಲಕ್ಕಿ ಕಾಂಚನ ಮಿಣಮಿಣ ಡಾಂಡೂಂ ಡಸ್ಸ ಮಸ್ಸ ಕೊಯ್ ಕೊಟಾರ್

ಅವಲಕ್ಕಿಸರ: ಅವಲಕ್ಕಿಯಂತೆ ಚಪ್ಪಟೆಯಾಕಾರದ ಬಂಗಾರದ ಚಿಕ್ಕಬಿಲ್ಲೆಗಳನ್ನು ಪೋಣಿಸಿ ಮಾಡಿದ ಎರಡು ಅಥವಾ ಮೂರು ಎಳೆಗಳಿರುವ ಸರ

ಅವಲಿಹೂವ: ನಂದಬಟ್ಟಲಿನ ಹೂವನ್ನು ಹೋಲುವ ಕಾಡು ಹೂವು. ಇದರ ಮಧ್ಯ ಭಾಗದಲ್ಲಿ ಹಳದಿ ಬಣ್ಣದ ಪರಾಗಕೋಶವಿದ್ದು ಸುತ್ತಲೂ ಬಿಳಿಪಕಳೆಗಳು ಇರುತ್ತವೆ (ಬೆಂಗ್ರಾ.ಜಿ)

ಅವಲು: ೧. ಜೋಳ ಹುರಿದಾಗ ಆಗುವ ಅರಳು ೨. ಒಂದು ಜಾತಿಯ ಮೀನು (ಮೈಸೂ.ಜಿ)

ಅವಲು ಎರಚು: ಹೋಮ ಮಾಡುವಾಗ, ಮಹಾರಾಜರು ಸಿಂಹಾಸನವನ್ನು ಏರುವಾಗ ಅರಳನ್ನು ಎರಚಿ ಪೂಜಿಸುವುದು

ಅವಲುನೆಲ: ಬೆಟ್ಟದ ಇಳಿಜಾರು ಭೂಮಿ

ಅವಲುಪುರಿ: ಒಂದು ಔಷಧೀಯ ಸಸ್ಯ (ದಕ.ಜಿ)

ಅವಸಂಗ: ಆಭರಣ (ದಕ.ಜಿ)

ಅವಸಕಣ: **ನೋಡಿ**– ಅಪಶಕುನ

ಅವಸರದ ಹೋಬಳಿ: ಅತ್ಯವಶ್ಯವಾದ ಹಾಗೂ ತುರ್ತಾದ ಅರಮನೆಯ ಕೆಲಸಗಳಿಗೆ ಯಾವಾಗಲೂ ಸಿದ್ಧವಿರಬೇಕಾದ ಸೇವಕರ ಇಲಾಖೆ

ಅವಸರದವರು: ಅರಮನೆಯೊಳಗೆ ಬಳಕೆಯಲ್ಲಿದ್ದ ಸುದ್ದಿವಾಹಕರು (ಮೈಸೂ.ಜಿ)

ಅವಳಸರಿಗಂಧಕ: ಗ್ರಂದಿಗರ ಅಂಗಡಿಯಲ್ಲಿ ದೊರೆಯುವ ಔಷಧಿ ಸಾಮಗ್ರಿ (ಮಂಡ್ಯ.ಜಿ)

ಅವಳಾಚವಳಾ: ಅರ್ಧಮರ್ಧ ನುರಿದ; ತರಿತರಿಯಾಗಿ ಪುಡಿಮಾಡಿದ (ಧಾರ.ಜಿ). **ಪ್ರ**: ಅವಳಾ ಚವಳಾ ಕುಟ್ಟಿದ್ರೆ ಸಾಕು

ಅವಳಿ: ಮನುಷ್ಯರು ಮಾತ್ರ ಓಡಾಡಲು ಅವಕಾಶವಾಗುವಂತೆ ಬೇಲಿಗೆ ಹಾಕುವ ಮರದ ಕವೆ

ಅವಳಿಜವಳಿ: ಏಕ ಕಾಲಕ್ಕೆ ಹುಟ್ಟಿದ ಎರಡು ಮಕ್ಕಳು

ಅವಳಿಸರ ಗವಳಿಸರ: ಜೋಡುಸರ; ಅವಳಿ ಜವಳಿ ಸರ (ಉಕ.ಜಿ)

ಅವಿಲು: ಹಲವು ತರಕಾರಿಗಳನ್ನು ಬೇಯಿಸಿ, ತೆಂಗಿನಕಾಯಿ, ಹಸಿ ಮೆಣಸನ್ನು ರುಬ್ಬಿ ಹಾಕಿ ಕುದಿಸಿ ಮಾಡಿದ ವ್ಯಂಜನ (ದಕ.ಜಿ). **ಇರೂ**: *ಅವಿಯಲ್*

ಅವೀರ: ಹಳದಿ ಪುಡಿ (ಮಂಡ್ಯ.ಜಿ)

ಅವುಂಡಬಾಳೆ: ಒಂದು ವಿಧದ ಅಡುಗೆ ಬಾಳೆ; ಇದರ ಕಾಯಿಯನ್ನು ಹೆಚ್ಚಾಗಿ ಪಲ್ಯಕ್ಕೆ ಬಳಸುತ್ತಾರೆ (ದಕ.ಜಿ)

ಅವುಂತಿ: ಆಹುತಿ (ಮೈಸೂ.ಜಿ)

ಅವುಕ್ಷ್ಯ: ಆಯುಷ್ಯ

ಅವುಗ: ಸಣ್ಣ ರಂಧ್ರವಿರುವ ಮಡಕೆಯಲ್ಲಿ ತಯಾರಿಸುವ ಸಿಹಿತಿಂಡಿ (ಶಿವ.ಜಿ) **ಇರೂ**: *ಔಂಗು*

ಅವುಚ: ಪಟಾಕಿ; ಬಾಣಬಿರುಸು (ಬಳ್ಳಾ.ಜಿ)

ಅವುಟು: ೧. ಸಣ್ಣ ಫಿರಂಗಿ ೨. ಸುಳ್ಳು

ಅವುಡು: ೧. ಔಡಲ; ಒಂದು ಎಣ್ಣೆಕಾಳಿನ ಬೆಳೆ. **ಇರೂ**: *ಉಂಡ್ಲ, ಹರಳು* ೨. ಗುಳೆ ಬರುವುದು (ಚಿಮ.ಜಿ)

ಅವುಡುಗಚ್ಚು: ಸಿಟ್ಟಿನಿಂದ ದವಡೆ ಹಲ್ಲು ಕಚ್ಚುವುದು; ಅಸಮಾಧಾನಗೊಳ್ಳು; ತುಟಿಗಚ್ಚು

ಅವುತಗೇಡಿ: ಬಹುಬೇಗನೆ ಕೋಪಗೊಳ್ಳುವವ; ಮುಂಗೋಪಿ (ಗುಲ್ಬ.ಜಿ)

ಅವುತ್ಲುಗುಮ್ಮ: ಮಕ್ಕಳು ಅವಿತುಕೊಂಡು ಆಡುವ ಗುಮ್ಮನಾಟ (ಮೈಸೂ.ಜಿ)

ಅವುಲುಮೀನು: ಔಲು ಮೀನು; ಕೆರೆ ಹಳ್ಳಗಳಲ್ಲಿ ಸಿಗುವ ಮೀನು (ಮಲೆ)

ಅವುಸೋಕ: ಅಭಿಷೇಕ (ಮಂಡ್ಯ.ಜಿ)

ಅವುಸ್ತಿ: ಔಷಧಿ (ಚಾಮ.ಜಿ)

ಅವ್ಗೆಪಾದ: ನೇಕಾರಿಕೆಯ ಮಗ್ಗದಲ್ಲಿನ ತುಳಿಯುವ ಸಾಧನ (ಮಂಡ್ಯ.ಜಿ)

ಅವ್ಡಿಸೊಪ್ಪು: ಅವಡೆ ಸೊಪ್ಪು; ಇದರಿಂದ ಗೊಜ್ಜು ಮಾಡುತ್ತಾರೆ (ಉಡು.ಜಿ)

ಅವ್ವ: ಬಿದಿರು ಗಳದಿಂದ ಮಾಡಿದ ಶಬ್ದಮಾಡುವ ಒಂದು ಸಾಧನ. ಪ್ರಾಣಿ ಪಕ್ಷಿಗಳನ್ನು ಬೆದರಿಸಲು ಬಳಸುತ್ತಾರೆ (ಉಕ.ಜಿ)

ಅವ್ವಬ್ಬ: ಅವ್ವನ ಹಬ್ಬ; ಬೆಳೆಯ ದೇವತೆಯಾದ ಮಾರಮ್ಮನ ಹಬ್ಬ. **ಇರೂ**: *ಅಮ್ನೋರ ಹಬ್ಬ (ಹಾವೇ.ಜಿ/ತುಮ.ಜಿ)*

ಅವ್ರಿತೆರ್ಲು: ಅವರೆಕಾಳು ಬಳಸಿ ಮಾಡುವ ಒಂದು ಖಾದ್ಯ. **ನೋಡಿ**– ಉರ್ಲಿ ತೆರ್ಲು

ಅವ್ರಿಪರ್ಪು: ಅವರೆ ಬೇಳೆ ಹಾಕಿ ಮಾಡಿದ ಖಾದ್ಯ (ಕೋಲಾ.ಜಿ)

ಅವ್ರೆಹುಳ/ಅವರೆ ಹುಳ: ಅವರೆಕಾಯಿಯನ್ನು ತಿನ್ನುವ ಹುಳ (ಮೈಸೂ.ಜಿ)

ಅವ್ಲಕ್ಕಿಬಾಯ್ರ್: ಅವ್ಲಕ್ಕಿ ಬಾಯರು; ಅವಲಕ್ಕಿ ನೆನೆಸಿ ಬೆಲ್ಲ, ಕಾಯಿ ರುಬ್ಬಿ ಹಾಕಿ ಮಾಡುವ ತಿನಿಸು (ದಕ.ಜಿ)

ಅವ್ಲಾಟಿ: ಅವಲು ಕುಟ್ಟುವ ಸಾಧನ

ಅವ್ವಅಪ್ಪಚ್ಚಿಯಾಟ: ಮಕ್ಕಳ ಒಂದು ಬಗೆಯ ಆಟ. ಇಬ್ಬರು ಮಕ್ಕಳು ಅವ್ವ ಅಪ್ಪಚ್ಚಿ ಎನ್ನುತ್ತ ತಮ್ಮ ಎಡಮೊಣಕೈಯನ್ನು ಬಲಗೈಯಿಂದ ಹಿಡಿದು, ಎಡಗೈನಿಂದ ಎದುರು ನಿಂತಿರುವವರ ಬಲ ಮೊಣಕೈಯನ್ನು ಹಿಡಿಯುತ್ತಾರೆ. ಆಗ ಇಬ್ಬರು ಮಕ್ಕಳ ಮಧ್ಯೆ ಕುರ್ಚಿಯಂತೆ ಕೈಗಳು ಜೋಡಿಸಲ್ಪಡುತ್ತವೆ. ಅದರ ಮೇಲೆ ಇನ್ನೊಬ್ಬರನ್ನು ಕೂರಿಸಿಕೊಂಡು ಓಡಾಡುವುದೇ ಅವ್ವಪ್ಪಚ್ಚಿಯಾಟ

ಅವ್ವಕ್ಕ: ಪುಕ್ಲಿ; ಅಂಜುಬುರುಕಿ

ಅವ್ವಕ್ಕಿ: ಓಮ; ಅಜೀರ್ಣ ನಿವಾರಿಸುವ ಗುಣವಿರುವ ಕಾಳು

ಅವ್ವಣ್ಣಿ: ೧. ಹೆಣ್ಣಿನಂತವನು; ಹೆಣ್ಣುಮಕ್ಕಳನ್ನೆ ಹೆಚ್ಚು ಹಚ್ಚಿಕೊಳ್ಳುವವನು. **ಪ್ರ**: ನೀನೊಳ್ಳೆ ಅವ್ವಣ್ಣಿಯಾದ್ಯಲ್ಲ ೨. ಹೇಡಿ; ಷಂಡ (ಬಳ್ಳಾ.ಜಿ). **ಇರೂ:** *ಅವ್ವಾಳಿಗಂಡು*

ಅವ್ವಯಿ: ತಾಯಿ (ಉಕ.ಜಿ)

ಅವ್ವೇರು: ಅಂತಃಪುರಕ್ಕೆ ಸೇರಿದ ಹೆಂಗಸರು (ಮೈಸೂ.ಜಿ)

ಅವ್ವಾ: ಹವಳ

ಅವ್ಹೆ: ಕಾಲುವೆ; ಗದ್ದೆಯಲ್ಲಿ ನೀರು ಹರಿಯುವ ಕಾಲುವೆ (ಉಕ.ಜಿ)

ಅಶ್ರುವರ್ನ: ಯಕ್ಷಗಾನ ಬಯಲಾಟದಲ್ಲಿ ಇನ್ನೂ ಆಟ ಪ್ರಾರಂಭವಾಗುವ ಮುನ್ನ ಎಂದರೆ ನಾಂದಿ ಹಾಡುವ ಮುಂಚೆ ರಂಗಸ್ಥಳದ ಅಟ್ಟಕ್ಕೆ ವಾದ್ಯ ಪರಿಕರಗಳನ್ನು ತಂದು ಸ್ವಲ್ಪ ಹೊತ್ತು ಹಾಡಿಲ್ಲದೆ ಬರೀ ವಾದ್ಯಗಳನ್ನು ಬಾರಿಸುವುದು

ಅಶೋಕ ಮರ: *ಸಿಸಾಲ್ಪಿನಿಯೇಸಿಯೆ ಸರಾಕಾ ಇಂಡಿಕಾ:* ಆಕರ್ಷಕ ನಿತ್ಯ ಹಸುರಿನ ಮರ. ಸುವಾಸನಭರಿತ ಕಿತ್ತಳೆ ಬಣ್ಣದ ಹಳದಿ ಮಿಶ್ರಿತ ಹೂವಿನ ದಟ್ಟ ಗೊಂಚಲುಗಳಿರುತ್ತವೆ. ಚಪ್ಪಟ್ಟೆಕಾಯಿ, ತೊಗಟೆ ಮಿಶ್ರಿತ ಕಷಾಯುವು ಚರ್ಮರೋಗಗಳನ್ನು ಧಡಾರ ರೋಗದ ಕಲೆಗಳನ್ನು ಸಂಪೂರ್ಣ ನಿವಾರಿಸುತ್ತದೆ. ಹೆಂಗಸರ ಮುಟ್ಟುದೋಷದ ನಿವಾರಣೆಗೂ, ನಿತ್ರಾಣ, ಬೆನ್ನು ನೋವು, ತಲೆನೋವು, ಸೊಂಟನೋವು, ಬಿಳಿಸೆರಗು ಮೊದಲಾದ ತೊಂದರೆಗಳಿಗೂ ಚಕ್ಕೆಯ ಕಷಾಯವನ್ನು ಬಳಸುತ್ತಾರೆ. ಹಿಂದೂಗಳಿಗೆ ಪವಿತ್ರವಾದ ವೃಕ್ಷ (ಚಿತ್ರ ನೋಡಿ)

ಅಶೋಕನಗಾಳಿ: ದಕ್ಷಿಣ ದಿಕ್ಕಿನ ಗಾಳಿ

ಅಶ್ಮರಿ: ಮೂತ್ರಕೋಶದ ಒಂದು ರೋಗ (ಗುಲ್ಬ.ಜಿ)

ಅಶ್ಮಾರಿ: *ಎವ್ವಾ ಲಾಂಟಾನಾ:* ಒಂದು ಔಷಧೀ ಸಸ್ಯ. **ಇರೂ:** *ಹಿಟ್ಟುಳಕ*

ಅಶ್ವಗಂಧ: ಒಂದು ಔಷಧಿಗುಣವುಳ್ಳ ಸಸ್ಯ

ಅಶ್ವಗಂಧಿ: *ವಿಸ್ಪಿರಿಯ ಸೈನೆನ್ಸಿಸ್ ಸಾಮ್ನಿಫೆರ:* ಹಿರೇಮದ್ದಿನ ಗಿಡ. ವಿಷಬಾಧೆಯಾದಾಗ ವಾಂತಿ ಮಾಡಿಸಲು ಬಳಸುತ್ತಾರೆ (ಗುಲ್ಬ.ಜಿ) (ಚಿತ್ರ ನೋಡಿ)

ಅಶ್ವಿನಿ: ಇಪ್ಪತ್ತೇಳು ನಕ್ಷತ್ರಗಳಲ್ಲಿ ಮೊದಲನೆಯದು

ಅಶ್ವಿನಿಮಳೆ: ಅಶ್ವಿನಿ ನಕ್ಷತ್ರದ ಮಳೆ. ಮುಂಗಾರಿನ ಮೊದಲ ಮಳೆ. ಯುಗಾದಿ ಹಬ್ಬದಿಂದ ಪ್ರಾರಂಭವಾಗುತ್ತದೆ

ಅಷ್ಟಕೊಳ: ಎಡಮುಂಗೈ ಮೇಲೆ ಹಾಕಿಸಿಕೊಳ್ಳುವ ಹಚ್ಚೆ ಚಿತ್ರ

ಅಷ್ಟಚೂರ್ಣದ ಹುಡಿ: ಬಾಣಂತಿಯರಿಗೆ ಮೊದಲ ಅನ್ನದಲ್ಲಿ ಕಲೆಸಿಕೊಳ್ಳಲು ಹಾಕುವ ಪುಡಿ. ಕೊತ್ತಂಬರಿ, ಜೀರಿಗೆ, ಮೆಣಸು, ಕರಿಬೇವು, ಕೊಬ್ಬರಿ, ಕಡಲೆಬೇಳೆ, ಉದ್ದಿನಬೇಳೆ, ಇಂಗು, ಕೆಂಪುಮೆಣಸಿನಕಾಯಿ ಎಲ್ಲವನ್ನೂ ಹುರಿದು ಪುಡಿ ಮಾಡಿರುತ್ತಾರೆ

ಅಷ್ಟಪಟ್ಟಿ ಗುಂಡು: ಸರಗಳಿಗೆ ಪೋಣಿಸುವ ಎಂಟು ಮೂಲೆಯ ಚಿನ್ನದ ಗುಂಡು (ದಕ.ಜಿ)

ಅಷ್ಟಬಂಧ: ಎಂಟುದಿಕ್ಕುಗಳನ್ನು ಬಂಧಿಸುವುದು. ವಾಮಾಚಾರ ಮಾಡುವವರು ದುಷ್ಟಶಕ್ತಿಗಳಿಂದ ತಮಗೆ ಹಾನಿಯಾಗದಂತೆ ಮುನ್ನೆಚ್ಚರಿಕೆಯಾಗಿ ಮಾಡುವ ಅಷ್ಟದಿಗ್ಬಂಧನ (ಬೆಂಗ್ರಾ.ಜಿ)

ಅಷ್ಟಮಂಗಳ: ಜ್ಯೋತಿಷ್ಯಶಾಸ್ತ್ರದ ಒಂದು ಪ್ರಕಾರ. ಈ ಮೂಲಕ ಒಂದು ಕುಟುಂಬದ, ದೇವಸ್ಥಾನದ ಇತಿಹಾಸ ಮತ್ತು ಒಳಿತು ಕೆಡುಕು ತಿಳಿಯಬಹುದೆಂಬ ನಂಬಿಕೆ ಇದೆ(ದಕ.ಜಿ)

ಅಷ್ಣರು: ಕಾಡುಗೊಲ್ಲರ ಒಂದು ಪಂಗಡ (ತುಮ.ಜಿ)

ಅಷ್ಟಾಣಿ: ಓತಿಕ್ಯಾತ. **ಇರೂ:** *ದೊನ್ನೆಕ್ಯಾತ; ದೊನ್ನೆಕಟ್ಟ*

ಅಸಂಗಿ: ಒಡವೆ ವಸ್ತುಗಳ ತಗ್ಗನ್ನು ಎತ್ತುವುದಕ್ಕಾಗಿ ಬಳಸುವ ಉಪಕರಣ

ಅಸಕಾರದ ಹಣ್ಣು: ಒಂದು ಬಗೆಯ ಹಣ್ಣು (ದಕ.ಜಿ)

ಅಸಗವರಿ: ಒಂದು ಬಗೆಯ ಆಟ (ಶಿವ.ಜಿ)

ಅಸಗೇಡಿ: ಹಸಗೇಡಿ; ಅಸಹ್ಯಕರವಾಗಿ ಕಾಣುವ ವ್ಯಕ್ತಿ (ಗುಲ್ಬ.ಜಿ)

ಅಸಗ್ಗಿ: ಕೊಳಕು ಹೆಂಗಸು; ಕೊಳಕಿ

ಅಸಣಿ: ಅಶ್ವಿನಿ ಮಳೆ (ದಕ.ಜಿ)

ಅಸಬಾಲಿ: ಹಸುಬಾಲೆ; ಮುಗ್ಧೆ (ದಕ.ಜಿ)

ಅಸರ್ ಇಡುವುದು: ದೈವಗಳಿಗೆ ಸಾರಾಯಿ ಅರ್ಪಿಸುವುದು (ದಕ.ಜಿ)

ಅಸರಂತ: ಬಿಟ್ಟೂಬಿಡದೆ; ಸದಾಕಾಲ; ಅನವರತ (ಬೆಳ.ಜಿ)

ಅಸರಗಾಯಿ: ದೃಷ್ಟಿದೋಷ ನಿವಾರಣೆಗಾಗಿ ನೀವಳಿಸಿ ಒಡೆಯುವ ತೆಂಗಿನಕಾಯಿ

ಅಸರಗು: ರೋಗ ಬರುವುದು (ತುಮ.ಜಿ)

ಅಸರು: ೧. ಆಯಾಸ; ದಣಿವು (ದಕ.ಜಿ) ೨. ಜಿನುಗು; ಒಸರು (ಉಕ.ಜಿ)

ಅಸಲಗೋಟ: ಬಂಗಾರದ ಬಳೆ (ಗುಲ್ಬ.ಜಿ)

ಅಸಲಜಾತ: ಶ್ರೇಷ್ಠ ಜನ್ಮ (ಬಿಜಾ.ಜಿ/ಬೀದ.ಜಿ). **ಪ್ರ**: ಹೆಣ್ಣಸಲಜಾತ ಪದ್ಮಿನಿ ಸುರತಚಂದ್ರಿನಿ ನೋಡ ತಿರುಗೀ

ಅಸಲಿ: ೧. ನಿಜವಾದ; ನಕಲಿ ಅಲ್ಲದ ೨. ನಿಜವಾಗಿ ಕೊಟ್ಟ ರಖಮು; ಬಡ್ಡಿ ಸೇರಿಸದೆ ಇರುವದು (ಶಿವ.ಜಿ) ೩. ಗಂಡಸರು ಕೊರಳಲ್ಲಿ ಧರಿಸುವ ಆಭರಣ (ಬೆಂಗ್ರಾ.ಜಿ)

ಅಸಲಿಮಾತು: ಚೊಕ್ಕಮಾತು (ಧಾರ.ಜಿ)

ಅಸಲು: ೧. ಮೂಲಧನ, ನಿಜವಾದ ಬೆಲೆ; ಮೂಲಬೆಲೆ; ಒಬ್ಬರು ಕೊಂಡುಕೊಂಡ ಬೆಲೆ; ಅಸಲ್ ಕ್ರಯ (ದಕ.ಜಿ). **ಪ್ರ**: ನಮಗೆ ನಮ್ಮ ಅಸಲಷ್ಟೆ ಕೊಟ್ಟರೆ ಸಾಕು ಬಡ್ಡಿ ಬೇಕಾಗಿಲ್ಲ. ೨. ಹಿರಿದು; ಒಳ್ಳೆಯದು; ನಿಜವಾದದ್ದು ೩. ಮೂಲ; ಚೊಕ್ಕ

ಅಸಲುಪೂಜೆ: ಮಲೆನಾಡ ಒಕ್ಕಲಿಗರು ಮುಂಗಾರು ಮಳೆಗಾಲದ ಆರಂಭದಲ್ಲಿ ಊರದೇವಿಗೆ ಸಲ್ಲಿಸುವ ಮಳೆಸಂಬಂಧಿ ಪೂಜೆ. ಮನೆಮನೆಯಿಂದ ಅಕ್ಕಿ, ಅಕ್ಕಿಹಿಟ್ಟು, ತೆಂಗಿನಕಾಯಿಗಳನ್ನು ಸಂಗ್ರಹಿಸುತ್ತಾರೆ. ಪೂಜೆಯ ದಿನ ಪ್ರಾಣಿಬಲಿ ನೀಡಿ, ಮಾಂಸದಡುಗೆ ಮಾಡಿ, ದೇವಿಯ ಮುಂದೆ ಕಕ್ಕಡದ ದೀಪ ಹೊತ್ತಿಸಿಟ್ಟು ಎಡೆ ಸಮರ್ಪಿಸುತ್ತಾರೆ (ಚಿಮ.ಜಿ)

ಅಸಲೆ/ಅಸ್ಲೆ: ಹಸ್ಲೆ; ಆಶ್ಲೇಷ ನಕ್ಷತ್ರದ ಮಳೆ. **ಪ್ರ**: ಅಸಲೆ ಮಳೆ ಬಿಸಲಾಗೆ ಹೋತು, ಅಸಲೆ ಬಂದರೆ ಭೂಮಿಯೆಲ್ಲ ಹಚ್ಚಗೆ (ದಾವ.ಜಿ)

ಅಸವಲ್ದೇವರು: ಉಗ್ರದೇವತೆ

ಅಸವಾಲದಯ್ಯ: ಅಸಾಮಾನ್ಯ ಗುರು (ರಾಮ.ಜಿ)

ಅಸವಾಲದವಳು: ಕೆಟ್ಟ ಹೆಂಗಸು (ಮಂಡ್ಯ.ಜಿ/ಬೆಂಗ್ರಾ.ಜಿ)

ಅಸಾಕೋದು: ಒಣ ಅವರೆ, ಹುರುಳಿಯನ್ನು ಬೇಯಿಸಿ ಮಾಡಿದ ಸಾರು, ಪಲ್ಯ ಮುಂತಾದವು (ಕೋಲಾ.ಜಿ)

ಅಸಾದಿ/ಆಸಾದಿ: ಮಾರಮ್ಮನ ಹಬ್ಬ ಜಾತ್ರೆಗಳಲ್ಲಿ ದೇವಿಯನ್ನು ಹೊಗಳುವ ಮತ್ತು ಅಶ್ಲೀಲವಾಗಿ ನಿಂದಿಸುವ ಹಾಡುಗಳನ್ನು ಹಾಡುತ್ತಾ ಕುಣಿಯುವ ವೃತ್ತಿಗಾಯಕ. ತಲೆಗೆ ರುಮಾಲು, ಕಾಸೆಪಂಚೆ, ಅಂಗಿಯ ಮೇಲೊಂದು ಕೋಟು, ಹೆಗಲ ಮೇಲೆ ಬಣ್ಣದ ಸೀರೆಯ ವಸ್ತ್ರಧರಿಸಿದ್ದು ಹಣೆಯಲ್ಲಿ ಭಂಡಾರ, ಗಂಧದ ಗೆರೆ, ಕುಂಕುಮ ಇರುತ್ತದೆ. **ಪ್ರ**: ಆಸಾದಿಗ್ಯಾಕೆ ಆರಂಭ ದಾಸಯ್ಯನಿಗ್ಯಾಕೆ ದನಕರ

ಅಸಿಕಲ್ಲು: ಅಡಿಗೆ ಮನೆಯಲ್ಲಿ ಬೆಳ್ಳುಳ್ಳಿ, ಶುಂಠಿ, ಮೆಣಸು ಇತ್ಯಾದಿ ಅಲ್ಪ ಪ್ರಮಾಣದ ಮಸಾಲೆಗಳನ್ನು ನುಣ್ಣಗೆ ಅರೆದುಕೊಳ್ಳಲು ಇರುವ ಚೌಕಾಕಾರದ ಕಲ್ಲು. ಈ ಕಲ್ಲಿನ ಮೇಲೆ ಹಿಡಿ ಗಾತ್ರದ ಉದ್ದನೆ ಕಲ್ಲಿರುತ್ತದೆ (ಹಾಸ.ಜಿ)

ಅಸಿಗೊಜ್ಜು: ೧. ಕಾಯಿಸಿ ಬೇಯಿಸದೆ ಮಾಡುವ ಗೊಜ್ಜು. ಹುಣಿಸೆ ಹುಳಿಗೆ ಮೆಣಸಿನಕಾಯಿ, ಈರುಳ್ಳಿ, ಬೆಳ್ಳುಳ್ಳಿ, ಕೊತ್ತಂಬರಿಸೊಪ್ಪು ಹಾಕಿ ಮಾಡುವುದು ಹಸಿಗೊಜ್ಜು ೨. ಉಪ್ಪು ಮೆಣಸಿನಕಾಯಿ, ನಾಟಿ ಈರುಳ್ಳಿ, ಬೆಳ್ಳುಳ್ಳಿ, ತಾಟಿಬೆಲ್ಲ, ಕೆಮ್ಮಣ್ಣು, ಸಂಜೀವ ಹುಳು ಗೂಡಿನ ಮಣ್ಣು, ಕರಿದ ರಾಗಿ, ಉಲ್ಲು, ಹುಣಿಸೇ ಹಣ್ಣು ಇವುಗಳನ್ನು ಹಾಕಿ ಹಿಸುಕಿದ ಗೊಜ್ಜು. ಇದನ್ನು ತಿನ್ನುವುದರಿಂದ ಯಾವುದೇ ತರಹದ ನೆಗಡಿ ತಟ್ಟನೆ ವಾಸಿಯಾಗುತ್ತದೆ (ಕೋಲಾ.ಜಿ)

ಅಸಿಬಿಸಿ: ಅರೆಬೆಂದ (ಗುಲ್ಬ.ಜಿ)

ಅಸಿಬೆ: ಹಸುಬೆ; ಬಟ್ಟೆಯ ಚೀಲ (ಮೈಸೂ.ಜಿ/ಚಾಮ.ಜಿ)

ಅಸಿಲಿ: ಸಮಾಧಿ (ಕೋಲಾ.ಜಿ)

ಅಸಿಲಿಬೀಡು: ಸ್ಮಶಾನದ ಸ್ಥಳ (ಕೋಲಾ.ಜಿ)

ಅಸಿಹೈಕ್ಳು: ಚಿಕ್ಕ ಮಕ್ಕಳು; ಎಳೆಗೂಸುಗಳು

ಅಸುಕ್ರಿಯೆ: ಅಸುರಕ್ರಿಯೆ; ದೈವಗಳಿಗೆ ಮಾಂಸಾಹಾರ ಅರ್ಪಿಸಿ ಮಾಡುವ ಆಚರಣೆ

ಅಸುಗಂದ: **ನೋಡಿ–** ಅಶ್ವಗಂಧ (ಉಕ.ಜಿ). **ಇರೂ**: ಹಿರೇಮದ್ದು

ಅಸುನೇರಿ: ಕೈಲಾಗದವನು

ಅಸುಪಾಯ: ಅಂಬಿಗ

ಅಸುಪಾಲ: ಅಸಾಮಾನ್ಯ; ಅಹಂಕಾರದ; ಕೊಬ್ಬಿದ

ಅಸುರಬ್ಬ: ಹಸುರುಹಬ್ಬ; ಸುಗ್ಗಿಹಬ್ಬ (ತುಮ.ಜಿ)

ಅಸುರುಕೊಡೆ: ಉತ್ಸವದ ಸಂದರ್ಭದಲ್ಲಿ ಹಿಡಿಯುವ ಅಲಂಕೃತ ಛತ್ರಿ (ದಕ)

ಅಸುಲ್ಲು: ಹಸಿಹುಲ್ಲು; ದನಗಳಿಗೆ ಹಾಕುವ ಹಸಿರು ಮೇವು (ಕೋಲಾ.ಜಿ)

ಅಸುವಂತ: ಆಯುಷ್ಯವಂತ; ದೀರ್ಘಾಯುಷಿ

ಅಸುವಂತನ ಮರ: ಅಶ್ವತ್ಥ ಮರ; ಅರಳಿಮರ (ಶಿವ.ಜಿ)

ಅಸುವಾಲ: **ನೋಡಿ–** ಅಸುಪಾಲ

ಅಸುಳಿ: ಬೆಲ್ಲ, ಕಡ್ಲೆಹಿಟ್ಟಿನಿಂದ ಮಾಡಿದ ಸಾರು (ರಾಯ.ಜಿ). **ಇರೂ:** *ಅಸ್ಲೂಳಿ*

ಅಸುಳೆ: ಹಸುಳೆ; ಎಳೆಮಗು; ಹಸುಕಂದ

ಅಸೂನಿ: **ನೋಡಿ–** ಅಶ್ವಿನಿ

ಅಸೆ: ೧. ಹಸೆ; ರಂಗೋಲಿ ೨. ಬಿತ್ತನೆಯಾದ ಮೇಲೆ ಬೀಜ ಮುಚ್ಚಿಕೊಳ್ಳುವಂತೆ ಮಾಡಲು ಬಳಸುವ ಸಾಧನ (ಬೆಂಗ.ಜಿ) ೩. ಮುಳ್ಳು ಹಾಸು ೪. ಸಾರು. **ಇರೂ:** *ಪಳದಿ (ಉಕ.ಜಿ)*

ಅಸೆಂಡಿ: ನಿರ್ಗತಿಕ; ಅನಾಥ (ತುಮ.ಜಿ)

ಅಸೆಕಲ್ಲು: ೧. ಹಸಿಕಲ್ಲು; ಕಾರ ಅರೆಯುವ ಕಲ್ಲು. **ಇರೂ:** *ಅಸ್ಗಲ್ಲು; (ಚಿತ್ರ.ಜಿ)* ೨. ಹಸೆಕಲ್ಲು ಶುಭ ಕಾರ್ಯದ ಪೀಠ



ಅಸೆಜಗಲಿ: ಹಸೆಜಗಲಿ. ಗಂಗಡಿಗಾರ ಗೌಡರುಗಳ ಮದುವೆ ಸಂದರ್ಭದಲ್ಲಿ ಮುಹೂರ್ತ ನಡೆಸಲು ಮಣ್ಣಿನಿಂದ ನಿರ್ಮಿಸಿದ ಪುಟ್ಟ ಜಗುಲಿ. ಅದರ ಮೇಲೆ ಅರಳಿ, ಅತ್ತಿ, ಹಾಗೂ ಕೋಲುಗಳ್ಳಿ ಕೊನೆಗಳನ್ನು ನೆಟ್ಟು, ಧಾರೆ ಕಾರ್ಯ ನಡೆಸುತ್ತಾರೆ (ತುಮ.ಜಿ)

ಅಸೆದಾನ: ಹಸೆದಾನ; ಬ್ರಹ್ಮಗಂಟು; ಮದುವೆಯ ಯೋಗ

ಅಸೆಮಣೆ: ಹಸೆಮಣೆ; ಮದುವೆ ಸಂರ್ಭಗಳಲ್ಲಿ ಮದುಮಗ ಮತ್ತು ಮದುಮಗಳನ್ನು ಕೂರಿಸಲು ಬಳಸುವ ಚಿತ್ತಾರ ಬಿಡಿಸಿದ ಮಣೆ. ಇದನ್ನು ಸಾಮಾನ್ಯವಾಗಿ ಅತ್ತಿಮರದ ಹಲಗೆಯಿಂದ ಮಾಡಿರುತ್ತಾರೆ (ದಕ)

ಅಸೆಹಚ್ಚು: ಹಸೆಹಚ್ಚು; ಮದುವೆ ಹಿಂದಿನ ದಿನ ಹೆಣ್ಣಿನ ಮನೆಯಲ್ಲಿ ಸೋಬಾನೆಪದ ಹೇಳುತ್ತಾ, ಅಕ್ಕಿಯ ರಂಗೋಲಿ ರಚಿಸಿ, ಅದರ ಮೇಲೆ ಹಸೆಮಣೆ ಹಾಕಿ, ಹೆಣ್ಣನ್ನು ಕೂರಿಸಿ ಬಟ್ಟೆಬರೆಯ ಉಡುಗೊರೆ ಕೊಡುವ ಆರತಕ್ಷತೆ ಶಾಸ್ತ್ರ ಮಾಡುವುದು (ತುಮ.ಜಿ)

ಅಸೊಕಿಮಳೆ: ವಿಶಾಖಾ ನಕ್ಷತ್ರದ ಮಳೆ (ಉಕ.ಜಿ)

ಅಸೋಕಮಲ್: ಭೂತನರ್ತಕನ ಕಂಠಾಭರಣ (ದಕ.ಜಿ)

ಅಸ್ಕಲ್ಲು: **ನೋಡಿ–** ಅಸೆಕಲ್ಲು

ಅಸ್ಟಪ್ರಬಾಲ್: ಅಷ್ಟಪ್ರಭಾವಳಿ; ಭೂತನರ್ತಕನ ಶಿರೋಭೂಷಣದ ಹಿಂದೆ ಕಟ್ಟುವ ಲೋಹದ ಪ್ರಭಾವಳಿ (ದಕ.ಜಿ)

ಅಸ್ಟಾರ: ಕೊಟ್ಟಿಗೆಯಲ್ಲಿ ದನಗಳನ್ನು ಕಟ್ಟುವ ಕಂಬ (ಶಿವ.ಜಿ). **ಇರೂ:** *ಗೊಂತು (ಬೆಂಗ್ರಾ.ಜಿ)*

ಅಸ್ತರಿಬಟ್ಟೆ: ೧. ದಪ್ಪ ಮೇಣದ ಬಟ್ಟೆ; ಟಾರ್ಪಾಲಿನ್ ೨. ಅಂಗಿ ಮೊದಲಾದವುಗಳಿಗೆ ಹಾಕುವ ಒಳಬಟ್ಟೆ

ಅಸ್ತಿಕುಂಡ: ಸತ್ತವರ ಅಸ್ತಿಯನ್ನು (ಎಲುಬುಗಳನ್ನು) ಹಾಕಿಡುವ ಪಾತ್ರೆ. **ಇರೂ:** *ತಾಮ್ರಪರ್ಣಿ*

ಅಸ್ತಿನಿ: ಹಸ್ತಿನಿ; ಕೆಲವು ನಿರ್ದಿಷ್ಟ ಲಕ್ಷಣಗಳುಳ್ಳ ಹೆಣ್ಣು

ಅಸ್ತು: ೧. ಅಗಲ ೨. ವಸ್ತ್ರ

ಅಸ್ತೆ: ೧. ಹಸ್ತೆ; ಅತ್ತೆ ನಕ್ಷತ್ರ, ೨. ಹಸ್ತಾ ನಕ್ಷತ್ರದ ಮಳೆ ೩. ಆಹಾರಯೋಗ್ಯವಾದ ಒಂದು ಜಾತಿಯ ಸೊಪ್ಪು (ತುಮ.ಜಿ)

ಅಸ್ತ್ರ: ಮತಾಂಬ್ರದ ಕಡ್ಡಿ, ದಾರದ ಎಳೆ

ಅಸ್ತ್ರ ಉಯ್ಯು: ಹಸಿರು ಹುಯ್ಯು; ಹಚ್ಚೆ ಹೊಯ್ಯಿಸುವುದು; ಹಚ್ಚೆ ಹಾಕಿಸುವುದು (ಬೆಂಗ.ಜಿ)

ಅಸ್ಬೆ: ಹಸುಬೆ; ಹೆಗಲ ಮೇಲೆ ಜೋತುಬೀಳುವ ಚೀಲ (ದಕ)

ಅಸ್ರವರ್ತಿ: ಅಸರುವರ್ತಿ; ಜಿನುಗುತ್ತಿರುವ ನೀರಿನ ಸೆಲೆ (ಉಕ.ಜಿ)

ಅಸ್ರಾವು: ಹಸಿರು ಬಣ್ಣದ ಹಾವು (ಮೈಸೂ.ಜಿ/ಚಾಮ.ಜಿ)

ಅಸ್ರು: ಹಸಿರು ಬಣ್ಣ (ಗುಲ್ಬ.ಜಿ/ಬಿಜಾ.ಜಿ)

ಅಸ್ರುಗುಂಟೆ: ಬೆಳೆ ಹಸಿರು ತಿರುಗಿದ ಮೇಲೆ ಬಳಸುವ ಕುಂಟೆ

ಅಸ್ರುಯ್ಸು: ಹಚ್ಚೆಹಾಕಿಸು

ಅಸ್ಲು: ಹಚ್ಚೆ (ಚಾಮ.ಜಿ)

ಅಸ್ಲೊಳಿ: **ನೋಡಿ–** ಅಸುಳಿ

ಅಸ್ಲೆ: ೧. ಲಂಬಾಣಿಯವರು ಎದೆಯ ಮೇಲೆ ಧರಿಸುವ ಬೆಳ್ಳಿಯ ಆಭರಣ (ಚಿಮ.ಜಿ) ೨. ಹಸಿರು; ಒತ್ತೊತ್ತಾಗಿ ಬೆಳೆದ ಹುಲ್ಲು ಪೊದೆ; ತೆಂಡೆ ೩. ಆಶ್ಲೇಷ ನಕ್ಷತ್ರ

ಅಸ್ಲೆ ಮಳೆ: ಅಸಲೆ ಮಳೆ; ಆಶ್ಲೇಷ ನಕ್ಷತ್ರದ ಮಳೆ (ಮಂಡ್ಯ.ಜಿ)

ಅಸ್ಲೆಸೊಪ್ಪು: ಒಂದು ತರಕಾರಿ ಸೊಪ್ಪು (ತುಮ.ಜಿ)

ಅಸ್ವಂತ್ನ: ಅಶ್ವತ್ಥ; ಅರಳಿಮರ (ಉಕ.ಜಿ)

ಅಸ್ವಂತ್ನ ಎಲಿಸಾಲ್: ರಥದಲ್ಲಿ ಸಾಲಾಗಿ ಕೆತ್ತಿರುವ ಅಶ್ವತ್ಥ ಎಲೆಯ ಆಕಾರದ ಕೆತ್ತನೆ (ದಕ.ಜಿ)

ಅಸ್ವಾರ: ಒಂದು ಜಾತಿಯ ಮರ. ಕೊಟ್ಟಿಗೆಯಲ್ಲಿ ದನಗಳನ್ನು ಕಟ್ಟಿ ಹಾಕಲು ನೆಡುವ ಗೂಟಕ್ಕೆ ಬಳಸುತ್ತಾರೆ ಮಲ್ಲಿಗೆ ಇತ್ಯಾದಿ ಹೂಬಳ್ಳಿಗಳನ್ನು ಹಬ್ಬಿಸಲು ಆನಿಕೆಯಾಗಿ ಬೆಳೆಸುತ್ತಾರೆ. **ಇರೂ:** *ಪೀಕೆಮರ; ಕೊಂಡಮಾವಿನ ಮರ*

ಅಸ್ಸಂಬ್ರ: ಹಸಿಆಮ್ರ; ಮೊಸರಿನಿಂದ ತಯಾರಿಸಿದ ಸಾರು; ಮೊಸರುಬಜ್ಜಿ. **ಇರೂ:** *ಹಸೆಳ್ಳೆ*

ಅಸ್ಸಿಸ್ಸೀಎನ್ನು: ಹೇಸಿಗೆಪಡು; ಜಿಗುಪ್ಸೆಪಡು; ಅಸಹ್ಯಪಡು

ಅಸ್ಸು: ಹೊತ್ತಿಸು; ದೀಪಹಚ್ಚು (ಚಾಮ.ಜಿ) **ಇರೂ:** *ಹಸ್ಸು; ಹಚ್ಚು; ಕಸ್ಸು;* ಕತ್ತಿಸು (ಮೈಸೂ.ಜಿ)

ಅಹಾಡಿ: ಬತ್ತದ ಗದ್ದೆ (ಶಿವ.ಜಿ)

ಅಹೋಬಲ: ಅಹೋಬಲ ಎಂದರೆ ಅತ್ಯಂತ ಬಲಶಾಲಿ. ನರಸಿಂಹ ದೇವರಿಗೆ ಈ ಬಿರುದು ಇದೆ. ಈ ಪದದ ಮೊದಲನೇ ಅಕ್ಷರ ಲೋಪವಾಗಿ ಓಬಳ, ಓಬಲ ಎಂಬ ರೂಪ ತಳೆದಿದೆ. ಓಬಳಾಪುರ, ಓಬೇನಹಳ್ಳಿ, ಓಬವ್ವ, ಓಬನಾಯಕನಹಳ್ಳಿ ಮೊದಲಾದ ಹೆಸರುಗಳು ಇದರಿಂದ ನಿಷ್ಪತ್ತಿಯಾಗಿವೆ

ಅಹೋಬಲ ನರಸಿಂಹಸ್ವಾಮಿ: ಅಹೋಬಲ ಎಂಬ ಸ್ಥಳದಲ್ಲಿರುವ ನರಸಿಂಹಸ್ವಾಮಿ

ಅಳ: ಜಮೀನಿನಲ್ಲಿ ಬೆಳೆಯುವ ಒಂದು ಬಗೆಯ ಕಳೆ

ಅಳಂಕ್/ಅಲಂಕ್: ತುಳುಕು (ದಕ.ಜಿ)

ಅಳಂಕ: ಮಾತಿಗೆ ಮುಂಚೆ ಅಳುವ ವ್ಯಕ್ತಿ

ಅಳಂಗಿ: ಮೈಚಳಿ ಕಳೆದುಕೊಳ್ಳಲು ಮನೆಯ ಅಂಗಳದಲ್ಲಿ ಹೊತ್ತಿಸುವ ಬೆಂಕಿ

ಅಳಕ/ಅಲಕ: ೧. ಅಕ್ಕಿ ಮೊದಲಾದವುಗಳನ್ನು ಅಳೆಯುವ ದೊಡ್ಡ ಕುಕ್ಕೆ ೨. ಹದಿನೈದು ತೊಲೆಗಳಿಗೆ ಸಮಾನವಾದ ಉಪ್ಪನ್ನು ಅಳೆಯುವ ಒಂದು ಮಾನ (ದಕ.ಜಿ) ೩. ಮುಂಗುರುಳು

ಅಳಕಮಣೆ: ಕಾಳುಗಳನ್ನು ಬಡಿಯುವಾಗ ತಳಕ್ಕೆ ಇಟ್ಟುಕೊಳ್ಳುವ ಮರದ ಸಾಧನ

ಅಳಕೊಳ್ಳು: ಅಳತೆ ಮಾಡಿಕೊಳ್ಳು. **ಪ್ರ:** ಗಿರಿಜುದ್ದ ಹೊನ್ನ ಅಳಕೊಂಡು ಗಿರಿರಾಜ ಗಿರಿಜೆ ನಮ್ಮಟಕೆ ಕೊಡಿರೆಂದ

ಅಳಗ: ೧. ಹವಳದ ಬಣ್ಣದ ಹಸು ೨. ಹುಲ್ಲು, ಸೊಪ್ಪನ್ನು ಕಟ್ಟಲು ಬಳಸುವ ಹಗ್ಗ

ಅಳಗದಗ್ಗ: ಗುದಿ ಹಗ್ಗ (ರಾಯ.ಜಿ)

ಅಳಗಪಾಲ: ನೋಡಿ– ಅಳ್ಗಪಾಲ

ಅಳಗಬಳಗ: ಕಪ್ಪು ಬಿಳಿ ಅಥವಾ ಹಳದಿ ಬಿಳಿ ಮಿಶ್ರಿತ

ಅಳಗುಂದಿ: ಯಾವಾಗಲೂ ಅಳುವವಳು

ಅಳಗುರಿ: ೧. ಹಳದಿ ಮತ್ತು ಬಿಳಿಬಣ್ಣ ಮಿಶ್ರಿತವಾದ ಕುರಿ ೨. ಮುದಿಕುರಿ (ತುಮ.ಜಿ)

ಅಳಗೆ/ಅಳ್ಗೆ: ೧. ಮಣ್ಣಿನ ಗುಡಾಣ. ಧಾನ್ಯ ತುಂಬಲು, ನೀರು ಕಾಯಿಸಲು ಬಳಸುವ ಮಣ್ಣಿನ ದೊಡ್ಡ ಗುಡಾಣ (ಮಲೆ) ೨. ಅನ್ನ ಮಾಡುವ ದೊಡ್ಡ ಮಣ್ಣಿನ ಪಾತ್ರೆ

ಅಳಗೆತಪಲೆ: **ನೋಡಿ–** ಅಳಗೆ

ಅಳತೆಕೊಡ: ಹದಿನಾರು ಸೇರು ಹಿಡಿಯುವ ಅಗಲ ಬಾಯಿಯ ಮಣ್ಣಿನ ಅಥವಾ ಕಬ್ಬಿಣದ ಪಾತ್ರೆ. **ಇರೂ:** *ಅಳತೆಅರವಿ*

ಅಳತೆಗೇಡಿ: ವಿವೇಕಹೀನ; ರೀತಿನೀತಿ ಅರಿಯದವ (ಬಳ್ಳಾ.ಜಿ)

ಅಳತೆಸಿದ್ದೆ: ಅಳತೆಯ ಕಲ್ಲಿನ ಸಾಧನ; ಸಿದ್ದೆ

ಅಳತ್ತಂಡೆ: **ನೋಡಿ–** ಅಲಸಂದೆ (ಕೊಡ.ಜಿ)

ಅಳದೇಕೆ: ಹೇಡಿ; ಕೈಲಾಗದವ (ರಾಯ.ಜಿ)

ಅಳಬಕ್ಕೆ: ಸಣ್ಣಕಜ್ಜಿ; ತುರಿಬೊಕ್ಕೆ

ಅಳಬಳ: ೧. ಸನ್ನಿವೇಶ ೨. ಶಕ್ತಿ

ಅಳಬಳಕ: ೧. ಬಿಗಿಯಾಗಿ ಕಟ್ಟಿಕೊಳ್ಳದೆ ಇರುವುದು, ಕಳಚಿ ಬೀಳುವಂತೆ ಉಡುಪು ತೊಟ್ಟಿರುವುದು; ೨. ಸಡಿಲ; ಅಳ್ಳಕ (ಶಿವ.ಜಿ)

ಅಳಬಿ : ನೋಡಿ– ಅಣಬೆ

ಅಳಬು: (ನಾ) ೧. ಅಣಬೆ (ಉಕ.ಜಿ) (ಕ್ರಿ) ೨. ಹುಡುಕಾಡು (ದಕ.ಜಿ). **ಇರೂ:** *ಅಳಗು, ಅಳ್ಬ*

ಅಳಮ: ೧. ಗಂಟು ೨. ಶಕ್ತಿ

ಅಳಮಗೆಡು: ಶಕ್ತಿಗುಂದು; ನಿತ್ರಾಣನಾಗು

ಅಳಮಟ್ಟು: ಹಬ್ಬಿಕೊಂಡು; ಸಿದ್ಧವಾಗಿ

ಅಳಮಣ್ಣು: ಯಾವುದೇ ಬೆಳೆ ಬೆಳೆಯದಂತಹ ಮಣ್ಣು (ಬಳ್ಳಾ.ಜಿ)

ಅಳಮನ್ಸು: ಹಿಂದು ಮುಂದು ನೋಡುವ, ಹಿಂಜರಿಯುವ ಮನಸ್ಸು (ಮಂಡ್ಯ.ಜಿ); ಅನುಮಾನ ಪ್ರವೃತ್ತಿ. **ಪ್ರ:** ಅವಯ್ಯಾಂದು ಅಳಮನ್ಸೂ ಯಾರ್ನೂ ನಂಬಲ್ಲ. **ಇರೂ:** *ಅಳಿಮನ*

ಅಳಲ ಹುಣ್ಣಿಮೆ: ಅನಂತನ ಹುಣ್ಣಿಮೆ (ಬಳ್ಳಾ.ಜಿ)

ಅಳಲಿಕಾಯಿ: ನೋಡಿ– ಅಳಲೆ

ಅಳಲು: ೧. ದುಃಖದ, ನೋವಿನ ಸಂಕಟದ ಆಚರಣೆ. ಜೋಕುಮಾರ ಸತ್ತ ನಂತರ ಏಳುದಿವಸ ಅಥವಾ ಒಂದು ತಿಂಗಳು ಅಳಲು ಆಚರಿಸುತ್ತಾರೆ. ಗೌರಿಹಬ್ಬದಲ್ಲಿ ಬಂದ ಗಣೇಶನೂ ನೀರಿನಲ್ಲಿ ಮುಳುಗುತ್ತಾನೆ. ಅವನ ನಂತರ ಬಂದ ಜೋಕುಮಾರನೂ ಕೊಲೆಯಾಗುತ್ತಾನೆ. ಹಾಗಾಗಿ ಅಳಲು ಆಚರಣೆ. ಈ ಅವಧಿಯಲ್ಲಿ ಯಾವುದೇ ಶುಭಕಾರ್ಯ ಮಾಡುವಂತಿಲ್ಲ. ಅತ್ತೆ ಮತ್ತು ಹೊಸ ಸೊಸೆಯರು ಒಂದೇ ಬಾಗಿಲಲ್ಲಿ ಓಡಾಡುವಂತಿಲ್ಲ. ಕೊಳು ಕೊಡುವ, ಯಾವುದೇ ಗಂಡು ಹೆಣ್ಣಿನ ವ್ಯವಹಾರ ಮಾಡುವಂತಿಲ್ಲ. ಆ ಕುರಿತು ಮಾತನಾಡುವಂತೆಯೂ ಇಲ್ಲ. ಈ ಆಚರಣೆ ಉತ್ತರ ಕರ್ನಾಟಕದಲ್ಲಿ ಹೆಚ್ಚು ಪ್ರಚಲಿತ ೨. ಅಂಬಲಿ ಮತ್ತು ಪುಂಡಿಪಲ್ಲೆ ಮಾಡಿಕೊಂಡು ಬೆಳೆ ಕುಯ್ಲಿಗೆ ಬಂದಾಗ ಹೊಲದಲ್ಲಿ ಸಿಂಪಡಿಸುವ ಆಚರಣೆ. ಇದರಿಂದ ಬೆಳೆ ಚೆನ್ನಾಗಿ ಬರುತ್ತದೆಂಬ ನಂಬಿಕೆ ಇದೆ (ಬೆಳ.ಜಿ). **ಇರೂ:** *ಚರಗ ಚಲ್ಲುವುದು.*

ಅಳಲುದಾಸ: ಅಳಿಲು (ತುಮ.ಜಿ). **ಇರೂ:** ಅಳುಮಾ *(ರಾಮ.ಜಿ)*

ಅಳಲೆ: *ಟರ್ಮಿನೇಲಿಯ ಅರ್ಜುನ ಗ್ಲ್ಯಾಬ್ರ ಚೆಬ್ಯೂಲ:* ಅಪಾರ ಔಷಧಿಗುಣಗಳನ್ನು ಹೊಂದಿರುವ ಒಂದು ಮರ (ಚಿತ್ರ ನೋಡಿ)

ಅಳಲೆಕಾಯಿ ಪಂಡಿತ: ಗಿಡಮೂಲಿಕೆ, ವನಸ್ಪತಿ, ಆಯುರ್ವೇದ ಜ್ಞಾನವಿರುವ ವೈದ್ಯ (ಗುಲ್ಬ.ಜಿ). **ಇರೂ:** *ನಾಟಿವೈದ್ಯ*

ಅಳವನವರು: ಒಕ್ಕಲಿಗರ ಉಪಪಂಗಡ

ಅಳವಹಿಡಿ (ಕ್ರಿ): ಲೂಟಿಮಾಡು; ಹಾಳುಮಾಡು (ಬೆಳ.ಜಿ)

ಅಳವಳಿ: ಶಕ್ತಿಗೆಡು; ಬಲಗುಂದು (ಮೈಸೂ.ಜಿ)

ಅಳವಾರ: ಭಾರವಲ್ಲದ

ಅಳವಿಗ: ಬಲಶಾಲಿ (ಮೈಸೂ.ಜಿ)

ಅಳವು: ೧. ಅಳತೆ ೨. ಸಾಮರ್ಥ್ಯ ೩. ಹತೋಟಿ ೪. ಸಾಮೀಪ್ಯ ೫. ಸಾಧ್ಯ ೬. ಗಂಟು ೭. ಪರಾಕ್ರಮ ೮. ಕಸ ೯. ಪೊದೆ ೧೦. ಕಳೆ ೧೧. ನಂಬುಗೆ (ಮೈಸೂ.ಜಿ)

ಅಳವೆ: ೧. ರೈತರಿಗೆ ಸಾಗುವಳಿ ಬಗ್ಗೆ ಬರೆದುಕೊಡುವ ಒಪ್ಪಂದ (ಮಲೆ) ೨. ತೂಬು ೩. ನದಿನೀರು ಸಮುದ್ರ ಸೇರುವ ಸ್ಥಳ (ಕರಾ)

ಅಳವೆದ್ದೋಗು: ಹಾಳಾಗಿ ಹೋಗು

ಅಳವೇರಿ: ನೋಡಿ– ಆಳ್ವೇರಿ

ಅಳಾಂಬು: ಅಣಬೆ (ದಕ)

ಅಳಾರ: ಹಗುರಾಗು; ಹಿತವಾಗು; ನೋವು ಕಡಿಮೆಯಾಗು (ಮಂಡ್ಯ.ಜಿ)

ಅಳಾಲು: ೧. ದ್ವೇಷ ೨. ತುಂಬಾ

ಅಳಿ: ೧. ಥಂಡಿ; ತಣ್ಣೀರು ೨. ಕೆರೆ. **ಪ್ರ:** ಅಳಿ ಮುಳುಗಿ ಸಳೀಗೆ ಹೆಂಗೆ ಅಂದ್ಲಂತೆ (ಮೈಸೂ.ಜಿ) ೩. ಬಿಚ್ಚು; ಕಳಚು ೪. ಅಳೆ ೫. ಅಚ್ಚು ೬. ಮೊಸರೊಳಗಿನ ಹೆಪ್ಪು (ಬೆಂಗ್ರಾ.ಜಿ)

ಅಳಿಕೊಂಡಿ: ಚಕ್ಕಡಿಯ ಗಾಲಿಗಳಿಗೆ ಕಾಯಿಸಿದ ಕಬ್ಬಿಣದ ಪಟ್ಟಿಗಳನ್ನು ಜೋಡಿಸುವಾಗ ಬಳಸುವ ಕಮ್ಮಾರಿಕೆಯ ಉಪಕರಣ (ಬಳ್ಳಾ.ಜಿ).

ಅಳಿಗಂಧ: ನಸುಗಂಪು ಬೀರುವ ಗಂಧ. **ಇರೂ:** *ಅಳಗಂಧ*

ಅಳಿಗುಳಿ ಕರೆಸುವುದು: ಅಳಿಯನಿಗೆ ಮಾವನ ಮನೆಯಲ್ಲಿ ಮಾಡುವ ಉಪಚಾರ (ಚಾಮ.ಜಿ), ಗೌರಿಹಬ್ಬ ದೀಪಾವಳಿ ಹಾಗೂ ಯುಗಾದಿ ಹಬ್ಬದಲ್ಲಿ ಅಳಿಯನನ್ನು ವಿಶೇಷವಾಗಿ ಆಹ್ವಾನಿಸುವುದು (ಹಾಸ.ಜಿ) ಮಲೆನಾಡು ಶೈವಒಕ್ಕಲಿಗರಲ್ಲಿ ಗೌರಿ ಹಬ್ಬದಲ್ಲಿ ಮಗಳು ಅಳಿಯನನ್ನು ಕರೆಸಿ ಅವರನ್ನು ಎರಡು ದಿನ ಮನೆಯಲ್ಲಿಟ್ಟುಕೊಂಡು ಉಪಚರಿಸಿ ಮಗಳಿಗೆ

ಹೊಸ ಸೀರೆ ರವಿಕೆ ತಾಂಬೂಲ ಕೊಡುತ್ತಾರೆ. ಅಳಿಯನಿಗೆ ಚಿನ್ನದ ಉಂಗುರ ಕೊಡುತ್ತಾರೆ

ಅಳಿಗೂಳಿನ ಹಣ: ಅಳಿಗೂಳಿಕ್ಕುವ ಸಂಪ್ರದಾಯದಲ್ಲಿ ಹೊಸ ಅಳಿಯನಿಗೆ ಮೊದಲ ಬಾರಿ ಎಷ್ಟು ದಕ್ಷಿಣೆಯನ್ನಿಟ್ಟು ಕೊಟ್ಟಿರುತ್ತಾರೋ ನಂತರದ ನಾಲ್ಕು ಬಾರಿಯೂ ಅಷ್ಟೇ ಇಡಬೇಕು. ಆಮೇಲೆ ವರ್ಷ ತುಂಬುವವರೆಗೂ ಬಂದು ಹೋಗಿ ಮಾಡುವಾಗ ಎಷ್ಟು ಬೇಕಾದರೂ ಇಡಬಹುದು (ಮೈಸೂ.ಜಿ) ನೋಡಿ– ಅಳಿಗೂಳಿಕ್ಕುವುದು

ಅಳಿಗೆ: ಗಂಜಿ ಹಾಕುವ ಮರದ ಪಾತ್ರೆ. **ಇರೂ:** *ಆಳಿಗೆ*

ಅಳಿಗೆಸದಿಯ: ಹೊಟ್ಟೆಬಾಕ. ಊಟಕ್ಕೆ ಮುಂದಾಗಿರುವವನು (ಉಡು.ಜಿ)

ಅಳಿಗೋಂದು: ಮರದಲ್ಲಿ ಸಿಗುವ ಗೋಂದು

ಅಳಿಟ್ಟುಗದ್ದೆ: ಬಿತ್ತನೆಗೆ ಅಣಿಗೊಳಿಸಿದ ಗದ್ದೆ

ಅಳಿತನ: ನೋಡಿ– ಅಳಿಯತನ

ಅಳಿದಿಕ್ಕು: ಅಳಿಯಂದಿರು (ದಕ.ಜಿ)

ಅಳಿಪುಟ್ಟಗದ ಗಿಡ: ಗರ್ಭನಿರೋಧಕ ಗುಣವುಳ್ಳ ಒಂದು ಔಷಧಿ ಗಿಡ (ಚಾಮ.ಜಿ)

ಅಳಿಮಗ: ಆಳುಮಗ; ಸೇವಕ; ಜೀತದಾಳು

ಅಳಿಯ: ಮಗಳ ಗಂಡ. **ಪ್ರ:** ಅಳಿಯ ಅಲ್ಲ ಮಗಳ ಗಂಡ ಅಂದಂಗೆ

ಅಳಿಯಕಟ್ಟು: ೧. ತುಳುನಾಡಿನ ಮಾತೃಮೂಲೀಯ ಕುಟುಂಬ ವ್ಯವಸ್ಥೆ. ೨. ಮಲೆನಾಡಿನ ಗೌಡಲು ಜನಾಂಗದವರ ಕೌಟುಂಬಿಕ ಪದ್ಧತಿ; ಹೆಣ್ಣುಮಕ್ಕಳ ವಿವಾಹ ಆದ ಬಳಿಕ ಅಳಿಯನಾದವನು ಹೆಣ್ಣಿನ ಮನೆಯಲ್ಲಿ ಇರುತ್ತಾನೆ. ಮಗಳು ತಂದೆಯ ಆಸ್ತಿಗೆ ವಾರಸುದಾರಳಾಗುತ್ತಾಳೆ. ಹೆಂಡತಿಯ ಮುಖಾಂತರ ಗಂಡನು ಆಸ್ತಿಯ ಯಜಮಾನಿಕೆ ಮಾಡುತ್ತಾನೆ

ಅಳಿಯತನ/ಅಳಿತನ: ೧. ಹೆಣ್ಣಿನ ಮನೆಯವರು ದೀಪಾವಳಿ ಹಬ್ಬ ಹಾಗೂ ಯುಗಾದಿ ಹಬ್ಬಕ್ಕೆ ಅಳಿಯನನ್ನು ಮನೆಗೆ ಕರೆಸಿಕೊಂಡು ಆತನಿಗೆ ಬಟ್ಟೆಬರೆ, ಉಂಗುರ, ಸರ ಹಾಕಿ ನಾಲ್ಕಾರು ದಿನ ಇಟ್ಟುಕೊಂಡು ಕಳಿಸುವ ಪದ್ಧತಿ (ಧಾರ.ಜಿ) ೨. ಮದುವೆಯಾದ ಹೊಸದರಲ್ಲಿ ಅಳಿಯನು ಅತ್ತೆ ಮಾವನ ಮನೆಯಲ್ಲಿ ಪಡೆಯುವ ಆತಿಥ್ಯ ೩. ಮಾವನ ಮನೆಗೆ ಹೋಗಿ ಇರುವುದು. **ಇರೂ:** *ಮನೆವಾಳ್ತನ (ಮೈಸೂ.ಜಿ/ ಚಾಮ.ಜಿ)*

ಅಳಿಯನ ಅಮಾಸೆ: ೧. ಆಷಾಢ ಮಾಸದಲ್ಲಿ ಬರುವ ಅಮವಾಸ್ಯೆ. ಮಾವನಾದವನು ಈ ದಿನ ಅಳಿಯನಿಗೆ ಮಳೆಗಾಲದಲ್ಲಿ ಉಪಯೋಗಿಸುವ ಕೊಡೆ ಹಾಗೂ ಪಾದರಕ್ಷೆ ಕೊಡುವ ಪದ್ಧತಿ ಇದೆ (ಉಕ.ಜಿ) ೨. ನಾಗರ ಅಮವಾಸ್ಯೆ. ಹಾಲಕ್ಕಿ ಜನಾಂಗದವರು ಈ ಅಮಾವಾಸ್ಯೆಯ ನಂತರ ಮದುವೆಕಾರ್ಯ ಇಟ್ಟುಕೊಳ್ಳುವುದಿಲ್ಲ. ಅಂದು ಹೊಸ ಅಳಿಯ ಮಾವನಮನೆಗೆ ಹೋಗಲೇಬೇಕೆಂಬ ಸಂಪ್ರದಾಯವಿದೆ (ಉಕ.ಜಿ)

ಅಳಿಯನೆಂಟ: ಅಳಿಯನ ಗೆಳೆಯ; (ಶಿವ.ಜಿ).

ಅಳಿಯಸಂತಾನ: ಸೋದರಳಿಯನಿಗೆ ಮನೆತನದ ಆಸ್ತಿಯ ಹಕ್ಕು ನೀಡುವಿಕೆ. ಈ ಪದ್ಧತಿ ಕೇರಳದ ನಂಬೂದರಿಗಳಲ್ಲಿ ಮಂಗಳೂರಿನ ಬಂಟರಲ್ಲಿ ಹೆಚ್ಚಾಗಿ ರೂಢಿಯಲ್ಲಿದೆ

ಅಳಿಯೂಟ: ೧. ಮದುವೆಯ ನಂತರ ಅಳಿಯನಿಗೆ ಅತ್ತೆ ಮನೆಯಲ್ಲಿ ಮಾಡಿ ಬಡಿಸುವ ವಿಶೇಷ ಅಡುಗೆಗಳು (ಬೆಂಗ್ರಾ.ಜಿ) ೨. ಶಿವಾಚಾರ ನಗರ್ತರಲ್ಲಿ ಮದುವೆಯಾದ ಮೊದಲ ಗೌರಿ ಹಬ್ಬಕ್ಕೆ ಮಗಳು ಅಳಿಯನನ್ನು ಕರೆದು ಮಾಡುವ ಔತಣ. **ಇರೂ:** *ಅಳಿಊಟ*

ಅಳಿರ್: ಕೆಸರು ಭೂಮಿ

ಅಳಿಲುಗೊಂಗಡಿ ಕಂಬಳಿ: ಅಳಿಲಿನ ಮೈಮೇಲೆ ಇರುವ ಕಪ್ಪು ಬಿಳಿ ಪಟ್ಟೆಯಂತೆ ಎರಡು ಬಣ್ಣದಲ್ಲಿ ನೇಯ್ದ ಕಂಬಳಿ

ಅಳಿಲುಬೇಟೆ: ಬುಡ್ಗ ಜಂಗಮರಲ್ಲಿ ಸೂಕ್ಷ್ಮವಾಗಿ ಅಳಿಲನ್ನು ಗಮನಿಸಿ ಕಲ್ಲು ಹೊಡೆದು ಬೇಟೆಮಾಡುವುದು. ದಟ್ಟವಾದ ಪೊದೆಯಲ್ಲಿ ನೇಯ್ದ ಬಲೆ ಹಾಕಿ ಬೇರೆ ಕಡೆಯಿಂದ ಕಲ್ಲೆಸೆದಾಗ ಅಳಿಲು ಬಲೆ ಇರುವ ಕಡೆ ಹೋಗಿ ಬೀಳುವುದು. ಆಗ ಅದನ್ನು ಹಿಡಿಯುತ್ತಾರೆ.

ಅಳಿವಿ: ಅಳಿವೆ. ನದಿ ಸಮುದ್ರ ಸಂಗಮ ಸ್ಥಳ (ದಕ.ಜಿ)

ಅಳಿಹಣ್ಣು: ಪಕ್ವವಾದ ಹಣ್ಣು (ಉಕ.ಜಿ)

ಅಳೀನ ಅಮಾಸೆ: ನೋಡಿ– ಅಳಿಯನ ಅಮಾಸೆ

ಅಳೀಮಕ್ಕು: ಅಳಿಯಂದಿರು (ಮೈಸೂ.ಜಿ)

ಅಳೀಮುಳಕ: ನೋಡಿ– ಅಳ್ಳಿಮುಳ್ಕ

ಅಳು (ನಾ):೧. ಹಳು; ಪೊದರು; ಹೊದರು (ಮೈಸೂ.ಜಿ) (ಕ್ರಿ) ೨. ರೋಧಿಸು; ದುಃಖಪಡು

ಅಳುಕಾಯಿ: ಕೈಯೆಣ್ಣೆ ತಯಾರಿಸುವ ಹರಳುಬೀಜದ ಕಾಯಿ; ಔಡಲಬೀಜದ ಕಾಯಿ (ಮಂಡ್ಯ.ಜಿ)

ಅಳುಕಿಸುವ ಆಟ: ಹುಡುಗರು ಹಾಗೂ ಹುಡುಗಿಯರು ಇಬ್ಬರೂ ಆಡಬಹುದಾದ ಆಟ. ಹುಣಸೆ ಬೀಜಗಳನ್ನು ನೆಲಕ್ಕೆ ಹಾಕಿ ಕಿರುಬೆರಳಿನ ಮೂಲಕ ಎರಡು ಬೀಜಗಳ ಮಧ್ಯ ಗೆರೆ ಎಳೆಯಬೇಕು. ಗೆರೆ ಎಳೆಯುವಾಗ ಕಿರುಬೆರಳು ಹುಣಸೆ ಬೀಜಕ್ಕೆ ಬಡಿದರೆ, ಅವರು ಸೋತರು ಎಂದು ತಿಳಿಯಬೇಕು (ಬಳ್ಳಾ.ಜಿ)

ಅಳುಕು: ೧. ಚದುರು ೨. ಗೋಲಿಯಾಟದಲ್ಲಿ ಆಟಕ್ಕಿಟ್ಟ ಗೋಲಿಗಳನ್ನು ಗುರಿಯಿಟ್ಟು ಹೊಡೆದಾಗ ಅವು ಚದುರುವ ಕ್ರಿಯೆ (ಬೆಂಗ್ರಾ.ಜಿ)

ಅಳುಗೂಳಿಕ್ಕುವುದು: ಮೈಸೂರಿನ ಸುತ್ತಮುತ್ತ ಧಾರೆ ಎರೆದ ತಕ್ಷಣ, ಕಂಕಣ ಬಿಚ್ಚಿಸಿದ ನಂತರ, ಹಸೆಗೆ ಏಳಿಸುವಾಗ, ಭೂವ ಇಕ್ಕುವಾಗ ಮತ್ತು ಮೊದಲ ಬಾರಿ ಗಂಡುಹೆಣ್ಣನ್ನು ಕಳಿಸಿಕೊಡುವಾಗ ಎಲೆ ಅಡಿಕೆ ಹಾಗೂ ತಕ್ಕಷ್ಟು ದಕ್ಷಿಣೆಯನ್ನು ಹೊಸ ಅಳಿಯನಿಗೆ ಕೊಡುವುದು

ಅಳುಚ್ಚಗಾಗು: ೧. ಬೆಳಗಾಗು; ಬೆಳಕುಹರಿ ೨. ಹೊಳವಾಗು; ಕವಿದ ಮೋಡ ಚದುರಿ ವಾತಾವರಣ ಸ್ಪಷ್ಟವಾಗು (ರಾಮ.ಜಿ)

ಅಳುಬುರುಕ: ಹೇಡಿ; ಕೈಲಾಗದವ (ಶಿವ.ಜಿ)

ಅಳುಬೆ: ಅಗುಳಿ; ತಾಳಮುಂಡಿಗೆ; ಲಾಳದಂಡಿಗೆ

ಅಳುವಣ: ಸಾಲಕ್ಕಾಗಿ ಮನೆ, ಜಮೀನು ಮುಂತಾದ ಆಸ್ತಿಯನ್ನು ಭೋಗ್ಯ ಹಾಕುವುದು

ಅಳುವೆ: ನದಿಗಳು ಸಮುದ್ರಕ್ಕೆ ಸೇರುವ ಪ್ರದೇಶದಲ್ಲಿನ ಕೃಷಿ ಭೂಮಿ

ಅಳೆ (ನಾ): ಮಜ್ಜಿಗೆ (ಬೆಳ.ಜಿ); ನೀರು ಮಜ್ಜಿಗೆ (ದಕ)

ಅಳ್ಗಪಾಲ/ಅಳಗಪಾಲ: ಕಿವಿಯ ಮುಂಭಾಗದ ಗದ್ದದ ಮೇಲಿನ ಜಾಗ (ಮಂಡ್ಯ.ಜಿ). **ಪ್ರ**: ಅಳ್ಗಪಾಲ್ಕೆ ಹೊಡುದ್ರೆ ಅಂಗೆ ತಿರುಕ್ಕಂಡ್ ಬಿದ್ದೋಗ್ಬೇಕು

ಅಳ್ಗು: ಕೆರೆ, ಹಳ್ಳ, ಗಜನಿ ಭೂಮಿಯ ನೀರಿನಲ್ಲಿ ಕೇವಲ ಕೈಯಾಡಿಸಿ ಮೀನಿನ ಬೇಟೆ ಆಡುವುದು (ಉಕ.ಜಿ)

ಅಳ್ಗುರಿ: ಅಳಗುರಿ; ಬಿಳಿಯ ಮತ್ತು ಹಳದಿ ಬಣ್ಣ ಮಿಶ್ರಿತವಾದ ಕುರಿ (ಮಂಡ್ಯ.ಜಿ)



ಅಳ್ಗುಳಿಮಣೆ: ಮರದಿಂದ ಮಾಡಿದ ಹದಿನಾಲ್ಕು ಗುಳಿಗಳುಳ್ಳ ಆಟದ ಪರಿಕರ. ಈ ಗುಳಿಗಳಿಗೆ ಹುಣಸೆ ಬೀಜವನ್ನು ಐದೈದರಂತೆ ಹಾಕಿ ಆಟ ಆಡುತ್ತಾರೆ (ಮಂಡ್ಯ.ಜಿ). **ಇರೂ**: *ಚೆನ್ನೆಮಣೆ, ಪಂತಮಣೆ* (ಚಿತ್ರ.ಜಿ), ಅಳ್ಮನೆಗುಳಿ, ಹಳ್ಗುಳಿಮಣೆ, ಅಟ್‌ಗುಣಿ

ಅಳ್ತರಿವಿ: ರಾಶಿ ಅಳೆಯಲು ಉಪಯೋಗಿಸುವ ಒಂದು ಮಾಪನ (ರಾಯ.ಜಿ). **ಇರೂ**: *ಅಳ್ತಿಕೊಡ*

ಅಳ್ದಸಿ: ಹಳ್ಳದ ದೆಸೆ; ಹಳ್ಳದಲ್ಲಿರುವ ಜಮೀನು (ಮೈಸೂ.ಜಿ)

ಅಳ್ನೆತ್ತಿ : ನಡುನೆತ್ತಿ (ಬೀದ.ಜಿ)

ಅಳ್ಳ: ೧. ಅಳತೆಯ ಮಾಪನ; ಎರಡು ಸೊಲ್ಗೆಗೆ ಒಂದು ಅಳ್ಳ (ಉಕ.ಜಿ) ೨. ಗೊಂಡರು ಬಳಸುವ ಅಳತೆಯ ಸಾಧನ. ಇದನ್ನು ಮರದಿಂದ ಮಾಡಿರುತ್ತಾರೆ. ನಾಲ್ಕು ಅಳ್ಳ ಒಂದು ಸಿದ್ದೆ ಪ್ರಮಾಣಕ್ಕೆ ಸಮ (ಉಕ.ಜಿ) ೩. ಅರ್ಧ ಶಿದ್ದೆ (ದಕ.ಜಿ) ೪. ಹಳ್ಳದಲ್ಲಿರುವ ಭೂಮಿ (ಮೈಸೂ.ಜಿ) ೫. ಕೆಟ್ಟ ೬. ನಾಚಿಕೆ; ಸಿಗ್ಗು (ಕೋಲಾ.ಜಿ)

ಅಳ್ಳಕ: ೧. ಸಡಿಲ; ತೆಳ್ಳಗೆ (ಶಿವ.ಜಿ) ೨. ತಿಳಿ; ದ್ರವರೂಪ; ಗಟ್ಟಿಯಲ್ಲದ್ದು (ದಕ.ಜಿ)

ಅಳ್ಳಟ್ಟೆ: ೧. ಕಬ್ಬಿನ ಸಿಪ್ಪೆ ೨. ಬಗಾಸ್ (ಉಕ.ಜಿ)

ಅಳ್ಳದಕಾಯಿ: ಹಳ್ಳದಕಾಯಿ; ಪಳ್ಳದಕಾಯಿ; ಪಡವಲಕಾಯಿ

ಅಳ್ಳಾಂಬ್ಲಿ: ಹೊಲಕ್ಕೆ ಚೆಲ್ಲುವ ಅರಳಿನ ಅಂಬಲಿ

ಅಳ್ಳಾಟಗಾರ: ಮೋಸಗಾರ

ಅಳ್ಳಿ: ೧. ಅರಳಿಯ ಮರ ೨. ಹತ್ತಿ ೩. ವಸ್ತುವಿನ ಹೆಸರು ೪. ಹೊಟ್ಟೆ; ಅಳ್ಳೆ; ಪಕ್ಕೆ. **ಇರೂ**: *ಅಳ್ಳಿಪರಿ (ಮಂಡ್ಯ.ಜಿ)*

ಅಳ್ಳಿಆಗು: ದನಗಳು ಹೊಟ್ಟೆ ತುಂಬಾ ಮೇಯ್ದಾಗ ಎರಡೂ ಪಕ್ಕೆಗಳು ತುಂಬಿಕೊಳ್ಳುವಿಕೆ (ಬಳ್ಳಾ.ಜಿ)

ಅಳ್ಳಿಎಲೆ ಹುಳ್ಳಿಸೊಪ್ಪು: ಕನಿಷ್ಟವಾದ ಊಟ. ಕಾಟಾಚಾರದ ಊಟ (ಮೈಸೂ.ಜಿ). **ಪ್ರ**: ಹೆಂಗಿತ್ತೊ ಊಟ? ಅಳ್ಳಿ ಎಲೆ ಮೇಲೆ ಹುಳ್ಳಿ ಸೊಪ್ಪು ಹಾಕಿ ಕಳಿಸಿದ್ರು

ಅಳ್ಳಿಕಣ್ಣೆ: ಕಿಪ್ಪೊಟ್ಟೆ; ಕಿಬ್ಬೊಟ್ಟೆ

ಅಳ್ಳಿಕುಂಚ: ಹಳ್ಳಿಕುಂಚ; ೧. ಅಳಿಲು. **ಪ್ರ**: ಒಂದೆರಡು ದಿನ ಅಳ್ಳಿಕುಂಚಗಳನ್ನು ಹೊಡೆದುಕೊಂಡು ಬಂದು ಅದನ್ನು ಸುಟ್ಟು ನಂಚಿಕೊಂಡಿದ್ದ ೨. ಮುಂಗ್ಸಿ

ಅಳ್ಳಿಕುಸಿ: ೧. ಮೇವು ತಿನ್ನದ ಪ್ರಾಣಿಗಳ ಪಕ್ಕೆಯ ಜಾಗ ಕುಳಿ ಬಿದ್ದಿರುವಿಕೆ (ಬಳ್ಳಾ.ಜಿ) ೨. ಬಡಕಲು ಬಿದ್ದ ಪ್ರಾಣಿಯ ಪಕ್ಕೆ

ಅಳ್ಳಿಗೊಂಬೆ: ಹತ್ತಿಯ ಗೊಂಬೆ. ಮಕ್ಕಳು ಹೆದರಿರುವ ಸಂದರ್ಭದಲ್ಲಿ ಹತ್ತಿಯಗೊಂಬೆ ಮಾಡಿ ಮಗುವನ್ನು ಉತ್ತರ ದಿಕ್ಕಿಗೆ ನಿಲ್ಲಿಸಿಕೊಂಡು ಆ ಗೊಂಬೆಯಿಂದ ಇಳೆದೆಗೆದು, ಮೂರು ಬಾರಿ ಮಗುವಿನ ಮುಖಕ್ಕೆ ಉಗಿದು, ಮನೆ ಹೆಬ್ಬಾಗಿಲಿನ ಹಿಂದೆ ಗೊಂಬೆಯನ್ನು ಬೆಂಕಿಯಿಂದ ಸುಡುವ ಪದ್ಧತಿ (ಬಳ್ಳಾ.ಜಿ)

ಅಳ್ಳಿಚಪ್ಪು: ಪಕ್ಕೆಲುಬು. **ಪ್ರ**: ಸೊಕ್ಕ್ ಮಾಡಿದ್ರೆ ಅಳ್ಳಿಚಪ್ಪು ಮುರ್ದ್ ಹಾಕ್ತೀನಿ

ಅಳ್ಳಿಟ್ಟಿನ ಉಂಡೆ: ಅರಳು ಹಿಟ್ಟಿನ ಉಂಡೆ; ಗೋಧಿ ಮತ್ತು ಕಡಲೆಬೇಳೆಗಳನ್ನು ಹುರಿದು ಹಿಟ್ಟು ಮಾಡಿ ಅದಕ್ಕೆ ಬೆಲ್ಲದ ಪಾಕ ಹಾಕಿ ಮಾಡಿದ ಉಂಡೆ. ಪಂಚಮಿಯ ಹಬ್ಬದಲ್ಲಿ ಮಾಡುತ್ತಾರೆ. ಶಿವರಾತ್ರಿ ಏಕಾದಶಿಯ ದಿವಸ ಮತ್ತು ಆಷಾಢ ಏಕಾದಶಿಯಂದು ಈ ಉಂಡೆಗಳ ನೈವೇದ್ಯ ಅರ್ಪಿಸಿ ಹಗಲೆಲ್ಲ ಉಪವಾಸ ಇರುವವರು ತಿನ್ನುತ್ತಾರೆ. ಕೆರ್ಯಾಂಬಲಿ ದಿವಸ ಹೊಲಕ್ಕೆ ಚರಗ ಚೆಲ್ಲುವಾಗ ಉಳಿದ ಪದಾರ್ಥಗಳೊಡನೆ ಕೂಡಿಸಿ ಚೆಲ್ಲುತ್ತಾರೆ (ಶಿವ.ಜಿ)

ಅಳ್ಳಿಟ್ಟು: ೧. ಅವಲು ಕುಟ್ಟಿ ತಯಾರಿಸಿದ ಹಿಟ್ಟು; ಜೋಳದ ಹಿಟ್ಟು (ರಾಯ.ಜಿ); ನಾಗರ ಪಂಚಮಿಯ ಸಂದರ್ಭದಲ್ಲಿ ಮಾಡುವ ಸಿಹಿ ತಿನಿಸು (ಬಿಜಾ.ಜಿ) ೨. ಜೋಳದ ಅರಳನ್ನು ಕುಟ್ಟಿ ಪುಡಿ ಮಾಡಿ ಸಕ್ಕರೆ ಪುಡಿ, ಏಲಕ್ಕಿ ಪುಡಿ ಸೇರಿಸಿ ಮಾಡಿದ ಸಿಹಿತಿನಿಸು (ಗುಲ್ಬ.ಜಿ)

ಅಳ್ಳಿನ ಜ್ವಾಳ: ಅರಳು ಮಾಡಲು ಬಳಸುವ ಜೋಳ.

ಅಳ್ಳಿಬಸಪ್ಪ: ೧. ಬಣ್ಣ ಹಚ್ಚಿದ ಬಸವ (ಬಾಗ.ಜಿ) ೨. ಶಿವಪಾರ್ವತಿಯರು ನಂದಿ ಮೇಲೆ ಕುಳಿತ ಮೂರ್ತಿ

ಅಳ್ಳಿಬೆಂಕಿ: ಮಣ್ಣಿನ ಕೊಡ, ಗಡಿಗೆ, ಬಾನಿ ಮುಂತಾದವನ್ನು ಪೂರ್ಣಪ್ರಮಾಣದಲ್ಲಿ ಸುಡಲು ಶಕ್ತವಲ್ಲದ ಮಂದಬೆಂಕಿ. **ಇರೂ**: *ಅರಳಿ ಬೆಂಕಿ*

ಅಳ್ಳಿಮರ: ೧. ಅರಳಿಮರ (ಮೈಸೂ.ಜಿ) ೨. ಬುಡಕಟ್ಟಿನವರು ಬರೆಯುವ ಅರಳಿ ಮರದ ರಂಗೋಲಿ ನಕ್ಷೆಯ ಹೆಸರು

ಅಳ್ಳಿಮುಳ್ಳ/ಅಳೀಮುಳಕ: ಕಮಲದ ಹೂವು. ಇದರ ಬೇರಿನಡಿಯಲ್ಲಿ ಒಂದು ಮುಷ್ಟಿಯಾಕಾರದ ಗಡ್ಡೆ ಬೆಳೆಯುತ್ತದೆ. ದನಗಾಹಿ ಮಕ್ಕಳು ಈ ಗಡ್ಡೆಯನ್ನು ಒಡೆದು ಅದರಲ್ಲಿ ಸಿಗುವ ರಾಗಿಕಾಳಿನಂತಹ ಬೀಜಗಳನ್ನು ತಿನ್ನುತ್ತಾರೆ

ಅಳ್ಳಿಹೂ: ಕಮಲ; ತಾವರೆ (ಉಕ.ಜಿ)

ಅಳ್ಳೀಕುಂಚ: ಅಳಿಲು

ಅಳ್ಳು (ನಾ): ೧. ಹರಳು; ಉಪ್ಪಿನ ಹರಳು. **ಪ್ರ**: ಒಂದಳ್ಳು ಉಪ್ಪಾಕು ೨. ಕನ್ನಡಿ ಗಾಜು. **ಪ್ರ**: ಕನ್ನಡಿ ಅಳ್ಳು ಒಡೆದುಹೋಯ್ತು ೩. ಅರಳೆ (ಧಾರ.ಜಿ) ೪. ಜೋಳದ ಅಥವಾ ಭತ್ತದ ಅರಳು ೫. ಧಾನ್ಯ ೬. ಚುರಮುರಿ ೭. ಪಗಡೆದಾಳ ೮. ಪ್ರಾಣಿಗಳ ಅಳ್ಳೆ; ಪಕ್ಕೆಯ ಒಂದು ಭಾಗ; ಶ್ವಾಸಕೋಶವಿರುವ ಭಾಗ ೯. ಅಳ್ಳಗುಳಿ ಮಣಿಯಾಟದಲ್ಲಿ ಗುಳಿಗೆ ತುಂಬುವ ಹುಣಿಸೆಬೀಜ, ಕಲ್ಲು, ಕವಡೆ, ಕಾಳು ಇತ್ಯಾದಿ ವಸ್ತುಗಳು (ಬೆಂಗ್ರಾ.ಜಿ) (ಕ್ರಿ). ೧೦. ಅರಳು. **ಪ್ರ**: ಹೂವು ಅರಳಿದೆ

ಅಳ್ಳುಕಟ್ಟಿಸು: ಅಳ್ಳು ಹಾಕಿಸು; ಚಿತ್ರಪಟಗಳಿಗೆ ಗಾಜಿನ ಚೌಕಟ್ಟು ಹಾಕಿಸು

ಅಳ್ಳುಕಟ್ಟು: ಹರಳು ಕಟ್ಟುವ ರೋಗ (ಚಾಮು.ಜಿ)

ಅಳ್ಳುಬತ್ತ: ಅರಳು ಮತ್ತು ಬತ್ತದ ಮಿಶ್ರಣ (ಚಿಮ.ಜಿ)

ಅಳ್ಳುಹುರಿ: ಜೋಳ ಅಥವಾ ಭತ್ತ ಹುರಿದು ಅರಳು ತಯಾರಿಸು (ಧಾರ.ಜಿ)

ಅಳ್ಳೂಮ: ಅಳ್ಳಿಕುಂಚ; ಅಳಿಲು

ಅಳ್ಳೆ: ೧. ಅರಳೆ; ಹತ್ತಿ ೨. ಆಯಕಟ್ಟಿನ ಪಕ್ಕೆಯ ಭಾಗ, ಪಕ್ಕೆ, ಬಗಲು (ಮೈಸೂ.ಜಿ) **ಪ್ರ**: ಅವ್ರು ಅಳ್ಳೆ ಹಿಡ್ಕೊಂಡು ನಗಾಡುದ್ರು. (ಮೈಸೂ.ಜಿ). **ಪ್ರ**: ಅಳ್ಳೆಗೆ ಏಟ್ ಬಿದ್ದು ಅವ್ನ ಉಸಿರು ಸಿಕ್ಕಿ ಬಿದ್ದ ೩. ಕಂಕುಳ ಕೆಳಭಾಗ. **ಪ್ರ**: ಅಳ್ಳೆ ಬಿರಿಯುವ ಹಾಗೆ ನಕ್ಕರು ೪. ಶ್ವಾಸಕೋಶ; ದೊಮ್ಮೆ ೫. ಏಡಿ (ಮಂಡ್ಯ.ಜಿ)

ಅಳ್ಳೆಂಜಿಗಾತಿ: ಮೈಗಳ್ಳಿ; ಸೋಮಾರಿ

ಅಳ್ಳೆಗುಳ್ಳೆಬಸವಣ್ಣ: ಒಂದು ಕೀಟ

ಅಳ್ಳೊಡೆ: ಭಯಭೀತನಾಗು; ಧೈರ್ಯಗೆಡು; ಹೆದರು (ಬಳ್ಳಾ.ಜಿ) ಇರೂ: *ಅಳ್ಳೋಗ*

ಆ

ಆಂಕಾರ: ಅಹಂಕಾರ; ದುರಹಂಕಾರ; ಗರ್ವ

ಆಂಕೆ: ನಿಯಂತ್ರಣ; ಹತೋಟಿ (ದಕ.ಜಿ). **ಪ್ರ**: ಬಲ ಕೈಯಲ್ಲಿ ಆಂಕೆಯೆ ಇಲ್ಯೆ

ಆಂಕ್ಲಿ: ಅಂಕೋಲೆ ಮರ

ಆಂಜ: ಎತ್ತರವಾದ ಅಟ್ಟ

ಆಂಜನೇಯನ ಬೆಟ್ಟ: ಒಂದು ರಂಗೋಲಿ ವಿನ್ಯಾಸದ ಹೆಸರು. ಆಂಜನೇಯ ಸಂಜೀವಿನಿ ಹುಡುಕಲು ಏರಿದ ಬೆಟ್ಟದ ವಿನ್ಯಾಸ. ಬೆಟ್ಟದ ಜೊತೆಗೆ ತುದಿಯಲ್ಲೊಂದು ಧ್ವಜವನ್ನು ಇಟ್ಟು ನಕ್ಷೆಯನ್ನು ಬಿಡಿಸುವುದರ ಮೂಲಕ ಹನುಮಂತನು ತಮ್ಮ ಎಲ್ಲಾ ಇಚ್ಛೆ ನೆರವೇರಿಸಲಿ ಎಂಬ ಆಶಯ (ದಕ.ಜಿ)

ಆಂಜನೇಯವೇಷ: ಹನುಮಂತನ ವೇಷ; ಬಹುರೂಪಿಗಳು ಬುಡ್ಗ ಜಂಗಮರು ಮುಂತಾದವರು ಭಿಕ್ಷೆಮಾಡುವಾಗ ಹಾಕಿಕೊಳ್ಳುವ ವಿವಿಧ ವೇಷಗಳಲ್ಲಿ ಒಂದು

ಆಂಜು: ಹಾಯು; ಚಲಿಸಿದಂತೆ ಭಾಸವಾಗು (ದಕ.ಜಿ)

ಆಂಟಲ: ಅಟ್ಟ

ಆಂಟಿ: ಎರಡರಿಂದ ಮೂರು ಅಡಿ ದೊಡ್ಡದಾದ, ದಪ್ಪ ತುಟಿಯ ಮೀನು (ಉಡು.ಜಿ)

ಆಂಟಿಮುರಿಯುವುದು: ಕುಸ್ತಿಯಲ್ಲಿ ಎದುರಾಳಿಯನ್ನು ಎರಡೂ ಕೈಗಳಿಂದ ತಬ್ಬಿ ಹಿಡಿದು ಎದೆಗೆ ತಲೆಕೊಟ್ಟು ಶರೀರವನ್ನು ಮುರಿದಂತೆ ಮಾಡುವುದು

ಆಂಟೆ: ಕಡಿದಾದ ಅರಣ್ಯ ಪ್ರದೇಶ (ಉಕ.ಜಿ)

ಆಂದುಗಲ್ಲು: ಬೀಸುವ ಕಲ್ಲು (ಮೈಸೂ.ಜಿ)

ಆಂದ್ರವಾಯು: ವೃಷಣ ಕೋಶದ ಉರಿಯೂತ (ದಕ.ಜಿ)

ಆಂದ್ಲೆ: ಆರಿದ್ರಾ ಮಳೆನಕ್ಷತ್ರ (ಉಕ.ಜಿ)

ಆಂಬುರು: 1. ಹೋಳಿಗೆಯ ಹೂರಣಕ್ಕೆ ಕುದಿಸಿದ ತೊಗರಿಬೇಳೆ, ಕಡಲೆಬೇಳೆ ಕಟ್ಟಿನಿಂದ ಮಾಡಿದ ಸಾರು. (ಧಾರ.ಜಿ) 2. ತಿಳಿಸಾರು **ಪ್ರ**: ಹೋಳಿಯಾಂಬುರು (ಗುಲ್ಬ.ಜಿ)

ಆಂಬುಲ್ಶೈ: ದಪ್ಪ ಕಾಯಿ (ಧಾರ.ಜಿ)

ಆಂಬೊಡೆ: ಕಡ್ಲೆಬೇಳೆ, ಉದ್ದಿನಬೇಳೆಗಳನ್ನು ನೆನೆಸಿ, ಇತರ ಹಸಿಮೆಣಸಿನಕಾಯಿ, ಕೊತ್ತಂಬರಿ, ಕರಿಬೇವು, ಕಾಯಿ ಮೆಣಸಿನಕಾಳು ಮೊದಲಾದ ಪದಾರ್ಥಗಳೊಂದಿಗೆ ರುಬ್ಬಿ, ಎಣ್ಣೆಯಲ್ಲಿ ಕರಿದು ತಯಾರಿಸುವ ವಡೆ. ಹಬ್ಬದ ದಿನ, ಶ್ರಾದ್ಧಕರ್ಮಗಳಲ್ಲಿಯೂ, ವಿಶೇಷ ಅಡಿಗೆಯಲ್ಲಿಯೂ ಅಂಬೊಡೆಗಳನ್ನು ಮಾಡುವರು (ಧಾರ.ಜಿ)

ಆಂಬ್ರ: ಉಪ್ಪು, ಖಾರ, ಮೆಣಸಿನಕಾಯಿ, ಬೆಳ್ಳುಳ್ಳಿ, ಜೀರಿಗೆ ಮುಂತಾದ ಸಾಂಬಾರ ಪದಾರ್ಥಗಳನ್ನು ರುಬ್ಬಿ, ಬೇಯಿಸಿ ಮಜ್ಜಿಗೆಯಲ್ಲಿ ಬೆರೆಸಿ ಮಾಡುವ ಸಾರು (ದಾವ.ಜಿ). ***ಇರೂ***: *ಮಜ್ಜಿಗೆ ಹುಳಿ; ಮಜ್ಜಿಗೆಯಂಬ್ರ (ಮೈಸೂ.ಜಿ) ಆಮ್ರ; ಆಂಬೂರ; ಆಂಬರ; ಆಂಬ್ರಕಟ್ಟು (ಬೆಳ.ಜಿ)*

ಆಂವಬೀಳು: ಅಮಶಂಕೆಯಲ್ಲಿ ಸಿಂಬಳದಂತೆ ಬೀಳುವ ಮಲ

ಆಂವಿಗಿ: ನೋಡಿ– ಆವುಗೆ

ಆಕರ: ದಾಹ; ಬಾಯಾರಿಕೆ (ಮಲೆ). **ಪ್ರ**: ಕಳ್ಳಂಗಡೀಲಿ ಏನಾದ್ರೂ ಕುಡುಕೊಂಡು ಹೋಗಾನೊ, ಬಾಳ ಆಕರ ಆಗ್ತದೆ

ಆಕರಿಕೆಸೊಪ್ಪು: ಹೊಲಗಳಲ್ಲಿ ಬೆಳೆಯುವ ಕಳೆ ಸಸ್ಯ; ಈ ಸೊಪ್ಪಿನ ಪಲ್ಯವನ್ನು ಮಾಡುತ್ತಾರೆ (ಬಳ್ಳಾ.ಜಿ)

ಆಕರ್ಷಣೆಯಾಗು: ದೇವರು ವ್ಯಕ್ತಿಯ ದೇಹದಲ್ಲಿ ಆವಾಹನೆಯಾಗುವುದು; ಪ್ರವೇಶವಾಗು. **ಪ್ರ**: ಅವಳ ಮೇಲೆ ಸಿರಿ ದೈವದ ಆಕರ್ಷಣೆಯಾಗುತ್ತದೆ (ದಕ.ಜಿ)

ಆಕಳಂಥವನು: ಬಹಳ ಒಳ್ಳೆಯವನು; ಸರಳ ಸಾಧು ಸ್ವಭಾವದವನು (ಧಾರ.ಜಿ)

ಆಕಳದಾನ: ಗೋದಾನ. ದೋಷ ಅಥವಾ ಸಾವಿನ ಸೂತಕ ಪರಿಹಾರಾರ್ಥವಾಗಿ ಹಾಲು ಕರೆಯುವ ಹಸುವನ್ನು ಕರುವಿನೊಂದಿಗೆ ಬ್ರಾಹ್ಮಣರಿಗೆ ದಾನ ಮಾಡುವ ಸಂಪ್ರದಾಯ

ಆಕಳಪಂಚಮಿ: ಹೊಲದಲ್ಲಿ ಬೆಳೆ ಕುಯ್ಯುವ ಮೊದಲು ಸಲ್ಲಿಸುವ ಪೂಜೆ

ಆಕಳಪಾದ: ಒಂದು ರಂಗೋಲಿ ಚಿತ್ರ; ಎರಡು ಕೈ ಮುಷ್ಠಿಮಾಡಿ ಊರಿ ಇದನ್ನು ಬಿಡಿಸುತ್ತಾರೆ

ಆಕಳಬೀಳು (ನಾ): ದನಕರುಗಳು ಮೇಯುವ ಪ್ರದೇಶ; ಗೋಮಾಳ

ಆಕಳಮಕ: ೧. ಸಪ್ಪೆಮುಖ ೨. ಆಕಳದಂಥ ಮುಖ



ಆಕಳ ಸುಳಿಗಳು: ಆಕಳಿನ ಮೈಮೇಲಿರುವ ರೋಮ ವಿನ್ಯಾಸ; ಸುಳಿಗಳಲ್ಲಿ ಅನೇಕ ನಮೂನೆಗಳಿವೆ. ಛತ್ರಸುಳಿ, ಮುಕ್ಕಣ್ಣಸುಳಿ, ತಾಯಿ ಸುಳಿ, ಗೂಬೆಸುಳಿ, ದಂಡೆಸುಳಿ, ನೊಗಬಡಕ, ಪಾತಾಳಸುಳಿ, ರಾಜ ಸುಳಿ, ದಾವಣಿಸುಳಿ, ನಗಾರಿಸುಳಿ, ಪರಕಿಸುಳಿ, ಕಾಡುಸುಳಿ, ಗುಂಡಿಗೆಸುಳಿ, ಬೇಡಿಸುಳಿ, ಸಂಕಾಲೆಸುಳಿ ಇತ್ಯಾದಿ. ಪ್ರಾದೇಶಿಕವಾಗಿ ಈ ಹೆಸರುಗಳಲ್ಲಿ ಭಿನ್ನತೆ ಇದೆ

ಆಕಳಿ: ಬಡಕಲು; ಕನಿಷ್ಠ

ಆಕಳಿಕೆ ಹರಿ: ದೀರ್ಘವಾದ ಆಕಳಿಕೆ ಉಂಟಾಗುವುದು (ಮೈಸೂ.ಜಿ). **ಪ್ರ**: ಯಾಕೊ ಬೆಳಗಿಂದ ಬರೀ ಆಕಳಿಕೆ ಹರೀತಾವೆ

ಆಕಾರ: ೧. ಹೊಲ ಗದ್ದೆ ತೋಟ ಮುಂತಾದ ಕೃಷಿ ಕ್ಷೇತ್ರದ ವಿಸ್ತಾರ ೨. ಹೊಲದ ಸಲುವಾಗಿ ಸರಕಾರಕ್ಕೆ ತುಂಬಬೇಕಾದ ಭೂ ಕಂದಾಯ (ಬೀದ.ಜಿ) ೩. ಸರ್ವೆ ನಂಬರು ಮತ್ತು ಆ ಜಮೀನಿಗೆ ಗೊತ್ತಾದ ಕಂದಾಯವನ್ನು ತಿಳಿಸುವ ದಾಖಲೆ. **ಇರೂ**: *ಆಕಾರಬಂದ್*

ಆಕಾರಸೂಟಿ ಬಿಡುವುದು: ಬರಗಾಲ ಬಂದಾಗ ಸರಕಾರ ಭೂ ಕಂದಾಯಕ್ಕೆ ವಿನಾಯಿತಿ ಕೊಡುವುದು

ಆಕಾಶಗರುಡ: ಒಂದು ಜಾತಿಯ ಬಳ್ಳಿ

ಆಕಾಶತಾಮರೆ: *ಪಿಸ್ಟಿಯಾ ಸ್ಟ್ರ್ಯಾಟಿಯೋಟಸ್*: ಅಂತರಗಂಗೆ; ಔಷಧಿಯುಕ್ತ ಗಿಡ, ಕೆಸುವಿನ ವಂಶಕ್ಕೆ ಸೇರಿದ ಇದು ಅಲಂಕಾರಕ್ಕೆ ಬಳಸುವ ಜಲಸಸ್ಯ (ಶಿವ.ಜಿ)

ಆಕಾಶದೇವ್ತಿ: ಹರಿಕಾಂತ ಸಮುದಾಯದವರಲ್ಲಿ, ಮಕ್ಕಳನ್ನು ಪೀಡಿಸುತ್ತಾಳೆಂದು ನಂಬುವ ದೇವತೆ (ಉಕ.ಜಿ)



ಆಕಾಶಬುಟ್ಟಿ: ೧. ದೀಪಾವಳಿಯ ಸಂದರ್ಭದಲ್ಲಿ ಬಿದಿರಿನ ಕಡ್ಡಿಗಳಿಂದ ವಿವಿಧ ವಿನ್ಯಾಸ ಮಾಡಿ ಅದರ ಮೇಲೆ ಬಣ್ಣಬಣ್ಣದ ಕಾಗದಗಳನ್ನು ಅಂಟಿಸಿದ ಬುಟ್ಟಿ; ಆ ಬುಟ್ಟಿಯೊಳಗಡೆ ದೀಪ ಇಟ್ಟು ಮನೆಯ ಮುಂದೆ ನೇತುಹಾಕುವ ಸಂಪ್ರದಾಯ ೨. ದೇವರ ಮೆರವಣಿಗೆ ಮತ್ತು ರಥಗಳ ಅಂಚುಗಳಿಗೆ ಕಟ್ಟುವ ಅಲಂಕಾರದ ಬುಟ್ಟಿ. **ಇರೂ**: *ಆಕಾಸ್ಬುಟ್ಟಿ*

ಆಕಾಶ್‌ಮೀನು: ಒಂದು ಜಾತಿಯ ಮೀನು; ಮಾರ್‍ವ ಮೀನು (ಕೋಲಾ.ಜಿ)

ಆಕು(ನಾ) : ಗಾಡಿಯ ಚಕ್ರ (ಕೋಲಾ.ಜಿ)

ಆಕುಸಿ: **ನೋಡಿ**– ಅಕ್ಕುಸ್ತೆ

ಆಕುಳು ಗ್ವಾತಾ: ಹಸುವಿನ ಮೂತ್ರ (ಧಾರ.ಜಿ)

ಆಕುಳ್ಕರಾ: ಆಕಳಕರು, ಹಸುವಿನ ಕರು (ಧಾರ.ಜಿ)

ಆಕುಳ್ಕೆ: ಆಕಳಿಕೆ. **ಇರೂ**: *ಅಲ್ಕಿಕೆ; ಆಕ್ಳಿಕೆ; ಆಗುಳ್ಕೆ (ಮಂಡ್ಯ.ಜಿ)*

ಆಕ್ಕೆ: ಬಾಯಾರಿಕೆ

ಆಕ್ರ: ೧. ಪಶುಗಳ ನಾಲಗೆಗೆ ಬರುವ ಒಂದು ರೋಗ (ಮಂಡ್ಯ.ಜಿ) ೨. ಬಾಯಾರಿಕೆ; ದಾಹ (ಬಳ್ಳಾ.ಜಿ) ೩. ಗರಗಸ ಕುಡುಗೋಲು ಮುಂತಾದುವನ್ನು ಹರಿತಗೊಳಿಸುವ ಉಕ್ಕಿನ ಸಾಧನ; ಅರ ೪. ಭೂಕಂದಾಯ ೫. ಮಸೆಕಲ್ಲು; ಮಸೆಮಣೆ ೬. ಬೈರಿಗೆ (ಬೆಂಗ್ರಾ.ಜಿ). **ಇರೂ**: *ಆಕ್ರಾಯಿ, ಆಕ್ರಾಯ, ಆಕರಾಯ್, ಆಕಾರ*

ಆಕ್ರಾಯ: **ನೋಡಿ**– ಆಕ್‌ರಾಯಿ

ಆಕ್‌ರಾಯಿ/ಆಕ್ರಾಯ: ೧. ಕುಡುಕೋಲಿಗೆ ಹಲ್ಲುಗಳನ್ನು ಮಾಡಲು ಬಳಸುವ ಉಕ್ಕು ಅಥವಾ ಕಬ್ಬಿಣದ ಸಾಧನ **೨.** ಬೇಟೆಯ ಆಯುಧಗಳನ್ನು ಮಸೆದು ಹರಿತಗೊಳಿಸುವ ಸಾಧನ (ಕೋಲಾ.ಜಿ)

ಆಕ್ಲಸ: ೧. ತಮಾಷೆ; ಸರಸ ೨. ಅಪಹಾಸ್ಯ ೩. ಅತಿಯಾಸೆ (ಮೈಸೂ.ಜಿ/ಚಾಮ.ಜಿ) **ಇರೂ**: ಹಾಕ್ಲಸ; ಆಕ್ಲಾಸ; ಆಕ್ಲ್ಯಾಸ; ಆಕ್ಸಲ; ಆಕ್ಕಾಸ; ಆಕಲಾಸ

ಆಕ್ಕಿ: ಚೀಕು; ಕಳಪೆ. **ಪ್ರ**: ಆಕ್ಕಿಮಾವು

ಆಕ್ಕಿಗೂಡು: ಖಾಯಿಲೆಗೆ ತುತ್ತಾದ ರೇಷ್ಮೆ ಹುಳುಗಳಿಂದಾದ ರೇಷ್ಮೆ ಗೂಡು. ಇಂತಹ ಗೂಡುಗಳಿಗೆ ಮಾರುಕಟ್ಟೆಯಲ್ಲಿ ಅತಿ ಕಡಿಮೆ ಬೆಲೆಯಿರುತ್ತದೆ (ಮಂಡ್ಯ.ಜಿ)

ಆಖಡಿ: ೧. ಸಾಲು ೨. ಮೆದೆ

ಆಖು: ಇಲಿ (ಉಕ.ಜಿ)

ಆಗದ ಕಾಸು: ಹಾಗದ ಕಾಸು; ಹಾಗ ಎಂಬ ಹೆಸರಿನಲ್ಲಿ ಕರೆಯಲಾಗುತ್ತಿದ್ದ ನಾಣ್ಯ. ಒಂದಾಣೆ ಎರಡು ಕಾಸುಗಳ ಮೌಲ್ಯವುಳ್ಳದ್ದು; ಈಗಿನ ಏಳು ಪೈಸೆ ಮೌಲ್ಯ

ಆಗಬೋಗ: ಸಕಲ ಸಂಪತ್ತು; ಭೋಗ **ಪ್ರ**: ಆಗಬೋಗ ಅಲಮೇಲಮ್ಮನ್ಗೆ, ಗೂರ್ಲು ಉಬ್ಬಸ ತಿರುಮಲಮ್ಮನ್ಗೆ

ಆಗಮಾಡುವುದು: ೧. ಹದಮಾಡುವುದು ೨. ಗದ್ದೆ ಉಳುವುದು

ಆಗರ: ೧. ಕಾಯಿಪಲ್ಯ ಬೆಳೆಯುವ ಹಿತ್ತಿಲು ೨. ಬಹಳ (ಮಂಡ್ಯ.ಜಿ) ೩. ಉಪ್ಪು ತಯಾರಿಸುವ ಸ್ಥಳ; **ಪ್ರ**: ಆಗರದಂಥಾ ನೆಂಟರು ಉಪ್ಪಿಗೆ ತತ್ವಾರ

ಆಗಲು: ಹಾಗಲಕಾಯಿ. **ಇರೂ:** ಆಗುವಲಕಾಯಿ

ಆಗಾಂತರ: ಪ್ರದೇಶ; ವಲಯ; ಸುತ್ತಮುತ್ತ (ಮೈಸೂ.ಜಿ) **ಪ್ರ**: ನಮ್ ಆಗಾಂತ್ರುದಲ್ಲೆ ದೊಡ್ಡಟ್ಟಿಯೋರ ಸರಿಗಟ್ಟೋರಿಲ್ಲ

ಆಗುಳ: ಐದು ಕೊಳಗ ಬೀಜ ಬಿತ್ತಬಲ್ಲಷ್ಟು ಜಮೀನು.

ಆಗೈ: ಹಗ್ಗೈ. ಕೊರಡಿಗೆ ಇರುವ ಎರಡು ಚಿಕ್ಕ ಗೂಟಗಳು. ದೊಡ್ಡ ಕುಂಟಿಗೆಗೆ ಕೂಡ ಎರಡು ಆಗೈಗಳು ಇರುತ್ತವೆ. (ಉಕ.ಜಿ/ಶಿವ.ಜಿ)

ಆಗ್ರ: ಆಗರ. ಮರ ಮತ್ತು ಲೋಹಗಳಲ್ಲಿ ತೂತು ಕೊರೆಯುವ ಸಾಧನ (ಮಂಡ್ಯ.ಜಿ). **ಇರೂ:** *ಬೈರಿಗೆ (ಬೆಂಗ್ರಾ.ಜಿ)*

ಆಗ್ರಾದಳಿಯಡಿಕೆ: ಅಗ್ರಭಾಗದಿಂದ ತೆಗೆದ ಚಿಗುರು ಅಡಕೆ

ಆಗ್ಲು ಗಿಡ: ಹಾಗಲಗಿಡ (ಬೆಂಗ್ರಾ.ಜಿ)

ಆಚಲು: *ಬಾಹಿನಿಯ ಅಕ್ಯುಮಿನೇಟ ರ್‍ಯಾಸಿಮೋಸ:* ಒಂದು ಔಷಧೀಯ ಸಸ್ಯ. **ಇರೂ:** *ವನಸಂಪಿಗೆ; ಶ್ವೇತಕಾಂಚನ* ಮರ (ಚಿತ್ರ ನೋಡಿ)

ಆಚಾರಿ: ಅಕ್ಕಸಾಲಿಗ, ಬಡಗಿ ಕಮ್ಮಾರ ಮುಂತಾದವರು; ಮರ, ಕಬ್ಬಿಣ, ಚಿನ್ನದ ಕೆಲಸ ಮಾಡುವವನು (ಉಕ.ಜಿ)

ಆಚಾರಿಕೋಲು: ಅಂಗುಲ ಅಳತೆಯ ಮಾನದಂಡ (ದಕ.ಜಿ)

ಆಚಾರಿಪುಡಿ: ಒಂದು ವಿಧದ ಹುಣ್ಣು (ದಕ.ಜಿ)

ಆಚಾರಿಸಾಲಿ: ಆಚಾರಿ ಜಾತಿಯವರು ಕೆಲಸ ಮಾಡುವ ಸ್ಥಳ; ಕುಲುಮೆಮನೆ; ಕಮ್ಮಾರ್ ಸಾಲಿ (ದಕ.ಜಿ)

ಆಚಾರ್ತಿ: ಕಮ್ಮಾರ, ಬಡಗಿ, ಅಕ್ಕಸಾಲಿ ಮನೆತನದ ಹೆಂಗಸು (ದಕ.ಜಿ)

ಆಚೆಆಗು: ಮುಟ್ಟಾಗು; ಹೊರಗಾಗು

ಆಚೆಗಂಡ: ಮಿಂಡ; ಪ್ರಿಯಕರ

ಆಜಸೂಲ: ಆಣೆ ಭಾಷೆ ಹಾಕಿಕೊಳ್ಳುವಿಕೆ **ನೋಡಿ–** ಆಣೇತಿನ್ನು

ಆಜಳ: ಆರು ಬಳ್ಳಗಳ ಪ್ರಮಾಣ (ದಕ.ಜಿ)

ಆಜೀಲು: *ಡೈಸೋಜೈಲಮ್ ಬೈನೆಕ್ಟೆರಿಫೆರಮ್:* ಕಾಡುಗಂಧ; ಅಗಿಲು ಮರ

ಆಜೋರಿ: ಒಂದು ಸಸ್ಯ ವಿಶೇಷ

ಆಜ್ಜೆ: ೧. ನಾಲ್ಕು ಕಳಸಿಗೆ ಅಥವಾ ೫೬ ಸೇರುಗಳ ಒಂದು ಅಳತೆಯ ಮಾನ ೨. ಅರವತ್ತು ಸೇರು ಬೀಜ ಬಿತ್ತಲು ಬೇಕಾಗುವ ಸ್ಥಳ (ದಕ.ಜಿ)

ಆಟ: ಕಟಕ ಮಾಸ; ಜುಲೈ ಮತ್ತು ಆಗಸ್ಟ್ ತಿಂಗಳುಗಳ ಸಂಕ್ರಮಣಗಳ ನಡುವಿನ ಅವಧಿ (ದಕ.ಜಿ)

ಆಟಗಾರ್ತಿ: ನೀತಿಗೆಟ್ಟವಳು; ಹಾದರಗಿತ್ತಿ (ಗುಲ್ಬ.ಜಿ)

ಆಟಗಾಳಿ: ರೋಗ ತರುವ ಗಾಳಿ. ಈ ಗಾಳಿ ಬೀಸಿದರೆ ಬೆಳೆಗೆ ರೋಗ ಬರುತ್ತದೆಂಬ ನಂಬಿಕೆ (ಬೆಂಗ.ಜಿ)

ಆಟಗುಳಿ: ತೋರಿಕೆಯ ಆಟ; ಹೂಟ; ತಂತ್ರ (ಮೈಸೂ.ಜಿ). **ಪ್ರ**: ಅದ್ಯಾವ ಆಟುಗುಳಿ ಅಂತ ಆಡ್ತಿಲ ನೀನು

ಆಟಗೂಟ: ಚೆಂದಪ್ಪನಗೂಟ ಆಟದ ಮುಕ್ತಾಯದಲ್ಲಿ ಹೇಳುವ ಹಾಡು (ಬೆಳ.ಜಿ)

ಆಟದ ಕಾಡ್ಯನ ಮನೆ: ಕಾಡ್ಯನಾಟದ ಪ್ರದರ್ಶನದಲ್ಲಿ ಹೆಣ್ಣು ಸರ್ಪದ ಮನೆಯೆಂದು ಪರಿಗಣಿಸಲ್ಪಟ್ಟ ಮನೆ; ಇಲ್ಲಿ ಮಾತ್ರ ಕಾಡ್ಯನಾಟ ಪ್ರದರ್ಶನ ನಡೆಸಲಾಗುತ್ತದೆ (ದಕ.ಜಿ)

ಆಟಪಿಟ: ಮೋಸಗಾರ; ಕಪಟ (ಮೈಸೂ.ಜಿ)

ಆಟಲಾಟಮ್ಮ: ಅಮ್ಮ ರೋಗದ ಒಂದು ವಿಧ; ಮೈಮೇಲೆ ಗುಳ್ಳೆಗಳಿರುತ್ತವೆ ಜ್ವರ ಇರುವುದಿಲ್ಲ. ಈ ಅಮ್ಮ ಸಾಮಾನ್ಯವಾಗಿ ಮಕ್ಕಳಿಗೆ ಹೆಚ್ಚಾಗಿ ಬರುತ್ತದೆ. ಅಮ್ಮನು ಹೋಗುವವರೆಗೂ ಮಕ್ಕಳು ಯಾವುದೇ ತೊಂದರೆ ಇಲ್ಲದೆ ಆಡಿಕೊಂಡೇ ಇರುತ್ತಾರೆ. **ಇರೂ:** *ದಡಾರ (ಕೋಲಾ.ಜಿ)*

ಆಟಾಳು: ೧. ಎತ್ತರವಾಗಿರುವವನು ೨. ಆಟ ಆಡುವ ಆಳು ೩. ಸೋಮಾರಿ ೪. ಕೆಳದರ್ಜೆಯ ಸೇವಕ; ಕೀಳಾಳು (ಬೆಂಗ್ರಾ.ಜಿ) **ಪ್ರ**: ಆಟಾಳ್ಗೊಂದು ಮೋಟಾಳು ಮೋಟಾಳ್ಗೊಂದು ಮೊಣಸಟ್ಗ

ಆಟಿ: ೧. ಆಷಾಢಮಾಸ ೨. ಮಳೆಗಾಲ ೩. ಹುಣ್ಣಿಮೆ (ದಕ.ಜಿ). **ಇರೂ:** *ಆಷಾಡ.* **ಪ್ರ**: ಆಟಿಯಲ್ಲಿ ತುಂತುರುಮಳೆ ಬೀಳುತ್ತದೆ

ಆಟಿಕಳೆಂಜ/ಅಟಿಕಳಂಜ: ತುಳುನಾಡಿನ ಒಂದು ದೈವ; ಆಷಾಢ ತಿಂಗಳಿನಲ್ಲಿ ನಲ್ಕೆ ಜನಾಂಗದವರು ಈ ದೈವದ ವೇಷ ಧರಿಸಿ ಮನೆಮನೆಗೆ ಹೋಗಿ ಮಳೆ ಬಂದು ಊರಿಗೆ

ಬಂದಿರುವ ಮಾರಿ ದೂರವಾಗಲಿ, ರೋಗಬಾಧೆಯ ನಿವಾರಣೆಯಾಗಲಿ ಎಂಬ ಆಶಯದ ಪಾಡ್ದನವನ್ನು ಹಾಡಿ ಕುಣಿದು ಅರಶಿನ ಉಪ್ಪು ಮಸಿ ಮೊದಲಾದವುಗಳನ್ನು ಮಂತ್ರಿಸಿ ಎಸೆದು ಹಟ್ಟಿಯ ಜಾನುವಾರುಗಳ ಹಾಗೂ ಮನೆ ಮಂದಿಯ ಅನಿಷ್ಟ ನಿವಾರಣೆ ಮಾಡುವ ಆಚರಣೆ (ದಕ.ಜಿ)

ಆಟಿಕುಳಿತುಕೊಳ್ಳುವುದು: ಮದುವೆಯಾದ ಹೆಣ್ಣು ಆಟಿ ತಿಂಗಳಲ್ಲಿ ತವರು ಮನೆಗೆ ಹೋಗುವುದು (ದಕ.ಜಿ)

ಆಟಿನಅಗೆಲ್: ತೀರಿಹೋದ ಹಿರಿಯರಿಗೆ ಆಟಿ ತಿಂಗಳಲ್ಲಿ ಎಡೆ ಇಡುವುದು (ದಕ.ಜಿ)

ಆಟಿಬಾಳ: ಒಂದು ಔಷಧೀಸಸ್ಯ

ಆಟುಕಳ್ಳ: ಲಫಂಗ; ಪೋಲಿ; ಒಂದು ಬೈಗುಳ. **ಇರೂ:** *ಆಟ್ಕಾಳ; ಆಟ್ಗಳ್ಳ (ಚಾಮ.ಜಿ) ನೋಡಿ–ಅಟ್ಗುಳಿ*

ಆಟ್ಗುಳಿ: ೧. ಮಕ್ಕಳಾಟಿಕೆ ೨. ಮಳೆ ಬರದಿದ್ದಾಗ ಮಾಡುವ ಒಂದು ಆಚರಣೆ (ಚಾಮ.ಜಿ) **ನೋಡಿ–** ಅಟ್ಗುಳಿ

ಆಟ್ಹಾಕೋದು (ಕ್ರಿ): ಲೈಂಗಿಕ ಕ್ರಿಯೆಯಲ್ಲಿ ತೊಡಗುವುದು

ಆಠವಾರಿ ಸೀರೆ: ಹದಿನಾರು ಮೊಳದ ಸೀರೆ

ಆಡ (ನಾ): ೧. ಅಡರು ೨. ಆಡು; ಮೇಕೆ ೩. ಹಾಸ್ಯ; ಕಟ್ಟುವೇಷ ೪. ಸೊಪ್ಪು ಉದುರಿದ ಬಳಿಕ ಉಳಿಯುವ ಚಿಕ್ಕ ಗೆಲ್ಲು. ೫. (ಕ್ರಿ) ಆಟವಾಡು

ಆಡಗಳಲೆ: ನೋಡಿ– ಆಡುಗಳ್ಳೆ

ಆಡಗಳ್ಳ: ಕೆಲಸವನ್ನು ನಿರ್ಲಕ್ಷಿಸಿ ಕೇವಲ ವಿಲಾಸ ಜೀವನದಲ್ಲಿ ಹೊತ್ತು ಕಳೆಯುವವ (ಬಳ್ಳಾ.ಜಿ)

ಆಡನಿ: ಒಂದೊಂದೇ ಹನಿ ಉದುರುವ ಮಳೆ; ತುಂತುರು ಮಳೆ. **ಪ್ರ:** ಆಡನಿ ಹತ್ತೇತಿ (ಶಿವ.ಜಿ)

ಆಡಪಡಗಿ: ಅಡ್ಡಬಿದ್ದವಳು; ಹಾದಿಬಿಟ್ಟವಳು

ಆಡರಿ: ಆರಿದ್ರಾ ಮಳೆ (ಬಿಜಾ.ಜಿ)

ಆಡಲಕಾಯಿ: ಅಡ್ಲಕಾಯಿ; ಪಡುವಲಕಾಯಿ

ಆಡಶೀನ: ತೊಗರಿಯನ್ನು ಬೆಳೆಯುವ ಭೂಮಿ

ಆಡಾಕು: ಕಟ್ಟಿಹಾಕು (ದಕ.ಜಿ)

ಆಡಾಕೂಸು: ಎಳೆಯ ಮಗು; ಹಸುಕಂದ (ಧಾರ.ಜಿ)

ಆಡಾಡಿಅಡಿಕೆ: ಇಡಿಯಾದ ಚಿಟ್ಟಡಕೆ

ಆಡಿ: ಜಡೆ (ದಕ.ಜಿ)

ಆಡಿಕಟ್ಟೋದು: ಚಟ್ಟ ಕಟ್ಟುವುದು (ಕೋಲಾ.ಜಿ)

ಆಡಿಕಿಮಾತು: ಗಾಳಿಮಾತು; ವದಂತಿ; ಸುದ್ದಿ; ನಿಂದೆಯ ನುಡಿ (ಧಾರ.ಜಿ)

ಆಡಿಕೆ: ಅಪವಾದ (ಬೆಂಗ್ರಾ.ಜಿ) **ಪ್ರ:** ಜನರ ಆಡಿಕೆಗೂ ಮಗಳ ಬಾಳಿಕೆಗೂ ಸರಿಹೋಯ್ತು.

ಆಡಿಕೆದಿನ: ಆಟವಾಡುವ ದಿನ; ಬಿಡುವು (ಶಿವ.ಜಿ)

ಆಡಿಗೆಗಾಡಿ: ವಡ್ಡರು ಕಲ್ಲುಚಪ್ಪಡಿ ಸಾಗಿಸಲು ಬಳಸುತ್ತಿದ್ದ ಗಾಡಿ (ತುಮ.ಜಿ). **ಇರೂ:** *ಗ್ವರೆಗಾಡಿ, ವಡ್ಡರ ಬಂಡಿ*

ಆಡಿನಬೀಜದ ಚೀಲ: ಶಿಕಾರಿಯುವರು ಆಡಿನ ಬೀಜಕೋಶದಿಂದ ತಯಾರಿಸಿಕೊಂಡ, ರಂಜಕ ಮಸಿ ಮುಂತಾದ ಮದ್ದುಗುಂಡುಗಳನ್ನಿಡುವ ಚೀಲ (ಚಿಮ.ಜಿ)

ಆಡಿನಮೆಲಕ: ಆಡುಗಳಿಗೆ ಅತಿಪ್ರಿಯವಾದ ಒಂದು ಸಣ್ಣ ಸಸ್ಯ (ಶಿವ.ಜಿ)

ಆಡಿಪೀಡಿ: ನೋಡಿ– ಅಂಟಿಗೆ ಪಂಟಿಗೆ

ಆಡಿಬದ್ನಿ: ಕಾಡುಬದನೆ; ಮುಳ್ಳುಬದನೆ (ಬೀದ.ಜಿ)

ಆಡಿಸು (ಕ್ರಿ): ೧. ಆಟ ಆಡಿಸು ೨. ರುಬ್ಬು. **ಪ್ರ:** ಹಸಿಖಾರ ಆಡಿಸಿ ಸಾರಿಗೆ ಹಾಕಿದೆ

ಆಡಿಸ್ಯಾಡು: ಗೇಲಿಮಾಡು (ಬಿಜಾ.ಜಿ)

ಆಡು: ಮೇಕೆ (ಕೋಲಾ.ಜಿ)

ಆಡುಕಟ್ಟೆ: ಊರಲ್ಲಿ ಮೆರವಣಿಗೆ ಮುಗಿಸಿದ ನಂತರ ದೇವರನ್ನು ಕೂರಿಸಲೆಂದು ಕಟ್ಟಿದ ವೇದಿಕೆ; ಗ್ರಾಮದೇವರ ಹಬ್ಬದಲ್ಲಿ ಗ್ರಾಮದೇವತೆಯ ರಂಗಸ್ಥಳ (ದಕ.ಜಿ). **ಇರೂ:** *ಆಡುಕಳ*

ಆಡುಕಾಳಿಗಿ: ಮರಿಹಾಕದ, ವಯಸ್ಸಿಗೆ ಬಂದ ಆಡು, ಕುರಿ (ಶಿವ.ಜಿ)

ಆಡುಗಳ್ಳೆ: ಹದಗಡಲೆ; ಕಂಕುಳಿನಲ್ಲಿ ಅಥವಾ ತೊಡೆಯ ಸಂದಿನಲ್ಲಿ ಏಳುವ ಗಡ್ಡೆ. **ಪ್ರ:** ಅವನಿಗೆ ಆಡುಗಳ್ಳೆ ಆಗದೆ ತೊಡಬಾಳೆ ಸೊಪ್ಪಿನ ಔಸ್ತಿಮಾಡಿ (ದಕ). **ಇರೂ:** *ಆಡಗಳಲೆ, ಆಡಗಡ್ಡೆ*

ಆಡುಗುದ್ದು: ಎರಡುಕಡೆ ಬಾಯಿಯುಳ್ಳ ಬಿಲ (ಚಿಮ.ಜಿ)

ಆಡುಗೋಪುಕಟಿಗಿ: ಕೋಲಾಟದ ಒಂದು ಬಗೆ (ಉಕ). **ಇರೂ:** *ರಾಮಭದ್ರಿಕಟಿಗಿ*

ಆಡುಮಂಚ: ದೇವರ ವಿಗ್ರಹಗಳನ್ನಿಟ್ಟು ತೂಗುವ ತೊಟ್ಟಿಲಾಕಾರದ ಕಟ್ಟಿಗೆಯ ಪೆಟ್ಟಿಗೆ (ಬೆಳ.ಜಿ)

ಆಡುಮಾಡು: ದೈವಕ್ಕೆ ಭಕ್ತರು ನೀಡಬೇಕಾದ ಖರ್ಚುವೆಚ್ಚ (ಬಳ್ಳಾ.ಜಿ)

ಆಡುಮುಟ್ಟದಗಿಡ: *ಟೈಲೋಫೋರ ಆಸ್ತ್ಯಾಟಿಕ್ ಇಂಡಿಕ*: ಆಡುಗಳು ತಿನ್ನದೆ ಇರುವ ಎಲೆಯುಳ್ಳ ಗಿಡ. ಕಾಂಡವು ಕಾಮಾಲೆ ರೋಗಕ್ಕೂ ಎಲೆಗಳ ರಸವು ಕೆಮ್ಮುದಮ್ಮಿಗೂ ಔಷಧಿಯಾಗಿ ಬಳಕೆಯಾಗುತ್ತದೆ (ಚಾಮ.ಜಿ). **ಇರೂ**: *ಅಂತಮೂಲ, ಕತ್ತೆಕಿವಿಗಿಡ, ಕಿರುಮಂಚಿ, ನಾಯಿಹಾಲೆ* (ಚಿತ್ರ ನೋಡಿ)

ಆಡುಮುಟ್ಟದ ಬಳ್ಳಿ: ಒಂದು ಔಷಧೀಯ ಸಸ್ಯ

ಆಡುಸೋಗೆ: **ನೋಡಿ–** ಅಡಸೋಗೆ

ಆಡೆ: ೧. ಜಿಗಣೆ ೨. ನೇಗಿಲಿನ ಒಂದು ಭಾಗ (ಮೈಸೂ.ಜಿ)

ಆಡ್ಕೆ: ೧. ಆಡಿಕೆ; ಕೂಲಿಯಾಳುಗಳ ರಜಾದಿನ (ಉಕ.ಜಿ)

ಆಡ್‌ಗಡ್ಲೆ: **ನೋಡಿ–** ಆಡುಗಳ್ಳೆ

ಆಡ್ಗೊನೆ ಬೀಳು: ಬತ್ತದ ಬೆಳೆಯು ಕೊಯ್ಲಿಗೆ ಬರುವ ಹಂತ

ಆಡ್ಮರಿ: ಆಡಿನ ಮರಿ; ಮೇಕೆಯ ಮರಿ (ಮೈಸೂ.ಜಿ/ಚಾಮ.ಜಿ)

ಆಡ್ಲಿ: ಹರಳೆಣ್ಣೆ ತೆಗೆವ ಭಟ್ಟಿ (ಧಾರ.ಜಿ)

ಆಡ್ಸೋಂಗು: **ನೋಡಿ–** ಅಡ್ಡಸೋಗು

ಆಣ: ೧. ಆಳವಿಲ್ಲದ ಸಮುದ್ರಭಾಗ; ಬಂದರಿನ ಪ್ರವೇಶದ್ವಾರ (ದಕ.ಜಿ) ೨. ದ್ರವರೂಪದ ಬೆಲ್ಲ; ಕಾಸಿ ಕುದಿಸಿದ ಕಬ್ಬಿನ ಹಾಲು ತೆಳುವಾಗಿ ಬೆಲ್ಲ ಆಗುವ ಹಂತದ್ದು (ಶಿವ.ಜಿ) **ಇರೂ**: *ಕಾಕಂಬಿ* ೩. ಅಂಟಂಟಾದ ಬೆಲ್ಲದ ಪಾಕ ೪. ನಪುಂಸಕ (ಬೆಳ.ಜಿ)

ಆಣಗಗ್ಗರ: ೧. ಭೂತನರ್ತಕ ಬಲಗಾಲಿಗೆ ಕಟ್ಟಿಕೊಳ್ಳುವ ಕಾಲ್ಗಡಗ ೨. ನಾಲ್ಕು ದುಡ್ಡಿನ ಬೆಲೆಯ ನಾಣ್ಯ (ದಕ.ಜಿ)

ಆಣಬಾಸ: **ನೋಡಿ–** ಆಣೆಭಾಷೆ. **ಇರೂ**: *ಆಣೆಬಾಶೀ*

ಆಣಾ: ಪಾಕ; ನೀರಿನಲ್ಲಿ ಸಕ್ಕರೆ ಅಥವಾ ಬೆಲ್ಲ ಹಾಕಿ ಕುದಿಸಿದ ಪಾಕ

ಆಣಿ: ೧. ಪ್ರಮಾಣ ೨. ಆಣೆ; ಹನ್ನೆರಡು ಕಾಸು ಮೌಲ್ಯದ ನಾಣ್ಯ; ಈಗಿನ ಆರು ಪೈಸೆ ೩. ಕಾಲಿನ ಅಂಗಾಲಿನಲ್ಲಿ ಆಗುವ ಗಟ್ಟಿಯಾದ ಚರ್ಮದ ಗುಬುಟುಗಳು; ಕಾಲಿನಲ್ಲಿ ಮೂಡುವ ಚರ್ಮದ ಗುಂಡಿಗಳು (ಬಳ್ಳಾ.ಜಿ). **ಇರೂ**: *ಕಲ್ಲೊತ್ತು*

ಆಣಿಕಲ್ಲು: ೧. ಹೆಣ್ಣುಮಕ್ಕಳು ಸಣ್ಣ ಕಲ್ಲಿನ ಹರಳುಗಳನ್ನು ಬಳಸಿ ಆಡುವ ಒಂದು ಒಳಾಂಗಣ ಆಟ; ಅಂಡಾಳಾಟ; ಅಣ್ಣೆಕಲ್ಲು ಆಟ ೨. ಮಳೆಯಲ್ಲಿ ಬೀಳುವ ಆಲಿಕಲ್ಲು (ಶಿವ.ಜಿ). **ಇರೂ**: *ಆವಿನಕಲ್ಲು, ಆಡಕಿನಹಳ್ಳು (ಬೀದ.ಜಿ)*

ಆಣಿತೂಕ: ೧. ಲೋಹದ ಪ್ರಮಾಣವನ್ನು ಹೇಳಲು ಇರುವ ರೂಢಿಯ ಮಾತು (ಬಳ್ಳಾ.ಜಿ)

ಆಣಿಪೀಣಿ: ದೀಪಾವಳಿಯಂದು ಉತ್ತರಸಕರ್ನಾಟಕದಲ್ಲಿ ದನಕಾಯುವ ಹುಡುಗರು ಆಪಿನಿಂದ ಮಾಡಿದ ಗೊಗ್ಗೆ ಹಿಡಿದುಕೊಂಡು ಮನೆಮನೆಗೂ ಹೋಗಿ ದೀಪಬೆಳಗುತ್ತಾ ಹಾಡುವ ಹಾಡುಗಳು. ಒಂದು ವಾರದವರೆಗೆ ನಡೆಯುವ ಆಚರಣೆಯ ಉದ್ದೇಶ ಪಶುಸಂಪತ್ತು ವೃದ್ಧಿಯಾಗಿ ದನಕರುಗಳು ರೋಗಮುಕ್ತವಾಗಬೇಕು ಎನ್ನುವುದು

ಆಣೀತಿನ್ನು (ಕ್ರಿ): **ನೋಡಿ–** ಆಣೆಇಡು

ಆಣೆ: ೧. ಎರಡು ಕಾಸಿನ ಒಂದು ನಾಣ್ಯ (ದಕ.ಜಿ) ೨. ಹಿಂದಿನ ಹನ್ನೆರಡು ಕಾಸಿನ ಮೌಲ್ಯದ ಒಂದು ನಾಣ್ಯ. **ಪ್ರ**: ಒಂದಾಣೆ ೩. ಪ್ರಮಾಣ

ಆಣೆಇಡು: ೧. ಪ್ರಮಾಣ ಮಾಡು; ಇನ್ನೊಬ್ಬರನ್ನು ಸಾಕ್ಷಿಯಾಗಿಟ್ಟು ಪ್ರತಿಜ್ಞೆ ಮಾಡು (ಧಾರ.ಜಿ). **ಪ್ರ**: ದೇವರಾಣೆಗೂ ನಾನು ಹಾಗೆ ಅಂದಿಲ್ಲ ಅಂತ ಆಣೆಇಟ್ಟ. **ಇರೂ**: *ಆಣೀತಿನ್ನು*

ಆಣೆಕಾಸು: ಇಂದಿನ ಆರು ಪೈಸೆಗೆ ಸಮನಾಗಿದ್ದ ನಾಣ್ಯ; (ಮೈಸೂ.ಜಿ)

ಆಣೆಬಡ್ಡಿಸಾಲ: ಒಂದು ರೂಪಾಯಿಗೆ ತಿಂಗಳೊಂದಕ್ಕೆ ಒಂದು ಆಣೆಯನ್ನು ಬಡ್ಡಿಯಾಗಿ ಕೊಡುತ್ತಿದ್ದ ಸಾಲದ ಹಳೆಯ ವಿಧಾನ (ಮೈಸೂ.ಜಿ)

ಆಣೆಭಾಷೆ: ಪ್ರಮಾಣ ಮಾಡುವುದು, ವಚನ ಕೊಡುವುದು

ಆಣೆವಾರು ಲೆಕ್ಕ: ಹದಿನಾರು ಆಣೆಯ ಪ್ರಮಾಣದ ಆಧಾರದ ಮೇಲೆ ಬೆಳೆಯ ಶೇಕಡಾ ಪ್ರಮಾಣವನ್ನು ಲೆಕ್ಕ ಮಾಡುವಿಕೆ. **ಪ್ರ**: ಹೋದ ಸಲ ಹನ್ನೆರಡಾಣೆ ಬೆಳೆ, ಈ ಸಲ ಹದಿನಾರಾಣೆ ಬೆಳೆ

ಆಣ್‌ಕಲ್ಲು: ಹಸಿ ಮಡಿಕೆಯನ್ನು ತಟ್ಟಿ ನಯಗೊಳಿಸಲು ಕುಂಬಾರರು ಬಳಸುವ ಎರಡು ಕಲ್ಲುಗಳಲ್ಲಿ ಮೇಲಿನ ಕಲ್ಲು. ಇದನ್ನು ಗಂಡುಕಲ್ಲು ಎಂದು ಕರೆಯುತ್ತಾರೆ (ದಕ.ಜಿ)

ಆಣ್ವ: ಆಣಿ; ಕಲ್ಲೊತ್ತು (ಮೈಸೂ.ಜಿ)

ಆತರ್ಸಿ: ೧. ಬೇಗಬೇಗ; ಆತುರಾತುರದಿಂದ ೨. ಆಸೆಯಿಂದ ೩. ಬೆಚ್ಚಿದಂತೆ

ಆತುಭೂತ: ಪೀಡೆ; ಪಿಶಾಚಿ; ಭೂತಪ್ರೇತಾದಿಗಳು

ಆದ: ಆಯ್ದು; ಆರಿಸಿದ (ಶಿವ.ಜಿ)

ಆದಕ್ಕಿ: ಕುಟ್ಟಿ ಕೇರಿ ತಳಿಸಿ ಹದ ಮಾಡಿದ ಅಕ್ಕಿ; ಶುದ್ಧೀಕರಿಸಿದ ಅಕ್ಕಿ

ಆದರಿ: ನೋಡಿ– ಆದ್ರಿ

ಆದಾಡಿ/ಆದೋಡಿ: ಚರ್ಮ ಹದ ಮಾಡುವ ಸ್ಥಳ (ಉಕ.ಜಿ)

ಆದಾರ: ೧. ರೋಗಗಳಿಂದ ಬೆಳೆಯನ್ನು ರಕ್ಷಿಸಲು ದೇವರ ಪ್ರಸಾದ ಹಾಗೂ ಮಂತ್ರಿಸಿದ ಬೂದಿಯನ್ನು ಬೆಳೆಯ ಮೇಲೆ ಸಿಂಪಡಿಸುವುದು (ಬಳ್ಳಾ.ಜಿ) ೨. ದೇವಸ್ಥಾನದಲ್ಲಿ ಇರುವ ಬೂದಿ (ಧಾರ.ಜಿ) ೩. ಬೂದಿಪ್ರಸಾದ. ***ಇರೂ:*** *ಆಡೆ*

ಆದಿಆಲಡೆ: ದೈವದ ಮೂಲಸ್ಥಾನ

ಆದಿಕುದಿ: ಮದುವೆಯ ನಿಶ್ಚಿತಾರ್ಥ (ದಕ.ಜಿ)

ಆದಿಕೋಲು: ಆಸರೆಕಟ್ಟಿಗೆ; ಊರುಗೋಲು (ಧಾರ.ಜಿ)

ಆದಿಚಿತ್ತ: ಆದಿದೈವ; ಆದಿಸ್ಥಾನ; ಮೂಲಸ್ಥಾನ; ದೈವವು ಮೊದಲು ಗೋಚರಿಸಿದ ಸ್ಥಳದಲ್ಲಿ ಕಟ್ಟಿಸಿದ ಗುಡಿ (ದಕ.ಜಿ)

ಆದಿಸತ್ಯಮ್ಮನ ಹಬ್ಬ: ಮಂಡ್ಯ ಜಿಲ್ಲೆ ಶ್ರೀರಂಗಪಟ್ಟಣ ತಾಲ್ಲೂಕಿನ ನಗುವನಹಳ್ಳಿಯಲ್ಲಿ ಎರಡು ದಿನಗಳ ಕಾಲ ಆಚರಿಸುವ ಒಂದು ಹಬ್ಬ (ಮಂಡ್ಯ.ಜಿ)

ಆದಿಸ್ಯಾಟ: ಗುಪ್ತಾಂಗದ ಮೇಲೆ ಆಗಷ್ಟೇ ಮೂಡುತ್ತಿರುವ ಕೂದಲು

ಆದೀಕ: ನೋಡಿ– ಆದೇಕ

ಆದೂನೆ: ಜಗಲಿ

ಆದೋಡಿ: ನೋಡಿ– ಆದಾಡಿ

ಆದ್ದಪೂಜೆ: ಗದ್ದೆ ಉಳುವಾಗ ಮೊಟ್ಟ ಮೊದಲು ಮಾಡುವ ಪೂಜೆ

ಆದ್ದೇವು: ಆಯುಧ

ಆದ್ರಿ: ಆರಿದ್ರಾ ಎಂಬ ನಕ್ಷತ್ರ ಮತ್ತು ಆಗ ಬೀಳುವ ಮಳೆ (ಮೈಸೂ.ಜಿ/ಚಾಮ.ಜಿ). **ಪ್ರ:** ಆದ್ರಿ ಬಂದರೆ ದರಿದ್ರ ಇಲ್ಲ (ದಾವ.ಜಿ) ಕೆಲವು ಭಾಗಗಳವರು ಇದನ್ನು ಅನಿಶ್ಚಿತಮಳೆ ಎನ್ನುತಾರೆ. ಆದ್ರೆ ಆದ್ರಿ ಹೋದ್ರೆ ಹೋದ್ರಿ ಎಂಬ ಮಾತು ಈ ಹಿನ್ನೆಲೆಯಲ್ಲಿ ಹುಟ್ಟಿದೆ. ಆರಿದ್ರ ಮಳೆ ಆಗುವಾಗ ಗುಡುಗು ಸಿಡಿಲು ಇರುವುದಿಲ್ಲವಂತೆ. ಆದ್ರೆ ಗುಡುಗಿದರೆ ಆರು ಮಳೆಯಿಲ್ಲ ಎಂಬ ಮಾತೂ ಇದೆ (ಶಿವ.ಜಿ)

ಆದ್ರಿಗಾಳಿ: ಆರಿದ್ರಾ ನಕ್ಷತ್ರದ ಮಳೆಯ ಸಂದರ್ಭದಲ್ಲಿ ಬೀಸುವ ಗಾಳಿ. ಈ ಗಾಳಿ ತುಂಬ ಶೀತದಿಂದ ಕೂಡಿದ್ದು ಎಂಥ ಒರಟು ಮೈಯನ್ನೂ ನಡುಗಿಸುತ್ತದೆ. **ಪ್ರ:** ಆದ್ರಿ ಗಾಳಿ ಬೀಸಿ ಅಳ್ಳಳ್ಳೆ ಮೇಲೆ ಹೆಟ್ಟುವಾಗ ಹಾಳ್ ನನ್ ಜೀವ ಹೆಣ್ಣಾಗಾದ್ರೂ ಹುಟ್ಬಾರ್ದಿತ್ತೆ (ಧಾರ.ಜಿ).

ಆದ್ರಿಮರ: ದೀರ್ಘಕಾಲದ ಆಯುಷ್ಯ ಇರುವ ಒಂದು ವೃಕ್ಷ

ಆದ್ರಿಮಳೆ: ಆರಿದ್ರ ನಕ್ಷತ್ರದಲ್ಲಿ ಬೀಳುವ ಮಳೆ

ಆದ್ರಿಮಳೆ ಹಬ್ಬ/ಆದ್ರೆ ಮಳೆ ಹಬ್ಬ: ೧. ಆರಿದ್ರಾ ಮಳೆ ಬೀಳುವ ಸಂದರ್ಭದಲ್ಲಿ ಆಚರಿಸುವ ಒಂದು ಹಬ್ಬ. ಬಿತ್ತಿದ ಪೈರು ಹಸುರಾಗಿ ಕುಡಿಯೊಡೆದು ಎಲ್ಲೆಲ್ಲಿಯೂ ಸಮೃದ್ಧಿ ಸೂಸುವ ಸಂದರ್ಭದಲ್ಲಿ ರೈತರು ಈ ಹಬ್ಬವನ್ನು ಆಚರಿಸುತ್ತಾರೆ (ಧಾರ.ಜಿ) ೨. ಆರಿದ್ರಾ ಮಳೆಯ ಅವಧಿಯಲ್ಲಿ ಮಲೆನಾಡಿನಲ್ಲಿ ಆಚರಿಸುವ ಹಬ್ಬ. ನಿಗದಿತ ದಿನ ಗ್ರಾಮದೈವ ಕುಮಾರರಾಮನ ಮುಖವಾಡ ಧರಿಸಿರುವ ಗಂಡಸರು ಮೆರವಣಿಗೆ ಹೋಗಿ ಬಂದಾಗ ಹೆಂಗಸರು ಆರತಿ ಮಾಡುತ್ತಾರೆ. ಸಾಯಂಕಾಲ ದೇವಾಲಯದಲ್ಲಿ ಬಲಿ ಕೊಟ್ಟು, ಮಾಂಸದಡುಗೆಯ ಎಡೆ ಕೊಟ್ಟು ಎಲ್ಲರೂ ಒಟ್ಟಾಗಿ ಪ್ರಸಾದ ಊಟ ಮಾಡುತ್ತಾರೆ. ಹಲಸಿನ ಹಣ್ಣು ಮತ್ತು ಕೋಳಿಸಾರು ಈ ಹಬ್ಬದ ವಿಶೇಷ

ಆಧಾರಗೇಣಿ: ಭೂಮಿಯ ಫಸಲಿನ ಆಧಾರದ ಮೇಲೆ ನೀಡುವ ಗೇಣಿ (ಮಲೆ)

ಆಧಾರಪೆಟ್ಟಿಗೆ: ಶಿವಪೂಜೆಯ ಸಾಮಾನುಗಳನ್ನು ಇಡುವ ಪೆಟ್ಟಿಗೆ (ಶಿವ.ಜಿ)

ಆಧಾರಸಳಿ: ಚರ್ಮವಾದ್ಯಗಳಿಗೆ ಆಸರೆಯಾದ ಕಬ್ಬಿಣದ ಬಳೆ (ಬೆಳ.ಜಿ)

ಆನಂಗ/ಆನಂಗಿ: ಲಕ್ಕಿಯ ಮರ (ಬೆಂಗ.ಜಿ). ***ಇರೂ:*** *ಅನಂಗಿ*

ಆನಗ್ಲು: ನೋಡಿ– ಆನೆನೆಗ್ಗಿಲು

ಆನಿ ಹೊತ್ತಿತು: ಭತ್ತವನ್ನು ಬಡಿಯುವ ಹಡಿಮಂಚದ ಮೇಲೆ ಭತ್ತವು ತುಂಬಿ ಬರುವುದನ್ನು ಹೀಗೆನ್ನುತ್ತಾರೆ. ಆಗ ಭತ್ತ

ಬಡಿಯುವುದನ್ನು ನಿಲ್ಲಿಸಿ ಹಲಗೆಯ ಮೇಲೆ ನಾಲ್ಕು ಕಡೆ ಭತ್ತವನ್ನು ರಾಶಿ ಹಾಕಿ ದೀಪ ಹಚ್ಚಿ ಕಾಯಿ ಒಡೆದು ಕಾಯಿ ಹೋಳನ್ನು ಪ್ರಸಾದ ರೂಪದಲ್ಲಿ ಹಂಚುತ್ತಾರೆ (ದಕ.ಜಿ) (**ನೋಡಿ– ಹಡಿಮಂಚ**)

ಆನಿಕಣ್ಣು: ಆಕಾರದಲ್ಲಿ ಚಿಕ್ಕದಾದ ಕಣ್ಣು (ಬಿಜಾ.ಜಿ)

ಆನಿಕಲ್ಲು: ೧. ಅಣ್ಣೆಕಲ್ಲಾಟ. **ಪ್ರ**: ಒಂದು ಕಲ್ಲಿನ ಬಸವ ಎರಡು ಕಲ್ಲಿನ ಬಸವ ಅಂತ ರಾಗವಾಗಿ ಪದ ಹೇಳ್ತ ಆನಿಕಲ್ಲು ಮ್ಯಾಲ ತೂರಿತೂರಿ ಆಡೂದರಾಗ ಹೊತ್ತ ಹೋಗಿದ್ದೇ ತಿಳೀತಿರಲಿಲ್ಲ (ದಾವ.ಜಿ) 2. ಹುಗ್ಗಿ ಬಡಿಸುವ ಮರದ ಸಾಧನ

ಆನಿಕಾಲುರೋಗ: ಬಾವು ಬಂದು ಆನೆಯ ಕಾಲಿನಂತೆ ಊದಿಕೊಳ್ಳುವ ರೋಗ (ದಕ.ಜಿ)

ಆನಿಕೆ: 1. ವೇಷ ಸಾಮಗ್ರಿ 2. ಮುಂಡಾಸು 3. ಯಾವುದಾದರೂ ವಸ್ತುವನ್ನಿಡಲು ಬೇಕಾದ ಆಸರೆ 4. ಹಾಸಿಗೆ

ಆನಿಜಂತಿ: ಆನೆಯ ಮುಖವಿರುವ ಜಂತಿ. ರಥದ ಚಕ್ರಗಳ ಮಧ್ಯಭಾಗದಲ್ಲಿರುತ್ತದೆ (ದಕ.ಜಿ)

ಆನಿವಾವಿ: ಹಸುಗಳಿಗೆ ಬರುವ ಕೀಲುಗಳ ರೋಗ (ಕೋಲಾ.ಜಿ)

ಆನಿಸಾಲ್/ಆನೆಸಾಲು: ರಥದಲ್ಲಿ ಜಿಡ್ಡೆಯ ಸುತ್ತ ಕೆತ್ತಿರುವ ಆನೆಗಳ ಸಾಲು (ದಕ.ಜಿ)

ಆನುಗಲ್ಲು: ಇತರರ ನೆರವಿಲ್ಲದೆ ಹೊರೆಯನ್ನು ಇಳಿಸಿ ದಣಿವಾರಿಸಿಕೊಳ್ಳಲು ಹಾದಿಬದಿಯಲ್ಲಿ ಕಲ್ಲುಚಪ್ಪಡಿಗಳಿಂದ ನಿರ್ಮಿಸಿರುವ ಆಳೆತ್ತರದ ವೇದಿಕೆ (ರಾಮ.ಜಿ/ಬೆಂಗ್ರಾ.ಜಿ/ಮೈಸೂ.ಜಿ). **ಇರೂ**: *ತಲೊರೆಕಲ್ಲು (ಮಂಡ್ಯ.ಜಿ); ತಲಾರೆಕಲ್ಲು*

ಆನುಪಾನು: ಹೆರಿಗೆ ನಂತರದ ಆರೈಕೆ; **–ಶುಶ್ರೂಷೆ** (ಮೈಸೂ.ಜಿ)

ಆನೂಲಿ: ಪಶ್ಚಾತ್ತಾಪ

ಆನೆಆಟ/ಆನಿಆಟ: ಉತ್ತರಕರ್ನಾಟಕದಲ್ಲಿ ಪ್ರಚಲಿತವಿರುವ ಮಕ್ಕಳ ಆಟ. ಈ ಆಟವನ್ನು ಆಡಿಸುವವರು ಅಂಗಾತ ಮಲಗಿಕೊಂಡು ಮೊಣಕಾಲ ಮೇಲೆ ಅಳುವ ಮಗುವನ್ನು ಹಾಕಿಕೊಂಡು ಹಾಡುತ್ತಾ ಆನಿ ಬಂತ್ ಆನಿ, ಇದ್ಯಾವರ ಆನಿ, ವಿಜಾಪೂರದ ಆನಿ, ಇಲ್ಲಿಗ್ಯಾಕ ಬಂತು ಇತ್ಯಾದಿಯಾಗಿ ಹಾಡಿಕೊಂಡು ಆಡಿಸುತ್ತಾರೆ (ಧಾರ.ಜಿ)

ಆನೆಆಳಂಬಿ: ಆನೆ ಅಣಬೆ. ದೊಡ್ಡಗಾತ್ರದ ಈ ಅಣಬೆಯನ್ನು ಸಾರಿಗೆ ಬಳಸುತ್ತಾರೆ (ಕೋಲಾ.ಜಿ)

ಆನೆಕಂದೊಡಿ: ದೊಡ್ಡ ಜಾತಿಯ ಮಂಡಲ ಹಾವು (ದಕ.ಜಿ)

ಆನೆಕಜ್ಜಿ: ದಪ್ಪ ಹುಣ್ಣಿನ ಕಜ್ಜಿ. ರಸಿಕೆಯಿಂದ ಕೂಡಿದ ಹುಣ್ಣು ಮುಸುರೆಯಾಗಿರುತ್ತದೆ. ಬಟ್ಟೆ ತೆಗೆದು ನೀರಿನಲ್ಲಿ ಕೂತರೆ ಸಣ್ಣ ಸಣ್ಣ ಮೀನುಗಳು ಈ ಮುಸುರೆಯನ್ನು ತಿನ್ನುತ್ತವೆ. ಮೈಗೆ ಹಿತ ನೀಡುವ ಈ ಮೀನಿನ ಚಿಕಿತ್ಸೆಯಿಂದ ಕಜ್ಜಿ ಇಲ್ಲವಾಗುತ್ತದೆ (ಮಂಡ್ಯ.ಜಿ)

ಆನೆಕಟ್ಟಾಟ: ಗ್ರಾಮೀಣರ ಒಂದು ಒಳಾಂಗಣ ಆಟ. **ಇರೂ**: *ಆನೆಘಟ್ಟ*



ಆನೆಕಟ್ಟುಹುಲ್ಲು: *ಬ್ರಾತ್ರಿಯೋಕ್ಲೋವಾ ಪರ್ಟೂಸಾ*: ಮೇವಿಗಾಗಿ ಬಳಸುವ ಒಂದು ಬಗೆಯ ಹುಲ್ಲು

ಆನೆಕಡಪು: ಕಾಡಿನಲ್ಲಿ ಆನೆಗಳು ನಡೆದು ಹೋಗುವ ದಾರಿ (ದಕ.ಜಿ)

ಆನೆಕಣ್ಣು: ಯಕ್ಷಗಾನದ ತೆಂಕುತಿಟ್ಟಿನಲ್ಲಿ ಭೀಮನ ವೇಷಕ್ಕೆ ಹಣೆಯಲ್ಲಿ ಬಿಡಿಸುವ ಕಣ್ಣಿನ ವಿನ್ಯಾಸ (ದಕ.ಜಿ)

ಆನೆಕತ್ತಾಳೆ: ಕಳ್ಳಿ ಜಾತಿಯ ಒಂದು ಗಿಡ; ದೊಡ್ಡ ಕತ್ತಾಳೆ. ಸುಣ್ಣಕ್ಕೆ ಈ ಎಲೆಯ ರಸ ಬಳಿದು ಗೋಡೆಗೆ ಹಚ್ಚಿದರೆ ಗೆದ್ದಲು ಬರುವುದಿಲ್ಲ (ಚಿತ್ರ ನೋಡಿ)

ಆನೆಕಲ್ಲಾಟ: **ನೋಡಿ– ಆಣಿಕಲ್ಲು**

ಆನೆಕಲ್ಲು: ದೇವಸ್ಥಾನದ ಗರ್ಭಗುಡಿಯ ಬಾಗಿಲಿನ ಇಕ್ಕೆಲಗಳಲ್ಲಿರುವ ಸೊಂಡಿಲಿನಾಕಾರದ ಕಲ್ಲು (ದಕ.ಜಿ)

ಆನೆಕಾಲುಗಿಡ: *ಎಲಫಂಟಪಸ್ ಸ್ಕ್ಯಾಬರ್*: ಒಂದು ಸಸ್ಯವಿಶೇಷ. (ಚಿತ್ರ ನೋಡಿ)

ಆನೆಕಿವಿಹೂವು: *ಬಿಗೋನಿಯಾ ಇಂಟೆಗ್ರಿಫೋಲಿಯಾ*: ೧. ಆನೆಕಿವಿಯನ್ನು ಹೋಲುವ ಅಗಲವಾದ ಹೂವು ೨. ಅಗಲವಾದ ಕಿವಿ ಉಳ್ಳವರಿಗೆ ಈ ಅಡ್ಡ ಹೆಸರು

ಆನೆಕುಂದು: ಪಶುಗಳ ರೋಗ; ಜೊಲ್ಲು ಸುರಿಸುವುದು, ಜ್ವರ ಹಾಗೂ ಕಾಲುಗಳು ಚಾಚಿಕೊಂಡಿರುವುದು ಇದರ ಲಕ್ಷಣ (ಕೋಲಾ.ಜಿ)

ಆನೆಕುರ: ದೊಡ್ಡ ಕುರ (ದಕ.ಜಿ)

ಆನೆಕೊಂಬು ರೋಗ: ಬತ್ತದ ಫಸಲಿಗೆ ಬರುವ ರೋಗ (ಶಿವ.ಜಿ)

ಆನೆಗಂಟಿ: ದಾಸಯ್ಯನ ಪಂಗಡದವ. ಮೇಲ್ಜಾತಿಗೆ ಸೇರಿದವನು. ಶಕುನ, ಸಾಲಾವಳಿ ಹೇಳುವುದಿಲ್ಲ

ಆನೆಗುಲಗಂಜಿ: *ಅಡೆನಾನ್‌ತೆರ ಪವೋನಿನ:* ಮನೆಮದ್ದಾಗಿ ಬಳಕೆಯಲ್ಲಿರುವ ಒಂದು ಕಾಡುಗಿಡ (ಉಕ.ಜಿ). **ಇರೂ:** *ಗಜಹಿಪ್ಪಲಿ, ಮಂಜಟ್ಟಿಮರ*

ಆನೆಗೊಬ್ಬಳಿಮರ: ಗೊಬ್ಬಳಿ ಮರದ ಒಂದು ಪ್ರಭೇದ. **ಇರೂ:** *ಹೊಟ್ಟೆಜಾಲಿಮರ*

ಆನೆಚಪ್ಪರ: ೧. ದೊಡ್ಡ ಚಪ್ಪರ ೨. ಭೂತನೃತ್ಯಕ್ಕಾಗಿ ಹಾಕಿದ ಚಪ್ಪರ (ದಕ.ಜಿ)

ಆನೆಜೊಂಡು: *ಟ್ರೈಫ ಅಂಗುಸ್ಟೇಟ ಎಲಿಫೆಂಟೈನ:* ಒಂದು ಜಾತಿಯ ಹುಲ್ಲು; ಆಪು

ಆನೆತಜಂಕ್: *ಕ್ಯಾಸಿಯಾ ಆಕ್ಸಿದೆಂಟಾಲಿಸ್:* ಒಂದು ಔಷಧೀಸಸ್ಯ. ಆನೆ ಪರಂಗಿ ಎಂಬ ಚರ್ಮರೋಗಕ್ಕೆ ಇದರ ಎಲೆ ಔಷಧ (ದಕ.ಜಿ). **ಇರೂ:** *ಆನೆ ಸೊಗಟೆ; ಎಲೆಉರಿಗಿಡ*

ಆನೆತಲೆ: ದೇವರನ್ನು ಹೊತ್ತವರು ಉತ್ಸವದ ಹಾದಿಯಲ್ಲಿ ಅಲ್ಲಲ್ಲಿ ಉತ್ಸವ ನಿಂತಾಗ ಹೆಗಲು ಆರಿಸಿಕೊಳ್ಳಲು ದೇವರ ಅಡ್ಡೆಗೆ ಆಧಾರವಾಗಿ ಕೊಡುವ ಕವೆಯಂಥ ಊರುಗೋಲು. ಈ ಊರುಗೋಲಿನ ತುದಿಯು ಆನೆತಲೆಯ ಆಕಾರದಲ್ಲಿರುತ್ತದೆ (ಮಂಡ್ಯ.ಜಿ). **ಇರೂ:** *ಹಾದಿಕೋಲು*

ಆನೆತಲೆ ಹುಲ್ಲು: ಮೂರು ಮೂಲೆಯ ಮುಳ್ಳುಗಳಿರುವ ಕಳೆ (ಮೈಸೂ.ಜಿ)

ಆನೆತೊರಡು: *ಕೈಜೀಲಿಯ ಪಿನೇಟ:* ಒಂದು ಜಾತಿಯ ಸಸ್ಯ; ಮರಸೌತೆ (ಕೊಡ.ಜಿ)

ಆನೆದ ಒತ್ತು: ಮಲ್ಲಯುದ್ಧದ ಒಂದು ಪಟ್ಟು (ದಕ.ಜಿ)

ಆನೆನೆಗ್ಗಿಲು: *ಪೆಡೇಲಿಯಮ್ ಮ್ಯೂರೆಕ್ಸ್:* ನೆಲದ ಮೇಲೆ ಹಬ್ಬಿ ಬೆಳೆಯುವ ಒಂದು ಜಾತಿಯ ಮುಳ್ಳು ಸಸ್ಯ; ಔಷಧೀಯ ಗುಣವನ್ನು ಹೊಂದಿದೆ. **ಇರೂ:** *ದೊಡ್ಡನೀರಂಜಿ ಗಿಡ* (ಚಿತ್ರ ನೋಡಿ) **ಇರೂ:** *ಆನಗ್ಲು*

ಆನೆಪಡಿ: ೧. ಬತ್ತ ಬಡಿಯುವಾಗ ಕಾಳು ಸುಲಭವಾಗಿ ಉದುರಲು ಹಾಕಿಕೊಳ್ಳುವ ಮರದ ಹಲಗೆ ಅಥವಾ ಮರದ ಮಂಚ **ಇರೂ:** *ಪಡಿಮಂಚ (ದಕ.ಜಿ), ಹೊಡೆ ಮಂಚ*

ಆನೆಪಾದ: ಆನೆ ಪಾದದ ವಿನ್ಯಾಸವಿರುವ ರಂಗೋಲಿ. ಚುಕ್ಕೆ ರಂಗೋಲಿಯಲ್ಲಿ ಈ ವಿನ್ಯಾಸವನ್ನು ಬಿಡಿಸುತ್ತಾರೆ (ದಕ.ಜಿ)

ಆನೆಪ್ರದಕ್ಷಿಣೆ: ರಾಜಕ್ಷತ್ರಿಯ ಬ್ರಾಹ್ಮಣರ ಮದುವೆಗಳಲ್ಲಿನ ಒಂದು ಸಂಪ್ರದಾಯ. ಒಂದು ಕಡೆ ಉಪ್ಪಿನ ಆನೆ ಇನ್ನೊಂದು ಕಡೆ ಅಕ್ಕಿ ಆನೆ ಬರೆದು ವಧೂ ವರರನ್ನು ಒಂದೊಂದರ ಬಳಿ ನಿಲ್ಲಿಸಿರುವರು. ತಮ್ಮ ಆನೆ ಶ್ರೇಷ್ಠವೆಂದು ಹೊಗಳಿಕೊಂಡು ಬದಲಾಯಿಸಿಕೊಳ್ಳೋಣ ವೆನ್ನತ್ತಾ, ಬೇಡವೆನ್ನುತ್ತಾ ಆಡುವ ಆಟ

ಆನೆಬರ್ಕಟ್ಟೆ ಅಳಲು: ತುಂಬಾ ದೊಡ್ಡ ಗಾತ್ರದ ಒಂದು ಜಾತಿಯ ಅಣಬೆ. ಮಳೆಗಾಲದಲ್ಲಿ ಒಂದೇ ಕಡೆ ನೂರಿನ್ನೂರು ಏಳುತ್ತವೆ (ಚಿಮ.ಜಿ)

ಆನೆಬಾಗಿಲು: ಹಿರಿದಾದ ಬಾಗಿಲು; ಹೆಬ್ಬಾಗಿಲು; ಕೋಟೆಬಾಗಿಲು

ಆನೆಭೂತ: ಒಂದು ಭೂತದ ಹೆಸರು (ಉಕ.ಜಿ)

ಆನೆಮಂಗ್ರಿ/ಆನೆ ಮುಂಗು: *ಪಜಾನೇಲಿಂಯ ಲಾಂಜಿಫೋಲಿಯ ರೀಡಿಯೈ:* ಒಂದು ಔಷಧೀಯ ಸಸ್ಯ

ಆನೆಮಾವು: ಮಾವಿನ ಮರದ ಒಂದು ಪ್ರಭೇದ; ದೊಡ್ಡ ಗಾತ್ರದ ಹಣ್ಣು ಬಿಡುವ ಮಾವು (ಮಂಗ.ಜಿ)

ಆನೆಮೀನು: ೧. ಒಂದು ಜಾತಿಯ ಮೀನು; ದೊಡ್ಡ ಮೀನು (ತುಮ.ಜಿ) ೨. ತಿಮಿಂಗಿಲ (ದಕ.ಜಿ)

ಆನೆಮುಂಗು: **ನೋಡಿ–** ಆನೆಮಂಗ್ರಿ



ಆನೆಮುಟ್ಟಿ: ೧. ನೆಲವನ್ನು ಗಟ್ಟಿಗೊಳಿಸಲು ದಮ್ಮಸ್ಸು ಮಾಡುವ ಹಾಗೂ ಹೊಲಗದ್ದೆಗಳಲ್ಲಿನ ಹೆಂಟೆಗಳನ್ನು ಒಡೆಯುವ ಮರದ ಸಾಧನ ೨. ಆನೆಯನ್ನು ನಿಯಂತ್ರಿಸುವ ಕಲೆ (ದಕ.ಜಿ)

ಆನೆಮುಟ್ಟು ಸೊಪ್ಪು: ಒಂದು ಔಷಧೀಸಸ್ಯ. ದನಗಳ ಕಾಲುರೋಗಕ್ಕೆ ಇದರ ಎಲೆಗಳನ್ನು ಅರೆದು ಲೇಪಿಸುತ್ತಾರೆ

ಆನೆಸುಂಡೆ: *ಸಲೇನಮ್ ಫೆರಾಕ್ಸ್:* ಒಂದು ಔಷಧೀಸಸ್ಯ; ಗುಳ್ಳ. ಇದರಲ್ಲಿ ಹಳದಿಗುಳ್ಳ, ಕೆಂಪುಗುಳ್ಳ, ಬಿಳಿಗುಳ್ಳ, ದೊಡ್ಡಗುಳ್ಳ, ನೆಲಗುಳ್ಳ ಮೊದಲಾದ ಪ್ರಭೇದಗಳಿವೆ (ಕೊಡ.ಜಿ)

ಆನೆಹುಣಸೆ: *ಅಡನ್‌ಸೋನಿಯ ಡಿಜಿಟೇಟ್:* ಹುಳಿ–ಸಿಹಿ

ಮಿಶ್ರಿತ ಕಾಯಿ ಬಿಡುವ ಹುಣಸೆ ಜಾತಿಗೆ ಸೇರಿದ ಒಂದು ಮರ. **ಇರೂ:** *ಮಗಿಮಾವು*

ಆನೆಹುಲ್ಲು: *ಇಂಪರೇಟಾ ಅರಂಡನೇಶಿಯ:* ಒಂದು ಜಾತಿಯ ಹುಲ್ಲು; ಸಣ್ಣದೆಬ್ಬೆಹುಲ್ಲು

ಆನೆಹೆಜ್ಜೆ: ಕೋಟೆಕೊತ್ತಳಗಳಲ್ಲಿ ಬಂಡೆಯ ಮೇಲೆ ನಡೆಯುವಾಗ ಜಾರದಂತೆ ಪ್ರಾಣಿಗಳಿಗಾಗಿ ಮಾಡಿರುವ ಹಳ್ಳದಂಥ ಕಚ್ಚುಗಳು. **ಇರೂ:** *ಕುದುರೆಹೆಜ್ಜೆ*

ಆನೆಹೊರುದ್: **ನೋಡಿ–** ಆನಿಹೊತ್ತಿತು

ಆನ್ಕಲು: ೧. ಆಣಿಕಲ್ಲು; ಆಲಿಕಲ್ಲು ೨. ಅಂಗಾಲಿನಲ್ಲಿ ಮೂಡುವ ದಪ್ಪನಾದ ಚರ್ಮದ ಗುಬುಟು; ಆಣಿ

ಆನ್ಗಚ್ಚು: ಬೆನ್ನಿನ ಮೇಲೆ ಬರುವ ಚರ್ಮರೋಗ (ಮೈಸೂ.ಜಿ/ಚಾಮ.ಜಿ)

ಆನ್‌ಗಲ್ಲು: ಆಲಿಕಲ್ಲು (ಉಕ.ಜಿ)

ಆನ್ಪಾನ (ಕ್ರಿ): ಅನುಪಾನ; ಸೇವೆ; ಆರೈಕೆ

ಆನ್ಬಾಳೆ/ಆನ್‌ಬಾಳೆ: ಆನೆಬಾಳೆ; ಅಡುಗೆಗೆ ಬಳಸುವ ಬಾಳೆಯ ಒಂದು ತಳಿ. ಮೂರ್‍ನಾಲ್ಕು ಚಿಪ್ಪುಗಳಿರುವ ಗೊನೆ ಬಿಡುವ ಒಂದು ಪ್ರಭೇದ. ಕಾಯಿ ದಪ್ಪ ಹಾಗೂ ಗಿಡ್ಡ. ಹಿಡುಪು ಕಡಿಮೆ (ಉಕ.ಜಿ)

ಆನ್ಸೆಲೆ: ದನಕರುಗಳಿಗೆ ಬರುವ ಒಂದು ಬಗೆಯ ಸೆಲೆರೋಗ

ಆಪ: **ನೋಡಿ–** ಆಪು (ಬೆಳ.ಜಿ)

ಆಪಕ್‌ರೋಗ: ಬತ್ತದ ಬೆಳೆಗೆ ಬರುವ ಒಂದು ರೋಗ (ಶಿವ.ಜಿ)

ಆಪಣ: ಅಂಗಡಿ; ಮಳಿಗೆ

ಆಪಿ: ಒಳ್ಳೆಯ ಗುಣಮಟ್ಟದ ಅಡಿಕೆಯ ಒಂದು ಪ್ರಭೇದ. ಬೆನ್ನು ಚಪ್ಪಟೆಯಾಗಿರುತ್ತದೆ. ಬಣ್ಣದಲ್ಲಿ ಕಪ್ಪು, ಮುಡಿ ಕಡುಕೆಂಪು (ಉಕ.ಜಿ)

ಆಪಿನಹುಲ್ಲು: **ನೋಡಿ–** ಆಪು (ಶಿವ.ಜಿ)

ಆಪು: *ಟ್ರೈಫ ಆಂಗುಸ್ಟೇಟ ಎಲಿಫೆಂಟೈನ:* ೧. ಹಳ್ಳ ಅಥವಾ ನಿಂತ ನೀರಿನಲ್ಲಿ ಉದ್ದವಾಗಿ ಬೆಳೆಯುವ ಒಂದು ಜಾತಿಯ ಜೊಂಡುಹುಲ್ಲು. ಆಣಿಪೀಣಿ ಸಂದರ್ಭದಲ್ಲಿ ಇದನ್ನು ಹಾವಿನ ಹೆಡೆಯಾಕಾರದಲ್ಲಿ ಹೆಣೆದು ಇದರೊಳಗೆ ದೀಪ ಇರಿಸುವ ಸಂಪ್ರದಾಯವಿದೆ. **ಇರೂ:** *ಆನೆಜೊಂಡು, ಜೇಕು* ೨. ಗೂಟ; ಬೆಣೆ (ದಕ.ಜಿ) ಅಲುಗಾಡುವ ವಸ್ತುವನ್ನು ಬಿಗಿಗೊಳಿಸಲು ಬಳಸುವ ವಸ್ತು ೩. ಅಟ್ಟು; ಕೆಸರು ೪. ಒಂದು ಕಳೆ; ಪಾಚಿ; ೫. ಒಂದು ಬಗೆಯ ದೋಸೆ ೬. ಕಬ್ಬಿಣದ ದಪ್ಪನೆಯ ಗೂಟದಂತಿದ್ದು ಇದನ್ನು ಸೌದೆ ಸೀಳುವಾಗ ಸೌದೆಯ ಮೇಲೆ ಇಟ್ಟು ಇದಕ್ಕೆ ಚಮ್ಮಟಿಕೆಯಿಂದ ಹೊಡೆಯಲು ಬಳಸುವರು. ಕಲ್ಲು ಕುಟಿಗರು ಕಲ್ಲು ಸೋಸುವ/ಸೀಳುವ ಸಂದರ್ಭದಲ್ಲೂ ಸಣ್ಣಗಾತ್ರದ ಆಪುಗಳನ್ನು ಬಳಸುತ್ತಾರೆ (ಹಾಸ.ಜಿ)

ಆಪೆದೋಸೆ: ಒಂದು ಬಗೆಯ ದೋಸೆ; ಅಕ್ಕಿ ಉದ್ದಿನ ಬೇಳೆ ಮೆಂತ್ಯವನ್ನು ನೆನೆಸಿ ಹಿಂದಿನ ದಿನವೇ ರುಬ್ಬಿಟ್ಟುಕೊಂಡು ಮರುದಿನ ಸಣ್ಣಗೆ ಹೆಚ್ಚಿದ ಈರುಳ್ಳಿ ಹಾಕಿ ಆಪೆ ಕಾವಲಿಯಲ್ಲಿ ಗುಳಿಗಳಿಗೆ ಹಿಟ್ಟು ಹಾಕಿ ಬೇಯಿಸಿ ಸಿದ್ಧಗೊಳಿಸುವಂಥದ್ದು. **ಇರೂ:** *ಅಪ್ಪ, ಪಡ್ಡು, ಗುಂಡ್‌ಪಂಗ್ಳ್ (ಮೈಸೂ.ಜಿ)*

ಆಪ್ತಗಿರಿ: ರಾಜರು ಸ್ವಾಮಿಗಳು ಮುಂತಾದವರಿಗೆ ಗೌರವಪೂರ್ವಕ ಹಿಡಿಯುವ ರೇಶ್ಮೆ ಬಟ್ಟೆಯ ಒಂದು ಬಗೆಯ ಛತ್ರಿ; ಕೋಲಿನ ತುದಿಗೆ ವರ್ತುಳಾಕಾರದ ಚಟ್ಟ ಇದ್ದು ಅದಕ್ಕೆ ರೇಶ್ಮೆಬಟ್ಟೆ ಹೊದಿಸಲಾಗಿರುತ್ತದೆ (ಬಿಜಾ.ಜಿ)

ಆಪ್ರಿಅಂಬು: ಅವರೆ ಬಳ್ಳಿ (ಮಂಡ್ಯ/ಮೈಸೂ.ಜಿ)

ಆಬು: ನೀರು

ಆಬೂರ ಮಲ್ಲಿಗುವ್ವ: ಅಂಬೂರು ಮಲ್ಲಿಗೆ (ಕೋಲಾ.ಜಿ)

ಆಮಂಡ: ಔಡಲಗಿಡ; ಹರಳುಗಿಡ (ಮಂಡ್ಯ.ಜಿ)

ಆಮಜೀರ್ಣ: ಅನ್ನ ಜೀರ್ಣವಾಗದೆ ವಾಂತಿ ಬೇಧಿಯಾಗುವುದು (ಚಿಮ.ಜಿ)

ಆಮಧೂಮ: ಹಸಿಯಾದ; ಹೊಗೆ ಕಾರುವ

ಆಮಯ: ರೋಗ

ಆಮಶಂಕೆ ಭೇದಿ: ನೀರು ನೀರಾಗಿ ಲೋಳೆಯಾದ ಭೇದಿ. ತಿಂದ ಆಹಾರ ಸರಿಯಾಗಿ ಜೀರ್ಣವಾಗದೆ ಆಗುವ ಆಮ್ಲಮಿಶ್ರಿತ ಭೇದಿ (ಮಂಡ್ಯ.ಜಿ) ರಕ್ತವೂ ಬೀಳುತ್ತದೆ. ಗಂಗಳದಲ್ಲಿ ಬಿಸಿ ಅನ್ನ ಇಟ್ಟು ಕಾಯಿಸಿದ ಬೆಣಚು ಕಲ್ಲನ್ನು ಅನ್ನದಲ್ಲಿ ಮುಚ್ಚಿ ಅದರ ಮೇಲೆ ಹಸುವಿನ ಮೊಸರು ಹಾಕಿ ಕಲ್ಲು ತೆಗೆದು ಊಟ ಮಾಡಿದರೆ ಆಮಶಂಕೆ ಭೇದಿ ನಿಲ್ಲುತ್ತದೆ (ಮಂಡ್ಯ.ಜಿ)

ಆಮಶ್ರಾದ್ಧ: ಮಲೆನಾಡಿನ ಬ್ರಾಹ್ಮಣರು ನಡೆಸುವ ಶ್ರಾದ್ಧದಲ್ಲಿ ಬೇಯಿಸದ ಧಾನ್ಯಗಳನ್ನು ದಕ್ಷಿಣೆಸಹಿತವಾಗಿ ದಾನ ನೀಡುವುದು

ಆಮು: ೧. ದೊಡ್ಡ ಕರುಳಿನಲ್ಲಿ ಒಡೆದು ಸೋರುವ ಕೀವು ೨. ಹಳದಿ ಲೋಳೆ ಮಿಶ್ರಿತ ಮಲ (ಮೈಸೂ.ಜಿ) ೩. ಕುಂಬಾರರು ಮಡಕೆಗಳನ್ನು ಸುಡುವ ಒಲೆ

ಆಮೆಬೇಟೆ: ಬುಡ್ಗ ಜಂಗಮರು ಮಾಡುವ ಆಮೆ ಬೇಟೆ. ಸೂರ್ಯೋದಯಕ್ಕೆ ಮುಂಚೆ ನದಿ ಅಥವಾ ಹೊಳೆಗಳಿಗೆ ಹೋಗಿ, ಮರದ ಹಿಡಿಕೆ ಇರುವ ನಾಲ್ಕು ಅಡಿ ಉದ್ದದ ಕಬ್ಬಿಣದ ಸಲಾಕೆಯನ್ನು ಕೆಸರಿರುವಲ್ಲಿ ಚುಚ್ಚುತ್ತಾರೆ. ಹಾಗೆ ಚುಚ್ಚಿದಾಗ ಧೊಕ್ಕೆಂದು ಶಬ್ದ ಬಂದರೆ ಆಮೆ ಇದೆ ಎಂದು ಅರ್ಥ. ತಮ್ಮ ಕಾಲಿನಿಂದ ಅಮುಕಿ ಕೈಯಿಂದ ತೆಗೆದು ಚೀಲಕ್ಕೆ ಹಾಕಿಕೊಳ್ಳುತ್ತಾರೆ

ಆಮೆಮಣ್ಣು: ಒಂದು ವಿಧದ ಮಣ್ಣು. ಇದು ಮಡಿಕೆ ಮಾಡಲು ಸೂಕ್ತ.

ಆಮೆಹಾಲು: ಪುರುಡಿನ ಅವಧಿಯ ದನದ ಅಥವಾ ಎಮ್ಮೆಯ ಹಾಲು (ದಕ.ಜಿ)

ಆಮ್ರ: ನೋಡಿ– ಆಂಬ್ರ

ಆಮ್ರದ ಸೊಪ್ಪು: *ಸ್ಪೈನೊಗ್ಲಾಸಮ್ ವಾಲಿಚಯ್ಯೆ:* ಒಂದು ಬಗೆಯ ಹುಳಿರುಚಿಯುಳ್ಳ ಸೊಪ್ಪು

ಆಮ್ಲಿ: ಕಿವಿಯನ್ನು ಸುತ್ತುವರೆದು ಮೇಲೆ ತುದಿಯಲ್ಲಿ ನೀಲಿ ಬಣ್ಣದ ಹರಳು ಇರುವ ಗಂಡಸರ ಆಭರಣ (ದಕ.ಜಿ). **ಇರೂ:** *ಒಂಟಿ (ಮೈಸೂ.ಜಿ)*

ಆಯ: ೧. ಅಳತೆ; ಪಾಯದ ಅಳತೆ; ಕಟ್ಟಡದ ನೆಲೆಗಟ್ಟಿನ ಉದ್ದಗಲದ ಪ್ರಮಾಣ **ಪ್ರ:** ಮನೆಯ ಆಯ; ತೋಟದ ಆಯ (ದಾವ.ಜಿ) ೨. ಅಗಲಕ್ಕಿಂತ ಉದ್ದ ಹೆಚ್ಚಾಗಿರುವ ಅಳತೆ ೩. ಒಳಮನೆ ಜಗುಲಿ ದಾಟಿದ ನಂತರ ಸಿಗುವ ಕೋಣೆ (ಉಕ.ಜಿ) ೪. ಸಂಭಾವನೆ. ಅಗಸ, ಬಡಗಿ, ಕ್ಷೌರಿಕ, ಕಮ್ಮಾರನಿಗೆ ಮಾಡಿದ ಕೆಲಸಕ್ಕೆ ರೈತರು, ಜಮೀನುದಾರರು ಸುಗ್ಗಿಕಾಲದಲ್ಲಿ ನೀಡುವ ಧಾನ್ಯ; ಮಿರಾಸು (ಚಿತ್ರ.ಜಿ) **ಇರೂ:** *ಹಡದೆ (ಮೈಸೂ.ಜಿ)* ೫. ಪ್ರಾಣಿಯ ಮರ್ಮಸ್ಥಾನ

ಆಯಕಟ್ಟು: ೧. ಅಚ್ಚುಕಟ್ಟು ೨. ಮುಖ್ಯವಾದ ಸ್ಥಳ; ತಪ್ಪಿಸಿಕೊಳ್ಳಲಾಗದ ಸ್ಥಳ ೩. ಸುರಕ್ಷಿತ ಸ್ಥಳ; ೪. ಇಕ್ಕಟ್ಟಾದ ಕಾಡಿನ ಸ್ಥಳ (ಮಂಡ್ಯ.ಜಿ)

ಆಯಗಾರ: ಗ್ರಾಮೀಣ ಕೃಷಿಕನಿಗೆ ನೆರವಾಗುವ ಬಡಗಿ ಕಮ್ಮಾರ ತೋಟಿ ತಳವಾರ ಮುಂತಾದವರು (ದಾವ.ಜಿ)

ಆಯಚಾಯ: ೧. ಚಂದ; ಕಾಂತಿ ೨. ರೀತಿ ನೀತಿ (ಗುಲ್ಬ.ಜಿ)

ಆಯತಪ್ಪು: ೧. ಗುರಿ ತಪ್ಪು. **ಪ್ರ:** ಆಯತಪ್ಪಿ ಪಕ್ಕದವರಿಗೆ ಏಟು ಬಿತ್ತು ೨. ಸಮತೋಲನ ತಪ್ಪು **ಪ್ರ:** ಆಯತಪ್ಪಿ ಹಳ್ಳಕ್ಕೆ ಬಿದ್ದ (ಮಂಡ್ಯ.ಜಿ)

ಆಯದ ಕೋಣೆ: ನಡುಕೋಣೆ (ದಕ.ಜಿ)

ಆಯದ ದಾರಂದ: ಮುಖ್ಯ ಬಾಗಿಲುವಾಡ (ದಕ.ಜಿ)

ಆಯದ ಮನೆ: ಅಳತೆ ಪ್ರಕಾರ ಕಟ್ಟಿದ ಮನೆ (ದಕ.ಜಿ)

ಆಯದಾಯ: ಬೇಟೆಯಾದ ಸ್ಥಳದ ಯಜಮಾನನಿಗೆ ಕೊಡುವ ಬೇಟೆ ಪ್ರಾಣಿಯ ಮೀಸಲು; ಮಾಂಸದ ಪಾಲು (ದಕ.ಜಿ)

ಆಯನ: ನೋಡಿ– ಅಯನ

ಆಯನೆಲ್ಲು: ಬೀಜ ಹೊಂದಿರುವ ಬತ್ತದ ಪೈರಿನ ಹೊರೆ

ಆಯಪೂಜೆ: ಮನೆ ಕಟ್ಟುವ ಜಾಗದ ಅಳತೆ ಮಾಡಿಸಿ ಪುರೋಹಿತರಿಂದ ಶಾಸ್ತ್ರೋಕ್ತವಾಗಿ ಮಾಡಿಸುವ ಪೂಜೆ. **ಇರೂ:** *ಆಯ ಹಾಕಿಸುವುದು (ಮಂಡ್ಯ.ಜಿ)*

ಆಯಬೀರ: ಭೂತದ ಹುಟ್ಟು, ಸಾಹಸ ಮೊದಲಾದ ಇತಿಹಾಸ, ಮಹಿಮೆ ಕಾರ್ಣಿಕಗಳು (ದಕ.ಜಿ)

ಆಯಬೀರದ ಒಕ್ಕಣೆ: ಭೂತದ ಪರಾಕ್ರಮದ ವಾಚನ (ದಕ.ಜಿ)

ಆಯಮಾಡಿಸುವುದು: ನೋಡಿ– ಆಯಪೂಜೆ

ಆಯಸಾಯ: ೧. ಧರ್ಮಕಾರ್ಯಕ್ಕಾಗಿ ಉತ್ಪತ್ತಿಯಿಂದ ವಿನಿಯೋಗಿಸಿದ ಭಾಗ ೨. ಧಾನ್ಯ ರೂಪದ ಸಲುವಳಿ (ದಕ.ಜಿ)

ಆಯಸ್ಥಾನ: ಮರ್ಮಸ್ಥಾನ; ಸೂಕ್ಷ್ಮಭಾಗ (ಮೈಸೂ.ಜಿ). **ಪ್ರ:** ಆಯಸ್ಥಾನಕ್ಕೆ ಏಟ್ ಬಿದ್ದು ಆಡುಮರಿ ಸತ್ತೇ ಹೋಯ್ತು

ಆಯಾತಿ: ಮರಣಕಾಲ (ದಕ.ಜಿ)

ಆಯಾರ: ೧. ಆಹೇರಿ; ಉಡುಗೊರೆ; ಶುಭಸಮಾರಂಭ ಮತ್ತು ಮಂಗಳಕಾರ್ಯಗಳ ಸಂದರ್ಭದಲ್ಲಿ ಆತ್ಮೀಯರು, ಬಂಧು ಬಳಗದವರು ಹಣ ಅಥವಾ ವಸ್ತು ರೂಪದಲ್ಲಿ ಕೊಡುವ ನೆನಪಿನ ಕಾಣಿಕೆ (ಧಾರ.ಜಿ) **ಇರೂ:** *ಮುಯ್ಯಿ, ಉಡುಗೊರೆ, ಬಹುಮಾನ, ಅಹೆರ, ಆಯರಿ* ೨. ಆಹಾರ; ಬಲಿ

ಆಯಾರ ಕೊಡು: ಪ್ರಾಣಿಬಲಿ ಕೊಡು (ಮೈಸೂ.ಜಿ)

ಆಯಾಲು: ಕುದುರೆ ಹಾಗೂ ಸಿಂಹದ ಕುತ್ತಿಗೆ ಮೇಲೆ ದಟ್ಟವಾಗಿ ಹರಡಿಕೊಂಡಿರುವ ಕೂದಲು

ಆಯಿ: ಅಜ್ಜಿ; ಅಮ್ಮ (ಧಾರ.ಜಿ)

ಆಯಿಔಳ್ ಸೀರಿ: ಮದುಮಗಳ ಅಜ್ಜಿ ಅಥವ ತಂದೆಯ ತಾಯಿ ಬದುಕಿದ್ದಲ್ಲಿ ಮದುವೆ ಸಂದರ್ಭದಲ್ಲಿ ಆಕೆಗೆ ಉಡುಗೊರೆಯಾಗಿ ಕೊಡುವ ಸೀರೆ (ಬಿಜಾ.ಜಿ)

ಆಯಿಕೋಣೆ: ಮುಪ್ಪಿನವರು ಮಲಗುವ ಕೋಣೆ; ಅಜ್ಜ, ಅಜ್ಜಿ ಕೊಠಡಿ

ಆಯಿಜ್ವಾಳಾ: ಚಪ್ಪಿ ಜೋಳ (ಧಾರ.ಜಿ)

ಆಯಿತ: ಶೃಂಗಾರ (ದಕ.ಜಿ)

ಆಯಿದಾನ: ಆಯ್ದಾನ; ಕತ್ತಿ ಕೊಡಲಿ ಮುಂತಾದ ಸಾಧನಗಳು

ಆಯಿಪ್ಪದ: ಸೊಗಸಾದ; ಆಯವಾಗಿ ಉಳ್ಳ; ಶ್ರೇಷ್ಠವಾದ

ಆಯಿಮುತ್ಯಾ: ಅಜ್ಜಿ ಮತ್ತು ಅಜ್ಜ (ಉಕ)

ಆಯುತ: ೧. ಅಲಂಕಾರ ಪೂರ್ಣತೆ ೨. ಸಿದ್ಧತೆ

ಆಯುಧಪೂಜೆ: ಆಶ್ವೀಜಮಾಸ ಶುಕ್ಲಪಕ್ಷದ ಮಹಾನವಮಿಯ ದಿನ (ದಸರಾ ಹಬ್ಬದಲ್ಲಿ) ಮಾಡುವ ಆಯುಧಗಳ ಪೂಜೆಯ ಸಮಾರಂಭ

ಆಯುಳ್ಳ (ಕ್ರಿ): ಸೊಗಸಾದ; ಚೆಂದವಾದ (ಉಕ.ಜಿ)

ಆಯ್ಕಟ್ಟು: ೧. ಫಲವತ್ತಾದ ೨. ಮನೆಕಟ್ಟಲು ಪಾಯ ಹಾಕುವಾಗ ಮಾಡುವ ಲೆಕ್ಕಚಾರದ ಅಳತೆ (ಮೈಸೂ.ಜಿ)

ಆಯ್ಕೆ: ಹೊಲವನ್ನು ಇನ್ನೊಬ್ಬರಿಂದ ಪಡೆದು ಒಂದು ವರ್ಷ ಕೃಷಿ ಮಾಡಿ ಬೆಳೆದ ಬೆಳೆಯನ್ನು ಮಾಲೀಕ ಮತ್ತು ಉಳುಮೆಗಾರ ಇಬ್ಬರೂ ಸಮವಾಗಿ ಹಂಚಿಕೊಳ್ಳುವುದು (ಬಳ್ಳಾ.ಜಿ)

ಆಯ್ಕೊಂಡ್‌ತಿನ್ನು: ಕಾಳುಗಳನ್ನು ಹುಡುಕಿ ಆಯ್ದು ತಿನ್ನುವ ದುಃಸ್ಥಿತಿ. ಕಡುಬಡತನವನ್ನು ಸೂಚಿಸುವ ಶಬ್ದ (ಮಂಡ್ಯ.ಜಿ)

ಆಯ್ಗಡ: ಹಾಯ್ಗಡ; ಹರಿಯುವ ನೀರಿನಲ್ಲಿ ಹಾಯಲು ಬರುವಂಥ ಸ್ಥಳ

ಆಯ್ಗೇಡಿ: ೧. ಯೋಗ್ಯತೆಯನ್ನು ಕೆಡಿಸಿಕೊಂಡವ ೨. ಹಿಂದೆ ಮುಂದೆ ನೋಡದವ ೩. ದಡ್ಡ; ದಡ್ಡಿ (ಬೆಂಗ್ರಾ.ಜಿ)

ಆಯ್ತ: ಆಹುತಿ

ಆಯ್ತುವಾರ/ಆದಿತ್ಯವಾರ/ಆಯ್ತಾರ: ಭಾನುವಾರ. **ಪ್ರ**: ಊರಾಗ ಬರಾ ಆಯ್ತುವಾರ ಸಂತಿ

ಆಯ್ತಾರ: **ನೋಡಿ**– ಆಯ್ತುವಾರ

ಆಯ್‌ಹೊಡೆ (ನಾ): ವಿರಳವಾಗಿ ಅಲ್ಲಲ್ಲಿ ಕಾಣಿಸಿಕೊಳ್ಳುವ ರಾಗಿ, ಜೋಳಗಳು ತೆನೆ ಕಟ್ಟುವ ಮೊದಲಿನ ಸ್ಥಿತಿ (ಮೈಸೂ.ಜಿ)

ಆರ: ೧. ಹಾರ ೨. ಆಹಾರ ೩. ಆಶೀರ್ವಾದ

ಆರಂಗ: **ನೋಡಿ**– ಅರಕ

ಆರಂಜಿ: ಅರಗು

ಆರಂದಡವಿ: ದಟ್ಟವಾದ ಕಾಡು; ಸಾಮಾನ್ಯವಾಗಿ ಜನಪದ ಕಥೆಗಳಲ್ಲಿ ಹೆಚ್ಚು ಪ್ರಯೋಗವಾಗುವ ಶಬ್ದ

ಆರಂಬ: ೧. ಪ್ರಾರಂಭ ೨. ವ್ಯವಸಾಯ

ಆರಕ/ಆರ್ಕ: ಹಾರಕ; ರಾಗಿಗಿಂತ ಸ್ವಲ್ಪ ದಪ್ಪ ಗಾತ್ರದ ಕಿರುಧಾನ್ಯ. ಬಿತ್ತುವ ಆರು ತಿಂಗಳ ನಂತರ ಕಾಳುಬಿಡುವ ಆರಕ ದೀರ್ಘಾವಧಿ ಬೆಳೆ. ಬಯಲುಸೀಮೆಯಲ್ಲಿ ಇದರಿಂದ ಅನ್ನ ಮಾಡುತ್ತಾರೆ. ಹೆಚ್ಚು ಪೌಷ್ಠಿಕಾಂಶವುಳ್ಳ ಧಾನ್ಯ. **ಇರೂ**: *ಆರಂಗ*

ಆರಕಟ್ಟುಗರು: ಕಟುಕರು; ಪ್ರಾಣಿವಧೆಮಾಡಿ ಮಾಂಸವನ್ನು ಮಾರುವವರು

ಆರಕೊಡುವುದು: ೧. ಆಹಾರ ಕೊಡುವುದು ೨. ಬಲಿ ಕೊಡುವುದು. ಭೂತಾರಾಧನೆಯಲ್ಲಿ ಭೂತಗಳ ತೃಪ್ತಿಗಾಗಿ ಅರ್ಪಿಸುವ ಪ್ರಾಣಿಬಲಿ ಅಥವಾ ತೆಂಗು ಬಾಳೆ ಲಿಂಬೆ ಮೊದಲಾದವು

ಆರಣಗಿ: ಆರ್ನ; ಎರಡು ಸೇರಿನ ಅಳತೆ; ಆರುಣಗಿ (ಧಾರ.ಜಿ)

ಆರಣೆ: ೧. ಹಾವುರಾಣಿ ೨. ಐರಾಣೆ

ಆರತಕ್ಷತೆ ಶಾಸ್ತ್ರ: ಲಗ್ನವಾದ ದಿನದ ಸಂಜೆ ಗಂಡು ಹೆಣ್ಣನ್ನು ಕೂಡಿಸಿ ಹೆಣ್ಣಿನ ಕಡೆಯವರು ಗಂಡಿನ ಕಡೆಯವರು ಹೆಣ್ಣಿಗೂ ಗಂಡಿಗೂ ಅರಿಶಿಣ ಹಚ್ಚುವುದು (ಬೆಂಗ್ರಾ.ಜಿ)

ಆರತಿ/ಆರುತಿ/ಆರ್ತಿ: ೧. ದೇವರ ಮೂರ್ತಿಗೆ, ವಿಶೇಷ ಸಂದರ್ಭಗಳಲ್ಲಿ ದನಕರುಗಳಿಗೆ, ಚಪ್ಪರ ಕಳಸ ಇತ್ಯಾದಿಗಳಿಗೆ



ಕರ್ಪೂರ ಅಥವಾ ದೀಪ ಹಚ್ಚಿ ಬೆಳಗುವುದು. ೨. ಪೂಜೆಗಾಗಿ

ಬಳಸುವ ದೀಪಾರತಿ ೩. ನಗರ್ತ ಜನಾಂಗದ ಒಂದು ಸಂಪ್ರದಾಯ. ದೇವತಾ ಪ್ರಸ್ಥದ ಮೂರನೇದಿನ ತನ್ನ ಮಗುವಿನ ಕಿವಿ ಚುಚ್ಚಿಸುವ ತಾಯಿಯು ತಂಬಿಟ್ಟಿನ ಆರತಿಯನ್ನು ತಲೆಯ ಮೇಲಿಟ್ಟು ವೀರಭದ್ರ ವೇಷಧಾರಿ ಜೊತೆ ಅಗ್ನಿಕೊಂಡ ತುಳಿದು ದೇವರಿಗೆ ಆರತಿ ಬೆಳಗಿ ಆರತಿ ಪಡೆಯುವ ಅರ್ಹತೆ ಪಡೆಯುತ್ತಾಳೆ ೪. ದಕ್ಷಿಣ ಕನ್ನಡದಲ್ಲಿ ಶ್ರಾವಣದಲ್ಲಿ ಬಿಡುವ ಹೂವು. ಚೂಡಿ ಪೂಜೆಯಲ್ಲಿ ಬಳಸುತ್ತಾರೆ

ಆರತಿಅಚ್ಚು: ಆಕರ್ಷಕವಾದ ಕೆತ್ತನೆಯುಳ್ಳ ಅಚ್ಚಿನ ಮಣೆಯನ್ನು ಹೋಲುವ ಆರತಿಯ ಮಣೆ



ಆರತಿಎತ್ತು: ಆರತಿ ಮಾಡು

ಆರತಿಕುಂಡಿಗೆ: ಒಂದು ಬಗೆಯ ಸಸ್ಯ (ಚಿತ್ರ ನೋಡಿ)

ಆರತಿಚೆಂಡೆ: ಕಾಸ್ಟಸ್ *ಸ್ಪೆಸಿಓಸಿಸ್*: ಕೇಮುಖಿ; ನರಿಕಬ್ಬು (ಬೆಂಗ.ಜಿ)

ಆರತಿತಟ್ಟೆ ರಂಗೋಲಿ: ದೇವರಿಗೆ ಆರತಿ ಮಾಡುವ ಹರಿವಾಣದ ಮೇಲೆ ಬಿಡಿಸುವ ರಂಗೋಲಿ. ಹರಿವಾಣವನ್ನು ಶುದ್ಧಗೊಳಿಸಿ ಒಣಗಿಸಿ, ಅರಿವೆ ಬತ್ತಿಯಿಂದ ಎಣ್ಣೆ ಮೂಲಕ ವಿನ್ಯಾಸ ಮೂಡಿಸುವುದು. ಈ ವಿನ್ಯಾಸದ ಮೇಲೆ ಅರಶಿನ ಮತ್ತು ಕುಂಕುಮವನ್ನು ಹರಡಿ, ಹರಿವಾಣವನ್ನು ತಲೆಕೆಳಗಾಗಿ ಹಿಡಿದು ಸ್ವಲ್ಪ ಬಡಿದಾಗ ಅದರಲ್ಲಿರುವ ಪುಡಿ ಎಣ್ಣೆಯ ವಿನ್ಯಾಸಕ್ಕೆ ಅಂಟಿಕೊಂಡು ಉಳಿದದ್ದು ಕೆಳಕ್ಕೆ ಬೀಳುತ್ತದೆ. ಬಳಿಕ ಇದಕ್ಕೆ ಬತ್ತಿ ಹಾಕಿ ದೇವರಿಗೆ ಆರತಿ ಎತ್ತುವರು. ಕೆಲವೊಮ್ಮೆ ಸಂಪೂರ್ಣ ಹರಿವಾಣಕ್ಕೆ ಎಣ್ಣೆ ಹಚ್ಚಿ ಅದರ ಮೇಲೆ ಪುಡಿ ಹರಡಿ ಬೆಂಕಿಕಡ್ಡಿಯಿಂದ ವಿನ್ಯಾಸ ಮೂಡಿಸುತ್ತಾರೆ

ಆರತಿಪದ: ೧. ಮದುವೆ, ಪೂಜೆಗಳ ಕೊನೆಯಲ್ಲಿ ಹೇಳುವ ಹಾಡುಗಳು ೨. ಬಯಲಾಟ, ದೊಡ್ಡಾಟ ಮುಂತಾದವುಗಳ ಕೊನೆಯ ದೃಶ್ಯದಲ್ಲಿ ಹೇಳುವ ಪದ್ಯ ೩. ಸೋಬಾನೆ ಪದ ೪. ಕಿಸೆ ಪದ್ಯ (ದಕ.ಜಿ)

ಆರತಿಬಾನ: ಚಿತ್ರದುರ್ಗ ಜಿಲ್ಲೆ ಹೊಸದುರ್ಗ ತಾಲ್ಲೂಕಿನ ದೇವಪುರದ ದೇವತೆ ಕೆರಳಮ್ಮನಿಗೆ ಸಲ್ಲಿಸುವ ಸೇವೆ. ನವಣಕ್ಕಿ ಮತ್ತು ಬೆಲ್ಲ ಕುಟ್ಟಿ ಆರತಿ ತಯಾರಿಸಿ ಹೂವುಗಳಿಂದ ಅಲಂಕರಿಸಿ ಹಣತೆ ಹಚ್ಚಿಟ್ಟು ದೇವಿಗೆ ಅರ್ಪಿಸುತ್ತಾರೆ. ಹೆಂಗಳೆಯರು ಆರತಿ ಹೊತ್ತು ಮೆರವಣಿಗೆಯಲ್ಲಿ ಬರುತ್ತಾರೆ **ನೋಡಿ**– ತಂಬಿಟ್ಟಿನಾರತಿ

ಆರತಿಬೆಳಗು: ಆರತಿ ಮಾಡು. **ಪ್ರ**: ದಸರ ಹಬ್ಬದ ದಿನ ಬನ್ನಿ ಪತ್ರೆ ತರತಿದ್ರು ಬಂದೋರಿಗೆ ಆರತಿ ಬೆಳಗತಿದ್ರು (ಚಿತ್ರ.ಜಿ)

ಆರತಿಹಣ: ವಿವಾಹ ಸಂದರ್ಭದಲ್ಲಿ ವಧೂವರರಿಗೆ ಆರತಿ ಬೆಳಗಿದಾಗ ಆರತಿ ತಟ್ಟೆಗೆ ಹಾಕುವ ಹಣ (ಬೆಂಗ್ರಾ.ಜಿ)

ಆರತಿಹಾಡು: **ನೋಡಿ**– ಆರತಿಪದ

ಆರನೆಲ್ಲಿ: ನೆಲ್ಲಿಯ ಒಂದು ಪ್ರಭೇದ

ಆರಪಾರ: ೧. ಪ್ರಾರಂಭದಿಂದ ಕೊನೆಯವರೆಗೆ ೨. ಈ ದಂಡೆಯಿಂದ ಆ ದಂಡೆಗೆ ಪಾರಾಗಿ ಹೋದದ್ದು ೩. ಆದರೆ ಆಗಲಿ ಹೋದರೆ ಹೋಗಲಿ (ಬೀದ.ಜಿ)

ಆರಬಾರು: ೧. ಎಲ್ಲ ಖರ್ಚುವೆಚ್ಚದ ಹೊಣೆಗಾರಿಕೆ ೨. ತಪ್ಪು ಒಪ್ಪು ೩. ಮೇಲ್ವಿಚಾರಣೆ. **ಇರೂ**: ಆರಭಾಗ

ಆರರ ರಂಟೆ: ಮೂರರಿಂದ ಆರು ಜೊತೆ ಕೋಣ ಅಥವಾ ಎತ್ತುಗಳನ್ನು ಹೂಡಿ ಹೊಲ ಉಳುಮೆ ಮಾಡುವ ಕಬ್ಬಿಣದ ಅಥವಾ ಮರದ ರಂಟೆ (ಉಕ) **ನೋಡಿ**– ರಂಟೆ

ಆರಲ್ಲು: ಆರು ಹಲ್ಲು ಮೂಡಿರುವ ಎತ್ತು; ದೊಡ್ಡ ಎತ್ತುಗಳು (ಕೋಲಾ.ಜಿ)

ಆರಾಗಣೆ: ೧. ಆರೋಗಣೆ ೨. ಊಟ (ಮೈಸೂ.ಜಿ)

ಆರಾಟ: ಉತ್ಸವ ಜಾತ್ರೆಗಳ ಕೊನೆಯ ಹಂತವಾದ ಅವಭೃತ ಸ್ನಾನ; ಉತ್ಸವಮೂರ್ತಿಯನ್ನು ನದಿ ಅಥವಾ ಜಲಾಶಯದಲ್ಲಿ ಮೀಯಿಸುವ ಆಚರಣೆ (ದಕ.ಜಿ)

ಆರಾಧನೆ: ಹಾಡುವ ಕುಣಿಯುವ ಅಡ್ಡ ಬೀಳುವ ಕ್ರಿಯೆಗಳೆಲ್ಲ ಸೇರಿದ ದೈವೀ ಉಪಾಸನೆ ಅಥವಾ ಒತ್ತಾಯಿಸುವ ವಿಧಿಬದ್ಧ ಕ್ರಿಯೆಗಳು

ಆರಿ: ಅರೆಗಿಡ; ಆಪ್ಪಿಗಿಡ (ಧಾರ.ಜಿ)

ಆರಿಗೆ ಹೋರಿತಿದ್ದು: ಪಳಗಿಸು; ಕಲಿಸು; ಬೇಸಾಯ ಮಾಡಲು ಎತ್ತನ್ನು ರೂಢಿಮಾಡು (ಬೆಂಗ್ರಾ.ಜಿ)

ಆರಿಜ: ಸಾವಿನಲ್ಲಿ ಚಟ್ಟಕ್ಕೆ ಹೆಗಲು ಕೊಡುವುದು (ಕೊಡ.ಜಿ)

ಆರಿನಸಾಮಾನು: ಗಳೆ ಸಾಮಗ್ರಿ; ಆರ್ಮುಟ್ಟು (ಧಾರ.ಜಿ/ ಹಾವೇ.ಜಿ)

ಆರಿನ ಹಾಡು: ಗಳೆ ಹೊಡೆಯುವಾಗಿನ ಹಾಡು (ಬಿಜಾ.ಜಿ)

ಆರಿಮರ: ಬನ್ನಿಮರ (ಕೋಲಾ.ಜಿ)

ಆರು (ಕ್ರಿ): ೧. ತಣ್ಣಗಾಗು ೨. ನಂದು. **ಪ್ರ:** ನೀರು ತಣ್ಣಗೆ ಕೊರಿತವೆ, ಆರಿ ಅಣ್ಣೆಕಲ್ಲಾಗವೆ ೩. ಬತ್ತು; ಇಮರು ೪. ಒಣಗು ೫. ಬೊಬ್ಬೆಹಾಕು (ಉಕ). (ನಾ). ೬. ಏರು; ಎತ್ತುಗಳಿಗೆ ನೊಗ ಹೂಡಿ ನೇಗಿಲುಕಟ್ಟಿ ಉಳಲು ಸಜ್ಜಾದ ವ್ಯವಸ್ಥೆ. **ಪ್ರ:** ಆರು ಬಿಡೋ ಹೊತ್ತು, ಆರು ಕಟ್ಟೋ ಹೊತ್ತು, ೭. ಎತ್ತುಗಳನ್ನು ಹೂಡಿದ ನೇಗಿಲು. **ಪ್ರ:** ಆರು ಉಳುವಾಗಲೂ ಕದ್ದು ನೋಡುವುದನ್ನು ಅಣ್ಣಪ್ಪ ಬಿಡಲಿಲ್ಲ ೮. ಒಂದು ಸಂಖ್ಯೆ. **ಪ್ರ:** ಆರು ಹೆತ್ತವಳಿಗೆ ಮೂರು ಹೆತ್ತವಳು ಮುಲುಕು ಕಲಿಸಿದಳಂತೆ ೯. ಮನೆಯ ಮೇಲ್ಛಾವಣಿ; ಸೂರು (ಬಳ್ಳಾ.ಜಿ/ಚಿಮ.ಜಿ) ೧೦. ನೀರಿನ ಬುಗ್ಗೆ; ಹೂಟಿ (ಶಿವ.ಜಿ)

ಆರುಕಟ್ಟುವುದು: ಏರು ಕಟ್ಟುವುದು; ಉಳುವುದಕ್ಕೆ ಎತ್ತುಗಳನ್ನು ನೊಗಕ್ಕೆ ಕಟ್ಟುವುದು (ಮಂಡ್ಯ.ಜಿ)

ಆರುಕಟ್ಟೋ ಹೊತ್ತು: ಹೊಲವನ್ನು ಉಳುವುದಕ್ಕೆ ಆರಂಭಿಸುವ ಸಮಯ; ಮುಂಜಾನೆ. **ಪ್ರ:** ಆರುಕಟ್ಟೋ ಹೊತ್ತಾದ್ರೂ ಇನ್ನೂ ಎದ್ದಿಲ್ಲ

ಆರುಕತ್ತಿ (ಕ್ರಿ): ಆರುಕಟ್ಟು, ಹೊಲದ ಮೊದಲ ಉಳುಮೆಯ ಮುಹೂರ್ತವನ್ನು ಶೇರುಗಾರ ಜನಾಂಗದವರು ಹೀಗೆನ್ನುತ್ತಾರೆ (ಉಕ.ಜಿ)

ಆರುಗಡ್ಡಿ: ಕೋಲಾಟದ ಮೂರನೇ ತಾಳದಲ್ಲಿ ಕೈ ಮೇಲೆತ್ತಿ ಮೂರು ಜನಕ್ಕೆ ಕೋಲು ಹೊಡೆದು ನಾಲ್ಕನೆಯವರು ಹೊರಕ್ಕೆ ಹೊರಡುತ್ತ ಆಡುವ ಕೋಲಾಟದ ಒಂದು ಗತ್ತು (ಚಿಮ.ಜಿ)

ಆರುಗಳಿಗೆ: ಹಾವಿನ ಹೆಡೆಯ ಕೆಳಗಿರುವ ಮಚ್ಚೆಯ ಸಂಖ್ಯೆ ಅನುಸರಿಸಿ ಎರಡುಗಳಿಗೆ, ಆರುಗಳಿಗೆ ಎಂದು ಹೇಳುತ್ತಾರೆ. ಹಾವು ಕಚ್ಚಿದರೆ ಮನುಷ್ಯ ಎಷ್ಟು ಹೊತ್ತು ಬದುಕುತ್ತಾನೆ ಇದಕ್ಕೆ ಎಷ್ಟು ವಿಷ ಇದೆ ಅನ್ನುವುದನ್ನು ಈ ಸಂಖ್ಯೆಯ ಮೇಲೆ ನಿರ್ಧರಿಸುತ್ತಾರೆ

ಆರುಗೂಡಿಸುವ ಮನೆಪೂಜೆ: ಮಲೆನಾಡಿನ ಒಕ್ಕಲಿಗರು ರಾಶಿ ಪೂಜೆಯಾದ ಎಂಟು ದಿನಗಳ ಮೇಲೆ ಬರುವ ಒಂದು ಮಂಗಳವಾರ ಮಾಡುವ ಪೂಜೆ. ದಂಪತಿಗಳು ಗುಡಿಯಲ್ಲಿ ಪೂಜೆ ಸಲ್ಲಿಸಿ, ಹುತ್ತಕ್ಕೆ ಕುರಿ ಬಲಿ ನೀಡಿ, ಮನೆಯಲ್ಲಿ ಎಡೆ ಅರ್ಪಿಸಿ ಹತ್ತಿರದ ಬಂಧು ಬಳಗದವರಿಗೆ ಊಟ ಹಾಕುವ ಪದ್ಧತಿ.

ಆರುಗೂಡು: ನೇಗಿಲಿನಿಂದ ನೊಗಕ್ಕೆ ಇರುವ ಉದ್ದದ ದಂಡ (ಚಿಮ.ಜಿ). **ಇರೂ:** ಆರುಗೋಡು, ಆರುಗೊಲ್ಡು

ಆರುಪಾವ್ಲಿ: ಒಂದು ರೂಪಾಯಿ ಐವತ್ತು ಪೈಸೆ (ಉಕ.ಜಿ)

ಆರುಬಟ್ಟು: ಕೈ ಅಥವಾ ಕಾಲಿನಲ್ಲಿ ಆರು ಬೆರಳು ಇರುವುದು, ಇದು ಅದೃಷ್ಟ ಎನ್ನುವ ನಂಬಿಕೆ ಇದೆ

ಆರುವಸಿ: ನೋಡಿ– ಆರ್ವಾಸಿ

ಆರುವಾರಿ ಸೀರೆ: ಹನ್ನೆರಡು ಮೊಳದ ಸೀರೆ

ಆರುಹೊಡೆ (ಕ್ರಿ): ೧. ನೇಗಿಲು ಹೊಡೆ, ಉಳು. **ಪ್ರ:** ಒಂದೊಂದು ಸಲ ಸಾಲು ಬಿಟ್ಟು ಆರು ಹೊಡೆಯುತ್ತಿದ್ದ (ನಾ) ೨. ಹೊಲಗದ್ದೆಗಳಲ್ಲಿ ಅಲ್ಲಲ್ಲಿ ಆಗತಾನೆ ಒಡೆಯುತ್ತಿರುವ ತೆನೆ. **ಪ್ರ:** ಹೊಲದಲ್ಲಿ ಅಲ್ಲೊಂದು ಇಲ್ಲೊಂದು ಆರುಹೊಡೆ ಕಾಣಿಸುತ್ತಿದ್ದವು. **ಇರೂ:** ಆರುಕಟ್ಟು; ಆರೂಡು

ಆರೂಡ್ ಹಬ್ಬ: ಇದೊಂದು ಕೃಷಿ ಸಂಬಂಧಿತ ಆಚರಣೆ. ಬತ್ತದ ಹೊಟ್ಟು ಅಥವಾ ಸಿಪ್ಪೆಯ (ಜಳ್ಳು) ರಾಶಿಯನ್ನು ತಮ್ಮ ಗದ್ದೆಗಳಲ್ಲಿ ಸುಡುವ ಹಬ್ಬ. ಸೌರಮಾನ ಯುಗಾದಿಯಂದು ಮುಂಜಾನೆ ಗದ್ದೆಗಳಲ್ಲಿ ಬತ್ತದ ಹೊಟ್ಟನ್ನು ರಾಶಿ ಹಾಕಿ ಬೆಂಕಿ ಕೊಟ್ಟು ಸುಡುತ್ತಾರೆ. ಎತ್ತು ಅಥವಾ ಕೋಣದಿಂದ ಗದ್ದೆಯಲ್ಲಿ ಉಳುಮೆ ಕೃಷಿಯನ್ನು ಆರಂಭ ಮಾಡುವುದೇ ಇದರ ವಿಶೇಷತೆ (ದಕ.ಜಿ)

ಆರೂಡು: **ನೋಡಿ–** ಆರ್‍ರೂಡು

ಆರೂಢ ಪ್ರಶ್ನೆ: ಅಷ್ಟಮಂಗಲ ಪ್ರಶ್ನೆಯಲ್ಲಿ ಗುಡಿ ಮೊದಲಾದವುಗಳ ಮೂಲಕ್ಕೆ ಸಂಬಂಧಿಸಿದ ಪ್ರಶ್ನೆ (ದಕ.ಜಿ)

ಆರೆ: ೧. ಗಾಡಿಯ ಚಕ್ರದಲ್ಲಿ ಮಧ್ಯೆ ಜೋಡಿಸಿರುವ ಕೋಲುಗಳು ೨. ಕಳೆ (ಬಳ್ಳಾ.ಜಿ) ೩. ಕಳೆ ತೆಗೆಯುವ ಸಾಧನ (ಮೈಸೂ.ಜಿ/ಬೆಂಗ್ರಾ.ಜಿ) ೪. ಬನ್ನಿಮರ (ಕೋಲಾ.ಜಿ)

ಆರೆಬಸಪ್ಪ: ದವಸ ಧಾನ್ಯ ತೂರಲು ಗಾಳಿ ಇಲ್ಲದಿದ್ದಾಗ ಗಾಳಿಯನ್ನು ಪ್ರಾರ್ಥಿಸುವುದಕ್ಕಾಗಿ ನೆನೆಯುವ ದೇವತೆ. **ಇರೂ:** *ವಾಸುದೇವ (ಮಂಡ್ಯ.ಜಿ)*, ವಾಯುದೇವ

ಆರೆಮಂದಿ: ಕ್ಷತ್ರಿಯರು; ರಂಗಾರೆಯವರೆಂಬ ಮರಾಠರ ಪಂಗಡ

ಆರೆಮುಂಡಿ: ಹಾರೆ; ಒರಳಿಗೆ ಹಾಕಿ ಧಾನ್ಯ ಇತ್ಯಾದಿಗಳನ್ನು ಕುಟ್ಟಿ ಪುಡಿ ಮಾಡಲು ಬಳಸುವ ಕಬ್ಬಿಣದ ಸಾಧನ (ಚಿಮ.ಜಿ). **ಇರೂ:** *ಹಾರೆಕೋಲು*

ಆರೆಳೆದಾರ: ಆರು ಎಳೆಗಳ ದಾರ. ಇದರಲ್ಲಿಯ ಎರಡು ಎಳೆ ತೆಗೆದು ಕಸೂತಿ ಹಾಕುತ್ತಾರೆ (ಬೆಳ.ಜಿ)

ಆರೋಗಣೆ: ಭೋಜನ; ಊಟ (ಬೀದ.ಜಿ) **ಪ್ರ:** ಅಪ್ಪ ಬಸವಣ್ಣ ಆರೋಗಣೆಯಾದ ಕೂಡಲೆ ಬಿಜಯಂಗೈದರು

ಆರೋಗಿಸು: ಪ್ರಸಾದವನ್ನು ಸೇವಿಸು; ಭುಂಜಿಸು (ಬೀದ.ಜಿ)

ಆರೋಬಾಂಶಿ ರೋಗ: ಹೊಗೆಸೊಪ್ಪಿನ ಬೇರಿಗೆ ತಗಲುವ ಒಂದು ರೋಗ

ಆರ್ಕ: ನೋಡಿ– ಆರಕ (ಕೋಲಾ.ಜಿ)

ಆರ್ಕಟ್ಟು: ಯುಗಾದಿ ದಿನದಂದು ವಿಧ್ಯುಕ್ತವಾಗಿ ಆರಂಭಿಸುವ ಉಳುಮೆಯ ಕೆಲಸ (ಉಕ.ಜಿ)

ಆರ್ಕನಪೈರು: ತೆನೆಬಿಡದೇ ಇರುವ ಸಸಿ (ಕೋಲಾ.ಜಿ)

ಆರ್ಕಾಲ: ೧. ಹಲವು ಕಾಲ; ಸದಾ; ಯಾವಾಗಲೂ ೨. ಆರು ಋತುಗಳು

ಆರ್ತಕ್ಷಿ: ಆರತಕ್ಷತೆ; ಮದುಮಕ್ಕಳನ್ನು ಮಣೆ ಮೇಲೆ ಕೂರಿಸಿ ಆರತಿ ಬೆಳಗಿ ಅಕ್ಷತೆಕಾಳು ಹಾಕಿ ಹರಸುವುದು (ದಕ.ಜಿ)

ಆರ್ತಾಸು: ೧. ಮಧ್ಯಾಹ್ನ ೨. ಆರು ಘಂಟೆಗಳ ಕಾಲ

ಆರ್ದ್ರಿ: *ಕ್ಯಾಲಿಕಾರ್ಪ ಲೆನೇಟ್ ಟೊಮೊಂಟೋಸ:* ಒಂದು ಸಸ್ಯ **ಇರೂ:** *ಇಬ್ಬನ್ನೆ; ರುಚಿಪತ್ರಿ; ದೊಡ್ಡನಾತದಗಿಡ*

ಆರ್ಮುಟ್ಟು: ಕೃಷಿಯ ಉಪಕರಣಗಳು. ಕಾರುಹಬ್ಬದ ದಿನ ಇವುಗಳಿಗೆ ಪೂಜೆ ಸಲ್ಲಿಸುವ ಪದ್ಧತಿ ಇದೆ

ಆರ್ಮೆ: ಆರಮೆ; ಸೊಪ್ಪು ಸದೆ ತರಲು ಇರುವ ಸ್ವಂತ ಗುಡ್ಡದ ಸ್ಥಳ; ಸ್ವಂತ ದಿನ್ನೆಭೂಮಿ (ದಕ.ಜಿ)

ಆರ್ಯಬನ್ನಾಯ: ಒಂದು ಬಳ್ಳಿಯ ಹೆಸರು (ದಕ.ಜಿ)

ಆರ್ಯಾಣ: ಅರಣ್ಯ

ಆರ್ಯಾದುರ್ಗೆ: ಹರಿಕಾಂತ ಜನಾಂಗದವರ ಕುಲದೇವರ ಹೆಸರು (ಉಕ.ಜಿ)

ಆರ್ಯೆ ಬಾಣ್ಯೆ: ಎರವರ ಓಲೆಪಾಟಿನ ನಾಯಕ ಸೋದರರು (ಕೊಡ.ಜಿ)

ಆರ್ರೈಳಿ: ಆರು ಎಳೆ

ಆರ್ಲಪೂಜೆ: ಗದ್ದೆ ಉಳುವಾಗ ಮೊಟ್ಟಮೊದಲು ಮಾಡುವ ಪೂಜೆ (ಉಕ.ಜಿ)

ಆರ್ಲಭೂಮಿ: ಉಳುಮೆಗೆ ಬಾರದ ಜೌಗು ನೆಲ (ಬೆಳ.ಜಿ)

ಆರ್ವಾಸಿ/ಆರುವಸಿ: ತೇವಾಂಶ ಆರಿಹೋಗಿ ಉಳುವುದಕ್ಕೆ ಹದವಾದ ಹೊಲ (ಮೈಸೂ.ಜಿ) **ಪ್ರ:** ಈಗ ಹೊಲ ಆರ್ವಾಸಿ ಬಂದವೆ

ಆರ್ಸ (ನಾ): ೧. ಗಾಡಿ ಚಕ್ರದ ಹಲ್ಲು (ಕ್ರಿ) ೨. ಸೀಟು; ಒರೆಸು; ಶುಚಿಗೊಳಿಸು (ಬಿಜಾ.ಜಿ)

ಆರ್ಸಿ: ಆರ್ಷೇಯಂ; ತಲೆತಲಾಂತರದಿಂದ; ವಂಶಪಾರಂಪರ್ಯವಾಗಿ; ಪುರಾತನ ಕಾಲದಿಂದ

ಆರ್ಸಿಕ್ಕು: ೧. ಆಯ್ಕೆ ಮಾಡಿಕೊಂಡು ಬಡಿಸು ೨. ಭೇದ ಭಾವ ತೋರು; ಪಕ್ಷಪಾತ ಮಾಡು ೩. ಬೇರೆಯವರು ಮಾಡಿಟ್ಟ ಅಡುಗೆಯನ್ನು ಉಪಚಾರದ ಮಾತುಗಳೊಡನೆ ಬಡಿಸು **ಪ್ರ:** ಅಟ್ಟಕ್ಕೋಳಿಗಿಂತ ಆರ್ಸಿಕ್ಕೋಳು ಮೇಲು ಅಂದಂಗೆ

ಆರ್ಸೊಳ್ಳು: ೧. ಆರು ಸೊಡರುಗಳಿರುವ ದೀಪ (ಶಿವ.ಜಿ) ೨. ಪುಟ್ಟ ದೀಪ

ಆರ್ಹಾಕು/ಆರಾಕು: ೧. ಆರಲುಹಾಕು; ಬಯಲಿನಲ್ಲಿ ಒಣಗಲು ಹಾಕು (ಶಿವ.ಜಿ) **ಪ್ರ:** ಒಗೆದ ಬಟ್ಟೆಯನ್ನು ಆರ್ಹಾಕು

ಆರ್ಹೂಡು/ಆರೂಡು: ಆರು ಹೂಡು; ಹೊಲ ಉಳು. ಯುಗಾದಿಯಂದು ರೈತರು ಗದ್ದೆಗೆ ಬೂದಿ ಗೊಬ್ಬರ ಸುಡುಮಣ್ಣು ಮೊದಲಾದವನ್ನು ಅರ್ಪಿಸಿ ಉಳುವ ಶಾಸ್ತ್ರ ಮಾಡುವುದು (ದಕ). *ಇರೂ:* ಹೊನ್ನೇರು (ಮೈಸೂ.ಜಿ)

ಆಲ: *ಫೈಕಸ್ ಬೆಂಗಾಲೆನ್ಸಿಸ್:* ಬಿಳಲುಗಳನ್ನು ಬಿಟ್ಟು ಬೃಹತ್ತಾಗಿ ಬೆಳೆಯುವ ಒಂದು ಹಾಲುಮರ. ಈ ಮರವನ್ನು ಗಂಡು ಎಂದು ಭಾವಿಸಿ, ಹೆಣ್ಣು ಎಂದು ಭಾವಿಸಲಾದ ಬೇವಿನ ಮರದೊಂದಿಗೆ ಮದುವೆ ಮಾಡಿಸುವ ಸಂಪ್ರದಾಯವಿದೆ

ಆಲಂಜಿಭೂಮಿ: ಮಣ್ಣಿನ ಒಂದು ವಿಧ

ಆಲಂಬಾಡಿ: ಮಲೆಮಾದೇಶ್ವರ ಕಾವ್ಯದಲ್ಲಿ ಪ್ರಸ್ತಾಪವಾಗುವ ಒಂದು ಊರು (ಚಾಮ.ಜಿ)

ಆಲಕಂಬ: ೧. ಹಾಲುಕಂಭ; ಮದುವೆ ಸಮಯದಲ್ಲಿ ಮನೆ ಮುಂಬಾಗಿಲಲ್ಲಿ ಚಪ್ಪರ ಹಾಕಲು ನೆಟ್ಟಿರುವ ಕಂಬ ೨. ಉತ್ತರಕರ್ನಾಟಕದ ಭಾಗದಲ್ಲಿ ಮದುವೆಯ ದೇವರೂಟದ ತೆಂಗಿನ ಗರಿಯ ಚಪ್ಪರದಡಿ ನಡೆಯುವ ಆಚರಣೆ. ಮನೆಯ ಹಿರಿಯಳಿಯನು ವಿಧ್ಯುಕ್ತವಾಗಿ ಒಂದು ಆಲದ ಟೊಂಗೆಯನ್ನು ಕತ್ತರಿಸಿ ಪೂಜಾವಿಧಿಗಳನ್ನು ಮಾಡಿ ಆ ಟೊಂಗೆಯನ್ನು ಮೆರವಣಿಗೆಯಲ್ಲಿ ಮನೆಗೆ ತರುತ್ತಾನೆ. ಮನೆಯ ಮುಂದೆ ಚಪ್ಪರದಲ್ಲಿ ಟೊಂಗೆಯನ್ನು ನೆಟ್ಟು ಮುಂದೆ ಅದು ಮರವಾಗಲೆಂದು ಎಲ್ಲರೂ ಹಾರೈಸುತ್ತಾರೆ

ಆಲಗಡಗ: ಹಾಲ್ಗಡಗ; ಚಿಕ್ಕ ಮಕ್ಕಳ ಕಾಲಿಗೆ ಹಾಕುವ ಬೆಳ್ಳಿಯ ಕಡಗ

ಆಲಚಂದ್ರ: ಮೂಗಿನ ಆಭರಣ

ಆಲಡೆ: ದೇವಸ್ಥಾನ (ದಕ.ಜಿ)

ಆಲತಿಗೆ: ಕೆಂಪು (ಮಂಡ್ಯ.ಜಿ)

ಆಲದ: ಹಗ್ಗ (ದಕ.ಜಿ)

ಆಲದ ಪಿಡಿ: ಆಲಾಬಾಚು; ಗದ್ದೆಯ ಕಸವನ್ನು ತೆಗೆಯುವ ಸಾಧನ (ಉಕ.ಜಿ)

ಆಲದ ಮರ: ೧. **ನೋಡಿ–** ಆಲ ೨. ಮನೆ ಅಂಗಳದಲ್ಲಿ ಬಿಡಿಸುವ ಒಂದು ರಂಗೋಲಿ ವಿನ್ಯಾಸ. ದಪ್ಪವಾದ ಕಾಂಡ ಮತ್ತು ಅಗಲವಾದ ಎಲೆಗಳನ್ನು ರಂಗೋಲಿ ಮೂಲಕ ಬಿಡಿಸುವರು

ಆಲದ ಹಣ್ಣು: ಮಲೆನಾಡಿನವರು ಬಳಸುವ ಒಂದು ಆಹಾರ ಪದಾರ್ಥ

ಆಲದಡಿ ಮೀಸೋದು: ಗೊಂಡರ ಮದುವೆಗಳಲ್ಲಿ ಆಲದ ನಾಲ್ಕು ಕೊಂಬೆ ತಂದು ಆ ಕೊಂಬೆಗಳ ಅಡಿಯಲ್ಲಿ ಮದುಮಗನಿಗೆ ಸ್ನಾನ ಮಾಡಿಸುವುದು (ಉಕ.ಜಿ)

ಆಲದ್ಧಿಡಿ: ಕಳೆ ತೆಗೆಯಲು ಬಳಸುವ ಉಪಕರಣ

ಆಲನಾಡುವುದು: ಸ್ನಾನ ಮಾಡುವುದು

ಆಲಬ್ಬ: ಹಾಲಹಬ್ಬ; ಕುರುಬರು ದನ ಕುರಿಗಳನ್ನು ಕೂಡುವ ಸ್ಥಳದಲ್ಲಿ ತಮ್ಮ ದೇವರಿಗೆ ಹಾಲು ಪಾಯಸ ಮಾಡಿ ಆಚರಿಸುವ ಹಬ್ಬ

ಆಲಬ್ಬರ : ೧. ಆರ್ಭಟ ೨. ವಿಶಾಲವಾಗಿ

ಆಲಬ್ಬರಿಸಿ: ರೋಷದಿಂದ ಕಿರುಚಿ; ಆರ್ಭಟಿಸಿ

ಆಲಭಾವಿ: ಹಾಲಿನ ಭಾವಿ

ಆಲಮಂಡಿಗಿ: ಅಕ್ಕಿಹಿಟ್ಟಿನಿಂದ ಮಾಡುವ ಸಿಹಿತಿಂಡಿ. **ಇರೂ:** ಮಂಡಿಗೆ

ಆಲರುವಿ: ಹಾಲಿನ ಹರಬಿ; ಹಾಲಿನ ಕೊಡ. ಸಾಮಾನ್ಯವಾಗಿ ಗ್ರಾಮದೇವತೆಗಳ ಜಾತ್ರೆಗಳಲ್ಲಿ ದೇವತೆಯ ಅಭಿಷೇಕಕ್ಕಾಗಿ ತರುವ ಹಾಲಿನ ಕೊಡ ನೀರಿನ ಕೊಡಗಳು. **ಪ್ರ:** ಆಲರುವೀ ಬಂದೋ ನೂರೊಂದ್ಹಾಲರುರವಿ ಬಂದೋ

ಆಲವಟ್ಟ: ಹುಲ್ಲು, ಬಟ್ಟೆ, ತಾಳೆಗರಿ, ನವಿಲುಗರಿ ಮುಂತಾದುವುಗಳಿಂದ ಮಾಡಿದ ಬೀಸಣಿಗೆ. ದೇವರ ಉತ್ಸವಮೂರ್ತಿಯ ಎರಡೂ ಪಕ್ಕಗಳಲ್ಲಿ ಅಲಂಕಾರಕ್ಕಾಗಿ ಈ ಬೀಸಣಿಗೆಯನ್ನು ಹಿಡಿಯುತ್ತಾರೆ (ದಕ.ಜಿ)



ಆಲವತ್ತಟ: ಆಲದ ಮರದ ಒತ್ತಿನಲ್ಲಿ ಮೂಡಿದ ದೇವತೆ

ಆಲವಾಲ: ಮಡಿ

ಆಲಸೊಪ್ಪು/ಆಲೆಸೊಪ್ಪು: ಹಾಲೆ ಕುಡಿ. ಎಲೆ, ತೊಟ್ಟು ಅಥವಾ ಬಳ್ಳಿಯನ್ನು ಮುರಿದಾಗ ಹಾಲಿನಂತಹ ದ್ರವ ಒಸರುವ ಆಹಾರಯೋಗ್ಯವಾದ, ಔಷಧೀಯ ಗುಣಗಳನ್ನು ಹೊಂದಿರುವ ಒಂದು ಬಗೆಯ ಕಳೆಸಸ್ಯ (ಮೈಸೂ.ಜಿ)

ಆಲಹೊಡೆಯುವುದು: ಬಿತ್ತನೆ ಗದ್ದೆಯಲ್ಲಿ ಕಳೆ ತೆಗೆಯಲು ಕೊರಡು ಹೊಡೆದು ಕಸ ಕಡ್ಡಿ ತೆಗೆಯುವುದು (ಮೈಸೂ.ಜಿ)

ಆಲಾಗ್ರ: ೧. ಹಾಲೋಗರ; ಹಾಲನ್ನ ೨. ಹಾಲು ಸಾಗರ ೩. ಸಮೃದ್ಧಿಯನ್ನು ಹಾರೈಸುವ ಶಬ್ದ (ಮೈಸೂ.ಜಿ/ಚಾಮ.ಜಿ)

ಆಲಾದ್: ರಥ ಎಳೆಯುವ ಹಗ್ಗ

ಆಲಾಯಿ ಕುಣಿ: ಮೊಹರಮ್ ಹಬ್ಬದಲ್ಲಿ ದೇವರ ಮುಂದೆ ತೆಗೆದ ತಗ್ಗು, ಅದರಲ್ಲಿ ಬೆಂಕಿ ಇರುತ್ತದೆ. ದೇವರನ್ನು ಹಿಡಿದವರು ಅದರಲ್ಲಿ ಜಿಗಿಯುತ್ತಾರೆ ನೋಡಿ– ಅಲಾಯಿ

ಆಲಿ: ೧. ಕಣ್ಣುಗುಡ್ಡೆ ೨. ಆಲಿಭೂತ ಎಂಬ ಒಂದು ದೈವದ ಹೆಸರು (ದಕ.ಜಿ) ೩. ಆಲಿಕಲ್ಲು

ಆಲಿಕಲ್ಲು: ಮಳೆಯ ಜೊತೆಗೆ ಬೀಳುವ ನೀರ್ಗಲ್ಲು. **ಪ್ರ:** ಮಳೆ ಬಿತ್ತು, ಜೊತೆಗೆ ಆಲಿಕಲ್ಲುಗಳೂ ಬಿದ್ದುವು. **ಇರೂ:** ಆಣೆಕಲ್ಲು, ಆನೆಕಲ್ಲು, ಆನ್ಕಲ್ಲು

ಆಲಿಕೆ: ೧. ದೇವರನ್ನು ಕೂಗುವುದು (ಚಿಮ.ಜಿ) ೨. ಎಣ್ಣೆಯನ್ನು ಹಾಕಲು ಬಳಸುವ ವಸ್ತು. ಇರೂ: ಬುದುವಂತ

ಆಲಿಕೊಳ್ಳುವುದು: ದೇವರ ಹೆಸರನ್ನು ನಾಲ್ಕಾರು ಜನರು ಉಗ್ಘಡಿಸುವುದು; **ಪ್ರ:** ಆಲ್ಕಳಿರೋ ಉಗ್ಗೇ ಉಗ್ಗೇಲು (ಚಿಮ.ಜಿ)

ಆಲಿಗಾಣ: ಕಬ್ಬಿನ ಗಾಣ; ಆಲೆಗಾಣ (ಉಕ.ಜಿ)

ಆಲಿಗುಂಕುಣಿತ: ಮುಸಲ್ಮಾನ ಸಿದ್ಧಿ ಜನರ ಒಂದು ಕುಣಿತದ ಹೆಸರು. ಮಹಮದೀಯರ ಪೀರ್ ದೇವರ ಉತ್ಸವದಲ್ಲಿ

ಈ ಕುಣಿತವಿರುತ್ತದೆ; ಕುಣಿಯುವಾಗ ಗತ್ತಿಗೆ ಸರಿಯಾಗಿ ಹೆಜ್ಜೆ ಹಾಕುತ್ತಾ ಆಲಿ ಆಲಿ ಎಂದು ಕೂಗುತ್ತಾರೆ

ಆಲಿತಪ್ಲ: ಪಲ್ಯಕ್ಕೆ ಬಳಸುವ ಒಂದು ಬಗೆಯ ಔಷಧಿಯ ಸಸ್ಯ. **ಇರೂ:** *ಆಲಿಸೊಪ್ಪು*

ಆಲಿಭೂತ: ೧. ಆಲಿಚಾಮುಂಡಿ; ಆಲಿ ಎಂಬ ಮುಸ್ಲಿಂ ಮಂತ್ರವಾದಿಯೊಬ್ಬ ಮರಣಾನಂತರ ದೈವತ್ವ ಪಡೆದು ಉಂಟಾದ ದೈವ (ದಕ.ಜಿ) ೨. ದಿನನಿತ್ಯದ ವ್ಯವಹಾರಗಳಲ್ಲಿ ಕಚ್ಚಾಟ ಬಂದು ಮರಣ ಹೊಂದಿದರೆ ಮರಣ ಹೊಂದಿದ ವ್ಯಕ್ತಿ ಆಲಿಭೂತವಾಗುತ್ತಾನೆ ಎಂಬ ನಂಬಿಕೆ ಇದೆ

ಆಲಿಸಿಪ್ಪಿ: ಕಬ್ಬಿನ ಸಿಪ್ಪೆ (ಮಂಡ್ಯ.ಜಿ)

ಆಲಿಸೆನೆ: ಹಾಲುವೃಕ್ಷ

ಆಲು (ನಾ): ೧. ಹಾಲು. ೨. ರೇಷ್ಮೆ ಹುಳುಗಳಲ್ಲಿ ಹೆಚ್ಚಾಗಿ ಕಂಡು ಬರುವ ಒಂದು ರೋಗ; ಹುಳುಗಳು ಸೊಪ್ಪು ತಿನ್ನುತ್ತವೆ. ಆದರೆ ಮುಟ್ಟಿದರೆ ಮೆತ್ತಗಿದ್ದು ಇವು ಹರಿಯುವ ಕಡೆಯಲ್ಲೆಲ್ಲಾ ಹಾಲಿನಂತಹ ದ್ರವ ಒಸರುತ್ತಿರುತ್ತದೆ (ಮಂಡ್ಯ.ಜಿ) (ಕ್ರಿ) ೩. ಶಬ್ದಮಾಡು; ಗಟ್ಟಿಯಾಗಿ ಕೂಗು; ಬೇಟೆಯಲ್ಲಿ ಸೋವುಗಾರರು ಕೂಗುವ ಕೂಗು

ಆಲುಕ: ನೀರನ್ನು ಹಾಕಿಡುವ ಸಣ್ಣಪಾತ್ರೆ; ಹೂಜಿ

ಆಲುಣಿ: ದನಗಳ ಮೈಮೇಲೆ ಇರುವ, ರಕ್ತ ಹೀರುವ ಉಣ್ಣೆ (ಬಳ್ಳಾ.ಜಿ)

ಆಲುಬಾನ: ಹಾಲು ಬಾನ; ಹಾಲು ಅನ್ನ (ಬೆಳ.ಜಿ)

ಆಲುಬೇಟೆ: ಸಮೂಹ ಬೇಟೆ; ದೊಡ್ಡಬೇಟೆ; ನೂರಾರು ಬೇಟೆಗಾರರು ಸೇರಿ ಹಗಲೂ ರಾತ್ರಿ ನಡೆಸುವ ಬೇಟೆ. ಪುರೋಹಿತರಿಂದ ನಿಗದಿಯಾದ ಸಮಯದಲ್ಲಿ ಬೇಟೆಗೆ ಹೊರಡುವರು. ಇದರಲ್ಲಿ ಪಾಲ್ಗೊಳ್ಳುವವರಲ್ಲಿ ಯಾರಿಗೂ ಸೂತಕ ಇರಬಾರದು. ಆಯುಧಗಳನ್ನು ಪೂಜಿಸಿ ಬೇಟೆಯಾಡಲು ತೊಡಗುವರು. **ಇರೂ:** *ಒದರಿಕೆ ಬೇಟೆ; ದೊಡ್ಡ ಬೇಟೆ; ಕೂಗು ಬೇಟೆ*

ಆಲುಬ್ಬಲು: ಹಾಲುಬ್ಲು; ಭತ್ತದ ಒಂದು ದೇಸೀಯ ತಳಿ. ಆರು ಅಡಿಗಿಂತಲೂ ಹೆಚ್ಚು ಎತ್ತರಕ್ಕೆ ಬೆಳೆಯುವ ಈ ಪೈರು ದನಕರುಗಳಿಗೆ ಸಮೃದ್ಧ ಮೇವು ಒದಗಿಸುತ್ತದೆ. ಇಳುವರಿ ಕಡಿಮೆ ಎಂದು ಈ ತಳಿ ಕಣ್ಮರೆಯಾಗುತ್ತಿದೆ (ಚಿತ್ರ.ಜಿ)

ಆಲೂಸು: ಆಲಿಸು; ಕೇಳು; ಗ್ರಹಿಸು

ಆಲೆ/ಆಲಿ: ೧. ಕಬ್ಬಿನ ಗಾಣ. **ಪ್ರ:** ಆಲೆ ಆಡುತಾವೆ ಗಾಣ ತಿರುಗುತಾವೆ ೨. ಹಾಲೆ; ಕಿವಿಯ ತಳಭಾಗ. **ಪ್ರ:** ಕಿವಿಯ ಆಲೆ ಅಗಲವಾಗಿ ತೆಳ್ಳಗಿರಬೇಕು ೩. ಕಣ್ಣಿನ ಮಧ್ಯದಲ್ಲಿರುವ ಕರಿಯ ಗುಡ್ಡೆ. **ಪ್ರ:** ಕಣ್ಣಿನ ಆಲಿ ಯಾಕೋ ನೋಯ್ತವೆ

ಆಲೆಒಲೆ: ಕಬ್ಬಿನ ಹಾಲನ್ನು ಕುದಿಸಿ ಬೆಲ್ಲ ತಯಾರಿಸಲು ನಿರ್ಮಿಸಿದ ದೊಡ್ಡದಾದ ದುಂಡನೆಯ ಹಾಗೂ ಆಳವಾದ ಒಲೆ (ಉಕ.ಜಿ). **ಪ್ರ:** ಅದೇನು ಆಲೆ ಒಲೆಯೇ

ಆಲೆಕಣೆ: ಕಬ್ಬನ್ನು ಹಿಂಡುವ ಸಾಧನ; ಕಬ್ಬಿಣದ ಗಾಣ. ಇದು ಗಂಡು ಕಣೆ, ಹೆಣ್ಣು ಕಣೆ, ಸಿಪ್ಪೆ ಕಣೆ ಎಂಬ ಮೂರು ಘಟಕಗಳನ್ನು ಹೊಂದಿರುತ್ತದೆ (ಉಕ.ಜಿ)

ಆಲೆಕೂನಿ: ಕಬ್ಬನ್ನು ಗಾಣದಲ್ಲಿ ಹಿಂಡಿದ ನಂತರ ಬರುವ ರಸವನ್ನು ಸಂಗ್ರಹಿಸುವ ದೊಡ್ಡ ಮಡಕೆ ಅಥವಾ ಬಾನಿ (ದಾವ.ಜಿ)

ಆಲೆಚ: ಆಲೆಮನೆಯ ಮೇಲ್ಛಾವಣಿ (ಉಕ.ಜಿ)

ಆಲೆತುಂಡು: ಆಲೆ ಒಲೆಗೆ ಹಾಕುವ ಸೌದೆಯ ತುಂಡು (ಉಕ.ಜಿ)

ಆಲೆಬಾಡಿಗೆ: ಕಬ್ಬಿನ ಅಥವಾ ಗಾಣದ ಮಾಲೀಕನಿಗೆ ಅಥವಾ ಕ್ವಾಣದವನಿಗೆ ಕೊಡುವ ಬಾಡಿಗೆ

ಆಲೆಬಾನಿ: ಗಾಣದಿಂದ ಬರುವ ಕಬ್ಬಿನ ರಸ ತುಂಬಿಡುವ ದೊಡ್ಡ ಮಡಿಕೆ; –ಪಾತ್ರೆ

ಆಲೆಮನೆ: ಕಬ್ಬನ್ನು ಗಾಣಕ್ಕೆ ಕೊಟ್ಟು ಕಬ್ಬಿನ ರಸದಿಂದ ಹಾಲು ತೆಗೆಯುವ ಮತ್ತು ಬೆಲ್ಲ ತಯಾರಿಸುವ ಸ್ಥಳ (ಉಕ.ಜಿ)

ಆಲೆಮನೆ ಕತ್ತಿ: ಬೆಲ್ಲದ ಪಾಕವು ತಳಹಿಡಿಯದಂತೆ ಕೆರೆಯುವ, ಪಾಕ ಎಬ್ಬಿಸುವ, ಸಣ್ಣ ಕತ್ತಿ; ಕಬ್ಬಿಣದ ತಗಡು. ತುದಿಗೆ ಸಾಗುತ್ತ ಅಗಲ ಹೆಚ್ಚುತ್ತಾ ಹೋಗುವಂತೆ ಇದರ ರಚನೆ ಇದೆ. ಕಬ್ಬಿನ ಗದ್ದೆಗಳಲ್ಲಿ ಕಬ್ಬನ್ನು ಕಡಿಯಲು ಅದರ ಗರಿಗಳನ್ನು ಸವರಲು ಕೂಡ ಇದು ಉಪಯೋಗಕ್ಕೆ ಬರುತ್ತದೆ. ಆಲೆಮನೆ ಕತ್ತಿಯನ್ನು ಹೆಣ್ಮಕ್ಕಳು ಬಳಸಬಾರದೆಂಬ ನಿಷೇಧವಿದೆ. ಇದಕ್ಕೆ ಹನುಮಂತ, ಬ್ರಹ್ಮಚಾರಿ ಎಂಬ ಹೆಸರೂ ಇದೆ

ಆಲೆಮನೆ ಹಬ್ಬ: ಆಲೆಮನೆಯ ಮುಕ್ತಾಯ ಸಮಾರಂಭದ ಹಬ್ಬ. ಈ ಹಬ್ಬದಲ್ಲಿ ಸಿಹಿ ಅಡುಗೆಯ ಜೊತೆಗೆ ಕೋಳಿ ಕೊಯ್ದು ಹಬ್ಬ ಆಚರಿಸುವ ಕ್ರಮವೂ ಇದೆ (ಉಕ.ಜಿ)

ಆಲೆಮರ: *ಆಲ್‌ಸ್ಟೋನಿಯ ಸ್ಕಾಲರಿಸ್*: ಹಾಲೆ ಮರ (ಚಿತ್ರ ನೋಡಿ)

ಆಲೆಮಾವ: ಆಲೆಗಾಣಕ್ಕೆ ಕೋಣಗಳನ್ನು ಕಟ್ಟಿ ಹೊಡೆಯುವವ (ಉಕ.ಜಿ). **ಇರೂ:** ಆಲೆಯವ, ಕ್ವಾಣದವ

ಆಲೆಯ ದಿನ: ಕಬ್ಬಿನ ಗದ್ದೆಗಳಲ್ಲಿ ಆಲೆಮನೆಯಲ್ಲಿ ಕೆಲಸ ನಡೆಯುತ್ತಿರುವ ಕಾಲ (ಮೈಸೂ.ಜಿ)

ಆಲೇಮನೆಗುಂಡ: ಒಂದು ಬಗೆಯ ಹಕ್ಕಿ; ಬಿಳಿ ಮತ್ತು ಹಳದಿ ಬಣ್ಣದ ಹದ್ದು

ಆಲೈದು: ಬಿಳಿಯ ಬಣ್ಣ

ಆಲೈಸು (ಕ್ರಿ): ೧. ಕೇಳು ೨. ಅಳಿಸು ೩. ಉಜ್ಜು

ಆಲೊಟ್ಟಿಗೆ: ಆಲವಟ್ಟಿಗೆ. **ನೋಡಿ–** ಆಲವಟ್ಟ

ಆಲ್ಕೆ: ನೋಡಿ– ಆಲಿಕೆ

ಆಲ್ದಿ: ಒಂದು ಬಗೆಯ ತಿನಿಸು; ಮಾಲ್ದಿ

ಆಲ್ಪರಿ: ೧. ಪರಿಪರಿಯಿಂದ ಬೇಡಿಕೊಳ್ಳು ೨. ಬಾಯಿಯಲ್ಲಿ ನೀರೂರುವಂತೆ ಮಾಡು

ಆವಡಿ: ೧. ಕಷ್ಟ ೨. ತೊಂದರೆ ೩. ಹಿಂಸೆ

ಆವಡ್ಲೋರು: ಹಾವಾಡಿಗರು

ಆವಣಿ: ಶ್ರಾವಣ. ಕನ್ನಡದ ತಮಿಳರು ಶ್ರಾವಣಕ್ಕೆ ಬಳಸುವ ಶಬ್ದ (ದಾವ.ಜಿ)

ಆವನ ಇಡುವುದು: ೧. ದೈವ ದೇವರುಗಳನ್ನು ಆವಾಹಿಸಿ ಸಮರ್ಪಣ ವಸ್ತುಗಳನ್ನು ಸಲ್ಲಿಸುವುದು (ದಕ.ಜಿ) ೨. ಆವಾಹಿಸುವುದು (ದಕ.ಜಿ)

ಆವರಿಕೆ/ಅವರಿಕೆ/ಆವರ್ಕೆ: *ಕ್ಯಾಸಿಯ ಆಂಗಸ್ಟಿಫೋಲಿಯ:* ಹಳದಿ ಹೂವು ಬಿಡುವ ಔಷಧೀ ಗುಣವುಳ್ಳ ಸಸ್ಯ. ಈ ಹೂವಿನಿಂದ ಕಷಾಯವನ್ನು ಮಾಡಿಕೊಂಡು ಕುಡಿಯುತ್ತಾರೆ. ಇದರ ಚಿಗುರನ್ನು ಭೇದಿ ನಿಲ್ಲುವುದಕ್ಕೆ ಮದ್ದಾಗಿ ನೀಡುತ್ತಾರೆ. ಹಸುರೆಲೆ ಗೊಬ್ಬರವಾಗಿ ಕೂಡಾ ಬಳಸುತ್ತಾರೆ (ಚಿಮ.ಜಿ). ಕುಂತಿಪೂಜೆಯಲ್ಲಿ ಈ ಹೂವು ವಿಶೇಷವಾಗಿ ಬಳಕೆಯಾಗುತ್ತದೆ (ಮಂಡ್ಯ.ಜಿ) **ಇರೂ:** ಒಳ್ಳೆತಂಗಡಿಗಿಡ (ಚಿತ್ರ ನೋಡಿ)

ಆವರೆ: ನೋಡಿ– ಆವರಿಕೆ

ಆವರ್ಕೆ: **ನೋಡಿ–** ಆವರಿಕೆ

ಆವರ್ತ: ಶಾಸ್ತ್ರಿಯ ಸಂಗೀತದಲ್ಲಿ ತಾಳದ ಒಂದು ನಡೆ. **ಪ್ರ:** ಒಂದನೇ ಆವರ್ತ, ಎರಡನೇ ಆವರ್ತ

ಆವಲ: ೧. ನೀರಿನಲ್ಲಿ ಬೆಳೆಯುವ ಸಸ್ಯ ೨. ತಾವರೆ ಜಾತಿಯ ಹೂವು (ಮಲೆ). **ಪ್ರ:** ಮೂಲೆ ಮೂಲೆಗಳಲ್ಲಿ ಕೆಸು ಜೊಂಡು ಆವಲ ಮೊದಲಾದ ಜಲಸಸ್ಯಗಳು ಬೆಳೆದು...

ಆವಳಿಕೆ: ಆಕಳಿಕೆ

ಆವಳ್ಸು: ಆಕಳಿಸು

ಆವಾನಿಸು: ಆಹ್ವಾನಿಸು; ಪೈಲ್ವಾನರು ತಮ್ಮ ಬಲತೊಡೆಯ ಮೇಲೆ ಬಲಗೈಯಿಂದ ತಟ್ಟಿಕೊಳ್ಳು

ಆವಾರ: ಮನೆಯ ಆವರಣದಲ್ಲಿರುವ ತಡೆಗೋಡೆ ಅಥವಾ ಸುತ್ತುಗೋಡೆ (ಧಾರ.ಜಿ)

ಆವಾರಗ್ವಾಡಿ: ಕಟ್ಟಡದ ಸುತ್ತಲೂ ಇರುವ ಗೋಡೆ (ಬೀದ.ಜಿ)

ಆವಾರಿ: ೧. ಗ್ರಾಮದೇವತೆಗೆ ಕೊಡುವ ಕೋಳಿಬಲಿ ೨. ಮಾಂಸದ ಎಡೆ ೩. ಹರಕೆಪೂಜೆ (ಉಕ.ಜಿ)

ಆವಿಕೆಕಂಡಿ: ಮಡಕೆಗಳನ್ನು ಬೇಯಿಸುವ ಅವಿಗೆಯ ಕಂಡಿಗಳು. ಆವಿಗೆಯ ಎದುರುಗಡೆ ನಾಲ್ಕು ಕಂಡಿ ಬಿಟ್ಟಿರುತ್ತಾರೆ ಮೊದಲು ಎರಡು ಕಂಡಿ ಮುಚ್ಚಿ ಅನಂತರ ಉಳಿದ ಎರಡು ಕಂಡಿ ಮುಚ್ಚಲಾಗುತ್ತದೆ. ಮಡಕೆಗಳು ಬೇಯುವಾಗ ಕಂಡಿ ಮುಚ್ಚುವ ಮೊದಲು ಬಾಯಲ್ಲಿ ಊದಿದರೆ ಒಂದು ರೀತಿಯ ಬೆಳಕು ಬರುತ್ತದೆ. ಅದರಿಂದ ಮಡಕೆ ಹೇಗೆ ಬೆಂದಿದೆ ಎಂದು ತಿಳಿದುಕೊಳ್ಳಬಹುದು (ಚಿಮ.ಜಿ)

ಆವಿಗೆಬಾಯಿ: ಕುಂಬಾರಿಕೆಯ ಗೂಡಿಗೆ ಬೆಂಕಿ ಹಾಕುವ ಒಲೆಯ ಮುಂಭಾಗ

ಆವಿಗೆಮನೆ: ಮಡಕೆಗಳನ್ನು ಬೇಯಿಸುವುದಕ್ಕಾಗಿ ರಚಿಸಿದ ವಿಶಿಷ್ಟ ರೀತಿಯ ಮನೆ (ಚಿಮ.ಜಿ)

ಆವಿನಕಲ್ಲು: **ನೋಡಿ–** ಆಣಿಕಲ್ಲು

ಆವಿನಗೂಡು: ದನಗಳನ್ನು ಕೂಡುವ ಸ್ಥಳ. **ಇರೂ:** ದೊಡ್ಡಿ

ಆವು: ದನ. **ಪ್ರ:** ಅತ್ತೇಯ ಮನೆಯ ಆವಿನಿಂಡುಗಳೆ ನಾ ಹೋಗುತ್ತೀನಿ ಮದುಗಾದ ಕೆರೆಗೆ (ತುಮ.ಜಿ)

ಆವುಗೆ: ೧. ಕುಂಬಾರರು ಮಡಕೆ ಸುಡುವ ಗೂಡು (ತುಮ.ಜಿ) **ಇರೂ:** *ಆಮು; ಆಮುಗೆ;* ಆವಿಗೆ ೨. ಮೇಲೆ ಬರುವ ಹೊಗೆ; ಹಬೆ ೩. ಹಾವುಗೆ; ಪಾದುಕೆ; ಮರದಿಂದ ಮಾಡಿದ ಪಾದರಕ್ಷೆ.

ಆವುಜ: ಒಂದು ಬಗೆಯ ಊದುವಾದ್ಯ. **ಇರೂ:** ಆವುಜೆ

ಆವುಟಿಗಾಳಿ: ತೀವ್ರವಾದ ಗಾಳಿ

ಆವುತಿ: ಆಹುತಿ (ಚಾಮ.ಜಿ)

ಆವುರಿಗೆ: ೧. ಮಹಡಿಮನೆ ೨. ಉಪ್ಪರಿಗೆ ೩. ಆವರಣದ ಒಂದು ಗೋಡೆ (ಉಕ)

ಆವುಳಿ: ಸುದ್ದಿ (ತುಮ.ಜಿ)

ಆವೂರಿಗಿಮನಿ: ದೊಡ್ಡ ಮೇಲ್ಮಾಳಿಗೆ ಮನೆ (ತುಮ.ಜಿ/ಚಿತ್ರ.ಜಿ/ಬಳ್ಳಾ.ಜಿ)

ಆವೆ: ನೋಡಿ– ಆಮೆಮಣ್ಣು

ಆವೆಮುತ್ತು: ಸಾಸುವೆಕಾಳಿನ ಗಾತ್ರದ ಮುತ್ತು

ಆವೇಶ: ೧. ಅಲೌಕಿಕ ಶಕ್ತಿಗಳು ದೇಹದೊಳಗೆ ಸೇರುವುದು ೨. ಪರವಶತೆ (ದಕ.ಜಿ) ೩. ಯಕ್ಷಗಾನ ಪಾತ್ರದ ಭಾವಾವೇಶ

ಆವ್ಕೆಬಾವ್ಕೆ: ಗರ್ಭಿಣಿ ಹೆಂಗಸರಿಗೆ ಉಂಟಾಗುವ ಬಯಕೆಯನ್ನು ಸೂಚಿಸುವ ಪದ (ಮೈಸೂ.ಜಿ)

ಆವ್ಗೆ: ನೋಡಿ–ಆವುಗೆ (ಹಾಸ.ಜಿ)

ಆವ್ತಿ: ಆಹುತಿ; ಬಲಿ

ಆವ್ರಾಣಿ: ಹಾವುರಾಣಿ

ಆವ್ಲಿಮನೆ/ಆವಲಿಮನೆ: ನೋಡಿ– ಆಲೆ (ಉಕ.ಜಿ)

ಆಶಂಡಿ: ಆಷಾಢ (ಉಕ.ಜಿ)

ಆಶಗೆ: ಮಡಕೆ; ಮಣ್ಣಿನ ಪಾತ್ರೆ

ಆಶಾಡಿ ತಿಂಗ್ಳು: ಆಷಾಢ ಮಾಸದ ತಿಂಗಳು (ಉಕ.ಜಿ)

ಆಶಾರಿ: ಆಚಾರಿ; ಕಮ್ಮಾರ

ಆಶಿ: ೧. ಮೇಲೋಗರ; ಪದಾರ್ಥ (ಬಳ್ಳಾ.ಜಿ) ೨. ಆಶೆ (ಬೀದ.ಜಿ) ೩. ಹೊರಗಡೆ; ಆಚೆ (ಬೆಂಗ್ರಾ.ಜಿ)

ಆಶಿವಂತ: ೧. ಐಶ್ವರ್ಯವಂತ ೨. ಆಯುಷ್ಯವಂತ

ಆಷಾಡಕಾರ್ಯ: ಲಿಂಗಾಯತರ ವಿವಾಹ ವಿಧಿಗಳಲ್ಲಿ ವಿವಾಹದ ಕೊನೆಯ ಆಚರಣೆ. ಗಂಡಿನವರು ತಂದ ಹೊಸ ಸೀರೆ ಉಡಿಸಿ ಉಡಿಯಕ್ಕಿ ಸಹಿತ ಗಂಡಿನ ಮನೆಗೆ ಹೆಣ್ಣನ್ನು ಬರಮಾಡಿಕೊಳ್ಳುವ ಆಚರಣೆ. ಆಷಾಡ ಕಾರ್ಯದ ನಂತರ ಅಂದು ಸಂಜೆ ನವದಂಪತಿಗಳನ್ನು ಊರೆಲ್ಲ ಮೆರವಣಿಗೆ ಮಾಡಲಾಗುತ್ತದೆ

ಆಷಾಡಿಗೆಣಸು: ಗೆಣಸಿನ ಒಂದು ಪ್ರಬೇಧ: ಜ್ವರನಿವಾರಣ ಗುಣವುಳ್ಳ ಗೆಣಸು (ಚಾಮ.ಜಿ)

ಆಷಾಡಿಬೇರು: ಔಷಧೀಗುಣವುಳ್ಳ ಒಂದು ಬಳ್ಳಿ

ಆಷಾಢಕ್ಕೆ ಕರೆಯುವುದು: ಮದುವೆಯಾದ ಬಳಿಕ ವಧುವು ಆಷಾಢ ಮಾಸದಲ್ಲಿ ಅತ್ತೆ ಮಾವರ ಮುಖ ನೋಡಬಾರದೆಂಬ ನಂಬಿಕೆಯಿಂದ ಆಷಾಢಮಾಸಕ್ಕೆ ಮುಂಚೆ ತವರಿಗೆ ಕಳಿಸಿಕೊಡುವ ಕಾರ್ಯ (ಧಾರ.ಜಿ)

ಆಷಾಢದ ದೋಸೆ: ಉತ್ತರ ಕರ್ನಾಟಕದಲ್ಲಿ ಆಷಾಢ ಮಾಸದಲ್ಲಿ ಆಚರಿಸುವ ದೋಸೆ ಊಟ. ಒಂದೊಂದು ಮನೆಯಲ್ಲಿ ಒಂದೊಂದು ದಿನ ಗೋಧಿ ಅಥವಾ ಜೋಳದ ಹಿಟ್ಟಿನ ದೋಸೆ, ಪಲ್ಯ ಹಾಗೂ ಗೋಧಿಹಿಟ್ಟು ಮತ್ತು ಬೆಲ್ಲದಿಂದ ತಯಾರಿಸಿದ 'ಚೊಂಚಲ' ಎಂಬ ಸಿಹಿ ಗಿಣ್ಣ ಮಾಡುತ್ತಾರೆ. ಮೊದಲ ದೋಸೆಯಿಂದ ಮನೆ ಮಕ್ಕಳಿಗೆ ದೃಷ್ಟಿ ತೆಗೆದು, ದೋಸೆಯಿಂದಲೇ ಅವರ ಬೆನ್ನಿಗೆ ಗುದ್ದಿ ಅದನ್ನು ಮನೆಯ ಮೇಲೆ ಎಸೆಯುತ್ತಾರೆ. ಅನಂತರ ಕೇರಿಯ ಎಲ್ಲ ಮಕ್ಕಳಿಗೂ ದೋಸೆ ಊಟ ಬಡಿಸುತ್ತಾರೆ

ಆಸತ್ತು: ದಣಿದು; ಸುಸ್ತಾಗಿ. **ಪ್ರ:** ಆಸತ್ತು ಬ್ಯಾಸತ್ತು ಅಕ್ಕನ ಮನೆಗೆ ಬಂದರೆ ಅಕ್ಕನ ಗಂಡ ತೆಕ್ಕೆ ಬಡಿದ

ಆಸನಕುರಿ: ಮೂಲವ್ಯಾಧಿ (ದಕ.ಜಿ)

ಆಸನಬಾಯಿ ಹುಣ್ಣು: ಮಲದ್ವಾರದ ಹುಣ್ಣು

ಆಸನ್‌ಬಾಯಿ: ೧. ಗುದದ್ವಾರ ೨. ಗುಳ್ಳೆ (ಮೈಸೂ.ಜಿ)

ಆಸರ: ೧. ಓಣಿ; ಬೀದಿ; ಸಂತೆಗಳಲ್ಲಿ ನಿರ್ದಿಷ್ಟ ಪದಾರ್ಥಗಳನ್ನು ಮಾರುವ ಸಾಲು. **ಪ್ರ:** ನೀರುಳ್ಳಿ ಆಸರ, ಬೆಲ್ಲದ ಆಸರ ೨. ದೃಷ್ಟಿಯಾಗುವುದು (ಹಾಸ.ಜಿ) ೩. ಆಯಾಸವಾಗುವುದು; ದಣಿವಾಗುವುದು. **ಪ್ರ:** ಕಣ್ಣಾಸರ (ಮಂಡ್ಯ.ಜಿ)

ಆಸರ ಆಗು: ಕೆಟ್ಟ ದೃಷ್ಟಿಯಿಂದ ಮಕ್ಕಳಿಗೆ ಆಗುವ ಅಸ್ವಸ್ಥತೆ (ಮೈಸೂ.ಜಿ/ಚಾಮ.ಜಿ)

ಆಸರಗಾಯಿ: ದೃಷ್ಟಿದೋಷ ನಿವಾರಣೆಗಾಗಿ ನೀವಳಿಸಿ ಒಡೆಯುವ ತೆಂಗಿನಕಾಯಿ (ಚಿಮ.ಜಿ). **ಇರೂ:** *ಇಡುಗಾಯಿ; ಈಡುಗಾಯಿ (ಬೆಂಗ್ರಾ.ಜಿ)*

ಆಸರಗೇಡಿ: ಆಸರೆ ಇಲ್ಲದವನು

ಆಸರಿ: ೧. ತೃಷೆ ೨. ಪಾನೀಯ ೩. ಸಹಾಯಕ; ಬೆಂಬಲಿಗ. **ಇರೂ:** *ಆಸ್ರಿ;* ಆಶರು

ಆಸಾಡಿ ಅಮಾಸೆ: ಆಷಾಡದ ಅಮವಾಸ್ಯೆ (ಉಕ.ಜಿ)

ಆಸಾಡಿ ಹಬ್ಬ: ಆಷಾಢ ಮಾಸದ ಹುಣ್ಣಿಮೆಯಂದು ಆಚರಿಸುವ ಬೇಸಾಯದ ಮುಕ್ತಾಯದ ಹಬ್ಬ. ಕೃಷಿ ಕೆಲಸವೆಲ್ಲಾ ಮುಗಿದ ಬಳಿಕ ವಿಶೇಷವಾಗಿ ಕೋಳಿ ಸಾರು, ಇಡ್ಲಿ, ಪಾಯಸದ ಊಟ ಮಾಡುವರು. ದುಡಿದ ರೈತರಿಗೆ ಕಾಲು ಕೈಗಳಿಗೆ ಹಚ್ಚಿಕೊಳ್ಳಲು ಎಣ್ಣೆ ಕೊಟ್ಟು ಸಂತುಷ್ಟಪಡಿಸುವರು (ಉಕ.ಜಿ)

ಆಸಾದಿ: ನೋಡಿ– ಅಸಾದಿ

ಆಸಿ: ಅನ್ನದ ಜೊತೆಗೆ ಕಲಸಿಕೊಳ್ಳಲು ಉಪಯೋಗಿಸುವ ಪದಾರ್ಥ. ತರಕಾರಿ, ಬೇಳೆ, ತೆಂಗಿನಕಾಯಿ, ಮಸಾಲೆ ಸಾಮಾನುಗಳನ್ನು ಬೆರೆಸಿ ಮಾಡಿದ ಸಾರು (ಉಕ.ಜಿ)

ಆಸಿಬೀಸಿ: ಆಶ್ಲೇಷಾ ನಕ್ಷತ್ರದ ಗಾಳಿ ಮತ್ತು ಮಳೆ; ಈ ಮಳೆಯಲ್ಲಿ ಗಾಳಿ ಬಹಳ (ಶಿವ.ಜಿ)

ಆಸೀ: ತೂಕದ ಬಟ್ಟು; ವಸ್ತುಗಳನ್ನು ತೂಗಲು ಉಪಯೋಗಿಸುವ ಉಪಕರಣ (ಬಳ್ಳಾ.ಜಿ)

ಆಸೀಳ್ಳೆ: ಆಸೆಪಟ್ಟು ಕೊಟ್ಟ ಅಥವಾ ಈಸಿಕೊಂಡ ವೀಳ್ಯ

ಆಸುಂಡಿ ಗಾಳಿ: ಆಷಾಢದ ಗಾಳಿ (ರಾಮ.ಜಿ)

ಆಸುಗಲ್ಲು: ೧. ಹಾಸಿದ ಕಲ್ಲು ೨. ಚಪ್ಪಟೆ ಕಲ್ಲು ೩. ಅರೆಯುವ ಕಲ್ಲು

ಆಸುಪಾಯರ್: ಅಂಬಿಗರು

ಆಸುಬಂಡಿ: ಹಾಸುಬಂಡೆ; ವಿಶಾಲವಾದ ಬಂಡೆ

ಆಸೆ: ೧. ಬಯಕೆ ೨. ದ್ರವರೂಪದ ಊಟದ ವಸ್ತು; ಸಾಂಬಾರು; ತಂಬುಳಿ ೩. ಬಿತ್ತುವುದಕ್ಕೆ ಅಥವಾ ಗೆಯ್ಮೆಗೆ ಹೋಗುವ ಮುನ್ನ ಎತ್ತುಗಳ ನೊಗಕ್ಕೆ ಸಂಬಂಧಪಟ್ಟ ಉಪಕರಣಗಳನ್ನು ಸಿದ್ಧಪಡಿಸಿಕೊಂಡು ಹೋಗುವ ವಿಧಾನ (ಚಿತ್ರ.ಜಿ/ಉಕ.ಜಿ)

ಆಸೆಕಲ್ಲು ಆಟ: ಮಕ್ಕಳ ಕಲ್ಲಾಟ

ಆಸ್ಗೆ: ಆಸಗೆ; ತೇವದಿಂದ ಕೂಡಿರುವ ನೆಲ (ಉಕ.ಜಿ)

ಆಸ್ತಿಮಣ್ಣು: ಉತ್ತಮವಾದ ಬೆಳೆಯನ್ನು ಕೊಡುವ ಫಲವತ್ತಾದ ಮಣ್ಣು

ಆಸ್ನಬಾವು: ಆಸನಬಾವು; ಮಲದ್ವಾರದಲ್ಲಿ ಕಂಡುಬರುವ ಊತ (ದಕ.ಜಿ)

ಆಸ್‌ಬೀಳು: ಆಸೆಪಡು; ಬಯಸು

ಆಸ್ಯಾಡ: ಆಷಾಢಮಾಸ (ಬೆಳ.ಜಿ)

ಆಸ್ರಲೆ: ದನಗಳಿಗೆ ಬರುವ ಒಂದು ಬಗೆಯ ರೋಗ

ಆಸ್ರಾದ: ಆಶೀರ್ವಾದ (ದಕ.ಜಿ)

ಆಸ್ರಿ/ಆಸರ: ೧. ಕರಾವಳಿಯಲ್ಲಿ ಉಪಹಾರದ ತಿಂಡಿ ತಿನಿಸುಗಳ ಜೊತೆಗೆ ಚಹ ಕಾಫಿ ಹಾಲ್ನೀರು ಕಷಾಯಾದಿ ಪಾನೀಯಗಳನ್ನು ಕೊಡುವ ಪದ್ಧತಿ (ಉಕ.ಜಿ). ೨. ಬೆಳಗಿನ ತಿಂಡಿ; ಲಘು ಉಪಾಹಾರ (ಉಕ.ಜಿ). **ಪ್ರ**: ಇವತ್ತು ಆಸ್ರಿಗೆ ಏನು ಮಾಡ್ಲಿ

ಆಸ್ರು: ಬಾಯಾರಿಕೆಗೆ ಪಾನೀಯ ನೀಡುವುದು (ಉಕ.ಜಿ)

ಆಸ್ಲುಮರ: ಒಂದು ಬಗೆಯ ಮರದ ಹೆಸರು

ಆಸ್ವಂತೆ: ಆಯುಷ್ಯವಂತೆ

ಆಸ್ಕು: ರಾಸುಗಳಿಗೆ ಬರುವ ಖಾಯಿಲೆ. ಮೇವು ತಿನ್ನದೆ ಬಾಯಲ್ಲಿ ಜೊಲ್ಲು ಸುರಿಯುವುದು (ಮಂಡ್ಯ.ಜಿ)

ಆಹುತಿ: ಬಲಿನೀಡುವುದು; ವಾಮಾಚಾರ ಮಾಡುವವರು ದುಷ್ಟ ಶಕ್ತಿಗಳನ್ನು ತೃಪ್ತಿಪಡಿಸಲು ನೀಡುವ ಪ್ರಾಣಿಬಲಿ (ಬೆಂಗ್ರಾ.ಜಿ)

ಆಹೇರ್: ಮುಯ್ಯಿ. ಲಗ್ನದಲ್ಲಿ ಕೊಡುವ ಉಡುಗೊರೆ (ಧಾರ.ಜಿ). **ಪ್ರ**: ಆರತಕ್ಷತೆಗೆ ಕೂಡಿಸಿದಾಗ ಕೂಡಿದ ಮಂದಿ ತಮಗ ತೋಚಿದ ಸಾಮಾನು ಬೆಳ್ಳಿ ರೂಪಾಯಿ ಹೀಂಗ ಏನೇನೋ ಆಹೇರ್ ಮಾಡಿದ್ರು (ದಾವ.ಜಿ)

ಆಳಂಡಿ: ೧. ಜೋಕುಮಾರನ ಪ್ರಸಾದ. ಇದನ್ನು ಬೆಳೆಯ ನಡುವೆ ಚೆಲ್ಲಿದರೆ ಇಳುವರಿ ಹೆಚ್ಚುತ್ತದೆಂಬ ನಂಬಿಕೆ ಇದೆ (ಬೆಳ.ಜಿ) ೨. ನೀರಿನ ಆಳ

ಆಳಂಬಿ ಎಸ್ರು: ಅಣಬೆಯ ಸಾರು (ಕೋಲಾ.ಜಿ)

ಆಳಕಟ್ಟುವುದು: ಕಂಬಳಿಗೆ ಬಣ್ಣದ ಪಟ್ಟೆ ಹಾಕುವುದು

ಆಳದಾಟು: ಕೋಲಾಟದ ಒಂದು ಬಗೆ (ಉಕ.ಜಿ)

ಆಳಪಾಲು: ಒಂದು ವರ್ಷ ಪೂರ್ತಿ ಇನ್ನೊಬ್ಬರ ಜೊತೆಗೆ ಆಳಾಗಿ ಇದ್ದು ವ್ಯವಸಾಯ ಮಾಡಿ ಬೆಳೆಯಲ್ಲಿ ಪಡೆಯುವ ಪಾಲು

ಆಳಬಿಡು (ಕ್ರಿ): ನೀರಿನಲ್ಲಿ ನಿಂತುಕೊಳ್ಳುವುದು; ನೀರಿನ ಆಳ ತೋರಿಸುವಿಕೆ (ಮಂಡ್ಯ.ಜಿ)

ಆಳಸು: ಸೋಮಾರಿ

ಆಳಾ: ಮೈಮೇಲೆ ಬರುವುದು

ಆಳಿ: ೧. ಬಾಣಂತಿಗೆ ಕೊಡುವ ಆರೋಗ್ಯವರ್ಧಕವಾದ ಕಾಳಿನ ತಿನಿಸು ೨. ಬೆಲ್ಲದ ನೀರು ಮತ್ತು ಗೋಧಿಹಿಟ್ಟಿನಿಂದ ತಯಾರಿಸಿದ ಗಂಜಿ; ಒಂದು ಬಗೆಯ ಪಾನೀಯ (ಗುಲ್ಬ.ಜಿ) ೩. ಮೋಸ (ಧಾರ.ಜಿ)

ಆಳಿಕೆ: ೧. ಆಳುವಿಕೆ; ರಾಜ್ಯಭಾರ; ಅಧಿಕಾರ. **ಪ್ರ**: ಗೌಡರ ಆಳಿಕೆಯಲ್ಲಿ ಊರು ತಣ್ಣಗಿತ್ತು ೨. ಸಿದ್ಧರ ಕಳಸ. **ಪ್ರ**: ಕುಮಾರರಾಮನ ಆಳಿಕೆ (ಸಿದ್ಧರ ಕಳಸ)

ಆಳಿಗೆ ಆಳುತಿರುಗ: ಕೋಲಾಟದ ಗತ್ತುಗಳಲ್ಲೊಂದು

ಆಳಿನೇರಿಕೆ: ಒಂದು ಬಗೆಯ ಆಟ

ಆಳಿಬರು: (ಕ್ರಿ): ಮೈ ಮೇಲೆ ದರ್ಶನ ಬರುವಿಕೆ (ದಕ.ಜಿ)

ಆಳು: ೧. ವ್ಯಕ್ತಿ. **ಪ್ರ**: ನಮ್ಮೂರಿನಲ್ಲಿ ಅರವತ್ತಾಳು ಸತ್ತರು, ತೋಳ ಹಳ್ಳಕ್ಕೆ ಬಿದ್ರೆ ಆಳಿಗೊಂದು ಕಲ್ಲು ೨. ಸೇವಕ. **ಪ್ರ**: ಆಳಿದ್ದೋನಿಗೆ ಆರಂಬ ಕೂಳಿದ್ದೋನಿಗೆ ನೆಂಟರಿಷ್ಟರು

ಆಳುಕಾಳು: ಸೇವಕರು. **ಪ್ರ**: ಅವನಿಗೆ ಸೊಗಸಾದ ಬಿಡಾರ ಗಿಡಾರ ಆಳುಕಾಳು ಯವಸ್ಥೆ ಮಾಡಿದ

ಆಳು ಕೈಬಿಡೋ ಹೊತ್ತು: ಕೂಲಿ ಕೆಲಸದವರು ಕೆಲಸ ನಿಲ್ಲಿಸುವ ಹೊತ್ತು

ಆಳುಗೊತ್ತಿನ ದಂಡೆ: ಬೇಟೆಯ ಒಂದು ಬಗೆ; ಬೇಟೆಯ ಆಟ

ಆಳುತನ/ಆಳ್ತನ: ಆಳಿನ ಕೆಲಸ; ಸೇವಕತನ

ಆಳುದ್ದ: ೧. ನೀರಿನ ಮಟ್ಟ; ಎತ್ತರದ ಅಳತೆಯನ್ನು ಹೇಳಲು ಬಳಸುವ ಪದ ೨. ಒಬ್ಬ ವ್ಯಕ್ತಿಯಷ್ಟು ಎತ್ತರ; ಸುಮಾರು ಆರು ಅಡಿ (ದಕ.ಜಿ). **ಪ್ರ**: ಎಂಟಾಳುದ್ದ ಬಾವಿ

ಆಳುಪಲ್ಲಕ್ಕಿ ಉತ್ಸವ: ಪಲ್ಲಕ್ಕಿಗೆ ವಿಧವಿಧವಾದ ಆಳೆತ್ತರದ ಅಲಂಕೃತ ಹೆಣ್ಣು ಕೀಲುಗೊಂಬೆಗಳನ್ನು ನಿಲ್ಲಿಸಿ ಅವುಗಳ ಕೈಗೆ ಬಣ್ಣ ಬಣ್ಣದ ಕರವಸ್ತ್ರ ಕೊಟ್ಟಿರುತ್ತಾರೆ. ಅಡ್ಡೆಕಾರರು ನೂಲಿನ ಸಹಾಯದಿಂದ ಎಳೆದಾಗ ಗೊಂಬೆಗಳು ಸರದಿಯ ಮೇಲೆ ಗಾಳಿ ಹಾಕುತ್ತವೆ

ಆಳುಬಿಡೋದು: ಕುರುಬರ ಸಮುದಾಯದಲ್ಲಿ ಯಾವುದೇ ಹಿರಿಯ ಯಜಮಾನ ಸತ್ತಾಗ ಆ ಸುದ್ದಿಯನ್ನು ಸಂಬಂಧಿಕರಿಗೆ ತಲುಪಿಸಲಿಕ್ಕೆ ಮೊದಲು ಒಬ್ಬ ಹರಿಜನ ವ್ಯಕ್ತಿಯನ್ನು ಕಳಿಸಿಕೊಡುವುದು. ಸಂಬಂಧಿಕರಿಗೆ ಸುದ್ದಿ ಮುಟ್ಟಿಸುವ ಆತನಿಗೆ ಮನೆಯವರು ಜೋಳ ಮುಂತಾದುವನ್ನು ಸಂಭಾವನೆಯಾಗಿ ನೀಡುತ್ತಾರೆ (ಬಳ್ಳಾ.ಜಿ)

ಆಳುಮಂದಿ/ಆಳ್ಮಂದಿ: ಆಳುಕಾಳು; ಸೇವಕರು. **ಪ್ರ**: ರಾಜ ಆಳ್ಮಂದಿ ಕರ್ಕಂಡು ಬ್ಯಾಟೆ ಮಾರ್ಗ ಹೋಗಿರ್ತಾನೆ

ಆಳುಮಕ್ಕಳು: ಕೆಲಸ ಮಾಡುವವವರು; ಸೇವಕವರ್ಗದವರು

ಆಳುಮಕ್ಕಳು ಕುಣಿತ: ಉತ್ತರ ಕರ್ನಾಟಕದ ಒಂದು ಜನಪದ ನೃತ್ಯ; ದಟ್ಟಿ ಕುಣಿತ. ದೇವಿ ಎಲ್ಲಮ್ಮನ ಸೇವಕರು ಕೈಪಟ್ಟು ವಾದ್ಯದೊಂದಿಗೆ ಕೆಂಪು ಸಮವಸ್ತ್ರ ಧರಿಸಿ ಕುಣಿಯುತ್ತಾರೆ

ಆಳುಮಗ: ರೈತಾಪಿ ಜನರಲ್ಲಿ ಪೂರ್ಣಾವಧಿಯವರೆಗೆ ನೇಮಕ ಮಾಡಿಕೊಳ್ಳಲಾಗಿರುವ ಸೇವಕ; –ಜೀತಗಾರ. **ಪ್ರ**: ಆದ್ದಂಗಾತ ಆಳುಮಗನ ಮದುವಿ. **ಇದೂ**: ಅಳಿಮಗ

ಆಳುವ: ಮನುಷ್ಯ ಮತ್ತು ದನಗಳ ಮೈಮೇಲೆ ಬೆಳೆಯುವ ವೇದನಾರಹಿತ ದುರ್ಮಾಂಸದ ಗಡ್ಡೆ; ವಾಳ

ಆಳುಸುತ್ತುಗೋಲು: ಕೋಲಾಟದ ಒಂದು ವಿಧ; ನಾಗಮಂಗಲದ ಕಡೆ ಈ ಪ್ರಕಾರ ಪ್ರಚಲಿತವಿದೆ

ಆಳೂದ್: ದೈವವು ಪಾತ್ರಿಯ ಮೈಮೇಲೆ ಬರುವುದು (ದಕ.ಜಿ)

ಆಳೆ: ೧. ಹಾಳೆ; ಪತ್ರ; ಕಾಗದ ೨. ಅಳ್ಳೆ; ಉಡದ ಹೊಟ್ಟೆಯನ್ನು ಸೀಳಿದಾಗ ಕಾಣುವ ಎರಡು ಕಡೆಯ ಪಕ್ಕೆಗಳು. ಇರುಳಿಗರು ಆ ಎರಡು ಆಳೆಗಳಲ್ಲಿರುವ ಕೊಬ್ಬನ್ನು ತೆಗೆದು ಹದವಾಗಿ ಕಾಯಿಸಿ ತುಪ್ಪ ಮಾಡಿ ಹಲವಾರು ಖಾಯಿಲೆಗಳಿಗೆ ಔಷಧಿಯಾಗಿ ಬಳಸುತ್ತಾರೆ. **ಇದೂ**: *ಕೊಪ್ಪರಿಗೆ (ಮೈಸೂ.ಜಿ)*

ಆಳೆತ್ತರ: ಎತ್ತರ ಹೇಳುವ ಬಗೆ. ಒಬ್ಬ ಮನುಷ್ಯನ ಎತ್ತರ (ಬೆಂಗ.ಜಿ). **ಪ್ರ**: ಎರಡಾಳೆತ್ತರ

ಆಳ್ತನ: ಪೌರುಷ; ಪರಾಕ್ರಮ. **ಪ್ರ**: ಆಳ್ತನ ನೋಡಿ ನನ್ನನ್ನು ಈ ಕುದುರೆ ಸೈನ್ಯದ ತುಕಡಿ ನಾಯಕನ್ನ ಮಾಡಿದರು

ಆಳ್ನೆತ್ತಿ: ಆಮಶಂಕೆ; ರಕ್ತಾತಿಸಾರ (ದಕ.ಜಿ)

ಆಳ್ನೆಲ: ಆಳಿಕೆಗೆ ಒಳಪಟ್ಟ ಭೂಮಿ

ಆಳ್ಬಾಳ: ಬಂಧುಬಳಗದವರ ಪರಸ್ಪರ ಭೇಟಿ (ಧಾರ.ಜಿ)

ಆಳ್ಬಾಳು: ಸೇವಕನ ಹೊಲ

ಆಳ್ಮನಶಾ: ದುಡಿವ ಆಳು (ಧಾರ.ಜಿ)

ಆಳ್ಮೊಟ್ಟೆ: ಆಳುಮೂಟೆ; ಒಬ್ಬ ಆಳು ಹೊರಬಹುದಾದಷ್ಟು ತೂಕದ ಹೊರೆ

ಆಳ್ವತಿ: ಕೆಸುವಿನೆಲೆಯಿಂದ ತಯಾರಿಸುವ ಒಂದು ವ್ಯಂಜನ (ದಕ.ಜಿ)

ಆಳ್ವಿಹುಣ್ಣಿ: ರಾಗಿಯಂಥ ಚಿಕ್ಕಕೆಂಪು ಕಾಳು. ಈ ಕಾಳುಗಳನ್ನು ಕುದಿಸಿ ಸಕ್ಕರೆ ಹಾಲಿನೊಂದಿಗೆ ಬಾಣಂತಿಗೆ ಕುಡಿಯಲು ಕೊಡುತ್ತಾರೆ

ಆಳ್ವೇರಿ/ಅಳವೇರಿ: ಕೋಟೆಯ ಗೋಡೆ (ಬಳ್ಳಾ.ಜಿ); ಎತ್ತರವಾದ ಗೋಡೆ (ಬೀದ.ಜಿ). **ಇರೂ:** *ಅಳ್ಳಪೀರಿ*

ಆಳ್ವಾಕು: ಸಾಲ ಕೊಟ್ಟವನು ಬಾಕಿ ವಸೂಲಿಗಾಗಿ ಆಳು ಕಳಿಸುವ ವಿಧಾನ

ಇ

ಇಂಕಣಿ: ರಾಶಿಯಿಂದ ಕಾಳು ಬೇರ್ಪಡಿಸುವಾಗ ಮೂರನೇ ಸಲ ತುಳಿಸಲಾಗುವ ತೆನೆಗಳು (ಧಾರ.ಜಿ)

ಇಂಕಾಲ: ಅಜೀರ್ಣ (ಧಾರ.ಜಿ)

ಇಂಕು: ತೆನೆಗಳ ಚಿಕ್ಕತುಂಡುಗಳು (ಚಿಮ.ಜಿ)

ಇಂಕೂಣಿ: ನೋಡಿ– ಇರುಗೂಳಿ

ಇಂಕ್ರ: ಸ್ವಲ್ಪ; ತುಸು (ಮಂಡ್ಯ.ಜಿ/ಚಾಮ.ಜಿ)

ಇಂಗಡ: ೧. ವಿಂಗಡನೆ; ಪ್ರತ್ಯೇಕ ೨. ವಿರಾಮವಾಗಿ (ದಕ)

ಇಂಗಣ್ಣ: ಹಿಂದೆ ಕಣ್ಣುಳ್ಳವನು (ಚಾಮ.ಜಿ)

ಇಂಗಲಂಡು: ಹತ್ತಿಯ ಒಂದು ವಿಧದ ಹೆಸರು

ಇಂಗಲೀಕ/ಇಂಗಳೀಕ: ಭೂತಾರಾಧನೆ ಮತ್ತು ಯಕ್ಷಗಾನದಲ್ಲಿ ಮುಖಾಲಂಕಾರಕ್ಕೆ ಬಳಸುವ ಕೆಂಬಣ್ಣ (ದಕ.ಜಿ). ಯಕ್ಷಗಾನದ ಮುಖವರ್ಣಿಕೆಯಲ್ಲಿ ಕೆಂಪುಬಣ್ಣದ ಕಲ್ಲನ್ನು ಅರೆದು ಎಣ್ಣೆಯಲ್ಲಿ ಕಲೆಸಿ ಬಣ್ಣ ಸಿದ್ಧಪಡಿಸಿಕೊಳ್ಳುತ್ತಾರೆ (ದಕ.ಜಿ)

ಇಂಗಲ್ಸು: ಬೆಂದುಹೋಗು; ಚರ್ಮದಲ್ಲಿ ಬೊಬ್ಬೆ ಏಳುವಂತೆ ಸುಡು (ಉಕ.ಜಿ)

ಇಂಗಳ/ಇಂಗುಳ : ೧. ಕೆಂಡ; ಬೆಂಕಿ; ಅಂಗಾರ (ತುಮ.ಜಿ) ೨. ಉರಿಗಾಳಿ ೩. ಒಂದು ಸಸ್ಯ ವಿಶೇಷ; ಗಾರೆಗಿಡ; ಇಂಗುದೀ ವೃಕ್ಷ. **ಇರೂ:** *ಇಂಗಳಿ; ಇಂಗ್ಳಾ; ನಿಂಗ್ಳಾ*

ಇಂಗಳಕಾಯಿ: ೧. ಗಾರೆಕಾಯಿ; ಅಗಸರು ಬಟ್ಟೆಯಲ್ಲಿನ ಕೊಳೆ ನಿವಾರಿಸಲು ಈ ಕಾಯಿಯನ್ನು ಬಳಸುತ್ತಾರೆ (ಬೆಂಗ್ರಾ.ಜಿ) ೨. ಅಂಟುವಾಳಕಾಯಿ (ಮೈಸೂ.ಜಿ). ಬಟ್ಟೆ ಒಡವೆ ತೊಳೆಯಲು, ಕೆಮ್ಮು ಜ್ವರಗಳಿಗೆ ಔಷಧಿಯಾಗಿ ಬಳಕೆಯಾಗುತ್ತದೆ

ಇಂಗಳಗೂಟ: ಗಟ್ಟಿಯಾದ ನಾಟುಗಂಬ (ಬಿಜಾ.ಜಿ)

ಇಂಗಳಹಾಕುವುದು: ಬುಡ್ಗ ಜಂಗಮರಲ್ಲಿ ಶವಸಂಸ್ಕಾರವಾದ ಸ್ವಲ್ಪ ಸಮಯದ ನಂತರ ಮನೆಯವರು ಹೆಣ ಹೂಳಿದ ಸ್ಥಳಕ್ಕೆ ಹೋಗಿ ಮಣ್ಣು ಮಾಡಿದ ದಿಮ್ಮಿಯ (ಮಣ್ಣಿನಗುಡ್ಡೆ) ಮೇಲೆ ಬೆರಣಿಯಿಂದಲೋ ಕಸದಿಂದಲೋ ಬೆಂಕಿ ಹಚ್ಚಿ ಬರುವುದು. ಇದನ್ನು ಮಾಡುವುದರಿಂದ ಸತ್ತ ವ್ಯಕ್ತಿ ದೆವ್ವವಾಗಿ ಕಾಡುವುದಿಲ್ಲವೆಂಬ ನಂಬಿಕೆ

ಇಂಗಳಿಕ: ಸಿಂಗಳೀಕ; ಒಂದು ಜಾತಿಯ ಕೋತಿ (ಬೀದ.ಜಿ)

ಇಂಗಳೀಕ: ನೋಡಿ– ಇಂಗಲೀಕ

ಇಂಗಳೆ(ನಾ): ದ್ಯಾಮವ್ವ ಎಂಬ ದೇವತೆಯ ಮಗ (ಬಾಗ.ಜಿ)

ಇಂಗಳೋಬಾ: ದ್ಯಾಮವ್ವ ದೇವತೆಯ ಮಗ, ಒಂದು ಗಂಡು ಗೊಂಬೆ

ಇಂಗಾಜಿ: ಒಂದು ಬಗೆಯ ಕಳೆಸಸ್ಯ

ಇಂಗಾರ: ಹಿಂಗಾರ; ಅಡಕೆಯ ಹೂವು; ಹೊಂಬಾಳೆ

ಇಂಗಾಳಿ: ಉರಿಗಾಳಿ (ದಕ.ಜಿ)

ಇಂಗಿಟಮುರೆ: ೧. ಹಿಂಗಟ್ಟುಮುರಿ; ದೇಹದ ಹಿಂಭಾಗಕ್ಕೆ ಎರಡೂ ಕೈಗಳನ್ನು ಸೇರಿಸಿ ಕಟ್ಟುವುದು ೨. ಹೆಡಮುರಿಗೆ. **ಪ್ರ:** ನಿನ್ನ ಹೊಟ್ಟಿಗುಟ್ಟಿದ ಮಗಿನ ಕುಂಟೆ ಇಂಗಿಟಮುರೆ ಕಟ್ಟಿಸ್ದಿದ್ರೆ ನಾನು ಆಲೂರು ಹಾಲಪ್ಪನ ಮಗ್ನೆ ಅಲ್ಲ. **ಇರೂ:** *ಇಂಚುಮುರಿ*

ಇಂಗು (ಕ್ರಿ): ೧. ಒಣಗು; ಬತ್ತು. **ಪ್ರ:** ಮಳೆ ಇಲ್ದೆ ಕೆರೆಯೆಲ್ಲ ಇಂಗಿ ಹೋಗಿದಾವೆ ೨. ಅಟ್ಟು; ಇಮುರು (ಬೆಳ.ಜಿ) ೩. ಬಿರಿಯು; ಒಡೆದುಹೋಗು (ನಾ) ೪. ಅಡುಗೆಗೆ ಬಳಸುವ ವಿಶಿಷ್ಟ ವಾಸನೆಯುಳ್ಳ ಸಾಂಬಾರ ಪದಾರ್ಥ; ಹಿಂಗು. **ಪ್ರ:** ಇಂಗು ತೆಂಗು ಇದ್ರೆ ಮಂಗನೂ ಅಡುಗೆ ಮಾಡುತ್ತೆ. ೫. ಹಿಂಗಾರ; ಅಡಕೆಯ ಹೂವು (ತುಮ.ಜಿ)

ಇಂಗುಳ: ನೋಡಿ– ಇಂಗಳ

ಇಂಗೆಣ್ಣೆ: ೧. ಹೊಂಗೆ ಎಣ್ಣೆ; ಹೊಂಗೆಮರದ ಬೀಜದ ಎಣ್ಣೆ. ೨. ಕಾಯಿಸಿ ಆರಿಸಿದ ಎಣ್ಣೆ

ಇಂಗೋಲು: ಕಬ್ಬು

ಇಂಗ್ರಿಗಿಡ್ಕ್: ಚೇಣಿಕಬ್ಬು (ದಕ.ಜಿ)

ಇಂಗ್ಲನ್ನ: ಮೆಂತ್ಯ ಹಾಕಿ ಮಾಡಿದ ಅನ್ನ; ಮೆಂತೆ ಚಿತ್ರಾನ್ನ (ದಕ.ಜಿ)

ಇಂಗ್ಲಪಳಾಸಿ: ಬೆರಕಿ (ದಕ.ಜಿ)

ಇಂಗ್ಲರದ ಗಿಡ: ಆಟಿಕೆ ಸಾಮಾನುಗಳನ್ನು ತಯಾರಿಸಲು ಬಳಸಲಾಗುವ ಮರ. ಇದರ ಚೇಗು ಬಿಳಿಯ ಬಣ್ಣದ್ದಾಗಿರುತ್ತದೆ ಮತ್ತು ತುಂಬ ಮೃದುವಾಗಿರುತ್ತದೆ (ಬಳ್ಳಾ.ಜಿ)

ಇಂಗ್ಲಿ: ೧. ಗಾಲಿಯು ಬಂಡಿಯಿಂದ ಹೊರಗೆ ಬರದಂತೆ ಆಧಾರವಾಗಿರುವ ಕಬ್ಬಿಣದ ಮೊಳೆ; ಕಡಾಣಿ ೨. ಕುಂಟೆ ದಿಂಡಿಗೆ ಈಸು ಜೋಡಿಸಿದಾಗ ದಿಂಡಿನಿಂದ ಹೊರಗೆ ಬಂದ ಈಸಿಗೆ ಕಡಾಣಿಯಂತೆ ಜೋಡಿಸಿದ ಕಟ್ಟಿಗೆ (ರಾಯ.ಜಿ)

ಇಂಗ್ಲಿಕ್ಕು: (ಕ್ರಿ): ೧. ಉಪಚರಿಸು; ಸತ್ಕರಿಸು ೨. ಬೆಂಕಿಹಚ್ಚು; ಒಡಕು ಹುಟ್ಟಿಸು; ಜಗಳ ಹಚ್ಚು (ಧಾರ.ಜಿ)

ಇಂಗ್ಲೀಕ: ಉಡುಗೆ ತೊಡುಗೆಗಳಿಂದ ಶೃಂಗರಿಸಿಕೊಳ್ಳುವಿಕೆ (ಮಂಡ್ಯ.ಜಿ). **ಇರೂ:** *ಇಗಲೀಕ*

ಇಂಗ್ಲು: ೧. ಜೋಳದ ನುಚ್ಚಿನಿಂದ ಮಾಡಿದ ತಿನಿಸು (ಚಿಮ.ಜಿ) ೨. ಯಾವುದಾದರು ಪದಾರ್ಥವನ್ನು ಕುದಿಸಿ ನೀರಿನ ಅಂಶ ಇಲ್ಲವಾಗುವಂತೆ ಮಾಡು; ಇಂಗಿಸು

ಇಂಗ್ಗಾ: ಬೆಂಕಿಕೆಂಡ (ದಕ.ಜಿ). **ಇರೂ:** *ನಿಂಗ್ಗಾ*

ಇಂಗ್ಳಿಕ್ಕು: ನೋಡಿ– ಇಂಗ್ಲಿಕ್ಕು

ಇಂಚಕಟಗಿ: ಅಳತೆ ಸೂಚಿಸಿರುವ ಮರದ ಪಟ್ಟಿ; ಇಂಚುಪಟ್ಟಿ (ಬಿಜಾ.ಜಿ)

ಇಂಚರಿ ಮುಂಚರಿ: ಹಿಂದೆ ಮುಂದೆ; ಭೇದಿ ವಾಂತಿ ಎರಡೂ ಒಟ್ಟಿಗೇ ಆಗುವುದನ್ನು ಸೂಚಿಸುವ ಶಬ್ದ (ಚಾಮ.ಜಿ)

ಇಂಚರೆ: ಹಿಂದುಗಡೆ (ಚಾಮ.ಜಿ). **ಇರೂ:** *ಇಂಚಾರಿ*

ಇಂಚಾಬತ್ತು: ಇಲಿ (ಧಾರ.ಜಿ). **ಇರೂ:** *ಇಲಿಬುಡ್ಕ;*

ಇಂಚಿ: ಇಣಚಿ; ಅಳಿಲು

ಇಂಚೊರಿ: ಹಿಂದುಗಡೆ; ಹಿಂಭಾಗ (ಮಂಡ್ಯ.ಜಿ)

ಇಂಜಕೆ: ೧. ಇಂದಿಗೆ ೨. ಹಿಂದಕ್ಕೆ ೩. ನಾಳೆಗೆ

ಇಂಜಾನ ಮಳಿ: ಧಾರಾಕಾರವಾದ ಮಳೆ

ಇಂಜಾನು: ಕಾಡು

ಇಂಜಾನೆ: ಮುಂಜಾನೆ

ಇಂಜಾಮಣಿ: ನೆಲವನ್ನು ಹಸನು ಮಾಡುವ ಉಪಕರಣ. ಇಂಚಿಗೆ ಒಂದು ಹಲ್ಲಿನಂತೆ ಸುಮಾರು ಒಂಬತ್ತು ಅಡಿ ಉದ್ದವಿರುವ ಸಾಧನ (ಬಳ್ಳಾ.ಜಿ)

ಇಂಜಾವ: ದಟ್ಟವಾದ

ಇಂಜೀರ್‌ಬಳ್ಳಿ: ಒಂದು ಬಗೆಯ ಸಸ್ಯವಿಶೇಷ (ದಕ.ಜಿ)

ಇಂಜುಕಟ್ಟು: ರಾಶಿಪೂಜೆಯ ದಿನ ರಾಶಿಯ ಸುತ್ತಲೂ ಬೂದಿಯಿಂದ ಹಾಕುವ ಕಟ್ಟು; ಗೆರೆ

ಇಂಜೋಲಿ: ಹಿಂಜೋಲಿ; ಹಿಂದೆ ಭಾರವಾಗುವುದು. **ಪ್ರ:** ಬಂಡಿ ಇಂಜೋಲಿ ಆಗ್ಯಾದ (ರಾಯ.ಜಿ)

ಇಂಟಗ: ಇಂಪಾದ ಧ್ವನಿ; ಮಧುರ ಸ್ವರ

ಇಂಟಿ: ಈಟಿ

ಇಂಟೆ: ೧. ಮಣ್ಣಿನ ಹೆಂಟೆ; ಒಣಗಿದ ಮಣ್ಣಿನ ಮುದ್ದೆ ೨. ಹಸಿ ಇಟ್ಟಿಗೆ. **ಇರೂ:** *ಇಂಟಿ* ೩. ಈಟಿ

ಇಂಡಂತ್ರಿ: ನೂಲಿಗೆ ಹಾಕುವ ಬಹಳಕಾಲ ಉಳಿಯುವ ಬಣ್ಣ (ಬಳ್ಳಾ.ಜಿ). **ಇರೂ:** *ಇಂಟಂತ್ರಿ*

ಇಂಡಿ: ಹಿಂಡಿ; ೧. ಸೇಂಗಾ ಎಳ್ಳು ಗುರೆಳ್ಳು ಇತ್ಯಾದಿಗಳನ್ನು ಸೇರಿಸಿ ಮಾಡುವ ಕಾರ; ಪುಡಿಚಟ್ನಿ (ಉಕ) ೨. ಚಟ್ನಿ. ೩. ಹಸುವಿನ ಆಹಾರ (ಚಿಮ.ಜಿ) ೪. ಎಣ್ಣೆ ಕಾಳುಗಳಿಂದ ಎಣ್ಣೆ ತೆಗೆದನಂತರ ಉಳಿಯುವ ವಸ್ತು ೫. ಭೂತಾರಾಧನೆಯಲ್ಲಿ ಉಪಯೋಗಿಸುವ ಹೂವು ಸೊಪ್ಪು ಅಕ್ಕಿ ಮೊದಲಾದ ಹದಿನಾರು ಸಮರ್ಪಣ ವಸ್ತುಗಳ ಮಿಶ್ರಣ (ದಕ.ಜಿ)

ಇಂಡಿಗಿ: ೧. ಒಕ್ಕಣೆಯ ಸಂದರ್ಭದಲ್ಲಿ ಕಣದ ಸುತ್ತಲೂ ಕಾಳು ಹೊರಚೆಲ್ಲದಂತೆ ಕಟ್ಟಿದ ಕಣಿಕೆ ಸೂಡು (ಬೀದ.ಜಿ) ೨. ಯಕ್ಷಗಾನದಲ್ಲಿ ಬಳಸುವ ಮದ್ದಲೆಯ ಎರಡೂ ಬದಿಗಳ ಸುತ್ತ ಇರುವ ಚರ್ಮದ ಸುತ್ತು (ದಕ.ಜಿ)

ಇಂಡಿಗೆ: ೧. ವಾದ್ಯಗಳ ಮುಚ್ಚಿಗೆಯ ಆಧಾರವಾಗಿರುವ ವೃತ್ತಾಕಾರದ ರಚನೆ (ದಕ.ಜಿ) ೨. ಹಿಂಡಿಗೆ; ತೆಂಗಿನ ಕಾಯಿಯ ಗೊಂಚಲು (ಉಕ.ಜಿ)

ಇಂಡಿಡು: ಇಂಡೆ ಹಾಕು; ಭೂತಗಳಿಗೆ ಬಲಿಹಾಕು; ಆಯಾರ ನೀಡು (ದಕ.ಜಿ)

ಇಂಡಿರೊಟ್ಟಿ: ಬೆಳೆ ಬೆಳೆದು ನಿಂತಾಗ ಸಂತೋಷಕ್ಕಾಗಿ ಮಾಡುವ ವನಭೋಜನದಲ್ಲಿ ಬಳಸುವ ಜೋಳದ ರೊಟ್ಟಿ (ಗುಲ್ಬ.ಜಿ)

ಇಂಡಿಸರ್ಪಣ: ಭೂತಾರಾಧನೆಯ ಕೊನೆಯಲ್ಲಿ ಇಂಡಿಯನ್ನು ಚೆಲ್ಲುವ ವಿಧಿ (ದಕ.ಜಿ)

ಇಂಡಿಹಾರಿಸುವುದು: ಭೂತಾರಾಧನೆಯ ಕೊನೆಯಲ್ಲಿ ಇಂಡಿಯನ್ನು ಅಲ್ಲಲ್ಲಿ ಚೆಲ್ಲುವುದು (ದಕ.ಜಿ)

ಇಂಡು: ಹಿಂಡು ೧. ಗುಂಪು ೨. ರಾಶಿ ೩. ಮಾಲೆ. **ಇರೂ:** *ಇಂಡೆ*

ಇಂಡೆ: ಹಿಂಡೆ; ರಾಶಿ; ಸಮೂಹ; ಗುಂಪು (ಶಿವ.ಜಿ)

ಇಂಡೆಕೂಳು: ೧. ಅಂತ್ಯಕ್ರಿಯೆಯ ಸಮಯದಲ್ಲಿ ಬಳಸುವ ಅನ್ನ ೨. ಸತ್ತವರಿಗೆ ಹನ್ನೊಂದನೆಯ ದಿನ ಇಡುವ ಕೂಳು ೩. ಶವಯಾತ್ರೆಯಲ್ಲಿ ಸ್ಮಶಾನಕ್ಕೆ ಹೋಗುವ ಮುಂಚೆ ಚಟ್ಟದ ಸುತ್ತ ಚೆಲ್ಲುವ ಅನ್ನ (ಮಂಡ್ಯ.ಜಿ).

ಇಂಡೇಕೂಳು ಬೇಸೋದು: ಸತ್ತವರಿಗೆ ಇಡಲು ಮಾಡುವ ಅನ್ನ. ವಿಧವೆಯಾದಾಕೆಯು ಹೊಸ ಮಡಕೆಯಲ್ಲಿ ಉಪ್ಪು ಹಾಕದೆ ಈ ಅನ್ನವನ್ನು ಬೇಯಿಸಬೇಕು (ಕೋಲಾ.ಜಿ)

ಇಂಡ್ಸೋದು: ಹಿಂಡಿಸುವುದು; ಮೈಯನ್ನು ಮಾಲೀಷು ಮಾಡುವುದು

ಇಂತಿ: ಹಿಂದಕ್ಕೆ ಉಳಿದದ್ದು; ಗೋಲಿ ಆಟದಲ್ಲಿ ಬಳಸುವ ಪದ (ಮಂಡ್ಯ.ಜಿ)

ಇಂದಾಪತ್ತು: ಮೋಸ (ದಕ.ಜಿ)

ಇಂದಿಗಿಕಟ್ಟು: ಹಗೇವು ಅಥವಾ ಪಳತದ ಒಳಭಾಗದಲ್ಲಿ ಕಣಿಕೆಯ ಸೂಡುಗಳನ್ನು ಹೊಂದಿಸುವುದು. **ನೋಡಿ–** ಇಂಡಿಗಿ

ಇಂದು ನಾಳೆ ಅಂತಾನಾ: ಸಾವಿನ ಅಂಚಿನಲ್ಲಿರುವ ವ್ಯಕ್ತಿ; ಸ್ವಲ್ಪ ದಿನಗಳಲ್ಲಿ ಸಾವು ಬರಬಹುದು ಎಂಬುದನ್ನು ಸೂಚಿಸಲು ಬಳಸುವ ಮಾತು (ಧಾರ.ಜಿ)

ಇಂದ್ರ: ೧. ದೇವತೆಗಳ ರಾಜ ೨. ಜೈನ ಪುರೋಹಿತ

ಇಂದ್ರತಾವೇ: ಇಂದ್ರಿಯದಿಂದ ಸುರಿದ ದ್ರವ; ವೀರ್ಯ (ಚಾಮ.ಜಿ)

ಇಂಪಣ/ಇಂಪ್ಣ: ೧. ಅಚ್ಚುಕಟ್ಟು (ಕೋಲಾ.ಜಿ) ೨. ಜೀರ್ಣ ೩. ಹಿತ (ಬೀದ.ಜಿ) ೪. ರುಚಿಕಟ್ಟಾದದ್ದು (ತುಮ.ಜಿ)

ಇಂಪ್ಣ: ನೋಡಿ– ಇಂಪಣ

ಇಂಪ್ಲ: ಸವಿ

ಇಂಬ: ನೋಡಿ– ಇಂಬು (ಶಿವ.ಜಿ). **ಪ್ರ:** ಅವರ ಮನಿ ಬಾಳ ಇಂಬೈತಿ (ಶಿವ.ಜಿ)

ಇಂಬಡಿಕೆ: ಮಡಿಕೆ; ಮಡಿಚಿದುದು; ಜೋಡಿಸಿದುದು.

ಇಂಬರಿಕೆ: ೧. ಕಚಕುಳಿ (ಉಕ) ೨. ಹಿಂದಕ್ಕೆ (ಮಂಡ್ಯ.ಜಿ). **ಇರೂ:** *ಇಂಬಳಿಕೆ; ಇಂಬಳಿ*

ಇಂಬಲ: ಹಿಂಬಲ; ಬೆಂಬಲ; ಇಂಬಾದ ಬಲ (ಚಾಮ.ಜಿ)

ಇಂಬಳೆ: ಹಿಂಬಳೆ. ಚಿನ್ನದ ಅಥವಾ ಬೆಳ್ಳಿಯ ದಪ್ಪ ಕೈಕಡಗ (ದಕ.ಜಿ)

ಇಂಬಾರುಎಡೆ: ಸತ್ತ ಹಿರಿಯರಿಗೆ ಸಂಬಂಧಿಸಿದ ಕಾರ್ಯಗಳಲ್ಲಿ ಇಡುವ ನೈವೇದ್ಯ (ಮಂಡ್ಯ.ಜಿ)

ಇಂಬಾಳೆ: ರುಚಿಯಾದ ಬಾಳೆ (ಮಂಡ್ಯ.ಜಿ)

ಇಂಬಿ: ನಿಂಬೆ. **ಪ್ರ:** ಇಂಬೀಯ ಬನದಲ್ಲಿ ಚಂದ್ರಾನ ಕೊಳದಲ್ಲಿ ಗಂಗೆಗೂ ಶಿವನಿಗೂ ಇನವಂದ....... **ಇರೂ:** *ಇಂಬೆ*

ಇಂಬಿಕೊರಡು: ಒಂದು ಬಗೆಯ ಮರ. ನೆಗಡಿ ಇತ್ಯಾದಿ ಖಾಯಿಲೆಗಳಿಗೆ ಔಷಧಿ ತಯಾರಿಸುತ್ತಾರೆ (ಬೆಂಗ.ಜಿ)

ಇಂಬಿಡು: ೧. ಒಪ್ಪವಾಗಿಡು ೨. ಗರ್ಭದಾನಮಾಡು

ಇಂಬು: ೧. ಅಚ್ಚುಕಟ್ಟು ೨. ಜಾಗ; ಎಡೆ; ದಾರಿ ೩. ಅಗಲ ೪. ವಿಶಾಲವಾದ ಕಾಡು ೫. ಆಸರೆ ೬. ಪ್ರತಿಫಲ (ದಕ.ಜಿ) ೭. ರಕ್ಷಣೆ; ೮. ಸ್ಥಳಾವಕಾಶ; ಅವಕಾಶ ೯. ಒತ್ತಾಸೆ; ಪ್ರೋತ್ಸಾಹ; ಉತ್ತೇಜನ ೧೦. ವಿಸ್ತಾರ ೧೧. ಶಕ್ತಿ; ಮಹಿಮೆ ೧೨. ಅವಕಾಶ

ಇಂಬುಡು: ಜಿಡುಕು; ಜಿಗಣೆಹುಳ (ದಕ.ಜಿ)

ಇಂಬುದಿಂಬು: ಆಸರೆ; ಪರಸ್ಪರ ಸಹಾಯ. **ಪ್ರ:** ಒಬ್ರುಗೊಬ್ರು ಇಂಬುದಿಂಬಾಗಿದ್ರೆ ಚಂದ (ಮೈಸೂ.ಜಿ)

ಇಂಬೇ: ಇಂಬು; ಸ್ಥಳ; ಜಾಗ (ತುಮ.ಜಿ)

ಇಂಬೇಬಿಡು: ದಾರಿ ಬಿಡು

ಇಂಬ್ರಿಕ: ಒಣಗು (ತುಮ.ಜಿ). **ಇರೂ:** *ಇಮರು*

ಇಂಬ್ಳ: ಇಂಬಳ; ದಟ್ಟ ಕಾಡು ಪ್ರದೇಶದಲ್ಲಿ ಮನುಷ್ಯ ಮತ್ತು ಪ್ರಾಣಿಗಳ ರಕ್ತ ಹೀರುವ ಒಂದು ಸಣ್ಣ ಜೀವಿ. **ಇರೂ:** *ಇಂಬಡು, ಜಿಡುಕು, ಜಿಗಣಿ (ಶಿವ.ಜಿ)*

ಇಂಮ್ಡ್ಹಾಗ: ಇಮ್ಮಂಡೆ ಹಾವು; ಎರಡು ತಲೆಯ ಹಾವು (ಉಕ.ಜಿ)

ಇಂರು/ಇಮರು: ಇಂಗು; ಒಣಗು. **ಪ್ರ:** ನೀರೆಲ್ಲಾ ಇಮರಿದ ಮೇಲೆ ಒಲೆಯಿಂದ ಅನ್ನವನ್ನು ಇಳಿಸು

ಇಕ್ಕಟ್ಟು: ೧. ಇರುಕಲು; ಚಿಕ್ಕಜಾಗ ೨. ತೊಂದರೆ; ಹಿಂಸೆ ೩. ಸಂದಿಗ್ಧ ಸ್ಥಿತಿ; ಸಂಕಟ

ಇಕ್ಕಡಿ (ಕ್ರಿ): ೧. ಎರಡಾಗಿ ಕಡಿ; ಎರಡು ತುಂಡುಮಾಡು ೨. ಎರಡು ಕಡೆ ೩. ಈ ಕಡೆ (ದಕ.ಜಿ/ಹಾವೇ.ಜಿ). **ಇರೂ:** *ಇಕ್ಕಡೆ*

ಇಕ್ಕಡು: ಒಂದು ವಿಧದ ತೇಗು; ಬಿಕ್ಕಳಿಕೆ (ದಕ.ಜಿ)

ಇಕ್ಕರ: ೧. ಮನೆ (ಬಳ್ಳಾ.ಜಿ) ೨. ಎರಡು ಕಲ್ಲುಗಳ ನಡುವಿನ ಸಂದಿ (ಶಿವ.ಜಿ) ೩. ಸಂದುಗೊಂದು

ಇಕ್ಕರಿಸು: ೧. ಇಕ್ಕಡಿಸು; ಬಾರಿಸು; ಬಲವಾಗಿ ಹೊಡೆ; (ಮೈಸೂ.ಜಿ) ೨. ಎರಡು ಸಾಲಾಗು; ಎರಡು ಭಾಗವಾಗು ೩. ಅಗಲಿಸು

ಇಕ್ಕರು: ಭೂಮಿ

ಇಕ್ಕಲಹಾಕು (ಕ್ರಿ): ಕಣದಲ್ಲಿ ತೆನೆಸಹಿತದ ಕಂಕಿಗಳನ್ನು ತೆನೆ ಬಿಡಿಸುವ ಸಲುವಾಗಿ ಕೆಲಸಗಾರ್ತಿಯರ ಮುಂದೆ ಹರಡು

ಇಕ್ಕಲು: ೧. ಮೆದೆ; ರಾಶಿ. **ಪ್ರ:** ಸೌದೆ ಇಕ್ಕಲು, ಜೋಳದ ಸೊಪ್ಪೆ ಇಕ್ಕಲು (ದಾವ.ಜಿ) ೨. ಹಿಕ್ಕಲು; ಸಣ್ಣ ಕಾಲುವೆ ೩. ಕೊಳೆ; ಮೈಲಿಗೆ (ಚಾಮ.ಜಿ)

ಇಕ್ಕಲುಬಟ್ಟೆ: ಹೊಲಸುಬಟ್ಟೆ; ಕೊಳೆಬಟ್ಟೆ; ಮೈಲಿಗೆ ಬಟ್ಟೆ (ಚಾಮ.ಜಿ)

ಇಕ್ಕಲುಹಾಕು: ಗೂಡುಹಾಕು (ಬೆಳ.ಜಿ)

ಇಕ್ಕಳ: ೧. ಕಾಯಿಸಿದ ವಸ್ತುಗಳನ್ನು ಬೆಂಕಿಯಿಂದ ತೆಗೆಯಲು ಹಾಗೂ ಹಿಡಿದುಕೊಳ್ಳಲು ಬಳಸುವ ಉಪಕರಣ (ಬಳ್ಳಾ.ಜಿ) ೨. ಕಾಳು ತುಂಬಿದ ಎರಡು ಚೀಲಗಳ ಮಾನ (ರಾಯ.ಜಿ) ೩. ಬಾಯಿಕಟ್ಟಿದ ನಾಲ್ಕು ಚೀಲಗಳ ಅಳತೆ (ರಾಯ.ಜಿ). **ಇರೂ:** *ಇಕ್ಕ*



ಇಕ್ಕಳಗದ್ದಿ: ೧. ಬತ್ತದ ಗದ್ದೆ ೨. ಗದ್ದೆಯ ಒಂದು ನಿರ್ದಿಷ್ಟ ಅಳತೆ; ನೂರಾ ಅರವತ್ತು ಸೇರು ಬತ್ತದ ಬೀಜ ಹಾಕಿ ಬೆಳೆಸಬಹುದಾದಷ್ಟು ವಿಸ್ತೀರ್ಣದ ಗದ್ದೆ (ಬಿಜಾ.ಜಿ)

ಇಕ್ಕಾಡುಕಟ್ಟು: ಮುಷ್ಟಿಕಟ್ಟು (ಮೈಸೂ.ಜಿ)

ಇಕ್ಕಿ: ೧. ಮಡಕೆಯ ತಳದಲ್ಲಿ ಇಡುವ ಸಾಧನ; ತೆಕ್ಕೆ; ಸಿಂಬೆ ೨. ಹಿಕ್ಕೆ; ಪ್ರಾಣಿಪಕ್ಷಿಗಳ ಮಲವಿಸರ್ಜನೆ

ಇಕ್ಕು (ಕ್ರಿ): ೧. ಬಡಿಸು; ನೀಡು. **ಪ್ರ: ಪ್ರ:** ಇಕ್ಕುವವಳು ನಮ್ಮವಳಾದರೆ ಕೊಟ್ಟಿಗೆಯಲ್ಲಾದರೂ ಉಂಡೇನು ೨. ಇಡು. **ಪ್ರ:** ಆ ಪಾತ್ರೆನ ಅಲ್ಲಿಕ್ಕು ೩. ಮುಚ್ಚು **ಪ್ರ:** ಕದ ಇಕ್ಕು, ಬಾಗಿಲಿಕ್ಕು ೪. ತದಕು; ಗುದ್ದು; ಥಳಿಸು; ಹೊಡೆ. **ಪ್ರ:** ಅವನಿಗೆ ಚೆನ್ನಾಗಿ ಇಕ್ಕದ್ರೆ ಬುದ್ಧಿ ಬರೋದು ೫. ಧರಿಸಿಕೊ; ತೊಟ್ಟುಕೊ ೬. ತಲೆಬಾಚಿಕೊ (ನಾ) ೭. ಸಿಕ್ಕು; ಗಂಟು (ರಾಯ.ಜಿ)

ಇಕ್ಕುಪೆಟ್ಟಿಗೆ/ಇಕ್ಪೆಟ್ಗೆ: ೧. ಜನಪದಕಥೆಗಳಲ್ಲಿ ಬರುವ ಒಂದು ಮಾಂತ್ರಿಕ ಪೆಟ್ಟಿಗೆ. ಇದನ್ನು ತೆರೆದ ಕೂಡಲೆ ದೊಣ್ಣೆಯೊಂದು ಹೊರಬಂದು ಮೋಸಗಾರನಿಗೆ ಹೊಡೆಯುತ್ತದೆ ೨. ಅಕ್ಷಯಪಾತ್ರೆ (ಮಂಡ್ಯ.ಜಿ)

ಇಕ್ಕುಮದ್ದು/ಇಕ್‌ಮದ್ದು/ಇಕ್ಮದ್ದು: ಕೈಮದ್ದು; ಶತ್ರುಗಳಿಗೆ ಆಹಾರದಲ್ಲಿ ವಿಷ ಪ್ರಯೋಗ ಮಾಡುವುದು (ದಕ.ಜಿ). **ಪ್ರ:** ಇಕ್ಮದ್ದು ಹಾಕುವವರು ನರಳಿ ನರಳಿ ಸಾಯ್ತಾರೆ (ಶಾಪದ ನುಡಿ)

ಇಕ್ಕುಳಪರುಪ: ೧. ಒಂದು ಬಗೆಯ ಸಾರು ೨. ಒಂದು ಅಳತೆಯ ಸಾರು (ತುಮ.ಜಿ)

ಇಕ್ಕೆ: ಹಿಕ್ಕೆ ೧. ವಾಸಸ್ಥಾನ ೨. ಕುರಿ, ಆಡುಗಳ ಮಲ (ದಕ)

ಇಕ್ಕೆಕಳ್ಳು: ಕೊಬ್ಬುಮಿಶ್ರಿತ ಕರುಳು (ತುಮ.ಜಿ/ಮಂಡ್ಯ.ಜಿ)

ಇಕ್ಕೆದಾಣ: ಹಿಕ್ಕೆದಾಣ; ಹಕ್ಕಿಪಕ್ಷಿಗಳು ಆಶ್ರಯ ಪಡೆಯುವ ಸ್ಥಳ

ಇಕ್ಕೇರಿಕೋಲು: ಇಕ್ಕೇರಿ ರಾಜರು ಬಳಕೆಗೆ ತಂದ ಎರಡು ಅಡಿ ಏಳು ಇಂಚು ಉದ್ದದ ಅಳತೆಗೋಲು (ದಕ.ಜಿ)

ಇಕ್ಕೇರಿಚಕ್ರ: ಇಕ್ಕೇರಿ ರಾಜರು ಚಲಾವಣೆಗೆ ತಂದ ನಾಣ್ಯ (ದಕ.ಜಿ)

ಇಕ್ಕೇರಿದಂಡು: ಇಕ್ಕೇರಿ ಅರಸರ ಸೈನ್ಯ

ಇಕ್ಕೋಶಾಸ್ತ್ರ: ಗೊಂಡರಲ್ಲಿ ಮದುಮಗನಿಗೆ ಮದರಂಗಿಯಿಂದ ಚಿತ್ರ ಬಿಡಿಸುವ, ಅರಿಶಿನ ಹಚ್ಚುವ ಶಾಸ್ತ್ರ (ಉಕ.ಜಿ)

ಇಕ್ವಾ: ನೋಡಿ– ಇಕ್ಕಳ

ಇಕ್‌ಪಟ್ಟು: ಕಾರುಹಬ್ಬದ ಸಂದರ್ಭದಲ್ಲಿ ಬಳಸುವ ಕಪ್ಪಿನಂತಹ ವಸ್ತು. ಇದನ್ನು ಮನೆಯ ಬಾಗಿಲಿಗೆ, ದನಗಳಿಗೆ ಹಚ್ಚುತ್ತಾರೆ (ಮಂಡ್ಯ.ಜಿ)

ಇಕ್ಪೆಟ್ಗೆ: ನೋಡಿ– ಇಕ್ಕುಪೆಟ್ಟಿಗೆ

ಇಕ್ಮದ್ದು: ನೋಡಿ– ಇಕ್ಕುಮದ್ದು

ಇಕ್‌ಮದ್ದು: ನೋಡಿ– ಇಕ್ಕುಮದ್ದು

ಇಕ್ರ: ಮಾಳಿಗೆ ಮನೆ (ತುಮ.ಜಿ)

ಇಕ್ಲ: ನೋಡಿ– ಇಕ್ಲು

ಇಕ್ಲು/ಇಕ್ಲ: ೧. ಗದ್ದೆಗಳ ನಡುವೆ ಇರುವ ಸಣ್ಣ ಕಾಲುವೆ ಅಥವಾ ಕಡುಗು (ಮಂಡ್ಯ.ಜಿ) ೨. ಗದ್ದೆಯ ಪಾತಿಗಳಿಗೆ ನೀರನ್ನು ಹಾಯಿಸುವುದಕ್ಕಾಗಿ ತೋಡುವ ಸಣ್ಣಕಾಲುವೆ; ಜಿಗಳು ೩. ರಾಶಿ; ಬಣವೆ ೪. ಗೂಡು (ಬಿಜಾ.ಜಿ/ಗುಲ್ಬ.ಜಿ)

ಇಗ್‌ಳಾ: ಹೆಗ್ಗಣ (ಉಕ). **ಇರೂ:** *ಹೆಗ್ಳು*

ಇಗಚಿಕುಡಿ: ಒಂದು ಬಗೆಯ ಔಷಧೀಯ ಸಸ್ಯ

ಇಗಳಿ: ಸಣ್ಣ ಸಣ್ಣ ಎಲೆಗಳಿರುವ, ಕಳ್ಳಿಯ ಹಾಗೆ ಬೆಳೆಯುವ ಕಳೆಸಸ್ಯ. ಇದನ್ನು ದನಗಳು ತಿನ್ನುವುದಿಲ್ಲ ಇದರ ಗೆಲ್ಲುಗಳು ಎಲ್ಲೇ ಬಿದ್ದರೂ ಮತ್ತೆ ಚಿಗುರುತ್ತವೆ. ಬೇಗ ಒಣಗುವುದಿಲ್ಲ (ಬೀದ.ಜಿ). **ಇರೂ:** ಇಗಳೇ, ಇಗ್ಗಳ್ಳಿ

ಇಗುತ್ತಿ: *ಕೇರೇಶಿಯ ಔರಿಕ್ಯುಲೇಟ:* ವೀಳೆಯ ಬಳ್ಳಿ (ದಕ.ಜಿ)

ಇಗ್ಗಡ: ೧. ಅನಾರೋಗ್ಯ ೨. ಇಕ್ಕಟ್ಟು ೩. ಸಹಿಸಿಕೊಳ್ಳಲಾರದ (ಮಂಡ್ಯ.ಜಿ)

ಇಗ್ಗರ: ನೋಡಿ– ಇಗ್ಗರಿ

ಇಗ್ಗರಿ/ಇಗ್ಗರ: ಕಾಟ; ಕಷ್ಟ (ಗುಲ್ಬ.ಜಿ). **ಪ್ರ:** ಅತ್ತೆ ಮನೆಯ ಇಗ್ಗರಿ ಬಾಳ

ಇಗ್ಗಳ: ನೋಡಿ– ಇಕ್ಕಳ

ಇಗ್ಗಾಲಿ: ಎರಡು ಗಾಲಿ (ಶಿವ.ಜಿ)

ಇಗ್ಗೀನ: ವಿಘ್ನ (ಉಕ)

ಇಗ್ಗುತಪ್ಪ: ಕೊಡವರ ಮನೆದೇವರು (ಕೊಡ.ಜಿ)

ಇಗ್ಗೂಣಿ: ಮೀನು ಹಿಡಿಯುವ ಒಂದು ಸಾಧನ. **ಇರೂ:** *ಇರಗುಣಿ*

ಇಗ್ನ: ವಿಘ್ನ; ಅಡಚಣೆ; ತೊಂದರೆ

ಇಗ್ರ: ವಿಗ್ರಹ (ಚಾಮ.ಜಿ)

ಇಚ/ಇಸ: ೧. ವಿಷ (ಉಕ) ೨. ಕಹಿ; ಒಗಚು. **ಪ್ರ:** ಸೌತೆಕಾಯಿ ಇಸ ತೆಗದು ಆಮೇಲೆ ಹಚ್ಚು (ಬೆಂಗ್ರಾ.ಜಿ)

ಇಚಾರನಾರಿ: ವೇಶ್ಯೆ

ಇಚುಕು (ಕ್ರಿ): ಹಿಚುಕು; ಅಮುಕು; ಹಿಂಡು (ಮಂಡ್ಯ.ಜಿ)

ಇಚ್ಚಡಿ: ೧. ಎರಡು ಚಡಿ ೨. ಎರಡು ಪಟ್ಟು (ಉಡು.ಜಿ)

ಇಚ್ಚಣ: ಒಂದು ಜಾತಿಯ ಮೀನು (ದಕ.ಜಿ)

ಇಚ್ಚಣಿಗೆ: ನಿಚ್ಚಣಿಗೆ; ಏಣಿ; ಮೆಟ್ಟಿಲು (ಉಕ.ಜಿ). **ಇರೂ:** *ಇಚ್ಚೆಣ್ಗೆ, ಇಚ್ಚಣಗಿ*

ಇಚ್ಚಲತಟ್ಟೆ: ಈಚಲ ಗರಿಯಿಂದ ತಯಾರಿಸಿದ ಬುಟ್ಟಿ (ಗುಲ್ಬ.ಜಿ)

ಇಚ್ಚಳಕಿ: ನೆರಿಗೆ (ಉಕ.ಜಿ)

ಇಚ್ಚಾಲ್ ಹೊಡೆ: ಮೊದಲಬಾರಿ ನೇಗಿಲು ಹೊಡೆದ ನಂತರ ಅಡ್ಡಡ್ಡಲಾಗಿ ಹೊಡೆಯುವ ಎರಡನೆಯ ಸಾಲು (ಬಳ್ಳಾ.ಜಿ)

ಇಚ್ಚಾಲು ಭೂಮಿ: ಎರಡು ಸಾಲು ಭೂಮಿ (ಉಕ.ಜಿ)

ಇಜಾರು: ೧. ಚಲ್ಲಣ (ದಕ.ಜಿ); ಚಣ್ಣ; ಪೈಜಾಮ (ಬೀದ.ಜಿ). ೨. ಯಕ್ಷಗಾನದಲ್ಲಿ ಹಾಸ್ಯಗಾರನು ಧರಿಸುವ ಒಳಉಡುಪು. **ಇರೂ:** ಇಜಾರ

ಇಜಿನ್‌ದ ಮರ: *ಸಿನೆಮೋಮಮ್ ಮಲಬಾತ್ರಮ್:* ಒಂದು ಸಂಭಾರ ಪದಾರ್ಥ; ದಾಲ್ಚಿನ್ನಿ (ದಕ.ಜಿ)

ಇಜುವಿನಗೆಡ್ಡೆ: ಒಂದು ಔಷಧೀಯ ಸಸ್ಯ

ಇಜ್ಜಗೂಲು: ಕಂಬಳಿಯ ನೇಯ್ಗೆಯಲ್ಲಿ ಹುಣಿಸೆ ಸರಿಯನ್ನು ಕಂಬಳಿಗೆ ಲೇಪಿಸಲು ಬಳಸುವ ಗರಿಯ ಸಾಧನ (ತುಮ.ಜಿ)

ಇಜ್ಜಲು/ಇಜ್ಲು: ಆರಿದ ಕೆಂಡ; ಇದ್ದಿಲು (ಮೈಸೂ.ಜಿ)

ಇಜ್ಜಾಲು: ಎರಡನೆ ಉಕ್ಕೆ

ಇಜ್ಜಿಗುಜ್ಜಿ: ಮಾಟಮಂತ್ರಕ್ಕೆ ಸಂಬಂಧಪಟ್ಟ ಆಚರಣೆ (ಕೊಡ.ಜಿ)

ಇಜ್ಜೋಡು: ಹೊಂದಾಣಿಕೆ ಇಲ್ಲದೇ ಇರುವುದು (ಬೆಳ.ಜಿ)

ಇಜ್ರ: ಎರಡುಸಲ (ದಕ.ಜಿ)

ಇಜ್ಲುಬಗ್ಗು: ಇಜ್ಲುಮಸಿ; ಇದ್ದಲಿನ ತುಂಡು (ಚಿತ್ರ.ಜಿ). **ಇರೂ:** *ಮಸಿಗೆಂಡೆ*

ಇಟಗಾಣಿ: ಒಂದು ಬಗೆಯ ಹುಲ್ಲು; ಅಲುಬು. ದನಗಳ ಮೇವಾಗಿ ಬಳಸುವ ಕಳೆಸಸ್ಯ (ಗುಲ್ಬ.ಜಿ/ಬಳ್ಳಾ.ಜಿ)

ಇಟರೆ: ಭರ್ತಿ. **ಪ್ರ:** ತಿಂದೂ ತಿಂದೂ ಹೊಟ್ಟೆ ಇಟರೆಯಾಗಿಬಿಟ್ಟಿದೆ (ಮಂಡ್ಯ.ಜಿ)

ಇಟಿಗೆರ್ಸೆ: ಬೀಸುವಕಲ್ಲು (ತುಮ.ಜಿ)

ಇಟೋಬಾ: ವಿಠ್ಠೋಬ; ವಿಠ್ಠಲ ತಂದೆ (ಧಾರ.ಜಿ)

ಇಟ್ಕಿ: ಇಟ್ಟಿಗೆ (ದಕ.ಜಿ)

ಇಟ್ಕೋಲ್: ಹಿಟ್ಟಿನ ಕೋಲು; ಮುದ್ದೆ ಮಾಡಲು ಬಳಸುವ ನೇರವಾದ ಕೋಲು; ದೊಣ್ಣೆ (ಕೋಲಾ.ಜಿ)

ಇಟ್ಗ (ಕ್ರಿ): ಇಟ್ಟುಕೊಳ್ಳು; ಅನೈತಿಕ ಸಂಬಂಧ ಬೆಳೆಸು (ರಾಯ.ಜಿ)

ಇಟ್‌ಗಲ್ಲು: ಹಿಟ್ಟುಗಲ್ಲು; ಕುಟ್ಟಿದರೆ ಪುಡಿಯಾಗುವ ಒಂದು ಬಗೆಯ ಕಲ್ಲು (ಮಂಡ್ಯ.ಜಿ)

ಇಟ್ಗೆಕಟ್ಟೋದು: ಇಟ್ಟಿಗೆ ಕಟ್ಟುವುದು; ಕರುವನ್ನು ಈದ ನಂತರ ನಲವತ್ತೆಂಟು ಗಂಟೆಗಳ ನಂತರವೂ ಹಸುವಿಗೆ ಸತ್ತೆ ಬೀಳದಿದ್ದರೆ ಅದಕ್ಕೆ ಇಟ್ಟಿಗೆಯನ್ನು ಕಟ್ಟಿ ಅದರ ಭಾರಕ್ಕೆ ಸತ್ತೆ ಬೀಳುವಂತೆ ಮಾಡುತ್ತಾರೆ (ಮಂಡ್ಯ.ಜಿ)

ಇಟ್ಟಂಗಿಭಟ್ಟಿ: ಇಟ್ಟಿಗೆ ಸುಡುವ ಗೂಡು; ಆಯತಾಕಾರದ ಮಣ್ಣಿನ ಹೆಂಟೆಗಳನ್ನು ಹೊಂದಿಸಿಟ್ಟು ಒಳಗಡೆ ಸೌದೆ, ಇದ್ದಲು, ಕಲ್ಲಿದ್ದಲು ಹಾಕಿ ಸುಡುವ ಆವುಗೆ (ಬೆಳ.ಜಿ)

ಇಟ್ಟಂಗಿರೋಗ: ಗೋಧಿಗೆ ಬೀಳುವ ಒಂದು ರೋಗ

ಇಟ್ಟಗಾರ: ಹೆಣ್ಣಿನ ಮೇಲೆ ಕಣ್ಣು ಹಾಕುವಾತ

ಇಟ್ಟಗೆರಿಸಿ: ಹಿಟ್ಟಿನಗೆರಸಿ; ಊಟ ತುಂಬುವ ಬಿದಿರಿನ ಪುಟ್ಟಿ (ತುಮ.ಜಿ)

ಇಟ್ಟಡಕ: ಗುಂಪು; ಸಂದಣಿ

ಇಟ್ಟರಿ: ಒಂದು ಸಲಕರಣೆ; ಇದರ ದವಡೆಯಂತಹ ರಚನೆಗಳು ಹಿಂದೆ ಅಥವಾ ಮುಂದೆ ಚಲಿಸಿ ಮಧ್ಯೆ ಇರಿಸಿದ ವಸ್ತುವನ್ನು ಬಿಗಿಯುವ ಮತ್ತು ಸಡಿಲ ಬಿಡುವ ಕೆಲಸ ಮಾಡುತ್ತವೆ (ದಕ.ಜಿ)

ಇಟ್ಟಲ ರುಕುಮಾಯಿ: ವಿಠಲ ಮತ್ತು ರುಕ್ಮಿಣಿ ತಾಯಿ (ಧಾರ.ಜಿ)

ಇಟ್ಟಾಡೋಕುಳಿ: ಇಟ್ಟಾಡುವ ಓಕುಳಿ; ಎರಚಾಡುವ ಬಣ್ಣದ ನೀರು

ಇಟ್ಟಾಣಿಹುಲ್ಲು: ಇಬ್ಬನಿ ಕೂತಿರುವ ಹುಲ್ಲು



ಇಟ್ಟಿ: ೧. ಈಟಿ; ಒಂದು ಬಗೆಯ ಆಯುಧ ೨. ಸೀಗಡಿ (ದಕ.ಜಿ) ೩. ಒಂದು ಜಾತಿಯ ಮರ; ಹೊಟ್ಟೆನೋವಿಗೆ ಮದ್ದಾಗಿ, ಜಂತುನಾಶಕವಾಗಿ ಇದರ ಚಕ್ಕೆ ಬಳಸುತ್ತಾರೆ (ಚಾಮ.ಜಿ) ೪. ನೊಣ (ಕೋಲಾ.ಜಿ)

ಇಟ್ಟಿಗೆಅಚ್ಚು: ಮಣ್ಣಿನ ಮುದ್ದೆಯಿಂದ ಇಟ್ಟಿಗೆ ಮಾಡುವ ಉಪಕರಣ

ಇಟ್ಟಿಗೆಬಿಡು (ಕ್ರಿ): ಬಿತ್ತುವ ಮೊದಲು ಬೀಜಗಳು ಕೆಡದಂತೆ ಮಾಡಲು ಅವುಗಳನ್ನು ಕಣದಲ್ಲಿ ಮೂರ್‍ನಾಲ್ಕು ರಾತ್ರಿ ಇಬ್ಬನಿಯಲ್ಲಿ ನೆನೆಯಲು ಬಿಡುವುದು

ಇಟ್ಟಿಗ್ಗೋರು: ಬೇಡ ಸಮುದಾಯದ ಒಂದು ಬಳಿ; – ಒಳಪಂಗಡ

ಇಟ್ಟಿಲು: ಹಾಲು ಕರೆವ ದನಗಳನ್ನು ಕೂಡುವ ಕೊಟ್ಟಿಗೆ

ಇಟ್ಟು: ಹಿಟ್ಟು; ಮುದ್ದೆ (ಶಿವ.ಜಿ/ಚಾಮ.ಜಿ). **ಪ್ರ:** ವೊತಾರೇನೆ ಐಕ್ಳು ಇಟ್ಮಾಡ್ಕಂಡ್ ಉಂಡ್ಕಂಡ್ ನಮ್ಮಾವ ಗಾಡಿ ಕಟ್ಕಂಬತ್ತನೆ ಅಂತ ಕುಸಿಯಾಗಿ ದಾರಿ ನೋಡ್ತಿದ್ವೋ

ಇಟ್ಟುಬಾನೆ: ಹಿಟ್ಟಿನಬಾನಿ; ಮುದ್ದೆ ಮಾಡುವ ದೊಡ್ಡ ಮಡಕೆ (ಕೋಲಾ.ಜಿ)

ಇಟ್ಟುಮಡಿಕೆ: ಹಿಟ್ಟಿನಮಡಿಕೆ; ಮುದ್ದೆ ಮಾಡುವ ಮಡಕೆ (ಕೋಲಾ.ಜಿ)

ಇಟ್ಟುಶಿಗುಳೆ: ಎಳ್ಳಿನ ಉಂಡೆ; ಚಿಗಳಿ (ತುಮ.ಜಿ)

ಇಟ್ಟೇವು: *ಕ್ಲೆರೋಡೆಂಡ್ರಮ್ ವಿಸ್ಕೋಸಮ್*: ಬಸವನ ಪಾದ; ಇದೊಂದು ಔಷಧೀ ಸಸ್ಯ. ಕಜ್ಜಿಗೆ ಔಷಧ, ಬಾಣಂತಿ ಕಷಾಯಕ್ಕೆ ಇದರ ಬೇರು ಬಳಕೆಯಾಗುತ್ತದೆ (ದಕ.ಜಿ)

ಇಟ್ಟೋಸ್ನುದು: ಹಿಟ್ಟು ಹೊಂದಿಸು; ಕುದಿಯುತ್ತಿರುವ ನೀರಿಗೆ ರಾಗಿಹಿಟ್ಟನ್ನು ಹಾಕಿ ದೊಣ್ಣೆಯ ಸಹಾಯದಿಂದ ಗಂಟಿಲ್ಲದಂತೆ ತಿರುಗಿಸುವ ಕ್ರಿಯೆ (ಮಂಡ್ಯ.ಜಿ)

ಇಟ್ನೆಸ್ರು: ಹಿಟ್ಟಿನಎಸರು; ಹಿಟ್ಟು ಮಾಡುವ ಮೊದಲು ಕುದಿಸುವ ನೀರು (ದಕ)

ಇಟ್ಹೊತ್ತು: ಹಿಟ್ಟಿನ ಹೊತ್ತು. ಮಧ್ಯಾಹ್ನ ಹಾಗೂ ರಾತ್ರಿಯ ಊಟದ ಸಮಯ

ಇಟ್‌ಬಂಡೆ: ಮುದ್ದೆ ಕಟ್ಟಲು ಬಳಸುವ ಕಲ್ಲು; ಹಾಸುಗಲ್ಲು (ಕೋಲಾ.ಜಿ). **ಇರೂ:** *ಹಸಿಕಲ್ಲು*

ಇಟ್ರಂಗ: ಪೆಂಗ; ದಡ್ಡ (ಉಕ)

ಇಟ್ಲ: ಪಿಂಟಿ; ಜಗಳ ಹಚ್ಚುವವ (ತುಮ.ಜಿ)

ಇಟ್ಲಗೆಮ್ಮು: ನಾಯಿಕೆಮ್ಮು (ಬಿಜಾ.ಜಿ/ಉಕ.ಜಿ)

ಇಟ್ಲಹುಡಿ: ಹೋರಿಯ ಕೂಗು (ಉಕ)

ಇಟ್ಹೆಸ್ರು/ಇಟ್‌ಹೆಸ್ರು: ಹುಟ್ಟಿದಾಗ ಇಟ್ಟ ಹೆಸರು; ಮೂಲ ಹೆಸರು; ಚಾಲ್ತಿಯಲ್ಲಿರುವ ಹೆಸರು (ದಕ.ಜಿ) **ಇರೂ:** *ಇಟ್ಹೆಸ್ರು*

ಇಡಕರ: ಅಗಲ; ಉದ್ದ ಕಡಿಮೆ ಇರುವುದು (ಬೆಳ.ಜಿ)

ಇಡಕಲುಚಿತ್ತಾರ: ಒಲೆಗೆ ಹೊಂದಿಕೊಂಡಂತೆ ಇರುವ ನೀರಿನ ಗಡಿಗೆಯ ಬಳಿ ಹಾಕುವ ರಂಗೋಲಿ (ಬಳ್ಳಾ.ಜಿ)

ಇಡಕಲ್ಲು: ಅನ್ನ, ಪಲ್ಯ ಇತ್ಯಾದಿಗಳನ್ನು ಇಟ್ಟುಕೊಳ್ಳಲು ಮಾಡುವ ಜಾಗ; ಇಡುಕಲು

ಇಡಗರ: ಹೆಚ್ಚುಗಾರಿಕೆ; ಅದ್ದೂರಿ

ಇಡಗಲು/ಇಡಗೋಲು: ಹಿಡುಗಲು; ಕಸಪೊರಕೆ (ಮೈಸೂ.ಜಿ). **ಇರೂ:** *ಹಿಡಿ*

ಇಡಗಲ್ಮಂಡಿ: **ನೋಡಿ–** ಇಡುಗ್ಲು

ಇಡಗಾಯಿ: ವಿಶೇಷ ಸಂದರ್ಭಗಳಲ್ಲಿ, ಪೂಜೆ, ದೇವರ ಉತ್ಸವಗಳಲ್ಲಿ, ಜೋಳದ ಹಂತಿಯ ಸಂದರ್ಭದಲ್ಲಿ, ದೃಷ್ಟಿ ನಿವಾಳಿಸಿ ನೆಲಕ್ಕೆ ಅಪ್ಪಳಿಸಿ ಒಡೆಯುವ ತೆಂಗಿನಕಾಯಿ. **ಇರೂ:** *ಈಡುಗಾಯಿ, ಇಡಿಗಾಯಿ, ಇಡುಗಾಯಿ*

ಇಡಗಿಚ್ಚು: ಒಡಲಕಿಚ್ಚು; ಕೋಪ; ಮುನಿಸು (ಉಕ.ಜಿ)

ಇಡಗು (ಕ್ರಿ): ಎಡವು; ಎಡವುವಿಕೆ (ಉಕ.ಜಿ)

ಇಡಗೋಲು: **ನೋಡಿ–** ಇಡಗಲು

ಇಡತ್ಸಮಾತಾಡು: ಕೊಂಕುಮಾತಾಡು; ಜರಿದುಮಾತಾಡು

ಇಡಪುಡಿ: ಚೂರುಚೂರು; ಹುಡಿಹುಡಿ

ಇಡಬು: ಕುಂಬಾರನ ತಿಗರಿಗೆ ಆಧಾರವಾಗಿರುವ ಕಬ್ಬಿಣ ಅಥವಾ ಕಲ್ಲಿನ ಅಡಿಮಣೆ; ಅಡಿಗಲ್ಲು (ರಾಮ.ಜಿ)

ಇಡಮಾಡು: ಹಿಡಮಾಡು; ಹೋರಿ ಟಗರು ಮುಂತಾದ ಗಂಡು ಪ್ರಾಣಿಗಳ ಬೀಜ ಒಡೆಯುವಿಕೆ (ದಕ.ಜಿ)

ಇಡರು: ತೊಂದರೆ; ಎಡರು (ಬೆಂಗ್ರಾ.ಜಿ)

ಇಡಲೂ: ಸೀರೆಯ ಒಂದು ಬಗೆಯ ನೆರಿಗೆ (ಉಕ)

ಇಡಸಲುಬೇಟೆ: ಕಾಡುಹಂದಿಗಳನ್ನು ಬೇಟೆಯಾಡಲು ಬಳಸುವ ತಂತ್ರ. ಮರದ ಗಳುಗಳನ್ನು ಬಳಸಿ ಚಪ್ಪರ ನಿರ್ಮಿಸಿ ಅದರಡಿಯಲ್ಲಿ ಸೂತ್ರಗಳನ್ನಿಟ್ಟು ಹಂದಿಗಳಿಗೆ ಪ್ರಿಯವಾದ ಬೈನೆ ಮರದ ಒಳಗಿನ ತಿರುಳನ್ನು ಹರಡಿ ಇಡಲಾಗುತ್ತದೆ. ಹಂದಿಗಳು ತಾವಾಗಿ ಮೇವನ್ನು ಅರಸಿಕೊಂಡು ಬಂದು ಇದರೊಳಗೆ ಬೀಳುತ್ತವೆ. (ಉಕ.ಜಿ)

ಇಡಸ್ಲು: ೧. ಆಕಳು, ಎಮ್ಮೆಗಳ ಹಾಲು ಕರೆಯುವಾಗ ಒದೆಯದಂತೆ ತಡೆಯಲು ಮಾಡಿದ ತಡೆಗಟ್ಟೆ ೨. ಕೂಡುವಟಿಗೆ (ಮೈಸೂ.ಜಿ)

ಇಡಾಳೆ: ಅಡಕೆಪಟ್ಟೆ; ಹೊಡಾಳೆ

ಇಡಿ (ಕ್ರಿ): ೧. ತುರುಕು ೨. ಬಿಗಿಗೊಳಿಸು ೩. ಗುದ್ದು ೪. ಗಟ್ಟಿಮಾಡು ೫. ಒನಕೆಯಿಂದ ಕುಟ್ಟು (ಮಂಡ್ಯ.ಜಿ)

ಇಡಿಕಚ್ಚೆ: ೧. ಯಕ್ಷಗಾನದಲ್ಲಿ ಕಾಲುಗಂಟಿನವರೆಗೆ ಮುಚ್ಚಿ ಎರಡೂ ಕಾಲುಗಳನ್ನು ಆವರಿಸುವ ಕಚ್ಚೆ ೨. ಗಂಡುಕಚ್ಚೆ; ವೀರಕಚ್ಚೆ ೩. ಅರೆಕಚ್ಚೆಯಲ್ಲದ್ದು

ಇಡಿಕೆ: ಮಜ್ಜಿಗೆ ಕಡೆಯಲು ಕಡಗೋಲು ಕಟ್ಟುವ ಕಂಬ (ಉಕ.ಜಿ)

ಇಡಿಗಂಟು: ೧. ಠೇವಣಿ ಇಟ್ಟಹಣ; ಕೂಡಿಟ್ಟ ಹಣ ೨. ಹೆರವರ ಬಳಿ ಇರಿಸಿದ ದ್ರವ್ಯ; ಚರಾಸ್ತಿ

ಇಡಿಗಾಯಿ ಹರಕೆ: ಗೊರವರು ಮಾಟದ ಪರಿಣಾಮ ನಿವಾರಣೆಯಾಗಲು ಕಟ್ಟಿಕೊಳ್ಳುವ ಹರಕೆ. ಗುಡಿಯ ಬಾಗಿಲಲ್ಲಿ ನಿಂತು ದೇವರಿಗೆ ತಾಗುವಂತೆ ಇಡಿಯ ತೆಂಗಿನಕಾಯಿ ಉರುಳಿಸಿದರೆ ಹರಕೆ ತೀರಿಸಿದಂತೆ

ಇಡಿಗಾಳು: ಉಂಡೆಗಾಳು

ಇಡಿಗು (ಕ್ರಿ): ತುಂಬು; ಅಡಕು (ಧಾರ.ಜಿ)

ಇಡಿಗುಂಡು: ಗುರಿಇಟ್ಟ ತೋಪಿನ ಗುಂಡು; ಬಂದೂಕಿನ ಗುಂಡು (ಶಿವ.ಜಿ)

ಇಡಿಗುಂಪು: ಬಿತ್ತುವಾಗ ಕೂರಿಗೆಯ ನಳಿಕೆಗಳಿಂದ ಒಂದೇ ಪ್ರಮಾಣದಲ್ಲಿ ಬೀಜಗಳು ಸುರಿಯದೆ ಅಲ್ಲಲ್ಲಿ ಹೆಚ್ಚಾಗಿ ಸುರಿದಾಗ, ಅಂಥ ಕಡೆಗಳಲ್ಲಿ ಒತ್ತೊತ್ತಾಗಿ ಬೆಳೆದ ಸಸಿಗಳ ಸಾಲು

ಇಡಿಗ್ಗ: ನೊಗಕ್ಕೂ ಮೇಣಿಗೂ ಕಟ್ಟುವ ಹಗ್ಗ

ಇಡಿಗ್ವಾಡಿ: ಸಣ್ಣ ಗೋಡೆ

ಇಡಿಚಲು: ಹಂದಿ ಮೊದಲಾದ ಕಾಡುಪ್ರಾಣಿಗಳ ಶಿಕಾರಿಯ ಒಂದು ಸಾಧನ (ಶಿವ.ಜಿ)

ಇಡಿಚಲುಅಟ್ಟ: ಇಡಕಲಿನ ಮೇಲೆ ಕಲ್ಲುಗಳನ್ನು ಹೇರಲು ಮಾಡಿದ ಹಾಸು

ಇಡಿಚಲು ಬೇಟೆ: ಇಳಸಲು ಬೇಟೆ. ಕಾಡು ಅಳಿಲಿನ ಬೇಟೆ ಮಾಡುವಾಗ ಬಳಸುವ ಒಂದು ತಂತ್ರ. ಇಳಸಲು ಮರದ ಹಲಗೆಯನ್ನು ಬೇಟೆಗೆ ಬಳಸುತ್ತಾರೆ (ಚಿಮ.ಜಿ).

ಇಡಿದಡಕು: ಹಳ್ಳತಿಟ್ಟು; ತಗ್ಗುದಿಣ್ಣೆ (ಮೈಸೂ.ಜಿ)

ಇಡಿಪೆಟ್ಟು: ಯಕ್ಷಗಾನದ ಚಂಡೆ, ಮದ್ದಲೆಗಳಲ್ಲಿ ತಾಳದ ಘಾತಕ್ಕೆ ಬರುವ ದೊಡ್ಡ ಪೆಟ್ಟು (ದಕ.ಜಿ)

ಇಡಿಮಂಡಲ: ನಾಗಮಂಡಲ ಆಚರಣೆಯಲ್ಲಿ ಹದಿನಾರು ಗಂಟುಗಳಿರುವ ಚಿತ್ರದ ಮಂಡಲ. ಇದರಲ್ಲಿ ಹದಿನಾರು ಹೆಡೆಗಳ ನಾಗನನ್ನು ಚಿತ್ರಿಸಲಾಗುತ್ತದೆ. ಹದಿನಾರು ದೀಪಗಳನ್ನು ಸುತ್ತ ಉರಿಸಿಡಲಾಗುತ್ತದೆ (ದಕ.ಜಿ)

ಇಡಿಮುಡಿ: ಸರ್ವಾಂಗ (ದಕ.ಜಿ); ಅಡಿಮುಡಿ

ಇಡಿಲು: ನೋಡಿ– ಇಡುಗ್ಲು

ಇಡಿವೀಳ್ಯ: ಆಟಕ್ಕೆ ನಿರ್ಣಯಿಸಿದ ಪೂರ್ತಿ ಸಂಭಾವನೆ (ದಕ.ಜಿ)

ಇಡಿವೇಷ: ಯಕ್ಷಗಾನದಲ್ಲಿ ರಾಜವೇಷವೊಂದರ ಎಲ್ಲ ಸಾಮಗ್ರಿಗಳನ್ನು ಧರಿಸಿದ ಪೂರ್ತಿ ವೇಷ (ದಕ.ಜಿ)

ಇಡಿವೊನ್ನು: ಹಿಡಿ ಹೊನ್ನು; ಹಿಡಿಚಿನ್ನ; ಕೈತುಂಬ ಚಿನ್ನ

ಇಡಿಸುತ್ತೆ: ಇಡೀ ತೆಂಗಿನಕಾಯಿಯನ್ನಿಟ್ಟಿರುವ ಸ್ವಸ್ತಿಕ (ದಕ.ಜಿ)

ಇಡಿಸೇವೆ: ದೈವನರ್ತಕ ತನ್ನ ಪಾಲಿನ ಹದಿನಾರು ಸೇವೆಗಳನ್ನು ಮೂರು ಬಾರಿ ಮಾಡಿ ಮುಗಿಸುವ ಸಂಪೂರ್ಣ ಸೇವೆ (ದಕ.ಜಿ)

ಇಡೀಗುಂಡಿ: ಕೆರೆಯ ನೀರು ಕಡಿಮೆಯಾದಾಗ ಮೀನುಹಿಡಿಯಲು ತೋಡುವ ಗುಂಡಿ (ತುಮ.ಜಿ)

ಇಡೀಬೆಳೆ: ಹೊಲಕ್ಕೆಲ್ಲಾ ಒಂದೇ ಬೆಳೆ ಮಾಡಿದ್ದು (ಶಿವ.ಜಿ)

ಇಡುಂಬುಲು: ಜಟ್ಟಿ ಕಾಳಗದಲ್ಲಿ ಇಬ್ಬರು ಎರಡೂ ಕೈಗಳಿಂದ ಪರಸ್ಪರರನ್ನು ಬಿಗಿಯಾಗಿ ಹಿಡಿಯುವುದು (ದಕ.ಜಿ)

ಇಡುಕಲು: ದನಗಳ ರೋಗ. ಪ್ರಜ್ಞೆ ಕಳೆದಂತೆ ನೆಲಕ್ಕೆ ಬಿದ್ದು ಕಾಲನ್ನು ಪಟಪಟನೆ ಒದರತೊಡಗುತ್ತವೆ

ಇಡುಕು (ಕ್ರಿ): ೧. ಒತ್ತಾಗಿ ತುಂಬು (ನಾ) ೨. ಸೊರಗು; ದನಕರುಗಳ ಒಂದು ಬಗೆಯ ರೋಗ (ಧಾರ.ಜಿ)

ಇಡುಕ್ಲು: ಕುಡಿಯುವ ನೀರಿನ ಗಡಿಗೆ ಇಡುವ ಸ್ಥಳ (ಉಕ.ಜಿ)

ಇಡುಗಟ್ಟು: ಸುಣ್ಣಕಲ್ಲು ಬಿರೀಹಾಕು (ಕೋಲಾ.ಜಿ)

ಇಡುಗಲ್ಲು: ತಲೆ ಮೇಲೆ ಹಾಕುವ ಕಲ್ಲು

ಇಡುಗಾಡು: ಸ್ಮಶಾನಕ್ಕೆ ಹೆಣವನ್ನು ಎತ್ತಿಕೊಂಡು ಹೋಗುವ ಮೊದಲು ಹೆಣವನ್ನು ಇಳಿಸುವ ಮೂರು ದಾರಿ ಸೇರಿದ ಜಾಗ (ಕೋಲಾ.ಜಿ)

ಇಡುಗಾಯಿ: ಇಡಿಯಾದ ಬದನೆಕಾಯಿ ಅಥವಾ ದಪ್ಪಮೆಣಸಿನಕಾಯಿ ಅಥವಾ ಹೀರೇಕಾಯಿ ಮುಂತಾದವುಗಳನ್ನು ಸೀಳಿ ಮಧ್ಯಭಾಗದಲ್ಲಿ ಮಸಾಲೆಯನ್ನು ತುಂಬಿ ಬೇಯಿಸಿ ಒಗ್ಗರಣೆ ಹಾಕಿ ಮಾಡಿದ ಒಂದು ವ್ಯಂಜನ (ದಾವ.ಜಿ)

ಇಡುಗು: ಅರಳು (ಕೋಲಾ.ಜಿ)

ಇಡುಗುದುರೆ: ಸವಾರಿಗೆ ಸಿದ್ಧಪಡಿಸಿದ ಕುದುರೆ

ಇಡುಗೆ: ಒತ್ತೆ; ಗಿರವಿ (ದಕ.ಜಿ)

ಇಡುಗೊಬ್ಬರ: ಗಿಡಗಳ ಬುಡದಲ್ಲಿ ನೀಡುವ ಗೊಬ್ಬರ

ಇಡುಗೋಲು ಪಂಕುಲ್ಲು: ಒಂದು ಜಾತಿಯ ಹುಲ್ಲು (ಕೋಲಾ.ಜಿ)

ಇಡುಗ್ಲು: ಹಿಡುಗ್ಲು; ಬರಲು; ಕಸ ಗುಡಿಸುವ ಸಾಧನ; ಪೊರಕೆ (ತುಮ.ಜಿ). **ಇರೂ:** *ಇಡ್ಲು; ಪರ್ಕೆ; ಬರ್ಲು*

ಇಡುಗ್ಲುಮುಂಡಿ: ನೋಡಿ– ಇಡುಗ್ಲು

ಇಡುವಲೆ: ಪ್ರಾಣಿಗಳನ್ನು ಜೀವಂತವಾಗಿ ಹಿಡಿಯುವ ಬಲೆ. ಬಲೆಗಳಲ್ಲಿ ಒಂದು ಪ್ರಕಾರ (ಶಿವ.ಜಿ)

ಇಡುವಳಿ: ಹಿಡುವಳಿ; ಬೇಸಾಯ; ಕೃಷಿ

ಇಡೆ: ೧. ಭೂಮಿ ೨. ಸ್ವರ್ಗ ೩. ಆಹಾರ ೪. ಆಕಳು (ತುಮ.ಜಿ)

ಇಡೆಕೋಲು: ಮೂರ್ತೆಯವರು ಕಳ್ಳು ತೆಗೆಯಲು ಉಪಯೋಗಿಸುವ ಕೋಲು (ದಕ.ಜಿ)

ಇಡೆಕ್ಕಾಜಿ ದೆಕ್ಕಾಜಿ: ಅಂಚುಗಳಲ್ಲಿ ಕಚ್ಚುಗಳಂತಹ ರಚನೆಯಿರುವ ಹಿತ್ತಾಳೆ ಬಳೆ; ಒಂದೇ ರೀತಿಯ ಎರಡು ಬಳೆಗಳ ಮಧ್ಯದಲ್ಲಿ ತೊಡುವ ಬಳೆ (ದಕ.ಜಿ)

ಇಡೆಗ್ಗ: ಕುಂಟೆಯನ್ನು ಹೊಡೆಯುವಾಗ ಎತ್ತುಗಳಿಗೆ ಕಟ್ಟುವ ಹಗ್ಗ

ಇಡೆಪೂಜಾರಿ: ೧. ಭೂತಾರಾಧನೆಯಲ್ಲಿ ಪ್ರಧಾನ ಪೂಜಾರಿಗೆ ಸಹಾಯಕನಾದ ಪೂಜಾರಿ ೨. ಪ್ರಧಾನ ಪೂಜಾರಿಗೆ ಅಶೌಚವಿದ್ದಾಗ ಬರುವ ಪೂಜಾರಿ (ದಕ.ಜಿ)

ಇಡೆಮುಂಡ್ಯೆ: ಪರಿವಾರ ದೈವಗಳಿಗೆ ಹಾಕಿದ ಪೀಠ (ದಕ.ಜಿ)

ಇಡೆಮುಡಿ: ಭೂತದ ಉಪದ್ರ; –ಕಾಟ (ದಕ.ಜಿ)

ಇಡೆಸಕ್ಕಣ: ಚಿಕ್ಕ ಚಾಪೆ

ಇಡೆಸರಿಯೊ: ಒಂದು ಆಭರಣ

ಇಡ್ಗಿಚ್ಚು: ಬಹುಕೋಪ (ಉಕ)

ಇಡ್ಗೊಡ: ಸಂಪೂರ್ಣ; ಇಡಿಯಾಗಿ

ಇಡ್ಡಣಿಗೆ ವಡೆ: ಒಂದು ರೀತಿಯ ವಡೆ; ಉದ್ದು, ಕಡಲೆ ಹೆಸರುಬೇಳೆಗಳನ್ನು ಸಮಪ್ರಮಾಣದಲ್ಲಿ ಹಾಕಿ ಅರೆದು ಉಪ್ಪು, ಮೆಣಸು, ಏಲಕ್ಕಿ, ಇಂಗು ಹಾಕಿ ಕಲಸಿ ಉಂಡೆ ಮಾಡಿಕೊಂಡು ಕಣಕದೊಳಗಿಟ್ಟು ಒದ್ದೆ ಅರವಿಯಲ್ಲಿ ತಟ್ಟಿ ಬೇಯಿಸುವ ವಡೆ (ಬಳ್ಳಾ.ಜಿ)

ಇಡ್ಡಿ: ೧. ಈಟಿ ೨. ಕುಡಿ (ಬೆಳ.ಜಿ)

ಇಡ್ಡೂರ: ೧. ವಿಘ್ನ ೨. ಕದನ (ಶಿವ.ಜಿ) ೩. ಹೊಟ್ಟೆಕಿಚ್ಚು (ಚಾಮ.ಜಿ) ೪. ವಿರೋಧ ೫. ನಿಷ್ಠುರ ೬. ಮನಸ್ತಾಪ. **ಇರೂ:** ಇಡ್ಡುರ

ಇಡ್ನು: ೧. ಸೂತಕ ತೆಗೆಯುವಿಕೆ ೨. ಪೊರಕೆ

ಇಡ್ರ: ಮನಸ್ತಾಪ; ಭಿನ್ನಾಭಿಪ್ರಾಯ. **ಇರೂ:** ಇಡರು

ಇಡ್ಸಲು: ಸಣ್ಣ ಪ್ರಾಣಿಗಳನ್ನು ಹಿಡಿಯಲು ಮಾಡಿಕೊಂಡ ಉಪಕರಣ; ಒಂದು ಬಗೆಯ ಬೇಟೆಯ ಸಾಧನ. *(ಶಿವ.ಜಿ/ ಉಕ.ಜಿ)* **ನೋಡಿ–** ಇಡಿಚಲು

ಇಣ: ದನಗಳ ಭುಜ; ಎತ್ತಿನ ಬೆನ್ನು ಮತ್ತು ಕುತ್ತಿಗೆಯ ನಡುವೆ ಇರುವ ಹಿಣಿಲು; ಡೊಗರಿ (ಬೆಂಗ್ರಾ.ಜಿ). **ಇರೂ:** ಇಳಿ

ಇಣಕ್ ರೋಗ: ರಾಗಿ ಬೆಳೆಗೆ ಬರುವ ರೋಗ. **ಇರೂ:** *ಇಲುಕ್ ರೋಗ, ಇಲುಕುನ್ ರೋಗ, ಇನುಕ್ರೋಗ, ಇಣ್ಕನ್ ರೋಗ (ಬೆಂಗ್ರಾ.ಜಿ)*

ಇಣಚಿ: ೧. ಮರ ಹತ್ತಲು ಉಪಯೋಗಿಸುವ ಏಣಿ ೨. ಅಳಿಲು (ಚಿಮ.ಜಿ)

ಇಣಜಿ: ಅಡಕೆಯಂತೆ ಬಳಕೆಯಾಗುವ ಬೀಜ ಹೊಂದಿರುವ ಗಿಡ (ಧಾರ.ಜಿ)

ಇಣಸಿಗೆ: ಒಂದು ಔಷಧಿ ಗಿಡ. ತಲೆನೋವಿಗೆ ಇದರ ಬೇರು ಮದ್ದು (ಚಾಮ.ಜಿ)

ಇಣುಚು (ಕ್ರಿ): ೧. ಹೊಡಿ; ಗಟ್ಟಿಸು (ಚಾಮ.ಜಿ) ೨. ದೃಷ್ಟಿಕಾಯಿಸು

ಇಣ್ಕಾ (ನಾ): ೧. ತಾಳ್ಮೆಯಿಲ್ಲದವ (ಕ್ರಿ) ೨. ಕಷ್ಟಪಟ್ಟು ಮಾತಾಡುವವ (ಚಾಮ.ಜಿ). **ಪ್ರ:** ಆ ಗಂಡ್ ಒಬ್ಬ ಇಣ್ಕಾ. ಅವ 'ಇಣ್ಕಿ ಇಣ್ಕಿ ಮಾತಾಡುದು

ಇಣ್ಣಸು: ೧. ನೆನಪು ಮಾಡು ೨. ದುಃಖಿಸು (ಉಕ.ಜಿ). **ಇರೂ:** ಇಣ್ಣು

ಇಣ್ಣೀದ: ಬಯಸಿದ

ಇಣ್ಣು: (ಕ್ರಿ) ೧. ಜಯಿಸು; ಗೆಲ್ಲು (ನಾ) ೨. ನೆನಪು; ದುಃಖ (ಉಕ.ಜಿ)

ಇಣ್ಯ: ಚಾಪೆ (ಗುಲ್ಬ.ಜಿ)

ಇತರಮವಾಸ್ಯೆ: ಮಹಾಲಯ ಅಮಾವಾಸ್ಯೆ (ಶಿವ.ಜಿ)

ಇತಾಃಪರ: ೧. ಇಹಪರ ೨. ಸರ್ವಸ್ವ ೩. ಇನ್ನೊಂದು ಸಾರಿ (ಮೈಸೂ.ಜಿ)

ಇತಾಗ್ರು: ಸತ್ತು ಹೋಗಿರುವ ಪೂರ್ವಿಕರಿಗೆ ಎಡೆ ಇಡುವುದು (ಹಾಸ.ಜಿ)

ಇತಿಪಾತ: ೧. ಒಂದು ಬಗೆಯ ಮೂರ್ಛೆ ೨. ನರಕ ೩. ವಾಂತಿಭೇದಿ (ಚಾಮ.ಜಿ/ಮಂಡ್ಯ.ಜಿ). **ಇರೂ:** ಇತಿಪಾತ್ಗ

ಇತಿಪುರುಷ: ೧. ಗಂಡ (ಶಿವ.ಜಿ) ೨. ಪುಣ್ಯಪುರುಷ (ದಕ.ಜಿ)

ಇತ್ಗ: ಪಗಡೆ ಆಟದಲ್ಲಿ ಎರಡರ ಸಂಖ್ಯೆ. **ಇರೂ:** ವಿತ್ತಗ

ಇತ್ತಂಡ: ಎರಡು ತಂಡ

ಇತ್ರಾಣಿ: ಕಿವಿನೋವು, ಭೇದಿ ನಿಲ್ಲಿಸುವ ಗುಣವುಳ್ಳ ಒಂದು ಔಷಧಿ ಸಸ್ಯ (ಚಾಮ.ಜಿ)

ಇತ್ರಿ: ಎರಡು ಸಾರಿ ಹಾಕುವ ಗಂಟು (ದಕ.ಜಿ)

ಇತ್ರಿಚ: ಇತರ ಪುರುಷ; ಪರಪುರುಷ (ದಕ)

ಇತ್ಲು: ಹಿತ್ತಿಲು; ಮನೆಯ ಹಿಂದೆ ಇರುವ ಜಾಗ (ದಕ)

ಇದಕಾಂಬರ: ಹಿತಕಾಂಬ್ರ; ಹಿತಕವರೆಸಾರು; ಅವರೆಕಾಳಿನ ಸಿಪ್ಪೆತೆಗೆದು ಮಾಡಿದ ಸಾರು (ಕೋಲಾ.ಜಿ)

ಇದಕುಹಾಯಿ: ಸಣಕಲಾಗಿ ಒಣಗುತ್ತಾ ಹೋಗುವ ರೋಗ (ಧಾರ.ಜಿ)

ಇದಗುರಿ: ಮರಿ ಹಾಕಿದ ಕುರಿ

ಇದಮುಲ್ಲ: ವಿಷದ ಮುಳ್ಳು

ಇದರಗಾಳಿ: ಎದುರುಗಾಳಿ (ಗುಲ್ಬ.ಜಿ)

ಇದರಭೆಟ್ಟಿ: ಇದಿರುಭೇಟಿ; ಬೀಗರನ್ನು ಸ್ವಾಗತಿಸುವಿಕೆ (ಚಾಮ.ಜಿ)

ಇದಿ: ೧. ವಿಧಿ; ಹಣೆಬರಹ ೨. ದರಿದ್ರ ೩. ಕಾಟ ಕೊಡುವ ದೆವ್ವ ೪. ಶನಿ ೫. ಅನಿಷ್ಟ; ಕೇಡು (ಉಕ)

ಇದಿಮಾಯಿ ಬರಹ: ವಿಧಿಯಮ್ಮ ಬರೆದ ಹಣೆಬರಹ; ಮಗು ಹುಟ್ಟಿದ ಮೂರನೆಯ ದಿನ ರಾತ್ರಿ ಇದಿಮಾಯಿಯು ಬಂದು ಮಗುವಿನ ಹಣೆಬರಹ ಬರೆಯುವಳೆಂಬ ನಂಬಿಕೆ ಇದೆ. ರಾತ್ರಿ ಬಾಣಂತಿ ಮಂಚದ ಕೆಳಗೆ ಕಾಡಿಗೆ ಮತ್ತು ಕದಿರನ್ನಿಡುತ್ತಾರೆ. ಅಲ್ಲದೆ ಮಂಚದ ಬಳಿ ಸಗಣಿಯಿಂದ ಸಾರಿಸಿ, ರಂಗೋಲಿ ಹಾಕಿ, ರೇಶ್ಮೆ ಸೀರೆ ಇಳಿಬಿಟ್ಟಿರುತ್ತಾರೆ (ಧಾರ.ಜಿ)

ಇದಿರಂಡಿ: ವಿಧಿರಂಡೆ; ವಿಧಿಲೀಲೆಯಿಂದ ವಿಧವೆಯಾಗಿ ಎದುರಾಡುವವಳು (ಧಾರ.ಜಿ)

ಇದಿರರ್ಥ: ಯಕ್ಷಗಾನ ತಾಳಮದ್ದಲೆಯಲ್ಲಿ ಎದುರಾಳಿಗಳಾಗುವ ಪಾತ್ರಗಳು (ದಕ.ಜಿ)

ಇದಿರುಗೊಳ್ಳು: ನಿಬ್ಬಣಕ್ಕೆ ಬಂದ ಬೀಗರನ್ನು ಊರ ಅಗಸೆ ಬಾಗಿಲಿಗೆ ಬಂದು ಸ್ವಾಗತಿಸುವುದು (ಶಿವ.ಜಿ)

ಇದಿರುಲಯ: ೧. ಯಕ್ಷಗಾನದಲ್ಲಿ ತಾಳ ಜಾಗಟೆ ವಾದ್ಯಗಳ ಹೊಡೆತದಲ್ಲಿ ಲಯದ ಸಹಜಗತಿಗೆ ವಿರುದ್ಧವಾಗಿ ಬಾರಿಸುವುದು; –ಪೆಟ್ಟಿನ ಬಲ ತಪ್ಪಿಸುವುದು ೩. ಉದ್ದಕ್ಕೂ ಎತ್ತುಗಡೆ ಹಾಗೂ ಜಾಗ ಬದಲಾವಣೆ

ಇದಿರುವೇಷ: ಯಕ್ಷಗಾನದ ಪ್ರತಿನಾಯಕ ವೇಷ (ದಕ.ಜಿ) **ನೋಡಿ–** ಇದಿರರ್ಥ

ಇದಿರೆಣ್ಣು: ಒಂದೇ ಮನೆಗೆ ಹೆಣ್ಣುಕೊಟ್ಟು ಆ ಮನೆಯಿಂದಲೇ ಹೆಣ್ಣನ್ನು ತಂದುಕೊಳ್ಳುವಾಗ ಬಳಕೆಯಾಗುವ ಶಬ್ದ (ಬಳ್ಳಾ.ಜಿ). **ಇರೂ:** *ಎದುರೆಣ್ಣು*

ಇದುರುಬ್ಯಾಟೆ: ಬಲಿ ವಿಧಾನಗಳಲ್ಲೊಂದು; ಇದ್ದಲ್ಲಿಂದಲೇ ಆರಾಧ್ಯ ದೇವರಿಗೆ ಬಲಿ ಅರ್ಪಿಸುವ ವಿಧಾನ. **ಇರೂ:** ಇದಿರುಪರ

ಇದ್ದಲ್ ಅಡ್ಗೆ: ಚಿಕ್ಕ ಬೆತ್ತದ ಹೆಡಿಗೆ (ದಕ.ಜಿ)

ಇದ್ದಿನೆಂಟಿ: ಒಂದು ಜಾತಿಯ ಪಕ್ಷಿ. ರಾತ್ರಿ ಹೊತ್ತು ಪ್ರಾಣಿಗಳನ್ನು ಮನುಷ್ಯರನ್ನು ನೋಡಿ ಕೂಗಿಕೊಳ್ಳುವುದು ಇದರಿಂದ ರಾತ್ರಿ ಬೇಟೆಗೆ ತೆರಳಿದ ಬೇಟೆಗಾರರಿಗೆ ಬೇಟೆಗೆ ಸಹಾಯಕವಾಗುವುದು

ಇದ್ದೂರಿನವರು: ವಾಸ ಇರುವ ಊರಿನವರು (ಉಕ.ಜಿ); ದೇವಿ ನೆಲೆಯಾಗಿರುವ ಊರಿನವರು

ಇದ್ದೆಕೂದಲು: ಒದ್ದೆಕೂದಲು; ತಲೆಗೆ ಸ್ನಾನ ಮಾಡಿದಾಗ ಇನ್ನೂ ಪೂರ್ತಿ ಒಣಗದಿರುವ ಕೂದಲು

ಇದ್ದೆಬಾವಂಜಿ: ವಿದ್ಯೆಯ ಭಾವಾಜಿ; ಮಾಟಗಾರ ಸನ್ಯಾಸಿ. ಜನಪದ ಕಥೆಗಳಲ್ಲಿ ಬಳಕೆಯಾಗುವ ಪದ (ಬಿಜಾ.ಜಿ)

ಇದ್ಯಕಾರ: ಮಂತ್ರ ಮಾಟಗಳನ್ನು ತಿಳಿದವನು; ಮೋಡಿಕಾರ (ದಕ)

ಇದ್ರಿ: ವಿಧಿ; ಹಣೆಬರಹ

ಇದ್ಲಿ: **ನೋಡಿ–** ಇಜ್ಜಲು

ಇದ್ಲಿಒಲಿ: ಇದ್ದಲು ಉರಿಸಿ ಅಡುಗೆ ಮಾಡುವ ಕಬ್ಬಿಣದ ಒಲೆ (ಧಾರ.ಜಿ)

ಇದ್ಲು: **ನೋಡಿ–** ಇಜ್ಜಲು

ಇನವಂದ: ೧. ಪಗಡೆಯಾಟ ೨. ವಿನೋದ. **ಪ್ರ:** ಗುಬ್ಬಿ ಸಾರಂಗ ಇವನಂದನಾಡುತಾವೆ ೩. ಚೆಲ್ಲಾಟ; ಸರಸ ೪. ಆನಂದ. **ಇರೂ:** *ಇನುವಂದ; ಇಲವಂಗ*

ಇನಸರ/ಇನಸಾರ: ಡೈಯಸ್ಕೋರಿಯ ಅಕ್ಯುಲಿಯೇಟ: ಗೆಣಸಿನ ಒಂದು ಪ್ರಭೇದ. **ಇರೂ:** *ಬೆಳ್ಳಾರೆ ಗೆಣಸು*, ಮುಳ್ಳುಗೆಣಸು

ಇನಾಂತಿ: ಜಮೀನು, ಗ್ರಾಮ ಮುಂತಾದವುಗಳ ಕೊಡುಗೆ; ಕಂದಾಯವಿಲ್ಲದೆ ಮಾನ್ಯವಾಗಿ ಕೊಟ್ಟ ಭೂಮಿ (ಉಕ)

ಇನಾಂತಿಜಮೀನು: ಇನಾಮತಿ ಜಮೀನು. ಗ್ರಾಮದ ಅರ್ಚಕ, ಕುಳವಾಡಿ ಮುಂತಾದವರಿಗೆ, ಅವರ ಸೇವೆಗೆ ಪ್ರತಿಫಲವಾಗಿ ಕಂದಾಯವಿಲ್ಲದೆ ಅಥವಾ ಕಂದಾಯ ಕಡಿಮೆಮಾಡಿ ಕೊಟ್ಟ ಭೂಮಿ (ತುಮ.ಜಿ).

ಇನಾಮತಿಗ್ರಾಮ: ದಾನವಾಗಿ ನೀಡಿದ ಗ್ರಾಮ (ಮಲೆ)

ಇನಿ: ಮಧುರವಾದ; ಸಿಹಿಯಾದ; ಸುಂದರವಾದ (ಉಕ.ಜಿ/ತುಮ.ಜಿ). **ಇರೂ:** ಇನಿದು

ಇನಿಯಂಕ: ವಿನಾಯಕ

ಇಪಕತವ್ವಮ್ಮ: ಒಂದು ವಿಧದ ಅಮ್ಮ. ಇದಕ್ಕೆ ಇಪಕತವ್ವಮ್ಮ ಎಂಬ ದೇವತೆ ಕಾರಣ ಎಂಬ ನಂಬಿಕೆ ಇದೆ (ಕೋಲಾ.ಜಿ)

ಇಪತ್ತು: ವಿಪತ್ತು; ತೊಂದರೆ (ಮಂಡ್ಯ.ಜಿ)

ಇಪು ಹೋಗೋ ರೋಗ: ಹತ್ತಿ ಬೆಳೆಯ ಮೊಗ್ಗು ಉದುರುವ ರೋಗ (ತುಮ.ಜಿ)

ಇಪ್ಪಇಡು: ಚಾಡಿ ಹೇಳು

ಇಪ್ಪಡಿ: ಒಂದಕ್ಕೊಂದು ಕೈಗಳು ತಾಕಿದಂತೆ ಎರಡು ಕೈಗಳಿಂದ ಹಿಡಿದರೆ ಆಗುವಷ್ಟು; ಎರಡು ಕೈ ಸೇರಿಸಿ ಹಿಡಿಯ ಬಹುದಾದ ಪ್ರಮಾಣ. **ಪ್ರ:** ನಾಲ್ಕು ಇಪ್ಪಡಿ ಅನ್ನ ಅವನಿಗೆ ಸಲೀಸು (ಬೆಂಗ್ರಾ.ಜಿ); ಹಿಪ್ಪಡಿ (ಮಂಡ್ಯ.ಜಿ)

ಇಪ್ಪಡಿಸು: ಬಡಿ; ಹೊಡಿ (ಮಂಡ್ಯ.ಜಿ)

ಇಪ್ಪಲಿ: ಹಿಪ್ಪಲಿ. ಒಂದು ಜಾತಿಯ ಔಷಧೀಯ ಸಸ್ಯ ಮತ್ತು ಅದರಲ್ಲಿ ಬಿಡುವ ಕಾಳು. **ಇರೂ:** *ಬಾಲಮೆಣಸು* (ಚಿತ್ರ ನೋಡಿ)

ಇಪ್ಪಳಿಸು: ತನಿಖೆ ಮಾಡು; ಹಿಂಜು (ಉಕ.ಜಿ)

ಇಪ್ಪಾನೆ: ೧. ಒಂದು ಅಳತೆ ೨. ಎರಡು ಆನೆ

ಇಪ್ಪಾಲು ಮಾಡು (ಕ್ರಿ): ಎರಡು ಭಾಗ ಮಾಡು (ಬೆಂಗ್ರಾ.ಜಿ)

ಇಪ್ಪಿ: ೧. ಗೆರಟೆ (ದಕ.ಜಿ) ೨. ಜಗಳ; ಮನಸ್ತಾಪ ೩. ಹುಣ್ಣುಗಳಲ್ಲಾಗುವ ಕ್ರಿಮಿಗಳು

ಇಪ್ಪೆಮರ: *ಓಲಿಯಾಸಿಯಾ ಯೂರೋಪಿಯಾ:* ಹಿಪ್ಪೆ; ಎಣ್ಣೆ ಬೀಜದ ಸಸ್ಯ. ಔಷಧಿಯಾಗಿಯೂ ಬಳಕೆಯಲ್ಲಿದೆ

ಇಪ್ಪೆಲು: ಮನೆ (ಚಿಮ.ಜಿ)

ಇಬೂತಿಪೆಟ್ಗೆ: ವಿಭೂತಿಪೆಟ್ಟಿಗೆ; ಸಾಮೂಹಿಕ ಭೋಜನಕ್ಕೆ ಮುನ್ನ ಪಂಕ್ತಿಯಲ್ಲಿ ವಿಭೂತಿಧಾರಣೆಗೆ ಬಳಸುವ ವಿಭೂತಿಯನ್ನು ಇಡುವ ಸಾಧನ. ಬಸವ ಹಂಸ ಮುಂತಾದ ಆಕಾರವನ್ನುಳ್ಳ ಹಾಗೂ ಗಾಲಿಗಳುಳ್ಳ ಪೆಟ್ಟಿಗೆ



ಇಬ್ಬಿ: ಇಬ್ಬನಿ (ಮಂಡ್ಯ.ಜಿ)

ಇಬ್ಬಂದಿ: ೧. ನಿರ್ದಿಷ್ಟ ನಿಲುವಿಲ್ಲದ ೨. ವಂಚನೆ ೩. ಮೋಸ (ಮಂಡ್ಯ.ಜಿ). **ಇರೂ:** *ಇಬ್ಬಂದಿಗಾರ*

ಇಬ್ಬಂದಿಗಾರ: ಮೋಸಗಾರ

ಇಬ್ಬನಿಜ್ವಾಳ: ಒಂದು ಜೋಳದ ತಳಿ

ಇಬ್ಬಲಗು: ಎರಡು ಅಲಗು

ಇಬ್ಬಳ: ೧. ಇರ್ಬಳ್ಳ; ಎರಡು ಬಳ್ಳ ೨. ಧಾನ್ಯ ಅಳೆಯುವ ಸಾಧನ ೩. ಸೌತೆ ಜಾತಿಯ ಹಣ್ಣು (ದಕ.ಜಿ)

ಇಬ್ಬಳಿಗೆ: ಐದು ಸೇರು ಧಾನ್ಯ ಹಿಡಿಯುವ ಒಂದು ಅಳತೆಯ ಮಾಪನ (ತುಮ.ಜಿ/ಕೋಲಾ.ಜಿ)

ಇಬ್ಬಳೆ: **ನೋಡಿ–** ಇಬ್ಬುಡಲು ಹಣ್ಣು

ಇಬ್ಬಾಯಿ: ಎರಡು ಬಾಯಿ; ಎರಡೂ ಅಂಚುಗಳಲ್ಲಿ ಹರಿತವುಳ್ಳದ್ದು (ಶಿವ.ಜಿ)

ಇಬ್ಬಾಯಿಅಂಡೆ: ಎರಡು ಬದಿಯಲ್ಲಿಯೂ ಬಾಯಿ ಮತ್ತು ಮುಚ್ಚಳ ಇರುವ ಹಿತ್ತಾಳೆ, ಕಬ್ಬಿಣ, ಅಲ್ಯುಮಿನಿಯಂ ಬುರುಡೆ. ವೀಳ್ಯದೆಲೆ ತಿನ್ನುವವರು ಒಂದು ಬದಿಯಲ್ಲಿ ಅಡಕೆ ಹೋಳು ಮತ್ತೊಂದು ಬದಿಯಲ್ಲಿ ಸುಣ್ಣವನ್ನು ಹಾಕಿ ಇಡುತ್ತಾರೆ

ಇಬ್ಬಿತ್ತಿಗೆ: ಬಿತ್ತನೆಗಾಗಿ ಬೀಜವನ್ನು ಸಾಲ ತಂದು ಸಾಲದ ಒಂದೂವರೆಯಷ್ಟು ಬೀಜವನ್ನು ಹಿಂದಿರುಗಿಸುವುದು

ಇಬ್ಬೀಡು: ಎರಡನೆಯ ಸಲ ಬಿಟ್ಟ ಬೆಳೆ; ಎರಡನೇ ಬೆಳೆ (ತುಮ.ಜಿ/ಚಿಮ.ಜಿ)

ಇಬ್ಬುಡಲು/ಇಬ್ಬಡ್ಲು: ಕಲ್ಲಂಗಡಿ ಜಾತಿಗೆ ಸೇರಿದ ಹಣ್ಣು. ಇದರ ತಿರುಳಿಗೆ ಬೆಲ್ಲ, ಏಲಕ್ಕಿ, ಕಾಳುಮೆಣಸಿನ ಪುಡಿ ಸೇರಿಸಿ ಪಾನಕ ತಯಾರಿಸುತ್ತಾರೆ. **ಇರೂ:** ಇಬ್ಬಳೆ, *ಮಿಣಕೆ ಹಣ್ಣು (ಮೈಸೂ.ಜಿ), ಸಿದ್ದೋಟಿ, ಚಿಬ್ಬಳು, ಮೆಕ್ಕೆಹಣ್ಣು*

ಇಬ್ಬೆ: ಒಂದು ಸಲ ಬೇಯಿಸುವಷ್ಟು ಅಳತೆ; ಒಂದು ಸಲ ಕರಿಯುವಷ್ಟು ಅಳತೆ. **ಇರೂ:** *ಒಬ್ಬೆ; ವಬ್ಬೆ*

ಇಬ್ಬ: **ನೋಡಿ–** ಇಬ್ಬುಡಲು (ದಕ.ಜಿ)

ಇಭೂತಿಕಟ್ಟು: ರಾಶಿಪೂಜೆಯ ದಿನ ರಾಶಿಯ ಸುತ್ತ ಪೂಜೆಗಾಗಿ ಹಾಕುವ ಚೌಕಟ್ಟು (ತುಮ.ಜಿ)

ಇಭೋಗ: ವೀಳ್ಯದ ಭೋಗ; ತಾಂಬೂಲ

ಇಮರನ್ನ: ಗಂಜಿಯನ್ನು ಬಸಿಯದೆ ನೀರನ್ನು ಇಂಗಿಸಿ ತಯಾರಿಸಿದ ಅನ್ನ

ಇಮರು: ಇಂಗು; ಇಮರಿಸು; ಇಂಗಿಸು. **ಪ್ರ:** ಅನ್ನ ಮಾಡುವಾಗ ನೀರು ಚೆನ್ನಾಗಿ ಇಮರಿದ ನಂತರ ಇಳಿಸಬೇಕು

ಇಮಾನ: ೧. ಚಟ್ಟ; ಸಿದಿಗೆ ೨. ವಿಮಾನ (ಮೈಸೂ.ಜಿ)

ಇಮಿರಾಯ: ಜವರಾಯ; ಯಮರಾಯ

ಇಮ್ಮಂಡೆಹಾವು: ಎರಡುತಲೆಹಾವು (ದಕ.ಜಿ). **ಇರೂ:** *ಇರ್ಮ್ಮಂಡಿ; ಇಮಂಡಿ (ಕೊಡ.ಜಿ)*

ಇಮ್ಮಡಿ: ಹಿಮ್ಮಡಿ; ಅಂಗಾಲಿನ ಹಿಂಭಾಗ

ಇಮ್ಮಡಿಸು: ಎರಡು ಮಡಿಕೆ ಮಾಡು; ಮಡಿಸು

ಇಮ್ಮಣ್ಣಿಚೀಲ: ಹಿಂದಿನವರು ಹಣವನ್ನು ಹಾಕಿ ನಡುವಿಗೆ ಸುತ್ತಿಕೊಳ್ಳುತ್ತಿದ್ದ, ಬಾಯಿ ಕಿರಿದಾದ ಸೊಂಟಪಟ್ಟಿಯಾಕಾರದ ಚೀಲ (ಮಂಡ್ಯ.ಜಿ). **ಇರೂ:** *ಹಮ್ಮಿಣಿ*

ಇಮ್ಮನ: ೧. ಇಮ್ಮಣ್ಣಿ ಚೀಲ ೨. ಒಂದು ಅಳತೆ

ಇಮ್ಮಾವು: ಸಿಹಿಯಾದ ಮಾವು (ಗುಲ್ಬ.ಜಿ)

ಇಮ್ಮು: ಮಿಡುಕಾಡು (ಉಕ)

ಇಯ: ನೀರು. ಬಾಲಭಾಷೆಯಲ್ಲಿ ಬಳಸುವ ಪದ

ಇಯಲುದೇಶ: ಮಲವಿಸರ್ಜನೆ (ಹಾಸ.ಜಿ)

ಇಯ್ಯಾ: ನೇಗಿಲು ಮತ್ತು ನೊಗವನ್ನು ಬಿಗಿದು ಕಟ್ಟಲು ಬಳಸುವ ಸ್ವಲ್ಪ ಬಾಗಿರುವ ಮರದ ಸಾಧನ (ಮಂಡ್ಯ.ಜಿ/ ಬೆಂಗ್ರಾ.ಜಿ). **ಇರೂ:** *ಕುಯ್ಯಂಗಾಟಿ, ಕ್ವಾರಡಿಗೆ*

ಇರ: ಇರುವೆ (ಚಾಮ.ಜಿ). **ಇರೂ:** *ಇರಬ, ಇರಿಬಿ, ಇರಗು, ಚೀಮೆ, ಎರು, ಎರ*

ಇರಕಟ್ಯಾ: ಇಕ್ಕಟ್ಟು. **ಇರೂ:** ಇರಕಟ್ಟು *(ಗುಲ್ಬ.ಜಿ)*

ಇರಕಾ: ಕೃಷಿ ಉಪಕರಣ

ಇರಕುಚ್ಚೆ: ನೋಡಿ– ಇರ್ಕ್ಯುಚ್ಚೆ

ಇರಗಂಟಿ: ನಾದ ಹೊರಡಿಸುವ ಗಂಟೆ

ಇರಗಿಂಡಿ: ತೀರ್ಥದ ಪಾತ್ರೆ (ಚಾಮ.ಜಿ)

ಇರಗು (ಕ್ರಿ): ೧. ಎರಗು; ಎರ್ಗು (ನಾ) ೨. ಇರುವೆ (ಉಕ)

ಇರಚಿ: ಬಂಡಿಯ ಚಕ್ರಗಳನ್ನು ಸೇರಿಸುವ ದಪ್ಪನಾದ ಕಬ್ಬಿಣದ ತುಂಡು (ತುಮ.ಜಿ)

ಇರಚು: ೧. ಪೈರಿನ ಮಧ್ಯೆ ಇರುವ ಹುಲ್ಲು ತೆಗೆಯಲು ಬಳಸುವ ಕುಂಟೆ ೨. ಇರಿಸು; ಇಡು (ಉಕ.ಜಿ) ೩. ಗಾಡಿಯಲ್ಲಿ ಅಚ್ಚಿನ ಮೇಲೆ ಜೋಡಿಸಿರುವ ದೊಡ್ಡದಾದ ಮರದ ಸಾಧನ; ಇರ್ಚಿಮರ (ತುಮ.ಜಿ)

ಇರಣ: ಹೊಗೆಯಿಂದುಂಟಾಗುವ ಕರಿಬಲೆ (ಶಿವ.ಜಿ). ಅಡಿಗೆ ಒಲೆ, ನೀರೊಲೆ ಉರಿಸಿದಾಗ ಗೋಡೆಯಲ್ಲಿ ಮೂಡುವ ಕಪ್ಪು ಪದರ (ಬೆಂಗ್ರಾ.ಜಿ)

ಇರದಾಳೀ: ಪದಕ (ಚಾಮ.ಜಿ)

ಇರನಾರ: ಈರಗಾರ; ವಿವಾಹವಾಗದ ಸ್ತ್ರೀ ಸತ್ತಾಗ ಸಂಸ್ಕಾರ ವಿಧಿ ಮಾಡುವವನು (ಬೆಂಗ.ಜಿ)

ಇರವಣ: ಗೃಹಪ್ರವೇಶ (ಉಕ)

ಇರವಾರ: ೧. ದುಪ್ಪಟ್ಟು; ಎರಡರಷ್ಟು; ಹೆಚ್ಚಿಗೆ (ಬೆಂಗ್ರಾ.ಜಿ). **ಪ್ರ:** ಅವನಿಗಿಂತ ಇವನು ಇರವಾರ ಕೆಟ್ಟವ್ನೆ ೨. ಎರಡುದಡ ೩. ಚಿಕ್ಕ ಜಾಗ (ಶಿವ.ಜಿ)

ಇರವಿಜಡಿ: ಇರುವೆಜಡೆ; ಸಣ್ಣ ಸಣ್ಣ ಜಡೆ ಹಾಕುವುದು (ಬಾಗ.ಜಿ)

ಇರವು: ಒಂದು ಆಯುಧ ವಿಶೇಷ (ಬೆಳ.ಜಿ)

ಇರಸಾಲ್: ಸರ್ಕಾರಕ್ಕೆ ಕಟ್ಟಬೇಕಾದ ಕಂದಾಯದ ಹಣ

ಇರಸು: ಬಂಡಿಯ ಅಚ್ಚುಮರ; ಚಕ್ಕಡಿಯ ಗಾಲಿ ಜೋಡಿಸಲು ಸೇರಿಸಿರುವ ಉಕ್ಕಿನ ಅಚ್ಚು. (ಶಿವ.ಜಿ)

ಇರಳಿ: ಎರಳಿ. **ಇರೂ:** ಇಳ್ಳೆ

ಇರಾಣಿ ಚುಣಕ: ಹೆಂಚು; ದೋಸೆಯ ಕಾವಲಿ (ಚಿತ್ರ.ಜಿ)

ಇರಿ (ಕ್ರಿ): ಹಿರಿ ೧. ಹೊರತೆಗೆ ಎಳೆ ೨. ಚುಚ್ಚು ೩. ಕೊಲ್ಲು (ಮಂಡ್ಯ.ಜಿ)

ಇರಿಕಳ: ೧. ಬೆಂಕಿ ೨. ಜಾಣ (ಹಾಸ.ಜಿ)

ಇರಿಕು/ಇರುಕು/ಎರಕು (ಕ್ರಿ): ಕುಕ್ಕೆ ಬಿಂದಿಗೆ ಮುಂತಾದ ವಸ್ತುಗಳನ್ನು ಸೊಂಟದ ಮೇಲೆ ಇಟ್ಟುಕೊಳ್ಳು. **ಪ್ರ:** ಬಿಂದ್ಗೇನ ಸೊಂಟ್ದಲ್ಲಿ ಇರಿಕ್ಕೊಂಡು

ಇರಿಕೆ: ೧. ತಳಭಾಗ ಗೋಲಾಕಾರವಾಗಿರುವ, ಪಾತ್ರೆಗಳು ಉರುಳದಂತೆ ಮಾಡಲು ಅದರ ಕೆಳಗೆ ಇಡುವ ದುಂಡನೆಯ ಸಾಧನ. ಇದನ್ನು ಭತ್ತದ ಹುಲ್ಲು, ನೊಸೆಹುಲ್ಲು ಅಥವಾ

ಬಾಳೆನಾರಿನಿಂದ ವೃತ್ತಾಕಾರವಾಗಿ ಹೆಣೆದು ಮಧ್ಯೆ ಖಾಲಿ ಇರುವಂತೆ ರಚಿಸುತ್ತಾರೆ. (ಮೈಸೂ.ಜಿ/ಉಕ.ಜಿ); ಸಿಂಬೆ; ಸಿಂಬಿ. **ಇರೂ:** ಇರ್ಕೆ, ಇರ್ಕಿ ೨. ಸುತ್ತಿ ಸುರುಳಿಯಾಗಿರುವ ಸ್ಥಿತಿ **ಪ್ರ:** ಹಾವು ಇರ್ಕೆಹಾಕ್ಕೊಂಡು ಮಲಗಿದೆ (ದಕ.ಜಿ)

ಇರಿಕೊಂಡು: ಹಿರಿದುಕೊಂಡು; ಬಾಚಿಕೊಂಡು; ದೋಚಿಕೊಂಡು; ಲಪಟಾಯಿಸಿ (ಮೈಸೂ.ಜಿ). **ಪ್ರ:** ಕಂಡೋರ ಆಸ್ತಿನೆಲ್ಲ ಇರಿಕೊಂಡು ದೊಡ್ಡೊಕ್ಲಾದ ಬುಡೆ ಅವ್ನು

ಇರಿಸು (ನಾ): ೧. ಕುಂಟೆ, ನೇಗಿಲುಗಳು ಮುಂದೆ ಹೋಗಲು ಬಳಸುವ ಸಾಧನ ೨. ಬಂಡಿಯ ಅಚ್ಚುಮರ (ಉಕ)

ಇರು (ನಾ): ಮಕ್ಕಳಿಗೆ ಬರುವ ಒಂದು ಬಗೆಯ ರೋಗ; ಭೇದಿ (ಮಂಡ್ಯ.ಜಿ)

ಇರುಕಮಾರು: ಹೊಲದ ಅಸಮ ಆಕಾರದಿಂದಾಗಿ ಬಿತ್ತಿ ಆದಮೇಲೆಯೂ ಕೊನೆಗೆ ಮೂಲೆಯಲ್ಲಿ ಉಳಿಯುವ ಭಾಗ (ಬೆಂಗ್ರಾ.ಜಿ). **ಇರೂ:** ಎಲೆಮಡಿ

ಇರುಕಿಸಿಕೊ: ಹಸುವು ಹಾಲನ್ನು ಕೆಚ್ಚಲಿಗೆ ಇಳಿಸದಿರುವುದು. **ಪ್ರ:** ಕರೆಯೊ ಹಸ ಸೊರ ಇರುಕಿಸಿಕೊಂಡದೆ

ಇರುಕು (ನಾ): ೧. ಕಂಕುಳಲ್ಲಿ ಬಿಗಿಯಾಗಿ ಹಿಡಿಯುವಷ್ಟು (ಮಂಡ್ಯ.ಜಿ). **ಪ್ರ:** ಒಂದಿರ್ಕು ಹುಲ್ ಕಿತ್ಕೊಬಾ ಇಸ್ಕೂಲ್‌ಗೆ ಹೋಗೊವೊತ್ಗೆ ೨. ಇಕ್ಕಟ್ಟು (ದಕ.ಜಿ) (ಕ್ರಿ) ೩. ಅದುಮು; ಭದ್ರವಾಗಿ ಹಿಸುಕಿ ಹಿಡಿ

ಇರುಕೊಳೆ: ಬೇಲಿಯಲ್ಲಿ ಹಾಕಿದ ಕವೆಯ ಆಕಾರದ ಇಕ್ಕಟ್ಟಾದ ದಾರಿ (ಚಿತ್ರ.ಜಿ). **ಇರೂ:** ಕಡಕಲು (ಮೈಸೂ.ಜಿ)

ಇರುಗುಪೊರುಗು: ಅಕ್ಕಪಕ್ಕ (ಕೋಲಾ.ಜಿ)

ಇರುಗೂಣೆ/ಇರುಗೂಳಿ: ಇರಿಯುವ ಕೂಣಿ. ಇದು ಸುಮಾರು ಎರಡು ಅಥವಾ ಮೂರು ಅಡಿಯಷ್ಟು ಉದ್ದವಾದ ಸಿಲಿಂಡರಿನಾಕಾರದ ಬಿದಿರಿನ ಕಣೆಗಳಿಂದ ರಚಿಸಿದ ಸಾಧನ. ಮೇಲ್ಭಾಗ ಕಿರಿದಾಗಿದ್ದು ತಳಭಾಗ ಅಗಲವಾಗಿರುತ್ತದೆ. ಕೂಣಿಯು ಮಧ್ಯಭಾಗವು ಬಲವಾಗಿರುವಂತೆ ಬಿದಿರು ಅಟ್ಟೆಗಳಿಂದ ಬಿಗಿದಿರುತ್ತಾರೆ. ಕಿರಿದಾದ ಭಾಗದಿಂದ ಮೀನು ಹಿಡಿಯುವ ವ್ಯವಸ್ಥೆ ಇರುತ್ತದೆ (ಬೆಂಗ.ಜಿ)

ಇರುಗೂಳಿ: **ನೋಡಿ–** ಇರುಗೂಣೆ



ಇರುಚಲು: ಜೋರಾಗಿ ಮಳೆ ಬಂದಾಗ ಮನೆಯ ಒಳಗೆ ಬಡಿಯುವ ಹನಿಗಳು (ಉಕ.ಜಿ). **ಇರೂ:** ಎರಚು *(ದಕ)*

ಇರುತೀರಿ: ಒಂದು ಔಷಧಿಗಿಡ (ಉಕ)

ಇರುಪುಗಿಡ: ಮೆಸುಅ ಫೆರಿಯ: ಒಂದು ಔಷಧೀಯ ವೃಕ್ಷ. ಸುಗಂಧಯುಕ್ತವಾದ ಹೂ ಬಿಡುವ ಈ ಮರದ ಬೀಜದ ಎಣ್ಣೆಯನ್ನು ಗೂರಲು ರೋಗ ಚಿಕಿತ್ಸೆಗೆ ಬಳಸುತ್ತಾರೆ (ಚಿಮ.ಜಿ)

ಇರುಬ: ನೋಡಿ– ಇರ (ಮೈಸೂ.ಜಿ)

ಇರುವಂದ: ಪುರುಷರು ಎಡ ಮುಂಗೈಗೆ ಧರಿಸುವ ಆಭರಣ(ಬೆಂಗ್ರಾ.ಜಿ)

ಇರುಸು: ನೋಡಿ– ಇರಚಿ

ಇರುಸುಮುರುಸು: ೧. ಮುಜುಗರ. **ಪ್ರ:** ಅವರ ಮನೇಲಿರೋದಕ್ಕೆ ನನಗೆ ಇರುಸುಮುರುಸಾಗುತ್ತೆ ೨. ವಿರೋಧ; ಮನಸ್ತಾಪ. **ಪ್ರ:** ಅವರಿಬ್ಬರಿಗೂ ಏನೋ ಇರುಸುಮುರುಸಾಗಿರೋ ಹಾಗಿದೆ

ಇರುಳಪೂಜೆ: ಸಂಕ್ರಾಂತಿಯ ನಂತರ ಕೋಲಾರದ ವಕ್ಕಲಗೇರಿಯಲ್ಲಿ ಮಾಡುವ ರಾವಣನ ಆರಾಧನೆ. ಅಂದಿನ ಹಗಲು ಮಾರ್ಕಂಡೇಶ್ವರ ಸ್ವಾಮಿಯ ರಥೋತ್ಸವ ನಡೆಯುತ್ತದೆ. ಬೆಳಗ್ಗೆ ಅರ್ಚಕರು ಮಾತ್ರ ರಾವಣನ ಗುಡಿಯಲ್ಲಿ ಪೂಜೆ ಸಲ್ಲಿಸಿ ತಂಬಿಟ್ಟಿನ ದೀಪವಿರಿಸುತ್ತಾರೆ. ಮತ್ತೆ ರಾತ್ರಿ ಗುಡಿ ಬಾಗಿಲು ತೆಗೆದು ಅಲಂಕೃತವಾದ ರಾವಣನ ಉತ್ಸವಮೂರ್ತಿಯ ಉತ್ಸವ ಜರುಗುತ್ತದೆ. ಇಬ್ಬರೂ ಶಿವನ ಭಕ್ತರಾದ್ದರಿಂದ ಒಂದೇ ದಿನ ಉತ್ಸವ ಆಚರಿಸಿದರೂ ಬೆಳಗಿನ ಹೊತ್ತು ರಾವಣನ ದರ್ಶನ ಕೂಡದು ಎಂಬ ನಂಬಿಕೆ ಇದೆ

ಇರುಳರು: ಒಂದು ಬುಡಕಟ್ಟು ಸಮುದಾಯ. ಬೆಂಗಳೂರು ಮೈಸೂರು ಜಿಲ್ಲೆಗಳಲ್ಲಿ ಕಂಡುಬರುತ್ತಾರೆ. **ಇರೂ:** ಇಲ್ಲಿಗರು

ಇರುಳಿಗರ ಕಣಿ: ಭವಿಷ್ಯ (ರಾಮ.ಜಿ)

ಇರುಳು: ಮೀನು ಹಿಡಿಯುವ ಕೊಡಮೆಯೊಳಗೆ ತಿದಿಯೋಪಾದಿಯಲ್ಲಿರುವ ರಚನೆ; ಮೀನು ಹೊರಬರದಂತೆ ತಡೆಯೊಡ್ಡುವ ಸಾಧನ

ಇರುಳುಬಕ: ಒಂದು ಬಗೆಯ ಹಕ್ಕಿ

ಇರುಳೆ: ಈರಳೆ; ಎರಳೆ **ನೋಡಿ–** ಇಳ್ಳಿಕಾಯಿ

ಇರೆಂಬತ್ತು: ಒಂದು ನೂರ ಅರವತ್ತು

ಇರೆಕೊಟ್ಟು: ಅಂಕದ ಕೋಳಿಗಳ ಜುಟ್ಟುಗಳಲ್ಲಿನ ಒಂದು ವಿಧ (ದಕ.ಜಿ)

ಇರೆಗಾಯಿಗಳು: ಕೊಲೆಗಡುಕರು; ವಿರೋಧಿಗಳು

ಇರೆಹಕ್ಕಿ: ಬಾವಲಿ (ತುಮ.ಜಿ)

ಇರೇತನ: ಹಿರಿತನ

ಇರೇವು: ಸೊಂಟಕ್ಕೆ ಧರಿಸುವ ಒಂದು ಆಭರಣ (ಬೆಂಗ್ರಾ.ಜಿ)

ಇರ್ಕ್ಉಚ್ಚೆ: ಜಿನುಗುಮೂತ್ರ; ಮೂತ್ರವಿಸರ್ಜನೆಯ ನಂತರವೂ ತೊಟ್ಟು ತೊಟ್ಟಾಗಿ ಹನಿಯುವ ಉಚ್ಚೆ (ಬೆಂಗ.ಜಿ)

ಇರ್ಕಂಡುಗ: ಎರಡು ಖಂಡುಗ (ಗುಲ್ಬ.ಜಿ)

ಇರ್ಕಡ್ಲ: ಒಂದು ಬಗೆಯ ಹಕ್ಕಿ

ಇರ್ಕಲಿ: ತಮ್ಮ ಮೊಲೆಯ ಹಾಲನ್ನು ತಾವೇ ಕುಡಿಯುವುದನ್ನು ತಡೆಯಲು ಆಕಳುಗಳ ಕೊರಳಿಗೆ ತೊಡಿಸುವ ಕಟ್ಟಿಗೆಯ ಸಾಧನ (ಬಳ್ಳಾ.ಜಿ)

ಇರ್ಕಿ: ನೋಡಿ– ಇರಿಕೆ

ಇರ್ಕುಂಟೆ: ಮೀಸೆಕುಂಟೆ; ಒತ್ತೊತ್ತಾಗಿ ಬೆಳೆದಿರುವ ಬೆಳೆಯನ್ನು ತೆಳುಗೊಳಿಸುವ ಹಾಗೂ ಕಳೆಯನ್ನು ತೆಗೆಯುವ ಕುಂಟೆ

ಇರ್ಗರಿ: ಕಾಟ; ಹಿಂಸೆ. **ಇರೂ:** *ಇಗ್ಗರಿ*

ಇರ್ಚಗಟ್ಟು: ಗುಂಡು ಅಥವಾ ರೋಣ್ಗಲ್ಲಿಗೆ ಬಳಸುವ ಮರದ ಸಾಧನ; ಇರ್ಚಿಪಟ್ಟಿ (ಬೆಂಗ್ರಾ.ಜಿ)

ಇರ್ಚಿ: ನೋಡಿ– ಇರಚಿ

ಇರ್ಚಿಪಟ್ಟಿ: ಗುಂಡು ಅಥವಾ ರೋಣ್ಗಲ್ಲಿಗೆ ಬಳಸುವ ಮರದ ಸಾಧನ (ಬೆಂಗ.ಜಿ)

ಇರ್ಚಿಮರದ್ ಬಳೆ: ಇರಚಿಯ ಮರ ವಾಲದಂತೆ ಮತ್ತು ಅದರ ಅಚ್ಚು ಭದ್ರವಾಗಿರುವಂತೆ ಹಾಕುವ ಬಳೆ

ಇರ್ದಾಕು: ಹಿರಿದು ಹಾಕು; ಹೊರೆಯಿಂದ ಹುಲ್ಲನ್ನು, ಗುಡ್ಡೆಯಿಂದ ಸೌದೆಯನ್ನು ಈಚೆ ತೆಗೆಯುವುದು (ಮಂಡ್ಯ.ಜಿ). **ಪ್ರ:** ಮೆದೇಲಿ ಒಸಿ ಹುಲ್ಲ ಇರ್ದಾಕು

ಇರ್ನಾಳಿ: ಗಂಟಲರೋಗ (ದಕ.ಜಿ)

ಇರ್ಬಾಯಿದೆಕ್ಕಲೆ: ೧. ಎರಡು ತಲೆಯ ಹಾವು ೨. ನಯವಂಚಕ (ದಕ.ಜಿ)

ಇರ್ಬು: ಇರುವೆ (ಕೋಲಾ.ಜಿ)

ಇರ್ಬುಳೆ: ಒಂದೇ ಗೊನೆಯಲ್ಲಿ ಹಣ್ಣಾದ ಮತ್ತು ಹಣ್ಣಾಗದ ಅಡಕೆಗಳಿರುವ ಬೆಳೆ (ದಕ.ಜಿ)

ಇರ್ಮಿರು: ಆರು ಕೊಳಗ ಬೀಜ ಬಿತ್ತಬಲ್ಲ ಜಮೀನು

ಇರ್ಮುಡಿ: ಅಯ್ಯಪ್ಪನ ಭಕ್ತರು ತಲೆಯ ಮೇಲೆ ಹೊತ್ತು ಕೊಂಡೊಯ್ಯುವ ಎರಡು ವಿಭಾಗ (ಹಸಿಗೆ) ಗಳಿರುವ ಚೀಲ (ದಕ.ಜಿ)

ಇರ್ಮುಡಿಹಾಕುವುದು (ಕ್ರಿ): ಶವದಹನಕ್ಕೆ ಕೊಂಡೊಯ್ಯುವ ಹಾದಿಯಲ್ಲಿ ಹೆಗಲು ಬದಲಾಯಿಸುವಾಗ ಅಥವಾ ಇಳಿಸಬೇಕಾದಾಗ ಕ್ರಿಯೆ ಹಿಡಿದವನು ಮೊಣಕಾಲೂರಿ ಕುಳಿತು ಐದು ವೀಳ್ಯದೆಲೆ ಒಂದು ಅಡಕೆ ನೆಲದಲ್ಲಿಟ್ಟು ಕೈಮುಗಿಯುವ ಶಾಸ್ತ್ರ (ದಕ.ಜಿ)

ಇರ್ಲ: ನೋಡಿ– ಈರ್ಲು

ಇರ್ಲಿ: ಪ್ರಾಣಿಯ ದೇಹದ ಯಕೃತ್ತಿನ ಭಾಗ (ಕೋಲಾ.ಜಿ). **ಇರೂ:** *ಈರಿ*

ಇರ್ಲು ಆಗು: ೧. ಹಸಿರು ಬಣ್ಣಕ್ಕೆ ಭೇದಿಯಾಗು ೨. ಮುಟ್ಟು ಇಲ್ಲವೇ ಮೈಲಿಗೆ ಸೋಂಕಿನಿಂದ ಮಕ್ಕಳಿಗೆ ಆಗುವ ಭೇದಿ. **ಪ್ರ:** ಮಗೀಗೆ ಇರ್ಲಾಗಿ ಸುಸ್ತಾಗಿ ಬಿದ್ದಂಡೈತೆ

ಇರ್ಲು ತೆವರೆ: ಗದ್ದೆಯ ನಡುವೆ ಮಧ್ಯೆ ಮಧ್ಯೆ ಇರುವ ದಿಣ್ಣೆ (ಮಂಡ್ಯ.ಜಿ)

ಇರ್ಲು ಪೀಟೆ: ಒರಳಿನ ಒಳಗೆ ಕಸ ಬೀಳದಿರಲಿ ಎಂದು ಅದರ ಸುತ್ತ ಇಡುವ ವರ್ತುಲಾಕಾರದ ಮರದ ತುಂಡು (ಕೋಲಾ.ಜಿ); ಕುಂದಣಿಕೆ

ಇರ್ಲ್ಪೂಜೆ: ಕೊರಮ ಸಮುದಾಯದಲ್ಲಿ ಮಗು ಹುಟ್ಟಿದ ಮೂರನೆಯ ದಿವಸ ಮಾಡುವ ಪೂಜೆ (ಬಳ್ಳಾ.ಜಿ)

ಇರ್ಲ್ಬ್ಯಾಟೆ: ಇರುಳುಬೇಟೆ (ಕೊಡ.ಜಿ)

ಇರ್ವೋಳು/ಈರೋಳು: ಎಳೆಯ ತಾಳೆಹಣ್ಣು. **ಇರೂ:** *ಹನೆಬೊಂಡ; ತಾಟಿನಿಂಗು (ದಕ.ಜಿ)*

ಇರ್ಸನ್ಗಿ: ರಂಧ್ರ ಕೊರೆಯುವ ಸಾಧನ; ಬೈರಿಗೆ

ಇಲ: ಮಣ್ಣಿನ ಅಳಗೆ

ಇಲಕ್ಕಾರು ರೋಗ: ರಾಗಿ ಬೆಳೆಗೆ ಬರುವ ಒಂದು ರೋಗ. **ಇರೂ:** ಇಲುಗ್ಮಾರಿ ರೋಗ (ಮೈಸೂ.ಜಿ)

ಇಲಗ: ಎಲುಬು (ದಕ.ಜಿ)

ಇಲಚಿ: ಎಲಚಿಗಿಡ; ಒಂದು ಬಗೆಯ ಕಾಡುಗಿಡ ಮತ್ತು ಅದರ ಹಣ್ಣು. **ಇರೂ:** ಬೋರೆಹಣ್ಣು (ದಕ.ಜಿ)

ಇಲಚಿಮ್ಮು: ಇಲಿಮರಿ (ಗುಲ್ಬ.ಜಿ)

ಇಲಾಂಚಿ: ಏಲಕ್ಕಿ (ಯಾದ.ಜಿ/ಬೆಳ.ಜಿ)

ಇಲಾಕಿ ಹಲುವೆ: ಒಂದು ವ್ಯವಸಾಯ ಸಾಧನ; ಐದು ಹಲ್ಲುಗಳನ್ನುಳ್ಳ ಹಲುವೆ

ಇಲಾಡಿ: ಲಂಬಾಣಿಗರು ತಲೆಯ ಮೇಲೆ ಹೊದಿಕೆಯಂತೆ ಧರಿಸುವ ಚಿತ್ತಾರ ಬಿಡಿಸಿದ ಬಣ್ಣಬಣ್ಣದ ವಸ್ತ್ರ

ಇಲಾತಿ: ೧. ಸೂರ್ಯಕಾಂತಿ ಗಿಡ ೨. ವಿಲಾಯಿತಿ; ವಿದೇಶ (ಚಿಮ.ಜಿ)

ಇಲಾತ್‌ಗೆಂಡೆ: ಬಟಾಟೆ; ಆಲೂಗೆಡ್ಡೆ (ಕೊಡ.ಜಿ)

ಇಲಾತ್‌ಬಾಳ್: ತಿಂಗಳ ಹುರುಳಿ (ಕೊಡ.ಜಿ)

ಇಲಾತ್ಸೀಂಗೆ: ಇಲಾತಿ ಸೀಗೆ; ಒಂದು ಜಾತಿಯ ಕಾಡಿನ ಬಳ್ಳಿಗಳ ಪೊದೆ. ಹಂದಿ, ಹುಲಿ ಇತ್ಯಾದಿ ಪ್ರಾಣಿಗಳು ಅಡಗುವಷ್ಟು ದೊಡ್ಡದಾಗಿ ದಟ್ಟವಾಗಿ ಬೆಳೆಯುತ್ತದೆ. (ಮಲೆ)

ಇಲಾಯಿಚಿಕಾಯಿ: ಎಲಚಿಕಾಯಿ; ಚಕ್ಕುಲಿಯಂತೆ ಸುರಳಿ ಸುತ್ತಿದ ಬಿಳಿ ತಿರುಳು ಹೊಂದಿದ ಒಗರು ಮಿಶ್ರಿತ ಸಿಹಿರುಚಿಯುಳ್ಳ ಕಾಯಿ; ಬೆಟ್ಟುಣಿಸೆಕಾಯಿ (ಮೈಸೂ.ಜಿ)

ಇಲಾಯಿತಿಮಸಿ: ಕೋವಿಗೆ ತುಂಬುವ ಸುಧಾರಿತ ಮದ್ದು

ಇಲಾರಗಿಕಟ್ಟು: ಈರುಳ್ಳಿಯನ್ನು ಸಂಗ್ರಹಿಸಲು ಮಾಡಿಕೊಳ್ಳುವ ವ್ಯವಸ್ಥೆ (ಬಳ್ಳಾ.ಜಿ)

ಇಲಾಲ್: ಹಿಲಾಲು; ಮೆರವಣಿಗೆಯಲ್ಲಿ ಬೆಳಕಿಗಾಗಿ ಬಳಸುವ ಸಾಧನ (ಮಂಡ್ಯ.ಜಿ)

ಇಲಿಅಂಡೆ: ಇಲಿಹಿಡಿಯುವ ಸಾಧನ

ಇಲಿಎಡೆ: ಭೂಮಿ ಪೂಜೆಯಲ್ಲಿ ಎಲೆ ಕಡಬು ಸಹಿತವಾಗಿ ಭೂಮಿಯಲ್ಲಿ ಹೂತಿಡುವ ಒಂದು ಎಡೆ; ಗದ್ದೆ ಕೊಯ್ಲಿನ ಸಮಯದಲ್ಲಿ ಹೂತಿಟ್ಟ ಎಡೆಯನ್ನು ಮತ್ತೆ ನೋಡಲಾಗುತ್ತದೆ, ಅದು ಸಿಕ್ಕರೆ ಅದನ್ನು ಗೋಣಬೆಗೆ ತಂದಿಡುವ ಸಂಪ್ರದಾಯವೂ ಕೆಲವೆಡೆ ಇದೆ (ಉಕ.ಜಿ)

ಇಲಿಕಿ/ಇಲಿಕೆ: ೧. ಕಂಠ ತಟ್ಟಿದ ಹಸಿ ಮಡಕೆಗಳನ್ನು ಒಣಗಿಸುವುದಕ್ಕಾಗಿ ಇಡಲು ಬಳಸುವ ಒಂದು ಸಾಧನ. ಗಡಿಗೆಯನ್ನು ಅರ್ಧಕ್ಕೆ ಒಡೆದು ತಲೆಕೆಳಗಾಗಿಟ್ಟು ಅದರ ಮೇಲೆ ಒಣಗಿಸಬೇಕಾದ ಗಡಿಗೆಯನ್ನು ಇಡುವರು ೨. ಪಾತ್ರೆ ತಳಕ್ಕೆ ಇಡುವ ಹುಲ್ಲು ನಾರಿನ ದುಂಡಾದ ವಸ್ತು; ಸಿಂಬೆ ೩. ಹೊಗೆ ಹೊರಹೋಗುವುದಕ್ಕಾಗಿ ಕುಂಬಾರರು ತಮ್ಮ ಆವಿಗೆಗೆ ಜೋಡಿಸುವ ಐದು ತೂತುಗಳಿರುವ ಒಡಕು ಗಡಿಗೆಯ ತಳಭಾಗ

ಇಲಿಕಿವಿ ಸೊಪ್ಪು: ಎಮಿಲಿಯ ಸೋಚಿಫೋಲಿಯಾ: ಒಂದೆಲಗನ ಗಿಡ; ಬ್ರಾಹ್ಮಿ. ಇಲಿಕಿವಿ ಆಕಾರದ ಎಲೆಗಳುಳ್ಳ ಈ ಗಿಡ ತೋಟ ಗದ್ದೆಗಳ ಅಂಚಿನಲ್ಲಿ ಬೆಳೆದಿರುತ್ತದೆ. ರೋಗಪ್ರತಿಬಂಧಕ ಗುಣವಿರುವ ಇದರಿಂದ ಪಲ್ಯ, ತಂಬುಳಿ ಮಾಡುತ್ತಾರೆ. ಅಕ್ಕಿ ಹೆಂಡವನ್ನು ತಯಾರಿಸುವುದಕ್ಕೂ ಬಳಸುತ್ತಾರೆ (ತುಮ.ಜಿ) (ಚಿತ್ರ ನೋಡಿ)

ಇಲಿಗ: ಒಂದು ಬುಡಕಟ್ಟು ಸಮುದಾಯ ಮತ್ತು ಅದಕ್ಕೆ ಸೇರಿದ ವ್ಯಕ್ತಿ. ಇಲಿ ಹಿಡಿದು ತಿನ್ನುವುದರಿಂದ ಈ ಹೆಸರು ಬಂತೆಂದು ಹೇಳುತ್ತಾರೆ (ರಾಮ.ಜಿ)

ಇಲಿಚಿ: ನೋಡಿ– ಇಲಚಿ

ಇಲಿಪಂಚಮಿ: ಉತ್ತರ ಕರ್ನಾಟಕದ ಕೆಲವು ಊರುಗಳಲ್ಲಿ ನೇಕಾರ ಹಾಗೂ ಚಿತ್ರಗಾರ ಸಮುದಾಯದವರು ಗಣೇಶನ ಹಬ್ಬದ ಮರುದಿನ ಆಚರಿಸುವ ಹಬ್ಬ. ತಮ್ಮ ಮಗ್ಗಗಳನ್ನು ಇಲಿಗಳು ಕಡಿಯದಿರಲಿ ಎಂಬ ಆಶಯದಿಂದ ಚಿತ್ರಗಾರರು ತಯಾರಿಸಿದ ಇಲಿ ಮೂರ್ತಿಗಳನ್ನು ಗಣೇಶನ ಅಕ್ಕಪಕ್ಕಗಳಲ್ಲಿಟ್ಟು ಪೂಜಿಸಿ ಮಾರನೆಯ ದಿನ ತಿಪ್ಪೆಯಲ್ಲಿ ವಿಸರ್ಜಿಸುತ್ತಾರೆ

ಇಲಿಪಟ್ಟಿ: ನಾಗಂದಿಗೆಗೆ ಇಲಿ ಬರದ ಹಾಗೆ ಹೊಡೆಯುವ ಹಲಗೆ (ಉಕ.ಜಿ)

ಇಲಿಬೋನು: ಇಲಿಗಳನ್ನು ಹಿಡಿಯಲು ಬಳಸುವ ಒಂದು ಉಪಕರಣ. ಇದು ನೀಳವಾದ ಒಂದು ಪುಟ್ಟ ಬುಟ್ಟಿಯಾಕಾರದಲ್ಲಿದ್ದು ಅದರ ಮುಂಭಾಗದಲ್ಲಷ್ಟೆ ತೆರೆದುಕೊಂಡಿರುತ್ತದೆ. ಇಲಿ ಒಳಹೊಕ್ಕೊಡನೆ ಮುಚ್ಚಿಕೊಳ್ಳುವಂತೆ ಸೂಕ್ತ ಪ್ರಮಾಣದ ಲೋಹದ ತಗಡೊಂದನ್ನು ಮಾಡಿ ಅದರ ಒಂದು ಬದಿಯನ್ನು ಕಡ್ಡಿ ಸ್ಪ್ರಿಂಗ್ ಒಂದರಿಂದ ಜೋಡಿಸಿ ಬೋನಿನ ಒಳಭಾಗದಲ್ಲಿ ಎಳೆದು ಕಟ್ಟಿರುತ್ತಾರೆ.

ಇಲಿವಾರ: ೧. ನೇಕಾರರು ಅಚರಿಸುವ ಒಂದು ಹಬ್ಬ; ಇಲಿಯನ್ನು ಪೂಜಿಸುವ ಹಬ್ಬ (ಬಳ್ಳಾ.ಜಿ). ಇಲಿವಾರದ ದಿನ ಗದ್ದೆಯಲ್ಲಿ ನೀರಿಲ್ಲದಿದ್ದರೂ ನೀರು ತುಂಬಿಸಬೇಕೆಂಬ ಕಟ್ಟಳೆ ಇದೆ. ಇಲಿಗಳು ಪೈರನ್ನು ಹಾಳು ಮಾಡುವುದನ್ನು ತಡೆಗಟ್ಟಲು ಈ ಕ್ರಮ (ಶಿವ.ಜಿ/ಬಾಗ.ಜಿ) ೨. ಬಗ್ಗ ಜನ

ಸಮುದಾಯದವರು ಗೌರಿಹಬ್ಬದ ಮೂರನೆ ದಿನದಂದು ಮಾಡುವ ಆಚರಣೆ. ಆ ದಿನ ಇಲಿಗಳು ತಮಗೆ ಬೇಕಾದ ಆಹಾರ ಶೇಖರಿಸಲು ಬಿಲದಿಂದ ಹೊರಗೆ ಬರುತ್ತವೆಂದು ನಂಬುತ್ತಾರೆ. ಅಂದು ಗದ್ದೆಗೆ ಹೋಗದೆ ಮನೆಯಲ್ಲಿಯೇ ಉಳಿಯುತ್ತಾರೆ (ಧಾರ.ಜಿ) ೩. ಬ್ರಾಹ್ಮಣೇತರರಿಗೆ ಗಣೇಶನ ಹಬ್ಬದ ಮಾರನೆ ದಿನ ಬರುವ ದಿನವೇ ಇಲಿವಾರ. ಅಂದು ಮಾಂಸದೂಟ ಮಾಡುತ್ತಾರೆ (ಮಲೆ). **ಇರೂ:** *ಇಲವಾರ*

ಇಲಿಸುಂಡ: ೧. ಇಲಿಮರಿ ೨. ಬೆಳವಣಿಗೆ ಇಲ್ಲದವನು; ಎಳಸು. ಒಂದು ಬೈಗುಳ

ಇಲಿಹಿಕ್ಕೆ: ಇಲಿಯ ಮಲ. ಮಗು ಮೂತ್ರ ವಿಸರ್ಜಿಸದಿದ್ದರೆ ಇದನ್ನು ಹರಳೆಣ್ಣೆಯಲ್ಲಿ ತೇಯ್ದು ಹೊಕ್ಕಳಬಳ್ಳಿಗೆ ಸವರುವ ಪದ್ಧತಿ ಮಲೆನಾಡಿನಲ್ಲಿದೆ

ಇಲುಗು: ೧. ಪ್ರಾಣಿಗಳ ಮೂಳೆ; ಎಲುಬು ೨. ಸತ್ತೆ; ಮಾಸು ೩. ಮೊಟ್ಟೆ. **ಇರೂ:** *ಇಲ್ಗ, ಇಲಗ*

ಇಲ್ಕಿ: ಹೊರಸಿನ ಕೆಳಗೆ ಇಡುವ ಬೆಂಕಿ; ಬಾಣಂತಿಯರು ಮೈಕಾಯಿಸಿಕೊಳ್ಳಲು ಬಳಸುವ ಅಗ್ಗಿಷ್ಟಿಕೆಯಂತಹ ಸಾಧನ (ಗುಲ್ಬ.ಜಿ)

ಇಲ್ಕು/ಇಲುಕು: ಚೂರು; ರಾಗಿ, ಬೆಳ್ಳುಳ್ಳಿ ಮೊದಲಾದವುಗಳ ಎಸಳು (ತುಮ.ಜಿ)

ಇಲ್ಕೆ: ನೋಡಿ– ಇರಿಕೆ (ತುಮ.ಜಿ)

ಇಲ್ಚಾಬತ್ತ: ಇಲಿ; ಮೂಷಕ (ಬೀದ.ಜಿ/ಗುಲ್ಬ.ಜಿ)

ಇಲ್ಯಾಗು: ಈಯಲಾಗು; ಪ್ರಾಣಿಗಳು ಗರ್ಭ ಧರಿಸುವುದು (ಮೈಸೂ.ಜಿ/ಚಾಮ.ಜಿ)

ಇಲ್ಲ್: ಮನೆ (ದಕ.ಜಿ)

ಇಲ್ಲ: ಚೆನ್ನೆಮಣೆಯ ಗುಳಿ (ದಕ.ಜಿ)

ಇಲ್ಲಂಕಿಲ್: ಚೆನ್ನೆಮಣೆಯಾಟದಲ್ಲಿ ಅರಸನಾದ ಆಟಗಾರನಿಗೆ ಮಂತ್ರಿ ಆಟಗಾರರು ಕೊನೆಯಲ್ಲಿ ಕೊಡುವ ಕಾಯಿಗಳು (ದಕ.ಜಿ)

ಇಲ್ಲಗಾರ: ಮನೆಯ ಯಜಮಾನ

ಇಲ್ಲಟ: ಅಳಿಯನು ಮಾವನ ಮನೆಯಲ್ಲಿ ವಾಸಮಾಡುವುದು (ಕೋಲಾ.ಜಿ). **ಇರೂ:** *ಅಳಿಯಕಟ್ಟು, ಮನೆವಾಳ್ತನ (ಮೈಸೂ.ಜಿ/ಚಾಮ.ಜಿ)*

ಇಲ್ಲಣ: ೧. ಬೂದಿಯ ಮಸಿ ೨. ಸೌದೆಯನ್ನು ಉರಿಸಿದಾಗ ಗೋಡೆಗೆ ಕಟ್ಟುವ ಕಪ್ಪು ಬಲೆ (ಧಾರ.ಜಿ) ೩. ದೀಪದ ಕುಡಿ ಉರಿದು ಕಟ್ಟಿದ ಕಪ್ಪಾದ ಕಿಟ್ಟ ೪. ಹೊಗೆ ಹಿಡಿದ ಜೇಡನ ಬಲೆ (ಮಂಡ್ಯ.ಜಿ). **ಇರೂ:** *ಇಲ್ಲಗೂ; ಇಲ್ಲಣ್ಣು*

ಇಲ್ಲಣಗು: ಹೊಗೆ ಹಿಡಿದ ಜೇಡರಬಲೆ (ಮೈಸೂ.ಜಿ)

ಇಲ್ಲಿಅಲ್ಕತ್ತ್: ಮಾಪಿಳ್ಳೆ ಸ್ತ್ರೀಯರು ಕಿವಿಯ ಮೇಲಂಚುಗಳಲ್ಲಿ ಧರಿಸುವ ಅರ್ಧ ಚಂದ್ರಾಕಾರದ ಆಭರಣ (ದಕ.ಜಿ). **ಇರೂ:** *ಅಲಿಕತ್*

ಇಲ್ಲಿಸ್ನ: ಇಲಿಪಾಷಾಣ (ದಕ.ಜಿ)

ಇಲ್ಲ್‌ಪಗರುನು: ಮನೆ ಬದಲಿಸುವುದು; ಮದುವೆಯಾಗಿ ಅತ್ತೆ ಮನೆಗೆ ಬಂದ ಹೆಣ್ಣು ಮೊದಲ ಬಾರಿ ತಾಯಿ ಮನೆಗೆ ಹೋಗುವುದು (ದಕ.ಜಿ)

ಇವರ: ೧. ವೇಗ ೨. ಆತುರ ೩. ಸಡಗರ ೪. ಸಂಭ್ರಮ. **ಪ್ರ:** ಅವನಿಗೆ ಸದಾ ಇವರ, ತಳಾರ ಅನ್ನೋದ್ ಇಲ್ಲ

ಇವಿಕ: ತಂತ್ರ

ಇಶಿವಿಮುಳ್ಳು: ಒಂದು ಸಸ್ಯ (ದಕ.ಜಿ)

ಇಶುಮುಚ್ಚಲು: ಮರದ ಮುಚ್ಚಳ (ದಕ.ಜಿ)

ಇಶ್ಬು: ೧. ಇಸುಬು ೨. ಒಂದು ಬಗೆಯ ಚರ್ಮರೋಗ

ಇಷರಾತಿ: ಅಂಜು (ಬೀದ.ಜಿ)

ಇಷ್ಟಲಿಂಗ: ವೀರಶೈವರಲ್ಲಿ ಗುರುವಿನಿಂದ ದೀಕ್ಷೆ ಪಡೆದು, ಪ್ರತಿನಿತ್ಯ ಅಂಗೈಯಲ್ಲಿ ಇಟ್ಟುಕೊಂಡು ಪೂಜಿಸುವ ಲಿಂಗ

ಇಸ: ೧. ವಿಷ; ೨. ವಿಪರೀತ ಕಹಿ. **ಪ್ರ:** ಹಾಗಲಕಾಯಿ ಇಸಾ ಅಂದ್ರೆ ಇಸ (ಮಂಡ್ಯ.ಜಿ)

ಇಸಂಗೋಲಿ/ಇಸಾಬ್ ಗೋಲಿ: ಗ್ರಂದಿಗರ ಅಂಗಡಿಯಲ್ಲಿ ದೊರೆಯುವ ಔಷಧಿ ಸಾಮಗ್ರಿ (ಮಂಡ್ಯ.ಜಿ)

ಇಸಂಪುರಿ: ನೋಡಿ– ಇಸಮದಾರಿತಪ್ಲ

ಇಸಂಪ್ರಾಜಿ/ಇಸಪ್ರಾಜಿ: ನೋಡಿ– ಇಸಮದಾರಿ ತಪ್ಲ

ಇಸಕವಡಿ: ನೋಡಿ– ಇಸಮದಾರಿ ತಪ್ಲ

ಇಸಕಾ: ವಿಶಾಖಾ. ಈ ನಕ್ಷತ್ರದ ಮಳೆಹನಿಯಲ್ಲಿ ವಿಷ ಇದ್ದು ಬೆಳೆಗಳಲ್ಲಿರುವ ಕೀಟಗಳನ್ನು ಕೊಲ್ಲುವ ಸಾಮರ್ಥ್ಯವಿದೆ ಎಂದು ರೈತರು ನಂಬಿದ್ದಾರೆ.

ಇಸಕಾಯಿ: ವಿಷದಕಾಯಿ; ಕಹಿಯಾದ ಕಾಯಿ; ಹಾಗಲಕಾಯಿ

ಇಸಕುಧಾರಿ ಸೊಪ್ಪು: *ಜೆಸಾಕಿಯಾ ಫಾರ್ನೇಸಿಯಾಯ್ಡಿಸ್:* ಔಷಧೀಗುಣವುಳ್ಳ ಒಂದು ಕಳೆಗಿಡ

ಇಸಕ್ಕಿ: ವಿಶಾಖಾ ನಕ್ಷತ್ರದ ಮಳೆ

ಇಸಗಾಳ: ವಿಷದಕಾಳು; ಕಡಲೆಕಾಯಿಯನ್ನು ಚೆನ್ನಾಗಿ ಒಣಗಿಸದೇ ಇಟ್ಟಾಗ ಅದರಲ್ಲಿನ ಕಾಳು ಮುಗ್ಗು ಬಂದು ವಿಷಪೂರಿತ ಆಗುವುದು (ಶಿವ.ಜಿ)

ಇಸಘಾತಕ: ವಿಶ್ವಾಸಘಾತಕ; ಮೋಸಗಾರ; ಕೆಟ್ಟದ್ದನ್ನು ಮಾಡುವವನು; ನಂಬಿಕೆಗೆ ದ್ರೋಹ ಬಗೆಯುವವನು (ಧಾರ.ಜಿ)

ಇಸಜಾತಿ: ವಿಷಜಾತಿ; ಹೊಲಗದ್ದೆ ತೋಟಗಳಲ್ಲಿರುವ ವಿಷಪೂರಿತವಾದ ಹಾವು, ಚೇಳು ಮುಂತಾದವು (ದಾವ.ಜಿ)

ಇಸಣಿ: ಒಂದು ಔಷಧೀಯ ಸಸ್ಯ; ಈಶ್ವರಿ ಎಂಬ ಬಳ್ಳಿ ಮತ್ತು ಅದರ ಬೇರು

ಇಸದಮಾತು: ವಿಷಮಾತು; ಅಪಾಯಕಾರಿ ಮಾತು (ಬಿಜಾ.ಜಿ)

ಇಸದಾರಿ: ನೋಡಿ– ಇಸಮದಾರಿ ತಪ್ಲ

ಇಸದೋರು: ಶತ್ರುಗಳು

ಇಸಪಾದ್ರಿ: ಕಹಿಯಿಂದ ಕೂಡಿರುವ

ಇಸಬಾಯಿ ತೊಳಸೂದು: ವ್ಯಕ್ತಿಯು ಸತ್ತ ತಿಂಗಳಲ್ಲಿ ಸತ್ತ ವ್ಯಕ್ತಿಯ ರಕ್ತಸಂಬಂಧಿಕರು ಅನುಕೂಲವಾದ ದಿನ ಸಿಹಿ ಅಡುಗೆ ರೊಟ್ಟಿ ಪಲ್ಯ ಅನ್ನ ಮಾಡಿಕೊಂಡು ಹೋಗಿ ಸತ್ತವನ ಮನೆಯವರ ಜೊತೆಗೆ ಕೂಡಿಕೊಂಡು ಊಟ ಮಾಡಿ ಬರುವ ಸಂಪ್ರದಾಯ. ಬೆಲ್ಲ ಅಕ್ಕಿರವೆ ಹಿಟ್ಟು ಮತ್ತು ಬೇಳೆ ಒಯ್ದು ಅವರ ಮನೆಯಲ್ಲಿ ಅಡುಗೆ ಮಾಡಿ ಉಣ್ಣುವ ಪದ್ಧತಿಯೂ ಇದೆ (ಶಿವ.ಜಿ)

ಇಸಬು/ಇಸುಬು/ಇಸ್ಬು: ಚರ್ಮದ ಮೇಲೆ ಗುಳ್ಳೆ ಎದ್ದು ಕೆಂಪಗೆ ಕಾಣುವ ರೋಗ. ಬರಿಸಬು, ನೀರಿಸಬು ಎಂದು ಎರಡು ಬಗೆ. ಗುಳ್ಳೆಗಳಿಂದ ನೀರಾಡುವುದು ನೀರಿಸಬು, ನೀರಿಲ್ಲದಿರುವುದು ಬರಿಸಬು (ಮಂಡ್ಯ.ಜಿ). ತುಳಸಿ ಎಲೆ ಉಪ್ಪು ನಿಂಬೆರಸ ಅರೆದು ಹಚ್ಚಿದರೆ ನಿವಾರಣೆಯಾಗುತ್ತದೆ. (ಚಿಮ.ಜಿ). **ಇರೂ:** *ಗಜಕರ್ಣ (ಗುಲ್ಬ.ಜಿ)*

ಇಸಮದಾರಿ ತಪ್ಲ: ವಿಷಮಧಾರಿ. ಒಂದು ಬಗೆಯ ಔಷಧೀ ಸಸ್ಯ. ದನಗಳಿಗೆ ಗಾಯವಾದಾಗ ಇದನ್ನು ಅರೆದು ಹಚ್ಚುತ್ತಾರೆ. ಹುಣ್ಣುಗಳಿಗೆ ಈ ಸೊಪ್ಪನ್ನು ಅರೆದು ಕಟ್ಟಿದರೆ ಬೇಗನೆ ವಾಸಿಯಾಗುತ್ತದೆ. ಇದರ ಕಟುವಾಸನೆಗೆ ಹಾವುಗಳು, ವಿಷಜಂತುಗಳು ಬರುವುದಿಲ್ಲ ಎಂದು ನಂಬಿಕೆ. ವಿಷಾಪಹಾರಿ, ನಂಜುನಿವಾರಕ ಗುಣವಿದೆ ಎಂದು ಪ್ರತೀತಿ. **ಇರೂ:** *ಇಸಂಪುರಿ, ಇಸಂಪ್ರಾಜಿ, ಇಸಪ್ರಾಜಿ, ಇಸದಾರಿ (ಬೆಂಗ.ಜಿ) ಇಸುಮಧಾರಿ ಇಸಕವಡಿ, ದುಡಿಸೊಪ್ಪು (ಕೋಲಾ.ಜಿ)*

ಇಸಮಲ್ಲಿಗೆ: *ವ್ಯಾಲರಿಸ್ ಡೈಕಾಟಮ ಸೋಲನೇಶಿಯ:* ಅಲಂಕಾರಕ್ಕಾಗಿ ಬೆಳೆಸುವ, ಸುವಾಸನೆಯ ಬಿಳಿಹೂವಿನ ಒಂದು ಪೊದೆ. **ಇರೂ:** *ರಾಮಸರ ಪೊದೆ*

ಇಸಮಳೆ: ವಿಷಮಳೆ

ಇಸಮುಂಗಲಿ: ಕ್ಷೌರಿಕರ ಗಿಡ ಎಂದೂ ಹೆಸರಿದೆ. ಗಾಯದಿಂದ ಒಸರುವ ರಕ್ತವನ್ನು ನಿಲ್ಲಿಸುವ ಗುಣವಿದೆ. ಕ್ಷೌರಿಕರು ಇದನ್ನು ತಮ್ಮ ಅಂಗಡಿಯ ಬಳಿ ಇಟ್ಟಿರುತ್ತಾರೆ

ಇಸಮುಳ್ಳು: ಹೊಲಗದ್ದೆಗಳಲ್ಲಿ ಮಣ್ಣು ಸಡಿಲ ಮಾಡಲು ಹಾಗೂ ಗೊಬ್ಬರ ತೆಗೆಯಲು ಬಳಸುವ ಕಬ್ಬಿಣದ ಹಲ್ಲುಗಳಿರುವ ಸಾಧನ (ಮಂಡ್ಯ.ಜಿ/ ಚಿಮ.ಜಿ)

ಇಸಮೂಳೆ: ಒಂದು ಬಗೆಯ ವಿಷಜಂತು

ಇಸಮೈಯ್ಯಿ: ವಿಷದ ಮೈ. ಒಂದು ಸೊಳ್ಳೆ ಕಚ್ಚಿದರೂ ಬೊಬ್ಬೆಯೇಳುವಂಥ, ಗಾಯಗಳಾದರೆ ಬೇಗನೆ ವಾಸಿಯಾಗದಂಥ ಸೂಕ್ಷ್ಮ ಚರ್ಮದವರು (ಮಂಡ್ಯ.ಜಿ)

ಇಸರಬೇರ್: *ಅರಿಸ್ಟೊಲೊಶಿಯಾ ಇಂಡಿಕಾ:* ಈಶ್ವರೀ ಬೇರು. ಹೊಟ್ಟೆಹುಳದ ಬಾಧೆಗೆ ಇದು ಮದ್ದು (ದಕ.ಜಿ)

ಇಸಳು: ಎಸಳು; ಇಲಕ್ಕು (ಉಕ)

ಇಸಾಕಿಮಳೆ/ಇಸಾತಿ: ನೋಡಿ– ಇಸಕಾ. **ಪ್ರ:** ಇಸಾತಿ ಮಳೆ ಇಸದ ಮಳೆ (ಶಿವ.ಜಿ) (ಬಳ್ಳಾ.ಜಿ/ಶಿವ.ಜಿ)

ಇಸಾಬೇಂವ: ವಿಷಬೇವು; ಬಹಳಷ್ಟು ಕಹಿ ಆಗಿರುವದು (ಬೆಳ.ಜಿ)

ಇಸಾರ: ೧. ಲಂಚ ೨. ವಿಚಾರ ೩. ಮುಂಗಡ (ಬಾಗ.ಜಿ)

ಇಸಾರ ಹಿಡಿ: ಎಲೆ ಹಿಡಿಯುವುದು (ಬೆಳ.ಜಿ)

ಇಸಾಳಿ: ಉಸಾಲಿ; ಹೊಗೆಕೊಳವೆ; ಹೊಗೆ ಹೋಗಲು ನೀರ ಒಲೆಗಳಿಗೆ ಅಳವಡಿಸುವ ಮಣ್ಣಿನ ಕೊಳವೆ



ಇಸಿರೆ: ಸಗಣಿಯಿಂದ ಮಾಡಿದ ಗಣಪತಿ; ಬೆನನ

ಇಸುಕು (ಕ್ರಿ): ೧. ಹಿಸುಕು; ಕಿವುಚು; ಹಿಂಡು ೨. ಸೆಳೆ; ಕಸಿದುಕೊಳ್ಳು (ದಕ.ಜಿ) ೩. (ನಾ) ಮರಳು; ಮಣ್ಣು; ಉಸುಕು (ಕೋಲಾ.ಜಿ)

ಇಸುಬಿನಗೆಡ್ಡೆ: ಬೇರಿನಲ್ಲಿ ಔಷಧಿಗುಣ ಹೊಂದಿರುವ ಒಂದು ಸಸ್ಯ. ಇಸುಬು, ಕುರ, ಹುಣ್ಣು ಮೊದಲಾದ ಚರ್ಮರೋಗಗಳಿಗೆ ಮದ್ದು (ಚಾಮ.ಜಿ)

ಇಸುಬು: ನೋಡಿ– ಇಸಬು

ಇಸುಬ್ರಮ್ಮ: ವಿಷಬ್ರಹ್ಮ (ಮಂಡ್ಯ.ಜಿ)

ಇಸುರು: ಹಿಸುಕು; ಕಿವುಚು (ಕೋಲಾ.ಜಿ)

ಇಸುವಾದ: ಹೊಳೆಯುವ (ಉಕ)

ಇಸ್ಕ: ಜಿಪುಣ (ತುಮ.ಜಿ)

ಇಸ್ಕಟ್ಟು: ದೇಹದಲ್ಲಿ ಇರುವ ವಿಷ

ಇಸ್ಕಿಮುಳ್ಳು: ಒಂದು ಔಷಧೀಸಸ್ಯ

ಇಸ್ತಾಮ: ವಿಶಾಲ; ಅಗಲ; ವಿಸ್ತೀರ್ಣ (ದಕ.ಜಿ). **ಇರೂ:** ಇಸ್ತ್ರಣ

ಇಸ್ತಿರ್ಣೆ: ವರ್ತನೆ (ಮೈಸೂ.ಜಿ). **ಪ್ರ:** ಈಚೀಚ್ಗೆ ಅವನ ಇಸ್ತಿರ್ಣೆ ಯಾಕೊ ಸರಿಯಾಗಿ ಕಾಣುಸ್ತಿಲ್ಲ

ಇಸ್ತ್ರಿ: ಶಾಖದ ಪೆಟ್ಟಿಗೆಯಿಂದ ಬಟ್ಟೆಗಳ ಸುಕ್ಕು ತೆಗೆಯುವಿಕೆ (ದಕ)

ಇಸ್ತ್ರಿ ಎಲೆ: ಊಟ ಮಾಡಲು ಬಳಸುವ ಮುತ್ತುಗದ ಎಲೆ. ಮುತ್ತುಗದ ಎಲೆಗಳನ್ನು ಜೋಡಿಸಿ ಒಂದಕ್ಕೊಂದು ಹಂಚಿಕಡ್ಡಿಯಿಂದ ಚುಚ್ಚಿ ತಟ್ಟೆಯಾಕಾರದಲ್ಲಿ ಮಾಡಿದ ಎಲೆ. ಅವು ಒಣಗಿದ ಮೇಲೂ ಅಂಚು ಮಡಿಸಿಕೊಳ್ಳದಂತೆ ಅವುಗಳನ್ನು ಒಂದರ ಮೇಲೆ ಒಂದರಂತೆ ಇಟ್ಟು ಮೇಲೆ ಭಾರ ಹೇರುತ್ತಾರೆ.

ಇಸ್ತ್ರೆ: ೧. ಸುಮಂಗಲಿ; ಮುತ್ತೈದೆ ಹೆಣ್ಣು ೨. ಪ್ರಸಿದ್ಧಳಾದವಳು (ತುಮ.ಜಿ) ೩. ಸ್ತ್ರೀ (ಬೆಂಗ್ರಾ.ಜಿ) ೪. ಚೆಲುವೆ; ವೈಯಾರಿ; ಬಿಂಕಗಾರ್ತಿ **ಇರೂ:** ನಿಸ್ತ್ರೆ ೫. ಊಟದ ಎಲೆ; ಇಸ್ತ್ರಿ ಎಲೆ (ಮಂಡ್ಯ.ಜಿ).

ಇಸ್ದಾಕು: ಇಸಿದುಹಾಕು; ಹೋಳು ಮಾಡು; ಕಿತ್ತು ಹಾಕು (ಮಂಡ್ಯ.ಜಿ)

ಇಸ್ದು: ಹಿಸಿದು; ಭಾಗಮಾಡಿ (ಮೈಸೂ.ಜಿ)

ಇಸ್ನಕಂಬೆ: ಉಳುವಾಗ ನೇಗಿಲು ಮತ್ತು ನೊಗ ಕೂಡಿಸುವ ಕಟ್ಟಿಗೆಯ ದಂಡ (ಉಕ.ಜಿ). **ಇರೂ:** ಈಸು, ಈಚು

ಇಸ್ಪತ್ರಿ: ವಿಶ್ವಪತ್ರಿ ಹೂ (ಉಕ.ಜಿ)

ಇಸ್ಬು: ನೋಡಿ– ಇಸುಬು

ಇಸ್ಮುಂಗ್ರಿ: ವಿಷಮುಂಗಲಿ; ಒಂದು ಔಷಧಿಸಸ್ಯ (ದಕ.ಜಿ)

ಇಸ್ರೂಪ: ವಿಶ್ವರೂಪ (ಉಕ)

ಇಸ್ಲಂಗಿಗಿಡ: ಮುಳ್ಳುಕಂಟಿಯಂತೆ ಬೆಳೆಯುವ ಗಿಡ. ಇದನ್ನು ಉರುವಲಿಗೆ ಉಪಯೋಗಿಸುತ್ತಾರೆ (ಬಳ್ಳಾ.ಜಿ)

ಇಸ್ಸಿ: (ನಾ). ೧. ಹೇಲು; ಮಲ; ಕಕ್ಕಸು. ೨. (ಕ್ರಿ) ಇಬ್ಭಾಗ ಮಾಡು

ಇಸ್ಸೆ: ೧. ಹಿಸ್ಸೆ; ಭಾಗ; ೨. ಆಸ್ತಿಯಲ್ಲಿ ಪಾಲು; –ವಿಭಾಗ (ಚಿತ್ರ.ಜಿ)

ಇಳಂಪರ್ತಿ: ಪ್ರತಿರಾತ್ರಿ; ರಾತ್ರಿರಾತ್ರಿಗೂ (ರಾಮ.ಜಿ)

ಇಳಂಬರ: ಇಳಿಮುಖ

ಇಳಕಲ್ಲುಸೀರೆ: ಇಳಕಲ್ ಎಂಬ ಊರಿನ ನೇಕಾರರು ತಯಾರಿಸುವ ವಿಶಿಷ್ಟ ವಿನ್ಯಾಸ, ಬಣ್ಣಗಳ ನೂಲಿನ ಸೀರೆ

ಇಳಕು (ಕ್ರಿ): ಇಳಿಸು; ಕೆಳಕ್ಕೆ ಇಡು. **ಇರೂ:** ಇಳಗು

ಇಳಗು (ಕ್ರಿ): ೧. ಕೆಳಕ್ಕೆ ಇಳಿಸು; ಕತ್ತಲೆಯಲ್ಲಿ ಹುಡುಕಾಡು ೨. ನೇವರಿಸು (ಉಕ)

ಇಳಗೂರ್ಗಿಪೂಜೆ: ನಾಟಿ ಮಾಡಿದ ಪೈರು ಮೊಳಕೆಯೊಡೆದ ಮೇಲೆ ಕೂರಿಗೆಗೆ ಸಲ್ಲಿಸುವ ಪೂಜೆ

ಇಳಜಾಪು: ಇಳಿಜಾರು; ತಗ್ಗಾಗುತ್ತಾ ಬಂದ ಪ್ರದೇಶ (ಗುಲ್ಬ.ಜಿ)

ಇಳಬತ್ತು: ಇಳಿಹೊತ್ತು; ಮಧ್ಯಾಹ್ನದ ನಂತರದ ಸಮಯ. ಈ ಹೊತ್ತಿನಲ್ಲಿ ಕೃಷಿ ಕೆಲಸಗಳನ್ನು ಪ್ರಾರಂಭಿಸಬಾರದೆಂಬ ನಂಬಿಕೆ ಇದೆ (ಧಾರ.ಜಿ) ನೋಡಿ– ಇಳವೊತ್ತು

ಇಳಬಾರೆ: ಇಳಿಜಾರಿನ ಬೋರೆ (ಮೈಸೂ.ಜಿ)

ಇಳವಲು: ಇಳಿಜಾರು (ತುಮ.ಜಿ)

ಇಳವಾರ: ಒಂದು ಜಾತಿಯ ಸಾರಿನ ಸೊಪ್ಪು (ಧಾರ.ಜಿ); ಇಳವಾರೆ ಸೊಪ್ಪು (ಮೈಸೂ.ಜಿ)

ಇಳವು (ಕ್ರಿ): ೧. ಇಳುಹು; ಇಕ್ಕು; ಪಾರಾಗು; ಸಲ್ಲಿಸು (ನಾ) ೨. ಲಾವಣಿ ಹಾಡುಗಾರಿಕೆಯ ಒಂದು ದನಿಸ್ಥಾನ

ಇಳವುದೆಗೆಯುವುದು: ೧. ಸ್ಪರ್ಧೆಗೆ ಮೋಡಿಕಾರ ಇಳಿದಾಗ ಅವನ ಸಹಾಯಕರು (ಹೆಚ್ಚಾಗಿ ಸ್ತ್ರೀಯರು) ಮಂತ್ರ

ಗಿಡಮೂಲಿಕೆಗಳ ಮೂಲಕ ಪ್ರತಿಸ್ಪರ್ಧಿಯ ಶಕ್ತಿ ಕಡಿಮೆ ಮಾಡುವ ಕ್ರಿಯೆ (ಬೆಂಗ.ಜಿ) ೨. ಹಾಡುಗಾರಿಕೆಯಲ್ಲಿ ಇಳಿದನಿಯಲ್ಲಿ ಹಾಡಬೇಕಾದ ಭಾವ

ಇಳವೊತ್ತು: ಇಳಿಹೊತ್ತು; ಸೂರ್ಯ ಮುಳುಗುವ ಸಮಯ; ಮಧ್ಯಾಹ್ನ ಮೂರು ಗಂಟೆಯಿಂದ ಸಂಜೆ ಐದು ಗಂಟೆಯ ಒಳಗಿನ ಅವಧಿ (ಶಿವ.ಜಿ)

ಇಳಸಲುಬೇಟೆ: ನೋಡಿ– ಇಡಿಚಲುಬೇಟೆ

ಇಳಿ: ೧. ಕೆಳಕ್ಕೆ ಸರಿ; ಧುಮುಕು ೨. ಸುರಿ (ಗುಲ್ಬ.ಜಿ)

ಇಳಿಕೂಳಿ/ಇಳಿಗೂಳಿ: ನೋಡಿ– ಇರುಗೂಣಿ

ಇಳಿಕೆ: ಮಲೆನಾಡಿನ ಗೌಡಲು ಸಮುದಾಯದವರ ಗೃಹ ಬಳಕೆಯ ವಸ್ತು

ಇಳಿಗಡಿ: ಇಳಿಜಾರು; ಕಡಿದಾದ ಪ್ರದೇಶ

ಇಳಿಗಣ್ಣು: ೧. ಇಳ್ಳಗಣ್ಣು; ಇರುಳಗಣ್ಣು; ರಾತ್ರಿ ವೇಳೆ ದೃಷ್ಟಿ ಮಂಜಾಗುವುದು; ರಾತ್ರಿ ಸರಿಯಾಗಿ ಕಣ್ಣು ಕಾಣಿಸದಿರುವುದು (ಶಿವ.ಜಿ) ೨. ಮಾಲುಗಣ್ಣು (ಶಿವ.ಜಿ)

ಇಳಿಗಾಲ: ೧. ಅವನತಿ ಕಾಲ ೨. ಹೊತ್ತು ಮುಳುಗುವ ಸಮಯ ೩. ವೃದ್ಧಾಪ್ಯ. **ಇರೂ:** *ಇಳಿಪತ್ತು; ಇಳಿಪರ್ತಿ*

ಇಳಿಗುಂಜಿ: ೧. ಕಾಂಚೀಧಾಮ ೨. ವೀರಕಸೆ (ದಕ.ಜಿ)

ಇಳಿಗೂಳಿ: ನೋಡಿ– ಇರುಗೂಣಿ

ಇಳಿಗೊಳ್ಡು: ಇಳಿಗೊರಡು; ಎತ್ತಿನ ಕೊರಳಿಗೆ ಹೆಚ್ಚಿನ ಭಾರ ಬೀಳುವಂತಾಗಲು ನೇತುಹಾಕುವ ಮರದ ಕೊರಡು (ಶಿವ.ಜಿ)

ಇಳಿತರ: ಕಡಿಮೆಯಾಗುವಿಕೆ; ಅಗ್ಗ (ಶಿವ.ಜಿ)

ಇಳಿತೆಗೆ (ಕ್ರಿ): ಉಪ್ಪು, ಮೆಣಸಿನಕಾಯಿ, ಪೊರಕೆಕಡ್ಡಿ, ವೀಳ್ಯದೆಲೆ ಮೊದಲಾದವುಗಳಿಂದ ಮುಖ ನೀವಳಿಸಿ ದೃಷ್ಟಿತೆಗೆಯುವುದು (ಮಂಡ್ಯ.ಜಿ). **ಇರೂ:** *ಇಳಿಒಗಿ (ಉಕ)*

ಇಳಿದೋಗು: ೧. ಖಾಯಿಲೆಯಿಂದ ತೀರ ನಿಶಕ್ತನಾಗು ೨. ಆರ್ಥಿಕವಾಗಿ ದುರ್ಬಲನಾಗು

ಇಳಿಪಟ್ಟಿ: ಹರಿಕಾಂತರ ಮದುವೆ ಸಂದರ್ಭದಲ್ಲಿ ತಿನ್ನುವ ಜೋಡಿ ವೀಳ್ಯದ ಎಲೆ (ಉಕ.ಜಿ)

ಇಳಿಪರ್ತಿ: ಅವನತಿ; ಇಳಿಕೆ. **ಇರೂ:** *ಇಳಿಪತ್ತು*

ಇಳಿಬಿಸಿಲು: ಮಧ್ಯಾಹ್ನದ ಒಂದೂವರೆ ಗಂಟೆಯಿಂದ ನಾಲ್ಕು ಗಂಟೆಯ ಒಳಗಿನ ಬಿಸಿಲು (ಉಕ.ಜಿ)

ಇಳಿಬಿಸಿಲು ಹೊಡೆಯುವುದು: ಇಳಿಬಿಸಿಲಿನಿಂದ ಮರ ಸುಡುವುದು; ಈ ಬಿಸಿಲು ಅಡಿಕೆ ತೋಟದ ಮೇಲೆ ಬಿದ್ದಾಗ ಮರವು ಸುಟ್ಟಂತಾಗುತ್ತದೆ (ಉಕ.ಜಿ)

ಇಳಿಬೇರು: ಆಲ ಮೊದಲಾದ ಮರಗಳಲ್ಲಿ ಕೊಂಬೆಯಿಂದ ಕೆಳಕ್ಕೆ ಇಳಿಯುವ ಬೇರು; ಬಿಳಿಲು

ಇಳಿಭೋಗ್ಯ: ಸಾಲಕ್ಕೆ ಪ್ರತಿಯಾಗಿ ನಿಗದಿತ ಅವಧಿಯ ಫಲಾನುಭವ (ಚಿತ್ರ.ಜಿ)

ಇಳಿಮದ್ದಲೆ: ಬಡಗುತಿಟ್ಟಿನಲ್ಲಿ 'ಏರು ಮದ್ದಲೆ' ಬಳಕೆಗೆ ಬಂದ ಬಳಿಕ ಹಿಂದಿನ ಕ್ರಮದ ಸಮಶೃತಿಯ ಮದ್ದಲೆಗೆ ಬಂದಿರುವ ಅಂಕಿತ (ದಕ.ಜಿ)

ಇಳಿಮೀನು: ೧. ತಿಳಿನೀರಲ್ಲಿ ತತ್ತಿಯಿಟ್ಟಾದ ಮೇಲೆ ಪುನಃ ಹೊಳೆಗೆ ಇಳಿಯುವ ಮೀನು (ಶಿವ.ಜಿ) ೨. ಸಣ್ಣಮೀನು; ಜಬ್ಬುಮೀನು; ಕಾಣಿಮೀನು (ಬೆಂಗ.ಜಿ)

ಇಳಿಮೇಡು: ಸಮನೆಲವಲ್ಲದ ಭೂಮಿ. ತಗ್ಗು ದಿಣ್ಣೆಯಿಂದ ಕೂಡಿದ ಜಮೀನು. **ಇರೂ:** ಇಳುಕಲು, ಇಳಿಜಾರು

ಇಳಿರಾಗಿ: ರಾಗಿಯ ಒಂದು ತಳಿ

ಇಳಿಲಿಟ್ಟ: ಇಳಿಬಿಟ್ಟ (ಉಕ.ಜಿ)

ಇಳಿಲೆ: ಸುಂದರಿ; ಹೆಂಡತಿ (ಮೈಸೂ.ಜಿ)

ಇಳಿವತಿ: ಸಾಲವನ್ನು ವಾಪಸು ಕೊಡಲಾಗದೆ ಅದರ ಬದಲಾಗಿ, ಹೊಲ ಕೊಟ್ಟವನಿಗೆ ವರುಷ ವರುಷವೂ ಉತ್ಪನ್ನ ಮಾಡಿಕೊಡುತ್ತ, ಕೊಟ್ಟ ಸಾಲ ತೀರಿದ ಮೇಲೆ ಹೊಲವನ್ನು ಮರಳಿಸುವ ಒಂದು ವ್ಯವಸ್ಥೆ (ಧಾರ.ಜಿ)

ಇಳಿವಿ ಮುಳ್ಳು: ಒಂದು ಸಸ್ಯ (ದಕ.ಜಿ)

ಇಳಿಶಿಂಗಿ/ಇಳೆಸಿಂಗಿ ಗಿಡ: *ಟೊಡೇಲಿಯ ಏಶಿಯಾಟಿಕ:* ತಲೆನೋವು ಮತ್ತು ಜ್ವರ ನಿವಾರಕ ಗುಣವುಳ್ಳ ಔಷಧಿ ಸಸ್ಯ (ಚಾಮ.ಜಿ)

ಇಳಿಶ್ರುತಿ: ತಗ್ಗು ಶ್ರುತಿ (ದಕ.ಜಿ)

ಇಳೀಬೀಳು: ನೋಡಿ– ಇಳೇಬೀಳು (ಮಂಡ್ಯ.ಜಿ)

ಇಳು: ೧. ಭಾರವಾದ ವಸ್ತುಗಳನ್ನು ಕೆಳಗೆ ಇಡುವುದು ೨. ಇಳಿಜಾರಾದ ಪ್ರದೇಶ

ಇಳುಕಲು/ಇಳುಕ್ಲು: ೧. ಇಳಿಸಲು ೨. ಇಳಿಜಾರು (ಮಂಡ್ಯ.ಜಿ). **ಇರೂ:** *ಇಳೋಡು* ೩. ರಾಗಿ ತೆನೆಯ ಕವಲು; ಇಲುಕು (ಮಂಡ್ಯ.ಜಿ)

ಇಳುವರಿ: ೧. ಫಸಲು ಹೆಚ್ಚಾಗುವಿಕೆ (ದಕ) ೨. ಪಾಳುಭೂಮಿ (ಗುಲ್ಬ.ಜಿ)

ಇಳುವು: (ಕ್ರಿ) ೧. ಕೆಳಗೆ ಇಳಿಸು **ಪ್ರ:** ಮಾವಿನ ಕಾಯಿ ಇಳುವು (ಬೆಳ.ಜಿ) ೨. ಭಾರ ಕಡಿಮೆ ಮಾಡಿಕೊಳ್ಳು (ನಾ) ೩. ಜಮೀನಿನ ತಗ್ಗಾದ ಭೂಮಿಯ ಭಾಗ (ಧಾರ.ಜಿ) ೪. ನೀರ ಹೊಂಡ್ಲು (ಚಿಮ.ಜಿ/ಬೆಂಗ್ರಾ.ಜಿ)

ಇಳುವುದು: ಮರದಲ್ಲಿರುವ ತೆಂಗು, ಮಾವಿನಕಾಯಿಗಳು ನೆಲಕ್ಕೆ ಬಿದ್ದು ಒಡೆಯದಂತೆ, ಪೆಟ್ಟಾಗದ ಹಾಗೆ ಕೊಯ್ದಿಡುವುದು (ಶಿವ.ಜಿ)

ಇಳೆತ್ತು (ಕ್ರಿ): ತೂರಿದ ರಾಶಿಯನ್ನು ಮತ್ತೆ ತೂರಿ ಹಸನು ಮಾಡುವ ಕ್ರಿಯೆ (ಬಳ್ಳಾ.ಜಿ/ಬೆಂಗ್ರಾ.ಜಿ)

ಇಳೆಶಾಸ್ತ್ರ: ವೀಳ್ಯಶಾಸ್ತ್ರ; ನಿಶ್ಚಿತಾರ್ಥ (ದಕ) **ಇರೂ:** *ವೀಳ್ಯದ ಶಾಸ್ತ್ರ, ಇಳೇಜಮ್ರ, ಇಳೇವು*

ಇಳೆಸಿಂಗಿ: ನೋಡಿ– ಇಳಿಶಿಂಗಿ

ಇಳೇಗಣ್ಣು: ನೋಡಿ– ಇಳಿಗಣ್ಣು

ಇಳೇಜಮ್ರ: ನೋಡಿ– ಇಳೆಶಾಸ್ತ್ರ

ಇಳೇದ ಸೀರಿ: ವೀಳ್ಯದ ಸೀರೆ; ಇದು ಹಸಿರು ಬಣ್ಣದ್ದಾಗಿರುವುದು. ವೀಳ್ಯೇದ ಕಾರ್ಯ ಮಾಡುವಾಗ ವಧು ಹಸಿರು ಸೀರೆ, ಹಸಿರುಬಳೆ ಮತ್ತು ಹಸಿರು ಬಣ್ಣದ ಕುಬಸ ತೊಡುವ ಸಂಪ್ರದಾಯ (ಶಿವ.ಜಿ). **ಇರೂ:** *ಬಪ್ಪಗಿ ಸೀರೆ*

ಇಳೇದಕಾರ್ಯ: ವೀಳ್ಯದ ಕಾರ್ಯ. ಬೀಗರನ್ನು ಎದುರುಗೊಂಡು ಅವರಿಗೆ ಊಟೋಪಚಾರದ ನಂತರ ಊರಿನ ಗುರು ಹಿರಿಯರನ್ನು ದೈವದವರನ್ನು ಮತ್ತು ಆಯಗಾರರನ್ನು ಕರೆಸಿ ಅವರ ಸಮ್ಮುಖದಲ್ಲಿ ವಧುವಿಗೆ ಸೀರೆ, ಕುಬುಸದ ಕಣ, ಹೊನ್ನುಂಗುರ, ಅರಿಶಿನ ಕುಂಕುಮ ಹಾಗೂ ಗಂಡಿಗೆ ರೇಷ್ಮೆ ವಸ್ತ್ರವನ್ನು ಕೊಡಿಸುವ ಪದ್ಧತಿ (ಶಿವ.ಜಿ)

ಇಳೇಪಟ್ಟಿ: ವೀಳ್ಯದ ಪಟ್ಟಿ; ಎಲೆ ಅಡಕೆ ಜೋಡು (ಉಕ) **ನೋಡಿ–** ಇಳಿಪಟ್ಟಿ

ಇಳೇಬೀಳು: ಇಳಿಬೀಳು ೧. ಜೋತು ಬೀಳು; ಜೋಲಾಡು ೨. ಸೊರಗು ೩. ಹಠಾತ್ ಬಂದು ಉಪಸ್ಥಿತನಾಗು ೪. ಮನಸೋಲು (ಬಳ್ಳಾ.ಜಿ)

ಇಳೇಲಿಕ್ಕು: ೧. ಕೆಳಕ್ಕೆ ಬರುವಂತೆ ಸುರಿ; ಸೋರು ೨. ನೀವಳಿಸು (ಬೆಂಗ್ರಾ.ಜಿ)

ಇಳೇವುಗಾಯಿ: ವೀಳ್ಯದೊಂದಿಗೆ ಇರುವ ತೆಂಗಿನಕಾಯಿ; ಮದುಮಗನು ಕೈಯಲ್ಲಿ ಹಿಡಿದಿರಬೇಕಾದ ತೆಂಗಿನಕಾಯಿ (ಮೈಸೂ.ಜಿ/ಮಂಡ್ಯ.ಜಿ)

ಇಳೋಡು: ನೋಡಿ– ಇಳುಕಲು

ಇಳ್ಕು: ಇಳಿಸು (ಮಂಡ್ಯ.ಜಿ). **ಪ್ರ:** ಒಲೆ ಮ್ಯಾಲಿಂದ ಸಾರು ಇಳ್ಕು

ಇಳ್ಗ: ತಲೆಗೂದಲಲ್ಲಿರುವ ಸಣ್ಣ ಹೇನು

ಇಳ್ಗೂರ್ಗಿ: ಬಿತ್ತಣಿಕೆ; ಬಿತ್ತನೆ ಮಂಗಳಗೊಳಿಸುವ ಪರ್ವ; ಕೂರಿಗೆಯಿಂದ ಕೆಳಗಿಳಿಯುವಿಕೆ (ಧಾರ.ಜಿ)

ಇಳ್ಗೆಮಣೆ: ನೋಡಿ– ಈಳಿಗೆಮಣೆ

ಇಳ್ತ/ಇಳಿತ: ಸಮುದ್ರದ ಕಡೆಗೆ ನೀರು ಹರಿಯುವುದು (ಉಡು.ಜಿ)

ಇಳ್ಯ: ವೀಳೆಯದೆಲೆ; ತಾಂಬೂಲ (ಮಂಡ್ಯ.ಜಿ). **ಇರೂ:** *ನಾಗವಲ್ಲಿ*

ಇಳ್ಯಾಕುಡು: ಎಲೆ ಅಡಿಕೆ ಕೊಟ್ಟು ಆಮಂತ್ರಿಸು; ಆಮಂತ್ರಿತರಿಗೆ ವೀಳ್ಯ ಅಡಿಕೆ ಕೊಡುವ ಮೂಲಕ ಸನ್ಮಾನಿಸು (ಬಿಜಾ.ಜಿ)

ಇಳ್ಯಾದ್ಕುಲ: ವೀಳ್ಯದ ಕುಲ; ಪರಿಶಿಷ್ಟ ಸಮುದಾಯದ ಒಂದು ಒಳಪಂಗಡ (ಚಾಮ.ಜಿ)

ಇಳ್ಳಿ/ಎರಳಿ: ಹೇರಳೆ; ಹುಳಿಕಾಯಿ ಬಿಡುವ ಒಂದು ಗಿಡ. **ಇರೂ:** *ಹೇರಳೆಕಾಯಿ ಗಿಡ, ಕಂಚಿಕಾಯಿ, ಎಳ್ಳಿಕಾಯಿ, ಎರಳೆಕಾಯಿ.*

ಇಳ್ಳಿನಮಣುಕು: ಎಳೆವಯಸ್ಸಿನ ಕರು (ತುಮ.ಜಿ)

ಇಳ್ಳು: ೧. ಅಳ್ಳಕ; ತೆಳುವು; ಸಡಿಲ ೨. ಇರುಳು

ಇಳ್ಳೂತ (ಕ್ರಿ): ಚೀಪುತ್ತ; ಕುಡಿಯುತ್ತ (ಮೈಸೂ.ಜಿ)

ಇಳ್ಳೆ: ೧. ಚಿಣ್ಣಿದಾಂಡಿನ ಆಟದಲ್ಲಿ ಬಳಸುವ ಬಿದಿರಿನ ಅಥವಾ ಮರದ ಕಡ್ಡಿಯ ಚಿಕ್ಕತುಂಡು; ಚಿಳ್ಳೆ; ಗಿಲ್ಲಿ. **ಪ್ರ:** ಕೆರೆಯ ಮೈದಾನದಲ್ಲಿ ಇಳ್ಳೆ ಆಡುವನು ೨. ಒಳಲೆ; ಒಳ್ಳೆ (ಮಂಡ್ಯ.ಜಿ). **ಪ್ರ:** ಮೂರು ಇಳ್ಳೆ ಎಕ್ಕದ ಹಾಲು ಬಾಯಿಗುಯ್ಯಬೇಕು

ಇಳ್ಳಿಕೋಲು: ದಾಂಡು; ಚಿಣ್ಣೆ ದಾಂಡು ಆಟದ ಉದ್ದನೆಯ ಕೋಲು

ಇಳ್ಳೆಣ್ಣೆ: ೧. ಹುಚ್ಚೆಳ್ಳೆಣ್ಣೆ; ಖಾದ್ಯತೈಲ (ಮಂಡ್ಯ.ಜಿ). **ಇರೂ:** *ಒಳ್ಳೆಣ್ಣೆ; ಉಂಟುಯಣ್ಣೆ* ೨. ಎಳ್ಳಿನ ಎಣ್ಣೆ. **ಪ್ರ:** ಹರಕೆಹೊತ್ತು ದೇವರುಗಳಿಗೆ ಇಳ್ಳೆಣ್ಣೆಯ ಸ್ನಾನ ಮಾಡಿಸುತ್ತಾರೆ.

ಇಳ್ಳೇವತ್ತು: ನೋಡಿ– ಇಳ್ಳೊತ್ತು

ಇಳ್ಳೊತ್ತು: ಇರುಳು ಹೊತ್ತು; ರಾತ್ರಿ ಸಮಯ (ಮಂಡ್ಯ.ಜಿ).

ಈ

ಈ(ಕ್ರಿ): ೧. ಕರುಹಾಕು ೨. ಕೊಡು

ಈಂಕರಿಸು: ೧. ಧಿಕ್ಕರಿಸು ೨. ಹ್ಣೂಂಕರಿಸು

ಈಂಕಾರ: ೧. ಹೀನ ರೀತಿ ೨. ಅಹಂಕಾರ (ಶಿವ.ಜಿ)

ಈಂದ್: ೧. *ಕ್ಯಾರಿಯೋಟ ಯುರೇನ್ಸ್:* ಬೈನೆ ಮರ. ಇದರಿಂದ ಸೇಂದಿ ತೆಗೆಯುತ್ತಾರೆ. ಎಲೆಯು ತೋರಣವಾಗಿ ಬಳಸಲ್ಪಡುತ್ತದೆ. ಪೂರ್ಣವಾಗಿ ಬೆಳೆದು ಹೂ ಬಿಟ್ಟ ಬಳಿಕ ಈ ಮರದ ತಿರುಳಿನಿಂದ ಈಂದ್ ಹುಡಿ ತಯಾರಿಸಲಾಗುತ್ತದೆ. ಇದು ಬಹಳ ತಂಪು ಎಂದು ನಾಟಿವೈದ್ಯರ ಅಭಿಪ್ರಾಯ ೨. ಏತದಲ್ಲಿ ನೀರು ಮೊಗೆವ ಅರ್ಧ ವೃತ್ತಾಕಾರದ ಅಗಲ ಬಾಯಿಯಿರುವ ಮರಿಗೆ; ಮರಂಬಿ (ದಕ.ಜಿ)

ಈಂಬುಳ: ಒಂದು ಬಗೆಯ ಮುಳ್ಳು ಸಸ್ಯ

ಈಕರಿಸಿಕೊಳ್ಳು: ಭಯಪಟ್ಟು ಕೂಗು (ಮಂಡ್ಯ.ಜಿ)

ಈಚಲ/ಈಚಲು: ೧. *ಫೀನಿಕ್ಸ್ ಎಕಾಲಿಸ್ ಸಿಲ್ವೆಸ್ಟ್ರಿಸ್:* ತಾಳೆ ಜಾತಿಗೆ ಸೇರಿದ ಬಹೂಪಯೋಗಿ ಮರ. ಇದರ ಹಾಲಿನಂತಹ ದ್ರವವನ್ನು ಸೇಂದಿ, ಈಚಲಹೆಂಡ ಎನ್ನುತ್ತಾರೆ. ಇದರ ರಸದಿಂದ ಬೆಲ್ಲ ಮತ್ತು ಕಲ್ಲುಸಕ್ಕರೆ ತಯಾರಿಸುತ್ತಾರೆ. ಈಚಲುಗರಿಗಳಿಂದ ಚಾಪೆ, ತಡಿಕೆ ನೇಯುತ್ತಾರೆ. ಗರಿಯ ಕಡ್ಡಿಗಳಿಂದ ಪೊರಕೆಯನ್ನು ಮಾಡುತ್ತಾರೆ. ಈಡಿಗರಿಗೆ ಪೂಜನೀಯ ವೃಕ್ಷ. **ಇರೂ:** *ಕದಂಬವೃಕ್ಷ; ಸೇಂದಿಗಿಡ* (ಚಿತ್ರನೋಡಿ) ೨. ಮಳೆಗಾಲದಲ್ಲಿ ಹುತ್ತದ ಬಳಿ ಅಥವಾ ಸಡಿಲವಾದ ಭೂಮಿಯಿಂದ ಹೊರ ಬೀಳುವ ರೆಕ್ಕೆಹುಳು; ಈಚಲುಳು (ದಕ).

ಈಚಲಕಸಬರ್ಗಿ: ಈಚಲು ಗರಿಯಿಂದ ಮಾಡಿರುವಂತಹ ಪೊರಕೆ. ಅಡುಗೆಮನೆ ಹಾಗೂ ದೇವರಕೋಣೆ ಕಸವನ್ನು ಈ ಕಸಬರಿಗಿಯಿಂದ ಗುಡಿಸುವುದಿಲ್ಲ (ಬಳ್ಳಾ.ಜಿ)

ಈಚಲಗರಚಿ: ಧೂಳನ್ನು ಹೊಡೆಯಲು ಈಚಲುಗರಿಯಿಂದ ಮಾಡಿದ ಸಾಧನ

ಈಚಲಪಟ: ಈಚಲುಮರಗಳು ಹೆಚ್ಚಾಗಿರುವ ಕಾಡಿನ ಪ್ರದೇಶ

ಈಚಲಬರ್ಲು: ಈಚಲುಗರಿಯಿಂದ ಮಾಡಿದ ಪೊರಕೆ (ಮೈಸೂ.ಜಿ) **ನೋಡಿ–** ಈಚಲ ಕಸಬರ್ಗಿ

ಈಚಲಮರದ ಮಜ್ಜಿಗೆ: ಈಚಲು ಮರದಿಂದ ಇಳಿಸಿದ ರಸ; ಮಜ್ಜಿಗೆಯ ಹಾಗೆ ಬೆಳ್ಳಗೆ ಇರುವ ಹೆಂಡ (ಚಿತ್ರ.ಜಿ). **ಇರೂ:** *ಸೇಂದಿ; ನೀರಾ; ಸೆರೆ;* ಕಳ್ಳು

ಈಚಲಸಬ್ಬೆ: ಈಚಲಕೋಲು. **ನೋಡಿ–** ಚಬ್ಬೆ

ಈಚಲಹರ: ಈಚಲು ಪೊದೆಗಳಿಂದ ತುಂಬಿದ ಪ್ರದೇಶ; ಕಾಡಿನ ಒಂದು ಪ್ರದೇಶದ ಹೆಸರು

ಈಚಲುಕಟ್ಟು: ಈಚಲು ಮರದ ಗರಿಗಳನ್ನು ಸವರಿ ಆ ಕಡ್ಡಿಯನ್ನು ಸೀಳಿ ತುದಿಗೆ ಗಂಟು ಹಾಕುವುದು (ಚಿಮ.ಜಿ)

ಈಚಲುಗಿ: ಈಚಲುಮರದ ತುದಿಯ ಒಳಭಾಗದಲ್ಲಿ ಇರುವ ಸುಳಿ ಎಲೆ; ಈಚಲು ದಿಂಡು (ಚಿಮ.ಜಿ.)

ಈಚಲುಗಿಣ್ಣು: ಈಚಲು ಮರ ಕಡಿದಾಗ ಕಾಂಡದ ತುದಿಯಲ್ಲಿರುವ ಎಳೆಯ ಚಿಗುರು ಮತ್ತು ಕಾಂಡ. ಇದು ತಿನ್ನಲು ತುಂಬಾ ರುಚಿ; ಇದನ್ನು ಕೊರೆದು ಹೆಂಡ ಇಳಿಸುವರು (ಶಿವ.ಜಿ)

ಈಚಲುತಟ್ಟಿ: ಈಚಲು ಕಡ್ಡಿಗಳನ್ನು ಹೆಣೆದು ತಯಾರಿಸಿದ ಪುಟ್ಟಿ. ಇವುಗಳನ್ನು ಮರಳು ತುಂಬಲು, ತೆಂಗಿನಕಾಯಿ ಸಾಗಿಸಲು ಬಳಸುತ್ತಾರೆ (ಚಿಮ.ಜಿ)

ಈಚಲುಮರದವ್ವ: ಕಾಡಿನ ಗಿಡಮರಗಳ ನಡುವೆ ಇರುವ ದೇವತೆ. ಈಕೆ ಹನ್ನೆರಡು ಮಂದಿ ಪರಿವಾರ ದೇವತೆಗಳನ್ನು ಹೊಂದಿದ್ದಾಳೆ ಎಂಬ ನಂಬಿಕೆ ಇದೆ (ಉಕ.ಜಿ)

ಈಚಲುವನ: ದಟ್ಟವಾಗಿ ಬೆಳೆದ ಈಚಲು ಗಿಡಗಳು ಇರುವ ಸ್ಥಳ (ಚಿಮ.ಜಿ)

ಈಚಲುಸೇವೆ: ತುಮಕೂರು ಜಿಲ್ಲೆಯ ಉಡಸಲಮ್ಮನ ಜಾತ್ರೆಯಲ್ಲಿ ಆಚರಿಸುವ ಸೇವೆ. ಉತ್ಸವ, ಪೂಜೆಗಳಾದ

ನಂತರ ಭಕ್ತನ ಮೈಮೇಲೆ ದೇವಿಯ ಆವಾಹನೆಯಾಗುತ್ತದೆ. ಆತನನ್ನು ದೇವಾಲಯದ ಪಕ್ಕದಲ್ಲಿ 'ಬನ್ನಿಮರ' ಎಂದು ಕರೆಯಲಾಗುವ ಈಚಲು ಮರದ ಬಳಿ ಕರೆದೊಯ್ಯುತ್ತಾರೆ. ಮುಳ್ಳುಗಳಿಂದ ತುಂಬಿದ ಎತ್ತರದ ಮರವನ್ನು ಡೊಳ್ಳು, ತಮಟೆ ವಾದ್ಯಗಳ ಹಿನ್ನೆಲೆಯಲ್ಲಿ ಹತ್ತುವ ಭಕ್ತ, ಮರದ ಮೇಲೆ ಸುಳಿಯ ನಡುವೆ ನಿಂತು ಉಳಿದ ಭಕ್ತರಿಗೆ ದರ್ಶನ ನೀಡಿ ಕುಣಿದಾಡುತ್ತಾನೆ

ಈಚಲುಹಣ್ಣು: ಈಚಲು ಮರದ ಹಣ್ಣು. ಇದು ರುಚಿಯಾಗಿದ್ದು ಉತ್ತುತ್ತೆ ಹಣ್ಣಿನಂತಿರುತ್ತದೆ (ಚಿಮ.ಜಿ)

ಈಚಲುಹೊಳ್ದೆ: ಈಚಲು ಮರದ ಗರಿ (ಶಿವ.ಜಿ)

ಈಚಾಬತ್ತಿ: ಮೂಗಿಲಿ. ಹೊಲಗದ್ದೆಗಳಲ್ಲಿ ವಾಸಮಾಡುವ, ಹಂದಿ ಮೂತಿಯಂತೆ ಚೂಪಾದ ಮೂತಿಯುಳ್ಳ ವಿಷಪೂರಿತ ಇಲಿ (ಮಲೆ)

ಈಚಿತುಂಡು: ಗಾಡಿಯ ನೊಗದಲ್ಲಿ ಬಳಸುವ ಸಾಧನ (ಬೆಂಗ.ಜಿ)

ಈಚು: ೧. ನೇಗಿಲು ಕುಂಟೆ ಮೊದಲಾದವುಗಳಿಗೆ ಜೋಡಿಸುವ ಉದ್ದನೆಯ ಮರ. **ಪ್ರ:** ಗೊಬ್ಬಿ ತುಂಡ ತಕೊಂಡೋಗಿ ಈಚ ಕೆತ್ತಿಸ್ಕೊಂಡು ಬಾ ೨. ಎಳೆಯ ಕಾಯಿ; ಹೀಚು (ಬೆಂಗ್ರಾ.ಜಿ) ೩. ಗಾಣವನ್ನು ತಿರುಗಿಸಲು ಸಹಕಾರಿಯಾಗುವಂತೆ ಇರುವ ಎಂಟು ಅಥವಾ ಹತ್ತು ಅಡಿ ಉದ್ದ ಮರ (ಹಾಸ.ಜಿ) ೪. ರೋಣಕಲ್ಲಿಗೂ ನೊಗಕ್ಕೂ ಜೋಡಿಸಿರುವ ದಪ್ಪನಾದ ಕೋಲು ೫. ಬಂಡಿಗೆ ಎರಡು ಗಾಲಿಗಳ ನಡುವಿನ ಕಬ್ಬಿಣದ ಹಾರಿಯ ಮಧ್ಯಭಾಗದಲ್ಲಿ ಜೋಡಿಸಲಾದ ಉದ್ದನೆಯ ಕಟ್ಟಿಗೆ (ಕ್ರಿ) ೬. ಎಳೆ; ಹಿಗ್ಗಿಸು

ಈಚುಕೈ: ಉಳುವಾಗ ಕೈಯಲ್ಲಿ ಹಿಡಿದು ಒತ್ತುವ ನೇಗಿಲಿನ ಭಾಗ; ಮೇಣಿ

ಈಚುಕೋಲು: ಈಚಿಗೆ ಹಾಕುವ ಕೋಲು

ಈಚೆಆಗು (ಕ್ರಿ): ೧. ಹೊರಗಾಗು; ಮುಟ್ಟಾಗು ೨. ದೊಡ್ಡೋಳಾಗು; ಮೈ ನೆರೆ

ಈಚ್ಕಡ್ಡಿ: ಮರದ ಮೇಲೆ ಅಳತೆಯ ಗುರುತು ಮಾಡಿಕೊಳ್ಳುವ ಉಪಕರಣ

ಈಚ್ಚಂಡ: ಕೊಳೆತ ಹೆಣ ಮತ್ತು ಅದರ ದುರ್ವಾಸನೆ (ಕೊಡ.ಜಿ)

ಈಚ್ಚಟ್ಟೆ: ಮರದ ಮೇಲಿನ, ಅಳತೆ ಮಾಡಿದಷ್ಟೂ ನಿಖರವಾಗಿ ಕಾಣಿಸಿಕೊಳ್ಳುವ ಗೆರೆ

ಈಚ್ಲುಕೆಲಸ: ೧. ಮನೆ ಹೊರಗಿನ ಕೆಲಸಗಳು ೨. ಎತ್ತು ಗೊತ್ತುಗಳ ಕಸಕಡ್ಡಿ ತೆಗೆಯುವ ಕೆಲಸಗಳು

ಈಜ ಗಳ: ದೂರಿ ಮರಕ್ಕೆ ಸಿಕ್ಕಿಸುವ ಮರದ ಕಂಬ (ಮಂಡ್ಯ.ಜಿ)

ಈಜಾಡ/ಈಜಾದ: ೧. ಒಂದು ಬಗೆಯ ಹಣ್ಣು ೨. ಶ್ರೇಷ್ಠ ಜಾತಿ (ಉಕ)

ಈಜಿಮರ: ೧. ಒಂದು ಬಗೆಯ ಕಾಡುಮರ (ಬೆಂಗ್ರಾ.ಜಿ) ೨. ಈಚಲ ಮರ (ಕೋಲಾ.ಜಿ)

ಈಜು (ಕ್ರಿ): ೧. ನೀರಿನಲ್ಲಿ ತೇಲು ೨. ಕೀಳು ೩. ಬಿಡಿಸು. **ಪ್ರ:** ತೆನೆಯನ್ನು ಈಜು ೪. ಹಿಡಿದೆಳೆ. **ಪ್ರ:** ಮೆದೆಯಿಂದ ಹುಲ್ಲನ್ನು ಈಜಿ ಕಟ್ಟು

ಈಜುಗು: ಎರಡು ಕೈಯಿಂದ ಒತ್ತುವ ಕ್ರಮ (ಶಿವ.ಜಿ)

ಈಜುಪೆಂಡಿ: ಕಟ್ಟಿಗೆಯ ತುಂಡುಗಳ ಕಂತೆ (ಬಳ್ಳಾ.ಜಿ) **ನೋಡಿ–** ಪೆಂಡಿ

ಈಜುಬುರುಡೆ: ನೀರಿನ ಮೇಲೆ ತೇಲಾಡಲು ಹಾಗೂ ಈಜುವುದನ್ನು ಕಲಿಯಲು ಬಳಸುವ ಸಾಧನ; ಸೋರೆಬುರುಡೆ



ಈಜೋಣಿ: ಯೋಜನ; ಸುಮಾರು ಹನ್ನೆರಡು ಮೈಲು; ಒಂದು ದೂರದ ಅಳತೆ

ಈಜ್ಗಪಿ: ಈದಕಪಿ; ಮರಿಹಾಕಿದ ಕಪಿ

ಈಟಾಚಿ: ಉಬ್ಬುಹಲ್ಲು

ಈಟಿ: ಒಂದು ಆಯುಧ; ತುದಿ ಚೂಪಾಗಿರುವ ನೇರ ಆಯುಧ; ಪ್ರಾಣಿಗಳನ್ನು ಇರಿದು ಕೊಲ್ಲುವ ಸಾಧನ; ಭರ್ಜಿ (ಕೋಲಾ.ಜಿ) **ನೋಡಿ–** ಇಟ್ಟಿ

ಈಟಿನ ಸೊಪ್ಪು: *ಗ್ಲಿರಿಸಿಡಿಯಾ:* ಎಲೆಗೊಬ್ಬರಕ್ಕಾಗಿ ಬಳಸುವ ಒಂದು ಮರ

ಈಟು: ೧. ಮರದ ಕೃಷಿಯ ಉಪಕರಣ (ಶಿವ.ಜಿ) ೨.ಇಷ್ಟು; ಚಿಕ್ಕ; ಸ್ವಲ್ಪ; ಅತ್ಯಂತ ಕಡಿಮೆ ಪ್ರಮಾಣದ.

ಈಡ್: ೧. ಕಟ್ಟಿಗೆಗಳನ್ನು ಜೋಡಿಸಿಟ್ಟ ಚಿತೆ ೨.ಕೋವಿಯಲ್ಲಿ ಗುರಿ ಇಡುವುದು (ದಕ.ಜಿ) ೩. ಕಷ್ಟ ಪರಿಹಾರಕ್ಕಾಗಿ ದೈವ ದೇವರುಗಳಿಗೆ ಹರಕೆ ಸಲ್ಲಿಸುತ್ತೇನೆಂದು ಸಂಕಲ್ಪಿಸಿ ಮುಡಿಪಾಗಿ ತೆಗೆದಿಡುವ ಆಭರಣ, ಹಣ, ತೆಂಗಿನಕಾಯಿ

ಮೊದಲಾದ ವಸ್ತುಗಳು (ದಕ.ಜಿ) ೪. ತೆರ ೫. ಕುರಿಗಳ ದೊಡ್ಡಿ (ದಕ.ಜಿ/ಕೋಲಾ.ಜಿ)

ಈಡಗಾಯಿ: ದೇವರಿಗೆ ಹೊಡೆಯುವ ತೆಂಗಿನಕಾಯಿ

ಈಡಾಗು: ೧. ಗುಂಡುಹಾರು ೨. ವಶವಾಗು ೩.ಹುಲುಸಾಗು ೪. ಗುರಿಯಾಗು

ಈಡಾಟ: ತೆಂಗಿನಕಾಯಿಗೆ ಗುರಿಯಿಟ್ಟು ಹೊಡೆಯುವ ಗ್ರಾಮೀಣ ಆಟ

ಈಡಾಡು (ಕ್ರಿ): ಎತ್ತಿ ಒಗೆ; ಬಿಸುಡು; ಚೆಲ್ಲಾಡು; ಎರಚಾಡು **ಇರೂ:** *ಈಡ್ಯಾಡು*

ಈಡಿಗಿಡು: ೧. ಓರಣವಾಗಿ ಜೋಡಿಸು ೨. ಪಣಕ್ಕೆ ಇಡು (ಬಳ್ಳಾ.ಜಿ)

ಈಡಿಗೆ ಹಾಕು: ಆಸ್ತಿ ಪಾಲು ಮಾಡುವಾಗ ಒಂದು ವಸ್ತುವಿನ ಮೌಲ್ಯವನ್ನಾಧರಿಸಿ ಇನ್ನೊಂದು ವಸ್ತುವನ್ನು ಜೋಡು ಮಾಡುವುದು (ತುಮ.ಜಿ/ಬಳ್ಳಾ.ಜಿ)

ಈಡಿನ ಹಬ್ಬ: ತುಮಕೂರು ಜಿಲ್ಲೆಯಲ್ಲಿ ಕಾರ್ತಿಕ ಮಾಸದಲ್ಲಿ ಆಚರಿಸುವ ಕೃಷಿಸಂಬಂಧಿ ಹಬ್ಬ. ದನಗಳನ್ನು ಈಡಿನ ಬಳಿ ಕರೆದೊಯ್ದು ಅವುಗಳ ಮೇಲೆ ಗೊಲ್ಲರು ತಯಾರಿಸಿರುವ ಅಕ್ಕಿ ಬೆರೆಸಿದ ರಾಗಿ ಮುದ್ದೆಗಳನ್ನು ಎಸೆಯುತ್ತಾರೆ. ಬಾಣ ಬಿರುಸುಗಳ ಮನರಂಜನೆಯಾದ ನಂತರ ಈಡಿಗೆ ಬೆಂಕಿ ಹಾಕುತ್ತಾರೆ **ಇರೂ:** *ಎತ್ತಿನಹಬ್ಬ*

ಈಡು: ೧. ಈಡಿನ ಹಬ್ಬದಂದು ದನಗಾಹಿಗಳು ನಿರ್ದಿಷ್ಟ ಜಾಗದಲ್ಲಿ ಕುಂಬಳಕಾಯಿಯ ಮೇಲೆ ಜಾಲಿ, ಬೇಲ, ರೋಜಿ, ಉಡಿಗೆ ಇತ್ಯಾದಿ ಗಿಡಗಳನ್ನು ಕಡಿದು ರಾಶಿ ಹಾಕುವುದು ೨. ಗುರಿ. ಪ್ರಾಣಿಗೆ ತಾಗುವಂತೆ ಹೊಡೆದ ಗುರಿ. (ಚಿಮ.ಜಿ) ೩. ಬಂದೂಕಿನಿಂದ ಬರುವ ಸಪ್ಪಳ (ಉಕ.ಜಿ) ೪. ಸರಿಸಮ. **ಪ್ರ:** ಇವ್ನು ಅವುನ್ಗೆ ಈಡ ೫. ದಪ್ಪ; ಬಹಳ ದೊಡ್ಡ ಪ್ರಮಾಣ (ಧಾರ.ಜಿ) ಸಮೃದ್ಧ (ಶಿವ.ಜಿ). **ಪ್ರ:** ತೆಂಗಿನಕಾಯಿ ಒಳ್ಳೆ ಈಡಾಗವೆ ೬. ಹರಕೆಯ ತೆಂಗಿನಕಾಯಿ. **ಪ್ರ:** ದೇವ್ರಗೆ ನೂರೊಂದು ಈಡುಗಾಯಿ ಹಾಕ್ಸಿದೊ ೭. ಹರಕೆ ನಡೆಸಿಕೊಡುತ್ತೇವೆ ಎಂದು ಚಿನ್ನ ಅಥವಾ ಬೆಳ್ಳಿ ಮುಂತಾದ ಅಮೂಲ್ಯ ವಸ್ತುವನ್ನು ಹರಕೆಯ ಹೆಸರಲ್ಲಿ ಕಾದಿರಿಸುವುದು. ಹರಕೆ ಸಂದಾಯವಾಗುವವರೆಗೆ ಅದನ್ನು ಮುಟ್ಟುವಂತಿಲ್ಲ (ದಕ.ಜಿ) ೮. ಜಮೀನಿಗೆ ಹೋಗಲು ಮಾಡಿಕೊಂಡಿರುವ ದಾರಿ (ಮಂಡ್ಯ.ಜಿ) ೯. ಮದುವೆ ನಿಶ್ಚಯವಾದ ಮೇಲೆ ಗಂಡಿನವರು ಹೆಣ್ಣಿಗೆ ನಂಬಿಕೆಗಾಗಿ ಕೊಡುವ ಆಭರಣ

ಈಡುಕಟ್ಟು(ಕ್ರಿ): ೧. ತಡೆಕಟ್ಟು; ಅಡ್ಡಲಾಗಿ ಒಡ್ಡು ಕಟ್ಟು ೨. ಕೇಡುಂಟಾಗದಂತೆ ತಡೆ (ನಾ) ೩. ನೀರನ್ನು ತಡೆಯಲು ಮಣ್ಣನ್ನು ಹಾಕಿ ಕಟ್ಟಿದ ಅಡ್ಡಕಟ್ಟೆ (ಶಿವ.ಜಿ); ಕೆರೆಯ ಅಥವಾ ಕಾಲುವೆಯ ಅಂಚನ್ನು ಕಲ್ಲುಗಳಿಂದ ಭದ್ರಪಡಿಸುವ ವಿಧಾನ;

ಈಡುಕೂಡು (ಕ್ರಿ): ಹೆಣಸುಡಲು ಸೌದೆಯನ್ನು ನಿರ್ದಿಷ್ಟ ಅಳತೆಯಲ್ಲಿ ಜೋಡಿಸು; ಚಿತೆ ಸಿದ್ಧಪಡಿಸು.

ಈಡುಗಾಯಿ: ನೋಡಿ– ಇಡಗಾಯಿ

ಈಡುಗಾರ: ಬೇಟೆಯ ನಿಪುಣ; ಶಿಕಾರಿಗಾರ; ನುರಿತ ಬಿಲ್ಲುಗಾರ; ಗುಂಡು ಹಾರಿಸುವವ (ಚಿಮ.ಜಿ/ಕೋಲಾ.ಜಿ)

ಈಡುಗೋಡೆ: ಸುತ್ತಲ ಗೋಡೆ (ಶಿವ.ಜಿ)

ಈಡುಮಾಡು (ಕ್ರಿ): ೧. ಕೋವಿಗೆ ಮದ್ದುಗುಂಡನ್ನು ತುಂಬು (ಚಿಮ.ಜಿ/ಕೋಲಾ.ಜಿ) ೨. ಗುರಿಮಾಡು

ಈಡುಲ್ಲು: ಬತ್ತವನ್ನು ತೆನೆಯಿಂದ ಬೇರ್ಪಡಿಸುವ ವಿಧಾನ (ತುಮ.ಜಿ); ಹಿಡಿಗಲು (ಬೆಂಗ್ರಾ.ಜಿ)

ಈಡುಸುಡು: ದನಗಳನ್ನು ಬೆಂಕಿಯ ಮೇಲೆ ಓಡಿಸು; ಕಿಚ್ಚುಹಾಯಿಸು (ತುಮ.ಜಿ)

ಈಡುಹೊಡೆ: ಬೇಟೆಯ ಪ್ರಾಣಿಯನ್ನು ಕೊಲ್ಲಲು ಗುರಿಯಿಟ್ಟು ಗುಂಡು ಹಾರಿಸು (ಮಲೆ)

ಈಡೆ: ಸ್ತುತಿ; ಹೊಗಳಿಕೆ (ತುಮ.ಜಿ)

ಈಡ್ದಕಾಣಿಕ್: ರೋಗ ಹಾಗೂ ಸಂಕಷ್ಟಗಳು ಬಂದಾಗ ಹರಕೆ ಹೇಳಿ ಅದರ ಸಂಕೇತವಾಗಿ ದೈವಕ್ಕೆ ಚಿನ್ನ, ಬೆಳ್ಳಿ, ಹಣ, ಅಕ್ಕಿ, ತೆಂಗಿನಕಾಯಿ ಮುಂತಾದ ರೂಪದಲ್ಲಿ ತೆಗೆದಿಟ್ಟ ಮುಡಿಪು

ಈಡ್‌ಬಿಡುವುದು: ದೈವಗಳಿಗೆ ಬಲಿ ಕೊಡುವ ಪ್ರಾಣಿಗಳನ್ನು ಮೊದಲೇ ಹರಕೆ ರೂಪದಲ್ಲಿ ಬಿಡುವುದು

ಈತ್‌ಸಾಪೆ: ಈಚಲಚಾಪೆ (ಕೋಲಾ.ಜಿ)

ಈದ: ಜನಿಸಿದ (ಮೈಸೂ.ಜಿ)

ಈದಡಿ: ಬಂಡಿಯ ಮೂಕಿಯ ತುದಿ

ಈದನಾಯಿ: ೧. ಮರಿ ಹಾಕಿದ ನಾಯಿ. ಹತ್ತಿರಕ್ಕೆ ಯಾರನ್ನೂ ಬರಗೊಡದಂತೆ ಗುರುಗುಟ್ಟುತ್ತಿರುತ್ತದೆ ೨. ಕುಂಟು ನೆಪಕ್ಕೆ ಜಗಳಕ್ಕೆ ಬರುವ ವ್ಯಕ್ತಿ

ಈದಹುಲಿ: ಆಗಷ್ಟೆ ಮರಿಗಳನ್ನು ಹಾಕಿದ ಹುಲಿ; ಇದು ಉಗ್ರ ಕೋಪಿಯಗಿರುತ್ತದೆ. ತುಂಬ ಕೋಪದಿಂದ

ಗುರುಗುಟ್ಟುವವರನ್ನು ಈದ ಹುಲಿಯ ಹಾಗೆ ಎಂದು ಹೋಲಿಸುವುದುಂಟು

ಈದಹುಲಿಯ ಹಾಲು ತರುವುದು: ಜನಪದ ಕಥೆಗಳಲ್ಲಿ ಕಥಾನಾಯಕನಿಗೆ ವಿಧಿಸುವ ಕಠಿಣ ಪರೀಕ್ಷೆ; ಮರಿಹಾಕಿದ ಹುಲಿಯ ಕೋಪ ತುಂಬ ಉಗ್ರವಾಗಿದ್ದು ಕಥಾನಾಯಕ ಆ ಕೋಪಕ್ಕೆ ಸಿಲುಕಿ ನಾಶವಾಗಬೇಕು ಎಂಬುದು ಕಠಿಣ ಪರೀಕ್ಷೆ ವಿಧಿಸಿದವರ ಉದ್ದೇಶ

ಈದು(ನಾ): ಮುಳ್ಳುಹಂದಿ (ಬಳ್ಳಾ.ಜಿ)

ಈದೊನಿ: ಕಬ್ಬಿಣದ ಅಂಡೆಯಲ್ಲಿ ಸಿಡಿಮದ್ದು ಜಡಿದು ತುಂಬಿಸಿ ಹಾರಿಸುವಂತಹ ಫಿರಂಗಿಯ ಗುಂಡು

ಈಪನೇರ: ನೊಣಗಳ ಹಿಕ್ಕೆ; ಹೇನಿನ ಮೊಟ್ಟೆ

ಈಪಾಟಿ: ಇಷ್ಟು ಹೆಚ್ಚು; ಇಷ್ಟೊಂದು (ಚಾಮ.ಜಿ). **ಇರೂ:** *ಈಪಾಟು*

ಈಪು: ಮಳೆಯಲ್ಲಿ ಒದ್ದೆಯಾಗುವುದು; ತೇವ (ಉಕ.ಜಿ)

ಈಬತ್ತಿ/ಈಬುತ್ತಿ/ಈಬೂತಿ: ವಿಭೂತಿ; ಭಸ್ಮ. ಸಾಮಾನ್ಯವಾಗಿ ಶಿವಭಕ್ತರು ಹಣೆಯ ಮೇಲೆ ಧರಿಸುವ ಚಿಹ್ನೆ. ಬ್ರಾಹ್ಮಣರಲ್ಲಿ ಸ್ಮಾರ್ತ ಸಂಪ್ರದಾಯದವರು ಧರಿಸುವ ಭಸ್ಮ

ಈಬತ್ತಿಕಟ್ಟು: ಹಣೆಗೆಯ ಮೇಲಿನ ವಿಭೂತಿಯ ಮೂರು ಗೆರೆ ಅಥವಾ ಪಟ್ಟೆಗಳು (ಚಿಮ.ಜಿ.)

ಈಬತ್ತಿಕಳ್ಳ: ಸಾಧಾರಣ ಕಳ್ಳ (ಗುಲ್ಬ.ಜಿ)

ಈಬತ್ತಿಗಿಡ: ವಿಭೂತಿ ಉಂಡೆಯಂತಿರುವ ಕಾಯಿಯುಳ್ಳ ಗಿಡ (ಬಿಜಾ.ಜಿ)

ಈಬು: ಅಂತರ

ಈಮಕ್ಕೆ: ಈ ಕಡೆಗೆ; ಈ ದಿಕ್ಕಿಗೆ (ಶಿವ.ಜಿ)

ಈಮ್ಯಾಕ ಬರು: ಹಸು ಅಥವಾ ಎಮ್ಮೆಗಳು ಗರ್ಭಕಟ್ಟಿ ಹೊಟ್ಟೆ ದಪ್ಪಗಾಗಿರುವುದು (ಶಿವ.ಜಿ)

ಈಯ: ನೋಡಿ– ಇಯ

ಈಯುವುದು: ಸಾಕು ಪ್ರಾಣಿಗಳು ಕರು ಹಾಕುವುದು

ಈಯ್ಯಾ: ನೋಡಿ– ಈಚು

ಈರ: (ನಾ) ೧. ಕತ್ತಿಯನ್ನು ಹಿಡಿದು ದೇವರ ಮುಂದೆ ಕುಣಿಯುವ ವೀರಮಕ್ಕಳು. **ಇರೂ:** *ಈರು* ೨. (ಕ್ರಿ) ಗರಗಸದಲ್ಲಿ ಮರ ತುಂಡರಿಸು (ಕೊಡ.ಜಿ)

ಈರಕಾಚ: ವೀರಗಾಸೆ; ಗಂಡುಗಚ್ಚೆ (ಮಂಡ್ಯ.ಜಿ)

ಈರಕಾರ: ನೋಡಿ– ಈರಗಾರ

ಈರಗಲ್ಲು: ೧. ವೀರಗಲ್ಲು; ಯುದ್ಧದಲ್ಲಿ ಮಡಿದ ವೀರನ ನೆನಪಿಗಾಗಿ ನೆಟ್ಟ ಕಲ್ಲು ೨. ಮದುವೆಯಾಗದೆ ಸತ್ತ ವೀರ ಯುವಕನ ಹೆಸರಿನಲ್ಲಿ ಕೆತ್ತಿಸಿ ನೆಡುವ ಕಲ್ಲು (ಮಂಡ್ಯ.ಜಿ). **ಇರೂ:** *ಕರುಗಲ್ಲು*

ಈರಗಾರ/ಈರಕಾರ: ೧. ಮದುವೆಗೆ ಮುಂಚೆಯೇ ಸತ್ತ ಯುವಕರನ್ನು ಈರಗಾರರು ಎನ್ನುತ್ತಾರೆ. ಇವರಿಗೆ ಚಕ್ರಶಾಂತಿ, ತಿಥಿ ಕ್ರಮಗಳು ಇರುವುದಿಲ್ಲ ೨. ಚೌಡಮ್ಮನ ಕುಣಿತದಲ್ಲಿ ಪುರವಂತರಂತೆ ವೇಷ ಧರಿಸಿ ಕುಣಿಯುವವರು (ತುಮ.ಜಿ)

ಈರಗಾಲ: ವೀರಗಾಲು; ವೀರಮಂಡಿ; ಮೊಣಕಾಲನ್ನು ನೆಲಕ್ಕೆ ಹಚ್ಚುವುದು; ಮಂಡಿಯೂರಿ ನಿಲ್ಲುವುದು. **ಇರೂ:** *ಈರ್ಮಂಡಿ (ಬೆಂಗ್ರಾ.ಜಿ)*

ಈರಗೂಡಿ: ಬೀರಗೂಡಿ; ಗೊಲ್ಲ ಜನಾಂಗದವರು ಮದುವೆಯಲ್ಲಿ ಆಚರಿಸುವ ಒಂದು ಸಂಪ್ರದಾಯ

ಈರಗ್ಯಾತ: ವೀರಕೇತ; ಜನಪದ ಕಾವ್ಯದಲ್ಲಿ ಬರುವ ಒಂದು ವ್ಯಕ್ತಿನಾಮ; ವಡ್ಡಗೆರೆನಾಗಮ್ಮನ ಮಾವ

ಈರಜಡೆ: ಜಡೆಯ ಆಕಾರದಲ್ಲಿರುವ ಹೊಂಬಾಳೆ

ಈರಣ: ೧. ಒಂದು ಸಣ್ಣ ಚರ್ಮವಾದ್ಯ; ಉರುಮೆ ೨.ವೀರಭದ್ರ (ಮಂಡ್ಯ.ಜಿ)

ಈರಣ್ಣಶಾಂಕ್ರಪ್ಪ: ಉತ್ತರ ಕರ್ನಾಟಕದ ರೈತರು ಪೂಜಿಸುವ ದೈವಗಳು (ಬಿಜಾ.ಜಿ)

ಈರತಮುನಿ: ವಿರಕ್ತಮುನಿ (ಚಾಮ.ಜಿ)

ಈರದಹಬ್ಬ: ಮೈಸೂರು ಜಿಲ್ಲೆಯ ತಗಡೂರಿನಲ್ಲಿ ಆಚರಿಸುವ ಹಬ್ಬ

ಈರದಿವ್ಮ್ಮವ್ಮ್ಮನ ಕಣಿವೆ: ಕೋಲಾರ ಜಿಲ್ಲೆಯ ಗೌರಿಬಿದನೂರು ಹಾಗೂ ಚಿಕ್ಕಬಳ್ಳಾಪುರದ ನಡುವೆ ಇರುವ ಒಂದು ಕಣಿವೆ

ಈರನಾಗಮ್ಮ: ಕೆಂಡಕೊಂಡ ಪ್ರವೇಶಿಸಿ ಮಹಾಸತಿಯಾದ ವೀರ ನಾಗಮ್ಮ ಎಂಬ ಸ್ತ್ರೀ; ಈಕೆಯನ್ನು ಕುರಿತ ಕಥನಗೀತೆಗಳು ಬಹಳ ಪ್ರಸಿದ್ಧ. (ಬಳ್ಳಾ.ಜಿ)

ಈರನಾರ್: ಒಂದು ಚರ್ಮವಾದ್ಯ; ಅರೆ; ಉರುಮೆ

ಈರಬಡಮ್ಮ: ಗೊಲ್ಲರ ಹೆಣ್ಣು ದೇವತೆ; ಬೊಮ್ಮೈಲಿಂಗನ ತಂಗಿ

ಈರಬಸವಿ: ವೀರಬಸವಿ ೧. ದೇವರ ಹೆಸರಿನಲ್ಲಿ ಬಿಟ್ಟ ವೇಶ್ಯೆ ೨. ನಡತೆ ಸರಿ ಇಲ್ಲದವಳು

ಈರರು: ವೀರರು; ದೇವರ ಅಂಗರಕ್ಷರು; ದೇವತೆಯನ್ನು ಸ್ತುತಿಸಿ, ಪೂಜಿಸಿ, ಹಾಡಿ, ಹರಸಿ, ಹೊಗಳಿ ಮೆರೆಸುವುದಕ್ಕೆ ಸಹಕರಿಸುವ ಭಕ್ತರು.

ಈರಲಪ್ಪ: ಹಸು ಇದ್ದಕ್ಕಿದ್ದ ಹಾಗೆ ಸತ್ತಾಗ ಈ ಸಾವು ನಿರ್ದಿಷ್ಟ ದೇವತೆಯಿಂದ ಆದದ್ದು ಎಂದು ತಿಳಿದು ಆಯಾ ದೇವರ ಹೆಸರಿನಿಂದ ಕಾಯಿಲೆಯನ್ನು ಗುರುತಿಸುತ್ತಾರೆ. ಅಂತಹವುಗಳಲ್ಲಿ ಇದೂ ಒಂದು (ಕೋಲಾ.ಜಿ)

ಈರಲು: ನೋಡಿ– ಈರ್ಲು

ಈರಲುಪೂಜೆ: ಮಗು ಹುಟ್ಟಿದ ಮೂರನೆಯ ದಿನ ಮಾಡುವ ಪೂಜೆ. ನೋಡಿ– ಈರ್ಲು

ಈರಿ: ನೋಡಿ– ಈಲಿ

ಈರಿಕೋಲು: ೧. ಬೇಟೆಯಾಡಿದ ಪ್ರಾಣಿಯ ಈಲಿಯನ್ನು ಸುಟ್ಟು ಬೇಟೆದೇವರಿಗೆ ಅರ್ಪಿಸಲು ಬಳಸಲ್ಪಡುವ ಕೋಲು ೨. ಕಡ್ಡಿಯಲ್ಲಿ ಚುಚ್ಚಿ ಬೆಂಕಿಯಲ್ಲಿ ಬೇಯಿಸಿದ ಮಾಂಸ. **ಇರೂ:** *ಕರಕಲುಕಡ್ಡಿ*

ಈರಿತೆಗೆ: ಪ್ರಾಣ ತೆಗೆ (ತುಮ.ಜಿ)

ಈರಿನಸೊಪ್ಪು: ಒಂದು ಔಷಧೀ ಸಸ್ಯ: ಜ್ವರ ನಿವಾರಿಸಲು ಇದರ ಸೊಪ್ಪನ್ನು ಅರೆದು ಲೇಪಿಸುತ್ತಾರೆ (ಚಾಮ.ಜಿ)

ಈರುಳ್ಳಿಬುಟ್ಟಿ: ಈರುಳ್ಳಿ ಸಂಗ್ರಹಿಸಿಡಲು ಬಳಸುವ ಸಾಧನ. ಸುಮಾರು ಒಂದು ಅಡಿ ಎತ್ತರವಿದ್ದು ಒಂದು ಅಡಿ ವ್ಯಾಸವನ್ನು ಹೊಂದಿರುವ ಇದನ್ನು ಕಬ್ಬಿಣದ ಸಣ್ಣ ಸಣ್ಣ ತಂತಿಗಳಿಂದ ಹೆಣೆಯಲಾಗಿರುತ್ತದೆ. ಬುಟ್ಟಿಯ ಮೇಲ್ಭಾಗದಲ್ಲಿ ಮುಚ್ಚಳವಿದ್ದು ಹಿಡಿದುಕೊಳ್ಳಲು ತಂತಿ ಹಿಡಿಕೆ ಇರುತ್ತದೆ. ಬುಟ್ಟಿಯಲ್ಲಿರುವ ಈರುಳ್ಳಿಗೆ ಗಾಳಿ ಆಡುವುದರಿಂದ ಈರುಳ್ಳಿಯು ಬಹಳದಿನ ಕೆಡುವುದಿಲ್ಲ

ಈರುಳ್ಳಿಶಿಂಗನಾತ: ೧. ಈರುಳ್ಳಿ ಹೂವಿನ ನಾಳದಿಂದ ಮಾಡಿಕೊಂಡ ಪೀಪಿ. **ಪ್ರ:** ಈರುಳ್ಳಿ ಶಿಂಗನಾತನ ಬೇಕಾದ್ರೆ ಊದ್ತೀನಿ, ಸಾಕಾದ್ರೆ ಕಡಕೊಂಡು ತಿಂತೀನಿ ೨. ಮಕ್ಕಳು ಈರುಳ್ಳಿಗೆ ಮೂರು ಕಡ್ಡಿ ಚುಚ್ಚಿ ಆಡುವ ಒಂದು ಆಟ (ಮಂಡ್ಯ.ಜಿ/ಮೈಸೂ.ಜಿ). **ಇರೂ:** *ಉಳ್ಳಿಊವ (ಬೆಂಗ್ರಾ.ಜಿ)*

ಈರುಳ್ಳಿಹಾವು: ಮೈಮೇಲೆಲ್ಲ ಈರುಳ್ಳಿ ಪದರಗಳಂತೆ ಗಂಟುಗಳಿದ್ದು ಈರುಳ್ಳಿ ಬಣ್ಣದಿಂದ ಕೂಡಿರುವ ಹಾವು (ಕೋಲಾ.ಜಿ)

ಈರುಳ್ಳಿಹುಳು: ನುಣುಪಾದ ಕಂದು ಮಿಶ್ರಿತ ಹಸಿರು ಹುಳುಗಳು

ಈರೆ: ಹೀರೆ. ಒಂದು ಬಗೆಯ ಬಳ್ಳಿ ಮತ್ತು ಅದರ ಕಾಯಿ; ಹೀರೆಕಾಯಿ **ಇರೂ:** *ಈರುದಕಾಯಿ.* **ಪ್ರ:** ಈರೆ ಹೂವಿನಂಗೆ ತುಪ್ಪ ಕಾಯಿಸಿ ಸೋರೆ ಹೂವಿನಂಗೆ ಅನ್ನ ಮಾಡಿವ್ನಿ (ಚಿತ್ರ ನೋಡಿ)

ಈರೆಹಕ್ಕಿ: ಬಾವಲಿ ಜಾತಿಗೆ ಸೇರಿದ ಹಕ್ಕಿ. **ಇರೂ:** *ತೋಲೆಹಕ್ಕಿ*

ಈರೋಬಿ: ವೀರ ಓಬವ್ವ ಜನಪದ ಕಥನಗೀತೆಯ ನಾಯಕಿ; ಈಕೆ ಕೆಂಡಕೊಂಡವಾಗಿ ಮಹಾಸತಿಯಾದ ಒಬ್ಬ ಸ್ತ್ರೀ. ಚಿತ್ರದುರ್ಗ ತುಮಕೂರು ಬಳ್ಳಾರಿ ಮೊದಲಾದ ಭಾಗಗಳಲ್ಲಿ ಇಂತಹ ಮಾಸ್ತಿಯರನ್ನು ಕುರಿತ ಕಥನಗೀತೆಗಳು ಪ್ರಸಿದ್ಧ

ಈರೋಳು: ತಾಳೆಮರದ ಎಳೆಯ ಕಾಯಿ (ದಕ.ಜಿ)

ಈರ್‌ಗಂಟಪ್ಪಿ: ಬಿತ್ತನೆ ಉಳುಮೆ ಮತ್ತು ಕಟಾವುಗಳಲ್ಲಿ ಪೂಜೆಗೊಳ್ಳುವ ದೇವತೆ (ಬಳ್ಳಾ.ಜಿ)

ಈರ್ಗಲ್ಲು: ವೀರಗಲ್ಲು ೧. ಪಿತೃಪಕ್ಷದಲ್ಲಿ ಪೂಜೆ ಪಡೆಯುವ ಕಲ್ಲು ೨. ರೈತರು ತಮ್ಮ ಹಿಂದಿನ ಎಲ್ಲ ಕೃಷಿಕರಿಗೂ ಗೌರವ ಸಲ್ಲಿಸುವ ಪ್ರತೀಕವಾಗಿ ಪೂಜಿಸುವ ಕೃಷಿಸಂಬಂಧಿ ದೇವತೆ (ಮಂಡ್ಯ.ಜಿ)

ಈರ್‌ಗಾಲಲ್ಲಿ ಕೂಡಾದು: ಮಂಡಿಯೂರಿ ಕುಳಿತು ಕೊಳ್ಳುವುದು (ಬಿಜಾ.ಜಿ)

ಈರ್ಗಾಸೆ: ವೀರಗಾಸೆ (ಚಾಮ.ಜಿ)

ಈರ್ಗೂಳಿ: ದೊಡ್ಡ ಮೀನು ಹಿಡಿಯಲು ಬಳಸುವ ಸಾಧನ; ದೊಡ್ಡಗಾತ್ರದ ಕೂಳಿ

ಈರ್‌ಬದ್ರ: ೧. ರೈತರು ಪೂಜೆ ಮಾಡುವ ಕೃಷಿಸಂಬಂಧೀ ದೇವತೆ; ಇದೊಂದು ಕಲ್ಲಿನ ವಿಗ್ರಹವಾಗಿದ್ದು ಅದರ ಮೇಲೆ ಬೇಟೆಗಾರನ ಚಿತ್ರವಿರುತ್ತದೆ ೨. ವೀರಭದ್ರ; ದಕ್ಷಯಜ್ಞದಲ್ಲಿ ಗಿರಿಜೆಯು ಯಜ್ಞಕುಂಡ ಪ್ರವೇಶಿಸಿ ದಹಿಸಿಹೋದಾಗ ಶಿವನು ತಾಳಿದ ಅವತಾರ

ಈರ್ಮಂಡಿ: ನೋಡಿ– ಈರಗಾಲ

ಈರ್‌ಮಕ್ಕಳ ಕುಣಿತ: ಒಂದು ಜನಪದ ಕಲೆ

ಈರ್ಯಮ್ಮ: ಮಾರಮ್ಮ

ಈರ್ಯಾಕೆ: ದಯೆ

ಈರ್ಯಾಡು (ಕ್ರಿ): ೧. ಏರ್ಯಾಡು; ಬಲ ತೋರಿಸು ೨. ರುಬ್ಬು ೩. ಆರ್ಭಟಿಸು (ಚಾಮ.ಜಿ).

ಈರ್ಲ: ನೋಡಿ– ಈರ್ಲು

ಈರ್ಲು/ಈರ್ಲ (ಕ್ರಿ): ೧. ಆಗತಾನೇ ಹುಟ್ಟಿದ ಶಿಶುವಿಗೆ ಶೀತರೋಗ ಬಾಧೆ ತಗುಲದಂತೆ ಮಾಡುವ ಒಂದು ಆಚರಣೆ. ಕೂಸು ಹುಟ್ಟಿದ ಮೂರು, ಐದು, ಒಂಭತ್ತನೇ ದಿನಗಳಲ್ಲಿ ಮಾಡುತ್ತಾರೆ ೨. ಬಾಣಂತಿಯ ಮಾಸನ್ನು ಹುದುಗಿಡುವುದು ೩. ಹೆರಿಗೆಯಾದ ಹನ್ನೊಂದು ಅಥವಾ ಹನ್ನೆರಡನೆಯ ದಿನ ಸೂತಕ ಕಳೆಯಲು ಮಾಡಿಸುವ ಸ್ನಾನ (ರಾಯ.ಜಿ/ಬಳ್ಳಾ.ಜಿ) ೪. ಮಕ್ಕಳಿಗೆ ಆಗುವ ಒಡಕು ಒಡಕಾದ ಭೇದಿ. ಮುಟ್ಟಾದ ಹೆಂಗಸರು ಮಕ್ಕಳನ್ನು ಮುಟ್ಟಿದರೆ ಹೀಗಾಗುತ್ತದೆ ಎಂಬ ನಂಬಿಕೆ ಇದೆ (ಮಂಡ್ಯ.ಜಿ)

ಈರ್ಶೈವ: ವೀರಶೈವ (ಧಾರ.ಜಿ)

ಈಲಂಚ: ಏಲಕ್ಕಿ (ಧಾರ.ಜಿ). **ಇರೂ:** *ಈಲಂಚೆ*

ಈಲತ್ತು: ೧. ಬೆನ್ನುಹತ್ತು; ಅಟ್ಟಿಸಿಕೊಂಡುಹೋಗು ೨. ಆಗತಾನೆ ಕಾಣಿಸಿಕೊಳ್ಳುತ್ತಿರುವ ಚಿಗುರು ಮೀಸೆ. **ಇರೂ:** *ಈಲ್ಗಿಬೀಳು*

ಈಲಾಗು: ಈಯಲಾಗು; ಗರ್ಭಧರಿಸು; (ದನಕರುಗಳ ಸಂದರ್ಭದಲ್ಲಿ) (ಮೈಸೂ.ಜಿ/ಚಾಮ.ಜಿ)

ಈಲಿ: ಯಕೃತ್; ಪಿತ್ಥಜನಕಾಂಗ (ಮಂಡ್ಯ.ಜಿ). **ಇರೂ:** *ಈಲಿತೊಳೆ, ಈರಿ*

ಈವಳಿಸು: ೧. ಸಹಿಸು ೨. ನಿವಾಳಿಸು

ಈಶ: ೧. ಶಿವ ೨. **ನೋಡಿ–** ಈಚು

ಈಶ್ವರನಕಣ್ಣು: ಯಕ್ಷಗಾನದಲ್ಲಿ ಶಿವನ ವೇಷದ ಹಣೆಯಲ್ಲಿ ಬರೆಯುವ ಕಣ್ಣಿನ ಚಿತ್ರ (ದಕ.ಜಿ)

ಈಶ್ವರನಮುಡಿ: ಯಕ್ಷಗಾನದಲ್ಲಿ ಶಿವನ ವೇಷದ ಶಿರೋಭೂಷಣ; ಜಟೆ (ದಕ.ಜಿ)

ಈಶ್ವರಬಸವಣ್ಣ: ರವಿಕೆ ಖಣದಲ್ಲಿ ಬರುವ ಒಂದು ವಿನ್ಯಾಸ

ಈಶ್ವರಿಬಳ್ಳಿ: ಅರಿಸ್ಟೊಲೋಕಿಯ ಇಂಡಿಕ: ಸೊಪ್ಪು, ಬಳ್ಳಿ ಹಾಗೂ ಬೇರುಗಳಲ್ಲಿ ಔಷಧಿ ಗುಣವುಳ್ಳ ಒಂದು ಗಿಡಮೂಲಿಕೆ. **ಇರೂ:** *ಗೋಪಾಲಪುಟ್ಟಿ ತೊಪ್ಪಲು (ದಕ)* (ಚಿತ್ರ ನೋಡಿ)

ಈಸ: ೧. ವಿಷ ೨. ಇಷ್ಟ ೩. ತುಸು; ಕಡಿಮೆ (ಮಂಡ್ಯ.ಜಿ) ಎತ್ತಿನಗಾಡಿಯ ತೊಟ್ಟಿಲಿಗೆ ಆಧಾರವಾಗಿರುವ ಪ್ರಮುಖವಾದ ಅಂಗ (ವಿಜಾ.ಜಿ)

ಈಸಗಾತ್ಕ: ವಿಷಘಾತಕ

ಈಸದಂಡಿಗಿ: ಎತ್ತಿನ ಬಂಡಿಯ ಒಂದು ಬಿಡಿ ಭಾಗ

ಈಸಲಗರಿ: ಈಚಲುಗಿಡದ ಗರಿ

ಈಸಾಡು: ೧. ಈಜಾಡು (ಗುಲ್ಬ.ಜಿ) ೨. ಶಿಕಾರಿ ಮಾಡುವಾಗ ಸಿಡಿಸುವ ಒಂದು ಗುಂಡಿನ ಪ್ರಮಾಣ

ಈಸು: ರೆಂಟೆ ಕುಂಟೆ ಮತ್ತು ಎಡೆಕುಂಟೆಗೆ ಜೋಡಿಸಿದ ಉದ್ದನೆಯ ಜೋಡಿ ಕಟ್ಟಿಗೆ (ಶಿವ.ಜಿ)

ಈಸುಕೋಲು: ಒಂದು ಬಗೆಯ ತಂತಿಯ ಪೊರಕೆ

ಈಸ್‌ದೇವ್: ಪೂಜಾರಿಯು ಮುಖ್ಯ ಎಲ್ಲೆಯಲ್ಲಿಗೆ ಹೋಗಿ ಪಂಚಕಜ್ಜಾಯವನ್ನು ಒಲೆಗೆ ಹಾಕಿ ಒಲೆಯ ಬೂದಿ ತಂದು ಪೂಜೆ ಮಾಡುವ ಒಂದು ಆಚರಣೆ (ದಕ.ಜಿ)

ಈಸ್ನಕಂಬೆ: ನೇಗಿಲಿನ ಒಂದು ಭಾಗ; ಇಚ್ಚಿ; ಇರ್ಚೆ

ಈಸ್ನಿಬೇರು: ನೋಡಿ– ಈಶ್ವರಿ ಬಳ್ಳಿ

ಈಸ್ಪತ್ರಿ: ನಿತ್ಯಪುಷ್ಪ

ಈಸ್ರಿ: ಒಂದು ಮದ್ದಿನ ಸಸ್ಯ (ದಕ.ಜಿ)

ಈಸ್ಲು: ೧. ಈಚಲು ಹುಳು ೨. ಈಜಾಡುವುದು

ಈಸ್ಲುಬಡಿ: ಈಜಾಡು (ಚಿತ್ರ.ಜಿ)

ಈಳಗಿತ್ತಿ: ೧. ವೀಳ್ಯಗಿತ್ತಿ; ಬಂಗಾರದವಳು; ದಾರಿತಪ್ಪಿದವಳು (ಉಕ.ಜಿ). **ಪ್ರ:** ಈಳಗಿತ್ತಿಯ ಸುತ್ತ ಭಾಳ ಜನ ನೆರಿವಾರು. ೨. ಈಡಿಗರ ಮಹಿಳೆ (ಬೀದ.ಜಿ)

ಈಳಿಗಿ: ನೋಡಿ– ಈಳಿಗೆ ಮಣೆ

ಈಳಿಗೆಮಣೆ: ತರಕಾರಿ ಹೆಚ್ಚಲು, ಕಾಯಿ ತುರಿಯಲು ಬಳಸುವ ಸಾಧನ

ಈಳಿಹಣ್ಣು: ಹಣ್ಣಾದ ಹೇರಳೆಕಾಯಿ. ಹಲ್ಲು ಝುಂ ಅನ್ನುವಷ್ಟು ಹುಳಿ. ಇದರ ಸಿಪ್ಪೆಯೇ ರುಚಿ

ಈಳ್ಯಒಡೆ (ಕ್ರಿ): ಕನ್ಯೆಯನ್ನು ನಿಶ್ಚಯ ಮಾಡಿಕೊಳ್ಳುವ ಸಂದರ್ಭದಲ್ಲಿ ಅಡಕೆ ಎಲೆ ಸಕ್ಕರೆ ಬಟ್ಟೆಗಂಟು ಇಷ್ಟನ್ನೂ ಸೇರಿಸಿ ಪೂಜಿಸಿ ದೈವಕ್ಕೆ ಹಂಚುವಿಕೆ (ಬಳ್ಳಾ.ಜಿ)

ಈಳ್ಯಾತಿದ್ದು: ಶುಭಕಾರ್ಯಗಳಲ್ಲಿ ಊರಿನ ಹಿರಿಯರಿಗೆ ವೀಳ್ಯವನ್ನು ತೆಗೆದಿಡುವುದು

ಈಳ್ಳೇವು: ೧. ವೀಳ್ಯ; ತಾಂಬೂಲ ೨. ಒಪ್ಪಂದಕ್ಕೆ ಬರುವುದು. **ಇರೂ:** *ಈಳ್ಯ*

ಉ

ಉಂಕಿ: ೧. ಮಗ್ಗದ ಉದ್ದ ಹಾಸು (ಧಾರ.ಜಿ); ಹತ್ತಿ ನೂಲಿನ ಹಾಸು (ಬೆಳ.ಜಿ) ೨. ನೂಲುವ ಲಾಳಿ

ಉಂಗಿಉಡಿಕೆ: ಧಾರೆಯ ಸೀರೆ (ಧಾರ.ಜಿ)

ಉಂಗಿಲ/ಉಂಗುರ: ೧. ಕೈ ಬೆರಳಿನ ಆಭರಣ ೨. ವಿವಾಹ ನಿಶ್ಚಿತಾರ್ಥ (ದಕ.ಜಿ)

ಉಂಗುಉಡಿಕೆ ಶಾಸ್ತ್ರ: ಮದುವೆಯಲ್ಲಿ ಧಾರಾ ಮುಹೂರ್ತಕ್ಕೆ ಮುಂಚೆ ವರನಿಗೆ ಅಲಂಕಾರ ಮಾಡುವ ಶಾಸ್ತ್ರ (ಚಿಮ.ಜಿ)

ಉಂಗುಟ/ಉಂಗ್ಟ: ಉಂಗುಷ್ಠ; ೧. ಕಾಲಿನ ಹೆಬ್ಬೆರಳು. **ಪ್ರ:** ಅವನಿಗಿ ಸಿಟ್ಟು ಉಂಗುಟದಿಂದ ನತ್ತಿ ಥನಕ ಏರ್ತು ೨. ಕಾಲಿನ ಹೆಬ್ಬೆರಳನ್ನು ತೂರಿಸುವ ಚಪ್ಪಲಿಯ ಭಾಗ. **ಪ್ರ:** ಉಂಗ್ಟ ಕಿತ್ತೋಗಿದೆ, ಚಪ್ಲಿ ಹಾಕಳಕ್ಕೆ ಆಗಲ್ಲ

ಉಂಗುಟಬಾರು: ಚಪ್ಪಲಿಯ ಉಂಗುಷ್ಟದಿಂದ ಎದೆ ಬಾರಿನವರೆಗೆ ಇರುವ ವಿವಿಧ ವಿನ್ಯಾಸದ ಚರ್ಮದ ಎಸಳು

ಉಂಗುಡುಸೋದು: ನೋಡಿ– ಉಂಗ್ಳಿಸೋದು

ಉಂಗುರ ಆಟ: ಅಣ್ಣೆಕಲ್ಲಾಟದ ಒಂದು ವಿಧ (ಚಿತ್ರ.ಜಿ)

ಉಂಗುರ ಪಾಟಲಿ: ಗಂಡಸರು ಧರಿಸುವ ಉಂಗುರ

ಉಂಗುರ ಹುಡುಕಾಟ: ಮದುವೆಯ ಸಂದರ್ಭದಲ್ಲಿ ಪಂಚಗಳಸ ಹೂಡಿ ತಾಳಿ ಕಟ್ಟುವ ಮೊದಲು ಒಂದು ತಟ್ಟೆಯಲ್ಲಿ ಅಕ್ಕಿಕಾಳನ್ನು ಹಾಕಿ ಅದರಲ್ಲಿ ಒಂದು ಉಂಗುರವನ್ನಿಟ್ಟು ವಧೂವರರಿಂದ ಹುಡುಕಿಸುವ ಆಟ (ಧಾರ.ಜಿ)

ಉಂಗುರಕೊಳೆತ: ಆಲೂಗಡ್ಡೆಯ ಎಲೆಗಳಲ್ಲಿ ಕಾಣಿಸಿಕೊಳ್ಳುವ ಒಂದು ರೋಗ (ಬಳ್ಳಾ.ಜಿ)

ಉಂಗುರವುಡಿಕೆ: ನಿಶ್ಚಿತಾರ್ಥ; ಒಪ್ಪಿಗೆಮಾತು (ಕೋಲಾ.ಜಿ)

ಉಂಗುರಸರಪಳಿ: ಎಲ್ಲ ಬೆರಳಿಗೂ ತೊಡಿಸಲಾಗುವಂತೆ, ಸರಪಳಿ ಹೆಣೆದ ಐದು ಉಂಗುರಗಳಿರುವ ಒಂದು ಮುಂಗೈ ಆಭರಣ

ಉಂಗುರಿಡೋದು: ವಧುವಿನ ಬೆರಳಿಗೆ ವರನು ಉಂಗುರತೊಡಿಸುವುದು (ಧಾರ.ಜಿ)

ಉಂಗುರ್ಗೂದ್ಲು: ಉಂಗುರದಂತೆ ಸುರುಳಿ ಸುರುಳಿಯಾಗಿರುವ ತಲೆಗೂದಲು; ಗುಂಗುರುಕೂದಲು

ಉಂಗುಲುಡಿಕೆ: ೧. ವರನನ್ನು ಎದುರುಗೊಳ್ಳುವುದಕ್ಕೆ ಮೊದಲು ಮಾಡುವ ಶಾಸ್ತ್ರ (ಚಿಮ.ಜಿ) ೨. ಮದುವೆಯ ಹೆಣ್ಣಿಗೆ ನೀವಳಿಸಿ ಸುತ್ತುಬರಿಸಿದ ಎಲೆಯಡಿಕೆಯನ್ನು ಗಂಡಿನ ಬಳಿ ಇಡುವುದು (ಬೆಂಗ್ರಾ.ಜಿ)

ಉಂಗುಷ್ಟ: ನೋಡಿ– ಉಂಗುಟ

ಉಂಗ್ಟ: ನೋಡಿ– ಉಂಗುಟ

ಉಂಗ್ರಗಟ್ಟು: ಎತ್ತುಗಳ ಕೊರಳಹಗ್ಗಕ್ಕೆ ಬಿಗಿಯಲು ಅನುಕೂಲವಾಗುವಂತೆ ನೊಗದಲ್ಲಿರುವ ಎರಡು ಕಬ್ಬಿಣದ ಉಂಗುರಗಳು (ಮಂಡ್ಯ.ಜಿ)

ಉಂಗ್ಲಾರ: ಬಳ್ಳಾರಿ ಜಿಲ್ಲೆಯಲ್ಲಿರುವ ಹಿರೇಮೈಲಾರ ಕ್ಷೇತ್ರ; ತುಂಗಭದ್ರಾ ನದಿ ಉಂಗುರಾಕಾರದಲ್ಲಿ ಆ ಕ್ಷೇತ್ರವನ್ನು ಆವರಿಸಿರುವುದರಿಂದ ಉಂಗ್ಲಾರ ಕ್ಷೇತ್ರ ಎಂದು ಹೆಸರು ಪಡೆದಿದೆ (ಬಳ್ಳಾ.ಜಿ)

ಉಂಗ್ಳಿಸೋದು: ಮನೆಗೆ ಸುಣ್ಣ ಬಳಿಯುವುದು (ಕೋಲಾ.ಜಿ). **ಪ್ರ:** ಶನ್ವಾರುಗ್ಳು ಬಂದವು, ಮನಿ ಉಂಗ್ಳಿಸೀನೇ ಹಬ್ಬ ಮಾಡಬೇಕು

ಉಂಚ: ಬಿದಿರಿನ ಕುಕ್ಕೆ; ತೂತು ಮಂಕರಿ

ಉಂಚಮಾಲು: ಉತ್ತಮ ಚಾಲಿ ಅಡಿಕೆ (ಉಕ)

ಉಂಚರಿಗೆ: ಒಂದು ಸಲ (ಉಕ.ಜಿ)

ಉಂಚಿ: ಉಣಚಿ; ೧. ಜೋಳ ರಾಗಿ ನವಣೆಗಳ ಬೊಡ್ಡೆ (ಬಳ್ಳಾ.ಜಿ) ೨. ಹುಣಿಸಿ

ಉಂಚಿಕಾಯಿ: ಹುಣಿಸೆಕಾಯಿ

ಉಂಜ: ೧. ಮಂಜ; ಸಮೂಹ ೨. ಹುಂಜ

ಉಂಟು (ಕ್ರಿ): ಬಳಿ; ಗೋಮಯ ಮಾಡು; ಊಟ ಮಾಡಿದ ಜಾಗದಲ್ಲಿ ಚೆಲ್ಲಿರಬಹುದಾದ ಅನ್ನದ ಅಗುಳುಗಳನ್ನು ಸಗಣಿಯ ಉಂಡೆ ಉರುಳಿಸಿ ಸ್ವಚ್ಛಗೊಳಿಸು (ದಕ). **ಇರೂ:** *ಒಂಟು* **ಪ್ರ:** ಊಟ ಆದಮೇಲೆ ಅಂಗೇ ಎಂಜಲುಂಟ್ಕೋ ಕೂಸೇ (ಮೈಸೂ.ಜಿ)

ಉಂಟ್ಳಿ: ಉಂಬಳಿ (ಕೊಡ.ಜಿ)

ಉಂಡ: ಮಿಶ್ರಬಣ್ಣ (ಮೈಸೂ.ಜಿ)

ಉಂಡಗಡುಬು: ಒಂದು ತಿನಿಸು; ಸಣ್ಣ ಕಡುಬು; ಉಂಡೆಗಡುಬು

ಉಂಡಗುರಿ: ಬಿಳಿ ಮತ್ತು ಕರಿ ಮಿಶ್ರಿತ ಬಣ್ಣ ಇರುವ ಕುರಿ (ಬಳ್ಳಾ.ಜಿ)

ಉಂಡಡಿಕೆ: ಇಡಿಯಾದ ಅಡಕೆ; ಕತ್ತರಿಸದ ಅಡಕೆ

ಉಂಡದೋರು: ಕುರುಬ ಸಮುದಾಯದ ಒಂದು ಬೆಡಗು

ಉಂಡಲಗಿ: ನೋಡಿ– ಉಂಡಲಿಗೆ

ಉಂಡಲಿಕೆ: ಅಕ್ಕಿಹಿಟ್ಟನ್ನು ನೀರಿನಲ್ಲಿ ಕಲೆಸಿ ಹಸುಗಳ ಮೇಲೆ ವೃತ್ತಾಕಾರದ ಮುದ್ರೆ ಹಾಕುವುದು (ಚಿಬ.ಜಿ)

ಉಂಡಲಿಗೆ/ಉಂಡಲಗಿ/ಉಂಡ್ಲಿಗೆ: ೧. ಅಕ್ಕಿಯನ್ನು ನೆನೆಹಾಕಿ ಗಟ್ಟಿಯಾಗಿ ರುಬ್ಬಿ ಉಂಡೆ ಮಾಡಿ ಬೇಯಿಸಿ ತಯಾರಿಸಿದ ತಿಂಡಿ. ಕೆಲವೆಡೆ ಹಲಸಿನ ಸೋಳೆ ಮತ್ತು ಅಕ್ಕಿ ಮಿಶ್ರಣ ಮಾಡಿ ಉಂಡೆ ಮಾಡಿ ಎಣ್ಣೆಯಲ್ಲಿ ಕರಿಯುವರು. ಸೋಣೆ ತಿಂಗಳಲ್ಲಿ ಹೊಸ್ತಿಲಜ್ಜಿ ಪೂಜೆ ಮಾಡುವಾಗ ಈ ತಿಂಡಿಯನ್ನು ಹೊಸ್ತಿಲು ದೇವರಿಗೆ ಅರ್ಪಿಸಬೇಕೆಂಬ ನಿಯಮವಿದೆ (ಉಡು.ಜಿ) ೨. ಅಕ್ಕಿಯನ್ನು ತರಿ ತರಿಯಾಗಿಸಿ ಬಿಸಿನೀರಿನಲ್ಲಿ ಚೆನ್ನಾಗಿ ನಾದಿ, ಉಂಡೆ ಕಟ್ಟಿ ಆವಿಯಲ್ಲಿ ಬೇಯಿಸುವ ಒಂದು ಬಗೆಯ ಮಲೆನಾಡು ಅಡುಗೆ (ಚಿಬ.ಜಿ) ೩. ಅಕ್ಕಿ, ತೆಂಗಿನಕಾಯಿ, ಜೀರಿಗೆ, ಉಪ್ಪು ರುಬ್ಬಿ, ಕಡಲೆಬೀಜದ ಗಾತ್ರದ ಉಂಡೆಗಳನ್ನು ಎಣ್ಣೆಯಲ್ಲಿ ಕರಿದ ಕುರುಕು ತಿಂಡಿ ೪. ಮುದ್ರೆ (ಮೈಸೂ.ಜಿ)

ಉಂಡಳಕ/ಉಂಡಳ್ಕ: ನೋಡಿ– ಉಂಡಲಿಗೆ (ಧಾರ.ಜಿ)

ಉಂಡಾಗಚ್ಚಿ: ಚೌಕಾಬಾರ ಆಟದಲ್ಲಿ ಒಳಮನೆಗಳಿಗೆ ಪ್ರವೇಶಿಸುವ ಅವಕಾಶವೇ ಸಿಗದೆ ಪೂರ್ತಿಯಾಗಿ ಸೋತವರಿಗೆ ಹೇಳುವ ಮಾತು (ಚಿತ್ರ.ಜಿ). **ಪ್ರ:** ಅವನನ್ನು ಎರಡು ಸಲ ಉಂಡಾಗಚ್ಚಿ ಮಾಡ್ದೆ

ಉಂಡಾಡಿ: ಉಂಡು ತಿರುಗುವವ; ಸೋಮಾರಿ (ಬಿಜಾ.ಜಿ)

ಉಂಡಾಳಿ: ದಪ್ಪಹೊರೆ. ಕೊಯ್ದ ಪೈರನ್ನು ಉಂಡೆಯ ಆಕಾರದಲ್ಲಿ ದಪ್ಪ ಹೊರೆ ಕಟ್ಟುವುದು (ಮಲೆ)

ಉಂಡಿ: ಮೇಲು ಸಿಪ್ಪೆ ಮಾತ್ರ ತೆಗೆದು ಬೇಯಿಸಿದ ಅಡಿಕೆ (ಚಿಬ.ಜಿ)

ಉಂಡಿಕಟ್ಲೆ: ಆಭರಣಗಳಲ್ಲಿ ಹರಳು ಕೂರಿಸಲು ಬೇಕಾದ ಉಪಕರಣ

ಉಂಡಿಗಂಟು: ಚುಂಗಿಕೋಲಿಗೆ ಸೇರಿಸಿ ಕಟ್ಟಿರುವ ನೂಲಿನ ಗಂಟು

ಉಂಡಿಗಟಗಿ: ಗಂಟು ಗಂಟಾದ ಕಟ್ಟಿಗೆ

ಉಂಡಿಗಟ್ಟು: ೧. ದುಂಡಗಾಗು; ಗಟ್ಟಿಯಾಗು (ಬಳ್ಳಾ.ಜಿ) ೨. ಧಾನ್ಯಗಳಿಗೆ ಹುಳು ಬಿದ್ದಾಗ ಅಲ್ಲಲ್ಲಿ ಉಂಡೆಯಾಗಿರುವ ಸ್ಥಿತಿ

ಉಂಡಿಗೆ: ಕಲ್ಲಂಗಡಿ ಅಥವಾ ಹಲಸಿನ ಹಣ್ಣನ್ನು ಕೊಯ್ಯುವುದಕ್ಕೆ ಮೊದಲು ಹಣ್ಣಾಗಿದೆಯೇ ಎಂದು ನೋಡಲು ಕತ್ತರಿಸಿ ತೆಗೆಯುವ ಸಣ್ಣ ಚೂರು (ಮೈಸೂ.ಜಿ). **ಇರೂ:** *ಚಂದ್ರಿಕೆ*

ಉಂಡಿಚೇಣಿ: ಒಂದು ರೀತಿಯ ಗುತ್ತಿಗೆ; ಇದು ತೋಟವನ್ನು ವರ್ಷಕ್ಕೆ ಇಷ್ಟು ಹಣ ಎಂದು ಹೇಳಿ ಪಡೆದುಕೊಳ್ಳುವುದು (ಚಿಬ.ಜಿ)

ಉಂಡಿ ದಂಡಿ ನಡತಿ: ನಾಗರ ಪಂಚಮಿಯಂದು ವರನ ಕಡೆಯವರು ತಮ್ಮ ಮನೆಗೆ ಸೊಸೆಯಾಗಿ ಬರುವ ಹೆಣ್ಣು ಮಗಳಿಗೆ ತರ ತರಹದ ಉಂಡಿಗಳನ್ನು ಮತ್ತು ದಂಡಿ ಹೊಸ ಸೀರೆ, ಬಂಗಾರದ ಆಭರಣ ಕೊಟ್ಟು ನಾಲ್ಕಾರು ದಿನ ಕನ್ಯಾದ ಮನೆಯಲ್ಲಿ ಇದ್ದು ಬರುವುದು (ಧಾರ.ಜಿ)

ಉಂಡಿರುಮಾಲು: ರುಮಾಲಿನ ಒಂದು ಪ್ರಕಾರ (ಗುಲ್ಬ.ಜಿ)

ಉಂಡಿರೇಶ್ಮೆ: ಕೃತಕ ರೇಶ್ಮೆಯ ಎರಡು ದಾರಗಳನ್ನು ಹುರಿಗೊಳಿಸಿ ತಯಾರಿಸಿದ ಒರಟು ಬಿಳಿದಾರ

ಉಂಡಿಹಬ್ಬ: ನಾಗರಪಂಚಮಿ (ಗುಲ್ಬ.ಜಿ)

ಉಂಡುಗಡುಬು: ಉಂಡೆಕಡುಬು; ಅಕ್ಕಿತರಿಯಿಂದ ತಯಾರಿಸಿದ ಗುಂಡಗಿನ ಕಡಬು (ಬೆಂಗ್ರಾ.ಜಿ)

ಉಂಡುಗಾವಳಿಗೆ: ಉಂಡೆಕವಳಿಗೆ; ವೀಳೆಯದೆಲೆಗಳ ದೊಡ್ಡ ಕವಳಿಗೆ (ದಾವ.ಜಿ)

ಉಂಡುಟ್ಟು: ಉಂಡು ಉಟ್ಟು. ಊಟಮಾಡಿ ಬಟ್ಟೆ ಹಾಕಿಕೊಂಡು, ಎಂದರೆ ಸಮೃದ್ಧಿ ಎಂಬ ಅರ್ಥ ಕೊಡುವ ಜೋಡಿಪದ (ಬೆಂಗ.ಜಿ). **ಪ್ರ:** ಅವರು ಉಂಡುಟ್ಟು ಸುಖವಾಗಿದ್ದಾರೆ

ಉಂಡುಬಾತು: ಜಕಣಾ ಹಕ್ಕಿ (ಬಳ್ಳಾ.ಜಿ)

ಉಂಡೆ: ೧. ದುಂಡನೆಯ ಆಕಾರವುಳ್ಳ ತಿನಿಸು. **ಪ್ರ:** ಅರಳುಂಡೆ; ಲಾಡು ಉಂಡೆ, ರವೆ ಉಂಡೆ ೨. ಇಡೀ; ಪೂರ್ತಿ. **ಪ್ರ:** ಉಂಡೆ ಮಾವಿನಹಣ್ಣು ೩. ಮಂಡೆ ತೆಗೆಸುವುದು

ಉಂಡೆಗಲ್ಲು: ಕವಣೆ ಬೀರಲು ಬಳಸುವ ಗಜ್ಜುಗ ಗಾತ್ರದ ಕಲ್ಲು

ಉಂಡೆಪುಳಿ/ಉಂಡೆಹುಳಿ: ೧. *ಆರ್ಟೋಕಾರ್ಪಸ್ ಲಕೂಚ:* ಕರಾವಳಿ ಪ್ರದೇಶದಲ್ಲಿ ಹುಣಸೆಗೆ ಪರ್ಯಾಯವಾಗಿ ಬಳಸುವ ಹುಳಿಹಣ್ಣು. ಬಲಿತ ಕಾಯಿಗಳನ್ನು ತೆಳ್ಳಗೆ ಕತ್ತರಿಸಿ ಬಿಸಿಲಲ್ಲಿ ಒಣಗಿಸಿ ತಿರುಳನ್ನು ಉಪ್ಪಿನೊಂದಿಗೆ ಬೆರೆಸಿ ಇಟ್ಟರೆ ವರ್ಷಗಳವರೆಗೆ ಕೆಡುವುದಿಲ್ಲ. ಹಣ್ಣನ್ನು ಸಾರು, ಚಟ್ನಿ ಇತ್ಯಾದಿ ಪದಾರ್ಥಗಳಿಗೆ ಹುಳಿರುಚಿ ಕೊಡಲು, ಶರಬತ್ತು ಉಪ್ಪಿನಕಾಯಿ ತಯಾರಿಸಲೂ ಮರ ಗೆದ್ದಲುನಿರೋಧಕವಾದ್ದರಿಂದ ಮನೆಕಟ್ಟಲೂ ಬಳಸುತ್ತಾರೆ. ***ಇರೂ:*** *ಎಸಳುಹುಳಿ, ಕಂಚಿನಿಂಬೆ, ಕೆತ್ತೆಹುಳಿ, ಚೆಂಡುಹುಳಿ (ದಕ.ಜಿ), ವಾಟೆಹುಳಿ (ಉಕ.ಜಿ)* ೨. ಕಡ್ಲೆಹಿಟ್ಟಿನ ಉಂಡೆಯ ಸಾರು (ಚಿತ್ರ.ಜಿ)

ಉಂಡೆಬೆಲ್ಲ: ಉಂಡೆ ಕಟ್ಟಿ ಮಾಡಿದ ಬೆಲ್ಲ. ಚಿಕ್ಕ ಚಿಕ್ಕ ಉಂಡೆಗಳನ್ನಾಗಿ ಮಾಡಿದ ಬೆಲ್ಲ (ಚಿತ್ರ.ಜಿ/ಚಿಬ.ಜಿ)

ಉಂಡೆಹಲಸು: ೧. ಮರದ ಬುಡದಿಂದ ತುದಿಯವರೆಗೂ ಗೊಂಚಲು ಗೊಂಚಲಾಗಿ ಕಾಯಿ ಬಿಡುವ ಹಲಸಿನ ಒಂದು ಪ್ರಭೇದ. ತೆಳು ಹಳದಿ ಬಣ್ಣದ ಒತ್ತೊತ್ತಾದ ತೊಳೆಗಳು, ಕಡಿಮೆ ಮೇಣ, ಬೆಣ್ಣೆಯಂತೆ ಮೃದುವಾಗಿ ಬೇಯುವ ಬೀಜ. ಈ ತಳಿಯ ವಿಶೇಷತೆ (ದಕ.ಜಿ) ೨. ಒಂದಿಡೀ ಹಲಸಿನ ಹಣ್ಣು

ಉಂಡೆಹುಳಿ: ನೋಡಿ– ಉಂಡೆಪುಳಿ

ಉಂಡೆಹೆಂಚು: ಮನೆಯ ಮಾಡಿಗೆ ಹೊದಿಸಲು ಬಳಸುವ ಎರಡು ಹೋಳು ಕೂಡಿರುವ ಕಪ್ಪು ಹೆಂಚು (ಬೆಂಗ್ರಾ.ಜಿ)

ಉಂಡ್ಕೋ: ಉರುಳಿಕೋ; ಮಲಗಿಕೋ (ಮಂಡ್ಯ.ಜಿ). **ಪ್ರ:** ಹಂಗೇ ಸ್ವಲ್ಪ ಹೊತ್ತು ಉಂಡ್ಕತ್ತೀನಿ

ಉಂಡ್ಗೋಳಿ/ಉಂದ್ಗೋಳಿ: ೧. ಉಂಡೆಕೋಳಿ ೨. ಒಂದು ಬಗೆಯ ಹಕ್ಕಿ ೩. ಚಕ್ರವಾಕ ೪. ಜೀವಂತಕೋಳಿ ೫. ನೆಲ ಮತ್ತು ಜಲಗಳೆರಡರಲ್ಲೂ ವಾಸಿಸಬಲ್ಲ ಕೋಳಿ ಜಾತಿಯ ಪಕ್ಷಿ (ಶಿವ.ಜಿ)

ಉಂಡ್ಲಿಕೆ ಆಡುವುದು: ಮಲೆನಾಡಿನ ಬ್ರಾಹ್ಮಣ ಸಮುದಾಯದ ಮದುವೆಯ ಸಂಪ್ರದಾಯಗಳಲ್ಲಿ ಒಂದು. ಬುಟ್ಟಿಯಲ್ಲಿ ಉಂಡೆ ಅಡಿಕೆ ಹಾಕಿ ಅದರಲ್ಲಿ ಉಂಗುರ ಅಡಗಿಸಿ ವಧು ವರರಿಂದ ಹುಡುಕಿಸುವ ಆಟ

ಉಂಡ್ಲಿಗೆ: ನೋಡಿ– ಉಂಡಿಗೆ

ಉಂಡ್ಲುಉಡ್ಕೆ: ಮಲೆನಾಡ ಒಕ್ಕಲಿಗರಲ್ಲಿ ವರನ ಮನೆಯವರು ಮದುವೆ ದಿನ ವಧುವಿಗೆ ಅರಿಶಿಣ ಕುಂಕುಮದ ಜೊತೆ ನೀಡುವ ಸೀರೆ ಮತ್ತು ರವಿಕೆ ಕಣ (ಚಿಬ.ಜಿ)

ಉಂಡ್ಲುಕೊ: ಅಕ್ಕಿಯ ಹಿಟ್ಟಿನಿಂದ ಎಣ್ಣೆಯಲ್ಲಿ ಕರಿದು ಮಾಡಿದ ತಿಂಡಿ

ಉಂಡ್ಲಕಾಳು/ಉಂಡಲಕಾಳು: ಒಂದು ಬಗೆಯ ಕರಿದ ತಿಂಡಿ (ದಕ.ಜಿ)

ಉಂತ್ತಾರ: ಉಂಬಳಿ; ಭೂಮಿಯನ್ನು ಕೊಡುಗೆಯಾಗಿ ಪಡೆಯುವುದು (ದಕ.ಜಿ)

ಉಂದಿರ: ಇಲಿ (ದಕ.ಜಿ)

ಉಂದ್ಗೋಳಿ: ನೋಡಿ– ಉಂಡ್ಗೋಳಿ

ಉಂಬ: ಉಳುಮೆ (ಶಿವ.ಜಿ)

ಉಂಬಕಂಬಳ: ಒಡೆಯನಲ್ಲಿ ಊಟ ಮಾತ್ರ ಪಡೆದು ವರ್ಷವಿಡೀ ದುಡಿಯುವಿಕೆ

ಉಂಬಗಾಲು: ಬಲಗಾಲು (ಬೀದ.ಜಿ)

ಉಂಬಗೈ: ೧. ಬಲಗೈ; ಉಣ್ಣುವ ಕೈ (ಗುಲ್ಬ.ಜಿ) ೨. ಬರಿಗೈ

ಉಂಬಳ: ಅಡವಿ, ಹುಲ್ಲುಬೇಣ, ತೋಟಗಳಲ್ಲಿ ಇರುವ ಜಿಗಣೆ. ಮಳೆ ಬೀಳುತ್ತಲೇ ಚುರುಕಾಗುವ ಈ ಜೀವಿ ಪ್ರಾಣಿಗಳ ಕಾಲಿಗೆ ಹತ್ತಿಕೊಂಡು ಕಚ್ಚಿ ರಕ್ತ ಹೀರುತ್ತದೆ. ಇದು ಚರ್ಮಕ್ಕೆ ಕಚ್ಚಿಕೊಂಡಿದ್ದರೂ ಆ ಕ್ಷಣಕ್ಕೆ ಗೊತ್ತೇ ಆಗುವುದಿಲ್ಲ (ಉಕ.ಜಿ)

ಉಂಬಳಿ: ಧಾರ್ಮಿಕ ದತ್ತಿದಾನ; ಕೊಡುಗೆ (ಬೆಂಗ.ಜಿ)

ಉಂಬುಗ: ಅರಿಶಿನ ಉಮ್ಮತ್ತಿ; ದತ್ತೂರ ಎಂಬ ಸಸ್ಯ; ಇದರ ಬೇರು ಕುಷ್ಠ ಮತ್ತು ಮಲಬದ್ಧತೆಗೆ ಔಷಧ. ಸೊಪ್ಪಿನ ರಸವನ್ನು ಬಿಸಿಮಾಡಿ ಸ್ವಲ್ಪ ಸುಣ್ಣ ಹಾಕಿ ಕೆನ್ನೆ ಬಾವು, ಕೆಪ್ಪಟ್ರಾಯಕ್ಕೆ ಹಚ್ಚಿದರೆ ಮೂರು ದಿನದಲ್ಲಿ ಗುಣವಾಗುತ್ತದೆ. ಸೇಂದಿಯಲ್ಲಿ ಅಮಲುತನ ಹೆಚ್ಚಾಗಲು ಇದರ ಎಲೆಯನ್ನು ಸೇಂದಿ ಮಡಿಕೆಯ ಅಡಿಯಲ್ಲಿ ಇಡುವುದಿದೆ (ದಕ.ಜಿ)

ಉಂಬುಗಚ್ಚು: ಪೈರಿನ ತೆನೆಯಲ್ಲಿ ಕಾಳುಗಟ್ಟುವುದರ ಮೊದಲ ಅವಸ್ಥೆ

ಉಂಬುಡೆ: ೧. ಮಳೆಗಾಲದಲ್ಲಿ ಬರುವ ಒಂದು ಜಾತಿಯ ಕೆಂಪು ಕೀಟ ೨. ವೀಳ್ಯದೆಲೆ ಜಗಿದು ಉಳಿದ ಚರಟ (ದಕ.ಜಿ). ***ಇರೂ:*** *ತೊಂಬ್ಲ (ಮೈಸೂ.ಜಿ)*

ಉಂಬುರು: ಜಿಗಣೆ (ದಕ.ಜಿ)

ಉಂಬೆ: ದನ (ಉಕ)

ಉಂಬೇವು: ನೋಡಿ– ಉಂಬುಗ

ಉಂಬೋಳ: ಊಟದ ಕೋಣೆ (ಉಕ.ಜಿ)

ಉಂಬ್ರಿ: ಹೊರೆ; ಕಟ್ಟು (ಶಿವ.ಜಿ)

ಉಂಯ್ಯು: ಉಯ್ಯಿ; ಉಮಿ; ತೌಡು; ಹೊಟ್ಟು (ಉಕ.ಜಿ)

ಉಕರಿ: ನೆಲದಲ್ಲಿರುವ ಶೇಂಗಾಕಾಯಿಗಳನ್ನು ಕೆದಕಿ ತೆಗೆಯುವ ಕಬ್ಬಿಣದ ಸಾಧನ (ಗುಲ್ಬ.ಜಿ)

ಉಕಾರ: ೧. ನೇಯ್ಗೆಯ ಸಂದರ್ಭದಲ್ಲಿ ಬಣ್ಣ ಮಾಡುವ ಮೊದಲು ರೇಶ್ಮೆಯಲ್ಲಿರುವ ಅಂಟನ್ನು ತೆಗೆಯಲು ಬಳಸುವ ಸೋಪಿನ ಅಥವಾ ಸೋಡಾದ ದ್ರಾವಣ ೨. ಭೂಮಿಯ ಆಕಾರ ೩. ಏಕಮಾನ್ಯ ಇತ್ಯಾದಿಗಳನ್ನು ತಿಳಿಸುವ ಕಾಗದ ಪತ್ರ. **ಇರೂ:** *ಎಂಟ್ರಿ ಉಕಾರು*

ಉಕಾರಒಲೆ: ಉಕಾರದ ಒಲೆ. ನೇಕಾರಿಕೆಯಲ್ಲಿ ರೇಷ್ಮೆಯ ಅಂಟನ್ನು ತೆಗೆಯಲು ಬಳಸುವ ಸೋಪಿನ ದ್ರಾವಣವನ್ನು ಕುದಿಸುವ ಒಲೆ. (ಚಿತ್ರ.ಜಿ)

ಉಕಾರರೇಶ್ಮೆ: ಉಕಾರದೊಳಗೆ ಅದ್ದಿ ತೆಗೆದ ರೇಷ್ಮೆ

ಉಕಾರಸಾಬೂನು: ಉಕಾರವನ್ನು ತಯಾರಿಸಲು ಬಳಸುವ ಸಾಬೂನು

ಉಕೇರಿ: ಬಸವನ ಕಲ್ಲು (ಬಳ್ಳಾ.ಜಿ)

ಉಕ್ಕ (ಕ್ರಿ): ಹುಲ್ಲಿನಿಂದ ಧಾನ್ಯವನ್ನು ಬೇರ್ಪಡಿಸುವಿಕೆ (ಉಕ)

ಉಕ್ಕಂಡ ಬರಬಂಡ: ಉಕ್ಕಿ ಹರಿಯುವ ಪ್ರಮಾಣ

ಉಕ್ಕಂದ: ೧. ಮನೆಯ ತೊಲೆಗಳಿಗೆ ಕೊಡುವ ಕಂಬ ೨. ಉತ್ಸವಗಳನ್ನು ಹೊರುವಾಗ ಅಲ್ಲಲ್ಲಿ ಹೆಗಲಾರಿಸಿಕೊಳ್ಳಲು ಕೊಟ್ಟುಕೊಳ್ಳುವ ಊರುಗೋಲುಗಳು. **ನೋಡಿ–** ಆನೆತಲೆ ೩. ಉಕ್ಕುವ ಹಾಗೆ (ಮಂಡ್ಯ.ಜಿ). **ಇರೂ:** *ಉಕ್ಕಂಡ*

ಉಕ್ಕಡ: ೧. ಸುಂಕದಕಟ್ಟೆ (ದಕ) ೨. ಕಾವಲುಮನೆ (ಉಕ) ೩. ಅತಿಶಯ ೪. ಕೊಡಕ್ಕೆ ಬಿಗಿದ ಹಗ್ಗದ ಕುಣಿಕೆ (ಚಿತ್ರ.ಜಿ) ೫. ಊರಿನ ಅಥವಾ ನಗರದ ಗಡಿ (ಕೊಪ್ಪ.ಜಿ) ೬. ಹರಿಗೋಲು (ಹಾಸ.ಜಿ) ೭. ಒಂದು ಹಳ್ಳಿ ೮. ನೀರನ್ನು ಹೊರಬಿಡಲು ಇರುವ ಜಾಗ; ತೂಬು ೯. ಆರತಿಉಕ್ಕಡ ಎಂಬ ಪವಿತ್ರಕ್ಷೇತ್ರ (ಮಂಡ್ಯ.ಜಿ)

ಉಕ್ಕಡಿಸು (ಕ್ರಿ): ೧. ಉಕ್ಕಿ ಬರು ೨. ಉಗ್ಗಡಿಸು

ಉಕ್ಕಬೀರು: ತುಂಬಿ ತುಳುಕು (ಧಾರ.ಜಿ)

ಉಕ್ಕರಣೆ ಹಿಟ್ಟು: ರೊಟ್ಟಿ ಮಾಡಲು ಬೇಯಿಸಿದ ಹಿಟ್ಟು

ಉಕ್ಕರಿಸಿದ ರೊಟ್ಟಿ: ಬಿಸಿನೀರಲ್ಲಿ ಹಿಟ್ಟನ್ನು ಸ್ವಲ್ಪ ಕುದಿಸಿ ಅನಂತರ ಇನ್ನಿಷ್ಟು ಹಿಟ್ಟು ಹಾಕಿ ನಾದಿ ತಯಾರಿಸಿದ ರೊಟ್ಟಿ

ಉಕ್ಕಲ: ಉಕ್ಕಿದ (ಉಕ)

ಉಕ್ಕಲಿ (ಕ್ರಿ): ಹುಲ್ಲು ತುಳಿಸುವ ಕ್ರಿಯೆ (ಉಕ)

ಉಕ್ಕಲಿಸು: ೧. ಮೀರು ೨. ಕೈಮೀರು

ಉಕ್ಕಾಚು/ಉಕ್ಕೋಚಿ: ಚಿಕ್ಕ ಮಗುವನ್ನು ಮುಂಗಾಲಿನಲ್ಲಿ ಕುಣಿಸುವ ಬಗೆ (ದಕ.ಜಿ)

ಉಕ್ಕಾಡ್: ಎದುರಾಳಿಯ ತೊಡೆಗಳನ್ನು ತಬ್ಬಿಹಿಡಿದು ಇಡೀ ಶರೀರವನ್ನು ಮೇಲೆತ್ತುವುದು

ಉಕ್ಕಾಣಿ: ರಾಶಿಯಾದ ಮೀನು ಬಿದ್ದಾಗ ಸಾಗರ ತೀರದಲ್ಲಿಯೇ ಜಾತಿಬಾಂಧವರೆಲ್ಲ ಸೇರಿ ಮೀನನ್ನು ಬೇಯಿಸಿ ತಿನ್ನುವುದು (ಉಕ.ಜಿ). **ಇರೂ:** *ಕಳ್‌ಕಂಬಳ*

ಉಕ್ಕಿ ಹೂಂಟೆ: ಅರಕಲು ಹೂಂಟೆ ಆದ ಬಳಿಕ ಮಾಡುವ ಉಳುಮೆ. ನಾಲ್ಕು ದಿನದ ಬಳಿಕ ಪುನ: ಉಳುಮೆ ಮಾಡಿ ಹಲಗೆ ಹಾಕುವುದು. ಇದರಿಂದ ಮಣ್ಣು ಸಮತಟ್ಟಾಗುವುದು

ಉಕ್ಕಿ: ಹುಲ್ಲು, ಸೊಪ್ಪು ಹೆರೆಯಲು ಬಳಸುವ ಸಣ್ಣ ಕುಡುಗೋಲು. **ಇರೂ:** *ಉಗಚು; ಉಜ್ಜುವಾರಿ; ಕುರುಚಿಗೆ*

ಉಕ್ಕಿಕಣ್ಣಿ: ನೊಗವನ್ನು ಎತ್ತಿನ ಕುತ್ತಿಗೆಗೆ ಕಟ್ಟುವ ಹಗ್ಗ (ಚಿಬ.ಜಿ)

ಉಕ್ಕಿನಂಗಿ: ಯೋಧರು ಧರಿಸುತ್ತಿದ್ದ ಅಂಗಿಯಾಕಾರದ ಉಕ್ಕಿನ ರಕ್ಷಾಕವಚ

ಉಕ್ಕಿನಕಡ್ಲಿ: ೧. ಉಕ್ಕಿನ ಕಡಲೆ; ತುಂಬ ಗಟ್ಟಿಯಾದದ್ದು ೨. ತುಂಬ ಗಡುಸಾದ, ಕಠಿಣವಾದ ವಿಷಯ (ಧಾರ.ಜಿ)

ಉಕ್ಕಿನಕೊಡಿ: ಕಬ್ಬಿಣದ ಉದ್ದನೆಯ ಕೋಲು ಇರುವ ಕೊಡೆ (ದಕ.ಜಿ)

ಉಕ್ಕಿನಗುಳ್ಳಿ: ಗೋಪುರ ಬಾಣ. **ಇರೂ:** *ಮಂಡಾಳಬಾಣ (ರಾಯ.ಜಿ)*

ಉಕ್ಕಿನಚಂದ್ರಾಯ: ಉಕ್ಕಿನ ಆಯುಧ; ಚಂದ್ರಾಯುಧ (ಮಂಡ್ಯ.ಜಿ)

ಉಕ್ಕಿನದಸಿ: ತೆಂಗಿನಕಾಯಿ ಸಿಪ್ಪೆ ತೆಗೆಯಲು ಬಳಸುವ ಕಬ್ಬಿಣದ ಸಾಧನ

ಉಕ್ಕು: (ಕ್ರಿ). ೧. ಹೊರಚೆಲ್ಲು (ನಾ). ೨. ಕಬ್ಬಿಣದ ವಿಶಿಷ್ಟ ಬಗೆ ೩. ನೇಗಿಲಿಗೆ ಗುಳವನ್ನು ಬಿಗಿಯಲು ಬಳಸುವ ಕೊಂಡಿಯಂತಹ ಕಬ್ಬಿಣದ ಸಾಧನ (ಬೆಂಗ.ಜಿ)

ಉಕ್ಕುಡ: ನೋಡಿ– ಉಕ್ಕಡ

ಉಕ್ಕುಡದಮ್ಮ: ೧. ಗಡಿದೇವತೆ ೨. ಉಕ್ಕಡ ಎಂಬ ಕ್ಷೇತ್ರದ ದೇವತೆ; ಉಕ್ಕಡದ ಮಾರಮ್ಮ (ಮಂಡ್ಯ.ಜಿ)

ಉಕ್ಕುಡದಮ್ಮನ ಜಾತ್ರೆ: ಉಕ್ಕಡದಮ್ಮ ಎಂಬ ಗ್ರಾಮದೇವತೆಯ ಹೆಸರಿನ ಜಾತ್ರೆ (ಚಿತ್ರ.ಜಿ)

ಉಕ್ಕುನ ಕುಲಾವಿ: ಯುದ್ಧದ ಸಂದರ್ಭದಲ್ಲಿ ಬಳಕೆಯಾಗುವ ಉಕ್ಕಿನ ತಲೆಯುಡುಗೆ

ಉಕ್ಕುಮಗಿ: ಕಂಠವಿಲ್ಲದ ಬೋಳು ಮೊಗೆ (ಬಳ್ಳಾ.ಜಿ)

ಉಕ್ಕುರ್ಸು/ಉಕ್ಕರಸು/ಉಕ್ರುಸು (ಕ್ರಿ): ೧. ರೊಟ್ಟಿಮಾಡಲು ಕುದಿಯುವ ನೀರಿಗೆ ಸ್ವಲ್ಪ ಹಿಟ್ಟುಹಾಕಿ ಕದರುವಿಕೆ ೨. ಕುದಿಸಿ ಬಸಿಯುವುದು ೩. ಉಕ್ಕಿಬರು ೪. ಹೂಂಕರಿಸು; ಗರ್ಜಿಸು; ಆರ್ಭಟಿಸು

ಉಕ್ಕೆ: (ಕ್ರಿ). ೧. ನೇಗಿಲಿನಿಂದ ನೆಲವನ್ನು ಉಳು; ಉಕ್ಕೆ ಹೊಡೆ; ಉಳುಮೆಯನ್ನು ಮಾಡು. **ಪ್ರ:** ಗದ್ದೆ ಉಕ್ಕೆ ಹೊಡೆಯೋಕ್ಕೆ ಹೋಗಿದಾನೆ ೨. ದನ ಕಟ್ಟುವ ಸ್ಥಳ

ಉಕ್ಕೆದೋಣಿ: ಉಳುವಾಗ ಆರೇಳು ಅಡಿಗೊಮ್ಮೆ ಬಿಡುವ ದೋಣಿಯಾಕಾರದ ಸಾಲು

ಉಕ್ಕೆಮಾಡೂದ್: ಮೊದಲು ಹೂಂಟಿ ಹೂಡಿದ ನಾಲ್ಕೈದು ದಿನದಲ್ಲಿ ಗೊಬ್ಬರ ಹಾಕಿ ಉಳುವುದು (ದಕ.ಜಿ)

ಉಕ್ಕೆ ಹೊಲ: ಉತ್ತ ಹೊಲ

ಉಕ್ಕೇರಿ: ಕಂಬಳಿಯ ನೇಯ್ಗೆಯಲ್ಲಿ ದಾಣಿ ಇಡುವ ಸ್ಥಳ (ತುಮ.ಜಿ)

ಉಕ್ಕೇರು: ತುಂಬಿ ಹರಿ; ಮೇಲೇರಿ ಇಳಿ; ಚಿಮ್ಮು (ಬೆಂಗ.ಜಿ)

ಉಕ್ಕೊಮಳ್ಳೊ: ಚೆನ್ನಾಗಿ ಕಾದು ಕುದಿಯುತ್ತಿರುವ; ಉಕ್ಕಿ ಮರಳುತ್ತಿರುವ. **ಪ್ರ:** ಉಕ್ಕೋಮಳ್ಳೋ ನೀರ್‍ನಾಗೆ ಕೈ ಅದ್ದಿ ಕೈ ಬೆಂದೋಗದೆ (ಮೈಸೂ.ಜಿ)

ಉಕ್ಕೋಚಿ: ನೋಡಿ– ಉಕ್ಕಾಚು

ಉಕ್ಕುರ್ಲು: ಬೆಳೆ ಸರಿಯಾಗಿ ಬರದ ಭೂಮಿ (ಬಳ್ಳಾ.ಜಿ)

ಉಕ್ಕಿಳಿ: ಉಕ್ಕಿ ಇಳಿಯುವುದು

ಉಕ್ಕೀರು: ಉಕ್ಕುನೀರು; ಕುದಿಯುತ್ತಿರುವ ನೀರು (ಉಕ.ಜಿ)

ಉಕ್ಕುಕ್ಕ: ೧. ಅತಿಯಾದ ೨. ಭಯಂಕರ (ಮೈಸೂ.ಜಿ)

ಉಕ್ರಸ: ಉಕ್ಕುವ ರಸ (ಉಕ)

ಉಕ್ರಿ: ಉಕ್ಕುರಿ: ಮಣ್ಣನ್ನು ಎಳೆಯಲು, ಅಗೆಯಲು ಬಳಸುವ ಸಾಧನ (ಬೀದ.ಜಿ)

ಉಕ್ಲಿ: ಹಂತಿ (ಉಕ)

ಉಕ್ಲಿಕಂಬ: ಕಣದ ನಡುವೆ ನೆಟ್ಟ ದುಂಡನೆಯ ಕಂಬ; ಹಂತಿಕಂಬ (ಉಕ). **ಇರೂ:** *ಮೇಟಿಕಂಬ (ಬೆಂಗ್ರಾ.ಜಿ)*

ಉಕ್ಷಿ: *ಕ್ಯಾಲಿಕೋಟೆರಿಸ್ ಫ್ಲೋರಿಬೂಂದಾ:* ಉಪಸಿ ಬಳ್ಳಿ; ಇದರ ಸೊಪ್ಪನ್ನು ಗೊಬ್ಬರಕ್ಕಾಗಿ ಬಳಸುತ್ತಾರೆ. ಕಾಂಡ ಗೆಲ್ಲುಗಳಿಗೆ ಬೇಗ ಬೆಂಕಿ ಹಿಡಿಯುವುದರಿಂದ ಭತ್ತ ಬೇಯಿಸುವಾಗ ಮತ್ತು ಅಡಿಗೆ ಮಾಡುವಾಗ ಸೌದೆಯಾಗಿಯೂ ಬಳಸಲಾಗುತ್ತದೆ (ದಕ.ಜಿ)

ಉಖೆ: ಬಿಸಿ ಮಡಕೆ; ಕುದಿಯುವ ಪಾತ್ರೆ (ತುಮ.ಜಿ)

ಉಗಚು: ನೋಡಿ– ಉಕ್ಕಿ

ಉಗಡ: ಗುಟ್ಟು

ಉಗಡ್ಸ: (ಕ್ರಿ) ೧. ಸ್ಪಷ್ಟವಾಗಿ ಕಾಣು (ನಾ) ೨. ನೆನಪು

ಉಗಣೆ ಹಂಬು: ನೋಡಿ– ಉಗನೆ

ಉಗನೆ: ಒಂದು ಜಾತಿಯ ಬಳ್ಳಿ. ಇದು ಗಟ್ಟಿಯಾಗಿರುವುದರಿಂದ ಸೊಪ್ಪುಸೆದೆ, ಕಟ್ಟಿಗೆ ಮುಂತಾದುವನ್ನು ಕಟ್ಟಲು ಬಳಸುತ್ತಾರೆ. ಸೊಪ್ಪನ್ನು ಗೊಬ್ಬರಕ್ಕೂ ಬಳಸುತ್ತಾರೆ. ಸಣ್ಣಮಕ್ಕಳಿಗೆ ಹೊಟ್ಟೆನೋವು ಬಂದಾಗ ಎಲೆಗಳನ್ನು ಎಣ್ಣೆ ಸವರಿ ಬಿಸಿಮಾಡಿ ಹೊಟ್ಟೆಯ ಮೇಲೆ ಇಡುತ್ತಾರೆ (ಮೈಸೂ.ಜಿ) ಬಲಿಪಾಡ್ಯಮಿ ದಿನ ಹಸುಕರುಗಳಿಗೆ ಜೇಡಿ, ಕೆಮ್ಮಣ್ಣು, ಉಗನೆಕಾಯಿಸರ, ಚೆಂಡು ಹೂವಿನ ಸರಗಳ ಅಲಂಕಾರ ಮಾಡುತ್ತಾರೆ. (ಚಿತ್ರ ನೋಡಿ)

ಉಗನೆಕಾಯಿ: ನೋಡಿ– ಉಗನೆ

ಉಗರನಂಜು: ಉಗುರಿನಿಂದ ಆದ ಗಾಯವು ಸೋಂಕಾಗಿ ಕೀವು ತುಂಬಿಕೊಳ್ಳುವುದು

ಉಗಲಾಡು: ಜೋತಾಡು (ಕೋಲಾ.ಜಿ)

ಉಗಲು/ಉಗುಲು: ರಂಧ್ರ; ತೂತು

ಉಗಳಿದ್ದ ನೆಕ್ಕು: ದಾನರೂಪವಾಗಿ ಕೊಟ್ಟದ್ದನ್ನು ಮತ್ತೆ ಅದು ತನ್ನದೆಂದು ಬೇಡು. **ಪ್ರ:** ಅಂವೇನ ಸುಮಾರು ಅದಾನಪಾ, ಉಗಳಿದ್ದ ನೆಕ್ಕತಾನು

ಉಗಾ ಹಾಯೂದು/ಉಗಿ ಹಾಯುವುದು: ೧. ಶೇಂಗಾ ಕಾಯಿಯನ್ನು ಹರಡಿ ಹಾಕಿ ಒಣಗಿಸದೆ ಇದ್ದಾಗ ಅದು

ಮುಗ್ಗುಲುಹಿಡಿದು ಕಾವು ಬಂದು ಹಬೆಯಾಡುವುದು (ಶಿವ.ಜಿ) ೨. ಕಾಲಿಟ್ಟರೆ ಬೆಂಕಿಯ ಝಳ ತಾಗಿದ ಅನುಭವ

ಉಗಾಣಿ: ವಾಲೀಕಾರ; ಶಾನುಭೋಗ (ದಕ.ಜಿ)

ಉಗಾದಿ ನೈವೇದ್ಯ: ಯುಗಾದಿ ಅಮವಾಸ್ಯೆಯಂದು ಪ್ರತಿ ರೈತನೂ ತಾನು ಬೆಳೆದ ಸ್ವಲ್ಪ ಕಾಳನ್ನು ತೆಗೆದುಕೊಂಡು ಹೋಗಿ ಪೂಜೆ ಮಾಡಿಸಿ ಶಾಸ್ತ್ರ ಕೇಳಿ ಆ ಕಾಳುಗಳ ನೈವೇದ್ಯ ಮಾಡಿ ಬರುವ ಪದ್ಧತಿ (ಚಿತ್ರ.ಜಿ)

ಉಗಾಳಿಸು: ನೋಡಿ– ಉಗ್ಗಳಿಸು

ಉಗಿ: ೧. ನೀರನ್ನು ಕಾಯಿಸಿದಾಗ ಮೇಲೇಳುವ ಬಿಸಿಯಾದ ಹಬೆ; ಆವಿ. **ಪ್ರ:** ಉಗಿಕೊಡು, ಉಗಿಕಾಯ್ಸು ೨. ಬಿಸಿಲಿನ ಝಳ ೩. ಹೊಗೆ (ಬೆಳ.ಜಿ) ೪. ಸೀಳು (ಮಂಡ್ಯ.ಜಿ) ೫. ಕೀಳು ೬. ಎಳೆ (ಉಕ) ೭. ಹುಗಿ; ಹೂತಿಡು ೮. ಛೀಮಾರಿಹಾಕು; ಬೈಯಿ. **ಪ್ರ:** ಅವನ್ನೊಂದಿಷ್ಟು ಉಗಿ, ಬುದ್ಧಿ ಬರಲಿ

ಉಗಿಮಾವು: ಒಂದು ಬಗೆಯ ಮಾವು. ಜನಪದ ಕಾವ್ಯಗಳಲ್ಲಿ ಹೆಚ್ಚು ಬಳಕೆಯಾಗುವ ಪದ

ಉಗಿರಿನಾಗಿನ ಮಣ್ಣು: ಉಗುರಿನ ಸಂದಿನಲ್ಲಿ ಇರುವ ಮಣ್ಣಿನಂತೆ ಬೆಲೆಇಲ್ಲದ್ದು (ಗುಲ್ಬ.ಜಿ)

ಉಗಿಹಪ್ಪಳ: ಹಬೆಯಿಂದ ಬೇಯಿಸಿದ ಹಪ್ಪಳ (ಗುಲ್ಬ.ಜಿ)

ಉಗುಚು: ೧. ಬಿಚ್ಚು **ಪ್ರ:** ಮೈ ಮ್ಯಾಗಳ ಅಂಗಿ ಉಗಚಿದ ೨. ಬಯ್ಯು; ನಿಂದಿಸು (ಮಂಡ್ಯ.ಜಿ)

ಉಗುಟು: ಕಳಚು (ಚಿಬ.ಜಿ)

ಉಗುಣೇಸರ: ಉಗಣೆ ಕಾಯಿಗಳಿಂದ ಮಾಡಿದ ಸರ. ನೋಡಿ– ಉಗನೆ (ಶಿವ.ಜಿ)

ಉಗುನ್ನೀರು: ಉಗ್ಗುನೀರು. ಕೆರೆ ತುಂಬಿದಾಗ ಕೋಡಿಯ ಮುಖದಲ್ಲಿ ಅಲೆಗಳ ಬಡಿತಕ್ಕೆ ಹೊಮ್ಮುವ ನೀರು; ತುಂಬಿದ ಕೆರೆಯಿಂದ ಕೋಡಿಯ ಮೂಲಕ ತುಳುಕಿ ಬರುವ ನೀರು

ಉಗುರಡ್ಡಿಗೆ: ಉಗುರಿನಾಕಾರದ ಕುಸುರಿ ಕೆಲಸವಿರುವ ಅಡ್ಡಿಕೆ ಸರ (ದಕ.ಜಿ)

ಉಗುರಲ್ಲಿ ಹೋಗಾದು: ಸರಳವಾಗಿ ಮಾಡಬಹುದಾದ ಸಾಧಾರಣ ಕೆಲಸ. **ಪ್ರ:** ಉಗುರಲ್ಲಿ ಹೋಗಾದಕ್ಕೆ ಕೊಡ್ಲಿ ತಗೊಂಡ್ಹಾಗೆ

ಉಗುರಾಡು (ಕ್ರಿ): ೧. ಉಗುರಿನಿಂದ ಕೀಳು; ವೀಳ್ಯದೆಲೆ, ಹೂವು ಇಂಥವನ್ನು ಉಗುರಿನಿಂದ ತೊಟ್ಟು ಜಿಗುಟುವ ಮೂಲಕ ಕೊಯ್ಯು (ಉಕ) ೨. ತಿಕ್ಕು; ಉಜ್ಜು

ಉಗುರಿಗೆ ಧೋಕಾಯಿಲ್ಲ: ಭಯವಿಲ್ಲದಿರುವಿಕೆ; ಅಪಾಯವಿಲ್ಲದಿರುವಿಕೆ; ಸುರಕ್ಷಿತವಾಗಿರುವುದು (ಬಿಜಾ.ಜಿ)

ಉಗುರಿಸಿ (ಕ್ರಿ): ಉಗುರಿನಿಂದ ಸರಿಪಡಿಸಿ; ಬಾಚಿ

ಉಗುರು: ೧. ನಖ ೨. ವೀಳೆಯದೆಲೆಯನ್ನು ಕುಯ್ಯುವಾಗ ಹಾಕಿಕೊಳ್ಳುವ ಒಂದು ಸಾಧನ. **ನೋಡಿ–** ಉಗುರುಳಿ

ಉಗುರುಕಣ್ಣಷ್ಟು: ತುಸು; ಸ್ವಲ್ಪ; ಅತ್ಯಲ್ಪ

ಉಗುರುಕಣ್ಣು: ಉಗುರಿನ ಸುತ್ತಲೂ ಚರ್ಮ ಕೊನೆಯಾಗುವ ಭಾಗದಲ್ಲಿರುವ ಸಪೂರವಾದ ತಂತು (ದಕ.ಜಿ)

ಉಗುರು ತೆಗೆಯೋಶಾಸ್ತ್ರ: ನೋಡಿ– ಉಗುರು ಮಡಚುವ ಶಾಸ್ತ್ರ (ಬೆಂಗ್ರಾ.ಜಿ)

ಉಗುರುತೆಯ್ಯ: ಎರವರ ಒಂದು ದೇವರು (ಕೊಡ.ಜಿ)

ಉಗುರುನಾರಾಸ್: ಕ್ಷೌರಿಕರು ಉಗುರು ಕತ್ತರಿಸಲು ಬಳಸುತ್ತಿದ್ದ ಒಂದು ಉಪಕರಣ (ದಕ.ಜಿ)

ಉಗುರುನಾಳಿ: ತುದಿ ಉಗುರು ಮತ್ತು ಬೆರಳಿನ ನಡುವಿನ ಎಡೆ (ದಕ.ಜಿ)

ಉಗುರುಬಳೆ: ಹೆಂಗಸರ ತಲೆಯ ಆಭರಣ

ಉಗುರುಬೆಚ್ಚಗೆ: ಸ್ವಲ್ಪವೇ ಬಿಸಿಯಾಗಿರುವ; ಸುಡದೇ ಇರುವಷ್ಟು ಅಲ್ಪ ಬಿಸಿ ಇರುವ. **ಪ್ರ:** ನೀರು ಉಗುರು ಬೆಚ್ಚಗಿದೆ ಅಷ್ಟೆ

ಉಗುರು ಮಡಚುವ ಶಾಸ್ತ್ರ: ಮದುವೆಯ ಒಂದು ಶಾಸ್ತ್ರ. ಅಂಗಳದಲ್ಲಿ ಮದುಮಗನಿಗೆ ಮಣೆ ಹಾಕಿ ಕೂರಿಸಿ ಕ್ಷೌರಿಕನು ಮದುವೆಗಂಡಿನ ಕೈ ಕಾಲಿಗೆ ಹಾಲು ಸವರಿ ಉಗುರು ತೆಗೆದು ಮುಖಕ್ಷೌರ ಮಾಡುತ್ತಾನೆ. ಈ ಶಾಸ್ತ್ರ ಮುಗಿದ ನಂತರ ಕ್ಷೌರಿಕನಿಗೆ ಅಕ್ಕಿ, ಬಾಳೆಹಣ್ಣು, ತೆಂಗಿನಕಾಯಿ ಹಾಗೂ ದುಡ್ಡು ಕೊಟ್ಟು ಗೌರವಿಸುತ್ತಾರೆ (ಚಿಬ.ಜಿ)

ಉಗುರುಸುತ್ತು/ಉಗುರ್ಸುತ್ತು: ಉಗುರುಕಣ್ಣಿಗೆ ಪೆಟ್ಟಾದಾಗ ಕೀವು ತುಂಬಿ ಊದಿಕೊಳ್ಳುವುದು (ಮೈಸೂ.ಜಿ)

ಉಗುರುಸುತ್ತು ಬಳ್ಳಿ: ಹಲೊರಟಿಗ; ಉಗುರುಸುತ್ತಿಗೆ ಮದ್ದಾಗಿ ಬಳಸುವ ಔಷಧೀಯ ಗುಣವುಳ್ಳ ಒಂದು ಸಸ್ಯ

ಉಗುರು ಹೂ: ಉಗುರಿನ ಮೇಲೆ ಕಂಡುಬರುವ ಬಿಳಿ ಕಲೆ (ದಕ.ಜಿ)

ಉಗುರುಳಿ: ೧. ಉಗುರಿನೋಪಾದಿಯ ಉಳಿ ೨. ವೀಳ್ಯದ ಎಲೆ ಕೊಯ್ಯುವ ಸಾಧನ; ಎಲೆಯುಗುರು ೩. ಸೂಕ್ಷ್ಮ ಕೆತ್ತನೆ ಕೆಲಸದಲ್ಲಿ ಬಳಸುವ ಒಂದು ಉಪಕರಣ (ದಕ.ಜಿ)

ಉಗುರೆಣ್ಣೆ: ಸ್ವಲ್ಪ ಬೆಚ್ಚಗಿರುವ ಎಣ್ಣೆ (ದಕ.ಜಿ); ಉಗುರು ಬೆಚ್ಚಗಿನ ಎಣ್ಣೆ

ಉಗುರೊತ್ತು: ಗೋಧಿಹಿಟ್ಟನ್ನು ಹೊಸೆದು ಮಾಡಿದ ಅತಿ ಚಿಕ್ಕ ಬೀಜದಂತಿರುವ ತುಣುಕುಗಳು. ಅದರ ಮೇಲೆ ಕೈ ಬೆರಳಿನಿಂದ ಉಗುರನ್ನು ನಾಜೂಕಾಗಿ ಒತ್ತುವ ಕ್ರಿಯೆ. ಇದನ್ನು ಪಾಯಸಕ್ಕೆ ಬಳಸುತ್ತಾರೆ (ಧಾರ.ಜಿ)

ಉಗುರೋಟು: ಸ್ವಲ್ಪ; ಕಡಿಮೆ; ತುಸು (ಬಿಜಾ.ಜಿ)

ಉಗುರ್ಮೊಳೆ: ಉಗುರಿನ ಆಕಾರದ ಮೊಳೆ (ಬಳ್ಳಾ.ಜಿ)

ಉಗುಸು: ಉಸುಗು; ಜವುಳು (ಉಕ.ಜಿ)

ಉಗುಳಿಮಣ್ಣು: ತುಂಬ ಹಗುರವಾದ ಮಣ್ಣು; ಹುತ್ತದ ಮಣ್ಣು

ಉಗುಳು (ನಾ): ೧. ಬಾಯಿಯಲ್ಲಿ ಉತ್ಪತ್ತಿಯಾಗುವ ದ್ರವ; ಜೊಲ್ಲು; ಲಾಲಾರಸ. **ಪ್ರ:** ಮಂತ್ರಕ್ಕಿಂತ ಉಗುಳು ಜಾಸ್ತಿ ೨. (ಕ್ರಿ). ಎಂಜಲನ್ನು ಹೊರಹಾಕು ೩. ತುಚ್ಛೀಕರಿಸು ೪. ನಿಂದಿಸು; ಬೈಯ್ಯು. **ಪ್ರ:** ಅವನಿಗೆ ಉಗುಳಿದರೇ ಬುದ್ಧಿ ಬರೋದು

ಉಗುಳುದಾಟು: ಮಾತುಮೀರು; ಧಿಕ್ಕರಿಸು

ಉಗುಳುನುಂಗು: ಸತ್ಯ ಹೇಳದೆ ಗಲಿಬಿಲಿಗೊಳ್ಳು

ಉಗುಳುಮಾರಿ: ನಿಂದಾಯೋಗ್ಯ ವ್ಯಕ್ತಿ

ಉಗುಳ್ನೀರು: ನೋಡಿ– ಉಗುನ್ನೀರು

ಉಗೆಲ: ಮಡಕೆಯ ಸಾಲು; **ನೋಡಿ–** ಅಡಕಿಲು

ಉಗೇನಿಟ್ಟು: ಉಗಿಯಲ್ಲಿ ಬೆಂದ ಹಿಟ್ಟು; ತಟ್ಟೆ ಇಡ್ಲಿ

ಉಗ್ಗ: ನೋಡಿ– ಉಗ್ಗೆ

ಉಗ್ಗಡಿ: ಹೆಚ್ಚಳ (ಬಳ್ಳಾ.ಜಿ)

ಉಗ್ಗಡಿಸು/ಉಗ್ಗಡ್ಸು: ಹೇಳು; ಸಾರಿ ಹೇಳು; ಗಟ್ಟಿಯಾಗಿ ಹೇಳು. **ಪ್ರ:** ಯಾಕೆ ಆ ಮಾತ್ನೆ ಉಗ್ಗಡಸ್ತಿ (ಮೈಸೂ.ಜಿ)

ಉಗ್ಗದ ಗಡಿಗೆ: ಹಿಡಿದುಕೊಳ್ಳಲು ಅನುವಾಗುವಂತೆ ಕಂಠಕ್ಕೆ ದಾರಬಿಗಿದಿರುವ ಗಡಿಗೆ

ಉಗ್ಗದಗಡ್ಲೆಯವನು: ಮುಂಗೋಪಿ

ಉಗ್ಗದ ವಸ್ತು: ಅಕ್ಕಿ, ಬೇಳೆ, ತುಪ್ಪ ಇವು ಉಗ್ಗದ ವಸ್ತುಗಳು. ರೆಡ್ಡಿ ಜನಾಂಗದವರಲ್ಲಿ ಪ್ರಸ್ಥದ ನಂತರ ಗಂಡಿನಮನೆಯವರು ಇದನ್ನು ಹಣ್ಣು, ಕಾಯಿ, ಎಲೆ ಅಡಿಕೆಯೊಂದಿಗೆ ತಟ್ಟೆಯಲ್ಲಿಟ್ಟು ಹೆಣ್ಣಿನ ಮನೆಯವರಿಗೆ ಕೊಟ್ಟು ದಂಪತಿಗಳನ್ನು ಕರೆದೊಯ್ಯುತ್ತಾರೆ

ಉಗ್ಗಳಿಸು/ಉಗಾಳಿಸು: ದೇವರ ಕಾರ್ಯದಲ್ಲಿ ಹೇಳುವ ಜಯಘೋಷ; ಉಘೇ ಹೇಳುವುದು

ಉಗ್ಗಾರು: ವಾಂತಿ (ಚಾಮ.ಜಿ)

ಉಗ್ಗಾಲ: ತುದಿಗಾಲು (ಮಂಡ್ಯ.ಜಿ)

ಉಗ್ಗಿ: ಹುಗ್ಗಿ; ಪಾಯಸ

ಉಗ್ಗಿಅನ್ನ: ನೋಡಿ **ಉಗ್ಗೆ ಅನ್ನ**

ಉಗ್ಗಿಸು: ಉಕ್ಕಿಸು. **ಇದೂ:** ಉಕ್ಸ

ಉಗ್ಗಿಸುವುದು (ಕಿ): ಶವಯಾತ್ರೆಯಲ್ಲಿ ಶವದ ಮೇಲೆ ಮರಿ ಮತ್ತು ನಾಣ್ಯಗಳನ್ನು ಎರಚುವುದು (ಶಿವ.ಜಿ)

ಉಗ್ಗು: ೧. ಎರಚು; ಹರಡಿದಂತೆ ಚೆಲ್ಲು. **ಪ್ರ:** ಗೊಬ್ಬರ ಉಗ್ಗು (ದಕ) ೨. ಚೆಲ್ಲು; ಸೂರೆಮಾಡು ೩. ಸುರುವು; ಸಿಂಪಡಿಸು (ಶಿವ.ಜಿ) ೪. ಮಾತಾಡುವಾಗ ಬಿಕ್ಕು (ನಾ) ೫. ಗೊಜ್ಜು (ಬೆಳ.ಜಿ)

ಉಗ್ಗುಗೊಬ್ಬರ: ಗೊಬ್ಬರವನ್ನು ಭೂಮಿಗೆ ಎರಚುವಿಕೆ

ಉಗ್ಗುಡ: ಗಾಬರಿ; ಬೇಗನೆ

ಉಗ್ಗುಬಾಯಿ: ಸ್ಪಷ್ಟವಾಗಿ ಮಾತಾಡಲಾಗದ ವಿಕಲತೆ

ಉಗ್ಗುರು: ೧. ಉಗ್ರವಾದ; ಭಯಂಕರವಾದ; ಹೆದರಿಸುವಂತಹ ೨. ಸಿಟ್ಟು; ಸೇಡು (ಮೈಸೂ.ಜಿ) ೩. ಏಕಾಗ್ರತೆ (ಮೈಸೂ.ಜಿ). **ಇದೂ:** ಉಗ್ಗರ

ಉಗ್ಗೆ/ಉಗ್ಗ: ೧. ನೆಲುವು; ಇಟ್ಟ ಪಾತ್ರೆ ಬೀಳದಂತೆ ತಡೆಯಲು ಬಳಸುವ ವೃತ್ತಾಕಾರದ ಹಗ್ಗದ ಸುರುಳಿ ೨. ಹಿಡಿದುಕೊಳ್ಳಲು ಅನುವಾಗುವಂತೆ ಹಾಲು, ತುಪ್ಪ ಇತ್ಯಾದಿ ಕುಡಿಕೆಗಳ ಕಂಠಕ್ಕೆ ಬಿಗಿದ ದಾರದ ಹಿಡಿಕೆ (ಬೆಂಗ್ರಾ.ಜಿ) ೩. ಹಾಲು ತರಲು ಬಳಸುವ ಚಿಕ್ಕಪಾತ್ರೆ (ಚಿಬ.ಜಿ) ೪. ತೊದಲು ಮಾತಾಡುವವನು (ದಾವ.ಜಿ) ೫. ಒಲೆ ಹೂಡುವಿಕೆ ೪. ಹುಗ್ಗೆ; ಅರಿಶಿನದ ಅನ್ನ (ದಕ)

ಉಗ್ಗೆ ಅನ್ನ/ಉಗ್ಗಿ ಅನ್ನ/ಹುಗ್ಗೆ ಅನ್ನ: ೧. ಕೊತ್ತಂಬರಿ, ಜೀರಿಗೆ, ಬೆಳ್ಳುಳ್ಳಿ, ಹಸಿರು ಮೆಣಸು, ಸ್ವಲ್ಪ ಮೆಂತ್ಯ ಎಲ್ಲಾ ರುಬ್ಬಿ ಈರುಳ್ಳಿ ವಗ್ಗರಣೆಯಲ್ಲಿ ಬೇಯುತ್ತಿರುವ ಹೆಸರು ಬೇಳೆಯೊಳಗೆ ಹಾಕಿ ಕುದಿಸಿ ತಕ್ಕಷ್ಟು ಉಪ್ಪು ಹಾಕಿ ಮಾಡುವ ಅನ್ನ ೨. ಅರಿಶಿನ ಮಿಶ್ರಿತ ಅನ್ನ

ಉಗ್ಗೊದಕ: ಅನ್ನ ನೀಡುವ ತಾಯಿ; ಮನೆಯ ಯಜಮಾನಿ (ಶಿವ.ಜಿ)

ಉಗ್ರಗಂದೆ: ಬಜೆ; ಅಜವಾನ (ತುಮ.ಜಿ)

ಉಗ್ರಡ್ನ: ನೋಡಿ– ಉಗುರಡ್ಡಿಗೆ

ಉಗ್ರರಥ: ಅರವತ್ತನೆಯ ಜನ್ಮದಿನದಂದು ನಡೆಸುವ ಶಾಂತಿಹೋಮ (ದಕ.ಜಿ)

ಉಗ್ರಾಣದವರು: ದೇವಾಲಯಗಳ ಉಗ್ರಾಣವನ್ನು ನೋಡಿಕೊಳ್ಳುವವರು (ಬಳ್ಳಾ.ಜಿ)

ಉಗ್ರಾಣಿ: ಅರಮನೆಯ ಉಗ್ರಾಣದ ರಕ್ಷಕ (ಉಕ.ಜಿ)

ಉಗ್ರಾಣಿ ಕುಟುಂಬ: ಜಾತ್ರೆ ಹಾಗೂ ಉತ್ಸವಗಳ ಕಾಲಕ್ಕೆ ದೂತನಾಗಿ ಕಾರ್ಯ ನಿರ್ವಹಿಸುವ ಕುಟುಂಬ

ಉಗ್ರೂಚ್‌ಗು: ಸ್ವಲ್ಪ ಊಟ

ಉಗ್ಲಿ: ಕಿಚಡಿ (ತುಮ.ಜಿ)

ಉಗ್ಲು : ನೇಣು; ಉರಲು (ಹಾಸ.ಜಿ)

ಉಘೇಉಘೇ: ೧. ದೇವರ ಉತ್ಸವದಲ್ಲಿ ಉಘ್ಘಡಿಸುವ ಜಯಘೋಷ (ಮೈಸೂ.ಜಿ) ೨. ಗ್ರಾಮೀಣ ಕ್ರೀಡೆಗಳಲ್ಲಿ ತಪ್ಪನ್ನು ತಿದ್ದಿಕೊಳ್ಳಲು ಇಲ್ಲವೆ ತಪ್ಪನ್ನು ಎತ್ತಿ ತೋರಿಸಲು ಉದ್ಗರಿಸುವ ಸಾಂಕೇತಿಕ ಶಬ್ದ

ಉಚಗಂಟು: (ನಾ) ೧. ಎಳೆದರೆ ಬಿಚ್ಚಿಕೊಳ್ಳುವ ಗಂಟು; ಊರುಗಂಟು (ಮಂಡ್ಯ.ಜಿ) ೨. ಜೀರುಕುಣಿಕೆ (ಬೆಂಗ್ರಾ.ಜಿ). (ಕ್ರಿ) ೩. ಜಾರಿಕೊಳ್ಳು

ಉಚಗೊಡ್ಡ: ಉಜ್ಜುಗೊರಡು; ಕಟ್ಟಿಗೆ ನಯ ಮಾಡುವ ಸಾಧನ

ಉಚಪ್ಯಾಲಿ: ಹುಚ್ಚ (ಧಾರ.ಜಿ)

ಉಚರೋಗ: ಸಿಹಿಮೂತ್ರ ಖಾಯಿಲೆ

ಉಚಾಪತಿ: ೧. ತಲೆಹರಟೆ; ಅಧಿಕ ಪ್ರಸಂಗತನ ೨. ಕೊಡುಬಳಕೆ; ಸಲಿಗೆ (ಉಕ) ೩. ವ್ಯವಹಾರ ೪. ರಕ್ಷಣೆ (ದಕ.ಜಿ)

ಉಚಾಯಿಸು: ಹದ್ದುಮೀರು

ಉಚೂ (ಕ್ರಿ): ಊದು (ಬಳ್ಳಾ.ಜಿ)

ಉಚ್ಕೊಂಡಿ: ಹುಚ್ಚುಕೊಂಡಿ. ಎರಡನೇ ತಿಂಗಳಿನಲ್ಲಿ ಬಸುರಿಯರಿಗೆ ಕಾಡುವ ದೇವತೆ, ಈ ದೇವಿಯ ಕೋಪವು ಮೈ ಊತ ತಲೆನೋವನ್ನು ತರುತ್ತದೆ ಎಂಬ ನಂಬಿಕೆ (ಕೋಲಾ.ಜಿ)

ಉಚ್ಚಂಗಿ: ೧. ದೇವಿ; ಮಹಾಮಾಯಿ ೨. ಮಾರಿ ಗುಡಿಯ ಮುಂದೆ ಪೂಜಿಸಲ್ಪಡುವ ಒಂದು ಪರಿವಾರ ದೇವತೆ (ದಕ.ಜಿ)

ಉಚ್ಚಂಗೆಮ್ಮ: ಉಚ್ಚಂಗಮ್ಮ; ಉಚ್ಚಂಗಿ. ಚಿತ್ರದುರ್ಗದ ಮದಕರಿನಾಯಕರ ವಂಶದ ಮನೆ ದೇವತೆ; ಚಿತ್ರದುರ್ಗದ ಒಂಭತ್ತು ರಕ್ಷಕ ದೇವತೆಯರಲ್ಲೊಬ್ಬಳು

ಉಚ್ಚಂಗೆಮ್ಮನ ಪುಟ್ಟಿ: ಜೋಗತಿಯರ ಪಡಲಿಗೆಯಲ್ಲಿರುವ ಸಣ್ಣ ಬಿದಿರಿನ ಬುಟ್ಟಿ (ಬೆಳ.ಜಿ)

ಉಚ್ಚಂಗೆಲ್ಲಮ್ಮ: ನೋಡಿ– ಉಚ್ಚಂಗೆಮ್ಮ

ಉಚ್ಚಂಡ: ಅತಿ ಉಗ್ರ (ಶಿವ.ಜಿ)

ಉಚ್ಚಗಂಗಮ್ಮ: ಬೆಂಗಳೂರು ಜಿಲ್ಲೆ ದೊಡ್ಡಬಳ್ಳಾಪುರ ತಾಲೂಕಿನ ಕಲ್ಲುದೇವನಹಳ್ಳಿಯ ದೈವ

ಉಚ್ಚಗುಂಡಿ: ದನದ ಕೊಟ್ಟಿಗೆಯಲ್ಲಿ ಗಂಜಲ ಶೇಖರಣೆ ಆಗುವ ಸ್ಥಳ

ಉಚ್ಚಟ್ಟು: ಉಚ್ಚೆ ಹುಯ್ಯುವುದು; ಮೂತ್ರ ವಿಸರ್ಜನೆ

ಉಚ್ಚಪ್ಪರ: ದೇವರ ಮೆರವಣಿಗೆಗೆ ಬಟ್ಟೆಯಿಂದ ಮಾಡಿದ ಚಪ್ಪರ

ಉಚ್ಚಯೊ: ಉತ್ಸವ (ದಕ.ಜಿ)

ಉಚ್ಚಾ: ನಾಯಿಯನ್ನು ಓಡಿಸುವ ಶಬ್ದ

ಉಚ್ಚಾಟ (ಕ್ರಿ): ಮಲಬಾಧೆ; ಭೇದಿ (ಉಕ.ಜಿ)

ಉಚ್ಚಾಯ: ಉತ್ಸವ; ಚಿಕ್ಕರಥೋತ್ಸವ; ಚಿಕ್ಕತೇರು; ದೇವರ ತೇರನ್ನು ಎಳೆಯುವ ಆಚರಣೆ (ಹಾಸ.ಜಿ/ಚಿತ್ರ.ಜಿ) **ಪ್ರ:** ನಮ್ಮೂರಲ್ಲಿ ಉಚ್ಚಾಯ ಇದೆ ನೀವೆಲ್ಲಾ ಬನ್ನಿ

ಉಚ್ಚಾಯಿ ಮೆರವಣಿಗೆ: ಮೊದಲಿಗೆ ಎಳೆಯುವ ಸಣ್ಣ ರಥದ ಮೆರವಣಿಗೆ (ಗುಲ್ಬ.ಜಿ)

ಉಚ್ಚಾರ: ಚಪ್ಪಟೆಯಾದ ಅರ (ಬೆಂಗ್ರಾ.ಜಿ); ಈಟಿ, ಕತ್ತಿ ಕೊಡಲಿಗಳನ್ನು ಮಸೆದು ಹರಿತಮಾಡಲು ಬಳಸುವ ಸಾಧನ

ಉಚ್ಚಾಲೆ: ೧. ಹುಚ್ಚು ಆಲೆ ೨. ಜಾನುವಾರುಗಳ ಗಾಯ ವಾಸಿ ಮಾಡುವ ಗುಣವುಳ್ಳ ಹಾಲೆ ಜಾತಿಗೆ ಸೇರಿದ ಒಂದು ಮರ ಮತ್ತು ಅದರ ಎಲೆ (ಚಾಮ.ಜಿ)

ಉಚ್ಚಾವಳಿ: ಹುಟ್ಟಿ ಬೆಳೆದ ಕುಲ

ಉಚ್ಚಿ: ೧. ಮೂತ್ರ (ಗುಲ್ಬ.ಜಿ) ೨. ಹಳೆಚಾರೆ ಗಿಡ (ಮೈಸೂ.ಜಿ/ಬೀದ.ಜಿ) ೩. (ಕ್ರಿ) ಕಳಚಿ; ಬಿಚ್ಚಿ

ಉಚ್ಚಿಎಲೆ ಗಿಡ: ಔಡಲ ಎಣ್ಣೆಯೊಂದಿಗೆ ಬಿಸಿ ಮಾಡಿ ಹಚ್ಚಿದರೆ ಬಾವು ಇಳಿಸುವ ಗುಣವುಳ್ಳ ಒಂದು ಔಷಧಿಗಿಡ. **ಇರೂ:** *ಮದ್ದುಗುಣ್ಕೆ ಗಿಡ*

ಉಚ್ಚಿಕೊಳ್ಳುವುದು: ದನಗಳಿಗೆ ಬರುವ ಭೇದಿರೋಗ. ಸಗಣಿಯು ನೀರಿನಂತೆ ತೆಳ್ಳಗೆ ವಿಸರ್ಜನೆಯಾಗುತ್ತದೆ

ಉಚ್ಚಿಬರಾಯಿ: ನೀರಿನೊಳಗೆ ಬಂಡೆ ಎಡೆಗಳಲ್ಲಿ ಕಾಣಿಸಿಕೊಳ್ಳುವ ಒಂದು ಜಾತಿಯ ಮೀನು (ದಕ.ಜಿ)

ಉಚ್ಚಿಬೀಳು: ೧. ಕಳಚಿಕೊಂಡು ಬೀಳು (ಬೆಳ.ಜಿ) ೨. ಅಶಕ್ತನಾಗು ೩. ತಪ್ಪುಮಾಡು (ಉಕ)

ಉಚ್ಚಿಬುಲ್ದಿ: ಉಚ್ಚೆ ಚೀಲ; ಹೆರಿಗೆ ಕಾಲದಲ್ಲಿ ಕೂಸಿನೊಂದಿಗೆ ಹೊರಬರುವ ತೆಳು ಚೀಲ; ಮಾಸು (ಚಿಮ.ಜಿ)

ಉಚ್ಚು: ೧. ದನ ಮುಂತಾದ ಪ್ರಾಣಿಗಳು ನೀರು ನೀರಾಗಿ ಸಗಣಿ ಹಾಕುವಂಥ ಒಂದು ಖಾಯಿಲೆ; ಭೇದಿಮಾಡು; ಅತಿಸಾರವಾಗು ೨. ಕಳಚು. **ಪ್ರ:** ಹಗ್ಗ ಉಚ್ಕೊಂಡಿದೆ ೩. ಹೆದರು (ಮೈಸೂ.ಜಿ/ಚಾಮ.ಜಿ). **ಇರೂ:** *ಉಚ್‌ರೋಗ; ಉಚ್ಚಾಟ*

ಉಚ್ಚುಆಳಂಬಿ: ಹುಚ್ಚು ಅಣಬೆ. ಅರಳಿದ ಅಣಬೆಯ ಕೆಳಭಾಗದಲ್ಲಿ ಕಪ್ಪಗಿರುತ್ತದೆ ಇದನ್ನು ಅಡುಗೆಗೆ ಬಳಸುವುದಿಲ್ಲ (ಕೋಲಾ.ಜಿ)

ಉಚ್ಚುಮೀನು: ಹಾವಿನಾಕಾರದ ಮೈಯಲ್ಲಿ ಮೊಸರಿನ ಕಲೆಗಳಂತಹ ಬಿಳಿ ದ್ರವವಿರುವ ಒಂದು ಜಾತಿಯ ಮೀನು. ಒಣಗಿಸಿ ಗೊಬ್ಬರಕ್ಕೆ ಹೆಚ್ಚಾಗಿ ಬಳಸುತ್ತಾರೆ (ದಕ.ಜಿ)

ಉಚ್ಚೆಕಾಯಿ: *ಸ್ವಾತೋಡಿಯಾ ಕಂಪ್ಯಾನ್ಯುಲೇಟಾ:* ಒಂದು ಬಗೆಯ ಮರ (ತುಮ.ಜಿ). **ಇರೂ:** *ನೀರುಕಾಯಿ ಮರ* (ಚಿತ್ರ ನೋಡಿ)

ಉಚ್ಚೆಪಟ್ಟೆ: ಮೂತ್ರಕೋಶ (ಕೊಡ.ಜಿ)

ಉಚ್ಚೆಪುರ್ಕ: ನಿಂತಲ್ಲೇ, ಮಲಗಿದ್ದಲ್ಲೇ ಉಚ್ಚೆ ಹುಯ್ದುಕೊಳ್ಳುವವ (ಮಂಡ್ಯ.ಜಿ)

ಉಚ್ಚೆಮಲ್ಲೆಹಣ್ಣು: ಒಂದು ಬಗೆಯ ಕಾಡುಹಣ್ಣು. **ಇರೂ:** *ಕುಂಚೆಹಣ್ಣು (ತುಮ.ಜಿ)*

ಉಚ್ಚೆಳ್ಳು: ಹುಚ್ಚೆಳ್ಳು

ಉಚ್ಚೆಳ್ಳುಡಿ: ಹುಚ್ಚೆಳ್ಳಿನ ಜೊತೆ ಉಪ್ಪು ಖಾರ ಕುಟ್ಟಿ ಮಾಡಿದ ಪುಡಿ (ಮೈಸೂ.ಜಿ); ಹುಚ್ಚೆಳ್ಳಿಂಡಿ

ಉಚ್ಚೊಳೆ: ಹುಚ್ಚುಹೊಳೆ; ಮೇರೆಮೀರಿ ಹರಿಯುವ ಹೊಳೆ

ಉಚ್ಚೋದು: ಕೋಳಿಗಳ ಒಂದು ರೋಗ. ಈ ರೋಗ ಬಂದ ಕೋಳಿಗಳು ಬಿಳಿಬಣ್ಣದ ಭೇದಿ ಮಾಡುತ್ತವೆ (ಕೋಲಾ.ಜಿ)

ಉಚ್ಛಾಯಿಸು: ದಬಾಯಿಸಿ ಮಾತನಾಡು (ಹಾಸ.ಜಿ)

ಉಚ್ಛೈಳದ ಮಾತು: ಹೊರಹಾಕಿದ ಮಾತು

ಉಚ್ಚ್ ಮೀನು: ಪದೇಪದೇ ಮೂತ್ರ ಮಾಡಿಕೊಳ್ಳುವ ಮೀನು. ಮಕ್ಕಳಿಗೆ ಇದನ್ನು ಸುಟ್ಟು ಕೊಟ್ಟರೆ ಅತಿಮೂತ್ರರೋಗ ಗುಣವಾಗುತ್ತದೆ ಎಂಬ ನಂಬಿಕೆ ಇದೆ (ಉಡು.ಜಿ)

ಉಚ್‌ರೋಗ: ತೆಳ್ಳಗಿನ ಭೇದಿ (ಉಕ). **ನೋಡಿ** – ಉಚ್ಚು

ಉಜರ್‌ಗದ್ದೆ: ನೀರಿನ ಆಶ್ರಯವಿರುವ ಗದ್ದೆ; ತರಿಭೂಮಿ

ಉಜಾಗಾರ: ಕೆಲಸವಿಲ್ಲದೆ ತಿಂದು ತಿರುಗುವವ (ಉಕ)

ಉಜಾಡು: ಹಾಳು; ನಾಶ

ಉಜಾರಾ: ಇಜಾರ; ಪೈಜಾಮ (ಕೊಪ್ಪ.ಜಿ)

ಉಜಿಡೆ: ಭೂತನರ್ತಕನು ಕುಳಿತುಕೊಳ್ಳಲು ಉಪಯೋಗಿಸುವ ಒರಳಿನಾಕಾರದ ಪೀಠ (ದಕ.ಜಿ)

ಉಜಿರ್‌ಕಣಿ: ಅಡಕೆ ತೋಟದಲ್ಲಿ ನೀರು ಹೋಗಲು ತೋಡಿರುವ ಪುಟ್ಟ ಕಾಲುವೆ (ದಕ.ಜಿ)

ಉಜುರು/ಉಜುರೆ: ನೀರಾವರಿಗಾಗಿ ಬಳಸುವ ಕಾಲುವೆ (ದಕ.ಜಿ)

ಉಜುಲು: ತೆರಿಗೆಯ ಹಣ

ಉಜೆ: ಮಡಿವಾಳರು ತಯಾರಿಸುವ ಗೆಂದಾಳಿ ತೆಂಗಿನ ಸೋಗೆಯ ಕಾಂಡ ಮತ್ತು ಬೆರಣಿಯನ್ನು ಸುಟ್ಟ ಬೂದಿ. ಶುದ್ಧೀಕರಣ ಕ್ರಿಯೆಯಲ್ಲಿ ಈ ಬೂದಿಯನ್ನು ಉಪಯೋಗಿಸುತ್ತಾರೆ (ದಕ.ಜಿ)

ಉಜೆನೀರು: ಮಡಿವಾಳರು ಬಟ್ಟೆಗಳನ್ನು ಹಬೆಯಲ್ಲಿ ಬೇಯಿಸುವಾಗ ಇಳಿಯುವ ನೀರು. ಈ ನೀರನ್ನು ಧಾರ್ಮಿಕ ಶುದ್ಧೀಕರಣದ ಸಂದರ್ಭದಲ್ಲಿ ಮಡಿವಾಳ ಉಪಯೋಗಿಸುತ್ತಾನೆ (ದಕ.ಜಿ)

ಉಜ್ಗರಿ: ನೋಡಿ– ಉಜ್ಜರಿ (ಹಾಸ.ಜಿ/ಮೈಸೂ.ಜಿ)

ಉಜ್ಗೊಡ್ಡ: ನೋಡಿ– ಉಜ್ಜುಗೊರಡು

ಉಜ್ಜನಿ: ಉಜ್ಜೆನಿ; ಉಜ್ಜೈನಿ; ವೀರಶೈವರ ಪುಣ್ಯ ಕ್ಷೇತ್ರ, ವೀರಶೈವ ಪಂಚಪೀಠಗಳಲ್ಲೊಂದು. ಉಜ್ಜಿನಪ್ಪ ಎಂದೇ ಪ್ರಸಿದ್ಧವಾಗಿರುವ ಇಲ್ಲಿನ ಅಧಿದೇವತೆ ಮರುಳ ಸಿದ್ದೇಶ್ವರ.

ಉಜ್ಜನಿಚೌಡಮ್ಮ: ತುಮಕೂರು ಜಿಲ್ಲೆ ಕುಣಿಗಲ್ ತಾಲೂಕು ಉಜ್ಜನಿ ಎಂಬ ಗ್ರಾಮದ ದೈವ

ಉಜ್ಜರಿ/ಉಜ್ಜಾರಿ/ಉಜ್ಜೊರಿ: ಉಜ್ಜುಗೋರಿ; ಬೆಳೆಯ ಮಧ್ಯೆ ಬೆಳೆದ ಹುಲ್ಲನ್ನು ಉಜ್ಜಿ ತೆಗೆಯುವ ಒಂದು ಸಲಕರಣೆ. ಕಳೆಗತ್ತಿ (ದಕ.ಜಿ)

ಉಜ್ಜವಣೆ: ಉದ್ಯಾಪನ; ವ್ರತ ವಿಸರ್ಜನೆ; ಕ್ರಮಪೂರಿತ ವಿಧಾನದಿಂದ ಹಿಡಿದ ನೋಂಪಿಯನ್ನು ಪೂರೈಸುವ ಅಂತಿಮ ಕ್ರಮ (ಬೆಂಗ.ಜಿ)

ಉಜ್ಜಳ: ಉಜ್ವಲ; ಬೆಳೆಯುವುದು; ಯಶಸ್ಸು

ಉಜ್ಜಾರ: ಕುಡುಗೋಲು ಚೂಪು ಮಾಡಲು ಬಳಸುವ ಸಾಧನ (ತುಮ.ಜಿ)

ಉಜ್ಜಾಲ್: ಮರದ ಉಯ್ಯಾಲೆ; ಪ್ರತಿಷ್ಠಿತರ ಮನೆಗಳ ಚಾವಡಿಗಳಲ್ಲಿ ಬಳಸುತ್ತಿದ್ದ ಅಥವಾ ದೈವಕ್ಕೆಂದೇ ಮೀಸಲಿಟ್ಟ, ವಿಶಾಲವಾದ ಮರದ ಉಯ್ಯಾಲೆ (ದಕ.ಜಿ)

ಉಜ್ಜಿನಪ್ಪ: ಉಜ್ಜನಿ ಎಂಬ ಕ್ಷೇತ್ರದ ಅಧಿದೇವತೆ

ಉಜ್ಜಿಮರ: ಸ್ವಲ್ಪ ಒಡ್ಡಾಗಿರುವ ಎರಡಡಿಯಷ್ಟು ಉದ್ದ ಮರದ ತುಂಡು. ಇಡೀ ಗಾಣವನ್ನು ಬಿಗಿಯಾಗಿ ಹಿಡಿದಿಟ್ಟುಕೊಂಡು ಗಾಣಕ್ಕೆ ಚಾಚಿಕೊಂಡು ಸುತ್ತುವ ಮರ (ಹಾಸ.ಜಿ)

ಉಜ್ಜಿಯ: ಉತ್ಸವ. ತಿಂಗಳುಮಾವನ ಪೂಜೆಯ ನಾಲ್ಕನೇ ದಿನ ಚಿತ್ರ ಬರೆದು ಹೆಣ್ಣು ಗಂಡನ್ನು ಕೂರಿಸಿ ಪೂಜೆ, ಮದುವೆ ಮಾಡುವ ಒಂದು ಆಚರಣೆ (ಚಿಬ.ಜಿ)

ಉಜ್ಜುಗಂಬಳಿ: ಉತ್ತರ ಕರ್ನಾಟಕದ ಅನೇಕ ಭಾಗಗಳಲ್ಲಿ ನೇಯುವ ಕಲಾತ್ಮಕವಾದ ಸಂಪೂರ್ಣ ಕಪ್ಪು ಉಣ್ಣೆಯ ದಪ್ಪ ಎಳೆಯ ಕಂಬಳಿ. ಅದರ ಎರಡೂ ಬದಿಗೆ ಸಾಮಾನ್ಯವಾಗಿ ಬಿಳಿಯ ಐದು ಪಟ್ಟೆಗಳಿರುವುದು ವಿಶೇಷ (ಗುಲ್ಬ.ಜಿ)

ಉಜ್ಜುಗೊರಡು/ಉಜ್ಜುಗೊಲ್ಡು: ೧. ಒರಟಾದ ಮರದ ಮೇಲ್ಮೈಯನ್ನು ಉಜ್ಜಿ ನಯಗೊಳಿಸುವ ಉಪಕರಣ; ಹತ್ರಿ; ಇದರ ಗಾತ್ರ

ಮತ್ತು ವಿನ್ಯಾಸಗಳಲ್ಲಿ ಹಲವು ವ್ಯತ್ಯಾಸಗಳಿರುತ್ತವೆ ೨.ಕುಡ್ಲು ಹರಿತಗೊಳಿಸಲು ಬಳಸುವ ಸಾಧನ. **ಇರೂ:** *ಉಜ್ಜಲರ; ಕೆಸಣೆ; ಕೇಸುಳಿ.* **ನೋಡಿ–** ಅತ್ರಿ

ಉಜ್ಜುಪರೆ: ಕೊಡಗಿನ ಒಂದು ಚರ್ಮವಾದ್ಯ

ಉಜ್ಜುಬೆಲ್ಲ: ೧. ಕಬ್ಬಿನ ಕಾದ ಹಾಲನ್ನು ತೆಳುವಾದ ಹಲಗೆಯಾಕಾರ ಪಡೆಯುವಂತೆ ಹರಡಿ ತಯಾರಿಸಿದ ಬೆಲ್ಲ (ಚಿಬ.ಜಿ) ೨. ಕೊಪ್ಪರಿಗೆಯನ್ನು ಉಜ್ಜಿ ತೆಗೆದ ಬೆಲ್ಲ

ಉಜ್ಜುಮಣೆ: ಬೆಲ್ಲದ ಕೊಪ್ಪರಿಗೆಗೆ ಅಂಟಿಕೊಂಡು ಗಟ್ಟಿಯಾಗಿರುವ ಪಾಕವನ್ನು ಉಜ್ಜುವ ಮಣೆ

ಉಜ್ಜುವಾರಿ: ನೋಡಿ– ಉಜ್ಜರಿ

ಉಜ್ಜುಸರ: ಗೊಲ್ಲಸಮುದಾಯದ ಹೆಣ್ಣುಮಕ್ಕಳು ಬಳಸುವ ಕೊರಳಿನ ಆಭರಣ



ಉಜ್ಜೆರ್: ಒನಕೆಯ ಬುಡಕ್ಕೆ ಹೊಡೆದಿರುವ ಕಬ್ಬಿಣದ ಬಳೆ (ದಕ.ಜಿ)

ಉಜ್ಜೆರ್: ಒನಕೆಯ ಬುಡಕ್ಕೆ ಹೊಡೆದಿರುವ ಕಬ್ಬಿಣದ ಬಳೆ (ದಕ.ಜಿ)

ಉಜ್ಜೊರಿ: ನೋಡಿ– ಉಜ್ಜರಿ (ಮೈಸೂ.ಜಿ)

ಉಜ್ಜೋಡು: ನೋಡಿ– ಉಜ್ಜುಗೊರಡು

ಉಜ್ರಟಿಕ್ಕಿ: ವಜ್ರಟಿಕ್ಕಿ; ಕೊರಳಿನ ಆಭರಣ

ಉಜ್ರಾ: ೧. ಒನಕೆ ೨. ವಜ್ರ ೩. ಚಿಲುಮೆ (ದಕ.ಜಿ/ಉಕ.ಜಿ)

ಉಟಗಿ/ಉಟುಕಿ: ಉಡುಗೆ; ಎಲ್ಲಮ್ಮದೇವಿಯ ಭಕ್ತರು ಬೇವಿನ ಅಥವಾ ಲಕ್ಕಿ ತೊಪ್ಪಲಿನ ಉಡುಗೆ ಉಟ್ಟುಕೊಂಡು ದೇವಸ್ಥಾನಕ್ಕೆ ತೆರಳಿ ಅಲ್ಲಿ ಆ ಉಡುಗೆ ವಿಸರ್ಜಿಸಿ ಹೊಸಬಟ್ಟೆ ಉಡುವ ಹರಕೆ (ಬೆಳ.ಜಿ)

ಉಟಗೈ: ಬರಿಗೈ (ಬಾಗ.ಜಿ)

ಉಟಜಾರಿ ಕಟ್ಗೆ: ಬಂಡಿ ಹಾಗೂ ಕೃಷಿ ವಸ್ತುಗಳ ತಯಾರಿಕೆಗಾಗಿ ಬಳಸುವ ಕಟ್ಟಿಗೆಯ ಒಂದು ಜಾತಿ

ಉಟಣೆ: ಉರುಟಣೆ. ಮದುಮಕ್ಕಳನ್ನು ಹಸೆಯ ಮೇಲೆ ಕೂಡಿಸಿ ಆರತಿ ಮಾಡುವುದು (ಬೆಂಗ್ರಾ.ಜಿ)

ಉಟದಟ್ಟಿ: ನೋಡಿ–ಉಟ್ಟದಟ್ಟಿ

ಉಟಿಹಾರಿಸು: ಚಕ್ಕಡಿ ಮೇಲಿನ ವಸ್ತು ಕೆಡವು. **ಇರೂ:** *ಮೂಕೆತ್ತು (ಬೆಂಗ್ರಾ.ಜಿ)*

ಉಟ್ಟದಟ್ಟಿ/ಉಟದಟ್ಟಿ: ಉಡುವ ದಟ್ಟಿ ೧. ಹೆಣ್ಣು ಮಗುವಿಗೆ ನಾಲ್ಕನೇ ವರ್ಷಕ್ಕೆ ಕೈಗೆ ಕೊಡುವ ಸಣ್ಣ ಸೀರೆ (ಬೆಳ.ಜಿ) ೨. ಮೊಮ್ಮಗಳಿಗೆ ಅಜ್ಜಿ ಕೊಡುವ ಉಡುಗೊರೆ (ಶಿವ.ಜಿ) ೩. ತಾಯಿಯ ತವರವರು ಬಾಲಕಿಯರಿಗೆ ಉಡಲು ಕೊಡುವ ಬಟ್ಟೆಬರೆ ಹಾಗೂ ಇದಕ್ಕೆ ಸಂಬಂಧಿಸಿದ ಆಚರಣೆ ೪. ಎಂಟು ಹತ್ತು ವರ್ಷದ ಹೆಣ್ಣುಹುಡುಗಿಗೆ ಅವಳ ಸೋದರಮಾವನು ಗೌರಿಹುಣ್ಣಿಮೆಯ ದಿನ ಉಡುಗೊರೆ ನೀಡುವ ಸಣ್ಣಸೀರೆ; ಕಿರಿಗೆ (ಬೀದ.ಜಿ)

ಉಟ್ಟದಟ್ಟಿ ಕಾರ್ಯಕ್ರಮ: ಹೆಣ್ಣುಮಕ್ಕಳಿಗೆ ಹನ್ನೆರಡು ವರ್ಷದ ಒಳಗೆ ಅಂದರೆ ದೊಡ್ಡವಳಾಗುವ ಮುನ್ನ ಪ್ರಥಮ ಬಾರಿ ಸೀರೆ ಉಡಿಸುವ ಸಂಪ್ರದಾಯ (ಬಿಜಾ.ಜಿ)

ಉಟ್ಟಮಾರ್ಗ: ಹುಟ್ಟುಮಾರ್ಗ; ಬತ್ತಲೆ

ಉಟ್ಟರ: ನೋಡಿ– ಉಟ್ಟರಗಂಟು

ಉಟ್ಟರಗಂಟು/ಉಟ್ರಗಂಟು: ಧೋತರ ಅಥವಾ ಸೀರೆಯನ್ನು ಉಡುವಾಗ, ಜಾರದಂತೆ ಟೊಂಕದ ಮೇಲೆ ಹಾಕುವ ಗಂಟು (ಶಿವ.ಜಿ); ಬಾಳೆಕಾಯಿಗಂಟು (ಧಾರ.ಜಿ)

ಉಟ್ಟಾಡಿಸು: ೧. ಹುಟ್ಟಾಡಿಸು ೨. ಒಬ್ಬ ವ್ಯಕ್ತಿಯ ಒಳಹೊರಗುಗಳನ್ನು ಪರೀಕ್ಷಿಸಿ ನೋಡು

ಉಟ್ಟಾವಳಿ: ೧. ಹುಟ್ಟಿ ಬೆಳೆದ ಕಾಲ ೨. ಉಡುವ ಬಟ್ಟೆ (ಶಿವ.ಜಿ)

ಉಟ್ಟಿದ ನಿರ್ವಾಣ: ಬೆತ್ತಲೆಯಾಗಿ (ತುಮ.ಜಿ)

ಉಟ್ಟು: ಹುಟ್ಟು; ೧. ದೋಣಿ ನಡೆಸುವ ಸಾಧನ; ನೀರನ್ನು ಹಿಂದೆ ತಳ್ಳಿ ದೋಣಿ ಮುಂದೆ ಸಾಗಿಸುವ ಸಾಧನ (ಮಂಡ್ಯ.ಜಿ) ೨. ಅನ್ನ ತಿರುಗಿಸುವ ಕಟ್ಟಿಗೆಯ ಕೈ ಚಮಚ ೩. ಮುಖ (ಕೋಲಾ.ಜಿ)

ಉಟ್ಟುರದನ: ಒಂದು ಬಗೆಯ ಚೀಲ

ಉಟ್ಟುರು: ಬಹಳ ಸುಡುವ ಬಿಸಲು

ಉಟ್ಟುಸ್ಯಾಲೆ: ಒಂದು ಸಲ ಉಟ್ಟ ಸೀರೆ; ಹಳೆಯ ಸೀರೆ; ಮೈಲಿಗೆ ಸೀರೆ (ಮಂಡ್ಯ.ಜಿ)

ಉಟ್ಟ್‌ತಾಳಿ: ಒಂದು ವಿಶಿಷ್ಟ ಬಗೆಯ ತಾಳಿ. ಲಕ್ಷ್ಮೀತಾಳಿ. ಶುಕ್ರವಾರ ಹೆಣ್ಣು ಮಗು ಹುಟ್ಟಿದರೆ ಉಟ್ಟ್‌ತಾಳಿ ಹಾಕಬೇಕು ಎಂಬ ನಂಬಿಕೆ ಇದೆ (ತುಮ.ಜಿ)

ಉಟ್‌ತುಂಗೆ: ಒಂದು ಬಗೆಯ ಕಳೆಹುಲ್ಲು

ಉಟ್ರಗಂಟು: ನೋಡಿ– ಉಟ್ಟರಗಂಟು

ಉಟ್ಲಾ: ನೇಯ್ಗೆಯಲ್ಲಿ ಬಳಕೆಯಾಗುವ ವಸ್ತು; ನೂಲಿಗೆ ಗಂಜಿ ಲೇಪಿಸಿ ಒಣಗಿಸಲು ಕಟ್ಟುವ ಮರದ ಸಾಧನ

ಉಟ್ಲು: ೧. ಜಾತ್ರೆಗಳ ಸಂದರ್ಭದಲ್ಲಿ ನಡೆಯುವ ಒಂದು ರೀತಿಯ ದೇವರ ಸೇವೆ. ದೇವಸ್ಥಾನದ ಮುಂದೆ ನೆಟ್ಟು ಎಣ್ಣೆ ಸವರಿದ ಮರವನ್ನು ಏರುವಿಕೆ. ಮೈಲಾರಲಿಂಗನ ಗುಡ್ಡದಲ್ಲಿ ಜಾತ್ರೆಯಂದು ಪೂಜಾರಿ ಈ ಕಂಬವನ್ನೇರಿ ಕಾರಣಿಕ ನುಡಿಯುವ ಸಂಪ್ರದಾಯವಿದೆ. ಕೆಲವು ಕಡೆ ಕಂಬ ಏರುವ ಸ್ಪರ್ಧೆಯೂ ನಡೆಯುತ್ತದೆ. ***ಇರೂ:*** ಕಾರಣಿಕದ ಕಂಭ ೨. ಪುಟ್ಟಿ; ಪುಟ್ಟಿಲು

ಉಟ್ಲುಕಾಯಿ: ಕೆಲವು ಜಾತ್ರೆಗಳ ಕೊನೆಯ ದಿನದಂದು ನಡೆಸುವ ಒಂದು ಆಚರಣೆ. ಮೇಲೆ ಕೆಳಗೆ ಏರಿಸಿ ಇಳಿಸುವಂತೆ ಹಗ್ಗದಿಂದ ಕಟ್ಟಿರುವ ಬುಟ್ಟಿಯ ಒಳಗೆ ಮಡಕೆಯಲ್ಲಿ ಇಟ್ಟಿರುವ ತೆಂಗಿನಕಾಯಿಯನ್ನು ಯುವಕರು ಹೊಡೆಯವ ಸಾಹಸ ಕ್ರಿಯೆ. ಬುಟ್ಟಿಯನ್ನು ಮೇಲೆ ಕೆಳಗೆ ಏರಿಸಿ ಇಳಿಸುತ್ತಿರುವಾಗ ಯುವಕರ ಏಕಾಗ್ರತೆಗೆ ಭಂಗ ಬರುವಂತೆ ಅವರ ಮುಖಕ್ಕೆ ರಭಸದಿಂದ ನೀರನ್ನು ಎರಚುತ್ತಾರೆ. ಉಟ್ಟಲು ಕಾಯಿಯು ಕೀಚಕನ ಪ್ರತೀಕ ಹಾಗೂ ಈ ಆಚರಣೆ ಕೀಚಕ ವಧೆಯ ಪ್ರತೀಕ ಎನ್ನುವ ಪ್ರತೀತಿಯಿದೆ (ಬೆಂಗ್ರಾ.ಜಿ)

ಉಟ್ಲುಬಡಿ: ಹಿಮ್ಮುಖವಾಗಿ ನಿಂತು ಹೊಡೆಯುವುದು (ದಕ.ಜಿ)

ಉಟ್ಲುಲ್ಲು: ಒಂದು ಜಾತಿಯ ಹುಲ್ಲು (ಕೋಲಾ.ಜಿ)

ಉಟ್ಲು ಹೊಡೆಯುವುದು: ಜಾತ್ರೆ ಮತ್ತು ರಥೋತ್ಸವಗಳ ಒಂದು ಆಕರ್ಷಕ ಕ್ರೀಡೆ. ಮೇಲಿನಿಂದ ಇಳಿ ಬಿಟ್ಟ ಹಗ್ಗಕ್ಕೆ ಕಟ್ಟಿದ ತೆಂಗಿನಕಾಯಿಗಳು ಸುತ್ತುವಾಗ ಕೆಳಗಡೆ ನಾಲ್ಕು ಮಂದಿ ಭಾರಿ ದೊಣ್ಣೆಗಳನ್ನೆತ್ತಿ ನಿಂತಿರುತ್ತಾರೆ. ಈ ದೊಣ್ಣೆಗೂ, ತೆಂಗಿನಕಾಯಿಗಳಿಗೂ ಲಟಾಪಟಿಯಾದಾಗ ಕಾಯಿಗಳು ಚೂರುಚೂರಾಗಿ ಒಡೆದು ಬೀಳುತ್ತವೆ. ಇದು ಪ್ರಸಾದ. ಹಳ್ಳಿಯ ಜನಕ್ಕೆ ಇದೊಂದು ವಿನೋದ. ತಂಟೆ ಮಾಡಿದರೆ ತಲೆ ಉಟ್ಲು ಹೊಡೆಸಿಬಿಟ್ಟೇನುಎಂಬ ಗಾದೆಯೂ ಇದೆ. ನೋಡಿ– ಉಟ್ಲುಕಾಯಿ

ಉಡ: ಹಲ್ಲಿಯ ಜಾತಿಗೆ ಸೇರಿದ ಪ್ರಾಣಿ. ಹಿಡಿತ ತುಂಬಾ ಬಿಗಿ ಎನ್ನುವ ಕಾರಣಕ್ಕೆ ಹಿಂದೆ ಕೋಟೆ ಏರಲು ಬಳಸುತ್ತಿದ್ದರು. ಚರ್ಮವನ್ನು ದಮ್ಮಡಿ ಮುಂತಾದ ವಾದ್ಯಗಳಿಗೆ ಬಳಸುತ್ತಾರೆ; ಕೊಬ್ಬಿನಲ್ಲಿ ಔಷಧಿ ಗುಣವಿದೆ. **ಪ್ರ:** ಉಡ ಪಟ್ಟಿಡದಂಗೆ ಹಟ ಹಿಡಿದು ಕುಂತವ್ನೆ. ***ಇರೂ:*** ಜಿವಾಜಿ

ಉಡಕಟ್ಟು: ಇರುಳಿಗರು ಉಡವೊಂದರ ಕಾಲು ಕೊಯ್ದು ಆ ಕಾಲುಗಳನ್ನು ಮಡಿಸಿ ಬಾಲ ಕೊಯ್ದು ಕಾಲಿನ ನರಕ್ಕೆ ಸೇರಿಸಿ ಹಾಕುವ ಕಟ್ಟು

ಉಡಕಲು: ಪೊದೆ

ಉಡಕಿ: ೧. ಮರುಮದುವೆ; ಕೂಡಿಕೆ (ಬೀದ.ಜಿ) ೨. ಗೂಳಿಯ ಕೂಗು ೩. ಮಂಗಳವಸ್ತ್ರ ಕೊಡುವುದು. **ಇರೂ:** *ಉಡಿಕೆ, ಉಡುಕೆ, ಉಡುಕಿ*

ಉಡಕಿಗಂಡ: ಪ್ರಥಮ ಗಂಡಿನೊಂದಿಗೆ ವಿಚ್ಛೇದನವಾದ ನಂತರ ಅಥವಾ ಆತ ತೀರಿಕೊಂಡ ನಂತರ ಮರು ಮದುವೆಯಾದವಳ ಪತಿ. **ಪ್ರ:** ಮದವೆ ಗಂಡನ ಕಿಟಿಕಿಟಿ ಬಾಳ ಉಡಕಿ ಗಂಡನ ಉಪದ್ರ ಬಾಳ; ಉಡಕಿ ಗಂಡ ಅಲ್ಲ ಗುಳ್ಳವ್ವ ದೇವ್ರು ಅಲ್ಲ

ಉಡಕ್ಕಿ: ಉಡಿಯಕ್ಕಿ; ಮುತ್ತೈದೆಯ ಮಡಿಲಿಗೆ ತುಂಬುವ ಅಕ್ಕಿ; ಸೋಗಲುಅಕ್ಕಿ; ಮಡಿಲಕ್ಕಿ (ಮಂಡ್ಯ.ಜಿ) **ನೋಡಿ–** ಉಡಿಯಕ್ಕಿ

ಉಡಕ್ಕಿ ಹಾಕುವುದು: ನೋಡಿ– ಉಡಿಯಕ್ಕಿ. **ಪ್ರ:** ಒಂದು ಒಳ್ಳೆ ದಿನ ನೋಡಿ ಉಡಕ್ಕಿ ಹಾಕಿ ಗಂಡನ ಮನಿಗೆ ಕಳಿಸಿದ್ರು (ದಾವ.ಜಿ)

ಉಡಕ್ಯಾಕಿ: ಉಡಕಿ ಮಾಡಿಕೊಂಡ ಹೆಣ್ಣು; ಎರಡನೇ ಗಂಡನನ್ನು ಕೂಡಿಕೆ ಮಾಡಿಕೊಂಡ ಹೆಣ್ಣು (ಗುಲ್ಬ.ಜಿ)

ಉಡಗುಣಿ: ಸಣ್ಣ ಧೋತರ; ತೊಟ್ಟ ಬಟ್ಟೆ

ಉಡಚ: ೧. ಉಷ್ಣದಿಂದಾಗಿ ತೊಡೆಯ ಸಂದಿಯಲ್ಲಿ ಗುಳ್ಳೆಗಳಾಗುವುದು (ಮಂಡ್ಯ.ಜಿ) ೨. ಬೇಸಗೆಯಲ್ಲಿ ಬರುವ ಒಂದು ಬಗೆಯ ರೋಗ (ಬೆಂಗ.ಜಿ)

ಉಡಚವ್ವ: ಪ್ರತಿ ಗ್ರಾಮದ ಹೊರಗಿರುವ ಉಗ್ರದೇವತೆ. ಗ್ರಾಮದ ಎಲ್ಲ ರೋಗಗಳನ್ನು ನಿವಾರಿಸಬಲ್ಲ ಶಕ್ತಿ ಈಕೆಗಿದೆ ಎಂದು ನಂಬಿಕೆ (ಉಕ.ಜಿ)

ಉಡಚಾಪೆ: ಅಡಕೆ ಕೊಯ್ಯಲು ಮರ ಏರುವಾಗ, ಸೊಂಟ ಹಾಗೂ ಮರ್ಮಾಂಗದ ಚರ್ಮ ಉಜ್ಜದಂತೆ, ರಕ್ಷಣೆಗೆಂದು ಬಳಸುವ ಕವಚ. ಇದು ಕಂಬಳಿಯ ತುಂಡಿನಿಂದ ಮಾಡಿದ್ದು, ಒಂದನ್ನು ಸೊಂಟದ ಸುತ್ತಲೂ ಇನ್ನೊಂದನ್ನು ಉಡುಗಚ್ಚೆಯಂತೆ ಬಳಸಲಾಗುತ್ತದೆ (ಉಕ.ಜಿ)

ಉಡಚೀಲ: ಬಿತ್ತುವಾಗ ರೈತರು ಸೊಂಟಕ್ಕೆ ಕಟ್ಟಿಕೊಳ್ಳುವ ಬಿತ್ತನೆ ಬೀಜದ ಚೀಲ (ಬಿಜಾ.ಜಿ)

ಉಡಜರಗ: ನೋಡಿ – ಉಡ್ಸೆರಗು

ಉಡದ ಬೇಟೆ: ಬುಡ್ಗ ಜಂಗಮರು ಮಾಡುವ ಬೇಟೆ. ನಾಯಿಯ ಸಹಾಯದಿಂದ ಉಡ ಇರುವುದನ್ನು ಖಚಿತಪಡಿಸಿಕೊಂಡು ಬಲೆ ಕಟ್ಟಿ ಉಡವನ್ನು ಬೆದರಿಸಿ ಪೊದೆಯಿಂದ ಹೊರಬಂದಾಗ ಬಲೆಗೆ ಬೀಳಿಸುತ್ತಾರೆ. ಇಲ್ಲವೇ ಉಡದ ಬಾಲ ಹಿಡಿದು ಡುಬ್ಬವನ್ನು ಸವರಿ ತಲೆಯನ್ನು ಗಟ್ಟಿಯಾಗಿ ಹಿಡಿಯುತ್ತಾರೆ

ಉಡದಾರ/ಉಡಿದಾರ: ೧. ಗಂಡಸರು ಸೊಂಟಕ್ಕೆ ಕಟ್ಟುವ ಹತ್ತಿ, ರೇಶ್ಮೆ, ಬೆಳ್ಳಿ ಅಥವಾ ಚಿನ್ನದ ದಾರ ೨. ನೇಯ್ಗೆಯಲ್ಲಿ ಬಳಸುವ ಒಂದು ವಸ್ತು

ಉಡದಾರ ಕಟ್ಟುವುದು: ಕಣದಲ್ಲಿ ರಾಶಿ ಮಾಡುವಾಗ ಕಾಳುಗಳು ಮಣ್ಣಲ್ಲಿ ಸಿಡಿಯದಿರಲೆಂದು ಕಣದ ಸುತ್ತಲೂ ಜೋಳದ ಸೂಡುಗಳನ್ನು ಜೋಡಿಸುವುದು

ಉಡದಾರ ಕಳಕಿ: ನೋಡಿ– ಉಡದಾರ ಕಟ್ಟುವುದು (ಬೀದ.ಜಿ)

ಉಡದಾರದಾಗ ಉಪ್ಪ ಕಟ್ಟಲಿ: ಒಂದು ಬೈಗುಳ. ಸತ್ತು ಹೋಗಲಿ, ಹಾಳಾಗಿ ಹೋಗಲಿ ಎಂಬುದು ಇದರ ಅರ್ಥ

ಉಡದಾರ ಹರೀಲಿ: ೧. ಹೆಣಬೀಳಲಿ ಎಂಬರ್ಥದ ಒಂದು ಬೈಗುಳ. ಸತ್ತಾಗ ಉಡುದಾರ ಹರಿದು ಕುಣಿಯಲ್ಲಿ ಹಾಕುವ ಸಂಪ್ರದಾಯವಿದೆ ೨. ಷಂಡನಾಗಲಿ ಎಂಬ ಅರ್ಥದ ಬೈಗುಳ (ಧಾರ.ಜಿ)

ಉಡದೋತ್ರ: ಕೂಸು ಬೆಳೆದು ದೊಡ್ಡದಾಗುತ್ತಿರುವಾಗ ತವರಿನವರು ಮೊಮ್ಮಕ್ಕಳ ಪ್ರೀತಿಗಾಗಿ ಕೊಡುವ ವಸ್ತ್ರ. ಗಂಡುಮಗುವಾಗಿದ್ದರೆ ದೋತ್ರವನ್ನು, ಹೆಣ್ಣು ಮಗುವಾದರೆ ದಟ್ಟಿಯನ್ನು (ಸಣ್ಣಸೀರೆ) ಉಡಿಸುತ್ತಾರೆ (ಧಾರ.ಜಿ)

ಉಡನ್: ೧. ಕುಣಿತದ ಒಂದು ಭಂಗಿ (ಮಂಡ್ಯ.ಜಿ) ೨. ಲಾವಣಿಯ ಒಂದು ಸ್ತರ (ಬೆಳ.ಜಿ)

ಉಡರು: ಊಳಿಡು; ಗುಟುರು ಹಾಕು (ಬೆಂಗ್ರಾ.ಜಿ)

ಉಡಲೆ: ಒಡತಿ (ಉಕ). **ಇರೂ:** *ಉಡ್ರೆ*

ಉಡವೆ ಹಣ್ಣು: ತಿನ್ನಬಹುದಾದ ಒಂದು ಬಗೆಯ ಹಣ್ಣು

ಉಡಸಲಿ: ಕವಣೆ (ಕೋಲಾ.ಜಿ)

ಉಡಸಾರಣೆ: ಬಟ್ಟೆ ಅಥವಾ ಸಗಣಿಯಿಂದ ಒಲೆ ಸಾರಿಸುವುದು. ಅಡಿಗೆಯಾದ ನಂತರ ಬ್ರಾಹ್ಮಣರ ಮನೆಯಲ್ಲಿ ಒಲೆಯನ್ನು ಸೆಗಣಿ ನೀರಿನಲ್ಲಿ ಅದ್ದಿದ ಬಟ್ಟೆಯಿಂದ ಸಾರಿಸಿ ಮಡಿ ಮಾಡುವ ಸಂಪ್ರದಾಯ (ಧಾರ.ಜಿ)

ಉಡಾಕು: ಮರಿಯನ್ನು ಹಾಲು ಕುಡಿಯಲು ಬಿಡುವುದು (ತುಮ.ಜಿ)

ಉಡಾಡಿ: ಮುಂದೊದಗಿ ಬರುವವ; ತಾನೇ ಮುಂದಾಗಿ ಬರುವವ (ಉಕ)

ಉಡಾತ್ರ: ನೇಯ್ಗೆಯ ಸಂದರ್ಭದಲ್ಲಿ ಮಗ್ಗದ 'ಹಾಸು'ವಿಗೆ ಅಗತ್ಯವಾದ ಎಳೆಗಳಿಗೆ ಮೀನಸರಿ ಅಂಟು ಹಾಕಿ ಒಣಗಿಸಲು ಮತ್ತು ಹಸಮಾಡಿಕೊಳ್ಳಲು ಬಳಸುವ ಸಾಧನ (ಬೆಂಗ್ರಾ.ಜಿ). **ಇರೂ:** *ಊಡೆತ್ತು; ಉಟಾತ್ರ; ಉಡತ್ಲ; ಉಡಾತ*

ಉಡಾತ್ರಕಾಲು: ನೇಕಾರಿಕೆಯಲ್ಲಿ ನೇಯ್ಗೆಯ ಉಡಾತ್ರದ ಮರದ ನಿಲುವು; ಅಡ್ಡಣಿಗೆ

ಉಡಾತ್ರಕಿವಿ: ನೇಕಾರಿಕೆಯಲ್ಲಿ ಉಡಾತ್ರದ ಅಡ್ಡಪಟ್ಟಿಗಳನ್ನು ಮೇಲಿನ ಪಟ್ಟಿಗೆ ಸೇರಿಸುವ ಜಾಗ

ಉಡಾತ್ರಗುದ್ದಿ: ನೇಕಾರಿಕೆಯಲ್ಲಿ ಉಡಾತ್ರವನ್ನು ಎಳೆದುಕಟ್ಟಲು ಸಹಾಯಕವಾದ ಎರಡು ರಂಧ್ರವಿರುವ ಮರದ ಪಟ್ಟಿ

ಉಡಾತ್ರಗೂಟ: ನೇಕಾರಿಕೆಯಲ್ಲಿ ಉಡಾತ್ರವನ್ನು ಎಳೆದು ಕಟ್ಟಲು ನೆಲದಲ್ಲಿ ನೆಟ್ಟಿರುವ ಗೂಟ

ಉಡಾತ್ರಚಡಿ: ನೇಕಾರಿಕೆಯಲ್ಲಿ ಅಂಟಿನ ಕೋಲು; ಉಡಾತ್ರಕೋಲು

ಉಡಾತ್ರಮಳೆ: ನೇಕಾರಿಕೆಯಲ್ಲಿ ಉಡಾತ್ರ ಕಾಲಿನ ಅಡ್ಡಪಟ್ಟಿಗಳನ್ನು ಕೂಡಿಸುವ ಜಾಗದಲ್ಲಿ ಇರುವ ಮೊಳೆ

ಉಡಾಪಿ: ೧. ತಾಳದ ಗತಿ ಪರಿವರ್ತನೆ; ಪರಿವರ್ತನಾ ವೈಶಿಷ್ಟ್ಯ; ಗತಿಭೇದ ಮಾಡುವಿಕೆ ೨. ಉಡಾಫೆಯ ಮನುಷ್ಯ ೩. ಸುಳ್ಳು (ದಕ.ಜಿ). **ಇರೂ:** *ಉಡಾಪೆ; ಗುಡಾಪಿ*

ಉಡಾಫ್‌ಮಾಡು: ೧. ಬರಬೇಕಾದ ಬಾಕಿಯನ್ನು ವಸೂಲು ಮಾಡದೆ ಬಿಟ್ಟುಬಿಡು. ೨. ಕೊಡುಕೊಳ್ಳುವಿಕೆಯನ್ನು ಚುಕ್ತಮಾಡು

ಉಡಾವಣೆ: ಒಂದು ಜೂಜಿನ ಆಟ. ತೇಯ್ದ ಹುಣಿಸೆ ಬೀಜಗಳನ್ನು ಬಳಸಿ ಆಡುತ್ತಾರೆ

ಉಡಾಸು: ಉಡಾಯಿಸು ೧. ಬೇಕಾಬಿಟ್ಟಿಯಾಗಿ ಹಣ ಖರ್ಚು ಮಾಡು ೨. ಬಾಯಿಬಿಡು ೩. ನಿರಾಕರಿಸು ೪. ಹಾರಿಸು.

ಉಡಾಳ: ಉಂಡಾಡಿ; ಪೋಲಿ; ಹುಡುಗುಬುದ್ಧಿಯವನು; ಕಿಡಿಗೇಡಿ; ತಂಟೆಕೋರ. **ಪ್ರ:** ಉಡಾಳ್ಮಂದಿ ಊರಾಗ ಹುಟ್ಟಿ ಊರೇ ಕೆಡುಸ್ಯಾರೋ (ಮಂಡ್ಯ.ಜಿ)

ಉಡಾಳಗೋಪ್: ಕೋಲಾಟದಲ್ಲಿ ಒಂದು ಗತ್ತು. **ಪ್ರ:** ಉಡಾಳಗೋಪ್, ಚದರಗೋಪ್ ಅಂತೆಲ್ಲಾ ಹತ್ತಾರು ತರ ಕೋಲು ಹಾಕ್ತಾನೆ ಅವನು

ಉಡಿ: ೧. ಮಡಿಲು **ಪ್ರ:** ಉಡಿ ತುಂಬಿ ಕಳಿಸು ೨. ಪುಡಿ; ಹುಡಿ; **ಪ್ರ:** ಖಾರದುಡಿ; ಸಾಂಬಾರುಡಿ ೩. ಸೊಪ್ಪನ್ನು ಉಗುರಿನಿಂದ ಕತ್ತರಿಸುವಿಕೆ ೪. ಉಡ್ಡಿ; ಹಾರಾಟ; ಲಾಗ; ನರ್ತನದ ಭಾಗ ೫. ಮೊಳಕೆ ೬. ನಡು; ಸೊಂಟ ೭. ಬಿತ್ತುವಾಗ ಕಾಳನ್ನು ಹಾಕಿಕೊಳ್ಳುವ ಚೀಲ ೮. ಧೂಳು ೯. ಒಂದು ಬೈಗುಳ; ಕೆಟ್ಟವ ೧೦. ಹತ್ತಿ ತೊಳೆಯನ್ನು ಬಿಡಿಸುವಿಕೆ; ಹತ್ತಿ ಬಿಡಿಸಿದ್ದರ ಅಳತೆ. **ಪ್ರ:** ಒಂದು ಉಡಿ ಎಡಕಿಸು (ಶಿವ.ಜಿ). **ಪ್ರ:** ಹತ್ತಿ ಭಾಳ ಇಲ್ಲಾ ಒಂದು ಉಡಿ ಅಕ್ಕೈತಿ ಲಗೂನ ಬಿಡಿಸಿಕೊಂಡು ಬರತೇನು ೧೧. ಭೂಮಿಯ ಅಳತೆ

ಉಡಿಅಕ್ಕಿ ಊಟ: ಬುಡ್ಗ ಜಂಗಮರಲ್ಲಿ ತವರುಮನೆಯಿಂದ ಉಡಿ ತುಂಬಿಸಿಕೊಂಡು ಬಂದ ಅಕ್ಕಿಯಲ್ಲಿ ಅಡುಗೆ ಮಾಡಿ ಕಲಿಕುಂಟದ ಮುಂದೆ ಮೂರು ಎಲೆಗಳಲ್ಲಿ ಬಡಿಸಿ, ವಧುವರರಿಗೆ, ಮುತ್ತೈದೆಯರಿಗೆ, ಮಕ್ಕಳಿಗೆ ಒಂದೊಂದು ನೀಡುವುದು

ಉಡಿ ಇಳುಹುದು: ಹೆಣ್ಣಿಗೆ ಉಡಿ ತುಂಬಿದ ನಂತರ ಆ ಉಡಿಯನ್ನು ಹಾಗೇ ಹಿಡಿದುಕೊಂಡು ದೇವರ ಮನೆಗೆ ಹೋಗಿ ಉಡಿಯಲ್ಲಿದ್ದ ಬಾಳೆಹಣ್ಣು ಎಲೆ ಅಡಿಕೆ ಉತ್ತತ್ತಿ ಕೊಬ್ಬರಿ ಅಕ್ಕಿ ಇತ್ಯಾದಿ ಸಾಮಗ್ರಿಗಳನ್ನು ತೆಗೆದಿಡುವುದು

ಉಡಿಕಟ್ಟು: ಮಡಿಲು ತುಂಬು; ಸೋಗಲಿಕ್ಕು (ಉಕ)

ಉಡಿಕೀಳು: ಉಂಡಿ ಕೀಳು; ರಾಗಿ ಬೆಳೆ ಬಿತ್ತಿದಾಗ ಹೆಚ್ಚಾದ ಮೊಳಕೆಯನ್ನು ಕಿತ್ತು ತೆಗೆಯುವುದು

ಉಡಿಕುಂಟೆ ಹೊಡೆಯುವುದು: ಮಧ್ಯಂತರ ಬೇಸಾಯ; ಬೆಳೆಯ ಸಾಲಿನ ನಡುವೆ ಗಳೆ ಹೊಡೆಯುವುದು. ಇದರಿಂದ ಕಳೆ ಕಸಗಳ ನಿಯಂತ್ರಣ ಆಗುವುದು

ಉಡಿಕೆಮದುವೆ: ವಿಧವೆಯಾದ ಇಲ್ಲವೇ ವಿಚ್ಛೇದಿತೆಯಾದ ಹೆಣ್ಣಿನ ಮರು ಮದುವೆ

ಉಡಿಗುಪ್ಪು ಸೀರೆ: ತರಾತುರಿಯಲ್ಲಿ ನೆರಿಗೆ ಹಿಡಿದು ಉಟ್ಟುಕೊಳ್ಳುವ ಸೀರೆ

ಉಡಿಗೆಉಡಿಸುವಿಕೆ: ಸವದತ್ತಿಯ ಎಲ್ಲಮ್ಮನಿಗೆ ಪ್ರತಿ ದಿವಸ ಮಜ್ಜನ ಮಾಡಿಸಿದ ನಂತರ ಅರ್ಚಕರು ಭಕ್ತಿಯಿಂದ ಎರಡೂ ಹೊತ್ತು ಮಡಿಯಾಗಿದ್ದ ಪತ್ತಲಗಳನ್ನು ಉಡಿಸುವ ಕ್ರಿಯೆ (ಬೆಳ.ಜಿ)

ಉಡಿಗೆಜ್ಜೆ: ಉಡುಗೆಜ್ಜೆ. ಯಕ್ಷಗಾನ, ಬಯಲಾಟಗಳಲ್ಲಿ ಸ್ತ್ರೀವೇಷದ ಸೊಂಟದ ಆಭರಣ (ದಕ.ಜಿ)

ಉಡಿಗೆ ಹಾಕು (ಕ್ರಿ): ಮಡಿಲಿಗೆ ಹಾಕು; ಆಶ್ರಯಕ್ಕೆ ನೀಡು; ವ್ಯಕ್ತಿಯ ರಕ್ಷಣೆಯನ್ನು ಅನ್ಯರಿಗೆ ಒಪ್ಪಿಸು (ಮಂಡ್ಯ.ಜಿ). **ಪ್ರ:** ಈ ಕೂಸ್ನ ನಿನ್ನ ಉಡಿಗೆ ಹಾಕಿದೀನಿ, ಏನಾದ್ರೂ ಮಾಡಿಕೊ

ಉಡಿಚೀಲ: ಬಿತ್ತುವಾಗ ಬೀಜ ಹಾಕಿಕೊಳ್ಳಲು ಮಾಡಿದ ಸಣ್ಣ ಚೀಲ (ರಾಮ.ಜಿ)

ಉಡಿತಿ/ಉಡುತೆ: ಅಳಿಲು. **ಇರೂ:** *ಇಣಚಿ; ಅಳ್ಳೀಕುಂಚ*

ಉಡಿತಿಬಾಡು: ಅಳಿಲಿನ ಮಾಂಸ (ಕೋಲಾ.ಜಿ)

ಉಡಿತುಂಬಿಸುವ ಹರಕೆ: ಮಕ್ಕಳಾಗದೆ ಹೋದರೆ ಮಕ್ಕಳ ಫಲಕ್ಕಾಗಿ ದೇವತೆಗಳಿಗೆ ಉಡಿ ತುಂಬಿಸುತ್ತೇನೆಂದು ಹೊರುವ ಹರಕೆ (ಧಾರ.ಜಿ)

ಉಡಿತುಂಬುವುದು: ೧. ಮುತ್ತೈದೆಯರಿಗೆ ಅಕ್ಕಿ, ಹಣ್ಣು, ಮಂಗಳದ್ರವ್ಯಗಳನ್ನು ಮಡಿಲು ತುಂಬುವುದು ೨. ಸೀಮಂತ ಕಾರ್ಯ; ಕುಬಸಾ ಮಾಡುವುದು; ಗರ್ಭಿಣಿಯರಿಗೆ ಹಸಿರು ಬಣ್ಣದ ಸೀರೆ ರವಿಕೆ ಮತ್ತು ಹಸಿರುಬಣ್ಣದ ಬಳೆ ತೊಡಿಸಿ ಉಡಿಯಲ್ಲಿ ವೀಳ್ಯದೆಲೆ; ಅಡಿಕೆ; ಅರಿಶಿಣದ ಕೊಂಬು; ಲಿಂಬೆಹಣ್ಣು; ಉತ್ತತ್ತಿ ಮೊದಲಾದವುಗಳನ್ನು ತುಂಬಿ ಆರತಿ ಮಾಡುವ ಸಂಪ್ರದಾಯ (ಶಿವ.ಜಿ) ೩. ದೇವರ ಉತ್ಸವದಲ್ಲಿ ಗ್ರಾಮಸ್ಥರೆಲ್ಲ ಸೇರಿ ಊರಿನ ದೇವಿಗೆ ಹೊಸ ಸೀರೆ ಉಡಿಸಿ ಹಣ್ಣು ಕಾಯಿಗಳನ್ನು ಉಡಿ ತುಂಬುವುದು (ಧಾರ.ಜಿ)

ಉಡಿದಮನೆ: ಹುಟ್ಟಿದ ಮನೆ; ತವರು (ಕೋಲಾ.ಜಿ)

ಉಡಿದಮನೆ ಶ್ಯಾಲೆ: ಹುಟ್ಟಿದ ಮನೆಯ ಸೀರೆ; ತವರಿನ ಸೀರೆ (ಕೋಲಾ.ಜಿ)

ಉಡಿದೆನಿ: ಕಾಳಿಗೆ ಬದಲಾಗಿ ಉಡಿಗೆ ಹಾಕುವ ತೆನೆ; ತೆನೆಮುರಿಯುವವರಿಗೆ ಕೊನೆಯದಿನ ಕೂಲಿ ಹಣ ಸಹಿತ ಉಡಿಯಲ್ಲಿ ಹಾಕುವ ತೆನೆ (ಬಿಜಾ.ಜಿ)

ಉಡಿನ ತುಪ್ಪ: ಉಡದ ಕೊಬ್ಬು; ಉಡದ ಎಣ್ಣೆಯು ನೋವುನಿವಾರಕ ಹಾಗೂ ಶಕ್ತಿವರ್ಧಕವೆಂಬ ನಂಬಿಕೆಯಿದೆ (ಮಲೆ)

ಉಡಿನೇಯ: ಒಂದು ಜಾತಿಯ ಮರ

ಉಡಿಪಾಯ: ಉಡುವ ಬಟ್ಟೆ

ಉಡಿಪ್ಪೆ ಮರ: *ಗ್ರೂಯ ಏಷಿಯಾಟಿಕ ಡೆಮ್ಯೆನ್:* ಒಂದು ಜಾತಿಯ ಮರ

ಉಡಿಬೀಜ: ಬಿತ್ತಿ ಉಳಿದ ಬೀಜ

ಉಡಿಬೀಳು: ಮುಂದೆ ಬೀಳು; ಮುಂದಾಗು

ಉಡಿಯ: ೧. ಉಡಿ; ಮಡಿಲು ೨. ಮಧ್ಯ; ಮಧ್ಯಭಾಗ (ಮಲೆ). **ಪ್ರ:** ದಟ್ಟ ಮುಳ್ಳಿರುವ ಉಡಿಯ ನಡುವೆ ಬೆಳೆದ ಮರಗಳ ರೆಂಬೆಯನ್ನೇ ಗೂಡು ಕಟ್ಟಲು ಹುಡುಕುತ್ತವೆ

ಉಡಿಯಕ್ಕಿ: ೧. ಮುತ್ತೈದೆಯ ಮಡಿಲಿಗೆ ತುಂಬುವ ಅಕ್ಕಿ, ಕೊಬ್ಬರಿಬಟ್ಟಲು, ಅರಿಶಿಣದ ಕೊಂಬು, ಬೆಲ್ಲದ ಅಚ್ಚು, ಉತ್ತತ್ತಿ ಮೊದಲಾದ ಪದಾರ್ಥಗಳು (ಶಿವ.ಜಿ) ೨. ಮದುವೆಯಾದ ಹದಿನಾರನೆಯ ದಿನ ಹೆಣ್ಣನ್ನು ತವರು ಮನೆಯಿಂದ ಬೀಳ್ಕೊಡುವಾಗ ಮಾಡುವ ಶಾಸ್ತ್ರ; ಹಸೆಯ ಮೇಲೆ ಕೂಡಿಸಿ ೨. ಐದು ಹಿಡಿ ಅಕ್ಕಿಯನ್ನು ಅವಳ ಸೆರಗಿನಲ್ಲಿ ಹಾಕುವುದು. ಆಕೆ ತವರು ಬರಿದಾಗದಿರಲೆಂಬ ಆಶಯದೊಂದಿಗೆ ಸ್ವಲ್ಪ ಅಕ್ಕಿಯನ್ನು ಪಾತ್ರೆಗೆ ವಾಪಸ್ಸು ಸುರಿದು ಉಳಿದ ಅಕ್ಕಿಯೊಂದಿಗೆ ಗಂಡನ ಮನೆಗೆ ಹೊರಡುವ ಸಂಪ್ರದಾಯ ೩. ಮದುವೆಯಾದ ಬಳಿಕ ಮೊದಲ ಬಾರಿಗೆ ಗಂಡನ ಮನೆಗೆ ಹೋಗುವಾಗ ಓಣಿಯ ಐದು ಮನೆಗಳಿಗೆ ಹೋಗಿ ಉಡಿಯಲ್ಲಿ ಅಕ್ಕಿ ಹಾಕಿಸಿಕೊಂಡು ಆಶೀರ್ವಾದ ಪಡೆದು ಬರುವುದು (ಧಾರ.ಜಿ)

ಉಡಿಯಕ್ಕಿ ಸಡಿಲಿಸುವುದು: ಹೆಣ್ಣನ್ನು ಮೊದಲ ಬಾರಿಗೆ ಕಳಿಸಿ ಕೊಡುವಾಗ ತನ್ನ ಓಣಿಯ ಐದು ಮನೆಯ ಹೆಣ್ಣು ಮಕ್ಕಳು ಶುಭ ಕೋರಿ ಹಾಕಿದ ಉಡಿಅಕ್ಕಿಯನ್ನು ಆ ಓಣಿಯ ದಾರಿಯಲ್ಲಿ ಒಂದು ಬಟ್ಟೆ ಹಾಸಿ ಅದರಲ್ಲಿ ಹಾಕಿ ಗಂಟು ಕಟ್ಟಿ ಸೋದರರಿಗೆ ಒಪ್ಪಿಸುವುದು (ಧಾರ.ಜಿ)

ಉಡಿಯಾ ಉರುಳು (ಕ್ರಿ): ಉರುಳುಸೇವೆ (ಮಂಡ್ಯ.ಜಿ)

ಉಡಿಯುಂಗುರ: ಧಾರೆಯ ನಂತರ, ನೀರಿನ ಪಾತ್ರೆಯಲ್ಲಿ ಹಾಕಿದ ವಿವಿಧ ವಸ್ತುಗಳನ್ನು ತೆಗೆಯುವ ಸ್ಪರ್ಧೆಯಲ್ಲಿ ವಧೂವರರು ಬಳಸುವ ಉಂಗುರ (ಬೆಂಗ್ರಾ.ಜಿ/ಶಿವ.ಜಿ)

ಉಡಿಯುವುದು: ನಾರಿನಿಂದ ಹಗ್ಗವನ್ನು ಹೊಸೆಯುವುದು (ಉಕ.ಜಿ)

ಉಡಿಸೀರೆ: ೧. ಬಟ್ಟೆ ಬರೆ ೨. ಸೀರೆ ೩. ದೈವ, ದೇವರ ವಿಗ್ರಹಗಳಿಗೆ ಅರ್ಪಿಸುವ ಸೀರೆಯ ರೂಪದ ಬಟ್ಟೆ (ದಕ.ಜಿ)

ಉಡಿಸು: ವಿಶೇಷ ಸಂದರ್ಭದಲ್ಲಿ ಸೀರೆ ಕುಪ್ಪಸಗಳನ್ನು ಉಡುಗೊರೆಯಾಗಿ ಕೊಡುವುದು. **ಪ್ರ:** ಇದು ತವರು ಮನೆಯವರು ಉಡಿಸಿದ ಸೀರೆ

ಉಡುಕಲು: ಪೊದೆ

ಉಡುಕು: (ಕ್ರಿ) ೧. ಹುಡುಕು; ಹಾರಾಡು; ವದ್ದಾಡು ೨. ಕುದಿ; ಮರಳು. **ಪ್ರ:** ಉಡುಕುನೀರು (ಕೋಲಾ.ಜಿ) ೩. (ನಾ). ಹುಡುಕ್ಕು; ಒಂದು ಚರ್ಮವಾದ್ಯ (ದಕ.ಜಿ) **ನೋಡಿ–** ಉಡುಕೈ ೪. ತಿನ್ನಲು ಯೋಗ್ಯವಾದ ಹಣ್ಣನ್ನು ಬಿಡುವ ಒಂದು ಗಿಡ ಮತ್ತು ಅದರ ಹಣ್ಣು (ಚಾಮ.ಜಿ)

ಉಡುಕುಸುತ್ತು: ಉಡುಕು ಎಂಬ ಚರ್ಮವಾದ್ಯದ ವಾದನದೊಂದಿಗೆ ಉತ್ಸವಮೂರ್ತಿಯನ್ನು ಹೊತ್ತುಕೊಂಡು ದೇವಾಲಯಕ್ಕೆ ಬರುವ ಪ್ರದಕ್ಷಿಣೆ (ದಕ.ಜಿ)

ಉಡುಕೆಗೂಡೆ: ಒಕ್ಕಲಿಗರ ಮತ್ತು ಗೌಡರ ಮದುವೆಗಳಲ್ಲಿ ವಧುವರರಿಗೆ ಉಡುಗೊರೆಯಾಗಿ ಕೊಡುವ ವಸ್ತುಗಳನ್ನು ತುಂಬುವ ಹೆಡಿಗೆ

ಉಡುಕೈ: ಢಕ್ಕೆಯನ್ನು ಹೋಲುವ ಚರ್ಮವಾದ್ಯ. ಮಲೆಯ ಮಾದೇಶ್ವರನ ತಮಿಳು ಭಕ್ತರು ಮಾದೇಶ್ವರನ ಸುದೀರ್ಘಕಾವ್ಯಗಳನ್ನು ಹಾಡುವಾಗ ಇದನ್ನು ನುಡಿಸುತ್ತಾರೆ. ದೆವ್ವ ಬಿಡಿಸುವಾಗಲೂ ಉಪಯೋಗಿಸುತ್ತಾರೆ. ಇದಕ್ಕೆ ಹಿತ್ತಾಳೆ ಹೊಳವನ್ನು ಬಳಸುತ್ತಾರೆ. ಆಕಾರ, ಗಾತ್ರ, ಢಕ್ಕೆಯಷ್ಟೇ ಇರುತ್ತದೆ. **ಇರೂ:** ಉಡುಕು, ಹುಡುಕ್ಕು

ಉಡುಕೊಕ್ಕೆ: ಮರದಿಂದ ಹೆಂಡ ಇಳಿಸಲು ಬಳಸುವ ಉಪಕರಣ

ಉಡುಕ್ಕಿ: ಅವಸರದವಳು; ಎಲ್ಲೂ ನಿಲ್ಲದವಳು (ಬೆಂಗ್ರಾ.ಜಿ)

ಉಡುಗತ್ತಿ: ಕೊಡವರು ಸಾಂಪ್ರದಾಯಿಕವಾಗಿ ಬಳಸುವ ವಿಶೇಷ ಕತ್ತಿ. **ಇರೂ:** ವಡಿಕತ್ತಿ

ಉಡುಗಬ್ಬಿಣ: ಪುಡಿ ಕಬ್ಬಿಣ

ಉಡುಗಲಜ್ಜಿ: ವಡುಗಲಜ್ಜಿ; ಪಿಡುಗಿನ ದೇವತೆಯೂ ಆದ್ದರಿಂದ ಪಿಡುಗಲಜ್ಜಿ ಕೂಡ. ಒಂದು ಗ್ರಾಮದೇವತೆ. ಈ ಉಡುಗಲಜ್ಜಿಯನ್ನು ಊರಿಂದೂರಿಗೆ ಸಾಗಿಸಿ ಕಡೆಗೆ ನದಿಯಲ್ಲಿ ಬಿಡುತ್ತಾರೆ

ಉಡುಗಿಹೋಗ್ಲಿ: ಇಲ್ಲದಂತಾಗಲಿ; ನಾಶವಾಗಲಿ (ಬೀದ.ಜಿ). **ಪ್ರ:** ಅವ್ನ ಉಸುರುಡುಗಿ ಹೋಗ್ಲಿ

ಉಡುಗು(ಕ್ರಿ): ೧. ಕಸಗುಡಿಸು; ಧೂಳುಹೊಡಿ (ಬೀದ.ಜಿ) ೨. ಮುರುಟು (ಮಂಡ್ಯ.ಜಿ) (ನಾ) ೩. ಕಡಿಮೆಯಾಗು; ಅಡಗಿ ಹೋಗು (ಧಾರ.ಜಿ) **ಪ್ರ:** ಅವನ ಸೊಕ್ಕೆಲ್ಲಾ ಉಡುಗಿ ಹೋಯ್ತು ೪. ಪೊರಕೆ (ಬಿಜಾ.ಜಿ)

ಉಡುಗುಣಿ: ಹೆಣ್ಣುಮಕ್ಕಳ ಆಭರಣ (ಕೊಪ್ಪ.ಜಿ)

ಉಡುಗೂರಿ: ನೆಲಕಚ್ಚು (ಬೆಂಗ್ರಾ.ಜಿ)

ಉಡುಗೋಲು: ಕಸಬರಿಕೆ

ಉಡುಚವ್ವ: ಲೈಂಗಿಕ ರೋಗಗಳನ್ನು ನಿವಾರಣೆ ಮಾಡುವ ದೇವತೆ (ಉಕ.ಜಿ)

ಉಡುಚೀಲ: ನಡುವಿಗೆ ಕಟ್ಟಿಕೊಳ್ಳುವ ಬೀಜದ ಚೀಲ (ಬಿಜಾ.ಜಿ)

ಉಡುಚು: ಬಿಡಿಸು

ಉಡುತೆ: **ನೋಡಿ–** ಉಡಿತಿ

ಉಡುದಾರಕೊಯ್ಯುವುದು: ಒಂದು ಆಚರಣೆ; ಹೆಣವನ್ನು ಹೂಳುವ ಮುಂಚೆ ಉಡುದಾರ ಕತ್ತರಿಸುವಿಕೆ (ಮಂಡ್ಯ.ಜಿ)

ಉಡುಪಳೆ: ಬೆಂಕಿ ಹಾಕುವ ಒಲೆಯಂತಹ ಜಾಗ. ಇರುಳಿಗರು ಉಡ ಅಥವಾ ಜಿವಾಜಿ ಬೇಟೆಯ ಸಂದರ್ಭದಲ್ಲಿ ಎಲ್ಲ ಕಡೆ ಮಣ್ಣು ಕಲ್ಲು ಸೊಪ್ಪುಗಳಿಂದ ಮುಚ್ಚಿದ ಮೇಲೆ ಒಂದು ಕಡೆ ಮಾತ್ರ ಒಲೆಯೋಪಾದಿಯಲ್ಲಿ ಬೆಂಕಿಗೆ ಹಸಿರು ಸೊಪ್ಪು ಹಾಕಿ ಜೋರಾಗಿ ಗಾಳಿ ಬೀಸಿ ಹೊಗೆಯನ್ನು ಹೆಬ್ಬಂಡೆಗಳ ನಡುವಿನ ಉಡವಿರುವ ಜಾಗವೆಲ್ಲ ವ್ಯಾಪಿಸುವಂತೆ ಮಾಡುತ್ತಾರೆ

ಉಡುಪಿದೀಪ: ಎಣ್ಣೆಯನ್ನು ತುಂಬಿದ ವಿಶಿಷ್ಟವಾದ ದೀಪದ ಕಂಬ (ದಕ.ಜಿ)

ಉಡುಪೆ: ೧. ತೆಂಗಿನಗರಿ ಬಿದಿರು ಮೊದಲಾದವುಗಳಿಂದ ಹೆಣೆದ ಬುಟ್ಟಿ ೨. ಮೀನು ಮೊದಲಾದವನ್ನು ತುಂಬುವ ದುಂಡು ಕುಕ್ಕೆ. **ಇರೂ:** ಉಡುಪೆಕುಕ್ಕೆ. ೩. ಒಂದು ಔಷಧೀ ಸಸ್ಯ; ಬೇರಿನಲ್ಲಿ ಜ್ವರನಿವಾರಕ ಗುಣ ಹೊಂದಿರುವ ಸಸ್ಯ. ನಾಯಿ ಕಚ್ಚಿದರೆ ನಂಜು ಇಳಿಸಲು ಬೇರು ತೇಯ್ದು ಲೇಪಿಸುತ್ತಾರೆ. ಕುರದ ನಿವಾರಣೆಗೂ ಬಳಸುತ್ತಾನೆ (ಚಾಮ.ಜಿ)

ಉಡುಬೆ: ೧. ದಟ್ಟವಾದ ಪೊದೆ ೨. ಒಂದು ಬಗೆಯ ಜೇನು; ತುಡುಬೆ ಜೇನು

ಉಡುಭಂಗಿ: ಭಂಗಿ ಸೊಪ್ಪಿನ ಪುಡಿ

ಉಡುರ: ಗಾಳಿ ಮಿಶ್ರಿತವಾಗಿ ಬರುವ ಮೋಡ

ಉಡುವಣಿ: ಮೆಲುದನಿ

ಉಡುವಾಣಿ: ಸೊಂಟದಲ್ಲಿರುವ ಬೆಳ್ಳಿಯ ಉಡದಾರ (ಉಕ.ಜಿ)

ಉಡುವಿನ ನಾಲಗಿ: ಬದಲು ಮಾತನಾಡುವುದು; ಮಾತು ಬದಲಿಸುವ ನಾಲಗೆ (ಬಿಜಾ.ಜಿ)

ಉಡುವೆ: ೧. ಬುರುಜು; ಕೋಟೆಯ ಶಿಖರ ೨. ಬೆಳ್ಳಿಯ ಬಳೆ; ತೋಡ

ಉಡುಸಲಮ್ಮ: ಮಾರಮ್ಮ; ಗಡಿಮಾರಿ

ಉಡುಸಲಮ್ಮನ ಮಾಡೋದು: ಸಾಂಕ್ರಾಮಿಕರೋಗವು ತಮ್ಮ ಊರಿಗೆ ಬರದಿರಲೆಂದು ಮಾರಿಯನ್ನು ಪೂಜಿಸಿ ಊರಾಚೆ ಬಿಟ್ಟುಬರುವ ಒಂದು ಆಚರಣೆ

ಉಡುಸು: ತೊಡೆಯ ಸಂದುಗಳಲ್ಲಿ ಆಗುವ ಗಡ್ಡೆ. ಉಡದ ತಲೆ ಎಲುಬನ್ನು ಸೋಸಿ ಅದರ ಲೇಪನ ಮಾಡಿದಾಗ ಉಡುಸು ಕರಗುತ್ತದೆ (ಬಿಜಾ.ಜಿ)

ಉಡೆ: ಸೆರಗು. **ಪ್ರ:** ನಮ್ಮ ಸತ್ಯ ನಮ್ಮ ಧರ್ಮ ಇದ್ರೆ ನಾವು ಅಕ್ಕತಂಗೇರು ಉಡೆ ಹಾಸ್ತೀವಿ, ನಮ್ಮ ಉಡೆಯಾಗೆ ಬಂದು ನಿಲ್ಲಬೇಕು ಅಂತ ಉಡೇಹಾಸಿ ನಿಂತ್ಕೊಂಡುಬಿಟ್ರು (ತುಮ.ಜಿ)

ಉಡೆಕ್ಕಿ: ಉಡಿಗೆ ತುಂಬುವ ಅಕ್ಕಿ (ಧಾರ.ಜಿ)

ಉಡೆಕ್ಕಿ ತಿರುಗುಸೂದು: ಗಂಡನ ಮನೆಗೆ ಮೊದಲಬಾರಿ ಕಳುಹಿಸುವಾಗ ನಡೆಸುವ ಶಾಸ್ತ್ರ. ವಧುವಿನ ಸಂಬಂಧಿಕರು ಆಕೆಯ ಉಡಿಯಲ್ಲಿ ಐದು ಮನೆಗಳಿಂದ ಅಷ್ಟಿಷ್ಟು ಜೋಳ ಅಥವಾ ಅಕ್ಕಿ ಹಾಕಿ ಕಳಿಸುವುದು (ಶಿವ.ಜಿ)

ಉಡೇಪಾದಲಿಂಗ: ಜಂಗಮರು ಕಾಲಲ್ಲಿ ಧರಿಸುವ ಲಿಂಗದಾಕಾರದ ಒಂದು ಗಂಟೆ; ಜಂಗು

ಉಡೇಬಂಚಿ: ಸೊಂಟದ ದಾರ (ಮಂಡ್ಯ.ಜಿ)

ಉಡ್ಕಾ: ನೇಯ್ಗೆಯಲ್ಲಿ ಬಳಸುವ ಸಾಧನ; ಉಡಾತ್ರ ಬಳೆಯನ್ನು ಕಟ್ಟಲು ಉಪಯೋಗಿಸುವ ಸಣ್ಣ ಹಗ್ಗ. **ನೋಡಿ–** ಉಡಾತ್ರ

ಉಡ್ಕುಬಲಿ: ೧. ಉಡುಕು ವಾದನದೊಂದಿಗೆ ದೇವಸ್ಥಾನಕ್ಕೆ ಉತ್ಸವ ಮೂರ್ತಿಯ ಪ್ರದಕ್ಷಿಣೆ ೨. ತಕ್ಷಣ ಕೋಪಗೊಳ್ಳುವಿಕೆ (ದಕ.ಜಿ)

ಉಡ್ಕೊಕ್ಕೆ: ರೈತರು ಕೆಲಸ ಮಾಡುವಾಗ ಸೊಂಟದ ಹಿಂಬದಿಗೆ ಕತ್ತಿ ಸಿಕ್ಕಿಸಿಕೊಳ್ಳಲು ಅನುಕೂಲವಾಗುವಂತೆ ಬಳ್ಳಿಯಿಂದ ಸೊಂಟಕ್ಕೆ ಕಟ್ಟಿಕೊಳ್ಳುವ ಕಟ್ಟಿಗೆ ಅಥವಾ ಕಬ್ಬಿಣದಿಂದ ತಯಾರಿಸಿದ ಸಾಧನ (ಉಕ.ಜಿ). ನೋಡಿ– ಅಂಡುಕೊಕ್ಕೆ

ಉಡ್ಗ: ಉಡುಗೊರೆ (ಉಕ.ಜಿ)

ಉಡ್ಡಸ್: ಕಟ್ಟುಮಸ್ತಾಗಿರು; ತುಂಬಿರು (ಉಕ). **ಪ್ರ:** ಸಭಿಲೆ ನೀ ಒಳ್ಳೇ ಉಡ್ಡಸ್ ಕಾಣ್ತೆ

ಉಡ್ಡಾದಾಳು: ಕಟ್ಟುಮಸ್ತಾದ ಮನುಷ್ಯ (ಉಕ)

ಉಡ್ಡಿ: ೧. ಗೋಲಿ ಆಟದಲ್ಲಿನ ಒಂದು ಪದ; ಗುನ್ನ ೨. ಡಿಕ್ಕಿ ೩. ನಾಟು ಹೊಡೆಯುವುದು ೪. ಜಗಳ (ಬಳ್ಳಾ.ಜಿ) ೫. ನಾಟು ಸಾಗಾಣಿಕೆ ಕೆಲಸ (ಉಕ)

ಉಡ್ಡಿಬಾಡು: ಮಾಂಸದ ಹಂಚಿಕೆಯ ಗಾತ್ರ. ಪ್ರಾಣಿಯ ದೇಹದ ಭಾಗಗಳನ್ನು ಪ್ರತ್ಯೇಕವಾಗಿ ತೆಗೆದಿರಿಸಿ ನಂತರ ಗುಡ್ಡೆಗಳನ್ನು ಹಾಕುವರು. ಎಲ್ಲ ಗುಡ್ಡೆಗಳಿಗೂ ಎಲ್ಲ ಭಾಗಗಳು ಸಮನಾಗಿ ಹಂಚಿಕೆಯಾಗುತ್ತದೆ. ಈ ಗುಡ್ಡೆಗಳನ್ನು ಸಂಬಂಧಿಸಿದವರ ಮನೆಗಳವರಿಗೆ, ತಮಗೆ ಬೇಕಾದವರಿಗೆ, ಊರಿನ ಮುಖ್ಯಸ್ಥರ ಮನೆಗಳಿಗೆ ಕಳಿಸುತ್ತಾರೆ. (ಕೋಲಾ.ಜಿ)

ಉಡ್ಡುರಿಕೆ: ಎತ್ತುಗಳು ಹಾಕುವ ಕೂಗು

ಉಡ್ಡೆ: ೧. ಗುಂಪು ೨. (ಕ್ರಿ) ಒಗ್ಗೂಡಿಸು

ಉಡ್ತಿ/ಉಡ್ತೆ/ಉಡುತೆ: ಅಳಿಲು (ಕೋಲಾ.ಜಿ)

ಉಡ್‌ದೈವಾಟ್‌ದಿಮಿತ: ಆವೇಶದಿಂದ ಕೋಲಾಟ ಆಡುವಾಗ ಒಮ್ಮೊಮ್ಮೆ ಲಯಕ್ಕಾಗಿ ಈ ರೀತಿ ಕೂಗುತ್ತಾ ಕೋಲು ನಿಲ್ಲಿಸಿ ಮುಂದಕ್ಕೆ ಹೋಗುತ್ತಾರೆ (ಚಿಬ.ಜಿ)

ಉಡ್ಮು: ಅಳಿಲು (ಕೋಲಾ.ಜಿ)

ಉಡ್ಯಾಣ: ೧. ಉಡಿದಾರ. ಹೆಚ್ಚಾಗಿ ಮಕ್ಕಳಿಗೆ ಸೊಂಟಕ್ಕೆ ಹಾಕುವ ಬೆಳ್ಳಿ ಅಥವಾ ಚಿನ್ನದ ನೇವಳ

ಉಡ್ರುಗಾಳಿ: ಬರ್ರೋ ಎಂದು ಬೀಸುವ ಗಾಳಿ. ಊಳಿಡುತ್ತಾ ಬೀಸುವ ಗಾಳಿ (ಬೆಂಗ್ರಾ.ಜಿ)

ಉಡ್ರುಚಳಿ: ೧. ನಡುಗಿಸುವ ಶೀತಗಾಳಿ ೨. ಚಳಿಯಿಂದ ಕೂಡಿದ ಮಳೆ

ಉಡ್ಸಾ: ದುರಹಂಕಾರದಲ್ಲಿ ಮೆರೆಯುವವರು (ಮೈಸೂ.ಜಿ)

ಉಡ್ಸೆರಗು: ಉಡಿಸೆರಗು. ಸೀರೆಯ ಒಳ ಸೆರಗು (ಶಿವ.ಜಿ). ಈ ಭಾಗವನ್ನು ಮೊದಲು ಸುತ್ತಿ ಸೊಂಟಕ್ಕೆ ಸಿಕ್ಕಿಸಿಕೊಂಡ ನಂತರ ಉಳಿದ ಭಾಗವನ್ನು ನೆರಿಗೆ ಹಾಗೂ ಸೆರಗಿಗೆ ಬಳಸುತ್ತಾರೆ

ಉಣ: ಸೊಂಟ

ಉಣಕಲ್ಲುಹುಲ್ಲು: ಒಣಗಿದ ಹುಲ್ಲು. ಜಾನುವಾರಗಳಿಗೆ ಕೊಡುವ ಮೇವು (ಚಿಬ.ಜಿ)

ಉಣಗನಕಟ್ಲೆ: ಸಪೂರ ದೇಹಿ

ಉಣಗಿನ ಹಕ್ಕಿ: ದನದ ಮೈಮೇಲಿನ ಉಣಗು ತಿನ್ನುವ ಹಕ್ಕಿ (ದಕ.ಜಿ) **ನೋಡಿ–** ಉಣುಗು

ಉಣಚಿ: ೧. ಹುಣಿಸೆ ೨. ಒಂದು ಮೀನು (ಶಿವ.ಜಿ) ೩. ಜೋಳದ ಸೆಣಕಲು ದಂಟು; ಕೊಯ್ದ ಜೋಳದ ತೆನೆಯ ಕೆಳಭಾಗ (ಧಾರ.ಜಿ)

ಉಣಾಮಿಣಿ: ಉವರಿಯಾ ನರಮ್: ಒಂದು ಸಸ್ಯ. ಇದರ ಎಲೆ ಮತ್ತು ಬೇರು ವಾತರೋಗ ಹಾಗೂ ಕಾಮಾಲೆಗೆ, ನಂಜಿಗೆ, ಜ್ವರಕ್ಕೆ, ಪಿತ್ತದೋಷಕ್ಕೆ ಔಷಧಿ

ಉಣಿವಾಳ: ಸೊಂಟಕ್ಕೆ ಧರಿಸುವ ಆಭರಣ; ಡಾಬು

ಉಣಿಸಸಿ: ಕುರಿಯ ಮೈಯಿಂದ ಮೊದಲ ಸಲ ಕತ್ತರಿಸಿದ ಉಣ್ಣೆ

ಉಣಿಸು (ಕ್ರಿ): ೧. ಬೆಳೆಗೆ ನೀರು ಕುಡಿಸು ೨. ಊಟಮಾಡಿಸು

ಉಣುಕು: ಚೀಪು; ಚಪ್ಪರಿಸು (ಮೈಸೂ.ಜಿ)

ಉಣುಗು: ೧. ದನಕರುಗಳ ಮೈಯ ರಕ್ತ ಹೀರುವ ಹೇನು; ಉಣ್ಣಿ ೨. ಕುರಿ ತುಪ್ಪಟ (ಕೊಪ್ಪ.ಜಿ). **ಇರೂ:** *ಒಣಗು*

ಉಣುಗುಪೀಡೆ ಮದ್ದು: ಉಣುಗು ಪೀಡೆ ನಿವಾರಣೆಗಾಗಿ ಕೊಬ್ಬರಿ ಎಣ್ಣೆಗೆ ಅರಿಶಿಣ ಹಾಗೂ ಉಪ್ಪನ್ನು ಸೇರಿಸಿ ದನಗಳ ಮೈಗೆ ಕೂದಲಿನ ವಿರುದ್ಧ ದಿಕ್ಕಿನಲ್ಲಿ ಸವರುವ ಔಷಧಿ (ಉಕ.ಜಿ)

ಉಣುಗೋಲು: ೧. ಉಣಗೋಲು; ಮನೆ ಇಲ್ಲವೇ ಬೇಲಿಯ ಪ್ರವೇಶದ್ವಾರಕ್ಕೆ ಅಡ್ಡವಿರುವ ತಡೆಕೋಲು (ಮಲೆ) **ಪ್ರ:** ಮನೆಯೆಡೆಯ ಕಣದ ಬೇಲಿಯೊಡ್ಡಿಗೆ ಹಾಕಿದ್ದ ಉಣುಗೋಲನ್ನು ಸರಿಸಿ ಒಳಗೆ ಬಂದ ೨. ಸರಾಗವಾಗಿ ತೆಗೆದುಹಾಕುವ ಬಿದಿರಿನ ತಡಿಕೆ ೩. ತೆನೆಯನ್ನು ಎಳೆಯುವ ಕೋಲು

ಉಣುಚಲು: ಮಣ್ಣಿನ ನೆಲವನ್ನು ನೀರು ಅಥವಾ ಸಗಣಿ ನೀರು ಹಾಕಿ ಸಾರಿಸಿದಾಗ ಸಗಣಿ ಹೆಕ್ಕಳೆಯಾಗಿ ಏಳುವುದು

ಉಣೆಪು: ಹಣೆಯಲ್ಲಿ ಧರಿಸುವ ಬೊಟ್ಟು

ಉಣ್ಕು: ಉಳುಕು (ತುಮ.ಜಿ); ಕಾಲಿನ ನರ ಹೊರಳುವುದು

ಉಣ್ಣಗ: ಉಣ್ಣೆಕಂಕಣದವರು; ಕುರುಬ ಸಮುದಾಯದ ಬೆಡಗುಗಳಲ್ಲಿ ಒಂದು (ಬಳ್ಳಾ.ಜಿ)

ಉಣ್ಣನೀರಸಮುತ್ರ: ಸಿಹಿನೀರ ಸಮುದ್ರ (ಮೈಸೂ.ಜಿ)

ಉಣ್ಣಿ: ೧. ಚರ್ಮದ ಮೇಲೇಳುವ ಚಿಕ್ಕ ಗಂತಿ; ಹುಲ್ಲುರಿ (ಮೈಸೂ.ಜಿ) ೨. ಕುರಿಯ ಕೂದಲು; ಉಣ್ಣೆ ೩. ದನಗಳ ಮೈಗೆ ಅಂಟಿಕೊಂಡು ರಕ್ತ ಹೀರುವ ಕೀಟ (ಕ್ರಿ) ೪. ಊಟ ಮಾಡಿ. **ಪ್ರ:** ನಿಧಾನವಾಗಿ ಉಣ್ಣಿ. ಸಂಕೋಚ ಮಾಡ್ಕಬೇಡಿ **ಇರೂ:** *ಉಣ್ಗ್; ಉಣುಗು, ಉಣ್ಣೆ*

ಉಣ್ಣಿಅಗಡ: ಎತ್ತುಗಳ ಕೊರಳಲ್ಲಿ ಅಲಂಕಾರಕ್ಕಾಗಿ ಮತ್ತು ದೃಷ್ಟಿ ನಿವಾರಣೆಗಾಗಿ ತೊಡಿಸುವ ಕುರಿ ಉಣ್ಣೆಯ ಹಗ್ಗ; ದಂಡೆ (ಬೆಂಗ್ರಾ.ಜಿ)

ಉಣ್ಣಿಕಂಕಣ: ಉಣ್ಣೆ ಎಳೆಯಿಂದ ಕಟ್ಟುವ ಕಂಕಣ (ಚಿತ್ರ.ಜಿ)

ಉಣ್ಣಿಕಡೆ: ಉಣ್ಣೆಯಿಂದ ಮಾಡಿದ ಮಕ್ಕಳ ಮುಂಗೈ ದಾರ

ಉಣ್ಣಿಕಾಯಿ: ಒಂದು ಜಾತಿಯ ಮರದ ಕಾಯಿ

ಉಣ್ಣಿಗಿಡ: ಲಾಂಟಾನ; ರೋಜಳ್ಳು ಗಿಡ (ಮೈಸೂ.ಜಿ)

ಉಣ್ಣಿಯಪ್ಪ: ಒಂದು ಬಗೆಯ ತಿಂಡಿ (ಉಕ)

ಉಣ್ಣಿಲ್ಲೆ ಬರೂದು: ಊಟ ಮಾಡದೆ ಬರುವುದು. ಹೆಣ್ಣು ಕೊಡುವ ಹಾಗೂ ತೆಗೆದುಕೊಳ್ಳುವ ಮಾತುಕತೆ ಮುರಿದುಬಿದ್ದರೆ ಅವರಲ್ಲಿ ಊಟ ಮಾಡಬಾರದೆಂಬ ಪದ್ಧತಿ (ಶಿವ.ಜಿ)

ಉಣ್ಣೆ: ೧. ಪ್ರಾಣಿಗಳ ತುಪ್ಪಟ (ಧಾರ.ಜಿ) ೨. ಕಂಬಳಿಯ ನೇಯ್ಗೆಯಲ್ಲಿ ಹದಗೊಂಡ ಕುರಿ ತುಪ್ಪಟ (ತುಮ.ಜಿ) ೩. ಹಲಗೆ ಬಡಿಯಲು ಬಳಸುವ ಕಡ್ಡಿ; ಉಣಿಚಿ (ರಾಯ.ಜಿ) ೪. ದನ, ರಾಸು, ಕುರಿ, ಮೇಕೆ, ನಾಯಿ ಮುಂತಾದ ಪ್ರಾಣಿಗಳ ಮೈಮೇಲಿರುವ ಕೀಟ

ಉಣ್ಣೆಕಟ್ಟೆ: ದನಕರುಗಳನ್ನು ಉಣ್ಣೆಕಾಟದಿಂದ ತಪ್ಪಿಸಲು ದನಗಾಹಿಗಳು ಮಾಡುವ ಆಚರಣೆ. ಕಾಟಮ ದೇವರನ್ನು ಪೂಜಿಸಿ ಎಡೆ ಹಾಕಿದರೆ ದನಗಳಿಗೆ ಉಣ್ಣೆ ಬೀಳುವುದಿಲ್ಲ ಎಂಬ ನಂಬಿಕೆ (ಬೆಂಗ್ರಾ.ಜಿ). ಸಂಕ್ರಾಂತಿ ಹಬ್ಬದ ದಿನದಂದು ಹುತ್ತದ ದೈವವೆಂದು ಪರಿಗಣಿಸಲಾದ ಕಾಟಮರಾಯ, ಕಾಟಮಲಿಂಗ ಸಂಕ್ರಾಂತಮ್ಮ ಹಾಗೂ ಇತರ ದೈವಗಳನ್ನು ಪೂಜಿಸುತ್ತಾರೆ

ಉಣ್ಣೆಕತ್ತಿ: ಕುರಿಗಳ ತುಪ್ಪಟವನ್ನು ಕತ್ತರಿಸಲು ಬಳಸುವ ಸಲಕರಣೆ. ಬುಡಭಾಗವೇ ಹಿಡಿಯೂ ಆಗಿರುತ್ತದೆ ಹೊರತು ಪ್ರತ್ಯೇಕ ಹಿಡಿ ಇರುವುದಿಲ್ಲ. **ಇರೂ:** *ತುಪ್ಪಟ ಕತ್ರಿ*

ಉಣ್ಣೆಕಾಯ್ದು: ಗದ್ದೆಯಲ್ಲಿ ಬರುವ ಒಂದು ಜಾತಿಯ ಹುಲ್ಲು

ಉಣ್ಣೆಗರ್ವ: ನೋಡಿ– ಉಣ್ಣೆಗೊರವ

ಉಣ್ಣೆಗೊರವ: ದನಗಳ ಉಣ್ಣೆಯನ್ನು ತಿನ್ನುವ ಒಂದು ಹಕ್ಕಿ. ಬತ್ತದ ತೆನೆಯ ಎಳೆಕಾಳುಗಳಲ್ಲಿರುವ ಹಾಲನ್ನು ಕುಡಿದು (ಮೈಸೂ.ಜಿ). ಕಾಳುಗಳನ್ನು ನಿಸ್ಸಾರ ಮಾಡುತ್ತದೆ *(ಮಂಡ್ಯ.ಜಿ)*

ಉಣ್ಣೆದನ್ನ: ಕಿಚಡಿ ಅನ್ನ

ಉಣ್ಣೆದಳೆ: ಕುರಿ ಉಣ್ಣೆಯ ಬಳೆ; ಕಡೆ; ಕಡಗ

ಉಣ್ಣೆರೊಟ್ಟಿ: ಜಾನುವಾರಗಳ ಮೈಯಲ್ಲಿ ವಾಸಮಾಡುವ ಉಣ್ಣೆಗಳನ್ನು ಹಿಟ್ಟಿನೊಂದಿಗೆ ಕಲೆಸಿ ತಯಾರಿಸಿದ ರೊಟ್ಟಿ, ಸಂಕ್ರಾಂತಿ ಮುಂತಾದ ಹಬ್ಬಗಳಲ್ಲಿ ಕಿಚ್ಚು ಹಾಯಿಸುವ ಸಂದರ್ಭದಲ್ಲಿ ನೈವೇದ್ಯಕ್ಕೆಂದು ಈ ರೊಟ್ಟಿಗಳನ್ನು ಬಳಸಲಾಗುತ್ತದೆ (ಧಾರ.ಜಿ). ದನಗಳ ಮೈಯಲ್ಲಿನ ಒಂದೆರಡು ಉಣ್ಣೆ ಕಿತ್ತು ತಂದು ಅನ್ನದ ಉಂಡೆಯಲ್ಲಿಟ್ಟು ದನಕಾಯುವ ಹುಡುಗರಿಗೆ ತಿನ್ನಲು ಕೊಟ್ಟರೆ ಉಣ್ಣೆಗಳ ಪೀಡೆ ನಿವಾರಣೆಯಾಗುತ್ತದೆ ಎಂಬ ನಂಬಿಕೆ ಇದೆ (ಬೆಂಗ್ರಾ.ಜಿ)

ಉಣ್ಬುಬಲಸಾವುನಿ: ನವವಧುವಿಗೆ ಸಟ್ಟುಗ ಹಿಡಿಸುವ ಶಾಸ್ತ್ರ (ದಕ.ಜಿ)

ಉಣ್ಮಜಿನ: ಹುಣ್ಣಿಮೆ ದಿನ (ಚಾಮ.ಜಿ)

ಉಣ್ಮೆಪೂಜೆ: ಹುಣ್ಣಿಮೆ ಪೂಜೆ; ಬೆಳೆ ಬೆಳೆದು ನಿಂತಾಗ ಒಂದು ಹುಣ್ಣಿಮೆಯಂದು ಮನೆಯಲ್ಲಿ ಮಾಡುವ ಪೂಜೆ (ಚಿತ್ರ.ಜಿ)

ಉಣ್ಣಕಾಳು: ಹಲಸಿನ ಕಾಯಿಯಿಂದ ಮಾಡುವ ತಿಂಡಿ (ಉಕ)

ಉಣ್ಸೆ: ಹುಣಿಸೆ (ಕೋಲಾ.ಜಿ)

ಉಣ್ಸೆಇಟ್ಕೋಳೂದು: ಹೊಟ್ಟೆಬಟ್ಟೆಗೆ ಕೊಟ್ಟು ದುಡಿಯಲು ಆಳನ್ನು ಇರಿಸಿಕೊಳ್ಳುವುದು

ಉಣ್ಸುವ್ವ: ಹುಣಿಸೆ ಹೂವು (ಕೋಲಾ.ಜಿ)

ಉಣ್ಸೆಪಚ್ಚಿ: ಹುಣಿಸೆ ಬೀಜ (ಚಾಮ.ಜಿ) ಚೌಕಾಬಾರ ಎಂಬ ಒಳಾಂಗಣ ಆಟದಲ್ಲಿ ಬಳಕೆಯಾಗುವ ಹುಣಿಸೆ ಬೀಜದ ಹೋಳು (ಮಂಡ್ಯ.ಜಿ). **ಇರೂ:** *ಚಕ್ಕ (ಬೆಂಗ್ರಾ.ಜಿ), ಚೌಕಾಬೇಳೆ, ಚೌಕಾಬೀರಿ (ಹಾಸ.ಜಿ)*

ಉಣ್ಸೆಬೋಟು: ಹುಣಸೇಕಾಯಿಯ ಚೂರು (ತುಮ.ಜಿ) ಗೆಣ್ಣುಗಳ ರೂಪದಲ್ಲಿರುವ ಹುಣಸೆಕಾಯಿಯ ಒಂದು ಗೆಣ್ಣಿನಷ್ಟು ಚೂರು (ಚಿತ್ರ.ಜಿ) **ಪ್ರ:** ನಂಗೊಂದೇ ಒಂದು ಉಣ್ಸೆಬೋಟು ಕೊಡು

ಉತಳಗಿ: ಕಣದಲ್ಲಿ ಕಾಳನ್ನು ತೂರುವ ಬುಟ್ಟಿ (ಬಳ್ಳಾ.ಜಿ). **ಇರೂ:** *ಗೆರೆಸಿ; ಕೊಂಗ (ಮಂಡ್ಯ.ಜಿ)*

ಉತಳಿ: ಮಧ್ಯಮ ಆಕಾರದ ಬುಟ್ಟಿ (ಬೆಂಗ್ರಾ.ಜಿ)

ಉತಾಡಿಹಾಕು: ಬಿತ್ತುವ ಬೀಜದಲ್ಲಿ ಬೇರೆ ಬೆಳೆಯ ಬೀಜಗಳನ್ನು ಬೆರೆಸುವುದು

ಉತಾರ: ೧. ಉತಾರು ಪಹಣಿ; ಗೇಣಿಪತ್ರ ೨. ಸಾಟಿ; ಚಾಟಿ; ಪ್ರತಿ ೩. ಇಳಿವು ೪. ದೇವರ ಸೇವೆ ಮಾಡಿದ್ದಕ್ಕೆ ನೀಡಲಾದ ಜಮೀನು ೫. ವಜಾ; ಮುರಿದುಕೊಳ್ಳುವುದು ೬. ಇಳಿಜಾರು; ಇಳಿಜಾರಿನ ಜಮೀನು; ಹಾದಿ ತಗ್ಗಾದ ಪ್ರದೇಶ ೭. ಕಡಿಮೆಯಾಗುವಿಕೆ ೮. ಹಿಂದಿನ ಪುಟದಲ್ಲಿರುವ ಜಮಾಖರ್ಚುಗಳ ಮೊತ್ತಗಳನ್ನು ಮುಂದಿನ ಪುಟಕ್ಕೆ ಉದ್ಧರಿಸುವುದು ೯. ಹೆಚ್ಚಿನ ಇಳುವರಿ ೧೦. ದತ್ತಿ ೧೧. ಜಮಾ

ಉತಾರದಾರ: ಈಚಲು ಮರಕ್ಕೆ ಹೆಂಡ ಕಟ್ಟಿ ಇಳಿಸುವ ವ್ಯಕ್ತಿ (ಚಿಬ.ಜಿ)

ಉತಿಯಾಗ್: ಕಿತಾಪತಿ ಮನುಷ್ಯ; ಅಸಾಧ್ಯ ಮನುಷ್ಯ (ಮಂಡ್ಯ.ಜಿ)

ಉತ್ಕ/ಉದ್ಕ: ಸಾರು; ಸಾಂಬಾರು

ಉತ್ಕಲ್: ಗೋಧಿಕಲ್ಲು. ಮದುವೆ, ಮುಂಜಿಗಳಿಗೆ ಒಂದೆರಡು ದಿನ ಮುಂಚೆ ದೇವರ ಸಮಾರಾಧನೆಯಂದು ಮನೆ ದೇವರ ಪೂಜೆ ಹಾಗೂ ಸುವಾಸಿನಿ ಪೂಜೆ ಮಾಡಲಾಗುತ್ತದೆ. ಆ ದಿನ ಬೀಸುವ ಕಲ್ಲಿನಲ್ಲಿ ಸ್ವಲ್ಪ ಗೋಧಿ ಹಾಕಿ ಐದು ಜನ ಮುತ್ತೈದೆಯರು ಬೀಸುತ್ತಾರೆ. ಇದು ಮದುವೆಯ ಅಡುಗೆ ಕಾರ್ಯಗಳನ್ನು ಶುಭ ಘಳಿಗೆಯಲ್ಲಿ ಪ್ರಾರಂಭ ಮಾಡಿದ ಸಂಕೇತ

ಉತ್ಕಲಿ: ಹುಲ್ಲನ್ನು ಒಟ್ಟುಗೂಡಿಸಲು ಬಳಸುವ ಕೊಕ್ಕೆಗೋಲು (ಬಳ್ಳಾ.ಜಿ); ಮೆರೆಕೋಲು (ಮಂಡ್ಯ.ಜಿ)

ಉತ್ತ (ಕ್ರಿ): ೧. ಉಳುಮೆ ಮಾಡಿದ; ನೇಗಿಲು ಹೊಡೆದ; ಹದಗೊಂಡ ೨. ಒಣ ಖರ್ಜೂರ. **ಇರೂ:** *ಉತ್ತತ್ತಿ; ಖಾರಿಕೆ*

ಉತ್ತತ್ತಿಗಂಟಿ: ಎತ್ತಿನ ಕೊರಳಿಗೆ ಕಟ್ಟುವ ಹಿತ್ತಾಳೆಯ ಕಿರುಗಂಟೆ; ಗಂಟೆಸರ (ಬಳ್ಳಾ.ಜಿ)

ಉತ್ತತ್ತಿಹರಕೆ: ತಮ್ಮ ಇಷ್ಟಾರ್ಥಸಿದ್ಧಿಗಾಗಿ ಭಕ್ತರು, ಉತ್ತತ್ತಿ ಹಣ್ಣುಗಳನ್ನೇ ಇಟ್ಟು ಪೂಜಿಸುತ್ತೇವೆಂದು ಹೊರುವ ಹರಕೆ (ಧಾರ.ಜಿ)

ಉತ್ತಪ್ಪ: ೧. ದೋಸೆ ೨. ನಾಗರ ಹುತ್ತ ೩. ಒಂದು ವ್ಯಕ್ತಿನಾಮ (ಕೊಡ.ಜಿ)

ಉತ್ತರ ಬೆಂಕಿ: ಕೊಡಗು ಗೌಡರು ರಾಜನ ಮುಂದೆ ತಮಗೆ ಬೇಕೆಂದು ಬೇಡಿದ ವಸ್ತು (ಮಲೆ)

ಉತ್ತರಕನ್ನಡ ತಿಟ್ಟು: ಉತ್ತರತಿಟ್ಟು; ಬಡಗುತಿಟ್ಟು; ಯಕ್ಷಗಾನ ಪ್ರಭೇದ (ಉಕ)

ಉತ್ತರಕಾಟಿ: ದಿಕ್ಸೂಚಿ (ಉಕ.ಜಿ)

ಉತ್ತರಕುಮಾರ: ಮಹಾಭಾರತದಲ್ಲಿ ಬರುವ ಪಾತ್ರ; ವಿರಾಟರಾಯನ ಮಗ. ಹೇಡಿತನ, ಅಂಜುಬುರುಕುತನಕ್ಕೆ ಈತನ ಹೆಸರು ಸಂಕೇತವಾಗಿದೆ (ಧಾರ.ಜಿ)

ಉತ್ತರಕ್ಕೆ ಹುಟ್ಟಿದ: ತನ್ನ ವಂಶದ ಅಧಿಕೃತ ತಂದೆಗೆ ಹುಟ್ಟಿದ

ಉತ್ತರಗಿ: ಉತ್ತರೀಯ (ಉಕ)

ಉತ್ತರದಾರ: ಉತ್ತರಾಧಿಕಾರಿ

ಉತ್ತರದೇವಿಯ ಹಾಡು: ಪ್ರಸಿದ್ಧವಾದ ಕಥನಗೀತೆ. ಅತ್ತೆಗೂ ಸೊಸೆಗೂ ಜಗಳವಾದಾಗ ಸೊಸೆಯ ಮೇಲೆ ಸುಳ್ಳು ಆರೋಪ ಹೊರಿಸಿ ಅತ್ತೆಯು ಸೊಸೆಯನ್ನು ತವರಿಗೆ ಕಳಿಸುತ್ತಾಳೆ. ಮಕ್ಕಳೊಂದಿಗೆ ತವರಿನ ಹಾದಿಹಿಡಿದ ಉತ್ತರ ದೇವಿಗೆ ಯಾರ ಮನೆಯಲ್ಲಿಯೂ ಆಶ್ರಯಸಿಗುವುದಿಲ್ಲ. ಆಕೆಯ ತಾಯಿಯೂ ಮಗಳಂತೆ ಅತ್ತೆ ಮನೆಯಿಂದ ದೂರವಾದವಳು. ಕೊನೆಗೆ ತಾಯಿಯ ಮಾತಿನಂತೆ ಅವಳು ಉತ್ತರೆಮಳೆಯಾಗಿ ಸುರಿಯುತ್ತಾಳೆ

ಉತ್ತರಭೂಪ: ಜಂಬಕೊಚ್ಚಿಕೊಳ್ಳುವವ (ಬಿಜಾ.ಜಿ)

ಉತ್ತರಮುಖಿ: ಉತ್ತರ ದಿಕ್ಕಿಗೆ ಎದುರಾಗಿ ಮಾಡುವ ಉಳುಮೆ; ಮೊದಲ ಸಲದ ಉಳುಮೆಯನ್ನು ಪೂರ್ವಾಭಿಮುಖವಾಗಿ ಮಾಡಲು ಸಾಧ್ಯವಿಲ್ಲದಾಗ ಅಪರೂಪಕ್ಕೆ ಉತ್ತರಮುಖವಾಗಿ ಉಳುತ್ತಾರೆ (ಚಿತ್ರ.ಜಿ)

ಉತ್ತರಸೀಮೆ: ಗೊಂಡರ ಜಾತಿಯವರು ಪಂಚಾಯಿತಿಗೆ ಸೇರುವ ಸ್ಥಳ (ಉಕ.ಜಿ)

ಉತ್ತರಾ: ಒಂದು ಮಳೆಯ ನಕ್ಷತ್ರ; ಭಾದ್ರಪದದಲ್ಲಿ ಬೀಳುವ ಮಳೆಯ ನಕ್ಷತ್ರ

ಉತ್ತರಾಣಿ: *ಅಕೈರಾಂತಸ್ ಆಸ್ಪೆರಾ:* ಬಟ್ಟೆಬರೆಗಳಿಗೆ ಅಂಟಿಕೊಳ್ಳುವ, ಮುಳ್ಳಿನಂಥ ಬೀಜಗಳುಳ್ಳ ಗೇಣುದ್ದದ ಕಡ್ಡಿಗಳ ಗಿಡ. ಶಿವರಾತ್ರಿಯ ದಿನ ಉತ್ತರಾಣಿ ಗಿಡದ ಕಡ್ಡಿಯ ತುದಿಗೆ ಹತ್ತಿಯನ್ನು ಹಗುರವಾಗಿ ಸುತ್ತಿ ತುಪ್ಪದಲ್ಲಿ ಅದ್ದಿ ಊದಿನಕಡ್ಡಿಯಂತೆ ಹಚ್ಚಿ ಲಿಂಗಕ್ಕೆ ಬೆಳಗುತ್ತಾರೆ (ಗುಲ್ಬ.ಜಿ) ಕಣದ ಪೂಜೆ, ಮೆದೆ ಪೂಜೆ, ರಾಶಿಪೂಜೆ, ದೀವಳಿಗೆ ಹಬ್ಬದಲ್ಲಿ ಹಣತೆಯ ಕೆಳಗಿಡುವ ಸಗಣಿಗೆ ಸಿಕ್ಕಿಸಲು ಬಳಸುತ್ತಾರೆ (ಮಂಡ್ಯ.ಜಿ) ಕೆಲವು ಕಡೆ ಬಲಿಪಾಡ್ಯಮಿಯಂದು ಉತ್ತರಾಣಿಯನ್ನು ಪೂಜಿಸುತ್ತಾರೆ. ಹಾದೀಲಿ ಹುಟ್ಟಿ ಬೀದೀಲಿ ಬೆಳೆದು ಹಾದೀಲಿ ಹೋಗುವವರ ಹಿಡಿದು ನಿಲ್ಲಿಸುವುದು ಎಂಬುದು ಈ ಗಿಡವನ್ನು ಕುರಿತ ಪ್ರಸಿದ್ಧವಾದ ಒಗಟು. (ಚಿತ್ರ ನೋಡಿ)

ಉತ್ತರಾಣಿಕಟ್ಗೆ: ನೋಡಿ– ಉತ್ತರಾಣಿಕಡ್ಡಿಯ ಸಟ್ಟ

ಉತ್ತರಾಣಿಕಡ್ಡಿಯ ಸಟ್ಟ: ಉತ್ತರಾಣಿ ಕಡ್ಡಿಯ ಪೊರಕೆ. ಕಣದಲ್ಲಿ ಈ ಪೊರಕೆಯನ್ನು ಬಳಸುತ್ತಾರೆ. ಅದನ್ನು ಪೂಜ್ಯವೆಂದು ಭಾವಿಸುತ್ತಾರೆ. ಬೇರೆ ಕಡೆ ಕಸ ಬಳಿಯಲು ಇದನ್ನು ಬಳಸುವುದಿಲ್ಲ

ಉತ್ತರಾಣಿಕಾಂಡ: ಉತ್ತರಾಣಿಗಿಡದ ಕಾಂಡ. ಇದರ ಕಾಂಡವನ್ನು ಓಮದೊಂದಿಗೆ ಜಜ್ಜಿ ತಿಂದರೆ ವಾಂತಿ ಭೇದಿ ಕಡಿಮೆಯಾಗುವುದು

ಉತ್ತರಿ ಹೊಲ: ಉತ್ತರೆ ಮಳೆಯ ಪ್ರಾರಂಭದ ಮೂರು ದಿನಗಳ ಸಮಯ. ಈ ಸಂದರ್ಭದಲ್ಲಿ ಭೂತಾಯಿ ಮುಟ್ಟಾಗಿರುತ್ತಾಳೆಂಬ ನಂಬಿಕೆಯಿಂದ ಕೃಷಿ ಕೆಲಸಗಳನ್ನು ಕೈಗೊಳ್ಳುವುದಿಲ್ಲ

ಉತ್ತರಿಹೊಲಿ ಮಳೆ: ಉತ್ತರೆ ಮಳೆಯ ಮೊದಲ ದಿನಗಳು

ಉತ್ತರೀಯ: ೧. ಉತ್ತರಿಗೆ; ಮದುಮಕ್ಕಳ ತೊಡುಗೆಯ ಮೇಲೆ ಅಡ್ಡವಾಗಿ ತೊಡಿಸುವ ವಸ್ತ್ರ (ಉಕ) ೨. ಮೇಲುಹೊದಿಕೆ; ವಲ್ಲಿ; ಶಲ್ಯ.

ಉತ್ತರೆಮಳೆ: ಉತ್ತರಾ ನಕ್ಷತ್ರದ ಮಳೆ. ಹಿಂಗಾರಿನ ಪ್ರಮುಖ ಮಳೆ. ಇದು ದೊಡ್ಡ ಪ್ರಮಾಣದಲ್ಲಿ ಸುರಿಯುವ ಮಳೆ. ಉತ್ತರೆ ಬಂದರೆ ಹುತ್ತದಗಿರದೆಲ್ಲ ಗಿಡ; ಉತ್ತರೆ ಮಳೆಗೆ ಹುಟ್ಟಿದ್ದೆಲ್ಲ ಹೊಡೆ; ಉತ್ತರೆ ಮಳೆ ಬಂದರೆ ಬಿತ್ತಿದ್ದೆಲ್ಲ ಫಲ; ಉತ್ತರೆ ಗಮ್ಮಕ್ಕೆ ಎತ್ತು ಮಡ ಬಿತ್ತು; ಉತ್ತರೆ ಮಳೆಯಾದ ಮೇಲೆ ಇನ್ಯಾತರ ಮಳೆ, ಮೊದಲಾದ ಗಾದೆಗಳು ಈ ಮಳೆಯ ಲಕ್ಷಣವನ್ನು ವ್ಯಕ್ತಪಡಿಸುತ್ತವೆ

ಉತ್ತಾರ: ವಜಾಹಾಕು; ಮುರಿದುಕೊಳ್ಳು (ಚಿತ್ರ.ಜಿ)

ಉತ್ತುತ್ತೆ/ಉತ್ತುತ್ತಿ: ಒಣ ಕರ್ಜೂರ. ರಕ್ತಪುಷ್ಟಿಮಾಡುವ ಗುಣವಿದೆ. ಇದನ್ನು ಮಡಿಲುಶಾಸ್ತ್ರಕ್ಕೆ ಹಾಗೂ ಜಾತ್ರೆಗಳಲ್ಲಿ ದೇವರ ತೇರಿನ ಮೇಲೆ ಎಸೆಯಲು ಹೆಚ್ಚಾಗಿ ಬಳಸುತ್ತಾರೆ. (ಚಿತ್ರ.ಜಿ)

ಉತ್ತುತ್ತೆಯಾಟ: ಗ್ರಾಮೀಣ ಪರಿಸರದಲ್ಲಿ ಆಡುವ ಕಬಡ್ಡಿಯಂತಹ ಆಟ. ಮಧ್ಯಗೆರೆಯ ಎರಡೂ ಕಡೆ ಆಟಗಾರರು ನಿಲ್ಲುವರು. ಸಂಖ್ಯೆಗೆ ಮಿತಿ ಇರುವುದಿಲ್ಲ. ಕಬಡ್ಡಿ ಕಬಡ್ಡಿ ಎಂದು ಹೇಳುತ್ತಾ ಆಟವಾಡುವ ಬದಲು ಉತ್ತುತ್ತುತ್ತು ಎಂದು ಉಸಿರು ಹಿಡಿದುಕೊಂಡು ಆಡುವರು (ಬೆಂಗ್ರಾ.ಜಿ)

ಉತ್ತುಬೀರ್ಲೆ ಬಳ್ಳಿ: ಒಂದು ಬಗೆಯ ಬಳ್ಳಿ

ಉತ್ತುರುಮುಖ: ದಿಕ್ಸೂಚಿ. ಗೋಡೆಯ ನೇರ ಸರಿ ಇದೆಯೋ ಇಲ್ಲವೋ ತಿಳಿಯಲು ಬಳಸುವ ಉಪಕರಣ (ಕೋಲಾ.ಜಿ)

ಉತ್ತುರುಸು/ಉತ್ರುಸು (ಕ್ರಿ): ೧. ದಾಟಿಸು; ದಡ ಸೇರಿಸು ೨. ಸಣ್ಣ ಸಣ್ಣ ಚೂರುಮಾಡು (ಮಂಡ್ಯ.ಜಿ). **ಪ್ರ:** ಸಣ್ಣಗೆ ಹೆಚ್ಚು. **ಪ್ರ:** ಈರುಳ್ಳಿ ಉತ್ರುಸ್ಕಂಬಾ

ಉತ್ತುಹೋಗು: ಚರ್ಮವ್ಯಾಧಿಯ ಅಥವಾ ಆನುವಂಶಿಕ ಕಾರಣಗಳಿಂದಾಗಿ ತಲೆಗೂದಲು ಹಾಗೂ ಮುಖದಲ್ಲಿನ ಕೂದಲು ಉದುರಿಹೋಗಿ ನುಣ್ಣಗಾಗುವಿಕೆ

ಉತ್ತೊಲ: ಉತ್ತ ಹೊಲ; ಉಳುಮೆ ಮಾಡಿದ ಹೊಲ (ಚಾಮ.ಜಿ)

ಉತ್ಥಾನ ದ್ವಾದಶಿ: ತುಳಸಿ ಹಬ್ಬ. ಹಗಲು ಉಪವಾಸ ಮಾಡುತ್ತಾರೆ. ಸಂಜೆ ಬೆಟ್ಟದನೆಲ್ಲಿಕಾಯಿಯ ಗೊಂಚಲನ್ನು ತುಳಸಿಗಿಡದ ಪಕ್ಕ ನೆಟ್ಟು ನೆಲ್ಲಿಕಾಯಿಯ ತುಪ್ಪದ ದೀಪ ಹಚ್ಚುತ್ತಾರೆ (ಮಲೆ)

ಉತ್ರಗೇಡಿ: ಅವಸರಗೇಡಿ (ಕೊಪ್ಪ.ಜಿ)

ಉತ್ರಾಕಿರಾಯ: ಉತ್ತರಕ್ರಿಯೆ. ಶವಸಂಸ್ಕಾರದ ನಂತರ ಮಾಡುವ ಕ್ರಿಯಾಕರ್ಮಗಳು (ಮಂಡ್ಯ.ಜಿ)

ಉತ್ರಾಜಿ ಓಲೆ: ಒಂದು ರೀತಿಯ ಓಲೆ; ಕಿವಿಯ ಆಭರಣ (ಶಿವ.ಜಿ)

ಉತ್ರಾಣಿಗಾಳಿ: ೧. ವಾಯುವ್ಯ ಮೂಲೆಯಿಂದ ಬೀಸುವ ಗಾಳಿ ೨. ಉತ್ತರ ದಿಕ್ಕಿನ ಗಾಳಿ. ಮೀನುಗಾರಿಕೆಗೆ ಅನುಕೂಲಕರವಾದ ಗಾಳಿ (ಉಕ.ಜಿ)

ಉತ್ರಾಣಿಬರಲು: ನೋಡಿ– ಉತ್ತರಾಣಿಕಡ್ಡಿಯ ಸಟ್ಟ

ಉತ್ರಾಸ/ಉತ್ತರಾಸ: ೧. ಮೇಲುಹೊದಿಕೆ; ಶಲ್ಯ; ಉತ್ತರೀಯ. ೨. ನಾಗಂದಿಗೆ ೩. ಬಾಗಿಲ ಮೇಲೆ ಹಾಸಿರುವ ಕಲ್ಲು ಚಪ್ಪಡಿ ಅಥವಾ ಮರದ ಹಲಗೆಗೂ ಮೇಲಿನ ಸೂರಿಗೂ ಮಧ್ಯ ಇರುವ ಸಂದು. ಇಲ್ಲಿ ದೀಪ ಇಡಬಹುದು. ಇದು ಶ್ರೇಷ್ಠವಾದುದು, ಪೂಜೆಗೆ ಅರ್ಹವಾದುದು ಎಂಬ ನಂಬಿಕೆ ಇದೆ (ಚಿಬ.ಜಿ). **ಇರೂ:** *ಬಾರ್‍ಪೊಗೆ*

ಉತ್ರುಸು: ನೋಡಿ– ಉತ್ತುರುಸು

ಉತ್ರೋಡು: ನೇಯ್ಗೆಯಲ್ಲಿ ಒಂದು ಬಗೆಯ ವಿನ್ಯಾಸ

ಉತ್ಸತ್‌ನಾರಾಯ್ಣ: ಸೂರ್ಯ (ಮಂಡ್ಯ.ಜಿ)

ಉತ್ಸವ: ೧. ಹಬ್ಬ; ಜಾತ್ರೆ; ಸಮಾರಂಭ; ೨. ಸಂಭ್ರಮ; ಸಡಗರ; ಸಂತೋಷ ೩. ಮೆರವಣಿಗೆ

ಉದಕ: ೧. ಬಸ್ಸಾರು. ಬೇಳೆಯೊಂದಿಗೆ ಸೊಪ್ಪನ್ನು ಅಥವಾ ಕಾಳುಗಳನ್ನು ಬೇಯಿಸಿ ನೀರನ್ನು ಬಸಿದು, ರುಬ್ಬಿದ ಸಾಂಬಾರು ಪದಾರ್ಥಗಳನ್ನು ಆ ನೀರಿಗೆ ಹಾಕಿ ಕುದಿಸಿ ಮಾಡಿದ ಸಾರು. ನೀರನ್ನು ಬಸಿದ ನಂತರ ಗಟ್ಟಿಯಾಗಿ ಉಳಿದ ಸೊಪ್ಪು ಬೇಳೆಗಳಿಗೆ ಒಗ್ಗರಣೆ ಹಾಕಿ ಪಲ್ಯದಂತೆ ನಂಚಿಕೊಳ್ಳುತ್ತಾರೆ. ಇದು ಬಯಲುಸೀಮೆಯವರಿಗೆ ಪ್ರಿಯವಾದ ಸಾರು (ಚಿತ್ರ.ಜಿ) ೨. ನೀರುಸಾರು ೩. ಸಾಂಬಾರು ೪. ಎಸರು ನೀರು ೫. ಉಪ್ಪಿನಕಾಯಿಯ ಜೊತೆಯಲ್ಲಿರುವ ಗಟ್ಟಿರಸ; ಮಸಾಲೆರಸ (ಹಾಸ.ಜಿ) **ಇರೂ:** ಗಸಿ (ಮೈಸೂ.ಜಿ)

ಉದಕದನೀರು: ಲಿಂಗಕ್ಕೆ ಎರೆವ ಶುದ್ಧೋದಕ

ಉದಕದಪಾವಡಿ: ಕರಡಿಗೆಯಲ್ಲಿ ಇರಿಸುವ ಮುನ್ನ ಇಷ್ಟಲಿಂಗಕ್ಕೆ ಹೊದಿಸುವ ಬಟ್ಟೆ; ಕರಡಿಗೆಯಲ್ಲಿನ ಲಿಂಗ ಅಲ್ಲಾಡದಂತೆ ಒಳಗೆ ಹಾಕುವ ವಸ್ತ್ರ. **ಇರೂ:** *ಉದುಗಿನ ಬಟ್ಟೆ; ಉದಗನ ಪವಡೆ*

ಉದಕಸ್ತಂಭ ಕೋಟೆ: ಕೋಟೆಯ ಹೊರವಲಯದಲ್ಲಿ ನೀರು ಗಿಡಮರ ಹುಲ್ಲು ಬಳ್ಳಿ ಇಲ್ಲದೆ, ಒಳಗೆ ಮಾತ್ರ ಗಿಡ ಸಸ್ಯಗಳಿಂದ ಸಮೃದ್ಧವಾಗಿರುವ ಕೋಟೆ (ಬಳ್ಳಾ.ಜಿ)

ಉದಕಾಪಾವುಡ: ಕೆಂಪು ಚೌಕಳಿಯ ಮಡಿವಸ್ತ್ರ. **ಪ್ರ:** ಐನೋರ ಪಾದಪೂಜೆ ಮಾಡಿ ಉದಕಾ ಪಾವುಡದಾಗ ಒರೆಸಿ ಹೂಬತ್ತಿ ಹಚ್ಚಿ ಹೂ ಪತ್ರಿ ಏರಿಸಿ (ದಾವ.ಜಿ)

ಉದಗನಪವಡೆ: ನೋಡಿ – ಉದಕದಪಾವಡಿ

ಉದಗಿ ಹಾರು: ಎತ್ತಿನ ಬಂಡಿಯ ಮುಂತುದಿ ಮೇಲಕ್ಕೇಳು (ಧಾರ.ಜಿ)

ಉದಡ್: ಒನಕೆಯಾಕಾರದ ಮೀನು (ದಕ.ಜಿ)

ಉದಬತ್ತಿಕುಂಡ: ಊದಿನ ಕಡ್ಡಿಗಳನ್ನು ಹಚ್ಚಿ ದೇವರ ಮುಂದೆ ಇಡುವ ಮಣ್ಣಿನ ಕುಂಡ

ಉದಬಿಂಬ: ನೀರಿನಲ್ಲಿ ಕಾಣುವ ಬಿಂಬ

ಉದಯದರ್ವೆ: ಕರಡಿಗೆಯ ಒಳಗೆ ಲಿಂಗಕ್ಕೆ ಮುಚ್ಚಿರುವ ಚಿಕ್ಕ ಬಟ್ಟೆ (ಹಾಸ.ಜಿ)

ಉದಯಮಲ್ಲಿಗೆ: ಮಲ್ಲಿಗೆಯ ಒಂದು ತಳಿ; ಎರಡು ಸುತ್ತಿನ ಎಸಳುಗಳಿರುವ ಮಲ್ಲಿಗೆ

ಉದರಬೇಳೆ: ತೊಗರಿಬೇಳೆ ಕುದಿಸಿ, ಹಸಿಖಾರ, ಒಣಕೊಬ್ಬರಿ, ಉಪ್ಪು, ಈರುಳ್ಳಿ, ಸ್ವಲ್ಪ ಹುಳಿ, ಕೊತ್ತಂಬರಿ ಹಾಕಿ ಒಗ್ಗರಣೆ ಕೊಟ್ಟು ತಯಾರಿಸಿದ ಪಲ್ಯ (ಬೆಳ.ಜಿ)

ಉದರಿಡು: ವಿಪರೀತ ಹೊಗೆಯಾಗುವಂತೆ ಮಾಡು

ಉದಲೆ: ೧. ಜೊಲ್ಲು (ದಕ.ಜಿ) ೨. ಕಾಫಿ ತೋಟವನ್ನು ಮಾಡಲು ಯೋಗ್ಯವಾದ ಅರಣ್ಯ ಪ್ರದೇಶ

ಉದವೆಹಣ್ಣು: ತಿನ್ನಬಹುದಾದ ಒಂದು ಬಗೆಯ ಹಣ್ಣು

ಉದಳ್: ೧. ಗೆದ್ದಲು ೨. ಗೆದ್ದಲು ತಿಂದಂತೆ ಕಾಣುವ, ಅಂಗಾಲನ್ನು ಬಾಧಿಸುವ ರೋಗ (ದಕ.ಜಿ)

ಉದಳ್‌ಪುಂಚ: ಏಡಿಗ್ರಂಥಿ; ಕ್ಯಾನ್ಸರ್ (ದಕ.ಜಿ)

ಉದಾನಿ: ಪ್ರಾಣಿಪಕ್ಷಿಗಳಿಗಾಗಿ ನೀರನ್ನು ತುಂಬಿಡುವ ಕಲ್ಲಿನ ಅಥವಾ ಮಣ್ಣಿನ ಅಗಲ ಬಾಯಿಯ ಪಾತ್ರೆ

ಉದಾಸಿಲು: ನೋಡಿ– ಉದಾಸ್ಲು (ತುಮ.ಜಿ)

ಉದಾಸೆ: ಉದಾಸೀನ. **ಇರೂ:** *ಉದಾಷ್ಣು*

ಉದಾಸ್ಲು/ಉದೊಸಲು: ೧. ಹೊಸ್ತಿಲು. **ಪ್ರ:** ಅವನ ಮನೆಯ ಉದೊಸಲು ತುಳಿಯುವುದಿಲ್ಲ ೨. ತಲೆಬಾಗಿಲು (ಉಕ.ಜಿ/ಕೋಲಾ.ಜಿ) ೩. ನೆಲದ ಮಟ್ಟದಿಂದ ತುಸು ಮೇಲೆದ್ದ ಹೊಸಲು (ಬೆಂಗ್ರಾ.ಜಿ).

ಉದಿ: ೧. ಅಡಕೆ ಮರ ಹತ್ತುವವ ಎರಡೂ ಕಾಲಿಗೆ ಸೇರಿದಂತೆ ಕಟ್ಟಿಕೊಳ್ಳುವ ತೆಂಗಿನ ನಾರಿನ ಅಥವಾ ಬಾಳೆಪಟ್ಟೆಯ ಹಗ್ಗ ೨. ಗುದಿ (ಮೈಸೂ.ಜಿ) ೩. ದನಗಳನ್ನು ಕೂಡಿಹಾಕುವ ಕೊಟ್ಟಿಗೆ; ದನದ ಹಟ್ಟಿ ೪. ಕುರಿಗಳ ರೊಪ್ಪ (ಬಳ್ಳಾ.ಜಿ) ೫. ಹಂಚು ೬. ಊರ ಮುಂದಿನ ಬಾಗಿಲು (ತುಮ.ಜಿ) ೭. ಮಣ್ಣಿನ ಒಡ್ಡು; ಅಡ್ಡಗಟ್ಟೆ (ಚಿಮ.ಜಿ) ೮. ಸೂರ್ಯೋದಯವಾಗು

ಉದಿ ಆಗು: ಸೂರ್ಯೋದಯವಾಗು

ಉದಿಗೆ: ಧಾನ್ಯಗಳನ್ನು ತೂರುವಾಗ ನಿಲ್ಲಲು ಮಾಡಿದ ಅಟ್ಟಣಿಗೆ. **ಇರೂ:** *ಉದ್ದಿನ್ಮರ*

ಉದಿಪಟ್ಲು: ನಾಟಿಗಾಗಿ ಸಸಿಗಳನ್ನು ಬೆಳೆಸುವ ಸ್ಥಳ; ಒಟ್ಟಲು ಪಾತಿ (ಮೈಸೂ.ಜಿ) ಒಟ್ಲುಗದ್ದೆ; ಸಸಿಮಡಿ

ಉದಿಪು: ಉದಯ (ದಕ.ಜಿ)

ಉದಿಬಾಗಿಲು: ಪ್ರವೇಶ ದ್ವಾರ; ಹಟ್ಟಿ, ಊರು ಪ್ರವೇಶಿಸುವ ಮುಖ್ಯಬಾಗಿಲು (ಚಿತ್ರ.ಜಿ)

ಉದಿಮಣೆಗೂಟ: ಕಣದಲ್ಲಿ ಧಾನ್ಯ ತೂರಲು ಮಾಡಿಕೊಂಡ ಅಟ್ಟಣಿಗೆಯ ಕಾಲು (ತುಮ.ಜಿ)

ಉದಿಲಿ ನಡಿ: ಸೆಡೆದು ನಡಿ

ಉದುಗಿನ ಬಟ್ಟೆ: ನೋಡಿ– ಉದಕದ ಪಾವಡಿ

ಉದುಗು: ಹುದುಗು; ಒಂದು ರಾತ್ರಿ ರುಬ್ಬಿಟ್ಟ ದೋಸೆ ಅಥವಾ ಇಡ್ಲಿ ಹಿಟ್ಟು ಬೆಳಗಾಗುವ ಹೊತ್ತಿಗೆ ಉಬ್ಬುವುದು; ಹುಳಿ ಬರುವುದು; (ದಕ)

ಉದುಗೆ: ಏತದಲ್ಲಿ ಬಳಸುವ ಉದ್ದವಾದ ಮರ (ಶಿವ.ಜಿ)

ಉದುದುಂಡು: ಪ್ರಾಣಿಗಳ ಹೊಟ್ಟೆ ಉಬ್ಬುವ ರೋಗ (ಶಿವ.ಜಿ)

ಉದುರಗಸ: ಉದುರು ಕಸ; ದನದ ಹಕ್ಕೆಯಲ್ಲಿರುವ ಕಸ

ಉದುರನ್ನ: ಗಂಜಿ ಬಸಿದು ಉದುರಾಗಿ ಮಾಡಿದ ಅನ್ನ; ಅಗುಳು ಬಿಡಿ ಬಿಡಿಯಾಗಿರುವಂತಹ ಅನ್ನ.

ಉದುರಾಕ್ಷಿ: ರುದ್ರಾಕ್ಷಿ

ಉದುರಿಗೆ ಹಿಟ್ಟು: ಮಲೆನಾಡಿನ ಒಂದು ಬಗೆಯ ಕಡುಬು (ಚಿಬ.ಜಿ)

ಉದುರಿಬೂರು: ನೋಡಿ– ಉದ್ರಿಬೂರು

ಉದುರು: (ಕ್ರಿ) ೧. ಮರ ಅಥವಾ ಗಿಡಗಳಿಂದ ಎಲೆ, ಹೂವು, ಕಾಯಿಗಳು ಕಳಚಿಬೀಳುವುದು (ನಾ) ೨. ಬಿಡಿ ಬಿಡಿಯಾಗಿರುವುದು. **ನೋಡಿ–** ಉದುರನ್ನ

ಉದುರುಗಾಯಿ: ೧. ಪಕ್ವಗೊಂಡು ತನ್ನಿಂದ ತಾನೇ ಗಿಡದಿಂದ ಬೀಳುವ ತೆಂಗಿನಕಾಯಿ ೨. ಮಳೆಗೋ ಬಿರುಗಾಳಿಗೋ ಸಿಕ್ಕಿ ಬಲಿಯುವ ಮೊದಲೇ ಉದುರಿಹೋಗುವ ಹೀಚುಗಾಯಿ ೩. ಅಡಿಕೆ ಕೊಯ್ಲು

ಮುಗಿದ ನಂತರ ಮರದಲ್ಲಿ ಉಳಿದ ಉದುರುವ ಕಾಯಿ (ಚಿಬ.ಜಿ)

ಉದುರುಮಣ್ಣು: ಬಿಡಿ ಬಿಡಿಯಾದ ಮಣ್ಣು (ದಕ.ಜಿ)

ಉದುರುಮಲ್ಲಿಗಿ: ತುಂಬ ಬಿರಿದು ತಾನೇ ನೆಲಕ್ಕೆ ಉದುರಿದ ಮಲ್ಲಿಗೆ ಹೂವು

ಉದುರುರೊಟ್ಟಿ: ಹಾಲು ಅಥವಾ ನೀರಿನಲ್ಲಿ ಹಿಟ್ಟನ್ನು ಕಲಸಿ, ಬೆಣ್ಣೆ, ಉಪ್ಪು ಹಾಕಿ ಕಿವುಚಿ ಮುಚ್ಚಿ ಬೇಯಿಸಿದ ರೊಟ್ಟಿ (ಬಳ್ಳಾ.ಜಿ)

ಉದುರುಸೇವಿಗೆ: ಸೇವಿಗೆಯ ಒಂದು ಬಗೆಯ ತಿನಿಸು

ಉದುಲು: ೧. ಕೆಸರಿನ ಹೊಂಡ; ಉಬ್ಬಲು ೨. ಊದುವಿಕೆ

ಉದೆ ಮನೆ: ವಾಸದ ಮನೆ (ಶಿವ.ಜಿ)

ಉದೇದ್‌ಮರ: ಕೃಷಿ ಉಪಕರಣಗಳ ತಯಾರಿಕೆಗೆ ಬಳಸುವ ಒಂದು ಜಾತಿಯ ಮರ

ಉದೇವು: ೧. ಕಾಲುವೆ ೨. ಎರಡು ಹೊಲಗಳ ಮಧ್ಯದ ಮೇರೆ

ಉದ್ಗಿ ಕದ್ರಿ: ಗಾಡಿಯ ಉದ್ಗಿಯ ಮುಂಭಾಗ (ಉಕ.ಜಿ)

ಉದ್ಗು: ೧. ಮುಂದಾಗು ೨. ಅವಸರಿಸು ೩. ಒದಗು; ಅಗತ್ಯಕ್ಕಿಂತ ಹೆಚ್ಚಾಗು. **ಪ್ರ:** ಈ ಅಕ್ಕಿ ಅನ್ನ ಬಾಳ್ ಉದ್ಗತಿತ್

ಉದ್ಗೆ: ೧. ದಿಂಡಿಗೆ ಉದ್ದವಾಗಿ ಜೋಡಿಸಿದ ಕಟ್ಟಿಗೆ ೨. ಎತ್ತಿನ ಬಂಡಿಯ ಮಧ್ಯದಲ್ಲಿ ಇರುವ ಪ್ರಧಾನವಾದ ಚೌಕಾಕಾರದ ಕಟ್ಟಿಗೆ; ಗಾಡಿಯ ಮೂಕಿ (ಉಕ.ಜಿ) ೩. ಕೂರಿಗೆ ತೋಳಿಗೆ ಜೋಡಿಸಿದ ಉದ್ದನೆಯ ಮರದ ಕಟ್ಟಿಗೆ ೪. ಏತದಲ್ಲಿ ಬಳಸುವ ಉದ್ದವಾದ ಮರ ೫. ನಾಲ್ಕು ಕಾಲಿನ ಅಟ್ಟಣಿಗೆ (ಶಿವ.ಜಿ). ಇರೂ: *ಉದಿಗೆ ಉದ್ದಿಗಿ, ಉದ್ದಗಿ, ಉದ್ದುಗೆ, ಉದ್ದಿಗೆ*

ಉದ್ಗೆಕಾಲುವೆ: ಹೊಳೆಯ ದಡದಿಂದ ಹೊಲದವರೆಗೆ ಮರಳಿನಲ್ಲಿ ತೋಡಲ್ಪಟ್ಟ ಕಾಲುವೆ. **ಇರೂ:** *ಉಸುಕು ಕಾಲುವೆ*

ಉದ್ದ ಉನ್ನಿ: ಮುನ್ನೂರು ಎಳೆಗಳುಳ್ಳ ಮಗ್ಗದ ಹಾಸು

ಉದ್ದಂಟೆ: ಉದ್ದಟೆ; ಸೊಕ್ಕಿನವಳು (ಧಾರ.ಜಿ)

ಉದ್ದಂಡ: ೧. ಕಟ್ಟುಮಸ್ತಾದ ದೊಡ್ಡ ಆಳು ೨. ಪ್ರಬಲವಾದ ೩. ದೀರ್ಘದಂಡ ನಮಸ್ಕಾರ ೪. ಗೋಕರ್ಣ ಮಂಡಳದ ಕಿರಿಯ ಗ್ರಾಮದೇವತೆಗಳಲ್ಲೊಬ್ಬ. ಗೋಕರ್ಣದಲ್ಲಿ ಈತ ಅಮ್ಮನವರ ಅನುಚಾರಕರಲ್ಲಿ ಒಬ್ಬ. ದೃಷ್ಟಿದೋಷ ನಿವಾರಣೆಗಾಗಿ ಪೂಜಿಸಲ್ಪಡುವ ದೈವ (ಉಕ.ಜಿ)

ಉದ್ದಂಡಿ: ಕರಿಭಂಟನ ಕಾಳಗ ಎಂಬ ಯಕ್ಷಗಾನದ ಕಥೆಯ ರಾಕ್ಷಸಿಯ ಹೆಸರು. ಕರಿಭಂಟನನ್ನು ಕೊಂದು ಕೊನೆಯಲ್ಲಿ ಶಿವಪಾರ್ವತಿಯರಿಂದ ಹತಳಾದವಳು (ಧಾರ.ಜಿ)

ಉದ್ದಂಡಿ ಕಿರೀಟ: ರಕ್ಕಸಿಯ ಕಿರೀಟ; ಮುಡಿ

ಉದ್ದಕಣ್‌ಸಾಲಿ: ಉದ್ದಿನ ಕಣ್ಣಿನ ಸೀರೆ

ಉದ್ದಗಾಳ್‌ಜಿಗೆ: ಜಡೆಗೆ ಉದ್ದವಾಗಿ ಹಾಕಿಕೊಳ್ಳುವ ಆಭರಣ (ಶಿವ.ಜಿ) **ನೋಡಿ–** ಉದ್ದಗ್ಯಾಜಿಗೆ

ಉದ್ದಗಿ: ಬಂಡಿಯನ್ನು ಎಳೆಯುವ ಉದ್ದವಾದ ಕಟ್ಟಿಗೆ (ಧಾರ.ಜಿ) **ನೋಡಿ–** ಉದ್ಗೆ

ಉದ್ದಗ್ಗರಾಶಿ: ಉದ್ದಕ್ಕೆ ಇರುವ ರಾಶಿ

ಉದ್ದಗ್ಯಾಜಿಗೆ: ಉದ್ದಕೇದಿಗೆ. ಜಡೆಯ ಉದ್ದಕ್ಕೂ ಧರಿಸುವ ಹಿಂತಲೆಯ ಆಭರಣ (ಬೆಂಗ್ರಾ.ಜಿ)

ಉದ್ದನಾಮ: ವೈಷ್ಣವ ಪಂಗಡದವರು ಹಣೆಯಲ್ಲಿ ಧರಿಸುವ ಚಿಹ್ನೆ (ಬೆಂಗ.ಜಿ)

ಉದ್ದನ್ಕಾಯ್ತೋರ: ಉದ್ದಿನ ಕಾಯಿಯಷ್ಟು ದಪ್ಪ

ಉದ್ದನ್ನಕೋಡು: ಎದ್ದು ಕಾಣುವ ವ್ಯಕ್ತಿ

ಉದ್ದನ್ಮರ: ಉದಿಮಣೆ; ಕಣದಲ್ಲಿ ಧಾನ್ಯ ತೂರಲು ಎತ್ತರವಾಗಿ ಮಾಡಿಕೊಂಡ ಅಟ್ಟಣಿಗೆ (ಕೋಲಾ.ಜಿ)

ಉದ್ದಬೊಟ್ಟು: ಸ್ತ್ರೀವೇಷಗಳು ಹಣೆಯಲ್ಲಿ ಇಡುವ ನಾಮ; ತಿಲಕ; ಸಾಂಪ್ರದಾಯಿಕ ಸ್ತ್ರೀ ವೇಷದ ಹಣೆಯ ಬೊಟ್ಟು

ಉದ್ದಮುಕ್ತಾಯ: ಪದ್ಯದ ಮೊದಲ ಚರಣ ಅಥವಾ ಚರಣ ಭಾಗ ಆದೊಡನೆ ನೀಡುವ ಬಿಡುವು; ಪೂರ್ತಿಮುಕ್ತಾಯ **ನೋಡಿ–** ಬಿಡ್ತಿ

ಉದ್ದಮೋಡ: ಉತ್ತರ ದಕ್ಷಿಣವಾಗಿ ಚಲಿಸುವ ಮೋಡ

ಉದ್ದವ್ವ: ಸ್ತ್ರೀದೇವತೆ (ಬಾಗ.ಜಿ)

ಉದ್ದಾನಈರಭದ್ರ: ಹಂಪೆಯ ವೀರಭದ್ರನಂತೆ ಅಸಾಮಾನ್ಯ ಎತ್ತರದವನು (ಬಳ್ಳಾ.ಜಿ)

ಉದ್ದಾನುಂಡಲಿಗೆ: ಉದ್ದಿನಕಾಳಿನಿಂದ ಮಾಡಿದ ತಿನಿಸು

ಉದ್ದಾಬಲನ: ಎಡವಟ್ಟು ಸ್ವಭಾವದವನು

ಉದ್ದಾಮ: ಮುಂಗೋಪಿ

ಉದ್ದಿ: ೧. ಗದ್ದೆಯ ಎತ್ತರದ ಪ್ರದೇಶ; ತಿಟ್ಟು ೨. ಹೊಲಗಳಲ್ಲಿ ನೀರು ಹರಿದು ಹೋಗದಂತೆ ಕಟ್ಟುವ ಮಣ್ಣಿನ ದಿಬ್ಬ. **ಇರೂ:** *ಉಜ್ಜಿ*

ಉದ್ದಿಗಿ: ಕುಂಟೆ ಎಳೆಯಲು ಸಹಾಯವಾಗುವಂತೆ ಕುಂಟೆಗೆ ಜೋಡಿಸಿರುವ ಉದ್ದನೆಯ ಬೊಂಬಿನ ಕಟ್ಟಿಗೆ (ರಾಯ.ಜಿ)

ಉದ್ದಿಗಿಡ: ಮುರಿದ ಮೂಳೆಯನ್ನು ಕೂಡಿಸುವ ಗುಣವುಳ್ಳ ಒಂದು ಔಷಧೀಸಸ್ಯ (ಚಾಮ.ಜಿ)

ಉದ್ದಿಗೆ: ಗಾಡಿಯ ತೊಟ್ಟಿಲಿನ ಅಡಿಯಲ್ಲಿರುವ ಉದ್ದ ಮರದ ತುಂಡು

ಉದ್ದಿಜಾತ್ರೆ: ಹಾಸನ ಜಿಲ್ಲೆ ಸಕಲೇಶಪುರ ತಾಲ್ಲೂಕು ಹಾನುಬಾಳು ಗ್ರಾಮದ ಉದ್ದಿನಗುಡ್ಡದಲ್ಲಿ ನಡೆಯುವ ಜಾತ್ರೆ ಇದು ಗುಂಡಬ್ರಹ್ಮ ದೇವರಿಗೆ ಸಂಬಂಧಿಸಿದ ಜಾತ್ರೆ

ಉದ್ದಿನ ಜಾನ್ಸಕ್ರೆ: ಉದ್ದಿನಬೇಳೆ, ಉಪ್ಪು ಅರೆದು, ಎಣ್ಣೆ ಅಥವಾ ತುಪ್ಪದಲ್ಲಿ ಕರಿದು ಸಕ್ಕರೆಪಾಕ ಸೇರಿಸಿ ಮಾಡಿದ ಸಿಹಿ ತಿನಿಸು (ಉಕ)

ಉದ್ದಿನಕಡುಬು: ಉದ್ದಿನಬೇಳೆ, ಕಡ್ಲೆಬೇಳೆ, ಹೆಸರುಬೇಳೆ, ಅಕ್ಕಿತರಿ ರುಬ್ಬಿ ಸ್ವಲ್ಪ ಶುಂಠಿ, ಕಾಯಿಚೂರು, ಮೆಣಸಿನಕಾಳು ರುಚಿಗೆ ಉಪ್ಪು ಸೇರಿಸಿ ಮಾಡುವ ಕಡುಬು (ಮೈಸೂ.ಜಿ)

ಉದ್ದಿನಮೂಟೆ ಆಟ: ಮಕ್ಕಳು ತಮ್ಮ ಕೈಹಿಡಿಯನ್ನು ಒಂದರ ಮೇಲೊಂದು ಇಟ್ಟು ಆಡುವ ಆಟ. ಒಂದು ಬಗೆಯ ಒಳಾಂಗಣ ಆಟ (ಮೈಸೂ.ಜಿ)

ಉದ್ದೀಕೇಲು: ಬಂಡಿಯು ಉದ್ದಿಗೆಗಳು ಕದಲದೆ ಭದ್ರವಾಗಿರುವಂತೆ ಜಡಿಯುವ ಆರೇಳು ಅಂಗುಲ ಉದ್ದದ ಕಟ್ಟಿಗೆಯ ಬೆಣೆಗಳು

ಉದ್ದು: (ನಾ) ೧. ಒಂದು ದ್ವಿದಳ ಧಾನ್ಯ (ಕ್ರಿ) ೨. ಹಚ್ಚು; ಸವರು; ಉಜ್ಜು; ಲೇಪಿಸು (ಬೆಂಗ್ರಾ.ಜಿ) ೩. ಒರೆಸು (ಉಕ.ಜಿ). **ಇರೂ:** *ಉದ್ದುಗು (ಉಕ)*

ಉದ್ದುಕೊಯ್ಡ್: ಉಜ್ಜುವ ಕೊರಡು; ಮರವನ್ನು ನಯಮಾಡುವ ಸಲಕರಣೆ; ಕೀಸುಳಿ (ದಕ.ಜಿ)

ಉದ್ದುಗುಣಿ: ಶವವನ್ನು ಹೂಳುವ ಒಂದು ವಿಧಾನ. **ಪ್ರ:** ಅಡ್ಡಗುಣಿಲಿ ಹಾಕಿ ಉದ್ದುಗುಣೀಲಿ ಎಳೆ

ಉದ್ದುಗ್ಗು: ಉದ್ದು ಪರ್ರು; ಉದ್ದಿನ ಬೇಳೆ (ಕೋಲಾ.ಜಿ)

ಉದ್ದುದ್ದಹೇಳು: ಆಡಂಬರ ತೋರಿಸು; ಒಣಜಂಭ ಮಾಡು

ಉದ್ದುನ್ಸರಿ: ಉದ್ದಿನ ಸರಿ. ಮಕ್ಕಳು ಮತ್ತು ಬಾಣಂತಿಯರಿಗಾಗಿ ಉದ್ದಿನಿಂದ ಮಾಡುವ ಒಂದು ಬಗೆಯ ಪೌಷ್ಟಿಕ ತಿನಿಸು (ಮಂಡ್ಯ.ಜಿ)

ಉದ್ದುಬೂಸಣ್ಕೆ: ಸಮತೋಲನದ ಉದ್ದಗಾತ್ರಗಳು

ಉದ್ದುಮಾನ: ಊರುಕೇರಿ; ಮನೆಮಠ

ಉದ್ದುರುಟು: ಒರಟು; ಅಸಭ್ಯ ಮಾತು

ಉದ್ದುರುಳೊ ಹೊತ್ನಲ್ಲಿ ಬರು: ವೇಗವಾಗಿ ಬರು; ಬೇಗ ಬರುವಿಕೆ

ಉದ್ದುವಾಡೆ: ಉದ್ದವಾಗಿರುವ ಮಣ್ಣಿನ ದೊಡ್ಡ ಮಡಕೆ

ಉದ್ದೋಜಿ: ಉದ್ದನೆಯ ಆಳು (ಬಳ್ಳಾ.ಜಿ)

ಉದ್ಧರಣೆಪಾತ್ರೆ: ಸಂಧ್ಯಾವಂದನೆಗೆ ಬಳಸುವ ನೀರಿನ ಪಾತ್ರೆ (ಉಕ.ಜಿ)

ಉದ್ಧರಣೆಪಟಲ: ನಂದಿಪಟಲ; ಜನಪದರು ಕಾಗದದ ಮೇಲೆ ಸಿಂಹ, ಜಿಂಕೆ, ಚಿಗರೆ, ಹಾವು, ಮೀನು, ಕಪ್ಪೆ, ಬಳ್ಳಿಯಾಕಾರದ ಚಿತ್ರಗಳನ್ನು ರಚಿಸುವ ವಿಶಿಷ್ಟ ಕಲೆ (ಗುಲ್ಬ.ಜಿ)

ಉದ್ನಕ್ಕ ತೋಪು: ಉದ್ದು ಬಿತ್ತುವ ಸ್ಥಳ

ಉದ್ಭವಮೂರ್ತಿ: ತಾನೇ ತಾನಾಗಿ ಮೂಡಿರುವ ದೇವತಾ ಮೂರ್ತಿ

ಉದ್ಭವಲಿಂಗ: ತಾನೇ ತಾನಾಗಿ ಮೂಡಿರುವ ಲಿಂಗ

ಉದ್ಮಾನ: ೧. ಗೊಲ್ಲರಹಟ್ಟಿ ೨. ಊರಹೊರಗೆ ೩. ಪಾರಿ ಬೇಲಿ ಹಾಕಿದ ಹಟ್ಟಿ

ಉದ್ಯ: ಉದಿಪನ; ಜನನ (ದಕ.ಜಿ)

ಉದ್ಯಾ: ಉದಯ; ಪೂರ್ವ (ಬೀದ.ಜಿ)

ಉದ್ಯಾಪ್ತಿ: ಉದ್ಯಾಪನೆ; ಸಮಾಪ್ತಿ. ಯಾವುದೇ ವ್ರತವನ್ನು ನಿರ್ದಿಷ್ಟ ವರ್ಷಗಳವರೆಗೆ ತಪ್ಪದೆ ಆಚರಿಸಿದ ನಂತರ ವೈದಿಕ ದಂಪತಿಗಳಿಗೆ ಪೂಜೆ ಸನ್ಮಾನ ಮಾಡಿ ಮೊರದ ಬಾಗಿನ ಕೊಟ್ಟು ಅನ್ನ ಸಂತರ್ಪಣೆ ಮಾಡಿ ವ್ರತ ಪೂರ್ಣಗೊಳಿಸುವುದು (ಧಾರ.ಜಿ)

ಉದ್ಯಾವಾಲ: ಪೂರ್ವದಿಕ್ಕು (ಬೀದ.ಜಿ)

ಉದ್ರ: ಅತಿಯಾದ ಹೊಗೆ (ತುಮ.ಜಿ)

ಉದ್ರಂಡಿ: ಒಂದು ದೈವದ ಹೆಸರು (ದಕ.ಜಿ)

ಉದ್ರಬೇಟೆ: ಬುಡ್ಗ ಜಂಗಮರ ಬೇಟೆಯ ಒಂದು ಪ್ರಕಾರ

ಉದ್ರಸ್ತಿ/ಉದ್ರಿಸಿ: ರುದ್ರಾಕ್ಷಿ (ಉಕ.ಜಿ)

ಉದ್ರಾಮು: ದೈವ, ದೇವಸ್ಥಾನಗಳಲ್ಲಿ ನೈವೇದ್ಯ ಬೇಯಿಸುವ ಹೆಂಗಸು (ದಕ.ಜಿ)

ಉದ್ರಿ: ಉದ್ದರಿ; ಅಂಗಡಿಯಲ್ಲಿ ವಸ್ತುಗಳನ್ನು ಸಾಲವಾಗಿ ಪಡೆಯುವಿಕೆ. **ಪ್ರ:** ಪಂಚೇಳು ಜ್ವಾಳಾ ಉದ್ದಿ ತಂದೀನಿ (ಉಕ)

ಉದ್ರಿಕೋಲು: ಕೋಲಾಟದ ಒಂದು ಬಗೆ (ಮಂಡ್ಯ.ಜಿ)

ಉದ್ರಿಬೂರು: *ಅಸ್ಪರಾಗಸ್ ರೇಸಿಮೋಸಸ್:* ಶತಾವರಿ ಸಸ್ಯದ ಬೇರು. ಮೈಯಲ್ಲಿ ಸಣ್ಣ ಸಣ್ಣ ಕಜ್ಜಿಗಳಾದಾಗ ಅಥವಾ ದೇಹ ತಂಪಿಗಾಗಿ ಇದರ ಗಂಜಿ ಮಾಡಿ ಕೊಡಲಾಗುತ್ತದೆ (ದಕ.ಜಿ)

ಉದ್ರುಬಳಿ: ಒಂದು ಆಭರಣ

ಉದ್ಲು: ದೇಹದ ಅಂಗಗಳಿಗೆ ಪೆಟ್ಟಾದಾಗ ಊದಿಕೊಂಡ ಭಾಗ; ಊದಲು (ಮೈಸೂ.ಜಿ/ಚಾಮ.ಜಿ)

ಉದ್ವಾಹ: ಮದುವೆ (ಶಿವ.ಜಿ)

ಉಧೋ: ವಿಶೇಷವಾಗಿ ಎಲ್ಲಮ್ಮನನ್ನು ಸ್ತುತಿ ಮಾಡುವ ಉದ್ಗಾರದ ಮಾತು (ಧಾರ.ಜಿ)

ಉಧೋ ಉಧೋ: ೧. ಜಯಘೋಷ ೨. ಘಟಸ್ಥಾಪನೆಯ ಸಮಯದಲ್ಲಿ ದೇವಿ ಅಂಬಾಬಾಯಿಯ ಹೆಸರಿನಲ್ಲಿ ಉಘ್ಘಡಿಸುವುದು (ಗುಲ್ಬ.ಜಿ)

ಉನಾರೆ: ಉಪೇಕ್ಷೆ

ಉನಾಲ: ದಪ್ಪನೆಯ ದಾರ

ಉನಿ: ನೆನೆ; ತೋಯು; ಒದ್ದೆಯಾಗು. **ಪ್ರ:** ಮೂಟೇಲಿದ್ದ ಅಕ್ಕಿ ನೀರು ಬಿದ್ದು ಉಂತೋಗುಬುಟ್ಟದೆ

ಉನಿಹಾಕು/ಉನೆಹಾಕು/ಉನೆಹಕ್ಕು (ಕ್ರಿ): ಅಕ್ಕಿ, ಕಡಲೆ, ಹೆಸರು ಇತ್ಯಾದಿ ಕಾಳುಗಳನ್ನು ನೀರಿನಲ್ಲಿ ನೆನೆಹಾಕು. **ಪ್ರ:** ದೋಸೆಗೆ ಅಕ್ಕಿ ಉನಿಹಾಕಿದೆ, ಆಡಿಸಬೇಕು

ಉನುಗಲು: **ನೋಡಿ–** ಉಣುಗೋಲು (ಹಾಸ.ಜಿ)

ಉನ್ಕಿ: ಅಂಟು ಅಥವಾ ಮೀನಸರಿ ಹಚ್ಚಿದ ಹಾಸಿನ ಎಳೆಗಳು

ಉನ್ಕಿಕೋಲು: ಉನ್ಕಿಯನ್ನು ಎಳೆಗಳಾಗಿ ಬಿಡಿಸಲು ಬಡಿಯುವ ಮರದ ಕೋಲು; ಉನ್ಕಿಯ ನಡುವೆ ತೂರಿಸಿರುವ ಕೋಲು

ಉನ್ಕಿಲಡ್ಡು: ಅಂಟು ಲೇಪಿಸಿದ ಹಾಸಿನ ಉಂಡೆ

ಉನ್ನಿ: **ಉಣ್ಣೆ;** ರಾಸುಗಳ ಮೈಯ ರಕ್ತ ಹೀರುವ ಕ್ರಿಮಿ (ಶಿವ.ಜಿ)

ಉನ್ನಿಕೂಳು ಎರಚೋದು: ಉಣ್ಣೆಕೂಳು ಎರಚುವುದು; ದನಗಳಿಗೆ ಉಣ್ಣೆಕಾಟ ಬರದಿರಲೆಂದು, ಸಂಕ್ರಾಂತಿಯಂದು ಅನ್ನಕ್ಕೆ ಅವುಗಳ ಮೈಯಲ್ಲಿರುವ ಉಣ್ಣೆಗಳನ್ನು ಬೆರಸಿ ಭೂಮಿಗೆ ಚೆಲ್ಲುವುದು (ಮೈಸೂ.ಜಿ)

ಉನ್ನಿಕೋಟೆದೇವತೆ: ಸಂಕ್ರಾಂತಿ ಹಬ್ಬದಲ್ಲಿ ಕಿಚ್ಚು ಹಾಯಿಸುವಾಗ ಪೂಜಿಸುವ ಎರಡು ದೈವಗಳು. ಶಿವಾಚಾರ ನಗರ್ತರ ಒಂದು ಸಂಪ್ರದಾಯ. ಸಂಕ್ರಾಂತಿ ಸಂಜೆ ಊರಿನ ಮುಂದೆ ದನಕರುಗಳು ಶೃಂಗಾರಗೊಂಡು ಬಂದಾಗ ಊರಿನ ಹಿರಿಯರು ಮೂರು ನಾಲ್ಕು ಅಡಿ ಅಗಲ ಏಳು ಎಂಟು ಅಡಿ ಉದ್ದ ಹುಲ್ಲನ್ನು ಜೋಡಿಸಿ ಅದರ ಪಕ್ಕದಲ್ಲಿ ಉನ್ನಿಕೋಟೆದೇವರ ಎರಡು ಗುಡಿಗಳನ್ನು ಮಾಡುತ್ತಾರೆ. ಈ ದೇವರಿಗೆ ಹರಳೆಣ್ಣೆ ದೀಪಹಚ್ಚಿ ಉನ್ನಿರೊಟ್ಟಿ ನೈವೇದ್ಯ ಮಾಡುತ್ತಾರೆ

ಉನ್ನಿನಿ: ಚೆನ್ನೆಮಣೆ ಆಟದಲ್ಲಿ ಕಾಯಿಗಳು ದೊರೆಯುವುದು (ದಕ.ಜಿ)

ಉನ್ಮಕ್ಲು: ೧. ಒಡೆಯ ೨. ಒಂದು ದೈವದ ಹೆಸರು

ಉನ್ಮನಿ: ೧. ಯೋಗಿಯ ಒಂದು ಅವಸ್ಥೆ (ರಾಯ.ಜಿ) ೨. ಬಯಕೆಯುಳ್ಳ (ದಕ.ಜಿ) ೩. ಬೆಳಕು ೪. ಆರತಿ ೫. ಪರಮಾತ್ಮ (ಧಾರ.ಜಿ) ೬. ಅರಳಿದ್ದು (ಬೀದ.ಜಿ)

ಉಪಗಡಲಿ: ಉಪ್ಪುಗಡಲೆ; ಕಡಲೆಕಾಳಿನ ಗುಗ್ಗರಿ. ಕಡಲೆಕಾಳನ್ನು ಬೇಯಿಸಿ ಅದಕ್ಕೆ ಉಪ್ಪು ಹಾಕಿ ತಿನ್ನುವರು. ಉಪಗಡಲಿ ಮಾಡಿ ಮಾರಾಟವನ್ನೂ ಮಾಡುತ್ತಾರೆ (ಶಿವ.ಜಿ)

ಉಪಗಾರಣೆ: ಉಪಕರಣಗಳು; ದೇವರ ಪೂಜೆಯ ಸಾಮುಗ್ರಿಗಳು (ಧಾರ.ಜಿ)

ಉಪಟಣ: ಉಪಟಳ; ಕಿರುಕುಳ

ಉಪತಂತ್ರ: ತಿರುಗುಮಾತು; ಪ್ರತಿತಂತ್ರ

ಉಪರಗಿ: ಉಪ್ಪರಿಗೆ; ಮಹಡಿ (ಶಿವ.ಜಿ)

ಉಪರತಿ: ಬಿಡುವು; ವಿರಾಮ

ಉಪರಾಜಿವಣ: ಹೇಳಿದ ಕೆಲಸಕ್ಕೆ ವ್ಯತಿರಿಕ್ತ (ಧಾರ.ಜಿ)

ಉಪರಾಟಿ: ೧. ಮಿತಿ ಮೀರಿದ; ಮೈಮೇಲೆ ಬರುವ (ಉಕ.ಜಿ) ೨. ನೂಲನ್ನು ಹುರಿಮಾಡಲು ರಾಟೆಯ ದಾರವನ್ನು ತಿರುಗಿಸಿ ಅರೇಬಿಕ್ ಅಂಕಿ ಎಂಟನ್ನು ಹೋಲುವಂತೆ ಹಾಕಿಕೊಳ್ಳುವುದು; ಉಪರಾಟೆ. **ಪ್ರ:** ಎಲ್ಲಾ ಉಪರಾಟಿ ತಿಪರಾಟಿ ಆಗೇತಿ

ಉಪಾಯನ: ಬಾಗಿಲು (ಮಲೆ)

ಉಪಾರ: ೧. ಉಪಾಹಾರ ೨. ಮಡೆ; ಗ್ರಾಮದೇವತೆಗೆ ಸಲ್ಲಿಸುವ ಉಪಾಹಾರ; ಗ್ರಾಮದೇವತೆಗೆ ಪ್ರಿಯವಾದ ಅನ್ನ ಗುಗ್ಗರಿ ಇತ್ಯಾದಿಗಳ ಅರ್ಪಣೆ (ಬೆಂಗ್ರಾ.ಜಿ)

ಉಪಾರತಿ: ಉಪ ಆರತಿ; ದೃಷ್ಟಿ ಪರಿಹಾರಕ್ಕಾಗಿ ಮಾಡುವ ಆರತಿ

ಉಪ್ಕಂಡ: ಉಪ್ಪುಸವರಿ ಒಣಗಿಸಿದ ಮಾಂಸದ ತುಂಡು (ಮಂಡ್ಯ.ಜಿ)

ಉಪ್ಕಳುರ: ಉಪ್ಪು ಮಣ್ಣು (ಮೈಸೂ.ಜಿ); ಚೌಳುಮಣ್ಣು

ಉಪ್ಗರ್ಳು: ಉಪ್ಪುಕರಲು; ಬೆಳೆ ಸರಿಯಾಗಿ ಬರದ ಭೂಮಿ (ಮೈಸೂ.ಜಿ)

ಉಪ್ಚಲ್ಪ: ನೋಡಿ– ಉಪ್ಪುಚಲ್ಪ

ಉಪ್‌ಜೊಂಡು: ಒಂದು ವಿಧದ ಕಳೆ

ಉಪ್ತಿ: ಒಂದು ಬಗೆಯ ಕರಿಹುಳು (ರಾಮ.ಜಿ). ***ಇರೂ:*** *ಉಪತಿ*

ಉಪ್ನಮರ್ಗಿ: ಉಪ್ಪಿನ ಮರಿಗೆ; ಉಪ್ಪನ್ನು ಇಡಲು ಬಳಸುವ ಮರದ ಸಾಧನ (ಉಕ.ಜಿ)

ಉಪ್ನೀರು: ಉಪ್ಪು ನೀರು. ತರಕಾರಿ ಕಾಳುಗಳು ಸೊಪ್ಪುಗಳನ್ನು ಬೇಯಿಸಿ ಮೇಲಿನ ತಿಳಿ ಬಗ್ಗಿಸಿ ಮಾಡಿದ ಸಾರು; ಬಸ್ಸಾರು (ಕೋಲಾ.ಜಿ). ***ಇರೂ:*** *ಉಪ್ನೀರು ಸಾರು*

ಉಪ್ಪಂಗ: ಒಂದು ಬಗೆಯ ಚರ್ಮವಾದ್ಯ (ಬಳ್ಳಾ.ಜಿ)

ಉಪ್ಪಂಗಿ: ಉಪ್ಪಾಗೆ; ಸಾಂಬಾರ ಹುಳಿಗಾಗಿ ಹಾಗೂ ಮದ್ಯ ತಯಾರಿಸಲು ಬಳಸುವ ಕಾಯಿ (ಉಕ.ಜಿ)

ಉಪ್ಪಕ್ಕಿ ಇಡುವುದು: ಗೌರಿ ಗಣೇಶರನ್ನು ಬಿಡುವಾಗ, ಗೌರಿಯ ಮುಂದೆ ಒಂದು ತಟ್ಟೆಯಲ್ಲಿ ಉಪ್ಪಕ್ಕಿ ಇಡಲಾಗುತ್ತದೆ. ಒಂದು ಮುಷ್ಟಿಯಲ್ಲಿ ಉಪ್ಪು ಮತ್ತೊಂದು ಮುಷ್ಟಿಯಲ್ಲಿ ಅಕ್ಕಿ ತೆಗೆದುಕೊಂಡು ಒಂದು ಕೈ ಮೇಲೆ ಮತ್ತೊಂದನ್ನು ಅಡ್ಡವಾಗಿ ಹಿಡಿದು ಶ್ಲೋಕ ಹೇಳಿಕೊಂಡು ಮೂರು ಬಾರಿ ಕೈಗಳ ಸ್ಥಾನ ಬದಲಾಯಿಸುತ್ತಾ ಕೊನೆಗೆ ತಟ್ಟೆಯಲ್ಲಿ ಉಪ್ಪು ಅಕ್ಕಿಗಳನ್ನು ಬೇರೆ ಬೇರೆ ಗುಡ್ಡೆಯಲ್ಲಿ ಹಾಕುವ ಪದ್ಧತಿ ಇದೆ.

ಉಪ್ಪಕ್ಕಿ ಮೆರೆಸುವುದು: ತಟ್ಟೆಯಲ್ಲಿ ಉಪ್ಪು, ಅಕ್ಕಿ, ಅರಿಶಿನ, ಕುಂಕುಮಗಳನ್ನಿರಿಸಿಕೊಂಡು ಋತುಮತಿಯಾದ ಹುಡುಗಿಯನ್ನು ನಾಲ್ಕಾರು ಬೀದಿಗಳಲ್ಲಿ ಮೆರವಣಿಗೆ ಕರೆದೊಯ್ಯುವುದು

ಉಪ್ಪಗಚಿ: ಅಜಿಮ ಟೆಟ್ರಕ್ಯಾಂತ; ಒಂದು ಬಗೆಯ ಸಸ್ಯ

ಉಪ್ಪಗೆ: ನೋಡಿ– ಉಪ್ಪಾಗೆ

ಉಪ್ಪಚ್ಚಿ: ಮುತ್ತಿನಂತೆ ಕಾಣುವ ಹಣ್ಣು ಬಿಡುವ ಮುಳ್ಳಿನ ಸಣ್ಣಮೆಳೆ. ಕುರಿಗಳ ಗದ್ದಕ್ಕೆ ನೀರಿಳಿದು ಊದಿಕೊಂಡರೆ ಉಪ್ಪಚ್ಚಿ ಮುಳ್ಳಿನಿಂದ ಅಲ್ಲಿಗೆ ಹೊಡೆಯಲಾಗುತ್ತದೆ (ಮಂಡ್ಯ.ಜಿ)

ಉಪ್ಪಟ ಉರ್ಲ: ಅಡಿಗೆ ಉಪ್ಪಾಗಿದ್ದಾಗ ಬಳಸುವ ಮಾತು (ಮೈಸೂ.ಜಿ)

ಉಪ್ಪಟ್ಟೆಹುರುಕ್ಲು: ಹೆಚ್ಚು ಉಪ್ಪಾಗಿರುವ ಅಡುಗೆ. ***ಇರೂ:*** *ಉಪ್ಪಟೆ ಉರ್ಲು*, *ಉಪ್ಪುರಚಲು*

ಉಪ್ಪಡ/ಉಪ್ಪಟ: ಬಾಳಕ; ಹಸಿರುಮೆಣಸಿಕಾಯಿಯನ್ನು ಉದ್ದಕ್ಕೆ ಸೀಳಿ ಅದರೊಳಗೆ ಮಜ್ಜಿಗೆ ಉಪ್ಪು ಇಂಗು ಮೊಸರಿನ ಮಿಶ್ರಣವನ್ನು ತುಂಬಿಸಿ ಬೇಸಿಗೆಯ ಬಿಸಿಲಿನಲ್ಲಿ ಒಣಗಿಸಿಟ್ಟುಕೊಂಡು ಶೇಖರಿಸುವ ನೆಂಚಿಕೆ. ಯಾವಾಗ ಬೇಕಾದರೂ ಕರಿದುಕೊಂಡು ಊಟದೊಂದಿಗೆ ನಂಚಿಕೊಳ್ಳಬಹುದು (ಬೆಂಗ.ಜಿ). ***ಇರೂ:*** *ಮಜ್ಜಿಗೆ ಮೆಣಸಿನಕಾಯಿ, ಬಾಳಕ, ಮೊಸರು ಮೆಣಸಿನಕಾಯಿ*

ಉಪ್ಪಡಕ್ಕಿ: ಉಪ್ಪುಹಾಕಿ ಬತ್ತ ಬೇಯಿಸಿ ತೆಗೆದ ಅಕ್ಕಿ

ಉಪ್ಪಣಬೆ: ಒಂದು ಬಗೆಯ ಅಣಬೆ

ಉಪ್ಪಮಣೆ: ಬತ್ತ ಬಡಿಯಲು ಬಳಸುವ ಮಣೆ (ದಕ.ಜಿ); ಭತ್ತ ರಾಶಿ ಮಾಡುವ ಸಾಧನ; ಗೋರುಮಣೆ (ದಕ.ಜಿ)

ಉಪ್ಪಮ್ಮ ಉಪ್ಪೊ: ಹೆಣ್ಣು ಮಕ್ಕಳ ಆಟ

ಉಪ್ಪರ: ೧. ಒಂದು ಆಚರಣೆ; ಮಾರಮ್ಮನಿಗೆ ನೈವೇದ್ಯ ಅರ್ಪಿಸುವಿಕೆ ೨. ಬಟ್ಟಲು

ಉಪ್ಪರಗಿ: ಮಾಳಿಗೆ; ಮಹಡಿ (ಶಿವ.ಜಿ)

ಉಪ್ಪರಣೆ (ಕ್ರಿ): ಉಪಚಾರ (ಮಂಡ್ಯ.ಜಿ)

ಉಪ್ಪರಾಬಡ್ಡೆ: ಒಂದು ಜಾತಿಯ ಹಳದಿ ಬಣ್ಣದ ಹಕ್ಕಿ (ದಕ.ಜಿ)

ಉಪ್ಪಲಿಗೆ ಮರ: *ಮ್ಯಾಕರಂಗ ಇಂಡಿಕ:* ಕಾಗದ ಅಂಟಿಸುವ ಮೇಣವನ್ನು ಕೊಡುವ ಮರ. ***ಇರೂ:*** *ಉಪ್ಪಾಲೆ ಮರ (ಕೊಡ.ಜಿ)*

ಉಪ್ಪಲ್ಲಟ್ಟಿ: ಕಾಳು ತಿಂದು ಬೆಳೆ ಹಾಳು ಮಾಡುವ ಒಂದು ಪಕ್ಷಿ (ಮೈಸೂ.ಜಿ)

ಉಪ್ಪ ಹಚ್ಚು: ಹೊಗಳು; ಮುಖಸ್ತುತಿಮಾಡು (ಶಿವ.ಜಿ)

ಉಪ್ಪಳ: ೧. ಚೌಳುನೆಲ ೨. ತಾವರೆ (ಮಂಡ್ಯ.ಜಿ)

ಉಪ್ಪಳಚಾ: ನೀರಿನ ಅಂಚಿನಲ್ಲಿ ಬೆಳೆಯುವ ಒಂದು ಬಗೆಯ ಮರ

ಉಪ್ಪಳತಿ: ಸೇರನ್ನು ಸಂಪೂರ್ಣ ತುಂಬಿ ಅಳೆದದ್ದು. **ಇರೂ:** *ಉಪ್ರಳತೆ*

ಉಪ್ಪಾಂಗನಮಸ್ಕಾರ: ಗ್ರಾಮದೇವತೆ ಇಲ್ಲವೆ ಇತರೆ ದೇವಾಲಯಗಳ ಸುತ್ತಲೂ ಭಕ್ತರು ತಮ್ಮ ಬೇಡಿಕೆಗಳು ಈಡೇರಿದಾಗ ಇಲ್ಲವೆ ಈಡೇರಿಕೆಗಾಗಿ ಹಾಕುವ ಹಲವು ನಮಸ್ಕಾರಗಳು; ಹೆಜ್ಜೆ ನಮಸ್ಕಾರ

ಉಪ್ಪಾಗೆ/ಉಪ್ಪಗೆ: *ಗಾರ್ಸಿನಿಯಾ ಕ್ಯಾಂಬೊನಿಯಾ:* ಮಲೆನಾಡಿನ ಕೆಲವು ಭಾಗಗಳಲ್ಲಿ ಬಹಳ ಎತ್ತರವಾಗಿ ಬೆಳೆವ ಕಾಡುಮರ. ಮೋಸಂಬಿ ಗಾತ್ರದ ಅದರ ಹಣ್ಣಿನಲ್ಲಿರುವ ಬೀಜಗಳನ್ನು ಹುರಿದು ತುಪ್ಪ ತಯಾರಿಸುವ ರೂಢಿ ಇರುವುದರಿಂದ ತುಪ್ಪದಮರ ಎಂದೂ ಕರೆಯುತ್ತಾರೆ. ಹಣ್ಣಿನ ಸಿಪ್ಪೆಯನ್ನು ತರಕಾರಿಯಂತೆ ಬಳಸುತ್ತಾರೆ. ಕೊಡಗಿನಲ್ಲಿ ಕಾಚಂಪುಳಿ ಎನ್ನುತ್ತಾರೆ. ಕೇರಳ ಮತ್ತು ಕೊಡಗಿನಲ್ಲಿ ಮಾಂಸಾಹಾರಕ್ಕೆ ಇದರ ಹುಳಿ ಬಳಸುತ್ತಾರೆ

ಉಪ್ಪಾನೆಕನ್ನಡಿಸರ: ಸುಮಾರು ಅರ್ಧ ಅಂಗುಲದಿಂದ ಒಂದು ಅಂಗುಲ ಅಳತೆಯ ಚೌಕ ಅಥವಾ ಆಯತ ಹಲ್ಲೆಗಳಿಗೆ ಕನ್ನಡಿ ಹರಳು ತೂರಿಸಿ ತಯಾರಿಸಿದ ಸರ

ಉಪ್ಪಾರ: ೧. ಮನೆಕಟ್ಟುವವ ೨. ಕೊಂಡದ ವಿಧಿ ೩. ಮೂಲತಃ ಉಪ್ಪು ತಯಾರಿಸುವ ವೃತ್ತಿ ಮಾಡುತ್ತಿದ್ದ ಸಮುದಾಯ ೪. ದೇವರಿಗೆ ಮೀಸಲಾದ ನೈವೇದ್ಯ

ಉಪ್ಪಾರಕುಟುಂಬ: ಶಿರಸಿಯ ಶ್ರೀ ಮಾರಿಕಾಂಬೆ ದೈವದ ಬಾಜ್‌ದಾರ್ ಕುಟುಂಬಗಳಲ್ಲಿ ಒಂದು

ಉಪ್ಪಾರದೋನು: ೧. ಉಪ್ಪಾರ ಸಮುದಾಯಕ್ಕೆ ಸೇರಿದವನು ೨. ಕುಂಬಾರನಿಗೆ ಮಣ್ಣು ಹೊರುವುದರಲ್ಲಿ ಸಹಾಯಕನಾಗುವವನು

ಉಪ್ಪಾಲೆ: ಕೊಡಗಿನ ಒಂದು ಬಗೆಯ ಸಸ್ಯ

ಉಪ್ಪಿಕ್ಕು: ಅನ್ನಹಾಕು

ಉಪ್ಪಿಗಿಡ: ಮುಳ್ಳುಗಳಿರುವ ಚಿಕ್ಕಗಿಡ

ಉಪ್ಪಿಟ್ಟು: ೧. ರಾಗಿಯಿಂದ ಮಾಡಿದ ಗ್ರಾಮ್ಯ ಆಹಾರ; ರಾಗಿಮುದ್ದೆಗೆ ಕರಿಮೆಣಸು ಬೆಳ್ಳುಳ್ಳಿ ಉಪ್ಪಿನಪುಡಿ ಹಾಕಿ ಮಿದ್ದಿ ತಯಾರಿಸುವ ಆಹಾರ (ಮಂಡ್ಯ.ಜಿ). ೨. ಅಕ್ಕಿ ಅಥವಾ ಗೋಧಿರವೆಯನ್ನು ಹುರಿದು ಒಗ್ಗರಣೆ ಮಾಡಿ ಕುದಿಯುವ ನೀರಿನಲ್ಲಿ ಬೇಯಿಸಿ ಮಾಡಿದ ತಿಂಡಿ

ಉಪ್ಪಿನಅಂಡೆ: ಉಪ್ಪನ್ನು ತುಂಬಿಡುತ್ತಿದ್ದ ಬಿದಿರಿನ ಸಾಧನ

ಉಪ್ಪಿನಉರ್ಲ: ಉಪ್ಪುಪ್ಪಾಗಿರುವ ಆಹಾರ (ಬೆಳ.ಜಿ)

ಉಪ್ಪಿನಋಣ: ಉಪಕಾರ ಸ್ಮರಣೆ; ಅನ್ನವಿಕ್ಕಿದವರ ಮನೆಗೆ ಎರಡು ಬಗೆಯದಿರುವುದು. ಯಾವ ಋಣವನ್ನಾದರೂ ತೀರಿಸಹುದು ಆದರೆ ಉಪ್ಪಿನ ಋಣವನ್ನು ತೀರಿಸಲಾಗದು ಎಂಬ ಭಾವನೆ ಹಳ್ಳಿಗರಲ್ಲಿದೆ (ಧಾರ.ಜಿ). **ಇರೂ:** *ಜೋಳವಾಳಿ*

ಉಪ್ಪಿನಕೊಳಗ ಒಕ್ಕಲಿಗರು: ಒಕ್ಕಲಿಗ ಜನಾಂಗದ ಒಂದು ಉಪಪಂಗಡ. ತುಮಕೂರು ಜಿಲ್ಲೆಯಲ್ಲಿ ಕಾಣಸಿಗುತ್ತಾರೆ (ಶಿವ.ಜಿ)

ಉಪ್ಪಿನತೊಟ್ಟಿ: ಉಪ್ಪಿನ ಹೊಂಡ; ಮೀನನ್ನು ಅದ್ದಿ ನಾಲ್ಕಾರು ದಿನಗಳವರೆಗೆ ಇಡುವುದಕ್ಕಾಗಿ ಬಳಸುವ ತೊಟ್ಟಿ; ನಂತರ ಬಿಸಿಲಲ್ಲಿ ಒಣಗಿಸಿ ಸಂಗ್ರಹಿಸಿಕೊಳ್ಳುತ್ತಾರೆ (ಉಕ.ಜಿ)

ಉಪ್ಪಿನತೊಡರಿ: ಒಂದು ಸಸ್ಯವಿಶೇಷ

ಉಪ್ಪಿನಭರಣಿ: ಉಪ್ಪು ತುಂಬಿಡುತ್ತಿದ್ದ ಮರದ ಸಾಧನ. **ಇರೂ:** *ಉಪ್ಪಿನಮರಿಗೆ*

ಉಪ್ಪಿನಮರ್ಗೆ: ಉಪ್ಪನ್ನು ಇಡುವ ಮರದ ಪಾತ್ರೆ (ಉಕ.ಜಿ)

ಉಪ್ಪಿನರಂಗೋಲಿ: ಉಪ್ಪಿನಿಂದ ರಂಗೋಲಿ ವಿನ್ಯಾಸ ಮೂಡಿಸುವುದು. ಒಂದಿಷ್ಟು ಪ್ರಮಾಣದ ಕಲ್ಲುಪ್ಪಿಗೆ ಕುಂಕುಮ ಅರಶಿನ ಅಥವಾ ಇತರ ಬಣ್ಣಗಳನ್ನು ಎಣ್ಣೆಯೊಂದಿಗೆ ಮಿಶ್ರಣ ಮಾಡಿ, ಬಿಳಿ ಪುಡಿಯಿಂದ ರಂಗೋಲಿ ಬರೆದು ಬಣ್ಣ ಬಣ್ಣದ ಕಲ್ಲುಪ್ಪನ್ನು ತುಂಬಿಸುವುದು. ಇದು ಎರಡು ಮೂರು ವಾರದ ತನಕ ಹಾಳಾಗದು

ಉಪ್ಪಿನಶಾಸ್ತ್ರ: ಮದುವೆಯಲ್ಲಿ ಹೆಣ್ಣು ಗಂಡುಗಳು ತಮ್ಮ ಪಾತಿವ್ರತ್ಯದ ಮೇಲೆ ಪ್ರಮಾಣ ಮಾಡುವ ಶಾಸ್ತ್ರ (ಮಂಡ್ಯ.ಜಿ)

ಉಪ್ಪಿನಹಣ್ಣು: ಉಪ್ಪಿನಕಾಯಿ (ಚಿಬ.ಜಿ)

ಉಪ್ಪಿನಾಟ: ಮಕ್ಕಳು ಆಡುವ ಆಟ. ೧. ಚಪ್ಪರದ ನಾಲ್ಕು ಕಂಬಗಳಲ್ಲಿ ಕಂಬಕ್ಕೆ ಒಬ್ಬೊಬ್ಬರಂತೆ ನಿಂತು ಒಬ್ಬನು ಕಂಬದ ಹೊರಗಡೆ ನಿಂತು ಕಂಬದ ಹತ್ತಿರ ನಿಂತಿರುವ ಹುಡುಗನ/

ಹುಡುಗಿಯ ಹತ್ತಿರ ಹೋಗಿ ಉಪ್ಪು ಬೇಕೆ ಉಪ್ಪು ಎಂದು ಕೇಳುತ್ತಾನೆ. ಆ ಸಂದರ್ಭದಲ್ಲಿ ಇನ್ನುಳಿದ ಕಂಬದಲ್ಲಿ ನಿಂತಿರುವ ಹುಡುಗರು ಅದಲು ಬದಲು ಆಗುತ್ತಾರೆ. ಅದಲು ಬದಲು ಆಗುವ ಸಂದರ್ಭದಲ್ಲಿ ಮುಟ್ಟಿಸಿಕೊಂಡವರು ಸೋತ ಹಾಗೆ (ಬಳ್ಳಾ.ಜಿ) ೨. ಉಪ್ಪೂಪು ಕಡ್ಡಿಯಾಟ (ಮೈಸೂ.ಜಿ). **ಇರೂ:** ಉಪ್ಪಮ್ಮ ಉಪ್ಪೊ

ಉಪ್ಪಿಲ್ಲ ಹುಳಿಯಿಲ್ಲ: ನೀರಸವಾಗಿರುವುದು (ಮೈಸೂ.ಜಿ)

ಉಪ್ಪಿಸೆಬಳ್ಳಿ: ಉಪ್ಪು ತಿಂದರೆ ವಿಷವಾಗುವ ರೋಗಕ್ಕೆ ಮದ್ದಾಗಿ ಬಳಸುವ ಒಂದು ಔಷಧಿ ಬಳ್ಳಿ

ಉಪ್ಪು: ೧. ಲವಣ ೨. ಋಣ; ಹಂಗು

ಉಪ್ಪುಕಟ್ಟು: ದನಗಳು ಸರಿಯಾಗಿ ಹುಲ್ಲು ತಿನ್ನದಿದ್ದರೆ ಅವುಗಳಿಗೆ ರುಚಿ ಬರಲೆಂದು ಹುಲ್ಲಿಗೆ ಸ್ವಲ್ಪ ಉಪ್ಪು ಹಾಕಿ ಅವುಗಳ ಬಾಯಿಗೆ ಕಟ್ಟುವುದು

ಉಪ್ಪುಕಡಲೆ: ಉಪ್ಪು ಕಾರ ಬೆರಸಿದ ಹುರಿಗಡಲೆ (ಮೈಸೂ.ಜಿ). **ಇರೂ:** ಉಪ್ಪಾಳು

ಉಪ್ಪುಕಾಗದ: ಮರಳು ಕೂರಿಸಿದ ಒರಟಾದ ಹಾಳೆ. ಮರದಿಂದ ತಯಾರಿಸಿದ ವಸ್ತುಗಳನ್ನು ಅಂತಿಮವಾಗಿ ನಯಗೊಳಿಸಲು ಬಳಕೆ (ಬಳ್ಳಾ.ಜಿ)

ಉಪ್ಪುಕೂಸು: ಉಪ್ಪುಗೂಸು; ಉಪ್ಪೂಸು; ಒಂದು ಆಟ ೧. ಈ ಆಟದಲ್ಲಿ ಸೋತವರು ಗೆದ್ದವರನ್ನು ಬೆನ್ನಮೇಲೆ ಹೊತ್ತುಕೊಂಡು ಒಂದು ನಿರ್ದಿಷ್ಟ ದೂರದವರೆಗೆ ಒಯ್ಯುವುದು ೨. ಮಕ್ಕಳನ್ನು ಬೆನ್ನಮೇಲೆ ಹೊತ್ತು ಆಟವಾಡಿಸುವ ಒಂದು ವಿಧಾನ (ಬೆಂಗ್ರಾ.ಜಿ). **ಇರೂ:** ಕೂಸುಮರಿ *(ಮೈಸೂ.ಜಿ)*

ಉಪ್ಪುಕೊರಮ: ಕೊರಮರ ಒಂದು ಒಳಪಂಗಡ. ಉಪ್ಪಿನ ವ್ಯಾಪಾರ ಇವರ ವೃತ್ತಿ (ಬಳ್ಳಾ.ಜಿ)

ಉಪ್ಪುಕೋಟಿ: ಉಪ್ಪು ದಾಸ್ತಾನು ಮಾಡುವ ಸ್ಥಳ (ದಕ.ಜಿ)

ಉಪ್ಪುಗಂಗೆ: ಪಾಡ್ದನಗಳಲ್ಲಿ ಬರುವ ಸಮುದ್ರದ ಹೆಸರು (ದಕ.ಜಿ)

ಉಪ್ಪುಗಂಟಿನಹರಕೆ: ಸವದತ್ತಿಯ ಎಲ್ಲಮ್ಮನ ಹರಕೆಗಳಲ್ಲಿ ಒಂದು (ಬೆಳ.ಜಿ)

ಉಪ್ಪುಗದ್ದೆ: ಎತ್ತರದಲ್ಲಿರುವ ಗದ್ದೆ

ಉಪ್ಪುಗರಿ: ಒಗ್ಗರಣೆ ಹಾಕಿದ ಅವಲಕ್ಕಿ. **ಇರೂ:** ಉಪ್ಪುಗಾರಿಗೆ

ಉಪ್ಪುಗಾರಿಗೆ: ನೋಡಿ– ಉಪ್ಪುಗರಿ

ಉಪ್ಪುಗೋಣಿ: ಉಪ್ಪಾಟದಲ್ಲಿ ಆಟಗಾರನ ಬೆನ್ನ ಮೇಲೆ ಇರುವ ವ್ಯಕ್ತಿ (ದಕ.ಜಿ)

ಉಪ್ಪುಚಂದ್ರಿಕೆ: ಒಂದು ಸಸ್ಯ. ಉಪ್ಪು ಮರಗೆ

ಉಪ್ಪುಚಲ್ಲ: ೧. ಉಪ್ಪುಪ್ಪಾಗಿರುವ ಆಹಾರ ೨. ಆಹಾರಯೋಗ್ಯವಾದ ಒಂದು ಕಳೆಸಸ್ಯ ೩. ಸಾಂಬಾರು ತಯಾರಿಸಲು ಮತ್ತು ಕಾಳು ಬೇಯಿಸಲು ಬಳಸುವ ಪಾತ್ರೆ

ಉಪ್ಪುಣಿಗ್ಯಾ: ಉಪ್ಪಾರ (ಧಾರ.ಜಿ)

ಉಪ್ಪುದೋಸೆ: ತೆಂಗಿನಕಾಯಿ ಧಾರಾಳವಾಗಿ ಹಾಕಿ ಮಾಡುವ ಅಕ್ಕಿದೋಸೆ (ದಕ.ಜಿ)

ಉಪ್ಪುನಬಸವ: ಹೊಟ್ಟೆನೋವು ಬಂದಾಗ ಮಾಡುವ ಔಷಧಿ (ಚಾಮ.ಜಿ)

ಉಪ್ಪುನೀರು: ಉಪ್ಪಿನಂಶ ಹೆಚ್ಚಾಗಿರುವ ನೀರು. ಇದು ಕುಡಿಯಲು ಯೋಗ್ಯವಲ್ಲ, ಎಷ್ಟು ಬೇಯಿಸಿದರೂ ಬೇಳೆ ಕಾಳುಗಳು ಬೇಯುವುದಿಲ್ಲ

ಉಪ್ಪುನೀರೊಲ್ಲಿ (ನಾ): ಕೆಲಸಕ್ಕೆ ಹೋಗುವಾಗ ಸುಮಾರು ಆರು ಅಡಿ ಉದ್ದ ಮೂರು ಅಡಿ ಅಗಲದ ಸೀರೆಯಂತೆಯೆ ಇರುವ ಕಪ್ಪು ಚೌಕಳಿಯ ಬಟ್ಟೆಯನ್ನು ಮಡಚಿ ಬೆನ್ನಿಗೆ ಹೊದ್ದು ಗಂಟು ಕಟ್ಟುವ ಉಡುಗೆ

ಉಪ್ಪುನೀವಾಳಿಸು: ದೃಷ್ಟಿ ತೆಗೆಯುವ ಒಂದು ಆಚರಣೆ. ಹಿಡಿ ಉಪ್ಪು ನೀವಾಳಿಸಿ ಒಲೆಗೆ ಹಾಕಿದಾಗ ಚಟಚಟ ಸಿಡಿಯುವುದು (ಬೆಂಗ.ಜಿ)

ಉಪ್ಪುನೇರ್ಲೆ ಸೊಪ್ಪು: ಹಿಪ್ಪುನೇರಳೆ ಸೊಪ್ಪು. ಇದರ ಸೊಪ್ಪನ್ನು ರೇಷ್ಮೆಹುಳುಗಳಿಗೆ ಆಹಾರವಾಗಿ ಕೊಡುತ್ತಾರೆ (ಮಂಡ್ಯ.ಜಿ)

ಉಪ್ಪುಪೆಹಣ್ಣು: ಒಂದು ಜಾತಿ ಹಣ್ಣು (ತುಮ.ಜಿ)

ಉಪ್ಪುಪ್ಪು: ಒಂದು ಆಟ ಮತ್ತು ಆ ಆಟದ ಸೊಲ್ಲು. ಮಕ್ಕಳನ್ನು ಬೆನ್ನ ಮೇಲೆ ಮಲಗಿಸಿಕೊಂಡು ಕುಣಿಯುವ ಆಟ

ಉಪ್ಪುಪ್ಪುಕಡ್ಡಿ: ಮೂರು ಮರಳಿನ ಗುಡ್ಡೆ ಕಟ್ಟಿ ಅದರಲ್ಲಿ ಒಂದರಲ್ಲಿ ಕಡ್ಡಿ ಬಚ್ಚಿಟ್ಟು ಎದುರಾಳಿಗೆ ಹುಡುಕಲು ಹೇಳುತ್ತಾರೆ. ಒಂದು ಸಲ ಮಾತ್ರ ಅವಕಾಶ. ಸಿಗದಿದ್ದರೆ ಅವರು ಸೋತಂತೆ. ಆಗ ಕಣ್ಣಿಗೆ ಬಟ್ಟೆ ಕಟ್ಟಿ ಅವರ ಕೈಗೆ ಮರಳು ತುಂಬಿ ಕಡ್ಡಿಯನ್ನು ಅದರಲ್ಲಿ ಹಾಕಿ ದೂರದಲ್ಲಿ ಅದನ್ನು ಎಸೆದು ಹುಡುಕುವಂತೆ ಮಾಡುವುದು ಆಟದ ನಿಯಮ (ಮಂಡ್ಯ.ಜಿ)

ಉಪ್ಪುಬೂದಿ: ರಾಸಾಯನಿಕ ಗೊಬ್ಬರಗಳು. ***ಇರೂ:*** *ಉಪ್ಪಿನಗೊಬ್ಬರ*

ಉಪ್ಪು ಬೇಕೇನ ಉಪ್ಪು: ನೋಡಿ– ಉಪ್ಪಿನಾಟ

ಉಪ್ಪುಮಣಿಸರ: ಚಿಕ್ಕ ಚೌಕಾಕಾರದ ಮಣಿಗಳ ಸರ; ಮರದ ಮಣಿಸರ

ಉಪ್ಪುಮೀನು: ಒಣಮೀನು (ಕೋಲಾ.ಜಿ)

ಉಪ್ಪುರ್ಕೆ: ಉಪ್ಪರಿಗೆ; ಮಹಡಿ (ಮಂಡ್ಯ.ಜಿ). ***ಇರೂ:*** *ಉಪ್ಪರಿ*

ಉಪ್ಪುಸಪ್ಪೆ: ೧. ಅಡುಗೆ ರುಚಿ ನೋಡುವುದು. **ಪ್ರ:** ಉಪ್ಪುಸಪ್ಪೆ ಹೇಗಿದೆಯೋ ನೋಡು ೨. ಕಷ್ಟಸುಖ (ಚಾಮ.ಜಿ)

ಉಪ್ಪುಸುರಿಯುವುದು: ಹುರುಕು ಕಜ್ಜಿಗಳು ಮೂಡಿದಾಗ, ಗೊರವರು ಮಾಡಿಕೊಳ್ಳುವ ಒಂದು ಹರಕೆ. ಅದರಂತೆ ದೇವರಗುಡ್ಡದ ಮೈಲಾರಲಿಂಗ ದೇವಸ್ಥಾನದ ಶಿಲಾಮೂರ್ತಿಗಳ ಮೇಲೆ ಉಪ್ಪು ಸುರಿಯುತ್ತಾರೆ (ಬೆಂಗ.ಜಿ)

ಉಪ್ಪುಹಚ್ಚಿ ನೆಕ್ಕುವವ: ಜಿಪುಣ; ತನ್ನದನ್ನು ಯಾರಿಗೂ ಕೊಡದವ (ಧಾರ.ಜಿ)

ಉಪ್ಪೆಸ್ರು: ಉಪ್ಪೆಸರು; ೧. ಮೆಣಸು ಜೀರಿಗೆ ಮೆಣಸಿನಕಾಯಿ ಬೆಳ್ಳುಳ್ಳಿ ಹುಣಿಸೆಹಣ್ಣು ಮುಂತಾದುವುಗಳ ಕಾರವನ್ನು ಸಪ್ಪೆಸಾರಿನೊಡನೆ ಬೆರೆಸಿದ ಸಾರು ೨. ಹಸಿಕಾರದ ಸಾರು ೩. ಕಾಳು ಅಥವಾ ಸೊಪ್ಪನ್ನು ನೀರಿನಲ್ಲಿ ಬೇಯಿಸಿ ಬೇರೇನನ್ನೂ ಹಾಕದೆ ಉಪ್ಪು ಮಾತ್ರ ಹಾಕಿದ್ದು ೪. ತರಕಾರಿ ಅಥವಾ ಇತರ ಮಸಾಲೆಗಳನ್ನು ಹಾಕದೆ ಮಾಡುವ ಸಾಧಾರಣ ಸಾರು (ಮಂಡ್ಯ.ಜಿ)

ಉಪ್ರರೋಗ: ಬತ್ತದ ಬೆಳೆಗೆ ತಗಲುವ ಒಂದು ರೋಗ

ಉಪ್ರಾ: ಉಪ್ಪರ; ಎತ್ತರ (ಚಾಮ.ಜಿ)

ಉಪ್ರಾಟಿ: ೧. ತೊಂದರೆ ೨. ಕೆಲಸವಿಲ್ಲದೆ ಸುಮ್ಮನೆ ಅಲೆಯುವಿಕೆ ೩. ಹಿಂತಿರುಗಿ ೪. ತಿರುವುಮುರುವು (ಬಿಜಾ.ಜಿ)

ಉಪ್ರಿಮಾತು: ಔಪಚಾರಿಕವಾದ ತೋರಿಕೆಯ ಮಾತು (ಬಳ್ಳಾ.ಜಿ)

ಉಪ್ರೋಸು: ಹೆಚ್ಚು ಉಪ್ಪು; ಅಗತ್ಯಕ್ಕಿಂತ ಹೆಚ್ಚು ಉಪ್ಪು ಬೆರೆತದ್ದು (ಬೆಂಗ್ರಾ.ಜಿ). **ಪ್ರ:** ಈವತ್ತು ಸಾರು ಉಪ್ರೋಸು ಆಗಿದೆ. ***ಇರೂ:*** *ಉಪ್ಲು*

ಉಪ್ಲು: ನೋಡಿ– ಉಪ್ರೋಸು

ಉಪ್ವಾರ: ಸಂಭ್ರಮ

ಉಫ್ಳಿ: ಒಂದು ಜಾತಿಯ ಹೂವು; ಉಪ್ಪಳಿ

ಉಬ: ಊಬು; ಗೋಧಿಯ ತೆನೆಯ ತುದಿಯಲ್ಲಿ ಇರುವ ಚೂಪಾದ ಎಸಳು (ಗುಲ್ಬ.ಜಿ)

ಉಬತ್ತಿ: ೧. ವಿಭೂತಿ ೨. ಊಬು; ಊಬಿನಮುಳ್ಳು (ಬೆಂಗ್ರಾ.ಜಿ)

ಉಬರ್‌ನೆಲ: ಚವುಳು ಭೂಮಿ (ದಕ.ಜಿ)

ಉಬಾರ್: ೧. ಉಪ್ಪಿನಂಗಡಿ ೨. ಉಪ್ಪುಮಣ್ಣು ೩. ಮಳೆಗಾಲದಲ್ಲಿ ನೀರು ಉಕ್ಕಿಹರಿದಾಗ ನದಿಯಿಂದ ಮೀನುಗಳು ಇತರ ಮೂಲಗಳ ಮೂಲಕ ಮೇಲಕ್ಕೆ ಹತ್ತಿ ಬರುವುದು ೪. ಉಪ್ಪು ನೀರಿನ ಹೊಳೆಯ ಹರಿವು ಉಳ್ಳ ಗದ್ದೆ

ಉಬಾರ್‌ಮೂರಿ: ಭರತದಲ್ಲಿ ಮೇಲೆ ಬಂದ ಸಮುದ್ರದ ನೀರು ಗದ್ದೆಯಲ್ಲಿ ಶೇಖರಗೊಂಡು ಕೊಳೆತಾಗ ಬರುವ ವಾಸನೆ (ದಕ.ಜಿ)

ಉಬಾರ್‌ಹತ್ತುವುದು: ಮೊದಲ ಮಳೆನೀರು ಉಕ್ಕುವಾಗ ನದಿಯಲ್ಲಿ ಪ್ರವಾಹದ ವಿರುದ್ಧಗತಿಯಲ್ಲಿ ಮೀನುಗಳು ಹುಚ್ಚೆದ್ದು ಮೇಲೇರುವುದು (ದಕ.ಜಿ)

ಉಬಿ: ಉಗಿ (ದಕ.ಜಿ). ***ಇರೂ:*** *ಉಬೆ*

ಉಬೆ: ಚಾಡಿ; ಕೆಲಸಕ್ಕೆ ಬಾರದ ಮಾತು; ಸುಳ್ಳುಮಾತು; ಕಟ್ಟುಕತೆ (ಮೈಸೂ.ಜಿ)

ಉಬ್ತಿಕಯ್ಡಿಗಿ: ವಿಭೂತಿ ಕರಡಿಗೆ; ದಾಸಯ್ಯನಿಂದ ಸಂಗ್ರಹಿಸಿದ ವಿಭೂತಿಯನ್ನು ಬಂಟ ಬಿಲ್ಲವ ಮೊದಲಾದವರು ಸಂಗ್ರಹಿಸಿಡುವ ಕರಡಿಗೆ. ಇದನ್ನು ದೇವರ ಎದುರು, ಮನೆಯ ಒಳಭಾಗದಲ್ಲಿ ನೇತು ಹಾಕಿರುತ್ತಾರೆ

ಉಬ್ಬ: ೧. ಹಂದಿಯ ಕತ್ತಿನ ಬಳಿಯ ದಪ್ಪ ರೋಮಗಳು ೨. ಆಭರಣ ತೊಳೆಯಲು ಬಳಸುವ ಕುಂಚ ೩. ಮೇಲುಸಿರು; ಉಬ್ಬು ೪. ಹಲಸಿನ ಹಣ್ಣಿನ ರಸವನ್ನು ಅಕ್ಕಿರವೆಯಲ್ಲಿ ಕೂಡಿಸಿ ಹಬೆಯಲ್ಲಿ ಅಟ್ಟ ಅಡುಗೆ (ದಕ.ಜಿ)

ಉಬ್ಬಕಟ್ಟು (ಕ್ರಿ): ಉಸಿರುಕಟ್ಟು (ಉಕ.ಜಿ)

ಉಬ್ಬಗ: ಸುಲಭವಾಗಿ ಹೊಗಳಿಕೆಗೆ ಪಕ್ಕಾಗುವವ

ಉಬ್ಬಟ್ಟೆರೋಗ: ಹೊಟ್ಟೆ ಉಬ್ಬಿಕೊಳ್ಳುವ ರೋಗ

ಉಬ್ಬಣ: ಬೀಗ ಹಾಕುವ ಬಾಗಿಲಿನ ಭಾಗ

ಉಬ್ಬದಗೆ: ಉಬ್ಬೆಗೆ ಹಾಕಿದಂತೆ ಭಾಸವಾಗುವ ಸೆಕೆ; ಹೆಚ್ಚು ಸೆಕೆಯಿಂದ ಉಂಟಾದ ಸಂಕಟ (ಮಂಡ್ಯ.ಜಿ)

ಉಬ್ಬರಲು: ಸುಗ್ಗಿ ಕಾರ್ಯದಲ್ಲಿ ಹುಲ್ಲನ್ನು ತುಳಿಸಿ ಬೇರ್ಪಡಿಸಿದ ನಂತರ ಕೆಳಗಡೆ ಉಳಿದ ಗಾಬು ಸಹಿತ ಧಾನ್ಯವನ್ನು ಬೇರ್ಪಡಿಸಲು ಬಳಸುವ ಉದ್ದನೆಯ ಪೊರಕೆ. ಇದನ್ನು ಬಿದಿರಿನಿಂದ ಅಥವಾ ತೊಗರಿ ಕಡ್ಡಿಯಿಂದ ಕಟ್ಟಿರುತ್ತಾರೆ (ಚಿಬ.ಜಿ)

ಉಬ್ಬರಸ್ಲು: ನೋಡಿ– ಉಬ್ಬರಲು

ಉಬ್ಬರ್ಸ್ಲು: ಉಬ್ಬರಿಸು; ಆಹಾರ ಸರಿಯಾಗಿ ಜೀರ್ಣವಾಗದೆ ಹೊಟ್ಟೆ ಊದಿಕೊಳ್ಳುವುದು. **ಪ್ರ:** ಹೊಟ್ಟೆ ಉಬ್ಬರ್ಸ್ಲು

ಉಬ್ಬಲಿಕ್ಕು: ಉಬ್ಬಿಸು; ಹೊಗಳಿ ಅಟ್ಟಕ್ಕೇರಿಸು (ತುಮ.ಜಿ)

ಉಬ್ಬಲು: ೧. ರಾಗಿ ಬತ್ತ ಒಕ್ಕಣೆ ಮಾಡಿದಾಗ ಬರುವ ಹೊಟ್ಟು; ಸಣ್ಣಹೊಟ್ಟು ೨. ಜೊಳ್ಳುಬತ್ತ. ***ಇರೂ:*** *ಉಬ್ಲು (ಬೆಂಗ್ರಾ.ಜಿ/ಮಂಗ.ಜಿ)*

ಉಬ್ಬಲುಬಣವೆ: ಹಲಸಂದಿ ಹುರುಳಿ ಹೆಸರು ಮುಂತಾದ ಬೆಳೆಗಳ ಎಲೆ ಸಿಪ್ಪೆಯನ್ನು ರಾಶಿ ಮಾಡಿ ಸಂಗ್ರಹಿಸಿದ ಬಣವೆ (ದಾವ.ಜಿ)

ಉಬ್ಬಲು ಬಸವ: ಕಣದಲ್ಲಿ ಧಾನ್ಯವನ್ನು ತೂರಿದಾಗ ಬರುವ ಹೊಟ್ಟು

ಉಬ್ಬಲು ಮಳೆ: ಉಬ್ಬಲು ಎರಚಿದಂತೆ ನಿಧಾನವಾಗಿ ತುಂತುರುತುಂತುರಾಗಿ ಬೀಳುವ ಮಳೆ; ಸೋನೆಮಳೆ

ಉಬ್ಬಲ್ಲು: ಉಬ್ಬು ಹಲ್ಲು; ತುಟಿಮೀರಿ ಕಾಣುವ ಹಲ್ಲು

ಉಬ್ಬಳಿಕೆ: ಹೊಟ್ಟೆ ಕೆಟ್ಟಾಗ ಬರುವ ಕೆಟ್ಟ ಉಸುರು; –ವಾಸನೆ

ಉಬ್ಬಾಕು (ಕ್ರಿ): ಕಾಯಿಗಳು ಹಣ್ಣಾಗಲು ಅಡೆಹಾಕು; ಒತ್ತೆಹಾಕು

ಉಬ್ಬಾಡಿ: ೧. ಉಬ್ಬಿಹೋಗಿ; ಸಂತೋಷಪಟ್ಟು ೨. ಅಹಂಕಾರಪಟ್ಟು ೩. ಹೈಲುಪೈಲಾಡಿ

ಉಬ್ಬಾಡು: ಕಣ ಬಳಿಯುವಾಗ ಅಲ್ಲಲ್ಲಿ ನಿಂತಿರುವ ಬಗ್ಗಡವನ್ನು ಎಲ್ಲ ಕಡೆ ಸಮನಾಗಿರುವಂತೆ ಮಾಡಲು ಉದ್ದನೆಯ ಈಚಲು ಕಟ್ಟಿಗೆ ತೆಗೆದುಕೊಂಡು ನೀರು ಚಿಮುಕಿಸಿ ಒಂದು ಕಡೆಯಿಂದ ನಿಧಾನವಾಗಿ ಎಳೆದಾಡುವ ಕ್ರಮ (ಚಿಬ.ಜಿ)

ಉಬ್ಬಾಳು: ದೊಡ್ಡಸ್ತಿಕೆಯವ; ಶ್ರೇಷ್ಠ ವ್ಯಕ್ತಿ

ಉಬ್ಬಿ: ಪುಬ್ಬಾ ನಕ್ಷತ್ರ

ಉಬ್ಬಿಒಲಿ/ಉಬ್ಬೆಒಲೆ: ಮಡಿವಾಳರು ಬಟ್ಟೆಗಳನ್ನು ಉಬ್ಬೆಗೆ ಹಾಕಲು ಬಳಸುವ ಒಲೆ

ಉಬ್ಬಿನೀರ್: ಮಡಿವಾಳರು ಬಟ್ಟೆಗಳನ್ನು ಉಗಿಯಲ್ಲಿ ಬೇಯಿಸಿದ ನಂತರ ಉಳಿದ ನೀರು. ಇದನ್ನು ಮುಷ್ಕ (ಗೋಪ್ಯ) ರೋಗಕ್ಕೆ ಔಷಧಿಯಾಗಿ ಉಪಯೋಗಿಸುತ್ತಾರೆ (ದಕ.ಜಿ)

ಉಬ್ಬಿನೀರ್ ಸ್ನಾನ: ಗೋಪ್ಯ (ಮುಷ್ಕ) ರೋಗದ ನಿವಾರಣೆಗಾಗಿ ಉಬ್ಬೆ ನೀರನ್ನು ತಲೆ ಮೇಲೆ ಹೊಯ್ದು ಮಾಡಿಸುವ ಸ್ನಾನ (ದಕ.ಜಿ)

ಉಬ್ಬಿವಸ್ತ್ರ: ಉಗಿಯ ಒಲೆಯ ಪಾತ್ರೆಯ ಮೇಲ್ಭಾಗದಲ್ಲಿ ಹರಡಿದ ವಸ್ತ್ರ. ಉಗಿಯಿಂದ ಬೆಂದ ವಸ್ತ್ರ (ದಕ.ಜಿ)

ಉಬ್ಬಿಸು: ೧. ದಪ್ಪಗಾಗು; ಊದಿಕೊಳ್ಳು ೨. ಹೊಗಳಿಕೆಗೆ ಮಾರುಹೋಗು (ಮೈಸೂ.ಜಿ) ೩. ಪ್ರಚೋದಿಸು; ಉದ್ರೇಕಿಸು; ಪುಸಲಾಯಿಸು. ***ಇರೂ:*** *ಉಬ್ಬುಹೊಡಿ*

ಉಬ್ಬು: ೧. ಎತ್ತರದ ಪ್ರದೇಶ; ಏರುಪ್ರದೇಶ; ಘಟ್ಟಸೀಮೆಯ ಏರುಪ್ರದೇಶ (ಮಲೆ) ೨. ಅಹಂಕಾರ ೩. ಹಿಗ್ಗು; ಸಂತೋಷ ೪. ಬಾಯಿ

ಉಬ್ಬುಕತೆ: ಉಪಕತೆ; ಮುಖ್ಯಕಥೆಯ ನಡುವೆ ಬರುವ ಅಡ್ಡಕತೆ

ಉಬ್ಬುರೊಟ್ಟಿ: ಮಲೆನಾಡಿಗರ ಜನಪ್ರಿಯ ತಿಂಡಿ. ಅಕ್ಕಿಹಿಟ್ಟನ್ನು ಬಿಸಿನೀರಿನಲ್ಲಿ ನಾದಿ, ಉಂಡೆ ಕಟ್ಟಿ ಬಾಳೆ ಎಲೆಗೆ ಎಣ್ಣೆ ಹಚ್ಚಿ ಕೈಯಿಂದ ತೆಳುವಾಗುವ ತನಕ ತಟ್ಟಿ ಬೆಂಕಿ ಕೆಂಡದಲ್ಲಿ ಸುಡುವಾಗ ರೊಟ್ಟಿ ಉಬ್ಬುತ್ತದೆ. ಚಟ್ನಿ ಮುಂತಾದವುಗಳ ಜೊತೆ ತಿನ್ನುವರು

ಉಬ್ಬುಹತ್ತು: ಆಲೆಮನೆಯಲ್ಲಿ ಬೆಲ್ಲ ತಯಾರಿಸಲು ಕಬ್ಬಿನ ಹಾಲು ಕಾಯಿಸುವಾಗ ಪಾಕ ಮೇಲಕ್ಕೆ ಉಕ್ಕಿ ಬರುವ ಹಂತ

ಉಬ್ಬೆ: ೧. ಮಡಿವಾಳರು ಕೊಳೆಯಾದ ಬಟ್ಟೆಗಳನ್ನು ಚೌಳು ನೀರಿನೊಂದಿಗೆ ನೆನೆಸಿ ಕುದಿಸಿ ಶುಚಿಗೊಳಿಸುವ ಒಂದು ವಿಧಾನ ೨. ಪುಬ್ಬಾ ನಕ್ಷತ್ರದ ಮಳೆ ೩. ಒಂದು ಸಲಕ್ಕೆ ಆಗುವಷ್ಟು ಬೇಯಿಸಲು, ಆಡಿಸಲು, ಕುಟ್ಟಲು, ಕರಿಯಲು ಹಾಕುವ ಪ್ರಮಾಣ ೪. ಸೆಕೆ; ಕಾವು. ***ಇರೂ:*** *ವಬ್ಬೆ; ಉಬ್ಬೆಕಟ್ಟು*

ಉಬ್ಬೆಮನೆ: ಅಗಸರು ಬಟ್ಟೆಗಳನ್ನು ಉಬ್ಬೆಗೆ ಹಾಕಲು ಒಲೆ ಮಾಡಿಕೊಂಡಿರುವ ಮನೆ

ಉಬ್ಬೆಮಳೆ: ಪುಬ್ಬಾ ನಕ್ಷತ್ರದ ಮಳೆ; ಹುಬ್ಬಾ ಮಳೆ; ಇದು ತುಂತುರುತುಂತುರಾಗಿ ಬೀಳುವ ತೀರಾ ಕಡಿಮೆ ಪ್ರಮಾಣದ ಮಳೆ (ದಾವ.ಜಿ) ಉಬ್ಬೆಗೆ ಗುಬ್ಬಿ ಪುಚ್ಚ ತೋಯಲ್ಲ, ಉಬ್ಬೆ ಮಳೆ ಹುಬ್ಬು ಹಾರಿಸಿಗೆಂತ ಹೋಕ್ಕತೆ ಎಂಬ ಗಾದೆಗಳು ಈ ಮಳೆಯ ಸ್ವರೂಪವನ್ನು ಸೂಚಿಸುತ್ತವೆ

ಉಬ್ಬೆಹಾಕುವುದು: ಬಾಳೆಕಾಯಿಯನ್ನು ದಳ್ಳೆ ಇತ್ಯಾದಿ ದೊಡ್ಡ ಪಾತ್ರೆಗಳಲ್ಲಿಟ್ಟು ಮುಚ್ಚಳ ಹಾಕಿ ಬೇಗ ಹಣ್ಣು ಮಾಡುವುದು (ಉಕ.ಜಿ) ಇರೂ: *ಅಡೆಹಾಕುವುದು (ಮೈಸೂ.ಜಿ)*

ಉಬ್ಬೇಟೆ: ಬಾವು; ಊತ

ಉಬ್ಬೊಳೆ: ವಿಗ್ರಹ ಮುಂತಾದವುಗಳಲ್ಲಿ ಉಬ್ಬು ಉಂಟುಮಾಡಲು ಬಳಸುವ ಉಪಕರಣ

ಉಬ್ರಾಣೆ: ೧. ಉಬ್ಬರಣೆ; ಅಜೀರ್ಣದಿಂದ ಹೊಟ್ಟೆ ಊದಿಕೊಳ್ಳುವುದು ೨. ಹೊಟ್ಟೆಕಿಚ್ಚು ೩. ಸೊಕ್ಕು ೪. ಮುನಿಸು ೫. ಉಬ್ಬಸರೋಗ; ದಮ್ಮು ೬. ಅಸಮಾಧಾನ (ಮೈಸೂ.ಜಿ). **ಇರೂ:** *ಉಬ್ರ*

ಉಬ್ಲು: ೧. ಉಬ್ಬಲು; ಸುಲಿದ ಕಾಳಿನ ಸಿಪ್ಪೆ ಅಥವಾ ಒಣಗಿದ ಹೊಟ್ಟು; ಇದು ರಾಸುಗಳಿಗೆ ಕುರಿ ಮೇಕೆಗಳಿಗೆ ಒಳ್ಳೆಯ ಆಹಾರ (ಮಂಡ್ಯ.ಜಿ) ೨. ಒಕ್ಕಣೆಗೆ ಮುನ್ನ ಇರುವ ರಾಗಿ (ಧಾನ್ಯ) ಮೇಲಿನ ತೆಳುವಾದ ಪೊರೆ (ಚಿತ್ರ.ಜಿ) ೩. ರಾಗಿಯ ಹೊಟ್ಟು; ತೌಡು

ಉಬ್ಸ/ಉಬ್ಬಸ: ಗೂರಲುರೋಗ; ದಮ್ಮು; ಉಸಿರಾಡಲು ಕಷ್ಟವಾಗುವಂಥ ರೋಗ

ಉಬ್ಸಅಂಡೆ: ಊದುವ ಅಂಡೆ; ಒಲೆಯಲ್ಲಿ ಬೆಂಕಿ ಉರಿಸಲು, ಗಾಳಿ ಊದಲು ಬಳಸುವ ಊದುಕೊಳವೆ (ಉಕ.ಜಿ)

ಉಮಗಿ: ಹಸಿಗೋಧಿ ತೆನೆಗಳನ್ನು ಸುಟ್ಟು ಅವುಗಳನ್ನು ಕುದಿಸಿ ಆ ತೆನೆಗಳಿಂದ ಬೇರ್ಪಡಿಸಿದ ಕಾಳುಗಳು (ಧಾರ.ಜಿ)

ಉಮಗೊಳ್ಳು: ಅನ್ನವಾಗುವ ಪೂರ್ವದ ಸ್ಥಿತಿ

ಉಮಚಿಗ: ಎಡಬಲ (ಶಿವ.ಜಿ)

ಉಮರಾಣಿ: ಒಂದು ಬಗೆಯ ಸಸ್ಯ

ಉಮರುಬಕ್ಕಿ: ಸೆಕೆಗುಳ್ಳೆ

ಉಮಾಯಿ: ೧. ಸುಮಾನ; ಮದ ೨. ಹರ್ಷ ೩. ಉತ್ಸಾಹ. **ಇರೂ:** *ಉಮ್ಮಾಯ*

ಉಮಿ: ಭತ್ತದ ಅಥವಾ ರಾಗಿಯ ಹೊಟ್ಟು (ಉಕ.ಜಿ)

ಉಮಿಕರಿ: ೧. ಭತ್ತದ ಸಿಪ್ಪೆ ಸುಟ್ಟ ಬೂದಿ (ಉಕ.ಜಿ) ೨. ಸುಟ್ಟ ಬತ್ತದ ಹುಲ್ಲಿನ ಇದ್ದಿಲನ್ನು ಕೀಟನಾಶಕವಾಗಿ ಬೆಳೆಯ ಮೇಲೆ ಚೆಲ್ಲುವುದು (ದಕ.ಜಿ)

ಉಮಿತೊಳೆ: ಯಾವುದಾದರೂ ವಸ್ತುವನ್ನು ಯಾರಿಗೂ ಕೊಡದೆ ವ್ಯರ್ಥ ಮಾಡಿದಾಗ ಬಳಸುವ ನುಡಿಗಟ್ಟು (ಚಿಬ.ಜಿ)

ಉಮಿಲ್: ಸೊಳ್ಳೆ; ನುಸಿ (ದಕ.ಜಿ)

ಉಮುರು: ಸೆಕೆ; ಬಿಸಿಲ ತಾಪ (ಧಾರ.ಜಿ)

ಉಮೂರು: ಬೇಗ ಮಳೆ ಬರುವ ಸೂಚನೆ

ಉಮ್ಮೈ: ಅಕ್ಕಿ, ಬೇಳೆ, ಪಲ್ಯ ಬೆಂದಮೇಲೆ ಸಣ್ಣ ಬೆಂಕಿಯಲ್ಲಿ ಸ್ವಲ್ಪ ಹೊತ್ತು ಬೇಯಿಸುವ ಸಮಯ (ಗುಲ್ಬ.ಜಿ)

ಉಮ್ಮಗಿಗೋದಿ: ರಸ ತುಂಬಿದ ಗೋಧಿ ಕಾಳು

ಉಮ್ಮಗೆ ಮಯ್ಯಗೆ: ತುಳು ಜನಪದ ಸಾಹಿತ್ಯದಲ್ಲಿ ಬರುವ ಅಕ್ಕತಂಗಿಯರು (ದಕ.ಜಿ)

ಉಮ್ಮಟ್ಟುಗುಳಿಗ: ಗುಳಿಗ ಭೂತದ ಒಂದು ಪ್ರಬೇಧ (ದಕ.ಜಿ)

ಉಮ್ಮತ್ತಾಟ್: ಕೊಡವ ಮಹಿಳೆಯರಿಗೆ ವಿಶಿಷ್ಟವಾದ ಗೀತ ನರ್ತನವನ್ನು ಒಳಗೊಂಡ ಕಲೆ. ಇದನ್ನು ಸಾಮಾನ್ಯವಾಗಿ ಹಬ್ಬ ಹರಿದಿನಗಳಲ್ಲಿ ಮಾತ್ರ ಪ್ರದರ್ಶಿಸುತ್ತಾರೆ. ಮಧ್ಯದಲ್ಲಿ ದೀಪ ಹಚ್ಚಿಟ್ಟು ಕೈಯಲ್ಲಿ ಕಂಚಿನತಾಳ ಹಿಡಿದು ಅದರ ಸುತ್ತ ಕಾವೇರಿಯ ಸ್ತುತಿಗೀತೆಗಳನ್ನು ಹಾಡುತ್ತಾ ಕುಣಿಯುತ್ತಾರೆ. ಅವಿವಾಹಿತ ಯುವತಿಯರು ಪಾಲ್ಗೊಳ್ಳುವ ಇದರಲ್ಲಿ ಎಷ್ಟು ಜನ ಬೇಕಾದರೂ ಇರಬಹುದು. ಇದು ಏಳು ಬಗೆಯ ಕುಣಿತ ಪ್ರಕಾರಗಳನ್ನು ಒಳಗೊಂಡಿದೆ (ಕೊಡ.ಜಿ)

ಉಮ್ಮತ್ತಿ: ಫಾಸ್ಟುಓಸ ಸ್ಟ್ರಮೋನಿಯಮ್: ಒಂದು ಜಾತಿಯ ಸಸ್ಯ. ಕರಿ ಉಮ್ಮತ್ತಿ, ಬಿಳಿ ಉಮ್ಮತ್ತಿ ಎಂದು ಎರಡು ಬಗೆಗಳಿವೆ. ಇದರ ಎಲೆ ಮತ್ತು ಕಾಯಿ ಔಷಧೀಯ ಗುಣ ಹೊಂದಿವೆ. ಕಾಯಿ ದುಂಡಗಿದ್ದು ಅದರ ಮೇಲೆ ಮುಳ್ಳುಗಳಿರುತ್ತವೆ (ಮಂಡ್ಯ.ಜಿ). **ಇರೂ:** *ದತ್ತೂರ; ಮದ್ದುಗುಣಿಕೆ; ಮದನಕಾಮೇಶ್ವರಿಹೂ ಗಿಡ*

ಉಮ್ಮರ: ಜಳ

ಉಮ್ಮಲಾಯ: ಒಂದು ಗಂಡು ದೈವದ ಹೆಸರು (ದಕ.ಜಿ)

ಉಮ್ಮಲಿ: ೧. ಉಗುಳು ೨. ದಮ್ಮು (ಗುಲ್ಬ.ಜಿ)

ಉಮ್ಮಲ್ತಿ: ಉಡುಪಿ ಜಿಲ್ಲೆಯ ಮೆಕ್ಕೆಕಟ್ಟೆ ಎಂಬಲ್ಲಿ ನಡೆಯುವ ಉತ್ಸವಕ್ಕೆ ಬರುತ್ತಿದ್ದ ಮಕ್ಕಳನ್ನು ಕದ್ದು ತಿನ್ನುತ್ತಿದ್ದಳು ಎಂದು ಹೇಳಲಾದ ರಕ್ಕಸಿ (ದಕ.ಜಿ)

ಉಮ್ಮಳಿ: ಉಂಬಳಿ; ಕೊಡುಗೆ

ಉಮ್ಮಾಯ: ಪ್ರೀತಿ; ಸಂತಸ; ಸಂಭ್ರಮ. **ಇರೂ:** *ಉಮ್ಮಾಯಿ*

ಉಮ್ಮಿ: ಜಳ್ಳು; ಹೊಟ್ಟು; ಭತ್ತದ ಸಿಪ್ಪೆ (ಉಕ)

ಉಮ್ಮಿಗಡ್ಡೆ: ಬತ್ತದ ಹೊಟ್ಟು (ಶಿವ.ಜಿ). **ಇರೂ:** *ಉಯಿ (ಚಿಮ.ಜಿ)* ನೋಡಿ. ಉಬ್ಬಲು

ಉಮ್ಮಿಗಿ: ಎಳೆ ತೆನೆಯಿಂದ ತೆಗೆದ ಕಾಳು; ಗೋಧಿಯ ಸಿಹಿ ತೆನೆ (ಬೆಳ.ಜಿ)

ಉಮ್ಮಿಗೊಬ್ರ: ಬತ್ತದ ಹೊಟ್ಟಿನಿಂದ ತಯಾರಿಸಿದ ಗೊಬ್ಬರ

ಉಮ್ಮಿಡಬ್ಬಿ: ಧಾನ್ಯದ ಹೊಟ್ಟು, ಕಸ, ಒಣಗಿದ ಎಲೆ, ಉಬ್ಬಲು ತುಂಬುವ ಡಬ್ಬಿ. **ಪ್ರ:** ಮುಖಕ್ಕೆ ಹಾರುತ್ತದೆಯೋ ಎಂದು ಹೆದರಿ ಬೇಗ ಬೇಗ ಎದ್ದು ಹೋಗಿ ತೆಣೆಯ ಕೆಳಗೆ ಅಂಗಳದಲ್ಲಿ ಇಟ್ಟಿದ್ದ ಉಮ್ಮಿಡಬ್ಬಿಗೆ ಎಲ್ಲವನ್ನು ಉಗುಳಿ ಬಂದಳು

ಉಮ್ಮಿಬಳ್ಳಿ: ಒಂದು ಔಷಧಿ ಸಸ್ಯ

ಉಮ್ಮುಣಿ: ನುಸಿಗಿಂತ ಕೊಂಚ ದೊಡ್ಡ ಕೀಟ (ಕೊಡ.ಜಿ)

ಉಮ್ಮುಳ: ೧. ದುಃಖ ೨. ಉಷ್ಣ

ಉಮ್ರಸೆಕೆ: ಬಿಸಿಲಿನ ಝಳ (ಬಿಜಾ.ಜಿ)

ಉಯಿಲುದಮ್ಮಟೆ: ನಾದ ಚೆನ್ನಾಗಿ ಬರುವ ತಮ್ಮಟೆ; ಭೇರಿ (ಮಂಡ್ಯ.ಜಿ)

ಉಯ್ಯಾಚ್: ವೈಶಾಖ (ದಕ.ಜಿ)

ಉಯ್ಯಂಗಾಟಿ: ಬಂಡಿಯ ಮೂಕಿಯ ಕೆಳಗೆ ಇರುವ ಸಾಧನ; ಎತ್ತುಗಳನ್ನು ಬಿಚ್ಚಿದಾಗ ಗಾಡಿಯ ಮೂಕಿಯು ನೆಲದ ಮೇಲೆ ಕುಳಿತುಕೊಳ್ಳಲು ನೆರವಾಗುವ ಸೊಂಡಿಲಿನಂಥ ಭಾಗ. **ಇರೂ:** *ಕುಯಂಗಾಟಿ*, ಕುದ್ರಿ ಮೂಲ *(ಮಂಡ್ಯ.ಜಿ)*

ಉಯ್ಯಪಾರು: ನೇಗಿಲು ಮತ್ತು ನೊಗದ ನಡುವೆ ಸಂಬಂಧ ಕಲ್ಪಿಸುವ ಮರದ ಪಟ್ಟಿ

ಉಯ್ಯಲುದಿಪ್ಪೆ: ಬೂದಿಗುಂಡಿ; ತಿಪ್ಪೆ

ಉಯ್ಯಾಲಮ್ಮ: ದೊಡ್ಡಬಳ್ಳಾಪುರ ತಾಲೂಕಿನ ಸಿಂಪಾಡಿಪುರದ ದೇವತೆ (ಬೆಂಗ್ರಾ.ಜಿ)

ಉಯ್ಯಾಲೆಉತ್ಸವ: ದೇವರುಗಳಿಗೆ ನಡೆಸುವ ಒಂದು ಸೇವೆ; ಎತ್ತರವಾಗಿ ನಿರ್ಮಿಸಿದ ಕಲ್ಲಿನ ಕಂಭಕ್ಕೆ ಉಯ್ಯಾಲೆ ಕಟ್ಟಿ ದೇವರ ಮೂರ್ತಿಯನ್ನು ಅದರಲ್ಲಿಟ್ಟು ನಡೆಸುವ ಸೇವೆ

ಉಯ್ಯಾಲೆಕಂಬ: ಉಯ್ಯಾಲೆ ಉತ್ಸವಕ್ಕೆ ಉಯ್ಯಾಲೆ ಹಾಕಲು ಸಾಧ್ಯವಾಗುವಂತಹ ಸುಮಾರು ಮೂವತ್ತರಿಂದ ನಲವತ್ತು ಅಡಿ ಎತ್ತರದ ಕಲ್ಲಿನ ಎರಡು ಕಂಬಗಳು

ಉಯ್ಯಾಲೆಕಟ್ಟೆ: ಸುಗ್ಗಿ ಹಬ್ಬದಲ್ಲಿ ದೇವರನ್ನು ಕೂರಿಸಲು ಉಯ್ಯಾಲೆ ಇರುವ ಕಟ್ಟೆ (ಹಾಸ.ಜಿ)

ಉಯ್ಯಾಲೆಕೋಲು: ಕೋಲಾಟದ ಒಂದು ಬಗೆ

ಉಯ್ಯಿ (ನಾ): ೧. ರಾಗಿ ಉಬ್ಬಲು ೨. (ಕ್ರಿ) ಹುಯ್ಯಿ; ಸುರಿ ೩. ಹೊಯ್ಯಿ; ಹೊಡೆ (ಮಂಡ್ಯ.ಜಿ)

ಉಯ್ಲ್: ಹುಯ್ಲು; ದೂರು (ದಕ.ಜಿ)

ಉಯ್ಸಪಾರ್: ನೇಗಿಲು ಹಾಗೂ ನೊಗಕ್ಕೆ ಸೇರಿಸಿ ಕಟ್ಟುವ ಹಲಗೆ (ಕೋಲಾ.ಜಿ)

ಉಯ್ಸಾಕ (ನಾ): ೧. ವೈಶಾಖ (ಕ್ರಿ) ೨. ಹೊಯ್ಯಿಸಲು

ಉರಕ: ಹೊಟ್ಟೆಕಿಚ್ಚಿನವ

ಉರಕಾಸು: ಮುಂಗೋಪಿ; ಆವೇಶ ತೋರಿಸು

ಉರಕುಚ್ಚಿ: ಉರಿಮೂತ್ರ

ಉರಕ್ಕಿ: ಹುರಿದ ಅಕ್ಕಿ; ಒಂದು ಬಗೆಯ ತಿನಿಸು

ಉರಕ್ಕಿಉಂಡೆ: ಹುರಕ್ಕಿ ಉಂಡೆ; ನವಣೆ ಸಜ್ಜೆ ಇವುಗಳನ್ನು ಹುರಿದು ಪುಡಿಮಾಡಿ ಅದರ ಜೊತೆಗೆ ಬೆಲ್ಲ ಗಸಗಸೆ ಒಣಶುಂಠಿ ಇತ್ಯಾದಿಗಳನ್ನು ಕಲೆಸಿಮಾಡಿದ ಉಂಡೆ (ಬಳ್ಳಾ.ಜಿ)

ಉರಕ್ವಾನಿ: ಹುರಿಸೆಣಬು (ಗುಲ್ಬ.ಜಿ)

ಉರಗನ: ಡೊಂಕು; ಸೊಟ್ಟ (ಕೋಲಾ.ಜಿ)

ಉರಗೆ: *ಸೆಂಟೆಲ್ಲಾ ಏಸಿಯಾಟಿಕಾ:* **ನೋಡಿ**– ಒಂದೆಲಗ

ಉರಚು: ೧. ಮರಿಹಾಕು ೨. ಪೊರೆಬಿಡು

ಉರಚುರಚಿ: ಒಂದು ಬಗೆಯ ಕಳೆಸಸ್ಯ

ಉರಟಳೆ: ಉಟ್ಟೆಳಿ; ನೇಕಾರಿಕೆಯಲ್ಲಿ ನಲವತ್ತನೇ ನಂಬರಿನ ಹತ್ತಿನೂಲು

ಉರಡುಮರ: ಕಂಬಳಿ ನೇಯ್ಗೆಯಲ್ಲಿ ಪ್ರತಿಬಾರಿ ಅಡ್ಡೆಳೆಯನ್ನು ಒತ್ತಿದ ನಂತರ ಬೀವನ್ನು ಹೊರಕ್ಕೆ ಎಳೆಯಲಾಗುತ್ತದೆ.

ಆಗ ಬೀವು ನೆಲದಲ್ಲಿ ಹಾಕಿಕೊಂಡಿರುವ ಈ ಮರದ ಮೇಲೆ ಓಡಾಡುತ್ತದೆ. **ನೋಡಿ–** ಬೀವು

ಉರಪಟ್ಟೆ: ೧. ಒಂದು ಗ್ರಾಮೀಣ ಆಟ ೨. ಸೀಳಿನ ಪಟ್ಟೆ

ಉರಮಂಜ: ಹುರ್ಮಂಜು ೧. ಕೆಂಪುಬಣ್ಣ ೨. ಹರಿಯುವ ಒಂದು ಹುಳ; ಉಪ್ಪಂಜಿಗ (ಮೈಸೂ.ಜಿ)

ಉರಮು (ಕಿ): ಮುತ್ತು; ನುಗ್ಗು; ದಾಳಿಮಾಡು. **ಪ್ರ:** ಸೇಂಗಾ ಗದ್ದಿಗೆ ದನಾ ಉರಮ್ತವ (ಉಕ)

ಉರಲ್: ೧. ಗದ್ದೆ ಉಳುಮೆ ಮಾಡುವಾಗ ಕೋಣಗಳನ್ನು ಚುರುಕುಗೊಳಿಸಲು ಹಾಡುವ ಹಾಡು ೨. ಉಳುವಾಗ, ಗಾಡಿ ಹೊಡೆಯುವಾಗ ಹಾಡುವ ಸೊಲ್ಲು (ದಕ.ಜಿ). **ಇರೂ:** *ಉರಾಲ್*

ಉರಲು: **ನೋಡಿ–** ಉಲ್ರ್ು

ಉರಲ್ಗಡ್ಡೆ: ಆಲೂಗಡ್ಡೆ (ಕೋಲಾ.ಜಿ). **ಇರೂ:** *ಬಟಾಟೆ; ಸಿಂಬ್ಲಾಗಡ್ಡೆ*

ಉರಲ್ಗಳ: ಎರುಕೋಲು ಕುಣಿತದಲ್ಲಿ ಕಾಪಾಳ ಎಂಬ ಕೊರಗ ವೇಷಧಾರಿಯು ಕೈಯಲ್ಲಿ ಬೆತ್ತ ಹಿಡಿದು ಹೇಳುವ ಪದ (ಕೊಡ.ಜಿ)

ಉರವೆ: ೧. ಕಾಣೆಯಾದ ಜಾನುವಾರು ಪತ್ತೆಯಾಗಲು ಅಥವಾ ದನಕ್ಕೆ ಸುಖಪ್ರಸವವಾಗಲಿ ಎಂದು ಪ್ರಾರ್ಥಿಸಿ ತೆಂಗಿನಕಾಯಿಯನ್ನು ಕಲ್ಲಿಗೆ ಅಪ್ಪಳಿಸಿ ಒಡೆಯುವ ಪದ್ಧತಿ ೨. ಗದ್ದೆಯ ಬದುವಿನಲ್ಲಿ ಮಣ್ಣಿನ ಒಳಗಡೆ ಇರುವ ಹುಳು (ದಕ.ಜಿ)

ಉರಸ: ೧. ಉರುಸು; ಮುಸ್ಲಿಮರ ಹಬ್ಬ; ಮಹಮ್ಮದೀಯ ಸಾಧುಗಳ ಪುಣ್ಯತಿಥಿ ಮತ್ತು ಅಂದು ನಡೆಯುವ ಜಾತ್ರೆ ೨. ಸೌದೆ ೩. ಅಂಗಾಲಿನಲ್ಲಿ ಉರಿ (ಗುಲ್ಬ.ಜಿ). **ಇರೂ:** *ಉರ್ಸಾ*

ಉರಿ (ನಾ): ೧. ಬೆಂಕಿಯ ಉರಿ; ಜ್ವಾಲೆ ೨. ಜ್ವರ (ಬೀದ.ಜಿ) ೩. ಹೊಟ್ಟೆ ಉರಿ ೪. ಮರದಲ್ಲಿರುವ ಕೆಂಪು ಇರುವೆ ೫. ಒಂದು ಸಣ್ಣ ಜಾತಿಯ ಏಡಿ; ಇದನ್ನು ಮೀನು ಹಿಡಿಯುವ ಗಾಳದ ಕೊಕ್ಕೆಗೆ ಮೀನಿನ ಆಹಾರವಾಗಿ ಉಪಯೋಗಿಸುತ್ತಾರೆ ೬. ಒಂದು ಸಣ್ಣ ಜಾತಿಯ ಚಿಪ್ಪು ಜೀವಿ (ದಕ.ಜಿ) ೭. ನೇಣು (ಕೋಲಾ.ಜಿ). **ಪ್ರ:** ಎಂಡ್ರನ್ನ ಉರ‍್ಯಾಕಿ ಬಾಯಾಗಾಕಿದ್ನು ೮. ಗೋಧಿ ರೊಟ್ಟಿಗಳನ್ನು ಮಾಡುವುದಕ್ಕಾಗಿ ಕಲೆಸಿದ ಹಿಟ್ಟಿನಿಂದ ಮಾಡಿದ ಸಣ್ಣ ಸಣ್ಣ ಉಂಡೆಗಳು (ಕ್ರಿ) ೯. ಸಿಟ್ಟಿಗೇಳು

ಉರಿಉಚ್ಚಿ: ಮೂತ್ರ ಮಾಡುವಾಗ ಉರಿಯುವುದು (ದಕ.ಜಿ)

ಉರಿಉರ್ದಲ: ಅತಿ ಹಗೆತನ (ದಕ.ಜಿ)

ಉರಿಎಣ್ಣೆ: ೧. ಪಾಡ್ದನಗಳಲ್ಲಿ ವರ್ಣಿತವಾದ ಒಂದು ಬಗೆಯ ಎಣ್ಣೆ ೨. ಎಣ್ಣೆಯಲ್ಲಿ ಅದ್ದಿದ ಬಟ್ಟೆಯ ತುಂಡು ಅಥವಾ ಬತ್ತಿಗೆ ಬೆಂಕಿ ಕೊಟ್ಟ ಬಳಿಕ ಅದರಿಂದ ತೊಟ್ಟಿಕ್ಕುವ ಎಣ್ಣೆಯ ಹನಿ; ಬಿಸಿ ಎಣ್ಣೆ (ದಕ.ಜಿ)

ಉರಿಕಣ್: ಕೆಂಪುಕಣ್ಣು. **ಇರೂ:** *ಕೋಳಿಕಣ್ಣು (ದಕ.ಜಿ)*

ಉರಿಕಾತಿ: ಉಗ್ರ ಸ್ವರೂಪದವಳು; ಮಾರಮ್ಮನ ಹೆಸರು **ಪ್ರ:** ಉಮ್ಮತ್ತೂರು ಉರಿಕಾತಿ (ಮಂಡ್ಯ.ಜಿ)

ಉರಿಕಾರ್: ರಾತ್ರಿಯಲ್ಲಿ ಸಮುದ್ರದ ತೆರೆಗಳ ಮೇಲೆ ಏನೋ ಮಿಂಚಿದಂತೆ ಆಗು (ದಕ.ಜಿ)

ಉರಿಕೆಲೆಂಜಿ: ಕಣ್ಣಿಗೆ ಬಿದ್ದರೆ ತಡೆಯಲಾರದಷ್ಟು ಉರಿಯನ್ನುಂಟು ಮಾಡುವ ಒಂದು ಬಗೆಯ ನುಸಿ (ದಕ.ಜಿ)

ಉರಿಕೊಡ್ಡು: ಒಂದು ಬಗೆಯ ಕೀಟ (ದಕ.ಜಿ)

ಉರಿಗಂಟು: ಕುರಿಗಳಿಗೆ ತಗಲುವ ಒಂದು ರೋಗ

ಉರಿಗಡ್ಡಿ: ಒಲೆಯ ಬೆಂಕಿಯನ್ನು ಮುಂದೆ ತಳ್ಳಲು ಬಳಸುವ ಕಬ್ಬಿಣದ ಕಡ್ಡಿ

ಉರಿಗಣ್ಣ: ಉರಿಯುವ ಕಣ್ಣುಳ್ಳವನು. ಶಿವನಿಗೆ ಮೂರನೇ ಕಣ್ಣು ಇದೆ, ಅದು ಉರಿಗಣ್ಣು ಎಂಬ ನಂಬಿಕೆ (ಶಿವ.ಜಿ)

ಉರಿಗದ್ದುಗೆ: ೧. ಬೊಪ್ಪಗೌಡನಪುರದ ಮಂಟೇಸ್ವಾಮಿಯ ಮೂಲಪೀಠ; ಅಗ್ನಿಪೀಠ; ಮಹಿಮಾವಂತರು ಮಾತ್ರ ಇಂಥ ಪೀಠದಲ್ಲಿ ಕುಳಿತಿರುತ್ತಾರೆ ಎಂಬ ಕಲ್ಪನೆ ೨. ಗುರುಗಳು ಕುಳಿತುಕೊಳ್ಳುವ ಪವಿತ್ರ ಸ್ಥಳ; ಜ್ವಾಲೆಯುಳ್ಳ ಪೀಠ (ಮೈಸೂ.ಜಿ/ಚಾಮ.ಜಿ)

ಉರಿಗಾರ: ಜೀರಿಗೆ ಮೆಣಸು ಹೆಚ್ಚಾಗಿ ಹಾಕಿ ತಯಾರಿಸಿರುವ ಸಾರು; ಇದನ್ನು ಮಳೆಗಾಲದ ವಿಪರೀತ ಚಳಿಯ ಸಂದರ್ಭದಲ್ಲಿ ಬಳಸುತ್ತಾರೆ. ಚಳಿಯಿಂದ ನರಳುತ್ತಿರುವ ದನಗಳಿಗೆ ಕುಡಿಸುತ್ತಾರೆ (ಚಿಮ.ಜಿ.)

ಉರಿಗಾವಲು: ಶ್ಮಶಾನ (ದಕ.ಜಿ)

ಉರಿಗಾಳು: ಹುರಿಗಾಳು; ಹೆಸರು ಕಡಲೆ ಹುರುಳಿ ಅಲಸಂದೆ ಮೊದಲಾದ ಕಾಳುಗಳನ್ನು ಹುರಿದು ಉಪ್ಪುಕಾರ ಸೇರಿಸಿ ಮಾಡಿದ ಕುರುಕಲು ತಿಂಡಿ; (ಚಾಮ.ಜಿ) **ನೋಡಿ–** ಉಪ್ಪುಕಡಲೆ (ಮೈಸೂ.ಜಿ/ಮಂಡ್ಯ.ಜಿ)

ಉರಿಗೆಜ್ಜೆ: ೧. ಸಣ್ಣಗೆಜ್ಜೆ ೨. ಆಲೆಮನೆಯಲ್ಲಿ ಬೆಲ್ಲದಪಾಕ ಹದಕ್ಕೆ ಬಂದಾಗ ಸಣ್ಣಸಣ್ಣ ಗೆಜ್ಜೆಗಳಂತೆ ಕಾಣಿಸುವ ಗುಳ್ಳೆಗಳು (ಮಂಡ್ಯ.ಜಿ/ರಾಮ.ಜಿ) ೩. ಹುರಿಗೆಜ್ಜೆ; ಎತ್ತುಗಳನ್ನು ಅಲಂಕರಿಸಲು ಬಳಸುವ ಗೆಜ್ಜೆ ಸರ (ರಾಯ.ಜಿ)

ಉರಿಗೊಡ್ಡು: ಹುಳುವಿನ ಬಾಧೆಗೊಳಗಾಗುವ ಬತ್ತದ ಪೈರು (ದಕ.ಜಿ)

ಉರಿಗೊಳ್ಳಿ: ಬೆಂಕಿ ಕೆದರುವ ಮರದ ಸನ್ನೆ; ಆಲೆಒಲೆಯಲ್ಲಿ ಬೆಂಕಿಯನ್ನು ಕೆದರಲು ಹಾಗೂ ಆಲೆಒಲೆಯೊಳಕ್ಕೆ ಕುಂಟೆಗಳನ್ನು ದೂಡಲು ನೂಕಲು ಉಪಯೋಗಿಸುವ ಸನ್ನೆ

ಉರಿಚಟ್ಲೆ: ಮುಟ್ಟಿದರೆ ಚರ್ಮದಲ್ಲಿ ವಿಪರೀತ ನವೆ, ಉರಿ ಉಂಟು ಮಾಡುವ ಸಸ್ಯ. ಕೆರೆದಷ್ಟೂ ಉರಿ ಏರುತ್ತದೆ. ಇದರಲ್ಲಿ ಕಾಡಿನ ಸಸ್ಯಕ್ಕಿಂತ ಊರಿನ ಸಸ್ಯ ಹೆಚ್ಚು ತೀಕ್ಷ್ಣ. ಭೂಮಿಹುಣ್ಣಿಮೆಯ ದಿನ ಮಾಡುವ ಬೆರಕೆಸೊಪ್ಪಿನ ಪಲ್ಯಕ್ಕೆ ಇದರ ಎಲೆಗಳನ್ನು ಬಳಸುತ್ತಾರೆ (ಶಿವ.ಜಿ) **ಇರೂ:** *ಪಂಚರಂಗಿ*

ಉರಿಚಮ್ಮಾಳಿಗೆ: ಅಲ್ಪರಾದವರು ಧರಿಸಿದರೆ ಬೆಂಕಿಯಾಗಿ ಸುಡುವ ಪಾದರಕ್ಷೆ. ಇದನ್ನು ಧರಿಸುವ ಸಾಮರ್ಥ್ಯ ಮಹಿಮಾವಂತರಿಗೆ ಮಾತ್ರ ಇರುತ್ತದೆ, ಮಂಟೇಸ್ವಾಮಿ ಇಂಥ ಪಾದರಕ್ಷೆ ಧರಿಸಿದ್ದ ಎಂಬ ನಂಬಿಕೆ ಭಕ್ತರದು (ಚಾಮ.ಜಿ)

ಉರಿಚಳಿ: ಚಳಿಜ್ವರ. ಇದಕ್ಕೆ ಜೋಡಿಯಾಗಿ ಉರಿ ಬೆಂಕಿ ಎಂದೂ ಹೇಳುತ್ತಾರೆ

ಉರಿಟ್ಟು: ಹುರಿಟ್ಟು; ಹುರಿದ ರಾಗಿಹಿಟ್ಟಿನಿಂದ ಮಾಡಿದ ವಿಶೇಷ ಆಹಾರ (ರಾಮ.ಜಿ)

ಉರಿನಾಗ: ಬೆಂಕಿಕಾರುವ ಸರ್ಪ (ದಕ.ಜಿ)

ಉರಿಪಕ್ಕ: ಜ್ವರ ಬಂದಾಗ ತುಟಿಯಲ್ಲಿ ಆಗುವ ಗುಳ್ಳೆ (ಬಿಜಾ.ಜಿ)

ಉರಿಬೆಂಕಿ ರೋಗ: ಮುಸುಕಿನ ಜೋಳದ ಬೆಳೆಗೆ ಬರುವ ರೋಗ

ಉರಿಬೆರ್ಮೆರ್: ಒಂದು ದೈವದ ಹೆಸರು (ದಕ.ಜಿ)

ಉರಿಬೇನೆ: ಮೈಯೆಲ್ಲ ಉರಿಯುವಂತಹ, ಸುಡುವಂತಹ ನೋವು; –ಜ್ವರ (ಬಿಜಾ.ಜಿ)

ಉರಿಭಂಡಾರಿ: ಮಂತ್ರಿಸಿ ಉರುಬಿದರೆ ಉರಿ ಕಾಣಿಸಿಕೊಳ್ಳುವ ಅರಿಶಿನಪುಡಿ

ಉರಿಮಂಡಲ: **ನೋಡಿ–** ಉರಿಮಂಡ್ಲ

ಉರಿಮಂಡ್ಲ/ಉರಿಮಂಡಲ: ಒಂದು ಜಾತಿಯ ಹಾವು. ಇದರ ಜೊಲ್ಲು ಮನುಷ್ಯರ ಚರ್ಮಕ್ಕೆ ತಾಗಿದರೂ ಉರಿಯುಂಟಾಗುತ್ತದೆ

ಉರಿಮಕ: ಉರಿಯುವ ಮುಖವುಳ್ಳವನು; ಸಿಡುಕ

ಉರಿಮದ್ದು: ೧. ಕೈಮದ್ದು; ಕೈಮಸಗು ೨. ಊಟದಲ್ಲಿ ಹಾಕುವ ವಿಷ. ಈ ಮದ್ದು ಹಾಕಿದ ಊಟಮಾಡಿದರೆ ಮೈ ಉರಿಬಂದು ಸಾಯುತ್ತಾರೆ. ಶತ್ರುಗಳನ್ನು ಈ ರೀತಿ ಸಾಯಿಸಲಾಗುತ್ತಿತ್ತು ಎನ್ನಲಾಗುತ್ತದೆ

ಉರಿಮಲ್ಲಿಗಿ: ಒಂದು ಜಾತಿಯ ಕಳೆಸಸ್ಯ (ಉಕ)

ಉರಿಮಾರಮ್ಮ: ೧. ಗ್ರಾಮೀಣ ಶಕ್ತಿದೇವತೆಗಳಲ್ಲಿ ಪ್ರಭಾವಶಾಲಿಯಾದವಳು; ಊರೂರುಗಳ ಮೇಲೆ ತಿರುಗುವ ಮಾರಿದೇವತೆ ೨. ಜಲ ಮತ್ತು ಜಲಸಂಬಂಧಿ ರೋಗಗಳ ದೇವತೆ

ಉರಿಮಾರಿ ಕುಣಿತ: ಕರ್ನಾಟಕದ ಒಳನಾಡು ಪ್ರದೇಶಗಳಲ್ಲಿ ಮಾರಮ್ಮನ ವಿಗ್ರಹವನ್ನು ಹೊತ್ತುಕೊಂಡು ಕುಣಿದು ಭಿಕ್ಷೆಪಡೆಯುವ ಒಂದು ಕಲೆ

ಉರಿಮೂಗು: ಉಸಿರಾಡುವಾಗ ಶಬ್ದ ಬರುವ ಆಕಳು (ಉಕ.ಜಿ)

ಉರಿಮೂಡೆ: ಕೆಂಪಿರುವೆಗಳ ಗೂಡು (ದಕ.ಜಿ)

ಉರಿಮೆ: **ನೋಡಿ–** ಉರುಮೆ (ಧಾರ.ಜಿ)

ಉರಿಯ ಕೆಮ್ಮೈರೆ: ಉರಿಯೆ ಜಾತಿಯ ಕೋಳಿಯಲ್ಲಿ ಒಂದು ವಿಧ (ದಕ.ಜಿ)

ಉರಿಯಂಡೆ: ಒಂದು ಜಾತಿಯ ಮೀನು (ದಕ.ಜಿ)

ಉರಿಯಾದೇವ: ಸೂರ್ಯ (ಚಿಮ.ಜಿ)

ಉರಿಯೆ: ಕೆಂಪು ಬಣ್ಣದ ಕೋಳಿ (ದಕ.ಜಿ)

ಉರಿಯೆಕುಪ್ಪೆ: ಕಪ್ಪು ಮಿಶ್ರಿತ ಕೆಂಪುಬಣ್ಣದ ಗರಿಗಳಿರುವ ಕೋಳಿ (ದಕ.ಜಿ)

ಉರಿಯೊಲು: ೧. ಒಂದು ಕೀಟ (ದಕ.ಜಿ) ೨. ಕಾಡುಪಾಪ (ದಕ.ಜಿ)

ಉರಿಲಿಂಗ: ಜ್ಯೋತಿರ್ಲಿಂಗ

ಉರಿಸಿಂಗ: ಕಾಡಿನಲ್ಲಿ ಮರದ ಎಲೆಗಳ ಮೇಲೆ ಬದುಕುವ ರೇಷ್ಮೆ ಹುಳುವಿನಂತಹ ಹುಳು; ಇದು ಮೈಗೆ ತಾಗಿದರೆ ವಿಪರೀತ ಉರಿ ಆಗುತ್ತದೆ (ಚಿಮ.ಜಿ.)

ಉರಿಸಿಂಗಿ: ನೆಗೆಯುವ ಹಾವು; ವಯಸ್ಸಾದ ನಾಗರಹಾವು. ಉರಿಮುಖದವರನ್ನು ಕಂಡಾಗ ಉರಿಸಿಂಗಿ ಮೊಕದವ ಎನ್ನುತ್ತಾರೆ

ಉರಿಸಿಂಗಿಕ್ವಾರಡ: ಹಾವಿನ ಆಕಾರವನ್ನು ಹೋಲುವ ಕೊರಡೆ; ಚುರುಚುರು ಉರಿಯನ್ನುಂಟು ಮಾಡುವ ಚಾವಟಿ; ವಿಶೇಷಬೆತ್ತ; ಉರಿಮಾರಿಯವರು ಹಾಗೂ ಸೋಮನ ಕುಣಿತದವರು ಬಳಸುವ ಕೊರಡೆ.

ಉರಿಸೊಣಗಿ: ನಸುಗುನ್ನಿ (ಉಕ)

ಉರಿಹುಂಜ: ಕೋಪದ ಹುಂಜ (ದಕ.ಜಿ)

ಉರಿಹೊಂಡು: ಜ್ವರ ಬರುವುದು (ಗುಲ್ಬ.ಜಿ)

ಉರು/ಒರು: ಬಿಂಬ; ಪ್ರತಿರೂಪ; ದೇವರುಗಳ ಮೂರ್ತಿ. ಸಾಮಾನ್ಯವಾಗಿ ಮರದಿಂದ ಮಾಡಿರುತ್ತಾರೆ (ದಕ.ಜಿ)

ಉರುಂಬು (ಕ್ರಿ): ಉಜ್ಜಿ ಬಿಡಿಸು **ಪ್ರ:** ಮೋತೆನ ಚೆನ್ನಾಗಿ ಉರುಂಬು (ದಕ.ಜಿ)

ಉರುಕಜ್ಜಿ: ನವೆ ಇರುವ, ಕೆರೆದರೆ ರಸಿಕೆಯಾಡುವ ಚರ್ಮವ್ಯಾಧಿ

ಉರುಕನ: *ಡೈಕ್ಯಾಂತಿಯಮ್ ಆನ್ಯುಲೇಟಮ್:* ಒಂದು ಬಗೆಯ ಹುಲ್ಲು. ***ಇರೂ:*** *ಗಂಜಳಗರಿಕೆ ಹುಲ್ಲು*

ಉರುಕಲ್ಲು: ನೆಲನುಣುಪು ಮಾಡಲು ಬಳಸುವ ಕಲ್ಲು; ಉಜ್ಜುಗಲ್ಲು

ಉರುಕು: ಒರಟಾಗಿರುವುದು (ಚಿತ್ರ.ಜಿ)

ಉರುಕ್ಲು: ಹುರಿದ ಮಾಂಸಾಹಾರ (ಮಂಡ್ಯ.ಜಿ) **ನೋಡಿ–** ಉರ್ಬಾಡು

ಉರುಗಲ ಮರ: ಗಾಯ ವಾಸಿಮಾಡುವ ಗುಣವುಳ್ಳ ಒಂದು ಮರ (ಚಾಮ.ಜಿ)

ಉರುಗುದಾರ: ಕುರಿ ಉಣ್ಣೆಯ ದಾರ (ಮೈಸೂ.ಜಿ)

ಉರುಗೇಪ್ಪಿ: ಜೇಷ್ಠಾ ನಕ್ಷತ್ರದಲ್ಲಿ ಬೀಳುವ ಮಳೆ (ರಾಮ.ಜಿ)

ಉರುಗೋಲು: ತೆಪ್ಪ; ಹರಿಗೋಲು. ***ಇರೂ:*** *ಅರುಗ್ಲು*

ಉರುಚಿಮರ: ಬುಗುರಿಮರ

ಉರುಚು: ಮರಿಹಾಕು (ಶಿವ.ಜಿ)

ಉರುಟಣೆ: ವಧೂವರರ ವಿನೋದಕ್ರೀಡೆ. ಮದುವೆಯಲ್ಲಿನ ಒಂದು ಆಚರಣೆ; ಹೂವಿನ ಚೆಂಡಿನ ಆಟ; ನಾಗೋಲೆ ಶಾಸ್ತ್ರ. ಮದುವೆಯ ಹಿಂದಿನ ದಿನ ವಧುವರರು ಹಸೆ ಮೇಲೆ ಕುಳಿತಾಗ ಬ್ರಾಹ್ಮಣ ಸಮುದಾಯದಲ್ಲಿ ಹಾಡುವ ಹಾಡುಗಳಿಗೂ ಉರುಟಣೆ ಹಾಡುಗಳೆಂದೇ ಹೆಸರು (ಮೈಸೂ.ಜಿ)

ಉರುಟು: ೧. ದಪ್ಪ ಎಳೆ; ಒರಟಾದ ದಾರದ ಎಳೆ ೨. ದುಂಡಗಿರುವ ಆಕಾರ ೩. ಚಕ್ರಾಕಾರವಾಗಿರುವ; ಗೋಲವಾದ (ಉಕ.ಜಿ) (ಕ್ರಿ) ೪. ಹೋರಾಡು; ಸ್ಪರ್ಧಿಸು (ಧಾರ.ಜಿ)

ಉರುಟು ಕಿರೀಟ: ರಾಜವೇಷದ ಕೋಲು ಕಿರೀಟ

ಉರುಟುನಾಮ: ಹಣೆಯ ತಿಲಕ. ಹರಿಕಾಂತ ಜನಾಂಗದವರು ಮದುಮಗನ ಹಣೆಗೆ ಇಡುವ ಬಾಳೆಕಾಯಿ ಅಂಟಿನಲ್ಲಿ ಕಲಸಿದ ಅಕ್ಕಿಯ ನಾಮ (ಉಕ.ಜಿ)

ಉರುಟುಬೊಟ್ಟು: ೧. ಪುರುಷ ವೇಷಗಳು ಅಡ್ಡನಾಮ ಅಥವಾ ಉದ್ದನಾಮದ ಮಧ್ಯಕ್ಕೆ ಬರೆಯುವ ಬೊಟ್ಟು; ತಿಲಕ ೨. ಸ್ತ್ರೀವೇಷಗಳ ಹಣೆಯ ವೃತ್ತಾಕಾರದ ಬೊಟ್ಟು (ದಕ.ಜಿ)

ಉರುಟೊಳಗ: ಊದುಗೊಳವೆ (ಶಿವ.ಜಿ)

ಉರುಟೋಕೋಲು: ಲಟ್ಟಣಿಗೆ; ಲತ್ತೋಡು. ***ಇರೂ:*** *ಹಪ್ಪಳದ ಗುಂಡು (ಮಂಡ್ಯ.ಜಿ)*

ಉರುಡು: ಮಲಗು; ಉರುಳು (ಮಲೆ)

ಉರುಡುಹಾಕು: ಮಗುವನ್ನು ಹಾಸಿಗೆ ಇತ್ಯಾದಿಗಳ ಮೇಲೆ ಮಲಗಿಸು (ಮಲೆ). **ಪ್ರ:** ಹಾಸಗೆಯ ಮೇಲೆ ಅಂಗಾತನೆ ಉರುಡು ಹಾಕಿದ್ದ ಬತ್ತಲೆ ಮೈಯ ಮೊಮ್ಮಗ........

ಉರುಡುಹಾಸಿಗೆ: ಉರುಳುವ ಹಾಸಿಗೆ (ಮಲೆ)

ಉರುಣಗಿ: ಉಪಟಳ; ಸೊಕ್ಕು (ಧಾರ.ಜಿ)

ಉರುತೆ: ಅಳಿಲು. ***ಇರೂ:*** *ಉಡಿತೆ*

ಉರುದುಳ್ಳಿ: ಹುರಿದ ಹುರುಳಿ (ಕೋಲಾ.ಜಿ)

ಉರುನಾಳಿ: ಮೂಟೆಗಳಿಂದ ಸ್ವಲ್ಪ ಧಾನ್ಯ, ಕಾಳು ತೆಗೆಯಲು ಬಳಸುವ ಕಬ್ಬಿಣದ ಸಾಧನ. ***ಇರೂ:*** *ಸಕ್ಕರಬುತ್ತಿ; ಚಕ್ರಗುತ್ತಿ*

ಉರುಪು: ೧. ಉರಿಯುವಿಕೆ; ಅಂಗಾಂಗದ ಉರಿತ (ಗುಲ್ಬ.ಜಿ) ೨. ಬೆಂಕಿ ಹೊತ್ತಿಸು (ಯಾದ.ಜಿ) ೩. ಉರುಬು; ಬಾಯಿಯಿಂದ ಗಾಳಿಹಾಕು (ದಕ.ಜಿ)

ಉರುಪ್ಪಿಬಿಡು: ಕಾವಲಿಲ್ಲದೆ ದನಗಳನ್ನು ಮೇಯಲು ಅಟ್ಟುವುದು

ಉರುಪ್ಲಿದನ: ಹೊಲಗಳಲ್ಲಿ ಪೈರಿಲ್ಲದಾಗ ಅಡ್ಡಾಡಿ ಮೇಯಲು ಬಿಡುವ ದನ (ಬಳ್ಳಾ.ಜಿ)

ಉರುಬತ್ತಿಯೋನು: ಊರೂರು ಮೇಲೆ ಬಂದ ಕಾಮುಕ

ಉರುಬಲು: ೧. ಒಣಮಣ್ಣು ೨. ಹೊಟ್ಟು

ಉರುಬಿಯ್ತು: ಹುರಿ ಬಿಗಿತ; ಹಗ್ಗದ ಬಿಗಿತ

ಉರುಬು: ೧. ಬಾಯಿಂದ ಊದು; ಉಸಿರುಬಿಡು ೨. ಪರಾಕ್ರಮದಿಂದ ಮೇಲೆಬೀಳು; ಹಲ್ಲೆಮಾಡು ೩. ಸೊಪ್ಪು ಮಿಟ್ಟೆಕಾಯಿ ಎಲ್ಲವನ್ನೂ ಒಟ್ಟಿಗೆ ಒಚ್ಚಿ ತೆಗೆಯುವುದು (ದಕ.ಜಿ). *ಇರೂ: ಉರ್ಗ್ (ಮೈಸೂ.ಜಿ)*

ಉರುಬೆ: ಉಪಟಳ; ಆಕ್ರಮಣ (ದಕ.ಜಿ)

ಉರುಬ್ಬಾಂಜರಿ ಕಲ್ಲು: ಒಂದು ವಿಧದ ಕಲ್ಲು (ಬಳ್ಳಾ.ಜಿ)



ಉರುಮೆ: ಚರ್ಮವಾದ್ಯ. ಕಂಚು ಅಥವಾ ಹಿತ್ತಾಳೆ ಉರುಳೆಯಂತಹ ಹೊಳವಿನ ಎರಡು ಕಡೆಗೂ ಹದ ಮಾಡಿದ ಆಡಿನ ಚರ್ಮವನ್ನು ಹೊದಿಸಿ ದಾರದಿಂದ ಬಿಗಿದಿರುತ್ತಾರೆ. ಬಡಿಯಲು ಎರಡು ಗಟ್ಟಿಯಾದ ತೆಂಗಿನ ಅಥವಾ ಈಚಲುಮರದ ಗರಿಗಳ ಕಡ್ಡಿಗಳನ್ನು ಬಳಸುತ್ತಾರೆ. ಊರೂರು ಮೇಲೆ ಮಾರಮ್ಮನನ್ನು ಹೊತ್ತು ತಿರುಗುವವರು ಈ ವಾದ್ಯವನ್ನು ಬಳಸುತ್ತಾರೆ

ಉರುಲುಸುಳಿ: ದನಗಳ ಕುತ್ತಿಗೆಯಲ್ಲಿರುವ ಸುಳಿ

ಉರುವಾಳ: ಮುಡುವಾಳ; ಪೂಜೆಗೆ ಬಳಸುವ ಒಂದು ಬಗೆಯ ಸುಗಂಧಿತ ಸಸ್ಯ

ಉರುವಿನ ನೆಲ: ಜೌಗು ಭೂಮಿ

ಉರುವೆ: ಅಡಿಕೆಯ ಎಳೆಕಾಯಿ (ದಕ.ಜಿ)

ಉರುವೊಲು: ಪ್ರವೇಶದ್ವಾರವನ್ನು ಮುಚ್ಚಲು ಅಥವಾ ತೆರೆಯಲು ಅನುಕೂಲವಾಗುವಂತೆ ಮಾಡಿದ ಗಣೆಗಳ ರಚನೆ; ಹಟ್ಟಿಯ ಬಾಗಿಲ ಇಕ್ಕಡೆಗಳಲ್ಲಿ ಪರಸ್ಪರ ಅಭಿಮುಖವಾಗಿ ನೆಡಲಾದ ಮರದ ಎರಡು ತೊಲೆಗಳಲ್ಲಿ ಸಮಾಂತರದಲ್ಲಿರುವ ತೂತುಗಳ ಮೂಲಕ ಸರಿಸಬಹುದಾದ ಗಣೆಗಳನ್ನು ಅಳವಡಿಸಿರುತ್ತದೆ (ದಕ.ಜಿ)

ಉರುಳಿ: ಅಗಲ ಬಾಯುಳ್ಳ ಕಂಚಿನ ಪಾತ್ರೆ; ಮಣ್ಣಿನ ವೃತ್ತಾಕಾರದ ಪಾತ್ರೆ (ದಕ.ಜಿ)

ಉರುಳಿಕೆ: ೧. ಮದ್ದಲೆ ಚಂಡೆಗಳನ್ನು ಬಾರಿಸುವ ಒಂದು ವಿಧಾನ ೨. ಉರುಳು ಸೇವೆ. *ಇರೂ: ಹೊರಳಿಕೆ; ಹೊರಡಿಕೆ*

ಉರುಳಿನೈವೇದ್ಯ: ದೇವರಿಗೆ ಉರುಳಿ ಪಾತ್ರೆಯಲ್ಲಿ ಸಮರ್ಪಿಸುವ ನೈವೇದ್ಯ (ದಕ.ಜಿ)

ಉರುಳುಗಣ್ಣಿ: ಉರುಳಿನ ಕುಣಿಕೆ

ಉರುಳುಬೇಟೆ: ೧. ಬೇಟೆಯ ಒಂದು ತಂತ್ರ. ಪ್ರಾಣಿಗಳು ಓಡಾಡುವ ಜಾಗದಲ್ಲಿ ಹಗ್ಗದ ಉರುಳುಗಳನ್ನು ಕಟ್ಟಿ ಕಾಡುಹಂದಿ, ಕಾಡುಕುರಿ ಹಿಡಿಯುವ ವಿಧಾನ (ಚಿಬ.ಜಿ) ೨. ಬುಡ್ಗ ಜಂಗಮರು ಅಳಿಲುಬೇಟೆ ಮಾಡುವಾಗ ಮರದ ಬುಡಕ್ಕೆ ಕುದುರೆ ಬಾಲದ ಕೂದಲನ್ನು ಉರುಳಾಗಿ ಕಟ್ಟಿ ಅದರ ಸುತ್ತಮುತ್ತ ಹಿಟ್ಟನ್ನು ಮೆತ್ತುತ್ತಾರೆ. ಹಿಟ್ಟನ್ನು ತಿನ್ನಲು ಬಂದ ಅಳಿಲು ಉರುಳಿಗೆ ಸಿಕ್ಕಿ ಬೀಳುತ್ತದೆ

ಉರುಳುಸೇವೆ: ಹರಕೆ ಹೊತ್ತ ಭಕ್ತರು ತಣ್ಣೀರಿನಲ್ಲಿ ಮಿಂದು ಒದ್ದೆ ಬಟ್ಟೆಯಲ್ಲಿಯೇ ದೇವಸ್ಥಾನದ ಸುತ್ತಲೂ ಉರುಳುತ್ತ ಸೇವೆ ಸಲ್ಲಿಸುವುದು (ಮೈಸೂ.ಜಿ)

ಉರುಳೂರಮ್ಮ: ಮಂಡ್ಯದ ಹತ್ತಿರ ಚಿಕ್ಕಣ್ಣಪ್ಪನ ದೊಡ್ಡಿ ಎಂಬ ಗ್ರಾಮದ ಹತ್ತಿರವಿರುವ ಒಂದು ಹುತ್ತ. ಇದನ್ನೇ ಉರುಳೂರಮ್ಮನೆಂದು ಕರೆದು ಪೂಜಿಸುವ ಪದ್ಧತಿ ಇದೆ (ಮಂಡ್ಯ.ಜಿ)

ಉರೂಣಗಿ: ೧. ಬರವಣಿಗೆ ೨. ಜರ್ಬಿನ ನಡವಳಿಕೆ

ಉರೆ: ೧. ಹಗ್ಗ ೨. ಅತಿಶಯ; ಬಹಳ (ಶಿವ.ಜಿ)

ಉರೆಕಲ್ಲ್: ಪಾಡ್ದನಗಳಲ್ಲಿ ವರ್ಣಿತವಾದ ಒಂದು ಕಲ್ಲು (ದಕ.ಜಿ)

ಉರ್ಕಿ: ೧. ಕಿಸಂಕಿ ಎಂಬ ಒಂದು ಬಗೆಯ ಗಿಡ ಮತ್ತು ಅದರ ಬೇರು. ಈ ಗಿಡದ ನಾರನ್ನು ನವಜಾತ ಶಿಶುವಿನ ಸೊಂಟಕ್ಕೆ ಕಟ್ಟುತ್ತಾರೆ ೨. ಹುರುಪೆ; ಗಾಯದ ಮೇಲಿನ ಚರ್ಮ (ದಕ.ಜಿ)

ಉರ್ಕು: ೧. ಒಂದು ಬಗೆಯ ಆಭರಣ ೨. ತಾಯತ

ಉರ್ಗಗಡ್ಡೆ: ಗದ್ದೆಯಲ್ಲಿ ಬೆಳೆಯುವ ಒಂದು ಬಗೆಯ ಹುಲ್ಲು; *ಇರೂ: ಕೊನ್ನಾರಿಗೆಡ್ಡೆ*

ಉರ್ಗಪತ್ತಿ: ವೀಳ್ಯೆದೆಲೆಗಳನ್ನು ಬಳ್ಳಿಯಿಂದ ಬೇರ್ಪಡಿಸಲು ಉಪಯೋಗಿಸುವ ಸಣ್ಣ ಸಾಧನ; ಉಗ್ರು (ಬೆಂಗ್ರಾ.ಜಿ)

ಉರ್ರಾ: ಕತ್ತು ಬಾಗಿರುವುದು; ಉರುಗಿಕೊಂಡದ್ದು; ಓರೆಯಾದದ್ದು

ಉರ್ಗುದಾರ/ಉರುಗುದಾರ: ಉಣ್ಣೆ ಅಥವಾ ಕೂದಲಿನಿಂದ ಹುರಿಮಾಡಿದ ದಾರ (ಚಾಮ.ಜಿ)

ಉರ್ಚು: ಉಚ್ಚು; ಮಲವಿಸರ್ಜಿಸು (ದಕ.ಜಿ)

ಉರ್ಜಿ: ೧. ತೇರನ್ನು ವೇಗವಾಗಿ ಚಲಿಸದಂತೆ ತಡೆಯಲು ಚಕ್ರಕ್ಕೆ ಅಡ್ಡಕೊಡುವ ಮರದಕೊರಡು; ಒದೆ (ಮೈಸೂ.ಜಿ) ೨. ತೇರನ್ನು ಎಳೆಯಲು ಬಳಸುವ ದಪ್ಪ ಹಗ್ಗ. **ಇರೂ:** ಇರ್ಜಿ, ವರ್ಜಿ

ಉರ್ಟಾಲುಟ್ಟು: ನಲವತ್ತನೇ ನಂಬರ್ ನೂಲಿನ ಸೀರೆ; ಉರುಟು ಸೀರೆ; ಒರಟು ಸೀರೆ. **ಇರೂ:** ಉರ್ಟಾಸೀರಿ

ಉರ್ಟಾಸೀರಿ: ನೋಡಿ– ಉರ್ಟಾಲುಟ್ಟು

ಉರ್ಟಿ: ತಿರುಗಿಸಿ ಹೇಳು (ದಕ.ಜಿ)

ಉರ್ಡಾಟ: ೧. ಜಟ್ಟಿಕಾಳಗ ೨. ಜಗಳ (ದಕ.ಜಿ)

ಉರ್ಡು (ಕ್ರಿ): ೧. ಉರುಳು ೨. ಒಬ್ಬರ ಮೇಲೊಬ್ಬರು ಬಿದ್ದು ಜಗಳ ಮಾಡು (ದಕ.ಜಿ)

ಉರ್ತ: ೧. ಹೆಚ್ಚು ೨. ಲಾಭ. **ಪ್ರ:** ಉರ್ತಾ ನಷ್ಟಾ ನೋಡಿ ಕೆಲಸ ಒಪ್ಪಿಕೊ

ಉರ್ತಬಾಡು: ಹುರಿದ ದನದ ಮಾಂಸ; ಕರುಳು ರಕ್ತ ಇರ್ಲಿ ದೊಮ್ಮೆ ಕರ್ಲು ಪಟ್ಟೆ ತಲೆಮಾಂಸ ಮೊದಲಾದ ಮೆದುವಾದ ಮಾಂಸವನ್ನು ಕೊಬ್ಬು ಸೇರಿಸಿ ಹುರಿದ ಬಾಡು. ಮಾಂಸದ ಅಡುಗೆ ಆಗುವುದಕ್ಕೆ ಮುಂಚೆ, ಕಾಯುತ್ತಿರುವ ಹಿರಿಯರಿಗೆ ಮಕ್ಕಳಿಗೆ ಬಾಯಿರುಚಿಗೆ ತಿನ್ನಲು ಕೊಡುವರು (ಕೋಲಾ.ಜಿ)

ಉರ್ತರಕ್ತ: ಹುರಿದ ರಕ್ತ; ದನ, ಎಮ್ಮೆ, ಕುರಿ, ಮೇಕೆಗಳ ರಕ್ತವನ್ನು ಹುರಿದು ತಯಾರಿಸಿದ ವ್ಯಂಜನ

ಉರ್ತಾವಳಿ: ದುಷ್ಟತನ; ಸೊಕ್ಕು, ಸಬೂಬುಗಳ ನಡವಳಿಕೆ

ಉರ್ತೆ: ೧. ಅರಳಿ ಎಲೆಯಾಕಾರದ ಆಭರಣ ೨. ಅಳಿಲು (ಕೋಲಾ.ಜಿ)

ಉರ್ನೆಳ: ಉರಿಕೊಡುವ ನೊಣ (ಉಡು.ಜಿ)

ಉರ್ಪು (ಕ್ರಿ): ೧. ಕುಡಿ (ಉಕ) (ನಾ) ೨. ಸಂಕಟ (ಮಂಡ್ಯ.ಜಿ)

ಉರ್ಪುಮೈ: ತರಕಲಾದ ಚರ್ಮ ಇರುವುದು. **ಪ್ರ:** ಓತಿಕ್ಯಾತನದು ಉರ್ಪುಮೈ

ಉರ್ಬಿಲಿ: ನಗ್ನ (ದಕ.ಜಿ)

ಉರ್ಮಾರಮ್ಮ: ನೋಡಿ– ಉರಿಮಾರಮ್ಮ

ಉರ್ಮಿತ್ತಾಯ: ಕಾಸರಗೋಡು ಭಾಗದಲ್ಲಿರುವ ನಾಗಬಿರ್ಮೆರ್ ದೈವದ ಇನ್ನೊಂದು ಹೆಸರು. ನಾಗಬನದಲ್ಲಿ ಇದರ ವಾಸ. ಬಿರ್ಮೆರ್ ರೀತಿಯ ಆಯುಧಗಳನ್ನು ಹೊಂದಿರುವ ಇದರ ವಾಹನ ಕುದುರೆ (ದಕ.ಜಿ)

ಉರ್ಮೆ: ಉರುಮೆ (ಮಂಡ್ಯ.ಜಿ)

ಉರ್ಯಪಂಚೋಣಿ: ಕೆಂಪು ಮಿಶ್ರಿತ ಬಿಳಿ ಬಣ್ಣದ ಕೋಳಿ (ದಕ.ಜಿ)

ಉರ್ಯಪೆರಡಿಂಗ: ಒಂದು ವಿಶಿಷ್ಟ ಬಣ್ಣದ ಕೋಳಿ (ದಕ.ಜಿ)

ಉರ್ಯೆಮಂಜಳ್: ಕೆಂಪು ಹಳದಿ ಮಿಶ್ರಿತ ಬಣ್ಣದ ಕೋಳಿ (ದಕ.ಜಿ)

ಉರ್ಯೊಲು: ಕಾಡುಪಾಪ (ದಕ.ಜಿ)

ಉರ್ಲ್/ಉರುಳು: ಬೆಳೆ ನಾಶವಮಾಡಲು ಬರುವ ಕಾಡುಹಂದಿಗಳನ್ನು ಕೊಲ್ಲಲು ಬಳಸುವ ಮುಂಡಿನಾರಿನ ಹಗ್ಗದ ಕುಣಿಕೆ (ದಕ.ಜಿ)

ಉರ್ಲಗಡ್ಡಿ ಗೊಜ್ಜು: ಆಲೂಗೆಡ್ಡೆಗೊಜ್ಜು. ಆಲೂಗೆಡ್ಡೆಯನ್ನು ಬೆಂಕಿಯಲ್ಲಿ ಸುಟ್ಟು ಅದಕ್ಕೆ ಉಪ್ಪು ಮೆಣಸಿನಕಾಯಿ ಈರುಳ್ಳಿ ಬೆಳ್ಳುಳ್ಳಿ ಹುಣಸೆಹಣ್ಣು ಸೇರಿಸಿ ಕಿವುಚಿ ಮಾಡಿದ ವ್ಯಂಜನ (ಕೋಲಾ.ಜಿ)

ಉರ್ಲಿ: ೧. ಕಂಚಿನಿಂದ ತಯಾರಿಸಿದ ಅಗಲ ಬಾಯಿಯ ಪಾತ್ರೆ (ದಕ.ಜಿ) ೨. ಹುರುಳಿ; ಉಳ್ಳಿ

ಉರ್ಲಿತೆರ್ಲು: ಹುರುಳಿತೆರ್ಲು. ಕಾರದಪುಡಿ ಹುಣಸೆಹಣ್ಣು ಈರುಳ್ಳಿ; ಬೆಳ್ಳುಳ್ಳಿ; ಸಾಂಬಾರು ಪುಡಿಯನ್ನು ಸೇರಿಸಿ ಖಾರ ರುಬ್ಬಿಕೊಂಡು ನೀರು ಸೇರಿಸಿ ಉಪ್ಪು ಹಾಕಿ ಕುದಿಸಿ ಕುದಿಯುವಾಗ ಹುರುಳಿಕಾಳು ಸೇರಿಸಿ ಕುದಿಸಿ ಒಗ್ಗರಣೆ ಹಾಕಿ ಮಾಡಿದ ಸಾರು (ಕೋಲಾ.ಜಿ)

ಉರ್ಲಿಯವನು: ದೇವಸ್ಥಾನದಲ್ಲಿ ನೈವೇದ್ಯ ಬೇಯಿಸುವ ಪರಿಚಾರಕ (ದಕ.ಜಿ)

ಉರ್ಲ್ವಿಡಿ: ೧. ನಿರ್ಬಂಧಿಸಿ ಹಣ ವಸೂಲಿ ಮಾಡು ೨. ಆಜ್ಞಾಧಾರಕನಾಗುವಂತೆ ಒತ್ತಡ ಹೇರು

ಉರ್ಲು/ಉರಲು: ೧. ಬೇಸಿಗೆಯಲ್ಲಿ ಎತ್ತುಗಳಿಗೆ ಖಾಯಿಲೆಯಾಗದಿರಲಿ ಎಂದು ಹಂದಿಯ ತುಪ್ಪ ಹಾಗೂ ಇತರೆ ಗಿಡಮೂಲಿಕೆ ಹಾಕಿ ತಯಾರಿಸಿದ ಔಷಧಿ (ಚಿಬ.ಜಿ) ೨. ಸಂಕಷ್ಟ ೩. ಹತ್ತಿ ಬೆಳೆಯ ಹೂವು ಎಳೆಯ ಕಾಯಿಯಾಗಿ ಪರಿವರ್ತನೆಗೊಂಡ ಅವಸ್ಥೆ ೪. ನೇಣು

ಉರ್ಲುಗಂಟು: ಉಸಿರು ಸಿಕ್ಕಿಕೊಳ್ಳುವಂತೆ ಕುತ್ತಿಗೆಗೆ ಹಾಕುವ ಹಗ್ಗದ ಗಂಟು

ಉರ್ಲುನೆಯ್ಗೆ: ಮಲ್ಲಿಗೆ ಹೂವನ್ನು ಕಟ್ಟುವ ಒಂದು ವಿನ್ಯಾಸ (ದಕ.ಜಿ)

ಉರ್ಲುಸುಳಿ: ದನಗಳ ಮುಂಗಾಲುಗಳ ಮೇಲೆ ಇರುವ ಸುಳಿ (ಬಳ್ಳಾ.ಜಿ)

ಉರ್ಲುಹಾಕು: ಉಸಿರು ಸಿಕ್ಕಿಕೊಳ್ಳುವಂತೆ ಕುತ್ತಿಗೆಗೆ ಹಗ್ಗದ ಗಂಟು ಹಾಕು

ಉರ್ವರ: ಉಬ್ಬುವಿಕೆ (ಬೆಂಗ್ರಾ.ಜಿ)

ಉರ್ವೆ: ಮಿಡಿ; ತೆಂಗಿನ ಹೊಂಬಾಳೆ ಮತ್ತು ಪಿಂಗಾರದಲ್ಲಿ ಇರುವ ಮಿಡಿಗಳು (ದಕ.ಜಿ)

ಉರ್ಸುಣ್ಗೆ: ಕೋಪಿಷ್ಠೆ

ಉಲಕೋಚಿ: ೧. ಉಡಾಳ ೨. ಕಿಡಿಗೇಡಿ ೩. ಸಂಕೋಚದವ (ಗುಲ್ಬ.ಜಿ/ಬೆಳ.ಜಿ)

ಉಲಗ: ಗಾಳಿಗೆ ಭೋರ್ಗರೆವ, ಒಂದು ವಿಧವಾದ ಮೆಳೆ ಜಾತಿಯ ಮರ (ಮೈಸೂ.ಜಿ)

ಉಲಪಿ ಕಟ್ಟಿಗೆ: ನಾಗಬೆತ್ತದ ಹಾಗೆ ಬಗ್ಗಿಸಲಾಗಿರುವ ಕಟ್ಟಿಗೆ (ಬೆಂಗ.ಜಿ)

ಉಲಾರ: ಬಡಾಯಿ

ಉಲಿಗ: ಹಾಲಕ್ಕಿ (ಬೆಳ.ಜಿ)

ಉಲಿಗೆ ಹಣ್ಣು: ಮುಳ್ಳಿರುವ ಗಿಡದಲ್ಲಿ ಬಿಡುವ ತೊಂಡೆಕಾಯಿ ಆಕಾರದ ಬೂದಿಯ ಹೊರಲೇಪವಿರುವ ಹುಳಿಮಿಶ್ರಿತ ಸಿಹಿ ಹಣ್ಣು

ಉಲಿಗ್ಗ: ದವಸ ಧಾನ್ಯಗಳನ್ನು ತೂರುವ ಸಂದರ್ಭದಲ್ಲಿ ಗಾಳಿ ಬೀಸಲೆಂಬ ಉದ್ದೇಶದಿಂದ ಹಾಕುವ ಕಾಕು; ಹುಲಿಗ್ಯೋ

ಉಲಿಚಪ್ಪರ: ನೇಯ್ಗೆಯಲ್ಲಿ ಬಳಸುವ ಒಂದು ಬಗೆಯ ಸುತ್ತುರಾಟೆ

ಉಲಿದಗರು: ಒಂದು ಜಾತಿಯ ಟಗರು

ಉಲಿಪಿ/ಉಲುಪಿ/ಉಲುಪೆ: ೧. ಅಕ್ಕಸಾಲಿ, ಬಡಗಿ ಮುಂತಾದ ಕೆಲವು ನಿರ್ದಿಷ್ಟ ಕೆಲಸ ನಿರ್ವಹಿಸುವವರಿಗೆ ಕೊಡುವ ಸಂಭಾವನೆ ೨. ಮಕ್ಕಳ ಕಿವಿ ಚುಚ್ಚುವ ಅಕ್ಕಸಾಲಿಗನಿಗೆ ಕೊಡುವ ಧಾನ್ಯ ಮತ್ತು ನಗದು ಹಣದ ಸಂಭಾವನೆ (ಶಿವ.ಜಿ) ೩. ತಮ್ಮಲ್ಲಿ ಊಟಮಾಡದ ಇತರ ಜನಾಂಗದವರಿಗೆ ಅಡಿಗೆ ಮಾಡಿಕೊಳ್ಳಲು ನೀಡುವ ಆಹಾರ ಪದಾರ್ಥಗಳು ೪. ಮಂಗಳಕಾರ್ಯಗಳಲ್ಲಿ ಸಂಭಾವನೆಯಾಗಿ ಮೊರದಲ್ಲಿಟ್ಟು ಕೊಡುವ ಕಡಲೆಬೇಳೆ, ಬೆಲ್ಲ, ರವೆ, ಎಲೆ ಅಡಿಕೆ ಹಾಗೂ ದಕ್ಷಿಣೆಗಳ ಸಾಮಗ್ರಿ, ೫. ಕಾಣಿಕೆ. ಗ್ರಾಮದೈವಗಳ ಜಾತ್ರೆ, ಹಬ್ಬಗಳಲ್ಲಿ ಗ್ರಾಮದ ಕೆಲವು ಮನೆತನದವರಿಗೆ 'ಉಲುಪೆ'ಯನ್ನು ಕೊಡುವರು ೬. ಮದುವೆಯಲ್ಲಿ ವಧುವಿನ ತಂದೆತಾಯಿಗಳು ವರನಿಗೆ ಕೊಡುವ ವಸ್ತುಗಳು (ರಾಯ.ಜಿ) ೭. ಶುಭಸುದ್ದಿ; ವರ್ತಮಾನ; ಶುಭಾಶಯ (ಮಂಡ್ಯ.ಜಿ). **ಇರೂ:** *ಉಲ್ಪಿ, ಉಲ್ಪೆ*

ಉಲಿಯಿಕ್ಕು: ಕೂಗು (ತುಮ.ಜಿ)

ಉಲಿವಾಂದಯ್ಯಾ: ಹುಲಿಯ ವಾಹನದ ಅಯ್ಯ; ಮಾದಪ್ಪ; ಮಾದೇಶ್ವರ (ಚಾಮ.ಜಿ)

ಉಲಿಹಣ್ಣು: ಕವಳಿಕಾಯಿ ಹಣ್ಣು

ಉಲುಕು: ೧. ಹಗ್ಗದ ಗಂಟು ೨. ಅವಸರ ೩. ಆಸಕ್ತಿ ೪. ಅಲ್ಲಾಡು

ಉಲುಗಡ್ಡೆ: ಈರುಳ್ಳಿ. ಇರೂ: *ಉಳ್ಳಗಡ್ಡಿ; ಉಳ್ಳಾಗಡ್ಡಿ (ಕೋಲಾ.ಜಿ)*

ಉಲುಪಿ: ನೋಡಿ– ಉಲಿಪಿ

ಉಲುಪಿತಟ್ಟೆ: ಮದುವೆಯಲ್ಲಿ ಆಲದ ಮರದ ಟೊಂಗೆ ತರಲು ಮನೆಯ ಹಿರಿಯಳಿಯನ ಜೊತೆ ಮುತ್ತೈದೆಯರು ಮೆರವಣಿಗೆಯಲ್ಲಿ ಸಾಗುವಾಗ ಹಿಡಿದುಕೊಳ್ಳುವ ತಟ್ಟೆ

ಉಲುಪಿಮರ: ಒಂದು ಜಾತಿಯ ಮರ. ಬಾರುಕೋಲುಗುಣಿ, ಕೊಡ್ಲಿಕಾವು, ಸಲಿಕೆಕಾವು ಇತ್ಯಾದಿಗಳ ತಯಾರಿಕೆಗೆ ಈ ಮರದ ಬಳಕೆಯಾಗುತ್ತದೆ (ಬಳ್ಳಾ.ಜಿ)

ಉಲುಪೆ: ನೋಡಿ– ಉಲಿಪಿ

ಉಲುಪೆತುಪ್ಪ: ಮೀಸಲು ತುಪ್ಪ; ದೇವರಿಗೆ ಕೊಡುವ ತುಪ್ಪ

ಉಲೆ: ಕಬ್ಬಿಣ ಕಾಯಿಸಲು ಬೆಂಕಿ ಮಾಡಿದ ಸ್ಥಳ; ಕುಲುಮೆ (ದಕ.ಜಿ)

ಉಲ್ಕಪ್ಲು: ಹುಲ್ಲುಕೊಪ್ಪಲು; ಹುಲ್ಲುಮೆದೆ ಹಾಕುವ ಸಲುವಾಗಿಯೇ ನಿರ್ಮಿಸಿರುವ ಹಿತ್ತಿಲು. **ಇರೂ:** *ಹುಲ್ಕೊಪ್ಲು; ಹುಲ್ಲಂಬಾರ (ಮಂಡ್ಯ.ಜಿ)*

ಉಲ್ಟ್: ರಾಗಿಹಿಟ್ಟು; ರಾಗಿ ಅಸಿಟ್ಟು

ಉಲ್ಬಹಂಡೆ: ವಾಟೆ ಅಥವಾ ಕಬ್ಬಿಣದಿಂದ ಮಾಡಿದ ಊದುವ ಒಲೆ (ಚಿಮ.ಜಿ.)

ಉಲ್ಟಿ: ವಾಂತಿ (ಗುಲ್ಬ.ಜಿ/ಬಿಜಾ.ಜಿ)

ಉಲ್ಬು (ಕ್ರಿ): ಊದು; ಬೆಂಕಿಹೊತ್ತಿಸು (ಶಿವ.ಜಿ)

ಉಲ್ಬುಗ್ ಬರೂದು: ಭತ್ತ ದಿಂಡು ಕಟ್ಟುವುದು; ನಾಟಿಯಾದ ಎರಡೂವರೆ ತಿಂಗಳಿನ ನಂತರ ಭತ್ತದ ಮಧ್ಯದ ದಿಂಡಿನಲ್ಲಿ ತೆನೆಯು ಉಂಡೆಯಾಗುವುದು (ಮಂಡ್ಯ.ಜಿ)

ಉಲ್ಬುಜಲ್ಡಿ/ಉರುಟು ಜರಡಿ: ರಾಗಿ, ಅಕ್ಕಿ, ಗೋಧಿಹಿಟ್ಟನ್ನು ಸೋಸುವ ಜರಡಿ (ಕೋಲಾ.ಜಿ)

ಉಲ್ಬೆಮಿಕೆ: ಬೆನ್ನು ಮೂಳೆಯ ಬಳೆಗಳು (ಕೋಲಾ.ಜಿ)

ಉಲ್ಟ್‌ಮಾರಿ: ಒಂದು ವಿಧದ ಕಳೆ

ಉಲ್ಡು: ಉರುಳು; ಪಲ್ಟಿ (ತುಮ.ಜಿ)

ಉಲ್ಪಿ: ಉಲ್ಲಂದಿ: ಹಡಗಿನ ಅಡ್ಡದಿಮ್ಮಿ (ದಕ.ಜಿ)

ಉಲ್ಲಂಕಿ: ಒಂದು ಬಗೆಯ ಹಕ್ಕಿ

ಉಲ್ಲರಿ: ಹುಲ್ಲನ್ನು ತೆಗೆಯುವ ಅರಿ; –ಉಪಕರಣ (ಕೋಲಾ.ಜಿ)

ಉಲ್ಲಾಕಳು: ಒಂದು ಬಗೆಯ ಭೂತ (ದಕ.ಜಿ)

ಉಲ್ಲಾಯ: ೧. ಒಡೆಯ ೨. ಒಂದು ದೈವದ ಹೆಸರು (ದಕ.ಜಿ)

ಉಲ್ಲಾಲ್ತಿ: ೧. ದೇವಿ ೨. ಒಡತಿ; ಗುತ್ತು ಬೀಡುಗಳ ಮೇಲ್ವರ್ಗದ ಸ್ತ್ರೀಯರನ್ನು ಪರಿಶಿಷ್ಟರು ಸಂಬೋಧಿಸುವಾಗ ಬಳಸುವ ರೂಢಿ ಪದ (ದಕ.ಜಿ). **ನೋಡಿ–** ಉಳ್ಳಾಲ್ತಿ

ಉಲ್ಲಿ: ಉತ್ತರೀಯ; ಎದೆವಸ್ತ್ರ **ಇರೂ:** *ವಲ್ಲಿ*

ಉಲ್ಲಿಕೂಲು: ಈರುಳ್ಳಿ ಹೂವು (ಕೋಲಾ.ಜಿ)

ಉಲ್ಲುಗ್ರು: ಮೈಮೇಲೆ ಅಲ್ಲಲ್ಲಿ ಏಳುವ ಒರಟಾಗಿರುವ ಸಣ್ಣ ಸಣ್ಣ ಗಡ್ಡೆ (ಮಂಡ್ಯ.ಜಿ). **ಇರೂ:** *ಹುಲ್ಲುಗ್ರು*

ಉಲ್ಲುಡಿಪಚ್ಚಾರಂ: ಮದುವೆ ಗಂಡಿಗೆ ಛತ್ರಿಯಂತೆ ಹಿಡಿಯುವ ಹಚ್ಚಡ (ಚಿತ್ರ.ಜಿ)

ಉಲ್ಲುಬಂದಿ: ಹುಲ್ಲು ಬನ್ನಿ; ಗೋಮಾಳದಲ್ಲಿ ಕುರಿ ದನ ಮೇಯಿಸಿದ್ದಕ್ಕೆ ಕಂದಾಯ ಇಲಾಖೆಗೆ ಕೊಡುವ ಕರ; –ಸುಂಕ

ಉಲ್ಲೆಲ: ಮದುವೆ (ದಕ.ಜಿ)

ಉಲ್ಲೇಸೂರು: ಕುರುಬ ಸಮುದಾಯದ ಒಂದು ಬೆಡಗು (ಬಳ್ಳಾ.ಜಿ)

ಉಲ್ವೆಮರ: ಒಂದು ಮರದ ಹೆಸರು (ತುಮ.ಜಿ); ಹುಲುಗಿಲ ಗಿಡ (ಗುಲ್ಬ.ಜಿ); ಹುಲುವೆ ಗಿಡ (ಬೆಂಗ್ರಾ.ಜಿ). ಜಂತೆ ತೀರುಗಳಾಗಿ ಇದರ ಚೇಗನ್ನು ಬಳಸುತ್ತಾರೆ. **ಇರೂ:** *ಉಲಿಗ, ಹುಲುಗಿಲ, ಹುಲುವೆ*

ಉವಮ್ಮಿಗಿ: ಗೋಧಿಯ ಸಿಹಿ ತೆನೆ

ಉವಿಗೊಬ್ಬರ: ಎರೆಹುಳುವಿನಿಂದ ತಯಾರಾದ ಗೊಬ್ಬರ (ಬಳ್ಳಾ.ಜಿ)

ಉಸಕನೆಲ: ಉಸುಕು ಮಿಶ್ರಿತ ಹೊಲ (ಶಿವ.ಜಿ)

ಉಸಕಿನಹಾಳೆ: ಮರಳಿನ ಕಾಗದ

ಉಸಗ: ಆಯತ ವೇಳೆಯಲ್ಲಿ ಹಿಂದೆ ಸರಿಯುವವ; ಕೆಲಸಕ್ಕೆ ತಪ್ಪಿಸಿಕೊಂಡು ಹೋಗುವವ; ಪಲಾಯನವಾದಿ (ಚಿತ್ರ.ಜಿ/ಬಳ್ಳಾ.ಜಿ)

ಉಸಬಿ: ವೃಷಭ; ಬಸವ (ಶಿವ.ಜಿ)

ಉಸಬು: ಮರಳು (ಶಿವ.ಜಿ)

ಉಸರ: ಬರಡು ಮಣ್ಣು

ಉಸರಾಕು: ಉಸಿರು ಹಾಕು; ನಿಟ್ಟುಸಿರುಬಿಡು (ಬೆಳ.ಜಿ)

ಉಸಲ: ಉಸುಲು; ಉಸಿರು; ಪ್ರಾಣ (ಬೀದ.ಜಿ)

ಉಸಲಂಗಿ: ಒಂದು ಔಷಧಿಯ ಸಸ್ಯ (ಬಳ್ಳಾ.ಜಿ)

ಉಸಳಿಪಲ್ಯ: ಕಾಳುಗಳನ್ನು ಮೊಳಕೆ ಕಟ್ಟಿ ಮಾಡಿದ ಪಲ್ಯ

ಉಸಾಳಿ: ಒಲೆಯಿಂದ ಹೊರಡುವ ಹೊಗೆ ಹೋಗಲು ಗೋಡೆಯಲ್ಲಿ ಬಿಟ್ಟ ಪೊಳ್ಳು (ಬಿಜಾ.ಜಿ)

ಉಸಿ: ೧. ಮುಂಬಾಗಿಲಿಂದ ಒಳಗೆ ಹೋಗಲು ಇರುವ ಸ್ಥಳ ೨. ಸಿಂಗಾರಹೂವಿನ ಎಸಳು (ದಕ.ಜಿ)

ಉಸಿಕಟ್ಟು (ಕ್ರಿ): ಹೊಲ ಗದ್ದೆಗಳಲ್ಲಿ ನೀರು ಹಾಯಿಸು

ಉಸಿರುಗಿಡ: ಉಸಿರು ಹಿಡಿದುಕೊಂಡಿರುವವರ ಕಿವಿಯಲ್ಲಿ ಇಟ್ಟು ಊದಿದರೆ, ನೋವು ನಿವಾರಿಸುವ ಗುಣವುಳ್ಳ ಒಂದು ಔಷಧಿಗಿಡ (ತುಮ.ಜಿ)

ಉಸಿರುಮದ್ದಿನ ಬಳ್ಳಿ: ನೆಲದಲ್ಲಿ ಹಬ್ಬುವ ಒಂದು ಔಷಧಿಬಳ್ಳಿ (ಚಿತ್ರ ನೋಡಿ)

ಉಸಿರೊಡೆ: (ಕ್ರಿ) ೧. ಬೀಜ ನೆನೆದು ಮೊಳಕೆ ಒಡೆ (ನಾ) ೨. ಹಬೆಯಲ್ಲಿ ಬೇಯಿಸಿದ ವಡೆ. **ಇರೂ:** *ನುಚ್ಚಿನುಂಡೆ*

ಉಸುಂಬಡಿ: ಬಾಯಿಂದ ಮಾತು ಹೊರಳುವಿಕೆ (ಗುಲ್ಬ.ಜಿ)

ಉಸುಕಿನಕೊಡ: ಮಳಲಿನ ಕೊಡ. ರೇಣುಕಾ ಎಲ್ಲಮ್ಮನ ಪಾತಿವ್ರತ್ಯದ ಪ್ರತೀಕವಾದಂಥ ಒಂದು ಕಲ್ಪನೆ. ಆಕೆ ಪ್ರತಿನಿತ್ಯ ಮರಳಿನ ಕೊಡದಲ್ಲಿ ನೀರು ತರುತ್ತಿದ್ದಳಂತೆ. ಮನಸ್ಸಿನಲ್ಲಿ ಪರಪುರುಷನನ್ನು ಕಾಮಿಸಿದಾಗ ಈ ಶಕ್ತಿ ನಾಶವಾಗಿ ಜಮದಗ್ನಿಯ ಶಾಪಕ್ಕೆ ತುತ್ತಾದಳು ಎಂದು ಕಥೆ ಇದೆ

ಉಸುಕಿನಮನಿ: ವ್ಯರ್ಥ ಕೆಲಸ; ಗಟ್ಟಿ ಅಲ್ಲದ್ದು (ಧಾರ.ಜಿ)

ಉಸುಕು: ಮರಳು; ಕಬ್ಬಿಣ ಬೆಸೆಯುವ ಸಂದರ್ಭದಲ್ಲಿ ಬಳಸುವ ವಸ್ತು. **ಇರೂ:** *ಉಸುಗು*

ಉಸುಗು/ಉಸುಬು: ಮರಳು; ಹೊಯ್ಗೆ

ಉಸುಬು: ನೋಡಿ– ಉಸುಗು

ಉಸುಬೆ: ನೋಡಿ– ಕುಸುಬಿ

ಉಸುರಹಿಡಿ: ೧. ಅಡ್ಡಿಯಾಗು; ತೊಂದರೆ ಉಂಟಾಗು ೨. ಪ್ರಾಣ ಹೋಗುವ ಕೊನೆಯ ಗಳಿಗೆ ಸಮೀಪಿಸು (ಬಿಜಾ.ಜಿ)

ಉಸುರು: ಬಲ; ಶಕ್ತಿ **ಪ್ರ:** ಮೈಯಾಗ ಉಸುರು ಇಲ್ದುರ್ ಯಾರೇನು ಮಾಡ್ತಾರ (ಬೀದ.ಜಿ)

ಉಸುರುದೊಳ್ಳು: ಹರ್ನಿಯಾರೋಗ

ಉಸುರುಸೊಪ್ಪು: ಒಂದು ಆಹಾರಯೋಗ್ಯ ಕಳೆಸಸ್ಯ (ಬೆಂಗ.ಜಿ)

ಉಸುರುಹೋಗು: ೧. ಮಾತುಕೊಡು ೨. ಮೃತಪಡು

ಉಸುಲ್: ೧. ಸತ್ಯಸಂಗತಿ ೨. ವಸೂಲಿ (ಹಾಸ.ಜಿ) **ಇರೂ:** *ಉಸ್ಲು*

ಉಸುಲವಡಿ (ಕ್ರಿ): ರಹಸ್ಯ ಮಾಹಿತಿ ನೀಡು (ಗುಲ್ಬ.ಜಿ)

ಉಸುಳಿ/ಉಸುಳ್ಳಿ: ೧. ನೆನೆಸಿದ ಹೆಸರು, ಕಡಲೆ ಮೊದಲಾದ ಕಾಳುಗಳನ್ನು ಹಾಗೆಯೇ ಅಥವಾ ಬೇಯಿಸಿ ಒಗ್ಗರಣೆ ಮಾಡಿದ ತಿನಿಸು; ಗುಗ್ಗುರಿ (ಮೈಸೂ.ಜಿ) ೨. ಕೋಸಂಬರಿ (ದಕ.ಜಿ). **ಇರೂ:** *ಉಸ್ಲಿ*

ಉಸೂರ್‌ಅನ್ನಿಸು: ನೋಯಿಸು; ಹಿಂಸೆಕೊಡು

ಉಸ್ಕ: ಗೊಣಗು; ತಿಣುಕು

ಉಸ್ತ: ವಸ್ತ್ರ (ಉಕ.ಜಿ). **ಇರೂ:** *ಉಸ್ತುರ*

ಉಸ್ತಾರ: ೧. ಸಂಭ್ರಮ ೨. ತಯಾರಾಗುವುದು (ಗುಲ್ಬ.ಜಿ)

ಉಸ್ಪಮಳೆ: ಪುಷ್ಯ ನಕ್ಷತ್ರದ ಮಳೆ

ಉಸ್ಬು: ೧. ಮರಳು ೨. ಅಧಿಕವಾಗಿ ಮಳೆಬಂದಾಗ ತೋಟ ಹೊಲಗದ್ದೆಗಳಲ್ಲಿ ಉಂಟಾಗುವ ಕೆಸರು; ಅಟ್ಲು

ಉಸ್ಮಾತು: ಹುಸಿಮಾತು; ಸುಳ್ಳುಮಾತು (ಚಾಮ.ಜಿ)

ಉಸ್ರುಗಳಿ: ೧. ಉಸಿರುಕಳಿ; ನಿಟ್ಟುಸಿರುಬಿಡು ೨. ದೀರ್ಘವಾಗಿ ಉಸಿರಾಡು; ಸುಸ್ತಾದಂತೆ ಉಸಿರಾಡು

ಉಸ್ರುಮಂಡ್ಲ: ಒಂದು ಜಾತಿಯ ಮಂಡಲದ ಹಾವು

ಉಸ್ಸಾಪ: ಶಾಪ ವಿಮೋಚನೆಯ ವಿಧಾನ (ಉಕ.ಜಿ)

ಉಳ: ೧. ಹುಳು ೨. ರಾತ್ರಿ ವೇಳೆ ಕಾಡುಪ್ರಾಣಿಗಳು ಆಹಾರಕ್ಕೆ ಬರುವ ಜಾಗದಲ್ಲಿ, ಅವುಗಳನ್ನು ಬೇಟೆಯಾಡಲು ಬೇಟೆಗಾರರು ಅಡಗಿ ಕೂರಲು ಮಾಡಿಕೊಂಡ ಜಾಗ; ಹಳು (ಉಕ.ಜಿ)

ಉಳಅಣಿ: ದೈವನರ್ತಕ ತಲೆಯ ಹಿಂದುಗಡೆ ಧರಿಸುವ ಬೆಳ್ಳಿ ಅಥವಾ ಹಿತ್ತಾಳೆಯಿಂದ ಮಾಡಿದ ರಚನೆ ಮತ್ತು ಅದರ ಹಿಂದೆ ಇರುವ ಪ್ರಭಾವಳಿ. ನೋಡಿ– ಅಣಿ (ದಕ.ಜಿ)

ಉಳಕ: ಉರುಳುಗಲ್ಲು; ರೋಣಗಲ್ಲು (ಮಂಡ್ಯ.ಜಿ); ರಾಶಿಯಕಲ್ಲು (ಬೆಳ.ಜಿ)

ಉಳಕಡ್ಡಿ: ಹುಳಕಡ್ಡಿ; ಚರ್ಮದ ಮೇಲೆ ಮೂಡುವ ಸಣ್ಣ ಗುಳ್ಳೆಗಳ ರೂಪದ ಗಾಯ; ಒಂದು ಚರ್ಮರೋಗ (ತುಮ.ಜಿ)

ಉಳಗ್ಗ: ಉಳುವಹಗ್ಗ; ನೇಗಿಲು ನೊಗವನ್ನು ಬಂಧಿಸಲು ಮಾಡಿದ ಹಗ್ಗ (ಮಂಡ್ಯ.ಜಿ). **ಇರೂ:** *ಉಳ್ಳಕಟ್ಟಿ*

ಉಳಚು: ಜಾರು. **ಇರೂ:** *ಉಳ್ಚು*

ಉಳಡ್ಕೆ: ಎಳೆಯ ಅಡಿಕೆ (ದಕ.ಜಿ)

ಉಳತನಹಂಬು: ಕೊಡಗಿನಲ್ಲಿರುವ ಔಷಧೀಯ ಸಸ್ಯ (ದಕ.ಜಿ)

ಉಳತ್ರಡಕೆ: ಎಳೆಯ ಅಡಿಕೆ (ದಕ.ಜಿ)

ಉಳಪಟ್ಟ: ದೈವನರ್ತಕ ತಲೆಗೆ ಅಣಿ ಇಡುವುದಕ್ಕಿಂತ ಮೊದಲು ಕಟ್ಟುವ ಬಟ್ಟೆಯ ಪಟ್ಟಿ (ದಕ.ಜಿ)

ಉಳಮಟ್ಟಿಲ್: ಒಳಮಡಿಲು (ದಕ.ಜಿ)

ಉಳವಿತೇರು: ಉಳವಿಯಲ್ಲಿ ನಡೆಯುವ ಶರಣ ಚನ್ನಬಸವಣ್ಣನವರ ರಥೋತ್ಸವ. ತೇರು ಎಳೆಯುವ ದಿವಸ ಗೋಡೆಗಳ ಮೇಲೆ ಸುಣ್ಣದ ನೀರಿನ ಚುಕ್ಕೆಗಳನ್ನಿಟ್ಟು ತೇರಿನ ಚಿತ್ರ ಬಿಡಿಸುತ್ತಾರೆ (ಬೆಳ.ಜಿ)

ಉಳವಿಬಳೆ: ಚೆನ್ನಬಸವಣ್ಣನ ಕ್ಷೇತ್ರ ಎಂದು ಹೇಳಲಾಗುವ ಉಳವಿ ಎಂಬ ಪ್ರದೇಶದಲ್ಲಿ ತಯಾರಾಗುವ ಬೆಲ್ಲದ ಬಣ್ಣ, ಆಕಾಶ ಬಣ್ಣ, ತಿಳಿ ಬಣ್ಣದ ಬಳೆಗಳು

ಉಳಾಡ್ಕರೋಗ: ಜೋಳದ ಬೆಳೆಗೆ ಬರುವ ರೋಗ

ಉಳಾಣಿ: ೧. ಗಾಡಿಯ ಚಕ್ರದ ಗುಂಬದ ಒಳಗೆ ಮರ ಸವೆಯದಂತೆ ಹಾಕಿರುವ ಕಬ್ಬಿಣದ ಬಳೆ ೨. ಸೇತುವೆಯ ಮೇಲಿನ ಕಲ್ಲುಚಪ್ಪಡಿ ಹಾಸಿದ ರಸ್ತೆಯ ಭಾಗ (ಮಂಡ್ಯ.ಜಿ)

ಉಳಾ ನಗ: ಉಳುವ ನೊಗ; ನೇಗಿಲು, ಕುಂಟೆ, ಬಂಡಿಗೆ ಕಟ್ಟುವ ನುಣುಪಾದ ಮರದ ಉಪಕರಣ. ಈ ಮೂರೂ ಸಂದರ್ಭಗಳಲ್ಲಿ ನೊಗದ ಗಾತ್ರ ಮತ್ತು ರೂಪ ಬೇರೆ ಬೇರೆಯಾಗಿರುತ್ತದೆ

ಉಳಾಯಿದಪೌಳಿ: ದೇವಸ್ಥಾನದ ಒಳಗಿನ ಪೌಳಿ (ದಕ.ಜಿ)

ಉಳಾಲಹೊಡೆ (ಕ್ರಿ): ಹೊಲದಲ್ಲಿ ಬಿತ್ತಲ್ಪಟ್ಟ ಬೀಜಗಳನ್ನು ಮುಚ್ಚಲು ಅನುಸರಿಸುವ ಕ್ರಮ (ಬಳ್ಳಾ.ಜಿ)

ಉಳಿ: ೧. ಮರದಿಂದ ತಯಾರಿಸುವ ಉಪಕರಣಗಳ ವಿನ್ಯಾಸ ಮಾಡಲು, ಬೇಕಾದ ಆಕಾರಕ್ಕೆ ಕತ್ತರಿಸಲು, ರಂಧ್ರ ಮಾಡಲು ಬಳಕೆಯಾಗುವ ಉಪಕರಣ (ಬಳ್ಳಾ.ಜಿ) ೨. ಮರ, ಕಲ್ಲು ಕೆತ್ತಲು ಬಳಸುವ ಉಕ್ಕಿನ ಸಾಧನ ೩. ಈರುಳ್ಳಿಯ ಬೆಳೆಯಲ್ಲಿ ಕಳೆ ತೆಗೆಯಲು ಬಳಸುವ ಸಾಧನ (ಕೋಲಾ.ಜಿ)

ಉಳಿಕಡಿ: ಹುಳಿಸಾರು (ದಕ.ಜಿ)

ಉಳಿಕುಕ್ಕೆ: ಬಿದಿರಿನಲ್ಲಿ ಮಾಡಿದ ಬುಟ್ಟಿ (ತುಮ.ಜಿ)

ಉಳಿದಾಯೊ: ಕೋವಿಯನ್ನು ತಯಾರಿಸಿದವನಿಗೆ ಅಥವಾ ಎರವಲು ಕೊಟ್ಟವನಿಗೆ ಕೊಡುವ ಬೇಟೆಯ ಮೃಗದ ಪಾಲು (ದಕ.ಜಿ)

ಉಳಿನಿಲ್ಲುವುದು: ಶಿಕಾರಿಯಲ್ಲಿ ಕಾಡುಪ್ರಾಣಿಗಳನ್ನು ಕಾಯುತ್ತಾ ನಿಲ್ಲುವುದು (ಚಿಮ.ಜಿ.)

ಉಳಿಪಯಣ: ಒಂದು ರಾತ್ರಿಯ ಪಯಣ

ಉಳಿಬಾಯಿಸುತ್ಗೆ: ಒಂದು ಕಡೆ ಚೂಪಾಗಿದ್ದು ಒಂದು ಕಡೆ ಚೌಕಾಕಾರವಾಗಿರುವ ಸುತ್ತಿಗೆ (ಬಳ್ಳಾ.ಜಿ)

ಉಳಿಮಡಿ: ಈರುಳ್ಳಿ ಬೆಳೆಸಲು ಮಾಡಿದ ಸಣ್ಣ ಪಾತಿ

ಉಳಿಯ: ಹೊಳೆಯ ನೀರಿನಿಂದ ಸುತ್ತುವರಿಯಲ್ಪಟ್ಟ ಭೂಭಾಗ; ಪರ್ಯಾಯ ದ್ವೀಪ (ದಕ.ಜಿ)

ಉಳಿಯಾಡಿಸು (ಕ್ರಿ): ಕಟ್ಟಡಗಳಿಗೆ ಬಳಸುವ ಕಲ್ಲುಗಳ ಮೇಲ್ಮೈಯನ್ನು ನಯಗೊಳಿಸುವುದು

ಉಳಿಯ್ಯಾ: ದೊಡ್ಡ ಜಾತಿಯ ಮೀನು (ಉಡು.ಜಿ)

ಉಳಿಸೆಂಡು (ಕ್ರಿ): ಒಂದು ಗ್ರಾಮೀಣ ಚೆಂಡಾಟ; ಅವಸು ಚೆಂಡಾಟ

ಉಳಿಸೊಪ್ಪು: ಹುಳಿಸೊಪ್ಪು. ಒಂದು ಆಹಾರಯೋಗ್ಯ ಕಳೆಸಸ್ಯ (ಬೆಂಗ.ಜಿ)

ಉಳು (ಕ್ರಿ): ನೇಗಿಲು ಹೊಡೆ (ಮೈಸೂ.ಜಿ/ಚಾಮ.ಜಿ)

ಉಳುಂಗು: ಉಣ್ಣೆಕೀಟ

ಉಳುಂದು: ಧಾನ್ಯವಿಶೇಷ (ಬೆಂಗ್ರಾ.ಜಿ)

ಉಳುಉಳಕನಸೊಪ್ಪು: ಆಹಾರಯೋಗ್ಯವಾದ ಒಂದು ಕಳೆಸೊಪ್ಪು (ತುಮ.ಜಿ)

ಉಳುಕರೋಗ/ಉಳ್ಕುರೋಗ: ಹತ್ತಿಬೆಳೆಗೆ ಬರುವ ಒಂದು ರೋಗ (ಮೈಸೂ.ಜಿ)

ಉಳುಕು: ೧. ಕೈ ಕಾಲು, ಕುತ್ತಿಗೆ ಸೊಂಟಗಳ ನರ ಹೊರಳಿದರೆ ಉಂಟಾಗುವ ಚಳುಕು. ಎಣ್ಣೆ ಹಚ್ಚಿ ನೀವಿ ಉಳುಕು ತೆಗೆಯುತ್ತಾರೆ. ಕಾಲಿನ ಹೆಬ್ಬೆರಳಿಗೆ ದಾರ ಕಟ್ಟಿ ಎಳೆದು ಉಳುಕು ತೆಗೆಯುವ ವಿಧಾನವೂ ಇದೆ (ಮಂಡ್ಯ.ಜಿ) ೨. ರಾಶಿ ಮಾಡಲು, ತೆನೆಯಿಂದ ಕಾಳು ಬೇರೆ ಮಾಡಲು ಬಳಸುವ ಕಲ್ಲಿನ ಗುಂಡು; ಉಳಜಲು

ಉಳುಕೋಲು: ಉಳುವಾಗ ಎತ್ತನ್ನು ಬೆದರಿಸಲು ಬಳಸುವ ಕೋಲು (ಬೆಂಗ್ರಾ.ಜಿ)

ಉಳುಕ್‌ಮಳೆ: ಬಿತ್ತನೆಗೆ ಅವಕಾಶ ಕೊಡದೆ ಸುರಿವ ಮಳೆ

ಉಳುಬಳೆ/ಉಳ್ಬಳೆ: ೧. ಗಾಡಿಯ ಚಕ್ರಕ್ಕೆ ಹಾಕುವ ಕಬ್ಬಿಣದ ಬಳೆ (ಹಾಸ.ಜಿ) ೨. ಗಾಡಿಯ ತೊಟ್ಟಿಲ ಕೆಳಗಿನ ಮರದ ದಿಂಡಿಗೆ ಬಳಸುವ ಕಬ್ಬಿಣದ ಪಟ್ಟಿ (ತುಮ.ಜಿ) **ನೋಡಿ–** ಉಳಾಣಿ

ಉಳುವ ಮೀನು: ಮೂತಿ ಮೊಂಡಾಗಿರುವ, ಬೆನ್ನಲ್ಲಿ ಬೂದುಕಂದು ಬಣ್ಣದ ಬಿಳಿಯ ಸಣ್ಣ ಚುಕ್ಕಿಗಳಿದ್ದು ಕೆಳಭಾಗ ಬಿಳಿಯಾಗಿರುವ ಮೀನು (ದಕ.ಜಿ)

ಉಳುವರಿ: ಭೂಮಿಯನ್ನು ಉಳುವುದಕ್ಕಾಗಿ ಕೊಡುವ ತೆರಿಗೆ

ಉಳುವಾಯಿ: ಗಾಡಿಯ ಗುಂಭದಲ್ಲಿ ಬಳಸುವ ಬಳೆಯಾಕಾರದ ಸಾಧನ (ಕೋಲಾ.ಜಿ)

ಉಳುವಿನಹುಲ್ಲು: ದನಗಳಿಗೆ ಮೇವಾಗಿ ಬಳಸುವ ಕಳೆಹುಲ್ಲು (ರಾಯ.ಜಿ)

ಉಳುವು: ಹುಳ; ಕೀಟ (ಕೋಲಾ.ಜಿ)

ಉಳಿಕತ್ತಿ: ಮುಳ್ಳು ತೆಗೆಯಲು ಉಪಯೋಗಿಸುವ ಕತ್ತಿ (ದಕ.ಜಿ)

ಉಳ್ಕುರೋಗ: ನೋಡಿ– ಉಳುಕರೋಗ

ಉಳ್ಗಾರ್ತಿ: ಮರುಮದುವೆಯಾದ ವಿಧವೆ

ಉಳ್ಚಲ್: ನೀರು ಭೇದಿ (ದಕ.ಜಿ)

ಉಳ್ಡಿಕಿ: ಉರುಳಿಕೆ; ಹಲಗೆ ವಾದನಗಳ ಗತ್ತುಗಳಲ್ಲೊಂದು

ಉಳ್‌ನೀರು: ಗದ್ದೆ ಸಸಿ ನಾಟಿ ಹಾಕಿದ ಮೂರು ದಿನಕ್ಕೆ ಹಾಯಿಸುವ ನೀರು

ಉಳ್ಬಳೆ: ನೋಡಿ– ಉಳುಬಳೆ

ಉಳ್ಮಜ್ಗ: ಹುಳಿಮಜ್ಜಿಗೆ (ಚಾಮ.ಜಿ)

ಉಳ್ಳಿಒಟ್ಟು: ಹುರುಳಿಯ ಹೊಟ್ಟು

ಉಳ್‌ಸೊಪ್ಪು/ಉಳಿಸೊಪ್ಪು/ಹುಳಿಸೊಪ್ಪು: ಎಳೆಯ ದಂಟಿನ ಸೊಪ್ಪು, ಅರಿವೆಸೊಪ್ಪು ಬೆರಕೆಸೊಪ್ಪುಗಳನ್ನು ಬೇಳೆಯೊಂದಿಗೆ ಬೇಯಿಸಿ ಮಾಡಿದ ಸಾರು (ಚಿತ್ರ.ಜಿ) **ಇರೂ:** *ಸೊಪ್ಪಿನ ಹುಳಿ*

ಉಳ್ಸ್ಯಾಮೆ (ಕ್ರಿ): ಉರುಳುಸೇವೆ (ಚಾಮ.ಜಿ)

ಉಳ್ಳ: ೧. ಉರುಳು; ಹಗ್ಗವನ್ನು ಒಂದು ಸುತ್ತು ಹಾಕಿ ಕಟ್ಟಿರುವುದು. ಇದು ಹಕ್ಕಿ ಶಿಕಾರಿಯಲ್ಲಿಯೂ ಬಳಕೆಯಲ್ಲಿದೆ (ಚಿಮ.ಜಿ); ಊರುಗುಣಿಕೆ (ಮೈಸೂ.ಜಿ) ೨. ದಾವಣಿಯ ಹಗ್ಗವನ್ನು ಮೇಟಿ ಕಂಬಕ್ಕೆ ಸಿಕ್ಕಿಸಲು ಮಾಡುವ ಹಗ್ಗ; ಉರುಳು; ನೇಣು (ಶಿವ.ಜಿ) ೩. ಆಗ ತಾನೆ ದನಕರುಗಳು ವಿಸರ್ಜಿಸಿದ ಸೆಗಣಿ (ಉಕ.ಜಿ). **ಇರೂ:** *ಉಳುಕು (ಉಕ); ಒರಳು (ದಕ.ಜಿ)*

ಉಳ್ಳಂಗನಬ್ಯಾಟಿ: ನರಿ ಬೇಟೆ

ಉಳ್ಳಂಗಿ: ಕೆಲಸಕ್ಕೆ ಹಿಂದೇಟು ಹಾಕುವವನು; ಕೆಲಸದಿಂದ ಮತ್ತು ಜವಾಬ್ದಾರಿಯಿಂದ ತಪ್ಪಿಸಿಕೊಳ್ಳುವವನು

ಉಳ್ಳಂಗು: ಪ್ರೀತಿ; ಒಲುಮೆ (ಬೆಂಗ್ರಾ.ಜಿ)

ಉಳ್ಳಂಡಿ: ದೋಣಿ (ಉಕ.ಜಿ)

ಉಳ್ಳಕ: ಉರುಳುವಂತಿರುವ ಆಟಿಗೆ ಸಾಮಾನು (ಬೆಳ.ಜಿ)

ಉಳ್ಳಗಡ್ಡಿ: ಈರುಳ್ಳಿ; ನೀರುಳ್ಳಿ (ಗುಲ್ಬ.ಜಿ)

ಉಳ್ಳಗಡ್ಡಿಖಾರ: ಈರುಳ್ಳಿ, ಖಾರ, ಉಪ್ಪು, ಕಡಲೆಬೇಳೆ, ಸೇಂಗಾ ಹಿಂಡಿ ಬೆರಸಿ ಕುಟ್ಟಿದ ಚಟ್ನಿ (ಬಿಜಾ.ಜಿ)

ಉಳ್ಳಗಡ್ಡಿಹೂವಿನ ಪಿಲ್ಲಿ: ಹೆಂಗಸರು ಕಾಲಿನ ನಾಲ್ಕನೇ ಬೆರಳಿಗೆ ತೊಡುವ ವಿಶಿಷ್ಟ ಉಂಗುರ

ಉಳ್ಳಣೆ: ನೀರಿನ ರಭಸ ತಡೆಯುವಂತೆ ಅಥವಾ ಪಶು ಪಕ್ಷಿಗಳಿಗೆ ಕುಡಿಯುವ ನೀರು ನಿಲ್ಲುವಂತೆ ಮಾಡಿರುವ ವ್ಯವಸ್ಥೆ (ಮಂಡ್ಯ.ಜಿ)

ಉಳ್ಳದಕುಳಿ: ೧. ಹಾಣೆಗಿಂಡು ಆಟದಲ್ಲಿ ಗಿಂಡನ್ನು ಜೀಕುವುದಕ್ಕೆ ಇರುವ ಸಣ್ಣದಾದ ದೋಣಿಯಾಕಾರದ ಹೊಂಡ; ಕುಳಿ; ಕುಣಿ (ಉಕ.ಜಿ) ೨. ಬದು (ಮೈಸೂ.ಜಿ)

ಉಳ್ಳದಗೆರೆ: ಹಾಣೆಗಿಂಡು ಆಟದಲ್ಲಿ ಉಳ್ಳದ ಕುಳಿಯಿಂದ ಮುಂದೆ ಏಳು ಕೋಲು ಅಂತರದಲ್ಲಿ ಸಮಾನಾಂತರವಾಗಿ ಎಳೆಯಲಾದ ಗೆರೆ (ಉಕ.ಜಿ)

ಉಳ್ಳಾಕು: ಉರುಳುಹಾಕು; ಪ್ರಾಣಿಗಳನ್ನು ಹಿಡಿಯಲು ಉರುಳನ್ನು ಒಡ್ಡು (ಮಂಡ್ಯ.ಜಿ)

ಉಳ್ಳಾಕುಳು: ಪೂಮಾಣಿ ಕಿನ್ನಿಮಾಣಿ ಎಂಬ ಸೋದರ ದೈವಗಳು (ದಕ.ಜಿ)

ಉಳ್ಳಾಗಡ್ಡಿ ಪಾಜಲ್ಲೇ ಉರ್ಲು ಹಾಕು: ಸಣ್ಣ ಸಂಗತಿಯಿಂದಲೇ ಸೊಕ್ಕನ್ನು ಅಡಗಿಸು; ಹಿಂಸೆಕೊಡು

ಉಳ್ಳಾಯ: ಒಡೆಯ; ಮೇಲ್ವರ್ಗದ ಗಂಡಸರನ್ನು ಸಂಬೋಧಿಸುವಾಗ ಉಪಯೋಗಿಸುವ ಪದ

ಉಳ್ಳಾರ: ೧. ಒಳ್ಳೆಯ; ಚೆನ್ನಾದ (ದಕ.ಜಿ) ೨. ಪಳ್ಳದ ಮೇಲ್ಭಾವಣಿ (ಉಕ)

ಉಳ್ಳಾಲ್ತಿ: ೧. ಕೇಪು ಎಂಬ ಸ್ಥಳದಲ್ಲಿ ಆರಾಧಿಸಲ್ಪಡುವ ದೇವಿ ೨. ಒಡತಿ ೩. ಉಳ್ಳವಳು; ಶ್ರೀಮಂತೆ (ದಕ.ಜಿ)

ಉಳ್ಳಾಲ್ತಿ ಮೆಚ್ಚಿ: ಉಳ್ಳಾಲ್ತಿ ದೈವಕ್ಕೆ ಸಲ್ಲಿಸುವ ವಾರ್ಷಿಕ ಆರಾಧನೆ (ದಕ.ಜಿ)

ಉಳ್ಳಿ: ೧. ದಹನ; ಅಂತ್ಯಕ್ರಿಯೆ ೨. ಹುರುಳಿ (ಚಾಮ.ಜಿ) ೩. ಈರುಳ್ಳಿ

ಉಳ್ಳಿಊದ: ದಪ್ಪಗಿರುವವನು; ಟೊಣಪ

ಉಳ್ಳಿಒಬ್ಬಟ್ಟು: ಹುರುಳಿಕಾಳಿನ ಒಬ್ಬಟ್ಟು. **ಪ್ರ:** ಹಳ್ಳಿಮುಕ್ಕನಿಗೆ ಉಳ್ಳಿಒಬ್ಬಟ್ಟು

ಉಳ್ಳಿಕೊಡುವುದು: ಬೀಜದಿಂದ ಮೊಳೆತ ಗಿಡಕ್ಕೆ ಮಣ್ಣು ಮತ್ತು ಸಗಣಿ ಗೊಬ್ಬರ ಅಥವಾ ಕೋಳಿ ಗೊಬ್ಬರ ಹಾಕುವುದು

ಉಳ್ಳಿಗಡ್ಡೆ: ತೆಳುವಾಗಿ ಬೆಳೆದ ಗಡ್ಡೆ (ದಕ.ಜಿ)

ಉಳ್ಳಿಗೋರ್‌ನ ಹಕ್ಕಿ: ಒಂದು ಬಗೆಯ ಪಕ್ಷಿ; ಗೊರವಂಕ

ಉಳ್ಳಿಚಟ್ನಿ: ಹುರುಳಿಕಾಳನ್ನು ಹುರಿದು ಮಾಡಿದ ಚಟ್ನಿ (ಮೈಸೂ.ಜಿ/ಚಾಮ.ಜಿ)

ಉಳ್ಳಿಚೊಮ್ಮ: ಉಳ್ಳಾಗಡ್ಡಿಯ ಸಿಪ್ಪೆ (ಉಕ.ಜಿ)

ಉಳ್ಳಿತೊಕ್ಕು: ಹುರುಳಿಯ ತೊಕ್ಕು

ಉಳ್ಳಿಬಯಲು: ಹುರುಳಿ ಬೆಳೆಯುವ ಜಾಗ (ತುಮ.ಜಿ)

ಉಳ್ಳಿಬೋಸಿ: ಹುರುಳಿಕಾಳನ್ನು ಬೇಯಿಸುವ ಮಣ್ಣಿನ ಅಥವಾ ಲೋಹದ ಪಾತ್ರೆ (ಮಂಡ್ಯ.ಜಿ)

ಉಳ್ಳಿಬ್ಯಾಳೆ: ಹುರುಳಿ ಬೇಳೆ (ಕೋಲಾ.ಜಿ)

ಉಳ್ಳಿಮನೆ: ಹುರುಳಿಮನೆ. ಕಾಡುಗೊಲ್ಲರ ಕ್ಯಾತೆಲಿಂಗದೇವರ ಒಕ್ಕಲಿನವರು ವ್ರತದ ಅಂಗವಾಗಿ ಜಾತ್ರೆ ಮುಗಿಯುವ ತನಕ ತಮ್ಮ ಮನೆಯ ಹುರುಳಿ ನವಣೆಗಳನ್ನು ಇಡುವಂಥ ಬೇರೊಂದು ಮನೆ (ಚಿತ್ರ.ಜಿ)

ಉಳ್ಳಿಹಬ್ಬ: ಭಾರತ ಹುಣ್ಣಿಮೆ (ಬಳ್ಳಾ.ಜಿ)

ಉಳ್ಳಿಹುವ್ವು: ಈರುಳ್ಳಿ ಹೂವು (ಕೋಲಾ.ಜಿ)

ಉಳ್ಳುರುಸಗಿಡ: ಮುರಿದ ಮೂಳೆಯನ್ನು ಕೂಡಿಸುವ ಗುಣವುಳ್ಳ ಔಷಧೀ ಸಸ್ಯ (ಚಾಮ.ಜಿ)

ಉಳ್ಳುರೋಗ: ೧. ಬೆಳ್ಳುಳ್ಳಿ ತಳಿಗೆ ಬರುವ ರೋಗ; ಊದುಬತ್ತಿ ರೋಗ; ಊಟು ರೋಗ ೨. ಬತ್ತದ ಹಾಗೂ ಜೋಳದ ಬೆಳೆಗೆ ಬರುವ ರೋಗ

ಉಳ್ಳುಳ್ಳ: ೧. ದನದ ಸಗಣಿ ೨. ಪಾಶ ೩. ಬೇಟೆಯ ಸಾಧನ

ಉಳ್ಳೆ: ೧. ಉರುಳೆ; ಉಂಡೆ ೨. ಸಣ್ಣ ಸಣ್ಣ ಉಂಡೆಗಳನ್ನಾಗಿ ಮಾಡಿಕೊಂಡ ಹಪ್ಪಳದ ಹಿಟ್ಟು (ಚಿಮ.ಜಿ.). **ಇರೂ:** *ಉಲಿ (ಚಿತ್ರ.ಜಿ)*

ಉಳ್ಳೆಬಾಚುವುದು: ಕೊಟ್ಟಿಗೆಯಲ್ಲಿನ ಸಗಣಿಯನ್ನು ಮಾತ್ರ ಎತ್ತುವುದು; ಹೆಕ್ಕುವುದು (ಉಕ.ಜಿ)

ಉಳ್ಳೆರೋಗ: ಜೋಳದ ಬೆಳೆಗೆ ಬರುವ ಒಂದು ರೋಗ (ರಾಯ.ಜಿ)

ಊ

ಊಂತ್/ಊತ್: ಆಧಾರಕ್ಕೆ ಕೊಡುವ ಕಂಬ (ಉಡು.ಜಿ)

ಊಕಾಲಿ: ಗರ್ಭಧರಿಸಿದ ಆರು ತಿಂಗಳಲ್ಲಿ ಹೆಂಗಸರಿಗೆ ಹಿಡಿಯುತ್ತದೆಂದು ಹೇಳಲಾಗುವ ಹೆಣ್ಣು ದೇವತೆ

ಊಕ್ಕಾವಂಗ: ಕಾವಲುಗಾರ

ಊಗಲಾಳಿ: ೧. ಮುಸುಂಡಿ ೨. ಮಡಕೆ ಹಿಂದೆ ಅಡಗಿ ಕುಳಿತವ ೩. ಋಜುವಲ್ಲದವ; ಸೊಟ್ಟ

ಊಗು: ೧. ಒಂದು ಜಾತಿಯ ಮುಳ್ಳು; ಹಂಚಿಕಡ್ಡಿಯ ತುದಿಯಲ್ಲಿ ಬಿಡುವ ಸಣ್ಣಸಣ್ಣ ಮುಳ್ಳು **ಇರೂ:** *ಊಬಲು; ಊಬು; ಊದು* ೨. ಹೂವು (ತುಮ.ಜಿ)

ಊಗುನೆಲ್ಲು: ಒಂದು ವಿಧದ ಭತ್ತ (ಕೋಲಾ.ಜಿ)

ಊಗೆಣ್ಣುಸತ್ತೆ: ಒಂದು ಕಳೆಹುಲ್ಲು

ಊಗ್ಲು: ನೋಡಿ– ಅಡುಕಲು

ಊಚ: ಉದ್ದ; ಎತ್ತರ (ಬೀದ.ಜಿ)

ಊಚತ್ರಿಕೆ: ದೇವರ ಉತ್ಸವಗಳಲ್ಲಿ ಹಿಡಿದುಕೊಳ್ಳುವ ಬಿಳಿಯ ವರ್ಣದ ದೊಡ್ಡ ಕೊಡೆ; ಛತ್ರಿ

ಊಚಿ: ೧. ಹೆಚ್ಚಿನ ಬೆಲೆಯ ೨. ಒಂದು ಬಗೆಯ ಹುಲ್ಲು; ಊಬು ಹುಲ್ಲು

ಊಜಗನಹುಲ್ಲು: ಬೆಳೆಗಳ ನಡುವೆ ಬೆಳೆಯುವ ಕಳೆಹುಲ್ಲು

ಊಜಿ: ಹೂಜಿ; ನೀರು ತುಂಬಿಡುವ ವಿಶಿಷ್ಟಾಕಾರದ ಮಣ್ಣಿನ ಮಡಕೆ (ತುಮ.ಜಿ)

ಊಜಿನೊಣ: ರೇಷ್ಮೆ ಹುಳುವನ್ನು ಬಾಧಿಸುವ ಒಂದು ಕೀಟ. **ಇರೂ:** *ವಾಜೆ*

ಊಜಿಹೊಡೆಯುವುದು: ರೇಷ್ಮೆಹುಳುವಿಗೆ ತಗಲುವ ಕೀಟಬಾಧೆ; ನೊಣಗಳು ರೇಷ್ಮೆ ಹುಳುವಿನ ಮೆದುವಾದ ಚರ್ಮವನ್ನು ಚುಚ್ಚಿ ತಮ್ಮ ಮೊಟ್ಟೆಯನ್ನು ಅದರೊಳಗೆ ಇಡುತ್ತವೆ. ರೇಷ್ಮೆ ಹುಳು ಬೆಳೆದಂತೆ ಅದರ ದೇಹದೊಳಗೆ ಊಜಿಯೂ ಬೆಳೆಯುತ್ತದೆ. ರೇಷ್ಮೆ ಹುಳು ಹಣ್ಣಾಗುವ ಸಮಯ ಬಂದಾಗ ಊಜಿ ಹೊರಬರುತ್ತದೆ ರೇಶ್ಮೆಹುಳು ಗೂಡು ಕಟ್ಟಲು ಸಾಧ್ಯವಾಗುವುದಿಲ್ಲ (ಮಂಡ್ಯ.ಜಿ)

ಊಜು: ಚೇಪು (ದಕ.ಜಿ)

ಊಜೆಕುಡ್ಕೆ: ವಿವಾಹದ ಸಂದರ್ಭದಲ್ಲಿ ಬಳಸುವ ಮಣ್ಣಿನ ಚಿಕ್ಕ ಕುಡಿಕೆ

ಊಜೇಬತ್ತಿ: ಊದುಬತ್ತಿ

ಊಟದ ಪಡಿ: ಗೊಂಡರ ಮದುವೆ ಕಾರ್ಯದಲ್ಲಿ ಮುಖ್ಯವಾಗಿ ಭಾಗವಹಿಸುವ ಮಡಿವಾಳ ಹಾಗೂ ಕ್ಷೌರಿಕರಿಗೆ ಕೊಡುವ ಸಂಭಾವನೆ (ಉಕ.ಜಿ)

ಊಟಿ: ೧. ಗಾಡಿ ಎಳೆಯಲು ಒಂದು ಎತ್ತು ದುರ್ಬಲ ಆಗಿದ್ದರೆ ಶಕ್ತಿಯುತ ಎತ್ತಿನ ಕಡೆ ಹೆಚ್ಚು ಭಾರ ಬೀಳುವಂತೆ ಮಾಡುವ ವಿಧಾನ (ಚಿಮ.ಜಿ) ೨. (ಕ್ರಿ) ಕರಡಿ ಮತ್ತು ಹಂದಿಗಳು ಮೂತಿಯಿಂದ ನೆಲವನ್ನು ಮೀಟುವುದು. **ಇರೂ:** ಊಟೀವು

ಊಟಿಇಡು (ಕ್ರಿ): ಚಕ್ಕಡಿಗೆ ನೊಗವನ್ನು ಹಗ್ಗದಿಂದ ಕಟ್ಟು (ಬಳ್ಳಾ.ಜಿ)

ಊಟಿಕೀಳು: ಬಾಯಲ್ಲಿ ವಿಪರೀತ ನೀರು ಬರುವಿಕೆ

ಊಟಿದ್ದು: ಕರಡಿಯು ಮೂತಿಯಿಂದ ಮಣ್ಣನ್ನು ಬಗೆದದ್ದು (ಚಿತ್ರ.ಜಿ)

ಊಟೆಕಟ್ಟಿಗೆ: ಗಾಡಿಗೆ ಬಳಸುವ ಗೂಟದ ಕಟ್ಟಿಗೆ (ಕೋಲಾ.ಜಿ)

ಊಟೆಗ್ಗ: ನೇಗಿಲು, ಕುಂಟೆ ಕೂರಿಗೆ ಈಸಿಗೂ ನೊಗಕ್ಕೂ ಬಿಗಿಯಲು ಬಳಸುವ ಹಗ್ಗ (ಬಳ್ಳಾ.ಜಿ). **ಇರೂ:** *ಉಟೆಗ್ಗ*

ಊಡಕ: ಕಿವುಡ (ಚಿತ್ರ.ಜಿ)

ಊಡಾಕು: ತಬ್ಬಲಿ ಕರುವನ್ನು ಬೇರೆ ಹಸುವಿನಲ್ಲಿ ಹಾಲು ಕುಡಿಯಲು ಬಿಡುವುದು (ಬೆಂಗ್ರಾ.ಜಿ)

ಊಡು (ಕ್ರಿ): ೧. ಎಣಿಸು; ಕೂಡಿಸು ೨. ಉಣಿಸು; ಕುಡಿಸು; ತಿನ್ನಿಸು (ಮಂಡ್ಯ.ಜಿ). **ಪ್ರ:** ಮೊಲೆಯೂಡು (ಬೆಂಗ.ಜಿ) (ನಾ) ೩. ಕೊಪ್ಪರಿಕೆಯಲ್ಲಿರುವ ಬೆಲ್ಲದ ಪಾಕವನ್ನು ಒಂದು ಕಡೆ ಶೇಖರಿಸಲು ಕೊಪ್ಪರಿಕೆಯ ಒಂದು ಭಾಗವನ್ನು ಮೇಲೆತ್ತಿ ಅದರ ತಳಭಾಗಕ್ಕೆ ಕೊಡುವ ಮರದ ತುಂಡು (ಹಾಸ.ಜಿ). **ಇರೂ:** *ಬಿರಿ (ಮೈಸೂ.ಜಿ)*

ಊಡುಗಮರ: **ನೋಡಿ–** ಅಂಕೋಲೆ (ಕೋಲಾ.ಜಿ)

ಊಡುಗೋಲು: ಮಗ್ಗದ ಹಾಸನ್ನು ಸೇರಿಸಿರುವ ಚುಂಗಿ ಕೋಲನ್ನು, ಬಿಗಿಯಾಗಿ ಹಿಂದಕ್ಕೆ ಎಳೆದು ಹಿಡಿದಿಟ್ಟುಕೊಂಡಿರಲು, ಹಿಂದಿರುವ ಬಾಲಗೂಟಕ್ಕೆ ಎಳೆದು ಕಟ್ಟಿರುವ ಮರದ ಕೋಲು

ಊಡುಮಣೆ: ಕಂಬಳಿಯ ನೇಯ್ಗೆಯಲ್ಲಿ ನೇಯ್ದ ಕಂಬಳಿಯನ್ನು ಹಗ್ಗದ ಸಹಾಯದಿಂದ ಸುತ್ತಿಕೊಳ್ಳುವಾಗ ಹಗ್ಗದ ಜೊತೆಗಿರುವ ಸಾಧನ (ತುಮ.ಜಿ)

ಊಡುಹಾಕು: ೧. ಇಳಿಜಾರಿನಲ್ಲಿ ಗಾಡಿ ನಿಲ್ಲಿಸಬೇಕಾಗಿ ಬಂದಾಗ ಚಕ್ರಕ್ಕೆ ತಡೆಹಾಕುವ ಕೊರಡು ಅಥವಾ ಕಲ್ಲಿನ ತುಂಡು (ಹಾಸ.ಜಿ); ೨. ಬಿರಿ (ಮೈಸೂ.ಜಿ)

ಊಡೆ: ಆಲದ ಬಿಳಲು; ಆಲದ ಬೇರು

ಊಣು: ೧. ಹೂಣು; ಹೂಳು ೨. ನಾಟು. **ಪ್ರ:** ಗದ್ದೆನಾಗ ಪೈರು ಊಣಾಕೆ ಆಳುಗಳು ಬಂದವ್ರೆ (ಚಾಮ.ಜಿ)

ಊತ: ಕೈಕಾಲು ಊದುವುದು (ಚಿಬ.ಜಿ)

ಊತಪ್ಪ: ಒಂದು ವಿಧದ ದೋಸೆ (ದಕ.ಜಿ)

ಊದ: ೧. ಸುಗಂಧವನ್ನು ಬೀರುವ ಪದಾರ್ಥ; ಲೋಬಾನ; ಊದುಬತ್ತಿ (ಬೆಳ.ಜಿ) ೨. ಅನಾರೋಗ್ಯದ ನಿಮಿತ್ತ ಶರೀರ ಭಾಗಗಳು ಉಬ್ಬಿಕೊಂಡಿರುವ ವ್ಯಕ್ತಿ (ಮಂಡ್ಯ.ಜಿ) ೩. ಕಾಮಾಲೆ ರೋಗದ ವ್ಯಕ್ತಿ

ಊದಗೊಳವಿ: ಊದುವ ಕೊಳವಿ; ಬೆಂಕಿ ಚೆನ್ನಾಗಿ ಉರಿಯುವಂತೆ ಬಾಯಿಂದ ಗಾಳಿ ಊದಲು ಬಳಸುವ ಕಬ್ಬಿಣದ ಕೊಳವೆ (ಧಾರ.ಜಿ). **ಇರೂ:** *ಊದುಬುರ್ರಿ; ಊಬಂಡೆ; ಊದುಗೊಳವೆ (ಚಿತ್ರ.ಜಿ)*

ಊದನಗೋಲು: ಪಿಳ್ಳಂಗೋವಿ; ಪುಲುಗಣ್ಣಿ

ಊದಬಟ್ಟೆ: ಕೈಕಾಲು ಮುಖವೆಲ್ಲ ನೀರು ತುಂಬಿಕೊಂಡು ಉಂಟಾಗುವ ಖಾಯಿಲೆ

ಊದರ: ಹೊಗೆ (ಚಿಮ.ಜಿ)

ಊದರಬುಂಡೆ: ಇಲಿಬೇಟೆಯ ಸಾಧನ. ಮಡಕೆಗೆ ಬೆರಣಿ ಹಸಿಸೊಪ್ಪು ತುಂಬಿ ತಳದಲ್ಲಿರುವ ಸಣ್ಣ ರಂಧ್ರದ ಮೂಲಕ ಬೆಂಕಿ ಹಚ್ಚಿ ಬಲವಾಗಿ ಊದಿ ದಟ್ಟವಾದ ಹೊಗೆ

ಬಿಲವನ್ನೆಲ್ಲಾ ವ್ಯಾಪಿಸುವಂತೆ ಮಾಡಿ ಇಲಿಗಳನ್ನು ಸಾವು ಅಥವಾ ಅರೆಜೀವಾವಸ್ಥೆಗೆ ತರುವ ವಿಧಾನ

ಊದಹಾಕುವುದು: ೧. ವ್ಯಕ್ತಿಯು ವ್ಯತನಾದ ಮೂರನೆದಿನದ ಆಚರಣೆಯ ಸಂದರ್ಭದಲ್ಲಿ ಬಂದವರೆಲ್ಲ ಉರಿವ ಕೆಂಡದ ಮೇಲೆ ಧೂಪಹಾಕುವ ಕ್ರಿಯೆ (ಶಿವ.ಜಿ) ೨. ದೃಷ್ಟಿ ತೆಗೆಯುವುದು (ಬಾಗ.ಜಿ)

ಊದಾ: ೧. ಒಂದು ಬಣ್ಣ ೨. ಸಿಟ್ಟು

ಊದಿಕೊಳ್ಳು: ಉಬ್ಬು; ದಪ್ಪಗಾಗು; ಸೆಟಗೊಳ್ಳು (ಧಾರ.ಜಿ)

ಊದಿಮರ: ಹೃದಯದ ತೊಂದರೆಗಳಿಗೆ ಮದ್ದಾಗಿ ಬಳಸುವ ಒಂದು ಮರ

ಊದುಕಾಮಿಲೆ: ಒಂದು ರೀತಿಯ ಪಿತ್ತರೋಗ; ಇದರಲ್ಲಿ ಮೈಯೆಲ್ಲಾ ಊದಿಕೊಂಡು ಕೀಲುಗಳು ಚಲನೆಯನ್ನು ಕಳೆದುಕೊಳ್ಳುತ್ತವೆ, ಕೆಲಸ ಮಾಡಲು ಕಷ್ಟವಾಗುತ್ತದೆ (ದಕ.ಜಿ)

ಊದುಗೋಳ್ವಿ: **ನೋಡಿ–** ಊದುಗೊಳವೆ

ಊದುನಗೋಲು: ಕೊಳಲು

ಊದುಪಟ್ಟಿ: ಮಗುವಿನ ಕೈಕಾಲು ಸಣ್ಣದಾಗಿ ಹೊಟ್ಟೆ ದಪ್ಪವಾಗಿ ಊದಿಕೊಳ್ಳುವ ರೋಗ (ಕೋಲಾ.ಜಿ)

ಊದುಬತ್ತಿರೋಗ: ಬೆಳೆಗೆ ಬರುವ ರೋಗ. **ಇರೂ:** *ಊಟುರೋಗ*

ಊದುಬುರ್ರಿ: **ನೋಡಿ–** ಊದುಗೊಳವೆ (ಕೋಲಾ.ಜಿ)

ಊದುಮಕ: ೧. ಉಬ್ಬಿಕೊಂಡ ಚಹರೆಯ ಮುಖ; ಒಂದು ರೋಗಲಕ್ಷಣ; ೨. ಕೋಪಗೊಂಡ ಮುಖ

ಊದುಮದ್ದು: ಇಕ್ಕುಮದ್ದು; ಕೈಮದ್ದು. ಗ್ರಾಮೀಣ ಭಾಗದಲ್ಲಿ ಕೆಲವರ ಮನೆಗಳನ್ನು ಮದ್ದುಹಾಕುವ ಮನೆ ಎಂದು ಗುರುತಿಸುತ್ತಾರೆ. ಅಂಥವರು ಇತರರಿಗೆ ತಿಳಿಯದಂತೆ ಆಹಾರದಲ್ಲಿ ಕೈಮದ್ದು ಹಾಕುವರೆಂಬ ನಂಬಿಕೆ ಇದೆ. (ಮೈಸೂ.ಜಿ)

ಊದುರೋಗ: ೧. ದನಗಳಿಗೆ ಬರುವ ಹೊಟ್ಟೆ ಉಬ್ಬುವ ರೋಗ ೨. ಮನುಷ್ಯರಿಗೆ ಬರುವ ಮೈ ಬಾತುಕೊಳ್ಳುವ ರೋಗ

ಊದೊಲ್ಲು: ಊದಿದ ವೃಷಣ; ಬಾವು ಬಂದಿರುವ ವೃಷಣ (ಶಿವ.ಜಿ). **ಇರೂ:** *ಗ್ವಾದರ್ದು (ಮಂಡ್ಯ.ಜಿ)*

ಊದ್ರಿಕಾಳು: ಒಕ್ಕುವಾಗ ಕಣದಲ್ಲಿ ಕೊನೆಗೆ ಉಳಿಯುವ ಕಸಕಡ್ಡಿ ಬೆರೆತ ಧಾನ್ಯ

ಊನಿ/ಊನೆ: ಬೆಕ್ಕು; ಕೊತ್ತಿ (ಕೋಲಾ.ಜಿ/ಬೆಂಗ.ಜಿ)

ಊಪ: ನಪುಂಸಕ; ಷಂಡ (ತುಮ.ಜಿ)

ಊಪಿ: ೧. ಮಾಫಿ; ಕ್ಷಮೆ ೨. ಚಿನ್ನಿದಾಂಡು ಆಟದಲ್ಲಿ ಎಣಿಕೆ ಹೇಳುವಾಗ ತಪ್ಪಾದರೆ ತಿದ್ದಿಕೊಳ್ಳಲು ಬಳಸುವ ಪದ (ಬೆಂಗ್ರಾ.ಜಿ)

ಊಪು (ಕ್ರಿ) : ೧. ಹೀರು; ಸೆಳೆ ೨. ಕೊಳವೆಯಂಥ ಮೂಳೆಯೊಳಗಿನ ರಸವನ್ನು ಬಾಯಿಂದ ಉಸಿರಿನ ಜತೆ ಎಳೆದುಕೋ (ನಾ) ೩. ಒಂದು ಜಾತಿಯ ಹುಳು ೪. ರಕ್ತಹೀರುವ ಜಿಗಣೆ (ಮಂಡ್ಯ.ಜಿ). **ಇರೂ:** *ಊಪ್ಚಿ*

ಊಪ್ಯಾಡು (ಕ್ರಿ): ಜೋಲಿಹೊಡೆ; ಅಲ್ಲಾಡಿಸು (ಬಳ್ಳಾ.ಜಿ)

ಊಬ: ಗೋಧಿ ಹೊಡೆಯ ತುದಿಯಲ್ಲಿ ಇರುವ ತೆಳುವಾದ ಮೊನಚಾದ ಕಡ್ಡಿ (ಶಿವ.ಜಿ). **ಪ್ರ:** ಗೋದಿಹುಲ್ಲು ಕಾಯಲು ಕಳಿಸಿದರೆ ಊಬು ಚುಚ್ಚಿಗೊಂಡು ಬಂದನಂತೆ

ಊಬಗಡ್ಡಿ: ೧. ಮೊನಚಾದ ತುದಿ ಇರುವ ಒಣ ಹುಲ್ಲು (ಶಿವ.ಜಿ); ೨. ಹಂಚಿ (ಮೈಸೂ.ಜಿ)

ಊಬತ್ತಿಬಿಡು (ಕ್ರಿ): ಕಣವನ್ನು ಸಿದ್ಧಪಡಿಸುವಾಗ ಎಲ್ಲ ಕಡೆಗಳಲ್ಲೂ ಒಲೆಯ ಬೂದಿಯಿಂದ ನಾನಾ ಬಗೆಯ ಚಿತ್ರಗಳನ್ನು ಬರೆಯುವಿಕೆ

ಊಬಮರ: ತೊಗಟೆಯಲ್ಲಿ ಔಷಧಿಗುಣವುಳ್ಳ ಒಂದು ಮರ (ಚಾಮ.ಜಿ)

ಊಬರಿಕೆ: ನಾಜೂಕು; ಮೃದು; ನವುರು

ಊಬಿನ ಹುಲ್ಲು: *ಹೆಟ್ರೋಪೋಗೋನ್ ಕಂಟಾರ್ಟಸ್:* ನಂಜುಹುಲ್ಲು; ಕರಿವುನುಗದ ಹುಲ್ಲು

ಊಬು ರೋಗ: ಬತ್ತದ ಬೆಳೆಗೆ ಬರುವ ರೋಗ (ಶಿವ.ಜಿ)

ಊಬು: (ಕ್ರಿ) ೧. ಉರುಬು; ಉಸಿರೂದು; ಬಾಯಿಂದ ಗಾಳಿಯನ್ನು ಹೊರದೂಡಿ ಬೆಂಕಿಹೊತ್ತಿಸು (ಬೀದ.ಜಿ) ೨. ಆರಿಸು. **ಪ್ರ:** ಒಲೆಯನ್ನು ಉರುಬು. *(ಮಂಡ್ಯ.ಜಿ)* (ನಾ). ೩. ಧಾನ್ಯದ ಮೇಲಿನ ಹೊಟ್ಟಿನ ಮೊನಚಾದ ತುದಿ ೪. ಹಂಚಿ ಮೊದಲಾದ ಹುಲ್ಲುಗಳ ತೆನೆಯ ಮುಳ್ಳು

ಊಮ: ೧. ತೆಂಗಿನ ಬುರುಡೆ; ತಿರುಳಿಲ್ಲದ ತೆಂಗಿನಕಾಯಿ ೨. ತೆಂಗಿನ ಬೆಳೆಗೆ ಹಾನಿ ಮಾಡುವ ಒಂದು ಬಗೆಯ ಇಲಿ (ಚಿತ್ರ.ಜಿ) **ನೋಡಿ–** ಊಮೆ

ಊಮಹೊಡೆ: ತೆಂಗಿನ ಬೆಳೆಗೆ ಊಮ ಎಂಬ ಇಲಿಯಿಂದ ಆಗುವ ಹಾನಿ

ಊಮೆ: ೧. ಒಂದು ಬಗೆಯ ಇಲಿ **ಇರೂ:** *ಯಾದ* ೨. ಸಮಯಸಾಧಕ ೩. ಕಪಟಿ (ಮಂಡ್ಯ.ಜಿ)

ಊರ್: ಆಳ. **ಪ್ರ:** ಹಂದಿ ದಾಳಿ ನಡೆಸಿದ್ದರಿಂದ ಆದ ಪೆಟ್ಟು ಊರ್ ಆಗಿತ್ತು (ಮಲೆ)

ಊರಂಕ: ಊರಿನ ಮುಂಬದಿ

ಊರಕಾಮ: ಕಾಮನ ಹಬ್ಬದಲ್ಲಿ ಪ್ರತಿಯೊಂದು ಕೇರಿಯಲ್ಲಿ ಕಾಮನ ಪೂಜೆ ನಡೆದರೂ ಹರಿಜನ ಕೇರಿಯಲ್ಲಿರುವ ಕಾಮನು ಪ್ರಮುಖವಾಗಿದ್ದು ಅವನನ್ನು ಊರಕಾಮ ಎನ್ನುತ್ತಾರೆ

ಊರಕ್ವಾಣ: ೧. ಗ್ರಾಮದೇವತೆಯ ಹೆಸರಿನಲ್ಲಿ ಬಿಡುವ ಕೋಣ ೨. ಅನ್ಯರದನ್ನೇ ತಿಂದು ಕೊಬ್ಬಿದ ವ್ಯಕ್ತಿ ೩. ಸೊಕ್ಕಿನವ (ಬಳ್ಳಾ.ಜಿ)

ಊರಖಜ್ಞಾಳಿ: ಬೈಗುಳಪದ (ಬೀದ.ಜಿ)

ಊರಗರಿ: ಆಯದ ಒಂದು ವಿಧಾನ; ಸುಗ್ಗಿಯ ಸಮಯದಲ್ಲಿ ರೈತರು ಕೊಡುವ ಧಾನ್ಯರೂಪದ ಕೂಲಿ. **ಇರೂ:** *ಕಂಬಳ (ಮೈಸೂ.ಜಿ)*

ಊರಗಲ: ತುಂಬಾ ದೊಡ್ಡ ಅಳತೆಯ; (ರಾಮ.ಜಿ); ತುಂಬ ಹಿಗ್ಗಿದ. **ಪ್ರ:** ಊರಗಲಬಾಯಿ (ಚಿತ್ರ.ಜಿ)

ಊರಗಸ್ತು: ಗ್ರಾಮದ ಪಹರೆ; ಗ್ರಾಮದ ಕಾವಲಿಗಾಗಿ ಬೀದಿ ಬೀದಿ ಸುತ್ತುವುದು (ಮೈಸೂ.ಜಿ)

ಊರಗಳ್ಳಿ: ಎಲ್ಲ ಕಡೆಯೂ ಕದಿಯುವವಳು

ಊರಗೆಡ್ಡಿಮಳೆ: ಬೆಳೆ ಹಾಳು ಮಾಡುವ ಮಳೆ

ಊರಜಲ್: ಒಂದು ನಿರ್ದಿಷ್ಟ ಪ್ರದೇಶದಲ್ಲಿ ತಮ್ಮ ತಮ್ಮ ಕುಲಕಸುಬುಗಳನ್ನು ಅಥವಾ ನಿರ್ದಿಷ್ಟ ಧಾರ್ಮಿಕ ಆಚರಣೆಗಳನ್ನು ಮಾಡುವ ಅಧಿಕಾರ; ತಮ್ಮ ತಮ್ಮ ಹಕ್ಕಿನ ಕಾರ್ಯಕ್ಷೇತ್ರ (ದಕ.ಜಿ)

ಊರಡಸಿ: ಹಾದರಗಿತ್ತಿ; ನಡತೆಗೆಟ್ಟವಳು

ಊರಣಿಗೆ: ಕಂಬಳಿಯ ನೇಯ್ಗೆಯಲ್ಲಿ ಹಾಸುಮಣೆಗೆ ದಾರ ಹಾಕಲು ಬಳಸುವ ನಾಲ್ಕು ಅಂಗುಲ ಉದ್ದದ ಕೊಳವೆಯ ಸಾಧನ (ತುಮ.ಜಿ)

ಊರಣೆ: ನೋಡಿ– ಐರಾಣಿ

ಊರತಂಬಲು: ವ್ಯಕ್ತಿಯೊಬ್ಬನು ಅಪಹರಿಸಿದ ಸಾರ್ವಜನಿಕ ಸೊತ್ತು (ಬಳ್ಳಾ.ಜಿ)

ಊರಬಾಕಲ್ಕಲ್ಲು: ನೋಡಿ– ಕರುಗಲ್ಲು

ಊರಬಾಗಿಲದಂಡ: ಊರ ಬಾಗಿಲಿನಿಂದ ಒಳಕ್ಕೆ ನೊಗ ಹೂಡಿಕೊಂಡು ಬಂದಾಗ ವಿಧಿಸುವ ದಂಡ (ಹಾವೇ.ಜಿ)

ಊರಬಾಗಿಲು: ಊರಿನ ಪ್ರವೇಶದ್ವಾರ. **ಪ್ರ:** ಊರು ಮೂರುಸುತ್ತು ತಿರುಗಿದರೂ ಊರ ಬಾಗಿಲಲ್ಲಿಯೇ ಹೊರಡಬೇಕು

ಊರಬಾನ: ಉರುಸು ಸಂದರ್ಭದ ಒಂದು ಆಚರಣೆ

ಊರಬಿಟ್ಟಿ: ಊರಜನರು ಮಾಡುವ ಇಡೀ ಗ್ರಾಮಕ್ಕೆ ಸೇರಿದ ಕೆಲಸಕಾರ್ಯ; ಊರೊಟ್ಟಿನ ಕಾರ್ಯ (ಮೈಸೂ.ಜಿ)

ಊರಬುದವಂತ: ಹಾಲಕ್ಕಿ ಒಕ್ಕಲಿಗರ ಒಳಾಡಳಿತ ವ್ಯವಸ್ಥೆಯಲ್ಲಿ ಬರುವ ಊರಿನ ಅಧಿಕಾರಿ

ಊರಮಡಿವಾಳ: ಯಕ್ಷಗಾನದ ಪೂರ್ವರಂಗದಲ್ಲಿ ಬರುವ ಒಂದು ಕಟ್ಟು ಹಾಸ್ಯ; ಮಡಿವಾಳ ಹಾಸ್ಯ; ಬಯಲಾಟದ ಪಾತ್ರ (ದಕ.ಜಿ)

ಊರಮದ್ದು: ಹಳ್ಳಿಮದ್ದು; ನಾಟಿಮದ್ದು (ದಕ.ಜಿ)

ಊರಮುಡಿ ತುಂಬುದು: ಮಳೆ ಬರಿಸಲು ಮಾಡುವ ಪೂಜೆಯ ಕ್ರಮ (ಬಳ್ಳಾ.ಜಿ)

ಊರಮುದ್ರೆ: ಊರಗಣ್ಯರು ಕುಳಿತುಕೊಳ್ಳುವ ಚಾವಡಿ (ದಕ.ಜಿ)

ಊರಮ್ಮ: ಊರಿನಲ್ಲಿರುವ ದೇವತೆ (ಉಕ.ಜಿ)

ಊರಮ್ಮನಹಬ್ಬ: ಗ್ರಾಮದೇವತೆಯ ಹಬ್ಬ

ಊರಲು: ೧. ಈರುಳ್ಳಿ ಸಾಂಬಾರ ಪದಾರ್ಥ ಹಾಕಿ ದನಗಳ ಪುಷ್ಟಿಗಾಗಿ ತಯಾರಿಸುವ ಆಹಾರ; ದನಗಳಿಗೆ ಕುಡಿಸುವ ಒಂದು ಬಗೆಯ ಔಷಧಿ ೨. ಪಶುವೈದ್ಯ ಕಲಿತ ಮನೆತನ (ಬೆಂಗ್ರಾ.ಜಿ). **ಇರೂ:** *ಊರಲ; ಅಡ್ಡಕಂಬ*

ಊರವಳು: ಮಡಿವಾಳ್ತಿ (ದಕ.ಜಿ)

ಊರವೆ: ಒಂದು ದೈವದ ಹೆಸರು; ದಾರಿಯ ಬದಿಯಲ್ಲಿ ಕಲ್ಲು ನೆಟ್ಟು ಇದನ್ನು ಪೂಜಿಸುತ್ತಾರೆ (ದಕ.ಜಿ)

ಊರಸಜ್ಜುಗೆಡುಸು: ಊರು ಅಶಾಂತಿಯಿಂದಿರುವಂತೆ ಮಾಡು

ಊರಹಂದಿ: ಹಂದಿಯ ವಿಶೇಷ ತಳಿ. ಕಾಡು ಹಂದಿಗಿಂತ ವಿಭಿನ್ನವಾಗಿದ್ದು ಕಾಲು ಗಿಡ್ಡ ಮೈ ಉದ್ದವಾಗಿ ಬಲು ಜಿಡ್ಡಿನಿಂದ ಬೆಳೆಯುತ್ತದೆ (ಮಲೆ)

ಊರಹಬ್ಬ: ಸುಗ್ಗಿಹಬ್ಬ ಘೋಷಣೆಯಾದ ಬಳಿಕ ಮೊದಲ ದಿನ ಮಾಡುವ ಹಬ್ಬ (ಹಾಸ.ಜಿ)

ಊರಹಿಡಿಯುವುದು: ವರ್ಷದ ಆರಂಭದಲ್ಲಿ ಬೇಸಾಯಕ್ಕೆ ಮೊದಲು ಸಲ್ಲಿಸುವ ದೇವರ ಪೂಜೆ

ಊರಾಕು (ಕ್ರಿ): ೧. ಬಿಟ್ಟುಬಿಡು ೨. ಕಟ್ಟನ್ನು ಬಿಚ್ಚು (ಚಾಮ.ಜಿ)

ಊರಾಡು: ೧. ಊರದೇವರನ್ನು ಹೊತ್ತುಕೊಂಡು ಆ ಊರಿನ ಮನೆಮನೆಗೆ ತಮಟೆ ಇತ್ಯಾದಿ ವಾದ್ಯಗಳೊಂದಿಗೆ ಹೋಗಿ ದೇವರನ್ನು ಪ್ರದರ್ಶಿಸುವುದು (ಮೈಸೂ.ಜಿ) ೨. ಜೋಕುಮಾರನ ಮೂರ್ತಿಯನ್ನು ಬುಟ್ಟಿಯಲ್ಲಿಟ್ಟು ತಲೆಯ ಮೇಲೆ ಹೊತ್ತುಕೊಂಡು ಮನೆ ಮನೆಗೆ ಹೋಗಿ ಹಾಡು ಹೇಳುತ್ತಾ ಜನರಿಂದ ದವಸ ಧಾನ್ಯ ವಸೂಲು ಮಾಡುವುದು (ಬೆಳ.ಜಿ) ೩. ದೇವತೆಯ ಹರಕೆ ಕೋಣವನ್ನು ಸಿಂಗರಿಸಿ ತಮಟೆ ವಾದ್ಯದೊಂದಿಗೆ ಊರಲ್ಲಿ ಮಾಡುವ ಮೆರವಣಿಗೆ ೪. ದಾಸಯ್ಯ ಜೋಗಯ್ಯಗಳ ಜೊತೆ ದೀಕ್ಷಾನ್ವಿತನಾದ ಗೊರವನು ಗೊರವಯ್ಯ ಎನಿಸಿಕೊಂಡು ಮೈಲಾರಲಿಂಗನ ಸೇವೆಗೆ ಹೊರಡುವುದು (ಬೆಂಗ.ಜಿ) ೫. ತಿರುಗಾಡು ೬. ಭಿಕ್ಷಾಟನೆಮಾಡು

ಊರಾನಿ: ಹಂದಿ (ಧಾರ.ಜಿ)

ಊರಾಮಟ್ಟೆರೋಗ: ಈರುಳ್ಳಿ ತಳಿಗಳಿಗೆ ಬರುವ ಒಂದು ರೋಗ

ಊರಾವು: ಊರಿನ ದನ

ಊರಿಕೆ: ಹೊಸದಾಗಿ ನೆಟ್ಟಗಿಡ (ಉಕ.ಜಿ)

ಊರಿಗಿ: ಒಂದು ಸಿಹಿತಿನಿಸು; ಒಂದು ಬಗೆಯ ಕಡುಬು (ಶಿವ.ಜಿ)

ಊರಿಗೆ: ನಗರ್ತ ಜನಾಂಗದಲ್ಲಿ ದೀಪಾವಳಿ ಹಬ್ಬದಂದು ಕುಸಬಲಕ್ಕಿಯಿಂದ ಮಾಡುವ ಕಜ್ಜಾಯದಂತ ಸಿಹಿ ತಿಂಡಿ (ಬೆಂಗ್ರಾ.ಜಿ)

ಊರಿನ ತಲೆ: ಊರಿನ ಹಿರಿಯರು (ಉಕ.ಜಿ)

ಊರು: ೧. ನೆಡು. **ಪ್ರ:** ಅಲ್ಲೊಂದು ಮಲ್ಲಿಗೆ ಅಂಟು ಊರಿದ್ದೆ. ಚೆನ್ನಾಗಿ ಚಿಗುರದೆ (ಮೈಸೂ.ಜಿ) ೨. ಕೀಳು; ಬಿಡಿಸು. **ಪ್ರ:** ರೇಶ್ಮೆ ಹುಳಕ್ಕೆ ಸೊಪ್ಪೂರಕ್ಕೋಗವ್ನೆ (ಮೈಸೂ.ಜಿ) ೩. ಬಹಳ ಬಿಗಿಮಾಡು

ಊರುಕಟ್ಟೆ: ಊರಿನ ಪಂಚಾಯಿತಿ ಕಟ್ಟೆ (ಶಿವ.ಜಿ)

ಊರುಕೊಡ್ಸೆ: ಎರವರಲ್ಲಿ ಮದುವೆಯ ಒಂದು ಆಚರಣೆ (ಕೊಡ.ಜಿ)

ಊರುಗ: ಅಮಾವಾಸ್ಯೆ ಅಥವಾ ಹುಣ್ಣಿಮೆಯ ಹಿಂದುಮುಂದಿನ ದಿನ (ರಾಮ.ಜಿ)

ಊರುಗಂಟು: ಸುಲಭವಾಗಿ ಬಿಚ್ಚಬಹುದಾದ ಒಂದು ರೀತಿಯ ಗಂಟು; ಮೊದಲುಒಂದು ಗಂಟುಹಾಕಿ ಎರಡನೇ ಗಂಟನ್ನು ಹಾಕಬೇಕಾದರೆ ದಾರವನ್ನು ಅರ್ಧಕ್ಕೆ ಬಿಗಿ ಮಾಡುವುದು

ಊರುಗದಲ್ಲಿ ಹುಟ್ಟು: ಅಮಾವಾಸ್ಯೆಯ ದಿನದಲ್ಲಿ ಹುಟ್ಟುವುದು; ಊರುಗ ದಿನದಲ್ಲಿ ಹುಟ್ಟಿದರೆ ಅಪವಾದ ಎದುರಿಸಬೇಕಾಗುವುದೆಂಬ ನಂಬುಗೆ ಇದೆ (ಬೆಂಗ್ರಾ.ಜಿ)

ಊರುಗುಣಿಕ: ಹಗ್ಗವನ್ನು ಊರಿದಾಕ್ಷಣ ಹಾಕಿಕೊಳ್ಳುವ ಕುಣಿಕೆ (ಚಾಮ.ಜಿ) **ನೋಡಿ–** ಊರುಗಂಟು

ಊರುಗೋಲು: ವಯಸ್ಸಾದವರು ಸ್ವತಂತ್ರವಾಗಿ ನಡೆಯಲು ಸಾಧ್ಯವಾಗದೇ ಹೋದಾಗ ಸಹಾಯಕ್ಕಾಗಿ ಬಳಸುವ ಮರದ ದೊಣ್ಣೆ. ಇದು ಸುಮಾರು ಮೂರರಿಂದ ಐದು ಅಡಿಗಳಷ್ಟು ಉದ್ದವಿದ್ದು ಎರಡು ಇಂಚಿನಿಂದ ಮೂರು ಇಂಚಿನಷ್ಟು ಸುತ್ತಳತೆ ಇರುತ್ತದೆ. ಊರುಗೋಲುಗಳನ್ನು ಬೆತ್ತ ಬಿದಿರು ಜೋಣಿಗಿಡದಂಥ ಗಿಡಗಳ ಕೋಲುಗಳಿಂದ ಮಾಡಲಾಗುತ್ತದೆ. ಕೋಲಿನ ತುದಿಗೆ ಕಬ್ಬಿಣ, ಹಿತ್ತಾಳೆ, ಬೆಳ್ಳಿಯ ಬಳೆಯನ್ನು ಜೋಡಿಸಿರುತ್ತಾರೆ.

ಊರುಗೋಲು ಕತ್ತಿ: ಪಾಳೇಗಾರರು, ಊರಿನ ಗೌಡರು, ಶ್ರೀಮಂತರು ತಮ್ಮ ಆತ್ಮರಕ್ಷಣೆಗಾಗಿ ಬಳಸುವ ಸಾಧನ. ಸುಮಾರು ಎರಡರಿಂದ ಎರಡೂವರೆ ಅಡಿ ಉದ್ದವಿದ್ದು ಅರ್ಧ ಅಡಿ ಮರದ ಹಿಡಿಕೆ ಹೊಂದಿರುತ್ತದೆ. ಕತ್ತಿಯ ಎರಡು ಪಾರ್ಶ್ವಗಳೂ ಹರಿತವಾಗಿರುತ್ತವೆ. ತುದಿ ಚೂಪಾಗಿರುತ್ತದೆ. ಇದನ್ನು ಕಣ್ಣಿಗೆ ಕಾಣದ ಹಾಗೆ ಊರುಗೋಲ ಒಳಗಡೆ ಅಳವಡಿಸಿರುತ್ತಾರೆ. ಅವಶ್ಯಕತೆ ಬಂದಾಗ ಮಾತ್ರ ಅದನ್ನು ಹೊರಗೆ ತೆಗೆಯುತ್ತಾರೆ

ಊರುದ್ರಿ: ಕೆಟ್ಟ ನಡತೆಯ ಹೆಣ್ಣು (ಗುಲ್ಬ.ಜಿ) ನೋಡಿ– ಊರಡಸಿ

ಊರುಪಾಲು: ಒಂದು ಊರಿಗೆ ಸಂಬಂಧಿಸಿದ ಕಾಡಿನಲ್ಲಿ ಯಾರೇ ಶಿಕಾರಿ ಮಾಡಿದರೂ ಆ ಊರಿನವರಿಗೆ ಕೊಡುವ ಮಾಂಸದ ಪಾಲು (ಹಾಸ.ಜಿ)

ಊರುಮಾರಿ: ಉರಿನ ಗ್ರಾಮದೇವತೆ ಮಾರಮ್ಮ (ಬೆಂಗ್ರಾ.ಜಿ)

ಊರುಮಿತ್ತ್: ಊರು ಮೇಲಾಯಿತು; ಮೀನುಗಾರಿಕೆಗೆ ಬಿಡುವು ಇರುವ ದಿನದಂದು ಸಕಲ ಬೆಸ್ತರೂ ಊರಿನಲ್ಲೇ ಇರುವುದರಿಂದಲೂ ಕಡಲಲ್ಲಿ ದುಡಿಮೆ ಇಲ್ಲದುದರಿಂದಲೂ ಊರು ಮೇಲಾಯ್ತು ಕಡಲು ಕೆಳಗಾಯ್ತು ಎಂದು ಹೇಳಲು ಬಳಸುವ ನುಡಿ (ದಕ.ಜಿ)

ಊರುವ ದಂಟು: ಊರುಗೋಲು

ಊರುಹಾಳು ಗಿಡ: *ಎಪಿಟೋರಿಯಂ:* ಪ್ರಯೋಜನಕ್ಕೆ ಬಾರದ, ಹಸುಕರುಗಳಿಗೆ ಮೇವೂ ಆಗದ ಒಂದು ಜಾತಿಯ ಹುಲ್ಲು

ಊರೂಟ: ಮದುವೆ ಮುಂತಾದ ವಿಶೇಷ ಸಂದರ್ಭಗಳಲ್ಲಿ ಊರಿನವರಿಗೆಲ್ಲಾ ಹಾಕುವ ಊಟ; ಸಾಮೂಹಿಕ ಭೋಜನ (ಶಿವ.ಜಿ)

ಊರೂರು ಮಾರಮ್ಮ: ಊರೂರು ಅಲೆಯುವ ಮಾರಿದೇವತೆ (ಮೈಸೂ.ಜಿ)

ಊರೊಟ್ಟು: ಇಡೀ ಊರಿಗೆ ಸೇರಿದ್ದು (ಶಿವ.ಜಿ)

ಊರೋದೊಣ್ಣೆ: ನೋಡಿ– ಊರುಗೋಲು

ಊರ್ಕಂಡು (ಕ್ರಿ): ಕಳಚಿಕೊಂಡು; ಬಿಡಿಸಿಕೊಂಡು

ಊರ್‌ಕಟ್ಟು: ಸಾಮಾಜಿಕ ನಿಯಮಗಳನ್ನು ಮೀರಿದವನ ವಿರುದ್ಧವಾಗಿ ಪಂಚಾಯಿತಿಯ ಹಿರಿಯರು ವಿಧಿಸುವ ಆರ್ಥಿಕ ನಿರ್ಬಂಧ

ಊರ್ಕಾಳಿ: ಆರನೇ ತಿಂಗಳಲ್ಲಿ ಬಸುರಿಯರನ್ನು ಕಾಡುತ್ತದೆಂದು ನಂಬಲಾಗುವ ದೇವತೆ. ಈ ದೇವಿಯ ಕೋಪ ಅಮಶಂಕೆ, ಹೊಟ್ಟೆನೋವನ್ನು ತರುತ್ತದೆ ಎಂಬ ನಂಬಿಕೆ ಇದೆ (ಕೋಲಾ.ಜಿ)

ಊರ್ಗಾಯಿ: ಉಪ್ಪಿನಕಾಯಿ (ಕೋಲಾ.ಜಿ)

ಊರ್ಣ: ಹೂರಣ (ಮಂಡ್ಯ.ಜಿ); ಕಡಲೆಬೇಳೆ ತೊಗರಿಬೇಳೆ ಬೇಯಿಸಿ ಬೆಲ್ಲ ತೆಂಗಿನಕಾಯಿ ಹಾಕಿ ರುಬ್ಬಿ ಮಾಡಿದ ಪದಾರ್ಥ. ಕರ್ಜೀಕಾಯಿ, ಹೋಳಿಗೆಯಲ್ಲಿ ಕಣಕದ ಒಳಗೆ ತುಂಬುವಂತದ್ದು.

ಊರ್ಪಾಯಿ: ಊರಿನ ಗದ್ದೆ ಅಥವಾ ಬಯಲು

ಊರ್ಬಾಗ್ಲು: ಊರ ಬಾಗಿಲು; ಊರಿನ ಪ್ರವೇಶದ್ವಾರ

ಊರ್ಮಂಜು: ಮನೆ, ಕೊಟ್ಟಿಗೆ, ಗೋಡೆಗಳಿಗೆ ಬಳಿಯಲು ಬಳಸುವ ಕೆಮ್ಮಣ್ಣಿನ ಪುಡಿ (ಶಿವ.ಜಿ). ***ಇರೂ:*** ಹುರ್ಮಂಜು

ಊರ್‌ರೋಶಿ: ನಡತೆಗೆಟ್ಟ ಹೆಂಗಸು

ಊರ್ಲು: ೧. ಘಾಟು ೨. ಹೊಗೆ (ರಾಮ.ಜಿ)

ಊರ್‌ಸಿಂಗಾರ: ಊರಿನಲ್ಲಿ ಬೆಳೆಯುವ ಸಿಂಗಾರದ ಗಿಡ. ಕರಾವಳಿ ಭಾಗದಲ್ಲಿ ಈ ಹೂವನ್ನು ನಾಗನಿಗೆ ಮತ್ತು ಎಲ್ಲಾ ದೇವರಿಗೆ ಅರ್ಪಿಸಿ ಪೂಜಿಸುವರು. ಬುಡಕಟ್ಟಿನವರು ರಂಗೋಲಿಯಲ್ಲಿ ಮೂಡಿಸುವರು

ಊರ್ಸೂಳಿ: ಊರಿನ ಸೂಳೆ; ಬೈಗುಳ (ಧಾರ.ಜಿ)

ಊರ್‌ಹಾದ್ರುಗಿತ್ತಿ: ಹಾದರಗಿತ್ತಿ ಎಂದು ಬೈದವಳಿಗೆ ಪ್ರತಿ ಬೈಗುಳ (ಧಾರ.ಜಿ)

ಊಲಿ: ಸುದ್ದಿ

ಊಲಿಹಣ್ಣು: ಕವಳೆ ಹಣ್ಣು (ಬಳ್ಳಾ.ಜಿ)

ಊವಗಾಡ: ಉಬ್ಬಗಡ್ಡ; ಉಬ್ಬು ಹಲ್ಲು

ಊವರ್ಚಿ: ಹೂವರಸಿ ಮರ (ಬೆಂಗ್ರಾ.ಜಿ) (ಚಿತ್ರ ನೋಡಿ)

ಊಸಪುಳ್ಳೆ: ನೋಡಿ– ಊಸುಪುಳ್ಳೆ

ಊಸರವಳ್ಳಿ: ಗೋಸುಂಬೆ; ಕೈಮದ್ದು ಅಥವಾ ಕೈಮಸಕು ತಯಾರಿಸಲು ಇದರ ರಕ್ತವನ್ನು ಬಳಸುತ್ತಾರೆ ಎಂಬ ನಂಬಿಕೆ ಇದೆ (ಬೆಂಗ್ರಾ.ಜಿ)

ಊಸಿ: ೧. ಮೊಳೆ ಹೊಡೆಯುವುದಕ್ಕೆ ಮೊದಲು ತೂತು ಮಾಡಲು ಬಳಸುವ ಸಾಧನ (ಮಂಡ್ಯ.ಜಿ) ೨. ನೇಯ್ಗೆಯಲ್ಲಿ ತಟ್ಟಿನ ಒಳಗೆ ಎಳೆ ತುಂಬುವ ಸಾಧನ. ***ಇರೂ:*** ತುಂಬುಸೂಜಿ, ಮಣಿಗಡ್ಡಿ (ಬಳ್ಳಾ.ಜಿ)

ಊಸಿರುವೆ: ಪುಟ್ಟದಾದ ಹಾಗೂ ವಿಶಿಷ್ಟವಾದ ವಾಸನೆ ಉಳ್ಳ ಬಿಳಿಯ ಇರುವೆ (ಶಿವ.ಜಿ); ವಾಸ್ನೆ ಇರುವೆ

ಊಸುಪುಳ್ಳೆ/ಊಸಪುಳ್ಳೆ: ೧. ಪೊರಕೆಕಡ್ಡಿ (ಕೋಲಾ.ಜಿ) ೨. ಉಣ್ಣೆಯ ಎಳೆಗಳನ್ನು ಸುತ್ತಿಕೊಳ್ಳಲು ಬಳಸುವ ಬಿದಿರಿನ ಕಡ್ಡಿ

ಊಸುಪ್ಪು: ದೇಹದಲ್ಲಿನ ಕೆಟ್ಟ ವಾಸನೆಯ ಗಾಳಿ ಹೋಗಲು ಬಳಸುವ ಔಷಧಿಗುಣದ ಉಪ್ಪು (ಮೈಸೂ.ಜಿ)

ಊಸುಮಾರಿ: ಎಡವಟ್ಟು ವ್ಯಕ್ತಿ; ವಕ್ರಬುದ್ಧಿಯುಳ್ಳ ವ್ಯಕ್ತಿ. **ಪ್ರ:** ಊರಿಗೆ ಒಂದು ದಾರಿಯಾದ್ರೆ ಊಸುಮಾರಿಗೇ ಒಂದು ದಾರಿ

ಊಸ್ಗಾಳಿ: ತಂಡಿಗಾಳಿ; ಶೀತಗಾಳಿ

ಊಸ್ನರಿ: ಹೊಲದಲ್ಲಿ ಹುಟ್ಟುವ ಒಂದು ಜಾತಿಯ ಹುಲ್ಲು (ಹಾಸ.ಜಿ)

ಊಸ್ಮನಿ: *ಅರಿಸ್ಟಿಡಾ ರಿಡ್ಯಾಕ್ಟ*; ಹೊಲದಲ್ಲಿ ಹುಟ್ಟುವ ಕಳೆಸಸ್ಯ

ಊಸ್ರೂಳಿ: ೧. ಊಸರವಳ್ಳಿ ೨. ಅವಕಾಶವಾದಿ; ಸಂದರ್ಭಕ್ಕೆ ತಕ್ಕಂತೆ ವರ್ತಿಸುವ ವ್ಯಕ್ತಿ (ಬಳ್ಳಾ.ಜಿ)

ಊಳಿಡು: ನಾಯಿಗಳು ಸರಿರಾತ್ರಿಯಲ್ಲಿ ಕೂಗಿಕೊಳ್ಳುವ ವಿಶಿಷ್ಟ ದನಿ

ಊಳು: ಹೊಲವನ್ನು ಹದಗೊಳಿಸು; ಕುಂಟೆಯಿಂದ ಹರಗು (ಧಾರ.ಜಿ); ಉಳು (ಮೈಸೂ.ಜಿ)

ಊಳುಗ: ೧. ಊಳಿಗ ಸೇವೆ; ಜೀತ (ಮೈಸೂ.ಜಿ). **ಪ್ರ:** ಊಳುಗ ಬಲ್ಲವನಾದ್ರೆ ಊರನ್ನೇ ಆಳಬಹುದು. ೨. ಸೇವಕ; ನೌಕರ (ಬೀದ.ಜಿ). **ಪ್ರ:** ಅವರು ಅರಮನೆಯ ಊಳುಗದವರು ೩. ಉಳಿಗಮಾನ್ಯ ಪದ್ಧತಿ; ಗುಲಾಮಿ ಪದ್ಧತಿ

ಊಳ್ದು (ಕ್ರಿ): ಉಳುಮೆ ಮಾಡು (ಕೊಡ.ಜಿ). **ಪ್ರ:** ಅಂವ ಈಗ ಗದ್ದೆ ಊಳ್ದು. **ಇರೂ:** *ಊಳದ್*

ಋ

ಋಕ್ಷ: ೧. ಕರಡಿ ೨. ನಕ್ಷತ್ರ (ಮಂಡ್ಯ.ಜಿ)

ಋಣ: ೧. ಸಾಲ; ಕಡ ೨. ಇನ್ನೊಬ್ಬರನ್ನು ಅವಲಂಬಿಸಿ ಬಾಳುವ ಸ್ಥಿತಿ ೩. ಅದೃಷ್ಟ ೪. ಉಪಕಾರ ಪಡೆದ ಹಂಗು

ಋತುವಾಗು: ದೊಡ್ಡವಳಾಗು; ಹೆಣ್ಣಾಗು; ಮೈನೆರೆ (ಮಂಡ್ಯ.ಜಿ/ಮೈಸೂ.ಜಿ)

ಋಷ್ಯಾಂತಿ/ಋಷ್ವಂತಿ: ಋತುಶಾಂತಿ; ೧. ಮೊದಲಬಾರಿ ಮುಟ್ಟಾದಾಗ ಮಾಡುವ ಒಂದು ಶುಭಸಂಸ್ಕಾರ ೨. ಮೈನೆರೆಯುವಿಕೆ

ಋಷ್ವಂತಿ: ನೋಡಿ– ಋಷ್ಯಾಂತಿ

ಋಷ್ವಂಚಮಿ: ಋಷಿಪಂಚಮಿ; ಋತುಚಕ್ರದ ಹಂತ ಮುಗಿದ ಮೇಲೆ ಬ್ರಾಹ್ಮಣ ಮಹಿಳೆಯರು ಭಾದ್ರಪದ ಮಾಸ ಪಂಚಮಿಯಲ್ಲಿ ಎತ್ತಿನ ಹೆಗಲು ಮುಟ್ಟದ, ಮನೆಯ ತೋಟದಲ್ಲಿ ಬೆಳೆದ, ತರಕಾರಿ ಹಾಗೂ ಧಾನ್ಯಗಳ ಸಾತ್ವಿಕ ಆಹಾರ ಸೇವಿಸುವ ವ್ರತ (ಧಾರ.ಜಿ)

ಋಳಿ: ಹೆಂಗಸರು ಕಾಲಿಗೆ ಹಾಕಿಕೊಳ್ಳುವ ಬೆಳ್ಳಿಯ ಒಡವೆ (ಚಿತ್ರ.ಜಿ/ಮೈಸೂ.ಜಿ)

ಎ

ಎಂಕಲ್ಕ: ದೊಡ್ಡ ಗಾತ್ರದ ಹಂದಿ (ದಕ.ಜಿ)

ಎಂಕ್ಲು: ಎಂಕಲು; ಕೊಂಬೆ (ದಕ.ಜಿ)

ಎಂಗಣ್ಣು: ಓರೆಗಣ್ಣು; ಮೆಳ್ಳೆಗಣ್ಣು; ಮಾಲಗಣ್ಣು (ಧಾರ.ಜಿ/ ಮೈಸೂ.ಜಿ)

ಎಂಚಗುಳಿ: ಅಂಕಣ; ಮುಚ್ಚಿಗೆಯ ಸಂದಿನ ಸ್ಥಳ (ಉಕ.ಜಿ)

ಎಂಚಣ್ಗಿ: ಏಣಿ (ಉಕ.ಜಿ)

ಎಂಚಿಲ್: ಚೆನ್ನೆಮಣೆಯ ಎಂಚಿಲ್ ಬಚ್ಚಿಲ್ ಆಟದಲ್ಲಿ ಆಟಗಾರರು ಕೇಳುವ ಪ್ರಶ್ನೆ (ದಕ.ಜಿ)

ಎಂಚಿಲ್ ಬಚ್ಚಿಲ್: ಚೆನ್ನೆಮಣೆಯ ಆಟದ ಒಂದು ವಿಧ (ದಕ.ಜಿ)

ಎಂಚು: ಹೆಂಚು; ರೊಟ್ಟಿ ಸುಡುವ ಕಬ್ಬಿಣದ ಸಾಧನ; ಕಾವಲಿ (ಶಿವ.ಜಿ)

ಎಂಚೆಯ: ಕಿವಿಯಲ್ಲಿ ಧರಿಸುವ ಒಂದು ಆಭರಣ

ಎಂಜಣಿದೇವಿ: ಅಂಜನಾದೇವಿ; ಹನುಮಂತನ ತಾಯಿ (ಉಕ.ಜಿ)

ಎಂಜಲಿಗೆ ಕೈಯೊಡ್ಡು: ಹಂಗಿಗೊಳಗಾಗು (ಧಾರ.ಜಿ)

ಎಂಜಲುಕಣ್ಣು: ನಿದ್ರೆಯಿಂದೆದ್ದಾಗಿನ ಪಿಚ್ಚುಗಣ್ಣು

ಎಂಜಲುಕರಗ: ಈ ಮೊದಲೇ ದ್ಯಾವರು ಪಡೆದು ಕರಗ ಹೊತ್ತವರು ಪುನಃ ಎರಡು ಮೂರನೇ ಸಲ ಹೊರುವ ಕರಗ (ಬೆಂಗ್ರಾ.ಜಿ)

ಎಂಜಲುಗಳ್ಳ: ಅನ್ಯರ ಸೊತ್ತನ್ನು ಅಪಹರಿಸುವವ; ಲಂಚಕೋರ

ಎಂಜಲುಗೋಮಯ: ಊಟ ಮಾಡಿದ ಸ್ಥಳವನ್ನು ಸಗಣಿ ಹಾಕಿ ಶುದ್ಧಗೊಳಿಸುವುದು (ಮೈಸೂ.ಜಿ)

ಎಂಜಲುನಾಲಗೆ: ಕೊಟ್ಟ ಭಾಷೆಗೆ ತಪ್ಪಿ ನಡೆಯುವ ವ್ಯಕ್ತಿ

ಎಂಜಲುಬೊಕ್ಕೆ: ಬೇರೆಯವರ ಎಂಜಲು ತಿಂದಾಗ ಕಟಬಾಯಿಯಲ್ಲಿ ಏಳುವ ಬೊಕ್ಕೆ (ಮಂಡ್ಯ.ಜಿ)

ಎಂಜಲೆಲೆ: ಊಟಮಾಡಿದ ಎಲೆ (ಮೈಸೂ.ಜಿ). **ಪ್ರ:** ಎಂಜಲೆಲೆ ಎತ್ತು ಅಂದ್ರೆ ಉಂಡೋರೆಷ್ಟು ಅಂತ ಕೇಳಿದ ಹಾಗೆ (ಗಾದೆ)

ಎಂಜಿರ್‌ತಪ್ಪು: ಒಂದು ಸಸ್ಯ. ಇದರ ಸೊಪ್ಪು ಗೊಬ್ಬರಕ್ಕೆ ಮತ್ತು ಕಾಂಡವು ಸೌದೆಗಾಗಿ ಬಳಕೆಯಾಗುತ್ತದೆ (ದಕ.ಜಿ)

ಎಂಜಿರ್‌ಹಕ್ಕಿ: ಬಾಳೆಯ ಹೂ ಮೊಗ್ಗಿನಿಂದ ಮಕರಂದವನ್ನು ಹೀರುವ ಒಂದು ಸಣ್ಣ ಹಕ್ಕಿ; ಸೂರಕ್ಕಿ (ದಕ.ಜಿ)

ಎಂಜುಲ್ಕೈ: ಎಂಜಲು ಕೈ; ಊಟಮಾಡುತ್ತಿರುವ ಮುಸುರೆ ಕೈ (ಧಾರ.ಜಿ). ಜಿಪುಣರನ್ನು ಕುರಿತು, ಎಂಜಲುಕೈಯಲ್ಲಿ ಕಾಗೆಯನ್ನೂ ಓಡಿಸುವುದಿಲ್ಲ ಎಂಬ ಮಾತು ಪ್ರಚಲಿತವಿದೆ.

ಎಂಜಿರು: ಗೊಂಚಲುಹೂ ಬಿಡುವ ಒಂದು ಬಗೆಯ ಸಣ್ಣ ಎಲೆಯ ಸಸ್ಯ. ಇದರ ಹೂವನ್ನು ಬಾಲೆಸಾಂತು ಕುಣಿತದಲ್ಲಿ ದೇವರ ಅಲಂಕಾರಕ್ಕೆ ಬಳಸುತ್ತಾರೆ (ಕೊಡ.ಜಿ)

ಎಂಜ್ಲಿಕ್ಕು: ಊಟ ಮಾಡಿ ಎಲೆ ತೆಗೆದ ನಂತರ ಸಗಣಿ ಉಂಡೆಯನ್ನು ಉರುಳಿಸಿ ಸ್ವಚ್ಛಗೊಳಿಸು (ಚಿಬ.ಜಿ)

ಎಂಜ್ಲು/ಎಂದ್ಲು/ಎಂಜಲು: ೧. ತಿಂದು ಉಳಿದದ್ದು; ಉಚ್ಛಿಷ್ಟ ೨. ಬಾಯಿಯಲ್ಲಿರುವ ಲಾಲಾರಸ; ಉಗುಳು

ಎಂಟಾಣೆ: ಎಂಟು ಆಣೆ; ರೂಪಾಯಿಯಲ್ಲಿ ಅರ್ಧ ಭಾಗ; ಐವತ್ತು ಪೈಸೆ

ಎಂಟಾನೆಂಟುದಿನ: ಇಡೀ ಒಂದು ವಾರ (ಧಾರ.ಜಿ)

ಎಂಟಾಳು: ಬೇಟೆಯಾಡಿದ ಪ್ರಾಣಿಯ ತೂಕವನ್ನು ಹೇಳುವ ಅಂದಾಜಿನ ಅಳತೆಯ ಪದ; ಎಂಟು ಜನ ಹೊರಬಹುದಾದ ಶಿಕಾರಿಪ್ರಾಣಿ (ಚಿಮ.ಜಿ)

ಎಂಟಾಳುಕುಯ್ಲಿನ ಗದ್ದೆ: ಎಂಟು ಹೆಣ್ಣಾಳುಗಳು ಒಂದು ದಿನದಲ್ಲಿ ಕೊಯ್ಯಬಲ್ಲಷ್ಟು ಭೂಪ್ರಮಾಣದ ಗದ್ದೆ

ಎಂಟುಘಳ್ಗಿ: ೧. ಎಂಟನೇ ಪ್ರಹರ ೨. ಕೊನೆಗಳಿಗೆ; ಸಾವಿನ ಕ್ಷಣ (ಧಾರ.ಜಿ)

ಎಂಟುಮೂಲೆಸೇಡಿ: ಎಂಟು ಮೂಲೆಗಳಿರುವ ರಂಗೋಲಿ ವಿನ್ಯಾಸ. ಗಾಮೊಕ್ಕಲಿಗರು ಅಡಿಕೆ ಸಿಪ್ಪೆಯನ್ನು ಗರಗಸದ ಆಕಾರದಲ್ಲಿ ಕತ್ತರಿಸಿ, ಅದನ್ನೇ ಕುಂಚದಂತೆ ಬಳಸಿಕೊಂಡು ಗೋಡೆ ಮೇಲೆ ಸೇಡಿಯಿಂದ ಒಂದೇ ಬಾರಿ ಮೂರು ಮೂರು ಗೆರೆಗಳಿಂದ ಈ ವಿನ್ಯಾಸ ರಚಿಸುವರು (ಉಕ.ಜಿ)

ಎಂಟೆ: ಹೆಂಟೆ; ಮಣ್ಣಿನ ಗಟ್ಟಿಮುದ್ದೆ (ಚಿತ್ರ.ಜಿ/ಚಾಮ.ಜಿ)

ಎಂಟೆಂಟುಕೋಲು: ಕೋಲಾಟದ ಒಂದು ವಿಧ (ಬೆಂಗ್ರಾ.ಜಿ)

ಎಂಟೆತ್ತಿನ ಬಾನ: ನವಣೆ ಅಕ್ಕಿಯ ಅನ್ನ (ಬಳ್ಳಾ.ಜಿ)

ಎಂಟೆದಿ: ಧೈರ್ಯ; ಪರಾಕ್ರಮ (ಬಳ್ಳಾ.ಜಿ)

ಎಂಟ್ಟಿ: ಮುಂಗುಸಿ (ಕೋಲಾ.ಜಿ)

ಎಂಡಿ: ಹೆಂಡೆ; ಮಣ್ಣು ಸಗಣಿ ಮೊದಲಾದವುಗಳ ಉಂಡೆ (ಬೆಳ.ಜಿ/ಬಳ್ಳಾ.ಜಿ)

ಎಂಡಿಗಚ್ಚು: ಹಸಿಹೊಲದಲ್ಲಿ ಗಳೆ ಹೊಡೆದಾಗ ಮಣ್ಣು ಸಣ್ಣ ಸಣ್ಣ ಉಂಡೆಯಾಗುವುದು

ಎಂಡ್ಮಾತು: ಎರಡು ಮಾತು; ಕೆಲವು ಮಾತು (ಕೋಲಾ.ಜಿ)

ಎಂಡ್ರಕಾಯ್‌ಉಪ್ಪುನೀರು: ಏಡಿಯಿಂದ ತಯಾರಿಸಿದ ಉಪ್ನೀರು ಸಾರು (ಕೋಲಾ.ಜಿ)

ಎಂಡ್ರು: ೧. ಹೆಂಡಿರು; ಹೆಂಡತಿ (ಮೈಸೂ.ಜಿ) ೨. ಅವುಡು; ಒಸಡು

ಎಂಡ್ರುಕಾಯಿ: ಏಡಿ (ಚಿತ್ರ.ಜಿ)

ಎಂಡ್ರುಕಾಯಿ ರಾಮ್‌ರಸ: ಏಡಿಯಿಂದ ತಯಾರಿಸಿದ ತಿಳಿಸಾರು; ಬಾಣಂತಿಯರ ಸೊಂಟಕ್ಕೆ ಬಲಬರಲು ಇದು ಉತ್ತಮ ಆಹಾರ ಎಂದು ಹೇಳುತ್ತಾರೆ (ಕೋಲಾ.ಜಿ)

ಎಂಪೆಗೊಬ್ಬುನು: ಅಣೆಕಲ್ಲಾಟದಲ್ಲಿ ನಾಲ್ಕು ಕಾಯಿಗಳನ್ನು ಏಕಕಾಲದಲ್ಲಿ ತೆಗೆಯುವ ಪರಿಣತಿ (ದಕ.ಜಿ)

ಎಂಬಲ: ೧. ಜೋಳದ ನುಚ್ಚಿಗೆ ಮಜ್ಜಿಗೆ ಬೆರೆಸಿ ಮಾಡುವ ಹುಳಿಪದಾರ್ಥ (ರಾಯ.ಜಿ) ೨. ಪೂಜೆ (ಗುಲ್ಬ.ಜಿ)

ಎಂಬಲಗಡಿಗೆ: ಕಳ್ಳಕುಬುಸದ ಸಮಯದಲ್ಲಿ ಗರ್ಭಿಣಿಯ ಮುಂದೆ ಇಡುವ ಸಿಂಗರಿಸಿದ ಗಡಿಗೆ (ಉಕ)

ಎಕರೆ: ನಲವತ್ತು ಗುಂಟೆ ವಿಸ್ತಾರದ ಭೂಮಿ

ಎಕಸರ: ಏಕಸರ; ಹೆಂಗಸರು ಕೊರಳಲ್ಲಿ ಹಾಕಿಕೊಳ್ಳುವ ಒಂದು ಎಳೆಯ ಸರ (ಬಿಜಾ.ಜಿ)

ಎಕ್ಕ/ಎಕ್ಕಿ/ಎಕ್ಕೆ: *ಕಲಾಟ್ರಪಿಸ್ ಜೈಗ್ಯಾಂಟಿಯ:* ೧. ಕೆಂಪು ಮತ್ತು ಬಿಳಿ ಹೂ ಬಿಡುವ ಎರಡು ಪ್ರಬೇಧಗಳಿವೆ. ಬಿಳಿ ಎಕ್ಕವನ್ನು ಸೂರ್ಯನ ಪ್ರತೀಕವೆಂದು ನಂಬಿ ಪೂಜೆ ಮತ್ತು

ಮಾಟ ಮಂತ್ರಕ್ಕೆ ಬಳಸುತ್ತಾರೆ. ಶಿವರಾತ್ರಿಯಂದು ಶಿವನು ಎಕ್ಕದ ಗಿಡದ ಕೆಳಗೆ ವಾಸಮಾಡುತ್ತಾನೆ, ಎಕ್ಕದ ಗಿಡದ ಬುಡದಲ್ಲಿ ನೀರಿರುತ್ತದೆ ಮುಂತಾದ ನಂಬಿಕೆಗಳಿವೆ. ರಾಶಿಯ ಕಾಲದಲ್ಲಿ ಹೊಲದಲ್ಲಿಟ್ಟು ಪೂಜಿಸುತ್ತಾರೆ. ಮೂರನೇ ಮದುವೆ ಶ್ರೇಯಸ್ಸಲ್ಲ ಎಂಬ ಕಾರಣಕ್ಕೆ ಮೊದಲು ಎಕ್ಕದ ಗಿಡದೊಂದಿಗೆ ಮದುವೆ ಮಾಡಿಸಿ ನಂತರ ಮದುವೆ ಮಾಡುತ್ತಾರೆ. ಅನೇಕ ಔಷಧೀಯ ಗುಣಗಳನ್ನು ಹೊಂದಿದ್ದು ಹಲ್ಲುನೋವು, ಜ್ವರ, ಶೀತ, ಕೆಮ್ಮು, ಗೂರಲು, ಅಜೀರ್ಣ, ಆಮಶಂಕೆ, ಕಫ, ಆನೆಕಾಲುರೋಗ, ಕಾಲುಊತ ಮೊದಲಾದವುಗಳ ಚಿಕಿತ್ಸೆಗೆ ಈ ಗಿಡದ ಬೇರೆ ಬೇರೆ ಭಾಗಗಳನ್ನು ಬಳಸುತ್ತಾರೆ. (ಚಿತ್ರ ನೋಡಿ) ೨. ಭಜನೆಯಲ್ಲಿ ಬಳಸುವ ಕಬ್ಬಿಣದ ತಾಳ ೩. ಅಕ್ಕ ೪. ಒಂಟಿ; ಒಂದು ಆಭರಣ ವಿಶೇಷ (ಬೀದ.ಜಿ)

ಎಕ್ಕಟಿಗ: ಒಬ್ಬಂಟಿಗ

ಎಕ್ಕಡ: ೧. ಚಪ್ಪಲಿ ೨. ಪಾದರಕ್ಷೆ ೩. ಚಪ್ಪೋಡು (ಚಿತ್ರ.ಜಿ)

ಎಕ್ಕಡಿ: ೧. ಪಗಡೆಯಾಟದಲ್ಲಿ ಒಂದು ವಿಧ (ಮೈಸೂ.ಜಿ) ೨. ಚೆನ್ನೆಆಟದಲ್ಲಿ ಬಳಕೆಯಾಗುವ ಕವಡೆ (ದಕ.ಜಿ)

ಎಕ್ಕತ್ತು: ಹೆಕ್ಕತ್ತು; ಕುತ್ತಿಗೆ; ಕೊರಳು (ಮಂಡ್ಯ.ಜಿ/ಮೈಸೂ.ಜಿ)

ಎಕ್ಕನಕಿವಿಸೊಪ್ಪು: ಒಂದು ಔಷಧಿಸೊಪ್ಪಿನ ಗಿಡ. ತಂಪುಗುಣದಿಂದಾಗಿ ತಲೆಉರಿ, ಕಣ್ಣುರಿ, ಕೂದಲು ಉದುರುವಿಕೆ ಮತ್ತು ಬಾಲನೆರೆ ತೊಂದರೆಯನ್ನು ನಿವಾರಿಸುವ ಗುಣ ಹೊಂದಿದೆ

ಎಕ್ಕಯ್ಯ ಜೋಗಯ್ಯ: ಪತಿಯ ಶಾಪಕ್ಕೆ ತುತ್ತಾಗಿ ತೊನ್ನುರೋಗ ಪೀಡಿತಳಾದ ಎಲ್ಲಮ್ಮನಿಗೆ ಜೋಗುಳಬಾವಿಯಲ್ಲಿ ಸ್ನಾನ ಮಾಡಿದರೆ ರೋಗನಿವಾರಣೆಯಾಗುತ್ತದೆ ಎಂದು ಪರಿಹಾರ ಸೂಚಿಸಿದ ಸತ್ಪುರುಷರು (ಉಕ)

ಎಕ್ಕರಲಾಡು (ಕ್ರಿ): ೧. ಪ್ರಯತ್ನಿಸು; ಶ್ರಮಪಡು ೨. ಎಗರಾಡು; ಸಿಡಿಮಿಡಿಗುಟ್ಟು

ಎಕ್ಕಲ: ಕಾಡುಹಂದಿ (ಚಿಮ.ಜಿ)

ಎಕ್ಕಲನರಕ: ಹೀನನರಕ

ಎಕ್ಕಲೆ: ೧. ಅಕ್ಕಳೆ; ಜಿರಲೆ (ದಕ.ಜಿ) ೨. ಹೆಕ್ಕಳೆ

ಎಕ್ಕಹುಟ್ಟಿಸು: ನಾಶಪಡಿಸು (ಶಿವ.ಜಿ)

ಎಕ್ಕಳಿಸು: ತಲೆ ಎತ್ತಿ ನೋಡು (ದಕ.ಜಿ)

ಎಕ್ಕಾಗಾಡಿ: ಒಂದೇ ಎತ್ತಿನ ಗಾಡಿ

ಎಕ್ಕಾಡೆ: ಅವಿಭಕ್ತ ಕುಟುಂಬ (ಉಕ.ಜಿ)

ಎಕ್ಕಾಲುವುದು: ನಾಶವಾಗುವುದು

ಎಕ್ಕಾಸ: ಹೆಚ್ಚು (ಕೋಲಾ.ಜಿ). **ಪ್ರ:** ತಿಂದು ಎಕ್ಕಾಸವಾಗಿ ಬಿದ್ಕೊಂಡವ್ನೆ

ಎಕ್ಕಿನಾಯ: ಸೋತವನು

ಎಕ್ಕು: ೧. ಬಿಡಿಸು; ಬೇರೆ ಮಾಡು. **ಪ್ರ:** ಕಾಯಿ ಎಕ್ಕು; ಬೀಜ ಎಕ್ಕು; ಹತ್ತಿ ಎಕ್ಕು ೨. ಉಸಿರು (ದಕ.ಜಿ)

ಎಕ್ಕುಕಟ್ಟಿಹೋಗು/ಎಕ್ಕಹುಟ್ಟಿಹೋಗು: ಹಾಳಾಗು, ನಿರ್ವಂಶವಾಗು ಎಂಬ ಅರ್ಥದ ಬೈಗುಳ. ಮನೆಯಲ್ಲಿ ಎಕ್ಕದಗಿಡ ಹುಟ್ಟಿದರೆ ಮನೆ ನಾಶವಾಗುತ್ತದೆ ಎಂಬ ನಂಬಿಕೆ. **ಪ್ರ:** ಅವನ ವಂಶ ಎಕ್ಕುಟ್ಹೋಯ್ತದೆ.

ಎಕ್ಕೆ: ನೋಡಿ– ಎಕ್ಕ (ಚಿಮ.ಜಿ)

ಎಕ್ಕೆಗಿಡಕ್ಕೆ ಧಾರೆಎರೆಯುವುದು: ಮೊದಲ ಹೆಂಡತಿ ಸತ್ತ ಬಳಿಕ ಮದುವೆಯಾದ ಎರಡನೆಯ ಹೆಂಡತಿಯೂ ಸತ್ತರೆ ಮೂರನೆಯ ಮದುವೆ ಮಾಡುವ ಮುನ್ನ ಸಾಂಕೇತಿಕವಾಗಿ ಎಕ್ಕೆ ಗಿಡಕ್ಕೆ ಹೆಣ್ಣನ್ನು ಮದುವೆ ಮಾಡುವ ಸಂಪ್ರದಾಯ (ಮೈಸೂ.ಜಿ)

ಎಕ್ಕೆಪತ್ರಿ: ಎಕ್ಕದ ಎಲೆ; ಬಿಲ್ವಪತ್ರೆಯಂತೆ ಇದನ್ನೂ ದೇವರಿಗೆ ಹೂವಿನ ಜತೆ ಏರಿಸುವ ರೂಢಿಯಿದೆ (ಬಳ್ಳಾ.ಜಿ)

ಎಕ್ಕೆಹೂ: ಎಕ್ಕದ ಗಿಡದಲ್ಲಿ ಬಿಡುವ ಹೂವು. ಪೂಜೆಗೆ ಬಳಕೆ. ಸೊನೆಯು ವಿಷಾಪಹಾರಿ ಗುಣ ಹೊಂದಿದೆ. ವಿವಿಧ ರೋಗಗಳಿಗೆ ಔಷಧವಾಗಿ ಬಳಕೆ. ಗಣಪತಿ ಹಬ್ಬದಲ್ಲಿ ಈ ಹೂವಿನ ಮಾಲೆ ವಿಶೇಷವಾಗಿ ಬಳಕೆಯಾಗುತ್ತದೆ

ಎಕ್ಕ್: ಬಿಕ್ಕಳಿಕೆ (ದಕ.ಜಿ)

ಎಕ್ಲು/ಎಕ್ಕಲು: ೧. ಪೊದೆ ೨. ಒಂದು ಬಗೆ ಮಣ್ಣು; ಫಲವತ್ತಾದ ಮಣ್ಣು; ಪ್ರವಾಹದಲ್ಲಿ ಕೊಚ್ಚಿ ಬಂದ ಮಣ್ಣು (ಗುಲ್ಬ.ಜಿ). **ಇರೂ:** ಮೆಕ್ಲು

ಎಕ್ಲೆ: ಮೆಳೆ; ಪೊದೆ. **ಪ್ರ:** ಉಗುನಿ ಮೆಳೆ ಎಕ್ಲೆಲಿ ಸಿಕ್ಕಂಡವ್ನೆ

ಎಕ್ಸೈಕೆ: ಅಣಕಿಸುವಂತೆ ಮಾತನಾಡುವುದು (ಶಿವ.ಜಿ)

ಎಗಚಿ: ಅಜಿಮ ಟೆಟ್ರಕ್ಯಾಂತ: ಬಿಳಿಉಪ್ಪಿಗಿಡ

ಎಗಚು: ವಗಚು; ಅಡಿಗೆಗೆ ಉಪ್ಪು ಜಾಸ್ತಿಯಾದಾಗಿನ ರುಚಿ (ಬಳ್ಳಾ.ಜಿ)

ಎಗಟು: ತಿಂದಿದ್ದು ಅತಿಯಾದಾಗ ಅಥವಾ ಅತಿಯಾದ ಸಿಹಿ ತಿಂದಾಗ ಆಗುವ ಅನುಭವ

ಎಗಬಣ್ಣ: ಎತ್ತುಗಳ ಕೊಂಬಿಗೆ ಹಚ್ಚುವ ಹಾಗೂ ಮನೆಗೆ ಸುಣ್ಣ ತುಂಬಿದ ಮೇಲೆ ಕಿರುಪಟ್ಟಿ ಬಿಡಲು ಬಳಸುವ ಕೆಂಪು ಮಣ್ಣಿನಿಂದ ಕಲಸಿದ ಬಣ್ಣ (ಬೆಂಗ್ರಾ.ಜಿ)

ಎಗರಾಡು: ಕೋಪಾವೇಶ ತೋರಿಸು (ಚಾಮ.ಜಿ)

ಎಗರು (ಕ್ರಿ): ೧. ಹಾರು; ಜಿಗಿ; ಚಿಮ್ಮು (ಧಾರ.ಜಿ) ೨. ಧಾಳಿಮಾಡು; ಜೋರಿನಿಂದ ಎರಗಿಹೋಗು (ಮಂಡ್ಯ.ಜಿ)

ಎಗಳು: ಎಳ್ಳು

ಎಗ್ಗ: ೧. ದಡ್ಡ; ಗಾಂಪ. **ಪ್ರ:** ನೀ ಎಂತ ಎಗ್ಗ ಮಾರಾಯಾ ೨. ಮೂರ್ಖ; ಹೇಳಿದ್ದು ಕೇಳದವ (ಧಾರ.ಜಿ) ೩. ಹೆಗ್ಗಡಜ

ಎಗ್ಗಡದಿಗ್ಗಡ: ಹೇಗ್ಹೇಗೋ

ಎಗ್ಗರು: ಹುಲಿ (ಶಿವ.ಜಿ)

ಎಗ್ಗಲಿಸು: ೧. ದವಸ ಧಾನ್ಯಗಳಲ್ಲಿರುವ ಕಲ್ಲುಗಳನ್ನು ಹಾಗೂ ಕಸಕಡ್ಡಿಗಳನ್ನು ಮೊರದಿಂದ ಕೇರಿ ತೆಗೆಯುವ ಕ್ರಿಯೆ (ಚಿತ್ರ.ಜಿ) ೨. ಧಾನ್ಯಗಳಲ್ಲಿ ಸೇರಿಕೊಂಡಿರುವ ಕಲ್ಲುಗಳನ್ನು ಬೇರ್ಪಡಿಸಲು ಲಯವಾಗಿ ಮೊರವನ್ನು ತಿರುಗಿಸುವುದು (ಚಿಬ.ಜಿ)

ಎಗ್ಗಳ: ಹೆಚ್ಚಾಗಿ

ಎಗ್ಗು: ೧. ಮನಸ್ಸಿಗೆ ಹಚ್ಚಿಕೊಳ್ಳದ ಸ್ವಭಾವ ೨. ನಾಚಿಕೆ. **ಪ್ರ:** ಅವನಿಗೆ ಎಗ್ಗೂ ಸಿಗ್ಗೂ ಒಂದಿಷ್ಟೂ ಇಲ್ಲ. ೩. ಮುಗ್ಧತೆ ೪. ತಡೆಯಿಲ್ಲದಿರುವುದು.

ಎಗ್ಲು/ಎಗ್ಲ್/ಎಗಲು: ೧. ಹೆಗಲು ೨. ಮರದ ಕೊಂಬೆ (ದಕ.ಜಿ) **ನೋಡಿ–** ಗೆಲ್ಲು

ಎಚಗಾರ್ತಿ: ಮೀನನ್ನು ವರ್ತನೆಗೆ ಹಾಕಿ ಸುಗ್ಗಿಯಲ್ಲಿ ಧಾನ್ಯ ಪಡೆಯುವವಳು (ಉಕ.ಜಿ)

ಎಚರು: ಎಸರು; ಕುದಿಯುವ ನೀರು (ಉಕ)

ಎಚ್ಚ: ೧. ದಾಸ ಒಕ್ಕಲಿಗರಲ್ಲಿ ಬಾಣಂತನಕ್ಕೆ ತರುವ ವಸ್ತುಗಳು; ಕೊಬ್ಬರಿ ಬೆಲ್ಲ ಚಿಗಳಿ ತಂಬಿಟ್ಟು, ಬೆಣ್ಣೆ ಮುಂತಾದವನ್ನು ಇಟ್ಟುಕೊಂಡು ಎಚ್ಚ ತರುತ್ತಾರೆ. ಮೈನೆರೆದಾಗಲೂ ಹೀಗೆಯೇ ಎಚ್ಚ ತರುತ್ತಾರೆ (ಹಾಸ.ಜಿ) ೨. ಬಾಣಂತಿಯರಿಗೆ ಕೊಡುವ ಕೆಲವು ವಿಶೇಷ ತಿನಿಸಿನ ಪದಾರ್ಥಗಳು ೩. ದೇವರ ಪೂಜೆಗೆ–ದಾಸೋಹಕ್ಕೆ ತರುವ ಪೂಜೆ ಮತ್ತು ಅಡಿಗೆ ಸಾಮಾನು

ಎಚ್ಚಗಾರರು: ನಿಶ್ಚಿತ ಮನೆಗೆ ಪರಂಪರಾಗತವಾಗಿ ಮೀನು ಕೊಡುವವರು (ಉಕ.ಜಿ); ಕ್ಯಾಕದವರು (ಮೈಸೂ.ಜಿ)

ಎಚ್ಚನಮನೆ: ಪರಂಪರಾಗತವಾಗಿ ಮೀನು ಪಡೆಯುವ ನಿಶ್ಚಿತ ಮನೆ. ಪಟಗಾರರು ಕೊಂಕಣಿಗರು, ಆಚಾರಿಗಳು, ಹಾಲಕ್ಕಿ ಒಕ್ಕಲಿಗರು ಇವರು ಎಚ್ಚನ ಮನೆಯವರು. ಮೀನಿಗೆ ಪ್ರತಿಯಾಗಿ ಮೀನುಗಾರ ಕುಟುಂಬಕ್ಕೆ ವರ್ಷಕ್ಕೊಮ್ಮೆ ಒಂದು ಇಲ್ಲವೇ ಎರಡು ಖಂಡಗ ಅಕ್ಕಿ, ಭತ್ತ ಕೊಡುವ ಪದ್ಧತಿ ಇದೆ (ಉಕ.ಜಿ)

ಎಚ್ಚರಗೇಡಿ: ಜವಾಬ್ದಾರಿಯಿಲ್ಲದವನು

ಎಚ್ಚರಿ: ಎತ್ತಕಡೆ (ಮೈಸೂ.ಜಿ)

ಎಚ್ಚಲಿ: ಹೆಚ್ಚಲಿ; ಏಳು ಮತ್ತು ಹನ್ನೊಂದು ಅಶುಭ ಸಂಖ್ಯೆಗಳೆಂಬ ನಂಬಿಕೆಯಿಂದ ಅವುಗಳ ಬದಲಿಗೆ ಎಚ್ಚಲಿ ಎಂಬ ಶಬ್ದವನ್ನು ಬಳಸುತ್ತಾರೆ (ಮಂಡ್ಯ.ಜಿ)

ಎಚ್ಚಲುಶಾಸ್ತ್ರ: ವಿಶ್ವಕರ್ಮರ ಮದುವೆಯ ಸಂದರ್ಭದಲ್ಲಿ ಹೆಣ್ಣನ್ನು ಮನೆಗೆ ಬರಮಾಡಿಕೊಳ್ಳುವ ಶಾಸ್ತ್ರ. ಹೊಸ್ತಿಲ ಮೇಲೆ ಜೋಳ ತುಂಬಿದ ಸೇರನ್ನು ತಟ್ಟೆಯಲ್ಲಿ ಇಡುತ್ತಾರೆ. ಇದನ್ನು ಮೂರು ಬಾರಿ ವಧು ಎಡಗಾಲಿನಿಂದ ಒದೆಯಬೇಕು. ಜೋಳ ತುಂಬಿದ ಸೇರು ಎಷ್ಟು ದೂರ ಹೋಗುತ್ತದೋ ಅಷ್ಟು ಮಧುರವಾಗಿ ಪತಿ ಪತ್ನಿಯರ ಸಂಬಂಧವಿರುತ್ತದೆ ಎಂದು ತಿಳಿಯುತ್ತಾರೆ (ಬಳ್ಳಾ.ಜಿ)

ಎಚ್ಚಳಗಾತಿ: ಹೆಮ್ಮೆಪಡುವವಳು (ಚಾಮ.ಜಿ)

ಎಚ್ಚು: ೧. (ಕ್ರಿ) ಹಚ್ಚು; ಲೇಪಿಸು ೨. ಕತ್ತರಿಸು ೩. ಎಬ್ಬಿಸು ೪. ಹೆಚ್ಚು

ಎಚ್ಚುಮಾಡು (ಕ್ರಿ): ರಾಶಿಪೂಜೆ ಮಾಡು; ಬತ್ತ ಅಥವಾ ಜೋಳದ ಕೊಯ್ಲಿಗೆ ಮುಂಚೆ ನಡೆಯುವ ಒಂದು ಆಚರಣೆ; ಬೆಳೆಪೂಜೆ (ದಕ)

ಎಜ್ಜ: ವೆಜ್ಜ; ಮರ ಅಥವಾ ಹಲಗೆಯಲ್ಲಿ ಚೌಕಾಕಾರ ಅಥವಾ ಗುಂಡಗೆ ಮಾಡಿದ ರಂಧ್ರ (ಕೋಲಾ.ಜಿ)

ಎಜ್ಜಕಟ್ಟಿಗೆ: ತೇರನ್ನು ನಿಯಂತ್ರಿಸುವ ಸಾಧನ. ತೇರನ್ನು ರಭಸವಾಗಿ ಎಳೆಯುವ ಸಂದರ್ಭದಲ್ಲಿ ಇದು ತೇರಿನ ವೇಗದ ಚಲನೆಯನ್ನು ನಿಯಂತ್ರಿಸುತ್ತದೆ (ಬಳ್ಳಾ.ಜಿ)

ಎಜ್ಜೆ: ಸಂದಿ (ಉಕ.ಜಿ)

ಎಟ್ಟ್: ಎಂಟು (ಕೊಡ.ಜಿ)

ಎಟ್ಟ: ಹೊಲವನ್ನು ಬಿತ್ತಿದ ನಂತರ ಬಿತ್ತಿದ ಕಾಳುಗಳು ಮಣ್ಣಿನ ಒಳಗೆ ಸೇರಿಕೊಳ್ಳುವಂತೆ ಮಾಡುವುದಕ್ಕಾಗಿ ಬಳಸುವ ಎಟ್ಟದ ಸೊಪ್ಪಿನಿಂದ ತಯಾರಿಸಿದ ಸಾಧನ (ಕೋಲಾ.ಜಿ)

ಎಟ್ಟಿ: ೧. ಎದುರುವಾದಿಸುವವ; ತಿರುಗಿ ಮಾತಾಡುವವ (ಶಿವ.ಜಿ) ೨. ಅಪ್ರಯೋಜಕ (ದಕ.ಜಿ) ೩. ಸೀಗಡಿ ಮೀನು (ದಕ.ಜಿ) ೪. ಚಪ್ಪಲಿ (ಚಿತ್ರ.ಜಿ) ೫. ನೀಳವಾದ ಮೂತಿಯ ಕೆಂಪು ಬೂದು ಕಡುಬಣ್ಣವಿದ್ದು ಹೊಟ್ಟೆಯಡಿಯಲ್ಲಿ ಮಾಸಲು ಬಿಳಿಯಾಗಿರುವ ಮೀನು (ದಕ.ಜಿ)

ಎಟ್ಟಿಕರಲು: ಕರಲು ಭೂಮಿಯಲ್ಲಿ ಒಂದು ಬಗೆ; ನೀರನ್ನು ಬೇಗನೆ ಹೀರಿಕೊಳ್ಳದ ಭೂಮಿ; ಬೇಗ ಒಣಗುವ ಭೂಮಿ (ಶಿವ.ಜಿ)

ಎಟ್ಟಿಮಾತು: ಕಟುವಾದ ಮಾತು; ಪ್ರತಿರೋಧದ ಮಾತು

ಎಟ್ಟಿರಿ: ೧. ಚಿಕ್ಕ ಟಿಟ್ಟಿಭ ಹಕ್ಕಿ ೨. ಮರಕುಟಿಗ ಹಕ್ಕಿ (ದಕ.ಜಿ)

ಎಟ್ಟಿಸುತ್ತ: ಕತ್ತಿ ಮೀನು (ದಕ.ಜಿ)

ಎಟ್ಟು: (ನಾ) ೧. ಪೆಟ್ಟು; ಹೊಡೆತ (ಕ್ರಿ) ೨. ತಿವಿ ೩. ಹೆಟ್ಟು; ಸಂಭೋಗಿಸು (ಮಂಡ್ಯ.ಜಿ) ೪. ಸೇರಿಸು; ಸಿಕ್ಕಿಸು (ಚಿಮ.ಜಿ) ೫. ನಾಟು

ಎಟ್ಟೆ: ೧. ಒಣಗುವ ಕ್ರಿಯೆ; ಬರ ೨. ಹಟವಾದಿ; ಮೊಂಡ ೩. ಅಪ್ರಯೋಜಕ; ಮಂದ ಬುದ್ಧಿಯವನು (ದಕ.ಜಿ)

ಎಟ್ಟೆಭೂಮಿ: ಭೂಮಿಯ ಒಳಗೆ ತೇವಾಂಶವಿದ್ದರೂ ಹೊರಗೆ ಗಟ್ಟಿಯಾಗಿರುವ ಪ್ರದೇಶ. ಉಳುಮೆ ಮಾಡುವುದು ಕಷ್ಟ. ಬೆಳೆ ಉತ್ತಮವಾಗಿ ಬರುವುದಿಲ್ಲ (ಚಿಬ.ಜಿ)

ಎಡಂಕ್‌ವಂಕಿ: ಸ್ತ್ರೀಯರು ತೋಳಿಗೆ ತೊಡುವ ಒಂದು ಆಭರಣ; ವಕ್ರವಾದ ತಿರುವುಗಳುಳ್ಳ ತೋಳಬಂದಿ (ದಕ.ಜಿ)

ಎಡಅಣೆ: ಬಲದಿಂದ ಎಡಕ್ಕೆ ಲಾಳಿ ಓಡಿದಾಗ ಬರುವ ಅಡ್ಡ ಎಳೆ (ಬಳ್ಳಾ.ಜಿ)

ಎಡಕಲು: ೧. ಅಡುಕ್ಲು; ಇಕ್ಕಟ್ಟಾದ ಸ್ಥಳ ೨. ಆಹಾರ ಪದಾರ್ಥಗಳನ್ನು ತುಂಬಿದ ಪಾತ್ರೆಗಳನ್ನಿಡುವ ಎತ್ತರದ ಜಾಗ (ಶಿವ.ಜಿ)

ಎಡಕು: ಕತ್ತು; ಕುತ್ತಿಗೆಯ ಹಿಂಭಾಗ

ಎಡಕುಂಟೆ: ನೋಡಿ– ಎಡೆಕುಂಟೆ

ಎಡಕುಮಾರ್ತಿ: ಎಡಭಾಗದಲ್ಲಿರುವ ಹೆಣ್ಣುದೇವತೆ (ದಕ.ಜಿ)

ಎಡಕ್ಕಿ: ೧. ಸರಿಯಾಗಿ ಬೇಯದ ಅಕ್ಕಿ ೨. ಅರ್ಧ ಬೆಂದ ಅಕ್ಕಿ (ಉಕ.ಜಿ)

ಎಡಕ್ಕೆ ಬೈತಲಿ: ತಲೆಗೂದಲಿನ ನಡು ಭಾಗದಲ್ಲಿ ಬೈತಲೆ ತೆಗೆಯದೆ ಎಡಭಾಗದಲ್ಲಿ ತೆಗೆದ ಬೈತಲೆ

ಎಡಕ್ಲು: ಅಟ್ಟ; ಅಡುಗೆ ಪಾತ್ರೆಗಳನ್ನಿಡುವ ಎತ್ತರದ ಸ್ಥಳ (ಚಿಮ.ಜಿ)

ಎಡಗ: ನಪುಂಸಕ; ಷಂಡ (ಚಿಮ.ಜಿ) **ನೋಡಿ–** ಆಣ

ಎಡಗಣ್ಣದುರು: ಎಡಗಣ್ಣು ಕಂಪಿಸುವುದು. ಇದು ಅಶುಭಸೂಚಕ ಎಂಬ ನಂಬಿಕೆ (ಮೈಸೂ.ಜಿ/ಚಾಮ.ಜಿ)

ಎಡಗಣ್ಣೆಲಿ ನೋಡು: ನಿರ್ಲಕ್ಷ್ಯದಿಂದ ಕಾಣು (ಬಿಜಾ.ಜಿ)

ಎಡಗಾಲ: ಅಕಾಲ; ಕಾಲವಲ್ಲದ ಕಾಲ (ಶಿವ.ಜಿ)

ಎಡಗು: ೧. ಸಾಧ್ಯ (ಉಕ) ೨. ಎಡವು (ಮಂಡ್ಯ.ಜಿ)

ಎಡಗುತ್ತಿ: ಮಧ್ಯಮಗಾತ್ರದ ಪೊದೆ (ಶಿವ.ಜಿ)

ಎಡಗೆ: ಹೆಡಿಗೆ; ಬಿದಿರು ಪುಟ್ಟಿ (ದಕ)

ಎಡಗೋಲು: ಎಡಭಾಗದ ಎತ್ತು; ಉಳುವಾಗ, ಗಾಡಿಹೊಡೆಯುವಾಗ ಎಡಭಾಗಕ್ಕೆ ಕಟ್ಟಿಕೊಳ್ಳುವ ಎತ್ತು (ಮೈಸೂ.ಜಿ)

ಎಡಗ್ಲು: ಎಡಹಗಲು; ಅವೇಳೆ; ಹೊತ್ತಲ್ಲದ ಹೊತ್ತು (ಮೈಸೂ.ಜಿ/ಚಾಮ.ಜಿ). ***ಇರೂ:*** ಎಡಹೊತ್ತು

ಎಡಚ: ಎಡಗೈ ಬಳಸುವವ (ದಕ)

ಎಡಚಕ: ಪ್ರಾಣಿಗಳ ಎದೆಯ ಮುಂಭಾಗ (ಚಿಮ.ಜಿ.)

ಎಡಚಲೆ: ದೋಣಿಯಲ್ಲಿ ಕುಳಿತುಕೊಂಡು ಮೀನು ಹಿಡಿಯುವಾಗ ಉಪಯೋಗಿಸುವ ಒಂದು ವಿಧದ ಬಲೆಯ ಹೆಸರು (ದಕ.ಜಿ)

ಎಡಚಾಷ್ಟಿ: ನಕಾರಾತ್ಮಕ ಅಣುಕು ಮಾತು (ದಕ.ಜಿ)

ಎಡಚಿಕ್ಕಿ ಮಾಡು (ಕ್ರಿ): ಬೆಳೆಯ ನಡುವಿನ ಕಸವನ್ನು ತೆಗೆ

ಎಡಚೋರಿ: ೧. ಎಳೆಯ ಹೋರಿ ೨. ಎಡಮಗ್ಗುಲಲ್ಲಿ (ಹಾಸ.ಜಿ)

ಎಡಜಲ್ಲಿ: ಎಡಬದಿಯಲ್ಲಿ ಹಾಕಿದ ತಲೆಗೂದಲ ಹೂವಿನ ಶೃಂಗಾರ (ದಕ.ಜಿ)

ಎಡತಪರ್ಪು: ಕರು ಹಾಕಿದ ಮೂರರಿಂದ ಆರು ತಿಂಗಳೊಳಗಿನ ಆಕಳು ಅಥವಾ ಎಮ್ಮೆಯಿಂದ ಸಿಗುವ ಹಾಲಿನ ಪ್ರಮಾಣ ಕಡಿಮೆಯಾಗುವುದು (ಉಕ.ಜಿ)

ಎಡತಾಕು: ಬಹಳ ಸಲ ಓಡಾಡುವುದು (ಧಾರ.ಜಿ)

ಎಡತಾಮರೆ: ತಲೆಯಲ್ಲಿ ಧರಿಸುವ ತಾವರೆ ಹೂವಿನಾಕಾರದ ಒಂದು ಆಭರಣ (ದಕ.ಜಿ)

ಎಡತಿಗೆಬಳ್ಳಿ: *ಕಾಂಬ್ರೀಟಮ್ ಓವಲಿಫೋಲಿಯಮ್:* ಒಂದು ಬಗೆಯ ಬಳ್ಳಿ

ಎಡದಾರಿ: ೧. ಅರ್ಧ ದಾರಿ (ಉಕ.ಜಿ) ೨. ಹರಿಕಾಂತರಲ್ಲಿ ಸ್ಮಶಾನಕ್ಕೆ ಒಯ್ಯುವಾಗ ಹೆಣವನ್ನು ಅರ್ಧದಾರಿಯಲ್ಲಿ ಇಳಿಸುವ ಪದ್ಧತಿ (ಉಕ.ಜಿ)

ಎಡದಿಂಡ: ಬೆಳೆಗಳ ಸಾಲಿನ ಮಧ್ಯದಲ್ಲಿರುವ ಕಳೆ ತೆಗೆಯುವ ಉಪಕರಣ (ಗುಲ್ಬ.ಜಿ)

ಎಡಪುಂಡಿ: ಹಾದರಗಿತ್ತಿ; ವ್ಯಭಿಚಾರಿಣಿ (ಉಕ.ಜಿ)

ಎಡಪ್ರಾಯ: ಇಳಿಪ್ರಾಯ (ಬೆಂಗ್ರಾ.ಜಿ)

ಎಡಬಾನಿ: ಕಬ್ಬು ಅಥವಾ ಉಪ್ಪುನೇರಳೆ ಕಡ್ಡಿಯ ಬಲಿತ ಬುಡವನ್ನು ತೆಗೆಯಲು ಬಳಸುವ ಸಾಧನ (ಶಿವ.ಜಿ/ ಬೆಂಗ.ಜಿ)

ಎಡಬಿಡಂಗಿ: ಎಲ್ಲೂ ಸಲ್ಲದವ ಎಂಬ ಬೈಗುಳಪದ

ಎಡಮುರಿಶಂಕು: ೧. ಎಡಕ್ಕೆ ಸುರುಳಿಗಳಿರುವ ಶಂಖ (ಮಂಡ್ಯ.ಜಿ) ೨. ಹೆಲಿಕ್ಟೆರೀಜ್ ಐಸೋರ; ಒಂದು ಬಗೆಯ ಮರ. **ಇರೂ:** *ಕವರ್ಗಿಮರ*

ಎಡಮುಸುಗು: ಎಡಗಡೆ ಭಾಗಕ್ಕೆ ಸೆರಗು ಹೊದೆಯುವುದು (ಚಿತ್ರ.ಜಿ)

ಎಡಮೋಟು: ಎತ್ತಿನ ಎಡಚಪ್ಪೆಯ ಹತ್ತಿರದ ಮೂರ್ನಾಲ್ಕು ಅಂಗುಲ ಉದ್ದದ ಎಲುಬು (ಉಕ)

ಎಡರು: ೧. ಅಡ್ಡಿ; ಆತಂಕ ೨. ತೊಂದರೆ; ಅಡೆತಡೆ (ಧಾರ.ಜಿ)

ಎಡವ: ೧. ಷಂಡ ೨. ಹೇಡಿ ೩. ಎಳೆಯ ಹುಡುಗ

ಎಡವಂಕ: ಎಡಭಾಗಕ್ಕೆ ತುದಿಗೋಡು ಬಾಗಿದ ಎತ್ತು

ಎಡವಟ್ಟು: ಕ್ರಮ ತಪ್ಪಿದ; ರೂಢಿಗೆ ವಿರೋಧವಾದ; ತಿಳಿವಳಿಕೆ ಇಲ್ಲದ; ವಕ್ರ ಸ್ವಭಾವ (ಮಂಡ್ಯ.ಜಿ)

ಎಡಹೊಕ್ಕಳಗೂಟ: ನೇಕಾರಿಕೆಯ ಕುಣಿ ಮಗ್ಗದಲ್ಲಿ ನೇಯ್ದ ಬಟ್ಟೆಯನ್ನು ಸುತ್ತಿಕೊಳ್ಳುವ ಕೊರಡನ್ನು ಎಡಮಗ್ಗುಲಲ್ಲಿ ಹೊತ್ತು ನಿಲ್ಲುವ ಗೂಟ

ಎಡಿ: ಚರ್ಮ, ಸಿಪ್ಪೆ ಮೊದಲಾದುವನ್ನು ಎಬ್ಬು; ಸುಲಿ. **ಪ್ರ:** ಅವರೇಕಾಯಿ ಎಡೀತಾ ಇದ್ದಿನಿ (ತುಮ.ಜಿ)

ಎಡಿಸಂಗಟ: ನೈವೇದ್ಯಕ್ಕಾಗಿ ಜೋಳವನ್ನು ಒಡೆದು ನುಚ್ಚುಮಾಡಿ ಬೇಯಿಸುವ ಅನ್ನ (ರಾಯ.ಜಿ)

ಎಡಿಹೊಡಿ: ಬೆಳೆಸಾಲಿನ ಮಧ್ಯೆ ಬೆಳೆದಿರುವ ಕಳೆತೆಗೆಯಲು ಸಣ್ಣ ಕುಂಟೆಯಿಂದ ಹರಗು (ಧಾರ.ಜಿ)

ಎಡುಗುದುಡುಗು: ತಪ್ಪುನೆಪ್ಪು

ಎಡುಮಿಂಡ: ವಿಟಪುರುಷ; ಹಾದರಿಗ (ಉಕ.ಜಿ)

ಎಡೂಳಿ: ಸುಮಾರು ಅರ್ಧ ಇಂಚು ಗಾತ್ರದ ಉಳಿ (ದಕ.ಜಿ)

ಎಡೆ: ೧. ನೈವೇದ್ಯ; ಭೋಜ್ಯ ಪದಾರ್ಥಗಳನ್ನು ದೇವರಿಗೆ ಅರ್ಪಿಸುವಿಕೆ; ಎಡೆ ಮಾಡುವಿಕೆ (ಧಾರ.ಜಿ) ೨. ಸತ್ತವರಿಗೆ, ಪ್ರಿಯವಾದ ತಿಂಡಿ ತಿನಿಸುಗಳನ್ನು ವಿಧ್ಯುಕ್ತವಾಗಿ ಇಡುವುದು (ಮಂಡ್ಯ.ಜಿ) ೩. ಪುರುಸೊತ್ತು ೪. ಅವಕಾಶ ೫. ದಾರಿ ೬. ತೂರಿಹೋಗುವಷ್ಟು ಅಥವಾ ನುಸುಳುವಷ್ಟು ಸಂದಿ ೭. ಬೇಸಾಯದ ಒಂದು ಹಂತ; ಕುಂಟೆ ೮. ಸುಲಿ; ಸಿಪ್ಪೆಬಿಡಿಸು ೯. ಉಳುಮೆ ಪ್ರಾರಂಭ ಮಾಡುವ ಮೊದಲು ಸೂರ್ಯನ ಕಡೆಗೆ ಮುಖಮಾಡಿ ಕುಂಟೆ ಮಡ್ಕೆ ನೇಗಿಲು ಕೂರಿಗೆಗೆ ಪೂಜಿಸಿ ಒಡೆಯುವ ಕಾಯಿ ಇತ್ಯಾದಿ (ಬೆಂಗ.ಜಿ) ೧೦. ಬೆಳೆಯಲ್ಲಿಯ ಕಸವನ್ನು ತೆಗೆಯಲು ಉಪಯೋಗಿಸುವ ಕಟ್ಟಿಗೆಯ ಸಾಧನ (ಬೀದ.ಜಿ) (ಕ್ರಿ) ೧೧. ಸುಲಿ; ಸಿಪ್ಪೆತೆಗೆ (ಮೈಸೂ.ಜಿ)

ಎಡೆ ಓದಿಸು : ನೈವೇದ್ಯ ಅರ್ಪಿಸು (ಯಾದ.ಜಿ)

ಎಡೆಕೀಳು: ಕೂಳೆ ಕಬ್ಬಿಗೆ ಮಾಡುವ ಬೇಸಾಯ (ಮಂಡ್ಯ.ಜಿ)

ಎಡೆಕುಂಟೆ: ಬಿತ್ತಿದ ಕೆಲದಿನಗಳ ನಂತರ ಎರಡು ಸಾಲುಗಳ ನಡುವಿನ ಕಳೆ ಕಸ ತೆಗೆಯಲು ಮತ್ತು ಸಸ್ಯಗಳ ಬೇರು ಸಡಿಲಿಸಲು ಮಣ್ಣನ್ನು ಸಡಿಲಗೊಳಿಸಲು ಉಪಯೋಗಿಸುವ ಸಾಧನ (ಧಾರ.ಜಿ)

ಎಡೆಕುಂಟೆತಾಳು: ಕೊಕ್ಕೆಯಾಕಾರದ ಕಬ್ಬಿಣದ ತಾಳು (ಚಿಮ.ಜಿ) **ನೋಡಿ–** ಎಡೆಕುಂಟೆ

ಎಡೆಕೂರಿಗಿ: ಬೆಳೆಯ ನಡುವಿನ ಕಳೆ ತೆಗೆಯಲು ಬಳಸುವ ಕೂರಿಗೆ (ಬೆಳ.ಜಿ)

ಎಡೆಗಟ್ಟು: ಭೇದ; ಕಟ್ಟುನಿಟ್ಟು; ಕಟ್ಟುಪಾಡು

ಎಡೆಚುಕ್ಕೆ ರಂಗೋಲಿ: ಎರಡು ಚುಕ್ಕೆಗಳ ಎಡೆಯಲ್ಲಿ ಇನ್ನೊಂದು ಚುಕ್ಕೆ ಇಡುವುದು. ರಂಗೋಲಿ ಚುಕ್ಕೆಗಳನ್ನು ನಿರ್ದಿಷ್ಟ ಅಂತರದಲ್ಲಿ ನೇರವಾಗಿ ಸಾಲಾಗಿ ಇಟ್ಟು, ಇದರ ಕೆಳ ಸಾಲಿನಲ್ಲಿ ಎರಡೆರಡು ಚುಕ್ಕೆಗಳ ನಡುವೆ ನಿರ್ದಿಷ್ಟ ಪ್ರಮಾಣದಲ್ಲಿ ಚುಕ್ಕೆಗಳನ್ನು ಇಡುತ್ತಾ ಒಂದೊಂದೇ ಚುಕ್ಕೆ ಕಡಿಮೆಗೊಳಿಸುತ್ತಾ ಸಾಗುವುದು (ದಕ.ಜಿ)

ಎಡೆತಟ್ಟೆ: ದೈವನರ್ತಕನು ಕೈಯಲ್ಲಿ ಹಿಡಿದುಕೊಳ್ಳುವ ಗುರಾಣಿಯಂತಹ ಆಯುಧ (ದಕ.ಜಿ)

ಎಡೆದಿಂಡು ಪಲಗ: ಕೂರಿಗೆ ಸಾಲಿನಲ್ಲಿ ಕಸ ಹಸನು ಮಾಡುವ ದಿಂಡು

ಎಡೆನಾಟಿ: ಬೆಳೆಗಳ ಮಧ್ಯೆ ನೀರು ಹರಿಸಿಕೊಂಡು ಸತ್ತ ಸಸಿಗಳ ಜಾಗಕ್ಕೆ ಮಾಡುವ ನಾಟಿ

ಎಡೆಪರ್ವ: ಸಿದ್ಧಮಾಡಿದ ಅಡುಗೆ ಪದಾರ್ಥಗಳನ್ನು ಮಡಿಯಿಂದ, ಮುಟ್ಟುಚಟ್ಟು ಆಗದಂತೆ ದೇವರಿಗೆ ಅರ್ಪಿಸಿ ಊಟಮಾಡುವ ಆಚರಣೆ (ದಾವ.ಜಿ)

ಎಡೆಬಟ್ಟಲು: ಶರಣರು ಪ್ರಸಾದವನ್ನು ಸ್ವೀಕರಿಸುವ ತಟ್ಟೆ (ಶಿವ.ಜಿ)

ಎಡೆಬಿಡಾರ: ಒಂದು ದಿವಸದ ಊಟದ ವ್ಯವಸ್ಥೆ

ಎಡೆಮಟ್ಟೆ: ಹೆಡಮಟ್ಟೆ; ಈಚಲು, ತೆಂಗು, ಅಡಕೆ ಮರಗಳ ಗರಿ (ತುಮ.ಜಿ/ಚಿಮ.ಜಿ)

ಎಡೆಮಡೆಸ್ನಾನ: ಬ್ರಾಹ್ಮಣರ ಎಂಜಲೆಲೆ ಮೇಲೆ ಉರುಳುವ ಹರಕೆಸೇವೆ

ಎಡೆಮಣೆ: ೧. ದೇವರಿಗೆ ಎಡೆ ಇಡುವ ಮಣೆ ೨. ಊಟಕ್ಕೆ ಬಳಸುವ ಮರದ ಮಣೆ; ತೇವಟಿಗೆ; ಮೂರು ಕಾಲಿನ ಊಟದ ಮಣೆ; ಮುಕ್ಕಾಲಿ (ಚಿಬ.ಜಿ/ಹಾವೇ.ಜಿ/ಶಿವ.ಜಿ) ೩. ಮದುಮಕ್ಕಳು ಊಟಕ್ಕೆ ಕುಳಿತಾಗ ಎಲೆಯ ಕೆಳಗೆ ಇಡುವ ಮಣೆ (ಬೆಂಗ್ರಾ.ಜಿ) ೪. ಒಂದು ವ್ಯವಸಾಯದ ಸಾಧನ

ಎಡೆಮಾಡು (ಕ್ರಿ): ದೇವರಿಗೆ ಎಡೆಯನ್ನು ಅರ್ಪಿಸು

ಎಡೆಮುಗಿಸುವುದು: ದಲಿತರು ತಮ್ಮ ಪೂರ್ವಜರನ್ನು ಸ್ಮರಿಸುವ ಹಿರಿಯರ ಮಾಳದ ಸಂದರ್ಭದ ಸಂಪ್ರದಾಯ. ಪಿತೃಗಳಿಗೆ ಎಡೆ ಇರಿಸಿದ ನಂತರ ಪಿತೃಗಳ ಸಮವಯಸ್ಕರನ್ನು ಆಹ್ವಾನಿಸಿ ಔತಣಕ್ಕಿಟ್ಟಾಗ ಆಹ್ವಾನಿತರು ಅದನ್ನು ಊಟಮಾಡುವುದನ್ನು ಎಡೆ ಮುಗಿಸುವುದು ಎನ್ನುತ್ತಾರೆ

ಎಡೆಸಾಧ್ನೆ: ದಾಸೋಹ; ಭೋಜನ

ಎಡೆಹಚ್ಚು: ಊಟಕ್ಕೆ ನೀಡು (ಧಾರ.ಜಿ)

ಎಡೆಹಿಡಿ: ೧. ದೇವರಿಗೆ ನೈವೇದ್ಯ ಮಾಡು ೨. ಅಲ್ಲಾನಿಗೆ ಸಕ್ಕರೆಯನ್ನು ನೈವೇದ್ಯ ಮಾಡು (ಧಾರ.ಜಿ)

ಎಡೋಣೆ: ಜಾಮೀನು; ಪರರ ಸಾಲಕ್ಕೆ ಹೊಣೆಯಾಗಿ ನಿಲ್ಲುವುದು (ಮಂಡ್ಯ.ಜಿ). **ಇರೂ:** *ಎಡಾಣಿ; ಎಡೋಣಿ (ರಾಮ.ಜಿ)*

ಎಡ್ಕಬಲ್ಕ ಶಾಸ್ತ್ರ: ಕುರುಬರಲ್ಲಿ ಸತ್ತ ವ್ಯಕ್ತಿಯನ್ನು ಸ್ಮಶಾನಕ್ಕೆ ತೆಗೆದುಕೊಂಡು ಹೋಗುವಾಗ ಚಟ್ಟವನ್ನು ಹೊತ್ತವರು ಊರಮುಂದಿನ ಕರುಗಲ್ಲಿನ ಹತ್ತಿರ ಬಂದಾಗ, ಬಲಕ್ಕೆ ಹಿಡಿದವರು ಎಡಕ್ಕೆ, ಎಡಕ್ಕೆ ಹಿಡಿದವರು ಬಲಕ್ಕೆ ಬರುವ ಸಂಪ್ರದಾಯ (ಬಳ್ಳಾ.ಜಿ)

ಎಡ್ಚ: ಎಡಚ; ಲೊಡಚ; ಎಡಗೈಯನ್ನು ಹೆಚ್ಚಾಗಿ ಬಳಸುವವನು (ಮಂಡ್ಯ.ಜಿ). **ಇರೂ:** *ಲೊಡ್ಚ, ರೊಡ್ಡ.*

ಎಡ್ಡ: ದಡ್ಡ; ಮಂದಬುದ್ಧಿಯುಳ್ಳವ (ಶಿವ.ಜಿ)

ಎಡ್ಡಣಿಗಿ: ಅಡ್ಡಣಿಗೆ; ತೇವಟಿಗೆ (ಗುಲ್ಬ.ಜಿ). **ಇರೂ:** ಮುಕ್ಕಾಲಿ

ಎಡ್ಡಾಟ: ದಡ್ಡತನ

ಎಡ್ಡಾಳುದ್ದ: ಎರಡು ಆಳಿನಷ್ಟು ಉದ್ದ. **ಪ್ರ:** ಬಾವಿ ನೀರು ಎಡ್ಡಾಳುದ್ದ ಐತಿ

ಎಡ್ಡು: ೧. ಹೆಡ್ಡ; ತಿಳಿಗೇಡಿ ೨. ಎರಡು (ಗುಲ್ಬ.ಜಿ/ಬೀದ.ಜಿ)

ಎಡ್ಡೆಪಡಿಕ್ಕೆ: ಗುಣದೋಷ (ದಕ.ಜಿ)

ಎಡ್ಡೆಮದಿಪು: ಒಳ್ಳೆಯ ಮಾತು. ದೈವಾವೇಶಗೊಂಡವನ ಎದುರಿನಲ್ಲಿ ಮಾಡುವ ಒಳ್ಳೆಯ ನಿವೇದನೆಯ ಮಾತು; ದೈವಾವೇಶದಲ್ಲಿನ ಅನುಗ್ರಹದ ನುಡಿ (ದಕ.ಜಿ)

ಎಡ್ತ್ ಉಳಿ: ಸುಮಾರು ಒಂದೂವರೆ ಅಂಗುಲ ಬಾಯಿಯಿರುವ ಮಧ್ಯಮ ಗಾತ್ರದ ಉಳಿ (ದಕ.ಜಿ)

ಎಡ್ದು (ಕ್ರಿ): ಹಾಯು (ದಕ.ಜಿ)

ಎಡ್ಹೂವು: ಎಡದಹೂವು. ದೇವರ ಮೂರ್ತಿಯ ಎಡಭಾಗದಿಂದ ಹೂ ಬಿದ್ದರೆ ಅಂದುಕೊಂಡ ಕೆಲಸ ಆಗುವುದಿಲ್ಲವೆಂಬ ನಂಬಿಕೆ ಇದೆ.

ಎಡ್‌ಬಳಿ: ವಿಧವೆಯರು ಮಾತ್ರ ಹಾಕಿಕೊಳ್ಳುವ ಬಳೆ. ತಾಮ್ರದ ಮಧ್ಯೆ ಚಿನ್ನದ ತಗಡು ಹೊದಿಸಿರುತ್ತಾರೆ (ದಕ.ಜಿ)

ಎಣ: ಭತ್ತದ ಹುಲ್ಲು ಬಡಿಯಲು, ಒಕ್ಕಲು ಬಳಸುವ ಸಾಧನ (ತುಮ.ಜಿ)

ಎಣಕೆ: ೧. ಎಣಿಕೆ ೨. ಹೆಣಿಗೆ.

ಎಣಾಗ್ರ: ಎಣ್ಣೆಯೋಗರ; ಎಣ್ಣೆ ಬೆರೆಸಿದ ಅನ್ನ

ಎಣಿ: ೧. ನಿಚ್ಚಣಿಕೆ; ಏಣಿ (ಬೆಳ.ಜಿ/ಧಾರ.ಜಿ) ೨. ಹೆಣೆ; ಹೆಣಿಕೆಹಾಕು

ಎಣಿಗಾರ ಜ್ವಾಳ: ಹಿಂಗಾರಿ ಜೋಳ. ಇದು ಜವಾರಿ ತಳಿ. ಕುಂದಗೋಳ ತಾಲ್ಲೂಕಿನಲ್ಲಿ ಹೆಚ್ಚಾಗಿ ಬೆಳೆಯುವ ಜೋಳದ ಪ್ರಭೇದ

ಎಣಿಗೂಕ: ೧. ಎಣ್ಣಿಗೊಡ; ಎಣಿಗುಂಡ ೨. ಎಣ್ಣೆ ಅಂಶವಿರುವ ಬಾವಿ

ಎಣಿಗೆ: ಹೆಣಿಗೆ; ಬಾಚಣಿಗೆ

ಎಣಿಬಿಚ್ಚು (ಕ್ರಿ): ಹುರಿ ಬಿಚ್ಚು (ತುಮ.ಜಿ)

ಎಣಿಲು/ಏಣಿಲು: ತುಳುನಾಡಿನಲ್ಲಿ ವರ್ಷದ ಮೊದಲ ಬತ್ತದ ಬೆಳೆ (ದಕ.ಜಿ)

ಎಣು: ತುದಿ; ಅಂಚು. **ಇರೂ:** *ಏಣು (ಮಂಡ್ಯ.ಜಿ)*

ಎಣುಗಂಟು: ಹೆಣೆಗಂಟು; ತಲೆಕೂದಲನ್ನು ಸುತ್ತಿ ಕಟ್ಟಿದ ಗಂಟು (ಚಾಮ.ಜಿ). **ಇರೂ:** *ಎಣೆಗಂಟು*

ಎಣೆ: ೧. ಸಮ ೨. ಪ್ರೀತಿ ೩. ಜಡೆ ೪. ನೆಪ ೫. ಹೋಲಿಕೆ (ಮಂಡ್ಯ.ಜಿ) ೬. ಕಣದ ನಡುವೆ ಮೇಟಿ ಎಂಬ ಗೂಟಕ್ಕೆ ಎತ್ತುಗಳನ್ನು ಸಾಲಾಗಿ ಕಟ್ಟಿ ಕಣದ ತುಂಬ ಸುತ್ತಿಸಿ ಒಕ್ಕಣೆಮಾಡುವಿಕೆ ೭. ಗಂಟು ೮. ಹೆಣೆ; ಮೇಟಿಯ ಸುತ್ತ ದನದ ಕೊರಳಿಗೆ ಹಗ್ಗ ಬಿಗಿಯುವ ವಿಧಾನ (ತುಮ.ಜಿ)

ಎಣೆಆಡುವುದು: ಜೋಡಿ ಹಾವುಗಳು ಮೈಥುನ ಮಾಡುವ ಕ್ರಿಯೆ

ಎಣೆಕಟ್ಟೋದು: ಹೆಣೆ ಕಟ್ಟೋದು. ಕಣದ ಮಧ್ಯೆ ಮರದ ಆರು ಅಡಿ ಕಂಬ ನೆಟ್ಟು ಹುಲ್ಲು ತುಳಿಸಲು ದನಗಳನ್ನು ಒಂದರ ಪಕ್ಕ ಮತ್ತೊಂದನ್ನು ನಿಲ್ಲಿಸಿ, ಅವುಗಳ ಕೊರಳಿಗೆ ಹಗ್ಗ ಕಟ್ಟಿ ಸಾಲಿನಲ್ಲಿ ಸುತ್ತುವಂತೆ ಮಾಡುವ ಕ್ರಮ (ಮಂಡ್ಯ.ಜಿ)

ಎಣೆಗೂಡು: ಜೊತೆಯಾಗು; ಒಂದಾಗು

ಎಣೆಗೊಡ್ಡಿ: ಜೊತೆಯಲ್ಲಿ ಇರುವವ (ಕೊಡ.ಜಿ)

ಎಣೆಬಾಳೆ: ಬಾಣಲೆ (ದಕ.ಜಿ). **ಇರೂ:** *ಚೇಂಚಟ್ಟಿ*

ಎಣೆವಕ್ಕಿ: ಜೊತೆಯಾಗಿರುವ ಪಕ್ಷಿ; ಚಕ್ರವಾಕ

ಎಣೆಹೊಡೆ: ಹೆಣೆಹೊಡೆ. ರಾಸುಗಳನ್ನು ತೆಕ್ಕೆ ಹಾಕಿ ಮೇಟಿ ಮರಕ್ಕೆ ಕಟ್ಟಿ ರಾಗಿ ಹಾಗೂ ಭತ್ತದ ಹುಲ್ಲನ್ನು ಕಾಳು ಬೀಳುವವರೆಗೂ ತುಳಿಸುವುದು (ತುಮ.ಜಿ) ನೋಡಿ– ಎಣೆಕಟ್ಟೋದು

ಎಣ್ಗಪ್ಪು: ಎಣ್ಣೆ ಮುಖದ ವರ್ಣ ಛಾಯೆ; ಕಪ್ಪು ಮತ್ತು ಕೆಂಪು ಬಣ್ಣದ ನಡುವಿನ ಬಣ್ಣ (ಚಾಮ.ಜಿ)

ಎಣ್ಗಾಯಿ/ಎಣ್ಣೆಗಾಯಿ: ಮುಳುಗಾಯಿ; ಬದನೆ, ಹೀರೇಕಾಯಿ ಅಥವಾ ದೊಣ್ಣೆ ಮೆಣಸಿನಕಾಯಿಯನ್ನು ಸೀಳಿ, ಮಧ್ಯ ಮಸಾಲೆ ತುಂಬಿ, ಒಗ್ಗರಣೆಯಲ್ಲಿ ಬೇಯಿಸಿ ಮಾಡಿದ ಖಾದ್ಯ

ಎಣ್ಗೆಬ್ಬೆ: ನೀರಿನ ತೇವಾಂಶವನ್ನು ಸಾಕಷ್ಟು ಕಾಲ ತಡೆದಿಟ್ಟುಕೊಳ್ಳುವ ಕೆಂಪು ಮಣ್ಣು (ಮಂಡ್ಯ.ಜಿ)

ಎಣ್ಣಕ್ಕಿಕುಕ್ಕೆ: ನೋಡಿ– ಎಣ್ಣಕ್ಕಿಗೂಡೆ (ಶಿವ.ಜಿ)

ಎಣ್ಣಕ್ಕಿಗೂಡೆ: ಮದುವೆಯಲ್ಲಿ ಗಂಡಿನವರು ವೀಳೆಯಶಾಸ್ತ್ರಕ್ಕೆ ಅಗತ್ಯವಾದ ಸಾಮಗ್ರಿಗಳನ್ನು ಇಟ್ಟುಕೊಂಡು ತರುವ ಬಿದಿರಿನ ಬುಟ್ಟಿ (ಬೆಂಗ್ರಾ.ಜಿ) ಬುವ್ವೇಪೇನ್ಗೆ (ಮೈಸೂ.ಜಿ)

ಎಣ್ಣರಿಶಿನ ಎಡಗೆ: ಎಣ್ಣೆ ಅರಿಶಿಣ ಹೆಡಗೆ; ಲಿಂಗಾಯಿತ ಜನರ ವಿವಾಹ ಸಂದರ್ಭದಲ್ಲಿ, ಗಂಡಿನ ಮನೆಯವರು ಹೆಣ್ಣಿನ ಮನೆಗೆ ವಿವಾಹಕ್ಕೆ ಹೊರಡುವಾಗ ಹರಳೆಣ್ಣೆ ಅರಿಶಿನ ಐದು ತೆಂಗಿನಕಾಯಿ ಸೀಗೇಪುಡಿ ನವಧಾನ್ಯಗಳು ವಸ್ತ್ರಗಾರಿಕೆ ಸೀರೆಯನ್ನು ತುಂಬಿಸಿ ತೆಗೆದುಕೊಂಡು ಹೋಗುವ ಬಿದಿರಿನ ಬುಟ್ಟಿ ಅಥವಾ ಕುಕ್ಕೆ (ಶಿವ.ಜಿ)

ಎಣ್ಣರಿಸಿನ: ಎಣ್ಣೆ ಅರಿಶಿನ ಶಾಸ್ತ್ರ. ವಧೂವರರ ಮನೆಯಲ್ಲಿ ವಧೂವರರಿಗೆ ಹಚ್ಚುವ ಎಣ್ಣೆ ಅರಿಶಿನ (ಬೆಂಗ್ರಾ.ಜಿ) ಅರಿಸಿನೆಣ್ಣೆ ಶಾಸ್ತ್ರ (ಮೈಸೂ.ಜಿ)

ಎಣ್ಣರ್ಸಿಪಟ್ನ: ಹೆಣ್ಣು ಅರಸಿಯ ಪಟ್ಟಣ; ಸ್ತ್ರೀರಾಜ್ಯ; ಜನಪದ ಕಥೆಗಳಲ್ಲಿ ಬರುವ, ಸ್ತ್ರೀಯರೆ ಆಳ್ವಿಕೆ ನಡೆಸುವಂಥ ಒಂದು ಕಾಲ್ಪನಿಕ ರಾಜ್ಯ

ಎಣ್ಣೆಅರಿಶಿಣ ಹಚ್ಚುವ ಕಾರ್ಯ: ಸುರಗಿಯಲ್ಲಿ ಕೂರಿಸಿದ ಮದುಮಕ್ಕಳಿಗೆ ಐದು ಜನ ಮುತ್ತೈದೆಯರು ಎಣ್ಣೆ ಅರಿಶಿಣ ಹಚ್ಚಿ ಹಾಡು ಹೇಳುವ ಶಾಸ್ತ್ರ; ಅರಸಿನೆಣ್ಣೆ ಶಾಸ್ತ್ರ (ಗುಲ್ಬ.ಜಿ/ ಮೈಸೂ.ಜಿ)

ಎಣ್ಣೆಕಡೆ: ಉಣ್ಣೆ ಕಂಕಣ; ಕುರಿಯ ಉಣ್ಣೆಯನ್ನು ಹೊಸೆದು ಮುಂಗೈಗೆ ಕಟ್ಟುವ ಕಡೆ

ಎಣ್ಣೆಮಗಿ: ದೀವಟಿಗೆಗೆ ಸತತ ಎಣ್ಣೆ ಹಾಕಲು ಬಳಸುವ ಒಂದು ಮಣ್ಣಿನ ಗಡಿಗೆ. ಗುಡಿ ಗುಂಡಾರಗಳಲ್ಲಿ, ಭಕ್ತರು ಕೊಟ್ಟ ಎಣ್ಣೆಯನ್ನು ಇದರಲ್ಲಿ ಹಾಕಿ ಕೂಡಿಡುತ್ತಾರೆ (ಧಾರ.ಜಿ)

ಎಣ್ಣೆಮರ: ಎಣ್ಣೆ ಹಚ್ಚಿದ ಕೇರುವ ಮೊರ (ಬೆಳ.ಜಿ)

ಎಣ್ಣೆಸಲಾಕಿ: ಎಣ್ಣೆ ಲಾಳಿಕೆಯಿಂದ ಚಕ್ರಕ್ಕೆ ಎಣ್ಣೆ ಸವರಲು ಬಳಸುವ ತಂತಿಯಂಥ ಸಾಧನ; ಎಣ್ಣೆ ಸವ್ರ ಕಡ್ಡಿ (ಬೀದ್.ಜಿ)

ಎಣ್ಣೆಹೋಳಿಗೆ: ಹೋಳಿ ಹುಣ್ಣಿಮೆಯ ವಿಶೇಷ ಹೋಳಿಗೆ ಅಡುಗೆ (ಶಿವ.ಜಿ)

ಎಣ್ಣುಟ್ಟು: ಹೆಣ್ಣುಹುಟ್ಟು; ಹೆಣ್ಣುಸಂತಾನ

ಎಣ್ಣೂರಿಗೆ: ಎರೆಯಪ್ಪದಂಥ ಸಿಹಿ ತಿನಿಸು. **ಇರೂ:** *ಎಣ್ಣುರಿಗೆ*

ಎಣ್ಣೆಅರಿಶಿನ ಕೊಡುವುದು: ಶುಭ ಸಮಾರಂಭಕ್ಕೆ ಎಣ್ಣೆ ಸ್ನಾನ ಮಾಡಿಕೊಂಡು ಬರುವಂತೆ ಆಹ್ವಾನಿಸುವಾಗ ಮುತ್ತೈದೆಯರಿಗೆ ಕೊಡುವ ಅರಿಶಿನ, ಎಣ್ಣೆ

ಎಣ್ಣೆಅರಿಶಿನದ ಸೀರೆ: ಲಿಂಗಾಯಿತ ಜನರಲ್ಲಿ ವರನ ಕಡೆಯವರು ಎಣ್ಣೆ ಶಾಸ್ತ್ರಕ್ಕೆ ಹುಡುಗಿಗೆ ಕೊಡುವ ಸೀರೆ (ಶಿವ.ಜಿ)

ಎಣ್ಣೆಇಕ್ಕೋರು: ಎಣ್ಣೆ ಹಚ್ಚುವವರು; ವಾತ್ಸಲ್ಯದಿಂದ ಆದರಿಸುವವರು (ಮಂಡ್ಯ.ಜಿ)

ಎಣ್ಣೆಉಚಯ: ಎಣ್ಣೆ ಉತ್ಸವ

ಎಣ್ಣೆಉಪ್ಪು ಇಟ್ಟು ಉರಿಮಾಡು: ಏನೂ ಇಲ್ಲದೆ ಆಡಂಬರ ಮಾಡುವುದು; ಡೋಂಗಿ (ಧಾರ.ಜಿ)

ಎಣ್ಣೆಒಜ್ಜ: ಎಣ್ಣೆ ಮಾರುವವನು (ಶಿವ.ಜಿ)

ಎಣ್ಣೆಕರ್ಪು ಹಾಕೂದು: ರಸ್ತೆಯಲ್ಲಿ ಗುಗ್ಗಳಮೆರವಣಿಗೆ ಎದುರು ಬಂದರೆ ಅದಕ್ಕೆ ಕರ್ಪೂರ, ಎಣ್ಣೆ ಹಾಕುವುದು

ಎಣ್ಣೆಕಾಯಿ: ಉರಿಸಿದ ದೀಪಗಳಲ್ಲಿ ಎಣ್ಣೆ ಮುಗಿಯುತ್ತಿದ್ದಂತೆ ಮತ್ತೆ ಮತ್ತೆ ಎಣ್ಣೆ ಎರೆಯಲು ಬಳಸುವ ಲೋಹದ ಸಾಧನ. ನಳಿಕೆ ಹೊಂದಿರುವ ಇದರಲ್ಲಿ ಸುಮಾರು ಒಂದು ಲೀಟರಿನಷ್ಟು ಎಣ್ಣೆಯನ್ನು ಸಂಗ್ರಹಿಸಬಹುದು

ಎಣ್ಣೆಕುಡಿಕೆ: ಮಕ್ಕಳಿಗೆ ಹಚ್ಚಲು ಎಣ್ಣೆ ಕಾಯಿಸುವ ಮಣ್ಣಿನ ಕುಡಿಕೆ (ಮೈಸೂ.ಜಿ)

ಎಣ್ಣೆಕೊಡುವುದು: ನೋಡಿ– ಎಣ್ಣೆಬೂಳ್ಯ

ಎಣ್ಣೆಕೊಳ: ಎಣ್ಣೆಯನ್ನು ಸಂಗ್ರಹಿಸುವ ಬಾವಿ. ಸಾಮಾನ್ಯವಾಗಿ ಕೋಟೆ ಕೊತ್ತಳಗಳಲ್ಲಿ ಈ ರೀತಿಯ ರಚನೆ ಇರುತ್ತದೆ. (ಚಿತ್ರ.ಜಿ)

ಎಣ್ಣೆಗಾಣ: ೧. ಕಡಲೆಕಾಯಿ, ಎಳ್ಳು, ಹರಳು ಮೊದಲಾದ ಕಾಳುಗಳನ್ನು ಹಿಂಡಿ ಎಣ್ಣೆ ತೆಗೆಯುವ ಸಾಧನ ೨. ಹುಡುಗರು ಮಾತ್ರ ಆಡುವ ಆಟ. ಇದಕ್ಕೆ ಇಂತಿಷ್ಟೆ ಹುಡುಗರು ಎಂದು ಮಿತಿ ಇಲ್ಲ. ನೆಲದೊಳಗೆ ಒಂದು ದೊಡ್ಡ ಗೂಟವನ್ನು ಬಡಿದು ಆ ಗೂಟಕ್ಕೆ ಹಗ್ಗವನ್ನು ಕಟ್ಟಿರುತ್ತಾರೆ. ಚಪ್ಪಾಳೆಯನ್ನು ಹಾಕಿ ಸೋತ ವ್ಯಕ್ತಿ ಗಾಣವನ್ನು ಹಿಡಿದು ತಿರುಗುತ್ತಿರಬೇಕು. ಅವನನ್ನು ತುಂಡುಬಟ್ಟೆಯಿಂದ ಹೊಡೆಯುತ್ತಿರುತ್ತಾರೆ. ಯಾವ ಹುಡುಗನ ಬಟ್ಟೆತುಂಡು ಇವನಿಗೆ ಸಿಗುತ್ತದೆಯೋ ಅವನು ಸೋತ ಹಾಗೆ (ಬಳ್ಳಾ.ಜಿ)

ಎಣ್ಣೆಗುಂಡಗಿ: ೧. ಎಣ್ಣೆ ಅಳೆಯುವಾಗ, ಎಣಿಕೆಗೆ ಹತ್ತದ ಎಣ್ಣೆಯನ್ನು ಹಾಕುವ ದೊಡ್ಡ ತಟ್ಟೆ ೨. ನಿರುಪಯುಕ್ತ (ಧಾರ.ಜಿ)

ಎಣ್ಣೆಗೆಂಪು: ನಸುಗೆಂಪು (ಮೈಸೂ.ಜಿ)

ಎಣ್ಣೆಗ್ವಾಡೆ: ದೀಪಗಳ ಎಣ್ಣೆ ಇಳಿದು ಜಿಡ್ಡಾಗಿರುವ ಗೋಡೆ

ಎಣ್ಣೆಚಂಚ: ಬಿಜ್ಜಣಿಗೆಯಿಂದ ಎಣ್ಣೆಯನ್ನು ತೆಗೆಯಲು ಬಳಸುವ ಸಾಧನ

ಎಣ್ಣೆಚಟಿಗೆ: ಎಣ್ಣೆ ತುಂಬಿಡಲು ಮಾತ್ರ ಬಳಸುವ ಗಡಿಗೆ (ಶಿವ.ಜಿ)

ಎಣ್ಣೆಚಟ್ಟಿ: ಎಣ್ಣೆ ಬಾಂಡ್ಲಿ (ಮಂಡ್ಯ.ಜಿ); ಬಾಣಲೆ (ಶಿವ.ಜಿ). **ಇರೂ:** *ಎಣ್ಣೆಬಂಡಿ*

ಎಣ್ಣೆಜೋಗಿ: ಕಿನ್ನರಿಜೋಗಿಗಳಲ್ಲಿ ಒಂದು ಪಂಗಡ

ಎಣ್ಣೆತಕ್ಕನ: ಎಣ್ಣೆ ಹಾಕಲು ಬಳಸುವ ಅತಿ ಸಣ್ಣ ಚಮಚ (ದಕ.ಜಿ)

ಎಣ್ಣೆದೊಟ್ಟು: ಪಾಡ್ದನದಲ್ಲಿ ಬರುವ ಸ್ಥಳನಾಮ (ದಕ.ಜಿ)

ಎಣ್ಣೆನೂಲು: ಬೆಳ್ಳಿಯ ಸರ (ಯಾದ.ಜಿ)

ಎಣ್ಣೆಪುಂಡಿ: ಕಾರಕರಸ್ ಕ್ಯಾಪ್ಸುಲ್ಯಾರಿಸ್ ಟ್ರೈಲಾಕ್ಯುಲ್ಯಾರಿಸ್: ಪುಂಡಿಗಿಡದ ಒಂದು ಪ್ರಭೇದ; ತಂಡಶ್ಶೈರ ಗಿಡ

ಎಣ್ಣೆಬತ್ತಿಗೆ ನ್ಯಾರ: ಹೊಟ್ಟೆಬಟ್ಟೆಗೆ ತೊಂದರೆ ಇಲ್ಲದಂತೆ ಇರುವ ಸ್ಥಿತಿ.

ಎಣ್ಣೆಬದನೆ: ಬದನೆಯ ಒಂದು ತಳಿ; ಗೊಂಚಲಲ್ಲಿ ಬಿಡುವ ಸಣ್ಣ ಗಾತ್ರದ ನೇರಳೆ ಬಣ್ಣದ ಬದನೆ ತಳಿ (ದಕ.ಜಿ)

ಎಣ್ಣೆಬದನೆಕಾಯಿ ಪಲ್ಯ: ತೊಟ್ಟಿನ ಸಹಿತ ಬದನೆಕಾಯಿಯನ್ನು ನಾಲ್ಕು ಭಾಗವಾಗಿ ಸೀಳಿ ಮಸಾಲೆ ಖಾರ ಉಪ್ಪು ಹುಣಸೇಹಣ್ಣಿನ ರಸ ಗಟ್ಟಿಯಾಗಿ ಕಲೆಸಿ, ಬದನೆಕಾಯಿಯೊಳಗೆ ತುಂಬಿ ಎಣ್ಣೆಯಲ್ಲಿ ಬಾಡಿಸಿದ ಪಲ್ಯ (ಗುಲ್ಬ.ಜಿ). **ಇರೂ:** *ತುಂಬ್ಗಾಯಿ*

ಎಣ್ಣೆಬಾನ: ಹುಚ್ಚೆಳ್ಳೆಣ್ಣೆ ಹಾಕಿದ ಅನ್ನ

ಎಣ್ಣೆಬೀರುವ ಶಾಸ್ತ್ರ: ವಿಶ್ವಕರ್ಮರ ಮದುವೆಯ ಸಂದರ್ಭದ ಶಾಸ್ತ್ರ. ಮದುವೆಯ ದಿನದಂದು ಬೆಳಗಿನ ಜಾವ ಸುಮಾರು ನಾಲ್ಕು ಗಂಟೆಗೆ ಮನೆಯವರೆಲ್ಲರೂ ಊರಿನಲ್ಲಿರುವ ದೇವಸ್ಥಾನಗಳಿಗೆ ಹೋಗಿ ಎಣ್ಣೆಯನ್ನು ಹಾಕಿ ದೀಪ ಹಚ್ಚಿ ಬರುತ್ತಾರೆ (ಬಳ್ಳಾ.ಜಿ)

ಎಣ್ಣೆಬೀರುವುದು: ದೇವಸ್ಥಾನಕ್ಕೂ ನಾಲ್ಕುಮನೆ ಹೊಸ್ತಿಲಿಗೂ ಎಣ್ಣೆ ಹಾಕುವ ಒಂದು ಆಚರಣೆ

ಎಣ್ಣೆಬುಟ್ಟಿ: ಗೇರು ಎಣ್ಣೆ ಬಳಿದ ಬಿದಿರುಬುಟ್ಟಿ

ಎಣ್ಣೆಬುಡಿಗೆ: ಎರೇಷಿಯ ಅಕ್ಯುಮಿನೇಟ ಮೈಕ್ರೋಫಿಲ; ಒಂದು ಸಸ್ಯ

ಎಣ್ಣೆಬುಡ್ಡಿ: ಪಂಜಿಗೆ ಎಣ್ಣೆಹಾಕಲು ಬಳಸುವ ಉದ್ದಮೂತಿ ಇರುವ ವಿಶೇಷ ಸಾಧನ

ಎಣ್ಣೆಬೂಳ್ಯ: ಎಣ್ಣೆವೀಳ್ಯ; ಭೂತದ ವೇಷ ಹಾಕುವ ಕಲಾವಿದನಿಗೆ ಎಳ್ಳೆಣ್ಣೆ ಅಥವಾ ತೆಂಗಿನ ಎಣ್ಣೆ, ಐದು ವೀಳ್ಯದ ಎಲೆ, ಒಂದು ಅಡಿಕೆ ಕೊಟ್ಟು ವೇಷ ಕಟ್ಟಲು ಅನುಮತಿ ಕೊಡುವುದು. ಈ ಸಂದರ್ಭದಲ್ಲಿ ಪಾಡ್ದನ ಹಾಡುತ್ತಾರೆ. ಇವುಗಳನ್ನು ಸ್ವೀಕರಿಸಿದ ಕಲಾವಿದರು ಎಣ್ಣೆಯನ್ನು ತಲೆಗೆ ಮೈಗೆ ಹಚ್ಚಿಕೊಂಡು ಸ್ನಾನಕ್ಕೆ ಹೋಗುತ್ತಾರೆ (ದಕ.ಜಿ)

ಎಣ್ಣೆಮಜಲು: ಮದುವೆ ಸಂದರ್ಭದಲ್ಲಿ ವಧುವರರಿಗೆ ಮೈತುಂಬಾ ಎಣ್ಣೆ ಹಚ್ಚುವ ಕ್ರಿಯೆ (ಧಾರ.ಜಿ)

ಎಣ್ಣೆಮಸುಕು: ಎಣ್ಣೆಯ ವಾಸನೆಯುಳ್ಳದ್ದು (ಧಾರ.ಜಿ)

ಎಣ್ಣೆಮಾನೇವು: ಗ್ರಾಮದೈವಗಳ ಒಡೆತನಕ್ಕೆ ಸೇರಿದ ಗುಡಿಗಳಲ್ಲಿ ಉರಿಸುವ ದೀಪದ ಎಣ್ಣೆಯ ಖರ್ಚಿಗಾಗಿ ಮೀಸಲಿಟ್ಟ ಜಮೀನು

ಎಣ್ಣೆಮುಟ್ಟುವುದು: ಕೊರಮ ಸಮುದಾಯದವರು ವ್ಯಕ್ತಿ ಸತ್ತ ಎರಡನೆಯ ದಿನದಂದು ಮಾಡುವ ಒಂದು ಆಚರಣೆ (ಬಳ್ಳಾ.ಜಿ)



ಎಣ್ಣೆಯ ಬಿಜ್ಜಣಿಗೆ: ಎಣ್ಣೆ ಸಂಗ್ರಹಿಸುವ ವಿಶಿಷ್ಟ ಸಾಧನ

ಎಣ್ಣೆವಳ/ಎಣ್ಣೆವಾಳ: ಎಣ್ಣೆಬಾಳೆ; ಬಾಣಲೆ; ಚೀಂಚಟ್ಟಿ (ದಕ.ಜಿ)

ಎಣ್ಣೆಶಾಸ್ತ್ರ: ೧. ತೈಲಾಭ್ಯಂಜನಕ್ಕೆ ಮೊದಲು ಗರಿಕೆ ಹುಲ್ಲು ತಂದು ಎಣ್ಣೆಯಲ್ಲಿ ಅದ್ದಿ ಭೂಮಿಗೆ ಮತ್ತು ನೆತ್ತಿಗೆ ಹಚ್ಚುವ ಕ್ರಿಯೆ (ದಕ.ಜಿ) ೨. ಮದುವೆಯಲ್ಲಿ ವಧೂವರರಿಗೆ ಅರಿಸಿನ ಎಣ್ಣೆ ಹಚ್ಚುವ ಶಾಸ್ತ್ರ (ಮೈಸೂ.ಜಿ)

ಎಣ್ಣೆಸಲಾಕಿ: ಲಾಳಿಕೆಯಿಂದ ಚಕ್ರಕ್ಕೆ ಎಣ್ಣೆ ಸವರಲು ಬಳಸುವ ತಂತಿ (ಮಂಡ್ಯ.ಜಿ)

ಎಣ್ಣೆಸೀರೆ ಮಾಡು (ಕ್ರಿ): ಶತ್ರುವಿನ ಕಡೆಯ ಸ್ತ್ರೀಯರ ಸೀರೆಗೆ ಸೀಮೆಎಣ್ಣೆ ಸುರಿದು ಬೆಂಕಿ ಹಚ್ಚಿ ಸುಡುವ ಕ್ರಿಯೆ (ಬೆಂಗ್ರಾ.ಜಿ)

ಎಣ್ಣೆಹಚ್ಚುವುದು: ನೋಡಿ– ಎಣ್ಣೆಮಜಲು (ಧಾರ.ಜಿ)

ಎಣ್ಣೆಹನಿಸುವುದು: ದೀಪಾವಳಿ ಹಬ್ಬದ ಬೂರೆ ನೀರು ತುಂಬಿದ ನಂತರ, ಮೊದಲು ಮನೆಯ ಹೆಬ್ಬಾಗಿಲಿಗೆ, ಹೊಸ್ತಿಲಪಟ್ಟಿಗೆ ನಂತರ ದನಕರುಗಳಿಗೆ ಎಣ್ಣೆ ಹಚ್ಚಿ ಆಮೇಲೆ ಮನೆಯ ಮಂದಿಯನ್ನೆಲ್ಲಾ ಕುಳ್ಳಿರಿಸಿ ಎಣ್ಣೆ ಹಚ್ಚುವುದು. ಅರಿಶಿನ ಹಚ್ಚಿ ಎಣ್ಣೆ ಹಚ್ಚಿಸಿಕೊಂಡವರು ಹುತ್ತದ ಮಣ್ಣನ್ನು ಮೈಗೆಲ್ಲಾ ಮೆತ್ತಿಕೊಂಡು ಅಭ್ಯಂಗ ಸ್ನಾನ ಮಾಡುವುದು (ಉಕ.ಜಿ)

ಎಣ್ಣೆಹಾಕುವ ಪರಟೆ: ದಾಸರ ಲಾಂಛನಗಳಲ್ಲಿ ಒಂದು (ಬೆಂಗ.ಜಿ)

ಎಣ್ಣೆಹಿಡಿಯುವುದು: ಭೂತಾರಾಧನೆಯ ನೇಮ ಅಥವಾ ಕೋಲದ ಪ್ರಾರಂಭದಲ್ಲಿ ದೈವನರ್ತಕನು ಸ್ನಾನಕ್ಕಾಗಿ ಎಣ್ಣೆ ಪಡೆಯುವ ವಿಧಿ (ದಕ.ಜಿ); ಎಣ್ಣೆಬೂಳ್ಯ

ಎಣ್ಣೆಹೊಳೆ: ಚಾಮರಾಜನಗರ ಜಿಲ್ಲೆಯ ಕೆಲವು ಭಾಗಗಳಲ್ಲಿ ಹರಿಯುವ ನದಿ

ಎಣ್ಣೋಳಿಗೆ: ಎಣ್ಣೆ ಹೋಳಿಗೆ; ಎಣ್ಣೆ ಹಚ್ಚಿ ಬೇಯಿಸಿದ ಹೋಳಿಗೆ (ಗುಲ್ಬ.ಜಿ)

ಎಣ್ಮಕೋಂಟು: ದೈವದ ಕೊಡೆಯಡಿಯಲ್ಲಿ ನೈವೇದ್ಯ ಬಡಿಸಲಿಕ್ಕೆ ಇರುವ ತೆಂಗಿನ ಗರಿಯಿಂದ ತಯಾರಿಸಿದ ಅಷ್ಟಕೋನಾಕೃತಿಯ ಪಾತ್ರೆಯಂತಹ ರಚನೆ (ದಕ.ಜಿ)

ಎಣ್ಮಜ್ಜನ (ಕ್ರಿ): ಎಣ್ಣೆ ಮಜ್ಜನ; ಎಣ್ಣೆ ಸ್ನಾನ; ಮಲೆಮಹದೇಶ್ವರನಿಗೆ ಪ್ರತಿ ಅಮಾವಾಸ್ಯೆ ದಿನ ಎಳ್ಳಿನ ಎಣ್ಣೆ ಲೇಪಿಸಿ ಅಭಿಷೇಕ ಮಾಡುವ ಕ್ರಿಯೆ (ಚಾಮ.ಜಿ)

ಎತ್‌ಕಟ್ಟು: ಎತ್ತಿಕಟ್ಟು; ಚಾಡಿಹೇಳು; ವೈರತ್ವ ಉಂಟುಮಾಡು

ಎತ್ಕೊ/ಎತ್ತಿಕೊ: ೧. ಮಗುವನ್ನು ಎತ್ತಿಕೊಳ್ಳು. **ಪ್ರ:** ಮಗು ಅಳ್ತಾ ಇದೆ ಎತ್ಕೊಂಡು ಸಮಾಧಾನ ಮಾಡು ೨. ಆರಂಭಿಸು. ಸಂಗೀತದಲ್ಲಿ, ಯಾವ ಹಂತದಿಂದ ಆರಂಭಿಸಲಿ ಎಂದು ಅರ್ಥ. **ಪ್ರ:** ಎಲ್ಲಿಂದ ಎತ್ಕೊಳ್ಳೀ

ಎತ್ಕೊಳ್ತಲೆ: ಶುರುವಿನಲ್ಲಿಯೇ; ಪ್ರಾರಂಭದಲ್ಲಿಯೇ. **ಪ್ರ:** ಎತ್ಕೊಳ್ತಲೇ ಹಂಗೆ ಹೇಳಿ ಬಿಟ್ರೆ ಹೆಂಗೆ (ಮೈಸೂ.ಜಿ/ ಚಾಮ.ಜಿ/ಚಿತ್ರ.ಜಿ)

ಎತ್ಗಡಬು: ಒಂದು ನಕ್ಷತ್ರಮಂಜದ ಹೆಸರು (ಬಳ್ಳಾ.ಜಿ)

ಎತ್ಕೈ: ಮನುಷ್ಯ ಮೇಲಕ್ಕೆ ಕೈ ಎತ್ತಿ ನಿಂತರೆ ಎಷ್ಟು ಎತ್ತರವಾಗುತ್ತದೆಯೋ ಅಷ್ಟು ಎತ್ತರವನ್ನು ಸೂಚಿಸುವ ಶಬ್ದ (ಗುಲ್ಬ.ಜಿ)

ಎತ್ತಂಗಡಿ: ಸ್ಥಳ ಖಾಲಿ ಮಾಡುವುದು; ವರ್ಗಾವಣೆ

ಎತ್ತಪ್ಪ: ಕಾಡುಗೊಲ್ಲರ ಸಾಂಸ್ಕೃತಿಕ ನಾಯಕ. ಅಂಬೆರಾಯ ತುಂಬೆರಾಯರ ಬುತ್ತಿಯಲ್ಲಿ ಶಿವನ ಬೆವರಿನಿಂದ ಹುಟ್ಟಿದವನು

ಎತ್ತಮುತ್ತ: ಹೆತ್ತ ಮುತ್ತ; ಪೂರ್ವಜರು (ದಕ)

ಎತ್ತವು: ಎತ್ತು ಮತ್ತು ಆಕಳು

ಎತ್ತಾಡಿಗೆ: ಹಬ್ಬ ಹರಿದಿನಗಳಲ್ಲಿ ಎತ್ತುಗಳಿಗೆ ವಿಶ್ರಾಂತಿ ನೀಡುವ ದಿನ (ದಕ.ಜಿ)

ಎತ್ತಾಡು: ದೋಷಾರೋಪ ಮಾಡು; ಹಂಗಿಸು. **ಪ್ರ:** ಕುಲ ಜಾತಿ ಎತ್ತಾಡಿ ಇವರು ಮಾತನ್ನು ಆಡಬಹುದೆ?

ಎತ್ತಿಗ್ ಕೂಗ್: ಪ್ರಾಯಕ್ಕೆ ಬಂದ ಹಸು, ಎತ್ತಿನ ಸಾಮೀಪ್ಯಕ್ಕಾಗಿ ಅರಚುವುದು (ದಕ.ಜಿ); ಬೆದೆಗೆ ಬರುವುದು

ಎತ್ತಿಗೆ ಝೂಲಾಹಾಕ್ದಾಂಗ: ಮೂಕಪ್ರಾಣಿಯನ್ನು ಸಿಂಗಾರ ಮಾಡಿದಂತೆ ಒಣ ಆಡಂಬರದಲ್ಲಿ ಇರುವವರು (ಧಾರ.ಜಿ)

ಎತ್ತಿದಕೈಯಾಗಿರು: ಎಲ್ಲಕ್ಕೂ ಮುಂದಾಗಿರು; ಮೊದಲಿಗನಾಗಿರು (ಯಾದ.ಜಿ)

ಎತ್ತಿನ ಗೊಂಡೆ: ಎತ್ತುಗಳ ಶೃಂಗಾರಕ್ಕಾಗಿ ಕಟ್ಟುವ ಅಲಂಕಾರಿಕ ವಸ್ತು (ಬಿಜಾ.ಜಿ)

ಎತ್ತಿನ ಜೂಲ: ನೋಡಿ– ಎತ್ತಿನ ಗೊಂಡೆ

ಎತ್ತಿನ ನಾಲಿಗಿ: ಅಗಲವಾದ ಎಲೆಗಳುಳ್ಳ ಕಳೆ ಗಿಡ. ಇದರ ಎಲೆಗಳು ಮುಳ್ಳು ಮುಳ್ಳಾಗಿದ್ದು, ದನಗಳು ತಿನ್ನುತ್ತವೆ

ಎತ್ತಿನ ಸುಳಿ: ಎತ್ತು, ದನದ ಮೈ ಮೇಲಿನ ಸುಳಿಗಳು. ಎತ್ತುಗಳನ್ನು ಖರೀದಿಸುವಾಗ ಸುಳಿ ಲಕ್ಷಣವನ್ನು ನೋಡಿ ಖರೀದಿಸುತ್ತಾರೆ

ಎತ್ತಿನ ಹಬ್ಬ: ೧. ಕೃಷಿಕರು ಕಾರ್ತೀಕ ಮಾಸದಲ್ಲಿ ಆಚರಿಸುವ ದನಗಳ ಹಬ್ಬ ೨. **ನೋಡಿ–** ಈಡಿನ ಹಬ್ಬ

ಎತ್ತಿನಇರುಳು: ಹಿಳಲು. ಹೋರಿಯ ಭುಜ ಮತ್ತು ಕುತ್ತಿಗೆಯ ಮಧ್ಯದಲ್ಲಿರುವ ಉಬ್ಬಿದ ಭಾಗ

ಎತ್ತಿನಕಟ್ಟು: ಪ್ರಾಣಿಗಳನ್ನು ಬೆದರಿಸಲು ಕಟ್ಟಿದ ಬೆದರುಗೊಂಬೆ (ಶಿವ.ಜಿ)

ಎತ್ತಿನಕುಕ್ಕೆ: ಎತ್ತುಗಳು ಮೇಯಲು ಸಾಧ್ಯವಾಗದಂತೆ ಅವುಗಳ ಬಾಯಿಯನ್ನು ಮುಚ್ಚುವ, ಬುಟ್ಟಿಯಂತಹ ರಚನೆ; ಹಗ್ಗದಿಂದ ಹೆಣೆದ ಕುಕ್ಕೆ. **ಇರೂ:** *ಮುಸುಡಿಕುಕ್ಕೆ; ಬಾಯಿಕುಕ್ಕೆ (ಮಂಡ್ಯ.ಜಿ)*

ಎತ್ತಿನಕೊಂಬು ಗುಮ್ಮಟ: ಎತ್ತುಗಳ ಅಲಂಕಾರದ ವಸ್ತು. ದೀಪಾವಳಿ ಹಬ್ಬದಲ್ಲಿ ಇದನ್ನು ಕೊಂಬುಗಳಿಗೆ ಕಟ್ಟುತ್ತಾರೆ (ಚಿತ್ರ.ಜಿ)

ಎತ್ತಿನಕೋಡಿನ ಹುಲ್ಲು: ಒಂದು ಮೇವಿನ ಸಸ್ಯ

ಎತ್ತಿನಮನೆ: ಎತ್ತುಗಳನ್ನು ಕೂಡಿ ಹಾಕುವ ಸ್ಥಳ. **ಇರೂ:** ಕೊಟ್ಟಿಗೆ

ಎತ್ತಿನಹೆಳವರು: ಉತ್ತರ ಕರ್ನಾಟಕದ ಹೆಳವರ ಒಂದು ಪಂಗಡ; ಎತ್ತಿನ ಮೇಲೆ ಕುಳಿತು ಬರುವ ಹೆಳವರು (ಬೆಂಗ.ಜಿ)

ಎತ್ತಿನಹೊಡೆ: ಎತ್ತಿನ ದೊಡ್ಡಿ

ಎತ್ತಿಹಾಕು: ೧. ಮೋಸದಿಂದ ಲಪಟಾಯಿಸು; ಬಾಚಿಕೊಳ್ಳು; ದೋಚು. **ಪ್ರ:** ಕಂಡೋರ ಗಂಟ ಎತ್ತಿಹಾಕೋದ್ರಲ್ಲಿ ನಿಸ್ಸೀಮ ೨. ತಿರಸ್ಕರಿಸು. **ಪ್ರ:** ಅವನು ನನ್ನ ಮಾತನ್ನು ಎತ್ತಿಹಾಕ್ಬೋನಲ್ಲ ೩. ಪಡೆದ ಸಾಲ ಮರುಪಾವತಿ ಮಾಡದಿರು

ಎತ್ತು (ನಾ) : ೧. ಬೀಜ ಒಡೆಯಲಾದ ಹೋರಿ (ಮೈಸೂ.ಜಿ) **ಪ್ರ:** ಎತ್ತಿಲ್ದೋನಿಗೆ ಎದೆಯಿಲ್ಲ (ಕ್ರಿ) ೨. ಮಾತನಾಡು; ಪ್ರಸ್ತಾಪಿಸು. **ಪ್ರ:** ಕಂದಾಯ್ದ ಸುದ್ದೀಯ ಎತ್ಯಾನೆ ದೊರಿಮಗ ೩. ವಸೂಲಿ ಮಾಡು; ಕೂಡಿಸು. **ಪ್ರ:** ನಮ್ಮತ್ರ ಬಂದು ನಮ್ಮಲ್ಲಿ ಕಾಣಿಕೆ ಎತ್ತುತ್ತಾರೆ

ಎತ್ತುಕಟ್ಟುವುದು: ಮೊದಲ ಬಾರಿ ಹೊಲ ಉಳುವ ಎತ್ತುಗಳ ಕತ್ತಿಗೆ ನೊಗ ಹೂಡುವ ಶಾಸ್ತ್ರ (ಕೋಲಾ.ಜಿ)

ಎತ್ತುಗಡೆ: ಪಾತ್ರಧಾರಿಯು ಭಾಗವತನಿಗೆ ಮುಂದಿನ ಪದ್ಯಕ್ಕೆ ಸೂಚನೆ ನೀಡುವುದು

ಎತ್ತುಗಲ್ಲು: ಎತ್ತು, ಕೋಣ ಕಟ್ಟಿ ರಾಗಿ ಬೀಸುವ ದೊಡ್ಡ ಗಾತ್ರದ ಕಲ್ಲು



ಎತ್ತುಗಾಡಿ: ಒಂದೇ ಪ್ರಾಣಿಯಿಂದ ಜಗ್ಗುವ ಒಂಟಿ ವಾಹನ (ಬೆಳ.ಜಿ)

ಎತ್ತುಗ್ಳು ಹಬ್ಬ: ಎತ್ತುಗಳ ಹಬ್ಬ; ಸಂಕ್ರಾಂತಿ ಹಬ್ಬ (ಕೋಲಾ.ಜಿ)

ಎತ್ತುಣ್ಣಿಮೆ/ಎತ್ತಿನ ಹುಣ್ಣಿಮೆ: ಎತ್ತುಗಳ ಹಬ್ಬ. ಈ ಹಬ್ಬದಲ್ಲಿ ಎತ್ತುಗಳಿಗೆ ಬಿಡುವು ನೀಡಿ ಚೆನ್ನಾಗಿ ಶೃಂಗರಿಸಿ ಹಬ್ಬ ಆಚರಿಸುತ್ತಾರೆ

ಎತ್ತುಬೀಳು: ಒಂದು ಜಾತಿಯ ಬಳ್ಳಿ. ಮಲೆನಾಡಿನ ಕಾಡುಗಳಲ್ಲಿ ಬೆಳೆಯುವುದು. ಬೇಟೆಯಾಡಿದ ಪ್ರಾಣಿಯನ್ನು ಕಟ್ಟಿ ಸಾಗಿಸಲು ಇದನ್ನು ಬಳಸುವರು. **ಪ್ರ:** ಪೊದೆಗಳ ನಡುವೆ ನುಸಿದು ಓಡುತ್ತಾ ಬರುತ್ತಿರಲು ಎತ್ತುಬೀಳಿಗೆ ಸಿಕ್ಕಿ ಮುಗ್ಗರಿಸಿ ಬಿದ್ದನು

ಎತ್ತುವಳಿ: ಚಂದಾ; ಯಾವುದಾದರೂ ಉತ್ಸವ, ಸಮಾರಂಭಗಳಿಗಾಗಿ ಎಲ್ಲರಿಂದ ಹಣ ಸಂಗ್ರಹಿಸುವುದು. **ಪ್ರ:** ಮಾರಿಂಯೂಟಕ್ಕೆ ಅಕ್ಕಿ, ಕಾಯಿ, ಹಣ ಎತ್ತುವಳಿಯಾಗುತ್ತಿತ್ತು

ಎತ್ತುಹೂಡು: ಎತ್ತನ್ನು ನೊಗಕ್ಕೆ ಕಟ್ಟು (ಶಿವ.ಜಿ)

ಎತ್ತೊಲೆ: ಬೇಕಾದ ಕಡೆಗೆ ಎತ್ತಿ ಇಡಬಹುದಾದ ಮಣ್ಣು ಅಥವಾ ಕಬ್ಬಿಣದಿಂದ ಮಾಡಿದ ಒಲೆ (ಮಂಡ್ಯ.ಜಿ). **ಪ್ರ:** ಎತ್ತೊಲೆ ತಕ್ಕಂದೋಗಿ ಹಿತ್ಲಲ್ಲಿ ಮಡ್ಗು

ಎತ್ಯಾಗ: ಹೆತ್ತೇಗ; ಮರದ ದಿಮ್ಮಿ ಅಥವಾ ತೊಲೆಗೆ ಈ ಮರವನ್ನು ಬಳಸುತ್ತಾರೆ

ಎದಗಬ್ಬು: ಸೊಕ್ಕು; ಹಠಮಾರಿತನ (ಗುಲ್ಬ.ಜಿ)

ಎದರನಾಯಿ: ನೇಯ್ಗೆಯಲ್ಲಿ ಪಿಂಜರಾದ ಚಕ್ರವನ್ನು ಮುಂದಕ್ಕೆ ತಿರುಗದಂತೆ ತಡೆಯುವ ಕಬ್ಬಿಣದ ಪಟ್ಟಿ (ಬಳ್ಳಾ.ಜಿ).

ಎದರಬ್ಯಾಳಿ: ರಸವಿಲ್ಲದ ಬೇಳೆ

ಎದರಸುಳಿ: ಹೆಣ್ಣುಮಕ್ಕಳ ಬೈತಲೆಯ ಪಕ್ಕದಲ್ಲಿ ಕಂಡುಬರುವ ಕೂದಲಿನ ವಿನ್ಯಾಸ. ಎದುರುಸುಳಿ ಇದ್ದ ಹೆಣ್ಣು ಜೋರಿನವಳಾಗಿರುತ್ತಾಳೆ ಎಂಬ ನಂಬಿಕೆ ಇದೆ

ಎದರುಕಟ್ಟು: ಮಾಟ ಮಂತ್ರ ಮೊದಲಾದವುಗಳಲ್ಲಿ ರಕ್ಷಣೆಗಾಗಿ ಮಾಡಿಸುವ ಪೂಜೆ

ಎದರುವಾಟದ ಸೀರಿ: ಸೀರೆಯ ಅಂಚಿನ ಎರಡೂ ಕಡೆ ತೆನೆಯ ವಿನ್ಯಾಸವಿರುವ ಸೀರೆ

ಎದಹಾಸಿಗ: ದನದ ಹೃದಯದ ಭಾಗಗಳು (ಚಾಮ.ಜಿ)

ಎದಿಎದಿ ಬಡಕೋ: ೧. ಜೊರಾಗಿ ದುಃಖಿಸು; ಪ್ರಲಾಪಿಸು ೨. ಆತಂಕ, ತಲ್ಲಣ ವ್ಯಕ್ತಪಡಿಸು (ಧಾರ.ಜಿ)

ಎದಿಒಡಿ: ಗಾಬರಿಯಾಗು (ಧಾರ.ಜಿ)

ಎದಿಕೊಡು: ಎದುರಿಸು

ಎದಿಗಾರ: ಧೈರ್ಯವಂತ

ಎದಿಗುದಿ: ಸಂತಾಪ; ತಳಮಳ (ಶಿವ.ಜಿ)

ಎದಿಗ್ಳು: ಮೊಲೆಗಳು (ಕೋಲಾ.ಜಿ)

ಎದಿತುಪ್ಪ: ಜೇನುತುಪ್ಪ

ಎದಿಬಡಕೋ: ಧೈರ್ಯಗೆಡು (ಧಾರ.ಜಿ)

ಎದಿಬಲ ಕೂಡು: ಕೆಲಸದ ಭಾರ; ಜವಾಬ್ದಾರಿ

ಎದಿಬಿರಿ: (ಕ್ರಿ) ೧. ನೋಡಿ– ಎದಿಬದಿ ೨. (ನಾ) ಗಾಡಿ ದಂಡಿಗೆ ಮತ್ತು ಬಿರಿ ಕಟ್ಟಿಗೆಯನ್ನು ಬಿಗಿಯುವ ತಂತಿ

ಎದಿಬೋರು: ಪ್ರಾಣಿಗಳ ಎದೆಗೂಡಿನ ಭಾಗ; ಮೃದುವಾದ ಮೂಳೆ. ಮಾಂಸಾಹಾರಿಗಳು ಬಾಣಂತಿಯರಲ್ಲಿ ಹಾಲು ವೃದ್ಧಿಸಲು ಇದನ್ನು ಆಹಾರವಾಗಿ ಕೊಡುವರು (ಕೋಲಾ.ಜಿ)

ಎದಿಮ್ಯಾಲ ಕಲ್ಲು ಇಟಗೋ: ಗಟ್ಟಿ ಮನಸ್ಸು ಮಾಡು; ಧೈರ್ಯವಾಗಿರು (ಧಾರ.ಜಿ); ಎದೆಗೆ ಗುಂಡು ಹಾಕಿಕೊ (ಮೈಸೂ.ಜಿ)

ಎದಿಮ್ಯಾಲೆ ಕುಂಡ್ರು: ಒತ್ತಡ ಹೇರು; ಜೋರು ಮಾಡು

ಎದಿವಡಕ: ಹೆದರಿಕೆ ಸ್ವಭಾವದವ; ಪುಕ್ಕಲ (ಬಿಜಾ.ಜಿ)

ಎದುಕು: ಹುಡುಕು (ಕೋಲಾ.ಜಿ)

ಎದುಣ್ಣು: ೧. ಎದೆ ಹುಣ್ಣು; ಶ್ವಾಸಕೋಶಕ್ಕೆ ಸಂಬಂಧಿಸಿದ ಖಾಯಿಲೆ (ಬೆಂಗ.ಜಿ) ೨. ದನಗಳ ಶ್ವಾಸಕೋಶಕ್ಕೆ ಸಂಬಂಧಿಸಿದ ರೋಗ. ಒಂದು ರೀತಿ ಕೆಮ್ಮು ಹಾಗೂ ಸರಿಯಾಗಿ ಮೇವನ್ನು ತಿನ್ನದಿರುವುದು ಇದರ ಲಕ್ಷಣ.

ಎದುಪಾನ: ನೋಡಿ – ಎದುಪಾಲು

ಎದುಪಾಲು: ಎದೆಹಾಲು (ಮೈಸೂ.ಜಿ) ***ಇರೂ:*** ಎದಾಲು *(ಮಂಡ್ಯ.ಜಿ)*

ಎದುಭೇಟಿ: ಬೀಗರ ಸ್ವಾಗತ (ಧಾರ.ಜಿ)

ಎದುರಕ್ಕಿ: ಗಂಡಿನ ಕಡೆಯವರು ಛತ್ರಕ್ಕೆ ಬರುವಾಗ ಮತ್ತು ಕಾಶೀಯಾತ್ರೆಯ ನಂತರ ಒಳಗೆ ಬರುವಾಗ ಅಕ್ಕಿ ಮತ್ತು ಅರಳನ್ನು ಬೆರೆಸಿ ಬೀಗರು, ನೆಂಟರು ಪರಸ್ಪರ ಎರಚಿ ಎದುರುಗೊಳ್ಳುವ ಸಂಪ್ರದಾಯ

ಎದುರಾಡು: ಪ್ರತಿಭಟಿಸು; ವಿರೋಧಿಸಿ ಮಾತಾಡು (ಮಂಡ್ಯ.ಜಿ)

ಎದುರಿನವರಿಗೆ ನೋಡಲ್ಲ: ಗರ್ವದಿಂದಿರುವ; ಸೊಕ್ಕಿನಿಂದ ಮೆರೆವ (ಬಿಜಾ.ಜಿ)

ಎದುರುಕೊಲಿಕೆ: ಸೆರಗನ್ನು ಭುಜದ ಮೇಲೆ ಗಂಟು ಹಾಕಿ ಸೀರೆ ಉಡುವ ವಿಧಾನ (ದಕ.ಜಿ)

ಎದುರುಕ್ಕೆ: ಉಳುಮೆ ಮಾಡಿದ ಮರುದಿನವೆ ನಾಟಿ ಮಾಡುವುದು (ದಕ.ಜಿ)

ಎದುರುಗತ್ತಿಪವಾಡ: ಎರಡು ಮೊನಚಾದ ಕತ್ತಿಗಳನ್ನು ಕೊಂಟಿಗರ ವಂಶದ ದಾಸಯ್ಯನೊಬ್ಬ ತನ್ನ ಕುತ್ತಿಗೆ ಬಳಿ ಇಟ್ಟುಕೊಂಡು ನೃತ್ಯ ಮಾಡುತ್ತಾ ತೋರಿಸುವ ಪವಾಡ

ಎದುರುಗುಮ್ಮಟ್ಟ: ಮದುವೆಯಲ್ಲಿ ಬೀಗರನ್ನು ಬರಮಾಡಿಕೊಳ್ಳುವಿಕೆ

ಎದುರುಗೊಳ್ಳುವುದು: ಮದುವೆ ದಿಬ್ಬಣ ಬಂದಾಗ ಬೀಗರನ್ನು ವಿದ್ಯುಕ್ತವಾಗಿ ಬರಮಾಡಿಕೊಳ್ಳುವ ಕ್ರಿಯೆ

ಎದುರುಪಡಸಾಲಿ: ನಡುಮನೆಗೆ ಎದುರು ಇರುವ ಇನ್ನೊಂದು ಪಡಸಾಲೆ (ಧಾರ.ಜಿ)

ಎದುರುಪಾಮ: ತಲೆಯ ಮುಂಭಾಗದ ಸುಳಿ

ಎದುರುಬದುರು ನಿಲ್ಲು: ಮುಖಾಮುಖಿಯಾಗು; ಪರಸ್ಪರ ಅಭಿಮುಖವಾಗಿ ಕುಸ್ತಿಗೆ ನಿಲ್ಲು

ಎದುರುಮಣೇವು: ಯುಗಾದಿ ಹಬ್ಬದಲ್ಲಿ, ಒಂದೊಂದು ವಂಶದವರು, ಊರಿನ ಮೂರು ನಾಲ್ಕು ಕಡೆ ಸೇರಿ ದೇವಸ್ಥಾನದಲ್ಲಿ ಸೇವಿಸುವ ಪ್ರಸಾದ (ಚಿತ್ರ.ಜಿ)

ಎದುರುಹಚ್ಚು: ವೈರತ್ವ ಉಂಟುಮಾಡು (ಬಳ್ಳಾ.ಜಿ)

ಎದುರ್ಗಾಲಿಲಿ ಹುಟ್ಟು: ಕಾಲು ಮುಂದಾಗಿ ಗರ್ಭದಿಂದ ಜನಿಸು (ಧಾರ.ಜಿ)

ಎದುರ್ಗೂಸು: ಹೆಣ್ಣು ಕೊಟ್ಟ ಮನೆಯಿಂದ ಮತ್ತೊಂದು ಹೆಣ್ಣನ್ನು ತರುವಿಕೆ (ಧಾರ.ಜಿ)

ಎದುರ್ಹೊತ್ತು: ಸಾಯಂಕಾಲ (ಮಂಡ್ಯ.ಜಿ)

ಎದೆಅಂಗಡಿ: ಮಾರಾಟದ ವಸ್ತುಗಳನ್ನು ಎದೆಯ ಮೇಲೆ ಇಳಿಬಿಟ್ಟುಕೊಂಡು ಮಾರಾಟ ಮಾಡುವ ಪೆಟ್ಟಿಗೆ

ಎದೆಕಲ್ಮಾಡು: ಧೈರ್ಯವಾಗಿರು

ಎದೆಕೀಳಂಗೆ ಹೊಡಿ (ಕ್ರಿ): ದೊಡ್ಡ ದೊಡ್ಡ ಮಣ್ಣಿನ ಹೆಂಟೆ ಕೀಳುವ ಹಾಗೆ ಅಗೆ (ಶಿವ.ಜಿ)

ಎದೆಕೊಡು: ಮಗುವಿಗೆ ಹಾಲೂಡಿಸು (ಕೋಲಾ.ಜಿ)

ಎದೆಗಾಳೆ: ಎದೆ ಉಡುಗೆ (ಶಿವ.ಜಿ)

ಎದೆಗುಪ್ಪು: ಒಂದು ಒಡವೆ (ತುಮ.ಜಿ)

ಎದೆಗೆ ಆನಿಸು: ನೋವಾಗುವಂತೆ ಮಾಡು (ಬಳ್ಳಾ.ಜಿ)

ಎದೆಚಕ್ಕೆ: ಪ್ರಾಣಿಗಳ ಎದೆಯ ಮುಂಭಾಗ; ಮೃದುವಾದ ಮೂಳೆ ಹೊಂದಿದ ಮಾಂಸಖಂಡ

ಎದೆಚಿಗುರು: ಮಾಂಸ (ರಾಮ.ಜಿ)

ಎದೆತಾಳಿ: ಸೋಮನ ಕುಣಿತ ಮಾಡುವವರು ಧರಿಸುವ ವಿಶಿಷ್ಟ ಆಕೃತಿಯ ದೊಡ್ಡ ಪದಕ

ಎದೆತಿದಿಯಾಗು: ಏದುಸಿರು ಬಿಡು

ಎದೆಪಲ್: ಭೂತನರ್ತಕ ಎದೆಗೆ ಕಟ್ಟಿಕೊಳ್ಳುವ ಹಾಳೆಯ ಅಥವಾ ಚಿನ್ನದ ಅಲಂಕಾರ

ಎದೆಬಾವು: ೧. ಎದೆಯ ಮೇಲೆ ಧರಿಸುವ ಆಭರಣ ೨. ಹಾಲುಣಿಸುವ ತಾಯಂದಿರಲ್ಲಿ ಕಾಣಿಸುವ ಮೊಲೆಯ ಊತ ೩. ದನದ ಕೆಚ್ಚಲಿನ ತೊಟ್ಟುಗಳಲ್ಲಿ ಕಾಣುವ ಊತ (ಬೆಂಗ.ಜಿ) ೪. ದನಗಳ ಕೆಚ್ಚಲಿನ ರೋಗ. ಒಂದು ಕೆಚ್ಚಲಿನಲ್ಲಿ ಹಾಲು ಬರದೆ ಇನ್ನಿತರ ಮೂರು ಕೆಚ್ಚಲುಗಳಲ್ಲಿ ರಕ್ತ ಬರುವುದುಂಟು (ಮಂಡ್ಯ.ಜಿ)

ಎದೆಮರ: ಎತ್ತಿನಗಾಡಿಯ ಮೂಕಿ ಮರ; ಪಾರಿ. **ಇರೂ:** *ಗಾಡಿಮೂಕು (ಬೆಂಗ್ರಾ.ಜಿ)*

ಎದೆಮುರಿ: ದೈವನರ್ತಕನು ಎದೆ ಮೇಲೆ ಧರಿಸುವ ಒಂದು ಆಭರಣ (ದಕ.ಜಿ) ನೋಡಿ– ಎದೆಪಲ್

ಎದೆಯೊಡಕ: ಹೇಡಿ; ಎದೆ ಒಡೆದುಕೊಳ್ಳುವವನು; ಹೆದರಿದವನು (ಧಾರ.ಜಿ) ಎದೆಬಡೆಕ (ಮೈಸೂ.ಜಿ)

ಎದೆಸುಳಿ: ಎದೆಯ ಮೇಲೆ ಎರಡೂ ಕಡೆ ಒಂದೊಂದರಂತೆ ಎರಡು ಸುಳಿ ಇರುವುದು

ಎದೆಹಾರ: ಯಕ್ಷಗಾನ ವೇಷದವರು ಧರಿಸುವ ಕೊರಳಹಾರ



ಎದೆಹಾಳೆ: ಅಡಿಕೆ ಹಾಳೆಯಿಂದ ಮಾಡಿದ ಎದೆಯ ರಕ್ಷಣಾ ಕವಚ. ಅಡಿಕೆಯ ಮರ ಹತ್ತುವಾಗ, ಇಳಿಯುವಾಗ ಮರಕ್ಕೆ ಎದೆ

ಘರ್ಷಣೆ ಹೊಂದಿ ಗಾಯವಾಗದಂತೆ ನೋಡಿಕೊಳ್ಳುವ ಸಾಧನ (ಉಕ.ಜಿ)

ಎದ್ದ: ತೇರಿನ ಗಾಲಿ ಉರುಳಿಸುವ ಮೀಟುಗೋಲು (ಬಳ್ಳಾ.ಜಿ)

ಎದ್ದನಿಗೆ: ತಾಳೆ ಅಥವಾ ತೆಂಗಿನ ಗರಿಯನ್ನು ಹೆಣೆದು ತಯಾರಿಸಿದ ಬೀಸಣಿಗೆ (ದಕ.ಜಿ)

ಎದ್ದನಿಗ್ ಬಲಿ: ಬೀಸಣಿಗೆ ಹಿಡಿದುಕೊಂಡು ಬಲಿಮೂರ್ತಿ ನರ್ತಕರೊಂದಿಗೆ ಮಾಡುವ ಪ್ರದಕ್ಷಿಣೆ (ದಕ.ಜಿ)

ಎದ್ದಿಮ್ಮಿ: ಹಸಿರು ಬಣ್ಣದ ಜೀರುಂಡೆ (ಚಿಮ.ಜಿ)

ಎದ್ದೋಡಿ: ಈಗ ಉದ್ಯಾವರ ಎಂದು ಕರೆಯಲ್ಪಡುವ ಸ್ಥಳದ ಪ್ರಾಚೀನ ಹೆಸರು. ಇದು ಒಂದು ಐತಿಹಾಸಿಕ ಸ್ಥಳ (ದಕ.ಜಿ)

ಎದ್ಯಾಗ ಮಾಡ ಇರುವುದು: ಹೆಣ್ಣಿನ ಎದ್ಯಾಗ ಮಾಡ ಇದ್ರ ಗಂಡ ಸಾಯುತ್ತಾನೆ ಎಂಬ ನಂಬಿಕೆ ಇದೆ

ಎದ್ಯಾಗ ಮೀಸಿ ಅವಾ: ಹೆಣ್ಣಾದರೂ ವೀರಳಿದ್ದೇನೆ ಎಂಬುದಕ್ಕೆ ಬಳಸುವ ಮಾತು (ಬೀದ.ಜಿ)

ಎದ್ಯಾನ ಸುಳಿ: ಹೆಂಗಸರ ಎದೆಯ ಮೇಲಿರುವ ಒಂದು ಸುಳಿ. ಇದು ಇದ್ದ ಹೆಣ್ಣು ಘಾಟಿ ಎನ್ನುವ ನಂಬಿಕೆ (ಶಿವ.ಜಿ)

ಎದ್ರಣ್ಣೆಸೊಪ್ಪು: ಹೊನಗೊನ್ನೆಸೊಪ್ಪಿನ ಒಂದು ಪ್ರಭೇದ. ಇದರಿಂದ ಕಾಡಿಗೆ ಹಾಗೂ ಹಣೆಗಿಡುವ ಸಾದನ್ನು ತಯಾರಿಸುತ್ತಾರೆ (ಬೆಂಗ್ರಾ.ಜಿ)

ಎದ್ರುಗಾಣು: ಎದುರುಗೊಳ್ಳು; ಮದುವೆ ಸಂದರ್ಭದಲ್ಲಿ ಹೆಣ್ಣಿನ ಕಡೆಯವರು ಗಂಡು ಹಾಗು ಗಂಡಿನ ಕಡೆಯವರನ್ನು ಕರೆತರುವುದು (ತುಮ.ಜಿ)

ಎಪ್ಪತ್ತರ್‌ಕೆಮ್ಮು: ನಾಯಿಕೆಮ್ಮು (ದಕ.ಜಿ)

ಎಪ್ಪುಳ್ಸು: ಅಪ್ಪಳಿಸು

ಎಪ್ಪೆ: ಮೋಸ (ಮೈಸೂ.ಜಿ). **ಪ್ರ:** ದುಡ್ಗೆ ಅವ್ನು ಎಪ್ಪೆ ಹಾಕಿ ಎದ್ದ

ಎಪ್ರಿ: ಅರೆಹುಚ್ಚ. **ಇರೂ:** *ಎಬರೇಸಿ*

ಎಬಡ: ತಿಳಿಗೇಡಿ; ದಡ್ಡ; ಬುದ್ಧಿ ಕಡಿಮೆ ಇರುವವ (ಉಕ)

ಎಬರೇಸಿ: ಅವಿವೇಕಿ (ಧಾರ.ಜಿ)

ಎಬುಕಿ: ಬುದ್ಧಿಮಾಂದ್ಯೆ; ಸರಿಯಾಗಿ ಮಾತನಾಡಲಾಗದೆ ತಡವರಿಸುವವಳು (ಧಾರ.ಜಿ)

ಎಬೇ: ಅಬ್ಬೆ; ವಯಸ್ಸಾದ ಮಹಿಳೆಯರನ್ನು ಕರೆಯುವ ಗೌರವ ಸೂಚಕ ಶಬ್ದ

ಎಬ್ಬ: ೧. ಹೆಬ್ಬೆಟ್ಟು ೨. ಗೋಲಿಯಾಟದಲ್ಲಿ ಹೆಬ್ಬೆರಳಿನಿಂದ ಗೋಲಿ ತಳ್ಳುವಾಗ ಹೇಳುವ ಪದ (ಬೆಂಗ್ರಾ.ಜಿ) ೩. ದಡ್ಡ; ಅರೆಪೆದ್ದ (ತುಮ.ಜಿ)

ಎಬ್ಬತನ: ಹಟಮಾರಿತನ (ಧಾರ.ಜಿ)

ಎಬ್ಬಾ: ಅಣ್ಣೆಕಲ್ಲು ಆಟದ ಒಂದು ಹಂತ; ಹೆಬ್ಬೆರಳು ಮೇಲಿನ ಸಣ್ಣಕಲ್ಲನ್ನು ನಡುಬೆರಳಿಗೆ ತರುವುದು

ಎಬ್ಬಿದಿರು: ಹೆಬ್ಬಿದಿರು; ದೊಡ್ಡ ಬಿದಿರು (ಚಾಮ.ಜಿ)

ಎಬ್ಬಿಬ್ಬಗಾರ: ಬಡಾಯಿ ಕೊಚ್ಚುವವನು

ಎಬ್ಬಿಸು (ಕ್ರಿ): ೧. ನಿದ್ದೆಯಿಂದ ಎಚ್ಚರಗೊಳಿಸು. **ಪ್ರ:** ರುದ್ದಾರಗೊಮಾರನ ಗಜವತಿ ಎಬ್ಬೀಸಿ ಇರುವಾಳು ೨. ಮೇಲಕ್ಕೆ ಏಳುವಂತೆ ಮಾಡು. **ಪ್ರ:** ಮಣ್ಣಿನಲ್ಲಿ ಹೂತಿದ್ದ ಕಲ್ಲನ್ನು ಹಾರೆಯಿಂದ ಎಬ್ಬಿಸಿ ನಿಲ್ಲಿಸು

ಎಬ್ಬು: ೧. ಮೇಲಕ್ಕೆ ತೆಗೆ. **ಪ್ರ:** ಮರದ ಚಕ್ಕೆ ಎಬ್ಬು ೨. ಅಟ್ಟು; ಹೊರಗೆ ಹೋಗುವಂತೆ ಮಾಡು. **ಪ್ರ:** ಗಂಟಿ ಎಬ್ಬು (ದಕ.ಜಿ), ಅವನ್ನ ಎಬ್ಬು ಅಲ್ಲಿಂದ ೩. ಇಡಿಯಾಗಿ ಎತ್ತುವುದು ಉದಾ: ತೆಂಗಿನ ಚಿಪ್ಪಿನಿಂದ ತಿನ್ನಬಹುದಾದ ಭಾಗವನ್ನು ತೆಗೆಯುವುದು, ನೆಲದಾಳದಿಂದ ಕಲ್ಲು ಎತ್ತುವುದು (ಚಿತ್ರ.ಜಿ)

ಎಬ್ಬುಅತ್ತು: ಹೇರು (ಗುಲ್ಬ.ಜಿ)

ಎಬ್ಬುಗಾಯಿ: ಬಲಿತ ಎಳನೀರು. ಇದರಲ್ಲಿ ಒಳಗಿನ ಕಾಯಿ ಎಬ್ಬುವಷ್ಟು ದಪ್ಪನಾಗಿರುತ್ತದೆ. **ಪ್ರ:** ಎಳಗಾಯಿ ಕೊಡು ಅಂದ್ರೆ ಎಬ್ಬುಗಾಯಿ ಕೊಟ್ಟಿದಾನೆ

ಎಬ್ಬುಗಾರ: ಒಂದು ಜಾತಿಯ ಪಕ್ಷಿ (ಬಳ್ಳಾ.ಜಿ)

ಎಬ್ಬುರಿಸು/ಎಬ್ರಿಸು: ನೋಡಿ– ಎಬ್ಬಿಸು

ಎಮಕ: ೧. ಬಡಿವಾರ ೨. ಹೆಣ್ಣುಮಕ್ಕಳು (ಶಿವ.ಜಿ). **ಇರೂ:** *ಎಮ್ಕ*

ಎಮಕೆ/ಎಮ್ಕೆ: ಮೂಳೆ; ಎಲುಬು

ಎಮಗುಂಡ: ಹಲವು ಸುತ್ತಿನ ಪ್ರಾಕಾರಗಳುಳ್ಳ ಭದ್ರವಾದ ಒಳಕೋಣೆ; ಅಂತಃಪುರ (ದಕ.ಜಿ)

ಎಮುಗಿ: ಜೋಳ, ಗೋಧಿಯ ಹಾಲುಗಾಳಿನ ತೆನೆಸುಟ್ಟ ಕಾಳು (ಧಾರ.ಜಿ)

ಎಮ್ಮಿಕಣ್ಣು: ೧. ಅಗಲವಾದ ಕಣ್ಣು ೨. ಹೊಲಸು ತುಂಬಿದ ಕಣ್ಣು (ಬಿಜಾ.ಜಿ)

ಎಮ್ಮಿಜಬ್ಬ: ಎಮ್ಮೆಯ ಬೆನ್ನು

ಎಮ್ಮಿತೊಗಲ: ೧. ಎಮ್ಮೆಯ ಚರ್ಮ ೨. ಒರಟಾದ; ಸೂಕ್ಷ್ಮವಲ್ಲದ (ಬಿಜಾ.ಜಿ)

ಎಮ್ಮಿಹುಳ: ಒಂದು ಬಗೆಯ ಕೀಟ (ಬಿಜಾ.ಜಿ)

ಎಮ್ಮೆ ಒದೆದ ನೆರೆಮನೆ: ತಮ್ಮ ಮನೆ ಎಮ್ಮೆ ಈದಾಗ ಪಕ್ಕದ ಮನೆಗೆ ನೊರೆಹಾಲು ನೀಡುವ, ಅದರಂತೆ ಅವರ ಮನೆಯಿಂದಲೂ ಹಾಲನ್ನು ಪಡೆಯುವ ರೂಢಿ (ಬೆಂಗ.ಜಿ)

ಎಮ್ಮೆಘುಗ್ರಿ: ಒಂದು ವಿಧದ ಕಳೆಸಸ್ಯ

ಎಮ್ಮೆಚಾಪಲು: ಮಲೆನಾಡಿನ ಒಂದು ಬಗೆಯ ಮೀನು

ಎಮ್ಮೆಜಿಗಣೆ: ದೊಡ್ಡಜಿಗಣೆ (ಚಿಮ.ಜಿ.)

ಎಮ್ಮೆತಾತ: ಔಷಧೀಯ ಸಸ್ಯ (ಬೆಳ.ಜಿ)

ಎಮ್ಮೆದಪ್ರೆ ಹುಲ್ಲು: ಒಂದು ಜಾತಿಯ ಹುಲ್ಲು (ತುಮ.ಜಿ)

ಎಮ್ಮೆಬಳ್ಳಿ: *ಆರ್ಜೀರಿಯ ಸಿರಿಶಿಯ:* ಆಹಾರಯೋಗ್ಯವಾದ ಒಂದು ಕಳೆಸಸ್ಯ

ಎಮ್ಮೆಮುರುಕಲು: *ಬಕನೇನಿಯ ಆಂಗುಸ್ಟಿಫೋಲಿಯ;* ಒಂದು ಬಗೆಯ ಸಸ್ಯವಿಶೇಷ. **ಇರೂ:** *ಮುರಡಿ ಗಿಡ*

ಎಮ್ಮೆರೆಡ್ಡಿ ಸೊಪ್ಪು: ಆಹಾರಯೋಗ್ಯವಾದ ಒಂದು ಕಳೆಸೊಪ್ಪು (ತುಮ.ಜಿ)

ಎಮ್ಮೆಹಾಡು: ಒಂದು ಬಗೆಯ ನಾರು. ಈ ನಾರಿನಿಂದ ಆಗೇರ ಹೆಂಗಸರು ತಮ್ಮ ಮಾಂಗಲ್ಯಸೂತ್ರ ಮತ್ತು ಮಣಿಗಳನ್ನು ಪೋಣಿಸಿಕೊಳ್ಳುತ್ತಾರೆ (ಉಕ.ಜಿ)

ಎಮ್ರಿಕಲ್ಲು: ಉಪಕರಣಗಳನ್ನು ಹರಿತಗೊಳಿಸಲು ಬಡಗಿ ಬಳಸುವ ಕಲ್ಲು. ಇರೂ: *ಸಾಣೆಕಲ್ಲು, ಮದೆಗಲ್ಲು, ಕರಸಾಣಿ*

ಎರ: ನೋಡಿ– ಇರ

ಎರಂಡೆ: ಎರೆಅಂಡೆ; ಗಾಡಿಗೆ ಕೀಲೆಣ್ಣೆ ತುಂಬಿಡುವ ಕೊಂಬಿನ ಅಥವಾ ಬಿದಿರಿನ ಸಾಧನ (ದಕ). **ಇರೂ:** *ಹೆರಂಡೆ*

ಎರಕ: ಕಾಯಿಸಿದ ದ್ರವರೂಪದ ಲೋಹವನ್ನು ಅಚ್ಚಿನೊಳಗೆ ಸುರಿದು ನಿರ್ದಿಷ್ಟ ಆಕಾರ ತಯಾರು ಮಾಡುವುದು

ಎರಕಣಾಕಿ ಆಗು: ಎರೆದುಕೊಳ್ಳುವಾಕೆ ಆಗು; ಹೊರಗಾಗು; ಮುಟ್ಟಾಗು.

ಎರಕದ ಕೆಲಸ: ಕಂಚು ತಾಮ್ರ ಹಿತ್ತಾಳೆಗಳಲ್ಲಿ ವಿಗ್ರಹ ತಯಾರು ಮಾಡುವ ಕೆಲಸ

ಎರಕನದು (ಕ್ರಿ): ಎರೆದುಕೊಳ್ಳುವುದು; ತಲೆಸ್ನಾನ ಮಾಡುವುದು; ಋತುಮತಿ, ಬಸುರಿ, ಬಾಣಂತಿಯರಿಗೆ ಸ್ನಾನ ಮಾಡಿಸುವುದು

ಎರಕಪ್ಪ: ಕೊಪ್ಪರಿಕೆಯಲ್ಲಿ ಬೆಲ್ಲ ತೆಗೆಯುವಿಕೆ (ಹಾಸ.ಜಿ)

ಎರಕಲ ಬೀಡು: ಕಪ್ಪು ಹೊಲದಲ್ಲಿ, ಹೆಚ್ಚಾಗಿ ಬೇಸಿಗೆಯಲ್ಲಿ ಭೂಮಿ ಬಿರುಕು ಬಿಡುವುದು (ಧಾರ.ಜಿ). **ಇರೂ:** *ಬೀಡು (ಮೈಸೂ.ಜಿ)*

ಎರಕಲು: ಗಾಡಿಯ ಕೆಳಗಡೆ ಇರುವ ಉದ್ದನೆಯ ಮರ (ಬೆಳ.ಜಿ)

ಎರಕಿ: ಬಟ್ಟೆ ಅಥವಾ ಬಳ್ಳಿಯಿಂದ ದುಂಡಾಗಿ ಸುತ್ತಿದ ಸಿಂಬೆ

ಎರಕೊಳ್ಳುವವರ ಕೆಳಗೆ ಡೊಗ್ಗು: ಇನ್ನೊಬ್ಬರ ಕೆಳಗೆ ಆಶ್ರಯ ಪಡೆ (ಧಾರ.ಜಿ)

ಎರಗಲು ರೋಗ: ಬತ್ತದ ಬೆಳೆಗೆ ಬರುವ ಒಂದು ರೋಗ

ಎರಗಾಡು: ಎರೆಕಾಡು; ಎರೆ ಮಣ್ಣಿನ ಜಮೀನು

ಎರಗು: (ಕ್ರಿ) ೧. ಮೇಲೆಬೀಳು; ಆಕ್ರಮಣ ಮಾಡು (ಚಿಮ.ಜಿ) ೨. ನಮಸ್ಕರಿಸು (ನಾ) ೩. ಇರುವೆ (ಉಕ.ಜಿ)

ಎರಚುಕೂಳು: ಹರಿಸೇವೆಯ ಸಂದರ್ಭದಲ್ಲಿ ಜಮೀನಿನ ಸುತ್ತ ರಕ್ತದ ಕೂಳು ಅಥವಾ ಅರಿಶಿನದ ಕೂಳು ಎರಚುವಿಕೆ

ಎರಟ: ಎರಡರಷ್ಟು (ದಕ.ಜಿ)

ಎರಟಿಕುಟ್ಟಿ: ಅವಳಿ ಮಕ್ಕಳು (ದಕ.ಜಿ)

ಎರಟೆಮುಕ್ಕೆ: ಚೆನ್ನೆಮಣೆ ಆಟದ ಒಂದು ವಿಧ (ದಕ.ಜಿ)

ಎರಡಕ್ಕೆ ಹೋಗು: ಹೇಲು (ಕೊಡ.ಜಿ/ಮೈಸೂ.ಜಿ); ಮಲ ವಿಸರ್ಜಿಸು

ಎರಡನೆ ಬೀಡು: ಮಲ್ಲಿಗೆ, ಹತ್ತಿ ಮೊದಲಾದವುಗಳ ಎರಡನೆ ಬೆಳೆ (ಶಿವ.ಜಿ) ಈ ಬೆಳೆಯು ಮೊದಲನೇ ಬೀಡಿನಷ್ಟು ಹುಲುಸಾಗಿರುವುದಿಲ್ಲ

ಎರಡನೆ ಹಸೆ: ಒಕ್ಕಲಿಗರ ಮದುವೆ ಸಂದರ್ಭದಲ್ಲಿ ವರನನ್ನು, ಅಕ್ಕಿಹಸೆ ಅಳಿಸಿದ ನಂತರ ಮಣೆ ಹಾಕಿ ಕೂರಿಸಿದ ಹಸೆ

ಎರಡನೇ ಜ್ವರ: ರೇಷ್ಮೆಕೃಷಿಯ ಒಂದು ಹಂತ. ಒಂದನೇ ಜ್ವರದಿಂದ ಎದ್ದು ಎರಡೂವರೆ ಅಥವಾ ಮೂರನೇ ದಿವಸಕ್ಕೆ

ಹುಳುಗಳು ಎರಡನೇ ಜ್ವರಕ್ಕೆ ಕೂತುಕೊಳ್ಳುತ್ತವೆ (ಮಂಡ್ಯ.ಜಿ). **ನೋಡಿ–** ಒಂದನೇ ಜ್ವರ

ಎರಡಲ್ನ ಗುಂಜಿ: ಹೊಲ ಅರಗಲು ಬಳಸುವ ಎರಡು ಹಲ್ಲಿನ ಕುಂಟೆ (ಬಳ್ಳಾ.ಜಿ)

ಎರಡಲ್ಲಿನ ಕರ: ೧. ಎರಡೇ ಹಲ್ಲು ಬಂದಿರುವ ಎಳೆಯ ಕರು ೨. ಉತ್ಸಾಹಿ ೩. ಪ್ರಾಯದವನು

ಎರಡಾಳುದ್ದ ಹೊತ್ತು: ಇಬ್ಬರ ಎತ್ತರದಷ್ಟು ಉದ್ದವಿರುವ ನೆರಳು ಬೀಳುವ ಸಮಯ (ಮಂಡ್ಯ.ಜಿ)

ಎರಡುಕೈ ಕೊಪ್ಪರ್ಗೆ: ಎರಡೂ ಕಡೆ ಬಳೆಯ ಹಿಡಿಯಿರುವ ಕೊಪ್ಪರಿಗೆ. ಒಲೆಯಿಂದ ಇಳಿಸುವಾಗ ಇಬ್ಬರು ಈ ಹಿಡಿಗಳನ್ನು ಹಿಡಿದು ಇಳಿಸುತ್ತಾರೆ

ಎರಡುತಾಳಿನ ಕೂರಗಿ: ಹತ್ತಿ, ಕುಸಬಿ ಇತ್ಯಾದಿ ಬೀಜಗಳನ್ನು ಬಿತ್ತಲು ಉಪಯೋಗಿಸುವ ಎರಡು ಕೊಳವೆಗಳಿರುವ ಉಪಕರಣ (ಧಾರ.ಜಿ)

ಎರಡುಬಳೆ ಒನಕೆ: ಎರಡೂ ಕಡೆ ಕಬ್ಬಿಣದ ಬಳೆಗಳನ್ನು ಹಾಕಿರುವ ಒನಕೆ. ಸಾಮಾನ್ಯವಾಗಿ ಶುಭಶಾಸ್ತ್ರಗಳಿಗೆ ಬಳೆ ಇರುವ ಒನಕೆಯನ್ನು ಬಳಸುತ್ತಾರೆ

ಎರಡುಸೀಳಿನ ಚೌಕಿ: ಎರಡು ಕಡೆ ಮನೆ ಇದ್ದು ಮಧ್ಯೆ ಅಂಗಳದಂತೆ ಖಾಲಿ ಇರುವ ಸ್ಥಳ. ನಾಲ್ಕು ಕಡೆ ಮನೆ ಇದ್ದು ಮಧ್ಯೆ ಅಂಗಳವಿರುವ ಜಾಗಕ್ಕೆ ನಾಲ್ಕು ಸೀಳಿನ ಚೌಕಿ ಎನ್ನುತ್ತಾರೆ. ಮನೆಯಲ್ಲಿ ಹಬ್ಬ ಹರಿದಿನ ಇದ್ದಾಗ ಎಲ್ಲರೂ ಸೇರಿ ಈ ಚೌಕಿಯಲ್ಲಿ ಊಟ ಮಾಡುವರು (ಉಡು.ಜಿ)

ಎರಡುಸುತ್ತಿನ ಸ್ವಾರಿ: ದೊಡ್ಡ ಕೈಚಟಿಗೆ

ಎರಡೆಳೆ ರಂಗೋಲಿ: ಎರಡು ಗೆರೆಗಳಿರುವ ರಂಗೋಲಿ ವಿನ್ಯಾಸ; ರಂಗೋಲಿ ಹುಡಿಗಳನ್ನು ತೆಗೆದುಕೊಂಡು ಮಧ್ಯದ ಬೆರಳು, ತೋರುಬೆರಳು, ಹೆಬ್ಬೆರಳುಗಳಿಂದ ನಿಧಾನವಾಗಿ ಜಾರಿಸುತ್ತಾ ಕೆಳಕ್ಕೆ ಉದುರಿಸುವುದು. ಹೀಗೆ, ಮೂರೆಳೆ ನಾಲ್ಕೆಳೆಯಾಗಿ ಉಂಗುರದ ಬೆರಳು ಮತ್ತು ಕಿರುಬೆರಳುಗಳನ್ನು ಬಳಸಿ ರಂಗೋಲಿ ಹಾಕುವುದು ಎಳೆ ರಂಗೋಲಿಯ ಒಂದು ಕೌಶಲ

ಎರಡೇಣ್ ಕಣ್‌ಸೆ: ಎರಡು ಬದಿಯಿರುವ ಅರ (ದಕ.ಜಿ)

ಎರಡೊಂದ ಪಾಲು: ಹಲವು ತುಂಡುಗಳಾಗಿ ವಿಭಜಿಸಿಕೊಂಡ ಜಮೀನು

ಎರಡೊತ್ತಿನ ಹೇರು: ಪ್ರಾಣಿಗಳ ಮೇಲೆ ಹೊರೆಯನ್ನು ಸಾಗಿಸುವಾಗ ಹೇಳುವ ಪದ (ಬೆಂಗ.ಜಿ)

ಎರಡೊಪ್ಪತ್ತು: ಎರಡು ಹೊತ್ತಿನ ಅವಧಿಯ ವ್ಯವಸಾಯದ ಕೂಲಿ ಕೆಲಸ; ಬೆಳಿಗ್ಗೆ ಮತ್ತು ಮಧ್ಯಾಹ್ನ ಎರಡೂ ಅವಧಿ

ಎರಣಿ: ಹಾವುರಾಣಿ

ಎರಣೆಇಚಾರ: ಎರಡನೇ ವಿಚಾರ; ಬೇರೆ ವಿಚಾರ; ಭೇದ ಬಗೆಯುವಿಕೆ (ಧಾರ.ಜಿ)

ಎರಣೆದೋರು: ಎರಡನೆಯವರು; ಬೇರೆಯವರು; ಅನ್ಯರು (ಧಾರ.ಜಿ)

ಎರದೆಹಣ್ಣು: ಎಲಚಿ; ಬೋರೆಹಣ್ಣು; ಬಾರೆಹಣ್ಣು, ಚಿಕ್ಕ ಮರದಲ್ಲಿ ಬಿಡುವ ಈ ಹಣ್ಣನ್ನು ಸಂಕ್ರಾಂತಿ ಎಳ್ಳಿನೊಂದಿಗೆ ಬೀರುತ್ತಾರೆ (ಚಿಬ.ಜಿ)

ಎರನ್ ಮೀನು: ಎರನೆಯಂತಹ ಅಗಲ ಬಾಯಿಯ ಮೀನು (ಉಡು.ಜಿ)

ಎರಪ್ಪೆ: *ಬುಶನಾನಿಯಾ ಲಂಜನ್:* ನೂರ್ಕಲ್ ಮರ (ದಕ.ಜಿ)

ಎರಬಣ್ಣ: ಕೆಂಪು ಮಣ್ಣಿನಿಂದ ಕಲಸಿದ ಬಣ್ಣ

ಎರಬಾಳು: ಹೆರಬಾಳು; ಬೇರೆಯವರನ್ನು ಆಶ್ರಯಿಸಿ ಬದುಕಬೇಕಾದ ಸ್ಥಿತಿ

ಎರಬಿಡ್ಡಿ: ಒಣಗಿ ಬಿರಿದ ಭೂಮಿ

ಎರಮನ್ನೀರು: ನಗರ್ತ ಜನಾಂಗದವರಲ್ಲಿ ಮದುವೆಯಾದ ಮರುದಿನ ಗಂಡು ಹೆಣ್ಣಿಗೆ ಮಾಡಿಸುವ ಕೆಂಪು ಓಕುಳಿ ನೀರಿನ ಸ್ನಾನ. **ಇರೂ:** ರತ್ನೀರು ಸ್ನಾನ

ಎರಮಾನೆ: ಅರಮನೆ (ದಕ.ಜಿ)

ಎರಮುಸುರೆ: ಒಂದು ಔಷಧೀಯ ಸಸ್ಯ (ಚಿತ್ರ ನೋಡಿ)

ಎರಲಡ್ಡು: ಒಂದು ಬಗೆಯ ಪಕ್ಷಿ

ಎರವ: ಕೊಡಗುಜಿಲ್ಲೆಯ ಒಂದು ಬುಡಕಟ್ಟು ಸಮುದಾಯ; ಆ ಸಮುದಾಯದ ವ್ಯಕ್ತಿ ಮತ್ತು ಭಾಷೆ

ಎರವಂತಿಗೆ: ೧. ಇರುವಂತಿಗೆ ೨. ಬಣ್ಣ ಬಣ್ಣದ ಹೂ ಬಿಡುವ ದೊಡ್ಡ ಜಾತಿಯ ಸೇವಂತಿಗೆ

ಎರವರ ಕುಣಿತ: ಕೊಡಗಿನ ಎರವ ಬುಡಕಟ್ಟಿನವರು ರಾತ್ರಿಯ ಹೊತ್ತು ತಾವು ವಾಸಿಸುವ ಗುಡಿಸಲುಗಳ ಮುಂದೆ ಬೆಂಕಿ ಹಾಕಿಕೊಂಡು, ಅದರ ಸುತ್ತ ಸಾಮೂಹಿಕವಾಗಿ

ಹಾಡು ಹೇಳುತ್ತಾ, ಹಿಮ್ಮೇಳಕ್ಕೆ ದುಡಿ ಮತ್ತು ಚೀನೀವಾದ್ಯ ನುಡಿಸುತ್ತಾ ಮಾಡುವ ಕುಣಿತ (ಕೊಡ.ಜಿ)

ಎರವಾಗು: ಬೇರೆಯಾಗು; ಹೊರತಾಗು; ದೂರವಾಗು

ಎರವಿನ: ಅಗಲುವ; ದೂರಾಗುವ (ಬಿಜಾ.ಜಿ) ಯಾರಿಗೆ ಯಾರುಂಟು ಎರವಿನ ಸಂಸಾರ ನೀರಮೇಲಿನ ಗುಳ್ಳೆ........

ಎರವೀಕೆ: ೧. ಹೊರಕ್ಕೆ; ದೂರಕ್ಕೆ (ಬಾಗ.ಜಿ/ಶಿವ.ಜಿ) ೨. ಪಡಸಾಲೆ (ಮಲೆ)

ಎರವು: ೧. ಸಾಲ; ಕಡ (ಧಾರ.ಜಿ) ೨. ಅಗಲಿಕೆ; ದೂರ

ಎರಳಿ: ನೋಡಿ– ಇಳ್ಳಿ

ಎರಳೆ: ಜಿಂಕೆ

ಎರಳೆಕಾಯಿ: ಇರಳಿಕಾಯಿ; ಹೇರಳೆಕಾಯಿ; ಎಳ್ಳಿಕಾಯಿ

ಎರಿ/ಎರೆ (ಕ್ರಿ): ೧. ಸ್ನಾನ ಮಾಡಿಸು ೨. ಹೆರೆ; ಸುಲಿ; ಕೊಯ್ಯು (ನಾ) ೩. ಕಪ್ಪು ಮಣ್ಣಿನ ಭೂಮಿ; ಒಡ್ಡಾದ ಪ್ರದೇಶ (ಮೈಸೂ.ಜಿ/ಚಾಮ.ಜಿ) ೪. ಹಾವಿನ ಪೊರೆ ೫. ಮೇವು (ಕೊಡ.ಜಿ)

ಎರಿಬೆದ್ಲು: ಎರಗಾಡು; ಎರೆಮಣ್ಣಿನ ಜಮೀನು

ಎರಿಮಾಲು: ಎರೆ ನೆಲದಲ್ಲಿ ಬೆಳೆದ ತಂಬಾಕು

ಎರಿಯಾಕ್ಳ ಭೂತ: ಒಂದು ಅವಳಿ ದೈವದ ಹೆಸರು (ದಕ.ಜಿ)

ಎರು: ಇರುವೆ; ಚೀಮೆ; ಸೀಮೆ (ಮೈಸೂ.ಜಿ)

ಎರುಕಡಪು: ಜಾನುವಾರುಗಳು ಹೊಳೆ ದಾಟುವ ಸ್ಥಳ

ಎರುಕನಡೆ: ಮೇರ ಜನಾಂಗದವರು ಆರಾಧಿಸುವ ಒಂದು ದೈವದ ಹೆಸರು (ದಕ.ಜಿ)

ಎರುಕೋಲ: ಎತ್ತು ಅಥವಾ ಕೋಣಗಳ ಮುಖವಾಡದ ಕುಣಿತ. ಬೆನ್ನಿಗೆ ನೇಗಿಲ ಆಕೃತಿಯ ತ್ರಿಕೋನಾಕಾರದ ರಚನೆಯನ್ನು ಕಟ್ಟಿಕೊಳ್ಳುತ್ತಾರೆ. ತೆಂಬರೆ ಕೊಂಬು ಕಹಳೆ ವಾಲಗದ ಹಿಮ್ಮೇಳಕ್ಕೆ ಎರಡು ಕೈ ಕಾಲುಗಳನ್ನು ನೆಲಕ್ಕೆ ಊರಿಕೊಂಡು ಎತ್ತು ಕೋಣವನ್ನು ಅನುಕರಿಸುವ ರೀತಿ ಕುಣಿಯುತ್ತಾರೆ. ತುಳುನಾಡಿನ ಗುತ್ತು ಬೂಡು ಅರಮನೆಗಳಲ್ಲಿ, ಸುಗ್ಗಿ ಬೇಸಾಯದ ಮುಕ್ತಾಯದ ದಿನಗಳಲ್ಲಿ ಮತ್ತು ಕಂಬಳಗಳಿಗೆ ಕೋಣಗಳನ್ನು ಇಳಿಸುವ ಸಂದರ್ಭದಲ್ಲಿ, ಉತ್ತರ ಕ್ರಿಯೆಯ ಸಂದರ್ಭದಲ್ಲಿ ಈ ಕುಣಿತದ ಪ್ರದರ್ಶನ ನಡೆಯುತ್ತದೆ (ಕೊಡ.ಜಿ/ದಕ.ಜಿ). **ಇರೂ:** ಏಕೋಲ; ಏರ್ಕೋಲ

ಎರುನಲಿಕೆ: ನೋಡಿ– ಎರುಕೋಲ (ದಕ.ಜಿ)

ಎರುನಾಡಿಸುಂಕ: ಗಟ್ಟದಿಂದ ಎತ್ತುಗಳನ್ನು ತರುವಾಗ ಕೊಡುವ ಸುಂಕದ ಹಣ (ದಕ.ಜಿ)

ಎರುಪುಣ್ಣಮೆ: ಸುಬ್ರಹ್ಮಣ್ಯದಲ್ಲಿ ಮಾರಾಟಕ್ಕಾಗಿ ಗಟ್ಟದ ಮೇಲಿನಿಂದ ಎತ್ತುಗಳನ್ನು ತರುವ ದಿವಸ (ದಕ.ಜಿ)

ಎರುಬಂಟ: ಕಂಬುಲದ ಸಂದರ್ಭದಲ್ಲಿ ಆರಾಧಿಸಲ್ಪಡುವ ದೈವ (ದಕ.ಜಿ)

ಎರುಬು: ಸಗಣಿ; ಗೊಬ್ಬರ (ಚಿಮ.ಜಿ)

ಎರುಮೀನ್: ಕೋಣದ ಮುಖದ ಆಕಾರವುಳ್ಳ ಒಂದು ಜಾತಿಯ ಮೀನು (ದಕ.ಜಿ)

ಎರುಮೊಟ್ಟುನಿ: ಕಂಬಳದಲ್ಲಿ ಕೋಣಗಳನ್ನು ಓಡಿಸುವುದು (ದಕ.ಜಿ)

ಎರುಲೆಪ್ಪುನಾಯೆ: ಕಂಬಳದ ಕೋಣಗಳನ್ನು ಮಂಜೊಟ್ಟಿಗೆ ಹತ್ತಲಿಕ್ಕಾಗಿ ಕರೆಯುವವನು (ದಕ.ಜಿ)

ಎರುಳೆ: ದಂಡೆ; ಹೂವಿನ ದಂಡೆ (ಬೆಂಗ.ಜಿ)

ಎರೆ: ೧. ನೀಡು; ಕೊಡು ೨. ಸ್ನಾನ ಮಾಡಿಸು; ಅಭಿಷೇಕಮಾಡು (ಬೆಂಗ.ಜಿ) ೩. ಇಂಧನ (ಚಿಬ.ಜಿ) ೪. ಕಪ್ಪುಮಣ್ಣಿನ ಭೂಮಿ

ಎರೆಣ್ಣೆ: ಹರೆಣ್ಣೆ; ಗಾಡಿಯ ಚಕ್ರಗಳು ಸರಾಗವಾಗಿ ಚಲಿಸಲು ಹಾಕುವ ಎಣ್ಣೆ; ಕೀಲೆಣ್ಣೆ

ಎರೆಪಲಯಿ: ಒಂದು ಜಾತಿಯ ಮೀನು (ದಕ.ಜಿ)

ಎರೆಪುಕಳೆ: ಹುಚ್ಚ (ರಾಯ.ಜಿ)

ಎರೆಪ್ಪು: ಕೆಟ್ಟವ (ಉಕ.ಜಿ/ದಕ.ಜಿ). **ಇರೂ:** ಎರೆಪ್ಪೊ

ಎರೆಬಳೆ: ದುಂಡನೆಯ ಬಳೆ

ಎರೆ ಭೂಮಿ: ಕಪ್ಪು ಮಣ್ಣಿನ ಫಲವತ್ತಾದ ಪ್ರದೇಶ. ಬೆಳೆಗಳು ಉತ್ತಮವಾಗಿ ಬರುತ್ತವೆ. ಮೆಣಸಿನಕಾಯಿ, ನೀರುಳ್ಳಿ, ಕಡ್ಲೆ, ಬೇಸಿಗೆ ಜೋಳ ಹೆಚ್ಚಾಗಿ ಬೆಳೆಯುತ್ತಾರೆ (ಚಿಬ.ಜಿ)

ಎರೆಮಾಡು: ೧. ಬೇಡಿಕೊಳ್ಳು ೨. ಪೀಡಿಸು

ಎರೆಮೆಕ್ಕಲು: ಮಣ್ಣಿನ ಒಂದು ಬಗೆ

ಎರೆಯ: ೧. ಒಡೆಯ (ಶಿವ.ಜಿ) ೨. ಪ್ರಿಯಕರ ೩. ಗಂಡ

ಎರೆಯಪ್ಪ: ೧. ಅಕ್ಕಿ, ಬೆಲ್ಲ, ಕೊಬ್ಬರಿಯನ್ನು ಕುಟ್ಟಿ ಅಂಗೈಯಗಲ ಬಿಲ್ಲೆಯ ಆಕಾರದಲ್ಲಿ ಮಾಡುವ ಸಿಹಿಭಕ್ಷ್ಯ

(ಬಳ್ಳಾ.ಜಿ) ೨. ಅಕ್ಕಿ ಮತ್ತು ಬೆಲ್ಲದಿಂದ ತಯಾರಿಸಿದ ಒಂದು ಸಿಹಿತಿಂಡಿ (ದಕ.ಜಿ/ಮೈಸೂ.ಜಿ)

ಎರೆಸು/ಎರೆಶು: ಒಂದರಿಂದ ಇನ್ನೊಂದಕ್ಕೆ ಸುರಿಸು; ಹಾಕಿಸು. **ಪ್ರ:** ಅಂಟಿಕೆಪಂಟಿಕೆ ಹಬ್ಬದಲ್ಲಿ ಹಣತೆಗೆ ಎಣ್ಣೆ ಎರೆಸಿಕೊಂಡು, ಕಾಣಿಕೆ ತೆಗೆದುಕೊಂಡು ಹೋಗ್ತಾರೆ.

ಎರೆಸುವ ಮನೆ: ಮಲೆನಾಡಿನ ಬ್ರಾಹ್ಮಣೇತರರಲ್ಲಿ ಮೊದಲ ಬಾರಿ ಋತುಮತಿಯಾದ ಹೆಣ್ಣಿಗೆ ಹತ್ತನೇ ದಿನ ಮನೆಯ ಹಿರಿಯರು ಎರೆದು ತಿಂಡಿ ತಿನ್ನಿಸುವ ಪದ್ಧತಿ. ಬಳಿಕ ಆಕೆಯನ್ನು ದೇವಾಲಯಕ್ಕೆ ಕರೆದುಕೊಂಡು ಹೋಗಿ ತೀರ್ಥಸ್ನಾನ ಮಾಡಿಸುತ್ತಾರೆ

ಎರೆಹುಳ: ಮಣ್ಣಿನಲ್ಲಿ ವಾಸಿಸುವ ಒಂದು ಹುಳ. ಇದು ರೈತನ ಮಿತ್ರ ಎಂದೇ ಹೆಸರು ಪಡೆದಿದೆ. **ಇರೂ:** *ನಾಯಿನಾಲಿಗಿ (ಬೀದ.ಜಿ), ಮಣ್ಣುಳ (ಮಂಡ್ಯ.ಜಿ)*

ಎರ್ಕಿಮಾಲೆ: ಒಂದು ಕಂಠಾಭರಣ (ದಕ.ಜಿ)

ಎರ್ಕುಳಿ: ಮೀನು ಹಿಡಿಯುವ ಸಾಧನ (ಮಂಡ್ಯ.ಜಿ)

ಎರ್ಕೆಗಿಡ: ಎಕ್ಕೆ ಗಿಡ

ಎರ್ಗತ್ತಿ: ಹೆರೆಗತ್ತಿ; ಕೊಪ್ಪರಿಕೆಯಲ್ಲಿ ಅಂಟಿಕೊಂಡಿರುವ ಬೆಲ್ಲದ ಪಾಕವನ್ನು ಹೆರೆದುಕೊಳ್ಳಲು ಬಳಸುವ ಹಲ್ಲೆಯಾಕಾರದ ಕಬ್ಬಿಣದ ಸಾಧನ (ಹಾಸ.ಜಿ)

ಎರ್ಗಲ್: ಬಂಡಿಯ ಒಂದು ಬಿಡಿ ಭಾಗ. **ಇರೂ:** *ಏರ್ಗಲ್*

ಎರ್ತಕುಡುವುದು: ೧. ಕಣದಲ್ಲಿ ಬೆಳೆಯನ್ನು ರಾಶಿ ಮಾಡುವ ಮುನ್ನ ಮತ್ತು ರಾಶಿ ತುಂಬುವ ಮುನ್ನ ಪೂಜಿಸುವುದು (ದಕ.ಜಿ) ೨. ಉಳುವ ಸಮಯದಲ್ಲಿ ಕೋಣಗಳಿಗೆ ಎಳ್ಳೆಣ್ಣೆಹುಳಿ ಕೊಡುವುದು (ದಕ.ಜಿ)

ಎರ್ಮಾಲ್: ಒಂದು ಚಾರಿತ್ರಿಕ ಮಹತ್ವದ ಸ್ಥಳ.

ಎರ್ಮುಳ್ಳು: ಹೆರೆಮಣೆ; ತೆಂಗಿನಕಾಯಿ ತುರಿಯಲು ಬಳಸುವ ಸಾಧನ. ಕಬ್ಬಿಣದ ತಗಡನ್ನು ಅಲ್ಲಲ್ಲಿ ಮೇಲ್ಮುಖವಾಗಿ ಬಾಗಿಸಿ ಸಾಲು ಸಾಲು ಹಲ್ಲುಗಳು ಬರುವಂತೆ ರಚನೆ ಮಾಡಿರುತ್ತಾರೆ

ಎರ್ಮೆಬಲ್ಯಾರ್: ಒಂದು ಜಾತಿಯ ಮೀನು (ದಕ.ಜಿ)

ಎರ್ರಿತಾತ: ಬಳ್ಳಾರಿಜಿಲ್ಲೆಯ ಚೆಳ್ಳಗುರ್ಕಿ ಎಂಬ ಗ್ರಾಮದಲ್ಲಿದ್ದ ಒಬ್ಬ ಸಂತ ಹಾಗೂ ಪವಾಡ ಪುರುಷ. ಆತ ಜೀವ ಸಮಾಧಿಯಾದ ನಂತರ ಅದು ಪ್ರಸಿದ್ಧ ಯಾತ್ರಾ ಸ್ಥಳವಾಗಿದೆ

ಎಲಕಟ್ಟು: ನೋಡಿ– ಎಲೆಕೊಟ್ಟು

ಎಲಕ್ಕಾಯಿ: ಬೇಲದಕಾಯಿ (ಕೋಲಾ.ಜಿ)

ಎಲಗ: ೧. ನೀಚಳು (ಬಿಜಾ.ಜಿ) ೨. ಒಂದು ಕಾಡು ಹೂವು (ಉಕ)

ಎಲಗದ ಮರ: *ಸಿನಮೋಮಮ್ ಕ್ಯಾಂಫರ ಇನರ್ಸ್:* ಅಡವಿಲವಂಗಪಟ್ಟೆ ಮರ

ಎಲಗದ ಹಿಟ್ಟು: ಒಂದು ಬಗೆಯ ಅಡುಗೆ (ಹಾಸ.ಜಿ)

ಎಲಗೆಹಚ್ಚು: ಪುಸಲಾಯಿಸು (ಬಳ್ಳಾ.ಜಿ)

ಎಲಚಿ/ಯಲಚಿ: ತಿನ್ನಲು ಯೋಗ್ಯವಾದ ಹುಳಿಹಣ್ಣು ಬಿಡುವ ಒಂದು ಕಾಡುಮರ ಮತ್ತು ಅದರ ಹಣ್ಣು. **ಇರೂ:** *ಬಾರೆ ಗಿಡ, ಬೋರೆಗಿಡ (ದಕ)*

ಎಲತ್ರ: ಕೈವಸ್ತ್ರ

ಎಲಬತ್ತಿ: ಅರಳೆಯನ್ನು ದಾರದಂತೆ ಎಳೆದು ಐದು ಎಳೆ ಕೂಡಿಸಿದ ಬತ್ತಿ

ಎಲಮುತ್ತು: ಗದ್ದೆಯಲ್ಲಿ ಸಿಗುವ ಗುಳ್ಳೆ ಎಂಬ ಹುಳುವಿನ ಮಾಂಸದಿಂದ ತಯಾರಾಗುವ ಅಡುಗೆ (ಉಕ)

ಎಲವ: ೧. ಬೂರಲ ಗಿಡ ೨. ಶಾಲ್ಮಲಿ (ಶಿವ.ಜಿ)

ಎಲವರಿಗೆ/ಎಲೋರ್ಗೆ: *ಕಾಸ್ಸಿಯಾ ಆಕ್ಸಿಡೆಂಟಾಲಿಸ್:* ಔಷಧೀ ಗುಣವುಳ್ಳ ಒಂದು ಗಿಡ; ಕೋಲು ತಗಟೆ. ಎಲೆಯನ್ನು ತುಪ್ಪದಲ್ಲಿ ಹುರಿದು ಮಜ್ಜಿಗೆಹುಳಿ, ತಂಬುಳಿ, ಕುಡಿಯುವ ಸಾರು ಮಾಡುತ್ತಾರೆ ಪಿತ್ತ ಪ್ರಕೋಪಕ್ಕೆ ಒಳ್ಳೆಯದು. **ಇರೂ:** *ದೂದಿಮರ, ಬೂರುಗಮರ*

ಎಲವು: ನರ (ಉಕ) ; ಮೂಳೆ. **ಇರೂ:** ಎಲು

ಎಲಿ: ೧. ಅರ ೨. ಬಂಡಿಯ ಗಾಲಿಯ ಒಂಕಿಗಳನ್ನು ಹೊತ್ತು ಗುಂಭಕ್ಕೆ ಜೋಡಿಸಲ್ಪಟ್ಟಿರುವ ಕಟ್ಟಿಗೆಯ ಪಟ್ಟಿಕೆಗಳು ೩. ಸೀರೆಯ ಅಂಚಿನಲ್ಲಿ ಬರುವ ಎಲೆಯ ವಿನ್ಯಾಸ (ಬಳ್ಳಾ.ಜಿ)

ಎಲಿಗ: ದೀವರ ಸಮುದಾಯದ ಮತ್ತೊಂದು ಹೆಸರು (ಬಳ್ಳಾ.ಜಿ)

ಎಲಿಗತ್ರಿ/ಎಲೆಗತ್ತರಿ: ೧. ಎರಡು ಎಲೆ ಜೋಡಿಸಿದ ಕತ್ತರಿ (ಬೆಳ.ಜಿ) ೨. ಚೌಲದ ಸಮಯದಲ್ಲಿ, ಚಿಕ್ಕಮಕ್ಕಳ ತಲೆಗೂದಲನ್ನು ಕತ್ತರಿಸುವ ಶಾಸ್ತ್ರಕ್ಕೆ ಬಳಸುವ, ಕತ್ತರಿಯಾಕಾರದಲ್ಲಿ ಭಾಗಮಾಡಿದ ಎಲೆ (ಗುಲ್ಬ.ಜಿ)

ಎಲಿಗಾರ: ವೀಳ್ಯದ ಎಲೆ ಮಾರುವವ

ಎಲಿಗೆ ಚಿಕ್ಕೆಬೀಳೂದು: ಎಲೆಗಳಲ್ಲಿ ಕಂದು ಬಣ್ಣದ ಚುಕ್ಕೆ ಕಾಣಿಸಿಕೊಂಡು ಎಲೆಗಳು ಒಣಗಿ ಉದುರಿಹೋಗುವ ರೋಗ (ಬಿಜಾ.ಜಿ)

ಎಲಿಚಂಚಿ: ನೋಡಿ– ಎಲೆಸಂಚಿ

ಎಲಿಚಂಚಿಗೊರವಿ: ಮೈಲಾರಲಿಂಗ ದೇವರಿಗೆ ತಾಂಬೂಲ ಸೇವೆ ಸಲ್ಲಿಸುವ ಕಾಯಕದ ದೀಕ್ಷಾಬದ್ಧ ಗೊರವಿ (ಬಳ್ಳಾಜಿ). ***ಇರೂ:*** ಎಲೆಗೊರವಿ

ಎಲಿಚಟ್ಟದ ಹರಕೆ: ಸವದತ್ತಿಯ ಎಲ್ಲಮ್ಮನಿಗೆ ಕೊಡುವ ಹರಕೆಗಳಲ್ಲಿ ಒಂದು (ಬೆಳ.ಜಿ)

ಎಲಿತಿನ್ನು: ೧. ತಾಂಬೂಲ ಹಾಕಿಕೊ (ಬೀದ.ಜಿ) ೨. ಸರಸಕ್ಕೆ ಆಹ್ವಾನಿಸು

ಎಲಿಪುಚ್ಚಿ: ಬೆಳೆಯ ಎಲೆಗಳಿಗೆ ಬರುವ ಒಂದು ರೋಗ (ರಾಯ.ಜಿ)

ಎಲಿಪೂಜೆ: ಸವದತ್ತಿಯ ಎಲ್ಲಮ್ಮನಿಗೆ ಹರಕೆ ಹೊತ್ತವರು ದೇವರ ಮೂರ್ತಿಯ ಸುತ್ತಲೂ ಕಟ್ಟಿಗೆಯ ಚಟ್ಟಿಯನ್ನು(ಹಂದರ) ಮಾಡಿ ಆ ಚಟ್ಟಿಗೆ ವೀಳ್ಯದೆಲೆಗಳನ್ನು ಮಡಚಿ ಕಳಸದಾಕಾರದಲ್ಲಿ ಚುಚ್ಚಿ ಎಲೆಗಳಿಂದಲೇ ಮಾಡುವ ಪೂಜೆ (ಧಾರ.ಜಿ)

ಎಲುಗಿ: ಕಿರುಬೆರಳು (ಮಂಡ್ಯ.ಜಿ)

ಎಲುಮೀನು: ಬೆಳ್ಳಿಬಣ್ಣದ ದೇಹ, ಹೊಟ್ಟೆಯಡಿಯಲ್ಲಿ ಹಳದಿ ಬಣ್ಣ, ಮಾಸಲು ಬಣ್ಣದ ರೆಕ್ಕೆಗಳನ್ನು ಹೊಂದಿರುವ ಮೀನು (ದಕ.ಜಿ)

ಎಲೆಂತಡ್ಲು: ಹಾಗಲಕಾಯಿ, ತೊಂಡೆ ಚಪ್ಪರಗಳಲ್ಲಿ ಕಾಣಿಸಿಕೊಳ್ಳುವ ಸಣ್ಣಹುಳು

ಎಲೆಅಂಗಡಿ: ಹತ್ತು ಸಾವಿರ ಎಲೆಯ ಕಟ್ಟು (ಶಿವ.ಜಿ)

ಎಲೆಅಡಿಕೆ ಕೊಡು: ೧. ಆಹ್ವಾನಿಸು ೨. ಬೀಳ್ಕೊಡು (ಧಾರ.ಜಿ)

ಎಲೆಅಡಿಕೆತಿಂದುಹೋಗು: ಕಾಮತೃಷೆ ತೀರಿಸಿಕೊಂಡು ಹೋಗು

ಎಲೆಅಡಿಕೆತಿದ್ದು: ಮದುವೆ ಮುಂತಾದ ಕಾರ್ಯಗಳಲ್ಲಿ ಬಂದವರಿಗೆಲ್ಲಾ ಎಲೆ ಅಡಕೆ ಹಂಚು

ಎಲೆಉಗುರು: ಬಳ್ಳಿಯಿಂದ ವೀಳೆಯದೆಲೆ ಚಿವುಟಿ ತೆಗೆಯಲಿಕ್ಕಾಗಿ, ಬಲಗೈ ಹೆಬ್ಬೆರಳಿಗೆ ತೊಟ್ಟುಕೊಳ್ಳುವ, ತಗಡಿನ ಉಗುರಿನಾಕಾರದ ಸಾಧನ (ಬಳ್ಳಾ.ಜಿ). ***ಇರೂ:*** *ಎಲೆಯುಗುರು; ಎಲ್ಲೂರು (ಮೈಸೂ.ಜಿ)*

ಎಲೆಓಲೆ: ೧. ಹೆಂಗಸರು ಕಿವಿಗೆ ಧರಿಸುವ ಚಿನ್ನದ ಆಭರಣ. ಎಲೆ ಆಕಾರದಲ್ಲಿದ್ದು ಹಿಂಭಾಗದಲ್ಲಿ ಬೆಳ್ಳಿಯ ಅಂಡೆ ಇರುತ್ತದೆ (ದಾವ.ಜಿ) **ನೋಡಿ–** ಎಲೆಮುರಾವು ೨. ತಾಳೆಗರಿಯಿಂದ ಮಾಡಿಕೊಂಡ ಓಲೆ; ಬಿಚ್ಚೋಲೆ (ಚಾಮ.ಜಿ)

ಎಲೆಕಂಕಣ: ಮದುವೆಯಲ್ಲಿ ವಧೂವರರ ಕೈಗೆ ಕಟ್ಟುವ ವೀಳೆಯದೆಲೆಯ ಕಂಕಣ. ವೀಳ್ಯದೆಲೆಯನ್ನು ಸುರುಳಿ ಮಾಡಿ ಅರಿಶಿಣ ಕೊಂಬಿನೊಂದಿಗೆ ದಾರದಲ್ಲಿ ಅದನ್ನು ಕಟ್ಟಿರುತ್ತಾರೆ (ಬೆಂಗ್ರಾ.ಜಿ) ೩. ಮದುವೆಯಲ್ಲಿ ವೀಳ್ಯದೆಲೆ ಅಡಕೆ ಮತ್ತು ಅರಿಶಿನದ ಕೊಂಬನ್ನು ಸೇರಿಸಿ ವಧೂವರರ ಕೈಗಳಿಗೆ ಕಟ್ಟುವ ಕಂಕಣ

ಎಲೆಕಂದೊಡಿ ಬೂರು: ವೀಳೆಯ ಬಳ್ಳಿ (ದಕ.ಜಿ)

ಎಲೆಕಂದ್ಲಿ: ವೀಳೆದೆಲೆಗೆ ರೋಗ ಬರದಿರಲೆಂದು ದೇವರಿಗೆ ಹಾಕಿಕೊಳ್ಳುವ ಒಂದು ಹರಕೆ. ನೂರಾರು ಎಲೆಗಳಿಂದ ದೇವರಿಗೆ ಪೂಜೆ ಮಾಡುತ್ತಾರೆ (ದಾವ.ಜಿ)

ಎಲೆಕಾಡಿಗೆ ರೋಗ: ಎಲೆಗೆ ತಗಲುವ ಒಂದು ರೋಗ (ಚಿತ್ರ.ಜಿ)

ಎಲೆಕುಡ್ಲು: ವೀಳ್ಯದ ಎಲೆ ಕುಯ್ಯಲು ಬಳಸುವ ಸಣ್ಣ ಕುಡುಗೋಲು (ಮಂಡ್ಯ.ಜಿ)

ಎಲೆಕೊಟ್ಟು: ಮಣ್ಣು ಎಳೆಯುವ ಮಮ್ಮಟಿ; ಸಲಿಕೆ; ಎಲೆಗುದ್ದಲಿ (ಮೈಸೂ.ಜಿ)

ಎಲೆಗಪ್ಪ: ಕಿವಿಯ ಆಭರಣ (ತುಮ.ಜಿ)

ಎಲೆಗಳ್ಸ: ಎಲೆಕಳಸ; ವೀಳೆಯದೆಲೆಯನ್ನು ಜೋಡಿಸಿದ ಕಳಸದ ಚಂಬು

ಎಲೆಗಳ್ಳಿ: ಯುಫೋರ್ಬಿಯಾ; ಒಂದು ಬಗೆಯ ಕಳ್ಳಿ. ಪೊದೆಯಂತೆ ಕವಲೊಡೆದು ನಾಲ್ಕೈದು ಅಡಿ ಎತ್ತರಕ್ಕೆ ಬೆಳೆಯುತ್ತದೆ (ಮಂಡ್ಯ.ಜಿ)



ಎಲೆಗುದ್ದಲಿ: ಎಲೆಯಂತೆ ಅಗಲವಾದ ಹಲ್ಲೆಯುಳ್ಳ ಗುದ್ದಲಿ, ಮಮಟಿ



ಎಲೆಗೊರಬು: ಬಿಸಿಲು ಮಳೆಯಿಂದ ರಕ್ಷಣೆ ಪಡೆಯಲು ಬಳಸುವ, ಎಲೆಗಳಿಂದ ಮಾಡಿದ ರಚನೆ (ಶಿವ.ಜಿ)

ಎಲೆಗೊರವಿ: ನೋಡಿ– ಎಲಿ ಚಂಚಿಗೊರವಿ (ಬೆಂಗ.ಜಿ)

ಎಲೆಗೋರದ ಹಿಟ್ಟು: ಒಂದು ಬಗೆಯ ಅಡುಗೆ (ಹಾಸ.ಜಿ)

ಎಲೆಚಂಚಿ ಸೇವೆ: ಎಲೆಸಂಚಿ ಗೊರವಿಯರು ದೇವರಿಗೆ ಸಲ್ಲಿಸುವ ಎಲೆಸಂಚಿ ಸೇವೆ (ಬೆಂಗ.ಜಿ)

ಎಲೆಚುಕ್ಕಿ ರೋಗ: ನೋಡಿ– ಎಲೆಮುಟ್ಗಿ

ಎಲೆಚುಜ್ಜಲು ಮರ: ಅಲ್ಬೀಜಿಯ ಜ್ಯೂಲಿಬ್ರಿಸಿನ್: ಒಂದು ಸಸ್ಯವಿಶೇಷ

ಎಲೆತಂಡ್ಲು: ಸಣ್ಣಹುಳ; ತೊಂಡೆಚಪ್ಪರ, ಹಾಗಲಕಾಯಿ ಚಪ್ಪರದಲ್ಲಿ ಹೆಚ್ಚಾಗಿ ಕಾಣಿಸಿಕೊಳ್ಳುತ್ತದೆ (ಚಿಬ.ಜಿ)

ಎಲೆತಾಂಡ್ಯ: ತಿಂಗಳುಮಾವನ ಪೂಜೆಯ ಮೂರನೇ ದಿನದ ಆಚರಣೆ. ತಿಂಗಳು ಮಾವನ ಚಿತ್ರ ಬರೆದು ಅದರ ಮೇಲೆ ವೀಳ್ಯೆದೆಲೆ ಜೋಡಿಸಿ ಪೂಜೆ ಮಾಡುತ್ತಾರೆ (ಚಿಬ.ಜಿ)

ಎಲೆತಿಗಣೆ: ೧. ಎಳೆಯ ಗಿಡಗಳಿಗೆ ಅಂಟಿಕೊಂಡು ರಸಹೀರುವ ಕ್ರಿಮಿ. ೨. ಅಡಕೆ ಹೂವನ್ನು ತಿಂದು ಹಾಳು ಮಾಡುವ ಕ್ರಿಮಿ (ಬಳ್ಳಾ.ಜಿ)

ಎಲೆನಾಗ: ವೀಳ್ಯದೆಲೆಯಲ್ಲಿ ಕಂಡುಬರುವ, ನಾಗರಹಾವನ್ನು ಹೋಲುವ ಚಿಕ್ಕ ವಿಷಯುಕ್ತ ಜಂತು (ದಕ.ಜಿ)

ಎಲೆಪಿಂಡಿ/ಎಲೆಪೆಂಡಿ: ನಿರ್ದಿಷ್ಟ ಪ್ರಮಾಣದ ವೀಳೆಯದೆಲೆಗಳ ಕಟ್ಟು (ಬೆಂಗ್ರಾ.ಜಿ)

ಎಲೆಪೂಜೆ: ಹರಕೆ ಹೊತ್ತ ಭಕ್ತರು ಹನುಮಂತ ಮುಂತಾದ ದೇವರಿಗೆ ವೀಳ್ಯೆದೆಲೆಯ ಹಾರ ಹಾಕಿಸಿ ಸಲ್ಲಿಸುವ ಪೂಜೆ

ಎಲೆಪೂಜೆ ಕಟ್ಟಿಸು: ವೀಳ್ಯದೆಲೆಗಳಿಂದ ದೇವರಿಗೆ ಅಲಂಕಾರ ಮಾಡುವ ಸೇವೆ; ಹರಕೆಸೇವೆ (ಬೆಂಗ್ರಾ.ಜಿ)

ಎಲೆಬಾವ್ಲಿ: ಕಿವಿಯ ಬದಿಯಲ್ಲಿ ಇಳಿಬಿಡುವ ಅರಳಿಯೆಲೆ ಆಕಾರದ ಆಭರಣ (ದಕ.ಜಿ)

ಎಲೆಮಂಜು: ಬೆಳೆಗಳಿಗೆ ಬೀಳುವ ಮಂಜಿನ ರೋಗ

ಎಲೆಮಜ್ಜಿಗೆ ರೋಗ: ಏಲಕ್ಕಿ ಬೆಳೆಗೆ ಬರುವ ರೋಗ

ಎಲೆಮದ್ದು: ಕಾಡುಎಲೆಗಳಿಂದ ತಯಾರಿಸಿದ ಔಷಧಿ (ಶಿವ.ಜಿ)

ಎಲೆಮಬ್ಬು: ಅವರೆಬಳ್ಳಿಗೆ ತಗಲುವ ರೋಗ (ದಾವ.ಜಿ)

ಎಲೆಮರುಗ: ಒಂದು ಸುಗಂಧಯುಕ್ತ ಎಲೆಗಳ ಸಸ್ಯ

ಎಲೆಮುಟ್ಗಿ: ಶೇಂಗಾ, ಹತ್ತಿ, ಏಲಕ್ಕಿ, ಮೆಣಸಿನಕಾಯಿ ಮತ್ತಿತರ ಬೆಳೆಗಳಿಗೆ ಬರುವ ಒಂದು ರೋಗ (ಧಾರ.ಜಿ/ಬಳ್ಳಾ.ಜಿ). ***ಇರೂ:*** ಎಲೆ ಮುದುಡೆ; ಎಲೆಚುಕ್ಕಿ ರೋಗ; ಎಲೆಸುರುಳಿ; ಎಲೆಹಳದಿ

ಎಲೆಮುಟ್ರಕೆ: ಹತ್ತಿ ಬೆಳೆಗೆ ಬರುವ ಒಂದು ರೋಗ (ಶಿವ.ಜಿ)

ಎಲೆಮುತ್ತು: ನೆಲದಲ್ಲೇ ಎಲೆಗಳ ಅಡಿಯಲ್ಲಿ ಹೂತುಕೊಂಡಂತೆ ಹಬ್ಬಿಕೊಂಡು ಬೆಳೆಯುವ ಬಳ್ಳಿ. ಕುಮಟಾ ತಾಲೂಕಿನ ಕಾಡಿನ ಅಂಚಿನ ಪ್ರದೇಶದಲ್ಲಿ ಈ ಪ್ರಕಾರದ ಗಡ್ಡೆ ಕಾಣಸಿಗುತ್ತದೆ

ಎಲೆಮುದುಡೆ: ಎಲೆಚುಕ್ಕಿ ರೋಗ

ಎಲೆಮುದುರು ರೋಗ: ಮೆಣಸಿನ ಕಾಯಿ ಬೆಳೆಗೆ ಬರುವ ರೋಗ

ಎಲೆಮುರಾವು: ಚಿನ್ನದಿಂದ ಮಾಡಿದ ಎಲೆಯಾಕಾರದ ಕಿವಿಯ ಆಭರಣ (ದಾವ.ಜಿ). ***ಇರೂ:*** ಎಲೆಓಲೆ

ಎಲೆಯುಂಗುರ: ವಿಶಿಷ್ಟವಾದ ಎಲೆಯಾಕಾರದ ಉಂಗುರ

ಎಲೆರಾಹಲ್ಲು: ಬಂಡಿ ಗಾಲಿಯಲ್ಲಿರುವ ಕಟ್ಟಿಗೆಯ ಹಲ್ಲುಗಳು (ರಾಯ.ಜಿ)

ಎಲೆವಸ್ತ್ರ: ತಲೆಗೆ ಸುತ್ತಿಕೊಳ್ಳುವ ಬಣ್ಣದ ರುಮಾಲು (ಮಲೆ). **ಪ್ರ:** ವಾಲಗ ಊದುತ್ತಿದ್ದವರು ತಲೆಗೆ ಕೆಂಪು ಪಟ್ಟೆಯ ಎಲೆವಸ್ತ್ರ ಸುತ್ತಿದ್ದರು

ಎಲೆಶೆಟ್ಟಿ: ಮಿಡತೆ; ಮಿಡಚೆ (ಉಕ.ಜಿ)

ಎಲೆಸಂಚಿ/ಎಲಿಚಂಚಿ: ಎಲೆ ಅಡಿಕೆಯ ಚೀಲ; ವೀಳ್ಯದೆಲೆ ತಿನ್ನುವವರು ಅಡಿಕೆ ಹೋಳು, ಸುಣ್ಣಡಬ್ಬಿ, ವೀಳ್ಯದೆಲೆ, ಹೊಗೆಸೊಪ್ಪು ಡಬ್ಬಿ ಇತ್ಯಾದಿಗಳನ್ನು ಹಾಕಿಟ್ಟುಕೊಳ್ಳುವ ಚಿಕ್ಕ ಚೀಲ. ಇದರಲ್ಲಿ ಬೇರೆ ಬೇರೆ ವಿಭಾಗಗಳಿದ್ದು ಸಾಮಾನ್ಯವಾಗಿ ಇದನ್ನು ಸೊಂಟಕ್ಕೆ ಸಿಕ್ಕಿಸಿಕೊಂಡಿರುತ್ತಾರೆ

ಎಲೆಸುಡುರೋಗ: ಎಲೆಗಳು ಸುಟ್ಟಂತಾಗಿ ಬೆಳೆ ಒಣಗಿ ಹೋಗುವ ರೋಗ (ಕಾರ.ಜಿ)

ಎಲೆಸುರಂಗವಾಸಿ: ಬಟಾಣಿ ಮತ್ತಿತರ ಸಸ್ಯಗಳಿಗೆ ಬರುವ ರೋಗ

ಎಲೆಸುರುಳಿಪೂಚಿ: ಬತ್ತದ ಬೆಳೆಗೆ ಹತ್ತುವ ಒಂದು ಬಗೆಯ ಕೀಟ

ಎಲೆಸುರುಳಿರೋಗ: ಬತ್ತ, ಆಲೂಗಡ್ಡೆ ಮುಂತಾದ ಬೆಳೆಗೆ ಬರುವ, ಎಲೆಗಳು ಸುರುಳಿ ಸುತ್ತಿಕೊಳ್ಳುವ ರೋಗ (ಕೋಲಾ.ಜಿ)

ಎಲೆಹಚ್ಚಿಗೆ: ಎಲೆ ಬಳ್ಳಿಗಳಿಂದ ಕೊಯ್ದ ಎಲೆಗಳನ್ನು ಸಂಗ್ರಹಿಸುವ ಬುಟ್ಟಿ (ಶಿವ.ಜಿ)

ಎಲೆಹಾಕು: ೧. ತಾಂಬೂಲ ಹಾಕು ೨. ಊಟಕ್ಕೆ ಬಡಿಸು. **ಪ್ರ:** ಎಲೆ ಹಾಕಿದೆ ಊಟಕ್ಕೆ ಬನ್ನಿ (ಶಿವ.ಜಿ)

ಎಲೆಹೊದಿಕೆ ರೋಗ: ಬತ್ತದ ಬೆಳೆಗೆ ಬರುವ ರೋಗ

ಎಲ್ಕಟ್ಟು: ಎಲ್ಲೆಕಟ್ಟು; ಗಡಿ (ಮಂಡ್ಯ.ಜಿ)

ಎಲ್ಡುಸುಳಿ: ೧. ನಾಗರಕಲ್ಲು; ನಾಗಪ್ಪನ ಕಲ್ಲು; ನಾಗರ ಹಾವಿನ ಎರಡು ಸುಳಿ ೨. ನೆತ್ತಿಯ ಬಳಿ ಇರುವ ಎರಡು ಸುಳಿ. ಗಂಡುಮಕ್ಕಳಿಗೆ ತಲೆಯಲ್ಲಿ ಎರಡು ಸುಳಿಯಿದ್ದರೆ ಇಬ್ಬರು ಹೆಂಡತಿಯರು ಎನ್ನುತ್ತಾರೆ (ಮಂಡ್ಯ.ಜಿ)

ಎಲ್ಪಂಡೆ: ಬೆಂಕಿಯನ್ನು ದೊಡ್ಡದು ಮಾಡಲು ಬಳಸುವ ಸಾಧನ; ಊದುಗೊಳವೆ

ಎಲ್ಲಮ್ಮ: ೧. ಗ್ರಾಮದೇವತೆ. ತಮ್ಮ ಕ್ಷೇತ್ರದ ಗಡಿಯನ್ನು ಗುರುತಿಸುವ ಎಲ್ಲೆಯ ಕಲ್ಲನ್ನು ಜನ ಎಲ್ಲಮ್ಮ ಎಂದು ಕರೆಯತೊಡಗಿ ಪೂಜಿಸುತ್ತಿದ್ದರೆಂದು ಒಂದು ವಿವರಣೆ ಇದೆ. ಬೇವಿನ ಮರದ ಪ್ರತೀಕವೇ ಎಲ್ಲಮ್ಮ ಎಂಬ ಭಾವನೆಯಿದೆ ೨. ಜಮದಗ್ನಿಯ ಪತ್ನಿ ರೇಣುಕೆ

ಎಲ್ಲಮ್ಮನ ಜೋಗಿಗಳು: ಗೊರವರ ಗುರು ಹಿರೇಮೈಲಾರ ಒಡೆಯರ ಕುಲದೇವತೆ ಆದಿ ಹೊನ್ನಮ್ಮ ಅಥವಾ ಯಲ್ಲಮ್ಮನ ಆರಾಧಕರು (ಬೆಂಗ.ಜಿ)

ಎಲ್ಲಮ್ಮನೂಟ: ಎಲ್ಲಮ್ಮನ ನೈವೇದ್ಯಕ್ಕಾಗಿ ಕುರಿಕೊಯ್ದು ಮಾಡಿದ ಅಡುಗೆಯ ಊಟ

ಎಲ್ಲೆಮರಿ: ೧. ಮಾರಮ್ಮನಿಗೆ ಬೇರೆ ಬೇರೆ ಹಂತಗಳಲ್ಲಿ ಬಲಿಕೊಡುವ ಕುರಿಮರಿಗಳಲ್ಲೊಂದು. ಧೂಳುಮರಿ, ದೃಷ್ಟಿಮರಿ ಮೊದಲಾದ ಬಲಿಯೂ ಇವೆ (ತುಮ.ಜಿ) ೨. ಮಧುಗಿರಿ ದಂಡಿನ ಮಾರಮ್ಮನ ಜಾತ್ರೆಯಲ್ಲಿ ನಡೆಯುವ ಆಚರಣೆಯಲ್ಲಿ ಬಲಿಕೊಡುವ ಕುರಿಮರಿ

ಎವಿ: ೧. ಎವೆ; ರೆಪ್ಪೆ ೨. ಹುಚ್ಚು (ಚಿಮ.ಜಿ)

ಎಸಡಿ: ೧. ಏಡಿ; ನಳ್ಳಿ. ೨. ಗಾತ್ರದಲ್ಲಿ ದೊಡ್ಡದಾದ, ಕೆಂಪಾದ ಗಟ್ಟಿಯಾದ ಬೆನ್ನು ಕವಚ ಹೊಂದಿದ್ದು, ೨. ಒಂದರಿಂದ ಐದು ಕೆ.ಜಿ.ಯ ತನಕ ಬೆಳೆಯುವ ಒಂದು ಆಹಾರಯೋಗ್ಯ ಜಲಚರ (ಉಡು.ಜಿ)

ಎಸಡಿಕೂಳಿ: ಏಡಿಗಳನ್ನು ಹಿಡಿಯಲು ಬಳಸುವ ಕೂಳಿ **ನೋಡಿ–** ಇರುಗೂಳಿ

ಎಸಡ್‌ಬಾವು: ಕೈ ಬೆರಳು ಕಾಲು ಬೆರಳ ಸಂಧಿಗಳಲ್ಲಾಗುವ ಊತ. ಬೆರಳ ಸಂದಿಗಳಲ್ಲಿ ಏಡಿಯಾಕಾರ ಕಂಡುಬರುತ್ತದೆ (ದಕ.ಜಿ)

ಎಸಮುಚ್ಚ/ಎಸ್ಮುಚ್ಚ: ಅನ್ನ ಬಸಿಯಲು ಬಳಸುವ ಮರ ಅಥವಾ ಲೋಹದ ತಟ್ಟೆ

ಎಸಮುಚ್ಚಿಗೆ: ಹಿಡಿಯುಳ್ಳ ಅನ್ನ ಬಡಿಸುವ ತಟ್ಟೆ

ಎಸರಿಡು: ನೀರು ಕಾಯಲಿಡು (ಬೀದ.ಜಿ)

ಎಸರು: ೧. ಅಡಿಗೆಯ ಸಲುವಾಗಿ ಕಾಯಲು ಇಡುವ ನೀರು (ಬೆಂಗ.ಜಿ) ೨. ಅಕ್ಕಿ ಬೇಯಿಸಲು ಪಾತ್ರೆಯಲ್ಲಿ ಕುದಿಯುತ್ತಿರುವ ನೀರು (ಉಕ.ಜಿ) ೩. ಪಲ್ಲೆಮಾಡಲು ಕಾಳುಕುದಿಸಿ ತೆಗೆದ ತಿಳಿರಸ (ಧಾರ.ಜಿ) ೪. ಸಾರಿನ ತಿಳಿಯಾದ ಭಾಗ; ತರಕಾರಿ ಹೋಳುಗಳಿಲ್ಲದ ಭಾಗ. **ಪ್ರ:** ಬರೀ ಎಸರು ಹಾಕು ಹೋಳು ಬೇಡ

ಎಸರುಬರು: ನೀರು ಕುದಿಯತೊಡಗು (ಧಾರ.ಜಿ)

ಎಸಲುಸರಪಣಿ: ಹೆಂಗಸರ ತಲೆಯ ಆಭರಣ

ಎಸಳ್: ತಲೆಯಲ್ಲಿ ಧರಿಸುವ ಹೂವಿನಾಕಾರದ ಚಿನ್ನದ ಆಭರಣ (ದಕ.ಜಿ)

ಎಸಳು: ೧. ಗಿಡದ ತುದಿ (ಬೆಳ.ಜಿ) ೨. ಹೂವಿನದಳ ೩. ಎಳೆ (ಬೆಳ.ಜಿ) ೪. ಎಲೆ ೫. ತಲೆಗೂದಲು ೬. ದ್ವಿದಳ ಧಾನ್ಯಗಳಾದ ತೊಗರಿ, ಎಳ್ಳು, ಗೇರುಬೀಜಗಳ ಬೇಳೆ (ಬೆಳ.ಜಿ) ೭. ಬೆಂಡೋಲೆಯ ಒಂದು ವಿಧ (ಬಳ್ಳಾ.ಜಿ). **ಇರೂ:** *ಎಸ್‌ಲ್; ಎಸಲ್;* ಎಸಲು; ಎಸ್ಳು

ಎಸಳುತಂಬಾಕು: ತಾಂಬೂಲದೊಂದಿಗೆ ಅಗಿಯಲು ಹದಗೊಳಿಸಿದ ತಂಬಾಕಿನ ಮುರುಟಿದ ಉದ್ದನೆಯ ಎಲೆ (ಬಳ್ಳಾ.ಜಿ)

ಎಸಳುಹುಳಿ: **ನೋಡಿ–** ಎಸಳ್‌ಪುಳಿ

ಎಸಳ್‌ಪುಳಿ: *ರ್‍ಹೋಕಾರ್ಪಸ್ ಗೊಮೇಜಿಯಾನಸ್:* ವಾಟೆಹುಳಿ. ಅಡಿಗೆಗೆ ಹುಳಿ ರುಚಿ ತರಲು ಮತ್ತು ಔಷಧೀ ತಯಾರಿಯಲ್ಲಿ ಬಳಸಲಾಗುತ್ತದೆ (ದಕ.ಜಿ)

ಎಸಳ್‌ಬುಗುಡಿ: ಕಿವಿಗೆ ಧರಿಸುವ ಹೂವಿನಂತಹ ಒಂದು ಆಭರಣ (ದಕ.ಜಿ)

ಎಸೆ: (ನಾ) ೧. ಎತ್ತುಗಳು ಹೊತ್ತಿರುವ ನೊಗದ ಮೇಲಿನ ನೇಗಿಲು (ಮೈಸೂ.ಜಿ) ೨. (ಕ್ರಿ) ಬಿಸಾಡು; ಹೊರಹಾಕು: **ಪ್ರ:** ಆ ಕಸವನ್ನು ಆಚೆಗೆ ಎಸೆ

ಎಸೆಗಾರ: ತೆವಲು ಉಳ್ಳವನು (ತುಮ.ಜಿ)

ಎಸೆಹಾಕು: ಎತ್ತುಗಳ ಹೆಗಲ ಮೇಲಿರುವ ನೊಗಕ್ಕೆ ನೇಗಿಲು ಕುಂಟೆ ಮುಂತಾದವುಗಳನ್ನು ಬೋರಲಾಕಿ ಹೊಲಕ್ಕೆ ತೆಗೆದುಕೊಂಡು ಹೋಗುವ ಅಥವಾ ವಾಪಸ್ಸು ತರುವ ವಿಧಾನ (ದಾವ.ಜಿ)

ಎಸ್ಮುಚ್ಚ: ನೋಡಿ– ಎಸಮುಚ್ಚ (ಹಾಸ.ಜಿ)

ಎಳ್‌ಗಂದಿ/ಎಳುಗಂದಿ: ಆಗತಾನೆ ಕರು ಹಾಕಿದ ಹಸು ಅಥವಾ ಎಮ್ಮೆ (ದಕ.ಜಿ)

ಎಳಂಪ್ಲ: ನಿಶ್ಯಕ್ತ ವ್ಯಕ್ತಿ (ಬೆಂಗ್ರಾ.ಜಿ/ರಾಮ.ಜಿ)

ಎಳಂಬ್ರ: ಏಳು ಮಾರುದ್ದ ಬಟ್ಟೆ

ಎಳಕು: ಎಳಸು; ಎಳೆಯ; ಬಲಿಯದ (ಧಾರ.ಜಿ)

ಎಳಕ್ಕು (ಕ್ರಿ): ಸುಲಿ

ಎಳಗ: ೧. ಟಗರು ಮರಿ ೨. ಎಳಸು (ಮೈಸೂ.ಜಿ)

ಎಳಗಂಜಿ: ೧. ಎಳೆಯ ತೆಂಗಿನಕಾಯಲ್ಲಿ ಇರುವ ತೆಳ್ಳನೆಯ ಕಾಯಿ ೨. ಎಳೆಯ ದನ; ಆಗತಾನೆ ಕರುಹಾಕಿದ ದನ ೩. ಗಿಣ್ಣುಹಾಲು (ಚಿತ್ರ.ಜಿ)

ಎಳಗಂಜಿ ಹಾಲು: ಹಸುಗಳು ಕರು ಹಾಕಿದ ಎಂಟು ದಿನಗಳ ಒಳಗೆ ಕೊಡುವ ಹಾಲು. ಇದು ಸ್ವಲ್ಪ ಹಳದಿ ಬಣ್ಣಕ್ಕೆ ಇರುತ್ತದೆ (ಹಾಸ.ಜಿ). **ಇರೂ:** *ಎಳೆಗಂದಿ*

ಎಳಗರ: ೧. ಎಳೆಯ ಕರು ೨. ಬಳೆ ತೊಡಿಸುವವ (ಮೈಸೂ.ಜಿ)

ಎಳಗಾಯಿ ಬೀಳುವುದು: ಕ್ರಿಮಿಕೀಟಗಳ ಬಾಧೆಯಿಂದ ಅಡಿಕೆಯ ಎಳೆಯ ಕಾಯಿಗಳು ಉದುರುವುದು (ಚಿತ್ರ.ಜಿ)

ಎಳನಾಗು/ಎಳುನಾಗು: ಮನುಷ್ಯರ ನಾಲಗೆಯ ತಳಭಾಗದಲ್ಲಿ ಕಡು ಹಸಿರುಗಪ್ಪು ಗೆರೆ ಕಾಣಿಸಿಕೊಳ್ಳುವ ಮಾರಣಾಂತಿಕ ರೋಗ (ಮೈಸೂ.ಜಿ)

ಎಳನೀರುಹಿಂಡ್ಲು: ಎಳನೀರಿನ ಗೊಂಚಲು

ಎಳಪಾಗು: ಸೋಲು; ಬಳಲು (ಮಂಡ್ಯ.ಜಿ/ಚಾಮ.ಜಿ). **ಇರೂ:** *ಎಳವಾಗಿ*

ಎಳಬಟ್ಟು: ಹೊಸ್ತಿಲಿಗೆ ಕಾವಿ ಬಣ್ಣದಿಂದ ಸಾರಿಸಿ ಒಣಗಿದ ನಂತರ, ತಿಳಿ ಸುಣ್ಣದ ನೀರಿನಲ್ಲಿ ದಾರವನ್ನು ಅದ್ದಿ, ಹೊಸ್ತಿಲಿಗೆ ದಾರ ಎಳೆಯುವ ಕ್ರಮ. ನಂತರ ನಡುವೆ ರಂಗವಲ್ಲಿ ಚಿತ್ರ ಬಿಡಿಸುವರು (ಧಾರ.ಜಿ)

ಎಳಬಾರಿ: ಹಿಂದಿನವರು ಕಾಲುಗಳಿಗೆ ಧರಿಸುತ್ತಿದ್ದ ಕಬ್ಬಿಣದ ಬಳೆ (ಬೆಂಗ್ರಾ.ಜಿ)

ಎಳವ: ಕಣ ಬಳಿಯಲು ಬಳಸುವ ತೆಂಗಿನ ಗರಿಗಳ ಕಟ್ಟು (ತುಮ.ಜಿ)

ಎಳವಾರ/ಎಳ್ವಾರ: ೧. ಕೊಂಡದ ಸೌದೆ; ಜನರು ಗ್ರಾಮದೇವತೆಗಳ ಕೊಂಡಕ್ಕೆ ತರುವ ಸೌದೆ (ಬೆಂಗ್ರಾ.ಜಿ) ೨. ಮದುಮಗ ದಿಬ್ಬಣದಿಂದ ಧಾರೆಗೆ ಬರುವ ಮುನ್ನ ಮಡಿವಾಳಿ ಪೂಜಿಸಿ ತಂದು ಮುಹೂರ್ತದ ಕಂಬಕ್ಕೆ ಕಟ್ಟುವ ಅತ್ತಿ, ಆಲ, ಬಸರಿ, ನೇರಳೆ, ಕೋಲುಗಳ್ಳಿ ಮೊದಲಾದ ಹಾಲುಮರಗಳ ಸಣ್ಣ ರೆಂಬೆ ೩. ಬೇಲಿಯ ಮೇಲೆ ಬೆಳೆಯುವ ಒಂದು ಬಳ್ಳಿ; ಜನಿವಾರದ ಹಂಬು

ಎಳವಾರ ತರುವುದು: ಬಯಲುಸೀಮೆಯಲ್ಲಿ ನಡೆಯುವ ಮದುವೆಯ ಒಂದು ಆಚರಣೆ (ಮೈಸೂ.ಜಿ)

ಎಳವಿನಗಿಡ: ಎಳವು ರೋಗಕ್ಕೆ ಮದ್ದಾಗಿ ಬಳಸುವ ಔಷಧಯುಕ್ತ ಬೇರನ್ನು ಹೊಂದಿರುವ ಒಂದು ಸಸ್ಯ (ಮಂಗ.ಜಿ/ರಾಮ.ಜಿ)

ಎಳವು: ನೋಡಿ– ಎಳುವು

ಎಳವುಗಾರ: ಸಾರುವವನು; ಹೇಳುಗ

ಎಳಹೂಟಿ: ೧. ಆನೆ ಕಾಲಿಗೆ ಕಟ್ಟಿ ಎಳೆದಾಡಿಸಿ ಕೊಲ್ಲುವಿಕೆ (ಧಾರ.ಜಿ) ೨. ಎತ್ತುಗಳಿಗೆ ಬದಲಾಗಿ ಅಪರಾಧಿಗಳನ್ನು ಕಟ್ಟಿ ನೇಗಿಲನ್ನು ಎಳೆಸುವ ಶಿಕ್ಷೆ. **ಇರೂ:** *ಎಳೆಹೋಟಿ*

ಎಳಾಗ್ರ: ದನಗಳಿಗೆ ಬರುವ ಒಂದು ವಿಧದ ರೋಗ. ಹೃದಯಾಘಾತವಾಗುವುದು ಇದರ ಲಕ್ಷಣ (ಬಳ್ಳಾ.ಜಿ)

ಎಳಿ/ಎಳೆ: (ನಾ) ೧. ಮನೆಯ ಛಾವಣಿಗೆ ಹಾಕುವ ಮರದ ಪಟ್ಟಿ ೨. ಎರಳೆ; ಚಿಗರೆ ೩. ಕೂದಲಿನಂತೆ ಸಣ್ಣಗಿರುವ ದಾರ; ಹತ್ತಿ, ರೇಶ್ಮೆ, ತುಪ್ಪಟದ ದಾರ; – ತಂತು ೪. ಎಳೆಯ; ಚಿಕ್ಕ; ಇನ್ನೂ ಬಲಿತಿಲ್ಲದ ೫. ಸಪೂರವಾದ ಉದ್ದದ ಮರದ ಕಂಬ ೬. ಕೆಸರುಮಣ್ಣು ಹಾಗೂ ಸಗಣಿ ಬಗ್ಗಡಗಳನ್ನು ಕಡ್ಡಿಪೊರಕೆ ಅಥವಾ ಹಲಗೆಗಳಿಂದ ಎಳೆದು ಸಮ ಮಾಡುವಿಕೆ (ಬಳ್ಳಾ.ಜಿ) (ಕ್ರಿ) ೭. ಜಗ್ಗು

ಎಳಿಬತ್ತಿ: ಹತ್ತಿಯ ಎಳೆ ತೆಗೆದು ಮಾಡಿದ ಬತ್ತಿ

ಎಳಿಬಸ್ರಿ: ಎಳೆಯ ಬಸುರಿ (ದಕ.ಜಿ)

ಎಳಿಬಳಿ: ದುಂಡಾಗಿ ಸುತ್ತಿರುವ ನೂಲಿನ ಎಳೆಗಳ ಒಂದು ಕಂತೆ (ಬಳ್ಳಾ.ಜಿ)

ಎಳಿಬೊಂಡ: ತುಂಬಾ ಎಳಸಾಗಿರುವ ಎಳನೀರು (ದಕ.ಜಿ)

ಎಳಿಹುಗುಲು: ರಾಟೆಯಲ್ಲಿ ಕದಿರನ್ನು ಸಿಕ್ಕಿಸಲು ಕೊರೆದಿರುವ ಭಾಗ (ಬಳ್ಳಾ.ಜಿ)

ಎಳೀ: ಚಪ್ಪಲಿಗೆ ಸತ್ತ ಪ್ರಾಣಿಯ ಚರ್ಮದ ದಾರದಿಂದ ಹಾಕುವ ಹೊಲಿಗೆ

ಎಳುನಾಗು: ನೋಡಿ– ಎಳನಾಗು

ಎಳುವು/ಎಳವು: ೧. ಮಕ್ಕಳಿಗೆ ಬರುವ ರೋಗ. ಕೆಮ್ಮುತ್ತಿರುವ ಸಂದರ್ಭದಲ್ಲಿ ಮಗುವಿನ ಎದೆಯ ಅಕ್ಕಪಕ್ಕದ ಭಾಗಗಳು, ಪಕ್ಕೆಗಳು ಎಳೆಯುತ್ತಿರುವುದು ಕಾಣಿಸುತ್ತದೆ (ಕೋಲಾ.ಜಿ) ೨. ಬಾಲಗ್ರಹ (ಮೈಸೂ.ಜಿ)

ಎಳೆ: ನೋಡಿ– ಎಳೆ

ಎಳೆಅಷ್ಟಮಿ: ಅಣಜಿಗೆವ್ವನ ಪೂಜೆಮಾಡುವವರು ಬೀಜದ ಹತ್ತಿಯನ್ನು ಹೊಲದಿಂದ ತಂದು ಅದನ್ನೇ ಚಿನ್ನ ಎಂದು ಭಾವಿಸಿ ಪೂಜಿಸಿ ಅನಂತರ ಅದರಿಂದ ನೂಲು ತೆಗೆಯುವ ಆಚರಣೆ

ಎಳೆಕಕಳಿ: ತುಂಬಾ ಎಳೆಯದು (ಉಕ.ಜಿ). ***ಇರೂ:*** *ಎಳೆಹಾಬು (ಮೈಸೂ.ಜಿ)*

ಎಳೆಗಬ್ಬ: ಎಳೆಗರ್ಭ

ಎಳೆಗೌರಮ್ಮನ ಮೂರ್ತಿ: ನೀರು ತುಂಬಿದ ಕೊಡದ ಮೇಲಿರಿಸಿ ಪೂಜಿಸಲಾಗುವ ಮೂರ್ತಿ. ಉತ್ತರ ಕರ್ನಾಟಕದಲ್ಲಿ ಈ ಸಂಪ್ರದಾಯವಿದ್ದು ಬೇವಿನ ಮರದಿಂದ ಇದನ್ನು ಮಾಡಿರುತ್ತಾರೆ. ಈ ಮುಖವನ್ನು ಕೊಡದಲ್ಲಿ ಇಡುವುದಕ್ಕೆ ಅನುಕೂಲವಾಗುವಂತೆ ಇದರ ಕೊರಳನ್ನು ವಿನ್ಯಾಸಗೊಳಿಸಲಾಗಿದೆ. ಮುಂದಿನ ವರ್ಷಗಳಲ್ಲೂ ಇದೇ ಮೂರ್ತಿಯನ್ನು ಬಳಸುತ್ತಾರೆ

ಎಳೆಗೌರಿ: ನೀರು ತುಂಬಿದ ಚೊಂಬಿನ ಮೇಲೆ ವೀಳೆದೆಲೆ ತೆಂಗಿನಕಾಯಿ ಇಟ್ಟು ಪೂಜಿಸುವ ದೇವರೇ ಎಳೆಗೌರಿ. ಭಾದ್ರಪದ ಮಾಸದ ಅಮಾವಾಸ್ಯೆಯ ನಂತರ ನಾಲ್ಕನೆಯ ದಿವಸ ಗೌರಿ ಹುಟ್ಟುತ್ತಾಳೆ. ಮೊರದಿಂದ ಮಾಡಿದವಳು ದೊಡ್ಡಗೌರಿ. ಚೊಂಬು ಪೂಜೆಯಾಗುವವಳು ಎಳೆಗೌರಿ. ಜೋಕುಮಾರ ಈಕೆಯ ಮಗ (ದಾವ.ಜಿ)

ಎಳೆಜವನ: ದವನ ಎಂಬ ಸುಗಂಧಯುಕ್ತ ಸಸ್ಯದ ಎಳೆಯ ಎಲೆಗಳು. ಹೂಗಳೊಂದಿಗೆ ಕಟ್ಟಲು ಮತ್ತು ದೇವರಿಗೆ ಅರ್ಪಿಸಲು ಇದು ಬಳಕೆ

ಎಳೆದುಹಾಕು (ಕ್ರಿ): ಬಿತ್ತಿದ ಬೀಜ ನಾಟದಿದ್ದರೆ ಎತ್ತುಗಳನ್ನು ಬಳಸದೆ ಕೈಗಳಿಂದ ಕೋಲನ್ನು ಎಳೆದು ಮತ್ತೊಮ್ಮೆ ಬೀಜವನ್ನು ಹಾಕುವ ಕ್ರಮ (ಬಳ್ಳಾ.ಜಿ)

ಎಳೆಬತ್ತಿ (ನಾ): ೧. ಎಳೆಯಂತೆ ಇರುವ ಬತ್ತಿ (ಧಾರ.ಜಿ) ೨. ಹುಟ್ಟಿ ಏಳೆಂಟು ದಿನಗಳಾದ ಕೂಸು (ಬಳ್ಳಾ.ಜಿ)

ಎಳೆಬಾಂದ್ಗ: ಎಳೆದ ಗೆರೆಯ ಮೂಲಕ ನಿರ್ಣಯಿಸುವ ಜಮೀನಿನ ಎಲ್ಲೆ

ಎಳೆಬೇವು: ಎಳೆಯ ಎಲೆಗಳಿರುವ ಬೇವಿನ ಮರ (ತುಮ.ಜಿ)

ಎಳೆರಂಗೋಲಿ: ಚುಕ್ಕೆ ಇಲ್ಲದೆ ಗೆರೆಯಿಂದಲೇ ಬರೆಯುವ ರಂಗೋಲಿ. ಇದು ರಂಗೋಲಿಯ ಪ್ರಾಚೀನ ಪ್ರಕಾರ. ರಂಗೋಲಿ ಪುಡಿಗಳಿಂದ ಕೈ ಬೆರಳುಗಳ ಮೂಲಕ ಸರಾಗವಾಗಿ ಹಾಕುವ ರಂಗೋಲಿ. ಇದರಲ್ಲಿ ಒಂದೆಳೆ, ಎರಡೆಳೆ, ಮೂರೆಳೆ, ನಾಲ್ಕೆಳೆ ಮುಂತಾದ ರಂಗೋಲಿ ವಿಧಗಳಿವೆ

ಎಳೆಸಡ್ಡಿ: ಅಕ್ಕಡಿ ಹಾಕಲು ಉಪಯೋಗಿಸುವ ಕೊಳವೆ; ಬಿದಿರಿನ ಸಾಧನ (ಧಾರ.ಜಿ)

ಎಳ್ಕೊದ್ದಿ: ಎಳ್ಳಿನ ದಂಟುಗಳ ಸೂಡು (ಧಾರ.ಜಿ)

ಎಳ್ಗಂದಿ: ೧. ಎಳೆಯ ಕರುವಿದ್ದ ಆಕಳು ೨. ಕರು ಹಾಕಿದ ಎರಡು ಮೂರು ತಿಂಗಳವರೆಗಿನ ಆಕಳ ಹಾಲು (ಉಕ.ಜಿ).

ಎಳ್ಚಿಗಳಿ/ಎಳ್ಳನ ಚಿಗಳಿ: ಎಳ್ಳುಬೆಲ್ಲ ಬೆರೆಸಿ ಮಾಡಿದ ಪುಷ್ಟಿದಾಯಿಕ ಸಿಹಿ ತಿನಿಸು (ಧಾರ.ಜಿ)

ಎಳ್ತ: ೧. ನೋವು ಉಂಟಾಗುವಂಥ ಸ್ನಾಯುಗಳ ಎಳೆತ ೨. ಉಸಿರಾಟದ ತೊಂದರೆ (ಮೈಸೂ.ಜಿ)

ಎಳ್ನಾಗರ/ಎಳ್ನಾಗ್ರ: ೧. ಪುರುಷನ ಜನನೇಂದ್ರಿಯದ ಮೇಲೆ ಉಂಟಾದ ಪಕ್ಕು (ಧಾರ.ಜಿ) ೨. ದನಗಳ ಒಂದು ರೋಗ; ಜೊಲ್ಲು ಸೋರುವುದು, ಹೊಟ್ಟೆ ಉಬ್ಬರ, ನಾಲಗೆಯ ಅಡಿಯ ನರಗಳು ಕಪ್ಪಾಗಿರುವುದು ಇದರ ಲಕ್ಷಣ (ಕೋಲಾ.ಜಿ)

ಎಳ್ವಾರ: ನೋಡಿ– ಎಳವಾರ

ಎಳ್ಸೆಂಡ್ಗಿ: ಎಳ್ಳು, ಉದ್ದಿನ ಹಿಟ್ಟು, ಉಪ್ಪುಗಳನ್ನು ನೀರಲ್ಲಿ ಬೆರೆಸಿ ತಯಾರಿಸಿದ ಸೆಂಡಿಗೆ (ಬಿಜಾ.ಜಿ)

ಎಳ್ಳ್: ೧. ಅಗೆ ೨. ಎಳ್ಳು ೩. ಹೇರಳ

ಎಳ್ಳ್ ನೀರ್: ಎಳ್ಳುನೀರು. ಎಳ್ಳು ನೆನೆಸಿ ಬೆಲ್ಲ ಕಾಯಿ ರುಬ್ಬಿ ಮಾಡುವ ಪಾನೀಯ (ದಕ.ಜಿ)

ಎಳ್ಳಂಗ: ಶಿಶ್ನ ಊದಿಕೊಳ್ಳುವ ಒಂದು ರೋಗ (ಮಂಡ್ಯ.ಜಿ/ ಬೆಂಗ.ಜಿ)

ಎಳ್ಳಮಾವಾಸ್ಯೆ: ೧. ಸಂಕ್ರಾಂತಿಯ ಅಮಾವಾಸ್ಯೆ. ಹಿಂಗಾರಿ ಬೆಳೆಯನ್ನು ಅವಲಂಬಿಸಿರುವ ಬಿಜಾಪುರ ಗುಲ್ಬರ್ಗ ಜಿಲ್ಲೆಗಳಲ್ಲಿ ಇದನ್ನು ಹಬ್ಬವಾಗಿ ಆಚರಿಸುತ್ತಾರೆ ೨. ಪಿತೃಗಳಿಗೆ ತರ್ಪಣ ಬಿಡುವ ದಿನ ೩. ಪುಷ್ಯ ಮಾಸದ ಅಮವಾಸ್ಯೆ. ತಾಯಿಯನ್ನು ಕೊಂದ ಪರಶುರಾಮನ ಪಾಪ ಅಂದು ಪರಿಹಾರವಾಯಿತೆಂಬ ನಂಬಿಕೆಯಿದ್ದು, ಉತ್ತರ ಕರ್ನಾಟಕದಲ್ಲಿ ಪಾಂಡವರ ಪೂಜೆ ಮಾಡುವ, ಎಳ್ಳುಹೋಳಿಗೆಯನ್ನು ಚರಗ ಚೆಲ್ಲುವ ಮತ್ತು ವನಭೋಜನ ಮಾಡುವ ಸಂಪ್ರದಾಯವಿದೆ.

ಎಳ್ಳಮಾಸಿ ಕರಿ: ಎಳ್ಳಮಾಸ್ಯೆಯ ಮಾರನೆ ದಿನ ತಯಾರಿಸುವ ಕರಿದ ಪದಾರ್ಥ (ಗುಲ್ಬ.ಜಿ)

ಎಳ್ಳಿ: ೧. ಎರಳೆ; ಜಿಂಕೆ; ಸಾರಂಗ ೨. ಅರಳಿ (ಉಕ) ೩. ಹೇರಳೇಕಾಯಿ; ಕಂಚೀಕಾಯಿ. ***ಇರೂ:*** *ಯಳ್ಳಿ* ೪. ಇಟ್ಟಿಗೆ (ಬೀದ.ಜಿ)

ಎಳ್ಳಿ ಮಡ್ಗಿ: ಅರಳಿ ಮರದ ರಂಗೋಲಿ ನಕ್ಷೆ. ಹೋಮಹವನಗಳಲ್ಲಿ ಪುರೋಹಿತರು ಹೋಮಕುಂಡದ ಸುತ್ತ ಅಶ್ವತ್ಥ ಎಲೆಯ ನಕ್ಷೆ ಬರೆಯುವರು. ಬುಡಕಟ್ಟಿನವರೂ ಈ ಮರದ ನಕ್ಷೆಯನ್ನೇ ಬರೆದು ಪೂಜಿಸುವರು (ಉಕ.ಜಿ)

ಎಳ್ಳಿನಾಗರ: ನೋಡಿ– ಎಳ್ನಾಗರ (ಬೆಳ.ಜಿ)

ಎಳ್ಳಿಹುಳಿ: ಹುರಿಗಡಲೆ, ಹೇರಳೆಕಾಯಿ ಚೂರುಗಳನ್ನು ಬಳಸಿ ಮಾಡಿದ ಸಾರು. ಪಿತ್ತ ಜ್ವರ ಉಪಶಮನವಾಗುತ್ತದೆ (ಚಿಬ.ಜಿ)

ಎಳ್ಳುಂಡೆ: ಎಳ್ಳು ಹುರಿದು ಪುಡಿ ಮಾಡಿ ಬೆಲ್ಲದ ಪಾಕಕ್ಕೆ ಹಾಕಿ ಮಾಡುವ ಉಂಡೆ. ಗಣೇಶನ ಹಬ್ಬದಲ್ಲಿ ವಿಶೇಷವಾಗಿ ಮಾಡುವ ತಿನಿಸು (ಮೈಸೂ.ಜಿ)

ಎಳ್ಳುದೀಪ: ಎಳ್ಳೆಣ್ಣೆ ಅಥವಾ ಎಳ್ಳುಪೊಟ್ಟಣದಿಂದ ದೇವರಿಗೆ ಹಚ್ಚುವ ದೀಪ. ಸಾಮಾನ್ಯವಾಗಿ ಶನಿದೇವರಿಗೆ ಎಳ್ಳಿನ ದೀಪ ಹಚ್ಚುವ ಸೇವೆ ನಡೆಯುತ್ತದೆ (ಚಿತ್ರ.ಜಿ)

ಎಳ್ಳುನೀರು ಬಿಡು: ೧. ತರ್ಪಣ ಬಿಡು ೨. ಸತ್ತವರಿಗೆ ಬಾಯಲ್ಲಿ ಎಳ್ಳುಹಾಕಿ ನೀರು ಬಿಡುವುದು (ಮೈಸೂ.ಜಿ) ೩. ಕೈಬಿಡು; ಯಾವುದಾದರೊಂದು ವಿಷಯವನ್ನು ಶಾಶ್ವತವಾಗಿ ತ್ಯಜಿಸಿಬಿಡು ೪. ನಾಶಮಾಡು

ಎಳ್ಳುಬೀರು: ಸಂಕ್ರಾಂತಿ ಹಬ್ಬದ ದಿನ ನೆಂಟರಿಷ್ಟರಿಗೆ ಹುರಿಗಡಲೆ, ಕಡಲೆಬೀಜ, ಕೊಬ್ಬರಿ, ಬೆಲ್ಲ, ಸಕ್ಕರೆಅಚ್ಚು ಬೆರೆಸಿದ ಎಳ್ಳನ್ನು ಕೊಡುವುದು (ಮಂಡ್ಯ.ಜಿ)

ಎಳ್ಳುಬೆಲ್ಲ ಶಾಸ್ತ್ರ: ಹೆಂಡತಿ ಮೈನೆರೆದಿದ್ದಾಳೆಂದು ಅಳಿಯನಿಗೆ ಸೂಚನೆ ನೀಡಲು ಮಾಡುವ ಶಾಸ್ತ್ರ. ಮದುವೆಯಾದ ಹೆಣ್ಣು ತವರುಮನೆಯಲ್ಲಿಯೆ ಇರುತ್ತಿದ್ದ ದಿನಗಳಲ್ಲಿ ಆಕೆ ಮೈನೆರೆದ ನಂತರ ಹಣ್ಣು ಹೂಗಳ ಸಮೇತ ಎಳ್ಳು–ಬೆಲ್ಲವನ್ನು ತೆಗೆದುಕೊಂಡು ಬೀಗರ ಮನೆಗೆ ತೆರಳಿ, ಅಲ್ಲಿ ಅಳಿಯನನ್ನು ಹಸೆಯ ಮೇಲೆ ಕೂಡಿಸಿ, ಮರ್ಯಾದೆ ಮಾಡಿ ಆತನ ಪಂಚೆ ಶಲ್ಯಗಳ ಮೇಲೆ ಓಕುಳಿ ನೀರು ಸಿಂಪಡಿಸುತ್ತಿದ್ದರು

ಎಳ್ಳುಮೀನು: ಬೆಳ್ಳಗಿರುವ ಒಂದು ಜಾತಿಯ ಮೀನು. ಸುಮಾರು ನಲವತ್ತು ಕಿಲೋ ತೂಕವಿರುತ್ತದೆ (ಚಿಬ.ಜಿ)

ಎಳ್ಳುಸೂಸಲು: ಹುರಿದ ಎಳ್ಳು ಬೆಲ್ಲ ಸೇರಿಸಿ ಕುಟ್ಟಿದ ಪುಡಿ (ಮೈಸೂ.ಜಿ/ಮಂಡ್ಯ.ಜಿ). ***ಇರೂ:*** *ಎಳ್ಳುಂಡಿ; ಚಿಗಳಿ*

ಎಳ್ಳುಹುವ್ವಿನಸೀರಿ: ಎಳ್ಳಿನಾಕಾರದ ನಕ್ಷೆಯನ್ನುಳ್ಳ ಸೀರೆ (ಬಿಜಾ.ಜಿ)

ಎಳ್ಳುಹೋಳಿಗೆ: ಗೋಧಿ ಹಿಟ್ಟಿನ ಹಾಳೆಯಲ್ಲಿ ಎಳ್ಳುಪುಡಿ ಬೆಲ್ಲ ಸೇರಿಸಿ ಮಾಡುವ ಸಿಹಿ ತಿನಿಸು

ಏ

ಏಕ: ೧. ಒಂದು; ಒಂದು ಸಂಖ್ಯೆ ೨. ಉದ್ದಕ್ಕೂ; ಸಾಲಾಗಿ; ನೇರವಾಗಿ (ಮಂಡ್ಯ.ಜಿ) ೩. ಒಂದೇ ಸಲಕ್ಕೆ; ಒಂದೇ ನೆಗೆತಕ್ಕೆ (ಮೈಸೂ.ಜಿ)

ಏಕಕೂಟ: ಒಂದು ಗರ್ಭಗುಡಿಯುಳ್ಳ ದೇವಸ್ಥಾನ (ಚಿತ್ರ.ಜಿ)

ಏಕಜಾಮ: ನಡುರಾತ್ರಿ ಕಳೆದ ಮೊದಲ ಜಾಮ (ದಕ.ಜಿ)

ಏಕಜಿಕೆದ ಗುತ್ತು: ಪಾಡ್ದನಗಳಲ್ಲಿ ಬರುವ ಒಂದು ಗುತ್ತಿನ ಹೆಸರು (ದಕ.ಜಿ)

ಏಕತಾರ ಪಂತು: ಬುಡ್ಗಜಂಗಮರು ಹಾಕುವ ಸನ್ಯಾಸಿ ವೇಷ. ಜನರು ಇವರನ್ನು ಸಾಧು, ಭೈರಾಗಿ, ಗೋಸಾಯಿಗಳೆಂದು ಗುರುತಿಸುತ್ತಾರೆ. ಕಾವಿ, ರುದ್ರಾಕ್ಷಿ,

ಲಿಂಗ ಕಟ್ಟಿಕೊಂಡು ವಿಭೂತಿ, ಜಿಂಕೆಚರ್ಮ ಧರಿಸಿ, ಕೈಯಲ್ಲಿ ಕಮಂಡಲ ಹಿಡಿದು ಏಕತಾರಿ ಬಾರಿಸುತ್ತಾ, ರಾಮದಾಸ ಕೀರ್ತನೆ, ಯಾದಗಿರಿ ನರಸಿಂಹಸ್ವಾಮಿ ಕೀರ್ತನೆಯನ್ನು ಹಾಡುತ್ತಾ ಭಿಕ್ಷೆ ಬೇಡುತ್ತಾರೆ

ಏಕತಾರಿ/ಏಕದಾರಿ: ತಂಬೂರಿಯಂತಹ ತಂತಿವಾದ್ಯ. ಮೊಳ ಉದ್ದದ ಬಿದಿರಿಗೆ ತಂತಿ ಬಿಗಿದು, ಅಗಲವಾದ ಒಣಗಿದ ಸೋರೆಕಾಯಿ ಬುರುಡೆಯ ಮಧ್ಯದಲ್ಲಿ ಇದನ್ನು ಚುಚ್ಚಿ ಇದರ ಕೆಳಗೆ ಹಾಗೂ ಮೇಲೆ ತಂತಿ ಬರುವ ಹಾಗೆ ಮಾಡಿ ನಿರ್ಮಿಸಿದ ವಾದ್ಯ. ಬಿದಿರಿನ ಕಡ್ಡಿಯಿಂದ ಬಾರಿಸಿದಾಗ ಏಕನಾದ ಇಲ್ಲವೆ ಒಂದೇ ನಾದ ಹೊರಡುವುದರಿಂದ ಇದಕ್ಕೆ ಏಕತಾರಿ ಎನ್ನುತ್ತಾರೆ. ***ಇರೂ:*** ಏಕನಾದ *(ಮೈಸೂ.ಜಿ)*

ಏಕತಾರಿ ಮೇಳ: ತಂಬೂರಿ ಮೇಳ; ಭಜನೆ ಮೇಳ. ಗುರುಹಿರಿಯರ ಪುಣ್ಯತಿಥಿ, ಮರಣಸಂಸ್ಕಾರ, ಮಾರಮ್ಮ, ಲಕ್ಷ್ಮಿ ಮೊದಲಾದ ದೇವತೆಗಳ ಜಾತ್ರೆ, ಉತ್ಸವದ ಸಂದರ್ಭಗಳಲ್ಲಿ ಈ ಮೇಳದವರು ರಾತ್ರಿಯಿಡೀ ಏಕತಾರಿಯನ್ನು ಬಾರಿಸುತ್ತ ತತ್ವಪದ, ಶರಣರ ವಚನ, ದಾಸರ ಕೀರ್ತನೆಗಳನ್ನು ಹಾಡುತ್ತಾರೆ (ಗುಲ್ಬ.ಜಿ)

ಏಕದಾನಿ: ಮಣಿಗಳ ನಡುವೆ ಬಂಗಾರದ ಗುಂಡು ಹೊಂದಿರುವ ಸರ (ಉಕ.ಜಿ)

ಏಕದಾರಿ: ನೋಡಿ– ಏಕತಾರಿ

ಏಕನಕ್ಷತ್ರ: ಒಂದೇ ನಕ್ಷತ್ರದಲ್ಲಿ ಹುಟ್ಟಿದವರು. ಯಾರಾದರೂ ಅತಿಯಾದ ವಿರೋಧಿಗಳಾಗಿದ್ದರೆ ಅಥವಾ ಸ್ನೇಹದಿಂದ ಇದ್ದರೆ ಹೇಳುವ ಮಾತು **ಪ್ರ:** ಅವ್ರಿಬ್ರದ್ದೂ ಏಕನಕ್ಷತ್ರ

ಏಕನಾಥೇಶ್ವರಿ: ಚಿತ್ರದುರ್ಗದ ಒಂಭತ್ತು ರಕ್ಷಕ ದೇವತೆಯರಲ್ಲಿ ಒಬ್ಬಳು; ಪಾರ್ವತಿಯ ಅವತಾರ

ಏಕನಾದ: ನೋಡಿ– ಏಕತಾರಿ

ಏಕನಾದ ಹಿಡಿದುಕೊಳ್ಳು: ತಿರುಪೆ ಎತ್ತು; ಭಿಕ್ಷೆಗೆ ಹೋಗು

ಏಕನಾಯಕನ ಗಿಡ: *ಸಲಾಸಿಯಾ ರೆಟಿಕ್ಯುಲೇಟಾ:* ಬೇರಿನಲ್ಲಿ ಹಾವಿನ ವಿಷನಿವಾರಕ ಗುಣವಿರುವ ಒಂದು ಔಷಧೀ ಸಸ್ಯ. ಮಧುಮೇಹ ನಿಯಂತ್ರಿಸುವ ಗುಣವೂ ಈ ಸಸ್ಯಕ್ಕಿದೆ (ಚಾಮ.ಜಿ). ***ಇರೂ:*** *ಸಪ್ತಕಪಿ* (ಚಿತ್ರ ನೋಡಿ)

ಏಕನಾಳಿ: ಸರಿಯಾಗಿ ಊಟ ಮಾಡದೆ ಕೃಶನಾದ ವ್ಯಕ್ತಿ (ದಕ.ಜಿ)

ಏಕಮಾಲೆ ಸರ: ಒಂದೆಳೆ ಸರ (ದಕ.ಜಿ)

ಏಕವಾಡಿ: ನೋಡಿ– ಏಕೋಡಿ

ಏಕಾಂಡ್ಲ ಮಗ್ಗ: ಪೂರ್ತಿ ಒಂದು ಕಂಬಳಿಯನ್ನು ನೇಯಬಹುದಾದಷ್ಟು ವಿಶಾಲವಾದ ಮಗ್ಗ

ಏಕಾದಶಿ: ಉಪವಾಸ ವ್ರತದ ದಿನ. ಪ್ರತಿ ಹದಿನೈದು ದಿನಗಳಿಗೊಮ್ಮೆ ಬರುವ ಏಕಾದಶಿಯಂದು ಉಪವಾಸವಿರುವುದು ಎಲ್ಲ ವ್ರತಗಳಿಗಿಂತಲೂ ಶ್ರೇಷ್ಠ ಎಂದು ಹೇಳುವರು

ಏಕಾವಳಿಸರ: ಹೆಣ್ಣುಮಕ್ಕಳು ಕೊರಳಿಗೆ ಹಾಕುವ ಒಂದೆಳೆಯ ಸರ; ಟಿಕ್ಕಿ (ರಾಯ.ಜಿ). ***ಇರೂ:*** ಏಕೋಳಿಸರ

ಏಕಾಸಬ್ಬ: ಏಕಾದಶಿ ಹಬ್ಬ (ಕೋಲಾ.ಜಿ)

ಏಕಾಸಿ: ೧. ಏಕಾದಶಿ ೨. ಕಬ್ಬಿನ ಕೂಳೆ ಕೀಳಲು ಮತ್ತು ಅಗೆಯಲು ಬಳಸುವ ಕಬ್ಬಿಣದ ಸಾಧನ (ಮಂಡ್ಯ.ಜಿ)

ಏಕಿ: ಮೂತ್ರ

ಏಕಿಟ್ಟ: ಕುಟ್ಟಿದೊಣ್ಣೆ ಆಟದಲ್ಲಿ ಆಡುವ ಮೊದಲನೇ ಹಂತ. **ನೋಡಿ–** ಕುಟ್ಟಿ ದೊಣ್ಣೆ ಆಟ (ದಕ.ಜಿ)

ಏಕೋಡಿ/ಏಕವಾಡಿ: ಚಾತುರ್ಮಾಸದ ಒಂದು ವ್ರತ. ಮೂಕವಾಗಿ ಮೌನವಾಗಿ ಊಟ ಮಾಡುವುದು. ಊಟ ಮಾಡುವ ತಟ್ಟೆ ಅಥವಾ ಎಲೆಯಲ್ಲಿ ತಮಗೆ ಬೇಕಾದಷ್ಟು ಅನ್ನ ಸಾರು ಪಲ್ಯೆ, ಹಾಲು, ಮೊಸರು ಎಲ್ಲವನ್ನೂ ಒಂದೇ ಸಲಕ್ಕೆ ಬಡಿಸಿಕೊಂಡು ಊಟ ಮಾಡುವ ವ್ರತ (ಧಾರ.ಜಿ)

ಏಗಿ: ಯೋಗಿ (ಮಂಡ್ಯ.ಜಿ)

ಏಗು: (ಕ್ರಿ): ೧. ನಿಭಾಯಿಸು; ನಿರ್ವಹಿಸು; ಸಾಗಿಸು ೨. ರೋಷಗೊಳ್ಳು; ಕುದಿ (ಚಾಮ.ಜಿ) ೩. ಶ್ರಮಪಡು

ಏಟಿ: ೧. ನೆಲವನ್ನು ಹಸನು ಮಾಡುವ ಉಪಕರಣ ೨. ನಾಮ; ಉದ್ದನೆಯ ಗೆರೆ (ಚಿತ್ರ.ಜಿ)

ಏಟುಬೀಳು (ಕ್ರಿ): ಪೆಟ್ಟಾಗು

ಏಟುಹಾಕು: ಗುರಿ ಇಡು

ಏಡಕ: ೧. ಟಗರು ೨. ಕಿವುಡ ೩. ಎರಡು (ತುಮ.ಜಿ)

ಏಡಿಕುಣಿಭತ್ತ: ಕೆಂಪಕ್ಕಿ ತಳಿಯ ಭತ್ತ (ಬಳ್ಳಾ.ಜಿ)

ಏಡಿಚಟ್ನಿ: ಕಾರೇಡಿ ಅಥವಾ ಬೆಳ್ಳೇಡಿಯನ್ನು ಸುಟ್ಟು ಅಮಟೆಕಾಯಿ, ಹಸಿಮೆಣಸು, ಉಪ್ಪು ಹಾಕಿ ಒರಳಿನಲ್ಲಿ ಕುಟ್ಟಿ ತಯಾರಿಸುವ ಚಟ್ನಿ (ಮೈಸೂ.ಜಿ)

ಏಡಿಡೊಂಬ: ಏಡಿಗಳು ವಾಸಕ್ಕಾಗಿ ತೋಡಿಕೊಂಡ ತೂತು; ಬಿಲ. ಗದ್ದೆಯ ಹಾಳಿಯ ಅಂಚಿಗೆ ಏಡಿಗಳು ಡೊಂಬಗಳನ್ನು ಮಾಡಿ ವಾಸಿಸುತ್ತವೆ (ದಕ.ಜಿ)

ಏಡಿಯಾಟ: ಸಿದ್ದಿಯರ ಮದುವೆಯಲ್ಲಿ ಆಡುವ ಒಂದು ಆಟ (ಉಕ.ಜಿ)

ಏಡಿಹುಣ್ಣು: ೧. ಗಂಟುರೋಗ ೨. ಅರ್ಬುದ ೩. ಎಸಡಿಬಾವು; ಕಾಲ್ಬೆರಳ ಊತ (ಬೆಂಗ.ಜಿ)

ಏಡುಬೇಳೆ: ೧. ಎರಡು ಬೇಳೆ ೨. ಮೊಳಕೆಸಸಿ (ಮೈಸೂ.ಜಿ)

ಏಣೆ: ನಿಚ್ಚಣಿಕೆ

ಏಣೆಕಾಲು: ೧. ಏಣೆಯ ಅರ್ಧ ಪಟ್ಟಿಗಳು ೨. ಎತ್ತಿನ ಗಾಡಿಯ ಆರೆಕಾಲುಗಳನ್ನು ಜೋಡಿಸಲು ಬಳಸುವ ಮರ (ತುಮ.ಜಿ) **ನೋಡಿ–** ಆರೆ

ಏಣೆಗೆ: ಚೆನ್ನೆಮಣೆ ಆಟದ ಎಕ್ಕಡಿ ಪ್ರಕಾರದಲ್ಲಿ ಮಣೆಗೆ ಹಾಕಲು ಉಪಯೋಗಿಸುವ ಕಾಯಿಗಳು (ದಕ.ಜಿ)

ಏಣೆತೋಳು: ಚಕ್ಕಡಿಯ ಕುರುಗೈ ಮೇಲೆ ಎರಡೂ ಕಡೆ ನಿಲ್ಲಿಸುವ ಬಿದಿರಿನ ಹನ್ನೆರಡು ಗೂಟಗಳು (ಶಿವ.ಜಿ)

ಏಣೆದೇಣೆ: ಲೇವಾದೇವಿ ವ್ಯವಹಾರ (ಬೆಂಗ್ರಾ.ಜಿ)

ಏಣೆಬಂಡಿ: ಎರಡೂ ಬದಿಗೆ ಬಿದಿರ ತಡಿಕೆ ಕಟ್ಟಿರುವ, ಪ್ರಯಾಣಕ್ಕೆ ಸಿದ್ಧವಾದ ಎತ್ತಿನಬಂಡಿ (ಬಳ್ಳಾ.ಜಿ)

ಏಣೆಬಿರಿಹಗ್ಗ: ಏಣೆಬಂಡಿಯ ತಳ ಮತ್ತು ಏಣೆಗಳನ್ನು ಹೊಂದಿಸಿ ಬಿಗಿಯಲು ಬಳಸುವ ಹಗ್ಗ (ಬಳ್ಳಾ.ಜಿ)

ಏಣೆಲು: ನೋಡಿ– ಎಣೆಲು

ಏಣು: ೧. ದಿಬ್ಬ; ಉಬ್ಬು ೨. ನೇಣು ೩. ಹರಿತವಾದ ಅಂಚು; ತುದಿ (ಮಂಡ್ಯ.ಜಿ) ೪. ಕರು ತಾಯಿಯನ್ನು ನೆನಪಿಸಿಕೊಂಡು ಅರಚುವುದು (ತುಮ.ಜಿ)

ಏಣುಹಲ್ಲು: ಚೂಪಾದ ಹಲ್ಲು



ಏತ: ೧. ಬಾವಿಯಿಂದ ನೀರನ್ನು ಮೇಲೆತ್ತುವ ಸಾಧನ ೨. ಹಿಂದೆ ಹೊಲಗದ್ದೆ ತೋಟಗಳಿಗೆ ನೀರುಣಿಸುತ್ತಿದ್ದ ವ್ಯವಸ್ಥೆ; ಯಾತ ೩. ತಗ್ಗಿನ ನೀರನ್ನು ಬಾಣಲಿಯಿಂದ ತುಂಬಿ ಮೇಲುಕಾಲುವೆಗೆ ಹಾಕುವ ನೀರಾವರಿ ಪದ್ಧತಿ

ಏತದ ಕೋಲು: ಏತದಲ್ಲಿ ಬಾನಿಯನ್ನು ಸೇರಿಸಿ ಕಟ್ಟಿರುವ ಕೋಲು. **ಇರೂ:** ಏತ್ತದ ಕಟ್ಟಿಗೆ

ಏತದ ಬಾನಿ: ಬಾವಿಯಿಂದ ನೀರನ್ನು ಎತ್ತಿ ತೋಟಗಳಿಗೆ ಹಾಯಿಸುವ ಬಾನಿ (ಗುಲ್ಬ.ಜಿ)

ಏತರಾಟೆ: ನೆಲಬಾವಿಯಿಂದ ಎತ್ತುಗಳ ಮೂಲಕ ಕಪ್ಲಿ ಹೊಡೆದು ನೀರನ್ನು ಮೇಲೆತ್ತಲು ಬಳಸುವ ಒಂದು ಸಾಧನ

ಏತಾಪೇರಿ: ಎತ್ತಿನ ಗಾಡಿಯ ನೊಗ ಮುಂತಾದುವುಗಳ ಮೇಲೆ ಆಕಡೆ ಒಬ್ಬರು ಈ ಕಡೆ ಒಬ್ಬರು ಕುಳಿತು ಆಡುವ ಆಟ. **ಇರೂ:** ಚೊಯ್ಯಾ ಪೀಯ್ಯಾ (ಮಂಡ್ಯ.ಜಿ)

ಏತ್‌ಪಿಚ್ಚಿ: ಲಗೋರಿಯನ್ನು ಹೋಲುವ ಒಂದು ಹೊರಾಂಗಣ ಆಟ; ಗೇರುಬೀಜಗಳನ್ನು ಒಂದು ವೃತ್ತದ ಒಳಗಿಟ್ಟು ಕಲ್ಲಿನಿಂದ ಹೊಡೆದು ಅವುಗಳನ್ನು ವೃತ್ತದಿಂದ ಹೊರಕ್ಕೆ ಬೀಳುವಂತೆ ಮಾಡಿ ಬೀಜಗಳನ್ನು ಗೆಲ್ಲುವ ಆಟ (ದಕ.ಜಿ)

ಏದಿನಮುಳ್ಳು: ಮುಳ್ಳುಹಂದಿಯ ಮುಳ್ಳು

ಏದು: ಮುಳ್ಳುಹಂದಿ

ಏದೇಶಿ: **ನೋಡಿ–** ಐದೇಶಿ

ಏನಾಬಿರಿ ಹಗ್ಗ: ಏಣಿ ಬಂಡಿಯ ತಳ ಮತ್ತು ಏಣಿಗಳನ್ನು ಹೊಂದಿಸಿ ಬಿಗಿಯಲು ಬಳಸುವ ಹಗ್ಗ (ಬಳ್ಳಾ.ಜಿ)

ಏಪೆ: ಮೀನು ಹಿಡಿಯಲು ಬಳಸುವ ಸಾಧನ. **ಇರೂ:** ಯಾಪೆ

ಏರಂಡ: ಹರಳುಗಿಡ; ಔಡಲ (ಬೀದ.ಜಿ)

ಏರಕ್ಕಿ: ಒಂದು ಹೇರು ಅಕ್ಕಿ; ಬಸುರಿ ಬಯಕೆಯ ಶಮನಕ್ಕಾಗಿ ತೌರಿನಿಂದ ತರುವ ಅಕ್ಕಿ (ಬೀದ.ಜಿ)

ಏರಗಲ್ಲು: ಹಿಂದಿನಿಂದ ಹತ್ತಲು ಅಳವಡಿಸಿರುವ ಬಂಡಿಯ ಮಧ್ಯದಲ್ಲಿರುವ ಕಟ್ಟಿಗೆ

ಏರಜೆ: ಏರುಪ್ರದೇಶ; ಏರುದಾರಿ (ದಕ.ಜಿ)

ಏರಣಿಗ: ಅಕ್ಕಸಾಲಿಗ

ಏರಮ: ದ್ವೇಷ

ಏರಾಜ್ಯ: ಗಟ್ಟದ ಮೇಲಿನ ಸೀಮೆ (ದಕ.ಜಿ)

ಏರಾಯ್ಸು (ಕ್ರಿ): ೧. ಸುತ್ತಿಕೊಳ್ಳು ೨. ಎತ್ತರಿಸು; ದನಿ ಏರಿಸು ೩. ದೇವರಿಗೆ ಹೂವು ಪತ್ರೆ ಮುಡಿಸು. **ಇರೂ:** *ಗೇರಾಯ್ಸು*

ಏರಿ: ೧. ಒಂದು ಜಾತಿಯ ಮೀನು. ಬಹಳ ರುಚಿಯೆಂದೂ ಒಮ್ಮೆ ಇದನ್ನು ತಿಂದವನು ಮತ್ತೆ ಮತ್ತೆ ಅದಕ್ಕಾಗಿ ಹಂಬಲಿಸುವನೆಂದೂ ಪ್ರತೀತಿ (ದಕ.ಜಿ) ೨. ಎತ್ತರವಾದ ಪ್ರದೇಶ ೩. ಕೆರೆಯ ಸುತ್ತಲಿನ ಕಟ್ಟೆ. **ಪ್ರ:** ಎತ್ತು ಏರಿಗೆ ಎಳೆದರೆ ಕೋಣ ನೀರಿಗೆ ಎಳೀತು

ಏರಿಪಟ್ಟಿ: ಏರಿಯ ಕೆಲಸಕ್ಕಾಗಿ ಬಿಟ್ಟ ಜಮೀನು

ಏರಿಸು: ೧. ಅರ್ಪಿಸು; ದೇವರಿಗೆ ಒಪ್ಪಿಸು (ಶಿವ.ಜಿ). **ಪ್ರ:** ದೇವರಿಗೆ ಹೂವು ಏರಿಸಿದ ೨. ಮೇಲಕ್ಕೇರುವಂತೆ ಮಾಡು; – ಹತ್ತಿಸು. **ಪ್ರ:** ತೋಳೇರಿಸಿ ಸಗಣಿ ಬಳೀತಿದ್ದ ೩. ನೇಯ್ಗೆ ಆರಂಭಿಸಲು ಮಗ್ಗಕ್ಕೆ ಹಾಸನ್ನು ಹಾಕು

ಏರು: (ನಾ) ೧. ಎತ್ತರವಾದ ಪ್ರದೇಶ; ದಿಬ್ಬ; ಗುಡ್ಡ ಪ್ರದೇಶ ೨. ಗಿಡ ಮರಗಳನ್ನು ಹತ್ತುವುದು (ಧಾರ.ಜಿ) ೩. ಹಾಡುಗಾರಿಕೆಯಲ್ಲಿ ಎತ್ತರದನಿಯಲ್ಲಿ ಹಾಡಬೇಕಾದ ಭಾಗ (ಕ್ರಿ) ೪. ಹತ್ತು; ಮೇಲಕ್ಕೆ ಹೋಗು

ಏರುಂಬಳ್ಳಿ: ಒಂದು ಸಸ್ಯ. ನೀರಿನಲ್ಲಿ ಅರೆದು ಹಚ್ಚಿದರೆ ವಾತರೋಗ ಗುಣ. ಬೇರಿನೆಣ್ಣೆ ಪಿತ್ತದೋಷಹರ. **ಇರೂ:** *ಬೆಕ್ಕಿನ ತೊಡ್ಡಿನ ಬಳ್ಳಿ*

ಏರುಕಟ್ಟು (ಕ್ರಿ): ೧. ಒಡ್ಡುಹಾಕು ೨. ಉಳುಮೆ ಮಾಡಲು ಸಿದ್ಧಪಡಿಸು (ಮೈಸೂ.ಜಿ/ಚಾಮ.ಜಿ)

ಏರುಕಾಲು: ಈಚು; ನೇಗಿಲ ಒಂದು ಭಾಗ

ಏರುಗಚ್ಚೆ: ಮೊಳಕಾಲಿನವರೆಗೆ ಎತ್ತಿ ಕಟ್ಟಿದ ಕಚ್ಚೆ (ಕೊಡ.ಜಿ)

ಏರುಗಡಿ: ಕೆಳಗಿನಿಂದ ಮೇಲಕ್ಕೆ ಕಡಿದಾಗುತ್ತಾ ಹೋಗುವ ದಾರಿ; ಏರುದಾರಿ

ಏರುಗಾವು: ಹೆಚ್ಚುತ್ತಿರುವ ಕಾವು (ಧಾರ.ಜಿ)

ಏರುಗೂಳಿ: ಮೀನುಶಿಕಾರಿಯ ಒಂದು ವಿಧಾನ (ಹಾಸ.ಜಿ)

ಏರುಪದ: ವೀರ, ರೌದ್ರ ರಸಗಳನ್ನು ಅಭಿವ್ಯಕ್ತಿಸಲು ಏರುದನಿಯಲ್ಲಿ ಹಾಡುವ ಹಾಡು (ದಕ.ಜಿ)

ಏರುಹಾಕು (ಕ್ರಿ): ೧. ಧಾನ್ಯ ಕುಟ್ಟು ೨. ಅಸಲು ಬಡ್ಡಿ ಸೇರಿಸಿ ಹೊಸದಾಗಿ ಒಪ್ಪಂದಪತ್ರ ಬರೆಸು ೩. ಮಣ್ಣನ್ನು ಬೆಳೆಯ ಬುಡಕ್ಕೆ ಎತ್ತರವಾಗಿ ಹಾಕು (ಬಳ್ಳಾ.ಜಿ)

ಏರೆ: ನೆಟ್ಟಗೆ; ನೇರ ಕುಳಿತುಕೊಳ್ಳು

ಏರ್ಕಂಬ ಬಡಿ (ಕ್ರಿ): ಎತ್ತರದ ಕಲ್ಲಿನ ಮೇಲೆ ತೆನೆಯ ಕಂತೆಯನ್ನು ಬಡಿಯುವ ಮೂಲಕ ಬತ್ತ ಉದುರಿಸುವುದು (ಬಳ್ಳಾ.ಜಿ)

ಏರ್ಕಾಲಿನ್‌ಹಗ್ಗ: ಗಾಡಿಗೆ ಬಳಸುವ ಹಗ್ಗ (ತುಮ.ಜಿ)

ಏರ್ಕಾಲುಮರ: ಮೂಕಿಮರ; ಗಾಡಿಗೆ ಬಳಸುವ ಉದ್ದನೆಯ ಮರ (ತುಮ.ಜಿ)

ಏರ್ಕೋಲ: ನೋಡಿ– ಎರುಕೋಲ

ಏರ್ಗಿಚ್ಚ: ಸಿಟ್ಟಿನ ಉನ್ಮಾದ; ಅತಿಸಿಟ್ಟು

ಏರ್ಪುರೋಗ: ಶೇಂಗಾ ಬೆಳೆಯ ಒಂದು ರೋಗ (ಚಿತ್ರ.ಜಿ)

ಏಲಕ್ಕಿಕಸ್ತ್ರ: ಏಲಕ್ಕಿಯ ಹೂ ಬಳ್ಳಿ. ಇದರಲ್ಲಿ ಏಲಕ್ಕಿ ಗೊಂಚಲಾಗಿ ಬಿಡುತ್ತದೆ (ಉಕ.ಜಿ)

ಏಲಕ್ಕಿತಾಳಿ: ಏಲಕ್ಕಿ ಗಿಡದ ಬುಡದಿಂದ ಹೊರಡುವ ಟಿಸಿಲು. ಇದರಲ್ಲಿ ಒಂದು ಟಿಸಿಲು ಸಸಿಯಾಗಿ ಬೆಳೆದರೆ ಮತ್ತೊಂದು ಹೂಬಳ್ಳಿಯಾಗಿ ನೆಲಕ್ಕೆ ಹಬ್ಬುತ್ತದೆ (ಉಕ.ಜಿ)

ಏಲಕ್ಕಿಸರ: ೧. ಏಲಕ್ಕಿಯಿಂದ ಮಾಡಿದ ಹಾರ ೨. ಏಲಕ್ಕಿಯಾಕಾರದ ಬಂಗಾರದ ಗುಂಡುಗಳನ್ನು ಪೋಣಿಸಿ ರೂಪಿಸಿದ ಒಂದು ಆಭರಣ (ಶಿವ.ಜಿ)

ಏಲದೆ: ಏಳು ಕೋಣೆಗಳು (ದಕ.ಜಿ)

ಏವು: ೧. ಹರಿಯುವ ನೀರಿಗೆ ಅಡ್ಡಲಾಗಿ ಕಟ್ಟುವ ಕಟ್ಟೆ; ಚಿಕ್ಕ ಒಡ್ಡು (ಚಿಮ.ಜಿ) ೨. ಏರಿ (ಮಂಡ್ಯ.ಜಿ)

ಏಸಿನಪಾಲು: ಶಿಕಾರಿ ಮಾಡಿದವನಿಗೆ ವಿಶೇಷವಾಗಿ ಕೊಡುವ ಮಾಂಸದ ಪಾಲು

ಏಸುಜಾರಿ: ಬೆನ್ನ ಮೇಲೆ + ಚಿಹ್ನೆ ಇರುವ ಜಾರಿಮೀನು (ಉಡು.ಜಿ)

ಏಳ್‌ಎಳ್ಪತ್ತ ಗಂಗೆ: ಆಳವಾದ ಕಡಲು (ದಕ.ಜಿ)

ಏಳಂಡಿ: ಗೊಂಡರು ನೊರೆಹಾಲು ಎಂಬುದಕ್ಕೆ ಬಳಸುವ ಪದ (ಉಕ.ಜಿ)

ಏಳಟ್ಟಿ: ೧. ನೆರೆಹೊರೆ ೨. ಏಳು ಹಟ್ಟಿ

ಏಳಮದ್ದಾನ: ಮಟಮಟ ಮಧ್ಯಾಹ್ನ

ಏಳಿ: ವೀಳ್ಯ; ಎರಡು ಎಲೆ ಹಾಗೂ ಒಂದು ಅಡಿಕೆಯನ್ನು ಒಳಗೊಂಡಿರುವ ವೀಳ್ಯ (ಉಕ.ಜಿ)

ಏಳಿಗೆಹೊಂದು: ತಲೆಯೆತ್ತು

ಏಳು: ೧. ಎದ್ದು ನಿಲ್ಲು, ಮೇಲೇಳು. **ಪ್ರ:** ಏಳಲಾರದ ಅತ್ತೆಗೆ **ಪ್ರ:** ಎತ್ತಲಾರದ ಸೊಸೆ ೨. ಎಚ್ಚರವಾಗು; ನಿದ್ರೆ ತಿಳಿ. **ಪ್ರ:** ಏಳುತಲೆ ಎದ್ದು ಯಾರ್‍ಯಾರ ನ್ಯನುದೇನು ೩. ಸಪ್ತ; ಒಂದು ಸಂಖ್ಯಾವಾಚಿ. **ಪ್ರ:** ಏಳುಮಲೆ, ಏಳು ಸಮುದ್ರ, ಏಳು ಹೆಡೆ ಸರ್ಪ, ಏಳು ಸುತ್ತಿನ ಕೋಟೆ

ಏಳುಆಳಿನಕೋಲು: ಕೋಲಾಟದ ಒಂದು ಗತ್ತು

ಏಳುಎಂಟಾಗು: ಬಹಳ ಕಷ್ಟವಾಗು (ದಕ.ಜಿ)

ಏಳುಕೊಳ್ಳದ ಎಲ್ಲಮ್ಮ: ಸವದತ್ತಿ ಎಲ್ಲಮ್ಮ. ಸವದತ್ತಿಯ ಏಳುಕೊಳ್ಳಗಳಲ್ಲಿ ಸಂಚರಿಸಿ ಬರುತ್ತಾಳೆಂದು ನಂಬಿರುವಂಥ ಎಲ್ಲಮ್ಮ ದೇವಿ

ಏಳುಕೋಟಿ: ಮೈಲಾರಲಿಂಗ; ತಮ್ಮ ಆರಾಧ್ಯದೇವ ಮೈಲಾರ ಲಿಂಗನಿಗೆ ಏಳುಕೋಟಿ ಭಕ್ತರಿದ್ದಾರೆ ಎಂಬುದಕ್ಕೆ ಗೊರವರು ಹೇಳುವ ಮಾತು (ಬೆಂಗ.ಜಿ)

ಏಳುಕೋಟೆ ಬಸವಣ್ಣ: ಇದೊಂದು ಹೆಣ್ಣು ಮಕ್ಕಳ ಆಚರಣೆ. ದೀಪಾವಳಿಯಂದು ಹೆಣ್ಣುಮಕ್ಕಳು ಒಬ್ಬರ ಅಂಗಳದಲ್ಲಿ ಸೇರಿ ಏಳುಕೋಟೆಯ ಬಸವಣ್ಣನನ್ನು ಮಣ್ಣಿನಲ್ಲಿ ಅಥವಾ ಕಲ್ಲಿನಲ್ಲಿ ರಚಿಸುವರು. ಕೋಟೆಯ ಮಾದರಿಯನ್ನು ಮಾಡಿ ಮಧ್ಯದಲ್ಲಿ ಬಸವಣ್ಣನ ಗದ್ದುಗೆಯ ಮೇಲೆ ಬಸವಣ್ಣನ ಮೂರ್ತಿಯನ್ನು ಇಟ್ಟು, ವಿಧವಿಧ ಹೂವುಗಳಿಂದ ಪೂಜಿಸಿ, ಚಿಗುಳಿ ತಂಬಿಟ್ಟು ಹಾಲು ಬೆಲ್ಲ ನೈವೇದ್ಯ ಮಾಡಿ, ಹಣ್ಣು ಕಾಯಿ ಒಡೆದು, ಕಡಲೆ ಮಂಡಕ್ಕಿ ಫಲಾಹಾರ ಮಾಡುವರು. ರಾತ್ರಿಯಿಡೀ ಹಾಡುಗಳನ್ನು ಹೇಳುತ್ತಾ, ಕೋಲಾಟ ಹಾಕುತ್ತಾ, ಬಸವಣ್ಣನನ್ನು ಮೂರ್‍ನಾಲ್ಕು ಬಾರಿ ಕೆರೆಗೆ ಕರೆದುಕೊಂಡು ಹೋಗಿ ನೀರು ಕುಡಿಸಿಕೊಂಡು ಬರುವ ಅನುಕರಣೆಯೂ ಉಂಟು. (ಶಿವ.ಜಿ)

ಏಳುಚಜ್ಜೆ: ಏಳು ಅಂತಸ್ತು ಉಳ್ಳ ಮಹಡಿ ಮನೆ (ಶಿವ.ಜಿ)

ಏಳುಚಿಟಿನಕಟಿಗೆ: ಕೋಲಾಟದ ಒಂದು ಬಗೆ. ತುಮಕೂರು ಜಿಲ್ಲೆಯ ಕೆಲವೆಡೆಯ ಗೊಲ್ಲರು ಕೋಲುಗಳನ್ನು ಕಟ್ಟಿಗೆ ಎನ್ನುತ್ತಾರೆ

ಏಳುಪಿಸಿ: ತುಂಬಾ ಕಿರಿಕಿರಿ ಮಾಡುವವ (ಬಳ್ಳಾ.ಜಿ)

ಏಳುಬೀಳು: ೧. ಉಬ್ಬರವಿಳಿತ ೨. ಜೀವನದ ಕಷ್ಟ ನಷ್ಟ

ಏಳುಮಾರುದ್ದಕೂದಲು: ತುಂಬ ನೀಳವಾದ ಉದ್ದಕೂದಲು. ಜನಪದ ಕಥೆಗಳಲ್ಲಿ ಸುಂದರಿಯೊಬ್ಬಳ ವರ್ಣನೆಗೆ ಬಳಕೆಯಾಗುವ ಪದ

ಏಳುಮೆಟ್ಟಿನಹುಲಿ: ದೊಡ್ಡಗಾತ್ರದ ಹುಲಿ; ಏಳು ಹೆಜ್ಜೆಗಳಷ್ಟು ಉದ್ದವಿರುವ ಪಟ್ಟೆಹುಲಿ

ಏಳುಮೇಳ: ಸಪ್ತವಾದ್ಯ (ದಕ.ಜಿ)

ಏಳುರಾಜನ ಅರಸಿ: ಜೈನರ ಪದ್ಮಾವತಿಯಕ್ಷಿ. ಅವಳ ತಲೆಯ ಮೇಲೆ ಏಳುಹೆಡೆಸರ್ಪದ ಲಾಂಛನವಿದೆ

ಏಳುಸಮುದ್ರ: ಜನಪದ ಕಥೆಗಳಲ್ಲಿ ಉಲ್ಲೇಖಗೊಳ್ಳುವ ಕಾಲ್ಪನಿಕ ಸಮುದ್ರಗಳು. ರಾಕ್ಷಸನ ಜೀವ ಏಳು ಸಮುದ್ರದ ಒಳಗಿನ ಭದ್ರಕೋಟೆಯಲ್ಲಿ ಜೀವದ ಗಿಳಿಯಲ್ಲಿತ್ತು ಎಂಬ ವರ್ಣನೆಯನ್ನು ಕಥೆಗಳಲ್ಲಿ ಕಾಣಬಹುದು

ಏಳುಸಿದ್ದರು: ಏಳುಕೊಳ್ಳದ ಎಲ್ಲಮ್ಮನನ್ನು ಪರೀಕ್ಷಿಸುವುದಕ್ಕಾಗಿ ನಾನಾ ರೀತಿಯ ತೊಂದರೆಗಳನ್ನು ಕೊಟ್ಟು ಆಕೆಯ ಮಹಿಮೆಗೆ ಶರಣಾದ ಏಳು ಋಷಿಗಳು

ಏಳುಸುತ್ತಿನ ಮಲ್ಲಿಗೆ: ಮಲ್ಲಿಗೆಯ ಒಂದು ಪ್ರಭೇದ. ಏಳು ಸುತ್ತಿನ ದಳಗಳನ್ನು ಹೊಂದಿದ್ದು ವಿಶಿಷ್ಟ ಪರಿಮಳ ಹೊಂದಿರುವ ಹೂ (ಮೈಸೂ.ಜಿ)

ಏಳುಹನ್ನೊಂದಾಗು: ೧. ನಾಶವಾಗು; ಹಾಳಾಗು. **ಪ್ರ:** ಅವನ ಆಸ್ತಿಯೆಲ್ಲಾ ಏಳು ಹನ್ನೊಂದಾಯ್ತು ೨. ಹದಗೆಡು; ಕೆಟ್ಟ ಪರಿಸ್ಥಿತಿ ಉಂಟಾಗು (ಮೈಸೂ.ಜಿ)

ಏಳುಹಳ್ಳು/ಏಳುಹರಳು: ಏಳು ಹರಳುಗಳಿಂದ ಕೂಡಿದ ದುಂಡನೆಯ ಮೂಗಿನ ಆಭರಣ; ಹೂವಿನಾಕಾರದ ಬಂಗಾರದ ಆಭರಣ (ಬೆಳ.ಜಿ)

ಏಳುಹೆಡೆಸರ್ಪ: ಏಳು ತಲೆಗಳಿರುವ ಹಾವು. ಸಾಮಾನ್ಯವಾಗಿ ಜನಪದ ಕಥೆಗಳಲ್ಲಿ ಉಲ್ಲೇಖಗೊಳ್ಳುವ ಕಾಲ್ಪನಿಕ ಸರ್ಪ. ಹಿಂದೂ ಪುರಾಣ, ಕಾವ್ಯಗಳಲ್ಲಿಯೂ ಇದರ ಉಲ್ಲೇಖವಿದೆ

ಏಳೂವರಿ: ಮಹಾ ಸೋಮಾರಿ (ಬಳ್ಳಾ.ಜಿ)

ಏಳೆಲೆಮರ: ಪಶ್ಚಿಮಘಟ್ಟದ ಇಳಿಜಾರುಗಳಲ್ಲಿ ಕಂಡುಬರುವ ಮರ. ಇದರ ತೊಗಟೆಯಿಂದ ಏಳೆಲೆರಸ ಎಂಬ ಕಷಾಯ ಮಾಡುತ್ತಾರೆ. ಇದನ್ನು ಸಪ್ತಮಣಿಮರ ಎಂದೂ ಕರೆಯುತ್ತಾರೆ. **ನೋಡಿ–** ಏಳೆಲೆ ರಸ

ಏಳೆಲೆರಸ: ತುಳುನಾಡಿನಲ್ಲಿ ಆಷಾಢದ ಅಮಾವಾಸ್ಯೆಯಂದು ನಸುಕಿನಲ್ಲಿಯೇ ಸಪ್ತಮಣಿ ಮರ ಅಥವಾ ಏಳೆಲೆಮರದ ತೊಗಟೆಯಿಂದ ತಯಾರಿಸುವ ಕಷಾಯ. ಕಾಳುಮೆಣಸು, ಜೀರಿಗೆ, ಉಪ್ಪು ಸೇರಿಸಿ ತಯಾರಿಸಿದ ಈ ರಸವನ್ನು ಖಾಲಿ ಹೊಟ್ಟೆಯಲ್ಲಿ ಕುಡಿಯುವುದರಿಂದ ವರ್ಷವಿಡೀ ಯಾವ ರೋಗವೂ ಬರುವುದಿಲ್ಲ ಎಂಬ ನಂಬಿಕೆ ಇದೆ

ಏಳ್ಗೇಣ್ಕುದುರಿ: ಏಳು ಗೇಣೆತ್ತರದ ಕುದುರೆ (ಧಾರ.ಜಿ)

ಏಳ್ಮಲೆ: ಏಳುಮಲೆ; ಮಲೆ ಮಾದೇಶ್ವರನ ವಾಸಸ್ಥಳ (ಚಾಮ.ಜಿ)

ಏಳ್ಹೆಚ್ಚು: ೧. ಬೆಸಸಂಖ್ಯೆ ಹೇಳಬಾರದು ಎಂಬ ನಂಬಿಕೆಯಿಂದ ಬಳ್ಳ, ಕೊಳಗ, ಬುಟ್ಟಿಗಳಲ್ಲಿ ದವಸ ಅಳೆಯುವಾಗ ಏಳು, ಒಂಬತ್ತು ಸಂಖ್ಯೆ ಹೇಳದೆ ಏಳ್ಹೆಚ್ಚು, ಒಂಬತ್ಹೆಚ್ಚು ಎನ್ನುವರು (ಬೆಂಗ.ಜಿ) ೨. ಗಂಡ ಅಥವಾ ಭಾವನ ಹೆಸರು ಎಂಕ್ಟ ಅಥವಾ ಎಂಟನಾಗಿದ್ದರೆ ಸೂಚಿಸುವ ಪದ (ದಕ.ಜಿ)

ಐ

ಐಂದ್ರಿ: ೧. ಪೂರ್ವದಿಕ್ಕು ೨. ಇಂದ್ರನ ಹೆಂಡತಿ; ಶಚಿ

ಐಂಸರ: ಕೇರೆಹಾವು (ದಕ.ಜಿ)

ಐಕಳಪ: ಆಶ್ಚರ್ಯಸೂಚಕ ಪದ (ಚಿಮ.ಜಿ)

ಐಕ್ಳು/ಐಕಳು: ಹೈಕಳು; ಮಕ್ಕಳು (ದಕ). **ಪ್ರ:** ಐಕ್ಳು ಅವ್ರಪ್ನ ದಾರಿ ಕಾಯ್ತಾ ಕೂತಿದ್ದೋ

ಐಗಂಚಿ: ಬಹುದೂರದ ಊರು; ಬಹಳ ದೂರ. **ಪ್ರ:** ಅದೇನು ಐಗಂಚಿಯೇ? ಒಂದು ಗಂಟೆಯಲ್ಲಿ ಊರು ತಲುಪಬಹುದು (ಮಂಡ್ಯ.ಜಿ)

ಐಗಂಚಿಮರ: ಮುಗಿಲೆತ್ತರದ ಮರ (ಮಂಡ್ಯ.ಜಿ)

ಐಗಂಡಗ: ಐದು ಖಂಡಗ (ಗುಲ್ಬ.ಜಿ)

ಐಗಳ: ಐವತ್ತು ಸೇರುಗಳ ಅಳತೆ; ಐದು ಕೊಳಗ; ದವಸ ಧಾನ್ಯಗಳನ್ನು ಅಳೆಯಲು ಈ ಅಳತೆಯನ್ನು ಉಪಯೋಗಿಸಲಾಗುತ್ತದೆ. ಹತ್ತು ಸೇರು ಹಿಡಿಸುವ ಕೊಳಗದಲ್ಲಿ ಐದು ಬಾರಿ ಅಳೆದರೆ ಐಗಳ ಆಗುತ್ತದೆ (ಧಾರ.ಜಿ) ೨. ಕಾಳು ತುಂಬಿದ ಹತ್ತು ಚೀಲಗಳ ಮಾನ; ಐದು ಕೊಳಗಗಳ ಮಾನ (ರಾಯ.ಜಿ). **ಇರೂ:** *ಐಗೊಳ*

ಐಗಳಮಠ: ಅಯ್ಯಗಳ ಮಠ; ಪಾಠಶಾಲೆ (ಮಲೆ)

ಐಗಳು: ಶ್ರೀಮಂತರ ಮನೆಯಲ್ಲಿ ವಾಸವಿದ್ದು ಸುತ್ತಮುತ್ತಲಿನ ಮಕ್ಕಳಿಗೆ ನಾಲ್ಕಾರು ವರುಷ ಪಾಠ ಹೇಳಿಕೊಡುವವರು (ಮಲೆ)

ಐಗಾರ: ಗುರಿಗಾರ

ಐಗೇಣಿನ ಕುಂಟಿದಿಂಡ: ಎರೆಭೂಮಿಯಲ್ಲಿ ಉಪಯೋಗಿಸುವ ಕೃಷಿ ಸಾಧನ (ಗುಲ್ಬ.ಜಿ)

ಐಗೋಳು: ೧. ಅಯ್ಯನವರು; ಸ್ವಾಮಿಗಳು; ಗುರುಗಳು; ಜಂಗಮರು (ಗುಲ್ಬ.ಜಿ) ೨. ಆಗೇರರ ಗುರುಮಠದ ಮುಖ್ಯಸ್ಥ (ಉಕ.ಜಿ). **ಇರೂ:** *ಐನೋರು*

ಐಗೋಳ್ಕರ್ಕೋಣ: ಸ್ವಾಮಿಗಳನ್ನು ಮನೆಗೆ ಕರೆದು ಪಾದಪೂಜೆ ಮಾಡಿ ಊಟ ಮಾಡಿಸುವುದು (ಗುಲ್ಬ.ಜಿ)

ಐಗೋಳ್ತಿ: ಜಂಗಮ ಜಾತಿಯ ಮಹಿಳೆ (ಧಾರ.ಜಿ)

ಐಚೋಜಿಗ: ಬಹಳ ಆಶ್ಚರ್ಯ (ಶಿವ.ಜಿ)

ಐಚೋದ್ಯ: ಆಶ್ಚರ್ಯ

ಐಟಿಗಿ: ದಾರ ಸುತ್ತುವ ವಸ್ತು (ಗುಲ್ಬ.ಜಿ)

ಐಟು: ಯೋಗ್ಯ (ಬಳ್ಳಾ.ಜಿ)

ಐಡಿಸು (ಕ್ರಿ): ಬೇರೆ ಪಾತ್ರೆಗೆ ತುಂಬು

ಐತ: ೧. ಸಿಂಗಾರ (ದಕ.ಜಿ). **ಇರೂ:** *ಐತೋ* ೨. ಆದಿತ್ಯವಾರ ಹುಟ್ಟಿದವನಿಗೆ ಇಡುವ ಹೆಸರು (ಮಲೆ)

ಐತಸಿಂಗಾರ: ಭೂತನರ್ತಕ ಮಾಡಿಕೊಳ್ಳುವ ಸಿಂಗಾರ

ಐತಾಳ: ಹಿಡಮಾಡಿದ ಕೋಣಗಳಿಗೆ ಕೊಡುವ ಒಂದು ವಿಧದ ಔಷಧೀ ಸಸ್ಯ

ಐತ್ತಿ: **ನೋಡಿ–** ಐತ್ಗೆ

ಐತ್ಗೆ/ಐತ್ತಿ: ಪಿತ್ತದಿಂದ ಮೈ ತುಂಬಾ ಏಳುವ ಕೆಂಪುಹುಣ್ಣು; ಐತ್ಗಮ್ಮ (ಗುಲ್ಬ.ಜಿ). **ಇರೂ:** *ಪೈತ (ಮೈಸೂ.ಜಿ)*, *ಪೈತ್ಗೆ (ಬೆಂಗ್ರಾ.ಜಿ/ಮಂಡ್ಯ.ಜಿ)*

ಐತ್ವಾರ: ಆದಿತ್ಯವಾರ; ಭಾನುವಾರ (ಚಾಮ.ಜಿ)

ಐದಕ್ಕಿರಂಗ: ರಂಗೋಲೆಯಿಂದ ಬರೆದ ರಂಗ (ಚಾಮ.ಜಿ)

ಐದಗಿತ್ಯಾರು: ಐದು ಜನ ಮುತ್ತೈದೆಯರು. ಶಾಸ್ತ್ರ/ಆರತಿ ಮುಂತಾದುದನ್ನು ಮಾಡಲು ಐದು ಜನ ಮುತ್ತೈದೆಯರು ಅವಶ್ಯಕ (ಶಿವ.ಜಿ)

ಐದ ದೀನಸದ ಪಳಾರ: ಕಬ್ಬಿನ ಬೆಳೆಯನ್ನು ಕಟಾವು ಮಾಡುವ ಮೊದಲು ಅಥವಾ ಹೊಲದಲ್ಲಿ ಬೆಳೆದ ಮರಗಿಡಗಳನ್ನು

ಕಡಿಯುವ ಮೊದಲು ಪೂಜೆ ಮಾಡಿ ಐದು ತಿನಿಸುಗಳ (ಚುರಮುರಿ, ಕಾರದಾನಿ, ಬೆಲ್ಲದ ಚೂರು, ಬಿಸ್ಕೇಟು, ಪುಟಾಣಿ ಬೇಳೆ) ಐದು ಸಣ್ಣ ಗುಡ್ಡೆ ಇಟ್ಟು ನಂತರ ಜನರಿಗೆ ಹಂಚುವರು (ಶಿವ.ಜಿ)

ಐದನೆಯ ಕಟ್ಟುವೇಷ: ಏಳು ಕಟ್ಟುವೇಷಗಳಲ್ಲಿ ಒಂದು (ದಕ.ಜಿ)

ಐದರಗಡಗ: ಕುರುಬರ ಹೆಣ್ಣು ಮದುವೆ ವೇಳೆ ಧರಿಸುವ ಬೆಳ್ಳಿಯ ಕೈಕಡಗ (ತುಮ.ಜಿ)

ಐದಾಗೋಣಿ: ಕುಟ್ಟಿದೊಣ್ಣೆ ಆಟದಲ್ಲಿ ಮುಂಗೈ ಮೇಲೆ ಕುಟ್ಟಿಯನ್ನಿಟ್ಟು ಆಡುವುದು (ದಕ.ಜಿ)

ಐದಾನದಬುತ್ತಿ: ಮದುವೆ ಮೊದಲಾದ ಶುಭ ಸಂದರ್ಭಗಳಲ್ಲಿ ಮುಹೂರ್ತದ ಕಂಬ, ನೀರಿನ ಹಂಡೆ, ಒನಕೆ, ಚಪ್ಪರ ಮುಂತಾದವುಗಳಿಗೆ ಕಟ್ಟುವ ಐದು ಧಾನ್ಯಗಳ ಸಣ್ಣ ಗಂಟು

ಐದಾನುಗಂಟು: ಐದು ಧಾನ್ಯಗಳ ಗಂಟು. ಬತ್ತ, ರಾಗಿ, ಅವರೆ, ಅಲಸಂದೆ, ಉದ್ದಿನ ಕಾಳು ಮುಂತಾದ ಐದು ಧಾನ್ಯಗಳನ್ನು ಅರಿಶಿನದ ಬಟ್ಟೆಯ ಚೂರಿನಲ್ಲಿ ಕಟ್ಟಿದ ಗಂಟು. ಮದುವೆ ಮುಂತಾದ ಶುಭಸಂದರ್ಭಗಳಲ್ಲಿ ಈ ಐದಾನುಗಂಟನ್ನು ಬಳಸುತ್ತಾರೆ

ಐದಾಳಿಸರ: ಮಾಂಗಲ್ಯ ಸರ (ಬಿಜಾ.ಜಿ) **ನೋಡಿ–** ಐರದಾಳಿ

ಐದಾಳು: ಐದು ಜನರ ತೂಕದಷ್ಟು; ಪ್ರಾಣಿಯ ತೂಕವನ್ನು ಅಂದಾಜಿನಲ್ಲಿ ಹೇಳುವ ವಿಧಾನ

ಐದಿಗಿತ್ತಿ: ಮನೆಯ ಮುತ್ತೈದೆ ಹೆಣ್ಣುಮಗಳು. ದಂಡಿಕಟ್ಟಿಕೊಂಡು ರೇಶ್ಮೆ ಸೀರೆ ಉಟ್ಟು, ಆರತಿ ಹಿಡಿದು, ಪ್ರತಿ ಶುಭ ಕಾರ್ಯಕ್ರಮದಲ್ಲಿ ಮುಂದೆ ಇರಬೇಕಾದ ಮನೆಯ ಮಗಳು

ಐದುಕಣ್ಣಿರುವ ಅರಿಷಿಣ: ಮಂಗಳಕಾರ್ಯಗಳಲ್ಲಿ ಬಳಸುವ ಐದು ಕವಲುಗಳಿರುವ ಅರಿಷಿಣದ ತುಂಡು (ಶಿವ.ಜಿ)

ಐದುಗಿರಿಯವರು: ವೀರಶೈವ ನೇಕಾರರ ಮದುವೆಗಳಲ್ಲಿ ಶಾಸ್ತ್ರಮಾಡಲು ನೇಮಕಗೊಂಡ ಐದು ಜನ ಮುತ್ತೈದೆಯರು (ಬಾಗ.ಜಿ). **ಇರೂ:** ಐದಗಿತ್ಯಾರು

ಐದುಗುಂಜು ಆಟ: ಹೆಣ್ಣುಮಕ್ಕಳಾಡುವ ಅಣ್ಣೆಕಲ್ಲಾಟದ ಒಂದು ಬಗೆ. **ಇರೂ:** *ಅಣ್ಣೆಕಲ್ಲಾಟ, ಗಿಚ್ಚೆ ಆಟ*

ಐದುತನ: ಹೆಣ್ಣಿನ ಕಡೆ ಇಬ್ಬರು ಗಂಡಿನ ಕಡೆ ಮೂವರು ಮುತ್ತೈದೆಯರು

ಐದುತಾಸು: ೧. ಐದುಗಂಟೆ. **ಪ್ರ:** ಬಂದಿ ಬರೋಕೆ ಇನ್ನೂ ಐದು ತಾಸು ಐತ್ರೀ ೨. ಅರ್ಧರಾತ್ರಿಗೆ ಸ್ವಲ್ಪ ಮುಂಚೆ; ನಡುರಾತ್ರಿ

ಐದುದಿನ್ನಿನ ದಾಣೆಗಳು: ಜೋಳ, ಗೋದಿ, ಭತ್ತ, ಸಜ್ಜೆ, ಅಗಸಿ ಮುಂತಾದ ಯಾವುದಾದರೂ ಐದು ತರಹದ ಧಾನ್ಯಗಳನ್ನು ಘಟಸ್ಥಾಪನೆಗಾಗಿ ಕಲಸಿಡುವುದು (ಗುಲ್ಬ.ಜಿ)

ಐದುನೀರು: ಸಮಗಾರರಲ್ಲಿ ಮದುವೆಯಾದ ನಂತರ ವಧುವನ್ನು ಗಂಡಿನ ಮನೆಗೆ ಇಬ್ಬರು ಹಿರಿಯ ಮಹಿಳೆಯರೊಡನೆ ಕಳಿಸಿಕೊಡುತ್ತಾರೆ (ಅಕ್ಕ/ಸೋದರತ್ತೆ). ಅಲ್ಲಿ ಮುಂದಿನ ಐದು ದಿನಗಳು ನವಜೋಡಿಯು ಮನೆಯವರೆಲ್ಲರ ಮುಂದೆ ಪರಸ್ಪರ ಸಿಹಿ ತಿನ್ನಿಸುವಂತೆ ಮಾಡುವ ಶಾಸ್ತ್ರವೇ ಐದುನೀರು

ಐದುಮುಡಿ: ಮೈನೆರೆದ ಹುಡುಗಿಯರಿಗೆ ಕೂದಲನ್ನು ಐದು ಭಾಗವಾಗಿ ಕಟ್ಟುವ ಒಂದು ಆಚರಣೆ (ಕೊಡ.ಜಿ)

ಐದುಶುಕ್ರವಾರದ ಪೂಜೆ: ಶ್ರಾವಣ ಮಾಸದ ಶುಕ್ರವಾರಗಳಲ್ಲಿ ಸಾಯಂಕಾಲ ಮಾಡುವ ಲಕ್ಷ್ಮೀ ಪೂಜೆ

ಐದೂರ: ಒಂದು ಗೊತ್ತಾದ ದೂರ

ಐದೆ: ಮುತ್ತೈದೆ; ಸುವಾಸಿನಿ; ಸುಮಂಗಲೆ

ಐದೆಳೆಸೂತ್ರ: ಐದು ಎಳೆಗಳ ದಾರ. ಲಿಂಗಾಯತರ ವಿವಾಹ ವಿಧಿಗಳಲ್ಲಿ ಪಂಚಕಲಶಗಳಿಗೆ ಇದನ್ನು ವಿಧ್ಯುಕ್ತವಾಗಿ ಸುತ್ತಲಾಗುತ್ತದೆ

ಐದೇಶಿ/ಐದೇಶಿ/ಐದೇಸಿ: ೧. ಮಗು ಹುಟ್ಟಿದ ಐದನೆಯ ದಿನ ಮಾಡುವ ಪೂಜೆ. ಇದು ಶಟಗವ್ವನ ಪೂಜೆ. ಗಂಡಾಗಿದ್ದರೆ ಐದು ಜನ ಗಂಡು ಮಕ್ಕಳನ್ನೂ, ಹೆಣ್ಣಾಗಿದ್ದರೆ ಐದು ಜನ ಹೆಣ್ಣು ಮಕ್ಕಳನ್ನೂ ಕರೆದು ಮಾಂಸಾಹಾರದ ಅಡುಗೆ ಮಾಡಿ ಬಡಿಸುತ್ತಾರೆ. ಅಂದು ರಾತ್ರಿ ಶೆಟಗವ್ವ ಮಗುವಿನ ಹಣೆಬರಹ ಬರೆಯುತ್ತಾಳೆಂಬ ನಂಬಿಕೆ ಇದೆ. ಅದಕ್ಕಾಗಿ ಜಾಲಿ ಕಂಟಿಯ ಸಣ್ಣ ರೆಂಬೆಯನ್ನು ತಂದು ಅದಕ್ಕೆ ತಾಳಿ ಕಟ್ಟಿ ಅರಿಶಿನ ಕುಂಕುಮ ಹೂಗಳಿಂದ ಪೂಜೆ ಮಾಡುತ್ತಾರೆ. ರಾತ್ರಿ ಒಂದು ಪಾತ್ರೆಯಲ್ಲಿ ಜೋಳ ಅಥವಾ ಗೋಧಿ ಹಿಟ್ಟು ಹಾಕಿ, ಸ್ವಲ್ಪವೂ ಉಬ್ಬುತಗ್ಗಿಲ್ಲದಂತೆ ಸಮತಟ್ಟಾಗಿ ಮಾಡಿ ಮತ್ತೊಂದು ಪಾತ್ರೆ ಮುಚ್ಚಿಟ್ಟಿರುತ್ತಾರೆ. ಬೆಳಗ್ಗೆ ಅದನ್ನು ತೆರೆದಾಗ ಅದರ ಮೇಲೆ ಶೆಟಗವ್ವನ ಹೆಜ್ಜೆ ಗುರುತು ಮೂಡಿರುತ್ತದೆ ಎಂದು ಹೇಳುತ್ತಾರೆ. ೨. ಮಗು ಹುಟ್ಟಿದ ಮನೆಯವರು ಐದನೇ ದಿನದಂದು ಮಾಡುವ ವಿಶೇಷಪೂಜೆ. ಅಂದು ಸೂಲಗಿತ್ತಿಯನ್ನು ಕರೆದು ಬಟ್ಟೆ, ಬಳೆ, ಹಣ ಇತ್ಯಾದಿ ನೀಡುವುದು ರೂಢಿ (ಉಕ)

ಐನ: ೧. ಊರದೇವರ ಸಾಮೂಹಿಕ ಪೂಜೆ ೨. ಅಯನ ೩. ಸರಿಯಾದ ೪. ಮುಖ್ಯ; ಪ್ರಧಾನ, **ಪ್ರ:** ಐನುಬೆಳೆ (ಉಕ.ಜಿ) ೫. ಹಾಲು ಮೊಸರು ಮಜ್ಜಿಗೆ ಹೇರಳವಾಗಿ ಇರುವ ಮನೆ; ಹೈನು (ದಕ) ೬. ಮುಖವಾಡಗಳು (ಉಕ.ಜಿ)

ಐನಾತಿ: ೧. ಸಮೃದ್ಧವಾದ; ಒಳ್ಳೆಯ ತಳಿಯ (ಮಂಡ್ಯ.ಜಿ). **ಪ್ರ:** ಐನಾತಿ ಕರ ಅವರಟ್ಟೀಲಿ ಇರೂದು ೨. ಬಹುಮುಖ್ಯ; ಬಹುದೊಡ್ಡ ೩. ಫಲವತ್ತಾದ; ಪಕ್ವವಾದ ೪. ಬುದ್ಧಿವಂತ; ನಿಪುಣ; ಶ್ರೇಷ್ಠ (ಬೆಂಗ್ರಾ.ಜಿ) ೫. ಕಿಲಾಡಿ ಸ್ವಭಾವದ; ಚಾಲಾಕಿ ೬. ಚಲುವು; ಸೊಗಸು (ಮಂಡ್ಯ.ಜಿ/ಚಿಮ.ಜಿ)

ಐನೀರು: ೧. ಮೊದಲಬಾರಿ ಋತುವಾದ ಹುಡುಗಿಗೆ ಐದನೇ ದಿನ ಮಾಡುವ ಶಾಸ್ತ್ರಗಳು (ದಾವ.ಜಿ) ೨. ಮಲೆನಾಡಿನ ಗೌಡಲು ಜನಾಂಗದಲ್ಲಿ ಋತುಮತಿಯಾದ ಹೆಣ್ಣನ್ನು ಹಲಸಿನ ಮರದ ಬಳಿ ಕುಳ್ಳಿರಿಸಿದ ಬಳಿಕ ಎಲ್ಲ ಹೆಂಗಸರೂ ಆಕೆಯನ್ನು ಮನೆಗೆ ಕರೆದುಕೊಂಡು ಬಂದು ಸ್ನಾನ ಮಾಡಿಸುವುದು

ಐನೀರೆರೆ: ಐನೀರು ಎರೆಯುವುದು. ಹೆಣ್ಣು ಋತುಮತಿಯಾದಾಗ ಮಾಡಿಸುವ ಸ್ನಾನದ ಆಚರಣೆ; ಋತುಮತಿಯಾದ ಹನ್ನೆರಡು ಅಥವಾ ಹದಿನಾಲ್ಕನೇ ದಿನ ಹುಡುಗಿಯನ್ನು ತುಳಸೀಕಟ್ಟೆ ಹತ್ತಿರ ಕುಳ್ಳಿರಿಸಿ, ವೀಳ್ಯದೆಲೆ ಅಡಿಕೆ ಕೈಗೆ ಕೊಟ್ಟು, ಮಡಿವಾಳ್ತಿ ಮೂಲಕ ಐದು ತಂಬಿಗೆ ನೀರನ್ನು ತಲೆಗೆ ಸುರಿದು ಸ್ನಾನ ಮಾಡಿಸುವರು. ಆಕೆ ಋತುಮತಿಯಾದಾಗ ಧರಿಸಿದ ಬಟ್ಟೆಯನ್ನು ಮಡಿವಾಳ್ತಿಗೆ ಕೊಡುವರು

ಐನು: ಹೈನು; ಪಶುಸಂಪತ್ತು. **ಪ್ರ:** ಗಂಡುಮಕ್ಕಳಿದ್ದ ಮನೆಗೆ ಐನು ಭಾಗ್ಯ ಕೊಡು ತಾಯಿ

ಐನೋರ ಪಾದಪೂಜೆ: ವೀರಶೈವರ ಒಂದು ಸಂಪ್ರದಾಯ. ಜನಾಂಗದ ಗುರುಸ್ಥಾನದಲ್ಲಿರುವ ಅಯ್ಯನವರನ್ನು ಮನೆಗೆ ಕರೆಸಿ ಪಾದಗಳನ್ನು ತೊಳೆದು ಪೂಜಿಸಿ, ಉಣಬಡಿಸಿ ಆಶೀರ್ವಾದ ಪಡೆದುಕೊಳ್ಳುವ ಸಂಪ್ರದಾಯ (ದಾವ.ಜಿ)

ಐನ್‌ಕೊರಾಜಿ: ತಾಜಾ ಮೋಸಗಾರ; ದೊಡ್ಡ

ಐನ್ಮನೆ: ಕೊಡವಜನಾಂಗದ ಪ್ರತಿಕುಟುಂಬದ ಪೂರ್ವಿಕರ ಮನೆ; ಮೂಲ ಮನೆ

ಐನ್‌ರಾಗಿ: ೧. ಹೈನುರಾಗಿ; ಮುಂಗಾರಿನ ರಾಗಿಬೆಳೆ ೨. ಉತ್ತಮ ಗುಣಮಟ್ಟದ ರಾಗಿ

ಐಬಹತ್ತು: ಗುರುತು ಹತ್ತು, ಗುರುತಿಸು (ಶಿವ.ಜಿ)

ಐಬು: ೧. ಕುಂದು; ಲೋಪ; ಅಂಗವಿಕಲತೆ. **ಪ್ರ:** ಮಡೆ ಹೊರುವವರಿಗೆ ಯಾವ ಐಬೂ ಇರಬಾರದು ೨. ಸುಳುಹು; ಗುಪ್ತ ಮಾಹಿತಿ (ದಕ.ಜಿ)

ಐಬೋಗ: ವೈಭೋಗ ೧. ವಿಲಾಸ ೨. ಶ್ರೀಮಂತಿಕೆ; ಐಶ್ವರ್ಯ (ಚಾಮ.ಜಿ)

ಐಭೂತ: ೧. ಅದ್ಭುತ ೨. ರಾಕ್ಷಸವೇಷ (ಚಿತ್ರ.ಜಿ)

ಐಮೂಲಿಜಾಗ: ಐದು ಮೂಲೆಯ ನಿವೇಶನ. ಇದು ಅಷ್ಟು ಶುಭಕರವಲ್ಲ ಎಂಬ ನಂಬಿಕೆ. **ಪ್ರ:** ಅಯ್ಯೋ, ಐಮೂಲಿ ಜಾಗ ಅದನ್ಯಾಕ ತಗೊಂತಿ ಅಂತ ಕೆಲವು ಮಂದಿ ರಾಗ ಎಳದ್ರು (ದಾವ.ಜಿ)

ಐಮೂಲೆ: ೧. ದೂರವಿರುವ ಸ್ಥಳ. **ಪ್ರ:** ಅಯ್ಯೊ ಆ ಊರಾ ಐಮೂಲೇಲೈತೆ ೨. ಐದು ಮೂಲೆ. **ಪ್ರ:** ಆಯದಲ್ಲಿ ಐಮೂಲೆ ಶ್ರೇಯಸ್ಸಲ್ಲ ೩. ಅಯ್ಯನ ಮೂಲೆ; ದೇವರ ನೆಲೆ. **ಪ್ರ:** ಪೂಜೆ ಮಾಡಿ ಐಮೂಲೆಗೆ ಕೈಮುಗಿದರು

ಐಮ್ತೊ: ಒಂದು ಹೆಣ್ಣುಮಕ್ಕಳ ಆಟ (ಗುಲ್ಬ.ಜಿ)

ಐಯಾರಿ: ಮದುವೆ ಮುಂತಾದ ವಿಶೇಷ ಸಂದರ್ಭದಲ್ಲಿ ಕೊಡುವ ಉಡುಗೊರೆ (ಗುಲ್ಬ.ಜಿ). **ಇರೂ:** ಆಹೇರು, ಮುಯ್ಯಿ

ಐಯ್ನ್‌ಗಂದಾಯ: ವಸೂಲಿ ಮಾಡಿದ ಕಂದಾಯದಲ್ಲಿ ಇತರ ಸುಂಕಗಳನ್ನು ಕಳೆದ ನೇರ ನೆಲಗಂದಾಯ

ಐಯ್ಯಪ್ಪ: **ನೋಡಿ–** ಅಯ್ಯಪ್ಪ

ಐಯ್ಯಾಚಾರ: ಜಂಗಮ ಯುವಕರಿಗೆ ನೀಡುವ ದೀಕ್ಷಾಕ್ರಿಯೆ (ಗುಲ್ಬ.ಜಿ)

ಐಯ್ವಾದ: ಆಯವಾದ; ಅನುಕೂಲಕರವಾದ (ಶಿವ.ಜಿ)

ಐರಗಡಗ: ಮುತ್ತೈದೆತನದ ಸಂಕೇತವಾಗಿ ತೊಡುವ ಬೆಳ್ಳಿಯ ಕಡಗ (ಮಂಡ್ಯ.ಜಿ). **ಪ್ರ:** ತೋಳಿಗೆ ತೋಳಬಾಪುರಿ, ಹಸ್ತಕೆ ಐರಗಡಗ ನೀವು ಮೊದಲಾಗಿ ಕೊಡಬೇಕು

ಐರಣಿ: ೧. ಮದುವೆಗಳಲ್ಲಿ ಪೂಜಿಸುವ ಪಂಚಕಲಶ; ಅರಣಿ ಶಾಸ್ತ್ರದ ಮಡಕೆ ೨. ಮದುವೆಯ ದಿನ ಕುಂಬಾರನ ಮನೆಯಿಂದ ತರುವ ಗಡಿಗೆ; ಕೊಡ. **ಇರೂ:** ಐರ್ಣಗಡಿಗೆ



ಐರಣಿಊಟ: ಮದುವೆಯಲ್ಲಿ ಐರಣಿ ಗಡಿಗೆಗಳನ್ನು ಪೂಜಿಸಿದಾಗ ನೀಡುವ ಊಟ (ಶಿವ.ಜಿ)

ಐರಣಿದೀಪ: ಐರಣಿ ಗಡಿಗೆಗಳ ಮುಂದೆ ಹಚ್ಚುವ ದೀಪ (ಚಿತ್ರ.ಜಿ)

ಐರಣಿಶಾಸ್ತ್ರ: ಮದುವೆಗೆ ಬೇಕಾದ ಮಣ್ಣಿನ ಕುಡಿಕೆಗಳನ್ನು ಕುಂಬಾರನ ಕೈಯಿಂದ ಪೂಜೆ ಮಾಡಿಸಿಕೊಂಡು ತರುವ ಶಾಸ್ತ್ರ (ಬಳ್ಳಾ.ಜಿ)

ಐರಣಿ: ಮದುವೆಯಲ್ಲಿ ಹಣತೆ ದೀಪಗಳನ್ನಿಟ್ಟು ಪೂಜಿಸುವ ಮಣ್ಣಿನ ಮಡಕೆ. ಈ ಮಡಿಕೆಗಳ ಮೇಲೆ ಸುಣ್ಣ ಬಳಿದು ಕೆಮ್ಮಣ್ಣಿನ ಚಿತ್ತಾರ ರಚಿಸಲಾಗಿರುತ್ತದೆ. ಮದುವೆಯಲ್ಲಿ ಕುಂಬಾರನ ಮನೆಯಿಂದ ವಿಧ್ಯುಕ್ತವಾಗಿ ಈ ಗಡಿಗೆಗಳನ್ನು ಮದುವೆಮನೆಗೆ ತರಲಾಗುತ್ತದೆ. ಗಡಿಗೆಗಳ ಸಂಖ್ಯೆಯು ಆಯಾ ಸಂಪ್ರದಾಯಕ್ಕೆ ಅನುಗುಣವಾಗಿ ಬದಲಾಗುತ್ತದೆ (ದಕ). **ಇರೂ:** *ಅರ್ನೆ, ಅರನೆ, ಏರಾಣಿ, ಐರಣಿ, ಅರಣೆಗಡಿಗೆ, ಐರ್ನಗಡಿಗೆ (ಮೈಸೂ.ಜಿ)*

ಐರಣಿಅಡುಕಲು: ೧. ಮದುವೆ ಸಂದರ್ಭದಲ್ಲಿ ಪವಿತ್ರಜಲ ತರಲು ಬಳಸುವ ಚಿಕ್ಕ ಮಡಿಕೆಗಳು ೨. ಹಬ್ಬಗಳಲ್ಲಿ ಹಿರಿಯರಿಗೆ ಎಡೆ ಹಾಕುವ ಅಡಿಗೆಮನೆಯ ಸ್ಥಳ (ಚಿಮ.ಜಿ)

ಐರದಾಲಿ/ಐರುದಾಲಿ/ಐರ್ದಾಲಿ: ಹರಿದಾಳಿ; ದೇವರಿಗೆ ಹಾಕುವ ಮತ್ತು ಮುತ್ತೈದೆಯರು ಧರಿಸುವ ತಾಳಿ

ಐರಾಣ: ಹೈರಾಣ ೧. ತ್ರಾಸ; ತೊಂದರೆ ೨. ದಣಿವು ೨. ರಾದ್ಧಾಂತ; ಗೊಂದಲ

ಐರಾಣಿಮಗಿ: ನೋಡಿ– ಐರಾಣಿ

ಐರಾಣಿಗಂಟು: ಐದು ಧಾನ್ಯದ ಗಂಟು (ಮಂಡ್ಯ.ಜಿ). **ಇರೂ:** ಐದಾನ್ಯ

ಐರಾವತ: ೧. ಕಾಲ್ಪನಿಕ ಆನೆ. ಇಂದ್ರನ ಆನೆಯ ಹೆಸರು ಐರಾವತ, ಅದಕ್ಕೆ ಐದು ತಲೆಗಳಿರುತ್ತವೆ ಎಂಬ ಪ್ರತೀತಿ ೨. ಕುಸ್ತಿಯಲ್ಲಿ ಬೆನ್ನಹಿಂದೆ ಎದುರಾಳಿಯಿದ್ದಾಗ ಪ್ರಯೋಗಿಸುವ ಪಟ್ಟು. ಹಿಂದೆ ನಿಂತ ಎದುರಾಳಿ ಹೊಟ್ಟೆ ಬಳಸಲು ಎಡಗೈ ತಂದಾಗ ಅದನ್ನು ಹಿಡಿದು ಅದೇ ಕಡೆಯ ಕಾಲಿಗೆ ಟಾಂಗ್ ಹಾಕಿ ಚಿಮ್ಮಿ ಎದೆಯ ಮೇಲೆ ಕೂರುವ ಪಟ್ಟು

ಐರಾವ್ತಿ: ೧. ಸುಂದರಿ; ಚೆಲುವೆ ೨. ಕೆಟ್ಟವಳು (ದಕ.ಜಿ)

ಐರಾಳ ಮೈರಾಳ: ಮಂಟೇಸ್ವಾಮಿ ಕಾವ್ಯದಲ್ಲಿ ಪ್ರಸ್ತಾಪವಾಗಿರುವ ಎರಡು ಬಗೆಯ ಪಂಜುಗಳ ಹೆಸರು

ಐರಿ: ೧. ಬಡಗಿ ೨. ಕೊಡವ ಭಾಷಿಕ ಸಮುದಾಯವೊಂದರ ಹೆಸರು (ಕೊಡ.ಜಿ) ೩. ಕಣ್ಣಿನ ಬಾಧೆ; ಕಣ್ಣಿನ ಬೇನೆ; ಕಣ್ಣು ಕೆಂಪಾಗುವುದು (ಗುಲ್ಬ.ಜಿ/ಬಿಜಾ.ಜಿ/ಬೆಂಗ.ಜಿ)

ಐರಿಣೀದಾನ: ಮಲೆನಾಡಿನ ಬ್ರಾಹ್ಮಣರಲ್ಲಿ, ಬಿದಿರಿನ ಮೊರದಲ್ಲಿ ಕಳಶವನ್ನು ಇಟ್ಟು, ಅದಕ್ಕೆ ಗೌರಿ ಹಾಗೂ ಶಿವನ ಪೂಜೆ ಮಾಡಿ ಮದುವೆ ದಿನದಂದು ವರನ ತಾಯಿಗೆ ನೀಡುವ ದಾನ

ಐರು: ಒಂದು ಬಗೆಯ ಮೀನು

ಐರೆಲ: ಮಂಜು; ಚಳಿ (ಬೆಳ.ಜಿ)

ಐರೋಳಿಗಡ್ಡೆ: ಅತ್ಯಂತ ವಿಷಪೂರಿತವಾದ ಒಂದು ಕಾಡುಬಳ್ಳಿಯ ಗೆಡ್ಡೆ. ಬಳ್ಳಿಯ ಬುಡದಲ್ಲಿರುವ ಗಡ್ಡೆಯನ್ನು ಕತ್ತರಿಸಿ ನೀರಿನಲ್ಲಿ ಕದಡಿ ಗಿಡಗಳಿಗೆ ಕೀಟನಾಶಕವಾಗಿ ಸಿಂಪಡಿಸುತ್ತಾರೆ. ಟೊಮೇಟೋ ಹಣ್ಣನ್ನು ಹೋಲುವ ಇದರ ಹಣ್ಣನ್ನು ತಿಂದರೆ ಮನುಷ್ಯರು ಸಾಯುತ್ತಾರೆ

ಐರ್ದಾಲಿ: ನೋಡಿ– ಐರದಾಲಿ

ಐಲ್: ಮೊಗವೀರರ ಒಂದು ಕುಲನಾಮ (ದಕ.ಜಿ)

ಐಲ: ೧. ಹುಚ್ಚ; ಬೆಪ್ಪ ೨. ತಿಕ್ಕಲು; ಹುಡುಗಾಟ (ಚಾಮ.ಜಿ).

ಐಲಗೋ: ಅರಚು; ಗಂಟಲು ಹರಿಯುವಂತೆ ಕಿರುಚು; ಕೂಗು. **ಪ್ರ:** ಬೆಳಿಗ್ಗೆಯಿಂದ ಸಂಜೆತನಕ ಇಸ್ಕೂಲಲ್ಲಿ ಐಲಗೋ ಅಂತ ಒದ್ದಾಡ್ತಾ ಇರ್ತಾನೆ. **ಇರೂ:** *(ಮೈಸೂ.ಜಿ)*

ಐಲಾಟ: ತಮಾಷೆ; ಹುಡುಗಾಟ. **ಪ್ರ:** ಅವನ ಐಲಾಟ ನಮಗೆ ಪ್ರಾಣಸಂಕಟವಾಗಿದೆ

ಐಲುಹತ್ತು: ಹುಚ್ಚುಹಿಡಿ

ಐಲೆ: ಒಂದು ಜಾತಿಯ ಮೀನು (ದಕ.ಜಿ)

ಐಲೇಸ: ಮೊಗವೀರರು ಕೆಲಸ ಮಾಡುವಾಗ ಶ್ರಮ ಪರಿಹಾರಕ್ಕೆ ಉಪಯೋಗಿಸುವ ಶಬ್ದ (ದಕ.ಜಿ)

ಐವಜು: ೧. ಉತ್ಪತ್ತಿ ಅಥವಾ ಕಿಮ್ಮತ್ತು (ಮಲೆ) ೨. ಸಂಪತ್ತು; ಬದುಕು (ಉಕ)

ಐಶಾಲಿ: ಐದು ಸೊಲಿಗೆ

ಐಸಿದ: ನೆಲಹಿಡಿದ; ತಾಳಲಾರದ (ದಕ.ಜಿ)

ಐಸಿರಿ: ಶ್ರೀಮಂತಿಕೆ; ಸಿರಿತನ; ವೈಭೋಗ (ಬೆಂಗ.ಜಿ)

ಐಸುರ: ೧. ದುಃಖ ೨. ಮೊಹರಮ್ಮಿನ ಹತ್ತನೆ ದಿನ (ಧಾರ.ಜಿ)

ಐಸೋಕ: ೧. ಪಂಚಾಮೃತ ೨. ಅಭಿಷೇಕ (ಮಂಡ್ಯ.ಜಿ)

ಐಸ್‌ಪುಟಿಸು: ೧. ಅಶ್ವತ್ಥ ವೃಕ್ಷ; ಅರಳಿಮರ (ಮೈಸೂ.ಜಿ/ಚಾಮ.ಜಿ) ೨. ಬಾಗಿಲ ಒಂದು ವಿಧ

ಐಳ: ೧. ಶಿದ್ದೆಯ ಅರ್ಧ ಭಾಗದಷ್ಟು ೨. ಅಳತೆ ಮಾಡುವ ಒಂದು ಸಾಧನ (ಉಕ.ಜಿ)

ಒ

ಒಂಕ: ಡೊಂಕ; ವಂಕ; ವಕ್ರ (ಚಾಮ.ಜಿ)

ಒಂಕಿ: ಸ್ತ್ರೀಯರು ತೋಳಿಗೆ ಧರಿಸುವ ಆಭರಣ; ತೋಳುಬಂದಿ; ವಂಕಿ (ಬೆಂಗ್ರಾ.ಜಿ). **ಇರೂ:** *ಒಂಕಿಬಂದಿ*

ಒಂಖಾರ: ಒಣಮೆಣಸಿನಕಾಯಿ ಪುಡಿ

ಒಂಗೆ: ಹೊಂಗೆ (ಕೋಲಾ.ಜಿ)

ಒಂಗ್ಲನ್ನ: ಮೆಂತ್ಯ ಅನ್ನ; ಮೆಂತ್ಯ ಚಿತ್ರಾನ್ನ

ಒಂಗ್ಲು: ಹೊಂಗ್ಲು; ಬೆಳೆಯ ಮಧ್ಯಮ ಹಂತದಲ್ಲಿ ಮಾಡುವ ಪೂಜೆ (ಬಳ್ಳಾ.ಜಿ/ಬೆಂಗ.ಜಿ).

ಒಂಚಲಗಣ್ಣು: ಒಂಟಿ ಕಣ್ಣು. **ಇರೂ:** *ಒಪ್ಪಾರಿಕಣ್ಣು (ಗುಲ್ಬ.ಜಿ)*

ಒಂಚುಟ್ಕಿ: ಒಂದು ಚಿಟಿಕೆ; ತೋರುಬೆರಳು ಮತ್ತು ಹೆಬ್ಬೆರಳುಗಳ ನಡುವೆ ಹಿಡಿಯಬಹುದಾದಷ್ಟು ಅಳತೆ (ಮಂಡ್ಯ.ಜಿ)

ಒಂಚುಟ್ಟಿ: ಒಂಚುಟ್ಕಿ. **ಪ್ರ:** ಒಂಚುಟ್ಟಿ ನೆಶ್ಯ ಕೊಡು

ಒಂಟಗಿತ್ತಿ: ಒಬ್ಬಂಟಿಯಾಗಿರುವವಳು (ಬಿಜಾ.ಜಿ)

ಒಂಟಗೇರ ಬಾಳೇವು: ಒಬ್ಬಂಟಿಗರ ಬದುಕು (ಗುಲ್ಬ.ಜಿ)

ಒಂಟರ ಶುಂಠಿ: ಇನ್ನೊಬ್ಬರ ರೀತಿನೀತಿಗೆ ಒಳಪಡದೆ ತಮ್ಮ ಮೂಗಿನ ನೇರಕ್ಕೆ ವರ್ತಿಸುವವರು (ದಕ.ಜಿ)

ಒಂಟಾರುಳ: ಒಂದು ಹುಳು (ತುಮ.ಜಿ)

ಒಂಟಿ: ೧. ಒಂದು ೨. ಗೋಲಿಯಾಟ ಇಲ್ಲವೇ ಹುಣಿಸೇ ಬೀಜದ ಆಟದಲ್ಲಿ ಒಂದು ಉಳಿದಾಗ ಹೇಳುವ ಪದ (ಬೆಂಗ್ರಾ.ಜಿ) ೩. ಪುರುಷರು ಧರಿಸುತ್ತಿದ್ದ ಒಂದು ಹರಳಿನ ಕಿವಿಯ ಆಭರಣ; ಓಲೆ (ಮೈಸೂ.ಜಿ) ೪. ಮಲೆನಾಡಿನ ಗೌಡಲು ಜನಾಂಗದ ಮನೆಯ ದೈವ. ಪ್ರಾಣಿ ಪಕ್ಷಿಗಳನ್ನು ಹಾಗೂ ಮನೆಯವರನ್ನು ರಕ್ಷಿಸುತ್ತದೆ ಎಂಬ ನಂಬಿಕೆ ಇದೆ.

ಒಂಟಿಒಡ್ಡೋಲಗ: ಯಕ್ಷಗಾನ ಪ್ರಸಂಗದಲ್ಲಿನ ಒಂದೇ ವೇಷದ ಪ್ರವೇಶ (ಉಕ)

ಒಂಟಿಕಟ್ಟ: ಒಂದೊಂದೇ ಕೋಳಿಗಳನ್ನು ಸ್ಪರ್ಧೆಗಿಳಿಸುವ ಕೋಳಿಅಂಕದ ವಿಧ (ದಕ.ಜಿ)

ಒಂಟಿಕಡ್ಡಿ: ಕೋಲಾಟದಲ್ಲಿ, ತಮ್ಮದೇ ಕೋಲುಗಳಿಗೆ ಒಂದು ಏಟು ಹೊಡೆದು ಇನ್ನೊಬ್ಬರಿಗೆ ಕೋಲು ಕೊಡುವ ಕ್ರಮ (ಚಿಬ.ಜಿ)

ಒಂಟಿಕಣಗಲ: ಒಂದೇ ಸುತ್ತಿನ ದಳವನ್ನು ಹೊಂದಿರುವ ಕಣಗಲ ಗಿಡದ ಒಂದು ಪ್ರಭೇದ (ತುಮ.ಜಿ)

ಒಂಟಿಕಾಲ್: ೧. ಒಂದೇ ಕಾಲು ೨. ತೆಂಗಿನಮರಕ್ಕೆ ಗೊಂಡರು ಬಳಸುವ ಪದ (ಉಕ.ಜಿ)

ಒಂಟಿಕಾಲಬಂಧ: ನಿಂತು ಕುಸ್ತಿ ಮಾಡುವಾಗ ಒಂದು ಕಾಲಿನ ಮೇಲೆ ಪ್ರಯೋಗಿಸುವ ಪಟ್ಟು. ಎದುರಾಳಿ ಮುಂದಿಟ್ಟಿರುವ ಕಾಲಿಗೆ ತಮ್ಮ ಕಾಲಿನಿಂದ ನುಲಿಕೆ ಹಾಕಿ ಎಳೆದು ಹಿಂದಕ್ಕೆ ದೂಡಿ ಬೀಳಿಸುವುದು

ಒಂಟಿಕಾಲಲ್ಲೆ ನಿಲ್ಲು: ಅವಸರ ಮಾಡು; ಗಡಿಬಿಡಿ ಮಾಡು (ಧಾರ.ಜಿ)

ಒಂಟಿಕಾಲು/ಒಂಟಿಗಾಲು: ೧. ಕೋಲಾಟದಲ್ಲಿ ಒಂದು ಗತ್ತು ೨. ಒಂದೇ ಕಾಲು. **ಪ್ರ:** ಒಂಟಿಗಾಲಲ್ಲಿ ಕುಂಟಿಕೊಂಡು ಬಂದ

ಒಂಟಿಕಾಲುಬೊಬ್ಬರ್ಯ: ದಕ್ಷಿಣ ಕನ್ನಡದ ಉತ್ತರ ಭಾಗದಲ್ಲಿ ಆರಾಧಿಸಲ್ಪಡುವ ದೈವ. ಇದರ ನರ್ತಕ ಒಂದು ಕಾಲಿನಲ್ಲಿ ಕುಣಿಯುತ್ತಾನೆ (ದಕ.ಜಿ/ಉಕ.ಜಿ)

ಒಂಟಿಗ: ೧. ಏಕಾಂಗಿಯಾದ ಸಲಗ ಅಥವಾ ಕಾಡುಹಂದಿ. ಗುಂಪಿನಿಂದ ಬೇರೆಯಾಗಿ ವಾಸಿಸುವ ಗಂಡು ಹಂದಿ ತುಂಬಾ ಅಪಾಯಕಾರಿ ೨. ಏಕಾಂಗಿ; ಒಬ್ಬಂಟಿಗ ೩. ಬ್ರಹ್ಮಚಾರಿ ೪. ಸ್ವಾರ್ಥಿ

ಒಂಟಿಗಾಡಿ: ನೋಡಿ– ಒಂಟೆತ್ತಿನಗಾಡಿ

ಒಂಟಿಗಾಲು: ನೋಡಿ– ಒಂಟಿಕಾಲು

ಒಂಟಿಗಾಳಗ: ಒಬ್ಬಂಟಿಗನಾಗಿ ಮಾಡುವ ಯುದ್ಧ (ದಕ.ಜಿ)

ಒಂಟಿಗ್ಯಾ: ನೋಡಿ– ಒಂಟಿಗ (ಉಕ.ಜಿ)

ಒಂಟಿ ಡುಬರಿ ಹೊಲ: ಒಂಟೆಯ ಡುಬ್ಬದಂತೆ, ಎರಡೂ ಕಡೆ ಇಳಿಜಾರಾಗಿರುವ ಹೊಲ (ಶಿವ.ಜಿ)

ಒಂಟಿತಟ್ಟೆ ತಕ್ಕಡಿ: ಕುರಿ ತುಪ್ಪಟ ತೂಗುವ ತಕ್ಕಡಿ

ಒಂಟಿತಾಳಿ: ಬ್ರಾಹ್ಮಣೇತರ ಸಮುದಾಯದ ವಿವಾಹಿತ ಮಹಿಳೆ ಧರಿಸುವ ಒಂದೇ ತಾಳಿ ಇರುವ ಸರ

ಒಂಟಿತುಮ್ಮು: ಒಂಟಿಸೀನು (ಕೋಲಾ.ಜಿ)

ಒಂಟಿನಟ್ಟಿ: ಚೆನ್ನೆ ಆಟದಲ್ಲಿ ಒಂದು ವಿಧ (ದಕ.ಜಿ)

ಒಂಟಿ ನಲ್ಲಿ: ಒಂದು ನಳಿಗೆಯನ್ನು ಹೊಂದಿರುವ ಕೇಪಿನ ಕೋವಿ

ಒಂಟಿಬಡಿಗೆ ಚಟ್ಟ: ನೋಡಿ– ಒಂಟ್‌ದಡಿ

ಒಂಟಿಬೈರಾಗಿ: ಸಭಾಲಕ್ಷಣದಲ್ಲಿ ಬರುವ ಒಂದು ಬಗೆಯ ಹಾಸ್ಯ ಪಾತ್ರ

ಒಂಟಿಮಾತು: ಏಕಾಭಿಪ್ರಾಯದ ಮಾತು; ಹಟದ ಮಾತು; ಅವಿಧೇಯತೆ ತೋರುವ ಏಕವಚನದ ಮಾತು

ಒಂಟಿಲೆಕ್ಕ: ಒಂದೇ ರೀತಿಯ ಯೋಚನೆ

ಒಂಟಿಸಲಗ: ಯಾರನ್ನೂ ಲೆಕ್ಕಿಸದೆ ಎಲ್ಲೆಂದರಲ್ಲಿ ಓಡಾಡುವ ಗಂಡು ಆನೆ. ಇಂತಹ ಸ್ವಭಾವವಿರುವ ವ್ಯಕ್ತಿಗೂ ಈ ಮಾತು ಅನ್ವಯಿಸುತ್ತದೆ

ಒಂಟಿಸೀನು: ಒಂದೇ ಒಂದು ಸೀನು. ಶುಭಕಾರ್ಯ ಮಾಡುವಾಗ ಶುಭದ ಮಾತಾಡುವಾಗ ಒಂಟಿಸೀನು ಸೀತರೆ ಅಶುಭ ಎಂಬ ನಂಬಿಕೆ ಇದೆ

ಒಂಟಿಸೀರೆ: ಒಬ್ಬಂಟಿಗ; ಹೆಂಡತಿ ಮಕ್ಕಳು ಯಾರೂ ಇಲ್ಲದೆ ಒಬ್ಬಂಟಿಗನಾಗಿ ಇರುವವನು (ಮಲೆ)

ಒಂಟಿಸೇಂಗಾ: ಒಂದು ಕಾಯಿಯೊಳಗೆ ಮೂರು ಬೀಜ ಇರುವ ಸೇಂಗಾ ಕಾಯಿ (ಗುಲ್ಬ.ಜಿ)

ಒಂಟಿಹಲಗೆ: ತಮಟೆ ಚರ್ಮವಾದ್ಯ. ಒಂಟಿ ಹಲಗೆ ಅಶುಭದ ಸಂಕೇತ. ಯಾರಾದರೂ ಸತ್ತಾಗ ಮಾತ್ರ ಬಾರಿಸುತ್ತಾರೆ. ಎರಡನೇ ಮದುವೆಯಲ್ಲಿ ದಿಬ್ಬಣ ಹೋಗುವಾಗಲೂ ಒಂಟಿಹಲಗೆಯನ್ನೇ ಬಳಸುವ ಸಂಪ್ರದಾಯವಿದೆ (ಮಲೆ)

ಒಂಟಿಹಿಡ್ತ: ಒಂದೇ ಪಟ್ಟು

ಒಂಟು (ನಾ) : ೧. ಒಗಟು (ಮೈಸೂ.ಜಿ). **ಪ್ರ:** ನಾನಾಕಿದ ಒಂಟು ಒಡಿ ಮತ್ತೆ ೨. (ಕ್ರಿ). ಸರಿಹೊಂದು; ಒಗ್ಗು; ಸೇರು. **ಪ್ರ:** ಆ ನೀರು ಯಾಕೋ ನನಗೆ ಒಂಟಲಿಲ್ಲ

ಒಂಟುಬಾಗುಗಡ್ಡಿ: ಕೋಲಾಟದ ವಿಧ (ತುಮ.ಜಿ)

ಒಂಟೆತ್ತಿನಗಾಡಿ: ಒಂದೇ ಎತ್ತಿನಿಂದ ಎಳೆಯಿಸುವ ಗಾಡಿ

ಒಂಟೆಮುಳ್ಳು: ಹೆಡಿಸರಮ್ ಅಲ್ಹಾಗಿ: ಒಂದು ಬಗೆಯ ಬಳ್ಳಿ; ದುರುಬಿ ಬಳ್ಳಿ

ಒಂಟೇಣಿಕಾಲು ಮಾಡು: ಕಾಫಿ ಗಿಡದ ಒಂದೊಂದು ರೆಕ್ಕೆ ಕತ್ತರಿಸು; ಒಂದು ರೆಕ್ಕೆ ಬಿಟ್ಟು ಇನ್ನೊಂದು ರೆಕ್ಕೆ ತೆಗೆಯುತ್ತ ಹೋಗು (ಮಲೆ)

ಒಂಟೊಲೆ: ಒಂಟಿ ಒಲೆ. ಸೌದೆ ಒಟ್ಟಲು ಒಂದೇ ಒಂದು ಬಾಯಿ ಇರುವ ಒಲೆ (ದಕ)

ಒಂಟೋಲಿ: ಒಂದೇ ಓಲೆ (ಧಾರ.ಜಿ)

ಒಂಟ್‌ದಡಿ: ಚಟ್ಟ; ಮದುವೆಯಾಗದವರು ಸತ್ತಾಗ ಇಬ್ಬರೇ ಹೊರುವ ಚಟ್ಟ; ಒಂಟಿಬಡಿಗೆ ಚಟ್ಟ (ಮಂಡ್ಯ.ಜಿ)

ಒಂಟ್‌ಪಟ್ಟೆ: ಒಂದೇ ಸಾಲು ಅಡಿಕೆಮರ ಇರುವ ಜಾಗ (ಉಕ.ಜಿ)

ಒಂಟ್ರುಸುಳಿ: ಒಬ್ಬನೇ ಮಗ ಅಥವಾ ಒಬ್ಬಳೇ ಮಗಳು **ಇರೂ:** *ಒಂಟಿ ಸುಳಿ (ಮೈಸೂ.ಜಿ)*

ಒಂಡುಗೋಡು: ಮಣ್ಣಿನ ಒಂದು ವಿಧ

ಒಂಡುನೆಲ: ಕೆಸರು ಭೂಮಿ

ಒಂಡ್ರಗಾಲ: ಅಗಲಗಾಲು (ಮೈಸೂ.ಜಿ)

ಒಂತಿಸುಂಡಿ: ಚೂಪು ಮುಖದವ; ಕೋಲು ಮುಖದವ (ಉಕ.ಜಿ)

ಒಂತೀಡು: ಒಂದೇ ತರಹ (ಧಾರ.ಜಿ)

ಒಂತು: ೧. ಆಜ್ಞೆ; ಆದೇಶ ೨. ಸವಾಲು ೩. ಪ್ರತಿಜ್ಞೆ. **ಪ್ರ:** ನಮ್ಮ ಅಣ್ಣದೀರು ಕೊಟ್ಟಿರೋ ಒಂತು ತೀರಿಸ್ಕೊಂಡೆ

ಒಂತೂಕ: ೧. ಒಂದು ತೂಕ; ನಿರ್ದಿಷ್ಟ ಅಳತೆ; ಪ್ರತ್ಯೇಕ ತೂಕ ೨. ಒಂದು ಸಲಕ್ಕೆ ತೂಗುವಷ್ಟು ೩. ಒಂದು ಸಲಕ್ಕೆ ಹೊತ್ತು ಸಾಗಿಸುವಷ್ಟು (ಮಂಡ್ಯ.ಜಿ)

ಒಂದ್‌ಅಕ್ಡಿ: ಬೆಳೆಯ ಆರು ಸಾಲುಗಳ ಭೂ ಪ್ರಮಾಣ (ಧಾರ.ಜಿ)

ಒಂದ: ಮೂತ್ರ (ದಕ)

ಒಂದಕ್ಕಿ: ಒಂದು ರಂಗೋಲಿಯ ಚುಕ್ಕಿ (ದಕ.ಜಿ)

ಒಂದಡಿ: ಒಂದು ದಡಿ. ಅಳತೆಯ ಒಂದು ಮಾಪನ (ಉಕ)

ಒಂದಣ: ಒಂದುಹಣ; ನಾಲ್ಕಾಣೆ (ಚಾಮ.ಜಿ)

ಒಂದತ್ತ ಇಡು: ಒಂದು ಹೊತ್ತು ಉಪವಾಸ ಇರುವ ವ್ರತ. ಮದುವೆ ಅಥವಾ ಜಾತ್ರೆಯ ಸಂದರ್ಭದಲ್ಲಿ ಮನೆಗೆ ದೇವರನ್ನು ಕರೆಸುವಾಗ, ಪೂಜೆಯ ಹಿಂದಿನ ದಿನ ಸಂಜೆ ತಮಗೆ ಬೇಕಾದವರ ಮನೆಗೆ ಹೋಗಿ ಮುತ್ತೈದೆಯ ಹಣೆಗೆ ಕುಂಕುಮ ಹಚ್ಚಿ, ಪೂಜೆಗೆ ಆರತಿ ತೆಗೆದುಕೊಂಡು ಬರಲು ಆಹ್ವಾನಿಸುವರು. ದೇವರ ಈ ಕಾರ್ಯ ಮುಗಿಯುವವರೆಗೂ ಆಹ್ವಾನಿತ ಮುತ್ತೈದೆಯರು ಉಪವಾಸವಿರಬೇಕು (ಶಿವ.ಜಿ)

ಒಂದನೆಯ ಕಾಲ: ಹಾಡುಗಾರಿಕೆ, ವಾದ್ಯ, ನೃತ್ಯಗಳಲ್ಲಿನ ಮೊದಲ ಕಾಲ; ನಿಧಾನಗತಿಯ ನಡೆ (ದಕ.ಜಿ)

ಒಂದನೆಯ ಪುಂಡುವೇಷ: ಯಕ್ಷಗಾನದ ಪ್ರಧಾನ ಪುಂಡು ವೇಷ (ದಕ.ಜಿ)

ಒಂದನೆಯ ಬಣ್ಣ: ಮೊದಲನೆಯ ಬಣ್ಣದ ವೇಷಧಾರಿ (ದಕ.ಜಿ)

ಒಂದನೆಯ ವೇಷ: ೧. ತೆಂಕುತಿಟ್ಟಿನ ಪೀಠಿಕೆ ವೇಷ ೨. ಬಡಗುತಿಟ್ಟಿನ ಪುರುಷ ವೇಷ (ದಕ.ಜಿ)

ಒಂದನೆಯ ಹೆಜ್ಜೆ: ನೃತ್ಯದ ಹೆಜ್ಜೆಗಾರಿಕೆಯ ಒಂದು ಪ್ರಕಾರ (ದಕ.ಜಿ)

ಒಂದನೇ ಜ್ವರ: ರೇಷ್ಮೆಸಾಕಣೆಯಲ್ಲಿ ಮೊಟ್ಟೆಯಿಂದ ಹೊರಬಂದ ಹುಳುವಿನ ಎರಡು ಅಥವಾ ಮೂರು ದಿನದ ಹಂತ ಅಥವಾ ಅವಸ್ಥೆ (ಮಂಡ್ಯ.ಜಿ)

ಒಂದನೇ ಸಾಲು: ಹೊಲವನ್ನು ಪ್ರಥಮ ಬಾರಿಗೆ ಉಳುವುದು. ಬೆಳೆವ ಬೆಳೆಯನ್ನು ಅವಲಂಬಿಸಿ ಸಾಲುಗಳ ಸಂಖ್ಯೆ ಇರುತ್ತದೆ. ಉದಾ: ಧಾನ್ಯ ಬೆಳೆಯಲು ಎರಡು ಸಾಲು ಬೇಕು, ಭತ್ತದ ನಾಟಿಗೆ ಮೂರು ಸಾಲು ಬೇಕು (ಉಕ.ಜಿ)

ಒಂದಪ: ಒಂದು ಸಾರಿ; ಒಂದು ಸಲ (ಚಿತ್ರ.ಜಿ). **ಇರೂ:** *ಒಂಪಟ, ಒಂದು ತಡ (ಮಂಡ್ಯ.ಜಿ/ಮೈಸೂ.ಜಿ).* **ಪ್ರ:** ಒಂದಪ ಹೇಳಿದ್ರೆ ಅರ್ಥ ಆಗಲ್ವಾ

ಒಂದರ್ಕೆ ರೋಗ: ಶೇಂಗಾ ಬೆಳೆಗೆ ಬರುವ ಒಂದು ರೋಗ (ಬಳ್ಳಾ.ಜಿ)

ಒಂದಳ್ಳಿನುಂಗ್ರ: ಒಂದು ಹರಳಿರುವ ಉಂಗುರ

ಒಂದಾಕು: ೧. ಹೊಂದಿಸು; ಹೊಂದುಹಾಕು ೨. ಸಾರು ಮೇಲೋಗರ ಮೊದಲಾದವಕ್ಕೆ ಕಾಯಿ, ಕಡಲೆ, ಬೆಳ್ಳುಳ್ಳಿ, ಮಸಾಲೆ ಪದಾರ್ಥಗಳನ್ನು ರುಬ್ಬಿ ಸೇರಿಸು (ಮಂಡ್ಯ.ಜಿ)

ಒಂದಾಳುದ್ದ: ೧. ಒಬ್ಬ ಮನುಷ್ಯನ ಎತ್ತರವನ್ನು ಹೇಳುವ ಪದ. ಒಬ್ಬ ಮನುಷ್ಯನಷ್ಟು ಎತ್ತರ ಎಂದರೆ ಸುಮಾರು ಐದೂವರೆ ಆರು ಅಡಿಯಷ್ಟು ೨. ಒಬ್ಬ ವ್ಯಕ್ತಿ ನಿಂತು ಬಲಗೈ ಮೇಲೆ ಮಾಡಿದಷ್ಟು ಉದ್ದ

ಒಂದಾಳುದ್ದ ಹೊತ್ತು: ಒಂದು ಆಳಿನ ಎತ್ತರದಷ್ಟು ಉದ್ದವಿರುವ ನೆರಳು; ಸಮಯಸೂಚಿ

ಒಂದಿಗೂಟ: ಒಂದಿಗೆ ಮಾಡುವ ಊಟ; ಒಂದೇ ಪಂಕ್ತಿಯೂಟ (ಮಂಡ್ಯ.ಜಿ)

ಒಂದಿಗೆ ಹುಟ್ಟೋರು: ಒಡಹುಟ್ಟಿದವರು

ಒಂದು: ೧. ಒಂದು ಎಂಬುದನ್ನು ಸೂಚಿಸುವ ಸಂಖ್ಯಾವಾಚಿ; ಏಕ. **ಪ್ರ:** ಅವು ಒಂದನ್ನು ಬಿಟ್ಟು ಇನ್ನೊಂದು ಇರುವುದಿಲ್ಲ. ಒಂದು ಕಣ್ಣು ಕಣ್ಣಲ್ಲ ಒಬ್ಬ ಮಗ ಮಗಾ ಅಲ್ಲ ೨. ಸಾರು ಹೊಂದಿಕೊಳ್ಳಲು ಕಲಸಿಬಿಡುವ ಅಕ್ಕಿಯ ಹಿಟ್ಟಿನ ತಿಳಿ. **ಪ್ರ:** ಒಂದು ಬಿಟ್ರೆ ಹೊಂದಿಕೊಂಡೆ, ಕಾರ ಬಿಟ್ರೆ ಕದರಿಕೊಂಡೆ (ಗಾದೆ)

ಒಂದುಕಡ್ಡಿ ಭತ್ತ: ಭತ್ತದ ಒಂದು ಪ್ರಭೇದ (ಬಳ್ಳಾ.ಜಿ)

ಒಂದುಪಾದದ ಸೆಣಸಾಟ: ಮಲೆನಾಡಿನ ಗಂಡು ಮಕ್ಕಳ ಆಟ. ಇಬ್ಬರೂ ಒಂಟಿ ಕಾಲಿನಲ್ಲಿ ನಿಲ್ಲಬೇಕು. ಪರಸ್ಪರ ಬಲದ ಕೈಗಳನ್ನು ಮಾತ್ರ ಹಿಡಿದುಕೊಳ್ಳಬೇಕು

ಒಂದು ಬಳ್ಳು: ಒಂದು ಬೆರಳಿನಷ್ಟು, ಬಿದ್ದ ಮಳೆಯ ಪ್ರಮಾಣ ಹೇಳುವಾಗ ಬಳಸುವ ಮಾತು. ಒಂದು ಬೆರಳಿನಷ್ಟು ಆಳದ ಮಣ್ಣು ತೊಯ್ಯುವ ಮಳೆ (ಶಿವ.ಜಿ)

ಒಂದು ಸೊಪ್ಪು: ೪ನೇ ಜ್ವರದಿಂದ ಎದ್ದ ರೇಷ್ಮೆ ಹುಳುಗಳಿಗೆ ಮೇವು ಹಾಕುವ ವಿಧಾನ. ಒಂದು ದಿವಸಕ್ಕೆ ಮೂರು ಸಲ ಸೊಪ್ಪನ್ನು ಹಾಕುತ್ತಾರೆ. ಇವತ್ತು ಬೆಳಿಗ್ಗೆಯಿಂದ ಮಾರನೇ ದಿನ ಬೆಳಿಗ್ಗೆಯ ತನಕ ಹಾಕಿದ ಸೊಪ್ಪನ್ನು ಒಂದು ಸೊಪ್ಪು ಎಂದು ಹೇಳುತ್ತಾರೆ. ಇಂತಹ ಏಳು ಅಥವಾ ಎಂಟು ಸೊಪ್ಪಿಗೆ ಹುಳುಗಳು ಹಣ್ಣಾಗುತ್ತವೆ. **ಪ್ರ:** ಒಂದು ಸೊಪ್ಪು ಎರಡು ಸೊಪ್ಪು (ಮಂಡ್ಯ.ಜಿ)

ಒಂದುಳ: ಒಂದು ಸಲದ ಉಳುಮೆ (ಮಂಡ್ಯ.ಜಿ)

ಒಂದೆಲಗ: *ಸೆಂಟೆಲ್ಲಾ ಏಷಿಯಾಟಿಕಾ:* ಸಾಮಾನ್ಯವಾಗಿ ತೇವಭರಿತ ಜಾಗದಲ್ಲಿ ಬೆಳೆಯುವ, ಔಷಧೀಯ ಗುಣವುಳ್ಳ

ಒಂದು ಆಹಾರಸಸ್ಯ. ಬೆರಕೆ ಸೊಪ್ಪಿನ ಸಾರಿಗೆ, ಚಟ್ನಿಗೆ ಉಪಯೋಗಿಸುತ್ತಾರೆ. ನೆನಪಿನ ಶಕ್ತಿಗೆ ಒಳ್ಳೆ ಮದ್ದು (ಮಂಡ್ಯ.ಜಿ). **ಇರೂ:** *ಇಲಿಕಿವಿ ಗಿಡ (ಉಕ.ಜಿ), ಉರಗೆ, ತಿಮರೆ, ಬ್ರಾಹ್ಮಿ (ದಕ.ಜಿ/ಮಂಡ್ಯ.ಜಿ)* (ಚಿತ್ರ ನೋಡಿ)

ಒಂದೆಲಗ ಸೊಪ್ಪಿನ ತಂಬುಳಿ: ಒಂದೆಲಗ ಸೊಪ್ಪು, ಹಸಿಮೆಣಸಿನ ಕಾಯಿ, ಧನಿಯ, ಜೀರಿಗೆ, ಸಾಸಿವೆ, ಅರಿಶಿನಪುಡಿ ಇವೆಲ್ಲ ಹುರಿದು ತೆಂಗಿನಕಾಯಿಯೊಂದಿಗೆ ರುಬ್ಬಿ ಉಪ್ಪು ಹಾಕಿ ಕುದಿಸಿ ತಣ್ಣಗಾದ ಬಳಿಕ ಇದಕ್ಕೆ ಮೊಸರು ಸೇರಿಸಿ ಸಿದ್ಧಪಡಿಸುವಂಥದ್ದು (ಮೈಸೂ.ಜಿ)

ಒಂದೆಲೆಹೊನ್ನೆ: ಒಂದು ಕಿರುಸಸ್ಯ

ಒಂದೆಸರು: ೧. ಅಕ್ಕಿಯ ಹಿಟ್ಟಿನ ತಿಳಿಯನ್ನು ಬೆರಸಿ ಮಾಡಿದ ನೀರುಸಾರು; ಗೊಡ್ಡುಸಾರು ೨. ಬಸಿಯದೆ ಮಾಡಿದ ಸಾರು. ಸಾರು ಮತ್ತು ಕಾಳು ಒಟ್ಟಿಗೆ ಇರುವ ಸಾರು

ಒಂದೆಳ್: ಒಂದು ಹೆರಳು; ಕೇಶವಿನ್ಯಾಸ

ಒಂದೆಳೆರಂಗೋಲಿ: ಒಂದು ಗೆರೆಯಿಂದಲೇ ರಂಗೋಲಿಯ ವಿನ್ಯಾಸ ಬರೆಯುವುದು. ಹೆಬ್ಬೆರಳು ಮತ್ತು ತೋರು ಬೆರಳುಗಳಿಂದ ರಂಗೋಲಿ ಪುಡಿಯನ್ನು ತೆಗೆದುಕೊಂಡು ಜಾರಿಸುತ್ತಾ ಪುಡಿಯನ್ನು ನೆಲಕ್ಕೆ ಉದುರಿಸುವುದು

ಒಂದೇಗಡ್ಡಿಯವರು: ಒಂದೇ ವಂಶದವರು

ಒಂದೇಟಿಗೆ: ೧. ಒಂದೇ ಹೊಡೆತಕ್ಕೆ ೨. ಒಂದೇ ಸಲಕ್ಕೆ (ಮಂಡ್ಯ.ಜಿ). **ಪ್ರ:** ಒಂದೇಟಿಗೇ ಎರಡು ಹಕ್ಕಿ ಹೊಡೆದ

ಒಂದೇ ತಾಳು: ಮೂರು ತಾಳಿನ ಕೂರಿಗೆಯಿಂದ ಬಿತ್ತುವುದು ಸಾಮಾನ್ಯ. ಇಲ್ಲಿ ರೈತನಿಗೆ ದಕ್ಕುವುದು ಒಂದೇ ತಾಳಿನ ಸಾಲಿನ ಉತ್ಪನ್ನ. ಇನ್ನೊಂದು ಸಾಲು ಪಶುಪಕ್ಷಿಗಳಿಗೆ ಇನ್ನುಳಿದ ಒಂದು ಆಯಗಾರರಿಗೆ ಅಥವಾ ದಾನಧರ್ಮಕ್ಕೆ (ಶಿವ.ಜಿ)

ಒಂದೇ ನಾಲಗಿ: ಮಾತು ಬದಲಾಯಿಸದ; ಕೊಟ್ಟ ಮಾತಿಗೆ ತಪ್ಪದ (ಬಿಜಾ.ಜಿ)

ಒಂದೇ ಮಾತು: ನಿಶ್ಚಯದ ಮಾತು; ಕಡೆಯ ಮಾತು; ನಿಜವಾದ ಮಾತು (ಬಿಜಾ.ಜಿ)

ಒಂದೇರುಳ: ೧. ಒಂದು ಏರಿನ ಉಳುಮೆ ೨. ಒಂದು ಏರಿನಲ್ಲಿ ಉಳುಮೆ ಮಾಡುವಷ್ಟು ವಿಸ್ತೀರ್ಣದ ಭೂಮಿ

ಒಂದೇ ವಾರ್ಗೆ: ಸಮವಯಸ್ಕರು (ಮೈಸೂ.ಜಿ)

ಒಂದೇ ಸಾಲೀಮಾತು: ಸಮಾನಾಭಿಪ್ರಾಯ

ಒಂದೊತ್ತು: ನೋಡಿ– ಒಂದ್ಹೊತ್ತು

ಒಂದೊಬ್ಬೆ: ಒಂದು ಒಬ್ಬೆ. ೧. ಒರಳುಕಲ್ಲಿನಲ್ಲಿ ಒಂದು ಸಲಕ್ಕೆ ಕುಟ್ಟಲು ಹಾಕುವಷ್ಟು ಅಳತೆಯ ಧಾನ್ಯ ೨. ಇಡ್ಲಿ ವಡೆ ಇತ್ಯಾದಿಗಳನ್ನು ಒಂದು ಸಲಕ್ಕೆ ಬೇಯಿಸುವಷ್ಟು ಪ್ರಮಾಣ (ಮಂಡ್ಯ.ಜಿ). **ಪ್ರ:** ಒಂದು ಒಬ್ಬೆ ಇಡ್ಲಿ ಬೇಯಾಕು

ಒಂದೊರ: ೧. ಒಂದು ವರಹ ೨. ಒಂದು ಪದರ (ಮಂಡ್ಯ.ಜಿ)

ಒಂದ್‌ಕಂಬರಷ್ಣ: ಒಂದು ಕೊಂಬು ಅರಿಶಿನ; ಒಂದು ತುಂಡು ಅರಿಶಿನ (ಮಂಡ್ಯ.ಜಿ)

ಒಂದ್‌ಕೈಕಾಣ್: ಒಂದು ಸಲ ಪ್ರಯತ್ನ ಮಾಡಿ ನೋಡು. **ಪ್ರ:** ತಡಿ ನಾನ್ ಒಂದ್ ಕೈ ಕಾಣ್ತಿ

ಒಂದ್‌ಗೀತ್ ಕಡ್ಡಿ: ಬಡಗಿಗಳು ಒಂದು ಗೀಟು ಮಾಡಲು ಬಳಸುವಂಥ ಕಡ್ಡಿ (ಕೋಲಾ.ಜಿ)

ಒಂದ್ಗುಡ್ಡೆ: ಮಾಂಸದ ಹಂಚಿಕೆಯ ಪ್ರಮಾಣ. ಮನೆಯ ಜನಸಂಖ್ಯೆಯನ್ನು ಆಧರಿಸಿ ನಿರ್ಧಾರವಾಗುವ ಗುಡ್ಡೆಗಳ ಸಂಖ್ಯೆ ಅಥವಾ ಪ್ರಮಾಣ (ಕೋಲಾ.ಜಿ)

ಒಂದ್ಬಿಟ್ಟು ಒಂದ್ಕಲ್ಲು ಎತ್ತೋ ಆಟ: ಅಣ್ಣೆಕಲ್ಲಾಟದ ಒಂದು ಬಗೆ

ಒಂದ್ಮನ್ಸು ಯೇಡ್ಮ್ಯಾನ: ಅನಿರ್ಧಾರಿತ ಸ್ಥಿತಿಯಲ್ಲಿರುವ ಮನಸ್ಸು; ಕಳವಳದ ಮನಸ್ಸು; ಗಾಬರಿಗೊಳಗಾದ ಮನಸ್ಸು

ಒಂದ್‌ಮೂಲೆ ಕಳ್ಸ: ರಂಗೋಲಿಯಲ್ಲಿ ಬರೆಯುವ ಒಂದು ಕಲಶದ ವಿನ್ಯಾಸ. ಹಾಲಕ್ಕಿಗಳು ಈ ನಕ್ಷೆಯನ್ನು ಸೇಡಿ ಮೂಲಕ ಬರೆಯುತ್ತಾರೆ



ಒಂದ್ರಿ: ಕಾಳಿನಿಂದ ಧೂಳು, ಕಸಕಡ್ಡಿ ಬೇರೆ ಮಾಡಲು ಉಪಯೋಗಿಸುವ ಸಾಧನ; ಜರಡಿ (ದಕ). **ಇರೂ:** *ಚಾರ್ಣಿ, ಸಾರಣಿಗೆ, ವಂದ್ರಿ, ಜಲ್ಡಿ*

ಒಂದ್ರೆಕ್ಕೆ ನೇಗ್ಲು/ಒಂಟ್ರೆಕ್ಕೆ ನೇಗ್ಲು: ಒಂಟಿ ಮೇಳಿಯ ನೇಗಿಲು (ಚಿತ್ರ.ಜಿ)

ಒಂದ್ಲಸೀಟು: ಸಾರು ಗಟ್ಟಿಯಾಗಲೆಂದು ಬಳಸುವ ಅಕ್ಕಿಹಿಟ್ಟು (ಮಂಡ್ಯ.ಜಿ) **ನೋಡಿ–** ಒಂದಾಕು, ಒಂದು

ಒಂದ್ಧೆಜ್ಜೆಕುಣಿತ: ಡೊಳ್ಳಿನ ಕುಣಿತದಲ್ಲಿನ ವೈವಿಧ್ಯಮಯ ಗತ್ತುಗಳಲ್ಲೊಂದು (ಕೊಡ.ಜಿ)

ಒಂದ್ಹೊತ್ತಿನವರು: ೧. ಒಂದೇ ಹೊತ್ತು ಊಟ ಮಾಡುವ ವ್ರತದಲ್ಲಿರುವವರು ೨. ದಿನಕ್ಕೆ ಒಂದೇ ಹೊತ್ತು ಊಟ ಮಾಡುವವರು; ಬಡತನವನ್ನು ಸೂಚಿಸುವ ಪದ

ಒಂದ್ಹೊತ್ತು/ಒಂದುಹೊತ್ತು/ಒಂದೊತ್ತು: ೧. ಅರ್ಧ ದಿನ. **ಪ್ರ:** ಒಂದ್ಹೊತ್ತಿಗೆ ಅನ್ನ ಅದೆ ಅಂದ್ರೆ ಒಲೆಗುಂಡು ಕಿತ್ತಾಕು ಅಂದಳಂತೆ ೨. ಒಂದುಹೊತ್ತು ಮಾತ್ರ ಊಟ ಮಾಡುವ ವ್ರತ; ದೇವರಕಾರ್ಯ ಅಥವಾ ಶುಭಕಾರ್ಯಗಳನ್ನು ಮಾಡುವಾಗ ಒಂದು ಹೊತ್ತು ಸಂಪೂರ್ಣ ಉಪವಾಸವಿರುವುದು. **ಪ್ರ:** ಕೆರೆಯ ಗಂಗಮ್ಮನನ್ನು ಮಾಡಲು ತಾನು ಒಂದೊತ್ತಿರಬೇಕು, **ಪ್ರ:** ೨. ಸ್ವಾಮಾರ ಒಂದ್ಹೊತ್ತಿದ್ದು ಅವರು ನೀರ ಮಡಿಯ ಉಟ್ಟಾರು

ಒಂಪಟ: ನೋಡಿ– ಒಂದಪ

ಒಂಪಟು: ಒಂದು ಸಲ; ಒಂದು ಸಾರಿ; ಒಂದುಪಟ್ಟು

ಒಂಪು: ಗಾಡಿಯ ಚಕ್ರದ ಮಧ್ಯೆ ಇರುವ ಗುಂಭ (ಕೋಲಾ.ಜಿ)

ಒಂಬತ್ತು ಚಿಟಗಿ: ಕೋಲಾಟದಲ್ಲಿ ಒಂದು ಬಗೆ (ಉಕ.ಜಿ)

ಒಂಬಾಸತ್ತಿ: ಸಾಯಂಕಾಲ (ಗುಲ್ಬ.ಜಿ). **ಇರೂ:** *ಒಂಬಿತ್ತಾಸಿ*

ಒಂಬಿತ್ತಾಸಿ: ಒಂಬತ್ತು ತಾಸು; ಸಂಜೆ

ಒಂಬೀಗೆ: ೧. ಗಡಿ ೨. ಹೊಲಬು ೩. ಜಂಬೂಸವಾರಿ

ಒಂಬೆತ್ತ ಗಾಣಿಗರು: ಮೋಡಿಕಾರರು; ಹಕ್ಕಿನ ಕಾಣಿಕೆ ಪಡೆಯುವ ಜಾತಿ (ಬೆಂಗ.ಜಿ)

ಒಂಬೈ: ಹೊಂಬಾಳೆ (ಬಳ್ಳಾ.ಜಿ)

ಒಂಭತ್ತು ಪಣ: ಗೊಲ್ಲರ ಒಂದು ಪಂಗಡ. ಇದೇ ರೀತಿ ಹದಿನೆಂಟು ಪಣದ ಗೊಲ್ಲರ ಪಂಗಡವೂ ಇದೆ (ಬೆಂಗ.ಜಿ)

ಒಕ್ಕ: ೧. ಒಕ್ಕಳ; ಒಂದು ಕೊಳಗ ೨. ಬೆಳೆ ತೆಗೆದು ರಾಶಿ ಮಾಡುವುದು ೩. ಸೊಂಟದ ಭಾಗ ೪. ಅಳತೆಯ ಪ್ರಮಾಣ

ಒಕ್ಕ ಅನಿಸು: ಬೇಡವಾಗು (ಬಾಗ.ಜಿ)

ಒಕ್ಕಡೆ: ೧. ಒಂದೆಡೆ; ಒಂದು ಕಡೆ ೨. ಒಂದು ಮಗ್ಗಲು ೩. ಒಂದು ದಿಕ್ಕು. **ಇರೂ:** *ಒಕ್ಕಾಡೆ; ಒಕ್ಕಡಿಕೆ; ವಕ್ಕಡೆ*

ಒಕ್ಕಣಿಕೆ: ೧. ಬರವಣಿಗೆ (ಧಾರ.ಜಿ) ೨. ಬರೆದಿರುವ ವಿಷಯ. **ಪ್ರ:** ಆ ಪತ್ರದ ಒಕ್ಕಣಿಕೆ ಏನೆಂದರೆ...

ಒಕ್ಕಣೆ: ೧. ಧಾನ್ಯವನ್ನು ಪೈರಿನಿಂದ ಬೇರ್ಪಡಿಸುವಿಕೆ (ಮೈಸೂ.ಜಿ/ಕೋಲಾ.ಜಿ) **ಇರೂ:** *ಒಕ್ಕಲಂಟ, ಒಕ್ಕಲಾಟ, ಒಕ್ಕಲಿ* ೨. ನಿರೂಪಣೆ; ವ್ಯಾಖ್ಯಾನ; ಒಕ್ಕು

ಒಕ್ಕಣೆಕೋಲು/ಒಕ್ಕಲುಕೋಲು: ಭತ್ತ, ರಾಗಿ, ಜೋಳ, ಸಜ್ಜೆ ಪೈರುಗಳಿಂದ ಧಾನ್ಯಗಳನ್ನು ಪ್ರತ್ಯೇಕಿಸುವ ಕ್ರಿಯೆಯಲ್ಲಿ ಬಳಸುವ ಸಲಕರಣೆ

ಒಕ್ಕತೀರು: ಸಮೃದ್ಧವಾಗಿ ಬೆಳೆಬರು

ಒಕ್ಕತ್ತಿರಿ: ಒಂದು ಹೆಣ್ಣುದೈವದ ಹೆಸರು (ದಕ.ಜಿ)

ಒಕ್ಕತ್ತೆರ: ಬಂಟ ಮನೆತನದ ಹೆಂಗಸು. ಬಂಟ ಮನೆತನದ ಅವಿಭಕ್ತ ಕುಟುಂಬದ ಹಿರಿಯ ಹುಡುಗಿಗೆ ಕೊಡುವ ಬಿರುದು. ಹೆಣ್ಣು ಪ್ರಾಯಕ್ಕೆ ಬಂದ ಕೂಡಲೇ ಅವಳನ್ನು ಮೆರವಣಿಗೆ ಸಮೇತ ಚಪ್ಪರಕ್ಕೆ ಕರೆತಂದು, ಸೊಂಟಕ್ಕೆ ಗೆಜ್ಜೆಕತ್ತಿಯನ್ನು ಕಟ್ಟಿ, ಅವಿಭಕ್ತ ಕುಟುಂಬದ ಮನೆಯ ಬೀಗದ ಕೈಯನ್ನು ಕೊಟ್ಟು, ಆಕೆಯನ್ನು ಕುಟುಂಬದಲ್ಲಿ ಪ್ರಬುದ್ಧಳಾದಳೆಂದು ಸಾರುವ ಆಚರಣೆ (ದಕ.ಜಿ)

ಒಕ್ಕತ್ತೇರಿ: ಸೊಂಟದಲ್ಲಿ ಕತ್ತಿ ಸಿಕ್ಕಿಸಿಕೊಂಡ ಬಂಟ ಮನೆತನದ ಒಡತಿ (ದಕ.ಜಿ)

ಒಕ್ಕದ: ಒಂದು ಬಾಗಿಲು; ಒಂದು ಕದ (ದಕ.ಜಿ)

ಒಕ್ಕದ ಪಣವು: ಹೆಣ್ಣು ಮದುವೆಯಾಗಿ ಗಂಡನ ಮನೆಗೆ ಹೋಗುವಾಗ ಆಕೆಯ ಸ್ವಂತ ಖರ್ಚಿಗಾಗಿ ಕೊಡುವ ಧನ (ದಕ.ಜಿ)

ಒಕ್ಕನೂಲು: ಸೊಂಟಕ್ಕೆ ಕಟ್ಟುವ ಬೆಳ್ಳಿ, ಬಂಗಾರ ಅಥವಾ ಹತ್ತಿ ನೂಲಿನ ಪಟ್ಟಿ; ಉಡುದಾರ (ಶಿವ.ಜಿ)

ಒಕ್ಕಬಲ್ಲಾಲ: ಒಂದು ದೈವದ ಹೆಸರು (ದಕ.ಜಿ)

ಒಕ್ಕರಣೆ: ಹೊಕ್ಕರಣೆ; ಕೊಳ

ಒಕ್ಕರಿಸು: ೧. ವಾಕರಿಸು; ವಾಂತಿಮಾಡು ೨. ಇಷ್ಟವಿಲ್ಲದವರು ಬಂದು ಎದುರು ಕುಳಿತುಕೊಳ್ಳುವಿಕೆ. **ಇರೂ:** *ವಕ್ಕರಿಸು*

ಒಕ್ಕಲಆರತಿ: ಉತ್ತರ ಕರ್ನಾಟಕದ ಲಿಂಗಾಯತರ ಮದುವೆಗಳ ಮುನ್ನಾ ದಿನಗಳಂದು ನಡೆಸುವ ಒರಳುಕಲ್ಲಿನ ಪೂಜೆಗೆ ಆಹ್ವಾನಿಸಲಾಗುವ ಐದು ಆರತಿಗಳಲ್ಲಿ ಒಂದು. ಈ ಆರತಿಗಳನ್ನು ತರಬೇಕೆಂದು ಆಯಾ ಆರತಿಯವರಿಗೆ ಹಿಂದಿನ ದಿನವೇ ವೀಳ್ಯೆದೆಲೆ ಹಾಗೂ ಒಳ್ಳೆಣ್ಣೆಯನ್ನು ಕೊಟ್ಟು ಕೋರಲಾಗುತ್ತದೆ. ಮರುದಿನ ಸಮಯಕ್ಕೆ ಸರಿಯಾಗಿ ವಾದ್ಯ ವೈಭವಗಳೊಂದಿಗೆ ಅವರನ್ನು ಮದುವೆಯ ಮನೆಗೆ ಕರೆತರಲಾಗುತ್ತದೆ. **ಇರೂ:** *ಮೇಟಿ ಆರತಿ*

ಒಕ್ಕಲಕ್ಕಿ: ಕಣದಲ್ಲಿ ಕೊನೆಗೆ ಮಾಡುವ ರಾಶಿಪೂಜೆ

ಒಕ್ಕಲಮಣ್ಣು: ಕೃಷಿಗೆ, ಒಕ್ಕಲುತನಕ್ಕೆ ಯೋಗ್ಯವಾದ ಭೂಮಿ (ಶಿವ.ಜಿ)

ಒಕ್ಕಲಸೀರಿ: ಒಕ್ಕಲಗಿತ್ತಿಗೆ ಉಡಿಸಿದ ಸೀರೆ

ಒಕ್ಕಲಾಗು: ನೆಲೆನಿಲ್ಲು; ಒಂದೆಡೆ ವಾಸಿಸು. **ಪ್ರ:** ಕೊನೆಗೂ ಈ ಊರಿಗೆ ಬಂದು ಒಕ್ಕಲಾದರು (ಶಿವ.ಜಿ).

ಒಕ್ಕಲಾಟ: ಬೇಸಾಯ. **ಪ್ರ:** ಊರಿನ ಪ್ರತೀ ಮನೆಯವರೂ ಒಕ್ಕಲಾಟ ಆದ ಮೇಲೆ ಒಡೆಯನಿಗೆ ಗೇಣೀ ಅಳೆಯಬೇಕು

ಒಕ್ಕಲಿಕ್ಕು: ತುಳಿ; ಧ್ವಂಸ ಮಾಡು; ಚೆಲ್ಲಾಪಿಲ್ಲಿಯಾಗಿ ಮಾಡು (ಬಿಜಾ.ಜಿ)

ಒಕ್ಕಲಿಗ: ೧. ಕೃಷಿಕ; ಅನ್ನದಾತ; ಬೇಸಾಯಗಾರ; ವ್ಯವಸಾಯ ಹಾಗೂ ಪಶುಸಂಗೋಪನೆಯಲ್ಲಿ ನಿರತನಾದವ (ಶಿವ.ಜಿ) ೨. ಕೃಷಿಯನ್ನೇ ಪ್ರಧಾನ ವೃತ್ತಿಯನ್ನಾಗಿಸಿಕೊಂಡ ಒಂದು ಸಮುದಾಯ (ಮಂಡ್ಯ.ಜಿ)

ಒಕ್ಕಲು/ಒಕ್ಲು/ವಕ್ಕಲು: ೧. ನಿರ್ದಿಷ್ಟ ದೇವತೆಗೆ ತಪ್ಪದೆ ನಡೆದುಕೊಳ್ಳುವಂಥವರು. ಪ್ರತಿಯೊಂದು ಗ್ರಾಮದೇವತೆಗೂ ಆದರದೇ ಆದ ಒಂದು ಭಕ್ತ ಸಮುದಾಯ ಅಥವಾ ಶಿಷ್ಯರ ಗುಂಪು ಇರುತ್ತದೆ. ಆಯಾ ದೇವತೆಯ ಹೆಸರಿನೊಂದಿಗೆ ಆಯಾ ಒಕ್ಕಲಿನವರನ್ನು ಗುರ್ತಿಸುತ್ತಾರೆ. **ಪ್ರ:** ನಾವು ತಿರುಪತಿ ತಿಮ್ಮಪ್ಪನ ಒಕ್ಲು; ನಾವು ಮಲೆ ಮಾದೇಶ್ವರನ ಒಕ್ಕಲು ೨. ಮನೆತನ; ಕುಲ; ಕುಟುಂಬ ೩. ಗೇಣಿದಾರ; ಭೂಮಿ ಸೀಮೆ ಇರುವವ; ಸ್ಥಿತಿವಂತ (ಶಿವ.ಜಿ) ೪. ಮನೆ; ವಾಸಸ್ಥಳ. **ಪ್ರ:** ಎಷ್ಟೋ ವರ್ಷಗಳಿಂದ ಇದೇ ನಮ್ಮ ಒಕ್ಕಲು ೫. ಸಂಸಾರ; ಕುಟುಂಬ. **ಪ್ರ:** ಎಷ್ಟೊಕ್ಕಲಿದೀರಿ ಇಲ್ಲಿ ೬. ಸೀರೆಯ ನೆರಿಗೆಗೆ ಸೊಂಟಭಾಗದಲ್ಲಿ ಹಾಕಿಕೊಳ್ಳುವ ಗಂಟು. ಇದರಲ್ಲಿ ಸಾಮಾನ್ಯವಾಗಿ ಚಿಲ್ಲರೆಕಾಸು, ಎಲೆ, ಅಡಿಕೆ ಇತ್ಯಾದಿಗಳನ್ನು ಇಟ್ಟುಕೊಂಡಿರುತ್ತಾರೆ (ಚಿಬ.ಜಿ)

ಒಕ್ಕಲುತನ: ರೈತಾಪಿ ಜನರು ಮಾಡುವ ವೃತ್ತಿ; ಕೃಷಿ; ವ್ಯವಸಾಯ; ಕಮತ (ಶಿವ.ಜಿ)

ಒಕ್ಕಲುತೆಗೆ: ಗುಂಪಾಗಿ ಒಂದು ಕಡೆಯಿಂದ ಇನ್ನೊಂದು ಕಡೆಗೆ ಹೋಗು; ವಲಸೆ ಹೋಗು; ಗುಳೆ ತೆಗೆ. **ಪ್ರ:** ಕಾಡಲ್ಲಿ ಹುಲಿ ಕೂಗಿದ್ರೆ ಊರಲ್ಲಿ ಒಕ್ಕಲು ತೆಗೆದರಂತೆ

ಒಕ್ಕಲೋಗು: ಒಕ್ಕಲು ಹೋಗು; ಸಂಸಾರ ಸಮೇತ ಊರು ಬಿಟ್ಟು ಹೋಗು; ವಲಸೆ ಹೋಗು. ನೆಲಸಿದ್ದ ಸ್ಥಳವನ್ನು ಸಂಪೂರ್ಣವಾಗಿ ಬಿಟ್ಟು ಹೋಗುವುದು. **ಇರೂ:** *ಒಕ್ಕಲುತೆಗೆ, ಗುಳೇಹೋಗು (ಬಿಜಾ.ಜಿ/ಗುಲ್ಬ.ಜಿ)*

ಒಕ್ಕಲ್ಮಣ್ಣು: ಕೃಷಿಯೋಗ್ಯವಾದ ಜಮೀನು (ಧಾರ.ಜಿ)

ಒಕ್ಕಳ: ಅಳತೆಯ ಸಾಧನ (ಧಾರ.ಜಿ); ಒಂದುಕೊಳಗ (ಮೈಸೂ.ಜಿ). ಪ್ರದೇಶದಿಂದ ಪ್ರದೇಶಕ್ಕೆ ಈ ಅಳತೆ ವ್ಯತ್ಯಾಸವಾಗುತ್ತದೆ. **ಪ್ರ:** ಒಕ್ಕಳ ಹೊನ್ನು ಸೆರಗಲ್ಲಿ ಕಟ್ಕೊಂಡು ಸಾಲಕ್ಕೆ ಹೋಗವ್ನೆ ಮಳೆರಾಯ....

ಒಕ್ಕಳಕ್ಕಿ: ಹತ್ತು ಸೇರು ಅಕ್ಕಿ (ಮಂಡ್ಯ.ಜಿ)

ಒಕ್ಕಳಗಂಟೆ: ಗೊರವರ ವೇಷಭೂಷಣದ ಒಂದು ಅಂಗ (ಬೆಂಗ.ಜಿ)

ಒಕ್ಕಳಬೀರಿ: ತೇರು ಅಲುಗಾಡದಂತೆ ಮಾಡಲು ತೇರಿನ ರಚನೆಯಲ್ಲಿ ಕಳಸದಿಂದ ಪ್ರಾರಂಭವಾಗಿ ಗಡ್ಡಿಯ ತನಕ ಏಕವಾಗಿ ಹೊಡೆದಿರುವ ಮರದಪಟ್ಟಿ (ಬಳ್ಳಾ.ಜಿ)

ಒಕ್ಕಾಲ್ ಏಣಿ: ನೋಡಿ– ಒಗ್ಗಾಲೇಣಿ (ದಕ.ಜಿ)

ಒಕ್ಕಿತು: ಉಕ್ಕಿತು

ಒಕ್ಕಿಮಿಕ್ಕಿದ್ದು: ಬಳಸಿ ಉಳಿದದ್ದು

ಒಕ್ಕು: ೧. ದವಸ ಧಾನ್ಯಗಳನ್ನು ರಾಶಿ ಮಾಡುವುದು ೨. ತೆನೆಯಿಂದ ಕಾಳುಗಳನ್ನು ಬೇರ್ಪಡಿಸುವ ಕ್ರಿಯೆ; ತೆನೆಗಳನ್ನು ದನಗಳಿಂದ ತುಳಿಸಿ ಕಾಳು ಬೇರ್ಪಡಿಸುವುದು. **ಇರೂ:** ಒಕ್ಲಾಟ (ಮಂಡ್ಯ.ಜಿ) ೩. ಬೆಳೆಯನ್ನು ಕಸಕಡ್ಡಿಗಳಿಂದ ಬೇರೆ ಮಾಡು (ಮಂಡ್ಯ.ಜಿ). **ಇರೂ:** ವಕ್ಕು

ಒಕ್ಕುಗೋಲು: ತೆನೆ ಬಡಿಯಲು ಉಪಯೋಗಿಸುವ ಕೋಲು

ಒಕ್ಕುಡಿತೆ: ಒಂದು ಸೆರೆ; ಒಂದು ಬೊಗಸೆ

ಒಕ್ಕುಳ: ೧. ಹಳೆಯ ಕಾಲದ ಅಳತೆ; ಎಂಭತ್ತು ಸೇರು. ಕೆಲವರ ಪ್ರಕಾರ ಅರವತ್ತ ನಾಲ್ಕು ಸೇರು (ದಾವ.ಜಿ) ೨. ಒಂದು ಕೊಳಗ ಪ್ರಮಾಣ (ಬೆಳ.ಜಿ)

ಒಕ್ಕೆದೆರಿ: ಸೊಂಟದ ಸುತ್ತ ಧರಿಸುವ ಒಂದು ಆಭರಣ (ದಕ.ಜಿ)

ಒಕ್ಕೆಲುಕುಲು: ಕೃಷಿಕರು; ತುಳುವ ಬಂಟ ಸಮುದಾಯದ ಇನ್ನೊಂದು ಹೆಸರು (ದಕ.ಜಿ)

ಒಕ್ಕೇಳು: ಚಿಂದಿ

ಒಕ್ಕೈ: ೧. ಬೊಗಸೆಯಲ್ಲಿ ಅರ್ಧ; ಒಂದು ಶ್ಯಾರೆ. **ಪ್ರ:** ಶಂಕಿಣ ಸಬುತಕ್ಕೂ ಜಾಗಟೆಯ ನಾದಕ್ಕೂ ಒಕ್ಕೈಲಿ ಹಸಿಟ್ಟ ತರುತ್ತಾಳೆ ೨. ಕುರುಬರಲ್ಲಿಯ ಒಂದು ಸಮುದಾಯ (ಬೆಳ.ಜಿ). **ಇರೂ:** *ಒಕ್ಕೆವ (ಬಾಗ.ಜಿ)*

ಒಕ್ಕೊಟ್ಟಸೂಳೆ: ಎಲ್ಲರೂ ಬಹಿಷ್ಕಾರ ಹಾಕಿದ ಸೂಳೆ (ಧಾರ.ಜಿ)

ಒಕ್ಕೊವು: ದೋಣಿಗೆ ಹುಟ್ಟುಹಾಕುವುದು (ದಕ.ಜಿ)

ಒಕ್ಕೋಡುನಂದಿ: ಒಂದು ಕೋಡಿನ ಬಸವ; ಒಂದು ದೈವದ ಹೆಸರು (ದಕ.ಜಿ)

ಒಕ್ತನ: ನೋಡಿ– ಒಗೆತನ

ಒಕ್ಲಕ್ಕಿ: ಒಕ್ಕಲಿಗೆ ಹಾಕುವ ಅಕ್ಕಿ; ಮಡ್ಲಕ್ಕಿ (ಚಿಬ.ಜಿ)

ಒಕ್ಲಗೇರಿ/ಒಕ್ಕಲಗೇರಿ: ಒಕ್ಕಲಿಗರು ವಾಸಿಸುವ ಕೇರಿ. **ಪ್ರ:** ಒಕ್ಕಲಗೇರ್‍ಯಾಗ ಮಳಿರಾಜ, ಅವರು ಮಕ್ಕಳ ಮಾರ್‍ಯಾರ ಮಳಿರಾಜ

ಒಕ್ಲ್‌ಕೂಡಿಕೆ: ಗೃಹಪ್ರವೇಶಕ್ಕೆ ಶುಭದಿನ ನಿಗದಿಪಡಿಸುವುದು (ಕೊಡ.ಜಿ)

ಒಗಚು: ೧. ಒಗರು; ಒಂದು ರೀತಿಯ ಕಹಿ ರುಚಿ (ಧಾರ.ಜಿ) ೨. ಉಪ್ಪುಪ್ಪು (ಬೆಂಗ್ರಾ.ಜಿ) ೩. ಅಷ್ಟಾಗಿ ರುಚಿಯಿಲ್ಲದ್ದು **ಪ್ರ:** ಇವತ್ತು ಸಾರು ಬರೀ ಒಗಚು ಒಗಚಾಗಿದೆ. ೪. ನಿರಾಕರಿಸು (ಮಂಡ್ಯ.ಜಿ) **ನೋಡಿ–** ಒಗರು.

ಒಗಟು: ೧. ಪ್ರಶ್ನೋತ್ತರ ರೂಪದಲ್ಲಿರುವ ಜನಪದ ಸಾಹಿತ್ಯದ ಮುಖ್ಯ ಪ್ರಕಾರ. ಒಬ್ಬರು ಒಗಟು ಹಾಕಿದರೆ ಇನ್ನೊಬ್ಬರು ಅದಕ್ಕೆ ಉತ್ತರ ಹೇಳಬೇಕು (ಧಾರ.ಜಿ) ೨. ಜಟಿಲವಾದದ್ದು; ಗೋಜಲು ಗೋಜಲಾದದ್ದು; ಗೂಢವಾದದ್ದು

ಒಗಟುಒಡೆ: ಒಗಟಿನಲ್ಲಿರುವ ಪ್ರಶ್ನೆಗೆ ಉತ್ತರ ಕೊಡು (ಮೈಸೂ.ಜಿ). **ಇರೂ:** *ಒಗಟು ಬಿಡಿಸು*

ಒಗಡಜೋಳ: ನೋಡಿ– ಒಗರು ಜೋಳ

ಒಗತ: ೧. ಎಸೆಯುವಿಕೆ ೨. ಹೊಡೆಯುವಿಕೆ ೩. ಬಟ್ಟೆ ಒಗೆಯುವಿಕೆ (ಬಿಜಾ.ಜಿ)

ಒಗದೆನೀರು: ಮಲೆನಾಡಿನಲ್ಲಿ ಗುಡ್ಡಗಳ ಮೇಲಿನಿಂದ ಮನೆ ಬುಡಕ್ಕೆ ಸದಾ ನೀರು ಬರುವಂತೆ ಅಡಕೆ ಮರ ಅಥವಾ ಬಿದಿರಿನ ದೋಣಿ ಹಾಕಿ ನೀರು ಬೀಳುವಂತೆ ಮಾಡಿದ ವ್ಯವಸ್ಥೆ

ಒಗರಡಕೆ: ಒಗರಾಗಿರುವ ಅಡಕೆ; ಬೇಯಿಸದ ಅಡಕೆ; ಸೊಕ್ಕಡಕೆ (ಮಲೆ)

ಒಗರು: ೧. ಆರುವಿಧವಾದ ರಸಗಳಲ್ಲಿ ಒಂದು; ಕಹಿಯೂ ಅಲ್ಲದ ಸಿಹಿಯೂ ಅಲ್ಲದ ರುಚಿ (ಮೈಸೂ.ಜಿ) ೨. ಕಹಿಯಾದ, ಹಣ್ಣಾಗದ ಕಾಯಿ (ಧಾರ.ಜಿ) ೩. ಸೊಕ್ಕು (ಧಾರ.ಜಿ). **ಇರೂ:** ಒಗಚು, ವಗಚು, ಚೊಗರು

ಒಗರುಜೋಳ: ಒಂದು ಬಗೆಯ ಜೋಳ. ಇದು ಅಷ್ಟಾಗಿ ರುಚಿಯಿರುವುದಿಲ್ಲ. ದನಗಳ ಮೇವಿಗಾಗಿ ಮಾತ್ರ ಇದನ್ನು ಬೆಳೆಸುತ್ತಾರೆ. **ಇರೂ:** *ಒಗಡಜೊಳ (ಧಾರ.ಜಿ)*

ಒಗರುಹಸಿ: ಮಳೆನೀರಿನಿಂದ ಕೃಷಿ ಭೂಮಿಯಲ್ಲಿ ಉಂಟಾಗುವ ಸುಮಾರು ಎರಡು ಅಂಗುಲದಷ್ಟು ಆಳದ ತೇವ (ಬಳ್ಳಾ.ಜಿ)

ಒಗರ್‌ನೀರು: ಒಗರು ರುಚಿ ಇರುವ ನೀರು (ಬಳ್ಳಾ.ಜಿ)

ಒಗಾಯಿಸು: ೧. ಬಿಸಾಡು ೨. ಕಿತ್ತು ಎಸೆ (ಶಿವ.ಜಿ)

ಒಗಾಸಿ ಮಾತಾಡು: ಸಂಬಂಧ ನಿರಾಕರಿಸಿ ಮಾತಾಡು; ನಿಕೃಷ್ಟವಾಗಿ ಮಾತಾಡು

ಒಗಿ: ೧. ಬಟ್ಟೆ ಸ್ವಚ್ಛಗೊಳಿಸು; ಮೈಲಿಗೆ ಬಟ್ಟೆಗಳನ್ನು ಮಡಿ ಮಾಡು (ಬೀದ.ಜಿ). **ಪ್ರ:** ಒಗಿಲಾಕ ಹೋಗಾನು ನಡಿರೇ ಮೂರು ನದಿ ದಾಟಿ ೨. ಬೇಡವಾದ ವಸ್ತುಗಳನ್ನು ಬಿಸಾಡು (ಧಾರ.ಜಿ) ೩. ಹಾಕು ೪. ಚೆಲ್ಲು (ಶಿವ.ಜಿ). **ಇರೂ:** *ಒಗಾಸ್ದ; ಒಗಾಸು; ಒಗಿಯಾಕೆ*

ಒಗೆ: ಮುಂಗಾರಿನಲ್ಲಿ ಬರುವ ಮೀನು (ದಕ.ಜಿ)

ಒಗೆತನ/ಒಗತನ: ೧. ಸಂಬಂಧ; ನೆಂಟಸ್ತನ; ೨. ಕೆಲಸದ ನಿರ್ವಹಣೆ (ಮೈಸೂ.ಜಿ) ೩. ಕೂಡಿ ಬಾಳುವೆ ಮಾಡುವುದು; ದಾಂಪತ್ಯ; ಸಂಸಾರ ನಡೆಸುವುದು. **ಪ್ರ:** ಮಲ್ಲಿಗೆಯಂತಹ ಮಗಳೀಗೆ ಎಲ್ಲಿತ್ತೋ ಒಗೆತನ. **ಇರೂ:** *ಒಕ್ತಾನ*

ಒಗೆಪುಡಿ: ಹೊಗೆಪುಡಿ; ಎಲೆಅಡಿಕೆ ಜೊತೆಗೆ ಬಳಸುವ ಹೊಗೆಸೊಪ್ಪಿನ ಕಡ್ಡಿಪುಡಿ (ಚಿತ್ರ.ಜಿ)

ಒಗೇತ: ಗೆಲುವು (ಬಿಜಾ.ಜಿ)

ಒಗ್ಗಒಟ್ಟಲು: ಬೀಜಗಳನ್ನು ಒಂದು ಕಡೆ ಬಿತ್ತಿ, ಸಸಿಮಾಡಿ ಬೆಳೆಸುವುದು; ರಾಗಿ, ಬತ್ತದ ಮಡಿ; ಬಿತ್ತನೆಯ ಸ್ಥಳ

ಒಗ್ಗಟ್ಟು: ಒಟ್ಟಾಗಿರುವುದು; ಐಕಮತ್ಯ

ಒಗ್ಗಮಾಡುವುದು: ಸ್ವಲ್ಪ ಜಾಗದಲ್ಲಿ ಧಾನ್ಯವನ್ನು ಒತ್ತಾಗಿ ಬಿತ್ತಿ ಸಸಿ ದೊಡ್ಡದಾದ ನಂತರ ಕಿತ್ತು ಬೇರೆಡೆ ನೆಡುವುದು; ನಾಟಿ ಹಾಕುವುದು. **ಇರೂ:** *ಒಟ್ಲು*

ಒಗ್ಗಯ್ಯ: ಗೊಗ್ಗಯ್ಯ; ಗೊರವ; ಮೈಲಾರಲಿಂಗ ಅಥವಾ ಮುಡುಕುತೊರೆ ಮಲ್ಲಿಕಾರ್ಜುನನ ಭಕ್ತ

ಒಗ್ಗರ: ರಾಶಿ; ಸಮೂಹ

ಒಗ್ಗರ ಕುಣಿತ: ಮೈಲಾರಲಿಂಗನ ಭಕ್ತರು ಮಾಡುವ ವೀರನೃತ್ಯ (ಬಳ್ಳಾ.ಜಿ)

ಒಗ್ಗರಣೆಹುಟ್ಟು: ಒಗ್ಗರಣೆ ಹಾಕುವ ಸೌಟು (ಉಕ.ಜಿ)

ಒಗ್ಗಲ್ಲು: ಏಕಶಿಲೆ

ಒಗ್ಗಸೇವೆ: ೧. ಗೃಹಪ್ರವೇಶದ ಸಂದರ್ಭದಲ್ಲಿ ನಡೆಸುವ ಒಂದು ಸೇವೆ ೨. ಗೊರವರು ಕರಿಕಂಬಳಿ ಹಸೆಯ ಮೇಲೆ ದೋಣಿಯಲ್ಲಿಟ್ಟ ಹಾಲುಹಣ್ಣುಗಳನ್ನು ನೇರವಾಗಿ ಬಾಯಿಯಿಂದಲೇ ಸೇವಿಸುವ ಆಚರಣೆ

ಒಗ್ಗಾರೆಮರ: ಇಳಿಬಿಸಿಲಿನ ಪ್ರಖರತೆಗೆ ಒಂದು ಪಕ್ಕ ಸುಟ್ಟ ಅಡಕೆ ಮರ. ಬಿಸಿಲು ಹೊಡೆದ ಭಾಗದ ಹೊದಿಕೆ ಅಥವಾ ಕಾಂಡ ಸುಟ್ಟು ಕರಕಲಾಗುತ್ತದೆ. ದುರ್ಬಲವಾಗಿರುವುದರಿಂದ ಮರವನ್ನು ಬಗ್ಗಿಸಿದಾಗ ಮುರಿದು ಬೀಳುವ ಸಾಧ್ಯತೆ ಹೆಚ್ಚು (ಉಕ.ಜಿ)

ಒಗ್ಗಾಲಿ: ೧. ಒಂದೇಗಾಲಿ; ನೆಲ ಸಮವಿಲ್ಲದ ಜಾಗದಲ್ಲಿ ಒಂದೇ ಗಾಲಿಯ ಮೇಲೆ ಉರುಳುವ ಗಾಡಿ (ಶಿವ.ಜಿ)

ಒಗ್ಗಾಲು: ಒಂಟಿಕಾಲು; ಒಂದು ಪಾದ

ಒಗ್ಗಾಲೇಣಿ: ಒಂಟಿಕಾಲಿನ ಏಣಿ. ಒಂದೇ ಒಂದು ಬಿದುರಿನಿಂದ ಮಾಡಿದ ಏಣಿ. ಇದರಲ್ಲಿ ಬಿದುರಿನ ಗೆಣ್ಣುಗಳೇ ಏರುವ ಮೆಟ್ಟಿಲಾಗಿ ಕಾರ್ಯನಿರ್ವಹಿಸುತ್ತವೆ. ಈಚಲ ಮರ, ಬಗನಿ ಮರಗಳಲ್ಲಿ ಕಳ್ಳು ತೆಗೆಯಲು ಹಾಗೂ ಮರ ಏರಿಳಿಯುವುದಕ್ಕೆ ಇದನ್ನು ಬಳಸುವರು. ಮೆಣಸು ಹಾಗೂ ವೀಳೆಯದೆಲೆ ಕುಯ್ಯಲೂ ಇದನ್ನು ಬಳಸುವರು (ಮಲೆ). **ಇರೂ:** *ಒಕ್ಕಾಲು ಏಣಿ*

ಒಗ್ಗಿ: ಜಾನುವಾರುಗಳ ಮೂತಿಗೆ ತೊಡಿಸುವ ಹಗ್ಗ (ದಕ.ಜಿ)

ಒಗ್ಗು: (ಕ್ರಿ) ೧. ಮನಸ್ಸಿಗೆ ಹೊಂದಿಕೊಳ್ಳು; ರೂಢಿಯಾಗು; ಇಷ್ಟವಾಗು (ನಾ) ೨. ಗೊಬ್ಬರ ೩. ಗುಂಪು ೪. ಅಂಟು (ಮೈಸೂ.ಜಿ)

ಒಗ್ಗೇರಿ: ಮಲೆಕುಡಿಯರು ಸೊಂಟ ಎದೆ ಬೆನ್ನು ಮುಚ್ಚುವಂತೆ ಕಟ್ಟಿಕೊಳ್ಳುವ ಬಟ್ಟೆ (ದಕ.ಜಿ)

ಒಗ್ರಾಣೆ: ೧. ಒಗ್ಗರಣೆ ೨. ಮಂಡಕ್ಕಿ ನೆನೆಸಿ ಒಗ್ಗರಣೆ ಹಾಕಿ ತಯಾರಿಸಿದ ತಿಂಡಿ (ಗುಲ್ಬ.ಜಿ)

ಒಗ್ವಾಕೋದು: ಅಡಿಕೆ ಬೀಜವನ್ನು ನೆಲದಲ್ಲಿ ಹುಗಿದು ಮೊಳಕೆ ತರಿಸುವುದು (ಉಕ.ಜಿ); ಅಡಕೆ ಒಟ್ಲು ಹಾಕುವುದು (ಮೈಸೂ.ಜಿ)

ಒಗ್ವಾನು: ದ್ರೋಹ ಮಾಡದವ; ನಂಬಿಕೆಯಿಟ್ಟವ (ಮೈಸೂ.ಜಿ)

ಒಚ್ಚ: ಒರಳಿನ ತುಂಬ ಕಾಳನ್ನು ಹಾಕಿ ಕುಟ್ಟುವುದು; ಒಂದು ಒಬ್ಬಿ (ಶಿವ.ಜಿ)

ಒಚ್ಚಡಿ: ಒಂದು ಪದರು (ದಕ.ಜಿ)

ಒಚ್ಚತ: ೧. ಮುಡಿಪು; ಮೀಸಲು (ಮೈಸೂ.ಜಿ) ೨. ನಿಶ್ಚಿತ (ಮಂಡ್ಯ.ಜಿ) ೩. ಸೌಖ್ಯ (ಮೈಸೂ.ಜಿ) ೪. ಚೊಕ್ಕಟ (ಬೆಂಗ್ರಾ.ಜಿ). **ಇರೂ:** *ಒಚ್ಚಕ*

ಒಚ್ಚಮಗ್ಗಲುಸೇವೆ: ದೇವಸ್ಥಾನದ ಸುತ್ತ ಒಂದೇ ಮಗ್ಗುಲಿನಲ್ಲಿ ತೆವಳಿ ಹರಕೆ ಸಲ್ಲಿಸುವುದು (ಮೈಸೂ.ಜಿ)

ಒಚ್ಚಾಯ: ಉಡುಗೊರೆ. ಮದುವೆಯ ಶಾಸ್ತ್ರದಲ್ಲಿ ನೀಡುವ ಕಾಣಿಕೆ (ಉಕ.ಜಿ)

ಒಚ್ಚಾರಲುಮರ: ಒಂದು ಬಗೆಯ ಮರ. ಭೂಮಿಹುಣ್ಣಿಮೆಯ ಬೆರಕೆಸೊಪ್ಪಿನ ಪಲ್ಯಕ್ಕೆ ಈ ಮರದ ಎಲೆಗಳನ್ನು ಬಳಸುತ್ತಾರೆ (ಶಿವ.ಜಿ)

ಒಚ್ಚಾರಿ: ಒಂದು ಪಕ್ಕ; ಒಂದು ಕಡೆ (ಚಾಮ.ಜಿ). **ಇರೂ:** *ಒಚ್ಚೋರಿ*

ಒಚ್ಚಿ: (ನಾ) ೧. ಚೌಕಾಬಾರ ಆಟದಲ್ಲಿ ಒಂದು ಸಂಖ್ಯೆಯ ಗರ ಬೀಳುವುದು (ಶಿವ.ಜಿ) ೨. ಆಯುಧಗಳನ್ನು ಹರಿತಮಾಡಲು ಮಸೆಯುವ ಮಣೆ (ಕೋಲಾ.ಜಿ) ೩. ಕತ್ತಿಯನ್ನು ಮಸೆದು ಹರಿತಗೊಳಿಸಲು ಬಳಸುವ ಮರದ ಕೊರಡು (ದಕ.ಜಿ) (ಕ್ರಿ) ೪. ಹೊದಿಸು ೫. ತೂಗು ೬. ದೋಣಿಯ ಹುಟ್ಟು ಹಾಕು ೭. ಕದ ಮುಚ್ಚು ೮. ಸಿಪ್ಪೆ ತೆಗೆ (ಕೊಡ.ಜಿ). **ಪ್ರ:** ಈ ಹಣ್ಣಿನ ಸಿಪ್ಪೆ ಒಂಚೂರು ಒಚ್ಚಿಕೊಡಿ

ಒಚ್ಚೊತ್ತು: ಒಂದು ಹೊತ್ತು

ಒಚ್ಚೊತ್ತುಗಾರ: ತೋರಿಕೆಗಾರ; ಶೋಕಿಗಾರ

ಒಜಿ: ಬಡಗಿ

ಒಜ್ಜಿ: ನೋಡಿ– ಒಜ್ಜೆ

ಒಜ್ಜುರ: ವಜ್ರ

ಒಜ್ಜುರದ ಪೆಂಡೆ: ವಜ್ರದ ಕಾಲುಬಳೆ (ಮೈಸೂ.ಜಿ)

ಒಜ್ಜೆ/ಒಜ್ಜಿ: ವಜ್ಜೆ; ಭಾರ. **ಪ್ರ:** ತಾಯಿಗೆ ಕೂಸು ಎಂದೂ ಒಜ್ಜೆ ಆಗುವುದಿಲ್ಲ (ಚಿತ್ರ.ಜಿ)

ಒಟಒಟ್ಯಾ: ವಟವಟ್ಯಾ; ಒಂದು ಕಾಡುಸಸ್ಯ (ಬೀದ.ಜಿ)

ಒಟಕಾಲ: ಒಂದೇ ಕಾಲ

ಒಟಪ್ಯಾ: ಕಲ್ಲಿನ ತುಣುಕು; ಆಡಲು ಬಳಸುವ ಸಣ್ಣ ಕಲ್ಲು

ಒಟಿಗೆ: ಸ್ವಲ್ಪ

ಒಟ್ಕ: ತೊಂದರೆ

ಒಟ್ಟ: ೧. ಸಮ ೨. ಜಮಾ ೩. ಒರಟು; ಬಿರುಸು

ಒಟ್ಟ ಮುಕ್ತಾರ: ಪೂರ್ಣ ಅಧಿಕಾರ

ಒಟ್ಟರಗಲ್ಲು: ಹೇರಿಕೆ ಕಲ್ಲು

ಒಟ್ಟಲಿಡು: ಒಟ್ಟು; ರಾಶಿಮಾಡು

ಒಟ್ಟಲು: ನೋಡಿ– ಒಟ್ಟಿಲು

ಒಟ್ಟಾರೆ: ೧. ಒಟ್ಟಿನ ಮೇಲೆ ೨. ಅಸ್ತವ್ಯಸ್ತ (ಕೊಡ.ಜಿ). **ಇರೂ:** *ಒಟ್ರಾಶಿ*

ಒಟ್ಟಿ: ಒಂದು ಎಕರೆಯ ಅಳತೆ (ಕೊಡ.ಜಿ)

ಒಟ್ಟಿಗೆ: ೧. ಜೊತೆಗೆ; ಒಂದಿಗೆ ೨. ಬಾಳೆಹಣ್ಣಿನ ಸಿಪ್ಪೆ (ಬಳ್ಳಾ.ಜಿ)

ಒಟ್ಟಿಚೀಲ: ಕುರುಬರು ಕುರಿ ಕಾಯಲು ಹಾಕಿಕೊಂಡು ಹೋಗುವ ಚೀಲ (ಬೆಳ.ಜಿ)

ಒಟ್ಟಿನ ಜಲ್ಲಿ: ರೈತರು ಬಳಸುವ ಸಾಧನ

ಒಟ್ಟಿಲು/ಒಟ್ಟಲು/ಒಟ್ಲು/ಒಟ್ಲು: ೧. ರಾಶಿ; ಗುಂಪು ೨. ಸಸಿಮಡಿ; ನಾಟಿಗೆ ಪೈರು ಬೆಳೆಸಲು ಮಾಡುವ ಮಣ್ಣಿನ ಪಾತಿ; ಅಗೆ ಹುಯ್ಯುವಿಕೆ (ಬಿಜಾ.ಜಿ)

ಒಟ್ಟು: (ಕ್ರಿ) ೧. ಕೂಡಿಸು; ಪೇರಿಸು; ಗುಡ್ಡೆಹಾಕು. **ಪ್ರ:** ಸೌದೆ ಮುಳ್ಳು ತಂದು ಊರ ಮುಂದೆ ಒಟ್ಟಿ ಬೆಂಕಿ ಹಾಕಿ, ಬೂದಿ ಬಿಡುವುದು ೨. ತುರುಕು; ತುಂಬು **ಪ್ರ:** ಆ ಊರಿನವರು ಮಿತಿಲಿ ಸೌದೆಯನ್ನು ಒಲೆಗೆ ಒಟ್ಟುವುದಿಲ್ಲವಂತೆ ೩. ರಾಶಿ; ಗುಂಪು ೪. ಮೊತ್ತ ೫. ಬೆಂಕಿ ಹಚ್ಚು (ದಕ.ಜಿ) (ನಾ) ೬. ನೂಲು ನೇಯುವ ಇಲ್ಲವೆ ಹೊಸೆಯುವ ಒಂದು ಯಂತ್ರ

ಒಟ್ಟುಗಟ್ಲೆ: ಒಂದೇ ಬಾರಿಗೆ; ಎಲ್ಲಾ ಸೇರಿ (ಶಿವ.ಜಿ)

ಒಟ್ಟುಮೇವುಮಾಡು: ದನಗಳಿಗೆ ತಿನ್ನಿಸಲಿಕ್ಕಾಗಿ ಬಣವೆಗಳಿಂದ ಒಟ್ಟು ಮೇವನ್ನು ಕೊಟ್ಟಿಗೆಗೆ ತರುವಿಕೆ (ಚಿಮ.ಜಿ)

ಒಟ್ಟುಯ್ಯೋದು: ನಾಟಿಗೆ ಭತ್ತದ ಸಸಿಗಳನ್ನು ಸಿದ್ಧ ಮಾಡಿಕೊಳ್ಳುವ ಒಂದು ವಿಧಾನ. ಹುಲ್ಲು ಮತ್ತು ಹೊಂಗೆಸೊಪ್ಪಿನಲ್ಲಿ ಭತ್ತದ ಬೀಜಗಳನ್ನು ಕಟ್ಟಿ, ಎರಡು ಮೂರು ದಿವಸ ನೀರಿನಲ್ಲಿ ನೆನೆಹಾಕಿ, ನಂತರ ಕೆಸರು ರಾಡಿಗೆ ಹದವಾಗಿ ಸುರುವಿ ನಾಟಿಹಾಕಲು ಸಸಿಗಳನ್ನು ಸಿದ್ಧ ಮಾಡಿಕೊಳ್ಳುತ್ತಾರೆ (ದಾವ.ಜಿ)

ಒಟ್ಟೂಟ: ಮನೆ ಹಿಸ್ಸೆ ಆದಾಗ ಅಣ್ಣ ತಮ್ಮಂದಿರು ಕೊನೆಯಸಲ ಒಟ್ಟಿಗೆ ಕುಳಿತು ಮಾಡುವ ಊಟ (ಬೆಂಗ್ರಾ.ಜಿ)

ಒಟ್ಟೆ: ೧. ಸಹಜವಾಗಿ ಮರದಲ್ಲಿ ಉಂಟಾದ ರಂಧ್ರ; ಪೊಟರೆ (ಮಲೆ). **ಪ್ರ:** ಬರ್ಕನ್ನ ಬೆರಸಿಕೊಂಡು ಹೋಗಿ ಆ ಮರದ ಒಟ್ಟೆಗೆ ಹತ್ತಿಸಿ ಬಿಟ್ಟಿದೆ ೨. ಒರಳಿಗೆ ಒಂದು ಸಲಕ್ಕೆ ಹಾಕುವಷ್ಟು ಅಳತೆಯ ಧಾನ್ಯ; ಒಬ್ಬೆ ೩. ಬೇಲಿ; ಮೆಳೆ

ಒಟ್ಟೆಕೊನೆ: ಹೊಟ್ಟೆಯಲ್ಲಿ ಹುಟ್ಟಿದ ಮಗ

ಒಟ್ಟೆಕೋಳಿ: ಅಂಕದಲ್ಲಿ ಸೋತ ಕೋಳಿ (ದಕ.ಜಿ)

ಒಟ್ಟೆಬಾಲ್ ಕಟ್ಟ: ಗೆದ್ದ ಹಾಗೂ ಸೋತ ಕೋಳಿಗಳನ್ನು ಸಮಾನವಾಗಿ ಹಂಚಿಕೊಳ್ಳುವ ನಿಯಮದಡಿ ನಡೆಸುವ ಕೋಳಿಅಂಕ (ದಕ.ಜಿ)

ಒಟ್ಟೆಲ್: ತೊಟ್ಟಿಲು (ದಕ.ಜಿ)

ಒಟ್ಟೊಯ್ಯು: ಸಸಿ ತಯಾರು ಮಾಡು (ಶಿವ.ಜಿ/ಚಾಮ.ಜಿ)

ಒಟ್‌ಪಾವಾಣಿ: ತೂತು ಬಿದ್ದ ಹಳೆ ನಾಣ್ಯ

ಒಟ್ಮರ: ಎತ್ತಿನ ಬಂಡಿಯ ಚಕ್ರದ ಅಗಲವಾದ ಮರದ ಪುಟ್ಟಿಗಳು; ಒಟ್ಟೆಮರ **ನೋಡಿ–** ಪುಟ್ಟಿ (ಕೋಲಾ.ಜಿ)

ಒಟ್ಲ: ಹೊದರು; ಪೊದರು; ಪೊದೆ (ಉಕ.ಜಿ)

ಒಟ್ಲಿ: ೧. ರೊಟ್ಟಿ ೨. ಹೊದಿಕೆ ೩. ಗರ್ಭಿಣಿ (ಬೀದ.ಜಿ)

ಒಟ್ಲು: ನೋಡಿ– ಒಟ್ಟಿಲು

ಒಟ್ಲುಗದ್ದೆ: ನೋಡಿ– ಅಗೇಡಿ

ಒಟ್ಲುಪಾತಿ: ಒಟ್ಟಲುಪಾತಿ; ನಾಟಿಗಾಗಿ ಪೈರುಗಳನ್ನು ಬೆಳೆಸುವ ಸ್ಥಳ

ಒಟ್ಲು ಹಾಕುವುದು: ನೋಡಿ– ಒಟ್ಟುಯ್ಯೋದು(ಶಿವ.ಜಿ)

ಒಡ: ದೋಣಿ; ಕೋವೆದಾರ (ಮೈಸೂ.ಜಿ/ದಕ.ಜಿ)

ಒಡಕಟ್ಟಿಗಿ: ಮರದ ಕೊರಡನ್ನು ಒಡೆದು ಹಾಕಿದ ಕಟ್ಟಿಗೆಯ ಸೀಳು (ಗುಲ್ಬ.ಜಿ). **ಇರೂ:** *ಸೌದೆಸೀಳು (ಮಂಡ್ಯ.ಜಿ)*

ಒಡಕತುರಬು: ಕೂದಲು ಸೇರಿಸಿ ಒಂದು ಗಂಟು ಹಾಕಿ ಉಳಿದ ಕೂದಲಿನಿಂದ ಆ ಗಂಟನ್ನು ಮುಚ್ಚುವುದು (ಬೆಳ.ಜಿ)

ಒಡಕನದು: ಒಡೆದುಕೊಳ್ಳುವುದು; ಬಿರಿಯುವುದು

ಒಡಕನಮಟ್ಟ: ಒಡೆದುಕೊಳ್ಳುವವರೆಗೂ

ಒಡಕರ್ತ: ಕರ್ತೃವಾದ ಒಡೆಯ; ಸೃಷ್ಟಿಕರ್ತ

ಒಡಕಲು: ೧. ಚೂರುಚೂರಾಗಿರುವ ದ್ವಿದಳ ಧಾನ್ಯಗಳು ಉದಾ: ಬೇಳೆ ಒಡಕಲು ೨. ದದ್ದು ಬಳೆ ೩. ಕೈಗುಣ. ಕೆಲವರ ಕೈಗಳಲ್ಲಿ ಬಲೆಗೆ ತೊಗರು ಹಿಡಿಯುವುದಿಲ್ಲ. ಅಂಥವರ ಕೈಗುಣವನ್ನು ಒಡಕಲು ಎಂದು ನಂಬುತ್ತಾರೆ (ಉಕ.ಜಿ) ೪. ಸೋರುವುದು ೫. ತರಿಯಾದ (ಮೈಸೂ.ಜಿ)

ಒಡಕಲುಬಾಯಿ: ನೋಡಿ– ಒಡಕುಬಾಯಿ

ಒಡಕು: ೧. ಬಿರುಕು ಬಿಟ್ಟಿದ್ದು; ಸೀಳು. **ಪ್ರ:** ಒಡಕ ಗಡಗಿ ಬಳಸಬ್ಯಾಡ ೨. ಒಡೆದದ್ದು; ಚೂರಾದದ್ದು. **ಪ್ರ:** ಒಡಕು ಕನ್ನಡೀಲಿ ಮುಖ ನೋಡಬಾರದು ೩. ಮನಸ್ತಾಪ; ಭೇದಭಾವ. **ಪ್ರ:** ಬುಡಕಟ್ಟು ಗುಂಪುಗಳಲ್ಲೇ ಒಡಕು ತರುವ ಕುತಂತ್ರವನ್ನೂ ಬಳಸಿದರು

ಒಡಕುದನಿ: ಗಂಟಲಿನಿಂದ ಧ್ವನಿ ಸ್ಪಷ್ಟವಾಗಿ ಬರದೆ ಎರಡೆರಡಾಗಿ ಒಡೆದಂತೆ ಬರುವುದು

ಒಡಕುಬಾಯಿ/ಒಡಕಬಾಯಿ: ಮಾತು ನಿಲ್ಲದ ಬಾಯಿ; ರಹಸ್ಯ ಕಾಪಾಡಿಕೊಳ್ಳದ ವ್ಯಕ್ತಿ (ಮಂಡ್ಯ.ಜಿ). **ಪ್ರ:** ಅವಳದು ಒಡಕುಬಾಯಿ

ಒಡಕೆ: ಕೆರೆಯಲ್ಲಿ ಅಥವಾ ಹೊಳೆಯ ಅಂಚಿನಲ್ಲಿ ಅಥವಾ ಜೌಗುಪ್ರದೇಶದಲ್ಲಿ ಎತ್ತರಕ್ಕೆ ಬೆಳೆಯುವ ಜೊಂಡು; ಹೊಡಕೆ (ಶಿವ.ಜಿ)

ಒಡಕ್ಲು ಆರಿಸು: ಹಣ್ಣು ಆರಿಸುವಾಗ ಕೆಳಗೆ ಬಿದ್ದವನ್ನು ಆಯ್ದುಕೊಳ್ಳು (ಚಿತ್ರ.ಜಿ)

ಒಡಕ್ಲುಬ್ಲಿ: ಕಬ್ಬಿಣದ ಒಂದು ಬಗೆ

ಒಡಗತೆ: ೧. ಬಿಡಿಸಬೇಕಾದ ಒಗಟು. ಉತ್ತರ ಕರ್ನಾಟಕ ಭಾಗದಲ್ಲಿ ಒಗಟಿಗೆ ಪರ್ಯಾಯವಾಗಿ ಬಳಸುವ ಪದ ೨. ಒಗಟಿನ ರೂಪದ ಕಥೆ. ಕಥೆಯ ಕೊನೆಯಲ್ಲಿ ಪ್ರಶ್ನೆ ಕೇಳಿ ಅದಕ್ಕೆ ಉತ್ತರ ಹೇಳಬೇಕು. ಜನಪದ ಗದ್ಯಪ್ರಕಾರಗಳಲ್ಲಿ ಒಂದು ಬಗೆ (ಬಿಜಾ.ಜಿ)

ಒಡಗಲ್ಲು: ದ್ವಿದಳ ಧಾನ್ಯಗಳನ್ನು ಒಡೆಯುವ ಕಲ್ಲು; ಬೀಸುವ ತೆಳ್ಳನೆಯ ಕಲ್ಲು (ಉಕ)

ಒಡಗಾಣ: ಕಬ್ಬು ಅರೆಯುವ ಗಾಣದಲ್ಲಿ ಕಬ್ಬನ್ನು ಒಡೆಯುವ ಕಣೆ

ಒಡಗಾರಿ: ಕಣವನ್ನು ಸಾರಿಸಲು ಬಳಸುವ ಈಚಲು ಪೊರಕೆ (ಚಿತ್ರ.ಜಿ)

ಒಡಗಿಚ್ಚು: ೧. ಒಡಲಕಿಚ್ಚು; ಸಂಕಟ (ಮೈಸೂ.ಜಿ) ೨. ಸಹಗಮನ (ಮಂಡ್ಯ.ಜಿ). **ಇರೂ:** *ಒದಗಿಚ್ಚು*

ಒಡಗು: ಕಾಲುವೆ

ಒಡಚು: ೧. ಬಿಡಿಸು. **ಪ್ರ:** ಒಗಟನ್ನು ಒಡಚಬೇಕು ೨. ಹಿಂಜು; ವಿಭಾಗಿಸು (ಮಂಡ್ಯ.ಜಿ)

ಒಡತಿ: ೧. ಯಜಮಾನಿ. **ಪ್ರ:** ತಿನ್ನಾಕೆ ಏನಾದ್ರೂ ಇದ್ರೆ ಕೊಡಿ ಒಡತಿ ೨. ಉಳ್ಳವಳು; ಶ್ರೀಮಂತೆ **ಪ್ರ:** ಬಡವೆಯಾದರೂ ಹಾಡಿನ ಒಡತಿ

ಒಡದಾರ/ಉಡದಾರ: ಗಂಡುಮಕ್ಕಳು ಸೊಂಟಕ್ಕೆ ಕಟ್ಟುವ ಕಪ್ಪು ಅಥವಾ ಕೆಂಪು ಬಣ್ಣದ ದಾರ. ಇದನ್ನು ಕಟ್ಟದಿದ್ದರೆ ಕತ್ತೆ ಕೂಗಿದಾಗ ವೃಷಣಗಳು ಕೆಳಸರಿದು ನಪುಂಸಕತ್ವ ಬರುತ್ತದೆ ಎಂಬುದು ಜನಪದ ನಂಬಿಕೆ (ಮಂಡ್ಯ.ಜಿ)

ಒಡದುಮೂಡು: ನೆಲದಿಂದ ಉದ್ಭವವಾಗು. **ಪ್ರ:** ಆ ಲಿಂಗ ಕಡೆದು ಮಾಡಿದ್ದಲ್ಲ ಒಡೆದು ಮೂಡಿದ್ದು.

ಒಡದುಹೇಳಿ/ಒಡದೇಳಿ: ೧. ಬಿಡಿಸಿಹೇಳಿ; ವಿಸ್ತರಿಸಿ ಅರ್ಥವಾಗುವಂತೆ ಹೇಳಿ (ಮೈಸೂ.ಜಿ). **ಪ್ರ:** ಲಿಂಗುಪೂಜೆ ಎಡಗೈಯಾಗ, ಎಡಗೈಯೆಂಬುದು ಮಡಿ ಹೇಗಾಯಿತು ಒಡದು ಹೇಳು ನಮಗ ೨. ಒಗಟನ್ನು ಬಿಡಿಸಿಹೇಳಿ; ಒಗಟಿಗೆ ಉತ್ತರ ಹೇಳಿ. **ಪ್ರ:** ಬಲ್ಲಂತ ಜಾಣರು ಒಡದೇಳಿ....... (ಚಾಮ.ಜಿ)

ಒಡದೇಳಿ: ನೋಡಿ– ಒಡದುಹೇಳಿ

ಒಡನೂಂಟೊ: ಜತೆಯೂಟ (ದಕ.ಜಿ)

ಒಡಪಾಲು: ಅರ್ಧಪಾಲು. **ಇರೂ:** *ಒಡಪಾಳು*

ಒಡಪು: ೧. ಜನಪದ ಸಾಹಿತ್ಯಕ್ಕೆ ಸೇರಿದ ಒಗಟಿನಂತಹ ಪ್ರಕಾರ. ೨. ಉತ್ತರಕರ್ನಾಟಕದ ಮದುವೆ ಸಂದರ್ಭಗಳಲ್ಲಿ ನವವಧೂವರರು ಪರಸ್ಪರರ ಹೆಸರನ್ನು ಹೇಳುವುದಕ್ಕೆ ಬಳಸುವ ಒಗಟಿನಂತಹ ಪರೋಕ್ಷ ವಿಧಾನ ೩. ಮದುವೆಯಲ್ಲಿ ವಧು ಗಂಡನ ಹೆಸರನ್ನು ನೇರವಾಗಿ ಹೇಳದೆ ಪದ್ಯದಲ್ಲಿ ಒಗಟಿನಂತೆ ಹೇಳುವ ವಿಧಾನ (ಶಿವ.ಜಿ). **ಪ್ರ:** ಮುತ್ತೈದೇರು ಸಾಕ್ಷಿ ಇಟ್ಟು ಆರತಿ ಮಾಡಿ ವಯ್ಯಾರ ಮಾಡಿ ಗಂಡನ ಹೆಸರು ಹೇಳಲು ನಾಚಿಕೊಂಡು ಒಡಪಿನಲ್ಲಿ ಹೇಳಿದ್ರು (ದಾವ.ಜಿ). **ಪ್ರ:** ಹೆಸರ ಹೇಳ್ತೀನಿ ಒಡಪಕಟ್ಟಿ ೩. ದ್ವಿದಳ ಧಾನ್ಯದ ಒಂದು ಭಾಗ (ದಕ.ಜಿ)

ಒಡಪೆ: ೧. ಹೋಳು; ಸೀಳಿದ ಭಾಗ ೨. ದೋಸೆ ಹಿಟ್ಟು (ಶಿವ.ಜಿ)

ಒಡಬಾಳು: ಬಡತನದ ಬಾಳು; ಕಷ್ಟದ ಬದುಕು (ಮೈಸೂ.ಜಿ)

ಒಡಬೀಳ್‌ದ್: ಮಿತಿಮೀರಿದ ನೀರಿನಿಂದಾಗಿ ಗದ್ದೆ ಹಳ್ಳ ಬೀಳುವುದು (ಕೊಡ.ಜಿ)

ಒಡಬು: ೧. ಪುರವಂತರು ವೀರಭದ್ರ ದೇವರ ಮಹಿಮೆ ಹೇಳಿ ಮಧ್ಯ ಖಡೆಖಡೆ ಎನ್ನುವುದಕ್ಕೆ ಬಳಸುವ ಪದ. **ಪ್ರ:** ವೀರಭದ್ರ ದೇವರ ಒಡಬು ೨. ವೀರಗಾಸೆಯವರು ದೇವರ ಮುಂದೆ ಅಥವಾ ಒಡೆಯರು ಹಾಗೂ ಯಜಮಾನರುಗಳ ಮುಂದೆ ಹೇಳುವ ಮಾತುಗಳು (ಬೆಂಗ.ಜಿ) ೩. ವೈಭವದ ನಾಮಾವಳಿ ೪. ಸ್ತುತಿ (ಶಿವ.ಜಿ). ೫. ಮದುವೆ ಮತ್ತು ಜಾತ್ರೆ ಸಂದರ್ಭಗಳಲ್ಲಿ ಹೇಳುವ ವೀರೋಚಿತ ವಚನ **ಇರೂ:** *ಒಡಪು*

ಒಡಬೆ: ಒಡವೆ; ವಡವೆ; ಆಭರಣ. **ಇರೂ:** *ಒಡಮೆ*

ಒಡಮಾತು: ಜೊತೆಮಾತು; ಪರಸ್ಪರರು ಹಂಚಿಕೊಳ್ಳುವ ಒಳಮಾತು; ಗುಟ್ಟಿನ ನುಡಿ (ಉಕ.ಜಿ)

ಒಡಮುರ: ಹೊಟ್ಟೆಕಿಚ್ಚು ಪಡುವವಳು

ಒಡಮುರಿ: ಮೈಮುರಿ (ಗುಲ್ಬ.ಜಿ)

ಒಡಮುರು: ಒಡ್ಡಮುರು; ಹೊಟ್ಟೆಮುರಿಯುವಂತೆ ನೋಯುವುದು (ಬೆಳ.ಜಿ)

ಒಡರು: ಚೂರು; ದಪ್ಪದಪ್ಪ ಚೂರುಗಳು **ಇರೂ:** *ಒಡೊದಸು*

ಒಡಲಕ್ಕಿ ಶಾಸ್ತ್ರ: ಬೋವಿ ಸಮುದಾಯದವರು ಮಾಡುವ ಸೀಮಂತ ಕಾರ್ಯ (ಬಳ್ಳಾ.ಜಿ)

ಒಡಲಜರ: ಒಳಜ್ವರ. ವಾಸಿಯಾಗದೆ ಆಗಾಗ ಮರುಕಳಿಸುವ ಜ್ವರ (ಮಲೆ) **ಪ್ರ:** ಹೋದ ಗದ್ದೆ ಕೊಯ್ಲಿನಿಂದ ಒಡಲಜರ ಮೂರ ದಿನಕ್ಕೆ ನಾಕ ದಿನಕ್ಕೆ ಬರ್ತಾನೇ ಅದೆ

ಒಡಲಿಡು: ಒಟ್ಟು; ರಾಶಿ ಮಾಡು

ಒಡಲು/ಒಡ್ಲು/ವಡ್ಲು: ೧. ದೇಹ; ಶರೀರ ೨. ಹೊಟ್ಟೆ. **ಪ್ರ:** ಹಡೆದಮ್ಮನೊಡಲು ಉರದ್ಹಾಂಗೆ ೩. ಅಂಚು ಮತ್ತು ಸೆರಗನ್ನುಳಿದ ಸೀರೆಯ ಮಧ್ಯದ ಭಾಗ. **ಪ್ರ:** ಈ ಸೀರೆಯ ಒಡಲಿನ ಬಣ್ಣ ಬೇರೆ, ಅಂಚಿನ ಬಣ್ಣ ಬೇರೆ

ಒಡಲುಗ: ದನಗಳ ಜೀರ್ಣಾಂಗಗಳಲ್ಲಿ ಒಂದು

ಒಡಲುದಮ್ಮ: ಮದುವೆ ಗಂಡಿನ ಜೊತೆ ಹೋಗುವ ಆಪ್ತ ಸ್ನೇಹಿತ. **ನೋಡಿ–** ಅಡುಗಲದಮ್ಮ

ಒಡಲುರಿ: ೧. ಹೊಟ್ಟೆಯ ಸಂಕಟ. **ಪ್ರ:** ಹಾದೀಲಿ ಹೋಪೋರೆ ಹಾಡೆಂದು ಕೇಳದಿರಿ, ಹಾಡಲ್ಲ ಇದು ನನ್ನ ಒಡಲುರಿ....... ೨. ದುಃಖ ೩. ಹೊಟ್ಟೆಕಿಚ್ಚು.

ಒಡವಾಣ: **ನೋಡಿ–** ಒಡ್ಯಾಣ

ಒಡವಾರ: ಕಾರೆಮೆಳೆ; ಹಣ್ಣು ಬಿಡುವ ಒಂದು ಜಾತಿಯ ಮುಳ್ಳುಗಿಡ (ಬೆಂಗ.ಜಿ)

ಒಡವೂರು: ಹೊಡೆಯುವುದು; ನುಡಿಯುವುದು

ಒಡವೆ: ೧. ಆಭರಣ. **ಪ್ರ:** ಮದ್ವೇಗೆ ಏನೇನ್ ಒಡವೆ ಮಾಡ್ಸಿದ್ದೀರಿ........ ೨. ತೋಳಿನ ಮೇಲೆ ಹಾಕಿಸಿಕೊಳ್ಳುವ ಒಂದು ಹಚ್ಚೆ ಚಿತ್ರ

ಒಡಸ್ಯಾಲ: ಕವಣೆ

ಒಡಹುಟ್ಟಿನ ಗಡಿಗೆ: **ನೋಡಿ–** ಒಡುಟ್ಟು ಗಡಿಗೆ

ಒಡಾಪು: ಕಲ್ಲು ಸೀಳಲು ಬಳಸುವ ಸಾಧನ; ಉಳಿ

ಒಡಾರಿ: ೧. ನಾವೆ ನಡೆಸುವ ಜನವರ್ಗ ೨. ದಕ್ಷಿಣಕನ್ನಡ ಜಿಲ್ಲೆಯ ಕುಂಬಾರ ವೃತ್ತಿಯ ಒಂದು ಸಮುದಾಯ

ಒಡಾಳತನ: ಉಡಾಳತನ (ಉಕ)

ಒಡಾಳು: ಹಣದ ಪಾತ್ರವಿಲ್ಲದ ಹಾಗೂ ಪರಸ್ಪರ ಸಹಕಾರ ಮನೋಭಾವದಿಂದ ಮಾತ್ರ ಆಳುಗೆಲಸ ಮಾಡಿಕೊಡುವ ಒಂದು ವ್ಯವಸ್ಥೆ; ಮುಯ್ಯಾಳು

ಒಡಾಳೆ: ಅಡಿಕೆಪಟ್ಟೆ. **ಪ್ರ:** ಉಳಾಕೆ ಮೊಂಡುಗುದ್ದಲಿ ತತ್ತನ್ನಿ ಉಣ್ಣಾಕೆ ಒಡಾಳೆ ತತ್ತನ್ನಿ (ಮೈಸೂ.ಜಿ/ಚಾಮ.ಜಿ)

ಒಡಾಳೆದೊಪ್ಪೆ: ಅಡಕೆಪಟ್ಟೆ ಎಲೆಯಲ್ಲಿ ಕಟ್ಟಿದ ದೊಡ್ಡ ದೊನ್ನೆ

ಒಡಿ: ೧. ದೇಹದ ಗ್ರಂಥಿಗಳಿರುವ ಭಾಗದಲ್ಲಿ ಬೆಳೆಯುವ ಗಡ್ಡೆ. ಒಂದು ವಿಧದ ರೋಗ (ದಕ.ಜಿ) ೨. ಗದ್ದೆಯನ್ನು ಹಲವು ಭಾಗಗಳಾಗಿ ವಿಭಜಿಸಿ ನಡುವಿನಲ್ಲಿ ಹಾಕುವ ಬದು (ದಕ.ಜಿ)

ಒಡಿಕಲ್ಲು: ದ್ವಿದಳಧಾನ್ಯಗಳನ್ನು ಬೇಳೆ ಮಾಡುವ ಅಥವಾ ಗಾಣದಲ್ಲಿ ಎಣ್ಣೆಕಾಳುಗಳನ್ನು ಅರೆಯುವ ಕಲ್ಲು; ಇದು ಬೀಸುವ ಕಲ್ಲಿನ ಆಕಾರದಲ್ಲಿದ್ದು ಅದಕ್ಕಿಂತ ದೊಡ್ಡ ಗಾತ್ರದ್ದಾಗಿರುತ್ತದೆ

ಒಡಿಕಾರ: **ನೋಡಿ–** ಒಡೆಕಾರ (ದಕ.ಜಿ)

ಒಡಿಗಾಯಿ: ೧. ಈಡುಗಾಯಿ ೨. ಹರಕೆಯ ಒಂದು ರೀತಿ (ಚಾಮ.ಜಿ)

ಒಡಿದಿಕ್ಕಳು: ಒಡೆಯರು; ಧನಿಗಳು (ದಕ.ಜಿ)

ಒಡಿನಡೆ: ಸಾಲಾಗಿ ಚಲಿಸುವ ವಿಧಾನ

ಒಡಿಪು: ಉಡುಪಿಯ ತುಳು ಹೆಸರು (ದಕ.ಜಿ)

ಒಡಿಬ್ಯಾಲ ಕಟ್ಟೋದು: ಉಡಿಯಕ್ಕಿ ಕಟ್ಟುವುದು; ಮಡಿಲು ತುಂಬುವುದು **ನೋಡಿ–** ಉಡಿತುಂಬುವುದು (ಕೋಲಾ.ಜಿ)

ಒಡಿಯಾಲಿ: ನುಚ್ಚು ನೂರಾಗಲಿ; ಹಾಳಾಗಲಿ

ಒಡಿವಾಣ: ಒಡ್ಯಾಣ; ಡಾಬು

ಒಡಿಸಲು: ಚಿಕ್ಕ ಕಲ್ಲು ಇಟ್ಟು ಪಕ್ಷಿಗಳಿಗೆ ಬೀಸುವುದು. **ನೋಡಿ–** ಚಾಟ್‌ಬಿಲ್ಲು

ಒಡಿಸು: ಕತ್ತರಿಸು

ಒಡು: (ಕ್ರಿ) ೧. ಗುಡಿಸು (ದಕ.ಜಿ) (ನಾ) ೨. ಸಿಪ್ಪೆ; ಹೊಟ್ಟು ೩. ಉಡ ೪. ಹೊಲಗದ್ದೆಯ ಬದುಗಳು ಮಳೆಯ ನೀರಿನಿಂದ ಒಡೆದ ಸ್ಥಳ (ಉಕ.ಜಿ); ಕಂದಕ

ಒಡುಚಿ: ಒಡವೆ; ಆಭರಣ (ಮೈಸೂ.ಜಿ)

ಒಡುಟ್ಟು: ಒಡಹುಟ್ಟು; ಜೊತೆಯಲ್ಲಿ ಹುಟ್ಟಿದವರು; ಒಂದೇ ತಾಯಿಯಿಂದ ಜನಿಸಿದ ಅಣ್ಣ ತಮ್ಮ ಅಕ್ಕ ತಂಗಿಯರು

ಒಡುಟ್ಟುಮಡಕೆ: ಒಡಹುಟ್ಟು ಮಡಕೆ. ಲಿಂಗಾಯಿತ ಸಮುದಾಯದ ವಿವಾಹ ಸಂದರ್ಭದಲ್ಲಿ ಗಂಗೆಯನ್ನು ತರಬೇಕಾದರೆ ಗಂಗೆ ತುಂಬಿ ಪೂಜಿಸುವ ಕಳಸ. ಮದುವೆ ಕಾರ್ಯಗಳೆಲ್ಲ ಪೂರ್ಣಗೊಳ್ಳುವವರೆಗೆ ಕಳಸವನ್ನು ವರನ ಅಕ್ಕ ತಂಗಿಯರು ವರನ ಜೊತೆಯಲ್ಲಿ ಹಿಡಿದುಕೊಂಡಿರಬೇಕು (ಶಿವ.ಜಿ). **ಇರೂ;** *ಒಡಹುಟ್ಟಿನಗಡಿಗೆ*

ಒಡುಮಡಿಕೆ: ಒಡೆದ ಮಡಿಕೆಯ ಭಾಗ (ಕೋಲಾ.ಜಿ)

ಒಡುರಿಮಾಡ: ಒಂದು ಕಂಬದ ಮೇಲೆ ಛಾವಣಿ ಹೊದೆಸಿ ಮಾಡಿರುವ ಗುಡಿ (ದಕ.ಜಿ)

ಒಡುಲ: ಮನೆಗೆ ಹೊದಿಸುವ ಹೆಂಚು (ಉಕ.ಜಿ). **ಇರೂ:** *ಓಡ್ಲಾ; ಓಡು*

ಒಡುವಣದ ಕೀಲು: ಒಡ್ಯಾಣದ ತಿರುಪು

ಒಡುವೂನಿ: ಹರಕೆ ಮಾಡಿಕೊಂಡು ದೇವಾಲಯದ ಕಸವನ್ನು ಗುಡಿಸುವುದು (ಹಾಸ.ಜಿ); ರಜಸೇವೆ (ಚಾಮ.ಜಿ)

ಒಡೆ: (ಕ್ರಿ) ೧. ಅರ್ಥಹೇಳು; ಬಿಡಿಸು; ವಿವರಿಸು ೨. ಚೂರಾಗು ೩. ಸ್ವರೂಪ ಕೆಟ್ಟುಹೋಗು ೪. ಸೀಳು; ಬಿರಿ; ಬಿಚ್ಚು (ನಾ) ೫. ಹೊಡೆ; ಜೋಳ, ರಾಗಿ, ಸಜ್ಜೆ ಮುಂತಾದ ಧಾನ್ಯಗಳ ಪೈರು ಅಥವಾ ದಂಟಿನ ತುದಿಯಲ್ಲಿ ಕಾಳುಗಟ್ಟುವ ಮುನ್ನ ಬಿಡುವ ಹೂ (ಚಿತ್ರ.ಜಿ)

ಒಡೆಕಾರ: ಯಜಮಾನ; ಒಡೆಯ. **ಪ್ರ:** ತನ್ನ ಒಡೆಕಾರ ಹೋಗುತ್ತಾನೆಂದು ಕುರಿಗಳು ಅವನ ಹಿಂದುಗಡೆ ಓಡುತ್ತವೆ

ಒಡೆಗಲ್ಲು: ನೋಡಿ– ಒಡಿಕಲ್ಲು

ಒಡೆತನ: ಯಜಮಾನಿಕೆ. **ಪ್ರ:** ನಾನು ಬಂಜೆ ದೊರೆಯಾಗಬುಟ್ನಲ್ಲ, ಇನ್ನು ನನ್ನ ರಾಜ್ಯಭಾರ್ದ ಒಡೆತನ ಯಾರ್ಗೆ ಅಂತ ಸ್ಯಾನೆ ಬ್ಯಾಸರಿಕೆ

ಒಡೆದಹಾಲು: ಕೆಟ್ಟು ಹೋದ ಹಾಲು. **ಪ್ರ:** ಒಡೆದ ಹಾಲು ಹೆತ್ಕೊಳಲ್ಲ, ಒಡೆದ ಮನಸ್ಸು ಹೊಂದ್ಕೊಳಲ್ಲ

ಒಡೆಸೂಲು: ಉಡಿದಾರ. **ಪ್ರ:** ಮಗುವಿಗಿಂತ ಮಗುವಿನ ಒಡೆಸೂಲು ಗಡುತರ

ಒಡೆಮೂಡು/ಒಡಮೂಡು: ಕಾಣಿಸಿಕೊಳ್ಳು, ತೋರು. **ಪ್ರ:** ಒಡೆಮೂಡಿದ ಹುತ್ತದೊಳಗೆ ನಿಮ್ಮ ತಾಯಿಯು ಬರುತಾಳೆ

ಒಡೆಯ: ೧. ಒಡಿಯ; ಯಜಮಾನ ೨. ಉಳ್ಳವನು; ಹಣವಂತ. **ಪ್ರ:** ಒಡೆಯ ಬಂದ್ರೂ ಒಡೆದ ಪಾತ್ರೆ ಕೂಡಲಿಲ್ಲ

ಒಡೆಯರು: ೧. ಮೈಸೂರು ರಾಜ ಮನೆತನದವರ ಕುಲನಾಮ ೨. ಯಜಮಾನನನ್ನು ಗೌರವದಿಂದ ಸಂಬೋಧಿಸುವ ಪದ. **ಪ್ರ:** ಒಂದಿಷ್ಟು ಕಾಸು ಕೊಡಿ ಒಡೆಯಾ ೩. ವೀರಶೈವ ಜಂಗಮರು ೪. ಗೊರವರು ೫. ಹಾಲುಮತದವರ ಗುರುಗಳು

ಒಡೆರೋಗ: ತೆಂಗಿನ ಬೆಳೆಗೆ ಬರುವ ಒಂದು ರೋಗ (ಬೆಂಗ.ಜಿ)

ಒಡೇರ ದಿಬ್ಬ: ಎತ್ತರವಾದ ಸ್ಥಳ

ಒಡೇರಯ್ಯ: ೧. ಜಂಗಮಯ್ಯ ೨. ಒಡೆಯರು; ಹಾಲುಮತದವರ ಗುರುಗಳು (ಚಿತ್ರ.ಜಿ)

ಒಡೇವು: ವಾಡೇವು; ಧಾನ್ಯ ಶೇಖರಿಸುವ ಸ್ಥಳ

ಒಡೊಡಕು: ೧. ಹಾಲು ಒಡೆದು ಹೋಗುವುದು. ಒಡೆದ ಹಾಲಿನಲ್ಲಿ ನೀರಿನಂಶ ಬೇರೆಯಾಗಿ ಹಾಲಿನ ಗಟ್ಟಿ ಅಂಶಗಳು ತೇಲುತ್ತಿರುವ ಸ್ಥಿತಿ ೨. ಚೂರು. **ಇರೂ:** *ಒಡಕು, ಒಡ್ಕಾ (ದಕ.ಜಿ)*

ಒಡ್‌ಕಣ್: ಅಡ್ಡ ದೃಷ್ಟಿಯಿರುವ ಕಣ್ಣು (ದಕ.ಜಿ)

ಒಡ್ಕತಮಟ: ಚೆನ್ನಾಗಿ ಕಾಯಿಸದ ತಮಟೆ. ಇದರಿಂದ ಸದ್ದು ಸರಿಯಾಗಿ ಬರುವುದಿಲ್ಲ.

ಒಡ್ಕತ್ತಿ: ಮರದ ಹಿಡಿಯುಳ್ಳ ಒಂದು ವಿಶಿಷ್ಟ ರಚನೆಯ ಕತ್ತಿ. ಮೇರರ ಮದುವೆಗಳಲ್ಲಿ ಮದುವಣಿಗನೂ ಮೇರರ

ಭೂತಾರಾಧನೆಯಲ್ಲಿ ಪೆರ್ನಳೆ ಭೂತದ ನರ್ತಕನೂ ಇದನ್ನು ಹಿಡಿದಿರುತ್ತಾರೆ (ದಕ.ಜಿ)

ಒಡ್ಡಡೆಯುವುದು: ಪೈರಿನಲ್ಲಿ ತೆನೆ ಕಾಣಿಸಿಕೊಳ್ಳುವಿಕೆ (ಚಾಮ.ಜಿ); ಹೊಡೆ ಮೂಡುವುದು

ಒಡ್ಡಲಮ್ಮ: ಮಳೆ ಬಾರದಿದ್ದಾಗ ಪೂಜಿಸಲ್ಪಡುವ ಒಂದು ದೈವ. ಕಟ್ಟೆಮಲ್ಲಪ್ಪನನ್ನೂ ಇದರೊಂದಿಗೆ ಪೂಜಿಸುತ್ತಾರೆ.

ಒಡ್ಡೂಲ್: ಭತ್ತದ ಕಣಜ ಕಟ್ಟುವಾಗ ಅದನ್ನು ಆಧರಿಸಿ ಹಿಡಿಯಲು ಬಳಸುವ ಹಗ್ಗ (ದಕ.ಜಿ)

ಒಡ್ಡ್: ಇದಿರಿಗೆ ಹಿಡಿಯುವುದು; ಒಡ್ಡು (ಕೊಡ.ಜಿ)

ಒಡ್ಡ: ೧. ಒಡ್ಡು; ಬದುವು; ನೀರು, ಮಣ್ಣು ಸಂಗ್ರಹಿಸಿಡಲು ಹೊಲಕ್ಕೆ ಹಾಕಿದ ಮಣ್ಣಿನ ಬದುವು (ಶಿವ.ಜಿ) ೨. ಅಡ್ಡ ದೃಷ್ಟಿಯಿರುವವನು (ದಕ.ಜಿ) ೩. ಜೂಜಿನ ಪಣ ೪. ಬಾವಿ ತೋಡುವ ವೃತ್ತಿ ಮಾಡುವ ಒಂದು ಜನ ಸಮುದಾಯ. **ಪ್ರ:** ಕೊಕ್ಕರೆಗೆ ಒಂದು ಕೆರೆಯೇ ಒಡ್ಡನಿಗೆ ಒಂದು ಊರೇ

ಒಡ್ಡಡಗಿ: ಸೆಗಣಿ ತುಂಬುವ ಪುಟ್ಟಿ (ಗುಲ್ಬ.ಜಿ)

ಒಡ್ಡಣಿ: ಸನ್ನಾಹ; ಸಿದ್ಧತೆ (ಚಿತ್ರ.ಜಿ/ಮಂಗ.ಜಿ)

ಒಡ್ಡಣಿ ಕೋಲು: ನೋಡಿ– ಒಡ್ಡಿನ ಕೋಲು

ಒಡ್ಡಮಾತು: ಪ್ರತಿಷ್ಠೆಯ ಮಾತು (ಗುಲ್ಬ.ಜಿ)

ಒಡ್ಡಮುರ: ಹೊಟ್ಟೆಕಿಚ್ಚು (ಬಿಜಾ.ಜಿ)

ಒಡ್ಡಯಿಸು: ಅಡ್ಡಗಟ್ಟು; ತಡೆಮಾಡು

ಒಡ್ಡರಕುಣಿತ: ಒಡ್ಡ ಸಮುದಾಯದವರು ಹಬ್ಬ ಹರಿದಿನಗಳಲ್ಲಿ, ಜಾತ್ರೆ ಉತ್ಸವಗಳಲ್ಲಿ, ಚರ್ಮದ ಹಲಗೆಯ ತಾಳಕ್ಕೆ ತಕ್ಕಂತೆ ಮೈಬಾಗಿಸುತ್ತ ಅತ್ತ ಇತ್ತ ತಂಡವಾಗಿ ಕುಣಿಯುವ ಕುಣಿತ

ಒಡ್ಡರಗಾಡಿ: ಒಡ್ಡ ಜನಾಂಗದವರು ಕಲ್ಲು ಸಾಗಿಸಲು ಬಳಸುವ ಗಾಡಿ (ಗುಲ್ಬ.ಜಿ)



ಒಡ್ಡರಮೆಗಟೆ ಮರ: ಕಾರಲೂಮ ಅಡ್ಸೆನ್‌ಡೆನ್ಸ್: ಒಂದು ಜಾತಿಯ ಮರ

ಒಡ್ಡರು: ಕಲ್ಲು ಒಡೆಯುವ ಹಾಗೂ ಬಾವಿ ಕೆರೆಗಳನ್ನು ತೋಡುವ ವೃತ್ತಿ ಮಾಡುವ ಒಂದು ಜನಸಮುದಾಯ. ಸಾಮಾನ್ಯವಾಗಿ ತೆಲುಗು ಮಾತಾಡುತ್ತಾರೆ

ಒಡ್ಡವಣೆ: ಗುಂಪು; ಸೈನ್ಯ. **ಇರೂ:** *ಒಡ್ಡಣ*

ಒಡ್ಡಾಚಾರ: ಜಂಬ; ಒರಟಾಟ; ತೋರಿಕೆಯ ಆಚಾರ

ಒಡ್ಡಾದ: ದಟ್ಟವಾದ

ಒಡ್ಡಾರ: ೧. ಆಕಾರ ೨. ಬೆಳವಣಿಗೆ ೩. ಆಡಂಬರ ೪. ಶೃಂಗಾರ; ರೂಪ ೫. ಬಲಿಷ್ಠ (ದಕ.ಜಿ)

ಒಡ್ಡಿ: ೧. ದೊಡ್ಡಿ; ತುಡುಗು ದನಗಳನ್ನು ಕೂಡಿ ಹಾಕುವ ಸ್ಥಳ (ಚಿಮ.ಜಿ) ೨. ಬತ್ತದ ಪಣತ; ಕಣಜ (ಬೆಂಗ್ರಾ.ಜಿ) ೩. ರಾಶಿ; ಗುಂಪು ೪. ಗೋಲಿಯಾಟದಲ್ಲಿ ಒಂದು ವಿಧ ೫. ಮುಷ್ಟಿ ೬. ಮರದಿಂದ ಮಾಡಿದ ಪಣತ ೭. ಒರಟಾದ ಹೆಂಗಸು **ಪ್ರ:** ಮಹಾ ಒಡ್ಡಿ ಅವಳು (ಚಿಬ.ಜಿ)

ಒಡ್ಡಿಉಂಗುರ: ವಿವಾಹಿತ ಮಹಿಳೆಯರು ಧರಿಸುವ ಒಂದು ವಿಶಿಷ್ಟ ವಿನ್ಯಾಸದ ಉಂಗುರ

ಒಡ್ಡಿಕೊಂಡು: ತೊಟ್ಟುಕೊಂಡು; ಧರಿಸಿಕೊಂಡು

ಒಡ್ಡಿಗ: ಜೂಜಾಟದ ಹುಂಜದ ಕಾಲಿಗೆ ಹರಿತವಾದ ಕತ್ತಿ ಕಟ್ಟುವವನು

ಒಡ್ಡಿಗಂಗಾಳ: ಮೂರು ನಾಲ್ಕು ಜನ ಕೂಡಿ ಉಣ್ಣುವಷ್ಟು ದೊಡ್ಡದಾದ ತಣಿಗೆ; ಹರಿವಾಣ (ಬಳ್ಳಾ.ಜಿ)

ಒಡ್ಡಿಗೂಡುಮನೆ: ಚಿಕ್ಕಪುಟ್ಟ ಪ್ರಾಣಿಗಳ ವಾಸದ ಮನೆ

ಒಡ್ಡಿನಕೋಲು: ಎರಡು ಮಾರುದ್ದದ ಬೆತ್ತವನ್ನು ಹಸಿಯಾಗಿದ್ದಾಗ ಬಾಗಿಸಿ ಮಾಡಿರುವ ಕೋಲು. ಈ ಕೋಲುಗಳನ್ನು ಹಿಂದೆ ಹುಲ್ಲು ಒಡ್ಡನ್ನು ಬಡಿದು ಧಾನ್ಯದ ತೆನೆಗಳಿಂದ ಕಾಳು ಬೇರ್ಪಡಿಸಲು ಬಳಸುತ್ತಿದ್ದರು. (ಕೊಡ.ಜಿ). **ಇರೂ:** *ಒಡ್ಡಿನಗೋಲು, ಒಡ್ಡುಗೋಲು*

ಒಡ್ಡಿವಾಲಗ: ಡೊಳ್ಳುಕುಣಿತದಲ್ಲಿ ಡೊಳ್ಳಿನ ಜೊತೆ ಜೋಡು ಕಂಚಿನ ತಾಳ, ಹಿತ್ತಾಳೆ ಜಾಗಟೆ ವಾದನಕಾರರೂ ಇದ್ದು ಈ ಮೇಳವನ್ನು ಒಡ್ಡಿವಾಲಗ ಎಂದು ಕರೆಯುತ್ತಾರೆ. ಪದಗಳ ಧಾಟಿ ಏಕತಾನತೆಯಿಂದಿರುತ್ತದೆ. ಬೀರಪ್ಪ ದೇವರ ಪದಗಳು ಜಾಸ್ತಿಯಾಗಿರುತ್ತವೆ

ಒಡ್ಡಿಸರೊಳಿ: ಸ್ನಾನಕ್ಕೆ ಮಾರ್ಜಕವಾಗಿ ಉಪಯೋಗಿಸುವ ಒಂದು ಸಸ್ಯ (ದಕ.ಜಿ)

ಒಡ್ಡು: ೧. ಹೊಲದ ಬದುಗಳಲ್ಲಿ ಮಣ್ಣನ್ನು ಎತ್ತರಿಸಿ ಕಟ್ಟಿದ ಅಡ್ಡಗೋಡೆ; ನೀರು ಅಥವಾ ಮಣ್ಣು ಸಂಗ್ರಹವಾಗಲು ಹೊಲ ತೋಟ ಗದ್ದೆಗಳಲ್ಲಿ ಹಾಕಿದ ಎತ್ತರದ ಕಟ್ಟೆ ೨. ಏರಿ. ೩. ಗೋಮಾಳ ೪. ಈಡು ೫. ಹೊಲ ಗದ್ದೆಗಳಿಗೆ

ಪ್ರಾಣಿಗಳು ಬರದಿರಲೆಂದು ತಡೆಯಲು ಮಾಡಿದ ಮುಳ್ಳಿನ ಬೇಲಿ ೬. ವ್ಯೂಹ ೭. ಕಣದಲ್ಲಿ ತುಳಿಸಲು ಹಾಕಿದ ಧಾನ್ಯದ ತೆನೆ ೮. ಜೂಜಿನಲ್ಲಿ ಒಡ್ಡುವ ಪಣ. **ಪ್ರ:** ನನ್ನನ್ನು ಪರೀಕ್ಷೆಗೆ ಒಡ್ಡಿ ಹಿಂಸೆ ಮಾಡಬೇಡ. **ಇರೂ:** *ವಡ್ಡು*

ಒಡ್ಡುಕಟ್ಟು: ೧. ಧಾನ್ಯವಿರುವ ಹುಲ್ಲನ್ನು ಒಕ್ಕಣೆಗಾಗಿ ಕಣದಲ್ಲಿ ಹರಡು; ಎಣೆಕಟ್ಟು ೨. ಕಟ್ಟೆಯನ್ನು ಕಟ್ಟು; ಮಣ್ಣಿನ ಏರಿ ನಿರ್ಮಿಸು. **ಪ್ರ:** ಇವತ್ತು ಕೆರೆಗೆ ಒಡ್ಡುಕಟ್ಟುತ್ತಾರೆ

ಒಡ್ಡುಕಥೆ: ಕಥೆ, ಹಾಡು, ಪ್ರಶ್ನೆ ರೂಪದಲ್ಲಿರುವ ಒಗಟು. ಅದಕ್ಕೆ ಉತ್ತರವೂ ಅದೇ ರೂಪದಲ್ಲಿರಬಹುದು (ಧಾರ.ಜಿ)

ಒಡ್ಡುಕೂಳಿ: ಹರಿಯುವ ನೀರಿಗೆ ಎದುರಾಗಿ ಇಟ್ಟು ಮೀನು ಹಿಡಿಯುವ ಸಾಧನ. **ಇರೂ:** *ಇರಿಕೂಳಿ*

ಒಡ್ಡುಗಾಲು: ಕಿಸುಗಾಲು; ಕಾಲನ್ನು ಅಗಲಿಸಿ ನಡೆಯುವುದು

ಒಡ್ಡುಗೈ: ಡೊಂಕಾದ ಕೈ; ವಕ್ರವಾದ ಕೈ

ಒಡ್ಡುಗೋಲು: ೧. ಒಡ್ಡಿನಕೋಲು (ಚಿಬ.ಜಿ) ೨. ಬಗನೆ ಮರದಿಂದ ಹೆಂಡ ಇಳಿಸುವಾಗ ಬಳಸುವ ಒಂದು ಕೋಲು (ದಕ.ಜಿ)

ಒಡ್ಡುಜಿಡ್ಡು: ದಷ್ಟಪುಷ್ಟ; ದೇಹದಾರ್ಢ್ಯ

ಒಡ್ಡುದಾರಿ: ಹಳ್ಳಕ್ಕೆ ಕಟ್ಟೆ ಕಟ್ಟಿ ಮಾಡಿದ ದಾರಿ

ಒಡ್ಡುಸ್ವಾಂತೆ: ಸೌತೆಯ ಒಂದು ಪ್ರಭೇದ; ಮಂಗಳೂರು ಸೌತೆ (ದಕ.ಜಿ/ಕೊಡ.ಜಿ). **ಇರೂ:** *ಬೆಳ್ಳರಿಕಾಯಿ*

ಒಡ್ಡೆಮಾಡು: ಸಂಪೂರ್ಣ ನಾಶ ಮಾಡು (ದಕ.ಜಿ)

ಒಡ್ಡೋಕತಿ: ಜನಪದ ಕತೆಯ ಒಂದು ಪ್ರಕಾರ; ಎದುರುಗತೆ (ಬಳ್ಳಾ.ಜಿ). **ಇರೂ:** *ಒಡ್ಡುಕತೆ*

ಒಡ್ಡೋರ: ಮಾರಿಯಮ್ಮನನ್ನು ಹೊರುವಾಗ ಪಾತ್ರಿಯು ತಲೆಗೆ ಕಟ್ಟಿಕೊಳ್ಳುವ ವಸ್ತ್ರ (ದಕ.ಜಿ)

ಒಡ್ಡೋಲಗ: ೧. ಯಕ್ಷಗಾನದಲ್ಲಿ ಪಾತ್ರ ಪ್ರವೇಶ ಮಾಡುವ ದೃಶ್ಯಕ್ಕೆ ಸಂಬಂಧಿಸಿದ ನೃತ್ಯ ಮತ್ತು ಮಾತುಗಳು ೨. ರಾಜರ ಆಸ್ಥಾನದಲ್ಲಿ ನಡೆಯುವ ಗಣ್ಯರ ಸಭೆ. **ಪ್ರ:** ರಾಜನ ಒಡ್ಡೋಲಗದಲ್ಲಿ ದೇಶ ವಿದೇಶದ ಗಣ್ಯರೆಲ್ಲ ಕುಳಿತಿದ್ದರು (ಮೈಸೂ.ಜಿ/ದಕ.ಜಿ) ೩. ಭೂತನರ್ತಕನ ರಂಗಪ್ರವೇಶ ೪. ಹಗರಣ ೫. ಜಗಳ ಮಾಡಿ ಜನರ ನೆರವು ಕೇಳುವುದು

ಒಡ್ಡೋಲಗದ ವೇಷ: ಪ್ರಸಂಗದ ಮೊದಲ ದೃಶ್ಯದ ಮುಖ್ಯ ಪಾತ್ರ (ದಕ.ಜಿ)

ಒಡ್ತಿಮೀನು: ಒಂದರಿಂದ ಎರಡು ಅಡಿ ಬೆಳೆಯುವ ಮೀನು. ಮಣ್ಣಿನ ಅಡಿ ಇರುವ ಇದು ನೋಡಲು ಮೊಳ್ಳೆ ಮೀನು ಅಥವಾ ಕೆಸರು ಮೀನಿನಂತಿರುತ್ತದೆ (ಉಡು.ಜಿ)

ಒಡ್ತೆವರ್ತೆ: ಕಲ್ಲುರ್ಟಿ ದೈವದ ನಾಮಾಂತರ (ದಕ.ಜಿ)

ಒಡ್ಡಾ: ಪಣ; ನಾಲ್ಕರ ಗುಂಪು

ಒಡ್ಪಾರು: ಮನೆ ಹಿಂಭಾಗಕ್ಕೆ ಚಾಚಿದ ಛಾವಣಿ (ಮೈಸೂ.ಜಿ) **ನೋಡಿ–** ಒಪ್ಪಾರು

ಒಡ್ಯಾಣಕೊಕ್ಕೆ: ಅಡಕೆ ಮರ ಹತ್ತುವವನು ಕತ್ತಿ ಅಥವಾ ಮಚ್ಚುಗಳನ್ನು ಸಿಕ್ಕಿಸಿಕೊಳ್ಳಲು ಸೊಂಟಪಟ್ಟಿಯಲ್ಲಿ ಇಟ್ಟಿರುವ ಕೊಕ್ಕೆ

ಒಡ್ರಾಗಿಸ್ಯಾವ್ಗೆ: ರಾಗಿಯನ್ನು ನೆನೆಸಿ, ಒಣಗಿದ ನಂತರ ಬೀಸಿ ತೆಗೆದ ಹಿಟ್ಟಿನಿಂದ ಮಾಡಿದ ಶಾವಿಗೆ

ಒಡ್ರಾಗಿಹಿಟ್ಟು: ಒಡರಾಗಿಹಿಟ್ಟು; ರಾಗಿಯನ್ನು ನೆನೆಸಿ ಒಣಗಿದ ನಂತರ ಹುರಿದು ಬೀಸಿ ಸೋಸಿ ತೆಗೆದ ಹಿಟ್ಟು (ಮೈಸೂ.ಜಿ/ ಚಾಮ.ಜಿ). **ಇರೂ:** *ವಡ್ರಾಗಿಹಿಟ್ಟು*

ಒಡ್ರುಗಾಲಿ: ಡೊಂಕಾದ ಕಾಲುಳ್ಳವಳು

ಒಡ್ಲಗೆಡ್ಡಿ: ಹೊಟ್ಟೆಯೊಳಗೆ ಗಟ್ಟಿ ಮಾಂಸ ಬೆಳೆಯುವುದು; ಒಡಲಿನ ಗಡ್ಡೆ (ದಕ.ಜಿ)

ಒಡ್ಲು: ಮನೆ ಸೋರದಂತೆ ಛಾವಣಿಗೆ ಹೊದಿಸಲು ಉಪಯೋಗಿಸುವ ಸುಮಾರು ಒಂದು ಅಡಿ ಉದ್ದ ಒಂಬತ್ತು ಅಂಗುಲ ಅಗಲದ, ಕೆಂಪು ಮಣ್ಣಿನಿಂದ ತಯಾರಿಸಿದ ಹೊದಿಕೆ; ಹೆಂಚು (ಉಕ.ಜಿ)

ಒಣ: ೧. ಒನಕೆ (ಶಿವ.ಜಿ) ೨. ಆರಿಹೋದ; ಶುಷ್ಕವಾದ; ಬತ್ತಿದ. **ಪ್ರ:** ೧. ಅದರ ಅಂಡೀಲಿ ಒಂದಾಳೆತ್ತರ ಒಣದರಗು ಬಿದ್ದಿತ್ತು. ೨. ಒಣ ಮರಕ್ಕೆ ಗಿಣಿ ಕಾದಂಗೆ

ಒಣಕ: ಬಡಕಲಾಗಿರುವವನು

ಒಣಕಲ: ಒಣುಕ್ಲ; ಒಣಗಿದಂತಿರುವವನು; ಬಡಕಲ: ಸೆಣಕಲ ವ್ಯಕ್ತಿ. **ಪ್ರ:** ಏನು ತಿಂದರೂ ಒಣಕಲನಾಗೇ ಇದಾನೆ

ಒಣಕಲ ಗದ್ದಿ: ಒಣಗಿದ ಗದ್ದೆ (ಕೊಡ.ಜಿ).

ಒಣಕಲಿ: ಒಣುಕ್ಲಿ; ಒಣಗಿದಂತಿರುವವಳು; ಬಡಕಲಿ. **ಪ್ರ:** ಈ ಒಣಕಲೀನ ಯಾರು ಮದುವೆಯಾಗ್ತಾರೆ

ಒಣಕಲು: ಒಣಗು; ಬತ್ತಿಹೋಗಿರುವಂಥದು; ತರಕಾರಿಯೆಲ್ಲಾ ಒಣಕಲಾಗಿ ಬಿಟ್ಟಿದೆ

ಒಣಕಾಟಿ: ಬಡಕಲು; ಕೃಶವಾದ (ಉಕ.ಜಿ)

ಒಣಕಾಯಿ: ಒಣಗಿಸಿದ ಮೆಣಸಿನಕಾಯಿ

ಒಣಕಿ: **ನೋಡಿ–** ಒನಕೆ

ಒಣಕುಂದು: ದನಗಳಿಗೆ ಬರುವ ಒಂದು ವಿಧದ ರೋಗ. ಈ ರೋಗ ಬಂದ ದನಗಳು ಮೇಯವುದಿಲ್ಲ ಮತ್ತು ನೀರನ್ನೂ ಸಹ ಕುಡಿಯುವುದಿಲ್ಲ (ಬಳ್ಳಾ.ಜಿ)

ಒಣಕುತನ: ಮಕ್ಕಳ ದೇಹ ಒಣಗುವುದು (ಚಿಬ.ಜಿ)

ಒಣಕೂಳು: ಹಾಲು ಮೊಸರು ಮಜ್ಜಿಗೆ ಬೆಣ್ಣೆ ತುಪ್ಪ ಯಾವುದೂ ಇಲ್ಲದ ಊಟ (ದಕ.ಜಿ). **ಇರೂ:** *ಒಣಅಡಿಗಿ*

ಒಣಕೆಈಮೂದು: ಮಳೆ ಬಾರದಿದ್ದಾಗ ಮಳೆ ಬರಲೆಂದು ಮಾಡುವ ಒಂದು ಬಗೆಯ ಪೂಜೆ. ಒನಕೆಯ ಎರಡು ತುದಿಗೆ ಬೇವಿನ ಟೊಂಗೆಗಳನ್ನು ಕಟ್ಟಿ, ಅನಂತರ ಕಪ್ಪೆಗಳನ್ನು ಸಿಕ್ಕಿಸಿ, ಅವುಗಳಿಗೆ ಮದುವೆ ಮಾಡುವುದು (ಬಳ್ಳಾ.ಜಿ)

ಒಣಖಳಿ: ಒಣಕಳೆ; ಒಣಮೋರೆ (ಧಾರ.ಜಿ)

ಒಣಗಣೇಶ: ೧. ವ್ಯರ್ಥ; ನಿಷ್ಫಲ; ನಿರಾಸೆ ೨. ಊಟಕ್ಕಿಲ್ಲದ ಸ್ಥಿತಿಯಲ್ಲಿರುವ ವ್ಯಕ್ತಿ

ಒಣಗಿ: ೧. ಕಾಯಿಪಲ್ಲೆ; ರೊಟ್ಟಿ ಚಪಾತಿ ಜೊತೆ ಬಳಸುವ ಪಲ್ಲೆ; ಅಕ್ಕಡಿ ಕಾಳಿನಿಂದ ಮಾಡಿದ ಕಾಯಿಪಲ್ಯ (ಉಕ) ೨. ಒಣಗಿದ್ದು (ಬೆಂಗ.ಜಿ/ಗುಲ್ಬ.ಜಿ)

ಒಣಗಿಕಣ್ಣಾಗು: ರಸ ಬತ್ತಿ ಹೋಗು; ಸಣಕಲು; ದುರ್ಬಲ. **ಇರೂ:** *ಒಣಗಿಸೀಗೆಕಾಯಾಗು*

ಒಣಗು: ಆರಿಹೋಗು; ಬತ್ತು; ಹಿಂಗು. **ಪ್ರ:** ಕೆರೆಯ ನೀರೆಲ್ಲಾ ಒಣಗಿ ಹೋಯಿತು

ಒಣಗೇಮೆ: ೧. ಊಟ ಉಡುಗೆ ಪಡೆಯದೆ ನಿರ್ದಿಷ್ಟ ಹಣಕ್ಕಾಗಿ ಮಾತ್ರ ಮಾಡುವ ಜೀತ (ಬಳ್ಳಾ.ಜಿ). **ಪ್ರ:** ಎಲ್ಲ ಆಳುಗಳೂ ಒಣಜೀತವಾಗಿ ದುಡಿಯುತ್ತಿದ್ದರು ೨. ಪ್ರತಿಫಲವಿಲ್ಲದ ಕೆಲಸ; ಪುಕ್ಕಟೆ ಜೀತ (ರಾಮ.ಜಿ) **ಇರೂ:** *ಒಣಜೀತ*

ಒಣಗ್ಹೋಗು ರೋಗ: ತೆಂಗಿನ ಮರಕ್ಕೆ ಬರುವ ಒಂದು ಬಗೆಯ ರೋಗ (ಮಂಡ್ಯ.ಜಿ)

ಒಣಚ್ಯಾಲ: ಸಣ್ಣಾಟದಲ್ಲಿ ಬರುವ, ಕಥೆಗೆ ಸಂಬಂಧಪಡದ ಒಂದು ಬಿಡಿ ಪಾತ್ರ (ಧಾರ.ಜಿ)

ಒಣಜಗಳ: ಕಾರಣವಿಲ್ಲದೆ ವ್ಯರ್ಥ ಜಗಳ (ಧಾರ.ಜಿ)

ಒಣಜಿ: ಕಿರಿದಾದ ದಾರಿ

ಒಣಜಿಗ್ಗು: ಬೆರಳಿನಷ್ಟು ಗಾತ್ರದ ಒಣಕಟ್ಟಿಗೆ

ಒಣಜೀತ: **ನೋಡಿ–** ಒಣಗೇಮೆ

ಒಣತುರಿ: ಒಣಕಜ್ಜಿ; ಹುಣ್ಣಾಗದ ಕಜ್ಜಿ (ಬೀದ.ಜಿ)

ಒಣದು: ಪಲ್ಯ ಇಲ್ಲದ ಬರಿಯ ರೊಟ್ಟಿ (ಗುಲ್ಬ.ಜಿ)

ಒಣನೀರು: ಬರಿ ನೀರು. ಆಹಾರವಾಗಿ ನೀರಲ್ಲದೆ ಮತ್ತೇನೂ ಇಲ್ಲದ ಸಂದರ್ಭದಲ್ಲಿ ಬಳಕೆಯಾಗುವ ಶಬ್ದ (ಮಂಡ್ಯ.ಜಿ)

ಒಣಬರ: ಮಳೆ ಇಲ್ಲದೆ ಉಂಟಾದ ಬರಗಾಲ (ಧಾರ.ಜಿ)

ಒಣಬಾಡು ಎಸ್ರು: ಒಣಗಿದ ದನದ ಮಾಂಸದಿಂದ ಮಾಡಿದ ಸಾರು (ಕೋಲಾ.ಜಿ). **ಇರೂ:** *ಕೊರಬಾಡು ಎಸರು*

ಒಣಬಾಡು: ಪ್ರಾಣಿಗಳ ಒಣಗಿಸಿದ ಮಾಂಸ (ತುಮ.ಜಿ)

ಒಣಬೇರು ಕೊಳೆ: ಬೆಳೆಗೆ ಬರುವ ಒಂದು ಬಗೆಯ ರೋಗ

ಒಣಬೇಸಾಯ: ಖುಷ್ಕಿಬೇಸಾಯ; ಮಳೆನೀರಿನಿಂದ ಆಗುವ ಕೃಷಿ **ಪ್ರ:** ನೀರಾವರಿ ಇಲ್ಲ ಸ್ವಾಮಿ ಬರೀ ಒಣಬೇಸಾಯ

ಒಣಭಿಕ್ಷ: ೧. ದವಸಧಾನ್ಯಗಳ ರೂಪದಲ್ಲಿ ಪಡೆಯುವ ಭಿಕ್ಷೆ ೨. ಬೇಯಿಸದೆ ಇರುವ ಪದಾರ್ಥಗಳ ರೂಪದ ಭಿಕ್ಷೆ

ಒಣಮಕ: ಒಂದು ವಸ್ತುವಿನ ಒಳಮೈ; ಒಳಮುಖ

ಒಣಮಸಿ: ಆವಿಗೆಯ ಮೇಲ್ಭಾಗಕ್ಕೆ ಸೊಪ್ಪುಸೆದೆ ಹಾಕಿದ ಮೇಲೆ ಅದರ ಮೇಲ್ಭಾಗಕ್ಕೆ ಮುಚ್ಚುವ ಬೂದಿ

ಒಣಮಾಯಾ: ಪ್ರೀತಿಯ ನಟನೆ

ಒಣಮುಕುಳಿ: ಮಲವಿಸರ್ಜನೆಯ ಅನಂತರ ತೊಳೆಯದ ಮುಕುಳಿ (ಧಾರ.ಜಿ)

ಒಣಮೇವು: ಹೊಲದಲ್ಲಿ ಬೆಳೆದಿರುವ ಬೆಳೆಯನ್ನು ಕಾಳುಗಳಿಂದ ಬೇರ್ಪಡಿಸಿ ಸಿಪ್ಪೆ ಒಣಗಿದ ಮೇಲೆ ಅದನ್ನು ಬಣವೆ ಹಾಕಿ ಶೇಖರಿಸಿಟ್ಟು ಹಸುಗಳಿಗೆ ಬಳಸುವಂಥ ಮೇವು (ಬಳ್ಳಾ.ಜಿ)

ಒಣರಗಳಿ: ನಿಷ್ಕಾರಣ ಜಗಳ

ಒಣರಿ: ಬೆಳೆಗಳಿಗೆ ಬೆಂಕಿಹುಳ ಬೀಳುವ ರೋಗ (ಬಿಜಾ.ಜಿ)

ಒಣರುತ್ತಿ: ಕೀವು ಇಲ್ಲದ ಕಜ್ಜಿ (ಉಕ.ಜಿ)

ಒಣಶುಂಠಿ: ಒಣಗಿದ ಶುಂಠಿ. ಅನೇಕ ಔಷಧೀಯ ಗುಣಗಳನ್ನು ಹೊಂದಿದೆ. ಸಿಹಿ ಅಡುಗೆಗಳಿಗೂ ಬಳಕೆಯಾಗುತ್ತದೆ (ಉಡು.ಜಿ)

ಒಣಸ್: ಊಟ; ತಿನಿಸು; ಆಹಾರ. **ಪ್ರ:** ಯಾವ ಒಣಸ್ ಇಷ್ಟವೆಂದು ಕಳೆದ ಮೂರು ದಿನಗಳಲ್ಲಿ ನಾನು ಸೂಕ್ಷ್ಮವಾಗಿ ತಿಳಿಸಿದ್ದೆ

ಒಣಸಂಬಳ: ಒಡೆಯನಲ್ಲಿ ಉಂಡು ಉಟ್ಟು ವರ್ಷದ ಕೊನೆಗೆ ಸಂಬಳ ಪಡೆವ ಕ್ರಮ. **ಇರೂ:** *ಉಂಬ ಸಂಬಳ*

ಒಣಸಾಣಿ: ಚೌಕಾಸಿ (ಉಕ). **ಇರೂ:** *ಒಣಶಾಣಿತನ*

ಒಣಹರಲಿ: ಕಾರಣವಿಲ್ಲದೆ ಜಗಳ (ಧಾರ.ಜಿ)

ಒಣಹೊಟ್ಟೆ: ಹಸಿದ ಹೊಟ್ಟೆ

ಒಣಾ: ಬೇಡವಾದದ್ದು

ಒಣಾಕು: ಒಣಗಲು ಹಾಕು; ಗಾಳಿಗೆ ಹಾಕು; ಹರಡು; (ಮೈಸೂ.ಜಿ/ಮಂಡ್ಯ.ಜಿ)

ಒಣಾಕೋಲಿ: ಜೋಳ ಕೊಯ್ದ ನಂತರ ತೇವಾಂಶ ಕಡಿಮೆ ಆಗಿ ಒಣಗಿರುವ ಕೂಳೆ (ಶಿವ.ಜಿ)

ಒಣಾದಂಟ: ಒಣಗಿದ ಜೋಳದ ದಂಟು. ಇದನ್ನು ಒಣ ಮೇವಾಗಿ ಬಳಸುತ್ತಾರೆ. **ಪ್ರ:** ಒಣಾದಂಟ ಈಳಿಗೆಯಿಂದ ಕತ್ತರಿಸಿ ಮೇವು ಹಾಕುವರು (ಶಿವ.ಜಿ)

ಒಣಾಬುತ ರೊಟ್ಟಿ: ಹೊಸದಾಗಿ ಮದುವೆಯಾದ ಹೆಣ್ಣಿನ ತವರಿನವರು ವಧುವಿಗೆ ಕೊಡುವ ರೊಟ್ಟಿ, ಪಲ್ಯ, ಬೆಲ್ಲ, ಅಕ್ಕಿ, ಕಡಲೆಬೇಳೆ (ಶಿವ.ಜಿ)

ಒಣಾಭೂಮಿ: ಖುಷ್ಕಿ. ಮಳೆನೀರು ಆಶ್ರಯಿಸಿ ಬೆಳೆ ಮಾಡುವ ಭೂಮಿ (ಶಿವ.ಜಿ)

ಒಣಿಗಣಸ: ಉಪವಾಸ

ಒಣೆ: ಪ್ರಾಣಿಗಳ ರೋಮ; ಮೈಮೇಲಿನ ಕೂದಲು

ಒಣ್ಕಟಿ: ಒಣಗಿಸಿದ ಮೀನು (ದಕ.ಜಿ)

ಒಣ್ಕೆ: ಒನಕೆ

ಒಣ್ಟಿ: ಒಂಟಿ; ಒಂದು ಬಗೆಯ ಬಂಗಾರದ ತೊಡವು; ಹತ್ತಕಡಕು (ಚಿಮ.ಜಿ)

ಒಣ್ಬಾಡು: ಒಣಬಾಡು; ಒಣಗಿದ ಮಾಂಸದ ತುಂಡು

ಒತ: ಅದರದರ ಸ್ಥಾನದಲ್ಲಿ ಇರಿಸುವುದು (ದಕ.ಜಿ)

ಒತಗಟಿಗಿ: ಎತ್ತುಗಳನ್ನು ನೊಗಕ್ಕೆ ಕಟ್ಟಿದಾಗ ಅವುಗಳ ಕೊರಳು ಅತ್ತಿತ್ತ ಸರಿದಾಡಬಾರದೆಂದು ನೊಗಕ್ಕೆ ಸೇರಿಸುವ ಗುಣಿಗಳು (ಗುಲ್ಬ.ಜಿ)

ಒತಗೀಲ: ನೊಗದ ಎರಡೂ ದಂಡೆಗಳಲ್ಲಿ ಸೇರಿಸಲು ಮಾಡಿದ ಕಟ್ಟಿಗೆಯ ಸಾಧನ (ಬಿಜಾ.ಜಿ); ಒತ್ತುಗೀಲು

ಒತಟೆ: ಒಂದು ಕಡೆ; ಒತ್ತಟ್ಟೆ. **ಇರೂ:** *ಒತಾಟ; ಒತ್ತಟ್ಟಿಗೆ; ಒತ್ತಾಟ*

ಒತ್ಕಾಸು: **ನೋಡಿ–** ಒತ್ತುಕಾಸಿನಸರ (ಮಂಡ್ಯ.ಜಿ)

ಒತ್ಗುಂಡು: ಚಿನ್ನದ ಗುಂಡುಗಳನ್ನು ಒತ್ತಾಗಿ ಪೋಣಿಸಿ ಮಾಡಿದ ಸರ (ಮಂಡ್ಯ.ಜಿ)

ಒತ್ತಕಲ್ಲು: ಆಸರೆಯಾಗಿ ನಿಲ್ಲಿಸಿದ ಕಲ್ಲು (ಗುಲ್ಬ.ಜಿ)

ಒತ್ತಗಟಕಿ: ಕಳೆ ತೆಗೆಯುವಾಗ ಉಪಯೋಗಿಸುವ ಕಟ್ಟಿಗೆ (ಬಿಜಾ.ಜಿ)

ಒತ್ತಗಾಡಿಗೆ: ಜೋಳದ ತೆನೆಗಳಿಗೆ ಬೀಳುವ ಕಾಡಿಗೆರೋಗ (ರಾಯ.ಜಿ)

ಒತ್ತಗೆ: ಹೊತ್ತಗೆ. ಜೋತಿಷ್ಯ ಪುಸ್ತಕ.

ಒತ್ತರ: ಬೇಗನೆ; ಜೋರು (ಬೆಳ.ಜಿ)

ಒತ್ತರಿಸು/ಒತ್ತುರ್ಸು: ನೂಕು; ತಳ್ಳು; ಪಕ್ಕಕ್ಕೆ ಸರಿಸು. **ಪ್ರ:** ಅಕ್ಕಪಕ್ಕದ ಹೊಲದವರು ಒತ್ತರಿಸಿಕೊಂಡು ಬೆಳೆ ಮಾಡಿದರೆ ಆ ಪೈರು ಮೊಳಕೆಯಲ್ಲೇ ಸೀದು ಹೋಗುತ್ತಿತ್ತು. **ಇರೂ:** ವತ್ರುಸು

ಒತ್ತರೆಮಾಡು: ೧. ಸುವ್ಯವಸ್ಥೆಗೊಳಿಸು ೨. ನಾಶ ಮಾಡು (ದಕ.ಜಿ)

ಒತ್ತಲ: ನೀರು ಕಾಯಿಸಲು ಮಾಡಿದ ದೊಡ್ಡ ಒಲೆ; ನೀರೊಲೆ (ಬಿಜಾ.ಜಿ). **ಇರೂ:** ಒತ್ತುಂಬಲಿ; ಒತ್ಲ

ಒತ್ತಲು: ಒಡ್ಡು; ಪ್ರವಾಹವನ್ನು ತಡೆಯುವ ಅಣೆ

ಒತ್ತಾಗಿ: ದಟ್ಟವಾಗಿ; ಹೇರಳವಾಗಿ **ಪ್ರ:** ಮರಗಳು ಒತ್ತಾಗಿ ಬೆಳೆದಿದ್ದು....

ಒತ್ತಾದೊತ್ತಲ್ಲಿ: ಒಂದು ಹೊತ್ತಿನಲ್ಲಿ; ಮಧ್ಯರಾತ್ರಿಯಲ್ಲಿ; ಹೊತ್ತಲ್ಲದ ಹೊತ್ತಿನಲ್ಲಿ

ಒತ್ತಾಬಂಡಿ: ಚಿಕ್ಕಮಕ್ಕಳು ಬೇಗ ನಡೆಯಲು ಸಹಾಯಕವಾಗುವ ಮರದ ಮೂರು ಚಕ್ರದ ಬಂಡಿ (ಗುಲ್ಬ.ಜಿ)

ಒತ್ತಿಕಟ್ಗೆ: ಊಸರವಳ್ಳಿ (ಗುಲ್ಬ.ಜಿ)

ಒತ್ತಿಗೆ ಕುಂಡ್ರಾಕಿ: ಮದುಮಕ್ಕಳ ಹತ್ತಿರದ ಸಂಬಂಧದ ಹೆಣ್ಣು. ಈಕೆ ಮದುವೆಯ ಎಲ್ಲಾ ಶಾಸ್ತ್ರಗಳಲ್ಲಿ ಭಾಗಿಯಾಗುತ್ತಾಳೆ (ಬಳ್ಳಾ.ಜಿ)

ಒತ್ತಿಡು: ಒತ್ತೆ ಇಡು; ಅಡ ಇಡು (ಧಾರ.ಜಿ)

ಒತ್ತಿನಚಕ್ಕೆ: ಊಟದ ಗಂಗಳದ ಕೆಳಗೆ ಇಡುವ ಸಣ್ಣ ಮರದ ತುಂಡು **ಇರೂ:** *ಒತ್ತುನ್ ಚಕ್ಕೆ*

ಒತ್ತಿನವ: ಜತೆಗಾರ (ಉಕ)

ಒತ್ತಿನುಡಿ: ಝುಂಕಿಸಿ ಮಾತಾಡು

ಒತ್ತಿಬಾಣ: ಒತ್ತಿದರೆ ಬಾಣಪ್ರಯೋಗವಾಗುವ ಒಂದು ವ್ಯವಸ್ಥೆ (ತುಮ.ಜಿ)

ಒತ್ತು/ವತ್ತು: ೧. ಪಕ್ಕಕ್ಕೆ ತಳ್ಳು ೨. ಬಳಿ; ಸವರು. **ಪ್ರ:** ಅರಿಸಿನದ ಎಣ್ಣೆಯನ್ನು ಗಂಡು ಹೆಣ್ಣಿಗೆ ಒತ್ತುತ್ತಾರೆ ೩. ಲಟ್ಟಿಸು; ಅರೆ. **ಪ್ರ:** ಹಪ್ಪಳ ಒತ್ತುವುದು ೪. ಒಳಹಾಕು ೫. ಚಂಡೆ ಮದ್ದಲೆಗಳ ಜೀವ ಕವಳಗಳಿಗೆ ಹಿಂದಿನಿಂದ ಬಲಕ್ಕಾಗಿ ಕೊಡುವ ಆಧಾರ ಚರ್ಮಗಳು ೬. ಅನ್ನದ ಅಗುಳು ೭. ಹತ್ತಿರ (ದಕ.ಜಿ) ೮. ಬಿರುಗಾಳಿ (ದಕ.ಜಿ) ೯. ಒಂದು ಹೊತ್ತು ಮಾತ್ರ ಊಟ ಮಾಡುವುದು; ದೇವರ ಹೆಸರಿನಲ್ಲಿ ಒಂದು ಹೊತ್ತು ಊಟ ಬಿಡುವುದು ೧೦. ಒಂದು ಹೊತ್ತಿನ ವ್ಯವಸಾಯದ ಕೂಲಿ. **ಇರೂ:** *ಒಂದೊಪ್ಪತ್ತು (ಮಂಡ್ಯ.ಜಿ)* **ನೋಡಿ–** ಒಪ್ಪೊತ್ತು

ಒತ್ತುಂಗಿಲ್: ಕಾಲುಂಗುರ ಬೀಳದ ಹಾಗೆ ಅದರ ಮುಂದೆ ಹಾಕುವ ಉಂಗುರ; ಒತ್ತುಂಗುರ

ಒತ್ತುಎಡ: ಮದ್ದಲೆಯಲ್ಲಿ ಎಡಭಾಗವನ್ನು ಒತ್ತಿ ಬಾರಿಸುವ ಪೆಟ್ಟುಗಳು

ಒತ್ತುಕಾಸಿನಸರ: ಹೆಂಗಸರ ಕೊರಳ ಆಭರಣ. ಒಂದರಪಕ್ಕ ಒಂದರಂತೆ ಚಿನ್ನದ ಕಾಸುಗಳನ್ನು ಜೋಡಿಸಿ ಮಾಡಿರುತ್ತಾರೆ

ಒತ್ತುಕೋಲು: ದುಡಿಯಲ್ಲಿನ ಒಂದು ಗತ್ತು (ಕೊಡ.ಜಿ)

ಒತ್ತುಗ: ಸಿಂಬಿ (ಹಾಸ.ಜಿ)

ಒತ್ತುಗಡಿ: ಅನ್ಯರ ಸ್ಥಳವನ್ನು ಆಕ್ರಮಿಸುವಿಕೆ (ಮಂಡ್ಯ.ಜಿ); ಕಾನೂನುಬಾಹಿರವಾಗಿ ಆಕ್ರಮಿಸಿಕೊಂಡಿರುವ ಭೂಮಿ (ಮೈಸೂ.ಜಿ). **ಇರೂ:** *ಒತ್ತುವರಿ*

ಒತ್ತುಗಣ್ಣು: ೧. ಕಣ್ಣುಬೇನೆ ೨. ಮತ್ಸರ ಸೂಚಕ ನೋಟ

ಒತ್ತುಗುಂಡು: ರುಬ್ಬುಗಲ್ಲು. ಗುಂಡುಕಲ್ಲಿಗೆ ಎಣ್ಣೆ ಸವರಿ ಬಸುರಿಯ ಪಕ್ಕ ಇಟ್ಟರೆ ಹೆರಿಗೆಯ ಸಮಯದಲ್ಲಿ ಸುಖಪ್ರಸವವಾಗುತ್ತದೆಂಬ ನಂಬಿಕೆ ಇದೆ. ಗುಂಡುಕಲ್ಲು ಗಟ್ಟಿಮುಟ್ಟಾಗಿರುವ ಆರೋಗ್ಯಪೂರ್ಣ ಮಗುವನ್ನೂ ಸಂಕೇತಿಸುತ್ತದೆ

ಒತ್ತುಗುಂಪು: ಮದ್ದಲೆಯ 'ಗುಂಪು' ಎಂಬ ನಾದವನ್ನು ಒತ್ತಿ ಬಾರಿಸುವುದು (ದಕ.ಜಿ)

ಒತ್ತುಗುಣಿ: ಚಿಕ್ಕಕುಂಟೆಯನ್ನು ಒತ್ತಿ ಹಿಡಿಯಲು ಉಪಯೋಗಿಸುವ ಕಟ್ಟಿಗೆ (ರಾಯ.ಜಿ)

ಒತ್ತುಗೂಟ: ಮಗ್ಗಕ್ಕಾಗಿ ನೆಲದಲ್ಲಿ ಹುಗಿದ ಗೂಟ

ಒತ್ತುಗೋಲು: ೧. ಸೊಕ್ಕಿಗೆ ಬಂದ ಟಗರು ತಲೆಯಿಂದ ಗುದ್ದದಿರಲೆಂದು ಅದರ ಕುತ್ತಿಗೆಗೆ ಜೋಡಿಸಿದ ಉದ್ದದ ಕೋಲು ೨. ತುಡುಗು ದನಗಳನ್ನು ಅಂಕೆಯಲ್ಲಿಡಲು ಇಳಿಬೀಳುವಂತೆ ಕತ್ತಿಗೆ ನೇತುಹಾಕುವ ದಡಿ ೩. ಪಲ್ಲಕ್ಕಿಯನ್ನು ಹೊತ್ತೊಯ್ಯುವಾಗ ನಡು ನಡುವೆ ನಿಲ್ಲಬೇಕಾದ ಸಂದರ್ಭದಲ್ಲಿ ಪಲ್ಲಕ್ಕಿಗೆ ಆಶ್ರಯವಾಗಿ ನಿಲ್ಲಿಸುವ ಆಸರೆಕೋಲು **ನೋಡಿ–** ಆನೆತಲೆ

ಒತ್ತುಪುಂಡು: ಯಕ್ಷಗಾನದಲ್ಲಿ ಸಹಾಯಕ ಪುಂಡುವೇಷ (ದಕ.ಜಿ)

ಒತ್ತುಬಣ್ಣ: ದ್ವಿತೀಯ ಬಣ್ಣದ ವೇಷ ಮತ್ತು ವೇಷಧಾರಿ; ಯಕ್ಷಗಾನದಲ್ಲಿ ಹೆಣ್ಣು ಬಣ್ಣ (ದಕ.ಜಿ)

ಒತ್ತುಬಳೆ: ಗೊಂಡ ಹೆಂಗಸರು ತೊಡುವ ಬೆಳ್ಳಿಯ ಕಡಗ (ಉಕ.ಜಿ)

ಒತ್ತುಮಣೆ: ೧. ರಾಗಿಮುದ್ದೆಯನ್ನು ಊಟ ಮಾಡುವಾಗ ತಟ್ಟೆಯ ಕೆಳಗೆ ಇಡುವ ಮರದ ಚಿಕ್ಕ ಚಕ್ಕೆ; ಒತ್ತಿನ ಚಕ್ಕೆ ೨. ಶಾವಿಗೆ ಮಾಡಲು ಬಳಸುವ ಉಪಕರಣ

ಒತ್ತುಮದ್ದಲೆಗಾರ: ಎರಡನೆಯ ಮದ್ದಲೆಗಾರ (ದಕ.ಜಿ)

ಒತ್ತುವ ಬಲೆ: ಆಳವಾದ ನೀರಿನಲ್ಲಿ ಹೆಚ್ಚು ಜನರು ಮೀನು ಹಿಡಿಯಲು ಬಳಸುವ ಬಲೆ (ಚಿಬ.ಜಿ)

ಒತ್ತುಸೀರೆ: ಮದುವೆ ಹೆಣ್ಣು ಅಥವಾ ಸೀಮಂತದ ಹೆಣ್ಣಿಗೆ ಸಮಾರಂಭದಲ್ಲಿ ಉಡಲು ಖರೀದಿಸಿದ ಸೀರೆಯ ಜೊತೆಗೆ ಖರೀದಿಸಿದ ಇನ್ನೊಂದು ಸೀರೆ (ದಕ.ಜಿ)

ಒತ್ತುಸೇವಿಗೆ: ಅಕ್ಕಿ ಹಿಟ್ಟಿಗೆ ಉಪ್ಪು ಹಾಕಿ, ಒಲೆಯ ಮೇಲೆ ಉಕ್ಕರಿಸಿಕೊಂಡು ಸೇವಿಗೆ ಒರಳಿನಲ್ಲಿ ಒತ್ತಿ ಆವಿಯಲ್ಲಿ ಬೇಯಿಸಿ ಮಾಡುವಂಥದ್ದು. ಇದನ್ನು ಕಾಯಿಹಾಲು, ಅವರೆಕಾಳು ಅಥವಾ ಮಾಂಸದ ಸಾರಿನೊಂದಿಗೆ ಸೇವಿಸುವರು (ಮೈಸೂ.ಜಿ)

ಒತ್ತುಸ್ತ್ರೀವೇಷ: ಎರಡನೆಯ ಸ್ತ್ರೀವೇಷ (ದಕ.ಜಿ)

ಒತ್ತುಹಾಕು: ಯಾವುದಾದರೊಂದು ವಿಷಯವನ್ನು ಒತ್ತಿ ಒತ್ತಿ ಹೇಳು

ಒತ್ತೆ: ೧. ಆಧಾರವಾಗಿ ಕೊಡುವ ವಸ್ತು; ಅಡವು. **ಪ್ರ:** ಚಿನ್ನ ಬೆಳ್ಳಿ ಒತ್ತೆ ಇಟ್ಟು ಸಾಲ ತಂದ್ವಿ.... ೨. ಚೆಂಡಾಟದಲ್ಲಿ ಒಂದು ವಿಧ (ದಕ.ಜಿ/ಮೈಸೂ.ಜಿ)

ಒತ್ತೆಆಟ: ಒಂಟಿ ಆಟ

ಒತ್ತೆಉರುಳಿಕೆ: ಚಂಡೆಗಳಲ್ಲಿ ಬಾರಿಸುವ ನಿಧಾನಗತಿಯ ಉರುಳಿಕೆ; ಒಂಟಿ ಉರುಳಿಕೆ (ದಕ.ಜಿ)

ಒತ್ತೆಕುತ್ತು: ಒಂಟಿಲಾಗ

ಒತ್ತೆಕೋಲ: ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ಮತ್ತು ಪುತ್ತೂರು ತಾಲ್ಲೂಕಿನ ಕೆಲವು ಹಳ್ಳಿಗಳಲ್ಲಿ ಕಂಡುಬರುವ ಒಂದು ವಿಶಿಷ್ಟ ಧಾರ್ಮಿಕ ಆಚರಣೆ. ಇದನ್ನು ಗ್ರಾಮಸ್ಥರು ಸಾಮೂಹಿಕವಾಗಿ ಕೂಡಿಕೊಂಡು ಬೇಸಿಗೆ ಕಾಲದಲ್ಲಿ ಆಚರಿಸುತ್ತಾರೆ. ವಿಷ್ಣುವು ನರಸಿಂಹಾವತಾರದಲ್ಲಿ ಹಿರಣ್ಯಕಶಿಪುವನ್ನು ಕೊಂದುದಕ್ಕಾಗಿ ಬೆಂಕಿಗೆ ಹಾರಿದ ಎಂಬ ನಂಬಿಕೆಯಿಂದ ಭೂತನರ್ತಕ ನೂರು ಬಾರಿ ಕೆಂಡಕ್ಕೆ ಬೀಳುತ್ತಾನೆ

ಒತ್ತೆಬಣ್ಣ: ಒಂದೇ ಬಣ್ಣದ ವೇಷ (ದಕ.ಜಿ)

ಒತ್ತೆಬೂತ: ಕಲ್ಲುರ್ಟಿ ದೈವದ ಇನ್ನೊಂದು ಹೆಸರು (ದಕ.ಜಿ)

ಒತ್ತೆಬೈರಾಗಿ: ಪೂರ್ವರಂಗದ ಕಟ್ಟುಹಾಸ್ಯ (ದಕ.ಜಿ)

ಒತ್ತೆಭಾಗವತ: ಒಂಟಿ ಭಾಗವತ (ಉಕ)

ಒತ್ತೆಹಾಕು: ದೋರೆಗಾಯಿಗಳನ್ನು ಬಲವಂತವಾಗಿ ಹಣ್ಣು ಮಾಡುವುದು; ಬೇಗ ಹಣ್ಣಾಗಲಿ ಎಂದು ಧಗೆಯಲ್ಲಿಡುವುದು (ಚಿತ್ರ.ಜಿ). **ಇರೂ:** *ಅಡೆಹಾಕು*

ಒತ್ತೊಳ್ಳು: ಒತ್ತೊರಳು; ಹಬ್ಬಹರಿದಿನ, ಜಾತ್ರೆ ಉತ್ಸವ, ಮದುವೆ ಮುಂಜಿಗಳಲ್ಲಿ ಕರ್ಜಿಕಾಯಿ ಮಾಡಲು ಬಳಸುವ ಪರಿಕರ. ಸುಮಾರು ಒಂದು ಅಡಿ ಉದ್ದವಿದ್ದು ಮಧ್ಯಭಾಗದಲ್ಲಿ ಅರ್ಧಚಂದ್ರಾಕಾರದ ಎರಡು ಒರಳುಗಳಿರುತ್ತವೆ. ಇದರ ಎರಡು ಕಡೆಗೂ ಕಬ್ಬಿಣದ ಕೊಂಡಿಗಳನ್ನು ಹಾಕಿರುತ್ತಾರೆ. ಒರಳಿನ ಅರ್ಧವೃತ್ತಾಕಾರ ಭಾಗದಲ್ಲಿ ಗರಗಸದ ಪುಟ್ಟ ಹಲ್ಲುಗಳಂತೆ ಕಬ್ಬಿಣದ ತಗಡನ್ನು ಜೋಡಿಸಿರುತ್ತಾರೆ

ಒತ್ತೋಳು: ಒಂದು ತೋಳಿನಷ್ಟು ದಪ್ಪ; ಒಂದು ಅಳತೆ. **ಪ್ರ:** ಹಾವು ಒತ್ತೋಳು ಗಾತ್ರ ಇತ್ತು (ಮಂಡ್ಯ.ಜಿ)

ಒತ್ನಂತೆ: ಬೆಳಿಗ್ಗೆ; ಹೊತ್ತಿನಂತೆ; ಆದಷ್ಟು ಬೇಗ. **ಪ್ರ:** ಒತ್ನಂತೇ ಬಂದು ಬಿಡ್ತೀನಿ ಕೆಲ್ಸಕ್ಕೆ (ಮಂಡ್ಯ.ಜಿ). **ಇರೂ:** *ಒತನಂತೆ; ಒತ್ತಾರೆ*

ಒತ್ ನಾಲಿಗೆ: ದನಗಳಿಗೆ ನಾಲಿಗೆಗೆ ರುಚಿ ಹತ್ತದೆ ಹುಲ್ಲು ತಿನ್ನದೆ ಬಡಕಲಾದರೆ ನಡೆಸುವ ಚಿಕಿತ್ಸೆ. ನಾಲಿಗೆಯ ಮೇಲಿನ ರಕ್ತನಾಳವನ್ನು ರಾಗ್ಸ್‌ಮಟ್ಟೆ ಮುಳ್ಳಿನಿಂದ ಬಗೆದು ಉಪ್ಪಿನಿಂದ ನಾಲಿಗೆ ಉಜ್ಜುತ್ತಾರೆ (ಚಿಬ.ಜಿ)

ಒತ್ಮಣೆ: ಒತ್ತುವ ಮಣೆ. ಚಪಾತಿ ಹಪ್ಪಳ ಮೊದಲಾದವನ್ನು ಲಟ್ಟಿಸಲು ಬಳಸುವ ಮರ ಅಥವಾ ಕಲ್ಲಿನಿಂದ ಮಾಡಿದ ಮಣೆ (ಮಂಡ್ಯ.ಜಿ). **ಇರೂ:** *ಕೋಳ್‌ಪಾವಟೆ (ಮೈಸೂ.ಜಿ)*

ಒತ್ಮುಣುಗು: ಹೊತ್ತು ಮುಳುಗು; ಕತ್ತಲಾಗು; ಸಂಜೆಯಾಗು (ತುಮ.ಜಿ)

ಒತ್ರಮುಂಚೆ/ಹೊತ್ರಮುಂಚೆ: ಬೆಳಿಗ್ಗೆ; ಹೊತ್ತಿಗೆ ಮುಂಚೆ (ಉಕ.ಜಿ)

ಒತ್ಲಿಕೆ: ೧. ಮಡಕೆ ೨. ಜೋಡಿಸಿದ ಸಣ್ಣ ಕಟ್ಟು (ಹಾಸ.ಜಿ)

ಒತ್ಲಿಸು: ಒತ್ತರಿಸು. **ಪ್ರ:** ಕಡ್ಡಿಪುಡಿ ಒತ್ಲಿಸಿ ದವಡೆ ಎಷ್ಟು ದಪ್ಪಾಗದೆ

ಒದಕೊಂಡೈತಿ: ದನ ಹಾಲು ಕೊಡುವುದನ್ನು ನಿಲ್ಲಿಸಿರುವುದು (ಶಿವ.ಜಿ) ಸೊರ ಇರುಕಿಸಿಕೊಳ್ಳುವುದು (ಮೈಸೂ.ಜಿ)

ಒದಗಿಗ: ನೇಯ್ಗೆಯ ಹಂತ

ಒದಗು: ೧. ದೊರಕು; ಉಂಟಾಗು. **ಪ್ರ:** ನರೀಹಳ್ಳಿಯ ಕರೀಗೌಡರ ಮಗಳಿಗೆ ಕಂಕಣ ಬಲ ಒದಗಿಬಂತು ೨. ಹೆಚ್ಚು; ಸಮೃದ್ಧವಾಗು; ಹುಲುಸು. **ಪ್ರ:** ಹೊಸಕ್ಕಿ ಅನ್ನ ಒದಗಲಿಲ್ಲ

ಒದರಗ: ೧. ಗಟ್ಟಿ ಮಾತಾಡುವವ ೨. ಬರಿ ಬಾಯಿ ಮಾತಿನವ (ಬಳ್ಳಾ.ಜಿ)

ಒದರಾಡು: ವದರು; ಕೊಡವು; ಜಾಡಿಸು

ಒದರೀ: ಒಂದು ಬಗೆಯ ಹುಲ್ಲು (ಬೆಂಗ್ರಾ.ಜಿ)

ಒದರು: ೧. ಕೂಗು; ಬಾಯಿಗೆ ಬಂದಂತೆ ಮಾತನಾಡು (ಧಾರ.ಜಿ). **ಪ್ರ:** ಅವನು ಅದ್ಯಾಕೆ ಹಾಗೆ ಒದರ್ತಿದಾನೆ ೨. ನಡುಗು ೩. ಕೊಡಹು **ಪ್ರ:** ತುಂಬಿದ ಕೆರೆ ಏರಿ ಮ್ಯಾಲೆ ಮಂಡೆ ಸಿಕ್ಕ ಒದರೀದೆ ೪. ಬೇಗನೆ

ಒದರುಗಡಬು: ೧. ನಂಬಿ ಮೋಸ ಹೋಗುವುದು ೨. ತೊಂದರೆಗೆ ಸಿಲುಕುವುದು (ಬಳ್ಳಾ.ಜಿ)

ಒದಲ್: ಗೆದ್ದಲು ಹುಳು (ದಕ.ಜಿ)

ಒದಲಿ: ಒಡ್ಡುಕೊಟ್ಟು ತಡೆದು ನಿಲ್ಲಿಸಿದ ಕಾಲುವೆಯಲ್ಲಿನ ಆಳವಾದ ಹಳ್ಳ (ಶಿವ.ಜಿ). **ಇರೂ:** *ಜೋಪು; ಮಡು*

ಒದಾಗಿಣಿ: ಬುದ್ಧಿಶಾಲಿ

ಒದೆ: ೧. ಕಾಲಿನಿಂದ ತಾಟಿಸಿ ಹೊಡೆದ ಏಟು. **ಪ್ರ:** ಒದೆ ತಿಂದು ಇವ್ನತ್ರ ವಿದ್ಯೆ ಕಲೀಬೇಕಾದ್ದೇನಿದೆ? ೨. ಆಧಾರ; ಊರೆ. **ಪ್ರ:** ಕಾಲುಗಳನ್ನು ಮರಕ್ಕೆ ಒದೆಕೊಟ್ಟು ಹಿಂದಕ್ಕೆ ಮಿಣಿಗೆ ಆತು ನಿಂತು

ಒದೆಕೊರಡು: ಉರಿಯಲು ಆಧಾರವಾದ ಸೌದೆ; **ಪ್ರ:** ಒಲೆಗೊಂದು ಒದೆಕೊರಡು, ಮನೆಗೊಂದು ಮುದಿಕೊರಡು

ಒದ್ಗಲ್: ಹಸೆಗಲ್ಲು (ಚಾಮ.ಜಿ)

ಒದ್ಗು: ಒದಗು ೧. ಸಮಯಕ್ಕೆ ಅಥವಾ ಸಂದರ್ಭಕ್ಕೆ ಸರಿಯಾಗಿ ಸಿಗುವ ಸಹಾಯ ೨. ಸಾಕಷ್ಟು (ರಾಯ.ಜಿ/ದಕ.ಜಿ)

ಒದ್ದೀಗಿ: ಸ್ನಾನ

ಒದ್ದುಕೊ: ಎಮ್ಮೆ ಅಥವಾ ಹಸು ಹಾಲು ಕೊಡುವುದನ್ನು ನಿಲ್ಲಿಸುವುದು. **ಪ್ರ:** ನಮ್ಮ ಹಸ ಒದ್ಕಂಡಿದೆ ಹಾಲೇ ಇಲ್ಲ, ಹಸು ಒದ್ದುಕೊಂಡರೆ ಏನು ಗತಿಯಪ್ಪಾ

ಒದ್ದೆ: ತೇವಸಹಿತವಾಗಿರುವುದು **ಪ್ರ:** ತಲೆಸ್ನಾನ ಮಾಡಿ ಕೂದ್ಲು ಒದ್ದೆ ಆಗಿದೆ ಇನ್ನೂ ಆರಿಲ್ಲ

ಒದ್ದೆಗೊರಡು: ಹಸಿಯಾದ ಕಟ್ಟಿಗೆಯ ತುಂಡು

ಒದ್ದೆಮಾಡಿಕೊಳ್ಳು: ೧. ನೆನೆಸಿಕೊಳ್ಳು; ತೋಯು ೨. ಉಚ್ಚೆ ಹೊಯ್ದುಕೊಳ್ಳು

ಒದ್ಮೊಂಗ: ಒಂದು ಕುಡಿಕೆ

ಒದ್ರುಸಾವ್ಗೆ: ೧. ಒತ್ತಿದ ಶಾವಿಗೆ ೨. ಮುದುಡಿಕೊಳ್ಳದಂತೆ ಜೋಪಾನವಾಗಿ ಇಡುವಿಕೆ

ಒದ್ಲಾ: ಸಮುದ್ರದಲ್ಲಿ ಗಾಳಿಯಿಂದ ತೆರೆಬಂದಾಗ ದೋಣಿಯನ್ನು ಹಿಂದೆ ಮುಂದೆ ಮಾಡುವುದು (ಉಕ.ಜಿ)

ಒದ್ಲಿ: ಒದಲಿ; ಕಾಲುವೆ; ಒಡ್ಡುಕೊಟ್ಟು ತಡೆದು ನಿಲ್ಲಿಸಿದ ಕಾಲುವೆಯಲ್ಲಿನ ಆಳವಾದ ಹಳ್ಳ (ಮೈಸೂ.ಜಿ). **ಇರೂ:** *ಜೋಪು; ಮಡು*

ಒನಕಮುಂಡು: ನೋಡಿ– ಒನಕೆಮುಂಡಿ (ಮೈಸೂ.ಜಿ)

ಒನಕಿಮಂಡ: ನೋಡಿ– ಒನಕೆಮುಂಡಿ (ರಾಮ.ಜಿ)

ಒನಕೆ: ಬತ್ತ ಗೋಧಿ ಮುಂತಾದ ಧಾನ್ಯಗಳನ್ನು ಒರಳಿಗೆ ಹಾಕಿ ಕುಟ್ಟುವ, ಕಬ್ಬಿಣದ ಅಣಸು ಹೊಂದಿದ ಗಟ್ಟಿಯಾದ ಮರದ ಉದ್ದನೆ ಕೋಲು (ಚಿತ್ರ.ಜಿ) **ಇರೂ:** *ಒಣ, ಒಣಕೆ, ಒನ್ಕೆ*

ಒನಕೆಕರಗ: ಇದೊಂದು ಚಮತ್ಕಾರಯುತವಾದ ಕಲೆ. ಸುಮಾರು ಐದಾರು ಅಡಿ ಉದ್ದದ ಒನಕೆಯ ತುದಿಗೆ ಸೈಕಲ್ ಚಕ್ರವನ್ನು ಅಡ್ಡಲಾಗಿಟ್ಟು, ಅದರ ಸುತ್ತ ಹೂವಿನ ಹಾರದಿಂದ ಅಲಂಕಾರ ಮಾಡಿ ಈ ಒನಕೆಯನ್ನು ತಲೆಯ ಮೇಲೆ ಇಟ್ಟುಕೊಂಡು ವಾದ್ಯದ ಗತಿಗೆ ತಕ್ಕಂತೆ ಕುಣಿಯುತ್ತಾರೆ

ಒನಕೆಕುಣಿತ: ದಕ್ಷಿಣ ಕರ್ನಾಟಕದ ಜಿಲ್ಲೆಗಳಲ್ಲಿ ಕಂಡುಬರುವ ಮನರಂಜನಾ ಕಲೆ. ತಮಟೆ ನಗಾರಿಗಳ ಗತ್ತಿಗೆ ಒನಕೆಯನ್ನು ತಲೆ, ಹೆಗಲು, ಅಂಗೈ, ಹಣೆ ಮೇಲಿಟ್ಟುಕೊಂಡು ಕುಣಿಯುತ್ತಾರೆ. ಒನಕೆ ಮೇಲೆ ದೀಪ ಹಚ್ಚಿಟ್ಟು ಅದು ಆರಿ ಹೋಗದಂತೆ ಕುಣಿಯುತ್ತಾರೆ

ಒನಕೆದೊಡ್ಡಿ: ಒನಕೆ (ಕೋಲಾ.ಜಿ)

ಒನಕೆಬಳೆ: ಒನಕೆಯ ತುದಿಯಲ್ಲಿ ಭದ್ರತೆಗಾಗಿ ಅಳವಡಿಸಿರುವ ಕಬ್ಬಿಣದ ಸುತ್ತುಬಳೆ (ಚಾಮ.ಜಿ)

ಒನಕೆಮಾಗಿಕಾಯಿ: ಒಂದು ಬಗೆಯ ಉದ್ದನೆಯ ಸೋರೆಕಾಯಿ

ಒನಕೆಮುಂಡಿ: ೧. ಒನಕೆಬಂಡಿ; ಮುಟ್ಟಿದರೆ ಸುತ್ತಿಕೊಳ್ಳುವ ಒಂದು ಬಗೆಯ ಹುಳು; ಸಾವಿರಕಾಲಿನ ಹುಳು ೨. ತುದಿಯಲ್ಲಿ ಬಳೆ ಹಾಕಿಲ್ಲದ ಒನಕೆ; ಒನಕೆಬಂಡಿ ೩. ಮೋಟು ಒನಕೆ **ಇರೂ:** *ಇನಕಿ ಮಂಡ*

ಒನಕೆವಾಡು: ಧಾನ್ಯ ಕುಟ್ಟುವಾಗ ಹಾಡುವ ಪದ (ಗುಲ್ಬ.ಜಿ)

ಒನಕೆಶಾಸ್ತ್ರ: ೧. ಮದುವೆಯಲ್ಲಿ ನಡೆಯುವ ಶಾಸ್ತ್ರಗಳಲ್ಲಿ ಒಂದು. ವಧು/ವರನ ಕೈಗೆ ಒನಕೆ ಕೊಟ್ಟು ಭತ್ತ ಕುಟ್ಟಿಸುವುದು (ಚಿಬ.ಜಿ) ೨. ಸುಣ್ಣದ ಪಟ್ಟೆ ಬಳಿದು ಐದಾನ್ಯ ಗಂಟು ಹಾಕಿ ಅಲಂಕರಿಸಿದ ಒನಕೆಯಿಂದ ಮದುವೆಯ ದಿನ ಐದು ಜನ ಮುತ್ತೈದೆಯರು ಧಾನ್ಯ ಕುಟ್ಟುವ ಶಾಸ್ತ್ರ (ಬಳ್ಳಾ.ಜಿ); ಶಾಸ್ತ್ರದ ಬತ್ತ ಕುಟ್ಟುವುದು

ಒನಕೆಹುಳ: ಒನಕೆಯನ್ನು ಹೋಲುವ ಹುಳ; ಏಡಿ ಶಿಕಾರಿಯಲ್ಲಿ ಇದನ್ನು ಏಡಿಹಿಡಿಯುವ ಸಾಧನವಾಗಿ ಬಳಸುತ್ತಾರೆ (ಶಿವ.ಜಿ)

ಒನರೆ: ಕಟ್ಟಿಗೆಯ ಹೊರೆ ಕಟ್ಟುವ ಸಾಧನ

ಒನಲಿ: ನೋಡಿ– ಒಂದ್ರಿ (ಕೊಡ.ಜಿ/ದಕ.ಜಿ).

ಒನಿ: ೧. ಮೊರದ ಅಥವಾ ಬಿದಿರಿನ ಕುಕ್ಕೆಯನ್ನು ಬಳಸಿ ಧಾನ್ಯದಲ್ಲಿರುವ ಕಸಕಡ್ಡಿ ತೆಗೆಯುವ ರೀತಿ (ಮಂಡ್ಯ.ಜಿ) ೨. ಅಲ್ಲಾಡಿಸು; ತೊನೆದಾಡು; ಕಂಪಿಸು (ಉಕ.ಜಿ) ೩. ಕಾಳುಗಳನ್ನು ನೆನೆಹಾಕು; ಉನಿಹಾಕು. **ಇರೂ:** *ಒನೆ*

ಒನೆದು: ಬೊಗಸೆಯಿಂದ ತೆಗೆದು (ಬಿಜಾ.ಜಿ)

ಒನೆಮಾಡಿ: ಉಪಾಯಮಾಡಿ

ಒನೆಯುವ ಕುಕ್ಕೆ: ದುಂಡಾದ ಬೆತ್ತದ ಬುಟ್ಟಿ (ಹಾಸ.ಜಿ)

ಒನೇರಿ: ತಲೆತಿರುಕ (ಉಕ)

ಒನ್ಕಿ ಹಲ್: ಒನಕೆಯ ತುದಿಯಲ್ಲಿರುವ ಕಬ್ಬಿಣದ ಮುಚ್ಚಳ (ದಕ.ಜಿ)

ಒನ್ಕಿಬಂಡಿ: ಮೇಲೆ ಮತ್ತು ಕೆಳಗೆ ಕಬ್ಬಿಣದ ಬಳೆಗಳು ಇಲ್ಲದಿರುವ ಒನಕೆ (ಕೋಲಾ.ಜಿ). **ಇರೂ:** *ಒನಕೆ ಮುಂಡಿ*

ಒನ್ಕೆಕಣ್ಣು: ಒನಕೆ ತುದಿಯಲ್ಲಿನ ಗುಂಡು ಮೊಳೆ (ಚಾಮ.ಜಿ)

ಒನ್ನುಕಾವಲಿ: ದೋಸೆಕಲ್ಲು (ಮೈಸೂ.ಜಿ)

ಒನ್ನೇರುಪೂಜೆ: ಹೊನ್ನೇರುಪೂಜೆ. ನೇಗಿಲು ಕಟ್ಟುವಾಗ ಮಾಡುವ ಪೂಜೆ. **ಇರೂ:** *ಒನ್ನಾರು ಪೂಜೆ (ಬೆಂಗ.ಜಿ) ವಣ್ಣೇರ್ಪೂಜೆ (ಮೈಸೂ.ಜಿ)*

ಒಪ್ಪ: ೧. ಒಳಿತು; ಚೆಲುವು; ಓರಣ ೨. ಆಭರಣಗಳನ್ನು ಸ್ವಚ್ಛಮಾಡಿ ಮೆರಗು ಕೊಡುವಿಕೆ ೩. ಸರಿಯಾಗಿ ೪. ಜೋಪಾನ ೫. ಮುತ್ತು ೬. ಶವಸಂಸ್ಕಾರ

ಒಪ್ಪಂದ: ೧. ಒಪ್ಪಿಗೆ; ಒಡಂಬಡಿಕೆ ೨. ರಾಜಿ ಸಂಧಾನ

ಒಪ್ಪಕೊಡು: ಬಂಗಾರವನ್ನು ಶುದ್ಧಿಗೊಳಿಸು (ಶಿವ.ಜಿ)

ಒಪ್ಪಗ್ಗ: ಒಂದೇ ರೀತಿಯ ಎರಡು ಹಗ್ಗಗಳು; ಇವುಗಳನ್ನು ಎತ್ತುಗಳನ್ನು ಕಟ್ಟಲು ಬಳಸುತ್ತಾರೆ (ಚಿಬ.ಜಿ)

ಒಪ್ಪಚ್ಚಿ: ಒಂದು ಸಲ (ಬಿಜಾ.ಜಿ)

ಒಪ್ಪತ್ತ: ಒಂದ್ಹೊತ್ತು; ಒಪ್ಪತ್ತು; ಒಂದು ಸಲ (ಶಿವ.ಜಿ) **ನೋಡಿ–** ಒಪ್ಪೊತ್ತು

ಒಪ್ಪತ್ತಿಗ್ಹಾಕೂದು: ಒಂದೇ ಹೊತ್ತು ಹಾಲು ಹಿಂಡುವ ದನ (ಶಿವ.ಜಿ). **ಪ್ರ:** ನಮ್ಮ ಎಮ್ಮಿ ಒಪ್ಪತ್ತಿಗ್ಹಾಕೇತಿ

ಒಪ್ಪಮಾಡು: ಅಂತ್ಯಸಂಸ್ಕಾರ ಮಾಡು. **ಪ್ರ:** ತಾಯನ್ನು ಒಪ್ಪಮಾಡಿ ಮಗ ಭಾರಿಯಾಗಿ ತಿಥಿ ಮಾಡಿದ (ಮೈಸೂ.ಜಿ/ ಚಾಮ.ಜಿ)

ಒಪ್ಪರ: ಬೇಗಬೇಗನೆ

ಒಪ್ಪಹಾಕು: ೧. ಮೆರುಗು ಹಾಕಿಸು; ಸೊಗಸಾಗಿಸು ೨. ರುಜು ಮಾಡು. **ಪ್ರ:** ಆದೇಶಕ್ಕೆ ರಾಜ ಇನ್ನೂ ಒಪ್ಪ ಹಾಕಿಲ್ಲ

ಒಪ್ಪಳೆ: ಹೊಪ್ಪಳೆ; ಹೊಪ್ಪೆ; ಚರ್ಮ ಸುಟ್ಟಾಗ ಏಳುವ ಬೊಕ್ಕೆ (ಮಂಡ್ಯ.ಜಿ). **ಇರೂ:** *ಒಪ್ಪೆ; ವಪ್ಪೆ*

ಒಪ್ಪಳ್ಳಿ: ಕೇದಿಗೆ ಹೂವಿನ ಗಿಡದ ಎಲೆಯಿಂದ ತಯಾರಿಸಿದ ಚಾಪೆ; ಹಸೆ (ಉಕ)

ಒಪ್ಪಾಗು: ಹೋಳಾಗು (ರಾಮ.ಜಿ)

ಒಪ್ಪಾನಬತ್ತ: ಒಂದು ಬಗೆಯ ಬತ್ತ

ಒಪ್ಪಾನೆ: ಒಂದು ಅಳತೆ; ಒಂದು ಹಾನೆ

ಒಪ್ಪಾರ: ೧. **ನೋಡಿ–** ಒಪ್ಪಾರು ೨. ಪೂಜೆ ಬಾಗಿಲಿನ ಮುಂದಿನ ಭಾಗದ ಮನೆಯ ಜಾಗ (ಚಿಬ.ಜಿ)

ಒಪ್ಪಾರಿಬ್ಯಾನಿ: ಒಂದೇ ಮಗ್ಗುಲ ತಲೆಶೂಲೆ; ಅರ್ಧ ತಲೆನೋವು (ಗುಲ್ಬ.ಜಿ)

ಒಪ್ಪಾರು: ೧. ವಾಸದ ಮನೆಯ ಒಂದು ಮಗ್ಗುಲಲ್ಲಿ ಇಳಿಜಾರಾದ ನೆರಳು ಮಾಡಿ ದನಕರುಗಳನ್ನು ಕಟ್ಟಲು ಬಳಸುವ ಜಾಗ ೨. ಮನೆ ಮುಂದೆ ಬಿಸಿಲು ಮಳೆ ತಡೆಗೆ ಹಾಕಿರುವ ಚಪ್ಪರ (ಮಂಡ್ಯ.ಜಿ) ೩. ಒಂದೇ ಕಡೆಗೆ ಇಳಿಜಾರಾಗಿರುವ ಚಾವಣಿ **ಇರೂ:** *ಒಪ್ಪಾರ್ಲು; ಒಡ್ಬಾದು* ೪. ಒಂದು ಸೂರಿನ ಮನೆ (ಗುಲ್ಬ.ಜಿ/ಬೆಂಗ.ಜಿ)

ಒಪ್ಪಾಳಿ/ಒಪ್ಪಾಳೆ: ಹುಲ್ಲು ಹಾಸಿಗೆ; ಹಸೆ (ಉಕ.ಜಿ); ಹಸಲೆ (ಮೈಸೂ.ಜಿ)

ಒಪ್ಪಿಡಿ: ಒಂದು ಹಿಡಿಯಷ್ಟು ಪ್ರಮಾಣ

ಒಪ್ಪಿಳ್ಳೇವು: ಒಪ್ಪುವೀಳ್ಯ; ಹೆಣ್ಣು ನೋಡಲು ಬಂದವರು ಮಾತುಕಥೆಗೆ ಕುಳಿತು ಮದುವೆಗೆ ಎರಡೂ ಕಡೆಯವರೂ ಒಪ್ಪಿದ ಸಂಕೇತವಾಗಿ ಹಣ್ಣು ಎಲೆ ಅಡಿಕೆಗಳನ್ನು ತುಂಬಿದ ತಟ್ಟೆಯನ್ನು ಬದಲಾಯಿಸಿಕೊಳ್ಳುವ ಸಂಪ್ರದಾಯ. **ಇರೂ:** *ಒಪ್ಮಾತು (ಮೈಸೂ.ಜಿ)*

ಒಪ್ಪು: ೧. ಸಮ್ಮತಿಸು; ಅಂಗೀಕರಿಸು ೨. ಯೋಗ್ಯವಾಗು; ಉಚಿತವಾಗು. **ಪ್ರ:** ನಮ್ಮ ಸ್ಥಿತಿಗತಿಗೆ ಒಪ್ಪುವ ಹೆಣ್ಣು ಎಲ್ಲಿದೆ? ೩. ತೆಂಗಿನ ಕಾಯಿಯ ಹೋಳು. **ಪ್ರ:** ಪೂಜಾರ್‍ರಿಗೆ ಒಂದು ಒಪ್ಪು ಕೊಡು ೪. ಚೆಂದಕಾಣು. **ಪ್ರ:** ನಿಂಗೆ ಈ ಸೀರೆ ಚೆನ್ನಾಗಿ ಒಪ್ಪುತ್ತೆ.

ಒಪ್ಪುದೂರ: ಸ್ವಲ್ಪದೂರ

ಒಪ್ಪುಮಾತು: ೧. ವಿವಾಹಕ್ಕೆ ಒಪ್ಪಿಗೆ ಸೂಚಿಸುವುದು ೨. ಮದುವೆಯ ನಿಶ್ಚಿತಾರ್ಥ. **ಪ್ರ:** ನಿನಗೆ ಒಪ್ಪುಮಾತ ಮಾಡನಿಲ್ವ ದೊಡ್ಡಿಳ್ಳೆಶಾಸ್ತ್ರ ಮಾಡನಿಲ್ವ

ಒಪ್ಪುವೀಳ್ಯ: ಮದುವೆಗೆ ಮುಂಚೆ ಒಪ್ಪಂದಸೂಚಕವಾಗಿ ಕೊಡುವ ವೀಳ್ಯ (ರಾಮ.ಜಿ). **ಇರೂ:** ವಪ್ಪಿಳ್ಳೆ

ಒಪ್ಪೆಸರು: ಒಂದೇ ಹೆಸರಿನ ಇಬ್ಬರು ವ್ಯಕ್ತಿಗಳು (ಚಿಬ.ಜಿ)

ಒಪ್ಪೊರ್ಲು: ೧. ವಪ್ಪರ್ಲು; ಪಡಸಾಲೆ ಅಥವಾ ಮನೆಯ ಗೋಡೆಯ ಮಗ್ಗುಲಲ್ಲಿ ವಾಸಕ್ಕಾಗಿ ಕಟ್ಟಿಕೊಂಡ ನೆರಕೆಯ ಆಶ್ರಯ ೨. ಕೊಟ್ಟಿಗೆ **ನೋಡಿ–** ಒಪ್ಪಾರು

ಒಪ್ಪೊಸ್ಕೋದು: ದೇಹದ ಉಷ್ಣಾಂಶ ಹೆಚ್ಚಾದಾಗ ಬಾಯಿಯ ಒಳಭಾಗದಲ್ಲಿ ಸಣ್ಣ ಕೆಂಪು ಗುಳ್ಳೆಗಳಾಗುವುದು. ಬಿಸಿನೀರಿಗೆ ಉಪ್ಪು ಹಾಕಿ ಮುಕ್ಕಳಿಸಿದರೆ ವಾಸಿಯಾಗುತ್ತದೆ (ಮಂಡ್ಯ.ಜಿ)

ಒಬ್ಬಟ್ಟು: ಹೋಳಿಗೆ. ತೊಗರಿ, ಕಡಲೆಬೇಳೆ, ಸಜ್ಜೆ, ತೆಂಗಿನತುರಿ ಮುಂತಾದುವುಗಳನ್ನು ಬೇಯಿಸಿ ಬೆಲ್ಲದೊಂದಿಗೆ ರುಬ್ಬಿ, ರವೆ ಅಥವಾ ಮೈದಾಹಿಟ್ಟಿನ ಕಣಕದೊಳಗೆ ತುಂಬಿ ಅಗಲವಾಗಿ ತಟ್ಟಿ ಕಾವಲಿಯಲ್ಲಿ ಬೇಯಿಸುವ ಸಿಹಿ ತಿನಿಸು

ಒಬ್ಬಟ್ಟುಗಳಬ್ಬ: ಒಬ್ಬಟ್ಟಿನ ಹಬ್ಬ; ಯುಗಾದಿ ಹಬ್ಬ (ಕೋಲಾ.ಜಿ)

ಒಬ್ಬನ ಹಲ್ಲಾಗಇರು: ೧. ಋಣದಲ್ಲಿರು ೨. ದ್ವೇಷ ಕಟ್ಟಿಕೋ (ಬಿಜಾ.ಜಿ)

ಒಬ್ಬಾಲ್ಕೆ: ಒಂದು ಕಡೆಯಿಂದ ಅಥವಾ ಸಂಪೂರ್ಣವಾಗಿ ಹಿಡಿದ ಕೆಲಸವನ್ನು ಮಾಡಿ ಮುಗಿಸುವುದು (ಮೈಸೂ.ಜಿ)

ಒಬ್ಬಿ: ನೋಡಿ– ಒಬ್ಬೆ

ಒಬ್ಬಿಟ್ಟು: ನೋಡಿ– ಒಬ್ಬಟ್ಟು (ರಾಮ.ಜಿ/ಮಂಡ್ಯ.ಜಿ)

ಒಬ್ಬುಳಿ: ಕೂಡುವಿಕೆ; ಸೇರುವಿಕೆ (ರಾಯ.ಜಿ/ಧಾರ.ಜಿ)

ಒಬ್ಬುಳಿಮಾಡು: ಒಂದುಗೂಡಿಸು (ಧಾರ.ಜಿ)

ಒಬ್ಬೆ: ೧. ಗಿಡಗಂಟೆಗಳಿಂದ ಹೊಲದ ಸುತ್ತ ಹಾಕುವ ಬೇಲಿ ೨. ಪೊದೆ; ಸೊಂಪಾಗಿ ಬೆಳೆದಿರುವ ಮೆಳೆ. **ಪ್ರ:** ಒಬ್ಬೆ ಮ್ಯಾಗಳ ಸೊಪ್ಪು ಒಡ್ಡರಾಗಿ ಹಿಟ್ಟು (ಬೆಂಗ್ರಾ.ಜಿ)

ಒಮ್ಮಗ್ಗಲು: ಒಂದೇ ಪಕ್ಕ; ಒಂದೇ ಕಡೆ. **ಪ್ರ:** ಪಕ್ಕೇಲಿ ಹುಣ್ಣಾಗ್ಬುಟ್ಟು ತಿಂಗಳಿಂದ ಒಮ್ಮಗ್ಗಲಿನಲ್ಲೇ ಮಲಗಿದ್ದಾರೆ

ಒಮ್ಮನ/ಒಮ್ಮುನ: ನಾಲ್ಕು ಅಥವಾ ಎಂಟು ಸೇರಿನ ಅಳತೆಯ ಸಾಧನ; ಒಂದು ನಿರ್ದಿಷ್ಟ ತೂಕ. **ಇರೂ:** ಒಮ್ಮಾನ

ಒಮ್ಮಾಣ: ಒಂದು ಮಾನ; ಒಂದು ಅಳತೆ. **ಪ್ರ:** ಒಕ್ಕಳ ಅಕ್ಕಿಹಾಕಿ, ಒಮ್ಮಾಣ ಬೇಳಿ ಹಾಕಿ, ಎಡೆ ಸಿದ್ಧಪಡಿಸುತ್ತಿದ್ದರು

ಒಮ್ಮುನ: ನೋಡಿ– ಒಮ್ಮನ

ಒಮ್ಮುಬರೂದು: ೧. ಒಪ್ಪಿಗೆ ಆಗುವುದು ೨. ಹೊಂದಿಕೆ ಆಗುವುದು ೩. ಯೋಗ್ಯವಾಗು (ಶಿವ.ಜಿ)

ಒಮ್ಮೊಲತಿ: ಒಂದು ಹೆಣ್ಣು ಭೂತ. ಒಂದು ಮೊಲೆ ಇರುವುದರಿಂದ ಈ ಹೆಸರು. ರಾತ್ರಿ ಹೊತ್ತು ಒಬ್ಬರೇ ಗಂಡಸರು ಹೋಗುತ್ತಿದ್ದಾಗ ಹಿಂದೆ ಬಂದು ಸುಣ್ಣ ಕೊಡು ಎಂದು ಕೇಳುತ್ತಾಳೆ. ಆಗ ಹಿಂದೆ ತಿರುಗಬಾರದು. ಸುಣ್ಣ ಕೊಟ್ಟರೆ ನೆಲಕ್ಕೆ ಒಗೆಯುತ್ತಾಳೆ. ಅದನ್ನು ತೆಗೆದುಕೊಳ್ಳಲು ಬಗ್ಗಿದಾಗ ತನ್ನ ಆ ಒಂದು ದೊಡ್ಡ ಮೊಲೆಯಿಂದ ಬಡಿದು ಕೊಲ್ಲುತ್ತಾಳೆ ಎಂಬ ಪ್ರತೀತಿ ಇದೆ (ಉಕ.ಜಿ)

ಒಯಂದ: ಎತ್ತರವಾದ

ಒಯಾ: ಚಿಕ್ಕ ಪುಸ್ತಕ (ಗುಲ್ಬ.ಜಿ)

ಒಯಿನ: ೧. ಅಂದ; ಚೆಂದ. **ಪ್ರ:** ಸೀರೆ ಭಾರೀ ಒಯಿನಾಗಿದೆ ೨. ಸೌಖ್ಯ. **ಪ್ರ:** ಒಯ್‌ನಾಗಿದ್ದೀರಾ (ತುಮ.ಜಿ). **ಇರೂ:** ವಯನ

ಒಯಿನೇಣು: ಎಳೆವ ಹಗ್ಗ

ಒಯ್ಗಂಟ್: ಊರುಗಂಟು; ಎಳೆದರೆ ಬಿಚ್ಚಿಕೊಳ್ಳುವಂಥ ಗಂಟು

ಒಯ್ಪಲೆ: ಒಂದು ಬಗೆಯ ಬಲೆ. ತೇಡೆ ಎಂಬ ಮೀನನ್ನು ಎಳೆಯಲು ಉಪಯೋಗಿಸುತ್ತಾರೆ (ದಕ.ಜಿ)

ಒಯ್ಯಣೆ: ಒಬ್ಬರೇ ನೀರೆಳೆಯುವ ಏತ (ದಕ.ಜಿ)

ಒಯ್ಯಾಳ್‌ಪಾತ್ಲಿಂಗಣ್ಣ: ಗ್ರಾಮದೇವತೆಯ ಹಬ್ಬದಲ್ಲಿ ಗಾವು ಸಿಗಿಯುವವ **ನೋಡಿ–** ಗಾವು

ಒಯ್ಲು: ಸೆಳೆತ (ದಕ.ಜಿ)

ಒಯ್‌ಹೊಣೆ ದೊಟ್ಟೆ: ಏತದ ಒಂದು ಭಾಗದಲ್ಲಿ ಒಬ್ಬ/ಇಬ್ಬರು ವ್ಯಕ್ತಿಗಳು ಹಗ್ಗ ಹಿಡಿದಿರುವವರು. ಮತ್ತೊಂದು ಭಾಗದಲ್ಲಿ ದೊಟ್ಟೆ ಕಟ್ಟಿದ ಗಳದಿಂದ ಇನ್ನೊಬ್ಬ ನೀರು ಹಾಯಿಸುವವನು. ಬಾವಿಯಿಂದ ನೀರೆತ್ತಲೂ, ತೋಟಕ್ಕೆ ನೀರು ಹಾಯಿಸಲೂ ಈ ವ್ಯವಸ್ಥೆ ಇರುತ್ತದೆ.

ಒರ್: ೧. ಒಂದು ೨. ವರಹ; ಹಿಂದಿನ ಕಾಲದ ಚಿನ್ನದ ನಾಣ್ಯ. **ಇರೂ:** ಒರ

ಒರಗಲ್ಲು/ಒರೆಗಲ್ಲು: ಚಿನ್ನವನ್ನು ಪರೀಕ್ಷಿಸುವ ಕಲ್ಲು. ಚಿನಿವಾರರು ಬಂಗಾರದ ಪರಿಶುದ್ಧತೆಯನ್ನು ಈ ಕಲ್ಲಿನ ಮೇಲೆ ಉಜ್ಜಿ ಪರೀಕ್ಷಿಸುತ್ತಾರೆ (ಉಕ.ಜಿ)

ಒರಗಿಂಟ: ಒಂದು ಗಿಟ. ನೇಕಾರಿಕೆಯಲ್ಲಿ ಹಾಸಿನ ಎಳೆಯನ್ನು ಪ್ರತಿಸಲವೂ ಒಂದು ಎಳೆಗೆ ಬದಲಾಗಿ ಒಮ್ಮೆ ಎರಡೆಳೆ ಒಮ್ಮೆ ಒಂದೆಳೆಯಂತೆ ಅಳವಡಿಸುವುದು. ಇದರಿಂದ ಸೀರೆಯ ಗುಣಮಟ್ಟ ಉತ್ತಮಗೊಳ್ಳುವುದು (ಬೆಂಗ್ರಾ.ಜಿ)

ಒರಗು: ೧. ಗೋಡೆ ಅಥವಾ ಬೇರೆ ಯಾವುದಕ್ಕಾದರೂ ಬೆನ್ನನ್ನು ಆನಿಸಿಕೊಂಡು ನಿಲ್ಲುವುದು ಅಥವಾ ಕುಳಿತುಕೊಳ್ಳುವುದು (ಚಿಮ.ಜಿ). **ಪ್ರ:** ಚಿನ್ನದ ಹರಿವಾಣವಾದರೂ ಮಣ್ಣಿನ ಗೋಡೆಗೇ ಒರಗಬೇಕು ೨. ಮಲಗು; ನಿದ್ರಿಸು ೩. ಆಶ್ರಯಿಸು

ಒರಗುರೋಗ: ದನಗಳಿಗೆ ಉಂಟಾಗುವ ಒಂದು ಬಗೆಯ ರೋಗ

ಒರಗ್ಹೋಗು: ಸತ್ತು ಹೋಗು

ಒರಟುಗಣ್ಣು: ಮೆಳ್ಳಗಣ್ಣು; ಮೆಡ್ಡಗಣ್ಣು. **ಇರೂ:** *ವರಚುಗಣ್ಣು*

ಒರಟುಚಾಣ: ಒರಟಾಗಿ ಕೆತ್ತುವ ಚಾಣ

ಒರಟುಳಿ: ಅಗಲ ಬಾಯಿಯ ಉಳಿ

ಒರಪು/ಒರ್ಪು: ೧. ನಂಬಿಕೆ ೨. ಬಲ ೩. ಮಳೆಯ ಮೋಡ ಚದುರಿ ಆಕಾಶ ತಿಳಿಯಾಗುವುದು. **ಪ್ರ:** ಈಗೊಂದಿಷ್ಟು ಒರ್ಪಾಗೈತೆ (ಚಿತ್ರ.ಜಿ) (ಕ್ರಿ) ೪. ಕೂಗಿ ಓಡಿಸು

ಒರಲು: (ಕ್ರಿ) ೧. ಕಷ್ಟಪಡು; ನೋವು ಅನುಭವಿಸು ೨. ಅರಚು; ಗೋಗರೆ; ಅಳು (ನಾ) ೩. ಒರಳುಕಲ್ಲು

ಒರಲೆ: ಗೆದ್ದಲು ಹುಳು; ವರಲೆ. **ಪ್ರ:** ಓತಿ ಹಾಗೆ ತಿಂದ ಒರಲೆ ಹಾಗೆ ಬೆಳೆದ

ಒರವಿನ ಕಣ್ಣು: ನೀರು ಜಿನುಗುವ ಜಾಗ; ಒರತೆ

ಒರಸರೆ: ದೇವಸ್ಥಾನದ ಜಾತ್ರೆ ಮುಂತಾದ ಸಂದರ್ಭಗಳಲ್ಲಿ ಮನರಂಜನೆಗಾಗಿ ಮಾಡುವ ಒಂದು ರೀತಿಯ ಯುದ್ಧಾಭಿನಯ (ದಕ.ಜಿ)

ಒರಳಕ್ಕಿ: ಮದುವೆ ಸಂದರ್ಭದ ಒಂದು ಶಾಸ್ತ್ರ. ಒರಳಲ್ಲಿ ಭತ್ತ ಹಾಕಿ ಕುಟ್ಟಿದಾಗ ಕೊನೆಗೆ ಒಂದೂ ಭತ್ತ ಉಳಿಯದಿದ್ದರೆ ಅಲ್ಲಿಗೆ ಜನ್ಮಾಂತರದ ಕರ್ಮ ತೀರಿತು. ಭತ್ತ ಉಳಿದರೆ ಇನ್ನು ಕರ್ಮ ತೀರಿಲ್ಲ ಎಂಬ ನಂಬಿಕೆ ಇದೆ

ಒರಳುಗೀಲು: ದನಗಳ ಭುಜ ಹಾಗೂ ಚಪ್ಪೆಯಲ್ಲಿರುವ ಕೀಲು

ಒರಾಗಲು: ನೆಲ ನುಣುಪು ಮಾಡುವ ಕಲ್ಲು; ಚಿನ್ನ ಬೆಳ್ಳಿ ಒರೆಗೆ ಹಚ್ಚುವ ಕಲ್ಲು (ಉಕ.ಜಿ). **ಇರೂ:** *ಒರೆಗಲ್; ಒರ್ಗಲ (ಬಳ್ಳಾ.ಜಿ)*

ಒರಾರಿ: ೧. ಗಂಡಸರ ಕರ್ಣಾಭರಣ (ಮೈಸೂ.ಜಿ) ೨. ಕಳೆತೆಗೆಯಲು ಬಳಸುವ ಸಾಧನ (ಕೋಲಾ.ಜಿ/ಬೆಂಗ್ರಾ.ಜಿ)

ಒರಿ: (ಕ್ರಿ) ೧. ತೆಗೆ; ಕೀಳು. **ಪ್ರ:** ಕಳೆ ಒರಿ (ಮಂಡ್ಯ.ಜಿ) ೨. ವಸ್ತುವೊಂದರ ಮೇಲ್ಮೈಯನ್ನು ಉಜ್ಜಿ ನಯಗೊಳಿಸುವುದು. **ಪ್ರ:** ಬಳಪವನ್ನು ಚೆನ್ನಾಗಿ ಒರಿ, ಪೆನ್ಸಿಲ್‌ನ್ನು ಚೆನ್ನಾಗಿ ಒರಿ (ಚಿತ್ರ.ಜಿ) **ನೋಡಿ–** ಒರೆ (ನಾ) ೩. ಚಂದಾ; ಎತ್ತೊಳಿ

ಒರಿಎತ್ತು: ದೇಣಿಗೆ ಸಂಗ್ರಹಿಸು (ಮಂಡ್ಯ.ಜಿ). **ಇರೂ:** *ಚಂದಾಎತ್ತು*

ಒರಿಕಿ: ಸುಂಕ

ಒರಿಮಣೆ: ಗುಣಿಮಣೆ; ಚಪಾತಿ ಹೋಳಿಗೆ ಇತ್ಯಾದಿ ಲಟ್ಟಿಸಲು ಇರುವ ವೃತ್ತಾಕಾರದ ಮರದ ಮಣೆ (ಉಕ.ಜಿ)

ಒರಿಯಕರಿಯ: ಕಷ್ಟಕೋಟಲೆ

ಒರು: ಫಲವತ್ತು (ದಕ)

ಒರುಗೆ: ಕುಸುರು

ಒರುಗ್ಗಲ್ಲು: ತಲೆ ಮೇಲಿನ ಭಾರ ಇಳಿಸಿ ದಣಿವು ಆರಿಸಿಕೊಳ್ಳಲು ದಾರಿ ಪಕ್ಕದಲ್ಲಿ ಹಾಕುವ ಮಂಚಕಲ್ಲು (ಮಂಡ್ಯ.ಜಿ)

ಒರುಟುಕರಿಣೆ: ಗೋಡೆ ಕಟ್ಟುವಾಗ ಬಳಸುವ ಸಲಕರಣೆ. ಕರಣೆ (ಕೋಲಾ.ಜಿ)

ಒರೆ: ೧. ಹೇಳು; ನಿರೂಪಿಸು. **ಪ್ರ:** ಎಲ್ಲೈ ಮಂತ್ರಿಯೇ ರಾಜ್ಯದ ಸುದ್ದಿಯನ್ನು ಒರೆಯುವಂಥಾವನಾಗು ೨. ಉಜ್ಜು; ತಿಕ್ಕು: ಚಿನ್ನದ ಬಣ್ಣವನ್ನು ಒರೆಗಲ್ಲಿಗೆ ಒರೆದು ನೋಡಿದರು ೩. ಹೆರೆ; ಸಿಪ್ಪೆತೆಗೆ. **ಪ್ರ:** ಪರಂಗಿ ಹಣ್ಣಿನ ಸಿಪ್ಪೆ ಒರೆದು ಇಡು ೪. ಕತ್ತಿಯ ಚೀಲ. **ಪ್ರ:** ಒರೆಯಿಂದ ಕತ್ತಿ ಎಳೆದು ಝಳಪಿಸಿದ ೫. ಮಣ್ಣನ್ನು ಮೆತ್ತು. **ಇರೂ:** *ಒರಿ*

ಒರೆ ಉಗುಸು: ನೀರಿನ ಬುಗ್ಗೆ (ಉಕ.ಜಿ)

ಒರೆಬಣ್ಣ: ಚಿನ್ನ ಅಥವಾ ಬೆಳ್ಳಿಯನ್ನು ಒರೆಗೆ ತಿಕ್ಕಿದಾಗ ಕಾಣುವ ಬಣ್ಣ; ಶುದ್ಧತೆ

ಒರೆವುಡಿ: ಒರೆಗೆ ಹಚ್ಚಿದಾಗ ಬೀಳುವ ಪುಡಿ

ಒರೆಳ್ಳಿ: ತಾಳಿಸರದಲ್ಲಿರುವ ವಸ್ತುಗಳು

ಒರ್ಕಟ್ಟೆ: ೧. ಒಂದು ಬತ್ತದ ತಳಿ ೨. ಒಂದು ಕಟ್ಟು

ಒರ್ಕಡಿ: ಒಂದು ವಿಶಿಷ್ಟ ತಳಿಯ ಕೋಳಿ (ದಕ.ಜಿ)

ಒರ್ಕುಂಟು: ಸ್ನಾನದ ವೇಳೆ ಹೆಂಗಸರು ಉಟ್ಟುಕೊಳ್ಳುವ ಸುಮಾರು ಐದು ಅಥವಾ ಆರು ಮೊಳ ಉದ್ದದ ಸೀರೆ (ದಕ.ಜಿ); ಮಡಿಸೀರೆ

ಒರ್ಗು: ೧. ಒರಗು; ನಿದ್ರೆ ಮಾಡು ೨. ಬಾಗು (ಉಕ.ಜಿ)

ಒರ್ಣಪಂಜುರ್ಲಿ: ಪಂಜುರ್ಲಿ ದೈವದ ಒಂದು ಅವತಾರ (ದಕ.ಜಿ)

ಒರ್ತುಪ್ಪೆ: ಒಂದು ಕಣ

ಒರ್ತೆ: ೧. ಝರಿ; ನೀರು. **ಇರೂ:** *ವರತೆ* (ಉಕ.ಜಿ) ೨. ಚೆನ್ನೆಮಣೆಯ ಗುಳಿಯಲ್ಲಿರುವ ಒಂದು ಕಾಯಿ (ದಕ.ಜಿ)

ಒರ್ತೆಪಂಜುರ್ಲಿ: ಪಂಜುರ್ಲಿಯ ಒಂದು ಅವತಾರ; ಕಲ್ಲುರ್ಟಿ ಭೂತದೊಡನೆ ಪೂಜಿಸಲ್ಪಡುತ್ತದೆ (ದಕ.ಜಿ)

ಒರ್ಬುಳಿಕೆ: ಗುಂಪು

ಒರ್ಮುಕತ್ತಾಯೆ: ಒಂದು ದೈವದ ಹೆಸರು (ದಕ.ಜಿ)

ಒರ್ಮುಲಾಯೆ: ಒಂದು ದೈವ (ದಕ.ಜಿ)

ಒರ್ಲ್‌ಒರಳು: ಭತ್ತ ಕುಟ್ಟುವ ಕಲ್ಲಿನ ಗುಳಿ (ದಕ.ಜಿ)

ಒರ್ಲ: ಒರಳು. **ಇರೂ:** *ವರಳು; ವಳಕಲ್ಲು (ದಕ.ಜಿ)*

ಒರ್ಲುಬಟ್ಟೆ: ಒರಳನ್ನು ಒರೆಸುವ ಬಟ್ಟೆ (ಕೋಲಾ.ಜಿ)

ಒಲಗುಣಿ: ೧. ಕಣದ ಮುಂದೆ ಮಾಡಲಾದ ಒಲೆ ೨. ಹುಳುಕ; ಕುರೂಪಿ. **ಇರೂ:** *ಒಲಡಗುಂಡಿ*

ಒಲಗುಣಿ ಮಾರಿ: ಕುರೂಪಿ; ಕ್ರೂರ ಮುಖದ; ಅಸಹ್ಯ ಮುಖದ

ಒಲಮದ್ದು: ಒಂದು ಬಗೆಯ ಮದ್ದು. ಒಲಿಸಿಕೊಳ್ಳಲು ಕೊಡುವ ಮದ್ದು. **ಪ್ರ:** ಒಲಮದ್ದು ತಲಮದ್ದಿನ ವಿಚಾರ ಹೇಳತೀನಿ (ಬಿಜಾ.ಜಿ/ಚಾಮ.ಜಿ)

ಒಲಮಾರಿ: ಹೊಲೆಮಾರಿ

ಒಲಮುಗ: ಕಬ್ಬಿನ ಆಲೆಮನೆಯಲ್ಲಿ ಬೆಲ್ಲ ಬೇಯಿಸುವ ಒಲೆ (ಉಕ.ಜಿ) **ಇರೂ:** *ಒಲ್‌ಮೂಗು*

ಒಲಮೋದ: ಸಮುದ್ರದಲ್ಲಿ ಕೆಲವು ದೊಡ್ಡ ಅಲೆಗಳು ಬಂದ ಮೇಲೆ ಬರುವ ಚಿಕ್ಕ ಅಲೆ; ಒಳತೆರೆ (ದಕ.ಜಿ)

ಒಲವಾರ: ೧. ಪಕ್ಷಪಾತ; ವಂಚನೆ; ೨. ಮರೆಮಾಚಿ ಕೊಡುವುದು; ಪಂಕ್ತಿ ಭೇದ (ಮೈಸೂ.ಜಿ)

ಒಲವು: ೧. ಹೋಲಿಕೆ ೨. ವಾದ್ಯಗಳ ನಾದದ ಒಲೆತ ೩. ಪ್ರೀತಿ

ಒಲಾಪು: ೧. ಸೊಂಟ ೨. ಒನಪು; ವಯ್ಯಾರ

ಒಲಿ: ೧. ಒಂದು ಜಾತಿಯ ಸಸ್ಯ. ಇದರ ಮುಳ್ಳನ್ನು ಕತ್ತರಿಸಿ ತೆಗೆದು ಬಿಸಿಲಲ್ಲಿ ಒಣಗಿಸಿ ಚಾಪೆ ಹೆಣೆಯುತ್ತಿದ್ದರು (ದಕ.ಜಿ) ೨. ಬೇಟೆಯಾಡುವ ತಂತ್ರಗಳಲ್ಲಿ ಒಂದು. ಪ್ರಾಣಿಗಳು ಕಣ್ಣಿಗೆ ಬಿದ್ದ ಕೂಡಲೇ ಈಡು ಇಟ್ಟು ಹೊಡೆದು ಉರುಳಿಸುವ ವಿಧಾನ

ಒಲಿ ಕಿರೀಟೊ: ತೆಂಗಿನ ಗರಿಯಿಂದ ಮಾಡಿದ ಕಿರೀಟ

ಒಲಿಕೊಡಿ/ಓಲಿಕೊಡಿ: ನೋಡಿ– ಓಲೆಕೊಡೆ

ಒಲಿಗಿಳಿ: ಭೂತಾರಾಧನೆ ಹಾಗೂ ನಾಗಮಂಡಲಗಳಲ್ಲಿ ಚಪ್ಪರವನ್ನು ಅಲಂಕರಿಸಲು, ತೆಂಗಿನ ಗರಿಯಿಂದ ಮಾಡಿದ ಗಿಳಿಯಾಕಾರದ ರಚನೆ (ದಕ.ಜಿ)

ಒಲಿಗುಂಡ: ನೋಡಿ– ಒಲೆಗುಂಡು

ಒಲಿಗ್ಗ ವಾಸುದೇವ: ಕಣದಲ್ಲಿ ಒಕ್ಕಣೆ ಮುಗಿದು ತೂರುವ ಸಂದರ್ಭದಲ್ಲಿ, ಬೀಸುವ ಗಾಳಿ ಕಡಿಮೆಯಾದಾಗ ವಾಯುದೇವನನ್ನು ಆಹ್ವಾನಿಸುವ ಒಂದು ಉದ್ಘೋಷ (ಚಿತ್ರ.ಜಿ) **ನೋಡಿ–** ವಾಸುದೇವ

ಒಲಿತ ಸಿರಿಮುಡಿ: ದೈವನರ್ತನದಲ್ಲಿ ಉಪಯೋಗಿಸುವ ತೆಂಗಿನ ಗರಿಯಿಂದ ಮಾಡಿದ ಶಿರೋಭೂಷಣ (ದಕ.ಜಿ)

ಒಲಿತೆಗ್ಗು: ರೊಟ್ಟಿ ಸುಡಲು ಮಾಡಿದ ಒಲೆಯ ತಗ್ಗು. ತಗ್ಗಿನಲ್ಲಿ ಕೆಂಡ ಹಾಕಲು ಅನುಕೂಲ (ಧಾರ.ಜಿ)

ಒಲಿತ್ಲು: ಒಲೆಯ ಹಿಂಭಾಗ; ಒಣಗಿಸಬೇಕೆನಿಸಿದ ಪದಾರ್ಥಗಳಿಗೆ ಒಲೆಯ ಬೆಂಕಿಯ ಕಾವು ತಟ್ಟುವಂತೆ ಅನುಕೂಲ ಮಾಡಿಕೊಂಡಿರುವ ಸ್ಥಳ (ಮಂಡ್ಯ.ಜಿ). **ಇರೂ:** *ಒಲೆಜಗಲಿ; ಒಲೆತೋಳು; ಒಲೆತೋಡು*

ಒಲಿದುಂಬು: ಒಲೆಯನ್ನು ತುಂಬು. ಒಲೆ ಉರಿಸು ಎಂದರ್ಥ (ಉಕ.ಜಿ)

ಒಲಿಪುಟುಮಾಡು: ಒಲೆ ಹೊತ್ತಿಸು (ಗುಲ್ಬ.ಜಿ)

ಒಲಿಪುರಿ: ಬತ್ತದ ಪೈರಿನ ಎಲೆಯನ್ನು ಹಸಿರು ಹುಳು ತಿಂದು ಹಾಕುವ ರೋಗ (ದಕ.ಜಿ)

ಒಲಿಮದೆ: ಭೂತಾರಾಧನೆಯಲ್ಲಿ ತೆಂಗಿನ ಎಳೆಗರಿಗಳಿಂದ ತಯಾರಿಸಿದ ಗುಹೆಯಂತಹ ರಚನೆ; ಸಂಬಂಧಪಟ್ಟ ಭೂತಕ್ಕೆ

ಬಣ್ಣ ಹಾಕಿಕೊಳ್ಳಲು ಮಾಡಿರುವ ಮರೆ (ದಕ.ಜಿ). **ಇರೂ:** ಪಂಬದರ, ಪರವರ ಕೊಟ್ಟ

ಒಲಿಮದೆ ಇಳಿಯುವುದು: ದೈವ ನರ್ತಕನು ಬಣ್ಣ ಹಾಕಿಕೊಂಡು ನೇಪಥ್ಯದಿಂದ ಹೊರಗೆ ಬರುವ ಆಚರಣೆ. ರಂಗಪ್ರವೇಶ (ದಕ.ಜಿ)

ಒಲಿ ಯರಡಾಗು: ಬೇರೆ ಬೇರೆಯಾಗು (ರಾಯ.ಜಿ) ಅಣ್ಣತಮ್ಮಂದಿರು ಪಾಲಾಗುವುದು. ಆಗ ಒಂದು ಮನೆ ಎರಡಾಗಿ ಎರಡು ಒಲೆಯಾಗುತ್ತವೆ ಎಂಬ ಅರ್ಥ

ಒಲಿವಗಿ: ಬೆಲ್ಲ ತಯಾರಿಸುವಾಗ ಆಲೆಮನೆಯ ಒಲೆಗೆ ಉರುವಲು ತುಂಬುವುದು

ಒಲಿಹಚ್ಚು: ಅಡುಗೆಮಾಡು (ಗುಲ್ಬ.ಜಿ). ಇವತ್ತು ಒಲೇನೇ ಹಚ್ಚಿಲ್ಲ ಎಂದರೆ ಅಡಿಗೆ ಮಾಡಿಲ್ಲ ಎಂದರ್ಥ

ಒಲಿಹೂಡು: ೧. ಅಡಿಗೆ ಮಾಡಲು ಮೂರುಕಲ್ಲಿಟ್ಟು ಒಲೆ ಸಿದ್ಧಪಡಿಸು (ಶಿವ.ಜಿ) ೨. ಒಲೆ ಹಚ್ಚು

ಒಲುಮಾರೆ: ಗಡಿಯಾಚೆ

ಒಲೂರಕಾತಿ: ಪಕ್ಷಪಾತ ಮಾಡುವವಳು



ಒಲೆ: ಅಡುಗೆ ಮಾಡಲು ಬೆಂಕಿ ಉರಿಸುವ ರಚನೆ. ಕೆಮ್ಮಣ್ಣನ್ನು ನೀರಿನಲ್ಲಿ ಹದವಾಗಿ ಕಲೆಸಿ ಅನುಭವಸ್ಥರಿಂದ ಹಾಕಿಸುತ್ತಾರೆ (ಮಂಡ್ಯ.ಜಿ). **ಪ್ರ:** ಒಲೆ ಸೊಟ್ಟಾದರೆ ಬದನೇಕಾಯಿ ಬೇಯದೇ

ಒಲೆಕಿತ್ತುಹಾಕು: ಮೆರೆ; ಅಹಂಕಾರದಿಂದ ಬೀಗು; ಪಿತ್ಥ ನೆತ್ತಿಗೇರು

ಒಲೆಕುಪ್ಪೆ/ಒಲೆಕುಪ್ಪು/ಒಲೆಗುಪ್ಪು: ಒಲೆಯ ಮೇಲೆ ಪಾತ್ರೆಗಳು ಮಟ್ಟವಾಗಿ ಕೂಡಲು ಮಾಡಿದ ಮೂರು ಬುಗುಟು (ಮಂಡ್ಯ.ಜಿ). **ಪ್ರ:** ಒಲೆಕುಪ್ಪೆ ಕಿತ್ತೋಗದೆ ಮೆತ್ಬೇಕು. **ನೋಡಿ–** ಒಲೆಗುಪ್ಪು

ಒಲೆಕೊಪ್ಪು: ಹಚ್ಚೆ ಚಿತ್ತಾರದ ಒಂದು ನಮೂನೆ. **ಪ್ರ:** ಆ ಕಾಲದಲ್ಲಿ ಚೇಳೂರುಬಾವಿ, ಒಲೆಕೊಪ್ಪು ಅಂತೆಲ್ಲಾ ಹಚ್ಚೆಗಳನ್ನು ಹಾಕುತ್ತಿದ್ದರು

ಒಲೆಗುಂಡು: ೧. ಒಲೆಯ ಮುಂಭಾಗ ೨. ಒಲೆ ಹೂಡಲು ಇರಿಸಿದ ಮೂರು ದುಂಡನೆಯ ಕಲ್ಲು ೩. ಮಣ್ಣಿನ ಒಲೆಯ ಮೇಲೆ ಪಾತ್ರೆಗಳು ಸರಿಯಾಗಿ ಕೂಡ್ರಲು ಅನುಕೂಲವಾಗುವಂತೆ ಒಲೆಯ ಮೇಲೆ ದುಂಡಗೆ ಮಾಡಿದ ಮೂರು ಮಣ್ಣಿನ ಗುಂಡುಗಳು ೪. ಹಚ್ಚೆಯ ಒಂದು ಬಗೆ (ದಕ) ಹೆಬ್ಬೆರಳಿನ ಬುಡಕ್ಕೆ ಮೂರು ಚುಕ್ಕೆಯ ರೂಪದಲ್ಲಿ ಹಾಕುವ ಹಚ್ಚೆ

ಒಲೆಗುಪ್ಪು: ನೋಡಿ– ಒಲೆಕುಪ್ಪೆ

ಒಲೆತಡೆ: ಒಲೆಯ ಮುಂದೆ ಹಿಂದೆ ಅಕ್ಕ ಪಕ್ಕದ ಸ್ಥಳ (ಮಂಡ್ಯ.ಜಿ)

ಒಲೆತಾರ್ಸು: ಒಲೆ ಸಾರಿಸು. ಸಗಣಿಯನ್ನು ನೀರಿನಲ್ಲಿ ಕಲೆಸಿ ಒಲೆಯನ್ನು ಸಾರಿಸುವುದು (ಮಂಡ್ಯ.ಜಿ). **ಪ್ರ:** ನಾಳಕ್ಕೆ ಸ್ವಾಮ್ವಾರ ಒಲೆ ತಾರ್ಸಿ ರಂಗೋಲೆ ಬುಡು.

ಒಲೆತೋಳು: ಅಡುಗೆ ಒಲೆಯ ಅಕ್ಕಪಕ್ಕದ ಭಾಗ; ಒಲೆತೋಡು (ಮೈಸೂ.ಜಿ)

ಒಲೆಪೂಜೆ: ಒಲೆ ಸಾರಿಸಿದ ನಂತರ ರಂಗೋಲಿ ಹಾಕಿ ಅರಿಶಿನ ಕುಂಕುಮ ಹಾಕಿ ಪೂಜಿಸುವುದು (ಮಂಡ್ಯ.ಜಿ)

ಒಲೆಬಾಯಿ: ಸೌದೆಯನ್ನು ಉರಿಸುವ ಒಲೆಯ ಭಾಗ. **ಪ್ರ:** ನಿಧಾನಕ್ಕೆ ಸೌದೆ ತುರ್ಕು, ಒಲೆಬಾಯಿ ಕಿತ್ತೋದದು

ಒಲೆಮೆತ್ತುವುದು: ಒಲೆಯ ಕಿತ್ತುಹೋದ ಭಾಗವನ್ನು ಮಣ್ಣಿನಿಂದ ಮೆತ್ತಿ ಸರಿಪಡಿಸುವುದು (ಮಂಡ್ಯ.ಜಿ). **ಪ್ರ:** ಒಲೆ ಬಾಯಿ ಕಿತ್ತೋಗದೆ ಮೆತ್ಬೇಕು

ಒಲೆಶಾಸ್ತ್ರ: ಮದುವೆಯ ಹಿಂದಿನ ದಿನ ವಧೂವರರ ಸ್ನಾನಕ್ಕಾಗಿ ನೀರು ಕಾಯಿಸುವ ಒಲೆಗೆ ಮಾಡುವ ಪೂಜೆಯ ಶಾಸ್ತ್ರ (ಚಿಮ.ಜಿ/ಬೆಂಗ್ರಾ.ಜಿ)

ಒಲೆಸರ: ಒಲೆಸಾಲು ೧. ಅಡಿಗೆ ಮಾಡಲು ನಿರ್ಮಿಸಿದ ಎರಡು ಮೂರು ಕಂಡಿಗಳಿರುವ ಸೌದೆ ಒಲೆಯ ಸರಣಿ (ಮಲೆ) ೨. ಒಲೆಯ ನೇರದಲ್ಲಿ ನಿರ್ಮಿಸಿದ ತಾತ್ಕಾಲಿಕ ಅಟ್ಟ ೩. ಒಲೆಯ ಹಿಂದೆ ಇರುವ ಸ್ಥಳ; ಒಲೆತೋಡು (ಮೈಸೂ.ಜಿ) ೪. ಕಮ್ಮಾರಿಕೆಯ ತಿದಿಯಿಂದ ಗಾಳಿ ಹೊರಬರಲು ಜೋಡಿಸಿದ ಕೊಳವೆಯ ಮುಖಬಾಯಿ

ಒಲೇಕಲ್ಲು: ೧. ಹೊಲೆಕಲ್ಲು; ಹೆಂಗಸರು ಮುಟ್ಟಿನ ಬಟ್ಟೆಗಳನ್ನು ಇಡುವ ಸ್ಥಳ ೨. ಒಲೆ ಹೂಡಲು ಬಳಸಲಾಗುವ ಕಲ್ಲು

ಒಲ್ಲಿ: ವಲ್ಲಿ; ಹೊದಿಕೆ; ಒಂದು ಬಗೆಯ ವಸ್ತ್ರ; ಚೌಕ (ಮೈಸೂ.ಜಿ/ಚಾಮ.ಜಿ)

ಒಲ್ಲಿಕೆ: ೧. ಮಡಕೆ ೨. ಜೋಡಿಸಿದ ಸಣ್ಣಕಟ್ಟು

ಒಲ್ಲುಕಟ್ಟು: ಒಂದು ಆಚರಣೆ

ಒಸಂತೊಸಂಧಿ: ಭೂತಾರಾಧನೆಯಲ್ಲಿ ಭೂತದ ಪ್ರಕರಣವನ್ನು ನಿರೂಪಿಸುವ ಕಥಾನಕ (ದಕ.ಜಿ)

ಒಸಗೆ: ೧. ಹೆಣ್ಣುಮಕ್ಕಳು ಋತುಮತಿಯಾದಾಗ ನೆಂಟರಿಷ್ಟರನ್ನು ಕರೆದು ಮಾಡುವ ಸಮಾರಂಭ ೨. ದೈವಾವೇಶಗೊಳ್ಳುವುದು (ದಕ.ಜಿ) ೩. ಒಳ್ಳೆಯ ಸುದ್ದಿ (ಶಿವ.ಜಿ) ೪. ಪ್ರತ್ಯಕ್ಷ; ಕಾರಣಿಕ ೫. ವಿವಾಹದ ಅಂಗವಾಗಿ ಕಳಿಸುವ ಆಹ್ವಾನ ಪತ್ರ (ದಕ.ಜಿ)

ಒಸಗೆಪದ: ಒಸಗೆ ಹಾಕುವಾಗ ಹೇಳುವ ಹಾಡು; ಸೋಬಾನೆ. **ಪ್ರ:** ಆರತಿ ಹಚ್ಚಿದಾರೆ ಒಸಗೆಪದ ಹೇಳಿಸಿರಿ

ಒಸಡು: ಹಲ್ಲುಗಳಿಗೆ ಆಧಾರವಾಗಿರುವ ಮಾಂಸಖಂಡ

ಒಸಡ್ಗುರು: ಹಲ್ಲಿನ ವಸಡಿನಲ್ಲಿ ಮೂಡುವ ಕುರು; –ಗಡ್ಡೆ (ಬಿಜಾ.ಜಿ)

ಒಸಯ: ಭೂತಾರಾಧನೆಯಲ್ಲಿ ದೈವದ ಆವಾಹನೆ; ಸಾಕ್ಷಾತ್ಕಾರ (ದಕ.ಜಿ)

ಒಸಯ ಸಂಧಿ: ದೈವನರ್ತಕ ಮೈಮೇಲೆ ದೈವವನ್ನು ಆವಾಹಿಸಿಕೊಳ್ಳುವುದಕ್ಕೆ ಮೊದಲು ದೈವಪೀಠಕ್ಕೆ, ಮುಖವಾಡಕ್ಕೆ ಅಭಿಮುಖವಾಗಿ ನಿಂತು ಪಾಡ್ದನ ಹಾಡುವ ಆಚರಣೆ (ದಕ.ಜಿ)

ಒಸಯೊದ ಪ್ರಸಾದ: ಭೂತಾರಾಧನೆಯಲ್ಲಿ ದೈವನರ್ತಕನು ವಿಗ್ರಹದ ಮುಂದೆ ನಿಂತು ಒಸಯೊ ಸಂದಿ ಹಾಡುವಾಗ ನೀಡುವ ಪ್ರಸಾದ (ದಕ.ಜಿ)

ಒಸರು: ಜಿನುಗು; ಸೋರು (ಬಿಜಾ.ಜಿ)

ಒಸಿ: ಸ್ವಲ್ಪ; ಕಡಿಮೆ (ಮಂಡ್ಯ.ಜಿ)

ಒಸೆ: ಪೋಣಿಸು (ಧಾರ.ಜಿ)

ಒಸ್ಕಿ: ಒಸಗೆ (ಕೋಲಾ.ಜಿ)

ಒಸ್ಕಿ ಆಕೋದು: ಒಸಗೆ ಹಾಕುವುದು; ಹುಡುಗಿ ಋತುಮತಿಯಾದಾಗ ಮತ್ತು ಮದುವೆ ಸಂದರ್ಭದಲ್ಲಿ ಹಣ್ಣು ತಿಂಡಿ ತಿನಿಸುಗಳ ತಟ್ಟೆಗಳನ್ನು ಇಟ್ಟು ಮುತ್ತೈದೆಯರು ಹಾಡು ಹೇಳುತ್ತಾ, ಹುಡುಗಿಗೆ ಅರಿಶಿನ ಕುಂಕುಮವಿಟ್ಟು, ಹೂವು ಮುಡಿಸಿ, ತಟ್ಟೆಯಲ್ಲಿಟ್ಟ ಒಸಗೆಯ ಸಾಮಗ್ರಿಯನ್ನು ಹುಡುಗಿಯ ಮಡಿಲಿಗೆ ತುಂಬಿಸುವುದು (ಕೋಲಾ.ಜಿ)

ಒಳಂಗಿ: ಗಂಡಸರು ದೊಡ್ಡ ಅಂಗಿಯ ಒಳಗಡೆ ತೊಡುವ ಅಂಗಿ. ಮಲಗುವಾಗ ದೊಡ್ಡ ಅಂಗಿ ಕಳೆದು ಒಳಂಗಿ ಮೇಲೆ ಮಲಗುವರು. **ಇರೂ:** *ಮಂಡಂಗಿ (ಶಿವ.ಜಿ)*

ಒಳಂಗೂಟ: ಗಾಡಿಗೆ ಹಗ್ಗದ ಜೊತೆ ಸಿಕ್ಕಿಸಲು ಬಳಸುವ ಗೂಟ (ಬೆಂಗ್ರಾ.ಜಿ). **ಇರೂ:** *ಕಡಗೂಟ (ಮಂಡ್ಯ.ಜಿ)*

ಒಳಕಣ: ಖಾಸಗಿ ಒಡೆತನದಲ್ಲಿರುವ ಕಣ (ಚಿಮ.ಜಿ)

ಒಳಕಲ್ಲು/ಒರಳುಕಲ್ಲು: ಅಡುಗೆಗೆ ಬೇಕಾದ ಪದಾರ್ಥಗಳನ್ನು ರುಬ್ಬಲು, ಅಕ್ಕಿ ಮುಂತಾದ ಪದಾರ್ಥಗಳನ್ನು ಕುಟ್ಟಲು ಬಳಕೆಯಾಗುವ ಕಲ್ಲಿನ ರಚನೆ

ಒಳಕಲ್ಲುಪೂಜೆ: ೧. ಮದುವೆಯ ಮೊದಲದಿನಗಳ ಒಂದು ಶಾಸ್ತ್ರ. ಒರಳುಕಲ್ಲನ್ನು ಮತ್ತು ಬೀಸುವಕಲ್ಲನ್ನು ಪೂಜಿಸಿ ಮುತ್ತೈದೆಯರು ಅರಿಶಿಣವನ್ನು ಜೋಳದ ಜೊತೆಗೆ ಸೋಬಾನೆ ಪದ ಹಾಡುತ್ತಾ ಬೀಸುವರು (ಶಿವ.ಜಿ) ೨. ಲಿಂಗಾಯತರ ಮದುವೆಗಳ ಪೂರ್ವಭಾವಿಯಾಗಿ ನಡೆಯುವ ಆಚರಣೆಗಳಲ್ಲಿ ಒಂದು. ಐದು ಮಂದಿ ಮುತ್ತೈದೆಯರು ಉಪವಾಸವಿದ್ದು ಒರಳುಕಲ್ಲನ್ನು ಪೂಜಿಸಿ ಐದು ವಿಧದ ಧಾನ್ಯಗಳನ್ನು ಇದರಲ್ಲಿ ಕುಟ್ಟಿ ಪುಡಿಮಾಡಿ ಅಕ್ಷತೆಯೊಂದಿಗೆ ಬೆರಸುತ್ತಾರೆ. ಇದನ್ನು ಅಕ್ಷತಾರೋಪಣೆಗೆ ಬಳಸಲಾಗುತ್ತದೆ

ಒಳಕಲ್ಲುಪೂಜೆ ಹಾಡು: ಮದುವೆ ಕಾರ್ಯಕ್ಕೆ ಮುಂಚೆ ಒರಳಿನ ಪಕ್ಕ ರುಬ್ಬುವ ಕಲ್ಲನ್ನು ಇಟ್ಟು, ಸೀರೆಏರಿಸಿ, ಉಡಿತುಂಬಿ ಓಣಿಯ ಮುತ್ತೈದೆಯರೆಲ್ಲ ಸೇರಿ ಹಾಡುವ ಸಂಪ್ರದಾಯದ ಹಾಡು (ಬಿಜಾ.ಜಿ)

ಒಳಕಲ್ಲುಶಾಸ್ತ್ರ: ವಿಶ್ವಕರ್ಮ ಸಮುದಾಯದವರು ಮಾಡುವ ಒಂದು ಶಾಸ್ತ್ರ. ಈ ಸಂದರ್ಭದಲ್ಲಿ ಒರಳುಕಲ್ಲಿನ ಪೂಜೆಮಾಡುತ್ತಾರೆ (ಬಳ್ಳಾ.ಜಿ)

ಒಳಕಳಿ: ಗಾಡಿಗೆ ಎತ್ತನ್ನು ಕಟ್ಟಲು ಮಾಡಿರುವ ಒಳಗೂಟ (ದಕ.ಜಿ)

ಒಳಕು: ೧. ಕೊಡಲಿಯಿಂದ ಸೀಳು ೨. ನೆನಪು ಮಾಡಿಕೋ (ಮಂಡ್ಯ.ಜಿ)

ಒಳಕುಟ್ಟಿ: ಎತ್ತಿನ ಗಾಡಿಯ ಹಿಂಭಾಗ (ದಕ.ಜಿ)

ಒಳಕೋಲು: ಕಂಬಳಿ ನೇಯ್ಗೆಯಲ್ಲಿ ಬಳಕೆಯಾಗುವ ವಸ್ತು (ಬಳ್ಳಾ.ಜಿ)

ಒಳಕ್ಕೆ ತಗೋಳೊದು: ಕುರುಬರಲ್ಲಿ ವ್ಯಕ್ತಿ ಸತ್ತ ಒಂಭತ್ತನೆಯ ದಿವಸ ಮಾಡುವ ಆಚರಣೆ. ಮೃತ ವ್ಯಕ್ತಿ ಇಷ್ಟಪಡುತ್ತಿದ್ದ ಅಡುಗೆಯನ್ನು ಮಾಡಿಸಿ ಬಂಧುಬಳಗಕ್ಕೆ ಊಟ ಹಾಕುತ್ತಾರೆ (ಬಳ್ಳಾ.ಜಿ)

ಒಳಗಟ್ಟಿ: ೧. ಮಳೆಯ ನೀರಿನಿಂದಾಗಿ ಮಣ್ಣು ಕೊಚ್ಚಿ ಹೋಗದಂತೆ ಹಾಕಿದ ಕಟ್ಟೆಸಹಿತವಾದ ಒಡ್ಡು (ರಾಯ.ಜಿ) ೨. ಹೊಲದಲ್ಲಿ ನೀರು ಹರಿಯುವ ಸ್ಥಳ; ಜಿಗುಳು

ಒಳಗಾಲಿ: ಆರು ಗಾಲಿಗಳ ರಥದ ನಾಲ್ಕು ಹೊರಗಾಲಿಗಳ ಹೊರತಾಗಿ ಒಳಭಾಗದಲ್ಲಿರುವ ಎರಡು ಗಾಲಿಗಳು

ಒಳಗಿನ ಅಕ್ಕಿಕಾಳು: ಮದುವೆ ಸಂದರ್ಭದಲ್ಲಿ, ಮಠದ ಸ್ವಾಮಿಗಳ ಸಮಕ್ಷಮದಲ್ಲಿ ಮನೆಯ ಒಳಗಡೆ ವಧುವರರಿಗೆ ಹಾಕುವ ಅಕ್ಷತೆ (ಧಾರ.ಜಿ)

ಒಳಗಿನಮನೆ: ಹೆರಿಗೆಕೋಣೆ (ಮಲೆ)

ಒಳಗೆಚ್ಚಲು: ನೋಡಲು ಗಾತ್ರ ಚಿಕ್ಕದಿದ್ದು ಹೆಚ್ಚು ಹಾಲನ್ನು ಒಳಗೊಂಡಿರುವ ಕೆಚ್ಚಲು (ಬಳ್ಳಾ.ಜಿ)

ಒಳಗೆರಿ: ೧. ಕೆರೆಯ ಒಳಭಾಗ; ಕೆರೆಯಂಗಳ ೨. ನೀರಿಲ್ಲದ ಕೆರೆಯ ಬಯಲು ೩. ಮೊಣಕಾಲು (ಬಳ್ಳಾ.ಜಿ) ೪. ಗೋಮಾಳ (ಮಂಡ್ಯ.ಜಿ). **ಇರೂ:** *ಒಳಗೆರೆ*

ಒಳಗ್ನ ಒಲೆ: ಒಳಗಿನ ಒಲೆ. ಮಾಂಸಾಹಾರವನ್ನು ತಯಾರಿಸಲು ಇರುವಂಥ ಒಲೆ (ಉಕ.ಜಿ)

ಒಳಜನ್ನಿಗೆ: ಜನ್ನಿಗೆಯ ಶಾಸ್ತ್ರ. **ನೋಡಿ–** ಜನ್ನಿಗೆ

ಒಳಜೀವ: ಅರೆಜೀವ; ಕೊರೆಜೀವ; ಸಾವಿನ ಸಂದರ್ಭದಲ್ಲಿರುವ ಒಳಉಸಿರು

ಒಳಜ್ವರ: ಮೈ ಬಿಸಿಯೇರದ, ಸ್ಪಷ್ಟವಾಗಿ ಗುರುತಿಸಲಾಗದ ಒಂದು ಬಗೆಯ ಜ್ವರ (ದಕ)

ಒಳದಗಲೆ: ವೇಷದ ಮುಖ್ಯವಾದ ಅಂಗಿ

ಒಳದಸವಂದ: ಹತ್ತರಲ್ಲಿ ಒಂದು ಪಾಲು. ಒಂದು ಬಗೆಯ ತೆರಿಗೆ

ಒಳದಾರಿ: ಕಾಲುದಾರಿ; ಹತ್ತಿರದ ದಾರಿ (ಚಿಮ.ಜಿ)

ಒಳಪೇತು: ಒಳಸಂಚು (ದಕ.ಜಿ)

ಒಳಬಕ್ಕಣ: ಅಂಗಿಯ ಒಳಭಾಗದಲ್ಲಿ ಎದೆಯ ಕಡೆ ಹಚ್ಚಿದ ಜೇಬು (ಬಳ್ಳಾ.ಜಿ)

ಒಳಬರು: ಬ್ರಾಹ್ಮಣರಲ್ಲಿ ಮುಟ್ಟಾಗಿ ನಾಲ್ಕನೆಯ ದಿನ ತಲೆಸ್ನಾನ ಮಾಡಿ ಒಗೆದ ವಸ್ತ್ರಗಳನ್ನು ಧರಿಸಿ ಮನೆಯೊಳಗೆ ಪ್ರವೇಶ ಮಾಡುವ ಕ್ರಿಯೆ. ಮುಟ್ಟಾದವರು ಮೂರು ದಿನಗಳವರೆಗೆ ಹೊರಕೋಣೆಯಲ್ಲಿಯೇ ಇರುವ ಪದ್ಧತಿ ಅವರಲ್ಲಿದೆ (ಧಾರ.ಜಿ)

ಒಳಬಳೆ: ಗಾಡಿಯ ಚಕ್ರದ ಒಳಸುತ್ತಿನ ಬಳೆ (ಬೆಂಗ್ರಾ.ಜಿ)

ಒಳಬೆ/ಒಳಬು/ಒಳುಬೆ: ಬೆಟ್ಟದ ಕೆಳಗಿನ ಜೌಗು ಭೂಮಿ (ಮೈಸೂ.ಜಿ)

ಒಳಬೈರವಿ: ದೇವತಾಮೂರ್ತಿಯ ಕೈರಚನೆಯು ಒಳಭಾಗಕ್ಕೆ ತಿರುಗಿದ್ದರೆ ಒಳಭೈರವಿ ಎನ್ನುವರು

ಒಳಬ್ಯಾನಿ: ದೇಹದ ಒಳಗಿನ ನೋವು ಮತ್ತು ಖಾಯಿಲೆ

ಒಳಭಂಡಾರ: ಪ್ರಾಣಿಯ ದೇಹದ ಈಲಿ, ಗುಂಡಿಗೆ ಇತ್ಯಾದಿ

ಒಳಮಕ: ಒಂದು ವಸ್ತುವಿನ ಒಳಮೈ (ಬಳ್ಳಾ.ಜಿ)

ಒಳಮಾತು: ಗುಟ್ಟು; ರಹಸ್ಯಮಾತು (ಮೈಸೂ.ಜಿ)

ಒಳಮಾರು: ಆಮದು (ದಕ.ಜಿ)

ಒಳಮುಚಕ: ಮುಟ್ಟಿದರೆ ಎಲೆಗಳು ಮಡಚಿಕೊಳ್ಳುವ ಸಸ್ಯ. ಮುಳ್ಳುಗಳಿಂದ ಕೂಡಿದ ಕಳೆ. ಕರಿಕೆಯಂತೆ ನೆಲಕ್ಕೆ ಹಬ್ಬುವುದು (ಮಂಡ್ಯ.ಜಿ/ಬೆಂಗ್ರಾ.ಜಿ). **ಇರೂ:** *ಮುಟ್ರುಮುನಿ, ಮುಟ್ಟಿದರೆ ಮುನಿ, ಮುಟ್ಟಿನ ಮುಸುಕ*

ಒಳಮುಯ್: ಮದುವೆಯಾಗುವ ಹೆಣ್ಣು/ಗಂಡಿಗೆ ಬಂಧು ಬಳಗ ಕೊಡುವ ಉಡುಗೊರೆ (ಬೆಂಗ.ಜಿ)

ಒಳಮುರುಗಿ: ಬಯಲು ಕುಸ್ತಿಯಲ್ಲಿನ ಒಂದು ಪಟ್ಟು (ಮೈಸೂ.ಜಿ)

ಒಳಮುರ್ಚು: ಏನೂ ಆಡಲಾರದವ (ಬೆಳ.ಜಿ)

ಒಳಮುಷ್ಟಿ: ಅಂಗೈಯನ್ನು ಮುಚ್ಚಿದಾಗ ನಾಲ್ಕು ಬೆರಳನ್ನು ಒಳಹಾಕಿ ಹೆಬ್ಬೆರಳನ್ನು ಹೊರಕ್ಕೆ ಹಾಕಿ ಮಡಚಿ ಹಿಡಿಯುವುದು (ಧಾರ.ಜಿ)

ಒಳಮೆ: ಮೇಯುವುದಕ್ಕಾಗಿ ಜಾನುವಾರುಗಳನ್ನು ಉದ್ದವಾದ ಹಗ್ಗದಿಂದ ಗೂಟಕ್ಕೆ ಕಟ್ಟುವಿಕೆ (ದಕ.ಜಿ)

ಒಳಲೆ: ಮಕ್ಕಳಿಗೆ ಹಾಲು ಕುಡಿಸುವ ಚಿಕ್ಕ ಬಟ್ಟಲು; ಸಿಂಪೆ; ಒಳ್ಳೆ (ಬೆಂಗ್ರಾ.ಜಿ). **ನೋಡಿ–** ಒಳ್ಳೆ, ವಳ್ಳೆ

ಒಳವಳಕೆ: ಅತಿಯಾಸೆ (ದಕ.ಜಿ/ಉಕ.ಜಿ). **ಇರೂ:** *ಒಳವಳ್ಳಿ*

ಒಳವು: ೧. ಗುಟ್ಟು; ರಹಸ್ಯ ೨. ಅಂತರಂಗ; ಒಳಭಾಗ ೩. ಸ್ವಾಧೀನ (ದಕ.ಜಿ) ೪. ತಬಲಾ, ಮೃದಂಗ ಮೊದಲಾದವುಗಳ ಒಳಭಾಗದ ಟೊಳ್ಳು

ಒಳಶುಂಟಿ: ಮಕ್ಕಳ ಒಳತೊಡೆಯನ್ನು ಬೆರಳುಗಳಿಂದ ಹಿಂಡಿ ತಿರುಚಿ ನೀಡುವ ಶಿಕ್ಷೆ (ಮಲೆ); ತೊಡೆ ಸಂದಿಯಲ್ಲಿ ಗಿಂಡುವುದು (ಮೈಸೂ.ಜಿ)

ಒಳಶೆಡಿ: ಒಳಕ್ಕೆ ಕಾಲೆಳೆಯುವ ಆಕಳು. ಇಂಥ ಆಕಳುಗಳನ್ನು ಸಾಕುವುದರಿಂದ ಮನೆಯ ಒಳಗಡೆ ಹಾನಿ ಹೆಚ್ಚು ಎಂಬ ನಂಬುಗೆ ಇದೆ (ಉಕ.ಜಿ)

ಒಳಸರಿ: ೧. ಭೂತಾರಾಧನೆಯಲ್ಲಿ ಭೂತದ ಕುಣಿತದ ಒಂದು ಪ್ರಭೇಧ ೨. ಗ್ರಾಮದೊಳಗಿನ ಸಂಚಾರ; ಒಳಸವಾರಿ (ದಕ.ಜಿ)

ಒಳಸಾಲ: ೧. ಕುಂಟೆಯಿಂದ ಬಿತ್ತಿದ ಸಾಲುಗಳನ್ನು ಮುಚ್ಚುವುದು (ಬಳ್ಳಾ.ಜಿ) ೨. ದಾಖಲೆ ಇಲ್ಲದ ಸಾಲ (ದಕ.ಜಿ). **ಇರೂ:** *ಕೈಗಡ (ಮೈಸೂ.ಜಿ), ಕೈಸಾಲ (ಮಂಡ್ಯ.ಜಿ)*

ಒಳಸುತ್ತು: ದೇವಸ್ಥಾನ/ದೈವದ ಮನೆಯ ಒಳಗಿನ ಸುತ್ತು; ಪ್ರದಕ್ಷಿಣೆ ಬರುವ ಭಾಗ (ದಕ.ಜಿ)

ಒಳಸೂಲಿ: ೧. ಒಳಗೇ ಕಾಡುವ ನೋವು; –ಸಂಕಟ ೨. ಒಳಗೇ ಕುತಂತ್ರ ನಡೆಸುವ ತಲೆನೋವಿನ ಚಾಳಿ (ಶಿವ.ಜಿ). **ಇರೂ:** *ಒಳಹೀಂತ್ರಿ (ದಕ.ಜಿ)*

ಒಳಹೊಯ್ಕು: ೧. ಬೆನ್ನುಕಟ್ಟು ೨. ರಕ್ಷಿಸು ೩. ಸುಧಾರಿಸಿಕೊಳ್ಳು

ಒಳಾ: ಬಿದಿರಿನ ದಬ್ಬೆ (ಮೈಸೂ.ಜಿ). **ಇರೂ:** *ಒಳವು; ಒಳವೆ; ಹೊಳವೆ*

ಒಳಾಯ: ೧. ಕಟ್ಟಡದ ನಡುವಿನ ಕೋಣೆಯ ಅಥವಾ ಒಳಚೌಕಟ್ಟಿನ ಸುತ್ತಳತೆ (ದಕ.ಜಿ) ೨. ಮನೆಯ ಒಳಭಾಗದ ಉದ್ದಗಲ (ಬೆಂಗ್ರಾ.ಜಿ)

ಒಳಿ: ೧. ಉಳಿ; ತಂಗು ೨. ಬೇಟೆಗಾರ ಅವಿತು ಕೂರುವಿಕೆ (ಕೊಡ.ಜಿ)

ಒಳಿಗೆ: ಮರದ ಅಟ್ಟಣಿಗೆಗೆ ಸೊಪ್ಪು ಮರೆಮಾಡಿ ಬೇಟೆಗೆ ಕುಳಿತುಕೊಳ್ಳುವಿಕೆ

ಒಳಿಡಿ: ಒಳಹಿಡಿ; ಮುಷ್ಟಿಯೊಳಗೆ ಹಿಡಿಸುವಷ್ಟು. ಒಂದು ಕೈಯಿನ ಹಿಡಿಗೂ ಕಡಿಮೆ (ಮಂಡ್ಯ.ಜಿ)

ಒಳಿತ್ಲು: ಒಳಹಿತ್ತಿಲು; ಮನೆಯ ಹಿಂದಿನ ಆವರಣದಲ್ಲಿನ ಹಿತ್ತಿಲು (ಬಳ್ಳಾ.ಜಿ)

ಒಳಿಪ್ಪಡಿ: ಎರಡು ಹಸ್ತಗಳನ್ನು ಸೇರಿಸಿ ಹಿಡಿದುಕೊಂಡರೆ ಹಿಡಿಸುವಷ್ಟು. **ಪ್ರ:** ಒಂದು ಒಳಿಪ್ಪಡಿ ಅನ್ನ ಹಾಕಪ್ಪಾ

ಒಳಿಯ ಬಾಗಿಲು: ಬಿದಿರು ಮುಳ್ಳಿನಿಂದ ಮಾಡಿದ ತೋಟದ ಬಾಗಿಲು (ಬೆಂಗ್ರಾ.ಜಿ)

ಒಳು: ಏಕತಾರಿಯ ದಂಡ (ಮೈಸೂ.ಜಿ)

ಒಳುಕ್ಸು: ಎರಡು ಭಾಗ ಮಾಡು (ಮಂಡ್ಯ.ಜಿ)

ಒಳುಪಾರ: ಒಳಪಹರೆ; ಒಳಭಾಗದ ಕಾವಲು (ಮಂಡ್ಯ.ಜಿ)

ಒಳುಸೋಕ: ಅಭಿಷೇಕ; ನೈವೇದ್ಯ (ರಾಮ.ಜಿ)

ಒಳೆಂಚು: ೧. ಬಿದ್ದ ನೀರು ಹರಿದು ಹೋಗಲು ಒಳಭಾಗ ಮೇಲ್ಮಾಡಿ ಹೊದಿಸಿದ ಹೆಂಚು ೨. ಎರಡು ಸೂರುಗಳನ್ನು ಕೂಡಿಸುವ ಹೆಂಚು; ಡಬ್ಬೆಂಚು **ಇರೂ:** *ಹೊಳೆಹೆಂಚು*

ಒಳೆಕೋಲು: ಕಂಬಳಿ ನೇಯ್ಗೆಯಲ್ಲಿ ಬಳಸುವ ಕೋಲು

ಒಳ್ಕಲ್ ತೀರ್ಥ: ತುಮಕೂರಿನ ಶಿವಗಂಗೆ ಬೆಟ್ಟದಲ್ಲಿರುವ ಬಂಡೆಗಲ್ಲಿನ ತಗ್ಗು. ಇದರಲ್ಲಿ ಕೈಹಾಕಿದರೆ ಕೆಲವರಿಗೆ ನೀರು ಸಿಗುತ್ತದೆ, ಕೆಲವರಿಗೆ ಸಿಗುವುದಿಲ್ಲ ಎಂಬ ಪ್ರತೀತಿ

ಒಳ್ಕು: ಒಡಲು; ದೇಹ

ಒಳ್ಗುಣಿ: ೧. ಹೊಲಗಳಲ್ಲಿ ಸೀತನಿ ಮಾಡುವಾಗ ಬೆಂಕಿ ಹಚ್ಚಲು ತೆಗೆಯುವ ತಗ್ಗು (ಬೀದ.ಜಿ) **ನೋಡಿ–** ಸೀತನಿ ೨. ರುಬ್ಬುವ ಕಲ್ಲಿನ ಗುಳಿ (ಮೈಸೂ.ಜಿ/ಮಂಡ್ಯ.ಜಿ)

ಒಳ್ತು: ೧. ಒಳಿತಾಗಲಿ; ಶುಭವಾಗಲಿ; ಅಮಂಗಲ ಇಲ್ಲವೇ ಅಶುಭ ಪರಿಹಾರವಾಗಲೆಂದು ಹೇಳುವ ನುಡಿ (ಮಲೆ). **ಪ್ರ:** ಅಜ್ಜಿ ಅಮಂಗಳ ಪರಿಹಾರಾರ್ಥವಾಗಿ ಒಳ್ತು ಒಳ್ತು ಎಂದು ತನ್ನ ಸೀರೆ ಸೆರಗಿನಿಂದ ಮೊಮ್ಮಗಳ ಮೋರೆಯನ್ನು ಒರೆಸಿದಳು ೨. ತೋರ; ಮೈಗೂಡು; ಬೆಳೆದದ್ದು.

ಒಳ್ತು ಅನ್ನು: ಒಳಿತು ಎಂದು ಹೇಳು. ಏನಾದರೂ ಕೆಟ್ಟದನ್ನು ನುಡಿದಾಗ ಅದು ನಿಜವಾಗದಿರಲಿ ಎಂಬುದಕ್ಕಾಗಿ ಒಳ್ತು ಅನ್ನು ಎಂದು ಹೇಳಿಸುವ ಕ್ರಮ

ಒಳ್ಪು: ೧. ಕೆಚ್ಚು ೨. ಗೌರವ ೩. ಹೊಳಪು ೪. ಒಳಿತು

ಒಳ್ಬಿಡು: ಓರೆಮಾಡು

ಒಳ್ಮಿಗೆ: ಹಾಲು ತುಂಬಿದ ತೆನೆ

ಒಳ್ಳ್ಯೂದು: ತೆಳ್ಳಗೆ ಮಾಡುವ ಉಳುಮೆ

ಒಳ್ಳಂಗಳ: ಧಾನ್ಯ ಒಕ್ಕುವ ಕಣ (ಉಕ.ಜಿ). **ಇರೂ:** *ಉಳ್ಳಂಗಳ*

ಒಳ್ಳಂಗೂಟ: ಗಾಡಿಯ ನೊಗದಲ್ಲಿ ಕಣ್ಣಿಯನ್ನು ಎತ್ತುಗಳ ಕೊರಳು ಬಳಸಿ ಸಿಕ್ಕಿಸಲು ಬಳಸುವ ಗೂಟದಂತಹ ಸಾಧನ (ಬೆಂಗ.ಜಿ)

ಒಳ್ಳಕ್ಕಿ ಕುಟ್ಟೋದು: ವಕ್ಕಲಿಗರು, ಗೌಡರ ಮದುವೆ ಸಂದರ್ಭದಲ್ಲಿ ಒರಳಿಗೆ ಭತ್ತ ಹಾಕಿ ಐದು ಜನ ಮುತ್ತೈದೆಯರು ಕುಟ್ಟುವುದು

ಒಳ್ಳಗಣ್ಣು: ಮೆಳ್ಳಗಣ್ಣು; ವಾರೆಗಣ್ಣು (ಗುಲ್ಬ.ಜಿ)

ಒಳ್ಳಾಗ ತಲಿಕೊಡು: ಒರಳಿಗೆ ತಲೆ ಕೊಡು. ಒರಳಿಗೆ ತಲೆ ಕೊಡುವಷ್ಟು ನಿರ್ಭಯ ವ್ಯಕ್ತಿ ಎಂಬ ಅರ್ಥದಲ್ಲಿ ಬಳಕೆಯಾಗುವ ಮಾತು

ಒಳ್ಳಿನ ಬಾಯಿ: ಒರಳಿನಂತೆ ಅಗಲವಾದ ಬಾಯಿ (ಬಿಜಾ.ಜಿ)

ಒಳ್ಳು: (ಕ್ರಿ) ೧. ಕರೆ; ಕೂಗು (ಬೀದ.ಜಿ) (ನಾ) ೨. ಧಾನ್ಯಕುಟ್ಟಲು, ರುಬ್ಬಲು ಉಪಯೋಗಿಸುವ ಒರಳು (ಮಂಡ್ಯ.ಜಿ/ಮೈಸೂ.ಜಿ) ೩. ಒಡಲು; ದೇಹ (ಶಿವ.ಜಿ) ೪. ಯೋನಿಗೆ ಪರ್ಯಾಯವಾಗಿ ಬಳಸುವ ಪದ ೫. ನಾಲ್ಕು ಸೇರು ಅಳತೆಯ ಸಾಧನ (ಮಂಡ್ಯ.ಜಿ). **ಇರೂ:** *ಒಳ್ಳಲು, ಒಳ್ಳು*

ಒಳ್ಳೂರುಕಾತಿ: ಹೊಟ್ಟೆಕಿಚ್ಚಿನವಳು

ಒಳ್ಳೆ: ೧. ವಿಷವಿಲ್ಲದ ನೀರುಹಾವು. **ಇರೂ:** *ಒಳ್ಳೆಕಾಟಿ, ಒಳ್ಳೆಪ್ಯಾತ, ಒಳ್ಳೆಪಿಂಗ* ೨. ಮಕ್ಕಳಿಗೆ ಹಾಲು ಕುಡಿಸಲು ಬಳಸುವ ಸಾಧನ; ಒಳಲೆ

ಒಳ್ಳೆಕಾಟಿ: ಕೆರೆ, ಕಟ್ಟೆ, ಹಳ್ಳ, ಕೊಳ್ಳಗಳ ಕಲ್ಲು ಪೊಟರೆಗಳಲ್ಲಿ ವಾಸಿಸುವ ವಿಷವಿಲ್ಲದ ಸಣ್ಣ ಹಾವು. ಇದನ್ನು ನೀರ್ಹಾವು ಎಂದೂ ಹೇಳುತ್ತಾರೆ (ಮಂಡ್ಯ.ಜಿ)

ಒಳ್ಳೆಕೊಡಿ: ಒಂದು ಔಷಧೀಯ ಸಸ್ಯ. ಗಂಡು ಕೇಪಳ; ಬಂದಿಕಾಯಿ ಗಿಡ (ದಕ.ಜಿ)

ಒಳ್ಳೆಚಟ್ನಿ: ಮರದ ಬಟ್ಟಲು; ಹಿಟ್ಟಿನ ಮುದ್ದೆ ಕಟ್ಟಲು ಬಳಸುವ ವಸ್ತು. **ಇರೂ:** *ಚಟ್ನೆ*

ಒಳ್ಳೆಣ್ಣೆ: ೧. ಎಳ್ಳು, ಹುಚ್ಚೆಳ್ಳು ಮೊದಲಾದವುಗಳಿಂದ ತೆಗೆದ ಅಡುಗೆ ಎಣ್ಣೆ. ಬಾಣಂತಿಯರಿಗೆ, ಮೈನೆರೆದ ಹೆಣ್ಣು ಮಕ್ಕಳಿಗೆ ಇದನ್ನು ಆಹಾರದಲ್ಲಿ ಬಳಸುತ್ತಾರೆ (ಮಂಡ್ಯ.ಜಿ) ೨. ಕಡಲೇ ಬೀಜದ ಎಣ್ಣೆ; ಶೇಂಗಾ ಎಣ್ಣೆ (ಚಿತ್ರ.ಜಿ)

ಒಳ್ಳೆತಂಗಡಿಗಿಡ: ಕ್ಯಾಸಿಯ *ಅಲಾಟ ಆಂಗಸ್ಟಿಫೋಲಿಯ:* ಒಂದು ಔಷಧೀಯ ಸಸ್ಯ (ಕೊಡ.ಜಿ). **ಇರೂ:** *ಆವರಿಕೆ*

ಒಳ್ಳೆಪಿಂಗ: ಒಳ್ಳೆಕಾಟ; ಓತಿಕೇತ. **ಪ್ರ:** ಪೊಟರೆಯೊಳಗೆ ಒಳ್ಳೆಪಿಂಗ ಸೇರಿಕೊಂಡಿದೆ

ಒಳ್ಳೆಬುಡ್ಡ: ಒಳ್ಳೆಪ್ಯಾತ ಎಂಬ ಹೆಸರಿನ ನೀರಹಾವು (ಮೈಸೂ.ಜಿ)

ಒಳ್ಳೆಮತದವರು: ಸುಗ್ಗಿ ನಿಯಮಗಳನ್ನು ಹಬ್ಬ ಮುಗಿಯುವವರೆಗೆ ಕಟ್ಟುನಿಟ್ಟಾಗಿ ಪಾಲಿಸಿಕೊಂಡು ಬರುವಂಥವರು (ಚಿಬ.ಜಿ)

ಒಳ್ಳೇದು: ೧. ಒಳ್ಳೆಯದು. ೨. ನಾಗರ ಹಾವಿನ ಹೆಸರನ್ನು ನೇರವಾಗಿ ಹೇಳಬಾರದು ಎಂಬ ನಂಬಿಕೆ ಇದ್ದು, ಅದಕ್ಕೆ ಪರ್ಯಾಯವಾಗಿ ಈ ಪದ ಬಳಕೆಯಾಗುತ್ತದೆ (ಮಲೆ)

ಒಳ್ಳೇಹೊತ್ತು: ೧. ಸಕಾಲ; ಶುಭಗಳಿಗೆ ೨. ಒಳ್ಳೆಯದಾಗುವ ಕಾಲ

ಒಳ್ಳೊಸಗೆ: ಶುಭ ಸಮಾಚಾರ; ಸಂತೋಷದ ಸುದ್ದಿ

ಒಳ್ಳೋಗು: ತುಂಬಿ ಹರಿ

ಒಳ್ಳೋಜ: ಉತ್ತಮ ಶಿಕ್ಷಕ; ಒಳ್ಳೆಯ ಗುರು

ಒಳ್ಳೋಪ: ಪ್ರೀತಿಯ ಪತಿ; ಒಲುಮೆಯ ಗಂಡ

ಓ

ಓಂಕ: ತೋಳಿಗೆ ತೊಡುವ ಆಭರಣ ವಿಶೇಷ. **ಇರೂ:** *ಓಕು; ಒಂಕಿ; ವಂಕಿ*

ಓಂಕರಿಕೆ: ವಾಕರಿಕೆ (ಕೊಡ.ಜಿ)

ಓಂಕರಿಸು: ಹೂಂಕರಿಸು; ಘರ್ಜಿಸು

ಓಂಕಾರ: ಕಷ್ಟ; ತೊಂದರೆ (ಮೈಸೂ.ಜಿ)

ಓಂಜಲು: ಓರೆಯಾಗಿ ತೂಗಾಡು (ದಕ.ಜಿ)

ಓಂಜು: ಸತ್ವರಹಿತ; ಒಣ; ಕೆಟ್ಟ (ಉಕ.ಜಿ)

ಓಂಟೂರಿ: ಒಂದು ಬಗೆಯ ನಗಾರಿ

ಓಂಟೆ: ಒಲೆ ಊದಲು ಬಳಸುವ ಕೊಳವೆ (ದಕ.ಜಿ); ಬಿದಿರಿನ ನಳಿಗೆಯ ತುಂಡು. **ನೋಡಿ–** ವೋಂಟೆ

ಓಂಟ್ರಕ: ಆಮೆ ಜಾತಿಗೆ ಸೇರಿದ ಪ್ರಾಣಿ. ಇದು ಶತ್ರುಗಳು ಎದುರಾದಾಗ ದುರ್ವಾಸನೆಯುಕ್ತ ಗಾಳಿಯನ್ನು ಹೊರಹೊಮ್ಮಿಸಿ ತಪ್ಪಿಸಿಕೊಳ್ಳುವುದು

ಓಂತಿ: ಹಲ್ಲಿಯ ಜಾತಿಗೆ ಸೇರಿದ ಪ್ರಾಣಿ; ಓತಿಕ್ಯಾತ; ಗೋಸುಂಬೆ. **ಇರೂ:** *ಓತಿಕಾಟಾ, ಓತಿಕ್ಯಾತ, ಓಂತೆ, ಒಣ್ಣೇಕಾಟ*

ಓಂತಿಬಾಪು: ಜಾನುವಾರುಗಳಿಗೆ ಬರುವ ಒಂದು ರೋಗ (ದಕ.ಜಿ)

ಓಂದಲೆ: ತೋಳಿಗೆ ಧರಿಸುವ ಆಭರಣ

ಓಂಪುಡಿ: ಕಡಲೆಹಿಟ್ಟಿಗೆ ಓಮವನ್ನು ಹಾಕಿ ಮಾಡುವ ಒಂದು ಬಗೆಯ ಕರಿದ ತಿನಿಸು. ಖಾರಾಸೇವು. **ಪ್ರ:** ಬಂದವ್ರಿಗೆ ಓಂಪುಡಿ ಕಾಫಿ ಕೊಟ್ಟರು

ಓಂಬ: ಪುಕಳಿ; ಮಲದ್ವಾರ (ಉಕ.ಜಿ)

ಓಕ್ ಬೆಳೆದದ: ಬೆಳೆ ಅತಿ ಎತ್ತರಕ್ಕೆ ಬೆಳೆದು ನಿಷ್ಪ್ರಯೋಜಕವಾಗುವ ರೋಗ (ರಾಯ.ಜಿ)

ಓಕ: ಕೈಬಳೆ (ದಕ.ಜಿ)

ಓಕಳಿಯಾಡುವುದು: ಮದುವೆಯ ಒಂದು ಶಾಸ್ತ್ರ. ವಧು ವರರು ಪರಸ್ಪರ ಕೆಂಪು ನೀರು ಎರಚಿಕೊಳ್ಳುವುದು. ಬೇರೆ ಬೇರೆ ದೇವರುಗಳ ಜಾತ್ರೆಗಳ ಸಂಬಂಧದಲ್ಲೂ ಈ ಆಚರಣೆಯಿರುತ್ತದೆ (ಚಿಬ.ಜಿ)

ಓಕಾಳಿ: ಕೊರಮ ಸಮುದಾಯದಲ್ಲಿ ನ್ಯಾಯಾಧೀಶನಿಗೆ ಬಳಸುವ ಪದ (ಬಳ್ಳಾ.ಜಿ)

ಓಕುಹೇಳು: ಪಾಲಕಿ (ಪಲ್ಲಕ್ಕಿ) ಹೊರುವಾಗ ಓಕ್ ಓಕ್ ಎನ್ನುವುದು; ಪರಾಕು ಹೇಳುವುದು (ಮೈಸೂ.ಜಿ)

ಓಕುಳಿ: 1. ದೃಷ್ಟಿ ಪರಿಹಾರಕ್ಕಾಗಿ ನಿವಾಳಿಸಲು ಬಳಸುವ ಕೆಂಪು ಬಣ್ಣದ ನೀರು 2. ಉತ್ಸವ ಕಾಲದಲ್ಲಿ ಪರಸ್ಪರರ ಮೈಮೇಲೆ ಬಣ್ಣದ ನೀರನ್ನು ಎರಚುವ ಒಂದು ಆಚರಣೆ. ಕಳಸಕ್ಕೆ ಪೂಜೆ ಆದ ನಂತರ ದೇವರಿಗೂ ಓಕುಳಿ ಚೆಲ್ಲುವ ಸಂಪ್ರದಾಯವಿದೆ

ಓಕುಳಿಯಾಟ: ಬಣ್ಣ ಎರಚಾಟ (ಬೆಳ.ಜಿ)

ಓಕುಳಿಶಾಸ್ತ್ರ: ಪ್ರಸ್ತವಾದ ಬೆಳಿಗ್ಗೆ ಎರಡು ಹಂಡೆಗಳಲ್ಲಿ ಅರಿಶಿನದ ನೀರನ್ನು ತುಂಬಿ ಗಂಡು ಹೆಣ್ಣಿನ ಕೈಯಲ್ಲಿ ಪರಸ್ಪರ ಅರಿಶಿನದ ನೀರನ್ನು ಎರಚಿಸುವ ಶಾಸ್ತ್ರ (ತುಮ.ಜಿ/ಶಿವ.ಜಿ). **ನೋಡಿ–** ಓಕಳಿಯಾಡುವುದು

ಓಕುಳಿ ಸುಳೂದ್: ಸುಣ್ಣ ಅರಿಸಿನ ಬೆರೆಸಿದ ಕೆಂಪು ನೀರನ್ನು ತಲೆ ಮೇಲೆ ಮೂರು ಪ್ರದಕ್ಷಿಣೆ ಹಾಗೂ ಒಂದು ಅಪ್ರದಕ್ಷಿಣೆ ಸುತ್ತಿ ಹೊರಗೆ ಚೆಲ್ಲುವ ಆಚರಣೆ (ದಕ.ಜಿ)

ಓಕುಳಿಸ್ನಾನ: ತೂಟೆದಾರ ಆಟದಲ್ಲಿ ಭಾಗವಹಿಸುವ ಆಟಗಾರರು ದೇವಸ್ಥಾನದಲ್ಲಿ ಮಾಡುವ ಕುಂಕುಮ ಮಿಶ್ರಿತ ಕೆಂಪು ನೀರಿನ ಸ್ನಾನ (ದಕ.ಜಿ)

ಓಕೊಳ್ಳು/ಓಗೊಳ್ಳು: ಓಗೊಡು; ಓ ಎನ್ನು; ಕರೆಯುವ ಧ್ವನಿಗೆ ಪ್ರತಿಕ್ರಿಯಿಸು (ಮಲೆ). **ಪ್ರ:** ನಿಮ್ಮ ಗಂಟ್ಲೆಲ್ಲಾ ಕಟ್ಟಿ ಹೋಗಾ ಓ ಕೊಳ್ಳಾಕೆ ಏನಾಗಿದ್ರೋ (ಮಲೆ)

ಓಗಟೆ: ಒಗಟು (ಶಿವ.ಜಿ)

ಓಗರ: 1. ಸಾರು; ಮೇಲೋಗರ 2. ಬೇಯಿಸಿದ ಆಹಾರ; ಪರಿಮಳಭರಿತ ಅನ್ನ. **ಪ್ರ:** ಸಣ್ಣಕ್ಕಿ ಓಗರ ಸರಳೆಮ್ಮೆ ತುಪ್ಪ ಊಟಕ್ಕೆ ನೀಡಿ ಸಾಗ್ಹಾಕಿದರು

ಓಗೊಳ್ಳು: ನೋಡಿ– ಓಕೊಳ್ಳು (ಮೈಸೂ.ಜಿ)

ಓಚಯ್ಯ: 1. ಉಪಾಧ್ಯಾಯ; ಶಿಕ್ಷಕ (ಬೆಂಗ್ರಾ.ಜಿ) 2. ವಾಜ; ಆಚಾರಿ; ಶಿಲ್ಪಿ (ಹಾಸ.ಜಿ). **ಇರೂ:** *ಓಚ, ಓಜ*

ಓಚಿಮರ: ಅಚ್ಚಿನ ಮೇಲೆ ಗಾಡಿಯ ಭಾರವನ್ನು ಹೊರುವಂತೆ ಜೋಡಿಸಿರುವ ದಪ್ಪನೆಯ ಮರ (ಬಳ್ಳಾ.ಜಿ)

ಓಜ: 1. ಮರಗೆಲಸದವ 2. ಉಪಾಧ್ಯಾಯ 3. ಕಾಂತಿ; ಹೊಳಪು 4. ಕೋವಿಗೆ ಕಟ್ಟುವ ವಸ್ತ್ರ (ಚಾಮ.ಜಿ) 5. ಅಕ್ಕಸಾಲಿ **ಪ್ರ:** ಓಜರ ಮಾತು ಗೋಜು ಗೋಜು

ಓಜಾಗು: ಆರೋಗ್ಯ ಸುಧಾರಿಸು (ಬಳ್ಳಾ.ಜಿ)

ಓಜಿಗೇಡಿ: ಕ್ರಮ ತಪ್ಪಿದವಳು (ಧಾರ.ಜಿ)

ಓಜುಣ: ಯೋಜನ (ಮಂಡ್ಯ.ಜಿ)

ಓಜುಮಾಡು: 1. ವ್ಯವಸ್ಥೆಮಾಡು 2. ಸಂಘಟಿಸು (ಶಿವ.ಜಿ)

ಓಟಿ: ನೋಡಿ– ಓಟೆ

ಓಟಿಕಟ್ಟು (ನಾ): ಗಾಡಿಯ ಮೇಲ್ಭಾಗದಲ್ಲಿ ಓಟಿಗಳನ್ನು ಬಿಗಿಗೊಳಿಸುವ ಕಬ್ಬಿಣದ ಸರಳು (ಶಿವ.ಜಿ/ಉಕ.ಜಿ)

ಓಟಿಬಾಯಿ: ಏನನ್ನೂ ಮನಸ್ಸಿನಲ್ಲಿ ಇಟ್ಟುಕೊಳ್ಳದೆ ಎಲ್ಲವನ್ನು ಬಡಬಡನೇ ಮಾತನಾಡುವವರು (ಕೋಲಾ.ಜಿ)

ಓಟಿಮರ: ಅಚ್ಚಿನ ಮೇಲೆ ಗಾಡಿಯ ಭಾರವನ್ನು ಹೊರುವಂತೆ ಜೋಡಿಸಿರುವ ದಪ್ಪನೆಯ ಮರದ ಸಾಧನ (ಕೋಲಾ.ಜಿ)

ಓಟಿಮೊಳೆ: ಚಕ್ಕಡಿಯ ತೊಟ್ಟಿಲು ಅಲುಗಾಡದಂತೆ ಮಧ್ಯದ ದಪ್ಪನೆಯ ತುಂಡಿನ ಮೇಲೆ ಬಿಗಿದಿರುವ ಕಬ್ಬಿಣದ ಸಾಧನ; ಓಟಿನಚಡಿ (ಉಕ.ಜಿ)

ಓಟು: 1. ಅಷ್ಟೂ; ಅದೆಲ್ಲವೂ 2. ಮಡಕೆ; ಹುರಿಯುವ ಹೆಂಚು (ದಕ.ಜಿ).

ಓಟುಬಾರೆ: ಒಂದು ಜಾತಿಯ ಮೀನು (ದಕ.ಜಿ)

ಓಟೆ/ಓಟಿ: 1. ಇರ್ಚಕಟ್ಟಿಮರ; ಗಾಡಿಯ ಕೆಳಭಾಗದಲ್ಲಿ ಆಧಾರವಾಗಿರುವ ಚೌಕಾಕಾರದ ದೊಡ್ಡ ಮರ; ಅದಕ್ಕೆ ಕಬ್ಬಿಣದ ಪಟ್ಟಿಯನ್ನು ಬಂಧಿಸಲಾಗಿರುತ್ತದೆ; ಬಂಡಿಗೆ ಮೂಲಾಧಾರವಾಗಿರುವ ತೊಟ್ಟಿಲ ಕೆಳಗಿರುವ ಅಚ್ಚು (ಗುಲ್ಬ.ಜಿ) 2. ಗೊರಟೆ; ಮಾವಿನಹಣ್ಣಿನ ಬೀಜ (ಚಿತ್ರ.ಜಿ) 3. ಒಂದು ಜಾತಿಯ ಕಡ್ಡಿ 4. ಸೀಳು 5. ಸಿಪ್ಪೆ 6. ವಿನ್ಯಾಸಕ್ಕೋಸ್ಕರ ತಾಪೀಟಿಗೆ (ಪಂಜರ) ಸೇರಿಸಿರುವ ಸಣ್ಣಸಣ್ಣ ಮರದ ತುಂಡುಗಳು 7. ಒಂದು ಬಗೆಯ ಮರ. ಇದರ ಎಲೆಯನ್ನು ದೀಪಾವಳಿಯ ರಾತ್ರಿ ಹೊಲದಲ್ಲಿ ಹತ್ತಿಸುವ ದೊಂದಿಯನ್ನು ಅಲಂಕರಿಸಲು ಬಳಸುತ್ತಾರೆ 8. ಜೀರುಂಡೆಯ ರೆಕ್ಕೆ. **ಪ್ರ:** ಅವುಗಳ ಮೈಯ ಓಟೆ ಎಷ್ಟು ನುಣುಪು ಎಂದರೆ ಮುತ್ತಿಡಬೇಕು ಅಷ್ಟು ನುಣುಪು

ಓಟೆಕಾಕಾ: ಕಟ್ಟಿಗೆಯ ಲಾಳಿ; ನೇಕಾರರು ಉಪಯೋಗಿಸುವ ಸಾಧನ (ಚಿಬ.ಜಿ)

ಓಟೆಕಾಯಿ: 1. ವಿಶೇಷವಾಗಿ ಮಲೆನಾಡಿನ ಕಾಡಿನಲ್ಲಿ ಕಾಣಸಿಗುವ, ಅಡುಗೆಗೂ ಉಪಯೋಗಿಸುವ, ಔಷಧಿಯ ಗುಣವುಳ್ಳ ಒಂದು ಬಗೆಯ ಹುಳಿಕಾಯಿ (ಶಿವ.ಜಿ) 2. ಹುಣಸೆ ಹುಳಿ (ದಕ.ಜಿ). **ಇರೂ:** *ಓಡೆಮರ*

ಓಟೆಗಿಡ: ಬಿದಿರಿನ ಜಾತಿಗೆ ಸೇರಿದ ಟೊಳ್ಳಾದ ಸಸ್ಯ

ಓಟೆಯಾಟ: ಓಟೆ ಆಟ. ವಾಟೆಯಾಟ. ಮಾವಿನ ಫಸಲು ಬಂದಾಗ ಮಾವಿನ ಓಟೆ ಬಳಸಿ ಆ ಋತುವಿನಲ್ಲಿ ಮಾತ್ರ ಆಡುವ ಆಟ (ಬೆಂಗ್ರಾ.ಜಿ)

ಓಟೆಹಿಂಡಿಲು: ಬುಟ್ಟಿ, ಕೂಣಿ ಇತ್ಯಾದಿ ವಸ್ತುಗಳನ್ನು ತಯಾರಿಸಲು ಬಳಸುವ ಬಿದಿರಿನ ಜಾತಿಗೆ ಸೇರಿದ ಸಸ್ಯದ ಮೆಳೆ

ಓಟ್ರುಕ: ನೋಡಿ– ಓಂಟ್ರಕ

ಓಡ: 1. ದೊಡ್ಡ ಹೊಟ್ಟೆ; ಒಡಲು (ಉಕ.ಜಿ) 2. ದೋಣಿ (ದಕ.ಜಿ)

ಓಡಂತರಿಯ: ದೋಣಿ ದಾಟುವ ಸ್ಥಳ; ಅಂಬಿಗರು ವಿಶ್ರಮಿಸುವ ಸ್ಥಳ (ದಕ.ಜಿ)

ಓಡಂತಾಯ: ದೋಣಿಯಲ್ಲಿ ಬಂತೆನ್ನಲಾದ ಒಂದು ದೈವದ ಹೆಸರು (ದಕ.ಜಿ)

ಓಡಕರು: ದೋಣಿಯನ್ನು ಹೋಲುವ, ಎರಡು ಭಾಗ ಮಾಡಿದ ಬಿದಿರಿನ ತೀರು (ದಕ.ಜಿ)

ಓಡಕುಟ್ಟು: ಕಟ್ಟಿದ ಅಣೆಕಟ್ಟೆಯನ್ನು ನಾಶಗೊಳಿಸು

ಓಡತೆ: ತಾಳಮದ್ದಲೆ (ದಕ.ಜಿ)

ಓಡದ ಕರಿಯ: ದೋಣಿ ದಾಟುವ ಸ್ಥಳ; ಕಡುವಿನ ಸ್ಥಳ (ದಕ.ಜಿ)

ಓಡಪಡವು: ದೋಣಿ (ದಕ.ಜಿ)

ಓಡಬಂಚಿ: ಓಡುಬೋಕಿ; ಮಡಕೆಚೂರು

ಓಡಬಲಿ/ಓಡುಬಲಿ: 1. ಕೊಲ್ಲೂರು ಮೂಕಾಂಬಿಕೆಯ ಕ್ಷೇತ್ರದಲ್ಲಿ ಅಮಾವಾಸ್ಯೆಯ ದಿನ ನಡೆಯುವ, ಭೂತಗಳನ್ನು ಓಡಿಸುವ ಆಚರಣೆ 2. ದೇವಾಲಯಗಳ ಉತ್ಸವ ಸಂದರ್ಭದಲ್ಲಿ ದೇವರ ಮೂರ್ತಿಯನ್ನು ತಲೆಯ ಮೇಲೆ ಹೊತ್ತುಕೊಂಡು ಗುಡಿಯ ಸುತ್ತಲೂ ಓಡುತ್ತಾ ಪ್ರದಕ್ಷಿಣೆ ಬರುವ ಮೆರವಣಿಗೆ (ದಕ.ಜಿ)

ಓಡಮರಾಯಿ: ಗಂಜಿ ಬಸಿಯಲು ಬಳಸುವ ಮರದ ಮರಿಗೆ (ದಕ.ಜಿ)

ಓಡಮೈ: ಚಿಪ್ಪು ಇರುವ ಮೈ

ಓಡಾರಿ: ನೋಡಿ– ಒಡಾರಿ

ಓಡಾರಿಹಾಸ್ಯ: ಪೂರ್ವರಂಗದ ಕಟ್ಟು ಹಾಸ್ಯ (ದಕ.ಜಿ)

ಓಡಿ: ಕೋಳಿ ಅಂಕದಲ್ಲಿ ಕೋಳಿಯು ಕಾದುವ ಬದಲು ಓಡಿಹೋದರೆ ಅದರ ಒಡೆಯನಿಗೆ, ಕಾದಿ ಸತ್ತರೆ ಎದುರುಕಡೆಯವರಿಗೆ ಸೇರಬೇಕೆಂಬ ಷರತ್ತಿನಲ್ಲಿ ನಡೆಸುವ ಸ್ಪರ್ಧೆ (ದಕ.ಜಿ)

ಓಡಿಗೆ: ದಂಡು; ಸೈನ್ಯ; ಯುದ್ಧ ಕಾಲದಲ್ಲಿ ಶತ್ರುಗಳ ಹಾವಳಿಗೆ ಹೆದರಿ ಓಡುತ್ತಿದ್ದ ಕಾಲ. **ಪ್ರ:** ಬರ ಬಂದ್ರೆ ಊರು ಬಿಡಬಾರದು ಓಡಿಗೆ ಬಂದ್ರೆ ಊರಾಗಿರಬಾರದು

ಓಡಿಝುಂಪೆ: ತ್ವರಿತ ಝುಂಪೆ (ದಕ.ಜಿ)

ಓಡಿಬಂದಾಕಿ: 1. ಕೈ ಹಿಡಿದ ಗಂಡನನ್ನು ತ್ಯಜಿಸಿ ಬಂದು ಪರ ಪುರುಷನೊಡನೆ ಬಾಳುವೆ ಮಾಡುವ ವಿವಾಹಿತ ಸ್ತ್ರೀ 2. ಒಬ್ಬನನ್ನು ಮೋಹಿಸಿ ಬೆನ್ನುಹತ್ತಿ ಬಂದಿರುವ ಅವಿವಾಹಿತೆ ಅಥವಾ ವಿಧವೆ (ಬಳ್ಳಾ.ಜಿ)

ಓಡಿಲು: ಹೆಂಚು (ದಕ.ಜಿ)

ಓಡಿಲ್ತಾಯೆ: ಒಂದು ದೈವದ ಹೆಸರು (ದಕ.ಜಿ)

ಓಡು: 1. ಮಡಕೆಯ ಚೂರು; ಬಗ್ಗರಿ 2. ಕಾವಲಿ; ಕಾಳು ಹುರಿಯುವ ಸಾಧನ; ಮಡಕೆಯ ಅರ್ಧಭಾಗ; ಮಣ್ಣಿನ ಮುಚ್ಚಳ. **ಪ್ರ:** ಓಡಿನಿಂದ ಒಲೆಗೆ ಬಿದ್ರು, ಓಡಿನಲ್ಲಿ ಬೆಂಕಿ ತರಿಸಿದರು 3. ಹೆಂಚು 4. ಏಡಿಯ ಮೈ ಕವಚ; ಚಿಪ್ಪು. **ಪ್ರ:** ಕಲ್ಲೇಡಿ ಓಡು 5. ತಲೆಯ ಚಿಪ್ಪು 6. ದೋಣಿ; ಹರಿಗೋಲು 7. ಭಿಕ್ಷಾಪಾತ್ರೆ 8. ಮೊಟ್ಟೆಯ ಸಿಪ್ಪೆ

ಓಡುಗಾಲಿ: ಗಂಡನ ಮನೆಯಲ್ಲಿ ಸರಿಯಾಗಿ ಬಾಳಲಾರದೆ ತವರಿಗೆ ಓಡುವವಳು (ಬೆಂಗ್ರಾ.ಜಿ)

ಓಡುಣ್ಣೆ: ದನಗಳ ಮೈಗೆ ಅಂಟಿಕೊಂಡಿರುವ ಚಿಕ್ಕ ಉಣ್ಣೆ

ಓಡುದೋಸೆ: ಮಣ್ಣಿನ ಕಾವಲಿಯಲ್ಲಿ ಮಾಡುವ ದೋಸೆ (ದಕ.ಜಿ)

ಓಡುನಾಯಿ: ಅಟ್ಟಿಸಿಕೊಂಡು ಬರುವ ನಾಯಿಗೆ ಹೆದರಿ ಓಡುವ ನಾಯಿ (ಬೆಂಗ್ರಾ.ಜಿ)

ಓಡುಪಾಳಿ: ಉಪ್ಪುದೋಸೆ (ದಕ.ಜಿ)

ಓಡುಲ: ಹೆಂಚು (ಉಕ)

ಓಡುಹುಳು: ಓಡುಳ; ಸಗಣಿಹುಳು. ಇದು ಸಗಣಿಯನ್ನು ಉಂಡೆಮಾಡಿ ಹಿಂಗಾಲುಗಳಿಂದ ಹಿಂದು ಮುಂದಾಗಿ ತಳ್ಳಿಕೊಂಡು ಹೋಗುತ್ತದೆ (ಮಲೆ)

ಓಡುಹೊಟ್ಟೆ: ಹೊಟ್ಟೆ ಕಳೆತ; ಭೇದಿ (ಬೆಂಗ್ರಾ.ಜಿ)

ಓಡೆ: 1. ಬಾವಿಯ ಎರಡು ದಡ 2. ಬಾವಿಯ ಒಳಗೆ ಅಳವಡಿಸಿದ ದುಂಡನೆಯ ದೊಡ್ಡಬಳೆ 3. ಮಣ್ಣಿನ ದೊಡ್ಡ ಗುಡಾಣ; ಸುಟ್ಟ ಮಣ್ಣಿನ ಇಟ್ಟಿಗೆಯಿಂದ ಮಾಡಿದ ಕಣಜ; ಧಾನ್ಯಗಳನ್ನು ತುಂಬುವ ದೊಡ್ಡ ಸಾಧನ. **ಇರೂ:** *ಓಡಿ; ವಾಡೆ*

ಓಡೆರು: ಅತ್ತಿತ್ತ ಓಡುವ ಕಚ್ಚದ ಇರುವೆ (ಕೋಲಾ.ಜಿ/ದಕ.ಜಿ)

ಓಡೆಲೆ: ಅಡಕೆ ಮರದ ಎಲೆ. **ಇರೂ:** *ಸುಲಪಟ್ಟೆ (ತುಮ.ಜಿ)*

ಓಡ್‌ಗಾಲ್: ಸದಾ ನಡೆಯುತ್ತಿರುವ ಕಾಲುಗಳು (ಬೆಂಗ್ರಾ.ಜಿ/ಮಂಡ್ಯ.ಜಿ)

ಓಡ್ಡು–ಜಿಡ್ಡು: ದೇಹದಾರ್ಢ್ಯ (ಮಂಡ್ಯ.ಜಿ)

ಓಡ್ಮಸಿ: ಮಡಕೆಯ ಮಸಿ

ಓಡ್ಲಾ: 1. ಮನೆಗೆ ಹೊದಿಸುವ ಹೆಂಚು (ಉಕ.ಜಿ); ಓಡು 2. ಹೊಟ್ಟೆ (ಶಿವ.ಜಿ)

ಓಣಿ: 1. ಎದರುಬದುರಾಗಿ ಉದ್ದಕ್ಕೆ ಕಟ್ಟಿರುವ ಮನೆಗಳ ಸಾಲು; ಒಂದೊಂದು ಜಾತಿಯವರು ಹೆಚ್ಚಾಗಿ ಇರುವ ಪ್ರದೇಶ (ಶಿವ.ಜಿ). **ಪ್ರ:** ಓಡಿದವ ಓಣಿ ಕಾಣಲಿಲ್ಲ ಹಾಡಿದವ ಹಾದಿ ಕಾಣಲಿಲ್ಲ 2. ಬೇಲಿಗಳ ನಡುವೆ ಹೊಲದ ಕಡೆ ಹರಿದ ಬಂಡಿ ದಾರಿ (ಮೈಸೂ.ಜಿ) 3. ಕಾಡುಪ್ರಾಣಿಗಳು ಓಡಾಡಲು ಮಾಡಿದ ಹಾದಿ 4. ಎರಡು ಬೆಟ್ಟಗಳ ನಡುವಿನ ಕಿರಿದಾದ ಸ್ಥಳ 5. ಗಾಡಿಯ ಅಚ್ಚಿನ ಮೇಲ್ಭಾಗದಲ್ಲಿರುವ ಕಟ್ಟಿಗೆ 6. ಸದಾ ನೀರು ಹರಿಯುವ ಒಂದು ಹಳ್ಳ (ಚಿಮ.ಜಿ)

ಓಣಿತಪ್ಲು: ಒಂದು ರೀತಿಯ ಬಳ್ಳಿಯ ಸೊಪ್ಪು (ದಕ.ಜಿ)

ಓತ: ಹೋತ; ಗಂಡು ಮೇಕೆ (ಮೈಸೂ.ಜಿ/ಚಾಮ.ಜಿ). **ಇರೂ:** *ಓತು*

ಓತಾ: ಒಂದರ ಮೇಲೊಂದು ಜೋಡಿಸಿದ್ದು; ರಾಶಿ (ಮೈಸೂ.ಜಿ)

ಓತಿ: 1. ದನಗಳ ಬಾಲಕ್ಕೆ ಮಾತ್ರ ತಗಲುವ ಒಂದು ರೋಗ. ಇದರ ಬಾಲದ ಕೂದಲು ಉದುರುವುದು ಇದರ ಲಕ್ಷಣ. ಈ ಭಾಗ ಕೆರೆದು ಗಾಯಕ್ಕೆ ಔಷಧ ಹಚ್ಚಿ ಬಟ್ಟೆ ಕಟ್ಟುವುದು ಚಿಕಿತ್ಸೆ (ಬೆಂಗ.ಜಿ) 2. **ನೋಡಿ–** ಓತಿಕೇತ

ಓತಿಕೇತ: ಹಲ್ಲಿಯಾಕಾರದ ಮತ್ತು ಗಾತ್ರದಲ್ಲಿ ಅದಕ್ಕಿಂತ ದೊಡ್ಡದಾದ ಬೇಲಿ ಮೇಲೆ ಓಡಾಡುವ ಒಂದು ಪ್ರಾಣಿ **ಇರೂ:** ದೊಣ್ಣೆಕ್ಯಾತ, ಹೊನ್ನೆಕ್ಯಾತ, ಒಣ್ಣೆಕ್ಯಾತ, ದೊಣ್ಣೆಕಾಟ, ಒಣ್ಣಕಟ್ಟ (ಚಿತ್ರ.ಜಿ) ಹೆಂಟೆಗೊದ್ದ, ಅಂಟೆಗೊದ್ದ (ಮಂಡ್ಯ.ಜಿ)

ಓತಿಬಾಲ: ದನಗಳ ಬಾಲಕ್ಕೆ ಬರುವ ಒಂದು ರೋಗ. ಬಾಲದ ಕೂದಲು ಉದುರಿ ಓತಿಯ ಬಾಲದ ಹಾಗೆ ಕಾಣುವುದು

ಓತು: ಜೋಡಿಸು; ಒಟ್ಟು; ಅಡುಕು; ಸಾಲಾಗಿ ಜೋಡಿಸಿ ರಾಶಿಮಾಡಿ ಒಂದರಮೇಲೊಂದು ಜೋಡಿಸಿದ್ದು

ಓತ್ನ: ಹೋತ; ವಯಸ್ಕ ಗಂಡು ಮೇಕೆ (ಕೋಲಾ.ಜಿ)

ಓದಕ್ಕಿ: ಓಂಕಾಳು; ಅಜವಾನ; ಓಮಕ್ಕಿ. **ಪ್ರ:** ಒಂದು ತೊಲ ಓದಕ್ಕಿ ತರಿಸಿ. **ನೋಡಿ–** ಓಮು

ಓದಾವು: ಸಾಗಿಸು (ಬೆಂಗ್ರಾ.ಜಿ)

ಓದಿಸು: 1. ಓದುಬರಹ ಕಲಿಸು; ಅಕ್ಷರಾಭ್ಯಾಸ ಮಾಡಿಸು 2. ಮಂಗಳಕಾರ್ಯದಲ್ಲಿ ಉಡುಗೊರೆ ಕೊಡುವುದು. **ಪ್ರ:**

ಮದ್ವೇಲಿ ವಧುವಿಗೆ ಬೆಳ್ಳಿ ಲೋಟ ಓದಿಸಿದರು 3. ದೇವರಿಗೆ ನೈವೇದ್ಯ ಅರ್ಪಿಸು. **ಪ್ರ:** ಪ್ರತಿ ಶುಕ್ರವಾರ ಮಸೀದಿಗೆ ಹೋಗಿ ಸಕ್ಕರೆ ಓದಿಸಿ ಬರುವುದು ನನ್ನ ಕೆಲಸವಾಗಿತ್ತು

ಓದುಮಟ: ಓದುವಮಠ; ಕೂಲಿಮಠ (ಮಂಡ್ಯ.ಜಿ). **ಇರೂ:** *ಓದುಹಟ್ಟಿ* (ಬೆಂಗ್ರಾ.ಜಿ)

ಓದೋಹುಳ: ಬಾವಿ ಕೆರೆಗಳ ನೀರಿನ ಮೇಲೆ ಅಕ್ಷರ ಬರೆಯುವಂತೆ ಚಲಿಸುವ ಕರಿಯಹುಳು (ಬಳ್ಳಾ.ಜಿ)

ಓದ್ಧಿ: ತಾಳಮದ್ದಲೆ (ಉಕ)

ಓದ್ಸು: ನೋಡಿ– ಓದಿಸು

ಓನಕ್‌ಕಾಂಡಿ: ಒನಕೆಯಂತೆ ದುಂಡಾಗಿರುವ ಮೀನು (ಉಡು.ಜಿ)

ಓನರಿ: ನಡುಮನೆ

ಓನಾಮ: 1. ಓಂ ಎಂಬ ಮಂತ್ರ; ಆರಂಭದ ಮೂಲಾಕ್ಷರ. **ಪ್ರ:** ಬಾಲಕನಿಗೆ ಐದು ವರ್ಷಗಳಾಗಲು ಓನಾಮ ಪೂಜೆ ಮಾಡಿಸಿ ಮಠಕ್ಕೆ ಹಾಕಿದರು 2. ಪ್ರಾಥಮಿಕ ಜ್ಞಾನ. **ಪ್ರ:** ಅವನಿಗೆ ಅದರ ಓನಾಮಾನೂ ಗೊತ್ತಿಲ್ಲ

ಓನ್ನಲಿಗಲಿ: ಒಂದು ಬಗೆಯ ಸೊಪ್ಪು

ಓನ್ನೆ: ಒಂದರಿ; ಜರಡಿ

ಓಪ: ಪ್ರಿಯಕರ; ಗಂಡ; ನಲ್ಲ (ಗುಲ್ಬ.ಜಿ)

ಓಬಳದೇವರು: ಅಹೋಬಲ ಎಂಬುದು ಓಬಳ ಎಂದಾಗಿದ್ದು ಇದು ನರಸಿಂಹ ಸ್ವಾಮಿಯ ಹೆಸರಿಗೆ ಪರ್ಯಾಯವಾಗಿ ಬಳಕೆಯಾಗುತ್ತದೆ. ಚಿತ್ರದುರ್ಗ, ತುಮಕೂರು ಮೊದಲಾದ ಪ್ರದೇಶಗಳಲ್ಲಿ ಓಬಳನಾಯಕ ಓಬಳ ರೆಡ್ಡಿ ಮೊದಲಾಗಿ ಹೆಸರಿಡುವ ಪದ್ಧತಿ ಇದೆ (ಬಳ್ಳಾ.ಜಿ)

ಓಬಳುಪತಿ: ರಥವನ್ನು ನಡೆಸುವವನು (ತುಮ.ಜಿ)

ಓಬಿಟು: ಅನಾಥ (ಹಾಸ.ಜಿ)

ಓಬಿರಾಯನ ಕಾಲ: ಬಹಳ ಹಿಂದಿನ ಕಾಲ; ಪ್ರಾಚೀನ ಕಾಲ. **ಪ್ರ:** ಅದು ಯಾವ್ದೋ ಓಬಿರಾಯನ ಕಾಲ್ದಲ್ಲಿ ನಡೆದಿದ್ದು (ದಕ)

ಓಬುಡಿ: ಕಂಬಳದಲ್ಲಿ ಕೋಣ ಓಡಿಸುವಾಗ ಉತ್ತೇಜನ ನೀಡಲು ಉಪಯೋಗಿಸುವ ಶಬ್ದ (ದಕ.ಜಿ)

ಓಮ: 1. ಅದೃಷ್ಟ (ಬಾಗ.ಜಿ) 2. ಹೋಮ (ಮೈಸೂ.ಜಿ) 3. ಓಂ ಕಾಳು

ಓಮಂಚಜ್ಜಯಿ: ದೈವಾರಾಧನೆಯ ಒಂದು ವಿಧ (ದಕ.ಜಿ)

ಓಮದೀಪನಿ: ಭೂತನರ್ತಕ ಕುಣಿಯುವ ಚಪ್ಪರದಲ್ಲಿ ಸೌದೆ ಇಟ್ಟು ಬೆಂಕಿ ಹಚ್ಚಿ ಪರಿಸರ ಶುದ್ಧ ಮಾಡುವ ಕ್ರಿಯೆ (ದಕ.ಜಿ)

ಓಮಸಾಲೆ: ಪಾಡ್ದನ ಉಲ್ಲೇಖಿತ ಊರು; ದೇಯಿ ಬೈದ್ಯೆದಿ ವಾಸಿಸುತ್ತಿದ್ದ ಊರು (ದಕ.ಜಿ)

ಓಮು/ಓಮ: ಕ್ಯಾರಮ್ ಬಲ್ಬೋಕಾಸ್ಟ್ಯಾನಮ್ ಕಾಪ್ಟಿಕಮ್: ಜೀರ್ಣಕಾರಕ ಗುಣವಿರುವ ಕಾಳು; ಅಜವಾನ ಗಿಡ. **ನೋಡಿ** – ಓದಕ್ಕಿ

ಓಯಿ: ಹೊತ್ತಿಗೆ; ಗ್ರಂಥ

ಓರಗಲ್ಲು: ಬಾಗಿದ ಕಲ್ಲು (ಧಾರ.ಜಿ)

ಓರಗಿತ್ತಿ: ಗಂಡನ ಸಹೋದರನ ಹೆಂಡತಿ (ಮೈಸೂ.ಜಿ/ಚಾಮ.ಜಿ). **ಇರೂ:** *ನೆಗೆಣ್ಣಿ (ಧಾರ.ಜಿ/ಬೆಳ.ಜಿ/ಬಿಜಾ.ಜಿ)* ವಾರಗಿತ್ತಿ

ಓರಗೆ: ಸಮವಯಸ್ಕ; ಸಮಜೋಡಿ. **ಪ್ರ:** ಓರಗೆಯ ಪುರುಷನೆಂದರೆ ಹಣಚಿಬಟ್ಟಿನ ಮೇಲೆ ಹರಿದಾಡುವ ಕುಂಕುಮದಂತೆ

ಓರಡಿ: 1. ವಾರಡೆ; ಒಂದು ಬದಿಗೆ ವಾಲಿದ 2. ಇಳಿಜಾರು (ಬೆಂಗ್ರಾ.ಜಿ/ಕೋಲಾ.ಜಿ)

ಓರಣ: ಒಪ್ಪ; ವ್ಯವಸ್ಥಿತ; ಅಚ್ಚುಕಟ್ಟು (ಚಿಮ.ಜಿ)

ಓರಿ: 1. ಅಡಿಗೆ ಮಾಡುವ ಕೋಣೆ (ಉಕ) 2. ಪಡಿಮಾಡಿನ ಭಾಗ (ಉಕ.ಜಿ)

ಓರುಗೋಲು: ಹಿಡ ಹೊಡೆಯುವ ಕೋಲು (ಬೆಂಗ್ರಾ.ಜಿ/ಮಂಡ್ಯ.ಜಿ). **ಇರೂ:** *ಓರಗೊರಡು*

ಓರೆಗತ್ತಿ: ಒಂದು ಬಗೆಯ ಆಯುಧ (ಮಂಡ್ಯ.ಜಿ)

ಓರೆತುರುಬು: ಗೊಂಡರ ಹೆಂಗಸರು ಜಡೆಹಾಕದೆ ಬಲಬದಿಗೆ ಓರೆಯಾಗಿ ಕಟ್ಟುವ ತುರುಬು (ಉಕ.ಜಿ)

ಓರೆಬೈತಲೆ: ಯಕ್ಷಗಾನದ ಸ್ತ್ರೀವೇಷವು ತಲೆಯ ಸ್ವಲ್ಪ ಬದಿಗೆ ತೆಗೆಯುವ ಬೈತಲೆ (ದಕ.ಜಿ)

ಓರೆಮುಡಿ: ಯಕ್ಷಗಾನದ ಸ್ತ್ರೀಪಾತ್ರವು ಬೈತಲೆಯ ಆಕಡೆ ಈಕಡೆ ಕಟ್ಟುವ ತುರುಬಿನ ವಿನ್ಯಾಸ (ದಕ.ಜಿ)

ಓರ್ಗರ: ಹೋರಿಕರ; ಗಂಡುಕರ (ತುಮ.ಜಿ)

ಓರ್ಗುಡಿಸು: ಒಂದು ಬದಿಗೆ ವಾಲಿಸು (ದಕ.ಜಿ)

ಓರ್ಸು: ನಂಜಿಕೊ (ಉಕ.ಜಿ)

ಓಲ್ ಮಡ್ಲ್: ನೇಯ್ದ ತೆಂಗಿನ ಗರಿ (ದಕ.ಜಿ)

ಓಲಗ: ನಾದಸ್ವರ ಮೊದಲಾದ ಮಂಗಳವಾದ್ಯ. **ಪ್ರ:** ಕದ್ದು ಮದ್ವೆ ಆಗ್ತೀನಿ ಬಗ್ಗಿ ಊದು ಓಲಗವ ಅಂದ್ನಂತೆ. **ಇರೂ:** *ವಾಲಗ*

ಓಲಗದ ಕುಣಿತ: ಸೋಲಿಗರ ಕುಣಿತದಲ್ಲಿನ ಒಂದು ವಿಧ. ಇದರಲ್ಲಿ ಕಂಸಾಳೆಗೆ ಬದಲಾಗಿ ಓಲಗವನ್ನು ಬಳಸುತ್ತಾರೆ. ವಿವಿಧ ಗತ್ತುಗಳಲ್ಲಿ ಹಬ್ಬದ ಇಡೀ ರಾತ್ರಿ ತಮ್ಮ ದೇವರ ಪ್ರೀತ್ಯರ್ಥವಾಗಿ ಕುಣಿಯುತ್ತಾರೆ. ಈ ಕುಣಿತಕ್ಕೆ ಜೋಡಿಯಾಗಿ ಹೆಂಗಸರ ಹಾಡುಗಳೂ ಸೇರುತ್ತವೆ. **ಇರೂ:** *ವಾಲ್ಗದು ಕುಣಿತ*

ಓಲಸರಿ: ಭೂತಕೋಲದ ಒಂದು ಆಚರಣೆ; ಭೂತ ನರ್ತಕ ತನ್ನ ಬಿರುದಾವಳಿಗಳೊಂದಿಗೆ ಮೆರವಣಿಗೆ ಹೋಗುವುದು

ಓಲಾಟ: ಗೆಳೆತನ; ಸ್ನೇಹ (ತುಮ.ಜಿ)

ಓಲಾಡು: 1. ತೂಗಾಡು; ಅನಿಶ್ಚಿತವಾಗಿ ವರ್ತಿಸು 2. ನಲಿದಾಡು 3. ನಿಧಾನಕ್ಕೆ ಬಾಗಿ ನಡೆಯುವಿಕೆ (ಚಿತ್ರ.ಜಿ) 4. ವೈಯ್ಯಾರ ಮಾಡು, ತೊನೆದಾಡು, ನುಲಿದಾಡು (ಬೆಂಗ.ಜಿ). **ಇರೂ:** *ವಾಲಾಡು*

ಓಲಿ: 1. ದನಗಳ ಬಾಲಕ್ಕೆ ತಗಲುವ ಒಂದು ಬಗೆಯ ರೋಗ 2. ಮದುವೆಯಾಗುವ ಹೆಣ್ಣಿಗೆ ಕೊಡುವ ಕನ್ಯಾದಕ್ಷಿಣೆ; ತೆರ (ಧಾರ.ಜಿ) 3. ಓಲೆ

ಓಲಿ ಕಟ್ಟೋದು: ಕೋಲಾರ ಜಿಲ್ಲೆಯಲ್ಲಿ, ಮದುವೆಗೆ ಸಂಬಂಧಿಸಿದ ಒಂದು ಸಂಪ್ರದಾಯ. ಹೆಣ್ಣಿನ ಮೇಲೆ ಗಂಡಿನವರು ಹನ್ನೆರಡು ರೂಪಾಯಿ ಕಟ್ಟುತ್ತಾರೆ. ಹೆಣ್ಣಿನವರು ಇನ್ನೂ ಹೆಚ್ಚು ಕೇಳಿ ಜಗಳ ತೆಗೆಯುತ್ತಾರೆ (ಕೋಲಾ.ಜಿ)

ಓಲಿ ಕೊಡುವುದು: ಬುಡ್ಗ ಜಂಗಮರಲ್ಲಿ ವಿವಾಹ ಸಂದರ್ಭದ ಒಂದು ಸಂಪ್ರದಾಯ. ವರನ ತಂದೆ ತಾಯಿಗಳು ವಧುವಿನ ಬಿಡಾರಕ್ಕೆ ಹೋಗಿ ಎಲೆ ಅಡಿಕೆ ಅದರಲ್ಲಿ ಒಂಬತ್ತು ರೂಪಾಯಿ ವಧುವಿನ ತಾಯಿಗೆ ಕುಂಕುಮ ಹಚ್ಚಿಕೊಡುತ್ತಾರೆ. ಇದು ಒಂಭತ್ತು ತಿಂಗಳು ಹೊತ್ತು ಹೆತ್ತು ಸಂಭಾಳಿಸಿದ್ದಕ್ಕಾಗಿ ಒಂಬತ್ತು ಸಾವಿರ ಎಂದು ವಧುವಿನ ತಾಯಿ ಹೇಳುತ್ತಾಳೆ

ಓಲಿಕೊಡೆ: 1. ಮಡಿಕೊಡೆ; ದೇವರಿಗೆ, ಮಠಾಧಿಪತಿಗಳಿಗೆ ಗೌರವಪೂರ್ವಕವಾಗಿ ಬಳಸುವ ತಾಳೆಪತ್ರೆಯಿಂದ ಮಾಡಿರುವ ಅಲಂಕೃತ ಛತ್ರಿ (ಚಿಮ.ಜಿ) 2. ಮದುವೆಯ ಕಾಶೀಯಾತ್ರೆ ಆಚರಣೆಯಲ್ಲಿ ಮದುಮಗನಿಗೆ ಕೊಡುವ ಹನೆ ಮರದ ಗರಿಯಿಂದ ಮಾಡಿದ ಕೊಡೆ (ದಕ.ಜಿ)

ಓಲಿಗ್ಯ: ದವಸಧಾನ್ಯ ಹೆಚ್ಚಲಿ ಎಂದು ಕಣ ಮಾಡುವಾಗ ಹೇಳುವ ಪದ; ಹುಲುಸಾಗಲಿ ಸಮೃದ್ಧಿಯಾಗಲಿ ಎಂಬ ಅರ್ಥದಲ್ಲಿ ಬಳಸುವ ಶಬ್ದ

ಓಲುಗಟ್ಟಿಸು: ನೇಣುಹಾಕಿಸು; ನೇಣು ಹಾಕಿ ತೂಗು ಬೀಳುವಂತೆ ಮಾಡು **ಪ್ರ:** ನಿನ್ನ ಓಲುಗಟ್ಟಿಸಿಯೇ ಕಟ್ಟುಸ್ತೀನಿ (ಹಾಸ.ಜಿ)

ಓಲೆ: 1. ವಾಲೆ 2. ತಾಳೆ ಮರದ ಗರಿ 3. ಕಾಗದ 4. ಕಿವಿಯ ಆಭರಣ

ಓಲೆಕಾರ: ಅಂಚೆ ಕಾಗದಗಳನ್ನು ವಿತರಣೆ ಮಾಡುತ್ತಿದ್ದ ವ್ಯಕ್ತಿ (ಧಾರ.ಜಿ). **ಇರೂ:** *ವಾಲೇಕಾರ*

ಓಲೆಕುಚ್ಚು: ಯಕ್ಷಗಾನದ ಸ್ತ್ರೀವೇಷಕ್ಕೆ ಹಾಕಲಾಗುವ ಕಿವಿಯಾಕಾರದಲ್ಲಿ ಇರುವ ಆಭರಣ (ದಕ.ಜಿ)

ಓಲೆಕುರುವೆ: ಒಲೆ ಪಕ್ಕದ ರಂಧ್ರ (ಶಿವ.ಜಿ)

ಓಲೆಕೊಪ್ಪು: ಕಿವಿಯ ಮೇಲ್ಭಾಗದಲ್ಲಿ ಧರಿಸುವ ಆಭರಣ; ಪುರುಷರ ಕರ್ಣಾಭರಣ (ಮೈಸೂ.ಜಿ)

ಓಲೆಗರಿ: ತಾಳೆಮರದ ಗರಿ

ಓಲೆಗರಿಟೋಪಿ: ಬಿಸಿಲಿನಿಂದ ಹಾಗೂ ಮಳೆಯಿಂದ ರಕ್ಷಣೆ ಪಡೆಯಲು ಬಳಸುವ ತಾಳೆಗರಿಯಿಂದ ಮಾಡಿದ ಟೋಪಿ



ಓಲೆಗರಿಮರ: ಶ್ರೀತಾಳೆ ಮರ

ಓಲೆಚಿಂತಾಣಿ: ಚಿನ್ನದ ಓಲೆ

ಓಲೆತತ್ರ: ತಾಳೆಗರಿಯ ಕೊಡೆ; ಇದನ್ನು ಆಟಿಕಳೆಂಜನು ಕೈಯಲ್ಲಿ ಹಿಡಿದಿರುತ್ತಾನೆ

ಓಲೆದೂತ: ಬಯಲಾಟಗಳಲ್ಲಿ, ಓಲೆಗಳನ್ನು ತಲುಪಿಸುವ ದೂತನ ಪಾತ್ರ (ದಕ.ಜಿ)

ಓಲೆಬೆಲ್ಲ: ತಾಳೆಮರದ ರಸದಿಂದ ಮಾಡಿದ ಬೆಲ್ಲ; ತಾಳೆಬೆಲ್ಲ. ತಾಳೆ ಮರದ ರಸವನ್ನು ಹುಳಿ ಬರುವುದಕ್ಕೆ ಮೊದಲೇ ಕುದಿಸಿ ಬಂದ ಪಾಕವನ್ನು ಒದ್ದೆ ಬಟ್ಟೆಯ ಮೇಲೆ ಇಟ್ಟ

ಓಲೆಯ ಸುರುಳಿಗೆ ಸುರಿಯುತ್ತಾರೆ ಇದರಲ್ಲಿ ಔಷಧಿ ಗುಣಗಳಿವೆ. ಬಾಣಂತಿಗೆ ಶುಂಠಿಯ ಜೊತೆ ಕೊಡುತ್ತಾರೆ

ಓಲೆಭಾಗ್ಯ: ಓಲೆಯನ್ನು ತೊಡುವ ಭಾಗ್ಯ; ಮುತ್ತೈದೆತನ. **ಪ್ರ:** ಓಲೆಭಾಗ್ಯ ಕೊಡು ತಾಯಿ. **ಇರೂ:** *ವಾಲೆಭಾಗ್ಯ*

ಓಲೆಮನಂಗ್: ಒಂದು ಜಾತಿಯ ಮೀನು. ಬೆನ್ನು ಹಸಿರಾಗಿದ್ದು ಎರಡೂ ಪಾರ್ಶ್ವ ಹಾಗೂ ಕೆಳಗಡೆ ಬೆಳ್ಳಿಯ ಬಣ್ಣವಿರುತ್ತದೆ. ಉಬ್ಬಿದ ಭಾಗದಲ್ಲಿ ಕಪ್ಪು ಬಣ್ಣವಿರುತ್ತದೆ (ದಕ.ಜಿ)

ಓಲೆಮಾನಿ: ಅಂಚೆಯ ಆಳು; ಓಲೆಕಾರ. **ಪ್ರ:** ಇಬ್ಬರು ಓಲೆಮಾನಿಗಳು ಬೂಡಿನ ಮನೆಗೆ ಬಂದರು

ಓಲೆಸರಪಣಿ: ಯಕ್ಷಗಾನದಲ್ಲಿ ಸ್ತ್ರೀವೇಷವು ಧರಿಸುವ ಓಲೆ. **ಇರೂ:** *ತಾಂಗುಸರಪಣಿ*

ಓಲ್ಗಸ್ವಾಮಿ: ಕಣದಲ್ಲಿ ರಾಶಿ ತೂರುವ ಸಂದರ್ಭದಲ್ಲಿ ಗಾಳಿ ಬರದಿದ್ದಾಗ ಗಾಳಿ ಜೋರಾಗಿ ಬೀಸಲಿ ಎಂದು ಹಾಕುವ ಘೋಷಣೆ (ಚಿಮ.ಜಿ) **ಇರೂ:** *ಓಲಿಗ್ಯಾ*

ಓವರಿ: ಒಳಮನೆ; ಕೋಣೆ (ಮಂಡ್ಯ.ಜಿ)

ಓವರಿಗೆ: ಉಪ್ಪರಿಗೆ (ಮೈಸೂ.ಜಿ)

ಓವುಸು: ಪ್ರೀತಿ ತೋರಿಸು; ಆದರಿಸು

ಓವೆ: ಓರಣ; ಅಚ್ಚುಕಟ್ಟು (ಶಿವ.ಜಿ)

ಓಷ್ಣುಮ: ವೈಷ್ಣವ ಪಂಥಕ್ಕೆ ಸೇರಿದವ (ಮೈಸೂ.ಜಿ)

ಓಸ: ವಂಶ; ಕುಲ; ಸಂತತಿ

ಓಸ ನಿರೋಸಾಗಲಿ: ವಂಶ ನಿರ್ವಂಶವಾಗಲಿ ಎಂಬ ಅರ್ಥಕೊಡುವ ಬೈಗುಳ (ಬಳ್ಳಾ.ಜಿ)

ಓಸಗರಿಲಿ: ವಂಶಕ್ಕೆ ತೊಂದರೆಯಾಗಲಿ ಎಂಬ ನಿಂದನೆಯ ನುಡಿ (ಬಳ್ಳಾ.ಜಿ)

ಓಸರ: ೧. ಸಮತೂಕವಿಲ್ಲದಿರುವುದು ೨. ಸುಳ್ಳು

ಓಸರಿಕೆ: ೧. ಒಂದು ಬದಿಗೆ ಬಗ್ಗುವಿಕೆ ೨. ಜಗುಳಿ ಹೋಗು; ವಾಕರಿಸು. **ಇರೂ:** *ಓಸರಿಸು*

ಓಸು: ಎಲ್ಲಾ **ಪ್ರ:** ಬೆಕ್ಕು ಓಸೂ ಹಾಲ ಕುಡ್ದು ಹಾಯಾಗಿ ಮಲಿಕೊಂಡಿತ್ತು (ಬೀದ.ಜಿ)

ಓಹಿ: ಅವಧಿ; ಗಡುವು (ಮಂಡ್ಯ.ಜಿ)

ಓಳಹುರಿ: ಒಳಜ್ವರ (ಗುಲ್ಬ.ಜಿ)

ಓಳಾಗು: ೧. ಕೃಶವಾಗು; ಬಡವಾಗು ೨. ಸರಿದು ನಿಲ್ಲು (ಬಳ್ಳಾ.ಜಿ)

ಓಳಿ: ೧. ಬೀಜ ಬಿತ್ತಲು ತಯಾರಿಸಿಕೊಂಡ ಮಣ್ಣಿನ ಸಾಲು. **ಪ್ರ:** ಆ ಗದ್ದೆಯಲ್ಲಿ ನಾಲ್ಕು ಓಳಿ ಇತ್ತು (ಉಕ) ೨. ಸಮೂಹ (ಬಿಜಾ.ಜಿ/ಚಿಮ.ಜಿ). **ಇರೂ:** *ಓಳ*

ಓಳಿಗೆ: ಕುದುರೆ ಜೀನಿನ ಕೆಳಗೆ ಹಾಕುವ ಮೆತ್ತೆ; ತಡಿ (ಮಂಡ್ಯ.ಜಿ)

ಓಳಿದೆನೆ: ತೆನೆಯ ರಾಶಿ

ಓಳುಸೇರಕ್ಕಿ: ಅರ್ಧ ಬೊಗಸೆ ಅಕ್ಕಿ (ಶಿವ.ಜಿ)

ಓಳ್ಕೆ: ಸಂಭೋಗ (ಮೈಸೂ.ಜಿ). **ಇರೂ:** *ಕೂಟೆ; ಕೂಟ*

ಓಳ್ಮಗ್ಲು: ಒಳಮಗ್ಗುಲು; ಒಂದೇ ಕಡೆ; ಒಂದೇ ಮಗ್ಗಲಿನಲ್ಲಿ ಮಲಗುವುದು

ಓಳ್ಳಿ: ಓಕುಳಿ. ಕೃಷಿ ಸಂಬಂಧೀ ಪೂಜೆಯ ನಂತರ ಹೊಲದ ಸುತ್ತಲೂ ಚೆಲ್ಲುವ ಅರಶಿಣ ಕುಂಕುಮ ಕಲಸಿದ ನೀರು (ಶಿವ.ಜಿ)

ಔ

ಔಂಕು: ಅಮುಕು; ಒತ್ತಿ ಹಿಡಿ. **ಇರೂ:** *ಔಕು, ಔಚುವೆ*

ಔಂಗು: ಅಂಗು ಎಂಬ ಸಿಹಿ ಪದಾರ್ಥ ಮಾಡುವಾಗ ಬಳಕೆಯಾಗುವ ವಿಶಿಷ್ಟ ರೀತಿಯ ಗಡಿಗೆ. ಕೆಳಭಾಗದಲ್ಲಿ ಸುತ್ತಲೂ ನಾಲ್ಕು ಕಡೆ ಬಾಣ, ಸಂಕಲನ ಚಿಹ್ನೆ, ತ್ರಿಭುಜ, ವೃತ್ತಾಕಾರದ ರಂಧ್ರಗಳಿರುತ್ತವೆ. ಈ ಗಡಿಗೆಯನ್ನು ಒಲೆಯ ಮೇಲೆ ಬೋರಲು ಹಾಕಿ ಅದರ ಮೇಲೆ ಅಕ್ಕಿಯಹಿಟ್ಟನ್ನು ಸವರಿ ಬೇಯಿಸುತ್ತಾರೆ. **ನೋಡಿ–**ಅಂಗು

ಔಂತ್ಲ: **ನೋಡಿ–** ಔತಣ. **ಪ್ರ:** ಅಂಟಿಕೆಪಂಟಿಕೆ ಔಂತ್ಲಕ್ಕೆ ಊಟಕ್ಕೆ ಕರೆದಿದಾರೆ

ಔಂಸ್ತಿ: ೧. ಔಷಧಿ ೨. ವಿಷ. **ಇರೂ:** *ಔಸುದ್ದಿ; ಔಸುದ್ಯಾ*

ಔಖಳಿಮಳಿ: ಮಳೆಗಾಲಕ್ಕಿಂತ ಮುಂಚೆ ಬರುವ ಬೇಸಿಗೆ ಮಳೆ (ಬಿಜಾ.ಜಿ)

ಔಗಿನಮಡಕೆ: ಅಕ್ಕಿಬೆಲ್ಲ ರುಬ್ಬಿ ಸಿಹಿತಿಂಡಿಯನ್ನು ತಯಾರಿಸಲು ಬಳಸುವ ವಿಶಿಷ್ಟ ಆಕಾರದ ಮಡಕೆ (ಚಿಮ.ಜಿ/ಶಿವ.ಜಿ)

ಔಚು: ಅವುಚು; ಮೇಲೆ ಬೀಳು; ತಬ್ಬು (ಮೈಸೂ.ಜಿ)

ಔಜು: ನೀರಿನ ತೊಟ್ಟಿ (ಗುಲ್ಬ.ಜಿ)

ಔಟು: ಸುಳ್ಳು ಸುದ್ದಿ (ಬಳ್ಳಾ.ಜಿ)

ಔಟುಬರು: ಡೊಂಕಾಗು (ಬಳ್ಳಾ.ಜಿ)

ಔಟುಬಿಡು: ೧. ಬೆದರಿಕೆಯ ಸುಳ್ಳು ಸುದ್ದಿ ಹಬ್ಬಿಸು ೨. ಸ್ವಕಲ್ಪಿತ ಸಂಗತಿ ಹರಡು (ಬಳ್ಳಾ.ಜಿ)

ಔಟುಹಾರಿಸು: ೧. ವಿಜಯೋತ್ಸವದ ಆಚರಣೆ ೨. ಅಬ್ಬರದ ಶಬ್ದವನ್ನುಂಟು ಮಾಡುವ ಮದ್ದನ್ನು ಹಾರಿಸು

ಔಟೆ: ಚಕ್ಕಡಿಯ ತೊಟ್ಟಿಲದ ಮಧ್ಯದಲ್ಲಿ ಅಡ್ಡಲಾಗಿ ಇರುವ ಭಾಗ

ಔಟ್ಲುಗಿಡ: ಕಳ್ಳಿಗಿಡ (ಹಾಸ.ಜಿ)

ಔಡ್: ವಾಕರಿಕೆ. **ಪ್ರ:** ಮಗು ಆಗಳಿಂದ ಔಡ್‌ತಿತ್ತ್ (ದಕ.ಜಿ)

ಔಡಲ/ಔಡ್ಲ: ಹರಳುಗಿಡ; ಎಣ್ಣೆ ಕಾಳಿನ ಗಿಡ. ಇದರ ಎಲೆ ಕಾಮಾಲೆ ರೋಗಕ್ಕೆ ಔಷಧಿ. ಕಾಮದಹನ ಮಾಡುವಾಗ ಔಡಲ ಗಿಡವನ್ನು ಕಾಮನ ಸಂಕೇತವಾದ ಕುಳ್ಳಬಾನದಲ್ಲಿಟ್ಟು ಸುಡುತ್ತಾರೆ (ಬಿಜಾ.ಜಿ/ಮಂಡ್ಯ.ಜಿ). **ಇರೂ:** ಅವುಡ್ಲು (ಚಿತ್ರ ನೋಡಿ)

ಔಡಲಪಕರು ಬಳ್ಳಿ: ಒಂದು ಗಿಡಮೂಲಿಕೆ

ಔಡಾಸು: ಇಷ್ಟವಾಗು (ಗುಲ್ಬ.ಜಿ)

ಔಡು: ವಸಡು; ದವಡೆ

ಔಡ್ಲುಹಣ್ಣು: ಪರಂಗಿಹಣ್ಣು (ಚಿಮ.ಜಿ)

ಔತಣ: ೧. ಭೋಜನ ೨. ವಿಶೇಷ ಊಟ. **ಪ್ರ:** ಬಲ್ಲಿದರ ಮನೇಲಿ ಔತಣವಾದರೆ ಬಡವನಿಗೆ ಬಂದ ಸಿರಿ ಏನು

ಔತಾರ: ಅವತಾರ

ಔತ್ನ/ಔತ್ಲ: ನೋಡಿ– ಔತಣ

ಔದುಂಬರ: ಅತ್ತಿಹಣ್ಣಿನ ಮರ. ಇದರ ತೊಗಟೆಯನ್ನು ಕೆರೆದರೆ, ಚಿವುಟಿದರೆ ಔಷಧೀಗುಣವುಳ್ಳ ಹಾಲು ಒಸರುತ್ತದೆ. ಹಣ್ಣು ಪುಷ್ಟಿದಾಯಕ (ಬೆಂಗ.ಜಿ). **ನೋಡಿ–** ಅತ್ತಿ

ಔನ್ಸ್: ಕೋವಿಗೆ ತುಂಬುವ ಗುಂಡು (ಶಿವ.ಜಿ)

ಔಬ: ೧. ಕಾಲು ಹೊರಬಾಗಿರುವ ವಿಕಲಾಂಗ ೨. ದನವನ್ನು ಕಟ್ಟಲು ಬಳಸುವ ಹಗ್ಗ (ಚಿಮ.ಜಿ). **ಇರೂ:** ಔಬು

ಔರಂದಾಯ: ಒಂದು ಭೂತದ ಹೆಸರು (ದಕ.ಜಿ)

ಔರಾಣಿ: ನೋಡಿ – ಆವ್ರಾಣಿ

ಔರ್ಗ್ಗಾರ: ಕ್ಷೌರಿಕ (ಶಿವ.ಜಿ)

ಔಲು: ೧. ಒಂದು ಜಾತಿಯ ಮೀನು ೨. ಬತ್ತ ಜೋಳ ಮುಸುಕಿನ ಜೋಳ ಮುಂತಾದ ಧಾನ್ಯಗಳ ಅರಳು. **ಇರೂ:** ಅವಲು

ಔಸ್ವಾದ: ಹಂಸಪಾದ; ಕಣವನ್ನು ಮಟ್ಟ ಮಾಡುವ ಸಾಧನ; ಧಮ್ಮಸು ಮಾಡುವ ಏಣಿ (ದಕ.ಜಿ)

* * * * * *

ಅನುಬಂಧಗಳು

ಸಂಕ್ಷೇಪಾಕ್ಷರಗಳು

ಬೆಂಗಳೂರುನಗರ ಜಿಲ್ಲೆ	–	ಬೆಂಗ.ಜಿ
ಬೆಂಗಳೂರು ಗ್ರಾಮಾಂತರ ಜಿಲ್ಲೆ	–	ಬೆಂಗ್ರಾ.ಜಿ
ಮೈಸೂರು ಜಿಲ್ಲೆ	–	ಮೈಸೂ.ಜಿ
ಚಾಮರಾಜನಗರ ಜಿಲ್ಲೆ	–	ಚಾಮ.ಜಿ
ಉತ್ತರ ಕನ್ನಡ ಜಿಲ್ಲೆ	–	ಉಕ.ಜಿ
ಕೋಲಾರ ಜಿಲ್ಲೆ	–	ಕೋಲಾ.ಜಿ
ಚಿಕ್ಕ ಬಳ್ಳಾಪುರ ಜಿಲ್ಲೆ	–	ಚಿಬ.ಜಿ
ಉಡುಪಿ ಜಿಲ್ಲೆ	–	ಉಡು.ಜಿ
ದಕ್ಷಿಣ ಕನ್ನಡ ಜಿಲ್ಲೆ	–	ದಕ.ಜಿ
ಶಿವಮೊಗ್ಗ ಜಿಲ್ಲೆ	–	ಶಿವ.ಜಿ
ಚಿತ್ರದುರ್ಗ ಜಿಲ್ಲೆ	–	ಚಿತ್ರ.ಜಿ
ದಾವಣಗೆರೆ ಜಿಲ್ಲೆ	–	ದಾವ.ಜಿ
ಬೀದರ್ ಜಿಲ್ಲೆ	–	ಬೀದ.ಜಿ
ತುಮಕೂರು ಜಿಲ್ಲೆ	–	ತುಮ.ಜಿ
ಧಾರವಾಡ ಜಿಲ್ಲೆ	–	ಧಾರ.ಜಿ
ಗದಗ ಜಿಲ್ಲೆ	–	ಗದ.ಜಿ
ಹಾವೇರಿ ಜಿಲ್ಲೆ	–	ಹಾವೇ.ಜಿ
ಚಿಕ್ಕಮಗಳೂರು ಜಿಲ್ಲೆ	–	ಚಿಮ.ಜಿ
ಹಾಸನ ಜಿಲ್ಲೆ	–	ಹಾಸ.ಜಿ
ಮಂಡ್ಯ ಜಿಲ್ಲೆ	–	ಮಂಡ್ಯ.ಜಿ
ರಾಮನಗರ ಜಿಲ್ಲೆ	–	ರಾಮ.ಜಿ
ಬೆಳಗಾವಿ ಜಿಲ್ಲೆ	–	ಬೆಳ.ಜಿ
ಬಿಜಾಪುರ ಜಿಲ್ಲೆ	–	ಬಿಜಾ.ಜಿ
ಬಾಗಲಕೋಟೆ ಜಿಲ್ಲೆ	–	ಬಾಗ.ಜಿ
ಗುಲ್ಬರ್ಗಾ ಜಿಲ್ಲೆ	–	ಗುಲ್ಬ.ಜಿ
ಕೊಡಗು ಜಿಲ್ಲೆ	–	ಕೊಡ.ಜಿ
ಕೊಪ್ಪಳ ಜಿಲ್ಲೆ	–	ಕೊಪ್ಪ.ಜಿ
ಯಾದಗಿರಿ ಜಿಲ್ಲೆ	–	ಯಾದ.ಜಿ
ರಾಯಚೂರು ಜಿಲ್ಲೆ	–	ರಾಯ.ಜಿ

ಮಂಡ್ಯ, ಮೈಸೂರು, ಚಾಮರಾಜನಗರ, ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಲ್ಲಿ ಸಾಮಾನ್ಯವಾಗಿ ಕಂಡುಬರುವ ಪದಗಳು ಮತ್ತು ಅವುಗಳ ಅರ್ಥಗಳಿಗೆ **(ದಕ)** ಎಂಬ ಸಂಕ್ಷೇಪಾಕ್ಷರ ನೀಡಿದೆ. ಧಾರವಾಡ, ಬಿಜಾಪುರ, ಬೀದರ್, ರಾಯಚೂರು, ಬಾಗಲಕೋಟೆ ಮುಂತಾದ ಉತ್ತರ ಕರ್ನಾಟಕದ ಪ್ರದೇಶಗಳಲ್ಲಿ ಕಂಡು ಬರುವ ಪದಗಳು ಮತ್ತು ಅವುಗಳ ಅರ್ಥಗಳಿಗೆ **(ಉಕ)** ಎಂಬ ಸಂಕ್ಷೇಪಾಕ್ಷರ ನೀಡಿದೆ. ಉಡುಪಿ, ಮಂಗಳೂರು, ದಕ್ಷಿಣ ಕನ್ನಡ, ಉತ್ತರ ಕನ್ನಡ, ಕಾರವಾರಗಳಲ್ಲಿ ಕಂಡು ಬರುವ ಪದಗಳು ಮತ್ತು ಅವುಗಳ ಅರ್ಥಗಳನ್ನು **(ಕರಾ)** ಎಂದೂ ಶಿವಮೊಗ್ಗ, ಚಿಕ್ಕಮಗಳೂರು, ಹಾಸನ ಪ್ರಾಂತ್ಯಕ್ಕೆ ಸೇರಿದ ಪದಗಳು ಮತ್ತು ಅವುಗಳ ಅರ್ಥಗಳನ್ನು **(ಮಲೆ)** ಎಂದು ಸೂಚಿಸಲಾಗಿದೆ. ಹಾಗೆಯೇ ಪ್ರಯೋಗ ಎಂಬುದನ್ನು **ಪ್ರ** ಎಂತಲೂ ಇತರ ರೂಪಗಳನ್ನು **ಇರೂ** ಎಂತಲೂ ಸೂಚಿಸಲಾಗಿದೆ. ನಾಮಪದವನ್ನು **(ನಾ)** ಎಂದೂ ಕ್ರಿಯಾಪದವನ್ನು **(ಕ್ರಿ)** ಎಂದೂ ಸೂಚಿಸಲಾಗಿದೆ.

ಕನ್ನಡ ಜಾನಪದ ನಿಘಂಟಿನಲ್ಲಿ ಸೇರ್ಪಡೆಯಾಗಿರುವ ಚಿತ್ರಗಳ ಪಟ್ಟಿ

ರೇಖಾಚಿತ್ರಗಳು

೧. ಅಂಗುದೋಸೆ
೨. ಅಂಡ್ ಕೊಕ್ಕೆ
೩. ಅಕ್ಕಡಿಕೋಲು
೪. ಅಕ್ಕಸ್ತಿಬಟ್ಟಲು
೫. ಅಕ್ಕಳಿ
೬ ಅಕ್ಕಿಮುಡಿ
೭ ಅಗಚೆ
೮. ಅಗಪೆ
೯. ಅಗಸಿಕಡ್ಡಿ
೧೦. ಅಗಳು
೧೧. ಅಗುಡೆ
೧೨. ಅಗ್ಗಿಟಿಗಿ
೧೩. ಅಚ್ಚಳ್ಳಿ ಪಿಚ್ಚಳ್ಳಿ
೧೪. ಅಚ್ಚೆನ್ಮರ
೧೫. ಅಚ್ಚೆಪದ್ಮ
೧೬. ಅಡಕತ್ತಿ
೧೭. ಅಡಕಲಗಡಗಿ
೧೮. ಅಡಕೆಕುಟ್ಟಾಣಿ
೧೯. ಅಡಸಲು
೨೦. ಅಡಿಕೆಮಣೆ
೨೧. ಅಡುಕೊಕ್ಕೆ
೨೨. ಅಡ್ಡಾಮು
೨೩. ಅಡ್ಡಕೇದಗೆ
೨೪. ಅಡ್ಡಣಿಗೆ
೨೫. ಅಡ್ಡಿಕೆಓಲೆ
೨೬. ಅಡ್ಡೆ
೨೭. ಅಡ್ಡೆದೇವರು
೨೮. ಅಡ್ಲಿಗಿ
೨೯. ಅತ್ರಿ
೩೦. ಅನ್ನದಮರಿಗೆ
೩೧. ಅಪ್ಪೆಬಂಡಿ
೩೨. ಅಬತಾಗಿರಿ
೩೩. ಅರ
೩೪. ಅರಟೆ
೩೫. ಅರ್ಗಕುಂಟೆ
೩೬. ಅಲ್ಕಿತಟ್ಟೆ
೩೭. ಅಲ್ಗೆಗಾಡಿ
೩೮. ಅಸಿಕಲ್ಲು
೩೯. ಅಸೆಕಲ್ಲು
೪೦. ಅಳತೆಸಿದ್ದೆ
೪೧. ಅಳ್ಗುಳಿಮಣೆ
೪೨. ಆಕ್‌ರಾಯಿ
೪೩. ಆಕಳಸುಳಿಗಳು
೪೪. ಆಕಾಶಬುಟ್ಟಿ
೪೫. ಆಗ್ರ
೪೬. ಆನಿಕಲ್ಲು
೪೭. ಆನೆಕಟ್ಟಾಟ
೪೮. ಆನೆತಲೆ
೪೯. ಆನೆಮುಟ್ಟಿ
೫೦. ಆರತಿ
೫೧. ಆರತಿ ಅಚ್ಚು
೫೨. ಆಲವಟ್ಟ
೫೩. ಆಲೆ
೫೪. ಆವುಗೆ
೫೫. ಇಕ್ಕಳ
೫೬. ಇಟ್ಟಿ, ಈಟಿ

೫೭. ಇಬೂತಿಪೆಟ್ಗೆ
೫೮. ಇಬ್ಬಳಿಗೆ
೫೯. ಇರುಗೂಳಿ/ಈರ್ಗೂಳಿ
೬೦. ಇಲ
೬೧. ಇಲಾಲ್
೬೨. ಇಲಿಅಂಡೆ
೬೩. ಇಸಮುಳ್ಳು
೬೪. ಇಸಾಳಿ
೬೫. ಈಜುಬುರುಡೆ
೬೬. ಈಳಿಗೆಮಣೆ
೬೭. ಉಕ್ಕಿನಂಗಿ
೬೮. ಉಜ್ಜುಗೊರಡು
೬೯. ಉಜ್ಜುಸರ
೭೦. ಉಡುಗತ್ತಿ
೭೧. ಉಡುಪಿದೀಪ
೭೨. ಉದಬತ್ತಿಕುಂಡ
೭೩. ಉದಾನಿ
೭೪. ಉಪರಾಟಿ
೭೫. ಉಪ್ಪಿನಭರಣಿ
೭೬. ಉರುಟು ಕಿರೀಟ
೭೭. ಉರುಮೆ
೭೮. ಉಳಿ
೭೯. ಉಳ್ಳಗಡ್ಡಿಹೂವಿನ ಪಿಲ್ಲಿ
೮೦. ಊಜಿ
೮೧. ಎಡೆಕುಂಟೆ
೮೨. ಎಣ್ಣೆಗಾಣ
೮೩. ಎಣ್ಣೆಬುಡ್ಡಿ
೮೪. ಎಣ್ಣೆಯ ಬಿಜ್ಜಣಿಗೆ
೮೫. ಎತ್ತುಗಲ್ಲು
೮೬. ಎದೆಹಾರ
೮೭. ಎರಂಡೆ
೮೮. ಎಲೆಗುದ್ದಲಿ
೮೯. ಎಲೆಗೊರಬು
೯೦. ಎಲೆಯುಂಗುರ
೯೧. ಏಕತಾರಿ
೯೨. ಏತ
೯೩. ಏತದಬಾನಿ
೯೪. ಐರಣಿ
೯೫. ಒಂಟಿತಟ್ಟೆ ತಕ್ಕಡಿ
೯೬. ಒಂಟೆತ್ತಿನ ಗಾಡಿ
೯೭. ಒಂದೆಲಗ
೯೮. ಒಂದ್ರಿ
೯೯. ಒಡ್ಡರಗಾಡಿ
೧೦೦. ಒತ್ತುಕಾಸಿನಸರ
೧೦೧. ಒನಕೆ
೧೦೨. ಒನಕೆಬಂಡಿ
೧೦೩. ಒಲೆ
೧೦೪. ಒಳಕಲ್ಲು
೧೦೫. ಒಳಲೆ
೧೦೬. ಓಲೆಗರಿಟೋಪಿ

ವರ್ಣಚಿತ್ರಗಳ ಪಟ್ಟಿ

೧. ಅಂಕೋಲೆ
೨. ಅಂಟುವಾಳ
೩. ಅಂತರಗಂಗೆ
೪. ಅಂತುಂಟಿ/ಅಂತುಂಟೆ
೫. ಅಂದರು
೬ ಅಂಬಹಳದಿ
೭ ಅಕ್ಕರಿಕೆ
೮. ಅಕ್ಕಲಕಾರ/ಅಕ್ಕಲಕರ
೯. ಅಕ್ಕಳಿ
೧೦. ಅಗಚೆ

೧೧. ಅಗಸಿ
೧೨. ಅಜ್ಜನಪಟ್ಟೆ
೧೩. ಅಜ್ಜಿಗೆಡ್ಡೆ
೧೪. ಅಡಕಚಿಟ್ಟಿನ ಸೊಪ್ಪು
೧೫. ಅಡವಿಉಲ್ಲಂಕಿ
೧೬. ಅಡವಿಗದ್ದೆಗೊರವ
೧೭. ಅಡವಿನತ್ತಿಂಗ
೧೮. ಅಡವಿಸಿಪಿಲೆ
೧೯. ಅಡವಿಹರಟೆಮಲ್ಲ
೨೦. ಅಡಸೋಗೆ/ಆಡುಮುಟ್ಟದಗಿಡ
೨೧. ಅಡ್ಕೆಬೀಳು
೨೨. ಅಡ್ಡಿಕೆಗಿಡ
೨೩. ಅಮಟೆ
೨೪. ಅಮೃತಬಳ್ಳಿ
೨೫. ಅರಿಶಿನ/ಅರಶಿನ
೨೬. ಅಶೋಕಮರ
೨೭. ಅಶ್ವಗಂಧಿ
೨೮. ಅಳಲೆ
೨೯. ಆಚಲು
೩೦. ಆಡುಮುಟ್ಟದ ಗಿಡ
೩೧. ಆನೆಕತ್ತಾಳೆ
೩೨. ಆನೆಕಾಲುಗಿಡ
೩೩. ಆನೆನೆಗ್ಗಿಲು
೩೪. ಆರತಿ ಕುಂಡಿಗೆ
೩೫. ಆಲೆಮರ
೩೬. ಆವರಿಕೆ
೩೭. ಇಪ್ಪಲಿ
೩೮. ಇಲಿಕಿವಿಸೊಪ್ಪು
೩೯. ಈಚಲು
೪೦. ಈರೆ
೪೧. ಈಶ್ವರಿಬಳ್ಳಿ
೪೨. ಉಗನೆ
೪೩. ಉಚ್ಚೆಕಾಯಿ
೪೪. ಉತ್ತರಾಣಿ
೪೫. ಉಸಿರುಮದ್ದಿನಬಳ್ಳಿ
೪೬. ಊವರ್ಚಿ
೪೭. ಎಕ್ಕ
೪೮. ಎರಮುಸುರೆಗಿಡ
೪೯. ಏಕನಾಯಕನ ಗಿಡ
೫೦. ಒಂದೆಲಗ
೫೧. ಔಡಲ/ಔಡ್ಲ

ವರ್ಣಚಿತ್ರಗಳು

೧. ಅಂಕೋಲೆ

೨. ಅಂಟುವಾಳ



೩. ಅಂತರಗಂಗೆ

೪. ಅಂತುಂಟಿ/ಅಂತುಂಟೆ



೫. ಅಂದರು



೬. ಅಂಬಹಳದಿ



೧೩. ಅಜ್ಜಿಗೆಡ್ಡೆ



೧೪. ಅಡಕಚಿಟ್ಟಿನ ಸೊಪ್ಪು

೧೫. ಅಡವಿಉಲ್ಲಂಕಿ

೧೬. ಅಡವಿಗದ್ದೆಗೊರವ

೧೭. ಅಡವಿನತ್ತಿಂಗ

೧೮. ಅಡವಿಸಿಪಿಲೆ

೧೯. ಅಡವಿಹರಟೆಮಲ್ಲ

೨೦. ಅಡಸೋಗೆ/ಆಡುಮುಟ್ಟದಗಿಡ



೨೧. ಅಡ್ಕೆಬೀಳು



೨೨. ಅಡ್ಡಿಕೆಗಿಡ

೨೫. ಅರಿಶಿನ/ಅರಶಿನ



೨೩. ಅಮಟೆ

೨೬. ಅಶೋಕಮರ



೨೪. ಅಮೃತಬಳ್ಳಿ



೨೭. ಅಶ್ವಗಂಧಿ



೨೮. ಅಳಲೆ

೨೯. ಆಚಲು

೩೦. ಆಡುಮುಟ್ಟದ ಗಿಡ



೩೧. ಆನೆಕತ್ತಾಳೆ



೩೨. ಆನೆಕಾಲುಗಿಡ



೩೩. ಆನೆನೆಗ್ಗಿಲು

೩೪. ಆರತಿ ಕುಂಡಿಗೆ

೩೭. ಇಪ್ಪಲಿ



೩೫. ಆಲೆಮರ



೩೮. ಇಲಿಕಿವಿಸೊಪ್ಪು

೩೬. ಆವರಿಕೆ

೩೯. ಈಚಲು



೪೦. ಈರೆ



೪೧. ಈಶ್ವರಿಬಳ್ಳಿ

೪೨. ಉಗನೆ

೪೩. ಉಚ್ಚೆಕಾಯಿ



೪೪. ಉತ್ತರಾಣಿ

೪೫. ಉಸಿರುಮದ್ದಿನಬಳ್ಳಿ



೪೬. ಊವರ್ಚಿ

೪೭. ಎಕ್ಕ



೪೮. ಎರಮುಸುರೆಗಿಡ

೪೯. ಏಕನಾಯಕನ ಗಿಡ



೫೦. ಒಂದೆಲಗ

೫೧. ಔಡಲ/ಔಡ್ಲ

ಆಕರ ಗ್ರಂಥಗಳು

ಅಕಾರಾದಿ ನಿಘಂಟು ಮತ್ತು ವೈದ್ಯ ನಿಘಂಟು: ವೈ.ಸಿ.ಭಾನುಮತಿ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೨೦೧೧

ಅಗಡಚಕ್ಕಿ ನಾಯಕಸಾನಿ ಮತ್ತು ಇತರ ಕಥೆಗಳು: ಕೂಡ್ಲೂರು ವೆಂಕಟಪ್ಪ, ವಿಶ್ವ ಒಕ್ಕಲಿಗರ ಮಹಾವೇದಿಕೆ ಮತ್ತು ಜಯನಗರ ಘಟಕದ ವಿಶ್ವ ಒಕ್ಕಲಿಗರ ಮಹಾ ವೇದಿಕೆ, ಬೆಂಗಳೂರು, ೨೦೧೩

ಅಚ್ಚಗನ್ನಡ ನುಡಿಕೋಶ: ವಿದ್ವಾನ್ ಕೊಳಂಬೆ ಪುಟ್ಟಣ್ಣಗೌಡರು, ಪುಸ್ತಕ ಪ್ರಕಾಶನ, ಮೈಸೂರು, ೧೯೯೩

ಆಡಾಡತ ಆಯುಷ್ಯ (ಆತ್ಮಕಥೆ): ಗಿರೀಶ್ ಕಾರ್ನಾಡ್

ಆನೇಕಲ್ ಪಾಳೆಯಗಾರರ ಕೈಫಿಯತ್ತು: ದೇವರ ಕೊಂಡಾರೆಡ್ಡಿ

ಆನ್ವಯಿಕ ಜಾನಪದ: ವಿವೇಕ ರೈ ಬಿ.ಎ., ಮಂಗಳ ಗಂಗೋತ್ರಿ, ೧೯೮೫

ಆಯ್ದ ಜನಪದ ಕಥೆಗಳು: ಜೀ. ಶಂ. ಪರಮಶಿವಯ್ಯ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೧೯೭೦.

ಆಸರ: (ಸಂ) ಶಾಂತಿನಾಯಕ, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಕನ್ನಡ ಭವನ, ಬೆಂಗಳೂರು

ಇಂದಿರಾಬಾಯಿ (ಕಾದಂಬರಿ): ಗುಲ್ವಾಡಿ ವೆಂಕಟರಾವ್, ಕನ್ನಡ ಸಂಸ್ಕೃತಿ ನಿರ್ದೇಶನಾಲಯ, ೧೯೮೫

ಇಬ್ಬೀಡಿನ ಜನಪದ ಕತೆಗಳು: (ಸಂ) ವೈ.ಸಿ.ಭಾನುಮತಿ, ಕೇಶವ ಪ್ರಕಾಶನ, ಮೈಸೂರು, ೧೯೭೯

ಇರುವುದೊಂದೇ ಜೀವ (ಕಾದಂಬರಿ): ಕುಲಶೇಖರಿ, ಚಿನ್ಮಯಿ ಪ್ರಕಾಶನ, ಬೆಂಗಳೂರು, ೨೦೦೭

ಇರುಳಿಗರು (ಜಾನಪದ ಅಧ್ಯಯನ): ಎಂ. ಬೈರೇಗೌಡ ಸಿ. ವಿ. ಜಿ. ಪಬ್ಲಿಕೇಷನ್ಸ್, ಬೆಂಗಳೂರು, ೨೦೦೦

ಈಡಿಗರ ವಿವಾಹ ಪದ್ಧತಿ: ಜಿ.ವಿ.ಡಿ, ತೇಜಸ್ವಿನಿ ಪ್ರಕಾಶನ, ತುಮಕೂರು, ೧೯೮೩

ಉಜ್ಜನಿ ಚೌಡಮ್ಮ: (ಸಂ) ಹಿ.ಚಿ.ಬೋರಲಿಂಗಯ್ಯ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೨೦೦೧

ಉತ್ತರ ಕನ್ನಡ ಜನಪದ ಕಥೆಗಳು: ಎಲ್.ಆರ್.ಹೆಗಡೆ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೭೫

ಉತ್ತರ ಕನ್ನಡದ ಹವ್ಯಕ ಜನಪದ ಕತೆಗಳು: (ಸಂ) ಶಾಂತಿನಾಯಕ್, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೮೧

ಉತ್ತರ ಕರ್ನಾಟಕದ ಒಗಟುಗಳು: ಎಂ.ಎಸ್. ಲಠ್ಠೆ

ಉತ್ತರ ಕರ್ನಾಟಕದ ಗಾದೆಗಳು: (ಸಂ) ಬಿ.ಬಿ.ಹೆಂಡಿ, ಮಲ್ಲಿಕಾರ್ಜುನ ಶಿ.ಲಠ್ಠೆ

ಉತ್ತರ ಕರ್ನಾಟಕದ ಜನಪದ ರಂಗಭೂಮಿ: ಬಸವರಾಜ ಮಲಶೆಟ್ಟಿ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೭೮

ಉತ್ತರ ಕರ್ನಾಟಕದ ಜನಪದ ಕತೆಗಳು: ಸಿಂಪಿ ಲಿಂಗಣ್ಣ , ಸಾಹಿತ್ಯ ಅಕಾಡೆಮಿ, ನವದೆಹಲಿ, ೧೯೭೨

ಎಡತೊರೆ ಕಥೆಗಳು (ಕಥಾ ಸಂಕಲನ): ಬಿ.ರಾಜಣ್ಣ, ಜಾಣಗೆರೆ ಪ್ರಕಾಶನ, ೧೯೮೦

ಎತ್ತಪ್ಪ (ಕಾಡುಗೊಲ್ಲರ ಸಾಂಸ್ಕೃತಿಕ ವೀರನ ಕತೆ): ಮೀರಾಸಾಬಿಹಳ್ಳಿ ಶಿವಣ್ಣ, ಸಿ.ವಿ.ಜಿ.ಪಬ್ಲಿಕೇಷನ್ಸ್, ಬೆಂಗಳೂರು, ೨೦೦೨

ಏಳೂರು ದೇವರ ಕಾಳಗ: ರಾಜಪ್ಪ ದಳವಾಯಿ, ೧೯೯೪

ಐದು ಜನಪದ ಕಥನ ಗೀತೆಗಳು: (ಸಂ) ಕ್ಯಾತನಹಳ್ಳಿ ರಾಮಣ್ಣ

ಐವರು ಹೇಳಿದ ಜನಪದ ಕಥೆಗಳು: (ಸಂ) ತರೀಕೆರೆ ರಹಮತ್, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೭೧

ಒಗಟುಗಳು–ಒಡಪುಗಳು (ನವ ಸಾಕ್ಷರರಿಗಾಗಿ): ಮೀರಾಸಾಬಿಹಳ್ಳಿ ಶಿವಣ್ಣ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೪

ಒಗಟುಗಳು: ಸುಧಾಕರ, ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ, ಮೈಸೂರು, ೧೯೯೦

ಒಡಪು: ಮೈಲಹಳ್ಳಿ ರೇವಣ್ಣ, ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೨೦೦೯

ಒಬ್ಬನೇ ಹೇಳಿದ ಇಪ್ಪತ್ತೆರಡು ಜನಪದ ಕಥೆಗಳು: (ಸಂ) ಸಿ.ವೀರಣ್ಣ, ಪ್ರಕಟಣ ಮತ್ತು ಪ್ರಚಾರೋಪನ್ಯಾಸ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು, ೧೯೭೪

ಕಂಡು ಕೇಳಿದ ಕಥೆಗಳು (ಕಂಡು ಕೇಳಿದ ಕತೆಗಳ ಸಂಕಲನ): ಮೀರಾಸಾಬಿಹಳ್ಳಿ ಶಿವಣ್ಣ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೧೯೯೯

ಕಂಡೇರಿ (ಕಥೆ): ಕಾ.ತ.ಚಿಕ್ಕಣ್ಣ, ಸುಂದರ ಪ್ರಕಾಶನ, ೨೦೦೪

ಕತ್ತಲ ದಾರಿದೂರ (ಕಥನಗೀತೆಗಳು): ಕೃಷ್ಣಮೂರ್ತಿ ಹನೂರ, ೧೯೮೧

ಕಥೆ ಕೇಳೇ ಗುಬಲಾಡಿ: (ಸಂ) ಜೀನಹಳ್ಳಿ ಸಿದ್ಧಲಿಂಗಪ್ಪ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೮೧

ಕನಕದಾಸರ ರಾಗಿ ರಾಮಾಯಣ ದರ್ಶನಂ: ಪ್ರೊ.ಸುಧಾಕರ

ಕನ್ನಡ ಗಾದೆಗಳು: (ಸಂ) ಜಿ.ವಿ.ದಾಸೇಗೌಡ

ಕನ್ನಡ ಜನಪದ ಕತೆಗಳು: ಜೀ.ಶಂ.ಪರಮಶಿವಯ್ಯ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೧೯೭೦

ಕನ್ನಡ ಜನಪದ ಕಥೆಗಳು (ಮಹಾಪ್ರಬಂಧ): ಕೆ.ಆರ್.ಸಂಧ್ಯಾರೆಡ್ಡಿ, ಕನ್ನಡ ಸಾಹಿತ್ಯ ಪರಿಷತ್ತು, ೧೯೮೨

ಕನ್ನಡ ಜಾನಪದ ಕೋಶ: (ಸಂ) ಎಚ್.ಎಲ್.ನಾಗೇಗೌಡ, ಕರ್ನಾಟಕ ಜಾನಪದ ಪರಿಷತ್ತು, ಬೆಂಗಳೂರು, ೧೯೯೮

ಕನ್ನಡ ನಿಘಂಟು ಮೊದಲನೇ ಸಂಪುಟ: (ಸಂ) ನರಸಿಂಹಾಚಾರ್ ಡಿ.ಎಲ್, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೭೦

ಕನ್ನಡ ಬಯಲಾಟ=ಪ್ರಮೀಳೆ: (ಸಂ) ಎಂ.ಎಸ್.ಸುಂಕಾಪುರ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೭೬

ಕನ್ನಡ–ಇಂಗ್ಲೀಷ್ ಡಿಕ್ಷ್ನರಿ: ರೆ. ಎಫ್. ಕಿಟ್ಟೆಲ್, ಏಷ್ಯನ್ ಎಜುಕೇಷನಲ್ ಸರ್ವೀಸ್, ನವದೆಹಲಿ ಮತ್ತು ಚೆನ್ನೈ, ೨೦೧೨

ಕನ್ನಡದಲ್ಲಿ ಜಾನಪದ ಕಲ್ಪನೆ ಮತ್ತು ಇತರ ಲೇಖನಗಳು: ಜಿ.ವಿ.ಡಿ, ತೇಜಸ್ವಿನಿ ಪ್ರಕಾಶನ, ತುಮಕೂರು, ೧೯೮೨

ಕಬ್ಬಾಳು ಕುಳಿಯಲ್ಲಿ ಹುಲಿ: (ಸಂ) ಕ್ಯಾತನಹಳ್ಳಿ ರಾಮಣ್ಣ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೧೯೮೦

ಕರಪಾಲಬಸವ ಪುರಾಣ: ಪಿ.ಕೆ.ರಾಜಶೇಖರ, ಚೈತ್ರ ಪ್ರಕಾಶನ ಮೈಸೂರು ಜಿಲ್ಲೆ, ೧೯೯೫

ಕರಾವಳಿ ಜಾನಪದ: ಡಾ.ಪುರುಷೋತ್ತಮ ಬಿಳಿಮಲೆ, ಶಾರದಾ ಪ್ರೆಸ್, ಮಂಗಳೂರು, ೧೯೯೦

ಕರ್ನಾಟಕ ಜನಪದ ಕಥೆಗಳು: (ಪ್ರ.ಸಂ) ಎಚ್.ಎಲ್.ನಾಗೇಗೌಡ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೭೭

ಕರ್ನಾಟಕ ಜನಪದ ಕಥೆಗಳು: (ಸಂ) ರಾಮೇಗೌಡ, ತ. ವೆಂ. ಸ್ಮಾರಕ ಗ್ರಂಥ ಮಾಲೆ, ಮೈಸೂರು, ೧೯೯೬

ಕರ್ನಾಟಕ ಜನಪದ ಕಲೆಗಳ ಕೋಶ: (ಸಂ) ಹಿ.ಚಿ.ಬೋರಲಿಂಗಯ್ಯ, ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೬

ಕರ್ನಾಟಕ ಜನಪದ ಕಲೆಗಳು: (ಸಂ) ಗೊ.ರು.ಚನ್ನಬಸಪ್ಪ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೭೭

ಕರ್ನಾಟಕ ಜನಪದ ವೈದ್ಯ: (ಸಂ) ಮಳಲಿ ವಸಂತಕುಮಾರ್, ಪಂಚಮ ಪ್ರಕಾಶನ, ಮೈಸೂರು, ೧೯೭೯

ಕರ್ನಾಟಕ ಜನಪದ ಸ್ತ್ರೀ ದೈವಗಳ ಸಾಂಸ್ಕೃತಿಕ ಪದಕೋಶ: (ಸಂ) ಮಂಜುನಾಥ ಬೇವಿನಕಟ್ಟೆ

ಕರ್ನಾಟಕ ಜಾನಪದ ಚಿತ್ತಾರಗಳು ಹಾಗೂ ಶಿಲ್ಪಗಳು: ಮಹಾದೇವ ಮಾ.ಜಗತಾಪ, ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು, ೨೦೦೪

ಕರ್ನಾಟಕ ಜಾನಪದ ಸಮೀಕ್ಷೆ: ಜೀ.ಶಂ.ಪರಮಶಿವಯ್ಯ, ಕನ್ನಡ ಸಾಹಿತ್ಯ ಪರಿಷತ್ತು, ೧೯೯೨

ಕರ್ನಾಟಕ ಶಿಶುಪ್ರಾಸಗಳು: (ಸಂ) ಜಿ ವಿ.ದಾಸೇಗೌಡ

ಕರ್ನಾಟಕದ ಕುರುಬರು: ಡಾ.ಶಿವಾನಂದ ಗುಬ್ಬಣ್ಣವರ ,ಅಕ್ಷಯ ಪ್ರಕಾಶನ, ಧಾರವಾಡ, ೧೯೯೩

ಕರ್ನಾಟಕದ ಜನಪದ ಆಚರಣೆಗಳು: ಸ.ಚಿ.ರಮೇಶ್, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೦

ಕರ್ನಾಟಕದ ಜನಪದ ಚಿತ್ರಕಲೆ: ಎಸ್.ಸಿ.ಪಾಟೀಲ, ವೀರಶೈವ ಅಧ್ಯಯನ ಸಂಸ್ಥೆ, ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನ ಮಠ, ಗದಗ, ೧೯೯೩

ಕರ್ನಾಟಕದ ಬುಡಕಟ್ಟುಗಳು (ಸಂಪುಟ ೧): (ಸಂ) ಡಾ.ಹೆಚ್.ಜೆ.ಲಕ್ಕಪ್ಪಗೌಡ, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು. ೧೯೯೮

ಕರ್ನಾಟಕದ ಬುಡಕಟ್ಟುಗಳು (ಸಂಪುಟ ೨): (ಸಂ) ಹೆಚ್.ಜೆ.ಲಕ್ಕಪ್ಪಗೌಡ, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು, ೨೦೦೦

ಕರ್ನಾಟಕದ ಬುಡಕಟ್ಟುಗಳು: ಆರ್.ರಾಮಕೃಷ್ಣ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೨೦೦೭

ಕರ್ನಾಟಕದ ಹಬ್ಬಗಳು (ಹಿರಿಯರು ಹೇಳಿದ ಕಥೆಗಳು): ವಾಗೀಶ್ವರಿ ಶಾಸ್ತ್ರಿ, ವಾಗ್ದೇವಿ ಕಲಾನಿಕೇತನ, ತ್ಯಾಗರಾಜನಗರ, ಬೆಂಗಳೂರು, ೧೯೮೬

ಕಲೆ ಮತ್ತು ಹಬ್ಬ: ಎಸ್.ಕೆ.ಹೂಗಾರ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೭೭

ಕಲ್ಲಂಗಡಿ ಹಣ್ಣಿನ ಕಂಕನರಿ: ಜೀನಹಳ್ಳಿ ಸಿದ್ಧಲಿಂಗಪ್ಪ, ಪ್ರೇಮ ಪ್ರಕಾಶನ, ಶಿವಮೊಗ್ಗ ಜಿಲ್ಲೆ, ೧೯೯೮

ಕಾಗದದ ದೋಣಿ–೨ (ಲೇಖನ ಸಂಕಲನ): ಎಂ.ಎ.ಪೆಜತ್ತಾಯ, ದೇಸಿ ಪುಸ್ತಕ, ಬೆಂಗಳೂರು, ೨೦೧೧

ಕಾಡಿನೊಳಗೊಂದು ಜೀವ: ಕೆ.ಎಂ.ಚಿಣ್ಣಪ್ಪ, ನಿರೂಪಣೆ–ಟಿ.ಎಸ್.ಗೋಪಾಲ್, ನವಕರ್ನಾಟಕ ಪ್ರಕಾಶನ, ಬೆಂಗಳೂರು, ೨೦೧೦

ಕಾಡು ಬಿಡಲೊಲ್ಲದವರು: ಎಂ.ಬೈರೇಗೌಡ, ದಾಮಿನಿ ಸಾಹಿತ್ಯ, ಬೆಂಗಳೂರು, ೨೦೦೫

ಕಾಡುಗೊಲ್ಲ ಬುಡಕಟ್ಟು ವೀರರು: ಮೀರಾಸಾಬಿಹಳ್ಳಿ ಶಿವಣ್ಣ, ಸಿ.ವಿ.ಜಿ.ಪಬ್ಲಿಕೇಷನ್ಸ್, ಬೆಂಗಳೂರು, ೨೦೦೫

ಕಾಡುಗೊಲ್ಲರ ಕೋಲಾಟದ ಪದಗಳು: (ಸಂ) ಎನ್.ಮೋಹನ್ ಕುಮಾರ್, ಕರ್ನಾಟಕ ಜಾನಪದ ವಿಶ್ವವಿದ್ಯಾಲಯ, ಗೊಟಗೋಡಿ, ೨೦೧೩

ಕಾಡುಗೊಲ್ಲರ ಸಂಪ್ರದಾಯಗಳು ಮತ್ತು ನಂಬಿಕೆಗಳು: ಶಂಕರ ನಾರಾಯಣ ತೀ.ನಂ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೧೯೮೨

ಕಾಡುಗೊಲ್ಲರ ಸಂಸ್ಕೃತಿ: ಮೀರಾಸಾಬಿಹಳ್ಳಿ ಶಿವಣ್ಣ, ಸಿ.ವಿ.ಜಿ.ಪಬ್ಲಿಕೇಷನ್ಸ್, ಬೆಂಗಳೂರು ೨೦೦೪

ಕಾಡ್ಯಾನಾಟ: (ಸಂ) ಎ.ವಿ.ನಾವಡ, ಗಾಯತ್ರಿ ನಾವಡ

ಕಾನೂರು ಸುಬ್ಬಮ್ಮ ಹೆಗ್ಗಡತಿ: ಕುವೆಂಪು, ಉದಯರವಿ ಪ್ರಕಾಶನ, ಮೈಸೂರು, ೧೯೩೬

ಕುಣಬಿಯರು: ಹಿ. ಚಿ. ಬೋರಲಿಂಗಯ್ಯ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೦

ಕುರುಬರ ಮದುವೆಯ ಪದಗಳು: ಎಸ್.ಜಿ.ಸಿದ್ಧರಾಮಯ್ಯ, ೧೯೯೭

ಕುಸುಮಬಾಲೆ (ಕಾದಂಬರಿ): ದೇವನೂರು ಮಹಾದೇವ, ಅಭಿನವ ಪ್ರಕಾಶನ, ಬೆಂಗಳೂರು

ಕೂಡುಕಟ್ಟು (ಜಾನಪದ ಅಧ್ಯಯನ ಲೇಖನಗಳು): ಪುರುಷೋತ್ತಮ ಬಿಳಿಮಲೆ, ಆನಂದಕಂದ ಗ್ರಂಥಮಾಲೆ, ಮಲ್ಲಾಡಿ ಹಳ್ಳಿ, ಚಿತ್ರದುರ್ಗ ಜಿಲ್ಲೆ, ೧೯೯೭

ಕೂಸಾಯ್ತು ನಮ್ಮ ಕೊಮರಾಗೆ: (ಸಂ) ಎನ್.ಆರ್.ನಾಯಕ್

ಕೃಷಿ ಪದಕೋಶ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ಕೆಂಬಾರೆ(ಕವನ ಸಂಕಲನ): ಬಿ.ರಾಜಣ್ಣ, ಅಭಿರುಚಿ ಪ್ರಕಾಶನ, ೨೦೦೯

ಕೆರೆಗೆ ಹಾರವಾದ ಬಂದಮ್ಮನ ಇತಿಹಾಸ: ಎಸ್.ಆರ್.ಗುರುನಾಥ್, ವಾಲ್ಮೀಕಿ ಸಾಹಿತ್ಯ ಸಂಪದ ಹರ್ತಿಕೋಟೆ, ಚಿತ್ರದುರ್ಗ ಜಿಲ್ಲೆ, ೨೦೦೩

ಕೈಗಾರಿಕಾ ಜಾನಪದ : ಕೆ.ಆರ್.ಸಂಧ್ಯಾರೆಡ್ಡಿ, ಆರ್. ಆರ್. ಸಿ, ಉಡುಪಿ, ೧೯೯೭

ಕೊಂತಿಪೂಜೆ, ಒಂದು ಅಧ್ಯಯನ: ಕ್ಯಾತನಹಳ್ಳಿ ರಾಮಣ್ಣ

ಕೊಂತಿಪೂಜೆ: ಡಿ.ಲಿಂಗಯ್ಯ, ದಿನಕರ ಪ್ರಕಾಶನ, ಬೆಂಗಳೂರು, ೧೯೭೬

ಕೊಂಬೆ ರೆಂಬೆಲ್ಲ ಎಳಗಾಯಿ: ಅಂದನೂರು ಶೋಭಜ

ಕೊಡಗಿನ ಬುಡಕಟ್ಟುಗಳು: ಭಾಮಿನಿ ರಾಘವಯ್ಯ, ಪ್ರಸಾರಾಂಗ, ಮೈಸೂರು ವಿಶ್ವದ್ಯಾಲಯ, ಮೈಸೂರು, ೨೦೦೭

ಕೊಡಗಿನ ಸಾಂಸ್ಕೃತಿಕ ಜಾನಪದ ನೆಲೆಗಳು: ಎಂ.ಜಿ.ನಾಗರಾಜ್

ಕೊಪ್ಪಳ ಜಿಲ್ಲೆಯ ಜಾತ್ರೆಗಳು: (ಲೇ) ಪ್ರೊ. ಎಸ್. ಹೆಚ್. ಹೀರೆಮಠ್, (ಸಂ) ಕೆ.ಆರ್.ಸಂಧ್ಯಾರೆಡ್ಡಿ, ಮತ್ತು ದೇವೇಂದ್ರಕುಮಾರ ಹಕಾರಿ, ಗ್ರಾಮ ಸಂಸ್ಕೃತಿ ಮಾಲೆ ಕನ್ನಡ ಪುಸ್ತಕ ಪ್ರಾಧಿಕಾರ, ೨೦೦೦

ಕೋಟಿ ಚೆನ್ನಯ್ಯ: (ಸಂ) ವಾಮನ ನಂದಾವರ

ಕೋರಣ್ಯ ನೀಡವ್ವ ಕೋಡುಗಲ್ಲಯ್ಯನಿಗೆ: ಚಕ್ಕೆರೆ ಶಿವಶಂಕರ್, ಸಾಗರ್ ಪಬ್ಲಿಕೇಷನ್, ಬೆಂಗಳೂರು, ೧೯೮೮

ಕೋಲಾರ ಜಿಲ್ಲೆಯ ಆಚರಣೆಗಳು ಮತ್ತು ಸಂಪ್ರದಾಯಗಳು: ನರಸಿಂಹೇಗೌಡ ನಾರಣಾಪುರ, ಕಿರಣಕಿಶೋರ ಪ್ರಕಾಶನ, ೨೦೦೫

ಕೋಲಾರ ಜಿಲ್ಲೆಯ ಸ್ಥಳನಾಮಗಳು (ಸಾಮಾಜಿಕ ಭಾಷಾಶಾಸ್ತ್ರ ಅಧ್ಯಯನ): ವಿ.ಗೋಪಾಲಕೃಷ್ಣ, ಮುಂಡ ಪ್ರಕಾಶನ, ಬೆಂಗಳೂರು, ೨೦೧೨

ಗಣೆಯ ದನಿ (ವಿಮರ್ಶೆ ಮತ್ತು ಜನಪದ ಕಲಾವಿದರನ್ನು ಕುರಿತ ಲೇಖನಗಳು): ಮೀರಾಸಾಬಿಹಳ್ಳಿ ಶಿವಣ್ಣ, ಸಿ.ವಿ.ಜಿ.ಪಬ್ಲಿಕೇಷನ್ಸ್, ಬೆಂಗಳೂರು, ೨೦೦೦

ಗರತಿಯ ಹಾಡು: ಹಲಸಂಗಿಯ ಚೆನ್ನಮಲ್ಲಪ್ಪ ಲಿಂಗಪ್ಪ ರೇವಪ್ಪ ಮತ್ತು ಗೆಳೆಯರು, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ (ಕ.ಸಂ.ನಿ), ೧೯೯೦

ಗರಿಗೆದರಿದ ನವಿಲು: (ಪ್ರ.ಸಂ.) ಕಾಳೇಗೌಡ ನಾಗವಾರ, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು

ಗರುಡಗಂಬದ ದಾಸಯ್ಯ (ಸಣ್ಣ ಕತೆಗಳು): ಗೊರೂರು ರಾಮಸ್ವಾಮಿ ಅಯ್ಯಂಗಾರ್, ಸತ್ಯಶೋಧನ ಪ್ರಕಟಣ ಮಂದಿರ ಬೆಂಗಳೂರು, ೧೯೬೫

ಗಾದರಿ ಪಾಲನಾಯಕ: ವಿರೂಪಾಕ್ಷಿ ಪೂಜಾರಹಳ್ಳಿ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, ೧೯೯೯

ಗಾದೆಗಳು: ರಾಜಾ ಹೊಸಮಾಳ, ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ, ಮೈಸೂರು, ೧೯೮೮

ಗಾದೆಯ ಕಥೆಗಳು: ಬಿ. ಕೃಷ್ಣಪ್ಪ ರೆಡ್ಡಿ, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು, ೧೯೯೪

ಗಿರಿಜನ ಸಂಸ್ಕೃತಿ: ಸಂ. ಕಾಳೇಗೌಡ ನಾಗವಾರ ಮತ್ತು ಎನ್.ಹುಚ್ಚಪ್ಪ ಮಾಸ್ತರ್, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು, ೨೦೦೦

ಗುಬ್ಬಿ – ಗುಬ್ಬಚ್ಚಿ : ಶಿಕಾರಿ ಪುರ ಹರಿಹರೇಶ್ವರ, ಸಂಸ್ಕೃತಿ ಪಬ್ಲಿಷಿಂಗ್ ಹೌಸ್, ಮೈಸೂರು, ೨೦೧೯

ಗುಮಟೆಯ ಪದಗಳು: (ಸಂ) ಎಲ್.ಆರ್.ಹೆಗಡೆ

ಗೊಂಡರ ಪದಗಳು: ಎಲ್.ಆರ್.ಹೆಗಡೆ,

ಗೊಂದಲಿಗರ ಕಥೆಗಳು: (ಸಂ) ಕ್ಯಾತನಹಳ್ಳಿ ರಾಮಣ್ಣ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೧೯೭೨

ಗೊಂದಲಿಗರು: ಗಂಗಾಧರ ದೈವಜ್ಞ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦

ಗೊರವರ ಸಂಸ್ಕೃತಿ: ಸಂ. ಚಕ್ಕೆರೆ ಶಿವಶಂಕರ್, ಕರ್ನಾಟಕ ಸಾಹಿತ್ಯ ಅಕಾಡೆಮಿ, ೧೯೯೩

ಗೊಲ್ಲ ಕಡಗ: ಮೀರಾಸಾಬಿಹಳ್ಳಿ ಶಿವಣ್ಣ, ಸಿವಿಜಿ ಪಬ್ಲಿಕೇಷನ್ಸ್, ಬೆಂಗಳೂರು, ೧೯೯೯

ಗೌರಕ್ಕನ ಮುಕ್ತಕಗಳು ಮತ್ತು ಮೈದುನ ರಾಮಣ್ಣ: (ಸಂ) ಚೌಡೇಗೌಡ ಬೀಡನಹಳ್ಳಿ

ಗ್ರಾಮ ಮತ್ತು ಶಿಷ್ಟ ದೇವತೆಗಳು–ತೌಲನಿಕ ಅಧ್ಯಯನ: ಡಾ.ಎಸ್. ಲಕ್ಷ್ಮೀದೇವಿ, ಚಿತ್ಕಲಾ ಪ್ರಕಾಶನ, ಕುಪ್ಪಂ, ೨೦೦೭

ಗ್ರಾಮಜ್ಯೋತಿ: ಗೊ.ರು.ಚನ್ನಪ್ಪ, ಕೆ.ಆರ್.ಲಿಂಗಪ್ಪ ಅಭಿನಂದನಾ ಗ್ರಂಥ ಸಮಿತಿ, ಬೆಂಗಳೂರು, ೧೯೭೯

ಗ್ರಾಮದೇವತೆಗಳು (ಮಹಾ ಪ್ರಬಂಧ): ಸಿದ್ಧಲಿಂಗಯ್ಯ, ಮೂಲಭಾರತಿ ಪ್ರಕಾಶನ, ಬೆಂಗಳೂರು, ೧೯೯೭

ಗ್ರಾಮದೇವತೆಗಳು: ಡಿ.ಲಿಂಗಯ್ಯ, ಐ.ಬಿ.ಎಚ್.ಪ್ರಕಾಶನ, ಬೆಂಗಳೂರು, ೧೯೮೪

ಗ್ರಾಮದೇವತೆಗಳು: ಬಸವರಾಜ ನೆಲ್ಲಿಸರ, ೧೯೮೩

ಗ್ರಾಮಾಂತರ: ಎಚ್.ವಿ.ನಾಗೇಶ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೨೦೦೦

ಗ್ರಾಮಾಯಣ: ರಾವ್ ಬಹಾದ್ದೂರ್, ಉಪನ್ಯಾಸಮಾಲೆ, ಮೈಸೂರು, ೧೯೮೧

ಗ್ರಾಮೀಣ : ಎಂ.ಚಿದಾನಂದಮೂರ್ತಿ, ಬಾಪ್ಕೊ ಪ್ರಕಾಶನ, ಬೆಂಗಳೂರು, ೧೯೭೭

ಗ್ರಾಮೀಣ ಉಡುಗೆ ತೊಡುಗೆ:

ಗ್ರಾಮೀಣ ಪಶು ಸಾಕಣೆ:

ಗ್ರಾಮೀಣ ಬೇಟೆಗಳು:

ಗ್ರಾಮೀಣ ವೃತ್ತಿಗಳು:

ಈ ಮೇಲಿನ ನಾಲ್ಕು ಪುಸ್ತಕಗಳ ಸಂಪಾದಕರು ಡಾ.ಕೆ.ಆರ್.ಸಂಧ್ಯಾರೆಡ್ಡಿ ಮತ್ತು ಶ್ರೀ ದೇವೇಂದ್ರಕುಮಾರ ಹಕಾರಿ, ಗ್ರಾಮ ಸಂಸ್ಕೃತಿ ಮಾಲೆ, ಕನ್ನಡ ಪುಸ್ತಕ ಪ್ರಾಧಿಕಾರ, ೨೦೦೦

ಗ್ರಾಮೀಣ ಸಂವೇದನೆ: ಮಹಾದೇವ ಕಣವಿ, ಪ್ರತಿಮಾ ಪ್ರಕಾಶನ, ಗುಳೇದ ಗುಡ್ಡ, ಬಾಗಲಕೋಟೆ, ೧೯೯೯

ಚಿಗಟೇರಿ ಪದಕೋಶ: ಮುದೇನೂರು ಸಂಗಣ್ಣ

ಚಿತ್ರದುರ್ಗ ಜಿಲ್ಲಾ ಇತಿಹಾಸ ಅಧ್ಯಯನದ ವ್ಯಾಪಕತೆ ಮತ್ತು ಸಾಧ್ಯತೆ–ಒಂದು ಶತಮಾನ: ಲಕ್ಷ್ಮಣ ತೆಲಗಾವಿ, ವಾಲ್ಮೀಕಿ ಸಾಹಿತ್ಯ ಸಂಪದ, ಹರ್ತಿಕೋಟೆ, ೨೦೦೪

ಚಿತ್ರದುರ್ಗ ಜಿಲ್ಲೆಯ ಜನಪದ ಕಥೆಗಳು: (ಸಂ) ಜಿ.ವಿಶ್ವೇಶ್ವರಪ್ಪ

ಚಿತ್ರದುರ್ಗ ಜಿಲ್ಲೆಯ ಜಾನಪದ ಹಾಗೂ ಪರಿಶಿಷ್ಟ ಕಲೆಗಳು: ಮೀರಾಸಾಬಿಹಳ್ಳಿ ಶಿವಣ್ಣ

ಚಿತ್ರದುರ್ಗ ಜಿಲ್ಲೆಯ ವ್ಯವಸಾಯ ಜಾನಪದ: ಎಂ.ಜಿ.ಈಶ್ವರಪ್ಪ, ಕನ್ನಡ ಸಾಹಿತ್ಯ ಪರಿಷತ್ತು, ೧೯೯೫

ಚಿತ್ರದುರ್ಗ ಸುತ್ತಿನ ಜನಪದ ಕಾವ್ಯಗಳು: (ಸಂ) ಮೈಲಹಳ್ಳಿ ರೇವಣ್ಣ

ಚಿತ್ರದುರ್ಗದ ಎರಡು ಬುಡಕಟ್ಟುಗಳು ಮತ್ತು ಅವರ ನಡುವಣ ಜನಪದ ಸಾಹಿತ್ಯ: ಕೃಷ್ಣಮೂರ್ತಿ ಹನೂರ, ೧೯೯೨

ಜನಪದ ಆಟಗಳು: ಡಾ.ಚಕ್ಕೆರೆ ಶಿವಶಂಕರ್, ೨೦೦೯

ಜನಪದ ಒಗಟು ಕಥೆಗಳು: (ಸಂ) ಕುರುವ ಬಸವರಾಜ್

ಜನಪದ ಒಗಟುಗಳು: ಸೋಮಶೇಖರ ಇಮ್ರಾಪುರ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೮೯

ಜನಪದ ಕಥಾಮೃತ (ಸಂಪುಟ ೧): ಜಯಚಂದ್ರ ಎಂ.ಎ (ಧವಳಶ್ರೀ), ಪದ್ಮಶ್ರೀ ಪ್ರಕಾಶನ, ದೊಡ್ಡಮನೆ, ೧೯೬೭

ಜನಪದ ಕಥಾಮೃತ (ಸಂಪುಟ ೨): ಜಯಚಂದ್ರ ಎಂ.ಎ (ಧವಳಶ್ರೀ), ಪದ್ಮಶ್ರೀ ಪ್ರಕಾಶನ, ದೊಡ್ಡಮನೆ, ೧೯೬೮

ಜನಪದ ಕಥಾಲೋಕ: ಕೆ.ಆರ್.ಸಂಧ್ಯಾರೆಡ್ಡಿ, ಶಶಿ ಪಬ್ಲಿಕೇಷನ್ಸ್, ರಾಮನಗರ, ೨೦೧೨

ಜನಪದ ಕಥಾವಳಿ: ಲಕ್ಕಪ್ಪ ಗೌಡ ಹೆಚ್. ಜೆ, ಕರ್ನಾಟಕ ಸಹಕಾರಿ ಪ್ರಕಾಶನಮಂದಿರ, ಬೆಂಗಳೂರು, ೧೯೭೧

ಜನಪದ ಕಥಾಸಂಗಮ: (ಸಂ) ಡಿ.ಲಿಂಗಯ್ಯ, ದಿನಕರ ಪ್ರಕಾಶನ, ಬೆಂಗಳೂರು, ೧೯೭೮

ಜನಪದ ಖಂಡಕಾವ್ಯಗಳು: ಜೀ.ಶಂ.ಪರಮಶಿವಯ್ಯ, ಮೈಸೂರು, ಕನ್ನಡ ಸಾಹಿತ್ಯ ಪರಿಷತ್ತು, ೧೯೬೮,

ಜನಪದ ಗಣಿತ ಚಮತ್ಕಾರ: (ಸಂ) ಜೀನಹಳ್ಳಿ ಸಿದ್ಧಲಿಂಗಪ್ಪ

ಜನಪದ ಜೀವನ ಮತ್ತು ಕಲೆ: ಎಲ್.ಆರ್.ಹೆಗಡೆ, ಸಮಾಜ ಪುಸ್ತಕಾಲಯ, ಧಾರವಾಡ, ೧೯೭೭

ಜನಪದ ಝೇಂಕಾರ: (ಸಂ) ಬಿ.ಎಸ್.ಸ್ವಾಮಿ

ಜನಪದ ತಂತ್ರಜ್ಞಾನ: (ಸಂ) ಚಕ್ಕೆರೆ ಶಿವಶಂಕರ್, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ,

ಜನಪದ ನಿಘಂಟು: ಕ್ಯಾತನಹಳ್ಳಿ ರಾಮಣ್ಣ, ಅಚ್ಚಿ ಹೊತ್ತಗೆ ಕ್ಯಾತನಹಳ್ಳಿ, ಮಂಡ್ಯಜಿಲ್ಲೆ, ೧೯೮೭

ಜನಪದ ನುಡಿಗಟ್ಟುಗಳ ಕೋಶ: (ಸಂ) ಪ್ರೊ.ಸುಧಾಕರ

ಜನಪದ ಮತ್ತು ಗಿರಿಜನರ ಕಥೆಗಳು: (ಸಂ) ಎಲ್.ಆರ್.ಹೆಗಡೆ

ಜನಪದ ವೈದ್ಯ: (ಸಂ) ಟಿ.ಗೋವಿಂದರಾಜು, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು, ೨೦೦೩

ಜನಪದ ವೈದ್ಯ: ಮಳಲಿ ವಸಂತಕುಮಾರ್

ಜನಪದ ಶಿಶುಪ್ರಾಸಗಳು: (ಸಂ) ಶ್ರೀಕಂಠ ಕೂಡಿಗೆ

ಜನಪದ ಸಾಹಿತ್ಯ ದರ್ಶನದ ಎಲ್ಲಾ ಸಂಪುಟಗಳು: ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

ಜನಪದ ಸಾಹಿತ್ಯ ಪ್ರಕಾರಗಳು: (ಸಂ) ಶಂಕರನಾರಾಯಣ ತೀನಂ ಮತ್ತು ವೆಂಕಟೇಶ್ ಎಂ.ಎನ್, ಕನ್ನಡ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು, ೨೦೦೪

ಜನಪದ ಸಾಹಿತ್ಯ ರೂಪಗಳು: ರಾಮೇಗೌಡ, ೧೯೮೧

ಜನಪದ ಸಾಹಿತ್ಯದಲ್ಲಿ ಮಹಿಳೆ: ಕೆ.ಆರ್.ಸಂಧ್ಯಾರೆಡ್ಡಿ, ಕನ್ನಡ ಸಾಹಿತ್ಯ ಪರಿಷತ್ತು, ೧೯೯೫

ಜನಪದರು ನಾವು: ರಾಮಚಂದ್ರೇಗೌಡ.ಹಿ.ಶಿ, ೧೯೯೩

ಜಾನಪದ ಅಂತರ್ಯ: ವೈ.ಸಿ.ಭಾನುಮತಿ, ತಳಗವಾಡಿ ಪ್ರಕಾಶನ, ಮೈಸೂರು, ೨೦೦೩

ಜಾನಪದ ಆಯಾಮಗಳು: (ಪ್ರ.ಸಂ) ಬಸವರಾಜ ಸಬರದ, (ಸಂ) ಡಾ.ಹೆಚ್.ಟಿ.ಪೋತೆ, ಕನ್ನಡ ಅಧ್ಯಯನ ಸಂಸ್ಥೆ, ಗುಲ್ಬರ್ಗ ವಿಶ್ವವಿದ್ಯಾಲಯ, ಗುಲ್ಬರ್ಗ, ೨೦೦೯

ಜಾನಪದ ಕಲೆ–ಬದುಕು: ಕೆ.ಎಸ್.ಉಪಾಧ್ಯಾಯ, ಕರ್ನಾಟಕ ಸಂಘ, ಪುತ್ತೂರು, ೧೯೯೪

ಜಾನಪದ ಕ್ರೀಡೆಗಳು: ತುರುವನೂರು ಮಂಜುನಾಥ, ಪ್ರೆಸ್ ಕ್ಲಬ್ ಆಫ್ ಬೆಂಗಳೂರು, ೨೦೧೧

ಜಾನಪದ ಜಯಂತಿ: (ಸಂ) ಜೀನಹಳ್ಳಿ ಸಿದ್ಧಲಿಂಗಪ್ಪ

ಜಾನಪದ ಜಿಜ್ಞಾಸೆ: ಬಸವರಾಜ್ ನೆಲ್ಲಿಸರ, ಯಕ್ಷ ಪ್ರಕಾಶನ, ಸರಸ್ವತೀಪುರಂ, ಮೈಸೂರು, ೧೯೭೭

ಜಾನಪದ ನೀಳ್ಗತೆಗಳು: ಎಂ.ಎ.ಜಯಚಂದ್ರ, ಕೆ.ಎಸ್.ಮುದ್ದಪ್ಪ ಸ್ಮಾರಕ ಟ್ರಸ್ಟ್, ಕೃಷ್ಣಾಪುರದೊಡ್ಡಿ, ೨೦೦೭

ಜಾನಪದ ಪರಿಶೀಲನೆ: ಕೆ.ಆರ್.ಸಂಧ್ಯಾರೆಡ್ಡಿ, ಕನ್ನಡ ಸಾಹಿತ್ಯ ಪರಿಷತ್ತು,ಬೆಂಗಳೂರು, ೨೦೦೬

ಜಾನಪದ ಮತ್ತು ಗಿರಿಜನ ಕಥೆಗಳು: ಎಲ್.ಆರ್.ಹೆಗಡೆ, ಸಮಾಜ ಪುಸ್ತಕಾಲಯ, ಧಾರವಾಡ

ಜಾನಪದ ವೈಜ್ಞಾನಿಕ ಅಧ್ಯಯನದ ನೆಲೆಗಳು: (ಸಂ) ಹ.ಕ.ಜಯದೇವ ಮತ್ತು ಬರಗೂರು ರಾಮಚಂದ್ರಪ್ಪ, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ೧೯೯೦

ಜಾನಪದ ವೈದ್ಯಕೀಯ ಅಡುಗೆಗಳು: ಶಾಂತಿನಾಯಕ್, ಜಾನಪದ ಪ್ರಕಾಶನ, ಹೊನ್ನಾವರ, ೧೯೮೮

ಜಾನಪದ ಶೋಧ: ಹ.ಕ.ರಾಜೇಗೌಡ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೭

ಜಾನಪದ ಶೋಧನ: ಎಂ.ಪಿ.ಮಂಜಪ್ಪಶೆಟ್ಟಿ ಮಸಗಲಿ, ಮಸಗಲಿ ಪ್ರಕಾಶನ, ಮೈಸೂರು, ೨೦೧೦

ಜಾನಪದ ಸಂಕಥನ: ರಾಜೇಗೌಡ ಹೊಸಹಳ್ಳಿ, ಸ್ವಾತಿ ಪ್ರಕಾಶನ, ಬೆಂಗಳೂರು, ೧೯೯೯

ಜಾನಪದ ಸಂಯೋಜನೆ: ಜೀನಹಳ್ಳಿ ಸಿದ್ಧಲಿಂಗಪ್ಪ, ಪ್ರೇಮ ಪ್ರಕಾಶನ, ಜೀನಹಳ್ಳಿ, ೧೯೮೨

ಜಾನಪದ ಸಿಂಗಾರ: ಎಚ್.ಟಿ.ಪೋತೆ, ಕುಮಾರ ಪೂರ್ಣಿಮಾ ಪ್ರಕಾಶನ, ರಾಯಚೂರು, ೨೦೦೧

ಜಾನಪದ– ೧೯೯೧: (ಸಂ) ಜಿ.ಎಸ್. ಭಟ್ಟ, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು, ೧೯೯೩

ಜಾನಪದ– ಕೆಲವು ಅಧ್ಯಯನಗಳು: ಅಂಬಳಿಕೆ ಹಿರಿಯಣ್ಣ, ಕನ್ನಡ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು,೧೯೯೪

ಜಾನಪದ: ರಂಗಾರೆಡ್ಡಿ ಕೋಡಿರಾಂಪುರ, ಕರ್ನಾಟಕ ಜನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು, ೧೯೯೩

ಜಾನಪದ; ಕೆಲವು ಮುಖಗಳು: ಜೀ.ಶಂ. ಪರಮಶಿವಯ್ಯ, ಕರ್ನಾಟಕ ಸರ್ಕಾರಿ ಪ್ರಕಾಶನ ಮಂದಿರ, ೧೯೭೫

ಜಾನಪದವನ್ನು ಕುರಿತು: ಜಿ.ವಿ.ಡಿ, ಚೇತನ ಬುಕ್ ಹೌಸ್, ೧೯೯೬

ಜಾಲಾಟ: ಕೆ.ಚಿನ್ನಪ್ಪಗೌಡ, ಚಿಂತನ ಪ್ರಕಾಶನ, ಉಜಿರೆ, ೧೯೮೫

ಜೀವಿ ವೈವಿಧ್ಯ ನಮ್ಮ ಅಮೂಲ್ಯ ಸಂಪತ್ತು: ನಿರಂಜನ ಆರಾಧ್ಯ, ಸಂಕನೂರ ಎಸ್.ವಿ, ಡಾ.ವಿ.ಎನ್.ನಾಯಕ್ (ಅನುವಾದ), ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು, ಬೆಂಗಳೂರು, ೨೦೦೮

ತಂಬೂರಿ ಸಂಪ್ರದಾಯದ ಕಾವ್ಯಗಳು: (ಸಂ) ಅಂಬಳಿಕೆ ಹಿರಿಯಣ್ಣ

ತೀರ್ಥಹಳ್ಳಿ ಸುತ್ತಿನ ಲಾವಣಿಗಳು: (ಸಂ) ಅಂಬಳಿಕೆ ಹಿರಿಯಣ್ಣ.

ತುಂಗಭದ್ರ (ಕಾದಂಬರಿ): ಎಂ.ಕೆ.ಇಂದಿರಾ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕನ್ನಡ ಭವನ, ೨೦೦೬

ತುಳು ಜನಪದ ಕಾವ್ಯ (ಇಹಪರ ಲೋಕದೃಷ್ಟಿ): ರಾಜಶ್ರೀ, ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ತುಳು ಪೀಠ, ಮಂಗಳೂರು ವಿಶ್ವವಿದ್ಯಾಲಯ, ಮಂಗಳ ಗಂಗೋತ್ರಿ, ೨೦೦೮

ತುಳು ಜನಪದ ಸಾಹಿತ್ಯ: ವಿವೇಕ ರೈ

ತುಳುವರ ಮೂಲತಾನ ಆದಿ ಆಲಡೆ ಪರಂಪರೆ ಮತ್ತು ಪರಿವರ್ತನೆ: ಇಂದಿರಾ ಹೆಗ್ಗಡೆ, ನವಕರ್ನಾಟಕ ಪ್ರಕಾಶನ, ೨೦೧೨

ದಂಡೆ (ಕಾದಂಬರಿ): ಕಾ.ತ.ಚಿಕ್ಕಣ್ಣ, ಕಥನ ಪ್ರಕಾಶನ, ೨೦೦೨

ದಕ್ಷಿಣ ಕನ್ನಡ ಜಿಲ್ಲೆಯ ಜನಪದ ಗೀತೆಗಳು: ವಿದ್ವಾನ್ ಬಿ.ಕೇಶವಭಟ್ಟ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೬೬

ದಕ್ಷಿಣ ಕರ್ನಾಟಕದ ಒಡಪುಗಳು: (ಸಂ) ವ.ನಂ.ಶಿವರಾಮು

ದಕ್ಷಿಣ ಕರ್ನಾಟಕದ ಜನಪದ ರಂಗಭೂಮಿ: ರಾಜೇಂದ್ರ.ಡಿ.ಕೆ, ಮೈಸೂರು ವಿಶ್ವವಿದ್ಯಾಲಯ, ಕನ್ನಡ ಅಧ್ಯಯನ, ಮೈಸೂರು, ೧೯೮೦

ದಕ್ಷಿಣ ಕರ್ನಾಟಕದ ವಿವಾಹ ಶಾಸ್ತ್ರಗಳು: ಡಿ. ಹೆಚ್. ವಿಜಯಲಕ್ಷ್ಮಿ ಶ್ರೀನಿವಾಸಯ್ಯ, ಸುಮುಖ ಪ್ರಕಾಶನ, ೨೦೦೭

ದಾಂಗುಡಿ–ಜನಪದ ಅಧ್ಯಯನದ ಲೇಖನಗಳು: ಎಂ.ಎಂ.ಪಡಶೆಟ್ಟಿ, ನೆಲೆ ಪ್ರಕಾಶನ, ಸಿಂದಗಿ, ೨೦೦೭

ದಾಸಪ್ಪ ಜೋಗಪ್ಪ: ಹಿ.ಚಿ.ಬೋರಲಿಂಗಯ್ಯ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೭೮

ದೀಪದ ಕೆಳಗೆ ಕತ್ತಲೆ (ಗಾದೆಗಳು): ಮೈಲಹಳ್ಳಿ ರೇವಣ್ಣ, ರಾಜ್ ಪ್ರಕಾಶನ, ಮೈಸೂರು, ೨೦೦೩

ದೀಪಾರಾಧನೆ: ಶಾಂತಿನಾಯಕ್

ದುರುಗ ಜಾನಪದ: ಮೀರಾಸಾಬಿಹಳ್ಳಿ ಶಿವಣ್ಣ, ಸಿವಿಜಿ ಪಬ್ಲಿಕೇಷನ್ಸ್, ಬೆಂಗಳೂರು, ೧೯೯೯

ದೆವ್ವ ಜಾನಪದ: (ಸಂ) ಪ್ರೊ.ಡಿ.ಲಿಂಗಯ್ಯ ಮತ್ತು ಚಕ್ಕೆರೆ ಶಿವಶಂಕರ್, ೨೦೦೮

ದೇವರ್ ಬಂದಾವ್ ಬನ್ನೀರೆ: (ಸಂ) ಶಿವಾನಂದ ಗುಬ್ಬಣ್ಣನವರ

ದೇವಾಂಗ ಜನಾಂಗ: ಶಂಕರ್ ಎಂ.ಬುಚಡಿ, ದೇವಾಂಗ ಸಂಸ್ಕೃತಿ ಸಂಶೋಧನಾ ಕೇಂದ್ರ, ಬೆಂಗಳೂರು, ೨೦೦೭

ದೊಡ್ಡಮನೆ: ಎಚ್.ಎಲ್.ನಾಗೇಗೌಡ, ಐ.ಬಿ.ಎಚ್ ಪ್ರಕಾಶನ, ಬೆಂಗಳೂರು, ೧೯೭೨

ಧಾರವಾಡ ಜಿಲ್ಲೆಯ ಜಾನಪದ ಕಥೆಗಳು: (ಸಂ) ಟಿ.ಎಸ್.ರಾಜಪ್ಪ, ಕನ್ನಡ ಅಧ್ಯಯನ ಸಂಸ್ಥೆ, ಮಾನಸ ಗಂಗೋತ್ರಿ, ಮೈಸೂರು, ೧೯೭೫

ನನ್ನೂರು: ಎಚ್.ಎಲ್.ನಾಗೇಗೌಡರು, ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ, ಮೈಸೂರು, ೧೯೭೪

ನಮ್ಮ ಜನಪದ ಕಥೆಗಳು: (ಸಂ) ಎಲ್.ಆರ್.ಹೆಗಡೆ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೧೯೬೭

ನಮ್ಮ ಜನಪದ ನಂಬಿಕೆಗಳು: ದಾಸೇಗೌಡ ಜಿ.ವಿ., ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು, ೧೯೭೩

ನಮ್ಮ ಜನಪದ ವಾದ್ಯಗಳು: ಪಿ.ಕೆ.ರಾಜಶೇಖರ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೮೦

ನಲ್ನುಡಿ ನಿಘಂಟು: ಅಲ್ಲಿ ಸಾಬ್, ಶ್ರೀ ಶಾರದಾ ಮಂದಿರ ವಿದ್ಯಾಸಂಸ್ಥೆ, ಬೆಳಗೆರೆ, ಚಿತ್ರದುರ್ಗ ಜಿಲ್ಲೆ, ೨೦೦೫

ನಲ್ಲೂರು ದೊರೆಕಾಳಿ: ನಲ್ಲೂರು ಪ್ರಸಾದ್, ೨೦೦೦

ನವಲು ಕುಣಿದಾವ: (ಸಂ) ಮುದೇನೂರು ಸಂಗಣ್ಣ

ನಾ ಕಂಡ ಮಲೆನಾಡು: ಪುಟ್ಟಣ್ಣ ತ್ಯಾವಂದೂರು, ಸ್ವಂತ ಪ್ರಕಾಶನ, ಶಿವಮೊಗ್ಗ, ೧೯೯೭

ನಾನು ಕಂಡ ಮಲೆನಾಡು: ವೈ. ಎಸ್. ಪುಟ್ಟಣ್ಣ, ಸಮರ್ಥ ಪ್ರಕಾಶನ, ಶಿವಮೊಗ್ಗ, ೧೯೯೧–೨೦೦೧

ನಾವು ನಮ್ಮವರು –ವಿಜಾಪುರ ಹರಳಯ್ಯ ಸಮಗಾರರ ಒಂದು ಪರಿಚಯ ದೀರ್ಘ ಪ್ರಬಂಧ: ಹೇಮಂತ.ಎಮ್. ಭೂತನಳ ಮತು ಚೆನ್ನಮ್ಮ ಟಿ.ಕಬಾಡೆ, ಅಪ್ಪಾಜಿ ಪ್ರಕಾಶನ, ವಿಜಾಪುರ, ೨೦೦೮

ನಿಶಬುದದೆಡೆಗೆ (ಸಂಸ್ಕೃತಿ ಸ್ಮರಣೆ): ಕಾ.ತ.ಚಿಕ್ಕಣ್ಣ, ಸುಮುಖ ಪ್ರಕಾಶನ, ೨೦೦೭

ನಿಸರ್ಗ: ಮಿರ್ಜಿ ಅಣ್ಣಾರಾಯ

ನೇಕಾರ ವೃತ್ತಿ ಪದಕೋಶ: (ಸಂ) ಸಾಂಬಮೂರ್ತಿ

ನೇಕಾರ ಸಮುದಾಯ ಸಂಸ್ಕೃತಿ ಮಹಿಳೆ ಪ್ರಬಂಧ: ಜಾಜಿ ದೇವೇಂದ್ರಪ್ಪ, ಕರ್ನಾಟಕ ಸಾಹಿತ್ಯ ಅಕಾಡೆಮಿ

ಪಡಸಾಲೆಯ ಪವಾಡಗಳು (ಜಾನಪದ ಕಥಾಕೋಶ): ಎಂ.ಎ.ಜಯಚಂದ್ರ, ಮುದ್ದುಶ್ರೀ ಗ್ರಂಥಮಾಲೆ, ಕೃಷ್ಣಾಪುರದೊಡ್ಡಿ, ೨೦೦೭

ಪಡಿ ನೆರಳು: (ಸಂ) ಡಿ.ಲಿಂಗಯ್ಯ, ಕನ್ನಡ ಕಲಾ ಸಂಘ(ರಿ), ಶಿಡ್ಲಘಟ್ಟ, ೧೯೭೧

ಪದವವೆ ನಮ್ಮ ಎದೆಯಲ್ಲಿ: (ಸಂ) ಹೆಚ್.ಎಲ್.ನಾಗೇಗೌಡ, ಬೆಂಗಳೂರು ವಿಶ್ವವಿದ್ಯಾಲಯ, ೧೯೭೬,

ಪಯಣ: ಲಕ್ಷ್ಮಣ ಕೊಡಸೆ, ೨೦೧೧

ಪಶುವೈದ್ಯ ಚಿಂತಾಮಣಿ: ಶಾಬಾದಿಮಠ ಬುಕ್ ಡಿಪೋ, ಗದಗ

ಪಶುವೈದ್ಯ ಸಂಜೀವಿನಿ: ಪಂಡಿತ ರೇವಣ ಶಾಸ್ತ್ರಿಗಳು ಬ್ರಹ್ಮತೀರ್ಥಾಶ್ರಮ, ದ್ಯಾವಮ್ಮನ ಹಳ್ಳಿ

ಪಶುವೈದ್ಯಕೀಯ ಮತ್ತು ಪಶು ಸಂಗೋಪನೆ (ಪಾರಿಭಾಷಿಕ ಶಬ್ದಕೋಶ): ಕನ್ನಡ ಅಧ್ಯಯನ ವಿಭಾಗ, ಕೃಷಿ ವಿಶ್ವವಿದ್ಯಾಲಯ, ಬೆಂಗಳೂರು, ೨೦೦೨

ಪಾಂಚಾಳ ವೃತ್ತಿ ಪದಕೋಶ: (ಸಂ) ಡಿ.ಪಾಂಡುರಂಗ ಬಾಬು

ಪಾರಿಭಾಷಿಕ ಪದಕೋಶ (ತೋಟಗಾರಿಕೆ ಇಲಾಖೆ): ಸರ್ಕಾರಿ ಮುದ್ರಣಾಲಯ, ಬೆಂಗಳೂರು

ಪಾರಿಭಾಷಿಕ ಪದಕೋಶ (ಸಹಕಾರಿ ಇಲಾಖೆ): ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ ಸರ್ಕಾರಿ ಮುದ್ರಣಾಲಯ, ಬೆಂಗಳೂರು

ಪಿರಿಯಾಪಟ್ಟಣ ಕಾಳಗ: (ಸಂ) ಪಿ.ಕೆ.ರಾಜಶೇಖರ್

ಪುಟನೆಗೆದ ಮಠದೊಳಗಣ ಬೆಕ್ಕು: ಪ್ರೊ.ಸುಧಾಕರ

ಪುಟ್ಟಮಲ್ಲಿಗೆ ಹಿಡಿತುಂಬ (ಜನಪದ ಗೀತೆಗಳು): ವೈ.ಸಿ.ಭಾನುಮತಿ, ೨೦೦೧

ಪುಸ್ತಕಲೋಕ: (ಸಂ) ಜೆ.ಎನ್.ಶ್ಯಾಮರಾವ್, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೨೦೧೨

ಪೆಟ್ಟೋಲೆ ಪಳಮೆ: (ಸಂ) ಡಿ.ನಡಿಕೇರಿಯಂಡ ಚಿಣ್ಣಪ್ಪ, ಪ್ರಕಾಶನ, ೨೦೧೨ :

ಪ್ರಾಣಿ ಕಥೆಗಳು: (ಸಂ) ಕೆ.ಆರ್.ಸಂಧ್ಯಾರೆಡ್ಡಿ, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು, ೨೦೧೦

ಪ್ರಾಣಿ ಪರಿಸರ: ಕೃಷ್ಣಾನಂದ ಕಾಮತ್, ಕನ್ನಡ ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ೧೯೮೫

ಫ್ಲೀಟರು ಸಂಗ್ರಹಿಸಿದ ಲಾವಣಿಗಳು: (ಸಂ) ಕ್ಯಾತನಹಳ್ಳಿ ರಾಮಣ್ಣ, ಕನ್ನಡ ಅಧ್ಯಯನ ಸಂಸ್ಥೆ, ಮಾನಸ ಗಂಗೋತ್ರಿ, ಮೈಸೂರು

ಬಂಗ (ಕವನ ಸಂಕಲನ): ಬಿ.ರಾಜಣ್ಣ, ಕುವೆಂಪು ಪ್ರಕಾಶನ, ೨೦೧೧

ಬಂಗಾರ ಕೂದಲ ಚೈರಾಣಿ (ಜನಪದ ಕಥೆಗಳ ಸಂಗ್ರಹ): (ಸಂ) ಎಂ.ಜಿ.ಈಶ್ವರಪ್ಪ, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು, ೧೯೯೩

ಬಿಸಿಲು ಮಳೆ (ಕವನ ಸಂಕಲನ): ಬಿ ರಾಜಣ್ಣ, ೧೯೭೦

ಬೀದರ ಜಿಲ್ಲೆಯ ಆಣೀಪಿಣೀ ಹಾಡುಗಳು: (ಸಂ) ಮ.ಮಾ.ಬೋರಾಳ್‌ಕರ್, ಪ್ರಕೃತಿ ಪ್ರಕಾಶನ, ಹುಮನಾಬಾದ್, ಬೀದರ್, ೨೦೦೪

ಬೀದಿ ಮಕ್ಕಳು ಬೆಳೆದೋ: (ಸಂ) ಕಾಳೇಗೌಡ ನಾಗವಾರ

ಬುಡಕಟ್ಟು ಮಹಾಕಾವ್ಯ ಮಾಲೆ ಹತ್ತು ಅಪರೂಪದ ಬುಡಕಟ್ಟುಗಳ ಕಾವ್ಯ: (ಸಂ) ಹಿ.ಚಿ.ಬೋರಲಿಂಗಯ್ಯ, ಕನ್ನಡ ವಿಶ್ವವಿದ್ಯಾಲಯ, ಹಂಪಿ,

ಬುಡ್ಗ ಜಂಗಮ: ಬಾಲಗುರುಮೂರ್ತಿ, ಪ್ರತಾಪ ರಾ ಬಹುರೂಪಿ,ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೨೦೦೮

ಬುನಾದಿ–ಜಾನಪದೀಯ ಲೇಖನಗಳು: ಸ.ಚಿ.ರಮೇಶ್, ಅಂಶು ಪ್ರಕಾಶನ, ಹೊಸಪೇಟೆ, ೨೦೦೫

ಬೆಳವಲ ಬೆಳಕು: (ಸಂ) ಜಿ.ಬಿ.ಖಾಡೆ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೮೦

ಬೇಟೆ–ಸಾಂಸ್ಕೃತಿಕ ಪದಕೋಶ: ಸ.ಚಿ.ರಮೇಶ್, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೧

ಬೇಟೆ: ನರೇಂದ್ರ ರೈ ದೇರ್ಲ, ಕನಸು ಪ್ರಕಾಶನ, ಪುತ್ತೂರು ತಾಲ್ಲೂಕು, ೨೦೦೭

ಬೇಟೆಯ ನೆನಪುಗಳು: ಕೆದಂಬಾಡಿ ಜತ್ತಪ್ಪ ರೈ, ಕನ್ನಡ ಸಂಘ, ಪುತ್ತೂರು, ೧೯೭೫

ಬೈಗು (ಆತ್ಮಕಥನ): ಶರಣಗೌಡ ಎರಡೆತ್ತಿನ, ಕಿಕ್ಕೇರಿ ಪಬ್ಲಿಕೇಷನ್ಸ್, ಬೆಂಗಳೂರು, ೨೦೦೯

ಬೈಗುಳಗಳಲ್ಲಿ ಮಹಿಳೆ: ಹಂದ್ರಾಳ ಗವಿಸಿದ್ಧಪ್ಪ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೦

ಬೋರೆ ದೇವರು: ಡಿ.ಲಿಂಗಯ್ಯ, ದಿನಕರ ಪ್ರಕಾಶನ, ಬೆಂಗಳೂರು, ೧೯೭೬

ಭೂತಾರಾಧನೆ ಒಂದು ಅಧ್ಯಯನ (ಮಹಾ ಪ್ರಬಂಧ): ಚಿನ್ನಪ್ಪ ಗೌಡ ಕೆ, ಮಂಗಳ ಗಂಗೋತ್ರಿ, ೧೯೮೮

ಭೂಮಿ ಹುಣ್ಣಿಮೆ (ಜಾನಪದ ಲೇಖನಗಳು): ಶ್ರೀಕಂಠ ಕೂಡಿಗೆ, ದಖನ್ ಪಬ್ಲಿಷರ್ಸ್ ಡಿಸ್ಟ್ರಿಬ್ಯೂಟರ್ಸ್, ಬೆಂಗಳೂರು, ೧೯೮೨

ಮಂಗನ ಬ್ಯಾಟೆ: ಕಲ್ಕುಳಿ ವಿಠಲ್ ಹೆಗ್ಗಡೆ, ೨೦೧೨

ಮಂಡ್ಯ ಜಿಲ್ಲೆಯ ಜನಪದ ಕಥೆಗಳು: (ಸಂ) ಎಂ.ನಾರಾಯಣಗೌಡ, ಸಂಯುಕ್ತ ಪ್ರಕಾಶನ, ಮೈಸೂರು, ೧೯೭೬

ಮಂಡ್ಯ ಜಿಲ್ಲೆಯ ಜಾತ್ರೆಗಳು: (ಲೇ) ಜಿ.ವಿ.ಡಿ, (ಸಂ) ಕೆ.ಆರ್.ಸಂಧ್ಯಾರೆಡ್ಡಿ, ಮತ್ತು ದೇವೇಂದ್ರಕುಮಾರ ಹಕಾರಿ, ಗ್ರಾಮ ಸಂಸ್ಕೃತಿ ಮಾಲೆ ಕನ್ನಡ ಪುಸ್ತಕ ಪ್ರಾಧಿಕಾರ, ೨೦೦೦

ಮಣ್ಣಿನ ಮಿಡಿತ: (ಸಂ) ಡಿ.ಲಿಂಗಯ್ಯ, ಸಾಹಿತ್ಯ ಪ್ರಕಾಶನ, ಪೀಹಳ್ಳಿ, ಮಂಡ್ಯ, ೧೯೬೯

ಮನದಾಳದ ಕನಸುಗಳು: (ಪ್ರ.ಸಂ) ಕಾಳೇಗೌಡ ನಾಗವಾರ, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು

ಮನೆಮದ್ದು: ಓ.ಎಲ್.ದೇವರಾಜ್

ಮರಗಳ ಪರಿಚಯ: ಸಿ.ಡಿ.ಪಾಟೀಲ, ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು, ಬೆಂಗಳೂರು, ೨೦೦೧

ಮಲೆ ಮಾದೇಶ್ವರ: ಪಿ.ಕೆ.ರಾಜಶೇಖರ್

ಮಲೆಗಳಲ್ಲಿ ಮದುಮಗಳು: ಕುವೆಂಪು, ಉದಯರವಿ ಪ್ರಕಾಶನ, ಮೈಸೂರು, ೧೯೭೪

ಮಲೆನಾಡಿನ ಚಿತ್ರಗಳು: ಕುವೆಂಪು, ಉದಯರವಿ ಪ್ರಕಾಶನ, ಮೈಸೂರು, ೧೯೮೦

ಮಲೆನಾಡಿನ ಶಿಕಾರಿ: (ಸಂ) ಎಂ.ಪಿ.ಮಂಜಪ್ಪಶೆಟ್ಟಿ ಮಸಗಲಿ

ಮಲೆನಾಡು ಜಾನಪದ: ಎಚ್.ತಿಪ್ಪೇರುದ್ರ, ಕುವೆಂಪು ವಿಶ್ವವಿದ್ಯಾಲಯ

ಮಲೆನಾಡು ಶೈವ ಒಕ್ಕಲಿಗರು ಜಾನಪದೀಯ ಅಧ್ಯಯನ: ವೈ.ಸಿ.ಭಾನುಮತಿ, ಕೇಶವ ಪ್ರಕಾಶನ, ಮೈಸೂರು, ೧೯೯೪

ಮಲೆಯ ಮಾದಯ್ಯನ ಸಾಂಸ್ಕೃತಿಕ ಚರಿತ್ರೆ: ಮಹಾದೇವ ಶಂಕನಪುರ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೧

ಮಹಿಳಾ ಜಾನಪದ: (ಸಂ) ಕೆ.ಆರ್.ಸಂಧ್ಯಾರೆಡ್ಡಿ, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ೨೦೦೩

ಮಹಿಳೆ ಮತ್ತು ಸಂಸ್ಕೃತಿ: ಹಳೆಮನೆಯ ರಾಜಶೇಖರ, ಸ್ನೇಹಾ ಪ್ರಿಂಟರ್ಸ್ ಬೆಂಗಳೂರು, ೨೦೦೮

ಮಳೆ ಒಂದು ಜಾನಪದೀಯ ಅಧ್ಯಯನ: ಎಸ್.ಪಿ.ಪದ್ಮಪ್ರಸಾದ್, ೧೯೯೪

ಮಾಗಡಿ ಕೆಂಪೇಗೌಡ: ಪಿ.ಕೆ.ರಾಜಶೇಖರ್

ಮಾಯಾಲೋಕ: ಕೆ.ಪಿ.ಪೂರ್ಣಚಂದ್ರತೇಜಸ್ವಿ

ಮುಂಗೋಳಿ: ತ.ಚಿ.ಚಲುವೇಗೌಡ, ತಳಗವಾದಿ ಪ್ರಕಾಶನ, ಮೈಸೂರು, ೧೯೮೩

ಮುಂಜಾವು (ಕಾದಂಬರಿ): ಕಾ.ತ.ಚಿಕ್ಕಣ್ಣ, ಕೊಪ್ಪಲು ಪ್ರಕಾಶನ, ೧೯೮೯

ಮೂವತ್ತು ಜನಪದ ಕಥೆಗಳು: (ಸಂ) ಕೆ.ಆರ್.ಸಂಧ್ಯಾರೆಡ್ಡಿ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೮೦

ಮೈಲಾರಲಿಂಗನ ಕಾವ್ಯ: ಸಂ. ಚಕ್ಕೆರೆ ಶಿವಶಂಕರ್, ಕರ್ನಾಟಕ ಸಾಹಿತ್ಯ ಅಕಾಡೆಮಿ, ನೃಪತುಂಗ ರಸ್ತೆ, ಬೆಂಗಳೂರು–೨, ೧೯೮೭

ಮೊರಸು ಒಕ್ಕಲಿಗರು(ಒಂದು ಸಾಂಸ್ಕೃತಿಕ ಅಧ್ಯಯನ): ಎಂ.ಎಚ್.ನಾಗರಾಜು, ಗೋಧೂಳಿ ಪ್ರಕಾಶನ, ಬೆಂಗಳೂರು, ೧೯೯೧

ಮ್ಯಾಸ ಮಂಡಲ (ಮ್ಯಾಸ ಬೇಡ ಬುಡಕಟ್ಟಿನ ಕ್ಷೇತ್ರಾಧ್ಯಯನ ಲೇಖನಗಳು): ಮೀರಾಸಾಬಿಹಳ್ಳಿ ಶಿವಣ್ಣ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು

ಯಕ್ಷಗಾನ ಕಾವ್ಯಗಳು: (ಸಂ) ಹ.ಕ.ರಾಜೇಗೌಡ

ರತ್ನಗಿರಿ (ಸ್ಮರಣ ಸಂಚಿಕೆ): ಕೆ.ವಿ.ಮುದ್ದವೀರಪ್ಪ, ಕನ್ನಡ ಸಾಹಿತ್ಯ ಪರಿಷತ್ತು, ಆಂಧ್ರ, ೨೦೧೩

ರಾಜಲೋಹಗಳು: ಕೆ.ಎಸ್.ಲಕ್ಷ್ಮಣ್‌ರಾವ್

ರೈತನಾಗುವ ಹಾದಿಯಲ್ಲಿ (ಆತ್ಮಕಥೆ): ಎಂ.ಎ.ಪೆಜತ್ತಾಯ, ದೇಸಿ ಪುಸ್ತಕ, ಬೆಂಗಳೂರು, ೨೦೧೧

ರೋಗ ಜಾನಪದ: (ಸಂ) ಪ್ರೊ.ಡಿ.ಲಿಂಗಯ್ಯ, ೨೦೦೮

ಲಂಬಾಣಿ ಜನಪದ ಕಥೆಗಳು: ಸೋಮಣ್ಣ ಹೊಂಗಳ್ಳಿ, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು, ೧೯೯೪

ಲಂಬಾಣಿಗಳು ಜನಪದ ಗೀತೆಗಳು: ಬೆನಕನಹಳ್ಳಿ ಜಿ ನಾಯಕ್, ೧೯೮೧

ಲಿಂಗ ಮತ್ತು ಕಂತೆ: ಸತ್ಯನಾರಾಯಣ ಭಟ್.ಪಿ, ಆರ್.ಆರ್.ಸಿ.ಉಡುಪಿ, ೧೯೯೪

ಲಿಂಗಾಯತ ಸಂಸ್ಕಾರಗಳು: ಶಿವಾನಂದ ಗುಬ್ಬಣ್ಣವರ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೮೪

ಲೀಲಾವತಿ ಪದ್ಮಾವತಿ (ಜನಪದ ಕಥೆಗಳ ಸಂಗ್ರಹ): ಕೃಷ್ಣಮೂರ್ತಿ ಹನೂರ, ಚಿತ್ರದುರ್ಗ ಜಿಲ್ಲೆ ಜನಪದ ಸಾಹಿತ್ಯ ಪ್ರಕಟಣಾ ಸಮಿತಿ, ಚಿತ್ರದುರ್ಗ, ೧೯೭೮

ಲೌಕಿಕ ಸಂಪ್ರದಾಯದ ಚೌಡಿಕೆ ಕಾವ್ಯಗಳು: (ಸಂ) ಅಂಬಳಿಕೆ ಹಿರಿಯಣ್ಣ

ವಿಶಿಷ್ಟ ಜಾನಪದ: ಹೆಚ್.ಜೆ.ಲಕ್ಕಪ್ಪಗೌಡ, ಬಿ.ಆರ್.ಪ್ರಾಜೆಕ್ಟ್, ೧೯೮೪

ವಿಶ್ವಕರ್ಮರ ಶಬ್ದಕೋಶ: ಎಚ್.ಎಚ್.ಗಂಗಾಧರಾಚಾರ್

ವೀರಶೈವಧರ್ಮ– ಭಾರತೀಯ ಸಂಸ್ಕೃತಿ: ಎಂ.ಚಿದಾನಂದಮೂರ್ತಿ

ವೈಕುಂಠ ಬೀದಿ (ಕರ್ನಾಟಕ ಸಾರ್ವಭೌಮ ಬೇಲೂರು ಕೃಷ್ಣಮೂರ್ತಿಯವರ ಆತ್ಮಕಥೆ): ಕಣ್ವ ಪ್ರಕಾಶನ, ಬೆಂಗಳೂರು, ೨೦೦೯

ವೈದ್ಯರ ಹಾಡುಗಳು: (ಸಂ) ಎ.ವಿ.ನಾವಡ, ೧೯೯೦

ವೈಶಾಖ (ಕಾದಂಬರಿ): ಚದುರಂಗ, ಕಾವ್ಯಾಲಯ, ಮೈಸೂರು

ಶಂಕರಭಟ್ಟ ನಿಘಂಟು:

ಶಿವಗಂಗೆ ಸುತ್ತಿನ ಜನಪದ ಕಥೆಗಳು: (ಸಂ) ಸುಧಾಕರ, ಕನ್ನಡ ಸಾಹಿತ್ಯ ಪರಿಷತ್ತು, ೧೯೮೨

ಶಿವಮೊಗ್ಗ ಜಿಲ್ಲೆಯ ಗೊಂದಲಿಗರ ಕಥೆಗಳು: ಕ್ಯಾತನಹಳ್ಳಿ ರಾಮಣ್ಣ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೧೯೭೫

ಶಿವಮೊಗ್ಗ ಜಿಲ್ಲೆಯ ಜನಪದ ಕಥೆಗಳು: ಅಂಬಳಿಕೆ ಹಿರಿಯಣ್ಣ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೧೯೭೬

ಶಿವಾಚಾರ ನಗರ್ತರು: (ಲೇ) ಇಂದಿರಾ ಶಿವಣ್ಣ, ನಗರ್ತ ಮಹಿಳಾ ಸಂಘ, ಬೆಂಗಳೂರು, ೨೦೦೯

ಶೀಗೀ ಹಾಡುಗಳು– ಬೀದರ್ ಜಿಲ್ಲೆ: ರಾಜೇಂದ್ರ ಯರನಾಳೆ.

ಶ್ರೀ ಕೃಷ್ಣ ಪಾರಿಜಾತ: ಆರ್.ಜಿ.ಕುಲಕರ್ಣಿ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ೧೯೭೨

ಸಂಸಾರಿ ಹೆಚ್ಚೋ ಸಂನ್ಯಾಸಿ ಹೆಚ್ಚೋ: (ಸಂ) ಜಯಚಂದ್ರ ಎಂ.ಎ. (ಧವಳಶ್ರೀ), (ಪ್ರ.ಸಂ.) ಹಂ.ಪ. ನಾಗರಾಜಯ್ಯ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೮೧

ಸಂಸ್ಕೃತಿ ದರ್ಶನ: ನಿಂಗಪ್ಪ, ಸೂರ್ಯ ಪ್ರಕಾಶನ, ಮಲ್ಲಾಡಿಹಳ್ಳಿ, ಚಿತ್ರದುರ್ಗ ಜಿಲ್ಲೆ, ೨೦೦೫

ಸಂಸ್ಕೃತಿ ಮಹಿಳಾ ಮಾಲಿಕೆ ಪ್ರಬಂಧ: ಕುಶಾಲ ಬರಗೂರು, ಕರ್ನಾಟಕ ಸಾಹಿತ್ಯ ಅಕಾಡೆಮಿ

ಸಂಸ್ಕೃತಿ ಮಹಿಳಾ ಮಾಲಿಕೆ (೯ ಸಂಪುಟಗಳು): (ಸಂ) ಹೆಚ್.ಜೆ.ಲಕ್ಕಪ್ಪಗೌಡ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು

ಸವದತ್ತಿ ಎಲ್ಲಮ್ಮ: ಚೆನ್ನಣ್ಣ ವಾಲೀಕಾರ, ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ, ಮೈಸೂರು, ೧೯೯೧

ಸಿದ್ಧಿಯರ ಕಥೆಗಳು: ಎಲ್.ಆರ್.ಹೆಗಡೆ, ಸಮಾಜ ಪುಸ್ತಕಾಲಯ, ಧಾರವಾಡ, ೧೯೭೭

ಸುವರ್ಣ ಜನಪದ ಕಾವ್ಯ: (ಸಂ) ಕೆ.ಆರ್.ಸಂಧ್ಯಾರೆಡ್ಡಿ, ಎಸ್.ಜಿ. ಸಿದ್ದರಾಮಯ್ಯ ಅವರೊಂದಿಗೆ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೨೦೦೬

ಸೇರಿಗೆ: (ಸಂ) ಕೆ.ಚಿನ್ನಪ್ಪಗೌಡ, ಮದಿಪು ಪ್ರಕಾಶನ, ಮಂಗಳ ಗಂಗೋತ್ರಿ, ೨೦೦೦

ಸೋಬಾನೆ ಚಿಕ್ಕಮ್ಮನ ಪದಗಳು: ಹೆಚ್.ಎಲ್.ನಾಗೇಗೌಡ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೭೨

ಸ್ಥಳನಾಮ ಅಧ್ಯಯನಗಳು: ವಿ.ಗೋಪಾಲಕೃಷ್ಣ, ಮುಂಡ ಪ್ರಕಾಶನ, ಬೆಂಗಳೂರು, ೨೦೧೨

ಸ್ಥಳನಾಮಗಳ ಅಧ್ಯಯನ: (ಸಂ) ಪ್ರೊ.ಡಿ.ಲಿಂಗಯ್ಯ ಮತ್ತು ಡಾ.ಚಕ್ಕೆರೆ ಶಿವಶಂಕರ್

ಹಕ್ಕಿಯ ಪಯಣ: ಡಿ.ವಿ.ಜಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ೧೯೮೩

ಹಗೇವು ತುಂಬ್ಯಾವೆ ಹದಿನಾರು: ವ.ನಂ.ಶಿವರಾಮು, ಮಂಡ್ಯ ಜಿಲ್ಲೆ ಕಲಾಮೇಳ ಸ್ವಾಗತ ಸಮಿತಿ, ಮದ್ದೂರು ತಾಲ್ಲೂಕು, ೧೯೯೭

ಹಚ್ಚೆ–ಒಂದು ಜಾನಪದ ಕಲೆ: ಎಚ್.ಎಂ.ಮಹೇಶ್ವರಯ್ಯ, ಐ.ಬಿ.ಎಚ್.ಪ್ರಕಾಶನ, ಗಾಂಧಿನಗರ, ಬೆಂಗಳೂರು, ೧೯೮೮

ಹಠಮಾರಿ ಹೆಣ್ಣು ಮತ್ತು ಇತರ ಜನಪದ ಕಥೆಗಳು: (ಸಂ) ಬಸವರಾಜ್ ನೆಲ್ಲಿಸರ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೮೨

ಹರದೇಶಿ ನಾಗೇಶಿ ಸಂಸ್ಕೃತಿ: ಶೈಲಜಾ ಹಿರೇಮಠ,

ಹಳ್ಳಿಯ ಹಾಡುಗಳು (ನವ ಸಾಕ್ಷರರಿಗಾಗಿ): ಕೆ.ಆರ್.ಸಂಧ್ಯಾರೆಡ್ಡಿ, ಹಂಪಿ ವಿಶ್ವವಿದ್ಯಾಲಯ, ೧೯೯೪

ಹಳ್ಳಿಯ ಹಾಡುಗಳು: ಗೊರೂರು ರಾಮಸ್ವಾಮಿ ಅಯ್ಯಂಗಾರ್, ೧೯೮೪

ಹಾಯ್‌ಕಲ್ಲಿನ ಕರಿಭಂಟ: ಕೆ.ಆರ್.ಸಂಧ್ಯಾರೆಡ್ಡಿ, ಸಮಯಾ ಪ್ರಕಾಶನ, ಬೆಂಗಳೂರು, ೨೦೦೪

ಹಾಲುಮತ ಹಾಡುಗಳು (ಡೊಳ್ಳಿನ ಪದಗಳು): (ಸಂ) ಬೀರಪ್ಪ ಲ.ಹಳಮನಿ, ಸಂತೋಷ ಪ್ರಕಾಶನ, ಬಾಗಲಕೋಟೆ ತಾಲ್ಲೂಕು, ೨೦೧೧

ಹಾವಾಗಿ ಹರಿದ ಅಣ್ಣಯ್ಯ: (ಸಂ), ಜಿ.ವಿ.ದಾಸೇಗೌಡ, ಶ್ರೀ ಪ್ರಕಾಶನ, ಸರಸ್ವತಿ ಪುರಂ ಮೈಸೂರು, ೧೯೭೦

ಹಾಸನ ಜಿಲ್ಲೆಯ ಜನಪದ ಕಥೆಗಳು: (ಸಂ) ಹಿ.ಶಿ.ರಾಮಚಂದ್ರೇಗೌಡ, ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು, ೧೯೭೯

ಹುಟ್ಟಿದ ಹಳ್ಳಿ: ಅರ್ಚಕ ಬಿ.ರಂಗಸ್ವಾಮಿ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೧೯೭೧

ಹೃದಯ ಸಂಪುಟ (ಸಂಪ್ರದಾಯದ ಹಾಡುಗಳು): ವಾಗೀಶ್ವರಿ ಶಾಸ್ತ್ರಿ, ವಾಗ್ದೇವಿ ಕಲಾನಿಕೇತನ, ತ್ಯಾಗರಾಜನಗರ, ಬೆಂಗಳೂರು, ೧೯೮೫

ಹೆಂಗಸರ ಹಾಡ್ಗತೆಗಳು: (ಸಂ) ಬಿ.ಎಸ್.ತಲ್ವಾಡಿ

ಹೆಣ್ಣುಗಳ ನಾಡಿನಲ್ಲಿ ಜಾನಪದ: ಮಂಜುನಾಥ ಬೇವಿನಕಟ್ಟಿ, ೧೯೯೨

ಹೇಮಸಿರಿ (ಸ್ಮರಣ ಸಂಚಿಕೆ): ಚಿಕ್ಕಮಗಳೂರು ಜಿಲ್ಲಾ ೧೦ ನೇ ಕನ್ನಡ ಸಾಹಿತ್ಯ ಸಮ್ಮೇಳನ, ೨೦೧೩

ಹೊನ್ನ ಬಿತ್ತೇವು ಹೊಲಕೆಲ್ಲ: (ಸಂ) ಗೊ.ರು.ಚನ್ನಬಸಪ್ಪ

ಹೊನ್ನಬಿತ್ತ್ಯಾರ ಹೊಳಿಸಾಲ: ಬಸವರಾಜ ಆಕಳವಾಡಿ, ಸಿದ್ಧರಾಮೇಶ್ವರ ಅಕ್ಷರ ಪ್ರಕಾಶನ, ೨೦೧೦

ನಿಯತಕಾಲಿಕೆಗಳು

ಅನಂತ ಪ್ರಕಾಶ (ಮಾಸಿಕ): ಕಿನ್ನಿಗೋಳಿ

ಆದಿಮ ಲಿವಿಂಗ್ ಟೈಮ್ಸ್ (ಮಾಸಿಕ): ಕಾಡುಗೋಡಿ, ಬೆಂಗಳೂರು

ಕಸ್ತೂರಿ (ಮಾಸಿಕ)

ಜಾನಪದ ಗಂಗೋತ್ರಿ: ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ

ಜಾನಪದ ಜಗತ್ತು (ತ್ರೈ ಮಾಸಿಕ): ಕರ್ನಾಟಕ ಜಾನಪದ ಪರಿಷತ್ತು, ಬೆಂಗಳೂರು

ಧರಣಿ ಮಂಡಲ (ದ್ವೈ ಮಾಸಿಕ): ಕಾಳಿದಾಸ ಪದವಿ ಪೂರ್ವ ಕಾಲೇಜು ಸಮೀಪ, ಸಿರಾ ಗೇಟ್, ತುಮಕೂರು

ನೆಲದ ಮಾತು

ಅಂತರ ಜಾಲ ತಾಣ

ಕೆಂಡ ಸಂಪಿಗೆ

ಗೌರವ ಪ್ರತಿ

ನಮ್ಮ ಪ್ರಕಟಣೆಗಳು

ಕ್ರ.ಸಂ.	ಕೃತಿಯ ಹೆಸರು ಲೇಖಕ/ ಸಂಪಾದಕರ ಹೆಸರು	ಬೆಲೆ
೧.	ಇಂದಿನ ಕನಸು ನಾಳಿನ ನನಸು *ಸಂ : ಪ್ರೊ. ಅಂಬಳಿಕೆ ಹಿರಿಯಣ್ಣ*	೧೦೦.೦೦
೨.	ಜಾನಪದ ವರ್ಷ–೨೦೧೧ *ಸಂ : ಡಾ. ಎಸ್.ಪಿ. ಪದ್ಮಪ್ರಸಾದ್*	೧೦೦.೦೦
೩.	ಜಾನಪದ ವಸ್ತುಕೋಶ *ಸಂ : ಪ್ರೊ. ಸ.ಚಿ. ರಮೇಶ*	೧೪೦.೦೦
೪.	ಕೇರಳದ ಜನಪದವೀರ ತಚ್ಚೋಳಿ ಒದೇನನ್ *ಡಾ. ಕೆ. ಕಮಲಾಕ್ಷ*	೧೪೦.೦೦
೫.	ಕಾಡುಗೊಲ್ಲರ ಕೋಲಾಟದ ಪದಗಳು *ಸಂ : ಮೋಹನಕುಮಾರ ಎನ್.*	೮೦.೦೦
೬.	ತುಳುನಾಡಿನ ಜನಪದ ಕತೆಗಳು *ಸಂ : ಡಾ. ಪಾಲ್ತಾಡಿ ರಾಮಕೃಷ್ಣ ಆಚಾರ್*	೧೦೦.೦೦
೭	ಕರ್ನಾಟಕ ಸಂಶೋಧನ ಜಾನಪದ *ಸಂ : ಪ್ರೊ.ಎ.ವಿ. ನಾವಡ*	೯೫೦.೦೦
೮.	ಮಲೆನಾಡ ನುಡಿಕೋಶ *ಸಂ : ವೇಣಾಕ್ಷಿ ಎಸ್.ಡಿ.*	೧೫೦.೦೦
೯.	ಬುರ್ರಕಥಾ ಜಯಮ್ಮ *ಡಾ. ಕೆ. ಪ್ರೇಮಕುಮಾರ*	೪೦.೦೦
೧೦.	ಗೊಂಬೇಗೌಡರ ರಾಮನಗೌಡರು *ಡಾ. ಚಂದ್ರಪ್ಪ ಸೊಬಟಿ*	೮೦.೦೦
೧೧.	ನಮ್ಮ ಪರಿಸರದ ಲಂಬಾಣಿಗರು *ಡಾ. ಮಲ್ಲಿಕಾರ್ಜುನ ಕುಂಬಾರ*	೬೦.೦೦
೧೨.	ಕಾಡುಗೊಲ್ಲರ ಬೆಡಗಿನ ಪದಗಳು *ಸಂ : ಶ್ವೇತಾ ಎಂ.ಬಿ., ಶ್ರೀ ಮೋಹನಕುಮಾರ್ ಎನ್.*	೬೦.೦೦
೧೩.	ಹುಮಾಯೂನ್ ಹರಲಾಪುರ *ಡಾ. ವೃಷಭಕುಮಾರ*	೬೦.೦೦
೧೪.	ಅಪ್ಪಗೆರೆ ತಿಮ್ಮರಾಜು *ಶ್ವೇತಾ ಎಂ.ಬಿ.*	೮೦.೦೦
೧೫.	ನೆಲದ ನೆನಪು *ಡಾ. ಜಯಪ್ರಕಾಶ್ ಶೆಟ್ಟಿ ಹೆಚ್, ಡಾ. ಚಿಕ್ಕಮಗಳೂರು ಗಣೇಶ*	೨೦೦.೦೦
೧೬.	ನಮ್ಮ ಗಿಡಮರಬಳ್ಳಿಗಳು *ಶಾಂತಿ ನಾಯಕ*	೪೦.೦೦
೧೭.	ದೇಶೀಯ ಕೃಷಿ ಹತೋಟಿ ಮತ್ತು ಸಂರಕ್ಷಣಾ ಕ್ರಮಗಳು *ಸಂ : ಪ್ರೊ. ಪ್ರಕಾಶ ಕಮ್ಮರಡಿ*	೧೦೦.೦೦
೧೮.	ಜಾನಪದ ವರ್ಷ–೨೦೧೨ *ಸಂ : ಡಾ. ಕೆ.ವಿ. ಮುದ್ದವೀರಪ್ಪ*	೧೨೦.೦೦

೧೯.	ದಕ್ಷಿಣ ಭಾರತೀಯ ದೇಶೀ ಕೃಷಿವಿಜ್ಞಾನ ಕೋಶ (ಎರಡು ಸಂಪುಟಗಳು ಸೇರಿ) *ಪ್ರ.ಸಂ : ಪ್ರೊ. ಅಂಬಳಿಕೆ ಹಿರಿಯಣ್ಣ* *ಕಾ.ನಿ.ಸಂ : ಪ್ರೊ. ಆರ್ವಿಯಸ್ ಸುಂದರಂ,* *ಸಂ : ಪ್ರೊ. ಸ.ಚಿ. ರಮೇಶ*	೧೦೦೦.೦೦
೨೦.	ವಿಸ್ತೃತ ಜಾನಪದ ಗ್ರಂಥಸೂಚಿ (ಎರಡು ಸಂಪುಟಗಳು ಸೇರಿ) *ಪ್ರ.ಸಂ : ಪ್ರೊ. ಅಂಬಳಿಕೆ ಹಿರಿಯಣ್ಣ* *ಸಂ : ಶ್ರೀ ಕ್ಯಾತನಹಳ್ಳಿ ರಾಮಣ್ಣ, ಶ್ರೀ ಟಿ.ಎಸ್. ರಾಜಪ್ಪ*	೬೦೦.೦೦
೨೧.	ಮೂಲತಾನದ ನಾಗಬ್ರಹ್ಮ ಮತ್ತು ಪರಿವಾರ ದೈವಗಳ ಪಾಡ್ದನ *ಸಂ : ಡಾ. ಇಂದಿರಾ ಹೆಗ್ಗಡೆ*	೧೫೦.೦೦
೨೨.	ಉತ್ತರ ಕನ್ನಡ ಕರಾವಳಿಯ ಜನಪದ ಕತೆಗಳು *ಸಂ : ಶಾಂತಿ ನಾಯಕ*	೧೨೦.೦೦
೨೩.	**Manteswamy Epic Tradition of South Karnataka** ***Prof. Ambalike Hiriyanna***	೨೮೦.೦೦
೨೪.	**Dakshinatya Abhinaya Siddhanta** ***Dr. Guru Rao Bapat***	೧೦೦.೦೦
೨೫.	ನಾಡವರ ಜಾನಪದ ತವನಿಧಿ *ಪ್ರೊ. ಎನ್.ಆರ್. ನಾಯಕ*	೨೬೦.೦೦
೨೬.	**The Bayalatas of North Karnataka** ***Dr. Basavaraja Malashetty*** ***Translated by: Dr. Parvathi G. Aithal***	೧೩೦.೦೦
೨೭.	ತಾತ್ಯಾ–ಬಾಪು ಅವರ ಲಾವಣಿಗಳು *ಸಂ : ಡಾ. ಹರಿಲಾಲ ಪವಾರ*	೮೦.೦೦
೨೮.	ಪೂಜಾರಿ ಶಿವಣ್ಣ ಹೇಳಿದ ಜುಂಜಪ್ಪ ಮಹಾಕಾವ್ಯ *ಸಂ : ಡಾ. ತೀ.ನಂ. ಶಂಕರನಾರಾಯಣ,* *ಡಾ. ಎಂ.ಎನ್. ವೆಂಕಟೇಶ್*	೧೬೦.೦೦
೨೯.	ಬೆಳಗಲ್ಲು ವೀರಣ್ಣ *ಡಾ. ಎಂ.ಎನ್. ವೆಂಕಟೇಶ್*	೬೦.೦೦
೩೦.	ಮಂಜಮ್ಮ ಜೋಗತಿ *ಡಾ. ಚಂದ್ರಪ್ಪ ಸೊಬಟಿ*	೮೦.೦೦
೩೧.	ಡಾ. ಪಿ.ಕೆ. ರಾಜಶೇಖರ *ಸಂಗಮೇಶ ಎಸ್. ಗಣಿ*	೧೨೦.೦೦
೩೨.	ಜಾನಪದ ಅಧ್ಯಯನ *ಅಲನ್ ಡಂಡೆಸ್ ಅವರ ದಿ ಸ್ಟಡಿ ಆಫ್ ಫೋಕ್‌ಲೋರ್ ಕೃತಿಯ ಅನುವಾದ* *ಅನುವಾದ: ಡಾ.ಕೆ.ಆರ್. ಸಂಧ್ಯಾರೆಡ್ಡಿ*	೩೦೦.೦೦
೩೩.	ದಕ್ಷಿಣ ಕರ್ನಾಟಕದ ಮಂಟೇಸ್ವಾಮಿ ಕಾವ್ಯ ಪರಂಪರೆ *ಪ್ರ.ಸಂ : ಪ್ರೊ. ಅಂಬಳಿಕೆ ಹಿರಿಯಣ್ಣ*	೨೦೦.೦೦
೩೪.	ಜಾನಪದ ವರ್ಷ ೨೦೧೩ *ಸಂ : ಡಾ. ಎಸ್. ಮೋಹನ್*	೧೨೦.೦೦
೩೫.	ಕನ್ನಡ ಜಾನಪದ ನಿಘಂಟು *ಪ್ರ.ಸಂ : ಪ್ರೊ. ಅಂಬಳಿಕೆ ಹಿರಿಯಣ್ಣ* *ಸಂ : ಡಾ. ಕೆ.ಆರ್. ಸಂಧ್ಯಾರೆಡ್ಡಿ*	೪೫೦.೦೦
೩೬.	ಕೇರಳ ಜಾನಪದ *ಸಂ : ರಾಘವನ್ ಪಯ್ಯನಾಡ್*	೩೦೦.೦೦
೩೭.	ಜಾನಪದ ಜಗಲಿ (ಸಂಶೋಧನಾ ಅರ್ಧವಾರ್ಷಿಕ ಪತ್ರಿಕೆ) ಸಂಚಿಕೆ–೧, ೨, ೩ & ೪ ಬಿಡಿ ಪ್ರತಿಗೆ	೫೦.೦೦

ಕರ್ನಾಟಕ ಜಾನಪದ ವಿಶ್ವವಿದ್ಯಾಲಯದ ಮಹತ್ವಾಕಾಂಕ್ಷೆಯ ಯೋಜನೆಗಳಲ್ಲೊಂದಾದ "ಕನ್ನಡ ಜಾನಪದ ನಿಘಂಟು" ಸಂಪುಟಗಳ ಪ್ರಕಟಣಾ ಕಾರ್ಯ ಸವಾಲಿನದು. ಅದನ್ನು ವೈಜ್ಞಾನಿಕ ವಿಧಾನದಲ್ಲಿ ರೂಪಿಸಿ, ಹೊರತರುವ ಪ್ರಯತ್ನ ವಿಶ್ವವಿದ್ಯಾಲಯದ್ದು. ಧ್ವನಿವ್ಯತ್ಯಾಸ, ಅಕ್ಷರ ಪಲ್ಲಟ, ಪದಪ್ರಯೋಗಳ ಸ್ವರೂಪಭಿನ್ನತೆ, ಉಪಯೋಗಿಸುವ ಪದಗಳಿಗೆ ಇರುವ ಪ್ರಾದೇಶಿಕ ಅರ್ಥವಿಸ್ತಾರ ಇತ್ಯಾದಿ ಅಂಶಗಳ ಕುರಿತು ಮಾಹಿತಿ ಒದಗಿಸುವ ಪ್ರಾಮಾಣಿಕ ಪ್ರಯತ್ನ ಇಲ್ಲಿಯದು.

ಸ್ವರಾಕ್ಷರ, ವರ್ಗೀಯ ವ್ಯಂಜನಗಳು ಹಾಗೂ ಅವರ್ಗೀಯ ವ್ಯಂಜನಗಳು ಎಂಬ ವಿಂಗಡಣೆಗೆ ಅನುಗುಣವಾಗಿ ಈಗಾಗಲೇ ಮೂರು ಸಂಪುಟಗಳು ಕರ್ನಾಟಕ ಜಾನಪದ ಅಕಾಡೆಮಿ ವತಿಯಿಂದ ಪ್ರಕಟವಾಗಿವೆ. ಇನ್ನೂ ವಿಸ್ತೃತ ನೆಲೆಯಲ್ಲಿ ಈ ಜಾನಪದ ನಿಘಂಟನ್ನು ರಚಿಸುವ ಉದ್ದೇಶದಿಂದ ವಿಶ್ವವಿದ್ಯಾಲಯವು ಡಾ. ಸಂಧ್ಯಾರೆಡ್ಡಿ ಅವರ ನೇತೃತ್ವದಲ್ಲಿ ಈ ಯೋಜನೆಯನ್ನು ಕೈಗೆತ್ತಿಕೊಂಡಿತ್ತು. ನೆಲಮೂಲ ಜ್ಞಾನ ಪರಂಪರೆಗಳ ಹಾಗೂ ಭಾಷಾಶಾಸ್ತ್ರೀಯ ನೆಲೆಯ ಅಧ್ಯಯನಗಳಿಗೆ ಪ್ರಕೃತ ನಿಘಂಟು ಅತ್ಯುತ್ತಮ ಆಕರ ಆಗಲಿದೆ. ಇಂತಹದೊಂದು ಮಹತ್ವಪೂರ್ಣವಾದ ಯೋಜನೆಯೊಂದು ರೂಪುಗೊಂಡು ಯಶಸ್ವಿಯಾಗಿ ಹೊರಬರಲು ಅನೇಕ ಜನ ವಿದ್ವಾಂಸರ ಶ್ರಮ, ಶ್ರದ್ಧೆ ವಿನಿಯೋಗವಾಗಿದೆ. ಈ ಕಾರ್ಯದಲ್ಲಿ ತಮ್ಮನ್ನು ತಾವು ಪೂರ್ಣಪ್ರಮಾಣದಲ್ಲಿ ತೊಡಗಿಸಿಕೊಂಡು ಈ ಪ್ರಮಾಣದಲ್ಲಿ ಪ್ರಸ್ತುತ ಸಂಪುಟ ಬೆಳಕು ಕಾಣಲು ಕಾರಣರಾದ ನಿಘಂಟು ಯೋಜನೆಯ ಕಾರ್ಯನಿರ್ವಾಹಕ ಸಂಪಾದಕರಾದ ಡಾ. ಕೆ. ಆರ್. ಸಂಧ್ಯಾರೆಡ್ಡಿ, ವಿಶ್ವವಿದ್ಯಾಲಯದ ಪರವಾಗಿ ಯೋಜನೆಯ ಸಂಪೂರ್ಣ ಜವಾಬ್ದಾರಿಯನ್ನು ಹೊತ್ತು ಯಶಸ್ವಿಯಾಗಿ ನಿರ್ವಹಿಸಿದ ಡಾ. ಕೆ. ಪ್ರೇಮಕುಮಾರ ಹಾಗೂ ಸಂಪಾದಕ ಮಂಡಳಿಯ ಎಲ್ಲ ಗೌರವಾನ್ವಿತ ಸದಸ್ಯರಿಗೂ, ಕ್ಷೇತ್ರತಜ್ಞರಿಗೂ ಹಾಗೂ ಯೋಜನೆಯ ಯಶಸ್ಸಿಗೆ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ದುಡಿದ ಸರ್ವರಿಗೂ ವಿಶ್ವವಿದ್ಯಾಲಯದ ಕೃತಜ್ಞತೆಗಳು ಸಲ್ಲುತ್ತವೆ.

ನಿಘಂಟನ್ನು ಅಚ್ಚುಕಟ್ಟಾಗಿ ಹೊರತರುವಲ್ಲಿ ತುಂಬ ಮುತುವರ್ಜಿ ವಹಿಸಿದ ವಿಶ್ವವಿದ್ಯಾಲಯದ ವಿಸ್ತರಣೆ ಹಾಗೂ ಸಲಹಾ ಕೇಂದ್ರದ ನಿರ್ದೇಶಕರೂ, ಮೌಲ್ಯಮಾಪನ ಕುಲಸಚಿವರೂ ಆದ ಪ್ರೊ. ಸ.ಚಿ. ರಮೇಶ ಹಾಗೂ ಸಿಬ್ಬಂದಿ ವರ್ಗಕ್ಕೆ ಅಭಿನಂದನೆಗಳು

◆ ಪ್ರೊ. ಅಂಬಳಿಕೆ ಹಿರಿಯಣ್ಣ
ಕುಲಪತಿ

ISBN 978-93-83149-26-1
9 789383 149261 >

₹ : ೪೩೦/-

ವಿಸ್ತರಣೆ ಹಾಗೂ ಸಲಹಾ ಕೇಂದ್ರ
ಕರ್ನಾಟಕ ಜಾನಪದ ವಿಶ್ವವಿದ್ಯಾಲಯ

Printed at : Raja Printers, Bangalore-27, Ph.: 22234066